ಶ್ರೀರಾಮಾನುಜಾಚಾರ್ಯರವರ ಗ್ರಂಥಗಳು

# ಶ್ರೀ ಭಾಷ್ಯಮ್

( ಜಿಜ್ಞಾಸಾಧಿಕರಣ-ವೇದಾಂತದೀಪಸಹಿತ )

೧ನೆಯ ಭಾಗ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1970

ವಿಷಯಾನುಕ್ರಮಣಿಕೆ

ಶ್ರೀರಾಮಾನುಜಾಚಾರ್ಯರವರ ಗ್ರಂಥಗಳು

# ಶ್ರೀ ಭಾಷ್ಯಮ್

( ಜಿಜ್ಞಾಸಾಧಿಕರಣ-ವೇದಾಂತದೀಪಸಹಿತ )

೧ನೆಯ ಭಾಗ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1970

ಒಂದನೆಯ ಮುದ್ರಣ, 1970
(೧೦೦೦ ಪ್ರತಿಗಳು)

"ಅಧ್ಯಾತ್ಮಪ್ರಕಾಶದಿಂದ ತೆಗೆದಚ್ಚು"

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವುಗಳು
All Rights Reserved

Registered under the Copy Right Act of 1957

ಮುದ್ರಣಕಾರರು :
ವೈ. ನರಸಪ್ಪ,
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.

# ಮುನ್ನುಡಿ

ಶ್ರೀರಾಮಾನುಜಾಚಾರ್ಯರವರ ಗ್ರಂಥರತ್ನವಾದ **"ಶ್ರೀಭಾಷ್ಯ – ಜಿಜ್ಞಾಸಾಧಿಕರಣ"**ವನ್ನು ಕನ್ನಡಿಸಿ ಸಂಸ್ಕೃತಮೂಲ, ಟಿಪ್ಪಣಿ, ಪರಿಶಿಷ್ಟಗಳೊಡನೆ ಇದೀಗ ಮಹಾಜನರ ಮುಂದೆ ಇಡಲಾಗಿದೆ. ದಕ್ಷಿಣದೇಶದಲ್ಲಿ ಸುಪ್ರಸಿದ್ಧರಾಗಿರುವ ಮೂವರು ಆಚಾರ್ಯರುಗಳೊಳಗೆ ಶ್ರೀಶಂಕರಾಚಾರ್ಯರ ಗ್ರಂಥರತ್ನಗಳನ್ನು– ಬಹಳಮಟ್ಟಿಗೆ ಅವರ ಎಲ್ಲಾ ಕೃತಿಗಳನ್ನೂ– ಕನ್ನಡದಲ್ಲಿ ಪ್ರಕಟಿಸಿರುವ ಕಾರ್ಯಾಲಯವು ಈಗ ಶ್ರೀರಾಮಾನುಜಾಚಾರ್ಯರ ಗ್ರಂಥಗಳ ಸಾಲಿನಲ್ಲಿ ಮೂರನೆಯ ಕೃತಿಯಾಗಿ ಈ ಶ್ರೀಭಾಷ್ಯ (ಜಿಜ್ಞಾಸಾಧಿಕರಣ)ವನ್ನು ಹೊರಕ್ಕೆ ತಂದಿರುತ್ತದೆ. ಜಿಜ್ಞಾಸಾಧಿಕರಣಭಾಷ್ಯದ ಸಾರವನ್ನು ಸಂಗ್ರಹಿಸಿರುವ **"ವೇದಾಂತದೀಪ"**ವನ್ನೂ ಕೊನೆಯಲ್ಲಿ ಕೊಡಲಾಗಿದೆ. ಈ ಗ್ರಂಥಕ್ಕೆ ಮಹಾಜನರಿಂದ ದೊರಕುವಪ್ರೋತ್ಸಾಹವನ್ನು ನೋಡಿಕೊಂಡು ಉಳಿದ ಗ್ರಂಥಗಳನ್ನೂ ಪ್ರಕಟಿಸಬೇಕೆಂಬ ಆಲೋಚನೆಯು ಕಾರ್ಯಾಲಯದವರಿಗೆ ಇದೆ.

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಎಂದಿನಂತೆ ಈ ಗ್ರಂಥವನ್ನು ಬರೆದುಕೊಟ್ಟಿದ್ದಾರೆ; ಕಾರ್ಯಾಲಯದ ಪಂಡಿತರು ಅಚ್ಚಿನ ತಪ್ಪುಗಳನ್ನು ತಿದ್ದುವದು– ಮುಂತಾದ ರೀತಿಯಿಂದ ಸಹಕರಿಸಿದ್ದಾರೆ.

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಉಳಿದ ಗ್ರಂಥಗಳಂತೆಯೇ ಈ ಗ್ರಂಥದ ಮುದ್ರಣ, ಪ್ರಕಾಶನ– ಮುಂತಾದ ಎಲ್ಲಾ ರೀತಿಯ ಹಕ್ಕುಗಳನ್ನೂ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೇ ವಹಿಸಿದ್ದಾರೆ.

ವಾಚಕರು ಈ ಕೃತಿಯನ್ನು ಆದರದಿಂದ ಬರಮಾಡಿಕೊಂಡು ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

31–8–1970 **ಪ್ರಕಾಶಕರು.**

# ಪೀಠಿಕೆ

## ಸಂಪ್ರದಾಯಪ್ರವರ್ತಕರು

೧. ನಾಮರೂಪವಿಭಾಗಾನರ್ಹವಾಗಿ ಸೂಕ್ಷ್ಮವಾಗಿರುವ ಬ್ರಹ್ಮವೇ ಸೃಷ್ಟಿಕಾಲದಲ್ಲಿ ಸ್ಥೂಲಚಿದಚಿದ್ವಿಶಿಷ್ಟಬ್ರಹ್ಮವಾಗಿ ಪರಿಣಮಿಸುವದರಿಂದ ಚಿದಚಿದ್ವಿಶಿಷ್ಟವಾದ ಬ್ರಹ್ಮವು ಒಂದೇ ಎಂಬ ಸಿದ್ಧಾಂತವನ್ನು ಪ್ರತಿಪಾದಿಸುವದರಿಂದ ಶ್ರೀರಾಮಾನುಜಾಚಾರ್ಯರು ಒಪ್ಪಿರುವ ಸಿದ್ಧಾಂತಕ್ಕೆ **ವಿಶಿಷ್ಟಾದ್ವೈತ**ವೆಂಬ ಹೆಸರು ಬಂದಿರುತ್ತದೆ. ಈ ಸಿದ್ಧಾಂತಕ್ಕೆ ಮೂಲವು ಶ್ರುತಿಸ್ಮೃತಿಪುರಾಣಗಳೇ ಎಂದು ಆ ಆಚಾರ್ಯರು ತಮ್ಮ ಪ್ರಸ್ಥಾನತ್ರಯವಿಷಯಕಗ್ರಂಥಗಳಲ್ಲಿ ಬರೆದಿರುತ್ತಾರಾದರೂ ವಿಶಿಷ್ಟಾದ್ವೈತವೆಂಬ ಹೆಸರಿನಿಂದ ಈ ಸಿದ್ಧಾಂತವನ್ನು ಮೊಟ್ಟಮೊದಲು ಪ್ರತಿಪಾದಿಸಿದ ಸಂಪ್ರದಾಯಪ್ರವರ್ತಕರಾದ ಆಚಾರ್ಯರು ಯಾರೆಂಬುದನ್ನು ನಿರ್ಣಯಿಸುವದು ಬಲು ಕಷ್ಟ. ಶ್ರೀಶಂಕರಾಚಾರ್ಯರ, ಅಥವಾ ಅವರ ಪರಮಗುರುಗಳಾದ ಶ್ರೀಗೌಡಪಾದರ ಗ್ರಂಥಗಳಲ್ಲಿ, ಈ ಸಿದ್ಧಾಂತದ ಪರಾಮರ್ಶವು ಕಂಡುಬರುವದಿಲ್ಲ. ಅವರ ಕಾಲದಲ್ಲಾಗಲಿ ಅವರ ಹಿಂದಿನ ಕಾಲದಲ್ಲಾಗಲಿ ದ್ವೈತವಿಶಿಷ್ಟಾದ್ವೈತಪ್ರಸ್ಥಾನಗಳನ್ನು ಅನುಸರಿಸುವ ವೇದಾಂತಿಗಳು ಇದ್ದರೆ ?– ಎಂಬುದನ್ನು ನಿರ್ಣಯಿಸುವದಕ್ಕೆ ಸಾಧಕವಾದ ಪರಾಮರ್ಶಗಳೂ ನಮಗೆ ಈವರೆಗೆ ದೊರೆತಿರುವದಿಲ್ಲ. ಆದ್ದರಿಂದ ರಾಮಾನುಜರು ಉಲ್ಲೇಖಿಸಿರುವ ಸಂಪ್ರದಾಯಪ್ರವರ್ತಕರ ವಿಚಾರವನ್ನು ಮಾತ್ರ ಇಲ್ಲಿ ಓದುಗರ ಮುಂದೆ ಇಡುವೆವು.

## ಬೋಧಾಯನರು

೨. ಶ್ರೀಭಾಷ್ಯದ ಆದಿಶ್ಲೋಕದಲ್ಲಿ 'ಉಪನಿಷತ್ತುಗಳೆಂಬ ಕ್ಷೀರಸಾಗರದಿಂದ ಎತ್ತಿದ ವ್ಯಾಸವಚಃಸುಧೆಯನ್ನು ಪೂರ್ವಾಚಾರ್ಯರು ರಕ್ಷಿಸಿಕೊಂಡುಬಂದರೆಂಬ' ಅರ್ಥವಿದೆ. ಈ ವಾಕ್ಯದಲ್ಲಿ ವ್ಯಾಸರಿಗೆ **ಪಾರಾಶರ್ಯ**ರೆಂಬ ಸಾಭಿಪ್ರಾಯ ವಿಶೇಷಣವಿರುವದರಿಂದಲೂ ಪರಾಶರರು ಮೈತ್ರೇಯನಿಗೆ ಬೋಧಿಸಿರುವ ವಿಷ್ಣುಪುರಾಣದ ವಾಕ್ಯಗಳನ್ನು ಹೇರಳವಾಗಿ ಶ್ರೀಭಾಷ್ಯದಲ್ಲಿ ಉದಾಹರಿಸಿರುವದರಿಂದಲೂ ಪರಾಶರೋಕ್ತಿಯೇ ಸೂತ್ರಾರ್ಥವೆಂಬ ಅರ್ಥವು ಇಲ್ಲಿ ಧ್ವನಿತವಾಗಿದೆ ಎಂದು ನಾವು ಊಹಿಸಬಹುದು.

ಶ್ರೀಭಾಷ್ಯದ ಅವತರಣಿಕೆಯಾಗಿ ಶ್ರೀರಾಮಾನುಜರು ಈ ವಾಕ್ಯವನ್ನು ಬರೆದಿರುತ್ತಾರೆ :–

**'ಭಗವದ್ಬೋಧಾಯನಕೃತಾಂ ವಿಸ್ತೀರ್ಣಾಂ ಬ್ರಹ್ಮಸೂತ್ರವೃತ್ತಿಂ ಪೂರ್ವಾಚಾರ್ಯಾಃ ಸಂಚಿಕ್ಷಿಪುಃ। ತನ್ಮತಾನುಸಾರೇಣ ಸೂತ್ರಾಕ್ಷರಾಣಿ ವ್ಯಾಖ್ಯಾಸ್ಯನ್ತೇ ॥'**

ಭಗವದ್ಬೋಧಾಯನರು ಮಾಡಿದ ವಿಸ್ತೀರ್ಣವಾದ ಬ್ರಹ್ಮಸೂತ್ರವೃತ್ತಿಯನ್ನು ಪೂರ್ವಾಚಾರ್ಯರು ಸಂಕ್ಷೇಪಿಸಿದರು; ಅವರ ಮತವನ್ನನುಸರಿಸಿ ಸೂತ್ರಾಕ್ಷರಗಳನ್ನು ವ್ಯಾಖ್ಯಾನಮಾಡಲಾಗುವದು– ಎಂದು ಈ ವಾಕ್ಯದ ಅಕ್ಷರಾರ್ಥ. ಇಲ್ಲಿ ಬೋಧಾಯನರೆಂದರೆ ಯಾರೆಂಬುದನ್ನು ನಿಶ್ಚಯಿಸುವದೂ ಕಷ್ಟ. **ಶ್ರುತಪ್ರಕಾಶಿಕಾವ್ಯಾಖ್ಯಾನದಲ್ಲಿ** ಮಹರ್ಷಿಗಳೇ ಸೂಕ್ಷ್ಮದರ್ಶಿಗಳಾಗಿರುವದರಿಂದ ಋಷಿಗಳ ಅಭಿಪ್ರಾಯವನ್ನು ಋಷಿಗಳೇ ತಿಳಿಯಬಲ್ಲರಾದ್ದರಿಂದ ಅವರ ಮತವನ್ನೇ ಅನುಸರಿಸುವದು ಯುಕ್ತ– ಎಂಬರ್ಥದ ವಾಕ್ಯವನ್ನು ಬರೆದಿರುತ್ತದೆ. ಆದರೆ ಬೋಧಾಯನರೆಂಬವರು ಯಾವ ಋಷಿಗಳು?– ಎಂಬುದು ಈವರೆಗೂ ನಿಶ್ಚಿತವಾಗಿರುವದಿಲ್ಲ; ಅವರು **ಉಪವರ್ಷಾಚಾರ್ಯರೇ** ಆಗಿರಬೇಕೆಂದು ಕೆಲವರು ಊಹಿಸಿರುವದನ್ನು ಮತ್ತೆ ಕೆಲವರು ವಿಶಿಷ್ಟಾದ್ವೈತಿಗಳೇ ಅಲ್ಲಗಳೆದಿರುತ್ತಾರೆ. ಶ್ರೀಭಾಷ್ಯದಲ್ಲಿ 'ಪೂರ್ವಾಚಾರ್ಯಾಃ ಸಂಚಿಕ್ಷಿಪುಃ' (ಹಿಂದಿನ ಆಚಾರ್ಯರು ಸಂಕ್ಷೇಪಿಸಿದರು) ಎಂಬಲ್ಲಿ ಪರೋಕ್ಷಾರ್ಥವನ್ನು ಹೇಳುವ 'ಲಿಟ್'ಪ್ರಯೋಗವಿರುವದರಿಂದ ಆಚಾರ್ಯರು ಸಂಕ್ಷೇಪಿಸಿದ್ದುಕೂಡ ರಾಮಾನುಜರಿಗೆ ಪರೋಕ್ಷವೇ – ಎಂಬ ಭಾವವು ಸೂಚಿತವಾಗಿದೆ. ಶ್ರೀಭಾಷ್ಯದಲ್ಲಿ ವೃತ್ತಿಕಾರರ ವಚನಗಳೆಂದು ಉದಾಹೃತವಾಗಿರುವ ವಾಕ್ಯಗಳು ಅತ್ಯಲ್ಪಸಂಖ್ಯೆಯವಾಗಿರುತ್ತವೆ; ಈವರೆಗೆ ಆ ಗ್ರಂಥವನ್ನು ಯಾರೂ ಶೋಧಿಸಿ ಕಂಡುಹಿಡಿದಿರುವದೂ ಇಲ್ಲ. ಅವರ ಮತವನ್ನು ವೇದಾಂತಿಗಳಾಗಲಿ ಇತರ ದರ್ಶನಕಾರರಾಗಲಿ ಪರಾಮರ್ಶಿಸಿಯೇ ಇರುವದಿಲ್ಲ. ಈ ಕಾರಣದಿಂದ ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸಬೇಕಾಗಿದೆ.

## ಟಂಕಾಚಾರ್ಯರು, ದ್ರಮಿಡಾಚಾರ್ಯರು

೩. ಇನ್ನು **ವಾಕ್ಯಕಾರರು, ಭಾಷ್ಯಕಾರರು**– ಎಂಬ ಹೆಸರಿನಿಂದ ಸಂಪ್ರದಾಯಕರ್ತೃಗಳಿಬ್ಬರ ಹೆಸರನ್ನು ಶ್ರೀಭಾಷ್ಯದಲ್ಲಿ ಉಲ್ಲೇಖಿಸಿರುತ್ತದೆ. ವಾಕ್ಯಕಾರರು **'ಟಂಕ'** ಎಂಬ ಅಭಿಧಾನದಿಂದ ವಿಶಿಷ್ಟಾದ್ವೈತಸಂಪ್ರದಾಯದಲ್ಲಿ ಪ್ರಸಿದ್ಧರಾಗಿರುತ್ತಾರೆ. ಭೇದಾಭೇದಸಿದ್ಧಾಂತವನ್ನು ಪ್ರತಿಪಾದಿಸಿದ **ಭಾಸ್ಕರಾಚಾರ್ಯರು** ತಮ್ಮ ಸೂತ್ರಭಾಷ್ಯದಲ್ಲಿ **ಆತ್ಮಕೃತೇಃ ಪರಿಣಾಮಾತ್** (೧-೪-೨೬) ಎಂಬ ಸೂತ್ರಕ್ಕೆ ವ್ಯಾಖ್ಯಾನವನ್ನು ಮಾಡುವಾಗ **'ಸೂತ್ರಕಾರಃ ಶ್ರುತ್ಯನುಸಾರೀ ಪರಿಣಾಮಮಪೇಕ್ಷಂ ಸೂತ್ರಯಾಂಬಭೂವ। ಅಯಮೇವ ಛಾನ್ದೋಗ್ಯೇ ವಾಕ್ಯಕಾರವೃತ್ತಿಕಾರಾಭ್ಯಾಂ ಸಂಪ್ರದಾಯಮತಃ ಸಮಾಶ್ರಿತಃ'**

(ಛಾಂದೋಗ್ಯದಲ್ಲಿ ಈ ಸಂಪ್ರದಾಯಕ್ಕೆ ಸಮ್ಮತವಾದ ಈ ಪರಿಣಾಮಪಕ್ಷವನ್ನೇ ಆಶ್ರಯಿಸಿರುತ್ತಾರೆ). **'ತಥಾ ಚ ವಾಕ್ಯಮ್ – ಪರಿಣಾಮಸ್ತು ಸ್ಯಾದ್ ದಧ್ಯಾದಿವತ್ ಇತಿ ||'** (ಮೊಸರು ಮುಂತಾದದ್ದರಂತೆ ಪರಿಣಾಮವಾಗಿರುತ್ತದೆ ಎಂಬ ವಾಕ್ಯವಿದೆ) ಎಂದು ಬರೆದಿರುತ್ತಾರೆ. ಅಲ್ಲಿ ಬರೆದಿರುವ **ವೃತ್ತಿಕಾರನಂತೂ** ಶ್ರೀರಾಮಾನುಜಸಂಮತರಾಗಿರುವ ಬೋಧಾಯನರಲ್ಲವೆಂಬುದು ಸ್ಪಷ್ಟವೇ ಆಗಿದೆ. **ವಾಕ್ಯಕಾರನೂ** ಶ್ರೀರಾಮಾನುಜರಿಗೆ ಸಮ್ಮತನಾಗಿರುವ ಟಂಕಾಚಾರ್ಯನಲ್ಲ ; ಏಕೆಂದರೆ ಈ ಭಾಸ್ಕರಮತವನ್ನು ಖಂಡಿಸುವಾಗ ಆತನನ್ನು **'ಬ್ರಹ್ಮನಂದಿ'** ಎಂಬ ಹೆಸರಿನಿಂದ **ಕಲ್ಪತರುಗ್ರಂಥದಲ್ಲಿ** ಕರೆದಿರುತ್ತದೆ; ಬ್ರಹ್ಮನಂದಿಯ ವಾಕ್ಯಗಳನ್ನು **ಕಲ್ಪತರುಕಾರರು** ಉದಾಹರಿಸಿ ಕಾರ್ಯಕಾರಣಭಾವವು ಆತನ ಮತದಲ್ಲಿ ವ್ಯಾವಹಾರಿಕವೆಂದು ಸ್ಪಷ್ಟವಾಗಿ ಬರೆದಿರುತ್ತಾರೆ. (ಭಾಮತೀಕಲ್ಪತರು ಪುಟ ೪೨೯). ಆದ್ದರಿಂದ ಅದ್ವೈತಿಯಾದ ಬ್ರಹ್ಮನಂದಿಯನ್ನು ವಿಶಿಷ್ಟಾದ್ವೈತಿಗಳಾದ ರಾಮಾನುಜರು ಪ್ರಮಾಣೀಕರಿಸಿರುತ್ತಾರೆಂದು ಕಲ್ಪಿಸುವದು ಅಯುಕ್ತವಾಗಿರುತ್ತದೆ. **ಮೇಲೆ** ಉದಾಹರಿಸಿರುವ **'ಆತ್ಮಕೃತೇಃ ಪರಿಣಾಮಾತ್'** ಎಂಬ ಸೂತ್ರವನ್ನು ಶ್ರೀಭಾಷ್ಯದಲ್ಲಿ 'ಆತ್ಮಕೃತೇಃ' (೧–೪–೨೬), 'ಪರಿಣಾಮಾತ್' (೧–೪–೨೭) ಎಂದು ಎರಡು ಸೂತ್ರಗಳಾಗಿ ಮಾರ್ಪಡಿಸಿಕೊಂಡಿದೆ. ಇಲ್ಲಿ ವಾಕ್ಯಕಾರವಚನವನ್ನು ಉದಾಹರಿಸಿಯೇಇಲ್ಲ, ದಧಿದೃಷ್ಟಾಂತವಂತೂ ಶ್ರೀಭಾಷ್ಯಕಾರರಿಗೆ ಸಮ್ಮತವಾಗಲಾರದೆಂಬುದು ಸ್ಪಷ್ಟ. ಏಕೆಂದರೆ ಚಿದಚಿಚ್ಛರೀರಕವಾದ ಬ್ರಹ್ಮದ ಶರೀರಗಳು ಸೂಕ್ಷ್ಮಾವಸ್ಥೆಯಿಂದ ಸ್ಥೂಲಾವಸ್ಥೆಗೆ ಬಂದರೂ ಬ್ರಹ್ಮವು ಅವಿಕೃತವಾಗಿಯೇ ಇರುತ್ತದೆ ಎಂಬುದು ಅವರ ಮತ ; ಭಾಸ್ಕರಾಚಾರ್ಯರಿಗೆ ಸಮ್ಮತವಾದ ಶಕ್ತಿವಿಕ್ಷೇಪಲಕ್ಷಣಪರಿಣಾಮವಾದವನ್ನು ಅವರು ಒಪ್ಪುವದಿಲ್ಲ. ಈ ಎಲ್ಲಾ ಕಾರಣಗಳಿಂದ ಭಾಸ್ಕರಾಚಾರ್ಯರು ಉದಾಹರಿಸಿರುವ ಬ್ರಹ್ಮನಂದಿಗಿಂತ ಶ್ರೀರಾಮಾನುಜರು ಉದಾಹರಿಸಿರುವ **ಟಂಕಾಚಾರ್ಯರು** ಬೇರೆಯೆಂದೇ ಹೇಳಬೇಕಾಗಿದೆ.

ಇನ್ನು **ದ್ರಮಿಡಭಾಷ್ಯಕಾರರತ್ತ** ಮನಸ್ಸನ್ನು ಹೊರಳಿಸಿದರೆ, ಶ್ರೀಭಾಷ್ಯದಲ್ಲಿ ಈಗ ನಾವು ಪ್ರಕಟಿಸಿರುವ ಜಿಜ್ಞಾಸಾಧಿಕರಣದಲ್ಲಿಯೇ ಎರಡು ಕಡೆಯಲ್ಲಿ ಅವರ ಪರಾಮರ್ಶಕವಾದ ಉಲ್ಲೇಖವಿದೆ. **'ಆರಮ್ಭಣಪರಿಶೀಲನಂ ಪುನಃಪುನರಭ್ಯಾಸಃ'** ಎಂಬ ವಾಕ್ಯಕಾರವಚನಕ್ಕೆ ನಿರ್ವಚನೋದಾಹರಣವನ್ನು ಮಾಡುವಾಗ (**ನಿರ್ವಚನಂ ಚ ಸ್ಮಾರ್ತಮುದಾಹೃತಂ ಭಾಷ್ಯಕಾರೇಣ 'ಸದಾ ತದ್ಭಾವಭಾವಿತಃ' ಇತಿ ||** ಪು. ೩೨) ಎಂದು ಒಂದುಕಡೆ; **'ಯುಕ್ತಂ ತದ್ಗುಣಕೋಪಾಸನಮ್'** ಎಂಬ ವಾಕ್ಯಕಾರವಚನಕ್ಕೆ ವ್ಯಾಖ್ಯಾನವನ್ನು ಮಾಡುವಾಗ (**ಭಾಷ್ಯಕೃತಾ ವ್ಯಾಖ್ಯಾತಂ ಚ 'ಯದ್ಯಪಿ ಸಚ್ಚಿತ್ತಃ' ಇತ್ಯಾದಿನಾ** ಪು. ೧೮೫) ಎಂದು ಒಂದುಕಡೆ ಇದೆ. ಈ ಎರಡನೆಯ ಪರಾಮರ್ಶಕವಾಕ್ಯವು

ವೇದಾರ್ಥಸಂಗ್ರಹದಲ್ಲಿ ಇದೇ ವಾಕ್ಯಕಾರವಚನಕ್ಕೆ ವ್ಯಾಖ್ಯಾನವಾಗಿ **'ಯದ್ಯಪಿ ಸಚ್ಚಿತ್ತೋ ನ ನಿರ್ಭುಗ್ನದೈವತಂ ಗುಣಗಣಂ ಮನಸಾಽನುಧಾವೇತ್, ತಥಾಪಿ ಅನ್ತರ್ಗುಣಾಮೇವ ದೇವತಾಂ ಭಜತೇ ಇತಿ ತತ್ರಾಪಿ ಸಗುಣೈವ ದೇವತಾ ಪ್ರಾಪ್ಯತೇ'** ಎಂದು ಪೂರ್ಣವಾಗಿ ಬಂದಿದೆ. ಈ ಎರಡು ಕಡೆಯಲ್ಲಿಯೂ 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ಹೇಳಿರುವ ಸದ್ವಿದ್ಯೆಯು ಉಪಾಸನೆಯಲ್ಲಿ ಗುಣ ಗಳ ಸ್ಮರಣೆಯಿಲ್ಲದಿದ್ದರೂ, ಹಾರ್ದವಿದ್ಯೆಯಂತೆಯೇ ಸಗುಣೋಪಾಸನೆಯೇ ಅದು –ಎಂಬುದನ್ನು ಸಾಧಿಸುವದಕ್ಕೆ ಉದಾಹರಿಸಿರುವ ದ್ರಮಿಡಭಾಷ್ಯಕಾರವಾಕ್ಯವದು ಎಂಬುದು ಸ್ಪಷ್ಟ. ಈ ಕಾರಣದಿಂದ ಇವರು **ಛಾಂದೋಗ್ಯೋಪನಿಷತ್ತಿನಲ್ಲಿ ಶಾಂಕರಭಾಷ್ಯದಲ್ಲಿ ಉದಾಹರಿಸಿರುವ ದ್ರವಿಡಭಾಷ್ಯಕಾರರಲ್ಲವೆಂಬುದು ಸ್ಫುಟವಾಗಿರುತ್ತದೆ.** ಏಕೆಂದರೆ ಶಂಕರಾಚಾರ್ಯರು ತಮ್ಮ ಸಿದ್ಧಾಂತಕ್ಕೆ ಪ್ರಮಾಣವಾದ ಸಂಪ್ರದಾಯಪ್ರವರ್ತಕರೆಂದೇ ದ್ರವಿಡಾಚಾರ್ಯರ ವಚನವನ್ನು ಅಲ್ಲಿ ಉದಾಹರಿಸಿರುತ್ತಾರೆಂದೂ ವಿಸ್ತರವಾಗಿರುವ ದ್ರವಿಡಭಾಷ್ಯವನ್ನು ಸಂಗ್ರಹವಾಗಿ ಬರೆಯುತ್ತೇನೆಂದು ತಿಳಿಯಿಸುವದಕ್ಕಾಗಿ **'ಋಜುವಿವರಣಮಲ್ಪಗ್ರನ್ಥಮಿದ ಮಾರಭ್ಯತೇ'** ಎಂದು ಭಾಷ್ಯಕಾರರು ಪ್ರತಿಜ್ಞೆಮಾಡಿರುತ್ತಾರೆಂದೂ **ಆನಂದಗಿರಿ ಗಳು** ಬರೆದಿರುತ್ತಾರೆ (ಛಾಂ. ಭಾ. ಪು. ೧). ಆದ್ದರಿಂದ **ಅದ್ವೈತಪರವಾದ ಭಾಷ್ಯವನ್ನು ಬರೆದಿರುವ ದ್ರವಿಡಾಚಾರ್ಯರಿಗಿಂತ ಸಗುಣೈಕಬ್ರಹ್ಮವಾದಿ ಗಳಾದ ದ್ರಮಿಡಾಚಾರ್ಯರು ಭಿನ್ನರು ಎಂದು ಸಿದ್ಧವಾಗುತ್ತದೆ.** ಇದಲ್ಲದೆ ಮಾಂಡೂಕ್ಯೋಪನಿಷತ್ತಿನಮೇಲೆ ಗೌಡಪಾದರು ಬರೆದಿರುವ ಕಾರಿಕೆಗಳ ಅರ್ಥವನ್ನು ವಿವರಿಸುವಾಗ (ಗೌ.ಕಾ.ಭಾ. ೨–೩೨, ಪು. ೨೦೫). ಶಂಕರಾಚಾರ್ಯರು **'ಸಿದ್ಧಂ ತು ನಿವರ್ತಕತ್ವಾತ್' ಇತ್ಯಾಗಮವಿದಾಂ ಸೂತ್ರಮ್** (ಶಾಸ್ತ್ರವು ಅತದ್ಧರ್ಮ ವನ್ನು ಅಲ್ಲಗಳೆಯುವದರಿಂದ ಪ್ರಮಾಣವೆಂದು ಸಿದ್ಧವಾಗುತ್ತದೆ ಎಂದು ಆಗಮ ವನ್ನು ಬಲ್ಲವರ ಸೂತ್ರವಿದೆ) ಎಂದು ಬರೆದಿರುವ ಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆಯುವಾಗ **ಆನಂದಗಿರಿಗಳು 'ಉಕ್ತೇಽರ್ಥೇ ದ್ರವಿಡಾಚಾರ್ಯಸಂಮತಿ ಮಾಹ'** (ಈ ಹೇಳಿದ ಅಭಿಪ್ರಾಯಕ್ಕೆ ದ್ರವಿಡಾಚಾರ್ಯರ ಸಂಮತಿಯನ್ನು ಉದಾಹರಿಸುತ್ತಾರೆ) ಎಂದು ಬರೆದಿರುತ್ತಾರೆ. ಆದ್ದರಿಂದ ನಿರ್ವಿಶೇಷತತ್ತ್ವವಾದಿ ಗಳಾಗಿರುವ ಈ ದ್ರವಿಡಾಚಾರ್ಯರು ಸವಿಶೇಷಬ್ರಹ್ಮವಾದಿಗಳಾದ ರಾಮಾನುಜರ ದ್ರಮಿಡಾಚಾರ್ಯರಿಗಿಂತಲೂ ಬೇರೆ ಎಂದೇ ಸಿದ್ಧವಾಯಿತು. ಇನ್ನೊಂದು ವಿಚಾರ ; ಯಾಮುನಾಚಾರ್ಯರು ರಚಿಸಿರುವ **ಆತ್ಮಸಿದ್ಧಿಯಲ್ಲಿ** ಬರೆದಿರುವ ಒಂದು ವಾಕ್ಯವು ಹೀಗಿದೆ : **"ಯದ್ಯಪಿ ಭಗವತಾ ಬಾದರಾಯಣೇನ ಇದ ಮರ್ಥಾನ್ಯೇವ ಸೂತ್ರಾಣಿ ಪ್ರಣೀತಾನಿ, ವಿವೃತಾನಿ ಚ ತಾನಿ ಪರಿಮಿತ ಗಮ್ಭೀರಭಾಷಿಣಾ ಭಾಷ್ಯಕೃತಾ, ವಿಸ್ತೃತಾನಿ ಚ ತಾನಿ ಗಮ್ಭೀರನ್ಯಾಯ ಸಾಗರಭಾಷಿಣಾ ಭಗವತಾ ಶ್ರೀವತ್ಸಾಙ್ಕಮಿಶ್ರೇಣಾಪಿ, ಥಾಪಿ**

**ಆಚಾರ್ಯಟಙ್ಕ-ಭರ್ತೃಪ್ರಪಞ್ಚ-ಭರ್ತೃಮಿತ್ರ-ಭರ್ತೃಹರಿ-ಬ್ರಹ್ಮದತ್ತ-ಶಙ್ಕರ-ಶ್ರೀವತ್ಸಾಙ್ಕ-ಭಾಸ್ಕರಾದಿವಿರಚಿತ ಸಿತಾಸಿತ ವಿವಿಧನಿಬನ್ಧನಶ್ರದ್ಧಾ ವಿಪ್ರಲಬ್ಧ ಬುದ್ಧಯೋ ನ ಯಥಾವತ್, ಅನ್ಯಥಾ ಚ, ಪ್ರತಿಪದ್ಯನ್ತ ಇತಿ ತತ್ಪ್ರತಿಪತ್ತಯೇ ಚ ಯುಕ್ತಃ ಪ್ರಕರಣಾರಮ್ಭಃ"** (ಪು. ೫-೬). ಈ ವಾಕ್ಯವನ್ನು ಇದ್ದಂತೆ ಅರ್ಥಮಾಡಿದರೆ ಬಾದರಾಯಣರು ಸೂತ್ರಕರ್ತರು, ಅವುಗಳ ವಿವರಣಕರ್ತರು ಭಾಷ್ಯಕಾರರು, ಅವುಗಳನ್ನು ವಿಸ್ತಾರವಾಗಿ ವ್ಯಾಖ್ಯಾನಮಾಡಿದವರು ಶ್ರೀವತ್ಸಾಂಕರು- ಎಂದರ್ಥವಾಗುತ್ತದೆ. ಇಲ್ಲಿ ವಾಕ್ಯಕಾರರನ್ನು ಹೇಳದೆ ದ್ರಮಿಡಭಾಷ್ಯಕಾರರನ್ನು ನೇರಾಗಿಯೇ ಪ್ರಸ್ತಾಪಿಸಿ ಅವರು ವಿವರಣವನ್ನು ಬರೆದರೆಂದು ಹೇಳಿದಂತೆ ತೋರುತ್ತದೆ. ಇಲ್ಲಿ ವಾಕ್ಯಕಾರರನ್ನು ಮೊದಲೇಕೆ ಸೇರಿಸಿಲ್ಲ? ಅವರಿಗೂ ಭಾಷ್ಯಕಾರರಿಗೂ ಸಂಬಂಧವೇನು ?- ಎಂಬ ಪ್ರಶ್ನೆಗೆ ಉತ್ತರವು ಸ್ಫುಟವಾಗಿ ದೊರಕುವಂತಿಲ್ಲ.

ಅಂತೂ ಶ್ರೀಭಾಷ್ಯದಲ್ಲಿ ಉದಾಹರಿಸಿದ ಟಂಕ, ದ್ರಮಿಡ- ಈ ಇಬ್ಬರು ಆಚಾರ್ಯರು ಯಾರು ?-ಎಂಬ ಬಗೆಗೆ ನಮಗೆ ಸಾಕಾದಷ್ಟು ಪ್ರಮಾಣವಿಲ್ಲವೆಂದೇ ಹೇಳಬೇಕಾಗಿರುತ್ತದೆ.

## ನಾಥಮುನಿಗಳು

೪. ಇನ್ನು ಅಜ್ಞಾನವು ಜ್ಞಾನನಿವರ್ತ್ಯವೆ ?- ಎಂಬುದನ್ನು ವಿಚಾರ ಮಾಡುವ ಸಂದರ್ಭದಲ್ಲಿ **'ಜ್ಞಾನರೂಪಂ ಪರಂ ಬ್ರಹ್ಮ'** ಎಂದುಮುಂತಾಗಿ ಮೂರು ಶ್ಲೋಕಗಳನ್ನು ಶ್ರೀಭಾಷ್ಯದಲ್ಲಿ (ಪು. ೯೯) ಉದಾಹರಿಸಿದೆ. ಇವು ನಾಥಮುನಿಸೂಕ್ತಿಗಳೆಂದು (ಮ॥ ಪಾಠವ) ಶ್ರೀಭಾಷ್ಯದ ಸಂಪಾದಕರು ಬರೆದಿರುತ್ತಾರೆ. ಇವು ಯಾವ ಗ್ರಂಥದಿಂದ ಆರಿಸಿದವುಗಳೆಂದು ನಮಗೆ ಗೊತ್ತಾಗಿ ತಿಳಿದಿರುವದಿಲ್ಲ. ಪರಾಂಕುಶಮುನಿಗಳ ದ್ರವಿಡೋಪನಿಷತ್ತಿನಲ್ಲಿರುವ ಸಿದ್ಧಾಂತವನ್ನು ಟಂಕದ್ರಮಿಡಾದಿಗಳು ಸಂಕ್ಷೇಪಿಸಿದರೆಂದೂ ಆ ಬಳಿಕ ನಾಥಮುನಿಗಳು **ನ್ಯಾಯತತ್ತ್ವ**ವೆಂಬ ಪ್ರಬಂಧದಲ್ಲಿ ನಿರೂಪಿಸಿದರೆಂದೂ **ಶ್ರೀಭಾಷ್ಯದ ಉಪೋದ್ಘಾತ**ದಲ್ಲಿ (ಪು. ೬) ಬರೆದಿದೆ. ಆದ್ದರಿಂದ ಈ ಶ್ಲೋಕಗಳು ಆ ಗ್ರಂಥದಿಂದಲೇ ಉದ್ಧೃತವಾಗಿರಬಹುದೆಂದು ಕಾಣುತ್ತದೆ. ಇಷ್ಟನ್ನು ಬಿಟ್ಟರೆ ನಾಥಮುನಿಗಳ ವಿಷಯವೂ ನಮಗೆ ಅಷ್ಟಾಗಿ ತಿಳಿಯದು.

## ಯಾಮುನಾಚಾರ್ಯರು

೫. **'ನಾಥೋಪಜ್ಞಂ ಪ್ರವೃತ್ತಂ ಬಹುಭಿರುಪಚಿತಂ ಯಾಮುನೇಯಪ್ರಬನ್ಧೈಃ । ತ್ರಾತಂ ಸಮ್ಯಗ್ಯತೀನ್ದ್ರೈರಿದಮಖಿಲತಮಃ**

**ಕರ್ಶನಂ ದರ್ಶನಂ ನಃ ॥'** ಎಂಬ ಉಕ್ತಿಯಂತೆ ಈ ದರ್ಶನಕ್ಕೆ ನಾಥರೇ (ನಾಥಮುನಿಗಳೇ) ಮೊದಲಿನ ಪ್ರವರ್ತಕರು. ಯಾಮುನಮುನಿಗಳು – ಆಗಮ ಪ್ರಾಮಾಣ್ಯ, ಸಿದ್ಧಿತ್ರಯವೇ ಮುಂತಾದ ಪ್ರಬಂಧಗಳಿಂದ ವಿಸ್ತರಿಸಿದರು. ಹೀಗೆ ಪ್ರವೃದ್ಧವಾದ – ಈ ದರ್ಶನವನ್ನು ಅದ್ವೈತದ್ವೈತಾದಿಪರಸಿದ್ಧಾಂತಗಳನ್ನು ಖಂಡಿಸಿ ಬೇರೂರಿಸಿ ಆಲದ ಹೆಮ್ಮರದಂತೆ ಹರಡಿಸಿದವರು ಶ್ರೀರಾಮಾನುಜರು. ಯಾಮುನಾಚಾರ್ಯರು ಪಾಂಚರಾತ್ರಾಗಮದ ಪ್ರಾಮಾಣ್ಯವನ್ನು ಸ್ಥಾಪಿಸಿ ತಮ್ಮ ಸಿದ್ಧಾಂತವು ನಿರ್ದುಷ್ಟವಾದದ್ದು, ಅನಾದಿಯಾದ ಭಾಗವತಮತದ ಬೆಂಬಲ ವುಳ್ಳದ್ದು– ಎಂದು ತೋರಿಸಿಕೊಟ್ಟವರು. ಅವರು ಸ್ತೋತ್ರರತ್ನ, ಚತುಃಶ್ಲೋಕೀ, ಗೀತಾರ್ಥಸಂಗ್ರಹ, ಮಹಾಪುರುಷನಿರ್ಣಯ– ಎಂಬ ಗ್ರಂಥಗಳನ್ನು ಬರೆದಿರುತ್ತಾ ರಾದರೂ ಶ್ರೀಭಾಷ್ಯದಲ್ಲಿ ರಾಮಾನುಜರು ಮುಖ್ಯವಾಗಿ ಅವರ ಆತ್ಮಸಿದ್ಧಿ, ಆಗಮ ಪ್ರಾಮಾಣ್ಯ– ಇವುಗಳ ಆಧಾರದಿಂದ ತಮ್ಮ ಅಭಿಪ್ರಾಯವನ್ನು ಹೊರಪಡಿಸಿರು ತ್ತಾರೆ. ಜಿಜ್ಞಾಸಾಧಿಕರಣವಲ್ಲಿ ಆತ್ಮಸಿದ್ಧಿಯ ವಾಕ್ಯಗಳನ್ನು ಮುಖ್ಯವಾಗಿ ಉದಾಹರಿಸಿಕೊಂಡಿರುತ್ತಾರೆ. ಶ್ರೀಭಾಷ್ಯದಲ್ಲಿ ಆತ್ಮನು ಅನುಭೂತಿಸ್ವರೂಪ ನೆಂದು ಪ್ರತಿಪಾದಿಸಿರುವ **ಇಷ್ಟಸಿದ್ಧಿಕಾರರ** ಮತವನ್ನೂ, ಪಂಚಪಾದಿಕಾಕಾರರೂ ವಿವರಣಾಚಾರ್ಯರೂ ಒಪ್ಪಿರುವ **ಭಾವರೂಪಾಜ್ಞಾನವಾದವನ್ನೂ** ಖಂಡಿಸಿರು ವದಕ್ಕೂ ಆತ್ಮನು ಅಹಂಪ್ರತ್ಯಯಗಮ್ಯನೆಂಬುದನ್ನು ಸಾಧಿಸಿರುವದಕ್ಕೂ ಬೇಕಾದ ಯುಕ್ತಿಗಳು **ಆತ್ಮಸಿದ್ಧಿಯಲ್ಲಿ** ಬೀಜರೂಪವಾಗಿ ಇದುತ್ತವೆ.

## ಶ್ರೀರಾಮಾನುಜಾಚಾರ್ಯರ ಗ್ರಂಥಗಳು

ಶ್ರೀರಾಮಾನುಜರು ಶ್ರೀಭಾಷ್ಯವಲ್ಲದೆ, ಸೂತ್ರಗಳಮೇಲೆ **ವೇದಾಂತಸಾರ, ವೇದಾಂತದೀಪ**– ಎಂಬ ಎರಡು ಸಣ್ಣ ವ್ಯಾಖ್ಯಾನಗಳನ್ನೂ ಬರೆದಿರುತ್ತಾರೆ. ಅವರು ಬರೆದಿರುವ ಗ್ರಂಥಗಳನ್ನು ವೇದಾರ್ಥಸಂಗ್ರಹ, ಗೀತಾಭಾಷ್ಯ, ವೇದಾಂತ ಸಾರ, ಶ್ರೀಭಾಷ್ಯ, ವೇದಾಂತದೀಪ– ಈ ಕ್ರಮದಲ್ಲಿ ಪ್ರಸ್ಥಾನತ್ರಯದ ತಾತ್ಪರ್ಯ ವನ್ನು ತಿಳಿಸಿರುತ್ತಾರೆಂದೂ ಆಮೇಲೆ ಗದ್ಯತ್ರಯ, ನಿತ್ಯಗ್ರಂಥ– ಇವುಗಳನ್ನು ಬರೆದರೆಂದೂ ಊಹಿಸುವದಕ್ಕೆ ಅವಕಾಶವಿದೆ ಎಂದು ನಾನು ವೇದಾರ್ಥಸಂಗ್ರಹದ ಪೀಠಿಕೆಯಲ್ಲಿ ತೋರಿಸಿಕೊಟ್ಟಿರುತ್ತೇನೆ. ವೇದಾಂತಸಾರದ ಸ್ವಲ್ಪಭಾಗವನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಕನ್ನಡಿಸಿ ಪ್ರಕಟಿಸಲಾಗಿದೆ. ಜಿಜ್ಞಾಸಾಧಿ ಕರಣದ ಶ್ರೀಭಾಷ್ಯದ ಜೊತೆಗೆ **ವೇದಾಂತದೀಪ**ವನ್ನೂ ಅನುಬಂಧವಾಗಿ ಈಗ ಜೋಡಿಸಲಾಗಿದೆ. ಈಗ ಹೊರಕ್ಕೆ ತಂದಿರುವ ಶ್ರೀರಾಮಾನುಜಗ್ರಂಥಗಳಿಂದ ಆ ಆಚಾರ್ಯರ ಸಿದ್ಧಾಂತವು ತಕ್ಕಮಟ್ಟಿಗೆ ಓದುಗರಿಗೆ ಪರಿಚಿತವಾದೀತೆಂದು ನಂಬುತ್ತೇನೆ.

# ಜಿಜ್ಞಾಸಾಧಿಕರಣಭಾಷ್ಯದ ಗ್ರಂಥಶರೀರ

## ಲಘುಪೂರ್ವಪಕ್ಷ

೬. ಇಲ್ಲಿ ಪ್ರಕಟವಾಗಿರುವ ಜಿಜ್ಞಾಸಾಧಿಕರಣಭಾಷ್ಯವನ್ನು 'ಲಘುಪೂರ್ವ ಪಕ್ಷ', 'ಮಹಾಪೂರ್ವಪಕ್ಷ' –ಎಂದು ಎರಡು ಪೂರ್ವಪಕ್ಷಗಳ ನಿರಾಕರಣೆಯ ರೂಪವಾಗಿ ಲಘುಸಿದ್ಧಾಂತ, ಮಹಾಸಿದ್ಧಾಂತ– ಎಂದು ಎರಡು ಸಿದ್ಧಾಂತಭಾಗ ಗಳಾಗಿ ವಿಂಗಡಿಸಿಕೊಳ್ಳುವದು ಸಾಂಪ್ರದಾಯಿಕ.

**ಲಘುಪೂರ್ವಪಕ್ಷ**ದಲ್ಲಿ ಸಾಧನಚತುಷ್ಟಯಸಂಪತ್ತ್ಯನಂತರದಲ್ಲಿ ಅಧಿಕಾರಿ ಯಾದವನು ಧರ್ಮಜಿಜ್ಞಾಸೆಯನ್ನು ಮಾಡಿರಲಿ, ಮಾಡದೆ ಇರಲಿ, ಬ್ರಹ್ಮಜಿಜ್ಞಾಸೆ ಯನ್ನು ಮಾಡಬೇಕು. ಕರ್ಮಗಳು ವಿವಿದಿಷೆಗೆ ಮಾತ್ರವೇ ಸಾಧನವಾಗಿ ವಿನಿಯೋಗವಾಗುವವು, ನೇರಾಗಿ ಜ್ಞಾನೋತ್ಪತ್ತಿಗಾಗಲಿ, ಮೋಕ್ಷಕ್ಕಾಗಲಿ, ಬ್ರಹ್ಮ ಜಿಜ್ಞಾಸೆಗಾಗಲಿ– ಅವು ಉಪಯುಕ್ತವಾಗಿರುವದಿಲ್ಲ. ಆದ್ದರಿಂದ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರದಲ್ಲಿ 'ಅಥ'ಶಬ್ದವು ಈ ಸಾಧನಚತುಷ್ಟಯ ಸಂಪತ್ತಿಯನ್ನೇ ಹೇಳುತ್ತದೆ. ಬ್ರಹ್ಮಜ್ಞಾನದಿಂದಲೇ ಅವಿದ್ಯೆಯು ತೊಲಗು ತ್ತದೆ; ಆ ಜ್ಞಾನವು 'ತತ್ತ್ವಮಸಿ' ಮುಂತಾದ ವೇದಾಂತವಾಕ್ಯಗಳಿಂದ ಉಂಟಾಗು ತ್ತದೆ; ಶ್ರವಣಮನನನಿದಿಧ್ಯಾಸನಗಳು ವಾಕ್ಯಜನ್ಯಜ್ಞಾನಕ್ಕಾಗಿ ಬೇಕಾಗುತ್ತವೆ. ಶ್ರವಣಾದಿಗಳಿಂದ ಭೇದವಾಸನೆಯನ್ನು ಕಳೆದುಕೊಂಡವನಿಗೆ ವಾಕ್ಯಾರ್ಥಜ್ಞಾನ ವುಂಟಾಗುತ್ತದೆ– ಎಂದು ಪ್ರತಿಪಾದಿಸಿರುತ್ತದೆ.

## ಲಘುಸಿದ್ಧಾಂತ

ಬ್ರಹ್ಮವಿಜ್ಞಾನದಿಂದ ಅವಿದ್ಯಾನಿವೃತ್ತಿಯಾಗುತ್ತದೆ– ಎಂದು ಪೂರ್ವ ಪಕ್ಷಿಯು ಹೇಳಿದ್ದು ಸರಿ. ಆದರೆ ಬ್ರಹ್ಮವಿಜ್ಞಾನವೆಂದರೆ ವಾಕ್ಯಜನ್ಯಜ್ಞಾನಮಾತ್ರ ವಲ್ಲ; ಏಕೆಂದರೆ ವಿಧಿಸದೆ ಇದ್ದರೂ ವಾಕ್ಯಶ್ರವಣದಿಂದಲೇ ಅದು ಉಂಟಾಗುತ್ತದೆ, ಅದರಿಂದ ಅವಿದ್ಯೆಯು ತೊಲಗುವದು ಕಂಡೂಇಲ್ಲ. **ವೇದಾಂತವಾಕ್ಯಗಳಲ್ಲಿ ವಿಧಿಸಿರುವ ಜ್ಞಾನವೆಂದರೆ ಉಪಾಸನೆಯೇ,** ಶ್ರವಣಮನನಗಳೆರಡೂ ಅನುವಾದಮಾತ್ರವೇ; ಆದ್ದರಿಂದ ಧ್ಯಾನವೇ ವಿಹಿತವಾಗಿರುತ್ತದೆ. ಧ್ಯಾನವೆಂದರೆ ಸ್ಮೃತಿಸಂತತಿ, ಧ್ಯಾನವನ್ನು ಸಂತತವಾಗಿ ಅಭ್ಯಾಸಮಾಡುವದರಿಂದ **ಧ್ರುವಾನು ಸ್ಮೃತಿ**ಯಾಗುವದು, ಇದಕ್ಕೇ **ಸಾಕ್ಷಾತ್ಕಾರ**ವೆಂದು ಹೆಸರು, ಇದಕ್ಕೆ **ಭಕ್ತಿ** ಯೆಂಬ ಮತ್ತೊಂದು ಹೆಸರೂ ಇದೆ. ಇದರ ಉತ್ಪತ್ತಿಗೆ ಯಜ್ಞಾದಿಗಳು ಸಾಧನ ಗಳು, ಯಜ್ಞಾದಿಗಳು ವಿವಿದಿಷೆಯಲ್ಲಿ ವಿನಿಯುಕ್ತವಾಗಿದ್ದರೂ ಧ್ಯಾನದಿಂದುಂ ಟಾಗುವ ಸಾಕ್ಷಾತ್ಕಾರವುಂಟಾಗುವವರೆಗೂ ಉಪಾಸನೆಯಂತೆಯೇ ಯಾವ ಜ್ಜೀವವೂ ಅವನ್ನು ಮಾಡುತ್ತಿರಬೇಕು.

ವಾಕ್ಯಕಾರರು ಹೇಳಿರುವ ವಿವೇಕವಿಮೋಕಾಭ್ಯಾಸಕ್ರಿಯಾಕಲ್ಯಾಣಾನವ ಸಾದಾನುದ್ಧರ್ಷಗಳೆಂಬ ಏಳು ಸಾಧನಗಳನ್ನು ಈ ಧ್ರುವಾನುಸ್ಮೃತಿಯ ಉತ್ಪತ್ತಿಗಾಗಿ ಮಾಡಬೇಕು. ಅವುಗಳಿಂದೊಡಗೂಡಿದ ಕರ್ಮಾನುಷ್ಠಾನದಿಂದಲೇ ಜ್ಞಾನ ವಿರೋಧಿಯಾದ ಪಾಪಪುಣ್ಯಗಳನ್ನು ಕಳೆದುಕೊಂಡವನಿಗೆ ಬ್ರಹ್ಮಪ್ರಾಪ್ತಿಸಾಧನವಾದ ಜ್ಞಾನವು ಲಭಿಸುವದು. ಆದ್ದರಿಂದ ಸೂತ್ರದಲ್ಲಿರುವ ಅಥಶಬ್ದಕ್ಕೆ ಕರ್ಮ ಜಿಜ್ಞಾಸೆಯನ್ನುಂಟುಮಾಡಿದಬಳಿಕ ಎಂದೇ ಅರ್ಥ. ನಿತ್ಯಾನಿತ್ಯವಿವೇಕಾದಿಗಳೂ ಮೀಮಾಂಸಾಶ್ರವಣವನ್ನು ಮಾಡಿದಮೇಲೆಯೇ ಉಂಟಾಗುವವಾದ್ದರಿಂದ ಅಥ ಶಬ್ದಕ್ಕೆ ಪೂರ್ವಪಕ್ಷಿಯು ಹೇಳಿದ ಅರ್ಥವು ಸರಿಯಲ್ಲ. ಕರ್ಮಗಳಿಗೆ ಅಲ್ಪಾಸ್ಥಿರ ಫಲವೆಂಬುದನ್ನು ತಿಳಿದವನಿಗೇ ಮೋಕ್ಷಾಭಿಲಾಷೆಯುಂಟಾಗುವದರಿಂದ ಕರ್ಮ ಜಿಜ್ಞಾಸೆಯಾದ ಬಳಿಕವೇ ಬ್ರಹ್ಮಜಿಜ್ಞಾಸೆಯುಂಟಾಗುವದೆಂಬುದು ಯುಕ್ತ.

## ಮಹಾಪೂರ್ವಪಕ್ಷ

೭. ನಿರ್ವಿಶೇಷಚಿನ್ಮಾತ್ರವಾದ ಬ್ರಹ್ಮವೊಂದೇ ಪರಮಾರ್ಥ; ಅದರಲ್ಲಿಯೇ ಜ್ಞಾತೃಜ್ಞಾನಜ್ಞೇಯಗಳು ಕಲ್ಪಿತವಾಗಿರುತ್ತವೆ; ಬ್ರಹ್ಮವು ಸದಸದನಿರ್ವಾಚ್ಯವಾದ ಅವಿದ್ಯೆಯಿಂದ ಮರೆಯಾಗಿ ತನ್ನಲ್ಲಿ ನಾನಾತ್ವವನ್ನು ಕಾಣುತ್ತಿರುವದೆಂದೂ ಆ ಅವಿದ್ಯೆಯು ನಿರ್ವಿಶೇಷಚಿನ್ಮಾತ್ರಬ್ರಹ್ಮಾತ್ಮೈಕತ್ವವಿಜ್ಞಾನದಿಂದ ತೊಲಗುವದೆಂದೂ ಶ್ರುತಿಸ್ಮೃತಿಪುರಾಣಗಳಲ್ಲಿ ಹೇಳಿರುತ್ತದೆ. ಆ ಬ್ರಹ್ಮಾತ್ಮೈಕತ್ವಜ್ಞಾನದಿಂದಲೇ ಸಕಾರಣವಾಗಿ ಬಂಧವು ನಿವೃತ್ತವಾಗುತ್ತದೆ. ಭೇದವು ಪ್ರತ್ಯಕ್ಷಗಮ್ಯವಾಗಿದ್ದರೂ ಶಾಸ್ತ್ರವು ಪ್ರಬಲಪ್ರಮಾಣವಾದ್ದರಿಂದ ಶಾಸ್ತ್ರಜನ್ಯಜ್ಞಾನದಿಂದ ಭೇದವು ನಿವೃತ್ತಿಯಾಗಬಹುದು.

ಶಾಸ್ತ್ರವು ಅನಾದಿನಿಧನಸಂಪ್ರದಾಯಾವಗತವಾಗಿರುವದರಿಂದ ಅದರಲ್ಲಿ ಯಾವ ದೋಷವೂ ಇರುವ ಸಂಭವವಿಲ್ಲ; ಪ್ರತ್ಯಕ್ಷದಲ್ಲಿ ಅವಿದ್ಯಾರೂಪದೋಷವಿರುವದೆಂಬುದು ಸಂಭಾವಿತವಾಗಿರುವದರಿಂದಲೂ ನಿರವಕಾಶವಾದ ಶಾಸ್ತ್ರದಿಂದ ಸಾವಕಾಶವಾದ ಪ್ರತ್ಯಕ್ಷವು ಬಾಧಿತವಾಗುತ್ತದೆ. ಇಲ್ಲಿ ಮೀಮಾಂಸಾಶಾಸ್ತ್ರೋಕ್ತವಾದ ಅಪಚ್ಛೇದನ್ಯಾಯವನ್ನು ಅನ್ವಯಿಸಿದರೆ ಪ್ರತ್ಯಕ್ಷವು ಶಾಸ್ತ್ರದಿಂದ ಬಾಧಿತವಾಗುವದು ಯುಕ್ತವಾಗಿದೆ. ವೇದಾಂತವಾಕ್ಯಗಳಲ್ಲಿಯೂ ಉಪಾಸನಾರೂಪವಾದ ಸಗುಣಬ್ರಹ್ಮವಾಕ್ಯಗಳೂ ನಿರ್ಗುಣವಾಕ್ಯಗಳಿಂದ ಬಾಧಿತವಾಗುವವೆಂಬುದಕ್ಕೆ ಇದೇ ನ್ಯಾಯ. ಬ್ರಹ್ಮವು ಸರ್ವಜ್ಞವು ಸರ್ವಶಕ್ತಿಯುತವಾದದ್ದು– ಎಂದು ಮುಂತಾಗಿ ಹೇಳುವ ವಾಕ್ಯಗಳಿಗಿಂತಲೂ ನಿರಸ್ತಸಮಸ್ತವಿಶೇಷರೂಪವಾದ ಬ್ರಹ್ಮವನ್ನು ಹೇಳುವ ವಾಕ್ಯಗಳು ಪ್ರಬಲವೆಂಬುದಕ್ಕೂ ಇದೇ ನ್ಯಾಯ. 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' ಎಂದು ಮುಂತಾಗಿರುವ ವಾಕ್ಯಗಳಲ್ಲಿ ಸತ್ಯತ್ವಾದಿಗಳು ಬ್ರಹ್ಮದ ಗುಣಗಳೆಂದು ಹೇಳಿಲ್ಲ ; ಏಕೆಂದರೆ ಸತ ಜ್ಞಾನಾದಿಪದಾರ್ಥಗಳ ಸಮಾ

ನಾಧಿಕರಣ್ಯದಿಂದ ಏಕಾರ್ಥವನ್ನೇ ಬೋಧಿಸುತ್ತವೆ. ಏಕೆಂದರೆ ಬ್ರಹ್ಮವು ಸಕಲೇತರ ವಿರೋಧಿಯಾಗಿರುತ್ತದೆ– ಎಂಬುದನ್ನೇ ಅವು ಹೇಳುತ್ತವೆ. ಆದ್ದರಿಂದ ಸಕಲೇತರ ವ್ಯಾವೃತ್ತವಾದ ಬ್ರಹ್ಮವು ನಿರ್ಧರ್ಮಕವಾಗಿದೆ; ವ್ಯಾವೃತ್ತಿಯೆಂಬುದು ಧರ್ಮವಲ್ಲ, ಅದು ಬ್ರಹ್ಮಸ್ವರೂಪವೇ ಆಗಿರುತ್ತದೆ. ಸರ್ವಶಾಖಾಪ್ರತ್ಯಯನ್ಯಾಯದಿಂದ ಕಾರಣವಾಕ್ಯಗಳಲ್ಲಿ ಸಜಾತೀಯವಿಜಾತೀಯವ್ಯಾವೃತ್ತವಾದ ಅದ್ವಿತೀಯಬ್ರಹ್ಮವನ್ನೇ ಹೇಳಿದೆಯೆಂದು ಗೊತ್ತಾಗುತ್ತದೆ. ಸ್ವಲ್ಪವಾದರೂ ಸದ್ವಿತೀಯತ್ವವನ್ನು ಕಲ್ಪಿಸಿದರೆ 'ನಿರ್ಗುಣಮ್', 'ನಿರಞ್ಜನಮ್'– ಮುಂತಾದ ವಾಕ್ಯಗಳಿಗೆ ವಿರೋಧವಾಗುವದು. ಸತ್ಯಾದಿಶಬ್ದಗಳನ್ನು ಕೇವಲವ್ಯಾವೃತ್ತಿಪರವೆಂದರೆ ಲಕ್ಷಣೆಯನ್ನು ಕಲ್ಪಿಸಿದ ದೋಷವು ಬರುವದಿಲ್ಲವೆ?– ಎಂದರೆ ಹಾಗಲ್ಲ. ಏಕೆಂದರೆ ಅಭಿಧಾವೃತ್ತಿಗಿಂತ ತಾತ್ಪರ್ಯವೃತ್ತಿಯು ಪ್ರಬಲವಾಗಿರುತ್ತದೆ. ಸರ್ವಪದಗಳಿಗೂ ಲಕ್ಷಣೆಯನ್ನು ಕಲ್ಪಿಸಿದರೂ ದೋಷವಿಲ್ಲ. ಆದ್ದರಿಂದಲೇ ಕಾರ್ಯವಾಕ್ಯಾರ್ಥವಾದಿಗಳು ಸರ್ವಪದಗಳಿಗೂ ಲಕ್ಷಣೆಯನ್ನು ಸ್ವೀಕರಿಸಿರುತ್ತಾರೆ.

ಸರಿಯಾಗಿ ನೋಡಿದರೆ ಶಾಸ್ತ್ರಕ್ಕೂ ಪ್ರತ್ಯಕ್ಷಕ್ಕೂ ವಿರೋಧವೇ ಇಲ್ಲ; ಏಕೆಂದರೆ ನಿರ್ವಿಶೇಷಸನ್ಮಾತ್ರವನ್ನೇ ಶಾಸ್ತ್ರವು ಹೇಳುತ್ತದೆ. ಇದಲ್ಲದೆ ಭೇದವೆಂದರೇನೆಂಬುದನ್ನು ನಿರೂಪಿಸುವದಕ್ಕೂ ಆಗುವಂತಿಲ್ಲ. ಏಕೆಂದರೆ ಇದು ವಸ್ತುವಿನ ಧರ್ಮವೆಂದಾಗಲಿ ಸ್ವರೂಪವೆಂದಾಗಲಿ ನಿರ್ಣಯಿಸುವದಕ್ಕಾಗುವದಿಲ್ಲ, ಪ್ರತ್ಯಕ್ಷಪ್ರಮಾಣದಿಂದಲೇ ಘಟಪಟಾದಿಗಳು ವ್ಯಾವೃತ್ತವಾಗುತ್ತಿರುವದರಿಂದಲೂ ಸತ್ತ್ವವು ಮಾತ್ರ ಅನುವೃತ್ತವಾಗಿರುವದರಿಂದಲೂ ರಜ್ಜುಸರ್ಪಾದಿಗಳಂತೆ ವ್ಯಾವೃತ್ತವಾಗಿರುವ ಘಟಾದಿಗಳು ಅಸತ್ಯವೆಂದೂ ಸತ್ತೇ ಪರಮಾರ್ಥವೆಂದೂ ಏರ್ಪಡುತ್ತದೆ. ಸತ್ತು ಅನುಭವಕ್ಕಿಂತ ಭಿನ್ನವಲ್ಲ; ಏಕೆಂದರೆ ಭೇದವೇ ದುರ್ನಿರೂಪವಾಗಿರುತ್ತದೆ. ಆದ್ದರಿಂದ ಅನುಭೂತಿಯೇ ಪರಮಾರ್ಥ. ಅದು ಸ್ವತಃಸಿದ್ಧವಾಗಿರುತ್ತದೆ, ಅದಕ್ಕೆ ಅನುಭವದ ಅಪೇಕ್ಷೆಯೂ ಇಲ್ಲ. ಏಕೆಂದರೆ ಸದ್ರೂಪವಾಗಿಯೇ ತೋರುತ್ತದೆ; ತಾನು ಬೆಳಗಿ ತೋರುವದಕ್ಕೂ ತೋರುತ್ತದೆ ಎಂಬ ವ್ಯವಹಾರಕ್ಕೂ ತಾನೇ ಕಾರಣವಾಗಿರುತ್ತದೆ; ಪ್ರಾಗಭಾವಾದಿಗಳಿಲ್ಲದ್ದರಿಂದ ಅದು ನಿತ್ಯವೂ ಆಗಿರುತ್ತದೆ. ಅದಕ್ಕೆ ಜನ್ಮಾದಿವಿಕಾರಗಳೂ ಇಲ್ಲ. 'ನಾನು ಅರಿಯುತ್ತೇನೆ' ಎಂಬ ಪ್ರತೀತಿಯು ಭ್ರಾಂತಿಸಿದ್ಧವಾಗಿರುತ್ತದೆ; ಏಕೆಂದರೆ ಅವಿಕ್ರಿಯವಾದ ಸಾಕ್ಷಿಯಾದ ಚಿನ್ಮಾತ್ರಾತ್ಮನಲ್ಲಿ ಕರ್ತೃತ್ವಾದಿಗಳೂ ಇರುವಂತಿಲ್ಲ. ಅದಕ್ಕೆ ಆಧಾರವಾಗಿ ಸುಷುಪ್ತಿಯೇ ಮುಂತಾದವುಗಳ ಅನುಭವವೂ ಇರುತ್ತದೆ, ಅಲ್ಲಿ ಅಹಂಕಾರವು ಇರುವದಿಲ್ಲ; ಆದ್ದರಿಂದ ಅಹಂಕಾರವು ಆತ್ಮಧರ್ಮವಲ್ಲ. ಆತ್ಮನು ಕರ್ತೃವೆಂದೂ ಅಹಂಪ್ರತ್ಯಯಗೋಚರನೆಂದೂ ಒಪ್ಪಿದರೆ ದೇಹದಂತೆ ಅದೂ ಜಡವೂ ಪರಾಕ್ಪದಾರ್ಥವೂ ಅನಾತ್ಮವೂ ಆದೀತು. ಆದ್ದರಿಂದ ಆತ್ಮನು ದೇಹಕ್ಕಿಂತ

ಅನ್ಯವಾಗಿರುವಂತೆ ಅಹಮರ್ಥವಾದ ಜ್ಞಾತೃವಿಗಿಂತಲೂ ಭಿನ್ನನೇ ಆಗಿರುತ್ತಾನೆ. ಈ ಅವಿಕಾರನಾದ ಅನುಭವರೂಪನಾದ ಆತ್ಮನಿಗೆ ಅಹಂಕಾರವು ಅಭಿವ್ಯಂಜಕವಾಗಿರುತ್ತದೆ. ಆದ್ದರಿಂದಲೇ ಸುಷುಪ್ತಿಯಲ್ಲಿಯೂ ಮುಕ್ತಿಯಲ್ಲಿಯೂ ಅದು ಅನ್ವಯಿಸಿಕೊಂಡಿರುವದಿಲ್ಲ. ಆದ್ದರಿಂದ ಸುಷುಪ್ತಿಯಲ್ಲಿ ನನ್ನನ್ನುಕೂಡ ನಾನು ಅರಿಯಲಿಲ್ಲ– ಎಂಬ ಸ್ಮರಣೆಯಾಗುತ್ತದೆ.

ಹೀಗೆ ನಿರ್ವಿಶೇಷಚಿನ್ಮಾತ್ರೈಕರಸಕೂಟಸ್ಥಸಂವಿನ್ಮಾತ್ರನಾದ ಆತ್ಮನು ಭ್ರಾಂತಿಯಿಂದ ಜ್ಞಾತೃಜ್ಞಾನಜ್ಞೇಯರೂಪದಿಂದ ವಿವರ್ತವಾಗಿರುತ್ತಾನಾದ್ದರಿಂದ ಇದಕ್ಕೆ ಕಾರಣವಾಗಿರುವ ಅವಿದ್ಯೆಯನ್ನು ತೊಲಗಿಸುವದಕ್ಕಾಗಿ ಬ್ರಹ್ಮಾತ್ಮೈಕತ್ವವಿದ್ಯಾಪ್ರಾಪ್ತಿಗಾಗಿ ಉಪನಿಷತ್ತುಗಳೆಲ್ಲವೂ ಹೊರಟಿರುತ್ತವೆ.

## ಮಹಾಸಿದ್ಧಾಂತ

೮. ಈ ಮತವು ಸರಿಯಲ್ಲ. ಏಕೆಂದರೆ **ನಿರ್ವಿಶೇಷವಸ್ತುವಿಗೆ ಯಾವ ಪ್ರಮಾಣವೂ ಇರುವದಿಲ್ಲ.** ಏಕೆಂದರೆ ಪ್ರಮಾಣಗಳೆಲ್ಲವೂ ಸವಿಶೇಷವಸ್ತುವಿಷಯವಾಗಿರುತ್ತವೆ. ನಿರ್ವಿಶೇಷವಸ್ತುವು ಸ್ವಾನುಭವಸಿದ್ಧವೆನ್ನುವದು ಸರಿಯಲ್ಲ; ಏಕೆಂದರೆ ಇದನ್ನು ನಾನು ಕಂಡೆನು ಎಂದು ವಿಶೇಷವಿಶಿಷ್ಟವಾದ ವಿಷಯವೇ ಎಲ್ಲಾ ಅನುಭವಗಳಿಗೂ ವಿಷಯವಾಗಿರುತ್ತದೆ. ಕೆಲವು ವಿಶೇಷಗಳನ್ನು ನಿರಾಕರಿಸುವ ಮಾತ್ರದಿಂದ ವಸ್ತುವಿಗೆ ನಿರ್ವಿಶೇಷತ್ವವು ಸಿದ್ಧವಾಗಲಾರದು. ಯಾವ ವಿಶೇಷಗಳೂ ಇಲ್ಲವೆಂದು ಹೇಳುವ ವಸ್ತುವಿನಲ್ಲಿಯೇ ನಿತ್ಯತ್ವಾದಿವಿಶೇಷಗಳನ್ನು ಪೂರ್ವಪಕ್ಷಿಯು ಒಪ್ಪಿರುತ್ತಾನೆ. ವಸ್ತುಮಾತ್ರವನ್ನು ಒಪ್ಪಿಯೇ ವಾದಿಗಳು 'ಇಂಥಿಂಥ ವಿಶೇಷಗಳು ಅದರಲ್ಲಿಲ್ಲ, ಅಥವಾ ಇವೆ' ಎಂದು ವಾದಿಸುತ್ತಿರುತ್ತಾರೆ. ನಿರ್ವಿಕಲ್ಪಕ ಪ್ರತ್ಯಕ್ಷವೆಂಬುದೂ ಸವಿಶೇಷವಿಷಯಕವೇ. ಏಕೆಂದರೆ ಕೆಲಕೆಲವು ವಿಶೇಷಗಳು ಮಾತ್ರ ಇಲ್ಲದ ವಸ್ತುವನ್ನು ಅದು ಗ್ರಹಿಸುತ್ತದೆ. ಆದ್ದರಿಂದಲೇ ಪ್ರತ್ಯಕ್ಷೋಪಜೀವಿಗಳಾದ ಅನುಮಾನಾದಿಗಳೂ ಸವಿಶೇಷವಸ್ತುವನ್ನೇ ತಿಳಿಸುತ್ತವೆ.

ಪ್ರತ್ಯಕ್ಷವು ಸನ್ಮಾತ್ರಗ್ರಾಹಿ, ಅದು ಭೇದವಿಷಯವಲ್ಲ– ಎಂಬುದು ಸರಿಯಲ್ಲ. ಏಕೆಂದರೆ ಪ್ರತ್ಯಕ್ಷವಿಷಯವು ಜಾತ್ಯಾದಿವಿಶಿಷ್ಟವಸ್ತು ; ಜಾತ್ಯಾದಿಗಳು ವಸ್ತುವಿಗೂ ತನಗೂ ಇರುವ ಭೇದವನ್ನೇ ತಿಳಿಸುತ್ತವೆಯಾದ್ದರಿಂದ ಭೇದವು ದುರ್ನಿರೂಪವೆಂಬುದು ಅಯುಕ್ತ. ಆದ್ದರಿಂದಲೇ ಪ್ರತ್ಯಕ್ಷವು ಸನ್ಮಾತ್ರಗ್ರಾಹಕವೆಂಬುದು ಸುಳ್ಳಾಯಿತು ; ಏಕೆಂದರೆ ಹಾಗಿದ್ದರೆ ಕುದುರೆಯು ಬೇಕಾದವನು ಕೋಣವನ್ನೇನೂ ಕುದುರೆಯೆಂದು ತಿಳಿಯುವದಿಲ್ಲವಲ್ಲವೆ ?

**ಘಟಪಟಾದಿಗಳು ವ್ಯಾವೃತ್ತವಾಗುವಲ್ಲಿ ಸತ್ತು ಅನುವೃತ್ತವಾಗಿರುವದರಿಂದ ಘಟಾದಿಗಳು ಮಿಥ್ಯೆ, ಸನ್ಮಾತ್ರವೇ ಸತ್ಯ– ಎಂಬುದೂ ಸರಿಯಲ್ಲ.** ಏಕೆಂದರೆ ಘಟಪಟಾದಿಗಳಿಗೆ ರಜ್ಜುವಿಗೂ ಸರ್ಪಾದಿಗಳಿಗೂ ಇರುವಂತೆ

ಬಾಧ್ಯಬಾಧಕಭಾವವಿರುವದಿಲ್ಲ. ಅನುಭವಕ್ಕೆ ವಿಷಯವಿಷಯಿಭಾವವಿರುವದರಿಂದ **ಸತ್ತು ಅನುಭೂತಿಯೇ ಎಂಬುದೂ ಸರಿಯಲ್ಲ. ಅನುಭೂತಿಯು ಸ್ವಯಂಪ್ರಕಾಶವೆಂಬುದೂ ನಿಯತವಲ್ಲ ;** ಏಕೆಂದರೆ ಮತ್ತೊಬ್ಬರ ಅನುಭವವು ಅನುಮೇಯವಾಗಿರುತ್ತದೆ. ತನ್ನ ಹಿಂದಿನ ಅನುಭವಗಳೂ ಮತ್ತೊಬ್ಬರ ಅನುಭವಗಳೂ ಅನುಭಾವ್ಯವಾಗಿರುವದರಿಂದ ಅನುಭೂತಿಯು ಅನುಭವಕ್ಕೆ ವಿಷಯವಲ್ಲವೆಂಬುದೂ ಸರಿಯಲ್ಲ. ತನ್ನ ಇರವಿನಿಂದಲೇ ತನ್ನ ಆಶ್ರಯಕ್ಕೆ ತೋರಿಕೊಂಡರೆ, ಅಥವಾ ಸ್ವವಿಷಯವನ್ನು ಸಿದ್ಧಪಡಿಸಿದರೆ ಅಷ್ಟುಮಾತ್ರದಿಂದ ಅದು ಅನುಭವವಾಗಿರಬಹುದಾಗಿರುತ್ತದೆ. ಅನುಭವಕ್ಕೆ ಪ್ರಾಗಭಾವಾದಿಗಳಿಲ್ಲವೆಂಬುದೂ ಸರಿಯಲ್ಲ ; ಹಿಂದಿನ ಅನುಭವವೂ ಈಗಿನ ಅನುಭವಕ್ಕೆ ವಿಷಯವಾಗಬಹುದಾಗಿರುತ್ತದೆ. ಅನುಭವದ ಪ್ರಾಗಭಾವವು ಪ್ರಮಾಣಗಮ್ಯವಲ್ಲವೆಂದಿಟ್ಟುಕೊಂಡರೂ ಯೋಗ್ಯಾನುಪಲಬ್ಧಿಯೇ ಅದಕ್ಕೆ ಪ್ರಮಾಣವಾಗುತ್ತದೆ. **ನಿರ್ವಿಷಯವಾದ ಅನುಭವವೇ ಇಲ್ಲ ; ಆದ್ದರಿಂದ ಅನುಭವಮಾತ್ರವೇ ಸತ್ಯವೆನ್ನುವದು ಸರಿಯಲ್ಲ.** ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ಕೇವಲಾನುಭವವಿದೆ ಎನ್ನುವದೂ ಸರಿಯಲ್ಲ. ಹಾಗಿದ್ದರೆ ಅಂಥ ಅನುಭವವಿದೆ ಎಂಬ ಸ್ಮರಣೆಯಿರಬೇಕಿತ್ತು. ಅನುಭವಕ್ಕೆ ಉತ್ಪತ್ತಿಯಿಲ್ಲದಿದ್ದರೂ ಪ್ರಾಗಭಾವದಂತೆ ನಾಶವಾಗಬಹುದು ; ಆದ್ದರಿಂದ ಅದು ನಿರ್ವಿಕಾರವೆಂಬುದೂ ಸರಿಯಲ್ಲ. ಭಾವರೂಪವಾದ ಅವಿದ್ಯೆಗೂ ನಾಶವನ್ನೊಪ್ಪುವದರಿಂದ ನೀವು ಅನುಭವಕ್ಕೆ ನಾಶವಿಲ್ಲವೆನ್ನುವಂತಿಲ್ಲ. ಅನುಭವಕ್ಕೆ ನಿತ್ಯತ್ವಾದಿಧರ್ಮಗಳಿರುವದರಿಂದ ಧರ್ಮವಿಲ್ಲವೆಂದೂ, ಇದ್ದರೆ ಅದು ದೃಶ್ಯವಾಗಿರುವದರಿಂದ ಅದರ ಧರ್ಮವಲ್ಲವೆಂದೂ ಸಾಧಿಸುವದು ಅಯುಕ್ತ. ಅನುಭವವೆಂಬುದು ಅನುಭವಿತೃವಿನ ಧರ್ಮವು, ಸುಖದುಃಖಾದಿಗಳಂತೆ ಇದಕ್ಕೆ ಉತ್ಪತ್ತ್ಯಾದಿಗಳೂ ಉಂಟು. ಅನುಭವವು ಆತ್ಮನು ಎಂದರೂ ಅದರ ಪ್ರತ್ಯಭಿಜ್ಞಾನಕ್ಕೆ ಮತ್ತೊಬ್ಬ ಅನುಭವಿತೃವು ಬೇಕಾಗುವದು.

**ಅಹಮರ್ಥವು** ಆತ್ಮನಲ್ಲವೆಂದರೆ ಆತ್ಮನಿಗೆ ಪ್ರತ್ಯಕ್ತ್ವವಿಲ್ಲವಾಗುವದು ; ನಾನು ನಷ್ಟವಾದಮೇಲೆ ಮೋಕ್ಷವಾಗುವದು ಎಂದು ಯಾರೂ ಆತ್ಮಶ್ರವಣಾದಿಗಳನ್ನು ಮಾಡಲಾರರೆಂಬ ಅನಿಷ್ಟವೂ ಬಂದೊದಗುವದು. ಆದ್ದರಿಂದ ದೀಪಾದಿಗಳು ಸ್ವಪ್ರಕಾಶವೂ ಆಗಿದ್ದು ತನ್ನ ಪ್ರಭೆಯಿಂದ ಮಿಕ್ಕ ವಸ್ತುಗಳನ್ನು ಬೆಳಗಿ ತೋರಿಸುವಂತೆ, ಆತ್ಮನು ಚಿದ್ರೂಪನೂ ಆಗಿದ್ದು ಚೈತನ್ಯಗುಣವುಳ್ಳವನೂ ಆಗಿರುತ್ತಾನೆ- ಎಂದು ತಿಳಿಯಬೇಕು. ಆದ್ದರಿಂದ ಆತ್ಮನು ಅನುಭವಮಾತ್ರಸ್ವರೂಪನು ಎಂಬುದು ಯುಕ್ತಿವಿರುದ್ಧ. ಸಂವಿತ್ತು, ಅನುಭವ, ಜ್ಞಾನ— ಮುಂತಾದವು ಸಂಬಂಧಿಶಬ್ದಗಳು. ಅನುಭವಕ್ಕೆ ಆಶ್ರಯವೂ ಬೇಕು, ವಿಷಯವೂ ಬೇಕು ; ಜ್ಞಾತೃತ್ವವು ಚೇತನಮಾತ್ರಸ್ವಭಾವವಾಗಿರುತ್ತದೆ. ಅದು ವಿಕ್ರಿಯಾತ್ಮಕವು,

ಅದಕ್ಕೆ ಜ್ಞಾನವೆಂಬ ಗುಣವಿದೆ, ಕ್ಷೇತ್ರಜ್ಞಾವಸ್ಥೆಯಲ್ಲಿ ಕರ್ಮನಿಮಿತ್ತದಿಂದ ಸಂಕೋಚವಿಕಾಸಗಳನ್ನು ಪಡೆಯುತ್ತಿರುತ್ತದೆ; ಜ್ಞಾನವು ಹರಡಿಕೊಂಡಾಗ ಜ್ಞಾನ ಕರ್ತೃತ್ವವು ಆತ್ಮನಿಗೆ ಸ್ವಾಭಾವಿಕವಾಗಿಯೇ ಇರುತ್ತದೆ. ಆತ್ಮನು ಜಡಸ್ವರೂಪ ವಾದ ಅಹಂಕಾರದಿಂದ ಅಭಿವ್ಯಕ್ತನಾಗುತ್ತಾನೆ– ಎಂಬುದು ಸರ್ವಥಾ ಯುಕ್ತಿ ಬಾಹ್ಯ. ಸುಷುಪ್ತ್ಯಾದಿಗಳಲ್ಲಿಯೂ 'ನಾನು', 'ನಾನು' ಎಂದೇ ಸ್ಫುರಣವಿರು ತ್ತದೆ; ಏಕೆಂದರೆ ನಾನು ಸುಖವಾಗಿ ನಿದ್ರಿಸಿದೆನು ಎಂದೇ ನೆನಪಾಗುತ್ತದೆ. 'ನನ್ನನ್ನು ನಾನು ಅರಿಯಲಿಲ್ಲ' ಎಂಬ ನೆನಪಿಗೆ ನಾನು ಇಂಥವನು– ಎಂಬ ಅರಿವೂ ಇರಲಿಲ್ಲ ಎಂದರ್ಥ; ಅಲ್ಲಿ ಆತ್ಮನು ಅಜ್ಞಾನಕ್ಕೆ ಸಾಕ್ಷಿಯಾಗಿರು ತ್ತಾನೆಂದು ನೀವೂ ಒಪ್ಪುತ್ತೀರಿ. ಸಾಕ್ಷಿಯೆಂದರೆ ನೇರಾಗಿ ಅರಿಯುವವನೇ. ಆದ್ದರಿಂದಲೂ ಆತ್ಮನು ಜ್ಞಾತೃ.

ಪ್ರತ್ಯಕ್ಷವು ದೋಷಮೂಲವೆಂದು ತೋರಿಸುವದಕ್ಕೆ ಬರುವದಿಲ್ಲವಾದ್ದರಿಂದ ಅದು ಶಾಸ್ತ್ರದಿಂದ ಬಾಧಿತವಾಗುತ್ತದೆ ಎಂಬುದು ಅಯುಕ್ತ. ಶಾಸ್ತ್ರವೂ ದೋಷಮೂಲಕವಾದರೂ ಪೂರ್ವಜ್ಞಾನವಾದ ಪ್ರತ್ಯಕ್ಷವು ಆಮೇಲೆ ಉಂಟಾಗುವ ಶಾಸ್ತ್ರಜ್ಞಾನದಿಂದ ಬಾಧಿತವಾಗುತ್ತದೆ ಎಂಬುದೂ ಸರಿಯಲ್ಲ. ಏಕೆಂದರೆ ದೋಷ ಮೂಲಕವಾದ್ದರಿಂದ ಅದಕ್ಕೆ ಬಾಧಕವಿಲ್ಲದಿದ್ದರೂ ಅದು ಮಿಥ್ಯೆಯೆಂದೇ ಆಗುತ್ತದೆ. ಅಸತ್ಯವಾದ ಶಾಸ್ತ್ರದಿಂದ ಸತ್ಯಜ್ಞಾನವುಂಟಾಗಬಹುದೆನ್ನುವ ಪೂರ್ವಪಕ್ಷಿಗೆ ಯಾವ ದೃಷ್ಟಾಂತವೂ ಇರುವದಿಲ್ಲ.

ಶಾಸ್ತ್ರವು ನಿರ್ವಿಶೇಷವಸ್ತುವನ್ನು ಹೇಳಬಹುದೆಂಬುದೂ ಯುಕ್ತವಲ್ಲ; ಏಕೆಂದರೆ ಪ್ರಕೃತಿಪ್ರತ್ಯಯಾತ್ಮಕವಾದ ಪದವೂ ಪದಸಮೂಹಾತ್ಮಕವಾದ ವಾಕ್ಯವೂ ಸವಿಶೇಷಪರವೇ ಆಗಿರುತ್ತವೆ. ಶಾಸ್ತ್ರವು ನಿರ್ವಿಶೇಷವನ್ನೇ ಹೇಳುತ್ತದೆ ಎಂಬುದಕ್ಕೆ ಪೂರ್ವಪಕ್ಷಿಯು ಉದಾಹರಿಸುವ ವಾಕ್ಯಗಳು ಸಗುಣಸವಿಶೇಷವಸ್ತುಪರವಾಗಿಯೇ ಇರುತ್ತವೆ.

(೧) **'ಏಕಮೇವಾದ್ವಿತೀಯಮ್'** ಎಂಬುದು ನಿಮಿತ್ತಕಾರಣವು ಇನ್ನೊಂದಿಲ್ಲ– ಎನ್ನುತ್ತದೆ.

(೨) **ನಿರ್ಗುಣವಾಕ್ಯಗಳು** ಪ್ರಾಕೃತಹೇಯಗುಣಗಳನ್ನು ಅಲ್ಲಗಳೆ ಯುತ್ತವೆ.

(೩) **ಜ್ಞಾನಸ್ವರೂಪವಾದಿಗಳಾದ ಶ್ರುತಿಗಳೂ** ಜ್ಞಾತೃವೇ ಜ್ಞಾನ ಸ್ವರೂಪನೆಂದೂ ಜ್ಞಾನಗುಣಾಶ್ರಯನೆಂದೂ ತಿಳಿಸುತ್ತವೆ.

(೪) 'ಅಪಹತಪಾಪ್ಮಾ' ಮುಂತಾದ ಶ್ರುತಿಗಳು ಹೇಯಗುಣಗಳನ್ನು ಅಲ್ಲಗಳೆದು ಕಲ್ಯಾಣಗುಣಗಳಿವೆಯೆಂಬುದನ್ನು ತಿಳಿಸುತ್ತವೆಯಾದ್ದರಿಂದ **ಸಗುಣ ನಿರ್ಗುಣವಾಕ್ಯಗಳಿಗೆ ಪರಸ್ಪರವಿರೋಧವಿಲ್ಲ.**

(೫) **'ಯತೋ ವಾಚೋ ನಿವರ್ತನ್ತೇ'** ಎಂಬ ವಾಕ್ಯವು ಬ್ರಹ್ಮವು ಅನಂತ, ಇಷ್ಟೇ ಎಂದು ಹೇಳುವದಕ್ಕೆ ಬರುವದಲ್ಲ- ಎನ್ನುತ್ತದೆ.

(೬) **'ನ ದೃಷ್ಟೇರ್ದ್ರಷ್ಟಾರಮ್'** ಮುಂತಾದ ಶ್ರುತಿಯು ಆಗಂತುಕ ಚೈತನ್ಯಗುಣದ ಸಂಬಂಧವು ಆತ್ಮನಿಗಿಲ್ಲವೆನ್ನುತ್ತದೆ ; ಅಥವಾ ಜೀವಾತ್ಮನನ್ನು ಬಿಟ್ಟು ಪರಮಾತ್ಮನನ್ನೇ ಉಪಾಸನೆಮಾಡು- ಎನ್ನುತ್ತದೆ.

(೭) **ಆನಂದಸ್ವರೂಪವಾಕ್ಯವು** ಜ್ಞಾನರೂಪವಾದ ಬ್ರಹ್ಮವನ್ನೇ ಹೇಳುತ್ತದೆ. ಜ್ಞಾನಗುಣದಂತೆ ಆನಂದಗುಣವೂ ಬ್ರಹ್ಮಕ್ಕಿದೆ.

(೮) **ನಾನಾತ್ವನಿಷೇಧಕಶ್ರುತಿಗಳು** ಅಂತರ್ಯಾಮಿಯೊಬ್ಬನೇ ಜಗತ್ತಿಗೆ ಆತ್ಮನು- ಎಂದು ಹೇಳುತ್ತದೆ ; ಬ್ರಹ್ಮವು ನಾನಾತ್ಮಕವಾಗಿ ಪರಿಣಮಿಸುವವನ್ನೇ ಅಲ್ಲಗಳೆಯುವದಿಲ್ಲ.

(೯) **'ನೇಹ ನಾನಾಸ್ತಿ ಕಿಂಚನ'** ಎಂಬ ವಾಕ್ಯದಲ್ಲಿ ಜಗತ್ತಿಗೆ ಆತ್ಮನಾಗಿರುವ ಬ್ರಹ್ಮವು ಒಂದೇ ಎನ್ನುತ್ತದೆ, ಅದಕ್ಕೆ ವಿರುದ್ಧವಾದ ನಾನಾತ್ವವನ್ನು ಅಲ್ಲಗಳೆಯುತ್ತದೆ. ಬ್ರಹ್ಮವು ಸಂಕಲ್ಪಪೂರ್ವಕವಾಗಿ ಬಹುವಾಗಿರುವದೆಂಬ ನಾನಾತ್ವವನ್ನು ಅಲ್ಲಗಳೆಯುವದಿಲ್ಲ.

(೧೦) **'ಏತಸ್ಮಿನ್ನುದರಮನ್ತರಂ ಕುರುತೇ'** ಎಂಬುದು ಬ್ರಹ್ಮದ ನಾನಾತ್ವವನ್ನು ಅಲ್ಲಗಳೆಯುವದಿಲ್ಲ, ಬ್ರಹ್ಮದಲ್ಲಿ ನಿಷ್ಠೆಗೆ ವಿಚ್ಛೇದವಾದರೆ ಭಯವುಂಟಾಗುವದೆಂದು ಹೇಳುತ್ತದೆ.

ಇದೇ ರೀತಿಯಲ್ಲಿ ಸೂತ್ರದಲ್ಲಿಯೂ ಸ್ಮೃತಿಪುರಾಣಗಳಲ್ಲಿಯೂ ಎಲ್ಲಿಯೂ ನಿರ್ವಿಶೇಷವಸ್ತುವನ್ನು ಹೇಳಿಲ್ಲವೆಂದು ತಿಳಿಯಬೇಕು. ಪರಬ್ರಹ್ಮವು ಸ್ವಭಾವದಿಂದಲೇ ಯಾವ ದೋಷವೂ ಇಲ್ಲದ ಸಮಸ್ತಕಲ್ಯಾಣಗುಣಗಣಾತ್ಮಕವಾಗಿ, ಜಗದುತ್ಪತ್ತಿಸ್ಥಿತಿಸಂಹಾರಾನ್ತಃಪ್ರವೇಶನಿಯಮನಾದಿಲೀಲೆಗಳುಳ್ಳದ್ದಾಗಿದೆಯೆಂದೂ ಚಿದಚಿದ್ವಸ್ತುವೆಲ್ಲ ಎಲ್ಲಾ ಅವಸ್ಥೆಗಳಲ್ಲಿಯೂ ಪರಮಾರ್ಥವೇ ಆಗಿದ್ದು ಪರಮಾತ್ಮನ ಶರೀರವಾಗಿವೆ ಎಂದೂ-'ಶರೀರ, ರೂಪ, ತನು, ಅಂಶ, ಶಕ್ತಿ, ವಿಭೂತಿ-ಮುಂತಾದ ಶಬ್ದಗಳಿಂದಲೂ ಬ್ರಹ್ಮವೇ ವಾಚ್ಯವಾಗಿದೆ'- ಎಂದೂ ಸಾಮಾನಾಧಿಕರಣ್ಯದಿಂದಲೂ ಪುರಾಣದಲ್ಲಿ ಹೇಳಿದೆ. ಬ್ರಹ್ಮದ ವಿಭೂತಿಯಾದ ಚಿದ್ವಸ್ತುವು ಅಚಿನ್ಮಿಶ್ರವಾಗಿ ಕ್ಷೇತ್ರಜ್ಞನೆನಿಸಿಕೊಂಡರೆ, ಕ್ಷೇತ್ರಜ್ಞಾವಸ್ಥೆಯಲ್ಲಿ ಕರ್ಮರೂಪಾವಿದ್ಯಾಯುಕ್ತವಾಗಿರುವದರಿಂದ ಜನ್ಯಜ್ಞಾನರೂಪತ್ವವನ್ನು ಮರೆತು ಅಚಿದ್ರೂಪಾರ್ಥಾಕಾರವಾಗಿಯೇ ಇರುವೆನೆಂದು ಅರಿಯುತ್ತದೆಯೆಂದೂ ಹೇಳಿದೆ.

ಬ್ರಹ್ಮವು ಅನಿರ್ವಚನೀಯವಾದ ಅವಿದ್ಯೆಯಿಂದ ತಿರೋಹಿತವಾಗಿದ್ದು ಮಿಥ್ಯಾಪ್ರಪಂಚವನ್ನು ಕಾಣುತ್ತಿದೆ ಎಂದು ಪೂರ್ವಪಕ್ಷಿಯ ಮತದಲ್ಲಿ **ಏಳು ಅನುಪಪತ್ತಿಗಳಿವೆ :-**

(1) ಆಶ್ರಯಾನುಪಪತ್ತಿ (2) ತಿರೋಧಾನಾನುಪಪತ್ತಿ (3) ಅವಿದ್ಯಾ ಸ್ವರೂಪಾನುಪಪತ್ತಿ (4) ಅನಿರ್ವಚನೀಯತ್ವಾನುಪಪತ್ತಿ (5) ಅವಿದ್ಯಾ ಪ್ರಮಾಣಾನುಪಪತ್ತಿ (6) ನಿವರ್ತಕಾನುಪಪತ್ತಿ (7) ನಿವೃತ್ತ್ಯನುಪಪತ್ತಿ.

ಆದ್ದರಿಂದ ಅನಿರ್ವಚನೀಯಾವಿದ್ಯೆಯಿಂದ ಯಾವ ಭ್ರಾಂತಿಯೂ ಆಗುವದಿಲ್ಲ; ಭ್ರಾಂತಿಕಾಲದಲ್ಲಿ ಅನಿರ್ವಚನೀಯಪ್ರಾತಿಭಾಸಿಕವಸ್ತುವೂ ಉತ್ಪನ್ನವಾಗುವದಿಲ್ಲ. ಶುಕ್ತಿಯೇ ರಜತವಾಗಿ ಕಾಣುತ್ತದೆ ಎಂಬ **ಅನ್ಯಥಾಖ್ಯಾತಿಯನ್ನು** ಅಸತ್ಖ್ಯಾತಿ ವಾದಿಗಳೇ ಮುಂತಾದ ಬೇರೆಯ ಖ್ಯಾತಿಗಳನ್ನು ಹೇಳುವ ವಾದಿಗಳೆಲ್ಲರೂ ಒಪ್ಪ ಬೇಕು. ಅಥವಾ ಜ್ಞಾನವೆಲ್ಲವೂ **ಯಥಾರ್ಥವೇ** ಎಂಬ ಯಥಾರ್ಥಖ್ಯಾತಿಯನ್ನೇ ಅನುಸರಿಸುವದು ವೇದವಾದಿಗಳಿಗೆ ಯುಕ್ತ. ಬ್ರಹ್ಮವು ನಿರ್ವಿಶೇಷವೆಂದಾಗಲಿ, ಸದಸದನಿರ್ವಚನೀಯಾವಿದ್ಯೆಯೊಂದಿದೆಯೆಂದಾಗಲಿ, ಜಗತ್ತು ಬ್ರಹ್ಮದಲ್ಲಿ ಕಲ್ಪಿತ ವಾಗಿದೆಯೆಂದಾಗಲಿ ಹೇಳುವ ಒಂದು ಪದವೂ ಪುರಾಣಾದಿಗಳಲ್ಲಿರುವದಿಲ್ಲ. ಅಸ್ತಿ ನಾಸ್ತಿಶಬ್ದಾಭಿಧೇಯವಾದ ಚಿದಚಿದಾತ್ಮಕವಾಗಿರುವ ಜಗತ್ತೆಲ್ಲವೂ ಪರಬ್ರಹ್ಮ ವಾದ ವಿಷ್ಣುವಿನ ಶರೀರವಾದ್ದರಿಂದ ಬ್ರಹ್ಮಾತ್ಮಕವಾಗಿಯೇ ಇರುತ್ತದೆ, ಜ್ಞಾನೈ ಕಾಕಾರನಾಗಿರುವ ಆತ್ಮನು ದೇವಾದಿರೂಪವುಳ್ಳವನು ನಾನೆಂದು ತಿಳಿಯುವದಕ್ಕೆ ಕಾರಣವು ವಸ್ತುತತ್ತ್ವಜ್ಞಾನಕ್ಕೆ ವಿರೋಧಿಯಾದ ಜೀವರ ಕರ್ಮವೇ –ಎಂದು ಅಲ್ಲಿ ಹೇಳಿರುತ್ತದೆ.

'ತತ್ತ್ವಮಸಿ'ವಾಕ್ಯದಲ್ಲಿರುವ **ಸಾಮಾನಾಧಿಕರಣ್ಯವು** ನಿರ್ವಿಶೇಷ ವಸ್ತುವಿನ ಐಕ್ಯವನ್ನು ಹೇಳುವದಿಲ್ಲ. ಏಕೆಂದರೆ ಅದರಲ್ಲಿರುವ ತತ್ತ್ವಂಪದಗಳೆರಡೂ ಸವಿಶೇಷಬ್ರಹ್ಮವನ್ನೇ ಹೇಳುತ್ತವೆ. ತತ್ಪದವು ಸರ್ವಜ್ಞತ್ವಾದಿಗುಣಗಳಿಂದೊಡ ಗೂಡಿದ ಜಗತ್ಕಾರಣವನ್ನೂ ತ್ವಂಪದವು ಅಚಿದ್ವಿಶಿಷ್ಟಜೀವಶರೀರಕಬ್ರಹ್ಮವನ್ನೂ ಹೇಳುತ್ತದೆ. ಹೀಗೆಂದು ಒಪ್ಪದಿದ್ದರೆ ಮುಖ್ಯವೃತ್ತದಿಂದ ಸಾಮಾನಾಧಿಕರಣ್ಯವೇ ಹೊಂದುವದಿಲ್ಲವಾದ್ದರಿಂದ, ಲಕ್ಷಣಾರ್ಥವನ್ನು ಸ್ವೀಕರಿಸಬೇಕಾಗುವದು; ಬಾಧ ಸಾಮಾನಾಧಿಕರಣ್ಯವನ್ನು ಸ್ವೀಕರಿಸಿದರೂ ಇದೇ ದೋಷ. **ನಮ್ಮ ಸಿದ್ಧಾಂತ ದಲ್ಲಿ ಎರಡು ಪದಕ್ಕೂ ಮುಖ್ಯಾರ್ಥಸ್ವೀಕಾರವಿರುವದರಿಂದ ವಾಕ್ಯವು ಪ್ರಕಾರದ್ವಯವಿಶಿಷ್ಟವಾದ ಒಂದೇ ವಸ್ತುವನ್ನು ಹೇಳುವದೆಂದಾಗಿ ಸಾಮಾನಾಧಿಕರಣ್ಯವು ಸಿದ್ಧವಾಗುವದು. ಬ್ರಹ್ಮವು ಅಂತರ್ಯಾಮಿ ಯಾಗಿರುವದರಿಂದ ಬ್ರಹ್ಮಕ್ಕೆ ಈಶ್ವರತ್ವವೂ ಸಿದ್ಧವಾಗುವದು. ಉಪ ಕ್ರಮಾನುಕೂಲತ್ವವೂ ಒಂದನ್ನರಿತರೆ ಎಲ್ಲವನ್ನೂ ಅರಿತಂತಾಗುವದೆಂಬ ಪ್ರತಿಜ್ಞೆಯೂ ಉಪಪನ್ನವಾಗುವದು. ಇತರ ಶ್ರುತಿಗಳಿಗೂ ತತ್ತ್ವಮಸಿ ವಾಕ್ಯಕ್ಕೂ ಏಕವಾಕ್ಯತೆಯೂ ಸಿದ್ಧವಾಗುವದು.**

ಈ ಸಿದ್ಧಾಂತದಲ್ಲಿ ಚಿದ್ವಸ್ತು, ಅಚಿದ್ವಸ್ತು, ಬ್ರಹ್ಮ– ಇವಕ್ಕೆ ಭೋಗ್ಯ, ಭೋಕ್ತೃ, ಈಶಿತೃ– ಎಂಬ ಸ್ವರೂಪವಿವೇಕ, ಬ್ರಹ್ಮವು ಚಿದಚಿದ್ವಸ್ತುಗಳಿಗೆ

ಆತ್ಮನೆಂಬುದು, ಬ್ರಹ್ಮವೇ ಕಾರಣಾವಸ್ಥೆಯಲ್ಲಿಯೂ ಕಾರ್ಯಾವಸ್ಥೆಯಲ್ಲಿಯೂ ಇರುವ ಜಗತ್ತೆಂಬುದು, ಬ್ರಹ್ಮವು ಜ್ಞಾನಸ್ವರೂಪವೆಂಬುದು– ಇವುಗಳನ್ನು ಹೇಳುವ ಶ್ರುತಿವಾಕ್ಯಗಳಿಗೆಲ್ಲ ಏಕವಾಕ್ಯತೆಯು ಬರುವದು ; ಏಕೆಂದರೆ ಚಿದಚಿದ್ವಸ್ತು ಶರೀರಕಬ್ರಹ್ಮವೇ ಕಾರ್ಯಕಾರಣಾವಸ್ಥೆಗಳನ್ನು ಪಡೆಯುತ್ತಿರುವದರಿಂದ ಚಿದ ಚಿದೀಶ್ವರರಿಗೆ ಪೃಥಕ್ಸ್ವಭಾವತ್ವವೂ ಏಕತ್ವವೂ ಈ ಸಿದ್ಧಾಂತದಲ್ಲಿ ಮಾತ್ರ ಅವಿರುದ್ಧವಾಗುತ್ತದೆ.

ಆದ್ದರಿಂದ **ಅನಾದಿಕರ್ಮಪ್ರವಾಹರೂಪವಾದ ಅಜ್ಞಾನವೇ ಬಂಧಕ್ಕೆ ಮೂಲ, ಅದು ನಾವು ಹೇಳಿದ ಧ್ರುವಾನುಸ್ಮೃತಿ(ಭಕ್ತಿ)ಯ ರೂಪವಾದ ಜ್ಞಾನದಿಂದಲೇ ನಾಶವಾಗುತ್ತದೆ.** ಅದು ಪರಮಪುರುಷಾರಾಧನಾರೂಪವಾದ ನಿರಂತರಕರ್ಮಾನುಷ್ಠಾನದಿಂದ ಉತ್ಪನ್ನವಾಗುವದು. ಕೇವಲ ಕರ್ಮಗಳಿಗೆ ಅಲ್ಪಾಸ್ಥಿರಫಲತ್ವ, ಆದರೆ ಫಲಾಭಿಸಂಧಿಯಿಲ್ಲದೆ ಅನುಷ್ಠಾನಮಾಡಿದ ಕರ್ಮಗಳಿಂದ ಉಪಾಸನಾತ್ಮಕಜ್ಞಾನೋತ್ಪತ್ತಿಯಾಗಿ ಬ್ರಹ್ಮಯಾಥಾತ್ಮ್ಯವನ್ನನುಭವಿಸುವ ಅನಂತಸ್ಥಿರಫಲತ್ವ– ಎಂಬುದು ಕರ್ಮದ ಸ್ವರೂಪದ ಜ್ಞಾನವಿಲ್ಲದೆ ಆಗಲಾರ ದಾದ್ದರಿಂದ ಕರ್ಮವಿಚಾರಾನಂತರವೇ, ಈ ಅನಂತಫಲಕ್ಕಾಗಿಯೇ ಬ್ರಹ್ಮವಿಚಾರ ವನ್ನು ಮಾಡಬೇಕು– ಎಂಬುದು 'ಅಥಾತಃ' ಎಂಬ ಪದದ್ವಯದ ಅಭಿಪ್ರಾಯ.

## ನಿಯೋಗವಾದದ ನಿರಾಕರಣೆ

೯. ಜಿಜ್ಞಾಸಾಧಿಕರಣಕ್ಕೆ **ಪೂರ್ವಪಕ್ಷ**ವೇನೆಂದರೆ ಶಬ್ದವು ಬೋಧಕ ವೆಂಬುದು ವ್ಯವಹಾರದಿಂದಲೇ ತಿಳಿಯುತ್ತದೆಯಾದ್ದರಿಂದಲೂ ವ್ಯವಹಾರವು ಕಾರ್ಯಬುದ್ಧಿಪರವಾಗಿರುವದರಿಂದಲೂ ಶಬ್ದವು ಕಾರ್ಯದಲ್ಲಿಯೇ ಪ್ರಮಾಣವು ; ಆದ್ದರಿಂದ ವೇದಾಂತಗಳು ಪರಿನಿಷ್ಪನ್ನವಾದ (ಸಿದ್ಧರೂಪ)ಬ್ರಹ್ಮದಲ್ಲಿ ಪ್ರಮಾಣ ವಲ್ಲ, ಪದಗಳಿಗೆಲ್ಲ ಕಾರ್ಯದಲ್ಲಿಯೇ ತಾತ್ಪರ್ಯ, ಕರ್ತವ್ಯಕರ್ಮದಿಂದ ಅಕ್ಷಯ ಫಲವೆಂದು ಶ್ರುತಿಯೂ ಹೇಳಿರುತ್ತದೆ. ಆದ್ದರಿಂದ ಅನಂತಸ್ಥಿರಫಲಪ್ರಾಪ್ತಿಗಾಗಿ ಬ್ರಹ್ಮಜ್ಞಾನವು ಬೇಕೆಂದೂ ಅದಕ್ಕಾಗಿ ಬ್ರಹ್ಮವಿಚಾರವನ್ನು ಆರಂಭಿಸಬೇಕೆಂದೂ ಹೇಳುವದು ಅಯುಕ್ತ.

ಇಲ್ಲಿ **ಸಿದ್ಧಾಂತ**ವೇನೆಂದರೆ, ಈ ಮತವು ಸರಿಯಲ್ಲ. ಈ ಶಬ್ದಕ್ಕೆ ಈ ಅರ್ಥವು– ಎಂದು ಬಲ್ಲವರು ವ್ಯವಹರಿಸುವದರಿಂದಲೂ ಮತ್ತೊಬ್ಬನ ಹಸ್ತಚೇಷ್ಟಾದಿ ಗಳಿಂದ ಪ್ರೇರಿತನಾದವನು ಮಾಡಿದ ಶಬ್ದಪ್ರಯೋಗವನ್ನು ಕೇಳಿದವನಿಗೆ ಈ ಶಬ್ದಕ್ಕೆ ಇದು ಅರ್ಥವೆಂದು ಜ್ಞಾನವಾಗುವದರಿಂದಲೂ ಕಾರ್ಯವನ್ನೇ ಶಬ್ದವು ಹೇಳುವದೆಂದು ನಿಯಮಿಸುವದಕ್ಕಾಗುವದಿಲ್ಲ. ವೇದವೆಲ್ಲವೂ ಕಾರ್ಯಾರ್ಥವೆಂದು ಒಪ್ಪಿದರೂ **'ಆತ್ಮಾ ವಾ ಅರೇ ಶ್ರೋತವ್ಯಃ'** ಮುಂತಾದ ಕಾರ್ಯಪರವಾಕ್ಯ

ಗಳಿಂದಲೂ ಬ್ರಹ್ಮವಿಚಾರವನ್ನು ಮಾಡಬೇಕೆಂದೇ ಸಿದ್ಧವಾಗುತ್ತದೆ. ಆದರೆ ಲೋಕದಲ್ಲಿ ವಾಕ್ಯಗಳು ಕಾರ್ಯಾರ್ಥವೇ ಎಂಬುದು ಸಿದ್ಧವಾಗಿಲ್ಲ. ಏಕೆಂದರೆ ಪೂರ್ವಪಕ್ಷಿಸಮ್ಮತವಾದ ಕಾರ್ಯವೆಂದರೇನೆಂಬುದನ್ನೇ ಗೊತ್ತುಪಡಿಸುವದಕ್ಕಾಗು ವದಿಲ್ಲ. ಆದ್ದರಿಂದ ವಿಧಿವಾಕ್ಯಗಳಲ್ಲಿಯೂ ಕರ್ತೃವ್ಯಾಪಾರಸಾಧ್ಯವೆಂಬುದಿಷ್ಟೇ ಧಾತ್ವರ್ಥವೆಂದು ವ್ಯಾಕರಣಶಾಸ್ತ್ರಸಿದ್ಧವಾಗಿರುವದರಿಂದ ವೇದದಲ್ಲಿಯೂ ಹಾಗೆಯೇ ಎಂದು ಗೊತ್ತಾಗುತ್ತದೆ. ಆದಕಾರಣ ಅಗ್ನ್ಯಾದಿದೇವತಾಂತರ್ಯಾಮಿಯಾದ ಪರಮಪುರುಷನ ಆರಾಧನಾರೂಪವಾದ ಕ್ರಿಯೆಯಿಂದ ತುಷ್ಟನಾದ ಪುರುಷನೇ ಯಾಗದ ಫಲವನ್ನು ಕೊಡುತ್ತಾನೆ ಎಂದು ಸೂತ್ರಕಾರರೂ ಹೇಳಿರುತ್ತಾರೆ. ಆದ್ದರಿಂದ ವೇದಾಂತಗಳು ಪರಿನಿಷ್ಪನ್ನವಾದ ಪರಬ್ರಹ್ಮವನ್ನು ಪ್ರತಿಪಾದಿಸುತ್ತವೆ. ಬ್ರಹ್ಮೋಪಾಸನೆಯ ಫಲವು ಅನಂತವೂ ಸ್ಥಿರವೂ ಆಗುತ್ತದೆಯೆಂದಾಯಿತು. ಕೇವಲಕರ್ಮಕ್ಕೆ ಕ್ಷಯಿಷ್ಣುಫಲವಾಗುವದೆಂದು ಶ್ರುತಿಯಲ್ಲಿ ಹೇಳಿರುವದರಿಂದ ಅಕ್ಷಯಫಲವನ್ನು ಹೇಳುವ ವಾಕ್ಯಗಳಿಗೆ ಆಪೇಕ್ಷಿಕಾಕ್ಷಯಫಲವೇ ಕರ್ಮದಿಂದ ಕರ್ಮವು ಎಂದು ಹೇಳುವಲ್ಲಿ ತಾತ್ಪರ್ಯ ಎಂದು ಕಲ್ಪಿಸಬೇಕು. ಆದ್ದರಿಂದ ಅನಂತಸ್ಥಿರಫಲವನ್ನು ಕೊಡುವ ಬ್ರಹ್ಮಜ್ಞಾನದ ನಿರ್ಣಯಕ್ಕಾಗಿ ಬ್ರಹ್ಮವಿಚಾರ ವನ್ನು ಆರಂಭಿಸತಕ್ಕದ್ದು ಯುಕ್ತ.

## ಶ್ರೀಭಾಷ್ಯದಮೇಲೆ ಭಾಸ್ಕರಭಾಷ್ಯದ ಪ್ರಭಾವ

೧೦. ಯಾಮುನಾಚಾರ್ಯರು ಆತ್ಮಸಿದ್ಧಿಯಲ್ಲಿ ಉಪಯೋಗಿಸಿರುವ ಯುಕ್ತಿ ಗಳೂ, ಅವರು ಅಲ್ಲಿ ಉದಾಹರಿಸಿ ವ್ಯಾಖ್ಯಾನಮಾಡಿರುವ ಶ್ರುತಿಪುರಾಣಾದಿವಾಕ್ಯ ಗಳೂ ಶ್ರೀಭಾಷ್ಯಕ್ಕೆ ಮಾರ್ಗದರ್ಶಿಯಾಗಿವೆ ಎಂದು ಆಗಲೆ ಹೇಳಿದ್ದಾಗಿದೆ. ಈ ವಿಷಯವನ್ನು ಆತ್ಮಸಿದ್ಧಿಯ ವಿಸ್ತೃತವಿಮರ್ಶೆಯಿಂದಲೇ ತೋರಿಸಬೇಕಾಗಿರುವದ ರಿಂದ ಅದನ್ನು ಈಗ್ಗೆ ಅಲ್ಲಿಗೇ ನಿಲ್ಲಿಸೋಣ. ರಾಮಾನುಜರು ಅದ್ವೈತಖಂಡನೆ ಗೆಂದು ಅನುವಾದಮಾಡಿಕೊಂಡಿರುವ ಪೂರ್ವಪಕ್ಷಗಳೂ ಅವುಗಳ ನಿರಾಸಕ್ಕೆ ಉಪಯೋಗಿಸಿರುವ ಯುಕ್ತಿಗಳೂ ಬಹಳಮಟ್ಟಿಗೆ ಯಾಮುನಾಚಾರ್ಯರಿಗಿಂತಲೂ ಪೂರ್ವದಲ್ಲಿಯೇ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದಿದ್ದ ಭಾಸ್ಕರಾಚಾರ್ಯರ ಪ್ರಭಾವದಿಂದ ಹೊರಹೊಮ್ಮಿರುತ್ತವೆಯೆಂದು ಹೇಳಿದರೆ ಅತಿಶಯೋಕ್ತಿಯಾಗ ಲಾರದು. ಆದ್ದರಿಂದ **ಪೂರ್ವಪಕ್ಷನಿರಾಕರಣೆಯ ಮಾರ್ಗವನ್ನು ಭಾಸ್ಕರ ರಿಂದಲೂ ಸಿದ್ಧಾಂತಪ್ರತಿಪಾದನೆಯ ಸರಣಿಯನ್ನು ಯಾಮುನಾಚಾರ್ಯ ರಿಂದಲೂ ಆರಿಸಿ ತಮ್ಮ ಸ್ವತಂತ್ರಯುಕ್ತ್ಯಾದಿಗಳನ್ನೂ ಜೋಡಿಸಿ ರಾಮಾ ನುಜಾಚಾರ್ಯರು ಶ್ರೀಭಾಷ್ಯವನ್ನು ರಚಿಸಿರುತ್ತಾರೆನ್ನಬಹುದಾಗಿದೆ.**

ಭಾಸ್ಕರಾಚಾರ್ಯರು, ರಾಮಾನುಜಾಚಾರ್ಯರು– ಈ ಇಬ್ಬರ ಭಾಷ್ಯ ಗಳಿಗೆ ಇರುವ ಹೋಲಿಕೆಯನ್ನೂ ವೈಲಕ್ಷಣ್ಯವನ್ನೂ ಇಲ್ಲಿ ವಾಚಕರ ಅವಗಾಹನೆ ಗಾಗಿ ಸಂಗ್ರಹಿಸಿ ಬರೆಯುವೆವು.

(೧) **ಭಾಸ್ಕರರು**–ತಮಗೆ ಸಮ್ಮತವಾಗಿರುವ ವೃತ್ತಿಕಾರವಾಕ್ಯಕಾರರನ್ನು ಉದಾಹರಿಸಿಕೊಂಡು ಅಥವಾ ಪರಾಮರ್ಶಿಸಿ ಅದ್ವೈತಿಗಳ ಮತವು ಅದಕ್ಕೆ ವಿರುದ್ಧ ವೆಂದಿರುತ್ತಾರೆ.

**ರಾಮಾನುಜರು**– ತಮಗೆ ಸಮ್ಮತವಾಗಿರುವ ವೃತ್ತಿಕಾರವಾಕ್ಯಕಾರರುಗಳನ್ನು ಉದಾಹರಿಸಿಕೊಂಡು ಅದ್ವೈತವು ಅವರ ಮತಕ್ಕೆ ವಿರುದ್ಧವೆಂದಿರುತ್ತಾರೆ.

(೨) **ಭಾಸ್ಕರರು**–ಶಂಕರರ ಮಾಯಾವಾದದ ಜೊತೆಗೆ ಪ್ರಪಂಚಪ್ರವಿಲಯವಾದವನ್ನೂ ತಿರಸ್ಕರಿಸಿರುತ್ತಾರೆ. ಛಾಂದೋಗ್ಯದಲ್ಲಿ ಈ ಎರಡು ಮತಗಳನ್ನೂ ವಿಸ್ತಾರವಾಗಿ ಖಂಡಿಸಿರುವದಾಗಿ (ಸೂ. ೧–೪–೨೧) ಹೇಳಿಕೊಂಡಿರುತ್ತಾರೆ. ಧ್ಯಾನನಿಯೋಗನಿರಾಸವೂ ಇದರಿಂದ ಆದಂತಾಗಿದೆ.

**ರಾಮಾನುಜರು**– ಭಾಸ್ಕರರಂತೆಯೇ ಮಾಯಾವಾದ, ಧ್ಯಾನನಿಯೋಗವಾದ, ಪ್ರಪಂಚಪ್ರವಿಲಯವಾದ– ಈ ಮೂರನ್ನೂ ಖಂಡಿಸಿರುತ್ತಾರೆ.

(೩) **ಭಾಸ್ಕರಮತದಲ್ಲಿ** ನಿದಿಧ್ಯಾಸನವೆಂದರೆ ಆತ್ಮತತ್ತ್ವವನ್ನು ಅರಿತು ಪ್ರತ್ಯಯಾವೃತ್ತಿಯನ್ನು ಮಾಡುವದು. ಅಭೇದಜ್ಞಾನಾಭ್ಯಾಸದಿಂದ ಭೇದಾಭಾಸವೂ ಮತ್ತು ಕರ್ಮಾನುಷ್ಠಾನದಿಂದ ಕರ್ಮವಾಸನೆಯೂ ಹೋಗುತ್ತದೆ.

**ರಾಮಾನುಜಮತದಲ್ಲಿ** ನಿದಿಧ್ಯಾಸನವೆಂದರೆ ಸಗುಣಬ್ರಹ್ಮದ ಉಪಾಸನೆ. ನಿಷ್ಕಾಮಕರ್ಮದಿಂದ ಭಗವದಾರಾಧನೆಯನ್ನು ಮಾಡಿದರೆ ಉಪಾಸನೆಯು ಬಲಿತು **ಧ್ರುವಾನುಸ್ಮೃತಿ**ಯುಂಟಾಗಿ ಕರ್ಮಪ್ರವಾಹರೂಪವಾದ **ಅವಿದ್ಯೆ** ತೊಲಗುತ್ತದೆ; ಬ್ರಹ್ಮಾನುಭವರೂಪವಾದ ಅನಂತಫಲವು ದೊರಕುತ್ತದೆ.

(೪) **ಭಾಸ್ಕರರು ಕರ್ಮಜ್ಞಾನಸಮುಚ್ಚಯವಾದಿಗಳು**– ಸಮುಚ್ಚಯವನ್ನು ಮಾಡುವದು ಹೇಗೆ? –ಎಂಬುದನ್ನು ತಿಳಿಯುವದಕ್ಕೆ ಕರ್ಮಜಿಜ್ಞಾಸೆಯನ್ನು ಮೊದಲು ಮಾಡಿರಬೇಕೆಂಬುದು ಅವರ ಮತ.

**ರಾಮಾನುಜರೂ ಸಮುಚ್ಚಯವಾದಿಗಳು**– ಕರ್ಮವು ಅಲ್ಪಾಸ್ಥಿರಫಲಕವೆಂದು ತಿಳಿಯುವದಕ್ಕೆ ಕರ್ಮಜಿಜ್ಞಾಸೆಯನ್ನು ಮೊದಲು ಮಾಡಬೇಕು.

(೫) **ಭಾಸ್ಕರಪ್ರಸ್ಥಾನದಲ್ಲಿ** ಜೀವನು ಬ್ರಹ್ಮದ ಅಂಶ. ಉಪಾಧ್ಯವಚ್ಛಿನ್ನನಾಗಿ ಬ್ರಹ್ಮಕ್ಕಿಂತ ಅನನ್ಯನು; ಬೆಂಕಿಗೆ ಕಿಡಿಯಂತೆ ಅಂಶವಾಗಿರುವವನು. ಉಪಾಧಿಬಲದಿಂದ ಸಂಸಾರಿಯಾಗಿರುತ್ತಾನೆ. ಉಪಾಧಿವಶದಿಂದ ಕರ್ತೃವಾಗಿದಾನೆ; ಕರ್ತೃತ್ವವು ಅಗ್ನಿಯ ದಗ್ಧೃತ್ವದಂತೆ ಪಾರಮಾರ್ಥಿಕವೇ, ಉಪಾಧಿವಶದಿಂದಲೇ ಲೌಕಿಕವ್ಯವಹಾರವು ಅವನಿಗೂ ಇರುತ್ತದೆ.

**ರಾಮಾನುಜಮತದಲ್ಲಿ** ಜೀವನು ಬ್ರಹ್ಮಕ್ಕೆ ಅಂಶವು. ಇದಕ್ಕೆ ಏಕತ್ವನಾನಾತ್ವಗಳನ್ನುಪದೇಶಿಸುವ ಶ್ರುತಿಯೇ ಪ್ರಮಾಣವು. ಬ್ರಹ್ಮಸೃಜ್ಯತ್ವ–ತನ್ನಿಯಾ

ಮ್ಯತ್ವತಚ್ಛರೀರತ್ವ-ತಚ್ಛೇಷತ್ವ-ತದಾಧಾರಕತ್ವ-ತತ್ಪ್ರಾಪ್ಯತ್ವ-ತತ್ಸಂಹಾರ್ಯತ್ವ-ತದುಪಾಸಕತ್ವ-ತತ್ಪ್ರಸಾದಲಭ್ಯಪುರುಷಾರ್ಥಭಾಕ್ತ್ವವೇ ಮುಂತಾದವುಗಳು ಜೀವನಿಗೆ ಶಾಸ್ತ್ರಮಾತ್ರಸಿದ್ಧವಾಗಿರುತ್ತವೆ ; **ಅಂಶವೆಂದರೆ ಸೂರ್ಯನ ಪ್ರಕಾಶದಂತೆಯೂ ಗೋವು ಮುಂತಾದವುಗಳಿಗೆ ಗೋತ್ವಾದಿಗಳಂತೆಯೂ ದೇಹಿಗಳಿಗೆ ದೇವಮನುಷ್ಯಾದಿದೇಹಗಳಂತೆಯೂ** ತಿಳಿಯಬೇಕು. ವಿಶೇಷಣ ವಿಶೇಷ್ಯಭಾವದಿಂದಲೇ ಇಲ್ಲಿ ಅಂಶವಾಗಿರುತ್ತದೆಯಾದ್ದರಿಂದ ಬ್ರಹ್ಮವೂ ಜೀವನೂ ಸ್ವಭಾವದಿಂದ ಭಿನ್ನರೂ ಆಗಿರುತ್ತಾರೆ. ಅದ್ವೈತಿಗಳಂತೆ ಭ್ರಾಂತಬ್ರಹ್ಮವೇ ಜೀವವೆಂದರೂ ಭಾಸ್ಕರರಂತೆ ಉಪಹಿತಬ್ರಹ್ಮವೇ ಜೀವವೆಂದರೂ ಒಬ್ಬರ ಭೋಗವು ಮತ್ತೊಬ್ಬರಿಗಾಗಬೇಕು ; ಏಕೆಂದರೆ ಆ ಮತಗಳಲ್ಲಿ ಉಪಹಿತಸ್ವರೂಪವು ಒಂದೇ ಆಗಿರುತ್ತದೆ. ಆದ್ದರಿಂದ ಆ ಮತಗಳು ಸರಿಯಲ್ಲ. ಜೀವನು ಕರ್ತೃ ; ಪರಮಾತ್ಮನ ಅನುಮತಿಯಿಂದ ವ್ಯವಹರಿಸುತ್ತಾನೆ.

(೬) **ಭಾಸ್ಕರಮತದಲ್ಲಿ** ಬ್ರಹ್ಮವು ನಿರಾಕಾರವೆಂದೇ ಉಪಾಸನೆಮಾಡಬೇಕು ; ಏಕೆಂದರೆ ಪ್ರಪಂಚವು ಬ್ರಹ್ಮಾತ್ಮಕ, ಬ್ರಹ್ಮವು ಪ್ರಪಂಚಾತ್ಮಕವಲ್ಲ. ಬ್ರಹ್ಮವು ಚೈತನ್ಯಮಾತ್ರವೆಂದೇ ಶ್ರುತಿಯು ಹೇಳುತ್ತದೆ. ಬ್ರಹ್ಮಕ್ಕೆ ಉಪಾಧಿ ಪರಿಚ್ಛಿನ್ನತ್ವವಿಲ್ಲವೆಂದೇ ಶ್ರುತಿ ಹೇಳುತ್ತಿದೆ. ಸಮಾಧಿಯಲ್ಲಿಯೇ ಬ್ರಹ್ಮಭಾವವು ಉಂಟಾಗುತ್ತದೆ. ಅಭೇದವು ಸ್ವಾಭಾವಿಕವಾದ್ದರಿಂದ ಅವಿದ್ಯೆಯನ್ನು ಕಳೆದುಕೊಂಡರೆ ಏಕತ್ವಪ್ರಾಪ್ತಿ.

**ರಾಮಾನುಜಮತದಲ್ಲಿ**– ಬ್ರಹ್ಮವು ದೋಷರಹಿತವಾಗಿಯೂ ಕಲ್ಯಾಣಗುಣಾತ್ಮಕವಾಗಿಯೂ ಇರುತ್ತದೆ ಎಂದು ಉಪಾಸನೆಮಾಡಬೇಕು. ದೇಹಾದಿಗಳಲ್ಲಿ ಪ್ರವಿಷ್ಟವಾಗಿದ್ದರೂ ಅದು ರೂಪರಹಿತವಾಗಿದ್ದಂತೆಯೇ ; ಏಕೆಂದರೆ ಅದು ನಾಮರೂಪನಿರ್ವಾಹಕವಾಗಿರುತ್ತದೆ. ಸತ್ಯಜ್ಞಾನಾದಿವಾಕ್ಯವು ಬ್ರಹ್ಮವು ಪ್ರಕಾಶಮಾತ್ರವೆಂದಿಷ್ಟೇ ಹೇಳುತ್ತಿದೆಯೇ ಹೊರತು ಸತ್ಯಸಂಕಲ್ಪತ್ವಾದಿಗಳು ಇಲ್ಲವೆನ್ನುವದಿಲ್ಲ. ನೇತಿನೇತಿವಾಕ್ಯವು ಪ್ರಕೃತವಿಶೇಷಣವು ಮಾತ್ರ ಅದಕ್ಕಿಲ್ಲವೆನ್ನುತ್ತಿದೆ. ಭಕ್ತಿರೂಪಾಪನ್ನವಾದ ನಿದಿಧ್ಯಾಸನದಲ್ಲಿ ಮಾತ್ರ ಅದರ ಸಾಕ್ಷಾತ್ಕಾರವಾಗುತ್ತದೆ. ಆದ್ದರಿಂದ ಬ್ರಹ್ಮವು ಅನಂತಕಲ್ಯಾಣಗುಣಯುಕ್ತವಾಗಿರುವದೆಂದು ಸಿದ್ಧವಾಗುತ್ತದೆ.

(೭) **ಭಾಸ್ಕರಮತದಲ್ಲಿ**– ಬ್ರಹ್ಮೋಪಾಸಕರು ದೇವಯಾನಾದಿಮಾರ್ಗದಿಂದ ಪರಬ್ರಹ್ಮವನ್ನು ಸೇರುವರು. ಹಿರಣ್ಯಗರ್ಭರೂಪನಾದ ಕಾರ್ಯಬ್ರಹ್ಮವನ್ನು ಉಪಾಸನೆಮಾಡಿದವರೂ ಬ್ರಹ್ಮಲೋಕಕ್ಕೆ ಹೋಗಿ ಅದೇ ಬ್ರಹ್ಮವನ್ನು ಸೇರುವರು. ಯಾರು ನೇರಾಗಿ ಬ್ರಹ್ಮವನ್ನೇ ಉಪಾಸನೆಮಾಡುವರೋ ಅವರಿಗೆ ಅಲ್ಲಿ ಸದ್ಯೋಮುಕ್ತಿಯಾಗುವದು ; ಯಾರು ಹಿರಣ್ಯಗರ್ಭೋಪಾಸಕರೋ ಅವರು

ಶುದ್ಧಾಂತಃಕರಣರಾಗಿ ಜ್ಞಾನಪ್ರಕರ್ಷವನ್ನು ಹೊಂದಿ ಬ್ರಹ್ಮನೊಡನೆ ಕಲ್ಪಾಂತದಲ್ಲಿ ಮುಕ್ತರಾಗುವರು ಎಂದರೆ ಬ್ರಹ್ಮಸ್ವರೂಪವನ್ನೇ ಪಡೆಯುವರು.

**ರಾಮಾನುಜಮತದಲ್ಲಿಯೂ** ಪರಬ್ರಹ್ಮೋಪಾಸಕರು ದೇವಯಾನಮಾರ್ಗದಿಂದ ಹೋಗಿ ಪರಬ್ರಹ್ಮವನ್ನೇ ಸೇರುತ್ತಾರೆ. ಪರಬ್ರಹ್ಮಕ್ಕೂ ಅಸಾಧಾರಣವಾದ ಲೋಕಗಳಿರುತ್ತವೆ. ಪರಬ್ರಹ್ಮವನ್ನು ಉಪಾಸನೆಮಾಡುವವರನ್ನೂ ಪ್ರಕೃತಿವಿಯುಕ್ತನಾದ ಆತ್ಮನನ್ನು ಉಪಾಸನೆಮಾಡುವವರನ್ನೂ ಆತಿವಾಹಿಕಪುರುಷನು ಬ್ರಹ್ಮಲೋಕಕ್ಕೆ ಕರೆದುಕೊಂಡುಹೋಗುತ್ತಾನೆ. ಅಲ್ಲಿ ಮುಕ್ತಾತ್ಮನಿಗೆ ತನ್ನ ಅಪಹತಪಾಪ್ಮತ್ವವೇ ಮುಂತಾದ ಸ್ವರೂಪವು ಹೊರತೋರಿಕೊಳ್ಳುತ್ತದೆ. ಆದರೆ ಭಾಸ್ಕರರು ಹೇಳುವಂತೆ ಆತ್ಮನು ಪರಬ್ರಹ್ಮವೇ ಆಗಿಬಿಡುವದಿಲ್ಲ.

(ಅ) **ಭಾಸ್ಕರಮತದಲ್ಲಿ** ಭೇದಾಭೇದವು ಪ್ರಮಾಣಗಮ್ಯವಾದ್ದರಿಂದ ವಿರುದ್ಧವಲ್ಲ. ವಿರೋಧವೆಂದರೆ ನೆರಳುಬಿಸಿಲುಗಳಂತೆ ಸಹಾನವಸ್ಥಾನ ; ಅಂದರೆ ಭಿನ್ನದೇಶಗಳಲ್ಲಿರುವದು. ಕಾರ್ಯಕಾರಣರೂಪರಾಗಿರುವ ಬ್ರಹ್ಮಪ್ರಪಂಚಗಳಿಗೆ ಆ ವಿರೋಧವಿರುವದಿಲ್ಲ. ಲೋಕದಲ್ಲಿಯೂ ಸತ್ತಾಜ್ಞೇಯತ್ವದ್ರವ್ಯತ್ವಾದಿಸಾಮಾನ್ಯರೂಪದಿಂದ ಎಲ್ಲವೂ ಅಭಿನ್ನವಾಗಿರುತ್ತದೆ; ವ್ಯಕ್ತಿರೂಪದಿಂದ ಪರಸ್ಪರವಿಲಕ್ಷಣವಾಗಿರುವದರಿಂದ ಭಿನ್ನವಾಗಿರುತ್ತದೆ. ಆದ್ದರಿಂದ ಕಾರ್ಯರೂಪದಿಂದ ಅಭಿನ್ನವೂ ಕಾರಣರೂಪದಿಂದ ಏಕವೂ ಆಗಿರುತ್ತದೆ. ಅವಿದ್ಯೆಯೆಂದರೆ ದೇಹಾದಿಗಳಲ್ಲಿರುವ ಆತ್ಮಬುದ್ಧಿಯಿಂದ ಬ್ರಹ್ಮಸ್ವರೂಪಾಗ್ರಹಣವೇ. ಬ್ರಹ್ಮಸ್ವರೂಪವು ಅಪ್ರಚ್ಯುತವಾಗಿದ್ದೂ ಆಗುವ, ಅದರ ಶಕ್ತಿವಿಕ್ಷೇಪವೇ ಪರಿಣಾಮ.

**ರಾಮಾನುಜಮತದಲ್ಲಿಯೂ** ಪ್ರತ್ಯಕ್ಷಾನುಮಾನಶಬ್ದಗಳೆಂಬ ಮೂರು ಪ್ರಮಾಣಗಳುಂಟು. ಸರ್ವಜ್ಞವೂ ಸತ್ಯಸಂಕಲ್ಪವೂ ಅನಂತಕಲ್ಯಾಣಗುಣಗಳುಳ್ಳದ್ದೂ ಆದ ಬ್ರಹ್ಮವು ಆಗಮೈಕಗಮ್ಯವು. ಚಿದಚಿದ್ವಸ್ತುಶರೀರಕವಾದ ಬ್ರಹ್ಮವು ನಾಮರೂಪಗಳು ಬೇರೆಯೆಂದು ಹೇಳುವದಕ್ಕೆ ಅನರ್ಹವಾದ ಸ್ಥಿತಿಯಲ್ಲಿರುವಾಗ ಕಾರಣಾವಸ್ಥೆಯಲ್ಲಿರುತ್ತದೆ; ವಿಭಕ್ತನಾಮರೂಪವ್ಯವಹಾರಕ್ಕೆ ತಕ್ಕ ಸ್ಥೂಲದಶೆಯಲ್ಲಿರುವಾಗ ಕಾರ್ಯವೆನಿಸುವದು. ಕಾರ್ಯವು ಕಾರಣಕ್ಕಿಂತ ಅಭಿನ್ನವು.

ಹೀಗೆ ಭಾಸ್ಕರಮತದಲ್ಲಿರುವ ಔಪಾಧಿಕಭೇದವನ್ನೊಪ್ಪದೆ, ಶರೀರಾತ್ಮಭಾವದಿಂದ ಚಿದಚಿದ್ವಸ್ತುವಿಗೂ ಬ್ರಹ್ಮಕ್ಕೂ ಅಪೃಥಗ್ಭಾವವನ್ನೊಪ್ಪುವದರಿಂದ ಈ ಎರಡು ಪ್ರಸ್ಥಾನಗಳಿಗೂ ಕೆಲವು ವೈಧರ್ಮ್ಯಗಳೂ ಮಿಕ್ಕೆಡೆಯಲ್ಲಿ ಸಾಮ್ಯವೂ ಇರುತ್ತವೆ. ಮಾಯಾವಾದವನ್ನು ಅಂಗೀಕರಿಸಿ ಸಾರ್ವತ್ರಿಕವಾಗಿ ಜಗದ್ಬ್ರಹ್ಮಗಳಿಗೂ ಜೀವಬ್ರಹ್ಮಗಳಿಗೂ ಐಕ್ಯವನ್ನು ಹೇಳುವ ಅದ್ವೈತಮತವನ್ನು ಸರ್ವಥಾ ನಿರಾಕರಿಸುವದು ಎರಡು ಪ್ರಸ್ಥಾನಗಳಿಗೂ ಸಮಾನವಾಗಿರುತ್ತದೆ.

# ವಿಶಿಷ್ಟಾದ್ವೈತಪ್ರಸ್ಥಾನದ ವಿಮರ್ಶೆ

೧೧. (೧) ರಾಮಾನುಜರು ಭಾಸ್ಕರರ ಯುಕ್ತಿಗಳನ್ನು ತಮ್ಮ ಪ್ರಸ್ಥಾನಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಅದ್ವೈತಪ್ರಸ್ಥಾನಗಳ ಖಂಡನೆಗೂ ತಮ್ಮ ಪ್ರಸ್ಥಾನದ ಮಂಡನೆಗೂ ಬಳಸಿಕೊಂಡಿರುತ್ತಾರೆಂಬುದು ಸ್ಪಷ್ಟ. ಆ ಇಬ್ಬರು ಆಚಾರ್ಯರೂ ಅನುಶಾಂಕರಾದ್ವೈತಿಗಳ ಪ್ರಸ್ಥಾನಗಳನ್ನು ಖಂಡಿಸಿರುತ್ತಾರೆ; **ಭಾಸ್ಕರರು** ಮಂಡನಮಿಶ್ರನ ಮತ್ತು ಪಂಚಪಾದಿಕಾಕಾರನ ಮತಗಳನ್ನೇ ಮುಖ್ಯವಾಗಿ ಶಾಂಕರಮತವೆಂತ ಭಾವಿಸಿ ಖಂಡಿಸಿರುತ್ತಾರೆ; ರಾಮಾನುಜರು ಭಾಸ್ಕರಮತವನ್ನು ನಿರಾಕರಣೆಮಾಡುವಾಗ ಹೊಸ ಪ್ರಕ್ರಿಯೆಗಳನ್ನು ರಚಿಸಿಕೊಂಡ **ಭಾಮತೀಕಾರರ ಮತ್ತು ಪಂಚಪಾದಿಕಾವಿವರಣಕಾರರ ಪ್ರಸ್ಥಾನಗಳನ್ನೂ,** ಯಾಮುನಾಚಾರ್ಯರು ನಿರಾಕರಿಸಿರುವ **ಇಷ್ಟಸಿದ್ಧಿಕಾರರ ಅನುಭೂತಿವಾದವನ್ನೂ, ಖಂಡನೆಗೆ ತೆಗೆದುಕೊಂಡಿರುತ್ತಾರೆ.** ಇದಲ್ಲದೆ **ಯಾದವಪ್ರಕಾಶರ ಮತವನ್ನೂ ಖಂಡಿಸುತ್ತಾ ಹೋಗಿರುವದು ಅವರ ಪರಮತಖಂಡನೆಯಲ್ಲಿ ಇನ್ನೊಂದು ವಿಶೇಷ.**

ಮೂಲವೇದಾಂತಸಾಂಪ್ರದಾಯಿಕರಾದ ಗೌಡಪಾದರನ್ನೇ ಆಗಲಿ ಶಂಕರರನ್ನೇ ಆಗಲಿ ನೇರಾಗಿ ಈ ಇಬ್ಬರು ಆಚಾರ್ಯರೂ ಖಂಡನೆಗೆ ತೆಗೆದುಕೊಂಡಿರುವದಿಲ್ಲ. ಉದಾಹರಣೆಗೆ ಗೌಡಪಾದಾಚಾರ್ಯರು ಬರೆದಿರುವ ಕಾರಿಕೆಗಳನ್ನಾಗಲಿ ಕಾರಿಕಾಭಾಷ್ಯವನ್ನಾಗಲಿ ಇಬ್ಬರೂ ಪರಾಮರ್ಶಿಸಿರುವದಿಲ್ಲ; ರಾಮಾನುಜರು ಮಹಾಪೂರ್ವಪಕ್ಷವನ್ನು ಅನುವಾದಮಾಡಿಕೊಳ್ಳುವಾಗ 'ಅನಾದಿಮಾಯಯಾ ಸುಪ್ತೋ ಯದಾಜೀವಃ ಪ್ರಬುಧ್ಯತೇ' (ಗೌ. ಕಾ. ೧-೧೬) ಎಂಬ ಆಗಮಪ್ರಕರಣದ ಕಾರಿಕೆಯನ್ನು ಇತರ ಶ್ರುತಿಗಳ ನಡುವೆಯಲ್ಲಿ ಅದೂ ಶ್ರುತಿಯೇ ಎಂಬಂತೆ ಉದಾಹರಿಸಿರುತ್ತಾರೆ. (ಆ ಪ್ರಕರಣವನ್ನು ಕೆಲವರು ಈಚಿನ ಅದ್ವೈತಿಗಳೂ ಮಧ್ವಾಚಾರ್ಯರೂ ಉಪನಿಷತ್ತೇ ಎಂದು ಭಾವಿಸಿ ಬರೆದಿರುವದು ಸುವಿದಿತವಾಗಿದೆ). **ಶಾಂಕರಭಾಷ್ಯದ ಉಪೋದ್ಘಾತವಾದ ಅಧ್ಯಾಸಭಾಷ್ಯವನ್ನಂತೂ ಭಾಸ್ಕರರಾಗಲಿ ರಾಮಾನುಜರಾಗಲಿ ಕಣ್ಣೆತ್ತಿಯೂ ನೋಡಿಲ್ಲ.** ಅಧ್ಯಾಸಕ್ಕೆ ಪರಮಾರ್ಥದೋಷವು ಕಾರಣವಾಗಿರಬೇಕೆಂದೂ ಅಂಥ ದೋಷವು ಅವಿದ್ಯಾವಾದಿಗಳ ಮತದಲ್ಲಿ ಸಿದ್ಧಿಸುವದಿಲ್ಲವೆಂದೂ ಇಬ್ಬರು ಆಚಾರ್ಯರುಗಳೂ ಬರೆದಿರುತ್ತಾರೆ. ಆದರೆ ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸದಿಂದಲೇ ಎಲ್ಲಾ ಲೌಕಿಕವೈದಿಕವ್ಯವಹಾರಗಳೂ ಸಾಗಿರುತ್ತವೆ ಎಂಬ ಬಹುಮುಖ್ಯವಾದ ಶಾಂಕರಪ್ರಕ್ರಿಯೆಯನ್ನು ಅವರು ಲೆಕ್ಕಕ್ಕೇ ತೆಗೆದುಕೊಂಡಿರುವದಿಲ್ಲ. ಈ ಆಚಾರ್ಯರುಗಳ ಕಾಲದಲ್ಲಿ ಅನಿರ್ವಚನೀಯಾವಿದ್ಯಾವಾದವೇ ಎಲ್ಲೆಲ್ಲಿಯೂ ಶಂಕರರ ಹೆಸರಿನಲ್ಲಿ ಪ್ರಚಾರವಾಗಿದ್ದು ಕೊಂಡಿರಬೇಕೆಂದು ಇದರಿಂದ ನಾವು ಅನುಮಾನಿಸಬೇಕಾಗಿದೆ.

(೨) ಇದಿಷ್ಟೂ ಪರಪಕ್ಷಖಂಡನೆಯ ಮಾತಾಯಿತು. ಇನ್ನು **ಸಿದ್ಧಾಂತ ನಿರೂಪಣೆಯತ್ತ** ಮನಸ್ಸನ್ನು ಹೊರಳಿಸೋಣ. (a) ಮೊಟ್ಟಮೊದಲು **ವಾಕ್ಯ ವ್ಯಾಖ್ಯಾನಪದ್ಧತಿಯನ್ನು** ಪರಾಮರ್ಶಿಸಿದರೆ, ಶ್ರುತಿವಾಕ್ಯಗಳ ತಾತ್ಪರ್ಯವನ್ನು ನಿರ್ಣಯಿಸುವಾಗ ಲಘುಸಿದ್ಧಾಂತದಲ್ಲಿ "ಅವಿದ್ಯಾನಿವೃತ್ತಿಗಾಗಿ ವೇದಾಂತವಾಕ್ಯಗಳಲ್ಲಿ 'ವಿಧಿಸುವದಕ್ಕೆ' ಹೊರಟಿರುವ ಜ್ಞಾನವು ಯಾವದೆಂಬುದನ್ನು ವಿವೇಚನೆ ಮಾಡಬೇಕಾಗಿದೆ" (ಪು. ೨೦) ಎಂದು ಬರೆದುಕೊಂಡಿರುತ್ತಾರೆ. ಇಲ್ಲಿ ಜ್ಞಾನವೆಲ್ಲವೂ 'ವಿಧಿತ್ಸಿತ'ವೆಂದು (ವಿಧಿಸಬೇಕೆಂದು ಶ್ರುತಿಯು ಹೊರಟಿದೆ ಎಂದು) ಪೂರ್ವಪಕ್ಷಿಯು ಒಪ್ಪಿಲ್ಲ. ಬ್ರಹ್ಮದ ಉಪಾಸನೆಯನ್ನು ವಿಧಿಸುವ ವಾಕ್ಯಗಳು ಒಂದು ಪಂಗಡ, ಬ್ರಹ್ಮಸ್ವರೂಪವನ್ನು ನಿರ್ಧಾರಣೆಮಾಡುವದಕ್ಕೆ ಹೊರಟಿರುವ ವಾಕ್ಯಗಳು ಒಂದು ಪಂಗಡ– ಹೀಗೆ ಎರಡು ಬಗೆಯ ವಾಕ್ಯಗಳಿವೆ. ಉಪಾಸನೆಯನ್ನು ವಿಧಿಸುವ ವಾಕ್ಯಗಳು ಕಾಲಾಂತರದಲ್ಲಿ ಲೋಕಾಂತರದಲ್ಲಿ ಆಗುವ ಫಲವನ್ನು ಕೊಡುತ್ತವೆ; ಅವು ಕರ್ಮವಾಕ್ಯಗಳಂತೆಯೇ (ಮಾನಸ)ಕರ್ಮವನ್ನು ವಿಧಿಸುತ್ತವೆ. ಆದರೆ ಬ್ರಹ್ಮಸ್ವರೂಪಜ್ಞಾನವನ್ನು ಉಂಟುಮಾಡುವ ವಾಕ್ಯಗಳಿಗೆ ಇಲ್ಲಿಯೇ ದೃಷ್ಟಫಲವು ಆಗುತ್ತದೆ; ಬ್ರಹ್ಮವನ್ನು ಅರಿತರೆ ಬ್ರಹ್ಮವೇ ಆಗುವನು– ಎಂಬಂತೆ ವಾಕ್ಯಾರ್ಥಜ್ಞಾನಮಾತ್ರದಿಂದ ಫಲವು ಉಂಟಾಗುತ್ತದೆ. ಅಲ್ಲಿ ಜ್ಞಾನವೆಂದರೆ ಅವಗತಿ, ಫಲರೂಪವಾದ ವಸ್ತುತಂತ್ರವಾದ ಜ್ಞಾನ. ಪ್ರತ್ಯಕ್ಷಾದಿಜ್ಞಾನಗಳಂತೆ ವಸ್ತುವನ್ನು ತಿಳಿಯಿಸುವದೇ ಆ ವಾಕ್ಯಗಳಿಗೆ ಫಲ. ಹಾಗೆ ತಿಳಿದ ಬ್ರಹ್ಮವನ್ನು ಯಾವ ಉಪಾಸನಾದಿಕ್ರಿಯೆಗೂ ಅಂಗವಾಗಿ ಶ್ರುತಿಯಲ್ಲಿ ಹೇಳಿಲ್ಲ– ಎಂದು ಶಂಕರಾಚಾರ್ಯರು ಸೂತ್ರಭಾಷ್ಯ (ಸೂ.ಭಾ. ೧–೧–೪, ಪುಟ. ೧೯, ೨೧, ೨೩; ೧–೧–೧೨, ಪುಟ. ೩೫; ೩–೨–೧೪, ಪುಟ. ೩೫೮; ೩–೨–೨೧, ಪುಟ. ೩೬೧) –ಇವೇ ಮುಂತಾದ ಕಡೆಗಳಲ್ಲಿ ಸಾರಿರುತ್ತಾರೆ. **ಈ ವಾಕ್ಯಾರ್ಥನಿರ್ಣಯ ಪ್ರಕಾರವನ್ನು ಭಾಸ್ಕರರಾಗಲಿ ರಾಮಾನುಜರಾಗಲಿ ಪರಾಮರ್ಶಿಸಿ ಪರಿಶೀಲನೆಮಾಡಿಯೇ ಇರುವದಿಲ್ಲ.** 'ಶಬ್ದಕ್ಕೆ ಯಾವದರಲ್ಲಿ ತಾತ್ಪರ್ಯವಿರುತ್ತದೆಯೋ ಅದೇ ಶಬ್ದಾರ್ಥ' ಎಂಬ ಮೀಮಾಂಸಾನ್ಯಾಯವನ್ನು ಕಡೆಗಣಿಸಿ ಉಪಾಸನಾದಿವಾಕ್ಯಗಳನ್ನೂ ಬ್ರಹ್ಮಸ್ವರೂಪಪ್ರತಿಪಾದಕವಾಕ್ಯಗಳನ್ನೂ ಕಲಬೆರಕೆ ಮಾಡಿ ಎಲ್ಲವೂ ಉಪಾಸನಾವಿಧಿಪರವೆಂದು ನಿರ್ಣಯಿಸಿರುವದೊಂದು ಇಲ್ಲಿ ವ್ಯಾಖ್ಯಾನದೋಷವೆಂದು ಆಕ್ಷೇಪಕರು ಹೇಳಬಹುದಾಗಿದೆ.

(೩) ಬ್ರಹ್ಮಕ್ಕೆ ಚಿದಚಿದ್ವಸ್ತುಗಳು 'ಶರೀರ' ಎಂಬ ಸಿದ್ಧಾಂತಕ್ಕೆ ಬೃಹದಾರಣ್ಯಕದ **'ಯಸ್ಯ ಪೃಥಿವೀ ಶರೀರಮ್', 'ಯಸ್ಯಾತ್ಮಾ ಶರೀರಮ್'**– ಮುಂತಾದ ಅಂತರ್ಯಾಮಿಬ್ರಾಹ್ಮಣದ ವಾಕ್ಯಗಳನ್ನು ಪ್ರಮಾಣವನ್ನಾಗಿ ಕೊಟ್ಟಿರುತ್ತದೆ. ಅಂತರ್ಯಾಮಿವಾಕ್ಯವು ಬೃಹದಾರಣ್ಯಕದಲ್ಲಿ ಉದ್ದಾಲಕ ಆರುಣಿಗೂ ಯಾಜ್ಞವಲ್ಕ್ಯನಿಗೂ ನಡೆದಿರುವ ಸಂವಾದದಲ್ಲಿ ಬಂದಿದೆ; ಅಲ್ಲಿ ವ್ಯಷ್ಟಿಸಮಷ್ಟಿ

ರೂಪನಾದ ವಾಯುವಿನ (ಸೂತ್ರಾತ್ಮನ) ಒಳಗಿರುವ ಅಂತರ್ಯಾಮಿ ಯಾರು ? ಎಂಬುದನ್ನು ನಿಶ್ಚಯಿಸುವದಕ್ಕೆ ಪ್ರಶ್ನೋತ್ತರಗಳು ನಡೆದಿವೆ. ಆತ್ಮನಿಗೆ ಶರೀರ ವಿದೆಯೆ ?– ಎಂಬುದಾಗಲಿ ಆತ್ಮನಿಗೂ ಚಿದಚಿತ್ತುಗಳಿಗೂ ಶರೀರಾತ್ಮಭಾವವಿದೆ ಯೆ ?– ಎಂಬುದಾಗಲಿ ವಿಚಾರಕ್ಕೆ ವಿಷಯವಲ್ಲ. ಅಂತರ್ಯಾಮಿ ಯಾರು ? ಆತ್ಮನಲ್ಲಿರುವವನು ಯಾವನು ?– ಎಂಬ ಪ್ರಶ್ನೆಗೆ 'ಪ್ರಸಿದ್ಧನಾಗಿರುವ ಆತ್ಮನಲ್ಲಿದ್ದು ಕೊಂಡು ಆತ್ಮನನ್ನು ಹಿಡಿತದಲ್ಲಿಟ್ಟುಕೊಂಡಿರುವವನೇ ನಿನ್ನ ಆತ್ಮನಾದ ಅಮೃತ ನಾದ ಅಂತರ್ಯಾಮಿಯು' ಎಂಬ ಉತ್ತರವು ಬಂದಿರುತ್ತದೆ. ಇದಕ್ಕೆ ಹಿಂದಿನ **ಬ್ರಾಹ್ಮಣಗಳಲ್ಲಿಯೂ ಸಾಕ್ಷಾದಪರೋಕ್ಷವಾದ ಬ್ರಹ್ಮವು, ಸರ್ವಾಂತರ ನಾದ ಆತ್ಮನು ಯಾರು ?– ಎಂಬ ಪ್ರಶ್ನೆಯೇ ಬಂದಿರುತ್ತದೆ.** ಅಲ್ಲಿ ಶರೀರಶರೀರಿಗಳ ಸೊಲ್ಲೂ ಇಲ್ಲ. ಪ್ರಕೃತಬ್ರಾಹ್ಮಣದಲ್ಲಿಯೂ ಪೃಥಿವ್ಯಾದಿಗಳನ್ನೂ ಆತ್ಮನನ್ನೂ ಹಿಡಿತದಲ್ಲಿಟ್ಟುಕೊಂಡು ಅವರೊಳಗೆ ಇರುವವನು 'ನಿನ್ನ ಆತ್ಮನು' (ಏಷ ತ ಆತ್ಮಾ, ಸ ತ ಆತ್ಮಾ) ಎಂದೇ ಇದೆ. ಹೀಗಿರುವದರಿಂದ ಅಂತ ರ್ಯಾಮಿಯು ಎಲ್ಲರ ಸರ್ವಾಂತರಾತ್ಮನು– ಎಂದಿಷ್ಟೇ ನಿರ್ಣಯಿಸಬಹುದೇ ಹೊರತು ಚಿದಚಿತ್ತುಗಳು ಪರಮಾತ್ಮನ ಶರೀರವು ಎಂದು ನಿರ್ಣಯಿಸುವದಕ್ಕೆ ಈ ಪ್ರಕರಣವು ಹೇಗೆ ಸಾಧಕ ?– ಎಂಬುದನ್ನು ನಿರ್ಣಯಿಸಬೇಕಾಗಿದೆ. ಇದನ್ನು ಸಿದ್ಧಾಂತಕ್ಕೆ ಅಡಿಗಲ್ಲಾಗಿ ಮಾಡಿಕೊಂಡು ಎಲ್ಲೆಲ್ಲಿಯೂ ಶರೀರಾತ್ಮಭಾವವನ್ನು ಕಲ್ಪಿಸಿರುವದು ಸರಿಯೆ ?– ಎಂಬುದನ್ನು ಶ್ರೀಭಾಷ್ಯದಲ್ಲಿ ಸ್ಫುಟಗೊಳಿಸಿಲ್ಲ ; ಯಾಮುನಾಚಾರ್ಯರ ಆತ್ಮಸಿದ್ಧಿಯಲ್ಲಿಯೂ (ಆ. ಸಿ. ಪು. ೬೬) **'ಚೇತನ ಯಾ ಧ್ರಿಯಮಾಣಃ ಸಙ್ಘಾತೋ ಹಿ ದೇಹಃ ಸ್ವವೃತ್ತ್ಯನುಗುಣಚೈತನ್ಯ ಮಾತ್ರಾದೇವ ಪ್ರವರ್ತಮಾನಂ ಕ್ಷೇತ್ರಮ್ ಇತಿ ಯಾವತ್ । ಅತ ಏವ ಹಿ ಅನ್ತರ್ಯಾಮಿಬ್ರಾಹ್ಮಣೇ 'ಯಸ್ಯ ಪೃಥಿವೀ ಶರೀರಮ್' 'ಯಸ್ಯಾಪಃ ಶರೀರಮ್', 'ಯಸ್ಯಾಽಽತ್ಮಾ ಶರೀರಮ್' ಇತ್ಯಾದಿನಿರ್ದೇಶಃ । 'ತಾನಿ ಸರ್ವಾಣಿ ತದ್ವಪುಃ' ಇತಿ ಚ ಪುರಾಣೇ'**– ಎಂದಿದೆ. ಇಲ್ಲಿ ಶರೀರದ ಲಕ್ಷಣ ವನ್ನು 'ಸ್ವವೃತ್ತ್ಯನುಗುಣಚೈತನ್ಯಮಾತ್ರಾದೇವ ಪ್ರವರ್ತಮಾನಮ್' ಎಂದಿಷ್ಟೇ ಕೊಟ್ಟು ಪೃಥಿವ್ಯಾದಿಗಳು ಆತ್ಮನಿಗೆ ಶರೀರವೆಂಬ ಬ್ರಾಹ್ಮಣವಾಕ್ಯವನ್ನುದಾಹರಿಸಿರು ವದೇಕೆಂಬುದು ಸ್ಪಷ್ಟವಾಗುವದಿಲ್ಲ. ಜ್ಞಾನವು ಜ್ಞಾತೃವಿಗೆ ಸ್ವಭಾವವೆಂದು ಪ್ರತಿಪಾದನಮಾಡುವ ಸಂದರ್ಭದಲ್ಲಿ ಈ ವಾಕ್ಯವು ಬಂದಿದೆ. ಆದ್ದರಿಂದ ಶರೀರ ವೆಂಬ ಶಬ್ದವು ಈ ಸಿದ್ಧಾಂತದಲ್ಲಿ ಪಾರಿಭಾಷಿಕವೆಂದು ಬಗೆದರೆ ಈಗ್ಗೆ ಸಾಕಾಗಿದೆ.

(೪) ಯಾಮುನಾಚಾರ್ಯರು **ವಿಷ್ಣುಪುರಾಣ**ವನ್ನು ಉದಾಹರಿಸಿರು ವಂತೆಯೇ ರಾಮಾನುಜರೂ 'ಯದಮ್ಬು ವೈಷ್ಣವಃ ಕಾಯಃ', 'ತಾನಿ ಸರ್ವಾಣಿ ತದ್ವಪುಃ', 'ತತ್ಸರ್ವಂ ವೈ ಹರೇಸ್ತನುಃ' –ಎಂಬಿವೇ ಮುಂತಾದ ವಾಕ್ಯಗಳನ್ನು

(ಪು. ೨೪೦) ಉದಾಹರಿಸಿಕೊಂಡು ಶರೀರಾತ್ಮಭಾವರೂಪವಾದ ತಾದಾತ್ಮ್ಯ ವನ್ನೇ ಶ್ರುತಿಯಲ್ಲಿಯೂ ಪುರಾಣದಲ್ಲಿಯೂ ಉಪದೇಶಿಸಿದೆ- ಎಂದಿರುತ್ತಾರೆ. ಶರೀರ, ರೂಪ, ತನು, ಅಂಶ, ಶಕ್ತಿ, ವಿಭೂತಿ- ಮುಂತಾದ ಶಬ್ದಗಳೆಲ್ಲ ವೂ ಪರ್ಯಾಯಗಳೆಂದೂ (ಪು. ೧೬೩) ಹೇಳಿ ಚಿದಚಿದ್ವಸ್ತುವೆಲ್ಲವೂ ಪರ ಮಾರ್ಥವೇ, ಶಾಂಕರಪ್ರಸ್ಥಾನದಲ್ಲಿ ಅಂಗೀಕರಿಸಿರುವಂತೆ ಮಿಥ್ಯೆಯಲ್ಲ- ಎಂದಿರು ತ್ತಾರೆ. ಗವಾದಿಶಬ್ದಗಳಂತೆ ದೇವಮನುಷ್ಯಾದಿಶಬ್ದಗಳೂ ಆತ್ಮಪರ್ಯಂತವಾಗಿರು ವದರಿಂದ ಜೀವರು ಪರಮಾತ್ಮನ ಶರೀರವಾಗಿದ್ದು ಅವನಿಗೆ ಪ್ರಕಾರವಾಗಿರುವದ ರಿಂದ ಅವುಗಳನ್ನು ಸಾಮಾನಾಧಿಕರಣ್ಯದಿಂದ ಪರಮಾತ್ಮವಾಚಕಶಬ್ದಗಳೊಡನೆ ಪ್ರಯೋಗಿಸಿದೆ (ಪು. ೨೬೧-೨೬೫)- ಎಂದೂ ಹೇಳುತ್ತಾರೆ. 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ತತ್ಪದವೂ ತ್ವಂಪದವೂ ಬ್ರಹ್ಮಪರವೇ; ತತ್ಪದವು ಸರ್ವಜ್ಞವೂ ಸತ್ಯಸಂಕಲ್ಪವೂ ಆದ ಜಗತ್ಕಾರಣಬ್ರಹ್ಮವನ್ನು ಪರಾಮರ್ಶಿಸುತ್ತದೆ; ತ್ವಂಪದವು ಅಚಿದ್ವಿಶಿಷ್ಟಜೀವಶರೀರಕವಾದ ಬ್ರಹ್ಮವನ್ನು ಹೇಳುತ್ತದೆ. ಆದ್ದರಿಂದ 'ತತ್ತ್ವಮ್' ಎಂಬ ಸಾಮಾನಾಧಿಕರಣ್ಯಕ್ಕೆ ಈ ಎರಡು ಪ್ರಕಾರಗಳಿಂದಲೂ ಒಂದೇ ವಸ್ತುವಿದೆ ಎಂದು ಹೇಳುವದರಲ್ಲಿಯೇ ತಾತ್ಪರ್ಯವೇ ಹೊರತು ಜೀವಬ್ರಹ್ಮೈಕ್ಯದಲ್ಲಿ ತಾತ್ಪರ್ಯವಿಲ್ಲ (ಪು. ೨೫೧) ಎಂಬುದು ಅವರ ವಾದ.

ಇಲ್ಲಿ ಅಂತರ್ಯಾಮಿಬ್ರಾಹ್ಮಣದಲ್ಲಿ ಮಾತ್ರ ಕಂಡುಬರುವ 'ಯಸ್ಯ ಪೃಥಿವೀ ಶರೀರಮ್', 'ಯಸ್ಯಾತ್ಮಾ ಶರೀರಮ್' -ಎಂದಿರುವ ಅತತ್ಪರವಾದ ವಾಕ್ಯಗಳನ್ನು ಪ್ರಬಲವೆಂತ ಹಿಡಿದು ತಾತ್ಪರ್ಯದಿಂದ ಮತ್ತೆಮತ್ತೆ 'ತತ್ತ್ವಮಸಿ' ಎಂದು ಉಪ ದೇಶಿಸಿರುವ ಜೀವಾತ್ಮೈಕ್ಯಪರವೆಂದು ತೋರುವ ವಾಕ್ಯವನ್ನು ಶರೀರವಾಕ್ಯಕ್ಕೆ ಅನುಸಾರವಾಗಿ ಹೇಳಬಹುದೆ? ಹಾಗಿದ್ದರೆ 'ತ್ವಂ ತಚ್ಛರೀರಮಸಿ' (ನೀನು ಅದರ ಶರೀರವು), 'ಸ ತ್ವಚ್ಛರೀರಕ ಆತ್ಮಾ' (ಅವನು ನಿನ್ನನ್ನು ಶರೀರವಾಗಿ ಉಳ್ಳ ಆತ್ಮನು) ಎಂದು ಒಂದುಸಲವೂ ಉದ್ದಾಲಕನು ಹೇಳಲಿಲ್ಲವೇಕೆ ?- ಎಂಬ ಆಕ್ಷೇಪಕ್ಕೆ ಉತ್ತರವು ಕಾಣುವದಿಲ್ಲ. ಶರೀರಾತ್ಮಭಾವದಲ್ಲಿರುವ ಅಭಿನಿವೇಶವು ಇಲ್ಲಿ ಎಷ್ಟು ಪ್ರಬಲವಾಗಿದೆ ಎಂದರೆ, ಆನಂದಮಯಾಧಿಕರಣಭಾಷ್ಯದಲ್ಲಿ **'ಏವಂ ಚ ಸ್ವವ್ಯತಿರಿಕ್ತಂ ಚೇತನಾಚೇತನವಸ್ತುಜಾತಂ ಸ್ವಶರೀರಮಿತಿ ಸ ಏವ ನಿರುಪಾಧಿಕಃ ಶಾರೀರ ಆತ್ಮಾ। ಅತ ಏವೇದಂ ಪರಂ ಬ್ರಹ್ಮಾಧಿಕೃತ್ಯ ಪ್ರವೃತ್ತಂ ಶಾಸ್ತ್ರಂ ಶಾರೀರಕಮಿತ್ಯಭಿಯುಕ್ತೈರಭಿಧೀಯತೇ ॥'** ಚಿದ ಚಿದ್ವಸ್ತುಗಳೆಲ್ಲವೂ ಪರಮಾತ್ಮನ ಶರೀರವಾಗಿರುವದರಿಂದಲೇ ಬಲ್ಲವರು ಈ ಮೀಮಾಂಸಾಶಾಸ್ತ್ರಕ್ಕೆ 'ಶಾರೀರಕ'ವೆಂದು ಹೆಸರಿಟ್ಟಿದಾರೆ- ಎಂದು ಮಿಕ್ಕವರು ಯಾರೂ ಒಪ್ಪದ, ನಿರ್ವಚನವನ್ನೇ ರಾಮಾನುಜರು ಬರೆದುಬಿಟ್ಟಿದಾರೆ! ಉಪಾ ಸನಾವಿಧಿವಾಕ್ಯಗಳಲ್ಲಿ ಕಾಣಬರುವ ಸಗುಣವಾಕ್ಯಗಳನ್ನು ಪ್ರಬಲವೆಂದಿಟ್ಟುಕೊಂಡು

ನಿರ್ಗುಣವಾಕ್ಯಗಳೂ 'ಅಸ್ಥೂಲಮ್', 'ಸ ಏಷ ನೇತಿನೇತ್ಯಾತ್ಮಾ'- ಮುಂತಾದ ನಿಷೇಧವಾಕ್ಯಗಳೂ ಪ್ರಾಕೃತಹೇಯಗುಣಗಳನ್ನು ಅಲ್ಲಗಳೆಯುತ್ತವೆಯೇ ಹೊರತು ಗುಣಗಳೇ ಪರಮಾತ್ಮನಿಗಿಲ್ಲವೆಂದು ಹೇಳುವದಿಲ್ಲವೆಂದು ಪುರಾಣವಾಕ್ಯಗಳನ್ನು ಮಾತ್ರ ಅವಲಂಬಿಸಿ ವಾದಿಸಿರುವದರಲ್ಲಿಯೂ ಇದೇ ದೋಷವನ್ನು ಕಲ್ಪಿಸಬಹುದು.

(೫) ಶ್ರುತಿಸ್ಮೃತಿಪುರಾಣವಾಕ್ಯಗಳಿಗೆ ತಾತ್ಪರ್ಯವನ್ನು ಕಲ್ಪಿಸುವದರಲ್ಲಿ ಮತಭೇದಗಳಿಗೆ ಅವಕಾಶವಿದ್ದೇ ಇರುತ್ತದೆ. ಈ ಮತಭೇದವು ಆಯಾ ಆಚಾರ್ಯರ ಅಭ್ಯುಪಗಮಗಳನ್ನು ಅವಲಂಬಿಸಿರುತ್ತದೆ-ಎಂಬುದಕ್ಕೆ ಶಂಕರಾಚಾರ್ಯರಂತೆಯೇ ಪ್ರಸ್ಥಾನಭೇದಗಳನ್ನು ಕಲ್ಪಿಸಿದ ಭಾಸ್ಕರರಾಮಾನುಜಮಧ್ವವಲ್ಲಭಾದಿಗಳ ಭಾಷ್ಯಗಳೇ ಸಾಕ್ಷಿ. ಶಂಕರಾಚಾರ್ಯರು ತಮ್ಮ ಭಾಷ್ಯಗಳಲ್ಲಿ ಬಲುಮಟ್ಟಿಗೆ ಶ್ರುತಿವಾಕ್ಯಗಳನ್ನೇ ಉದಾಹರಿಸಿಕೊಂಡಿರುತ್ತಾರೆ. ಎಲ್ಲಿಯೋ ಕೆಲವು ಕಡೆಗಳಲ್ಲಿ ಮಾತ್ರ ಸ್ಮೃತಿಗಳಿಂದಲೂ ಇತಿಹಾಸಪುರಾಣಗಳಿಂದಲೂ ಪ್ರಮಾಣವಾಕ್ಯಗಳನ್ನು ತೆಗೆದುಕೊಂಡಿರುತ್ತಾರೆ. ವೇದಾಂತಸಿದ್ಧಾಂತಕ್ಕೆ ವೇದಾಂತಗಳೆಂಬ ಹೆಸರನ್ನು ಪಡೆದಿರುವ ಉಪನಿಷತ್ತುಗಳೇ ಮುಖ್ಯಾಧಾರವೆಂದು ಅವರ ಅಭಿಪ್ರಾಯವಾಗಿರಬೇಕು. **ಶ್ವೇತಾಶ್ವತರೋಪನಿಷತ್ತಿನ** ಭಾಷ್ಯದಲ್ಲಿ ಮಾತ್ರ ಅನೇಕ ಪುರಾಣಗಳ ವಾಕ್ಯಗಳನ್ನು ಧಾರಾಳವಾಗಿ ಅವರು ಉದಾಹರಿಸಿರುತ್ತಾರೆ. (ಆ ಭಾಷ್ಯವು ಸಾಕ್ಷಾಚ್ಛಂಕರರ ಕೃತಿಯಲ್ಲವೆಂದೂ ಕೆಲವರು ಆಧುನಿಕವಿಮರ್ಶಕರ ಅಭಿಪ್ರಾಯವಿದೆ). ಆ ಭಾಷ್ಯವನ್ನು ನೋಡಿಯೊ, ಏನೊ, ರಾಮಾನುಜರೂ ತಮ್ಮ ಭಾಷ್ಯದಲ್ಲಿ ಪುರಾಣಗಳಿಂದ-ಮುಖ್ಯವಾಗಿ ವಿಷ್ಣುಪುರಾಣದಿಂದ - ಹೆಚ್ಚಿನ ಸಂಖ್ಯೆಯ ಪ್ರಮಾಣವಚನಗಳನ್ನು ಉದಾಹರಿಸಿರುತ್ತಾರೆ. ವಿಷ್ಣುಪುರಾಣಭಾಗವತಪುರಾಣಗಳಿಗೂ ದ್ವೈತಾದ್ವೈತವಿಶಿಷ್ಟಾದ್ವೈತಿಗಳು ತಮ್ಮತಮ್ಮ ಸಿದ್ಧಾಂತಕ್ಕನುಗುಣವಾಗಿ ವ್ಯಾಖ್ಯಾನಗಳನ್ನು ಬರೆದುಕೊಂಡಿರುತ್ತಾರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದ್ದರಿಂದ ವಾಕ್ಯೋದಾಹರಣೆಗಳಿಂದ ಮಾತ್ರವೇ ಯಾವ ಪ್ರಸ್ಥಾನವಾಗಲಿ ಪ್ರಕ್ರಿಯೆಯಾಗಲಿ ನಿರ್ದುಷ್ಟವೆಂದು ನಿರ್ಣಯವಾಗಲಾರದೆಂಬುದನ್ನು ನಿಷ್ಪಕ್ಷಪಾತಿಗಳಾದ ವಿಮರ್ಶಕರು ಒಪ್ಪಬೇಕಾಗುವದು. ಆದರೆ ಯುಕ್ತ್ಯನುಭವಗಳ ದೃಷ್ಟಿಯಿಂದ ವಿಚಾರಮಾಡುವಾಗ ಅವುಗಳಿಗೆ ಒಪ್ಪಾದ ಅರ್ಥವನ್ನೇ ವೇದಾಂತದಲ್ಲಿಯೂ ಉಪದೇಶಿಸಿದೆ ಎಂದು ಪ್ರತಿಪಾದಿಸುವದು ಹೀಗೆ ಅಭಿಪ್ರಾಯಭೇದಕ್ಕೆ ಅವಕಾಶವನ್ನು ಕೊಡಲಾರದು. ಬರಿಯ ಒಣತರ್ಕಕ್ಕೆ ನಿಲುಗಡೆಯಿಲ್ಲವೆಂಬುದನ್ನು ಒಂದು ದರ್ಶನದವರು ಮತ್ತುಳಿದ ದರ್ಶನಗಳಲ್ಲಿ ದೋಷಗಳನ್ನು ಯುಕ್ತಿಯಿಂದ ಎತ್ತಿತೋರಿಸುವದರಿಂದಲೇ ತಿಳಿಯಬಹುದು. ಆದ್ದರಿಂದ ರಾಮಾನುಜರು ಸ್ವಪ್ರಕ್ರಿಯೆಯನ್ನು ಎಷ್ಟರಮಟ್ಟಿಗೆ ಯುಕ್ತ್ಯನುಭವಾನುಸಾರವಾಗಿ ಪ್ರತಿಪಾದಿಸಿರುತ್ತಾರೆಂಬುದನು ಈಗ ನೋಡುವದಕ್ಕೆ ಹೊರಡೋಣ.

ಶಂಕರಾಚಾರ್ಯರು ಬ್ರಹ್ಮಜಿಜ್ಞಾಸೆಯಲ್ಲಿ ಶ್ರುತ್ಯಾದಿಗಳಂತೆ **ಅನುಭವಾದಿ** ಗಳನ್ನೂ ಪ್ರಮಾಣವಾಗಿಟ್ಟುಕೊಳ್ಳಬೇಕೆಂದು ಬರೆದಿರುತ್ತಾರೆ. ಅವರ ಈ ಅಭಿಪ್ರಾಯವನ್ನು ಪರಿಶೀಲಿಸಿರುವ ವಿಮರ್ಶಕರು ಬಹುವಿರಳ. ಭಾಸ್ಕರಾಚಾರ್ಯರಾಗಲಿ ರಾಮಾನುಜಾಚಾರ್ಯರಾಗಲಿ ಅನುಭವದ ಪರಾಮರ್ಶವನ್ನು ತಮ್ಮ ಭಾಷ್ಯದಲ್ಲಿ ಮಾಡಿರುವದು ಬಹಳ ಕಡಿಮೆ. ಪ್ರತ್ಯಕ್ಷಾನುಮಾನಶಬ್ದಗಳೆಂಬ ಪ್ರಮಾಣಗಳನ್ನೇ ಅವರಿಬ್ಬರೂ ಒಪ್ಪಿರುತ್ತಾರೆ. ಪರಮಾತ್ಮತತ್ತ್ವವು ಪ್ರತ್ಯಕ್ಷಾದಿಗಳಿಗೆ ನಿಲುಕದ ಅತೀಂದ್ರಿಯವಸ್ತುವಾಗಿರುವದರಿಂದ ಅವರಿಬ್ಬರೂ ಶಬ್ದವೇ ಪರಮಾತ್ಮತತ್ತ್ವನಿರೂಪಣಕ್ಕೆ ಪ್ರಮಾಣವೆಂದು ಪೂರ್ವಮೀಮಾಂಸಕರಂತೆಯೇ ಒಪ್ಪಿಕೊಂಡು ಹೊರಟಿರುತ್ತಾರೆ.

ರಾಮಾನುಜರು ಯಾಮುನಾಚಾರ್ಯರಂತೆಯೇ ಇಷ್ಟಸಿದ್ಧಿಯಲ್ಲಿ ಹೇಳಿರುವ **'ಅನುಭೂತಿ'ಯ** ವಿಚಾರವನ್ನು ವಿಸ್ತಾರವಾಗಿ ವಿಮರ್ಶಿಸಿರುವದು ನಿಜ. (೧) **ಯಾಮುನಾಚಾರ್ಯರು** (ಆ.ಸಿ.ಪು. ೨೧) 'ಸಂವಿತ್ತೆಂಬುದು ತನ್ನ ಇರವಿನಿಂದಲೇ ತನ್ನ ಆಶ್ರಯವಾಗಿರುವವನಿಗೆ ಯಾವದೋ ಒಂದು ಬೆಳಗಿತೋರಿಸುವ ಸ್ವಭಾವವುಳ್ಳ ಜ್ಞಾನ, ಅವಗತಿ, ಅನುಭೂತಿ– ಮುಂತಾದ ಪರ್ಯಾಯನಾಮಗಳುಳ್ಳ ಸಕರ್ಮಕವಾದ ಅರಿಯುವವನಾದ ಆತ್ಮನ ಧರ್ಮವೆಂದು ಪ್ರಸಿದ್ಧವಾಗಿದೆ. **'ಸಂವಿದಿತಿ ಸ್ವಾಶ್ರಯಂ ಪ್ರತಿ ಸತ್ತಯೈವ ಕಸ್ಯಚಿತ್ ಪ್ರಕಾಶನಶೀಲೋ ಜ್ಞಾನಾವಗತ್ಯನುಭೂತ್ಯಾದಿಪದಪರ್ಯಾಯನಾಮಾ ಸಕರ್ಮಕಃ ಸಂವೇದಿತುರಾತ್ಮನೋ ಧರ್ಮಃ ಪ್ರಸಿದ್ಧಃ'** ಎಂದು ಬರೆದಿರುತ್ತಾರೆ. **ರಾಮಾನುಜರೂ** ಅವರನ್ನನುಸರಿಸಿ **"ಅನುಭೂತಿರಿತಿ ಸ್ವಾಶ್ರಯಂ ಪ್ರತಿ ಸ್ವಸದ್ಭಾವೇನೈವ ಕಸ್ಯಚಿದ್ವಸ್ತುನೋ ವ್ಯವಹಾರಾನುಗುಣ್ಯಸ್ವಭಾವೋ ಜ್ಞಾನಾವಗತಿಸಂವಿದಾದ್ಯಪರನಾಮಾ ಸಕರ್ಮಕೋಽನುಭವಿತುರಾತ್ಮನೋ ಧರ್ಮವಿಶೇಷೋ 'ಘಟಮಹಂ ಜಾನಾಮಿ', 'ಇಮಮರ್ಥಮವಗಚ್ಛಾಮಿ', 'ಘಟಮಹಂ ಸಂವೇದ್ಮಿ'– ಇತಿ ಸರ್ವೇಷಾಮಾತ್ಮಸಾಕ್ಷಿಕಃ ಪ್ರಸಿದ್ಧಃ"** (ಪು. ೯೬) ಎಂದು ಅಕ್ಷರಶಃ ಅದೇ ವಾಕ್ಯವನ್ನು ಅನುವಾದಮಾಡಿಕೊಂಡು ವಿವರಿಸಿರುತ್ತಾರೆ, 'ಇದನ್ನು ನಾನು ಅರಿಯುತ್ತೇನೆ' ಎಂಬಲ್ಲಿ ಉಂಟಾಗುವ ಘಟಾದಿಗಳ ಜ್ಞಾನವೇ ಅನುಭವವೆಂದು ಅವರಿಬ್ಬರ ಅಭಿಪ್ರಾಯವೆಂಬುದು ಸ್ಪಷ್ಟವಾಗಿದೆ. ಆದರೆ ಸ್ವಪ್ನದಲ್ಲಿಯೂ ಎಚ್ಚರದಂತೆಯೇ 'ಇದನ್ನು ನಾನು ಅರಿಯುತ್ತೇನೆ' ಎಂಬ ಹುಸಿಯ ಅನುಭವವಾಗುತ್ತದೆ. ಈ ಎರಡು ಅವಸ್ಥೆಗಳಲ್ಲಿಯೂ ತೋರುವ ಜ್ಞಾತೃಜ್ಞಾನಜ್ಞೇಯಗಳ ರಾಶಿಯಾದ ಅವಸ್ಥೆಗಳನ್ನು ಬೆಳಗುವ ಅನುಭವವು ಯಾವದು ? ಅದೂ ಎಚ್ಚರದಲ್ಲಿ ಅಥವಾ ಸ್ವಪ್ನದಲ್ಲಿ ಉಂಟಾಗುವ ಜ್ಞಾನದಂತೆ ಹುಟ್ಟಿಹೋಗುವ ಅರಿವೆ ? ಈ ವಿಷಯವನ್ನು ಶ್ರೀಭಾಷ್ಯಕಾರರು ವಿಚಾರಮಾಡಿಲ್ಲ.

(೬) "ಆತ್ಮನು ದೇಹೇಂದ್ರಿಯಮನಃಪ್ರಾಣವಿಜ್ಞಾನಗಳಿಗಿಂತ ವಿರುದ್ಧ ವಾಗಿ (ಪ್ರತೀಪತಯಾ) ಜ್ಞಾನಾಶ್ರಯನಾಗಿ ತೋರುವದರಿಂದ ಪ್ರತ್ಯಗಾತ್ಮನೆನಿಸಿರು ತ್ತಾನೆ. ಅವನು ನೇರಾಗಿ ನೋಡುವದರಿಂದ ಅವನಿಗೇ **ಸಾಕ್ಷಿಯೆಂದು** ಹೆಸರು. ಯಾವಯಾವದು ತೋರುತ್ತದೆಯೋ ಅದೆಲ್ಲವೂ ನಾನು ಎಂಬ ಬೆಳಗುತ್ತಿರುವ ಆತ್ಮನಿಗೇ ತೋರುತ್ತಿರುವದೆಂಬುದು ಒಬ್ಬೊಬ್ಬನಿಗೂ ಅನುಭವದಲ್ಲಿದೆ" (ಆ. ಸಿ. ೨೬) ಎಂದು **ಯಾಮುನಾಚಾರ್ಯರು** ಬರೆದಿರುವದನ್ನೇ ಅನುಸರಿಸಿ **ರಾಮಾನುಜಾಚಾರ್ಯರೂ** "ಆತ್ಮನು ತನಗೆತಾನು 'ನಾನು' ಎಂದೇ ಬೆಳಗುತ್ತಿರುತ್ತಾನೆ; ಜ್ಞಾನವೂ ಅವನಿಗೆ ಅಧೀನವಾಗಿ ಬೆಳಗುತ್ತಿರುತ್ತದೆ ; ಆದ್ದರಿಂದ ಅವನು ಜ್ಞಾತೃವೇ, ಜ್ಞಪ್ತಿಮಾತ್ರವಲ್ಲ" (ಪು. ೧೧೬–೧೧೭) ಎಂದೂ 'ಜ್ಞಾತೃತ್ವವೆಂದರೆ ಜ್ಞಾನಗುಣಕ್ಕೆ ಆಶ್ರಯವಾಗಿರುವದೇ; ಆ ಜ್ಞಾನವು ಇವನಿಗೆ ಸ್ವಭಾವವಾಗಿರುವದ ರಿಂದ ನಿತ್ಯಕರ್ಮವಶದಿಂದಾಗುವ ಸಂಕೋಚವಿಕಾಸವುಳ್ಳದ್ದು' (ಪು. ೧೧೦,೧೧೧) ಎಂದೂ ಬರೆದಿರುತ್ತಾರೆ. **'ಸಾಕ್ಷಿತ್ವವೆಂದರೆ ಸಾಕ್ಷಾಜ್ಜ್ಞಾತೃತ್ವವೇ'** (ಪು. ೧೨೩) ಎಂದಿರುತ್ತಾರೆ. 'ನಾನು ಇದನ್ನು ಅರಿಯುತ್ತಿದ್ದೇನೆ' ಎಂದು ಯಾವ ಅನುಭವ ದಲ್ಲಿದೆಯೋ ಆ ಅನುಭವವೂ ಜ್ಞಾತೃವೆ ? ಎಲ್ಲಾ ಪ್ರಾಣಿಗಳಲ್ಲಿಯೂ ಸಾಕ್ಷಿ ಯಾದ ಚೈತನ್ಯಸ್ವರೂಪನಾದ ದೇವನೊಬ್ಬನೇ ಇದಾನೆ– ಎಂಬ ಶ್ರುತಿಯಲ್ಲಿ ಹೇಳಿರುವ ಸಾಕ್ಷಿಯನ್ನು ಜ್ಞಾತೃವೆನ್ನಬಹುದೆ ? ಇದನ್ನು ಅನುಭವಾನುಸಾರವಾಗಿ ವಿಚಾರಿಸಿ ನಿಶ್ಚಯಿಸಬೇಕಾದದ್ದಿದೆ.

(೭) "ಸುಷುಪ್ತಿಯಲ್ಲಿಯೂ ಮುಕ್ತಿಯಲ್ಲಿಯೂ ಜ್ಞಪ್ತಿಮಾತ್ರವೇ ತೋರುತ್ತದೆ, ನಾನು ಎಂಬುದಾದರೋ ತೋರುವದಿಲ್ಲ"– ಎಂದು ಹೇಳಿದ್ದನ್ನು **"ಸುಷುಪ್ತಿಯಲ್ಲಿ ನಾನು ಎಂದು ಏಕರೂಪದಿಂದ ಎಚ್ಚರವಾಗುವವರೆಗೂ ಅಲ್ಲಿಯೂ ಆತ್ಮನು ತೋರುತ್ತಿರುವದರಿಂದ** ಹೊರಗಿನ ವಸ್ತುಗಳನ್ನು ಅನುಭವಿಸದೆ ಇರುವದರಿಂದಲೂ ತಮೋಗುಣವು ಕವಿದುಕೊಂಡಿರುವದರಿಂದಲೂ ವಿಂಗಡಿಸಿ ಸ್ಫುಟವಾಗಿ ಅದು ತೋರುವದಿಲ್ಲ. ನೀವು ಒಪ್ಪಿರುವ ಅನುಭೂತಿಯೂ ಹಾಗೇ ಅಲ್ಲವೆ, ಆಗ ತೋರುತ್ತಿರುವದು ? ನಿದ್ರಿಸಿ ಎಚ್ಚತ್ತವನು ಯಾವನೂ 'ನಾನಲ್ಲ, ಅರ್ಥಾಂತರವೂ ಅಲ್ಲ, ಮತ್ತೇನೆಂದರೆ ಅನುಭೂತಿಯೇ ಅಜ್ಞಾನಕ್ಕೆ ಸಾಕ್ಷಿಯಾಗಿ ಇರುತ್ತದೆ' ಎಂದು ಪರಾಮರ್ಶಿಸುವದಿಲ್ಲವಷ್ಟೆ ?" (ಆ. ಸಿ. ಪು. ೨೯) ಎಂದು **ಆತ್ಮಸಿದ್ಧಿ**ಯಲ್ಲಿ ಬರೆದಿರುವದನ್ನೇ ಅನುಸರಿಸಿ ರಾಮಾನುಜರೂ **"ತಮೋ ಗುಣಾಭಿಭವಾತ್ ಪರಾಗರ್ಥಾನುಭವಾಭಾವಾಚ್ಚ ಅಹಮರ್ಥಸ್ಯ ವಿವಿಕ್ತ ಸ್ಫುಟಪ್ರತಿಭಾಸಾಭಾವೇಽಪಿ ಆಪ್ರಬೋಧಾತ್ 'ಅಹಮ್' ಇತ್ಯೇಕಾಕಾರೇ ಣಾತ್ಮನಃ ಸ್ಫುರಣಾತ್ ಸುಷುಪ್ತಾವಪಿ ನಾಹಂಭಾವವಿಗಮಃ । ಭವದಭಿ ಮತಾಯಾ ಅನುಭೂತೇರಪಿ ತಥೈವ ಪ್ರಥೇತಿ ವಕ್ತವ್ಯಮ್ । ನ ಹಿ**

**ಸುಷುಪ್ತೋತ್ಥಿತಃ ಕಶ್ಚಿತ್ ಅಹಂಭಾವವವಿಯುಕ್ತಾರ್ಥಾನ್ತರಪ್ರತ್ಯನೀಕಾಕಾರಾ ಜ್ಞಪ್ತಿರಹಮಜ್ಞಾನಸಾಕ್ಷಿತಯಾ ಅವತಿಷ್ಠತ ಇತ್ಯೇವಂವಿಧಾಂ ಸ್ವಾಪಸಮಕಾಲಾನುಭೂತಿಂ ಪರಾಮೃಶತಿ । ಏವಂ ಹಿ ಸುಷುಪ್ತೋತ್ಥಿತಸ್ಯ ಪರಾಮರ್ಶಃ ಸುಖಮಹಮಸ್ವಾಪ್ಸಮಿತಿ ॥"** (ತಮೋಗುಣದಿಂದ ತಿರಸ್ಕೃತವಾಗಿರುವದರಿಂದಲೂ ಹೊರಗಿನ ಅರ್ಥದ ಅನುಭವವಿಲ್ಲವಾದ್ದರಿಂದಲೂ ಅಹಮರ್ಥವು ವಿಂಗಡವಾಗಿ ಸ್ಫುಟವಾಗಿ ತೋರದೆ ಇದ್ದರೂ ಎಚ್ಚರವಾಗುವವರೆಗೂ 'ನಾನು' ಎಂದು ಒಂದೇ ಆಕಾರದಿಂದ ಆತ್ಮನು ತೋರುತ್ತಿರುವದರಿಂದ ಸುಷುಪ್ತಿಯಲ್ಲಿಯೂ ಅಹಂಭಾವವು ಹೋಗಿರುವದಿಲ್ಲ. ನಿನಗೆ ಒಪ್ಪಾಗಿರುವ ಅನುಭೂತಿಗೂ ಹಾಗೆಯೇ ತೋರಿದೆ- ಎಂದು ಹೇಳಬೇಕು. ನಿದ್ರೆಯಿಂದೆದ್ದವನು 'ಅಹಂಭಾವವಿಯುಕ್ತವಾದ ಮತ್ತೊಂದು ಅರ್ಥಕ್ಕೆ ಪ್ರತ್ಯನೀಕವಾದ ಜ್ಞಪ್ತಿರೂಪವಾದ ನಾನು ಅಜ್ಞಾನಸಾಕ್ಷಿಯಾಗಿರುತ್ತದೆ' ಎಂದು ಯಾವನೂ ತಿಳಿಯುವದಿಲ್ಲವಷ್ಟೆ ? 'ನಾನು ಸುಖವಾಗಿ ನಿದ್ರಿಸಿದೆನು' ಎಂದಿಂತೇ ಅಲ್ಲವೆ, ನಿದ್ರೆಯಿಂದೆಚ್ಚತ್ತವನ ಪರಾಮರ್ಶವು?) ಎಂದು (ಪು. ೧೪೯-೧೫೦) ಆತ್ಮಸಿದ್ಧಿಯ ಅಕ್ಷರವಿನ್ಯಾಸವನ್ನೇ ಹಿಡಿದು ಬರೆದಿರುತ್ತಾರೆ.

ಇಲ್ಲಿ **ಅನುಶಾಂಕರರು** 'ನಾನು ಏನೂ ಅರಿಯಲಿಲ್ಲ' ಎಂಬ ಪರಾಮರ್ಶದ ಸುಷುಪ್ತಿಯಲ್ಲಿ 'ಭಾವರೂಪಾಜ್ಞಾನದ ಅನುಭವವಿತ್ತು'-ಎಂದು ಕಲ್ಪಿಸುವಂತೆಯೇ ಯಾಮುನರೂ ರಾಮಾನುಜರೂ 'ನಾನು ನಿದ್ರಿಸಿದೆನು ಎಂಬ ಪರಾಮರ್ಶದಿಂದ ನಾನು ಎಂಬ ರೂಪವೂ ನಿದ್ರಾವಸ್ಥೆಯಲ್ಲಿ ಉದ್ದಕ್ಕೆ ಇರುತ್ತದೆ' ಎಂದು ಕಲ್ಪಿಸಿರುತ್ತಾರೆ. ಎಚ್ಚರಕನಸುಗಳಿಗೆ ಕಾರ್ಯಕಾರಣಸಂಬಂಧವನ್ನು ಜನರು ಕಲ್ಪಿಸಿದರೂ ಎಚ್ಚರದಕಾಲದ ಅನುಭವವು ಸ್ವಪ್ನದಲ್ಲಿರುವದಿಲ್ಲವೆಂಬುದು ನಮ್ಮೆಲ್ಲರ ಅನುಭವ. ಇದರಂತೆಯೇ ಎಚ್ಚರದ ಪರಾಮರ್ಶವಲ್ಲಿ 'ಈವರೆಗೆ ನಾನು ನಿದ್ರಿಸಿದೆನು' ಎಂಬ ರೂಪದ ಪ್ರವೃತ್ತಿಯಾದರೂ ಸುಷುಪ್ತಿಯಲ್ಲಿ ಕಾಲವಾಗಲಿ, ನಾನು ಎಂಬ ಆಕಾರದ ತೋರಿಕೆಯಾಗಲಿ ಆಗ್ಗೆ ಯಾರಿಗೂ ಇರುವದಿಲ್ಲವೆಂಬುದೂ ಎಲ್ಲರ ಅನುಭವದಲ್ಲಿದೆ. ಪರಾಮರ್ಶದಿಂದ ಅನುಭವವನ್ನು ಕಲ್ಪಿಸುವದಾದರೆ ಕನಸಿನಲ್ಲಿಯೂ ತತ್ಕಾಲಕ್ಕೆ ಇದು ಎಚ್ಚರವೆಂದೂ ಇದರ ಹಿಂದೆ ಸ್ವಪ್ನಸುಷುಪ್ತಿಗಳೂ ಇದ್ದವೆಂದೂ ಪರಾಮರ್ಶವುಂಟಾಗುತ್ತದೆ. ಅಯಥಾರ್ಥಸ್ಮೃತಿಗಳು ಆಗುತ್ತಿರುವದೂ ಎಲ್ಲರ ಅನುಭವದಲ್ಲಿದೆ. ಎಚ್ಚತ್ತಾಗ ನಾನು ಎಂಬ ಆಶ್ರಯವಿಲ್ಲದೆ ಪರಾಮರ್ಶವೇ ಆಗಲಾರದಾದ್ದರಿಂದ ಈ ನಾನು ಎಂಬ ಪರಾಮರ್ಶಾಂಶವು ಎಚ್ಚರಕ್ಕೇ ಸೇರಿದ್ದು ಎಂದು ತೀರ್ಮಾನಿಸುವದೇ ಯುಕ್ತ. ಸುಷುಪ್ತಿಯ ಅನುಭವವನ್ನು ವರ್ಣಿಸುವದಕ್ಕೆ ಎಚ್ಚರದಲ್ಲಿ 'ನಾನು' ಎಂದು ಹೇಳಲೇಬೇಕೆಂಬುದು ಕನಸಿನ ಪರಾಮರ್ಶದಿಂದಲೇ ಗೊತ್ತಾಗುತ್ತದೆ, ಕನಸಿನಲ್ಲಿ ಬೇರೊಂದು 'ನಾನು' ಎಂಬ ಅನುಭವಾಶ್ರಯವಿದ್ದಿತೆಂಬುದು ಎಲ್ಲರಿಗೂ ಗೊತ್ತಿದ್ದರೂ 'ಕನಸು ನನ್ನ ಅನುಭವ' ಎಂದು ಹೇಳುವ

ದಿಲ್ಲವೆ ? ಅಷ್ಟುಮಾತ್ರದಿಂದ ಎಚ್ಚರಕನಸುಗಳೆರಡಕ್ಕೂ ನಾಸು ಎಂಬಾಕಾರವು ಏಕರೂಪವಾಗಿರುತ್ತದೆ- ಎಂದು ತೀರ್ಮಾನಿಸಬಹುದೆ ? ಈ ಶಂಕೆಯನ್ನು ಶ್ರೀಭಾಷ್ಯಕಾರರು ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

(೮) **ಚಿದಚಿದ್ವಿಶಿಷ್ಟಚೈತನ್ಯವೇ ಬ್ರಹ್ಮ**- ಎಂಬುದು ವಿಶಿಷ್ಟಾದ್ವೈತದ ಅಭ್ಯುಪಗಮ. ಚಿತ್ತಿಗೆ ಅಚಿದ್ವಸ್ತುವು ಶರೀರವಾಗಿರುವಂತೆ ಚಿದ್ವಸ್ತುವೂ ಬ್ರಹ್ಮ ಚೈತನ್ಯಕ್ಕೆ ಶರೀರವು- ಎಂದು ರಾಮಾನುಜರು ಹೇಳುತ್ತಾರೆ. **'ಸ್ಥೂಲಸೂಕ್ಷ್ಮ ಚಿದಚಿತ್ಪ್ರಕಾರಕಂ ಬ್ರಹ್ಮೈವ ಕಾರ್ಯಂ ಕಾರಣಂ ಚ ಇತಿ ಬ್ರಹ್ಮೋಪಾದಾನಂ ಜಗತ್ । ಸೂಕ್ಷ್ಮಚಿದಚಿದ್ವಸ್ತುಶರೀರಕಂ ಬ್ರಹ್ಮೈವ ಕಾರಣಮ್'** (ಪು. ೨೭೩-೨೮೧) ಎಂದು ಅವರು ಬರೆದಿರುತ್ತಾರಷ್ಟೆ ? ಇಲ್ಲಿ ಬ್ರಹ್ಮವೇ ಕಾರಣ, ಬ್ರಹ್ಮವೇ ಕಾರ್ಯ. ಹೀಗಿರುವಲ್ಲಿ ಬ್ರಹ್ಮವು ಜಗತ್ತಿಗೆ ಉಪಾದಾನವೆಂದರೆ ಹೇಗೆ ? ಭೋಕ್ತೃಭೋಗ್ಯನಿಯಂತೃರೂಪವಾದ ಒಟ್ಟೀ ಜಗತ್ತೆಂದಾದರೆ ಜಗತ್ತೇ ಜಗತ್ತಿಗೆ ಕಾರಣವೆಂದಾಗುವದು ; ಇದಿಷ್ಟೂ ಸೇರಿ ಬ್ರಹ್ಮವೆಂದಾದರೆ ಬ್ರಹ್ಮವೇ ಬ್ರಹ್ಮಕ್ಕೆ ಕಾರಣವಾಗುವದು ; ಚಿದಚಿತ್ತುಗಳ ವಿಶೇಷ್ಯರೂಪವಾದ ಚೈತನ್ಯವೇ ಬ್ರಹ್ಮವೆಂದಾದರೆ ಅದು ನಿರ್ವಿಕಾರವಾಗಿರುವದರಿಂದ ಕಾರ್ಯವೂ ಅಲ್ಲ, ಕಾರಣವೂ ಅಲ್ಲ- ಎಂದಾಗುವದು ! ಈ ಕಷ್ಟದಿಂದ ಪಾರಾಗುವದು ಹೇಗೆ ? ಇದಲ್ಲದೆ ಚಿದಚಿದ್ವಿಶಿಷ್ಟವಾದ ಬ್ರಹ್ಮವು ಚೈತನ್ಯವೆಂದರೆ ಜ್ಞಾನರೂಪನಾದ ಜೀವನಿಗೂ ಜ್ಞಾನರೂಪವಾದ ಬ್ರಹ್ಮಕ್ಕೂ ಸ್ವರೂಪದಲ್ಲಿ ಯಾವ ಭೇದವಿದೆ ?- ಈ ಶಂಕೆಗಳಿಗೆ ಸಿದ್ಧಾಂತದಲ್ಲಿ ಪರಿಹಾರವಿಲ್ಲವೆಂದು ತೋರುತ್ತದೆ. ಇದೆಲ್ಲ ಶಾಸ್ತ್ರ ಪ್ರಮಾಣದಿಂದ ಒಪ್ಪಬೇಕಾದದ್ದು ಎಂದರೆ ಚಿದ್ದ್ರವ್ಯಕ್ಕಿಂತ ಬೇರೆಯಾದ ಚೈತನ್ಯ ಪದಾರ್ಥವನ್ನು ನಾವು ಮನಸ್ಸಿಗೆ ತಂದುಕೊಳ್ಳುವದಕ್ಕೆ ಆದರೇ ಅಲ್ಲವೆ, ಶಾಸ್ತ್ರದಲ್ಲಿ ಶ್ರದ್ಧೆಯುಂಟಾಗಬೇಕು ?- ಈ ಶಂಕೆಗೂ ಇಲ್ಲಿ ಪರಿಹಾರವು ಕಾಣುತ್ತಿಲ್ಲ.

(೯) ಅದ್ವೈತಿಗಳು ಪ್ರಪಂಚವು ಮಿಥ್ಯೆ- ಎಂದು ಹೇಳುತ್ತಿರುವದು ಈ ಸಿದ್ಧಾಂತಕ್ಕೆ ವಿರೋಧವಾಗಿರುತ್ತದೆ. ಅವಿದ್ಯೆ ಅಥವಾ ಮಾಯೆ- ಎಂಬ ಸದಸದನಿರ್ವಚನೀಯಪದಾರ್ಥವು ಜಗದ್ಭ್ರಮೆಗೆ ಕಾರಣವೆಂದು ಅವರು ಶಾಸ್ತ್ರಯುಕ್ತಿಗಳಿಂದ ಸಾಧಿಸುವದಕ್ಕೆ ಹೊರಟಿರುತ್ತಾರೆ. ಅದನ್ನು ಖಂಡಿಸಿ ತಮ್ಮ ಸಿದ್ಧಾಂತವನ್ನು ಸ್ಥಾಪಿಸುವದು ಅವಶ್ಯವಾದ್ದರಿಂದ ರಾಮಾನುಜರು **ಭಾಸ್ಕರಾಚಾರ್ಯರ** ವಿಚಾರಸರಣಿಯನ್ನನುಸರಿಸಿ **ಮಾಯೆಶಬ್ದಕ್ಕೆ** ವಿಚಿತ್ರಾರ್ಥಗಳನ್ನು ಸೃಷ್ಟಿಸುವದು ಎಂಬರ್ಥವನ್ನು ಮಾಡಿ 'ಸ್ವಪ್ನರೂಪವಾದ ಆಶ್ಚರ್ಯ'ವೆಂಬರ್ಥ (ಪು.೨೨೭), 'ಪ್ರಕೃತಿ' ಎಂಬ ಒಂದು ಅರ್ಥ (ಪು. ೨೩೬, ೨೩೭), 'ಜ್ಞಾನ'ವೆಂದು ಒಂದುಕಡೆ (೧-೧-೨೧)- ಹೀಗೆ ಬೇರೆಬೇರೆಯ ಅರ್ಥಗಳನ್ನು ಕಲ್ಪಿಸಿರುತ್ತಾರೆ. 'ಅನಾದಿ ಮಾಯಯಾ ಸುಪ್ತಃ' ಎಂಬ **ಗೌಡಪಾದಕಾರಿಕೆಯನ್ನು** ಶ್ರುತಿಯೆಂದು ಭ್ರಮಿಸಿ

ಅದರ ಉತ್ತರಾರ್ಧದಲ್ಲಿರುವ 'ಅಜಮನಿದ್ರಸ್ವಪ್ನಮದ್ವೈತಮ್' ಎಂಬ ವಿಶೇಷಣವನ್ನು ಕಡೆಗಣಿಸಿ ಮಾಯಾಶಬ್ದಕ್ಕೆ ಅರ್ಥಾಂತರವನ್ನು ಕಲ್ಪಿಸಿರುತ್ತಾರೆ. ಹೀಗೆಯೇ **'ಅವಿದ್ಯೆ' ಎಂಬ ಶಬ್ದಕ್ಕೆ 'ಕರ್ಮಪ್ರವಾಹ'** (ಪು. ೧೦೨) ಎಂಬ ಅರ್ಥವನ್ನೂ, 'ಅನಾತ್ಮದಲ್ಲಿ ಆತ್ಮಬುದ್ಧಿ' ಎಂಬರ್ಥವನ್ನೂ (ಪು. ೧೨೭-೧೪೯) ಬರೆದಿರುತ್ತಾರೆ. ಹೀಗೆ ಸ್ವಸಿದ್ಧಾಂತರಕ್ಷಣೆಗೆ ಶಬ್ದಾರ್ಥವನ್ನು ಮಾರ್ಪಡಿಸುವದು ಎಷ್ಟುಮಟ್ಟಿಗೆ ಯುಕ್ತ ?- ಎಂಬುದು ವಿಚಾರಣೀಯವಾಗಿದೆ.

ಇನ್ನು ಮಿಥ್ಯಾವಸ್ತುವಿನ ಖ್ಯಾತಿಯನ್ನು ಅನುಶಾಂಕರರು ಅನಿರ್ವಚನೀಯ ವಸ್ತುವಿಗೆ ಉಪಯೋಗಿಸುತ್ತಾರೆಂಬ ಭೀತಿಯಿಂದ ಅನ್ಯಥಾಖ್ಯಾತಿಯನ್ನು ಒಂದು ಕಡೆ (ಪು. ೨೨೧), ಯಥಾರ್ಥಖ್ಯಾತಿಯನ್ನು ಒಂದುಕಡೆ (೨೩೫)- ಹೀಗೆ ವಿಕಲ್ಪದಿಂದ ತಮ್ಮ ಮತವಾಗಿ ಬರೆದುಕೊಂಡಿರುತ್ತಾರೆ. ವಸ್ತುವಿನಲ್ಲಿ ವಿಕಲ್ಪ ವಿರಲಾರದೆಂಬ ನ್ಯಾಯವನ್ನೇ ಇಲ್ಲಿ ಕೈಬಿಟ್ಟಂತಾಗಿದೆ.

## ನಿಯೋಗವಾದಖಂಡನ

(೧೦) ಜಿಜ್ಞಾಸಾಧಿಕರಣಕ್ಕೆ ಪೂರ್ವಪಕ್ಷವಾಗಿ ಇಲ್ಲಿ ಕಾರ್ಯವೇ ವಾಕ್ಯಾರ್ಥವೆಂಬ ವಾದವನ್ನು ಅನುವಾದಮಾಡಿಕೊಂಡು ಖಂಡಿಸಿರುತ್ತದೆ. ಭಾಸ್ಕರಾಚಾರ್ಯರು ನಿಯೋಗವಾದವನ್ನು ನಿರಾಕರಿಸಿ ಉಪಾಸನಾವಿಧಿಯಿಂದಲೇ ಜಿಜ್ಞಾಸೆಯು ಪ್ರಾರಂಭವಾಗಬಹುದೆಂತಲೂ ಉಪಾಸನೆಯಿಂದ ಸಂತುಷ್ಟನಾದ ಪರಮೇಶ್ವರನೇ ಫಲವನ್ನು ಕೊಡುವನೆಂತಲೂ ಮಾಡಿದ್ದ ತೀರ್ಮಾನವನ್ನೇ **ವೇದಾರ್ಥಸಂಗ್ರ**ಹದಲ್ಲಿಯೂ ಅನುಸರಿಸಿರುತ್ತದೆ. ಈಶ್ವರನು ಫಲದಾತೃವೆಂಬ ವಿಶೇಷವು ಉಪಾಸನಾಮತದಲ್ಲಿದ್ದರೂ ಉಪಾಸನಾಕ್ರಿಯಾಸಾಧ್ಯವಾದದ್ದು ಕರ್ಮದಿಂದ ಸಾಧ್ಯವಾದ ಫಲದಂತೆ ಪರಿಚ್ಛಿನ್ನವೂ ಕ್ಷಯಿಷ್ಣುವೂ ಆಗಬೇಕಲ್ಲವೆ ?- ಎಂಬ ಆಕ್ಷೇಪಕ್ಕೆ ಈ ಎರಡು ಪ್ರಸ್ಥಾನಗಳಲ್ಲಿಯೂ ಸಮಾಧಾನಕರವಾದ ಪರಿಹಾರವು ದೊರಕುವಂತಿಲ್ಲ. 'ಇದು ಶಾಸ್ತ್ರಪ್ರಮಾಣಗಮ್ಯವಾದ್ದರಿಂದ ಹೀಗೆಂದು ನಂಬಬೇಕು' ಎಂಬುದೊಂದೇ ಇಲ್ಲಿರುವ ಉತ್ತರವು.

'ಬ್ರಹ್ಮಜಿಜ್ಞಾಸಾ' ಎಂಬ ವಾಕ್ಯದಲ್ಲಿ 'ಬ್ರಹ್ಮಣಃ' (ಬ್ರಹ್ಮದ) ಎಂಬುದು ಕರ್ಮಣಿಷಷ್ಠಿಯೇ, ಶೇಷಷಷ್ಠಿಯಲ್ಲ- ಎಂಬುವನ್ನು ತೋರಿಸುವದಕ್ಕೆ ಶಂಕರರಂತೆಯೇ ರಾಮಾನುಜರೂ (ಪು. ೩) ಪ್ರಯತ್ನಿಸಿದ್ದಾರೆ. ಕರ್ಮವು ಕರ್ತೃವಿಗೆ ಈಪ್ಸಿತತಮವಾಗಿರಬೇಕೆಂಬುದು ವ್ಯಾಕರಣದ ನಿಯಮ. 'ಇಚ್ಛೆಗೆ ಇಚ್ಛಿಸಲ್ಪಡುವವಸ್ತುವೇ ಮುಖ್ಯವಾದ್ದರಿಂದ ಇಚ್ಛಿಸಲ್ಪಡುವ ಜ್ಞಾನವನ್ನೇ ಇಲ್ಲಿ ವಿಧಿಸಿರುತ್ತದೆ' (ಪು. ೫) ಎಂದು ರಾಮಾನುಜರೂ ಬರೆದಿರುತ್ತಾರೆ. ಇಲ್ಲಿ ಜ್ಞಾನವು ಅವರಿಗೆ ಸಮ್ಮತವಾದ ಉಪಾಸನೆಯಲ್ಲವಾದ್ದರಿಂದ – ಉಪಾಸನೆಯನ್ನು ಮುಖ್ಯಕರ್ಮವಾಗಿಟ್ಟುಕೊಳ್ಳದೆ- ಶಂಕರರಂತೆ ಇಲ್ಲಿ ಬ್ರಹ್ಮದ ಜ್ಞಾನವನ್ನು ಮಾತ್ರ ಸೂತ್ರಕಾರರು ಪ್ರತಿಜ್ಞೆಮಾಡಿದ್ದೇಕೆ ?- ಎಂಬ ಶಂಕೆಯು ಎದ್ದುಕೊಳ್ಳುವದಕ್ಕೆ ಅವಕಾಶವಿದೆ.

# ಉಪಸಂಹಾರ

೧೩. ಶ್ರೀಭಾಷ್ಯವನ್ನು ಓದುವದಕ್ಕೆ ಮುಂಚೆ ವಾಚಕರು **ವೇದಾರ್ಥ ಸಂಗ್ರಹಪರಿಚಯವ**ನ್ನು ತಪ್ಪದೆ ಮಾಡಿಕೊಂಡಿರಬೇಕು. ಅಲ್ಲಿ ಹೇಳಿರುವಂತೆ ವೇದಾಂತದಲ್ಲಿ ಭಕ್ತಿಗೇ ಹೆಚ್ಚಿನ ಸ್ಥಾನವಿದೆ ಎಂಬುದನ್ನು ಮನಗಾಣಿಸುವದಕ್ಕೆ ಪ್ರಯತ್ನಿಸಿರುವವರಲ್ಲಿ ಶ್ರೀರಾಮಾನುಜಾಚಾರ್ಯರಿಗೆ ಅಗ್ರಸ್ಥಾನವಿದೆ. ಅವರ ಉಪದೇಶದ ಪೂರ್ಣಲಾಭವು ಉಂಟಾಗಬೇಕಾದರೆ ಸಾಧನಪ್ರಸ್ಥಾನವಾದ ಭಗವದ್ಗೀತೆಯ ಭಾಷ್ಯವನ್ನೂ ಓದಬೇಕಾದದ್ದು ಅತ್ಯವಶ್ಯ. ವೇದಾರ್ಥಸಂಗ್ರಹವನ್ನು ಪ್ರಕಟಿಸಿ ಹತ್ತುವರ್ಷಗಳಾದರೂ ಶ್ರೀಭಾಷ್ಯವನ್ನು ಅನುವಾದಿಸುವ ಸುಯೋಗವು ನನಗೆ ಈಗತಾನೆ ಬಂದಿದೆ. ಗ್ರಂಥದ ಮೂಲ, ಅರ್ಥ, ಟಿಪ್ಪಣಿ, ಪರಿಶಿಷ್ಟ- ಮುಂತಾದ ಸೌಕರ್ಯಗಳಿಂದೊಡಗೂಡಿ ಇದನ್ನು ಶ್ರೀಶಂಕರಾಚಾರ್ಯರ ಕೃತಿಗಳ ಶೈಲಿಯಲ್ಲಿಯೇ ಅಚ್ಚಿಗೆ ಸಜ್ಜುಗೊಳಿಸಿರುತ್ತೇನೆ. ಟಿಪ್ಪಣಿಯಲ್ಲಿ ವಿಷಯವಿಶದೀಕರಣಕ್ಕಾಗಿ **ತತ್ತ್ವಪ್ರಕಾಶಿಕೆ**ಯನ್ನೇ ಅಲ್ಲದೆ, ಪೂನಾ ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ ಶ್ರೀಯುತ **ರಘುನಾಥ ದಾಮೋದರ ಕೆರಮುರಕರ್** ಎಂಬವರು ರಚಿಸಿರುವ ಇಂಗ್ಲಿಷು ಅನುವಾದದ ಸಹಾಯವನ್ನೂ ಅಲ್ಲಲ್ಲಿ ಪಡೆದಿರುತ್ತೇನೆ. ಗ್ರಂಥವನ್ನು ಪ್ರಕರಣಗಳಾಗಿ ವಿಂಗಡಿಸಿ ಅವನ್ನು ಖಂಡಗಳಾಗಿ ವಿಭಜಿಸಿ ತಲೆಬರಹಗಳನ್ನೂ ಜೋಡಿಸಿರುತ್ತೇನೆ. ಆದರೆ ಈ ಪ್ರಯತ್ನವು ಅಷ್ಟು ಸಫಲವಾಗಿದೆ ಎಂದು ನಾನು ಹೇಳಲಾರೆ. ಅಂತೂ ಒಟ್ಟುಗ್ರಂಥದ ಅನುವಾದದಲ್ಲಿ ಅಲ್ಲಲ್ಲಿ ಸ್ಖಾಲಿತ್ಯಗಳು ಇನ್ನೂ ಉಳಿದುಕೊಂಡಿವೆ. ಅಂಥವುಗಳನ್ನು ಗುಣಗ್ರಾಹಿಗಳಾದ ವಾಚಕರು ತೋರಿಸಿಕೊಟ್ಟರೆ ಮುಂದಿನ ಸಂಸ್ಕರಣದಲ್ಲಿ ಸರಿಪಡಿಸುವೆನು.

ಶ್ರೀಶಂಕರಾಚಾರ್ಯರ ಭಾಷ್ಯಗಳನ್ನು ಪ್ರಕಟಿಸಿದಂತೆ ಈ ಗ್ರಂಥವನ್ನೂ ಪ್ರಕಟಿಸುವದಕ್ಕೆ ಒಪ್ಪಿ ಈ ಭಾಷ್ಯಭಾಗವನ್ನು ಹೊರಕ್ಕೆ ತಂದಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಅಧಿಕಾರಿಗಳಿಗೂ, ಕೈಬರಹಪ್ರತಿಯನ್ನು ಶೋಧಿಸುವದು,ಅಚ್ಚಿನ ಕರಡುಗಳನ್ನು ತಿದ್ದುವದು- ಮುಂತಾದ ರೀತಿಯಿಂದ ಸಹಕರಿಸಿರುವ ಅಧ್ಯಾತ್ಮ ವಿದ್ಯಾನಿಲಯದ ಪಂಡಿತರಾದ ಅಧ್ಯಾತ್ಮವಿದ್ಯಾಪ್ರವೀಣ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳಿಗೂ ಗ್ರಂಥವನ್ನು ಪ್ರಕಟಿಸುವದಕ್ಕೆ ಮುದ್ರಣವ್ಯಯಕ್ಕಾಗಿ ಬೇಕಾದ ಧನದಲ್ಲಿ ಸ್ವಲ್ಪಭಾಗವನ್ನು ಔದಾರ್ಯದಿಂದ ಕೊಟ್ಟು ಪುಣ್ಯಭಾಗಿಗಳಾದ **ತೆಂಗಲಿ ಸಾಹುಕಾರ್ ಶ್ರೀ॥ ಟಿ. ಕೃಷ್ಣಸ್ವಾಮಿ ಅಯ್ಯಂಗಾರ್ಯರಿಗೂ** ಉಳಿದ ಮಹಾಶಯರುಗಳಿಗೂ ಶ್ರೀಮನ್ನಾರಾಯಣನು ತನ್ನ ಚರಣಾರವಿಂದದಲ್ಲಿ ಅಚಲಭಕ್ತಿಯನ್ನೂ ಐಹಿಕಾಭ್ಯುದಯವನ್ನೂ ಕರುಣಿಸಲೆಂದು ಪ್ರಾರ್ಥಿಸಿ ಈ ಪೀಠಿಕೆಯನ್ನು ಸಮಾಪ್ತಿಗೊಳಿಸುತ್ತೇನೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.

**ಅನುವಾದಕ.**

# ವಿಷಯಾನುಕ್ರಮಣಿಕೆ

ಕಂಸಗಳಲ್ಲಿ ಕೊಟ್ಟಿರುವದು ಪುಟಸಂಖ್ಯೆ.


| | ಪುಟ |
|---|---|
| ಮಂಗಲ | ೧ |
| ಪ್ರಕೃತಗ್ರಂಥಪ್ರಶಂಸೆ | ೧ |
| ಗ್ರಂಥಾರಂಭಪ್ರತಿಜ್ಞೆ | ೨ |

## ಜಿಜ್ಞಾಸಾಧಿಕರಣ

'ಅಥ', 'ಅತಃ' – ಈ ಪದಗಳ ಅರ್ಥ (೨) – 'ಬ್ರಹ್ಮಜಿಜ್ಞಾಸಾ' ಎಂಬುದರ ವಿವರಣೆ (೩) – ಸೂತ್ರವಾಕ್ಯಾರ್ಥ (೫) – ಪೂರ್ವಮೀಮಾಂಸೆಗೂ ಉತ್ತರಮೀಮಾಂಸೆಗೂ ಸಂಬಂಧ (೬) – ಮೀಮಾಂಸೆಯ ಅಸಾಧಾರಣಕ್ರಮ (೭) – ಕರ್ಮಕ್ಕೆ ಅನಿತ್ಯಫಲವೆಂದು ತಿಳಿದವನೂ ಧರ್ಮವಿಚಾರವನ್ನೇಕೆ ಮಾಡಬೇಕು ? (೧೧). ೨-೧೧

## ಲಘುಪೂರ್ವಪಕ್ಷ

ನಿಯತಪೂರ್ವವೃತ್ತವನ್ನೇ ಇಲ್ಲಿ ಹೇಳಬೇಕು. (೧೨) – ಭಾಸ್ಕರಮತಾನುಯಾಯಿಯ ಅಭಿಪ್ರಾಯ (೧೪) – ಅದರ ನಿರಾಕರಣೆ (೧೪) – ಚಿನ್ಮಾತ್ರಬ್ರಹ್ಮವಿಜ್ಞಾನದಿಂದ ಅವಿದ್ಯಾನಿವೃತ್ತಿ (೧೪) – ಯಜ್ಞಾದಿಗಳು ವಿವಿದಿಷೋತ್ಪತ್ತಿಗೆ ಕಾರಣ, ಫಲೋತ್ಪತ್ತಿಗಲ್ಲ (೧೫) – ಶಮಾದಿಗಳು ವಿದ್ಯೆಗೆ ಅಂತರಂಗಸಾಧನ (೧೬) – ಜನ್ಮಾಂತರದಲ್ಲಿ ಮಾಡಿದ ಕರ್ಮಗಳಿಂದ ವಿವಿದಿಷೆ (೧೬) – ವಾಕ್ಯಜನ್ಯಜ್ಞಾನದಿಂದ ಅವಿದ್ಯಾನಿವೃತ್ತಿ ; ವಾಕ್ಯಾರ್ಥಜ್ಞಾನಕ್ಕೆ ಶ್ರವಣಾದಿಗಳು ಬೇಕು (೧೭) – ಬ್ರಹ್ಮಸ್ವರೂಪಾಚ್ಛಾದಕಾವಿದ್ಯೆಯಿಂದಾಗಿರುವ ಭೇದಜ್ಞಾನವೇ ಬಂಧ (೧೮) – ತತ್ತ್ವಮಸ್ಯಾದಿವಾಕ್ಯಜನ್ಯಜ್ಞಾನದಿಂದ ಅದರ ನಿವೃತ್ತಿ (೧೯) ೧೪-೧೯

## ಲಘುಸಿದ್ಧಾಂತ

ವಾಕ್ಯಜನ್ಯಜ್ಞಾನಮಾತ್ರದಿಂದ ಅವಿದ್ಯಾನಿವೃತ್ತಿಯಾಗದು (೧೯) – ಭೇದವಾಸನಾವಾದಿಗಳ ಪಕ್ಷದಲ್ಲಿ ಜ್ಞಾನೋತ್ಪತ್ತಿಯಾಗಲಾರದು (೨೨) – ವೇದಾಂತದಲ್ಲಿ ಧ್ಯಾನಶಬ್ದವಾಚ್ಯವಾದ ಜ್ಞಾನವೇ ವಿಹಿತ (೨೨) – ಉಪಾಸನೆಯು ದರ್ಶನಸಮಾನಾಕಾರವಾದದ್ದು (೨೪) – ಈ ಸಿದ್ಧಾಂತಕ್ಕೆ ವಾಕ್ಯಕಾರನ ಸಮ್ಮತಿ (೨೬) – ಸಾಕ್ಷಾತ್ಕಾರರೂಪವಾದ ಧ್ರುವಾನುಸ್ಮೃತಿಯೇ ಭಕ್ತಿ (೨೯) – ಧ್ರುವಾನುಸ್ಮೃತಿಗೆ ಸಾಧನಗಳು (೩೦) – ಸಾಧನಗಳ ವಿಷಯಕ್ಕೆ ವಾಕ್ಯಕಾರನ ಉಕ್ತಿ (೩೧) – ಕರ್ಮಾನುಷ್ಠಾನದಿಂದ ವಿದ್ಯೋತ್ಪತ್ತಿ (೩೩) – ಬ್ರಹ್ಮಜಿಜ್ಞಾಸೆಗೆ ಧರ್ಮಜಿಜ್ಞಾಸೆಯ ಅಪೇಕ್ಷೆಯುಂಟೆಂಬುದಕ್ಕೆ ಯುಕ್ತ್ಯಂತರ (೩೫) ೧೯-೩೬

## ಬ್ರಹ್ಮಜಿಜ್ಞಾಸಾರಂಭದ ವಿಷಯಕ್ಕೆ ಮಹಾಪೂರ್ವಪಕ್ಷ

ಬ್ರಹ್ಮವೊಂದೇ ಪರಮಾರ್ಥ, ಮಿಕ್ಕವೆಲ್ಲವೂ ಅದರಲ್ಲಿ ಕಲ್ಪಿತ (೩೬)–ಮಿಥ್ಯಾತ್ವವೆಂದರೆ ಜ್ಞಾನನಿವರ್ತ್ಯತ್ವ (೪೧)– ಚಿನ್ಮಾತ್ರಬ್ರಹ್ಮವಾದಕ್ಕೆ ಪ್ರಮಾಣದ ಆಧಾರ– (೪೨)– ಬ್ರಹ್ಮಾತ್ಮೈಕತ್ವಜ್ಞಾನದಿಂದ ಅವಿದ್ಯಾನಿವೃತ್ತಿ (೪೩)– ಬ್ರಹ್ಮಾತ್ಮೈಕತ್ವ ಜ್ಞಾನಕ್ಕೆ ವಾಕ್ಯಪ್ರಮಾಣ (೪೪)– ಶಾಸ್ತ್ರವು ಪ್ರತ್ಯಕ್ಷವಿರುದ್ಧವಾಗಿ ಹೇಳಬಹುದೆ ? (೪೫)– ಶಾಸ್ತ್ರವು ಪ್ರತ್ಯಕ್ಷಕ್ಕಿಂತ ಪ್ರಬಲವೆಂಬುದು ಹೇಗೆ ? (೪೬)– ಕರ್ಮಶಾಸ್ತ್ರವು ಜ್ಞಾನಶಾಸ್ತ್ರದಿಂದ ಬಾಧ್ಯ (೪೭)– ಸಗುಣವಾಕ್ಯಗಳೂ ನಿರ್ಗುಣವಾಕ್ಯಗಳಿಂದ ಬಾಧ್ಯ (೪೮)– ಸತ್ಯಜ್ಞಾನಾನಂತತ್ವಗಳು ಬ್ರಹ್ಮದ ಗುಣಗಳಲ್ಲ (೪೯)– ಈ ಲಕ್ಷಣವಾಕ್ಯವು ಅಖಂಡೈಕರಸವಸ್ತುವನ್ನೇ ಹೇಳುತ್ತದೆ (೫೨)–ಲಕ್ಷಣವಾಕ್ಯದಲ್ಲಿ ಎಲ್ಲಾ ಪದಗಳಿಗೂ ಲಕ್ಷಣಾವೃತ್ತಿಯನ್ನು ಹೇಳಬೇಕಾದರೂ ದೋಷವಲ್ಲ (೫೩)– ಶಾಸ್ತ್ರವು ಪ್ರತ್ಯಕ್ಷವಿರುದ್ಧವೇ ಅಲ್ಲ (೫೫)– ಭೇದವೆಂಬುದು ದುರ್ನಿರೂಪ (೫೬)– ಸನ್ಮಾತ್ರವೆಂದರೆ ಅನುಭೂತಿಯೇ (೫೮)– ಅನುಭೂತಿಯೂ ಸನ್ಮಾತ್ರವೂ ಒಂದೇ ; ಸ್ವತಃಸಿದ್ಧ (೬೦)– ಸ್ವತಃಸಿದ್ಧಾನುಭವವಾದರೆ ಹೇಳಿದ ಶಂಕೆ (೬೧)– ಸ್ವಯಂಸಿದ್ಧಾನುಭವವಾದಿಯ ಪರಿಹಾರ (೬೨)– ಅನುಭೂತಿಯು ನಿತ್ಯ (೬೪)– ಅನುಭೂತಿಗೆ ನಾನಾತ್ವವೂ ಇರುವಂತಿಲ್ಲ (೬೫)– ಜ್ಞಾತೃತ್ವವೂ ಆತ್ಮನಿಗಿಲ್ಲ (೬೬)– ಬ್ರಹ್ಮಾತ್ಮೈಕತ್ವವನ್ನು ತಿಳಿಸುವದಕ್ಕೇ ಉಪನಿಷತ್ತುಗಳು ಹೊರಟಿವೆ (೬೯). ೩೬–೭೦

## ಮಹಾಸಿದ್ಧಾಂತ

ಚಿನ್ಮಾತ್ರಸ್ವರೂಪಬ್ರಹ್ಮೈಕ್ಯವಾದವು ಪ್ರಾಮಾಣಿಕವಲ್ಲ (೭೦)– ನಿರ್ವಿಶೇಷ ವಸ್ತುವಿಗೆ ಪ್ರಮಾಣವೇ ಇಲ್ಲ, ಅದು ಅನುಭವಮಾತ್ರಸಿದ್ಧವಲ್ಲ (೭೧)– ಶಬ್ದ ಪ್ರಮಾಣವು ಸವಿಶೇಷವಸ್ತುವನ್ನೇ ಹೇಳುತ್ತದೆ (೭೨)– ಪ್ರತ್ಯಕ್ಷವು ನಿರ್ವಿಶೇಷವಸ್ತುವಿಗೆ ಪ್ರಮಾಣವಲ್ಲ (೭೪)– ಭೇದಾಭೇದವಾದದ ನಿರಾಕರಣ (೭೫)– ಅನುಮಾನಕ್ಕೆ ಸವಿಶೇಷವಸ್ತುವೇ ವಿಷಯ (೭೬)– ಪ್ರತ್ಯಕ್ಷವು ಸನ್ಮಾತ್ರವಿಷಯವಲ್ಲ, ಭೇದವು ದುರ್ನಿರೂಪವಲ್ಲ (೭೮)– ವ್ಯಾವರ್ತಮಾನವಾದದ್ದು ಅಪರಮಾರ್ಥವೆನ್ನಲಾಗದು (೭೯)– ಅನುಭೂತಿಯ ವಿಷಯದಲ್ಲಿ ಸಿದ್ಧಾಂತ (೮೪)– ಸೌಷುಪ್ತಾನುಭವ (೯೧)– ಅನುಭೂತಿಯು ನಿರ್ವಿಕಾರವಲ್ಲ (೯೪)– ಅನುಭೂತಿಯು ನಿರ್ಧರ್ಮಕವಲ್ಲ (೯೫)– ಅನುಭೂತಿಯೇ ಆತ್ಮನಲ್ಲ (೯೬)– ಅಸ್ಮತ್ಪ್ರತ್ಯಯಗೋಚರಾತ್ಮನ ವಿಷಯ (೯೯)– ಅಹಮರ್ಥದ ಸ್ವಪ್ರಕಾಶತ್ವಕ್ಕೆ ದೀಪದೃಷ್ಟಾಂತ (೧೦೨)– ಸ್ವಯಂಪ್ರಕಾಶನಾದ ಆತ್ಮನು ಜ್ಞಾತೃವೇ, ಜ್ಞಾನಮಾತ್ರನಲ್ಲ (೧೦೪)– ಬರಿಯ ಜ್ಞಾನವು ಆತ್ಮನಲ್ಲ (೧೦೬) –ಅನುಭೂತಿಯಲ್ಲಿ ಜ್ಞಾತೃತ್ವವು ಕಲ್ಪಿತವಲ್ಲ (೧೦೬)– ಜ್ಞಾತೃತ್ವವು ಮಿಥ್ಯೆಯಲ್ಲ (೧೦೮)– ಅಹಂಕಾರವು ಜ್ಞಾತೃವಲ್ಲ (೧೦೯)– ಆತ್ಮನ ಜ್ಞಾತೃತ್ವದ ಸ್ವರೂಪ (೧೧೧)– ಚಿಚ್ಛಾಯಾಪತ್ತಿಯಿಂದ ಅಹಂಕಾರಕ್ಕೆ ಕರ್ತೃತ್ವವೆನ್ನುವದು ಸರಿಯಲ್ಲ (೧೧೯)– ಅಹಂಕಾರವು ಅನುಭೂತಿಯ ಅಭಿವ್ಯಂಜಕ ಎಂಬುದು ಸರಿಯಲ್ಲ (೧೧೩)– ಸುಷುಪ್ತಿಯಲ್ಲಿಯೂ ಅಹಂಭಾವವು ಹೋಗುವದಿಲ್ಲ (೧೧೯)– ಪೂರ್ವಪಕ್ಷಿಯ ಪ್ರಕ್ರಿಯೆಯಂತೆಯೂ ನಿದ್ರೆಯಲ್ಲಿ ಜ್ಞಾತೃತ್ವ ಇದೆ (೧೨೨)–ಮೋಕ್ಷಾವಸ್ಥೆಯಲ್ಲಿಯೂ ಅಹಮರ್ಥ

ವಿದೆ (೧೨೩)–ಭಗವಂತನು ಅಹಂಕಾರವನ್ನು ಕ್ಷೇತ್ರದಲ್ಲಿ ಸೇರಿಸಿರುವದೇಕೆ? (೧೨೭)–ಪ್ರತ್ಯಕ್ಷವು ದೋಷಮೂಲವೆ, ಶಾಸ್ತ್ರವು ನಿರ್ದೋಷವೆ ? (೧೨೯)– ಅಸತ್ಯಕಾರಣದಿಂದ ಪರಮಾರ್ಥಜ್ಞಾನವುಂಟಾಗಲಾರದು (೧೩೪)– ಶಾಸ್ತ್ರದ ಅಸತ್ಯತ್ವದ ವಿಷಯಕ್ಕೆ ಶಂಕಾಪರಿಹಾರಗಳು (೧೩೮)– ವೇದಾಂತವಾಕ್ಯಗಳು ನಿರ್ವಿಶೇಷವಸ್ತುಪರವಲ್ಲ (೧೩೯)–ಸ್ಮೃತಿಪುರಾಣಗಳಲ್ಲಿಯೂ ನಿರ್ವಿಶೇಷಜ್ಞಾನವೇ ಪರಮಾರ್ಥವೆಂದು ಹೇಳಿಲ್ಲ (೧೫೫)– ಸ್ಮೃತಿಪುರಾಣವಚನಗಳಿಂದ ಸಿದ್ಧವಾದ ಅರ್ಥ (೧೬೨)– ಪುರಾಣಶ್ಲೋಕಗಳಿಗೆ ಸರಿಯಾದ ಅರ್ಥ (೧೬೩)– ಶಾಸ್ತ್ರವು ನಿರ್ವಿಶೇಷಪರವಲ್ಲವೆಂಬುದರ ಉಪಸಂಹಾರ (೧೯೦). ೬೦–೧೯೦

## ಅವಿದ್ಯಾವಾದನಿರಾಸ

ಅವಿದ್ಯಾಶ್ರಯಾನುಪಪತ್ತಿ– (೧೯೧)– ತಿರೋಧಾನಾನುಪಪತ್ತಿ (೧೯೬)–ಭ್ರಾಂತ್ಯನುಪಪತ್ತಿ (೧೯೬)–ಅನಿರ್ವಚನೀಯತ್ವಾನುಪಪತ್ತಿ (೧೯೮)–ಪ್ರಮಾಣಾನುಪಪತ್ತಿಗಾಗಿ ಪೂರ್ವಪಕ್ಷಾನುವಾದ (೧೯೯)– ಸಿದ್ಧಾಂತ : ಅವಿದ್ಯೆಗೆ ಪ್ರತ್ಯಕ್ಷತ್ವಾನುಪಪತ್ತಿ (೨೦೫)– ಅನುಮಾನದಿಂದಲೂ ಅಜ್ಞಾನಸಿದ್ಧಿಯಾಗಲಾರದು (೨೧೩)– ಖ್ಯಾತಿಬಾಧಗಳಿಂದ ಅನಿರ್ವಚನೀಯೋತ್ಪತ್ತಿಸಿದ್ಧಿಯಾಗುವದು (೨೧೯)– ಅನಿರ್ವಚನೀಯಖ್ಯಾತಿಯಲ್ಲಿ ಬೇರೆಯ ದೋಷಗಳು (೨೨೧)– ಸತ್ಖ್ಯಾತಿಸಮರ್ಥನೆ (೨೨೩)– ಸ್ಮೃತಿಪುರಾಣಗಳಲ್ಲಿ ಅನಿರ್ವಚನೀಯಾವಿದ್ಯಾಪರವಲ್ಲವೆಂಬುದರ ಉಪಸಂಹಾರ (೨೪೭)–ಅವಿದ್ಯಾನಿವರ್ತಕಾನುಪಪತ್ತಿ (೨೫೦)– ಶ್ರುತಿಗಳಿಗೆ ಸಾಮರಸ್ಯ (೨೬೬)– ಅವಿದ್ಯಾನಿವೃತ್ತ್ಯನುಪಪತ್ತಿ (೨೮೧). ೧೯೧–೨೮೪

ಸಿದ್ಧಾಂತದ ಉಪಸಂಹಾರ ಪುಟ ೨೮೪–೨೮೫

## ಸೂತ್ರಕಾರರಿಗೆ ಸಮ್ಮತವಾದ ಸೂತ್ರಾರ್ಥಯೋಜನೆ

ಪೂರ್ವಪಕ್ಷ (೨೮೫)– ಸಿದ್ಧಾಂತ : ನಿಯೋಗವಾದ ಖಂಡನೆ (೨೮೯)– ಲೌಕಿಕವಾಕ್ಯಗಳಲ್ಲಿ ಕಾರ್ಯಾರ್ಥವ್ಯುತ್ಪತ್ತಿಯಿಲ್ಲ (೨೯೩)– ನಿಯೋಗವಾಕ್ಯದ ವಿಚಾರ (೨೯೬)– ಸ್ವಪಕ್ಷದ ಉಪಸಂಹಾರ (೨೯೯). ೨೮೫–೩೦೧

**ಪರಿಶಿಷ್ಟ** ಪುಟ ೩೦೨–೩೨೮

**ವೇದಾಂತದೀಪ (ಸ್ವತಂತ್ರಪುಟಗಳು)** ಪುಟ ೧– ೨೪

**ಶಬ್ದಾನುಕ್ರಮಣಿಕೆ** ಪುಟ ೨೫

# ಸಂಕೇತಗಳ ವಿವರಣೆ

| ಸಂಕೇತ | ವಿವರ |
|---|---|
| ಅ. ಶಿ. | ಅಥರ್ವಶಿರ ಉಪನಿಷತ್ತು |
| ಆತ್ಮ. | ಆತ್ಮೋಪನಿಷತ್ತು |
| ಆ. ಸಿ. | ಆತ್ಮಸಿದ್ಧಿ (ಯಾಮುನಾಚಾರ್ಯ ವಿರಚಿತ) |
| ಆದಿ. | ಆದಿಪರ್ವ (ಮಹಾಭಾರತ) |
| ಆಪ. ಶ್ರೌ. | ಆಪಸ್ತಂಬಶ್ರೌತಸೂತ್ರ |
| ಈ. | ಈಶಾವಾಸ್ಯೋಪನಿಷತ್ತು |
| ಋ. | ಋಗ್ವೇದ |
| ಐ. | ಐತರೇಯೋಪನಿಷತ್ತು |
| ಐ. ಆ. | ಐತರೇಯಾರಣ್ಯಕ |
| ಕ. ಕಾ. | ಕಾಠಕೋಪನಿಷತ್ತು |
| ಕೇ. | ಕೇನೋಪನಿಷತ್ತು |
| ಕೌ. | ಕೌಷೀತಕ್ಯುಪನಿಷತ್ತು |
| ಗಾರುಡ. | ಗಾರುಡಪುರಾಣ |
| ಗೀ. | ಭಗವದ್ಗೀತೆ |
| ಗೌ. ಕಾ. | ಗೌಡಪಾದೀಯಕಾರಿಕೆಗಳು |
| ಚೂ. | ಚೂಲಿಕೋಪನಿಷತ್ತು |
| ಛಾಂ. | ಛಾಂದೋಗ್ಯೋಪನಿಷತ್ತು |
| ಜಾ. | ಜಾಬಾಲೋಪನಿಷತ್ತು |
| ಜೈ. ಸೂ. | ಜೈಮಿನೀಯಸೂತ್ರಗಳು |
| ತ. ಪ್ರ. | ತತ್ತ್ವಪ್ರಕಾಶಿಕಾವ್ಯಾಖ್ಯಾನ |
| ತೈ. | ತೈತ್ತಿರೀಯೋಪನಿಷತ್ತು |
| ತೈ. ಆ. | ತೈತ್ತಿರೀಯಾರಣ್ಯಕಭಾಗ |
| ತೈ. ಆ. ಚಿತ್ತಿ. | ತೈತ್ತಿರೀಯಾರಣ್ಯಕ– "ಚಿತ್ತಿ" ಎಂಬ ನೂರನೆಯ ಪ್ರಶ್ನ. |
| ತೈ. ನಾ. | ತೈತ್ತಿರೀಯೋಪನಿಷತ್ತು– ನಾರಾಯಣಪನ್ನ |
| ತೈ. ಬ್ರಾ. | ತೈತ್ತಿರೀಯಬ್ರಾಹ್ಮಣ |

| ಸಂಕೇತ | ವಿವರ |
| --- | --- |
| ದ್ರ. ಭಾ. | ದ್ರವಿಡಾಚಾರ್ಯರ ಭಾಷ್ಯ |
| ನೈ. ಸಿ. | ನೈಷ್ಕರ್ಮ್ಯಸಿದ್ಧಿ (ಸುರೇಶ್ವರವಿರಚಿತ) |
| ಪಾ. | ಪಾಣಿನೀಯವ್ಯಾಕರಣಸೂತ್ರಗಳು |
| ಪ್ರ. | ಪ್ರಶ್ನೋಪನಿಷತ್ತು |
| ಬೃ. | ಬೃಹದಾರಣ್ಯಕೋಪನಿಷತ್ತು |
| ಬೃ. ಮಾ. | ಬೃಹದಾರಣ್ಯಕೋಪನಿಷತ್ತು– ಮಾಧ್ಯಂದಿನಪಾಠ |
| ಬ್ರ. ಸಿ. | ಬ್ರಹ್ಮಸಿದ್ಧಿ– ಮಂಡನಮಿಶ್ರಕೃತ |
| ಮನು. | ಮನುಸ್ಮೃತಿ |
| ಮುಂ. | ಮುಂಡಕೋಪನಿಷತ್ತು |
| ಯ. ಆ. | ಯಜುರ್ವೇದ ಆರಣ್ಯಕಭಾಗ |
| ವಾ. | ವಾಕ್ಯಕಾರರ ನಿರ್ವಚನ |
| ವಿ. ಧ. | ವಿಷ್ಣುಧರ್ಮೋತ್ತರಪುರಾಣ |
| ವಿ. ಪು. | ವಿಷ್ಣುಪುರಾಣ |
| ವೇ. ಸೂ. | ವೇದಾಂತಸೂತ್ರಗಳು– ಬಾದರಾಯಣಕೃತ |
| ಶತ. ಬ್ರಾ. | ಶತಪಥಬ್ರಾಹ್ಮಣ |
| ಶ್ರು. ಪ್ರ. | ಶ್ರುತಪ್ರಕಾಶಿಕಾವ್ಯಾಖ್ಯಾನ |
| ಶ್ವೇ. | ಶ್ವೇತಾಶ್ವತರೋಪನಿಷತ್ತು |
| ಸುಬಾಲ. | ಸುಬಾಲೋಪನಿಷತ್ತು |

॥ ಓಮ್ ॥

## ಶ್ರೀರಾಮಾನುಜವಿರಚಿತಂ

# ಶ್ರೀಭಾಷ್ಯಮ್

### ಮಂಗಲ

**ಅಖಿಲಭುವನಜನ್ಮಸ್ಥೇಮಭಙ್ಗಾದಿಲೀಲೇ**
**ವಿನತವಿವಿಧಭೂತವ್ರಾತರಕ್ಷೈಕದೀಕ್ಷೇ ।**
**ಶ್ರುತಿಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ**
**ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ ॥ ೧ ॥**

**ಭಾವಾರ್ಥ :–** ಇಡಿಯ ಜಗತ್ತಿನ ಜನ್ಮ, ಸ್ಥಿತಿ, ಪ್ರಲಯ–ಮುಂತಾದವುಗಳನ್ನು ಮಾಡುವದೆಂಬ ಲೀಲೆಯುಳ್ಳವನೂ, ನಮಸ್ಕರಿಸಿದ ಬಗೆಬಗೆಯ ಜೀವರ ಸಮೂಹವನ್ನು ರಕ್ಷಿಸುವದೆಂಬ ಒಂದೇ ದೀಕ್ಷೆಯುಳ್ಳವನೂ, ವೇದಾಂತದಲ್ಲಿ ಪ್ರಕಾಶಿತವಾಗಿರುವ ಬ್ರಹ್ಮವೂ ಆಗಿರುವ ಶ್ರೀನಿವಾಸನೆಂಬ ಪರಮ(ಪುರುಷ)ನಲ್ಲಿ ನನಗೆ ಭಕ್ತಿರೂಪವಾದ ಬುದ್ಧಿಯು ಇರಲಿ !

### ಪ್ರಕೃತಗ್ರಂಥಪ್ರಶಂಸೆ

**ಪಾರಾಶರ್ಯವಚಃಸುಧಾಮುಪನಿಷದ್ದುಗ್ಧಾಬ್ಧಿಮಧ್ಯೋದ್ಧೃತಾಂ**
**ಸಂಸಾರಾಗ್ನಿವಿದೀಪನವ್ಯಪಗತಪ್ರಾಣಾತ್ಮಸಞ್ಜೀವನೀಮ್ ।**
**ಪೂರ್ವಾಚಾರ್ಯಸುರಕ್ಷಿತಾಂ ಬಹುಮತಿವ್ಯಾಘಾತದೂರಸ್ಥಿತಾ-**
**ಮಾನೀತಾಂ ತು ನಿಜಾಕ್ಷರೈಃ ಸುಮನಸೋ ಭೌಮಾಃ ಪಿಬನ್ತ್ವನ್ವಹಮ್॥**

**ಭಾವಾರ್ಥ :–** ಉಪನಿಷತ್ತುಗಳೆಂಬ ಕ್ಷೀರಸಾಗರದೊಳಗಿನಿಂದ ಎತ್ತಿತೆಗೆದಿರುವದಾದ, ಸಂಸಾರಾಗ್ನಿಯಿಂದ ಬೆಂದು ಪ್ರಾಣವನ್ನು ಕಳೆದುಕೊಂಡಿರುವ ಆತ್ಮರುಗಳನ್ನು ಸಂಜೀವನಗೊಳಿಸುವದಾದ, ಪೂರ್ವಾಚಾರ್ಯರುಗಳು ರಕ್ಷಿಸಿಕೊಂಡುಬಂದಿರುವ, ಬಹುಜನವಾದಿಗಳ ವಿರುದ್ಧಮತಿಗಳ ಹೊಡೆತದಿಂದ ದೂರವಿರುವದೂ ಆಗಿರುವ, ಈಗ ನನ್ನ ಮಾತುಗಳಿಂದ ತಂದಿಟ್ಟಿರುವ, ಈ ಪಾರಾಶರ್ಯ(ವ್ಯಾಸರ) ವಾಕ್ಯಾಮೃತವನ್ನು ಭೂಸುರರು ದಿನದಿನವೂ ಕುಡಿಯುಲಿ !

---

# ಗ್ರಂಥಾರಂಭಪ್ರತಿಜ್ಞೆ

(ಶ್ರೀಭಾಷ್ಯ–ಮೂಲ)

೧. ಭಗವದ್ಬೋಧಾಯನಕೃತಾಂ; ವಿಸ್ತೀರ್ಣಾಂ ಬ್ರಹ್ಮಸೂತ್ರವೃತ್ತಿಂ ಪೂರ್ವಾಚಾರ್ಯಾಃ ಸಂಚಿಕ್ಷಿಪುಃ, ತನ್ಮತಾನುಸಾರೇಣ ಸೂತ್ರಾಕ್ಷರಾಣಿ ವ್ಯಾಖ್ಯಾಸ್ಯನ್ತೇ–

(ಅರ್ಥ)

**ಭಗವದ್ಬೋಧಾಯನರು**[1] ಮಾಡಿರುವ ವಿಸ್ತೀರ್ಣವಾದ ಬ್ರಹ್ಮಸೂತ್ರ ವೃತ್ತಿ[2]ಯನ್ನು ಪೂರ್ವಾಚಾರ್ಯರು ಸಂಕ್ಷೇಪಿಸಿದ್ದರು. ಅವರ[3] ಮತಕ್ಕನುಗುಣ ವಾಗಿ ಸೂತ್ರದ ಮಾತುಗಳನ್ನು ವ್ಯಾಖ್ಯಾನಮಾಡಲಾಗುವದು.

## ಜಿಜ್ಞಾಸಾಧಿಕರಣ

### ಅಥಾತೋ ಬ್ರಹ್ಮಜಿಜ್ಞಾಸಾ ॥ ೧ ॥

೧. ಇನ್ನುಮೇಲೆ, ಆದ್ದರಿಂದ ಬ್ರಹ್ಮಜಿಜ್ಞಾಸೆ.

### ಅಥ, ಅತಃ – ಈ ಶಬ್ದಗಳ ಅರ್ಥ

(ಶ್ರೀಭಾಷ್ಯ–ಮೂಲ)

೨. ಅತ್ರ, ಅಯಮ್ ಅಥಶಬ್ದಃ, ಆನನ್ತರ್ಯೇ ಭವತಿ । ಅತಃ-ಶಬ್ದೋ ವೃತ್ತಸ್ಯ ಹೇತುಭಾವೇ । ಅಧೀತಸಾಙ್ಗಸಶಿರಸ್ಕವೇದಸ್ಯ, ಅಧಿಗತಾಲ್ಪಾಸ್ಥಿರಫಲಕೇವಲಕರ್ಮಜ್ಞಾನತಯಾ ಸಂಜಾತಮೋಕ್ಷಾಭಿಲಾಷಸ್ಯ ಅನನ್ತಸ್ಥಿರಫಲ ಬ್ರಹ್ಮಜಿಜ್ಞಾಸಾ ಹಿ ಅನನ್ತರಭಾವಿನೀ ॥

(ಅರ್ಥ)

ಇಲ್ಲಿ **'ಅಥ'** ಎಂಬೀ ಶಬ್ದವು 'ಅನಂತರದಲ್ಲಿ' (ಎಂಬ ಅರ್ಥ)ದಲ್ಲಿ ಬಂದಿರುತ್ತದೆ. **'ಅತಃ'** ಎಂಬುದು ಆಗಿಹೋಗಿರುವದು ಹೇತು (ಎಂಬುದನ್ನು ತಿಳಿಸು

---

**1,2,3.** ಈ ಮಾತುಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ. ಬೋಧಾಯನರು ಯಾರು ? ಬ್ರಹ್ಮಸೂತ್ರವೆಂಬ ಹೆಸರು ಯಾವಾಗ ಹೇಗೆ ಬಂದಿತು ? 'ಅವರ ಮತಕ್ಕನುಸಾರ ವಾಗಿ' ಎಂದರೆ ಬೋಧಾಯನರ ಮತಕ್ಕನುಗುಣವಾಗಿಯೆ, ಪೂರ್ವಾಚಾರ್ಯರ ಮತಕ್ಕನು ಗುಣವಾಗಿಯೆ ? –ಎಂಬ ವಿಷಯಕ್ಕೆ ಸಂಶಯವಿದೆ.

ವದಕ್ಕೆ ಬಂದಿದೆ. ಅಂಗಗಳಿಂದೊಡಗೂಡಿದ[1] ಶಿರಸ್ಸಿನಿಂದೊಡಗೂಡಿದ[2] ವೇದವನ್ನು ಅಧ್ಯಯನಮಾಡಿದವನಿಗೆ, ಕೇವಲ ಕರ್ಮಕ್ಕೆ ಅಲ್ಪವೂ ಅಸ್ಥಿರವೂ ಆದ ಫಲವಿರುವ ತಿಳಿವಳಿಕೆಯಾಗಿರುವದರಿಂದ ಮೋಕ್ಷದಲ್ಲಿ ಅಭಿಲಾಷೆಯುಂಟಾಗಲಾಗಿ ಅನಂತವೂ ಸ್ಥಿರವೂ ಆದ ಫಲವುಳ್ಳ ಬ್ರಹ್ಮಜ್ಞಾನವು ಅನಂತರದಲ್ಲಿಯೇ ಆಗಬೇಕಷ್ಟೆ ?

## ಬ್ರಹ್ಮಜಿಜ್ಞಾಸಾ ಎಂಬುದರ ವಿವರಣೆ

(ಶ್ರೀಭಾಷ್ಯಮೂಲ)

೩. ಬ್ರಹ್ಮಣೋ ಜಿಜ್ಞಾಸಾ ಬ್ರಹ್ಮಜಿಜ್ಞಾಸಾ । 'ಬ್ರಹ್ಮಣಃ' ಇತಿ ಕರ್ಮಣಿ ಷಷ್ಠೀ । 'ಕರ್ತೃಕರ್ಮಣೋಃ ಕೃತಿ' (ಪಾ. ೨-೩-೬೫) ಇತಿ ವಿಶೇಷ ವಿಧಾನಾತ್ । ಯದ್ಯಪಿ ಸಂಬನ್ಧಸಾಮಾನ್ಯಪರಿಗ್ರಹೇऽಪಿ ಜಿಜ್ಞಾಸಾಯಾಃ ಕರ್ಮಾಪೇಕ್ಷತ್ವೇನ ಕರ್ಮಾರ್ಥತ್ವಸಿದ್ಧಿಃ, ತಥಾಪಿ, ಆಕ್ಷೇಪತಃ ಪ್ರಾಪ್ತಾತ್ ಆಭಿಧಾನಿಕಸ್ಯೈವ ಗ್ರಾಹ್ಯತ್ವಾತ್ ಕರ್ಮಣಿ ಷಷ್ಠೀ ಗೃಹ್ಯತೇ । ನ ಚ 'ಪ್ರತಿಪದವಿಧಾನಾ ಷಷ್ಠೀ ನ ಸಮಸ್ಯತೇ' (ಪಾ. ೨-೨-೧೦ ವಾ.) ಇತಿ ಕರ್ಮಣಿ ಷಷ್ಠ್ಯಾಃ ಸಮಾಸನಿಷೇಧಃ ಶಙ್ಕನೀಯಃ । 'ಕೃದ್ಯೋಗಾ ಷಷ್ಠೀ ಸಮಸ್ಯತೇ' (ಪಾ. ೨-೨-೮, ವಾ.) ಇತಿ ಪ್ರತಿಪ್ರಸವಸದ್ಭಾವಾತ್ ॥

(ಅರ್ಥ)

'ಬ್ರಹ್ಮಜಿಜ್ಞಾಸೆ'= ಬ್ರಹ್ಮದ ಜಿಜ್ಞಾಸೆ. (ಇಲ್ಲಿ) ಬ್ರಹ್ಮದ ಎಂಬುದು ಕರ್ಮಣಿ ಷಷ್ಠಿ ; ಏಕೆಂದರೆ 'ಕರ್ತೃಕರ್ಮಣೋಃ ಕೃತಿ' (ಪಾ.೨-೩-೬೫)- (ಕರ್ತೃ, ಕರ್ಮ- ಇವುಗಳನ್ನು ಹೇಳುವ ಪದದ ಮುಂದೆ ಕೃದಂತವು ಬಂದಾಗ ಷಷ್ಠೀಸಮಾಸವಾಗುವದು) ಎಂದು ವಿಶೇಷವಾದ ವಿಧಿಯಿದೆ. ಇಲ್ಲಿ ಷಷ್ಠಿಗೆ ಸಂಬಂಧಸಾಮಾನ್ಯವೇ ಅರ್ಥವೆಂದು ಇಟ್ಟುಕೊಂಡರೂ ಈ ಜಿಜ್ಞಾಸೆಗೆ ಕರ್ಮದ ಅಪೇಕ್ಷೆಯಿರುವದರಿಂದ (ಷಷ್ಠೀವಿಭಕ್ತಿಗೆ) ಕರ್ಮವೇ ಅರ್ಥವೆಂದು ಸಿದ್ಧವಾಗುವದು ನಿಜ ; ಆದರೂ ಆಕ್ಷಿಪ್ತವಾಗಿ ಬರುವ ಅರ್ಥಕ್ಕಿಂತ ನೇರಾಗಿ ಹೇಳಿರುವದನ್ನೇ ಗ್ರಹಿಸುವದು ಯುಕ್ತವಾದ್ದರಿಂದ ಕರ್ಮಣಿಷಷ್ಠಿಯನ್ನೇ ಇಲ್ಲಿ ಗ್ರಹಿಸಲಾಗಿದೆ. 'ಪ್ರತಿಪದವಿಧಾನಾ ಷಷ್ಠೀ ನ ಸಮಸ್ಯತೇ' (ಪಾ. ೨-೨-೧೦ರ ವಾ.) ಎಂಬ (ವಾರ್ತಿಕವನ್ನನುಸರಿಸಿ) ಇಲ್ಲಿ ಕರ್ಮಣಿಷಷ್ಠಿಯ ಸಮಾಸವು ನಿಷಿದ್ಧವಾಗಿದೆಯಲ್ಲ! ಎಂದೂ- ಶಂಕಿಸುವಂತಿಲ್ಲ ; ಏಕೆಂದರೆ 'ಕೃದ್ಯೋಗಾ ಷಷ್ಠೀ ಸಮಸ್ಯತೇ' (ಪಾ. ೨-೨-೮ರ ವಾ.) ಎಂದು (ಆ ವಾರ್ತಿಕಕ್ಕೆ) ಮತ್ತೊಂದು ಪ್ರತಿಷೇಧವಾರ್ತಿಕವೂ ಇರುವದರಿಂದ ಇದು ಆಗಬಹುದಾಗಿದೆ.[4]

---

1. ಶೀಕ್ಷಾದಿವೇದಾಂಗಸಹಿತವಾದ. 2. ವೇದಾಂತಸಹಿತವಾದ.

3. ಈ ವಿಷಯದಲ್ಲಿ ಪೀಠಿಕೆಯನ್ನು ನೋಡಿ.

4. ಪ್ರತಿಪದವಿಹಿತವಾದ ಕರ್ಮಣಿಷಷ್ಠಿಯೂ ಆಗಬಹುದಾಗಿದೆ ; ಏಕೆಂದರೆ ಜಿಜ್ಞಾಸಾ ಎಂಬ ಕೃದಂತದ ಯೋಗವಿಲ್ಲಿದೆ.

(ಮೂಲ)

ಬ್ರಹ್ಮಶಬ್ದೇನ ಚ ಸ್ವಭಾವತೋ ನಿರಸ್ತನಿಖಿಲದೋಷಃ, ಅನವಧಿಕಾತಿಶಯಾಽಸಂಖ್ಯೇಯಕಲ್ಯಾಣಗುಣಗಣಃ, ಪುರುಷೋತ್ತಮೋಽಭಿಧೀಯತೇ | ಸರ್ವತ್ರ ಬೃಹತ್ತ್ವಗುಣಯೋಗೇನ ಹಿ ಬ್ರಹ್ಮಶಬ್ದಃ | ಬೃಹತ್ತ್ವಂ ಚ ಸ್ವರೂಪೇಣ ಗುಣೈಶ್ಚ ಯತ್ರಾನವಧಿಕಾತಿಶಯಮ್, ಸೋಽಸ್ಯ ಮುಖ್ಯೋಽರ್ಥಃ ; ಸ ಚ ಸರ್ವೇಶ್ವರ ಏವ | ಅತೋ ಬ್ರಹ್ಮಶಬ್ದಸ್ತತ್ರೈವ ಮುಖ್ಯವೃತ್ತಃ | ತಸ್ಮಾತ್, ಅನ್ಯತ್ರ ತದ್ಗುಣಲೇಶಯೋಗಾತ್ ಔಪಚಾರಿಕಃ ; ಅನೇಕಾರ್ಥಕಲ್ಪನಾಯೋಗಾತ್ | ಭಗವಚ್ಛಬ್ದವತ್ ||

ತಾಪತ್ರಯಾತುರೈಃ, ಅಮೃತತ್ವಾಯ ಸ ಏವ ಜಿಜ್ಞಾಸ್ಯಃ | ಅತಃ ಸರ್ವೇಶ್ವರ ಏವ ಜಿಜ್ಞಾಸಾಕರ್ಮಭೂತಂ ಬ್ರಹ್ಮ ||

(ಅರ್ಥ)

ಇದಲ್ಲದೆ ಬ್ರಹ್ಮ ಎಂಬ ಶಬ್ದದಿಂದ ಸ್ವಭಾವದಿಂದಲೇ ಎಲ್ಲಾ ದೋಷಗಳನ್ನೂ ಹೊರಗೆ ಹಾಕಿಕೊಂಡವನೂ ಎಲ್ಲೆಯಿಲ್ಲದ ಅತಿಶಯವುಳ್ಳ ಲೆಕ್ಕವಿಲ್ಲದಷ್ಟು ಕಲ್ಯಾಣ ಗುಣಗಳ ಗುಂಪುಳ್ಳವನೂ ಆದ ಪುರುಷೋತ್ತಮನೇ ಉಕ್ತನಾಗಿರುತ್ತಾನೆ. ಹೇಗೆಂದರೆ, ಬೃಹತ್ತ್ವ (ದೊಡ್ಡದಾಗಿರುವಿಕೆ) ಎಂಬ ಗುಣದ ಸಂಬಂಧದಿಂದಲೇ ಅಲ್ಲವೆ, ಎಲ್ಲಾ ಕಡೆಯಲ್ಲಿಯೂ **ಬ್ರಹ್ಮಶಬ್ದವು** ಪ್ರಯುಕ್ತವಾಗುತ್ತದೆ ? ಮತ್ತು (ಆ) ಬೃಹತ್ತ್ವವು ಸ್ವರೂಪದಿಂದಲೂ ಗುಣಗಳಿಂದಲೂ ಯಾವದರಲ್ಲಿ ಎಲ್ಲೆಯಿಲ್ಲದ ಅತಿಶಯವುಳ್ಳದ್ದಾಗಿರುವದೋ, ಅದೇ ಈ ಶಬ್ದಕ್ಕೆ ಮುಖ್ಯವಾದ ಅರ್ಥ ; ಆ (ಅರ್ಥ)ವೆಂಬುದು ಸರ್ವೇಶ್ವರನೇ. ಆದ್ದರಿಂದ ಬ್ರಹ್ಮಶಬ್ದವು ಆ (ಸರ್ವೇಶ್ವರನಲ್ಲಿಯೇ) ಮುಖ್ಯವೃತ್ತಿಯಿಂದ ಪ್ರವರ್ತಿಸುತ್ತದೆ; ಆತನಿಗಿಂತ ಬೇರೆಯಾದ ವಸ್ತುವಿನಲ್ಲಿ ಆ (ಬೃಹತ್ತ್ವ)ಗುಣದ ಒಂದಂಶವು ಇರುವದರಿಂದ ಔಪಚಾರಿಕವಾಗಿ ಪ್ರವರ್ತಿಸುತ್ತದೆ; ಏಕೆಂದರೆ ಒಂದೇ ಶಬ್ದಕ್ಕೆ ಅನೇಕಾರ್ಥಗಳನ್ನು ಕಲ್ಪಿಸುವದು ಸರಿಯಲ್ಲ. 'ಭಗವಾನ್' ಎಂಬ ಶಬ್ದಕ್ಕೆ ಹೇಗೆ (ಸರ್ವೇಶ್ವರನಲ್ಲಿಯೇ ಮುಖ್ಯ ವೃತ್ತಿಯಿಂದ ಪ್ರವೃತ್ತಿಯೋ, ಮಿಕ್ಕೆಡೆಯಲ್ಲಿ ಆ ಶಬ್ದವು ಹೇಗೆ ಗೌಣವೋ) ಹಾಗೆಯೇ [1] ಇಲ್ಲಿಯೂ ತಿಳಿಯಬೇಕು.

---

1. ಇಲ್ಲಿ ವಿಷ್ಣುಪುರಾಣದಲ್ಲಿ ೬-೫ರಲ್ಲಿ ಭಗವಚ್ಛಬ್ದನಿರ್ವಚನಮಾಡಿರುವದನ್ನು ಹೋಲಿಸಿ. ಅದನ್ನೇ ಮೂಲವೆಂದು ರಾಮಾನುಜರು ಹಿಡಿದಿದ್ದರೆ ಮೂಲಕ್ಕೂ ಮೂಲಿಗೂ ಸ್ವಲ್ಪ ವೈಲಕ್ಷಣ್ಯವಿರುವಂತೆ ತೋರುತ್ತದೆ. ಏಕೆಂದರೆ ಅಲ್ಲಿ 'ಅಶಬ್ದಗೋಚರಸ್ಯಾಪಿ ತಸ್ಯ ವೈ ಬ್ರಹ್ಮಣೋ ದ್ವಿಜ | ಪೂಜಾಯಾಂ ಭಗವಚ್ಛಬ್ದಃ ಕ್ರಿಯತೇ ಹ್ಯುಪಚಾರತಃ' (೬-೫-೭೧) ಎಂದಿದೆ. ಶಬ್ದಕ್ಕೆ ವಿಷಯವಲ್ಲದ ಬ್ರಹ್ಮಕ್ಕೆ ಪೂಜಾರ್ಥದಲ್ಲಿ ಭಗವಚ್ಛಬ್ದವನ್ನು ಉಪಚಾರದಿಂದ ಹೇಳಿದೆ ಎಂದು ಆ ಶ್ಲೋಕದ ಅರ್ಥ.

ತಾಪತ್ರಯದಿಂದ ಸಂಕಟಪಡುತ್ತಿರುವವರು ಅಮೃತತ್ವಕ್ಕಾಗಿ ಆತನನ್ನೇ ಜಿಜ್ಞಾಸೆಮಾಡಬೇಕು. ಆದ್ದರಿಂದ ಸರ್ವೇಶ್ವರನೇ ಜಿಜ್ಞಾಸೆಗೆ ಕರ್ಮವಾಗಿರುವ ಬ್ರಹ್ಮವು.

(ಮೂಲ)

ಜ್ಞಾತುಮ್ ಇಚ್ಛಾ ಜಿಜ್ಞಾಸಾ। ಇಚ್ಛಾಯಾಃ ಇಷ್ಯಮಾಣಪ್ರಧಾನತ್ವಾತ್ ಇಷ್ಯಮಾಣಂ ಜ್ಞಾನಮ್ ಇಹ ವಿಧೀಯತೇ ॥

(ಅರ್ಥ)

ಅರಿಯುವದಕ್ಕೆ ಇರುವ ಇಚ್ಛೆಯೇ ಜಿಜ್ಞಾಸೆ. ಇಚ್ಛೆಗೆ ಇಚ್ಛಿಸಲ್ಪಡುವ ವಸ್ತುವೇ ಮುಖ್ಯವಾದದ್ದರಿಂದ ಇಚ್ಛಿಸಲ್ಪಡುವ ಜ್ಞಾನವನ್ನೇ ಇಲ್ಲಿ ವಿಧಿಸಿರುತ್ತದೆ.

## ಸೂತ್ರವಾಕ್ಯಾರ್ಥ

(ಮೂಲ)

೪. ಮೀಮಾಂಸಾಪೂರ್ವಭಾಗಜ್ಞಾತಸ್ಯ ಕರ್ಮಣಃ, ಅಲ್ಪಾಸ್ಥಿರಫಲತ್ವಾತ್, ಉಪರಿತನಭಾಗಾವಸೇಯಸ್ಯ ಬ್ರಹ್ಮಜ್ಞಾನಸ್ಯ ಅನನ್ತಾಕ್ಷಯಫಲತ್ವಾಚ್ಚ ಪೂರ್ವವೃತ್ತಾತ್ ಕರ್ಮಜ್ಞಾನಾತ್ ಅನನ್ತರಂ ತತ ಏವ ಹೇತೋರ್ಬ್ರಹ್ಮ ಜ್ಞಾತವ್ಯಮ್ ಇತ್ಯುಕ್ತಂ ಭವತಿ। ತದಾಹ ವೃತ್ತಿಕಾರಃ–'ವೃತ್ತಾತ್ ಕರ್ಮಾಧಿಗಮಾದನನ್ತರಂ ಬ್ರಹ್ಮ ವಿವಿದಿಷಾ' ಇತಿ। ವಕ್ಷ್ಯತಿ ಚ ಕರ್ಮಬ್ರಹ್ಮಮೀಮಾಂಸಯೋಃ, ಐಕಶಾಸ್ತ್ರ್ಯಂ 'ಸಂಹಿತಮೇತತ್ ಶಾರೀರಕಂ ಜೈಮಿನೀಯೇನ ಷೋಡಶ ಲಕ್ಷಣೇನ ಇತಿ ಶಾಸ್ತ್ರೈಕತ್ವಸಿದ್ಧಿಃ' ಇತಿ ॥

(ಅರ್ಥ)

ಮೀಮಾಂಸೆಯ ಮೊದಲನೆಯ ಭಾಗದಿಂದ ಅರಿತುಕೊಂಡ ಕರ್ಮವು ಅಲ್ಪವೂ ಅಸ್ಥಿರವೂ ಆದ ಫಲವುಳ್ಳದ್ದಾದ್ದರಿಂದಲೂ ಮುಂದಿನ ಭಾಗದಿಂದ ನಿಶ್ಚಿತವಾಗುವ ಬ್ರಹ್ಮಜ್ಞಾನವು ಅನಂತವಾದ ಸವೆಯದ ಫಲವುಳ್ಳದ್ದಾಗಿರುವದರಿಂದಲೂ ಆ ಕಾರಣದಿಂದಲೇ ಹಿಂದೆ ಆಗಿರುವ ಕರ್ಮಜ್ಞಾನವು ಉಂಟಾದಬಳಿಕ ಬ್ರಹ್ಮವನ್ನು ಅರಿತುಕೊಳ್ಳಬೇಕು– ಎಂದು ಹೇಳಿದಂತಾಯಿತು.[1] ಇದನ್ನು ವೃತ್ತಿಕಾರರೂ ಹೀಗೆಂದು ಹೇಳಿರುತ್ತಾರೆ : 'ಹಿಂದೆ ಆಗಿಹೋಗಿರುವ ಕರ್ಮಜ್ಞಾನವಾದಬಳಿಕ ಬ್ರಹ್ಮವನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯುಂಟಾಗುವದು'.[2] ಕರ್ಮ

---

1. ಉಪಾಸನೆಯನ್ನು ವಿಧಿಸಿದೆ ಎಂದರ್ಥ. ಪೀಠಿಕೆಯನ್ನು ನೋಡಿ.
2. ಇದನ್ನು ಶಾಂಕರಭಾಷ್ಯದಲ್ಲಿ ಬರೆದಿರುವ ಸೂತ್ರಾರ್ಥಕ್ಕೆ ಹೋಲಿಸಬೇಕು.

ಮೀಮಾಂಸೆ, ಮತ್ತು ಬ್ರಹ್ಮಮೀಮಾಂಸೆ– ಈ ಎರಡೂ **ಒಂದೇ ಶಾಸ್ತ್ರವೆಂಬು ದನ್ನು 'ಈ ಶಾರೀರಕವು'**[1] ಜೈಮಿನಿಗಳ ಷೋಡಶಲಕ್ಷಣೆಗೆ (ಹದಿನಾರು ಅಧ್ಯಾಯ ಗಳ ಭಾಗಕ್ಕೆ)[2] ಹೊಂದಿಕೊಂಡಿರುವವರಿಂದ ಇವೆರಡೂ ಸೇರಿ ಒಂದೇ ಶಾಸ್ತ್ರವೆಂದು ಸಿದ್ಧವಾಗುತ್ತದೆ'[3] ಎಂದು ಮುಂದೆ ಹೇಳಿಯೂ ಇರುತ್ತಾರೆ.

## ಪೂರ್ವಮೀಮಾಂಸೆಗೂ ಉತ್ತರಮೀಮಾಂಸೆಗೂ ಸಂಬಂಧ

(ಮೂಲ)

೫. ಅತಃ ಪ್ರತಿಪಿಪಾದಯಿಷಿತಾರ್ಥಭೇದೇನ ಷಟ್ಕಭೇದವತ್, ಅಧ್ಯಾಯ ಭೇದವಚ್ಚ ಪೂರ್ವೋತ್ತರಮೀಮಾಂಸಯೋರ್ಭೇದಃ । ಮೀಮಾಂಸಾಶಾಸ್ತ್ರಮ್ 'ಅಥಾತೋ ಧರ್ಮಜಿಜ್ಞಾಸಾ' (ಜೈ. ಸೂ. ೧–೧–೧) ಇತ್ಯಾರಭ್ಯ 'ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್' (ವೇ. ಸೂ. ೪–೪–೨೨) ಇತ್ಯೇವಮನ್ತಂ ಸಙ್ಗತಿ- ವಿಶೇಷೇಣ ವಿಶಿಷ್ಟಕ್ರಮಮ್ ॥

(ಅರ್ಥ)

ಆದ್ದರಿಂದ ಪ್ರತಿಪಾದಿಸಬೇಕೆಂದಿರುವ ಅರ್ಥಭೇದದಿಂದ ಷಟ್ಕಭೇದದಂತೆಯೂ ಅಧ್ಯಾಯಭೇದದಂತೆಯೂ ಪೂರ್ವೋತ್ತರಮೀಮಾಂಸೆಗಳೆರಡಕ್ಕೂ ಭೇದವಿರು ತ್ತದೆ.[4] ಮೀಮಾಂಸಾಶಾಸ್ತ್ರವು 'ಅಥಾತೋ ಧರ್ಮಜಿಜ್ಞಾಸಾ' (ಸೂ. ೧–೧–೧) ಎಂಬಲ್ಲಿಂದ ಮೊದಲಾಗಿ 'ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್' (ಸೂ. ೪–೪ –೨೨) ಎಂಬವರೆಗೂ ಒಂದಾನೊಂದು ವಿಶಿಷ್ಟವಾದ ಸಂಬಂಧದಿಂದ ಅಸಾಧಾರಣ ಕ್ರಮವುಳ್ಳದ್ದಾಗಿರುತ್ತದೆ.

---

1. ಚಿದಚಿಚ್ಛರೀರವುಳ್ಳವನಾದ್ದರಿಂದ ಬ್ರಹ್ಮವೇ ಶಾರೀರಾತ್ಮನೆನಿಸುವದು ; ಆ ಆತ್ಮನನ್ನು ತಿಳಿಯಿಸುವದಕ್ಕೆ ಹೊರಟಿರುವದರಿಂದ ಈ ಶಾಸ್ತ್ರವು ಶಾರೀರಕವೆನಿಸುತ್ತದೆ– ಎಂದು (೧–೧–೧೩ರ) ಶ್ರೀಭಾಷ್ಯದಲ್ಲಿ ಮುಂದೆ ಹೇಳಲಾಗುವದು.

2. ಜೈಮಿನಿಯ ಮೀಮಾಂಸೆಯ ಹನ್ನೆರಡಕ್ಕೆ ಸಂಕರ್ಷಣಕಾಂಡದ ನಾಲ್ಕು ಅಧ್ಯಾಯಗಳು ಸೇರಿದರೆ ಪೂರ್ವಮೀಮಾಂಸೆಯು ಹದಿನಾರು ಅಧ್ಯಾಯಗಳುಳ್ಳದ್ದಾಗಿರು ವದು ; ಆದ್ದರಿಂದ ಅದು ಷೋಡಶಲಕ್ಷಣವು.

3. ಈ ವಿಷಯಕ್ಕೆ ಶಂಕರಭಾಷ್ಯದಲ್ಲಿ ಹೇಳಿರುವದೇ ಬೇರೆ ; ಜಿಜ್ಞಾಸ್ಯ, ಫಲ– ಎರಡೂ ಬೇರೆಬೇರೆಯಾದ್ದರಿಂದ ಧರ್ಮಜಿಜ್ಞಾಸೆಯಾದಮೇಲೆಯೇ ಬ್ರಹ್ಮಜಿಜ್ಞಾಸೆ ಎಂಬುದು ಶಂಕರಾಚಾರ್ಯರಿಗೆ ಸಮ್ಮತವಲ್ಲ.

4. ಎರಡು ಅಧ್ಯಾಯಷಟ್ಕಗಳಲ್ಲಿ ಬೇರೆಬೇರೆಯ ವಿಷಯಗಳನ್ನು ಚಿಂತನೆಮಾಡಿ ದ್ದರೂ ಹನ್ನೆರಡು ಅಧ್ಯಾಯಗಳಲ್ಲಿ ಬೇರೆಬೇರೆಯ ವಿಷಯವನ್ನು ಚಿಂತಿಸಿದ್ದರೂ ಜೈಮಿನಿಯ ಶಾಸ್ತ್ರವು ಒಂದೇ ಆಗಿರುವಂತೆ ಕರ್ಮಬ್ರಹ್ಮವಿಚಾರಭೇದಮಾತ್ರದಿಂದ ಶಾಸ್ತ್ರೈಕ್ಯಕ್ಕೆ ವಿರೋಧ ವಿಲ್ಲ– ಎಂದು ಅಭಿಪ್ರಾಯ.

# ಮೀಮಾಂಸೆಯ ಅಸಾಧಾರಣಕ್ರಮ

## (ಮೂಲ)

೬. ತಥಾ ಹಿ–ಪ್ರಥಮಂ ತಾವತ್ 'ಸ್ವಾಧ್ಯಾಯೋಽಧ್ಯೇತವ್ಯಃ' (ಯಜುರಾರಣ್ಯಕ. ೨–೧೫) ಇತ್ಯಧ್ಯಯನೇನೈವ ಸ್ವಾಧ್ಯಾಯಶಬ್ದವಾಚ್ಯವೇದಾಖ್ಯಾಕ್ಷರರಾಶೇರ್ಗ್ರಹಣಂ ವಿಧೀಯತೇ । ತಚ್ಚಾಧ್ಯಯನಂ ಕಿಂರೂಪಮ್ ? ಕಥಂ ಚ ಕರ್ತವ್ಯಮ್ ?– ಇತ್ಯಪೇಕ್ಷಾಯಾಂ 'ಅಷ್ಟವರ್ಷಂ ಬ್ರಾಹ್ಮಣಮುಪನಯೀತ, ತಮಧ್ಯಾಪಯೇತ್' (ಶತ. ಬ್ರಾ. ? ) ಇತ್ಯನೇನ, 'ಶ್ರಾವಣ್ಯಾಂ ಪ್ರೋಷ್ಠಪದ್ಯಾಂ ವಾ ಉಪಾಕೃತ್ಯ ಯಥಾವಿಧಿ । ಯುಕ್ತಶ್ಛನ್ದಾಂಸ್ಯಧೀಯೀತ ಮಾಸಾನ್ ವಿಪ್ರೋಽರ್ಧಪಞ್ಚಮಾನ್' (ಮನು. ೪–೯೫) ಇತ್ಯಾದಿವ್ರತನಿಯಮವಿಶೇಷೋಪದೇಶೈಶ್ಚ ಅಪೇಕ್ಷಿತಾನಿ ವಿಧೀಯನ್ತೇ । ಏವಂ ಸತ್ಸನ್ತಾನಪ್ರಸೂತಸದಾಚಾರನಿಷ್ಠಾತ್ಮಗುಣೋಪೇತವೇದವಿದಾಚಾರ್ಯೋಪನೀತಸ್ಯ ವ್ರತನಿಯಮವಿಶೇಷಯುಕ್ತಸ್ಯ ಆಚಾರ್ಯೋಚ್ಚಾರಣಮನೂಚ್ಚಾರಣರೂಪಮ್ ಅಕ್ಷರರಾಶಿಗ್ರಹಣಫಲಮ್ ಅಧ್ಯಯನಮ್ ಇತ್ಯವಗಮ್ಯತೇ । ಅಧ್ಯಯನಂ ಚ ಸ್ವಾಧ್ಯಾಯಸಂಸ್ಕಾರಃ । 'ಸ್ವಾಧ್ಯಾಯೋಽಧ್ಯೇತವ್ಯಃ' (ಯ.ಆ. ೨–೧೫) ಇತಿ ಸ್ವಾಧ್ಯಾಯಸ್ಯ ಕರ್ಮತ್ವಾವಗಮಾತ್ । ಸಂಸ್ಕಾರೋ ಹಿ ನಾಮ ಕಾರ್ಯಾನ್ತರಯೋಗ್ಯತಾಕರಣಮ್ । ಸಂಸ್ಕಾರ್ಯತ್ವಂ ಚ ಸ್ವಾಧ್ಯಾಯಸ್ಯ ಯುಕ್ತಮ್, ಧರ್ಮಾರ್ಥಕಾಮಮೋಕ್ಷರೂಪಪುರುಷಾರ್ಥಚತುಷ್ಟಯತತ್ಸಾಧನಾವಬೋಧಿತ್ವಾತ್ ಜಪಾದಿನಾ ಸ್ವರೂಪೇಣಾಪಿ ತತ್ಸಾಧನತ್ವಾಚ್ಚ ॥

## (ಅರ್ಥ)

ಹೇಗೆಂದರೆ, ಮೊಟ್ಟಮೊದಲು 'ಸ್ವಾಧ್ಯಾಯವನ್ನು ಅಧ್ಯಯನಮಾಡಬೇಕು' (ಯ. ಆ. ೨–೧೫) ಎಂದು ಅಧ್ಯಯನದಿಂದಲೇ ಸ್ವಾಧ್ಯಾಯವೆಂಬ ಶಬ್ದಕ್ಕೆ ವಾಚ್ಯವಾದ ವೇದವೆಂಬ ಅಕ್ಷರರಾಶಿಯನ್ನು ಗ್ರಹಣಮಾಡಬೇಕು– ಎಂದು ವಿಹಿತವಾಗಿರುತ್ತದೆ. ಆ ಅಧ್ಯಯನದ ಸ್ವರೂಪವು ಯಾವದು ? ಮತ್ತು ಅದನ್ನು ಹೇಗೆ ಮಾಡಬೇಕು ?– ಎಂಬ ಆಕಾಂಕ್ಷೆಯುಂಟಾಗಲಾಗಿ 'ಎಂಟುವರ್ಷದ ಬ್ರಾಹ್ಮಣನಿಗೆ ಉಪನಯನವನ್ನು ಮಾಡಿಸಬೇಕು, ಅವನಿಗೆ ಅಧ್ಯಯನವನ್ನು ಮಾಡಿಸಬೇಕು' (ಶತ. ಬ್ರಾ. ? ) ಎಂಬ (ಬ್ರಾಹ್ಮಣವಾಕ್ಯ)ದಿಂದಲೂ 'ಶ್ರಾವಣಪೂರ್ಣಿಮೆಯಲ್ಲಿ ಅಥವಾ ಭಾದ್ರಪದಪೂರ್ಣಿಮೆಯಲ್ಲಿ ವಿಧಿವತ್ತಾಗಿ ಉಪಾಕರ್ಮವನ್ನು ಮಾಡಿಸಿ ವಿಪ್ರನಾದವನು ಸಮಾಹಿತಚಿತ್ತನಾಗಿ ವೇದಗಳನ್ನು ನಾಲ್ಕೂವರೆತಿಂಗಳುಗಳವರೆಗೆ ಅಧ್ಯಯನಮಾಡಬೇಕು' (ಮನು. ೪–೯೫) ಎಂಬುದೇ ಮುಂತಾದ ವ್ರತನಿಯಮವಿಶೇಷಗಳಿಂದಲೂ ಆಕಾಂಕ್ಷಿತಾಂಶಗಳು ವಿಹಿತವಾಗಿರುತ್ತವೆ. ಹೀಗೆ

ಸತ್ಸಂತಾನದಲ್ಲಿ ಹುಟ್ಟಿ, ಸದಾಚಾರನಿಷ್ಠನಾದ ಆತ್ಮಗುಣಗಳುಳ್ಳ[1] ವೇದವಿದನಾದ ಆಚಾರ್ಯನಿಂದ ಉಪನೀತನಾಗಿ, ವ್ರತನಿಯಮವಿಶೇಷಗಳಿಂದ ಕೂಡಿರುವಾತನು ಆಚಾರ್ಯನು ಉಚ್ಚರಿಸುವಂತೆ ಉಚ್ಚರಿಸುವದೆಂಬುವೇ ಅಕ್ಷರರಾಶಿಗ್ರಹಣದ ಫಲವಾದ **'ಅಧ್ಯಯನವು'** ಎಂದು ಗೊತ್ತಾಗುತ್ತದೆ.

ಅಧ್ಯಯನವೆಂಬುದು ಸ್ವಾಧ್ಯಾಯದ ಸಂಸ್ಕಾರವು, ಏಕೆಂದರೆ 'ಸ್ವಾಧ್ಯಾಯವನ್ನು ಅಧ್ಯಯನಮಾಡಬೇಕು' (ಯ.ಆ. ೨–೧೫) ಎಂಬ ವಿಧಿಯಿಂದ ಸ್ವಾಧ್ಯಾಯವೆಂಬುದು ಒಂದು ಕರ್ಮ– ಎಂದು ನಿಶ್ಚಿತವಾಗಿರುತ್ತದೆ. **ಸಂಸ್ಕಾರ** ಎಂದರೆ ಮತ್ತೊಂದು ಕಾರ್ಯಕ್ಕೆ ಯೋಗ್ಯವಾಗಿ ಮಾಡುವಿಕೆ. ಸ್ವಾಧ್ಯಾಯವು ಸಂಸ್ಕಾರ್ಯವೆಂಬುದೂ ಯುಕ್ತ; ಏಕೆಂದರೆ ಧರ್ಮ, ಅರ್ಥ, ಕಾಮ, ಮೋಕ್ಷ– ಎಂಬ ನಾಲ್ಕು ಪುರುಷಾರ್ಥಗಳನ್ನೂ ಅವಕ್ಕೆ ಸಾಧನಗಳನ್ನೂ ಅದು ತಿಳಿಯಿಸಿಕೊಡುತ್ತದೆ; ಮತ್ತು ಜಪವೇ ಮುಂತಾದವುಗಳಿಂದ ತಾನೂ ಅವಕ್ಕೆ ಸಾಧನವಾಗಿರುತ್ತದೆ.[2]

(ಮೂಲ)

ಏವಮ್ ಅಧ್ಯಯನವಿಧಿಃ ಮನ್ತ್ರವನ್ನಿಯಮವದಕ್ಷರರಾಶಿಗ್ರಹಣಮಾತ್ರೇ ಪರ್ಯವಸ್ಯತಿ । ಅಧ್ಯಯನಗೃಹೀತಸ್ಯ ಸ್ವಾಧ್ಯಾಯಸ್ಯ ಸ್ವಭಾವತ ಏವ ಪ್ರಯೋಜನವದರ್ಥಾವಬೋಧಿತ್ವದರ್ಶನಾತ್, ಗೃಹೀತಾತ್ ಸ್ವಾಧ್ಯಾಯಾದವಗಮ್ಯಮಾನಾನ್, ಪ್ರಯೋಜನವತೋಽರ್ಥಾನ್ ಆಪಾತತೋ ದೃಷ್ಟ್ವಾ ತತ್ಸ್ವರೂಪಪ್ರಕಾರವಿಶೇಷನಿರ್ಣಯಫಲವೇದವಾಕ್ಯವಿಚಾರರೂಪಮೀಮಾಂಸಾಶ್ರವಣೇ ಅಧೀತವೇದಃ ಪುರುಷಃ ಸ್ವಯಮೇವ ಪ್ರವರ್ತತೇ ॥

(ಅರ್ಥ)

ಹೀಗೆ ಮಂತ್ರಗಳು[3] ಮತ್ತು ವ್ರತಗಳಿಂದೊಡಗೂಡಿದ[4] ವೇದಾಕ್ಷರ

---

1. ಗೌತಮಸ್ಮೃತಿಯಲ್ಲಿ (ಗೌ. ಧ. ಸೂ. ೧–೮–೨೪) ಹೇಳಿರುವ ಎಂಟು ಆತ್ಮಗುಣಗಳು.

2. ಅರ್ಥವಿಲ್ಲದ 'ಹುಮ್' ಮುಂತಾದವುಗಳಿಗೆ ಜಪಮಾತ್ರದಿಂದಲೇ ಫಲಪ್ರಾಪ್ತಿ ಎಂಬುದನ್ನು 'ತಾನೂ' ಎಂಬುದು ಸೂಚಿಸುತ್ತದೆ. ಹೀಗೆ ಪುರುಷಾರ್ಥಕ್ಕೆ ಸಾಧನವಾದ ಈ ಕಾರ್ಯಾಂತರವನ್ನು ಮಾಡುವದರಿಂದಲೇ ಅಧ್ಯಯನವು ವೇದದ ಸಂಸ್ಕಾರವೆನಿಸಿರುತ್ತದೆ ಎಂದು ಭಾವ.

3. 'ಶಂ ನೋ ಮಿತ್ರಃ' ಮುಂತಾದ ಮಂತ್ರಗಳೂ ಜಪಮಾತ್ರದಿಂದ ಉಪಕಾರಕವಾಗಿರುತ್ತವೆ.

4. 'ಶ್ರಾವಣ್ಯಾಮ್' ಇತ್ಯಾದಿ ವ್ರತನಿಯಮಗಳೂ ಅಧ್ಯಯನಕ್ಕೆ ಉಪಕಾರಕಗಳು.

ರಾಶಿಗ್ರಹಣಮಾತ್ರದಲ್ಲಿಯೇ ಅಧ್ಯಯನವಿಧಿಯು ಪರ್ಯವಸಾನವಾಗುತ್ತದೆ.[1] ಅಧ್ಯಯನದಿಂದ ಗ್ರಹಿಸಿದ ಸ್ವಾಧ್ಯಾಯವು ಸ್ವಭಾವದಿಂದಲೇ ಸಪ್ರಯೋಜನವಾದ ಅರ್ಥವನ್ನು ತಿಳಿಯಿಸಿಕೊಡುವದು ಕಂಡುಬರುವದರಿಂದ ಗ್ರಹಿಸಿದ ಸ್ವಾಧ್ಯಾಯದಿಂದ ನಿಶ್ಚಿತವಾಗುವ ಸಪ್ರಯೋಜನವಾದ ಅರ್ಥಗಳನ್ನು ಮೊದಲು ಕಂಡು ಅವುಗಳ ಸ್ವರೂಪವನ್ನು ಮತ್ತು ಪ್ರಕಾರದ ವಿಶೇಷವನ್ನು ನಿರ್ಣಯಿಸುವದೆಂಬ ಫಲವುಳ್ಳ ವೇದವಾಕ್ಯವಿಚಾರರೂಪವಾಗಿರುವ ಮೀಮಾಂಸೆಯ ಶ್ರವಣದಲ್ಲಿ[2] ವೇದಾಧ್ಯಯನವನ್ನು ಮಾಡಿರುವ ಪುರುಷನು ತಾನೇ ತೊಡಗುತ್ತಾನೆ.

(ಮೂಲ)

ತತ್ರ ಕರ್ಮವಿಧಿಸ್ವರೂಪೇ ನಿರೂಪಿತೇ ಕರ್ಮಣಾಂ ಅಲ್ಪಾಸ್ಥಿರಫಲತ್ವಂ ದೃಷ್ಟ್ವಾ ಅಧ್ಯಯನಗೃಹೀತಸ್ವಾಧ್ಯಾಯೈಕದೇಶೋಪನಿಷದ್ವಾಕ್ಯೇಷು ಚ ಅಮೃತತ್ವರೂಪಾನಂತಸ್ಥಿರಫಲಾಪಾತಪ್ರತೀತೇಃ, ತನ್ನಿರ್ಣಯಫಲವೇದಾಂತವಾಕ್ಯವಿಚಾರರೂಪಶಾರೀರಕಮೀಮಾಂಸಾಯಾಮ್ ಅಧಿಕರೋತಿ। ತಥಾ ಚ ವೇದಾಂತವಾಕ್ಯಾನಿ ಕೇವಲಕರ್ಮಫಲಸ್ಯ ಕ್ಷಯಿತ್ವಂ ಬ್ರಹ್ಮಜ್ಞಾನಸ್ಯ ಚ ಅಕ್ಷಯಫಲತ್ವಂ ದರ್ಶಯಂತಿ—'ತದ್ಯಥೇಹ ಕರ್ಮಜಿತೋ ಲೋಕಃ ಕ್ಷೀಯತೇ, ಏವಮೇವಾಮುತ್ರ ಪುಣ್ಯಜಿತೋ ಲೋಕಃ ಕ್ಷೀಯತೇ' (ಛಾಂ. ೮-೧-೬), 'ಅಂತವದೇವಾಸ್ಯ ತದ್ಭವತಿ' (ಬೃ. ೩-೮-೧೦), 'ನ ಹ್ಯಧ್ರುವೈಃ ಪ್ರಾಪ್ಯತೇ' (ಕಾ. ೧-೨-೧೦), 'ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾಃ' (ಮುಂ. ೧-೨-೭), 'ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ। ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್' (ಮುಂ. ೧-೨-೧೨), 'ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ಪ್ರಶಾಂತಚಿತ್ತಾಯ ಶಮಾನ್ವಿತಾಯ। ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಮ್ ॥' (ಮುಂ. ೧-೨-೧೩), 'ಬ್ರಹ್ಮವಿದಾಪ್ನೋತಿ ಪರಮ್' (ತೈ. ೨-೧), 'ನ ಪುನರ್ಮೃತ್ಯವೇ ತದೇಕಂ ಪಶ್ಯತಿ' (?) 'ನ ಪಶ್ಯೋ ಮೃತ್ಯುಂ ಪಶ್ಯತಿ' )ಛಾಂ. ೭-೨೬-೨), 'ಸ ಸ್ವರಾಡ್ಭ-

1. ವಿಧಿವತ್ತಾಗಿ ಮಾಡಿದ ಅಧ್ಯಯನವೇ ಸ್ವಾಧ್ಯಾಯಕ್ಕೆ ಒಂದು ಸಂಸ್ಕಾರ. 'ಸ್ವಾಧ್ಯಾಯವನ್ನು ಅಧ್ಯಯನಮಾಡಬೇಕು'- ಎಂಬ ವಿಧಿಯು ಅಧ್ಯಯನವನ್ನು ಮಾಡಿದ್ದರಿಂದಲೇ ಪರಿಸಮಾಪ್ತವಾಯಿತು.

2. ಮೊದಲು ಸಾಮಾನ್ಯವಾಗಿ ಅಧ್ಯಯನಮಾಡಿದ್ದರಿಂದ ತೋರುವ ಫಲಗಳನ್ನು ಕಂಡುಕೊಂಡವನು ಈ ಫಲಗಳ ಸ್ವರೂಪವೇನು ? ಪ್ರಕಾರವು ಹೇಗಿರುತ್ತದೆ?- ಎಂಬುದನ್ನು ತಿಳಿದುಕೊಳ್ಳುವ ಉದ್ದೇಶದಿಂದ ವೇದವಾಕ್ಯಗಳ ವಿಚಾರರೂಪವಾದ ಮೀಮಾಂಸೆಯ ಶ್ರವಣವನ್ನು ತಾನೇ ಮಾಡುತ್ತಾನೆ; ಅದಕ್ಕೆ ವಿಧಿಯೇನೂ ಬೇಕಿರುವದಿಲ್ಲ- ಎಂದು ಅಭಿಪ್ರಾಯ.

ವತಿ' (ಛಾಂ. ೭–೨೫–೨), 'ತಮೇವಂ ವಿದ್ವಾನಮೃತ ಇಹ ಭವತಿ' (ತೈ. ಆ. ೩–೧೨–೩೯), 'ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ ಜುಷ್ಟಸ್ತತಸ್ತೇನಾಮೃತ ತ್ವಮೇತಿ' (ಶ್ವೇ. ೧–೬)– ಇತ್ಯಾದೀನಿ ॥

(ಅರ್ಥ)

ಆ (ಮೀಮಾಂಸೆ)ಯಲ್ಲಿ ಕರ್ಮವಿಧಿಯ ಸ್ವರೂಪವನ್ನು ನಿರೂಪಣೆಮಾಡಿದ ಮೇಲೆ ಕರ್ಮಗಳಿಗೆ ಅಲ್ಪವೂ ಅಸ್ಥಿರವೂ ಆದ ಫಲವೇ ಎಂದು ಕಂಡುಕೊಂಡದ್ದ ರಿಂದ ಅಧ್ಯಯನದಿಂದ ಗ್ರಹಿಸಿರುವ ಸ್ವಾಧ್ಯಾಯದ ಒಂದು ಭಾಗವಾದ ಉಪನಿ ಷದ್ವಾಕ್ಯಗಳಲ್ಲಿ ಜ್ಞಾನಕ್ಕೆ ಅನಂತವೂ ಸ್ಥಿರವೂ ಆದ ಅಮೃತಸ್ವರೂಪವಾದ ಫಲವಾಗುವದೆಂದು ಆಪಾತವಾಗಿ ಕಂಡುಬರುವ ಕಾರಣ ಅದನ್ನು ನಿರ್ಣಯಿಸು ವದೆಂಬ ಫಲವುಳ್ಳ ವೇದಾಂತವಾಕ್ಯಗಳ ವಿಚಾರರೂಪವಾಗಿರುವ **ಶಾರೀರಕ ಮೀಮಾಂಸೆ**[1] ಯಲ್ಲಿ ಅಧಿಕೃತನಾಗುವನು.

'ಹೇಗೆ ಈ ಲೋಕದಲ್ಲಿ ಕರ್ಮದಿಂದ ಗೆದ್ದುಕೊಂಡ ಲೋಕವು[2] ಕ್ಷಯ ವಾಗುತ್ತದೆಯೋ ಹೀಗೆಯೇ ಆ (ಪರ)ಲೋಕದಲ್ಲಿಯೂ ಪುಣ್ಯದಿಂದ ಗೆದ್ದು ಕೊಂಡ ಭೋಗ್ಯಫಲವೂ ಕ್ಷಯವಾಗುತ್ತದೆ'[3] (ಛಾಂ.೮–೧–೬), 'ಇವನ ಆ ಕರ್ಮ ಫಲವು ಕೊನೆಯುಳ್ಳದ್ದೇ ಆಗುವದು' (ಬೃ. ೩–೮–೧೦), 'ಅನಿತ್ಯವಾದ (ಸಾಧನ ಗಳಿಂದ ಆ ನಿತ್ಯವಾದ ಫಲವು) ದೊರಕಲೇಆರದು' (ಕಾ. ೧–೨–೧೦), 'ಯಜ್ಞ ರೂಪವಾದ ಕರ್ಮಗಳು ಗಟ್ಟಿಯಲ್ಲ, ತೇಲಿಹೋಗುತ್ತವೆ' (ಮುಂ. ೧–೨–೭), 'ಕರ್ಮಗಳಿಂದ ಕೂಡಿಹಾಕಿದ ಲೋಕಗಳನ್ನು ಪರೀಕ್ಷಿಸಿ ಬ್ರಾಹ್ಮಣನಾದವನು ಅಕೃತ ವಾದದ್ದು[4] ಕರ್ಮಗಳಿಂದ ಸಿಕ್ಕುವದಿಲ್ಲ ಎಂದು ವೈರಾಗ್ಯವನ್ನು ಹೊಂದಬೇಕು. ಅದನ್ನು ಅರಿತುಕೊಳ್ಳುವದಕ್ಕೋಸ್ಕರ ಅವನು ಸಮಿತ್ಪಾಣಿಯಾಗಿ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವನ್ನೇ ಬಳಿಸಾರಬೇಕು' (ಮುಂ. ೧–೨–೧೨), 'ಆ ವಿದ್ವಾಂಸನು ತನ್ನ ಬಳಿಗೆ ಬಂದ, ಚೆನ್ನಾಗಿ ಪ್ರಶಾಂತವಾಗಿರುವ ಚಿತ್ತವುಳ್ಳ, ಶಮದಿಂದೊಡಗೂಡಿರುವ ಅವನಿಗೆ ಯಾವದರಿಂದ ಅಕ್ಷರವೂ ಪುರುಷನೂ ಸತ್ಯವೂ ಆಗಿರುವ ತತ್ತ್ವವನ್ನು ಅರಿತುಕೊಳ್ಳಬಹುದೋ ಆ ಬ್ರಹ್ಮವಿದ್ಯೆಯನ್ನು ಇದ್ದದ್ದು

---

1. ಚಿದಚಿಚ್ಛರೀರವುಳ್ಳ ಪರಮಾತ್ಮನ ವಿಚಾರರೂಪವಾದ ಶಾಸ್ತ್ರ.

2. 'ಕರ್ಮಜಿತ' ಎಂಬ ಪಾಠಕ್ಕೆ ಈ ಅರ್ಥ; 'ಕರ್ಮಚಿತ' ಎಂದೇ ರಾಮಾನುಜ ರಿಗೆ ಸಮ್ಮತವೆಂದಿಟ್ಟುಕೊಂಡರೆ ಕರ್ಮಗಳಿಂದ ರಾಶಿಹಾಕಿದ, ಲೋಕವು ಎಂದರೆ ಭೋಗ್ಯ ಫಲವು– ಎಂದರ್ಥ.

3. ಆ ಪರಮಾತ್ಮನನ್ನು ಅರಿತುಕೊಳ್ಳದೆ ಮಾಡಿದ ಯಜ್ಞಾದಿಗಳ ಫಲವು.

4. ಮೋಕ್ಷವು.

ಇದ್ದಂತೆ ಹೇಳಿಕೊಡುವನು' (ಮುಂ. ೧–೨–೧೩), 'ಬ್ರಹ್ಮವಿದನು[1] ಪರ(ಪುರುಷಾರ್ಥವನ್ನು) ಪಡೆದುಕೊಳ್ಳುತ್ತಾನೆ' (ತೈ. ೨–೧), 'ಮತ್ತೆ ಪುನರ್ಮೃತ್ಯುವಾಗದ ಆ ಒಂದನ್ನು ಕಾಣುತ್ತಾನೆ'[2] (?), 'ತತ್ತ್ವವನ್ನು ಕಂಡವನು ಮೃತ್ಯುವನ್ನು ಕಾಣುವದಿಲ್ಲ' (ಛಾಂ. ೭–೨೬–೨), 'ಅವನು ಸ್ವರಾಜನಾಗುವನು' (ಛಾಂ. ೭–೨೫–೨), 'ಆ ಪುರುಷನನ್ನು ಹೀಗೆ ಅರಿತುಕೊಂಡವನು ಇಲ್ಲಿ ಅಮೃತನಾಗುತ್ತಾನೆ' (ತೈ. ಆ. ೩–೧೨–೩೯), 'ಆತ್ಮನನ್ನೂ ಪ್ರೇರಿಸುವಾತನನ್ನೂ ಬೇರೆಬೇರೆಯಾಗಿ ಅರಿತುಕೊಂಡು,[3] ಅದರಿಂದ ಅವನಿಗೆ ಪ್ರಿಯನಾಗಿ, ಅದರಿಂದ ಅಮೃತತ್ವವನ್ನು ಪಡೆದುಕೊಳ್ಳುತ್ತಾನೆ' (ಶ್ವೇ. ೧–೬)– ಎಂಬಿವೇ ಮುಂತಾದ ವೇದಾಂತವಾಕ್ಯಗಳೂ ಇದಕ್ಕನುಗುಣವಾಗಿಯೇ ಕೇವಲ ಕರ್ಮದ ಫಲವು ಕ್ಷಯವಾಗತಕ್ಕದ್ದೆಂದೂ ಬ್ರಹ್ಮಜ್ಞಾನದ ಫಲವು ಅಕ್ಷಯವೆಂದೂ ತಿಳಿಸಿಕೊಡುತ್ತಿವೆ.

## ಕರ್ಮಕ್ಕೆ ಅನಿತ್ಯಫಲವೆಂದು ತಿಳಿದವನೂ ಧರ್ಮವಿಚಾರವನ್ನೇಕೆ ಮಾಡಬೇಕು?

### (ಮೂಲ)

೭. ನನು ಚ ಸಾಙ್ಗವೇದಾಧ್ಯಯನಾದೇವ ಕರ್ಮಣಾಂ ಸ್ವರ್ಗಾದಿಫಲತ್ವಂ ಸ್ವರ್ಗಾದೀನಾಂ ಚ ಕ್ಷಯಿತ್ವಂ ಬ್ರಹ್ಮೋಪಾಸನಸ್ಯ ಅಮೃತತ್ವಫಲತ್ವಂ ಚ ಜ್ಞಾಯತ ಏವ; ಅನನ್ತರಂ ಮುಮುಕ್ಷೋಃ ಬ್ರಹ್ಮಜಿಜ್ಞಾಸಾಯಾಮೇವ ಪ್ರವರ್ತತಾಮ್, ಕಿಮರ್ಥಾ ಧರ್ಮವಿಚಾರಾಪೇಕ್ಷಾ ? ಏವಂ ತರ್ಹಿ ಶಾರೀರಕಮೀಮಾಂಸಾಯಾಮಪಿ ನ ಪ್ರವರ್ತತಾಮ್, ಸಾಙ್ಗಾಧ್ಯಯನಾದೇವ ಕೃತ್ಸ್ನಸ್ಯ ಜ್ಞಾತತ್ವಾತ್ । ಸತ್ಯಮ್, ಆಪಾತಪ್ರತೀತಿರ್ವಿದ್ಯತ ಏವ; ತಥಾಪಿ ನ್ಯಾಯಾನುಗೃಹೀತಸ್ಯ ವಾಕ್ಯಸ್ಯಾರ್ಥನಿಶ್ಚಾಯಕತ್ವಾದಾಪಾತಪ್ರತೀತೋಽಪ್ಯರ್ಥಸ್ಸಂಶಯವಿಪರ್ಯಯೌ ನಾತಿವರ್ತತೇ । ಅತಸ್ತನ್ನಿರ್ಣಯಾಯ ವೇದಾನ್ತವಾಕ್ಯವಿಚಾರಃ ಕರ್ತವ್ಯ ಇತಿ ಚೇತ್, ತಥೈವ ಧರ್ಮವಿಚಾರೋಽಪಿ ಕರ್ತವ್ಯ ಇತಿ ಪಶ್ಯತು ಭವಾನ್ ॥

---

1. ಬ್ರಹ್ಮವನ್ನೇ ಉಪಾಸನೆಮಾಡಿ ಸಾಕ್ಷಾತ್ಕಾರವನ್ನು ಹೊಂದಿದವನು.

2. ಇದು ಯಾವ ಶ್ರುತಿ ಎಂಬುದು ಗೊತ್ತಾಗಲಿಲ್ಲ. ಮುಂದೆ ಮತ್ತೊಂದುಸಲ ಇದನ್ನು ಉದಾಹರಿಸಿದೆ. ಪರಮೇಶ್ವರನನ್ನು ಕಂಡುಕೊಂಡವನು ಪುನರ್ಮರಣವಿಲ್ಲದೆ ಮೋಕ್ಷವನ್ನು ಪಡೆಯುತ್ತಾನೆ ಎಂಬುದು ಯಥಾಶ್ರುತಾರ್ಥ; ಮೃತ್ಯುವೆಂದರೆ ಇಲ್ಲಿ ಪ್ರಮಾದ ಅಥವಾ ಮೋಹ– ಎಂದು ಶ್ರೀ. ಪ್ರ.

3. ಬದ್ಧನಾದ ಮತ್ತು ಮುಕ್ತನಾದ ಜೀವನಿಗಿಂತ ವಿಲಕ್ಷಣನಾದವನು ಈಶ್ವರನು– ಎಂಬುದು ಈ ಸಿದ್ಧಾಂತದ ಒಂದು ಪ್ರಧಾನೋಪದೇಶ.

(ಅರ್ಥ)

(ಶಂಕೆ) :– ಸಾಙ್ಗವೇದಾಧ್ಯಯನವನ್ನು ಮಾಡಿದ್ದರಿಂದಲೇ ಕರ್ಮಗಳಿಗೆ ಸ್ವರ್ಗಾದಿಗಳು ಫಲವೆಂದೂ, ಸ್ವರ್ಗಾದಿಗಳು ಕ್ಷಯವಾಗತಕ್ಕವೆಂದೂ ಬ್ರಹ್ಮದ ಉಪಾಸನೆಗೆ ಅಮೃತತ್ವವೇ ಫಲವೆಂದೂ ತಿಳಿದೇತಿಳಿಯುತ್ತದೆ; ಆ ಬಳಿಕ ಮುಮುಕ್ಷುವಾದವನು ಬ್ರಹ್ಮಜಿಜ್ಞಾಸೆಯಲ್ಲಿಯೇ ತೊಡಗಿಬಿಡಲಿ; ಧರ್ಮವಿಚಾರವನ್ನು ಮಾಡಬೇಕೆಂಬುದೇಕೆ ?

(ಪ್ರತಿಶಂಕೆ) :– ಹಾಗಾದರೆ ಶಾರೀರಕಮೀಮಾಂಸೆಯಲ್ಲಿಯೂ ತೊಡಗದೆ ಇರಲಿ; ಏಕೆಂದರೆ ಸಾಂಗಾಧ್ಯಯನದಿಂದಲೇ ಎಲ್ಲವನ್ನೂ ಅರಿತೇ ಆಗಿದೆಯಲ್ಲ !

(ಪೂರ್ವಪಕ್ಷಿ) :– ನಿಜ. ಹಾಗೆಂದು ಸಾಮಾನ್ಯವಾದ ತಿಳಿವಳಿಕೆಯುಂಟಾಗಿಯೇ ಇರುತ್ತದೆ; ಆದರೂ ವಾಕ್ಯಕ್ಕೆ ನ್ಯಾಯದ ಬೆಂಬಲವುಂಟಾದ ಮೇಲೆಯೇ ಅರ್ಥವು ನಿಶ್ಚಯವಾಗುತ್ತದೆಯಾದ್ದರಿಂದ ಸಾಮಾನ್ಯವಾಗಿ ತಿಳಿದಿದ್ದರೂ ಅರ್ಥವು ಸಂಶಯ, ತಪ್ಪುತಿಳಿವಳಿಕೆ– ಇವನ್ನು ಮೀರಿರುವದಿಲ್ಲ. ಆದ್ದರಿಂದ ಆ (ಅರ್ಥ)ವನ್ನು ನಿರ್ಣಯಿಸುವದಕ್ಕಾಗಿ ವೇದಾಂತವಾಕ್ಯವಿಚಾರವನ್ನು ಮಾಡಬೇಕು.

(ಸಿದ್ಧಾಂತಿ) :– ಹಾಗೆಯೇ[1] ಧರ್ಮವಿಚಾರವನ್ನೂ ಮಾಡಬೇಕು–ಎಂದು ತಿಳಿಯಯ್ಯ.

## ಅಥಶಬ್ದದ ಅರ್ಥದ ವಿಷಯಕ್ಕೆ ಅದ್ವೈತಿಯ ಲಘುಪೂರ್ವಪಕ್ಷ

(ಮೂಲ)

೮. ನನು ಚ ಬ್ರಹ್ಮಜಿಜ್ಞಾಸಾ ಯದೇವ ನಿಯಮೇನಾಪೇಕ್ಷತೇ, ತದೇವ ಪೂರ್ವವೃತ್ತಂ ವಕ್ತವ್ಯಮ್ । ನ ಧರ್ಮವಿಚಾರಾಪೇಕ್ಷಾ ಬ್ರಹ್ಮಜಿಜ್ಞಾಸಾಯಾಃ; ಅಧೀತವೇದಾನ್ತಸ್ಯ ಅನಧಿಗತಕರ್ಮಣೋಽಪಿ ವೇದಾನ್ತವಾಕ್ಯಾರ್ಥವಿಚಾರೋಪಪತ್ತೇಃ । ಕರ್ಮಾಙ್ಗವ್ಯಪಾಶ್ರಯಾಣಿ[2] ಉದ್ಗೀಥಾದ್ಯುಪಾಸನಾನಿ ಅತ್ರೈವ ಚಿನ್ತ್ಯನ್ತೇ; ತದನಧಿಗತಕರ್ಮಣೋ ನ ಶಕ್ಯಂ ಕರ್ತುಮ್ ಇತಿ ಚೇತ್; ಅನಭಿಜ್ಞೋ ಭವಾನ್ ಶಾರೀರಕಶಾಸ್ತ್ರವಿಜ್ಞಾನಸ್ಯ । ಅಸ್ಮಿನ್ ಶಾಸ್ತ್ರೇ ಅನಾದ್ಯವಿದ್ಯಾಕೃತವಿವಿಧಭೇದದರ್ಶನನಿಮಿತ್ತಜನ್ಮಜರಾಮರಣಾದಿಸಾಂಸಾರಿಕದುಃಖ

---

1. ವಾಕ್ಯಗಳಿಂದ ಧರ್ಮದ ಸ್ವರೂಪವೂ ಫಲವೂ ಹೀಗೆಯೇ ಎಂದು ಸಾಮಾನ್ಯವಾಗಿ ತಿಳಿದಿದ್ದರೂ ನ್ಯಾಯಕ್ಕೆ ಹೊಂದುವಂತೆ ವಾಕ್ಯಾರ್ಥದ ನಿರ್ಣಯವಾಗಿರುವದಿಲ್ಲವಾದ್ದರಿಂದ ಧರ್ಮಜಿಜ್ಞಾಸೆಯನ್ನು ಮಾಡಬೇಕಾಗಿರುವಂತೆ ಬ್ರಹ್ಮಜಿಜ್ಞಾಸೆಯನ್ನೂ ಮಾಡಬೇಕಾದದ್ದು ಅವಶ್ಯ– ಎಂದು ಅಭಿಪ್ರಾಯ.

2. ‘ಕರ್ಮಾಙ್ಗಾಶ್ರಯಾಣಿ’ ಎಂದು ಪು॥ ಕಂ॥ ಪಾ॥

ಸಾಗರೇನಿಮಗ್ನಸ್ಯ ನಿಖಿಲದುಃಖಮೂಲ[1] ಮಿಥ್ಯಾಜ್ಞಾನನಿಬರ್ಹಣಾಯ ಆತ್ಮೈಕತ್ವ ವಿಜ್ಞಾನಂ ಪ್ರತಿಪಿಪಾದಯಿಷಿತಮ್ । ಅಸ್ಯ ಹಿ ಭೇದಾವಲಮ್ಬಿ ಕರ್ಮಜ್ಞಾನಂ ಕ್ವೋಪಯುಜ್ಯತೇ ? ಪ್ರತ್ಯುತ ವಿರುದ್ಧಮೇವ । ಉದ್ಗೀಥಾದಿವಿಚಾರಸ್ತು ಕರ್ಮ ಶೇಷಭೂತ ಏವ ಜ್ಞಾನರೂಪತ್ವಾವಿಶೇಷಾತ್ ಇಹೈವ ಕ್ರಿಯತೇ । ಸ ತು ನ ಸಾಕ್ಷಾತ್ ಸಙ್ಗತಃ । ಅತೋ ಯತ್ಪ್ರಧಾನಂ ಶಾಸ್ತ್ರಮ್, ತದಪೇಕ್ಷಿತಮೇವ ಪೂರ್ವವೃತ್ತಂ ಕಿಮಪಿ ವಕ್ತವ್ಯಮ್ ॥

(ಅರ್ಥ)

ಇನ್ನೊಂದು ಶಂಕೆ :- ಬ್ರಹ್ಮಜಿಜ್ಞಾಸೆಗೆ ಯಾವದು ನಿಯಮವಾಗಿ ಬೇಕಾಗಿರುತ್ತದೆಯೋ ಅದನ್ನೇ ಅಲ್ಲವೆ, ಹಿಂದೆ ಆಗಿರಬೇಕೆಂದು ಹೇಳಬೇಕು ? ಬ್ರಹ್ಮ ಜಿಜ್ಞಾಸೆಗೆ (ಹಾಗೆ) ಧರ್ಮಜಿಜ್ಞಾಸೆಯೇ ಆಗಿರಬೇಕಾದದ್ದಿಲ್ಲ. ಏಕೆಂದರೆ ವೇದಾಂತಗಳನ್ನು ಅಧ್ಯಯನಮಾಡುವವನು ಕರ್ಮ(ವಿಚಾರ)ವನ್ನು ತಿಳಿದು ಕೊಳ್ಳದೆಇದ್ದರೂ ವೇದಾಂತವಾಕ್ಯಗಳ ವಿಚಾರವನ್ನು ಮಾಡಬಹುದಲ್ಲ !

ಕರ್ಮಾಂಗವಾಗಿರುವ ಉದ್ಗೀಥವೇ ಮುಂತಾದವುಗಳ ಉಪಾಸನೆಗಳನ್ನು ಇಲ್ಲಿಯೇ ವಿಚಾರಮಾಡಲಾಗುತ್ತಿದೆ ; ಆ ವಿಚಾರವನ್ನು ಮಾಡುವದು ಕರ್ಮ ವಿಚಾರವನ್ನು ಅರಿಯದವನಿಗೆ ಆಗಲಾರದಲ್ಲ ! -ಎನ್ನುವಿರಾದರೆ, ಸಮಾಧಾನ ವೇನೆಂದರೆ, ನಿಮಗೆ ಶಾರೀರಕಶಾಸ್ತ್ರವಿಜ್ಞಾನವು ತಿಳಿಯದು. ಹೇಗೆಂದರೆ, ಈ ಶಾಸ್ತ್ರದಲ್ಲಿ ಅನಾದಿಯಾದ ಅವಿದ್ಯೆಯಿಂದ[2] ಆಗಿರುವ ಬಗೆಬಗೆಯ ಭೇದಗಳನ್ನು ಕಾಣುವ ನಿಮಿತ್ತದಿಂದ ಹುಟ್ಟು, ಮುಪ್ಪು, ಸಾವು-ಮುಂತಾದ ಸಂಸಾರದುಃಖಗಳ ಸಾಗರದಲ್ಲಿ ಮುಳುಗಿದವನಿಗೆ ಎಲ್ಲಾ ದುಃಖಗಳಿಗೂ ಮೂಲವಾದ ಮಿಥ್ಯಾಜ್ಞಾನ ವನ್ನು[3] ನಾಶಗೊಳಿಸುವದಕ್ಕಾಗಿ ಆತ್ಮೈಕತ್ವವಿಜ್ಞಾನವನ್ನು ಪ್ರತಿಪಾದಿಸಬೇಕೆಂದು ಹೊರಟಿರುತ್ತದೆ. ಇದಕ್ಕೆ ಭೇದವನ್ನಾಶ್ರಯಿಸಿಕೊಂಡಿರುವ ಕರ್ಮದ ಜ್ಞಾನವು ಎಲ್ಲಿ ಉಪಯೋಗವಾದೀತು ? ಇದಕ್ಕೆ ಬದಲು ವಿರುದ್ಧವೇ ಆಗಿರುತ್ತದೆ. ಉದ್ಗೀಥಾದಿಗಳ ವಿಚಾರವಾದರೋ, ಕರ್ಮಕ್ಕೆ ಅಂಗವೇ ಆಗಿರುತ್ತದೆ ; ಅದು 'ಜ್ಞಾನರೂಪವೇ[4] ಆಗಿರುವದೆಂಬುದು ಸಮಾನವಾಗಿರುವದರಿಂದ (ಆ ವಿಚಾರ ವನ್ನು) ಇಲ್ಲಿಯೇ ಮಾಡಿರುತ್ತದೆ. ಆದರೆ ಅದು (ಮುಖ್ಯಪ್ರಕರಣಕ್ಕೆ) ನೇರಾಗಿ ಸಂಗತವಾಗಿರುವದಿಲ್ಲ. ಆದ್ದರಿಂದ ಶಾಸ್ತ್ರವು ಯಾವದನ್ನು ಮುಖ್ಯವಾಗಿಟ್ಟು ಕೊಂಡಿದೆಯೋ ಆ (ಜ್ಞಾನ)ಕ್ಕೆ ಬೇಕಾದ ಯಾವದಾದರೊಂದು ಪೂರ್ವವೃತ್ತ ವನ್ನೇ ಹೇಳಬೇಕು.

---

1. 'ಮೂಲಭೂತ' ಪೂ॥ ಪಾಠ.
2. ಇಲ್ಲಿ ಅವಿದ್ಯೆಯೆಂಬುದಕ್ಕೆ ಶಂಕರವ್ಯಾಖ್ಯಾನಕಾರರಿಗೆ ಸಮ್ಮತವಾದ ಅರ್ಥ.
3. ಅವಿದ್ಯೆಯನ್ನು.
4. ಜ್ಞಾನವೂ ಮಾನಸ, ಉಪಾಸನೆಯೂ ಮಾನಸ ; ಆದ್ದರಿಂದ ಎರಡೂ ಜ್ಞಾನ ಶಬ್ದವಾಚ್ಯ.

## ಭಾಸ್ಕರಾನುಯಾಯಿಯ ಅಭಿಪ್ರಾಯ

(ಮೂಲ)

ಬಾಧಮ್ । ತದಪೇಕ್ಷಿತಂ ಚ ಕರ್ಮವಿಜ್ಞಾನಮೇವ; ಕರ್ಮಸಮುಚ್ಚಿತಾತ್ ಜ್ಞಾನಾತ್ ಅಪವರ್ಗಶ್ರುತೇಃ । ವಕ್ಷ್ಯತಿ ಚ 'ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವತ್' (ಸೂ. ೩-೪-೨೬) ಇತಿ । ಅಪೇಕ್ಷಿತೇ ಚ ಕರ್ಮಣ್ಯಜ್ಞಾತೇ ಕೇನ ಸಮುಚ್ಚಯಃ ಕೇನ ನ – ಇತಿ ವಿಭಾಗೋ ನ ಶಕ್ಯತೇ ವಿಜ್ಞಾತುಮ್ । ಅತಸ್ತದೇವ ಪೂರ್ವವೃತ್ತಮ್ ॥

(ಅರ್ಥ)

ನಿಜ. ಆ (ಜ್ಞಾನಕ್ಕೆ)[1] ಬೇಕಾದದ್ದು ಕರ್ಮವಿಜ್ಞಾನವೇ : ಏಕೆಂದರೆ ಕರ್ಮಸಮುಚ್ಚಿತವಾದ ಜ್ಞಾನದಿಂದ ಮೋಕ್ಷವಾಗುವದೆಂದು ಶ್ರುತಿಯಿದೆ. 'ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವತ್' (ಸೂ. ೩-೪-೨೬), 'ಎಲ್ಲಾ ಆಶ್ರಮಕರ್ಮಗಳೂ (ಮೋಕ್ಷಕ್ಕೆ ಸಾಧನಗಳು). ಏಕೆಂದರೆ ಯಜ್ಞಾದಿಶ್ರುತಿಯಿದೆ. ಕುದುರೆಯಂತೆ'[2]– ಎಂದು ಮುಂದೆ ಸೂತ್ರಕಾರರು ಹೇಳಿಯೂ ಇರುತ್ತಾರೆ. ಜ್ಞಾನಕ್ಕೆ ಬೇಕಾದ ಕರ್ಮದ (ಸ್ವರೂಪವನ್ನು) ತಿಳಿದುಕೊಳ್ಳದಿದ್ದರೆ ಯಾವ (ಕರ್ಮ)ದೊಡನೆ ಸಮುಚ್ಚಯವನ್ನು ಮಾಡಬೇಕು, ಯಾವದರೊಡನೆ ಮಾಡಬಾರದು– ಎಂಬುವನ್ನು ಅರಿಯುವದಕ್ಕೆ ಆಗುವದಿಲ್ಲ. ಆದ್ದರಿಂದ ಅದೇ (ಕರ್ಮಜ್ಞಾನವೇ ಜ್ಞಾನಕ್ಕೆ) ಮೊದಲು ಆಗಿರುವದು.[3]

(ಮೂಲ)

ನೈತದ್ಯುಕ್ತಮ್, ಸಕಲವಿಶೇಷಪ್ರತ್ಯನೀಕಚಿನ್ಮಾತ್ರಬ್ರಹ್ಮವಿಜ್ಞಾನಾದೇವ ಅವಿದ್ಯಾನಿವೃತ್ತೇಃ । ಅವಿದ್ಯಾನಿವೃತ್ತಿರೇವ ಹಿ ಮೋಕ್ಷಃ । ವರ್ಣಾಶ್ರಮವಿಶೇಷಸಾಧ್ಯಸಾಧನೇತಿಕರ್ತವ್ಯತಾದ್ಯನನ್ತವಿಕಲ್ಪಾಸ್ಪದಂ ಕರ್ಮ ಸಕಲಭೇದದರ್ಶನನಿವೃತ್ತಿರೂಪಾಜ್ಞಾನನಿವೃತ್ತೇಃ ಕಥಮಿವ ಸಾಧನಂ ಭವೇತ್? ಶ್ರುತಯಶ್ಚ ಕರ್ಮಣಾಮ್ ಅನಿತ್ಯಫಲತ್ವೇನ ಮೋಕ್ಷವಿರೋಧಿತ್ವಮ್, ಜ್ಞಾನಸ್ಯೈವ ಮೋಕ್ಷ

---

1. ಭಾಸ್ಕರಮತದಲ್ಲಿ ಜ್ಞಾನವೆಂದರೆ ಉಪಾಸನೆಯೇ; ಪೂರ್ವಪಕ್ಷಿಗೆ ಸಮ್ಮತವಾದ ವಸ್ತುತಂತ್ರಜ್ಞಾನವಲ್ಲ. ಇಲ್ಲಿ ಭಾಸ್ಕರಪಕ್ಷವನ್ನೂ ಯಾದವಪ್ರಕಾಶಪಕ್ಷವನ್ನೂ ಆಶ್ರಯಿಸಿಕೊಂಡ ಮಧ್ಯಸ್ಥನೊಬ್ಬನು ಈ ಮತವನ್ನೊಡ್ಡಿದ್ದಾನೆ- ಎಂದು ವ್ಯಾಖ್ಯಾನ ಮಾಡುವದು ಸಂಪ್ರದಾಯಾನುಸಾರ ಎಂದು ಶ್ರುತ. ಪ್ರ. ಪು. ೩೫.

2. ಭಾಸ್ಕರಸೂತ್ರಭಾಷ್ಯದಲ್ಲಿ ಈ ದೃಷ್ಟಾಂತವನ್ನು ಹೀಗೆ ವಿವರಿಸಿದೆ : "ಹೇಗೆ ಕುದುರೆಯು ತನ್ನ ಯೋಗ್ಯತೆಗೆ ತಕ್ಕಂತೆ ಸವಾರಿಗೆ ಉಪಯೋಗಿಸಲ್ಪಡುವದೋ, ಬೇಸಾಯಕ್ಕೆ ಉಪಯೋಗಿಸಲ್ಪಡುವದಿಲ್ಲವೋ ಹಾಗೆ ಕರ್ಮಸಹಿತವಾದ ವಿದ್ಯೆಯು ಮೋಕ್ಷಪ್ರಾಪ್ತಿಗೆ ಯೋಗ್ಯವಾಗಿದೆ".

3. ಅಥಶಬ್ದಕ್ಕೆ ಕರ್ಮಜ್ಞಾನವಾದಮೇಲೆ –ಎಂದೇ ಅರ್ಥ. ಭಾಸ್ಕರ ಸೂ. ಭಾ. ೧-೧-೧ ನೋಡಿರಿ.

ಸಾಧನತ್ವಂ ಚ ದರ್ಶಯನ್ತಿ 'ಅನ್ತವದೇವಾಸ್ಯ ತದ್ಭವತಿ' (ಬೃ. ೩–೮–೧೦), 'ತದ್ಯಥೇಹ ಕರ್ಮಜಿತೋ ಲೋಕಃ ಕ್ಷೀಯತೇ ಏವಮೇವಾಮುತ್ರ ಪುಣ್ಯಜಿತೋ ಲೋಕಃ ಕ್ಷೀಯತೇ' (ಛಾಂ. ೮–೧–೬), 'ಬ್ರಹ್ಮವಿದಾಪ್ನೋತಿ ಪರಮ್' (ತೈ. ೨–೧), 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ. ೩–೨–೯), 'ತಮೇವ ವಿದಿತ್ವಾऽತಿಮೃತ್ಯುಮೇತಿ' (ಶ್ವೇ. ೩–೮) ಇತ್ಯಾದ್ಯಾಃ ॥

(ಅರ್ಥ)

(ಅದ್ವೈತಿ) :– ಇದು ಸರಿಯಲ್ಲ. ಏಕೆಂದರೆ ಸರ್ವವಿಶೇಷಗಳಿಗೂ ವಿರುದ್ಧವಾಗಿರುವ ಚಿನ್ಮಾತ್ರಬ್ರಹ್ಮವಿಜ್ಞಾನದಿಂದಲೇ ಅವಿದ್ಯೆಯು ನಿವೃತ್ತವಾಗುತ್ತದೆ.[1] ಅವಿದ್ಯಾನಿವೃತ್ತಿಯೇ ಅಲ್ಲವೆ, **ಮೋಕ್ಷವು** ? ವರ್ಣಾಶ್ರಮವಿಶೇಷಗಳು, ಸಾಧ್ಯ, ಸಾಧನ, ಇತಿಕರ್ತವ್ಯತೆ[2]– ಮುಂತಾದ ಅನಂತವಿಕಲ್ಪಗಳಿಗೆ ಆಶ್ರಯವಾದ[3] ಕರ್ಮವೂ ಸಕಲಭೇದಗಳನ್ನೂ ಕಾಣುವದನ್ನು ತೊಲಗಿಸುವ ರೂಪವಾದ ಅಜ್ಞಾನ ನಿವೃತ್ತಿಗೆ ಹೇಗೆತಾನೆ ಸಾಧನವಾದೀತು ? ಶ್ರುತಿಗಳಾದರೂ, ಕರ್ಮಗಳು ಅನಿತ್ಯ ಫಲವುಳ್ಳವಾಗಿರುವದರಿಂದ ಮೋಕ್ಷಕ್ಕೆ ವಿರೋಧಿಯಾಗಿವೆಯೆಂದೂ ಜ್ಞಾನವೇ ಮೋಕ್ಷಸಾಧನವೆಂದೂ ತಿಳಿಸುತ್ತಿವೆ. (ಅವು ಯಾವವೆಂದರೆ) 'ಈತನ ಆ ಕರ್ಮವು ಅಂತವುಳ್ಳದ್ದೇ ಆಗಿರುತ್ತದೆ' (ಬೃ. ೩-೮-೧೦), 'ಹೇಗೆ ಇಲ್ಲಿ ಕರ್ಮದಿಂದ ಗೆದ್ದ ಲೋಕವು ಕ್ಷಯವಾಗುತ್ತದೆಯೋ, ಹಾಗೆಯೇ ಅಲ್ಲಿ ಪುಣ್ಯದಿಂದ ಗೆದ್ದುಕೊಂಡ ಲೋಕವು ಕ್ಷಯವಾಗುವದು' (ಛಾಂ. ೮–೧–೬), 'ಬ್ರಹ್ಮವನ್ನರಿತವನು ಪರಮ ಪುರುಷಾರ್ಥವನ್ನು ಪಡೆಯುತ್ತಾನೆ' (ತೈ. ೨–೧), 'ಬ್ರಹ್ಮವನ್ನು ಅರಿತರೆ ಬ್ರಹ್ಮವೇ ಆಗುತ್ತಾನೆ' (ಮುಂ. ೩–೨–೯), 'ಆತನನ್ನೇ ಅರಿತುಕೊಂಡರೆ ಅತಿಮೃತ್ಯುವನ್ನು ಪಡೆಯುವನು' (ಶ್ವೇ. ೩–೮) ಮುಂತಾದವು.[4]

(ಮೂಲ)

ಯದಪಿ ಚೋದಮುಕ್ತಮ್ ಯಜ್ಞಾದಿಕರ್ಮಾಪೇಕ್ಷಾ ವಿದ್ಯಾ ಇತಿ, ತದ್ ವಸ್ತುವಿರೋಧಾತ್ ಶ್ರುತ್ಯಕ್ಷರಪರ್ಯಾಲೋಚನಯಾ ಚಾನ್ತಃಕರಣನೈರ್ಮಲ್ಯ ದ್ವಾರೇಣ ವಿವಿದಿಷೋತ್ಪತ್ತೌ ಉಪಯುಜ್ಯತೇ ; ನ ಫಲೋತ್ಪತ್ತೌ, 'ವಿವಿದಿಷನ್ತಿ' (ಬೃ. ೪–೪–೨೨) ಇತಿ ಶ್ರವಣಾತ್ । ವಿವಿದಿಷಾಯಾಂ ಜಾತಾಯಾಂ ಜ್ಞಾನೋ

1. ಚಿನ್ಮಾತ್ರಬ್ರಹ್ಮಜ್ಞಾನದಿಂದ ಅವಿದ್ಯೆಯು ತೊಲಗುವದೆಂಬುದು ಅದ್ವೈತಿಯ ಸಿದ್ಧಾಂತ. ('ಚಿನ್ಮಾತ್ರ' ಎಂಬ ಶಬ್ದವು ಸೂ. ಭಾ. ದಲ್ಲಿ ಕಾಣುವದಿಲ್ಲ).

2. ಹೀಗೆ ಮಾಡಬೇಕೆಂಬುದು.

3. 'ವಿಕಲ್ಪಾಸ್ಪದ' ಎಂಬ ಮಾತನ್ನು ಶಾಂಕರಭಾಷ್ಯದಲ್ಲಿ ಈ ಅರ್ಥದಲ್ಲಿ ಬಳಸಿಲ್ಲ ; 'ಶುಕ್ತಿರಜತವೆಂಬ ವಿಕಲ್ಪಕ್ಕೆ ಶುಕ್ತಿಯು ಆಸ್ಪದ'– ಎಂದು ಅಲ್ಲಿ ಪ್ರಯೋಗವಿದೆ.

4. ಈ ಮತದಲ್ಲಿ ಜ್ಞಾನವೆಂದರೆ ವಸ್ತುವಿನ ಅರಿವು, ಉಪಾಸನೆಯಲ್ಲ.

ತ್ಪತ್ತೌ ಶಮಾದೀನಾಮೇವಾನ್ತರಙ್ಗೋಪಾಯತಾಂ ಶ್ರುತಿರೇವಾಽಽಹ 'ಶಾನ್ತೋ ದಾನ್ತ ಉಪರತಸ್ತಿತಿಕ್ಷುಃ ಸಮಾಹಿತೋ ಭೂತ್ವಾಽಽತ್ಮನ್ಯೇವಾತ್ಮಾನಂ ಪಶ್ಯೇತ್' (ಬೃ. ೪-೪-೨೩) ಇತಿ ॥

(ಅರ್ಥ)

ಇನ್ನು ವಿದ್ಯೆಗೆ ಯಜ್ಞಾದಿಕರ್ಮಗಳ ಅಪೇಕ್ಷೆಯಿದೆ ಎಂದಿರಷ್ಟೆ ? ಅದು[1] ವಸ್ತುಗಳು[2] ಪರಸ್ಪರವಿರೋಧವಾಗಿರುವದರಿಂದಲೂ ಶ್ರುತಿಯ ಮಾತುಗಳನ್ನು ಪರ್ಯಾಲೋಚಿಸಿದರೆ ಅಂತಃಕರಣವನ್ನು ಶುದ್ಧಿಗೊಳಿಸುವ ಮೂಲಕ ವಿವಿದಿಷೆಯನ್ನು[3] ಉಂಟುಮಾಡುವದಕ್ಕೆ ಉಪಯೋಗವಾಗುತ್ತದೆಯೇ ಹೊರತು (ಜ್ಞಾನರೂಪ)ಫಲವನ್ನೇ ಉಂಟುಮಾಡುವದಕ್ಕೆ ಉಪಯೋಗವಾಗುವದಿಲ್ಲ. ವಿವಿದಿಷೆಯುಂಟಾದಮೇಲೆ ಜ್ಞಾನೋತ್ಪತ್ತಿಗೆ ಶಮಾದಿಗಳೇ ಅಂತರಂಗೋಪಾಯವೆಂದು 'ಶಾಂತನೂ ದಾಂತನೂ ಉಪರತನೂ ತಿತಿಕ್ಷುವೂ ಸಮಾಹಿತನೂ ಆಗಿ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳಬೇಕು' (ಬೃ. ೪-೪-೨೩) ಎಂದು ಶ್ರುತಿಯೇ ಹೇಳಿರುತ್ತದೆ.[4]

(ಮೂಲ)

ತದೇವಂ ಜನ್ಮಾನ್ತರಶತಾನುಷ್ಠಿತಾನಭಿಸಂಹಿತಫಲವಿಶೇಷಕರ್ಮಮೃದಿತಕಷಾಯಸ್ಯ ವಿವಿದಿಷೋತ್ಪತ್ತೌ ಸತ್ಯಾಂ 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ. ೬-೨-೧), 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧), 'ನಿಷ್ಕಲಂ ನಿಷ್ಕ್ರಿಯಂ ಶಾನ್ತಮ್'[5] (ಶ್ವೇ. ೬-೧೯), 'ಅಯಮಾತ್ಮಾ ಬ್ರಹ್ಮ' (ಬೃ. ೪-೫-೧೯), 'ತತ್ತ್ವಮಸಿ' (ಛಾಂ. ೬-೮-೭)- ಇತ್ಯಾದಿವಾಕ್ಯಜನ್ಯಜ್ಞಾನಾತ್ ಅವಿದ್ಯಾ ನಿವರ್ತತೇ ।

ವಾಕ್ಯಾರ್ಥಜ್ಞಾನೋಪಯೋಗೀನಿ ಚ ಶ್ರವಣಮನನನಿದಿಧ್ಯಾಸನಾನಿ । ಶ್ರವಣಂ ನಾಮ ವೇದಾನ್ತವಾಕ್ಯಾನಿ ಆತ್ಮೈಕತ್ವವಿದ್ಯಾಪ್ರತಿಪಾದಕಾನೀತಿ

---

1. ಕರ್ಮವೂ. 2. ಜ್ಞಾನಕರ್ಮಗಳು.

3. ಆತ್ಮನನ್ನು ಅರಿಯಬೇಕೆಂಬ ಇಚ್ಛೆಯನ್ನು -ಎಂದರ್ಥ. ಶಂಕರಾಚಾರ್ಯರ ಸೂ. ಭಾ. ೩-೪-೨೬ರಲ್ಲಿ ವಿದ್ಯೆಯ ಉತ್ಪತ್ತಿಗೇ ಕಾರಣವೆಂದು ಹೇಳಿದ್ದರೂ ವಿವಿದಿಷೆಯ ಮೂಲಕವಾಗಿಯೇ ಉತ್ಪತ್ತಿಗೆ ದ್ವಾರ- ಎಂದು ಅದಕ್ಕೆ ಅರ್ಥ ಎಂಬುದು ಅದ್ವೈತಿಯ ಅಭಿಪ್ರಾಯ.

4. ಬೃಹದಾರಣ್ಯಕದಲ್ಲಿ ಕಾಣ್ವಪಾಠದಲ್ಲಿ 'ಪಶ್ಯೇತ್' ಎಂತ ಪಾಠವಿಲ್ಲ; 'ಪಶ್ಯತಿ' ಎಂದೇ ಇದೆ. ಮಾಧ್ಯಂದಿನಪಾಠದಲ್ಲಿ 'ಪಶ್ಯೇತ್' ಎಂದಿದೆ. ಅಲ್ಲಿ ಪಾಠವು ಹೀಗಿದೆ: 'ಶಾನ್ತೋ ದಾನ್ತ ಉಪರತಸ್ತಿತಿಕ್ಷುಃ ಶ್ರದ್ಧಾವಿತ್ತೋ ಭೂತ್ವಾಽಽತ್ಮನ್ಯೇವಾತ್ಮಾನಂ ಪಶ್ಯೇತ್'

5. 'ನಿರವದ್ಯಂ ನಿರಞ್ಜನಮ್' ಎಂದು ಅಧಿಕಪಾಠವು ಉಂಟು.

ತತ್ತ್ವದರ್ಶಿನ ಆಚಾರ್ಯಾತ್, ನ್ಯಾಯಯುಕ್ತಾರ್ಥಗ್ರಹಣಮ್ । ಏವಮಾಚಾರ್ಯೋಪದಿಷ್ಟಸ್ಯಾರ್ಥಸ್ಯ ಸ್ವಾತ್ಮನಿ 'ಏವಮೇವ ಯುಕ್ತಮ್' ಇತಿ ಹೇತುತಃ ಪ್ರತಿಷ್ಠಾಪನಂ **ಮನನಮ್** । ಏತದ್ವಿರೋಧ್ಯನಾದಿಭೇದವಾಸನಾನಿರಸನಾಯ ಅಸ್ಯೈವಾರ್ಥಸ್ಯ ಅನವರತಭಾವನಾ **ನಿದಿಧ್ಯಾಸನಮ್** । ಶ್ರವಣಾದಿಭಿರ್ನಿರಸ್ತಸಮಸ್ತಭೇದವಾಸನಸ್ಯ ವಾಕ್ಯಾರ್ಥಜ್ಞಾನಮ್ ಅವಿದ್ಯಾಂ ನಿವರ್ತಯತಿ–ಇತ್ಯೇವಂರೂಪಸ್ಯ ಶ್ರವಣಸ್ಯಾವಶ್ಯಾಪೇಕ್ಷಿತಮೇವ ಪೂರ್ವವೃತ್ತಂ ವಕ್ತವ್ಯಮ್ ॥

ತಚ್ಚ ನಿತ್ಯಾನಿತ್ಯವಸ್ತುವಿವೇಕಃ, ಶಮದಮಾದಿಸಾಧನಸಮ್ಪತ್, ಇಹಾಮುತ್ರಫಲಭೋಗವಿರಾಗಃ, ಮುಮುಕ್ಷುತ್ವಂ ಚ–ಇತ್ಯೇತತ್ಸಾಧನಚತುಷ್ಟಯಮ್ । ಅನೇನ ವಿನಾ ಜಿಜ್ಞಾಸಾನುಪಪತ್ತೇಃ, ಅರ್ಥಸ್ವಭಾವಾದೇವೇದಮೇವ ಪೂರ್ವವೃತ್ತಮ್ ಇತಿ ಜ್ಞಾಯತೇ ॥

(ಅರ್ಥ)

ಅಂತೂ ಹೀಗೆ ನೂರಾರು ಹಿಂದಿನ ಜನ್ಮಾಂತರಗಳಲ್ಲಿ[1] ಫಲವಿಶೇಷವನ್ನು ಇಚ್ಛಿಸದೆ ಅನುಷ್ಠಾನಮಾಡಿದ ಕರ್ಮದಿಂದ ಕಷಾಯವು[2] ನಾಶವಾಗಲಾಗಿ ವಿವಿದಿಷೆಯು ಉಂಟಾದ್ದರಿಂದ 'ಅಯ್ಯ, ಇದು ಮೊದಲು ತನಗೆರಡನೆಯದಿಲ್ಲದ ಸತ್ತೊಂದೇ ಆಗಿತ್ತು' (ಛಾಂ. ೬–೨–೧), 'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು....' (ತೈ. ೨–೧), 'ನಿರವಯವವೂ ಕ್ರಿಯಾರಹಿತವೂ ಶಾಂತವೂ (ನಿರ್ದುಷ್ಟವೂ ಯಾವ ಲೇಪವೂ ಇಲ್ಲದ್ದೂ)' (ಶ್ವೇ. ೬–೧೯), 'ಈ ಆತ್ಮನೇ ಬ್ರಹ್ಮವು'[3] (ಬೃ. ೨–೫–೧೯), 'ಅದೇ ನೀನಾಗಿರುವೆ' (ಛಾಂ.೬-೮-೭)–ಎಂಬಿವೇ ಮುಂತಾದ ವಾಕ್ಯಗಳಿಂದ ಹುಟ್ಟಿದ ಜ್ಞಾನದಿಂದ ಅವಿದ್ಯೆಯು ತೊಲಗುತ್ತದೆ; ಮತ್ತು ವಾಕ್ಯಾರ್ಥದ ಜ್ಞಾನಕ್ಕೆ ಶ್ರವಣ, ಮನನ, ನಿದಿಧ್ಯಾಸನಗಳು ಉಪಯೋಗವಾಗುವವು.

ಶ್ರವಣವೆಂದರೆ ವೇದಾಂತವಾಕ್ಯಗಳು ಆತ್ಮೈಕತ್ವವಿದ್ಯೆಯನ್ನು ತಿಳಿಸುತ್ತವೆ

---

1. ಜನ್ಮಾಂತರಗಳಲ್ಲಿಯೇ ಮಾಡಿರಬೇಕೆಂಬುದೇನೂ ಇಲ್ಲ ; ಒಂದೇ ಜನ್ಮದಲ್ಲಿಯೇ ಮಾಡಿದ ಕರ್ಮದಿಂದಲೂ ಪ್ರತಿಬಂಧನಿವೃತ್ತಿಯಾಗಬಹುದು (ಶಾಂ.ಸೂ.ಭಾ. ೪-೧-೧೮) ; ಆದರೆ ಅದು ಎಲ್ಲರಿಗೂ ಸಾಧ್ಯವಿಲ್ಲವೆಂಬ ಕಾರಣದಿಂದ ಜನ್ಮಾಂತರವನ್ನೇ ಪ್ರಧಾನವೆಂದು ಪೂರ್ವಪಕ್ಷಿ ಹೀಗೆ ಹೇಳಿರಬಹುದು.

2. ರಾಗದ್ವೇಷಾದಿಗಳು (ಛಾಂ. ೭–೨೬–೨).

3. ಜೀವಬ್ರಹ್ಮೈಕ್ಯವನ್ನು ಹೇಳುವ ಈ ಬಗೆಯ ವಾಕ್ಯಗಳಿಂದಲೇ ಅವಿದ್ಯಾನಿವರ್ತಕಜ್ಞಾನದ ಉತ್ಪತ್ತಿ ; ಆದರೂ ಅದಕ್ಕೆ ಬೇಕಾದ ಬ್ರಹ್ಮಸ್ವರೂಪಬೋಧಕವಾಕ್ಯಗಳ ಅರ್ಥದ ಜ್ಞಾನವೂ ಆಗಿರಬೇಕೆಂಬುದನ್ನು ತಿಳಿಸುವದಕ್ಕೆಂದು 'ಸದೇವ' ಮುಂತಾದ ವಾಕ್ಯಗಳನ್ನು ಇಲ್ಲಿ ಉದಾಹರಿಸಿದೆ.

ಎಂದು ತತ್ತ್ವದರ್ಶಿಯಾದ ಆಚಾರ್ಯನಿಂದ[1] ನ್ಯಾಯಯುಕ್ತವಾಗಿ ಅರ್ಥವನ್ನು ಗ್ರಹಿಸುವದು; ಹೀಗೆ ಆಚಾರ್ಯನು ಉಪದೇಶಿಸಿದ ಅರ್ಥವನ್ನು ತನ್ನಲ್ಲಿ ತಾನು 'ಹೀಗೆಯೇ ಯುಕ್ತ' ಎಂದು ಹೇತುವಿನಿಂದ[2] ನಿಲುಗಡೆಮಾಡಿಕೊಳ್ಳುವದು **ಮನನವು**. ಇದಕ್ಕೆ ವಿರೋಧಿಯಾಗಿರುವ ಅನಾದಿಭೇದವಾಸನೆಯನ್ನು[3] ನಿರಾಕರಿಸುವದಕ್ಕಾಗಿ ಇದೇ ಅರ್ಥವನ್ನು ಎಡೆಬಿಡದೆ ಭಾವಿಸುತ್ತಿರುವದು[4] **ನಿದಿಧ್ಯಾಸನವು**. **ಶ್ರವಣಾದಿ**ಗಳಿಂದ[5] ಎಲ್ಲಾ ಭೇದವಾಸನೆಗಳನ್ನೂ ನಿರಾಕರಿಸಿಕೊಂಡವನಿಗೆ ವಾಕ್ಯಾರ್ಥಜ್ಞಾನವು ಅವಿದ್ಯೆಯನ್ನು ತೊಲಗಿಸುತ್ತದೆಯಾದ್ದರಿಂದ ಇಂಥ ಶ್ರವಣಕ್ಕೆ ಅವಶ್ಯವಾಗಿ ಬೇಕಾಗಿರುವ ಪೂರ್ವವೃತ್ತವನ್ನೇ ಹೇಳಬೇಕು. ಆ (ಪೂರ್ವವೃತ್ತವೆಂದರೆ) ನಿತ್ಯಾನಿತ್ಯವಸ್ತುವಿವೇಕ, ಶಮದಮಾದಿಸಾಧನಸಂಪತ್ತು, ಇಹಾಮುತ್ರಫಲಭೋಗವಿರಾಗ ಮತ್ತು ಮುಮುಕ್ಷುತ್ವ- ಎಂಬೀ ಸಾಧನಚತುಷ್ಟಯವೇ. ಇದಿಲ್ಲದೆ (ಸಾಧನಚತುಷ್ಟಯವಿಲ್ಲದೆ) ಜಿಜ್ಞಾಸೆಯು ಉಂಟಾಗುವಹಾಗಿಲ್ಲ. ಅರ್ಥಸ್ವಭಾವದಿಂದಲೇ ಇದೇ ಪೂರ್ವವೃತ್ತವು ಎಂದು ತಿಳಿದುಬರುತ್ತದೆ.

(ಮೂಲ)

ಏತದುಕ್ತಂ ಭವತಿ–ಬ್ರಹ್ಮಸ್ವರೂಪಾಚ್ಛಾದಿಕಾವಿದ್ಯಾಮೂಲಮ್ ಅಪಾರಮಾರ್ಥಿಕಂ ಭೇದದರ್ಶನಮೇವ ಬನ್ಧಮೂಲಮ್ । ಬನ್ಧಶ್ಚ ಅಪಾರಮಾರ್ಥಿಕಃ । ಸ ಚ ಸಮೂಲೋಽಪಾರಮಾರ್ಥಿಕತ್ವಾದೇವ ಜ್ಞಾನೇನೈವ ನಿವರ್ತ್ಯತೇ । ನಿವರ್ತಕಂ ಚ ಜ್ಞಾನಂ ತತ್ತ್ವಮಸ್ಯಾದಿವಾಕ್ಯಜನ್ಯಮ್ । ತಸ್ಯೈತಸ್ಯ ವಾಕ್ಯಜನ್ಯಸ್ಯ ಜ್ಞಾನಸ್ಯ ಸ್ವರೂಪೋತ್ಪತ್ತೌ, ಕಾರ್ಯೇ ವಾ ಕರ್ಮಣಾಂ ನೋಪಯೋಗಃ । ವಿವಿದಿಷಾಯಾಮೇವ ತು ಕರ್ಮಣಾಮ್ ಉಪಯೋಗಃ । ಸ ಚ ಪಾಪಮೂಲರಜಸ್ತಮೋನಿಬರ್ಹಣದ್ವಾರೇಣ ಸತ್ತ್ವವಿವೃದ್ಧೌ ಭವತೀತಿ ಇಮಮ್ ಉಪಯೋಗಮಭಿಪ್ರೇತ್ಯ 'ಬ್ರಾಹ್ಮಣಾ ವಿವಿದಿಷನ್ತಿ' (ಬೃ. ೪–೪–೨೨) ಇತ್ಯುಕ್ತಮ್ ಇತಿ ॥

---

1. ವಾಕ್ಯಾರ್ಥಜ್ಞಾನವನ್ನು ನಿಶ್ಚಯಿಸುವದೇ ಶ್ರವಣವಾದರೂ ಇಲ್ಲಿ ಮೀಮಾಂಸಾನ್ಯಾಯಗಳಿಂದ ವಾಕ್ಯಾರ್ಥವನ್ನು ಗುರುಮುಖವಾಗಿ ನಿಶ್ಚಯಿಸಬೇಕೆಂಬ ಅಭಿಪ್ರಾಯದಿಂದ ಹೀಗೆ ಹೇಳಿರಬಹುದು. 2. ಶ್ರುತ್ಯವಿರುದ್ಧ ತರ್ಕದಿಂದ.

3. ಅನಾದಿಭೇದವಾಸನೆಯನ್ನು ಕಳೆದುಕೊಳ್ಳುವದಕ್ಕೆ ನಿದಿಧ್ಯಾಸನವನ್ನು ಮಾಡಬೇಕೆಂದು ಯಾವ ಅದ್ವೈತಪ್ರಕರಣದಲ್ಲಿ ಹೇಳಿದೆಯೋ ತಿಳಿಯಲಿಲ್ಲ.

4. ನಿದಿಧ್ಯಾಸನವು ಭಾವನಾರೂಪವೆಂದು ಕೆಲವರು ಅದ್ವೈತಿಗಳ ಮತ.

5. ನಿದಿಧ್ಯಾಸನವೇ ವಾಸನಾನಿವೃತ್ತಿಗೆ ಕಾರಣವೆಂದು ಹೇಳಿ ಈಗ 'ಶ್ರವಣಾದಿಗಳಿಂದ' ಆ ನಿವೃತ್ತಿಯಾಗುವದೆಂದು ಹೇಳಿರುವದನ್ನು ಲಕ್ಷಿಸಬೇಕು.

ಅತಃ ಕರ್ಮಜ್ಞಾನಸ್ಯಾನುಪಯೋಗಾತ್, ಉಕ್ತಮೇವ ಸಾಧನಚತುಷ್ಟಯಂ ಪೂರ್ವವೃತ್ತಮಿತಿ ವಕ್ತವ್ಯಮ್ ॥

(ಅರ್ಥ)

(ಇಲ್ಲಿ) ಇಷ್ಟನ್ನು ಹೇಳಿದಂತೆ ಆಗಿರುತ್ತದೆ : ಬ್ರಹ್ಮಸ್ವರೂಪವನ್ನು ಮುಸುಕಿ ಕೊಂಡಿರುವ **ಅವಿದ್ಯೆಯ**[1] ಕಾರಣದಿಂದಾಗಿರುವ ಅಪಾರಮಾರ್ಥಿಕವಾದ ಭೇದ ದರ್ಶನವೇ[2] ಬಂಧಕ್ಕೆ ಕಾರಣವು ; ಬಂಧವೂ ಅಪಾರಮಾರ್ಥಿಕವೇ. ಆ (ಬಂಧವು) ಪಾರಮಾರ್ಥಿಕವಲ್ಲದ್ದರಿಂದಲೇ ಸಮೂಲವಾಗಿ ಜ್ಞಾನದಿಂದಲೇ[3] ತೊಲಗುವದು. (ಅದನ್ನು) ತೊಲಗಿಸುವ ಜ್ಞಾನವು 'ಅದೇ ನೀನಾಗಿರುವೆ' (ಛಾಂ. ೬-೮-೭) ಮುಂತಾದ ವಾಕ್ಯಗಳಿಂದ ಹುಟ್ಟತಕ್ಕದ್ದು. ವಾಕ್ಯದಿಂದ ಹುಟ್ಟತಕ್ಕದ್ದಾಗಿರುವ ಆ ಈ ಜ್ಞಾನದ ಸ್ವರೂಪವು ಹುಟ್ಟುವದಕ್ಕಾಗಲಿ ಅದರ ಕಾರ್ಯಕ್ಕಾಗಲಿ ಕರ್ಮದ ಉಪಯೋಗವಿರುವದಿಲ್ಲ ; ವಿವಿದಿಷೆಯುಂಟಾಗುವದಕ್ಕೇ ಕರ್ಮಗಳು ಉಪಯುಕ್ತ ವಾಗಿರುತ್ತವೆ. ಆ ಉಪಯೋಗವು ಪಾಪಕ್ಕೆ ಮೂಲವಾಗಿರುವ ರಜಸ್ತಮಸ್ಸುಗಳನ್ನು ನಾಶಪಡಿಸುವ ಮೂಲಕ ಸತ್ತ್ವವು ವೃದ್ಧಿಯಾಗುವದರಿಂದ ಉಂಟಾಗುವದು. ಆದ್ದರಿಂದ ಈ ಉಪಯೋಗವನ್ನು ಉದ್ದೇಶಿಸಿಯೇ 'ಬ್ರಾಹ್ಮಣರು (ಯಜ್ಞದಿಂದಲೂ ದಾನದಿಂದಲೂ ಅನಶನರೂಪವಾದ ತಪಸ್ಸಿನಿಂದಲೂ ಆ ಈ ಆತ್ಮನನ್ನು) ಅರಿಯು ವದಕ್ಕೆ ಎಳಸುತ್ತಾರೆ' (ಬೃ. ೪-೪-೨೨) ಎಂದಿರುತ್ತದೆ.

ಆದ್ದರಿಂದ ಕರ್ಮಜ್ಞಾನವು (ಜ್ಞಾನಕ್ಕೆ) ಉಪಯೋಗವಾಗುವದಿಲ್ಲವಾಗಿ ಮೇಲೆ ಹೇಳಿರುವ ಸಾಧನಚತುಷ್ಟಯವೇ ಪೂರ್ವವೃತ್ತವು ಎಂದು ಹೇಳಬೇಕು.

## ಅಥಶಬ್ದಾರ್ಥದ ವಿಷಯಕ್ಕೆ ಲಘುಸಿದ್ಧಾಂತ

## ವಾಕ್ಯಜ್ಞಾನಮಾತ್ರದಿಂದ ಅವಿದ್ಯಾನಿವೃತ್ತಿಯಾಗದು

(ಮೂಲ)

೯. ಅತ್ರೋಚ್ಯತೇ – ಯದುಕ್ತಮ್ 'ಅವಿದ್ಯಾನಿವೃತ್ತಿರೇವ ಮೋಕ್ಷಃ, ಸ ಚ ಬ್ರಹ್ಮವಿಜ್ಞಾನಾದೇವ ಭವತಿ' ಇತಿ । ತದಭ್ಯುಪಗಮ್ಯತೇ । ಅವಿದ್ಯಾನಿವೃತ್ತ ಯೇ ವೇದಾನ್ತವಾಕ್ಯೈಃ ವಿಧಿತ್ಸಿತಂ ಜ್ಞಾನಂ ಕಿಂರೂಪಮ್ ಇತಿ ವಿವೇಚ ನೀಯಮ್ । 'ಕಿಂ ವಾಕ್ಯಾದ್ ವಾಕ್ಯಾರ್ಥಜ್ಞಾನಮಾತ್ರಮ್, ಉತ ತನ್ಮೂಲಮ್

1. ಇದು ಪಂಚಪಾದಿಕೆಯೇ ಮುಂತಾದ ವ್ಯಾಖ್ಯಾನಗಳಲ್ಲಿ ಹೇಳಿರುವ ಮೂಲಾವಿದ್ಯೆ.

2. ಇದು ಅಧ್ಯಾಸವಾಗಿರಬಹುದೆಂತ ತೋರುತ್ತದೆ.

3. ಅಸತ್ಯವಾದದ್ದು ಯಾವದೂ ಜ್ಞಾನದಿಂದಲ್ಲದೆ ಕರ್ಮದಿಂದ ಹೋಗಲಾರದು. ಅವಿದ್ಯೆಯು (ಅಜ್ಞಾನವು) ಜ್ಞಾನದಿಂದಲೇ ಹೋಗಬೇಕು.

ಉಪಾಸನಾತ್ಮಕಂ ಜ್ಞಾನಮ್ ?' ಇತಿ । ನ ತಾವದ್ ವಾಕ್ಯಜನ್ಯಂ ಜ್ಞಾನಮ್, ತಸ್ಯ ವಿಧಾನಮನ್ತರೇಣಾಪಿ ವಾಕ್ಯಾದೇವ ಸಿದ್ಧೇಃ, ತಾವನ್ಮಾತ್ರೇಣಾವಿದ್ಯಾನಿವೃತ್ತ್ಯನುಪಲಬ್ಧೇಶ್ಚ । ನ ಚ ವಾಚ್ಯಮ್, 'ಭೇದವಾಸನಾಯಾಮ್ ಅನಿರಸ್ತಾಯಾಂ ವಾಕ್ಯಮ್ ಅವಿದ್ಯಾನಿವರ್ತಕಂ ಜ್ಞಾನಂ ನ ಜನಯತಿ; ಜಾತೇಽಪಿ ಸರ್ವಸ್ಯ ಸಹಸೈವ ಭೇದಜ್ಞಾನಾನಿವೃತ್ತಿರ್ನ ದೋಷಾಯ । ಚನ್ದ್ರೈಕತ್ವೇ ಜ್ಞಾತೇಽಪಿ ದ್ವಿಚನ್ದ್ರಜ್ಞಾನಾನಿವೃತ್ತಿವತ್ । ಅನಿವೃತ್ತಮಪಿ ಛಿನ್ನಮೂಲತ್ವೇನ ನ ಬನ್ಧಾಯ ಭವತಿ' ಇತಿ । ಸತ್ಯಾಂ ಸಾಮಗ್ರ್ಯಾಂ ಜ್ಞಾನಾನುತ್ಪತ್ತ್ಯನುಪಪತ್ತೇಃ । ಸತ್ಯಾಮಪಿ ವಿಪರೀತವಾಸನಾಯಾಮ್ ಆಪ್ತೋಪದೇಶಲಿಙ್ಗಾದಿಭಿರ್ಬಾಧಕಜ್ಞಾನೋತ್ಪತ್ತಿದರ್ಶನಾತ್ । ಸತ್ಯಪಿ ವಾಕ್ಯಾರ್ಥಜ್ಞಾನೇ ಅನಾದಿ ವಾಸನಯಾ ಮಾತ್ರಯಾ ಭೇದಜ್ಞಾನಮ್ ಅನುವರ್ತತೇ ಇತಿ ಭವತಾ ನ ಶಕ್ಯತೇ ವಕ್ತುಮ್; ಭೇದಜ್ಞಾನಸಾಮಗ್ರ್ಯಾ ಅಪಿ ವಾಸನಾಯಾ ಮಿಥ್ಯಾರೂಪತ್ವೇನ ಜ್ಞಾನೋತ್ಪತ್ತ್ಯೈವ ನಿವೃತ್ತತ್ವಾತ್, ಜ್ಞಾನೋತ್ಪತ್ತಾವಪಿ ಮಿಥ್ಯಾರೂಪಾಯಾಸ್ತಸ್ಯಾ ಅನಿವೃತ್ತೌ ನಿವರ್ತಕಾನ್ತರಾಭಾವಾತ್, ಕದಾಚಿದಪಿ ನಾಸ್ಯಾ ವಾಸನಾಯಾ ನಿವೃತ್ತಿಃ । ವಾಸನಾಕಾರ್ಯಂ ಭೇದಜ್ಞಾನಂ ಛಿನ್ನಮೂಲಮ್ ಅಥ ಚಾನುವರ್ತತೇ ಇತಿ ಬಾಲಿಶಭಾಷಿತಮ್ । ದ್ವಿಚನ್ದ್ರಜ್ಞಾನಾದೌ ತು ಬಾಧಕಸಂನಿಧಾವಪಿ ಮಿಥ್ಯಾಜ್ಞಾನಹೇತೋಃ ಪರಮಾರ್ಥತಿಮಿರಾದಿದೋಷಸ್ಯ ಜ್ಞಾನಬಾಧ್ಯತ್ವಾಭಾವೇನ ಅವಿನಷ್ಟತ್ವಾತ್[1], ಮಿಥ್ಯಾಜ್ಞಾನಾನುವೃತ್ತಿರವಿರುದ್ಧಾ[2] । ಪ್ರಬಲಪ್ರಮಾಣಬಾಧಿತತ್ವೇನ ಭಯಾದಿಕಾರ್ಯಂ ತು ನಿವರ್ತತೇ ॥

(ಅರ್ಥ)

ಈ ವಿಷಯದಲ್ಲಿ ನಾವು ಹೇಳುವದೇನೆಂದರೆ : ಅವಿದ್ಯಾನಿವೃತ್ತಿಯೇ ಮೋಕ್ಷವು, ಆ ನಿವೃತ್ತಿಯು ಬ್ರಹ್ಮವಿಜ್ಞಾನದಿಂದಲೇ ಆಗುತ್ತದೆ- ಎಂದಿರಷ್ಟೆ ? ಅದನ್ನು ಒಪ್ಪುತ್ತೇವೆ. ಅವಿದ್ಯಾನಿವೃತ್ತಿಗಾಗಿ ವೇದಾಂತವಾಕ್ಯಗಳು ವಿಧಿಸುವದಕ್ಕೆ ಹೊರಟಿರುವ ಜ್ಞಾನವು ಎಂಥದ್ದು ? ವಾಕ್ಯದಿಂದಾಗುವ ವಾಕ್ಯಾರ್ಥಜ್ಞಾನಮಾತ್ರವೋ, ಅಥವಾ ಅದನ್ನು ಕಾರಣವಾಗಿಟ್ಟುಕೊಂಡಿರುವ ಉಪಾಸನಾತ್ಮಕವಾದ[3] ಜ್ಞಾನವೊ ?- ಎಂಬಿದನ್ನು ವಿವೇಚನೆಮಾಡಬೇಕಾಗಿರುತ್ತದೆ. ಮೊದಲನೆಯದಾಗಿ ವಾಕ್ಯದಿಂದಾಗುವ ಜ್ಞಾನವೇ ಅದು- ಎಂಬುದಕ್ಕಿಲ್ಲ ; ಏಕೆಂದರೆ ಅದನ್ನು ವಿಧಾನಮಾಡದೆ ಇದ್ದರೂ ವಾಕ್ಯದಿಂದಲೇ ಅದು ಉಂಟಾಗಬಹುದಾಗಿರುತ್ತದೆ. ಅಷ್ಟರಿಂದಲೇ ಅವಿದ್ಯಾನಿವೃತ್ತಿಯಾಗುವದೂ ಕಂಡುಬಂದಿರುವದಿಲ್ಲ.

1. 'ಅನಿವೃತ್ತತ್ವಾತ್' ಎಂದು ಕಂ॥ ಪಾಠ.
2. 'ಮಿಥ್ಯಾಜ್ಞಾನಾನಿವೃತ್ತಿಃ' ಎಂದು ಪಾಠಾಂತರ.
3. ಜ್ಞಾನಶಬ್ದಕ್ಕೆ ಉಪಾಸನೆ ಎಂಬರ್ಥವೂ ಇದೆ.

'ಭೇದವಾಸನೆಯು'[1] ತೊಲಗದೆ ಇದ್ದರೆ ವಾಕ್ಯವು ಅವಿದ್ಯಾನಿವರ್ತಕವಾದ ಜ್ಞಾನವನ್ನುಂಟುಮಾಡುವದಿಲ್ಲ; ಅದು ಉಂಟಾದಮೇಲೂ ಪ್ರತಿಯೊಬ್ಬನಿಗೂ ಕೂಡಲೆ ಭೇದಜ್ಞಾನವು ಹೋಗದೆ ಇರುವದರಿಂದೇನೂ ದೋಷವಾಗುವದಿಲ್ಲ. ಚಂದ್ರನು ಒಬ್ಬನೇ ಎಂದು ತಿಳಿದಮೇಲೂ ಇಬ್ಬರು ಚಂದ್ರರ ಜ್ಞಾನವು ಹೋಗದೆ ಇರುವಂತೆಯೇ (ಇದೂ ಆಗಬಹುದು). ತೊಲಗದೆ ಇದ್ದರೂ[3] ಅದರ ಮೂಲವು ಕತ್ತರಿಸಿಹೋಗಿರುವದರಿಂದ ಅದೇನೂ ಬಂಧಕ್ಕೆ ಕಾರಣವಾಗುವದಿಲ್ಲ'[2] ಎಂದು ಹೇಳುವದು[4] ಸರಿಯಲ್ಲ. ಏಕೆಂದರೆ (ಸಾಧನ)ಸಾಮಗ್ರಿಯಿದ್ದರೂ ಜ್ಞಾನೋತ್ಪತ್ತಿಯಾಗುವದಿಲ್ಲವೆಂಬುದು ಹೊಂದುವದಿಲ್ಲ. ತಪ್ಪುತಿಳಿವಳಿಕೆಯ ವಾಸನೆಯು ಇದ್ದರೂ ಆಪ್ತೋಪದೇಶ, ಲಿಂಗ–ಮುಂತಾದವುಗಳಿಂದ ಬಾಧಕಜ್ಞಾನವು ಉಂಟಾಗುವದು ಕಂಡಿರುತ್ತದೆ.

ವಾಕ್ಯಾರ್ಥಜ್ಞಾನವು ಉಂಟಾದರೂ ಅನಾದಿವಾಸನೆಯಿಂದ ಭೇದಜ್ಞಾನವು ಸ್ವಲ್ಪಮಟ್ಟಿಗೆ ಇದ್ದುಕೊಂಡೇ ಇರುತ್ತದೆ[5] ಎಂದು ನೀನು ಹೇಳುವದಕ್ಕಾಗುವದಿಲ್ಲ. ಏಕೆಂದರೆ ಭೇದಜ್ಞಾನಸಾಮಗ್ರಿಯಾದ ವಾಸನೆಯುಕೂಡ ಮಿಥ್ಯಾರೂಪವೇ ಆಗಿರುವದರಿಂದ, ಜ್ಞಾನವು ಉಂಟಾದದ್ದರಿಂದಲೇ ಅದು ನಿವೃತ್ತವಾಗಿರುತ್ತದೆ. ಜ್ಞಾನೋತ್ಪತ್ತಿಯಾದರೂ ಮಿಥ್ಯಾರೂಪವಾಗಿರುವ ಅದು ನಿವೃತ್ತವಾಗದೆ ಇದ್ದರೆ, ಮತ್ತೊಂದು ನಿವರ್ತಕವೇ ಇಲ್ಲವಾದ್ದರಿಂದ ಈ ವಾಸನೆಗೆ ನಿವೃತ್ತಿಯೇ ಎಂದಿಗೂ ಆಗಲಾರದು.[6] ವಾಸನಾಕಾರ್ಯವಾದ ಭೇದಜ್ಞಾನದ ಮೂಲವು ಕತ್ತರಿಸಿ ಹೋಗಿದೆ; ಆದರೂ ಇದ್ದುಕೊಂಡೇ ಇದೆ ಎಂಬುದು ಹುಡುಗರಾಡುವ ಮಾತು. ಇಬ್ಬರು ಚಂದ್ರರ ಜ್ಞಾನವೇ ಮುಂತಾದ (ದೃಷ್ಟಾಂತಗಳಲ್ಲಿ)ಯಾದರೋ, ಬಾಧಕವು ಹತ್ತಿರವೇ ಇದ್ದರೂ ಮಿಥ್ಯಾಜ್ಞಾನಕ್ಕೆ ಕಾರಣವಾಗಿರುವ ಪರಮಾರ್ಥವಾದ ತಿಮಿರಾದಿದೋಷವು[7] ಜ್ಞಾನಬಾಧ್ಯವಲ್ಲದ್ದರಿಂದ ಅದು ನಾಶವಾಗದೆ ಇರುವದ

---

1. ವಾಸನೆಯ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. ಈ ಪಕ್ಷವನ್ನು ಕೆಲವರು ಅದ್ವೈತಿಗಳು ಒಪ್ಪಿರುತ್ತಾರೆ.

3. ಹೀಗೆ ಉಳಿದಿರುವ ತೋರಿಕೆಯನ್ನೇ ಇಲ್ಲಿ 'ಅಜ್ಞಾನ'ವೆಂದಿದೆ.

4. ಈ ಪಕ್ಷವನ್ನು ಎಲ್ಲರೂ ಒಪ್ಪಿಲ್ಲ; ಉದಾಹರಣೆಗೆ ಬ್ರಹ್ಮಸಿದ್ಧಿ, ಭಾಮತೀ–ಮುಂತಾದ ಗ್ರಂಥಗಳಲ್ಲಿ ಮಿಥ್ಯಾಜ್ಞಾನಸಂಸ್ಕಾರವನ್ನು ತತ್ತ್ವಜ್ಞಾನಾಭ್ಯಾಸದಿಂದ ಕಳೆದುಕೊಳ್ಳುವದು ಅವಶ್ಯವೆಂದೇ ಹೇಳಿದೆ.

5. ಅವಿದ್ಯಾಸಂಸ್ಕಾರವು, ಅಥವಾ ಅವಿದ್ಯಾಲೇಶವು ಜೀವನ್ಮುಕ್ತನಿಗೂ ಇರುತ್ತದೆ–ಎಂದು ಕೆಲವರು ಅದ್ವೈತಿಗಳು ಹೇಳುತ್ತಾರೆ.

6. ಮಿಥ್ಯಾಪದಾರ್ಥದ ನಿವೃತ್ತಿ ಎಂದರೆ ಬಾಧೆಯೇ; ಅದು ತೋರದೆ ಹೋಗುವದಲ್ಲ– ಎಂಬ ಪಕ್ಷವನ್ನು ಇಲ್ಲಿ ವಿಮರ್ಶಿಸಿಲ್ಲವೆಂದು ತೋರುತ್ತದೆ.

7. ದೋಷದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ರಿಂದ ಮಿಥ್ಯಾಜ್ಞಾನವು ಇದ್ದುಕೊಂಡೇ ಇರುವದು ವಿರುದ್ಧವಲ್ಲ. ಪ್ರಬಲವಾದ ಪ್ರಮಾಣದಿಂದ[1] ಬಾಧಿತವಾದದ್ದರಿಂದ ಭಯವೇ ಮುಂತಾದ ಕಾರ್ಯವೇನೊ ಹೋಗುತ್ತದೆ.[2]

## ಭೇದವಾಸನಾವಾದಿಗಳ ಪಕ್ಷದಲ್ಲಿ ಜ್ಞಾನೋತ್ಪತ್ತಿಯೇ ಆಗಲಾರದು

(ಮೂಲ)

ಅಪಿ ಚ ಭೇದವಾಸನಾನಿರಸನದ್ವಾರೇಣ ಜ್ಞಾನೋತ್ಪತ್ತಿಮಭ್ಯುಪಗಚ್ಛತಾಂ ಕದಾಚಿದಪಿ ಜ್ಞಾನೋತ್ಪತ್ತಿರ್ನ ಸೇತ್ಸ್ಯತಿ । ಭೇದವಾಸನಾಯಾ ಅನಾದಿ ಕಾಲೋಪಚಿತತ್ವೇನ ಅಪರಿಮಿತತ್ವಾತ್, ತದ್ವಿರೋಧಿಭಾವನಾಯಾಶ್ಚ ಅಲ್ಪತ್ವಾ-ದನಯಾ ತನ್ನಿರಸನಾನುಪಪತ್ತೇಃ ॥

(ಅರ್ಥ)

ಇದೂ ಅಲ್ಲದೆ, ಭೇದವಾಸನೆಯನ್ನು ಹೋಗಲಾಡಿಸಿಕೊಳ್ಳುವ ಮೂಲಕವೇ ಜ್ಞಾನೋತ್ಪತ್ತಿಯಾಗುವದೆಂಬ ಒಪ್ಪುವವರ ಪಕ್ಷವಲ್ಲಿ ಎಂದಿಗೂ ಜ್ಞಾನವುಂಟಾಗುವದೆಂಬುದು ಸಿದ್ಧವಾಗಲಾರದು. ಏಕೆಂದರೆ ಭೇದವಾಸನೆಯು ಅನಾದಿಕಾಲದಿಂದಲೂ ರಾಶಿಹಾಕಿಕೊಂಡಿರುವದರಿಂದ ಅಪರಿಮಿತವಾಗಿರುತ್ತದೆ ; ಅದಕ್ಕೆ ವಿರೋಧಿಯಾಗಿರುವ ಭಾವನೆಯು ಅಲ್ಪವಾಗಿರುವದರಿಂದ ಇದರಿಂದ ಅದನ್ನು ಹೋಗಲಾಡಿಸುವದೇ ಆಗಲಾರದು.

## ವೇದಾಂತದಲ್ಲಿ ಧ್ಯಾನಶಬ್ದವಾಚ್ಯವಾದ ಜ್ಞಾನವೇ ವಿಹಿತ

(ಮೂಲ)

ಅತೋ ವಾಕ್ಯಾರ್ಥಜ್ಞಾನಾದನ್ಯದೇವ ಧ್ಯಾನೋಪಾಸನಾದಿಶಬ್ದವಾಚ್ಯಂ ಜ್ಞಾನಂ ವೇದಾನ್ತವಾಕ್ಯೈರ್ವಿಧಿತ್ಸಿತಮ್ । ತಥಾ ಚ ಶ್ರುತಯಃ 'ವಿಜ್ಞಾಯ ಪ್ರಜ್ಞಾಂ ಕುರ್ವೀತ' (ಬೃ. ೪–೪–೨೧), 'ಅನುವಿದ್ಯ ವಿಜಾನಾತಿ' (ಛಾಂ. ೮–೭–೧), 'ಓಮಿತ್ಯೇವಾತ್ಮಾನಂ ಧ್ಯಾಯಥ' (ಮುಂ. ೨–೨–೬), 'ನಿಚಾಯ್ಯ ತನ್ಮೃತ್ಯುಮುಖಾತ್ ಪ್ರಮುಚ್ಯತೇ' (ಕಾ. ೧–೩–೧೫), 'ಆತ್ಮಾನಮೇವ ಲೋಕಮುಪಾಸೀತ' (ಬೃ. ೧–೪–೧೫), 'ಆತ್ಮಾ ವಾಽರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ' (ಬೃ. ೨-೪-೫), 'ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ' (ಛಾಂ. ೮–೭–೧)– ಇತ್ಯೇವಮಾದ್ಯಾಃ ॥

---

1. ಆಪ್ತವಾಕ್ಯದಿಂದ.

2. ರಜ್ಜುಸರ್ಪಾದಿದೃಷ್ಟಾಂತಗಳಲ್ಲಿ ಸರ್ಪನಿಮಿತ್ತವಾದ ಭಯವು ಹೋದರೂ ಸರ್ಪಾದಿಜ್ಞಾನವು ಉಳಿದಿರುತ್ತದೆ.

(ಅರ್ಥ)

ಆದ್ದರಿಂದ ವಾಕ್ಯಾರ್ಥಜ್ಞಾನಕ್ಕಿಂತ ಬೇರೆಯಾಗಿಯೇ ಇರುವ 'ಧ್ಯಾನ', 'ಉಪಾಸನೆ'–ಮುಂತಾದ ಶಬ್ದಗಳಿಂದ ಉಕ್ತವಾಗಿರುವ ಜ್ಞಾನವನ್ನೇ ವೇದಾಂತವಾಕ್ಯಗಳು ವಿಧಿಸುವದಕ್ಕೆ ಬಂದಿರುತ್ತವೆ. ಹೀಗೆಂದೇ ಇವೇ ಮುಂತಾದ ಶ್ರುತಿಗಳು ಹೇಳುತ್ತಿವೆ :

'ಅರಿತುಕೊಂಡು ಪ್ರಜ್ಞೆಯನ್ನು ಮಾಡಬೇಕು' (೪–೪–೨೧). 'ಅನುವೇದನ ಮಾಡಿಕೊಂಡು ವಿಜ್ಞಾನವನ್ನು ಮಾಡಬೇಕು' (ಛಾಂ. ೮–೭–೧), 'ಓಮ್ ಎಂದೇ ಆತ್ಮನನ್ನು ಧ್ಯಾನಿಸಿರಿ' (ಮುಂ. ೨–೨–೬), 'ಅದನ್ನು ಸಾಕ್ಷಾತ್ಕರಿಸಿಕೊಂಡು ಮೃತ್ಯುಮುಖದಿಂದ ಬಿಡುಗಡೆಯನ್ನು ಹೊಂದುತ್ತಾನೆ' (ಕಾ. ೧-೩-೧೫), 'ಆತ್ಮನೆಂಬ ಲೋಕವನ್ನೇ ಉಪಾಸನೆಮಾಡಬೇಕು' (ಬೃ. ೧–೪–೧೫), 'ಎಲೆ, ಆತ್ಮನನ್ನೇ ಕಂಡುಕೊಳ್ಳಬೇಕು, ಕೇಳಬೇಕು, ಮನನಮಾಡಬೇಕು, ನಿದಿಧ್ಯಾಸನೆ ಮಾಡಬೇಕು' (ಬೃ. ೨–೪–೫), 'ಅವನನ್ನೇ ಹುಡಕಬೇಕು, ಅವನನ್ನೇ ಅರಿಯಬೇಕು' (ಛಾಂ. ೮–೭–೧).

(ಮೂಲ)

'ಅತ್ರ ನಿದಿಧ್ಯಾಸಿತವ್ಯಃ' (ಬೃ. ೨–೪–೫), ಇತ್ಯಾದಿನಾ[1] ಐಕಾರ್ಥ್ಯಾತ್ 'ಅನುವಿದ್ಯ ವಿಜಾನಾತಿ' (ಛಾಂ. ೮–೭–೧) 'ವಿಜ್ಞಾಯ ಪ್ರಜ್ಞಾಂ ಕುರ್ವೀತ' (ಬೃ. ೪–೪–೨೧) ಇತ್ಯೇವಮಾದಿಭಿರ್ವಾಕ್ಯಾರ್ಥಜ್ಞಾನಂ ಧ್ಯಾನೋಪಕಾರಕತ್ವಾತ್ 'ಅನುವಿದ್ಯ', 'ವಿಜ್ಞಾಯ' ಇತ್ಯನೂದ್ಯ 'ಪ್ರಜ್ಞಾಂ ಕುರ್ವೀತ', 'ವಿಜಾನಾತಿ' ಇತಿ ಧ್ಯಾನಂ ವಿಧೀಯತೇ। 'ಶ್ರೋತವ್ಯಃ' (ಬೃ. ೨–೪–೫) ಇತಿ ಚಾನುವಾದಃ | ಸ್ವಾಧ್ಯಾಯಸ್ಯಾರ್ಥಪರತ್ವೇನ ಅಧೀತವೇದಃ ಪುರುಷಃ ಪ್ರಯೋಜನವದರ್ಥಾವಬೋಧಿತ್ವದರ್ಶನಾತ್ ತನ್ನಿರ್ಣಯಾಯ ಸ್ವಯಮೇವ ಶ್ರವಣೇ ಪ್ರವರ್ತತ ಇತಿ ಶ್ರವಣಸ್ಯ ಪ್ರಾಪ್ತತ್ವಾತ್। ಶ್ರವಣಪ್ರತಿಷ್ಠಾರ್ಥತ್ವಾನ್ಮನನಸ್ಯ 'ಮನ್ತವ್ಯಃ' (ಬೃ. ೨–೪–೫) ಇತಿ ಚಾನುವಾದಃ । ತಸ್ಮಾತ್, ಧ್ಯಾನಮೇವ ವಿಧೀಯತೇ। ವಕ್ಷ್ಯತಿ ಚ 'ಆವೃತ್ತಿರಸಕೃದುಪದೇಶಾತ್' (ವೇ.ಸೂ.೪–೧–೧) ಇತಿ॥

(ಅರ್ಥ)

ಇಲ್ಲಿ 'ನಿದಿಧ್ಯಾಸಿತವ್ಯಃ' (ಬೃ. ೨–೪–೫) ಮುಂತಾದ ವಾಕ್ಯಕ್ಕೆ ಹೊಂದುಗಡೆಯಾಗುವದಕ್ಕಾಗಿ 'ಅನುವೇದನಮಾಡಿಕೊಂಡು ಅರಿತುಕೊಳ್ಳಬೇಕು' (ಛಾಂ. ೮–೭–೧), 'ಅರಿತುಕೊಂಡು ಪ್ರಜ್ಞೆಯನ್ನು ಮಾಡಬೇಕು' (ಬೃ. ೪–೪–೨೧)–ಮುಂತಾದ (ಶ್ರುತಿ)ಗಳಿಂದ ವಾಕ್ಯಾರ್ಥಜ್ಞಾನವು ಧ್ಯಾನಕ್ಕೆ ಉಪಕಾರಕವಾಗಿರುವದರಿಂದ 'ಅನುವಿದ್ಯ', 'ವಿಜ್ಞಾಯ' –ಎಂದು ಅನುವಾದಮಾಡಿಕೊಂಡು

1. 'ಇತ್ಯನೇನ' ಎಂದು ಪಾ॥

'ವಿಜ್ಞಾನವಮಾಡಬೇಕು', 'ಪ್ರಜ್ಞೆಯನ್ನು ಮಾಡಬೇಕು'[1] ಎಂದು ಧ್ಯಾನವನ್ನು ವಿಧಿಸಿರುತ್ತದೆ (ಎಂದು ಅರ್ಥವನ್ನು ಮಾಡಿಕೊಳ್ಳಬೇಕು), 'ಕೇಳಬೇಕು' (ಬೃ. ೨-೪-೫) ಎಂಬುದೂ ಅನುವಾದವೇ. ಏಕೆಂದರೆ ಸ್ವಾಧ್ಯಾಯವು ಅರ್ಥ ಪರವಾಗಿರುವದರಿಂದ. ವೇದವನ್ನು ಅಧ್ಯಯನಮಾಡಿದ ಪುರುಷನು (ಅದು) ಪ್ರಯೋಜನವುಳ್ಳ ಅರ್ಥವನ್ನು ತೋರಿಸಿಕೊಡುವದರಿಂದ ಅದರ ನಿಶ್ಚಯಕ್ಕಾಗಿ ತಾನೇ ಶ್ರವಣದಲ್ಲಿ ತೊಡಗುತ್ತಾನಾಗಿ ಶ್ರವಣವು ಪ್ರಾಪ್ತವಾಗಿರುತ್ತದೆ. ಮನನವು ಶ್ರವಣವನ್ನು ನೆಲೆನಿಲ್ಲಿಸುವದಕ್ಕಾಗಿ ಮಾಡಬೇಕಾದದ್ದರಿಂದ 'ಮನನಮಾಡಬೇಕು' (ಬೃ. ೨-೪-೫) ಎಂಬುದೂ ಅನುವಾದವೇ. ಆದ್ದರಿಂದ ಧ್ಯಾನವನ್ನೇ (ಇಲ್ಲಿ) ವಿಧಿಸಿರುತ್ತದೆ. 'ಅನೇಕಬಾರಿ ಉಪದೇಶಿಸಿರುವದರಿಂದ ಆವೃತ್ತಿಮಾಡಬೇಕು' (ಸೂ. ೪-೧-೧) ಎಂದು (ಸೂತ್ರಕಾರರು) ಮುಂದೆ ಹೇಳಿಯೂ ಇರುತ್ತಾರೆ.[2]

## ವೇದಾಂತವಿಹಿತವಾದ ಉಪಾಸನೆಯು ದರ್ಶನಾಕಾರವಾದದ್ದು

(ಮೂಲ)

ತದಿದಮ್ ಅಪವರ್ಗೋಪಾಯತಯಾ ವಿಧಿತ್ಸಿತಂ ವೇದನಮ್ ಉಪಾಸನಮ್ ಇತ್ಯವಗಮ್ಯತೇ ; ವಿದ್ಯುಪಾಸ್ಯೋರ್ವ್ಯತಿಕರೇಣೋ[3] ಪಕ್ರಮೋಪಸಂಹಾರದರ್ಶನಾತ್ | 'ಮನೋ ಬ್ರಹ್ಮೇತ್ಯುಪಾಸೀತ' (ಛಾಂ. ೩-೧೮-೧) ಇತ್ಯತ್ರ 'ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ' (ಛಾಂ. ೩-೧೮-೩), 'ನ ಸ ವೇದ ಅಕೃತ್ಸ್ನೋ ಹ್ಯೇಷಃ .... ಆತ್ಮೇತ್ಯೇವೋಪಾಸೀತ' (ಬೃ. ೧-೪-೭), 'ಯಸ್ತದ್ವೇದ ಯತ್ಸ ವೇದ ಸ ಮಯೈತದುಕ್ತಃ' (ಛಾಂ. ೪-೧-೪)- ಇತ್ಯತ್ರ ಅನು ಮ ಏತಾಂ ಭಗವೋ ದೇವತಾಂ ಶಾಧಿ ಯಾಂ ದೇವತಾಮುಪಾಸ್ಸೇ' (ಛಾಂ. ೪-೨-೨) ಇತಿ ||

(ಅರ್ಥ)

ಮೋಕ್ಷಕ್ಕೆ ಕಾರಣವೆಂದು ವಿಧಿಸಹೊರಟಿರುವ ಈ **'ವೇದನ'ವು (ಜ್ಞಾನವು) ಉಪಾಸನವೆಂದೇ ಗೊತ್ತಾಗುತ್ತದೆ.** ಏಕೆಂದರೆ ಈ ಮುಂದೆ ಉದಾಹರಿಸಿರುವಂತೆ 'ವಿದ್'(ತಿಳಿ)ಧಾತುವಿನಿಂದ ಬಂದಿರುವ ಕ್ರಿಯಾಪದವನ್ನೂ 'ಉಪಾಸ್' (ಧ್ಯಾನಿಸು) ಧಾತುವಿನಿಂದ ಬಂದಿರುವ ಕ್ರಿಯಾಪದವನ್ನೂ ಮಿಶ್ರಮಾಡಿ ಉಪಕ್ರಮೋಪಸಂಹಾರಮಾಡಿರುವದು ಕಂಡುಬರುತ್ತದೆ.[4] ಹೇಗೆಂದರೆ, 'ಮನಸ್ಸನ್ನು

1. ಇಲ್ಲಿ ವಾಕ್ಯಗಳ ಅನುಕ್ರಮವನ್ನನುಸರಿಸಿ ಕನ್ನಡಿಸಿದೆ.
2. ಆವೃತ್ತಿಮಾಡಬೇಕೆಂದಿರುವದರಿಂದ ಇದು ಬರಿಯ ವಸ್ತುಜ್ಞಾನವಾಗಲಾರದು.
3. 'ಅವ್ಯತಿರೇಕೇಣ' ಎಂದು ಪೂ|| ಪಾಠ.
4. ಹೀಗೆ ಒಂದೇ ಅರ್ಥಕ್ಕೆ ಈ ಎರಡು ಧಾತುಗಳನ್ನು ಉಪಯೋಗಿಸಿರುವದರಿಂದ ವೇದನವೆಂದರೂ ಉಪಾಸನೆಯೇ ಎಂದು ಗೊತ್ತಾಗುತ್ತದೆ.

ಬ್ರಹ್ಮವೆಂದು ಉಪಾಸನೆಮಾಡಬೇಕು' (ಛಾಂ. ೩–೧೮–೧) ಎಂಬೀ (ಉಪಕ್ರಮ ವಿರು)ವಲ್ಲಿ, 'ಯಾವನು ಹೀಗೆಂದು ಅರಿಯುವನೋ[1] (ವೇದ) ಅವನು ಕೀರ್ತಿಯಿಂದಲೂ ಯಶಸ್ಸಿನಿಂದಲೂ[2] ಬ್ರಹ್ಮವರ್ಚಸದಿಂದಲೂ ಹೊಳೆಯುತ್ತಾನೆ' (ಛಾಂ. ೩–೧೮–೩) ಉರಿಯುತ್ತಾನೆ (ಎಂದು ಉಪಸಂಹಾರ); 'ಅವನು ಅರಿಯನು, ಏಕೆಂದರೆ ಇವನು ಅಸಂಪೂರ್ಣನಾಗಿರುತ್ತಾನೆ. ಆತ್ಮನೆಂದೇ ಉಪಾಸನೆ ಮಾಡಬೇಕು' (ಬೃ. ೧–೪–೭) (ಎಂದು ವಿದ್‌ಧಾತ್ವರ್ಥದಿಂದ ಉಪಕ್ರಮಿಸಿ ಉಪಾಸ್‌ಧಾತುವಿನಿಂದ ಉಪಸಂಹಾರ). 'ಆತನು ಅರಿತಿರುವದನ್ನು ಯಾವನು ಅರಿಯುತ್ತಾನೋ (ಅವನಿಗೆ ಇತರರ ಕರ್ಮಫಲಗಳೆಲ್ಲ ದೊರಕುತ್ತವೆ). ಅವನನ್ನೇ ನಾನು ಹೀಗೆ ಹೇಳಿರುವದು' (ಛಾಂ. ೪–೧–೪) ಎಂದು ಉಪಕ್ರಮಮಾಡಿರುವಲ್ಲಿ 'ಭಗವಂತನೆ, ಯಾವ ಈ ದೇವತೆಯನ್ನು ಉಪಾಸನೆಮಾಡುತ್ತಿರುವೆಯೋ ಆ ದೇವತೆಯನ್ನು ನನಗೆ ಹೇಳಿಕೊಡು' (ಛಾಂ. ೪–೨–೨) ಎಂದು ಉಪಸಂಹಾರ ಮಾಡಿರುತ್ತದೆ.

(ಮೂಲ)

ಧ್ಯಾನಂ ಚ ತೈಲಧಾರಾವದವಿಚ್ಛಿನ್ನಸ್ಮೃತಿಸನ್ತಾನರೂಪಮ್ । 'ಧ್ರುವಾ ಸ್ಮೃತಿಃ ಸ್ಮೃತಿಲಮ್ಭೇ ಸರ್ವಗ್ರನ್ಥೀನಾಂ ವಿಪ್ರಮೋಕ್ಷಃ' (ಛಾಂ. ೭–೨೬–೨) ಇತಿ ಧ್ರುವಾಯಾಃ ಸ್ಮೃತೇರಪವರ್ಗೋಪಾಯತ್ವಶ್ರವಣಾತ್ ॥

(ಅರ್ಥ)

**ಧ್ಯಾನವೆಂಬುದು ಎಣ್ಣೆಯ ಧಾರೆಯಂತೆ ಕಡಿವಡೆಯದೆ ಇರುವ ಸ್ಮೃತಿಸಂತಾನರೂಪವುಳ್ಳದ್ದು,** '(ಸತ್ತ್ವಶುದ್ಧಿಯಾದರೆ) ನೆಲೆನಿಂತ ಸ್ಮೃತಿಯು, ಸ್ಮೃತಿಯು ದೊರೆತರೆ ಸರ್ವಗ್ರಂಥಿಗಳ ಬಿಡುಗಡೆ' (ಛಾಂ. ೭–೨೬–೨) ಎಂದು ಧ್ರುವಸ್ಮೃತಿಯು ಮೋಕ್ಷಕ್ಕೆ ಕಾರಣವೆಂದು ಶ್ರುತಿಯಲ್ಲಿದೆ.

(ಮೂಲ)

ಸಾ ಚ ಸ್ಮೃತಿಃ ದರ್ಶನಸಮಾನಾಕಾರಾ । 'ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ । ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ' (ಮುಂ. ೨–೨–೮) ಇತ್ಯನೇನೈಕಾರ್ಥ್ಯಾತ್ । ಏವಂ ಚ ಸತಿ 'ಆತ್ಮಾ ವಾ ಅರೇ ದ್ರಷ್ಟವ್ಯಃ' (ಬೃ. ೨–೪–೫) ಇತ್ಯನೇನ ನಿದಿಧ್ಯಾಸನಸ್ಯ ದರ್ಶನರೂಪತಾ ವಿಧೀಯತೇ । ಭವತಿ ಚ ಸ್ಮೃತೇರ್ಭಾವನಾಪ್ರಕರ್ಷಾತ್ ದರ್ಶನರೂಪತಾ ॥

---

1. ಜ್ಞಾನವೆಂದರೆ ಇಲ್ಲಿ ಧ್ಯಾನವೇ; ಧ್ಯಾನವು ಧಾರಾಕಾರವಾಗಿದ್ದು ಭಗವಂತನ ಸ್ಮೃತಿಯು ಸಂತತವಾಗಿ ನಿಲ್ಲುವದೇ; ಅದರಿಂದ ಗ್ರಂಥಿಮೋಕ್ಷ ಎಂದು ಪರಮಪುರುಷಾರ್ಥಫಲಪ್ರಾಪ್ತಿಯನ್ನು ಶ್ರುತಿಯಲ್ಲಿ ಹೇಳಿದೆ.

2. ಕೊಡುವದು, ವಿಕ್ರಮ– ಮುಂತಾದ ಹೇತುಗಳು ಬೇರೆಬೇರೆಯಾಗಿರುವದರಿಂದ ಕೀರ್ತಿ, ಯಶಸ್ಸು– ಇವೆರಡಕ್ಕೂ ಭೇದ– ಎಂದು ಶ್ರು.ಪ್ರ.

(ಅರ್ಥ)

ಆ (ಧ್ರುವ)ಸ್ಮೃತಿಯು ದರ್ಶನಕ್ಕೆ ಸಮಾನವಾದ ಆಕಾರವುಳ್ಳದ್ದು; ಏಕೆಂದರೆ (ಇದನ್ನೆಲ್ಲ ಸೇರಿಸಿದರೆ) 'ಆ ಪರಾವರನನ್ನು ಕಂಡುಕೊಂಡರೆ ಹೃದಯಗ್ರಂಥಿಯು ಬಿಚ್ಚಿಕೊಳ್ಳುವದು; ಎಲ್ಲಾ ಸಂಶಯಗಳೂ ಕತ್ತರಿಸಿಹೋಗುವವು, ಇವನ ಕರ್ಮಗಳೂ ಕ್ಷಯವಾಗುವವು' (ಮುಂ. ೨-೨-೮)- ಎಂಬೀ ಶ್ರುತಿಗೂ (ಇದಕ್ಕೂ) ಹೊಂದುಗೆಯಾಗುತ್ತದೆ.

**ಹೀಗಾದರೆ 'ಎಲೆ, ಆತ್ಮನನ್ನೇ ಕಾಣಬೇಕು' (ಬೃ. ೨-೪-೫) ಎಂಬೀ (ಶ್ರುತಿ)ವಾಕ್ಯದಿಂದ ನಿದಿಧ್ಯಾಸನವು ದರ್ಶನಸಮಾನಾಕಾರವಾಗಿರಬೇಕೆಂದು ವಿಹಿತವಾಗಿದೆ ಎಂದಾಗುತ್ತದೆ.**[1] ಭಾವನೆಯು ಹೆಚ್ಚಿದರೆ ಸ್ಮೃತಿಯು ದರ್ಶನರೂಪವಾಗಿಯೇ ಆಗುತ್ತದೆ.[2]

## ಈ ಸಿದ್ಧಾಂತಕ್ಕೆ ವಾಕ್ಯಕಾರನ ಸಮ್ಮತಿ

(ಮೂಲ)

ವಾಕ್ಯಕಾರೇಣೈತತ್ ಸರ್ವಂ ಪ್ರಪಞ್ಚಿತಮ್ 'ವೇದನಮ್ ಉಪಾಸನಂ ಸ್ಯಾತ್ ತದ್ವಿಷಯೇ ಶ್ರವಣಾತ್' ಇತಿ ಸರ್ವಾಸೂಪನಿಷತ್ಸು ಮೋಕ್ಷಸಾಧನತಯಾ ವಿಹಿತಂ ವೇದನಮ್ ಉಪಾಸನಮ್' ಇತ್ಯುಕ್ತಮ್ | 'ಸಕೃತ್ಪ್ರತ್ಯಯಂ ಕುರ್ಯಾತ್, ಶಬ್ದಾರ್ಥಸ್ಯ ಕೃತತ್ವಾತ್, ಪ್ರಯಾಜಾದಿವತ್' ಇತಿ ಪೂರ್ವಪಕ್ಷಂ ಕೃತ್ವಾ 'ಸಿದ್ಧಂ ತೂಪಾಸನಶಬ್ದಾತ್' ಇತಿ ವೇದನಮ್ ಅಸಕೃದಾವೃತ್ತಂ ಮೋಕ್ಷಸಾಧನಮ್ ಇತಿ ನಿರ್ಣೀತಮ್ | 'ಉಪಾಸನಂ ಸ್ಯಾದ್ ಧ್ರುವಾನುಸ್ಮೃತಿರ್ದರ್ಶನಾನ್ನಿರ್ವಚನಾಚ್ಚ' ಇತಿ ತಸ್ಯೈವ ವೇದನಸ್ಯೋಪಾಸನರೂಪಸ್ಯ, ಅಸಕೃದಾವೃತ್ತಸ್ಯ ಧ್ರುವಾನುಸ್ಮೃತಿತ್ವಮ್ ಉಪವರ್ಣಿತಮ್ ||

(ಅರ್ಥ)

**ವಾಕ್ಯಕಾರನು**[3] ಇದೆಲ್ಲವನ್ನೂ ವಿಸ್ತರಿಸಿ ತಿಳಿಸಿರುತ್ತಾನೆ. (ಹೇಗೆಂದರೆ) (೧) 'ವೇದನವೆಂದರೆ ಉಪಾಸನವಾಗಿರಬೇಕು; ಏಕೆಂದರೆ ಅದರ ವಿಷಯದಲ್ಲಿಯೇ

---

1. ನಿದಿಧ್ಯಾಸನವೂ ಜ್ಞಾನವೂ ಒಂದೇ. ವೇದನವೆಂದರೆ ಉಪಾಸನೆ; ಉಪಾಸನೆ ಅಥವಾ ಧ್ಯಾನವು- ಸಂತತವಾದ ಸ್ಮೃತಿ ಎಂದಾದರೆ ನಿದಿಧ್ಯಾಸನವನ್ನು ದರ್ಶನಾಕಾರವಾಗಿ ಮಾಡಿಕೊಳ್ಳಬೇಕು- ಎಂದು 'ಆತ್ಮಾ ವಾ ಅರೇ' ಎಂಬ ವಾಕ್ಯದಲ್ಲಿ ವಿಧಿಸಿದೆ ಎಂಬ ಸಿದ್ಧಾಂತವು ಹೊರಡುತ್ತದೆ.

2. ಲೋಕದಲ್ಲಿ ಭಾವನೆಯು ಬಲವಾದರೆ ಸಾಕ್ಷಾತ್ಕಾರವಾಗುವದು ಕಂಡೂ ಇದೆ.

3. ಈ ವಾಕ್ಯಕಾರನ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

(ಈ ಶಬ್ದವನ್ನು) ಶ್ರುತಿಯಲ್ಲಿ ಹೇಳಿರುತ್ತದೆ'– ಎಂದು ಎಲ್ಲಾ ಉಪನಿಷತ್ತುಗಳಲ್ಲಿಯೂ ಮೋಕ್ಷಕ್ಕೆ ಸಾಧನವೆಂದು ವಿಹಿತವಾಗಿರುವ ವೇದನವು ಉಪಾಸನೆಯೇ ಎಂದಿರುತ್ತಾನೆ. (೨) 'ಒಂದೇ ಸಲ (ಉಪಾಸನಾ)ಪ್ರತ್ಯಯವನ್ನು ಮಾಡಬೇಕು, ಏಕೆಂದರೆ ಅಷ್ಟರಿಂದ ಶಾಸ್ತ್ರಾರ್ಥವನ್ನು ಅನುಷ್ಠಾನಮಾಡಿದಂತೆ ಆಗುತ್ತದೆ. ಪ್ರಯಾಜಾದಿಗಳ[1] ಅನುಷ್ಠಾನದಂತೆಯೇ (ಇದು)'– ಎಂದು ಪೂರ್ವಪಕ್ಷವನ್ನು ಮಾಡಿ '(ಆವೃತ್ತಿಯು) ಉಪಾಸನಾಶಬ್ದದಿಂದ[2] ಸಿದ್ಧವಾಗುತ್ತದೆ' ಎಂದು ವೇದನವೆಂಬುದು ಮತ್ತೆಮತ್ತೆ ಆವೃತ್ತಿಮಾಡಿದರೆ ಮೋಕ್ಷಕ್ಕೆ ಸಾಧನವಾಗುತ್ತದೆ– ಎಂದು ನಿರ್ಣಯಿಸಿರುತ್ತಾನೆ. (೩) 'ಉಪಾಸನವು ಧ್ರುವಾನುಸ್ಮೃತಿಯಾಗಿರಬೇಕು ; ಏಕೆಂದರೆ (ಹಾಗೆ ಲೋಕದಲ್ಲಿ) ಕಂಡಿರುತ್ತದೆ, ಶ್ರುತಿಯೂ (ಹಾಗೆಂದೇ ಹೇಳುತ್ತದೆ)'– ಎಂದು ಉಪಾಸನೆಯೆಂಬ ಹೆಸರಿನ ಅದೇ ವೇದನವೇ ಮತ್ತೆಮತ್ತೆ ಆವೃತ್ತಿಮಾಡಿದರೆ ಧ್ರುವಾನುಸ್ಮೃತಿಯಾಗುತ್ತದೆ ಎಂದಿರುತ್ತಾನೆ.

## (ಮೂಲ)

ಸೇಯಂ ಸ್ಮೃತಿರ್ದರ್ಶನರೂಪಾ ಪ್ರತಿಪಾದಿತಾ । ದರ್ಶನರೂಪತಾ ಚ ಪ್ರತ್ಯಕ್ಷತಾಪತ್ತಿಃ। ಏವಂ ಪ್ರತ್ಯಕ್ಷತಾಪನ್ನಾಮ್ ಅಪವರ್ಗಸಾಧನಭೂತಾಂ ಸ್ಮೃತಿಂ ವಿಶಿನಷ್ಟಿ 'ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್' (ಕಾ. ೧–೨–೨೩, ಮುಂ. ೩–೨–೩) ಇತಿ । ಅನೇನ ಕೇವಲ ಶ್ರವಣಮನನನಿದಿಧ್ಯಾಸನಾನಾಮಾತ್ಮಪ್ರಾಪ್ತ್ಯನುಪಾಯತ್ವಮ್ ಉಕ್ತ್ವಾ 'ಯಮೇವೈಷ ಆತ್ಮಾ ವೃಣುತೇ ತೇನೈವ ಲಭ್ಯಃ' ಇತ್ಯುಕ್ತಮ್। ಪ್ರಿಯತಮ ಏವ ಹಿ ವರಣೀಯೋ ಭವತಿ । ಯಸ್ಯಾಯಂ ನಿರತಿಶಯಪ್ರಿಯಃ, ಸ ಏವಾಸ್ಯ ಪ್ರಿಯತಮೋ ಭವತಿ । ಯಥಾಽಯಂ ಪ್ರಿಯತಮ ಆತ್ಮಾನಂ ಪ್ರಾಪ್ನೋತಿ, ತಥಾ ಸ್ವಯಮೇವ ಭಗವಾನ್ ಪ್ರಯತತ ಇತಿ ಭಗವತೈವೋಕ್ತಮ್ 'ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್। ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ' ॥ (ಗೀ. ೧೦–೧೦) ಇತಿ, 'ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮ್ ಅಹಂ ಸ ಚ ಮಮ ಪ್ರಿಯಃ ॥' (ಗೀ. ೭–೧೭) ಇತಿ ಚ । ಅತಃ

---

1. ಪ್ರಯಾಜವೇ ಮುಂತಾದ ಕರ್ಮಗಳನ್ನು ಒಂದೊಂದುಸಲ ಮಾಡಿದ್ದರಿಂದ ಶಾಸ್ತ್ರವಿಧಿಗೆ ಸಾರ್ಥಕ್ಯವಾಗುವಂತೆಯೇ ವೇದನ(ಜ್ಞಾನ)ವನ್ನು ಒಂದುಸಲ ಮಾಡಿದರೆ ಸಾಕು –ಎಂದು ಪೂರ್ವಪಕ್ಷ.

2. ಉಪಾಸನೆ ಎಂಬ ಶಬ್ದಕ್ಕೆ ಮತ್ತೆಮತ್ತೆ ಚಿಂತನೆಮಾಡುವದೆಂದೇ ಅರ್ಥ ; ಆದ್ದರಿಂದ ಉಪಾಸನಾಶಬ್ದವನ್ನು ಪ್ರಯೋಗಿಸಿದ್ದರಿಂದಲೇ ಆವೃತ್ತಿಯು ಸಿದ್ಧವಾಗುತ್ತದೆ– ಎಂದು ಭಾವ.

ಸಾಕ್ಷಾತ್ಕಾರರೂಪಾ ಸ್ಮೃತಿಃ, ಸ್ಮರ್ಯಮಾಣಾತ್ಯರ್ಥಪ್ರಿಯತ್ವೇನ ಸ್ವಯಮಪಿ ಅತ್ಯರ್ಥಪ್ರಿಯಾ ಯಸ್ಯ, ಸ ಏವ ಪರೇಣಾಽಽತ್ಮನಾ ವರಣೀಯೋ ಭವತೀತಿ ತೇನೈವ ಲಭ್ಯತೇ ಪರ ಆತ್ಮಾ – ಇತ್ಯುಕ್ತಂ ಭವತಿ ||

(ಅರ್ಥ)

ಈ ಸ್ಮೃತಿಯು **ದರ್ಶನರೂಪ**ವೆಂಬು ಆಗಲೆ ಪ್ರತಿಪಾದನೆಮಾಡಿದ್ದಾಗಿದೆ. ದರ್ಶನರೂಪವಾಗಿರುವದೆಂದರೆ ಪ್ರತ್ಯಕ್ಷವಾಗಿರುವದು. ಹೀಗೆ ಪ್ರತ್ಯಕ್ಷತ್ವವನ್ನು ಹೊಂದಿದ, ಮೋಕ್ಷಸಾಧನವಾಗಿರುವ ಸ್ಮೃತಿಯ ವಿಶೇಷವನ್ನು (ಶ್ರುತಿಯು) 'ಈ ಆತ್ಮನು ಪ್ರವಚನದಿಂದ[1] ಲಭ್ಯನಲ್ಲ, ಮೇಧೆಯಿಂದಲೂ[2] ಲಭ್ಯನಲ್ಲ, ಬಹುವಾಗಿ ಶ್ರವಣಮಾಡಿದ್ದರಿಂದಲೂ ಇಲ್ಲ; ಯಾವನನ್ನೇ ಈ ಆತ್ಮನು[3] ಆರಿಸಿಕೊಳ್ಳುವನೋ ಅವನಿಗೆ ಸಿಕ್ಕುವನು; ಅವನಿಗೇ ಈ ಆತ್ಮನು ತನ್ನ ರೂಪವನ್ನು ಬಿಚ್ಚಿ ತೋರಿಸುವನು' (ಕಾ. ೧-೨-೨೩, ಮು. ೩-೨-೩) ಎಂದು ಹೇಳಿರುತ್ತದೆ, ಈ ವಚನದಲ್ಲಿ ಬರಿಯ ಶ್ರವಣ, ಮನನ, ನಿದಿಧ್ಯಾಸನಗಳು ಆತ್ಮಪ್ರಾಪ್ತಿಗೆ ಉಪಾಯವಲ್ಲವೆಂದು ಹೇಳಿ ಈ (ಪರ)ಮಾತ್ಮನು ಯಾರನ್ನೇ ಆರಿಸಿಕೊಳ್ಳುವನೋ ಅವನಿಗೇ ಸಿಕ್ಕುತ್ತಾನೆ ಎಂದು ಹೇಳಿರುತ್ತದೆ. ಪ್ರಿಯತಮನಲ್ಲವೆ, ಆರಿಸಿಕೊಳ್ಳುವದಕ್ಕೆ ಅರ್ಹನಾಗಿರುತ್ತಾನೆ? ಯಾವನಿಗೆ ಈ (ಪರಮಾತ್ಮನು) ಮಿಗಿಲಿಲ್ಲವೆನ್ನುವಷ್ಟು ಪ್ರಿಯತಮನಾಗಿರುತ್ತಾನೋ, ಅವನೇ ಇವನಿಗೆ ಪ್ರಿಯತಮನಾಗಿರುವನು. ಈ ಪ್ರಿಯತಮನು ತನ್ನನ್ನು ಹೇಗೆ ಪಡೆದುಕೊಳ್ಳುತ್ತಾನೋ ಹಾಗೆ ಭಗವಂತನು ತಾನೇ ಪ್ರಯತ್ನಿಸುವನೆಂಬುದು ಭಗವಂತನಿಂದಲೇ ಹೀಗೆಂದು ಉಕ್ತವಾಗಿದೆ : 'ಸಂತತವೂ ಸಮಾಹಿತಚಿತ್ತರಾಗಿ ಪ್ರೀತಿಪೂರ್ವಕವಾಗಿ ಭಜಿಸುತ್ತಿರುವ ಅವರಿಗೆ ಆ ಬುದ್ಧಿಯೋಗವನ್ನು ಕೊಡುತ್ತೇನೆ; ಅದರಿಂದ ಅವರು ನನ್ನ ಬಳಿಗೆ ಬರುತ್ತಾರೆ' (ಗೀ. ೧೦-೧೦ ಎಂದೂ), 'ಜ್ಞಾನಿಗೆ ನಾನು ಅತ್ಯಂತವಾಗಿ ಪ್ರಿಯನಾಗಿರುವೆನಲ್ಲವೆ? ಅವನೂ ನನಗೆ ಪ್ರಿಯನಾಗಿರುತ್ತಾನೆ' (ಗೀ. ೭-೧೭) ಎಂದೂ (ಭಗವಂತನು) ಹೇಳಿರುತ್ತಾನೆ.

ಆದ್ದರಿಂದ ಸಾಕ್ಷಾತ್ಕಾರರೂಪವಾದ ಸ್ಮೃತಿಯು ಸ್ಮರಿಸಲ್ಪಡುವ (ಭಗವಂತನಿಗೆ) ಅತ್ಯಂತಪ್ರಿಯವಾಗಿರುವದರಿಂದ ತಾನೂ ಯಾವನಿಗೆ ಪ್ರಿಯವಾಗಿರುವನೋ, ಅವನೇ ಪರಮಾತ್ಮನಿಗೆ ವರಣೀಯನಾಗುತ್ತಾನಾದ್ದರಿಂದ ಅವನಿಗೇ ಪರಮಾತ್ಮನು ಸಿಕ್ಕುತ್ತಾನೆ– ಎಂದು ಹೇಳಿದಂತಾಯಿತು.

---

1. 'ಪ್ರವಚನ'ವೆಂದರೆ ಮನನವೆಂದು ಶ್ರು. ಪ್ರ.
2. 'ಮೇಧೆಯಿಂದ' ಎಂದರೆ ನಿದಿಧ್ಯಾಸನದಿಂದ ಎಂದು ಶ್ರು. ಪ್ರ.
3. ಪರಮಾತ್ಮನು.

## ಈ ಧ್ರುವಾನುಸ್ಮೃತಿಯೇ ಭಕ್ತಿ

(ಮೂಲ)

ಏವಂರೂಪಾ ಧ್ರುವಾನುಸ್ಮೃತಿರೇವ ಭಕ್ತಿಶಬ್ದೇನಾಭಿಧೀಯತೇ ಉಪಾಸನಪರ್ಯಾಯತ್ವಾದ್ ಭಕ್ತಿಶಬ್ದಸ್ಯ । ಅತ ಏವ ಶ್ರುತಿಸ್ಮೃತಿಭಿರೇವಮ್ ಅಭಿಧೀಯತೇ—

'ತಮೇವ ವಿದಿತ್ವಾಽತಿಮೃತ್ಯುಮೇತಿ' (ಶ್ವೇ. ೩–೮), 'ತಮೇವಂ ವಿದ್ವಾನಮೃತ ಇಹ ಭವತಿ। ನಾನ್ಯಃ ಪನ್ಥಾ ಅಯನಾಯ ವಿದ್ಯತೇ' (ತೈ.ಆ.೩-೧೨-೩೯), 'ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ । ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ । ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ-ವಿಧೋಽರ್ಜುನ । ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರನ್ತಪ ॥' (ಗೀ. ೧೧–೫೩, ೫೪), 'ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ' (ಗೀ. ೮–೨೨) ಇತಿ ॥

(ಅರ್ಥ)

ಈ ರೂಪವಾದ[1] ಧ್ರುವಾನುಸ್ಮೃತಿಯೇ **ಭಕ್ತಿ**ಶಬ್ದದಿಂದ ಉಕ್ತವಾಗಿರುತ್ತದೆ; ಏಕೆಂದರೆ **ಭಕ್ತಿಶಬ್ದವು ಉಪಾಸನೆಯ ಪರ್ಯಾಯವಾಗಿರುತ್ತದೆ.**[2] ಆದ್ದರಿಂದಲೇ ಶ್ರುತಿಸ್ಮೃತಿಗಳಲ್ಲಿ ಹೀಗೆಂದಿರುತ್ತದೆ :– 'ಆತನನ್ನು ಅರಿತುಕೊಂಡರೇ ಅತಿಮೃತ್ಯುವನ್ನು ಪಡೆಯುತ್ತಾನೆ' (ಶ್ವೇ. ೩–೮). (೨) 'ಆತನನ್ನು ಹೀಗೆಂದು ಅರಿತುಕೊಂಡವನು ಇಲ್ಲಿಯೇ[3] ಅಮೃತನಾಗುತ್ತಾನೆ' (ಪರಮಾತ್ಮನನ್ನು) ಸೇರುವದಕ್ಕೆ ಇನ್ನೊಂದು ಹಾದಿಯಿರುವದಿಲ್ಲ' (ತೈ. ಆ. ೩–೧೨–೩೯). (೩) 'ನನ್ನನ್ನು ಹೇಗೆ ಕಂಡಿರುವೆಯೋ ಇಂಥ ಪ್ರಕಾರದ ನನ್ನನ್ನು ಕಾಣುವದು ವೇದಗಳಿಂದ[4] ಶಕ್ಯವಿಲ್ಲ, ತಪಸ್ಸಿನಿಂದಲೂ ಆಗಲಾರದು, ದಾನದಿಂದಲೂ ಆಗಲಾರದು; ಯಜ್ಞದಿಂದಲೂ ಆಗಲಾರದು. ಅನನ್ಯಭಕ್ತಿಯಿಂದಲಾದರೆ ಇಂಥ ನನ್ನನ್ನು ಇದ್ದದ್ದು ಇದ್ದಂತೆ ಅರಿತುಕೊಳ್ಳುವದಕ್ಕೂ ಕಾಣುವದಕ್ಕೂ ಒಳಹೊಗುವದಕ್ಕೂ ಶಕ್ಯವಾಗುತ್ತದೆ ಕಾಣಯ್ಯ, ಅರ್ಜುನ' (ಗೀ. ೧೧–೫೩, ೫೪). (೪) 'ಎಲೈ ಪಾರ್ಥನೆ, ಆ ಪರಮಪುರುಷನು ಅನನ್ಯಭಕ್ತಿಯಿಂದ ಲಭ್ಯನು' (ಗೀ. ೮–೨೨).

---

1. ಸಾಕ್ಷಾತ್ಕಾರರೂಪವಾದ.

2. ಭಕ್ತಿಯ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

3. 'ಇಲ್ಲಿ' ಎಂಬ ಶಬ್ದಕ್ಕೆ ಬದುಕಿರುವಾಗಲೆ ಎಂದು ಅದ್ವೈತಿಗಳು ಅರ್ಥವನ್ನು ಮಾಡುತ್ತಾರೆ. ಸಿದ್ಧಾಂತದಲ್ಲಿ ಹೇಗೆಂಬುದನ್ನು ಶ್ರು.ಪ್ರ.ಯಲ್ಲಿ ಹೇಳಿಲ್ಲ.

4. ವೇದಾಧ್ಯಯನದಿಂದ.

## ಧ್ರುವಾನುಸ್ಮೃತಿಗೆ ಸಾಧನಗಳು

(ಮೂಲ)

ಏವಂರೂಪಾಯಾ ಧ್ರುವಾನುಸ್ಮೃತೇಃ ಸಾಧನಾನಿ ಯಜ್ಞಾದೀನಿ ಕರ್ಮಾಣಿ ಇತಿ 'ಯಜ್ಞಾದಿಶ್ರುತೇರಶ್ವವತ್' (ಸೂ. ೩-೪-೨೬) ಇತ್ಯಭಿಧಾಸ್ಯತೇ | ಯದ್ಯಪಿ 'ವಿವಿದಿಷನ್ತಿ' (ಬೃ. ೪-೪-೨೨) ಇತಿ ಯಜ್ಞಾದಯೋ ವಿವಿದಿಷೋತ್ಪತ್ತೌ ವಿನಿಯುಜ್ಯನ್ತೇ, ತಥಾಪಿ ತಸ್ಯೈವ ವೇದನಸ್ಯ ಧ್ಯಾನರೂಪಸ್ಯ ಅಹರಹರನುಷ್ಠೀಯಮಾನಸ್ಯ ಅಭ್ಯಾಸಾಧೇಯಾತಿಶಯಸ್ಯ ಆಪ್ರಯಾಣಾದನುವರ್ತಮಾನಸ್ಯ ಬ್ರಹ್ಮಪ್ರಾಪ್ತಿಸಾಧನತ್ವಾತ್ ತದುತ್ಪತ್ತಯೇ ಸರ್ವಾಣಿ ಆಶ್ರಮಕರ್ಮಾಣಿ ಯಾವಜ್ಜೀವಮ್ ಅನುಷ್ಠೇಯಾನಿ | ವಕ್ಷ್ಯತಿ ಚ 'ಆಪ್ರಯಾಣಾತ್ತತ್ರಾಪಿ ಹಿ ದೃಷ್ಟಮ್' (ಸೂ. ೪-೧-೧೨), 'ಅಗ್ನಿಹೋತ್ರಾದಿ ತು ತತ್ಕಾರ್ಯಾಯೈವ ತದ್ದರ್ಶನಾತ್' (ಸೂ. ೪-೧-೧೬), 'ಸಹಕಾರಿತ್ವೇನ ಚ' (ಸೂ. ೩-೪-೩೩)- ಇತ್ಯಾದಿಷು ||

(ಅರ್ಥ)

ಈ ರೂಪವಾದ ಧ್ರುವಾನುಸ್ಮೃತಿಗೆ ಯಜ್ಞಾದಿಕರ್ಮಗಳು ಸಾಧನಗಳು ಎಂದು 'ಯಜ್ಞಾದಿಶ್ರುತೇರಶ್ವವತ್' (ಸೂ. ೩-೪-೨೬) ಯಜ್ಞವೇ ಮುಂತಾದವುಗಳನ್ನು ಹೇಳುವ ಶ್ರುತಿಯಿರುವದರಿಂದ ಎಲ್ಲದರ ಅಪೇಕ್ಷೆಯೂ ಇದೆ; 'ಕುದುರೆಯ ದೃಷ್ಟಾಂತದಂತೆ'[1] (ಸೂ. ೩-೪-೨೬) ಎಂಬ ಸೂತ್ರದಲ್ಲಿ ಹೇಳಿರುತ್ತದೆ. 'ವಿವಿದಿಷನ್ತಿ' (ತಿಳಿದುಕೊಳ್ಳಲು ಇಚ್ಛಿಸುತ್ತಾರೆ, ಬೃ. ೪-೪-೨೨) ಎಂದು ಯಜ್ಞಾದಿಗಳನ್ನು (ಶ್ರುತಿಯಲ್ಲಿ) ತಿಳಿದುಕೊಳ್ಳಲಿಚ್ಛೆಯು ಉತ್ಪತ್ತಿಯಾಗುವದರಲ್ಲಿಯೇ ವಿನಿಯೋಗಿಸಿರುತ್ತದೆಯಾದರೂ ಅದೇ ಧ್ಯಾನರೂಪವಾದ ವೇದನೆಯು-ದಿನದಿನವೂ ಅನುಷ್ಠಾನಮಾಡುತ್ತಾ ಅಭ್ಯಾಸದಿಂದ (ಅದರಲ್ಲಿ) ಅತಿಶಯವನ್ನುಂಟುಮಾಡಲಾಗಿ -ಸಾಯುವವರೆಗೂ (ನೋಡುತ್ತಿ)ದ್ದರೆ ಬ್ರಹ್ಮಪ್ರಾಪ್ತಿಗೆ ಸಾಧನವಾಗುವದರಿಂದ ಆ (ಧ್ಯಾನವು) ಉಂಟಾಗುವದಕ್ಕೆ[2] ಆಶ್ರಮಕರ್ಮಗಳೆಲ್ಲವನ್ನೂ ಜೀವವಿರುವವರೆಗೂ ಅನುಷ್ಠಾನಮಾಡಬೇಕು. (ಸೂತ್ರಕಾರನು) 'ಸಾಯುವವರೆಗೂ ಮಾಡಬೇಕು. ಆ ವಿಷಯದಲ್ಲಿಯೂ ಶ್ರುತಿ ಇದೆಯಷ್ಟೆ?' (ಸೂ. ೪-೧-೧೨), 'ಅಗ್ನಿಹೋತ್ರಾದಿಗಳಾದರೊ, ಅದರ ಕಾರ್ಯಕ್ಕೇ; ಏಕೆಂದರೆ ಅದೂ ಶ್ರುತಿಯಲ್ಲಿ ಕಂಡಿದೆ' (ಸೂ. ೪-೧-೧೬), 'ಸಹಕಾರಿಗಳಾಗಿಯೂ' (ಸೂ. ೩-೪-೩೩)- ಎಂಬಿವೇ ಮುಂತಾದ (ಸೂತ್ರಗಳಲ್ಲಿ) ಹೇಳುವನಾದ್ದರಿಂದಲೂ (ಹೀಗೆ).

---

1. ಹೇಗೆ ಸವಾರಿಮಾಡುವದಕ್ಕೆ ಸಾಧನವಾಗಿರುವ ಕುದುರೆಯು ತನಗೆ ಲಗಾಮು, ಥಡಿ- ಮುಂತಾದವುಗಳನ್ನು ಬಯಸುತ್ತದೆಯೋ ಹಾಗೆ ಮೋಕ್ಷಕ್ಕೆ ಸಾಧನವಾಗಿರುವ ವಿದ್ಯೆಯು ನಿತ್ಯನೈಮಿತ್ತಿಕಕರ್ಮಗಳೆಂಬ ಪರಿಕರಗಳನ್ನು ಬಯಸುತ್ತದೆ- ಎಂದು ದೃಷ್ಟಾಂತದಲ್ಲಿ ವಿವಕ್ಷಿತವಾದ ಅಂಶವನ್ನು ಮುಂದೆ ರಾಮಾನುಜರು ವಿಶದಗೊಳಿಸಿರುತ್ತಾರೆ.

2. 'ವಿವಿದಿಷೆಯುಂಟಾಗುವದಕ್ಕೆ' ಎಂದು ಶ್ರು. ಪ್ರ.

## ಸಾಧನೆಗಳ ವಿಷಯಕ್ಕೆ ವಾಕ್ಯಕಾರನ ಉಕ್ತಿ

(ಮೂಲ)

ವಾಕ್ಯಕಾರಶ್ಚ ಧ್ರುವಾನುಸ್ಮೃತೇರ್ವಿವೇಕಾದಿಭ್ಯ ಏವ ನಿಷ್ಪತ್ತಿಮಾಹ– 'ತಲ್ಲಬ್ಧಿರ್ವಿವೇಕವಿಮೋಕಾಭ್ಯಾಸಕ್ರಿಯಾಕಲ್ಯಾಣಾನವಸಾದಾನುದ್ಧರ್ಷೇಭ್ಯಃ, ಸಂಭವಾತ್, ನಿರ್ವಚನಾಚ್ಚ' (ವಾ.) ಇತಿ । ವಿವೇಕಾದೀನಾಂ ಸ್ವರೂಪಂ ಚಾಹ– 'ಜಾತ್ಯಾಶ್ರಯನಿಮಿತ್ತಾದುಷ್ಟಾದನ್ನಾತ್ ಕಾಯಶುದ್ಧಿರ್ವಿವೇಕಃ' ಇತಿ । ಅತ್ರ ನಿರ್ವಚನಮ್ 'ಆಹಾರಶುದ್ಧೌ ಸತ್ತ್ವಶುದ್ಧಿಸ್ಸತ್ತ್ವಶುದ್ಧೌ ಧ್ರುವಾ ಸ್ಮೃತಿಃ' (ಛಾಂ.೭–೨೬–೨), 'ವಿಮೋಕಃ ಕಾಮಾನಭಿಷ್ವಙ್ಗಃ' ಇತಿ । 'ಶಾನ್ತ ಉಪಾಸೀತ' (ಛಾಂ. ೩–೧೪–೧) ಇತಿ ನಿರ್ವಚನಮ್ । 'ಆರಮ್ಭಣಸಂಶೀಲನಂ ಪುನಃಪುನರಭ್ಯಾಸಃ' (ವಾ.) ಇತಿ । ನಿರ್ವಚನಂ ಚ ಸ್ಮಾರ್ತಮುದಾಹೃತಂ ಭಾಷ್ಯಕಾರೇಣ 'ಸದಾ ತದ್ಭಾವಭಾವಿತಃ' (ಗೀ. ೮–೬) ಇತಿ। 'ಪಞ್ಚಮಹಾಯಜ್ಞಾದ್ಯನುಷ್ಠಾನಂ ಶಕ್ತಿತಃ ಕ್ರಿಯಾ' ಇತಿ । ನಿರ್ವಚನಮ್ 'ಕ್ರಿಯಾವಾನೇಷ ಬ್ರಹ್ಮವಿದಾಂ ವರಿಷ್ಠಃ' (ಮುಂ. ೩–೧–೪), 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾಽನಾಶಕೇನ' (ಬೃ.೪–೪–೨೨) ಇತಿ ಚ। 'ಸತ್ಯಾರ್ಜವ ದಯಾದಾನಾಹಿಂಸಾನಭಿಧ್ಯಾಃ ಕಲ್ಯಾಣಾನಿ' (ವಾ.) ; ಇತಿ । ನಿರ್ವಚನಮ್ 'ಸತ್ಯೇನ ಲಭ್ಯಃ' (ಮುಂ. ೩–೧–೫), 'ತೇಷಾಮೇವೈಷ ವಿರಜೋ ಬ್ರಹ್ಮಲೋಕಃ' (ಪ್ರ.೧–೧೬)- ಇತ್ಯಾದಿ। 'ದೇಶಕಾಲವೈಷಮ್ಯಾ[1]ಚ್ಛೋಕವಸ್ತ್ವಾದ್ಯನುಸ್ಮೃತೇಶ್ಚ ತಜ್ಜನ್ಯಂ[2] ದೈನ್ಯಮಭಾಸ್ವರತ್ವಂ ಮನಸೋಽವಸಾದಃ ಇತಿ' । ತದ್ವಿಪರ್ಯಯೋಽನವಸಾದಃ । ನಿರ್ವಚನಮ್ 'ನಾಯಮಾತ್ಮಾ ಬಲಹೀನೇನ ಲಭ್ಯಃ' (ಮುಂ. ೩–೨–೪) ಇತಿ । 'ತದ್ವಿಪರ್ಯಯಜಾ ತುಷ್ಟಿರುದ್ಧರ್ಷಃ' ಇತಿ । ತದ್ವಿಪರ್ಯಯೋಽನುದ್ಧರ್ಷಃ' (ವಾ.) । ಅತಿಸನ್ತೋಷಶ್ಚ ವಿರೋಧೀತ್ಯರ್ಥಃ । ನಿರ್ವಚನಮಪಿ 'ಶಾನ್ತೋ ದಾನ್ತಃ' (ಬೃ. ೪–೪–೨೩) ಇತಿ ॥

(ಅರ್ಥ)

**ವಾಕ್ಯಕಾರನೂ** ಧ್ರುವಾನುಸ್ಮೃತಿಯು ವಿವೇಕಾದಿಗಳಿಂದಲೇ ಉಂಟಾಗುವದೆಂದು 'ಅದರ ಪ್ರಾಪ್ತಿಯು (೧) ವಿವೇಕ, (೨) ವಿಮೋಕ, (೩) ಅಭ್ಯಾಸ, (೪) ಕ್ರಿಯೆ, (೫) ಕಲ್ಯಾಣಗಳು, (೬) ಅನವಸಾದ, (೭) ಅನುದ್ಧರ್ಷ– ಇವುಗಳಿಂದಾಗುತ್ತದೆ. ಏಕೆಂದರೆ ಇದು ಸಂಭಾವಿತವಾಗಿದೆ, ನಿರ್ವಚನವೂ ಇದೆ' (ವಾ) ಎಂಬ ವಾಕ್ಯದಿಂದ ಹೇಳಿರುತ್ತಾನೆ. ವಿವೇಕಾದಿಗಳ ಸ್ವರೂಪವನ್ನೂ ಹೇಳಿರುತ್ತಾನೆ. (ಹೇಗೆಂದರೆ) :—

---

1. 'ವೈಗುಣ್ಯಾತ್' ಎಂದು ಪಾ॥

(1) **'ಜಾತಿ, ಆಶ್ರಯ, ನಿಮಿತ್ತ– ಇವುಗಳಿಂದ ದೂಷಿತವಾಗದ ಅನ್ನದಿಂದಾದ ಕಾಯಶುದ್ಧಿಯೇ ವಿವೇಕವು.'**

ಇಲ್ಲಿ **'ನಿರ್ವಚನವು'** ಯಾವದೆಂದರೆ :–

'ಆಹಾರಶುದ್ಧಿಯಾದರೆ ಸತ್ತ್ವಶುದ್ಧಿ, ಸತ್ತ್ವಶುದ್ಧಿಯಾಗಲು ಧ್ರುವಸ್ಮೃತಿ' (ಛಾಂ. ೭–೨೬–೨).

(2) **'ವಿಮೋಕವೆಂದರೆ ಕಾಮವನ್ನಪ್ಪಿಕೊಳ್ಳದೆ ಇರುವದು.'**

'ಶಾಂತನಾಗಿ ಉಪಾಸನೆಮಾಡಬೇಕು' (ಛಾಂ. ೩–೧೪–೧) ಎಂದು **ನಿರ್ವಚನ.**

(3) **'ಆರಂಭಿಸಿದ್ದನ್ನು ಮತ್ತೆಮತ್ತೆ ಪರಿಶೀಲಿಸುವದು ಅಭ್ಯಾಸವು.'**

ಇದಕ್ಕೆ **ನಿರ್ವಚನವನ್ನು** ಭಾಷ್ಯಕಾರರು[1] 'ಯಾವಾಗಲೂ ಅದರ ಭಾವದಿಂದಲೇ ಭಾವಿತನಾಗಿ' (ಗೀ.೮–೬) ಎಂದು ಸ್ಮೃತಿಯಿಂದ ಉದಾಹರಿಸಿರುತ್ತಾರೆ.

(4) **'ಪಂಚಮಹಾಯಜ್ಞಗಳೇ ಮುಂತಾದವನ್ನು ಶಕ್ತಿಯಿದ್ದಷ್ಟು ಅನುಷ್ಠಾನಮಾಡುವದು ಕ್ರಿಯೆ.'**

ಇದಕ್ಕೆ **ನಿರ್ವಚನವು :** 'ಕ್ರಿಯಾವಂತನಾದ ಇವನು ಬ್ರಹ್ಮವಿದರಲ್ಲಿ ವರಿಷ್ಠನು' (ಮುಂ. ೩–೧–೪) ಎಂಬುದು, ಮತ್ತು 'ಆ ಈ (ಪರಮಾತ್ಮನನ್ನು) ಬ್ರಾಹ್ಮಣರು ಯಜ್ಞದಿಂದಲೂ ದಾನದಿಂದಲೂ ಅನಶನರೂಪವಾದ ತಪಸ್ಸಿನಿಂದಲೂ ಅರಿತುಕೊಳ್ಳಲು ಇಚ್ಛಿಸುತ್ತಾರೆ' (ಬೃ. ೪–೪–೨೨) ಎಂಬುದು.

(5) **'ಸತ್ಯ, ಆರ್ಜವ, ದಯೆ, ದಾನ, ಅಹಿಂಸೆ, ಅತ್ಯಾಶೆಯಿಲ್ಲದಿರುವದು– ಇವು ಕಲ್ಯಾಣಗಳು.'**

**ನಿರ್ವಚನವು** (ಯಾವದೆಂದರೆ) : 'ಸತ್ಯದಿಂದ ದೊರಕತಕ್ಕದ್ದು ;' (ಮುಂ. ೩–೧–೫) 'ಅವರಿಗೇ ಆ ರಜಸ್ಸಿಲ್ಲದ ಬ್ರಹ್ಮಲೋಕವು' (ಪ್ರ. ೧–೧೬), ಮುಂತಾದದ್ದು.

(6) **'ದೇಶಕಾಲಗಳ ವೈಷಮ್ಯದಿಂದಲೂ ಶೋಕವಸ್ತುವೇ ಮುಂತಾದವುಗಳ ಅನುಸ್ಮೃತಿಯಿಂದಲೂ ಅದರಿಂದಾದ ಮನಸ್ಸಿನ ದೈನ್ಯವೂ ಮಂಕೂ ಅವಸಾದವು.' ಇದಕ್ಕೆ ವಿರುದ್ಧವಾದದ್ದು ಅನವಸಾದವು.'**

ಇದರ **ನಿರ್ವಚನವಿದು :** 'ಈ ಆತ್ಮನು ಬಲಹೀನನಿಗೆ ಲಭಿಸುವವನಲ್ಲ' (ಮುಂ. ೩–೨–೪).

---

1. ಭಾಷ್ಯಕಾರರೆಂದರೆ ದ್ರಮಿಡಾಚಾರ್ಯರು. ಇಲ್ಲಿ ಕೊಟ್ಟಿರುವ ನಿರ್ವಚನಗಳೆಲ್ಲ ಅವರವೇ ಆಗಿರಬಹುದೆಂದು ಈ ವಾಕ್ಯದಿಂದ ಊಹಿಸಬೇಕಾಗಿದೆ. ಭಾಷ್ಯಕಾರರ ವಿಷಯಕ್ಕೆ ಪೀಠಿಕೆಯನ್ನು ನೋಡಿ.

'ಆ (ಅವಸಾದದ) ವಿಪರ್ಯಯದಿಂದ ಉಂಟಾಗುವ ತುಷ್ಟಿಯು **ಉದ್ಧರ್ಷವು**'; ಆ (ಉದ್ಧರ್ಷಕ್ಕೆ) ವಿರುದ್ಧವಾದದ್ದು **ಅನುದ್ಧರ್ಷವು.** ಅತಿ ಸಂತೋಷವು ವಿರೋಧಿ ಎಂದರ್ಥ.

**ನಿರ್ವಚನವೂ** (ಇದೆ): 'ಶಾಂತನೂ ದಾಂತನೂ....' (ಬೃ. ೪–೪–೨೩).

## ಕರ್ಮಾನುಷ್ಠಾನದಿಂದ ವಿದ್ಯೋತ್ಪತ್ತಿ

**(ಮೂಲ)**

ಏವಂ ನಿಯಮಯುಕ್ತಸ್ಯ ಆಶ್ರಮವಿಹಿತಕರ್ಮಾನುಷ್ಠಾನೇನೈವ ವಿದ್ಯಾನಿಷ್ಪತ್ತಿಃ ಇತ್ಯುಕ್ತಂ ಭವತಿ । ತಥಾ ಚ ಶ್ರುತ್ಯನ್ತರಮ್ 'ವಿದ್ಯಾಂ ಚಾವಿದ್ಯಾಂ ಚ ಯಸ್ತ-ದ್ವೇದೋಭಯಂ ಸಹ । ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತ ಮಶ್ನುತೇ ।' (ಈ. ೧೧) ಇತಿ । ಅತ್ರಾವಿದ್ಯಾಶಬ್ದಾಭಿಹಿತಂ ವರ್ಣಾಶ್ರಮ ವಿಹಿತಂ ಕರ್ಮ । 'ಅವಿದ್ಯಯಾ' ಕರ್ಮಣಾ; ಮೃತ್ಯುಮ್ ಜ್ಞಾನೋತ್ಪತ್ತಿ ವಿರೋಧಿ ಪ್ರಾಚೀನಂ ಕರ್ಮ 'ತೀರ್ತ್ವಾ' ಅಪೋಹ್ಯ ; ವಿದ್ಯಯಾ ಜ್ಞಾನೇನ ಅಮೃತಂ ಬ್ರಹ್ಮ, ಅಶ್ನುತೇ ಪ್ರಾಪ್ನೋತಿ ಇತ್ಯರ್ಥಃ ॥

ಮೃತ್ಯುತರಣೋಪಾಯತಯಾ ಪ್ರತೀತಾ ಅವಿದ್ಯಾ ವಿದ್ಯೇತರದ್ ವಿಹಿತಂ ಕರ್ಮೈವ । ಯಥೋಕ್ತಮ್– 'ಇಯಾಜ ಸೋಽಪಿ ಸುಬಹೂನ್ ಯಜ್ಞಾನ್ ಜ್ಞಾನವ್ಯಪಾಶ್ರಯಃ । ಬ್ರಹ್ಮವಿದ್ಯಾಮಧಿಷ್ಠಾಯ ತರ್ತುಂ ಮೃತ್ಯುಮವಿದ್ಯಯಾ॥' (ವಿ. ಪು. ೬–೬–೧೨) ಇತಿ । ಜ್ಞಾನವಿರೋಧಿ ಚ ಕರ್ಮ ಪುಣ್ಯಪಾಪರೂಪಮ್ ; ಬ್ರಹ್ಮಜ್ಞಾನೋತ್ಪತ್ತಿವಿರೋಧಿತ್ವೇನ ಅನಿಷ್ಟಫಲತಯಾ ಉಭಯೋರಪಿ ಪಾಪ ಶಬ್ದಾಭಿಧೇಯತ್ವಮ್ । ಅಸ್ಯ ಚ ಜ್ಞಾನವಿರೋಧಿತ್ವಂ ಜ್ಞಾನೋತ್ಪತ್ತಿಹೇತು ಭೂತಶುದ್ಧಸತ್ತ್ವವಿರೋಧಿರಜಸ್ತಮೋವಿವೃದ್ಧಿದ್ವಾರೇಣ। ಪಾಪಸ್ಯ ಚ ಜ್ಞಾನೋ-ದಯವಿರೋಧಿತ್ವಮ್ 'ಏಷ ಏವಾಸಾಧು ಕರ್ಮ ಕಾರಯತಿ । ತಂ ಯಮಧೋ ನಿನೀಷತಿ'[1] (ಕೌ. ೩–೯)– ಇತಿ ಶ್ರುತ್ಯಾ ಅವಗಮ್ಯತೇ । ರಜಸ್ತಮಸೋ ರ್ಯಥಾರ್ಥಜ್ಞಾನಾವರಣತ್ವಮ್, ಸತ್ತ್ವಸ್ಯ ಚ ಯಥಾರ್ಥಜ್ಞಾನಹೇತುತ್ವಂ ಭಗವತೈವ ಪ್ರತಿಪಾದಿತಮ್ 'ಸತ್ತ್ವಾತ್ ಸಂಜಾಯತೇ ಜ್ಞಾನಮ್' (ಗೀ. ೧೪–೧೭) ಇತ್ಯಾದಿನಾ । ಅತಶ್ಚ ಜ್ಞಾನೋತ್ಪತ್ತಯೇ ಪಾಪಂ ಕರ್ಮ ನಿರಸ ನೀಯಮ್ । ತನ್ನಿರಸನಂ ಚ ಅನಭಿಸಂಹಿತಫಲೇನಾನುಷ್ಠಿತೇನ ಧರ್ಮೇಣ[2] । ತಥಾ ಚ **ಶ್ರುತಿಃ** 'ಧರ್ಮೇಣ ಪಾಪಮಪನುದತಿ' (ತೈ. ನಾ. ೬೩) ಇತಿ ॥

---

1. 'ನಿನೀಷತೇ' ಎಂದು ಶಂಕರಾಚಾರ್ಯರಿಗೆ ಸಂಮತವಾದ ಪಾಠ; 'ನನುತ್ಸತೇ' ಎಂದು ನಿ॥ ಪಾಠ. ಶಾಂಖಾಯನಾರಣ್ಯಕದ ಕೊನೆಯ ಅಧ್ಯಾಯದಲ್ಲಿ ಶಂಕರಾಚಾರ್ಯ ರಿಗೆ ಸಮ್ಮತವಾದ ಪಾಠವೇ ಇದೆ.

2. 'ಕರ್ಮಣಾ' ಎಂದು ಕಂ॥ ಪಾಠ.

ತದೇವಂ ಬ್ರಹ್ಮಪ್ರಾಪ್ತಿಸಾಧನಂ ಜ್ಞಾನಂ ಸರ್ವಾಶ್ರಮಕರ್ಮಾಪೇಕ್ಷಮ್ । ಅತೋಽಪೇಕ್ಷಿತಕರ್ಮಸ್ವರೂಪಜ್ಞಾನಂ ಕೇವಲಕರ್ಮಣಾಮಲ್ಪಾಸ್ಥಿರಫಲತ್ವ ಜ್ಞಾನಂ ಚ ಕರ್ಮಮೀಮಾಂಸಾವಸೇಯಮಿತಿ ಸೈವಾಪೇಕ್ಷಿತಾ ಬ್ರಹ್ಮ-ಜಿಜ್ಞಾಸಾಯಾಃ ಪೂರ್ವವೃತ್ತಾ ವಕ್ತವ್ಯಾ ॥

(ಅರ್ಥ)

ಈ (ಮೇಲೆ ಹೇಳಿದ) ನಿಯಮಗಳಿಂದೊಡಗೂಡಿರುವವನಿಗೆ ಆಶ್ರಮವಿಹಿತ ಕರ್ಮವನ್ನು ಅನುಷ್ಠಾನಮಾಡುವದರಿಂದಲೇ ವಿದ್ಯೆಯುಂಟಾಗುವದು[1] – ಎಂದು ಹೇಳಿದಂತೆ ಆಯಿತು. ಆದ್ದರಿಂದಲೇ ಇನ್ನೊಂದು ಶ್ರುತಿಯಲ್ಲಿ 'ವಿದ್ಯೆಯನ್ನೂ ಅವಿದ್ಯೆಯನ್ನೂ ಎರಡನ್ನೂ– ಒಟ್ಟಿಗೆ ಯಾವನು ಅರಿಯುತ್ತಾನೋ (ಅವನು) ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆಯುತ್ತಾನೆ' (ಈ. ೧೧).[2] ಈ (ಶ್ರುತಿಯಲ್ಲಿ) 'ಅವಿದ್ಯೆ' ಎಂಬ ಶಬ್ದದಿಂದ ಹೇಳಿರುವದು ವರ್ಣಾಶ್ರಮವಿಹಿತವಾದ ಕರ್ಮ. 'ಅವಿದ್ಯೆಯಿಂದ' ಎಂದರೆ ಕರ್ಮದಿಂದ, 'ಮೃತ್ಯುವನ್ನು' ಎಂದರೆ ಜ್ಞಾನೋತ್ಪತ್ತಿಗೆ ವಿರೋಧಿಯಾಗಿರುವ ಹಿಂದಿನ ಕರ್ಮವನ್ನು ದಾಟಿ– ತೆಗೆದುಹಾಕಿ, ವಿದ್ಯೆಯಿಂದ– ಜ್ಞಾನದಿಂದ, ಅಮೃತವನ್ನು– ಬ್ರಹ್ಮವನ್ನು ಪಡೆಯುತ್ತಾನೆ, ಸೇರುತ್ತಾನೆ (ಎಂದರ್ಥ). ಮೃತ್ಯುವನ್ನು ದಾಟುವದಕ್ಕೆ ಉಪಾಯವೆಂದು (ಇಲ್ಲಿ) ತಿಳಿಯಬರುವ 'ಅವಿದ್ಯೆಯು' ವಿದ್ಯೆಗಿಂತ ಬೇರೆಯಾದ ಕರ್ಮವೇ. ಏಕೆಂದರೆ 'ಅವನು ಬ್ರಹ್ಮವಿದ್ಯೆಯನ್ನು ವಶಪಡಿಸಿಕೊಂಡು ಅವಿದ್ಯೆಯಿಂದ ಮೃತ್ಯುವನ್ನು ದಾಟುವದಕ್ಕಾಗಿ ಜ್ಞಾನವನ್ನಾಶ್ರಯಿಸಿ ಬಹಳ ಯಜ್ಞಗಳನ್ನು ಮಾಡಿದನು' (ವಿ. ಪು. ೬–೬–೧೨) ಎಂದು (ಪುರಾಣದಲ್ಲಿ) ಹೇಳಿದೆ.

ಜ್ಞಾನಕ್ಕೆ ವಿರೋಧಿಯಾದದ್ದು ಪುಣ್ಯಪಾಪರೂಪವಾದ ಕರ್ಮವು. ಬ್ರಹ್ಮ ಜ್ಞಾನವು ಹುಟ್ಟುವದಕ್ಕೆ ವಿರೋಧಿಯಾಗಿರುವದರಿಂದ ಅನಿಷ್ಟಫಲವನ್ನು ಕೊಡುವ ಈ ಎರಡನ್ನೂ ಪಾಪಶಬ್ದದಿಂದ ಕರೆದಿರುತ್ತದೆ. ಈ (ಪಾಪವು) ಜ್ಞಾನವಿರೋಧಿಯಾಗಿರುವದು (ಹೇಗೆಂದರೆ) ಜ್ಞಾನೋತ್ಪತ್ತಿಗೆ ಕಾರಣವಾಗಿರುವ ಶುದ್ಧಸತ್ತ್ವಕ್ಕೆ ವಿರೋಧಿಯಾದ ರಜಸ್ತಮಸ್ಸುಗಳನ್ನು ಹೆಚ್ಚಿಸುವ ಮೂಲಕ. ಪಾಪವು ಜ್ಞಾನವುಂಟಾಗುವದಕ್ಕೆ ಅಡ್ಡಿಯಾಗಿರುವದೆಂಬುದು 'ಯಾವನನ್ನು ಕೆಳಗೆ ಇಳಿಸುವದಕ್ಕೆ ಇಚ್ಛಿಸುತ್ತಾನೋ, ಅವನನ್ನು ಈತನೇ ಕೆಟ್ಟಕರ್ಮಗಳನ್ನು ಮಾಡುವಂತೆ ಮಾಡುತ್ತಾನೆ' (ಕೌ. ೩–೯) ಎಂಬ ಶ್ರುತಿಯಿಂದ ಗೊತ್ತಾಗುತ್ತದೆ. ರಜಸ್ತಮಸ್ಸುಗಳು ಯಥಾರ್ಥಜ್ಞಾನವನ್ನು ಮುಚ್ಚಿಹಾಕುತ್ತವೆಂಬುದನ್ನೂ ಸತ್ತ್ವವು ಯಥಾರ್ಥ ಜ್ಞಾನಕ್ಕೆ ಕಾರಣವೆಂಬುದನ್ನೂ 'ಸತ್ತ್ವದಿಂದ ಜ್ಞಾನವುಂಟಾಗುತ್ತದೆ' (ಗೀ.

1. ಧ್ರುವಸ್ಮೃತಿರೂಪವಾದ ಧ್ಯಾನವು ವಶವಾಗುವದು.
2. ಈ ಶ್ರುತಿಯ ವಿವಿಧವ್ಯಾಖ್ಯಾನಗಳ ಬಗ್ಗೆ ಪರಿಶಿಷ್ಟವನ್ನು ನೋಡಿ.

೧೪–೧೭) ಮುಂತಾದ (ಶ್ಲೋಕಾರ್ಥ)ದಿಂದ ಭಗವಂತನೇ ಪ್ರತಿಪಾದಿಸಿರುತ್ತಾನೆ. ಆದ್ದರಿಂದಲೇ ಜ್ಞಾನವುಂಟಾಗುವದಕ್ಕೆ ಪಾಪಕರ್ಮವನ್ನು ತೊಲಗಿಸಬೇಕು ; ಅದರ ತೊಲಗುವಿಕೆಯಾದರೊ, ಫಲೇಚ್ಛೆಯಿಲ್ಲದೆ ಮಾಡಿದ ಧರ್ಮದಿಂದ (ಆಗುತ್ತದೆ) 'ಧರ್ಮದಿಂದ ಪಾಪವನ್ನು ಹೋಗಲಾಡಿಸಿಕೊಳ್ಳುತ್ತಾನೆ' (ತೈ. ನಾ. ೬೩) ಎಂಬ ಶ್ರುತಿಯು ಹಾಗೆಂದು ಹೇಳುತ್ತಿದೆ.

ಅಂತೂ ಹೀಗೆ ಬ್ರಹ್ಮಪ್ರಾಪ್ತಿಗೆ ಸಾಧನವಾದ ಜ್ಞಾನವು ಆಶ್ರಮಕರ್ಮಗಳನ್ನೆಲ್ಲ ಬಯಸುತ್ತದೆ. ಆದ್ದರಿಂದ ಅದಕ್ಕೆ ಬೇಕಾದ ಕರ್ಮಸ್ವರೂಪಜ್ಞಾನವೂ ಬರಿಯ ಕರ್ಮಗಳಿಗೆ ಅಲ್ಪವೂ ಅಸ್ಥಿರವೂ ಆದ ಫಲವು– ಎಂಬ ಜ್ಞಾನವೂ ಕರ್ಮ ಮೀಮಾಂಸೆಯಿಂದ ನಿಶ್ಚಯಿಸಿಕೊಳ್ಳತಕ್ಕದ್ದಾಗಿರುವದರಿಂದ, ಆ (ಮೀಮಾಂಸೆ ಯೇ) ಬ್ರಹ್ಮಜಿಜ್ಞಾಸೆಗೆ ಬೇಕಾಗಿರುವ ಪೂರ್ವವೃತ್ತವೆಂದು ಹೇಳಬೇಕು.

## ಬ್ರಹ್ಮಜಿಜ್ಞಾಸೆಗೆ ಧರ್ಮಜಿಜ್ಞಾಸಾಪೇಕ್ಷೆಯಿದೆ ಎಂಬುದಕ್ಕೆ ಯುಕ್ತ್ಯಂತರ

(ಮೂಲ)

ಅಪಿ ಚ ನಿತ್ಯಾನಿತ್ಯವಸ್ತುವಿವೇಕಾದಯಶ್ಚ ಮೀಮಾಂಸಾಶ್ರವಣಮನ್ತರೇಣ ನ ಸಂಪತ್ಸ್ಯನ್ತೇ ; ಫಲಕರಣೇತಿಕರ್ತವ್ಯತಾಧಿಕಾರಿವಿಶೇಷನಿಶ್ಚಯಾದ್ ಋತೇ ಕರ್ಮಸ್ವರೂಪತತ್ಫಲತತ್ಸ್ಥಿರತ್ವಾಸ್ಥಿರತ್ವಾಽಽತ್ಮನಿತ್ಯತ್ವಾದೀನಾಂ ದುರವಬೋಧ- ತ್ವಾತ್ । ಏಷಾಂ ಸಾಧನತ್ವಂ ಚ ವಿನಿಯೋಗಾವಸೇಯಮ್ । ವಿನಿಯೋಗಶ್ಚ ಶ್ರುತಿಲಿಙ್ಗಾದಿಭ್ಯಃ । ಸ ಚ ತಾರ್ತೀಯಃ ॥

ಉದ್ಗೀಥಾದ್ಯುಪಾಸನಾನಿ ಕರ್ಮಸಮೃದ್ಧ್ಯರ್ಥಾನ್ಯಪಿ ಬ್ರಹ್ಮದೃಷ್ಟಿರೂಪಾಣಿ ಬ್ರಹ್ಮಜ್ಞಾನಾಪೇಕ್ಷಾಣಿ – ಇತೀಹೈವ ಚಿನ್ತನೀಯಾನಿ । ತಾನ್ಯಪಿ ಕರ್ಮಾಣಿ ಅನಭಿಸಂಹಿತಫಲಾನಿ ಬ್ರಹ್ಮವಿದ್ಯೋತ್ಪಾದಕಾನೀತಿ ತತ್ಸಾದ್ಗುಣ್ಯಾಪಾದನಾನ್ಯೇ- ತಾನಿ ಸುತರಾಮ್ ಇಹೈವ ಸಙ್ಗತಾನಿ । ತೇಷಾಂ ಚ ಕರ್ಮಸ್ವರೂಪಾಧಿಗಮಾ- ಪೇಕ್ಷಾ ಸರ್ವಸಮ್ಮತಾ ॥

(ಅರ್ಥ)

ಇದೂ ಅಲ್ಲದೆ[1] ನಿತ್ಯಾನಿತ್ಯವಸ್ತುವಿವೇಕಾದಿಗಳೂ ಮೀಮಾಂಸಾಶ್ರವಣ ವಿಲ್ಲದೆ ಸಿದ್ಧವಾಗಲಾರವು ; ಏಕೆಂದರೆ ಫಲ, ಕರಣ, ಇತಿಕರ್ತವ್ಯತೆ,[2] ಅಧಿಕಾರಿ

1. ಬ್ರಹ್ಮಜ್ಞಾನಕ್ಕೆ ಕರ್ಮಮೀಮಾಂಸಾಶಾಸ್ತ್ರದ ಶ್ರವಣವು ಬೇಕೆಂಬುದೇ ಅಲ್ಲದೆ, ಪೂರ್ವಪಕ್ಷಿಯು ಒಪ್ಪಿರುವ ನಿತ್ಯಾನಿತ್ಯವಸ್ತುವಿವೇಕವೇ ಮುಂತಾದ ಸಾಧನಗಳುಂಟಾಗು ವದಕ್ಕೂ ಅದು ಬೇಕು ಎಂಬುದನ್ನು ಇಲ್ಲಿ ತೋರಿಸಲಾಗುತ್ತಿದೆ.

2. ಹೇಗೆ ಮಾಡಬೇಕೆಂಬುದು.

ಯಾರೆಂಬುದು– ಇವುಗಳನ್ನು ನಿಶ್ಚಯಿಸಿಕೊಂಡಲ್ಲದೆ ಕರ್ಮಸ್ವರೂಪ, ಅದರ ಫಲ, ಅದು ಸ್ಥಿರವೊ, ಅಸ್ಥಿರವೊ ಎಂಬುದು, ಆತ್ಮನು ನಿತ್ಯನೆಂಬುದು– ಇವೇ ಮುಂತಾದವುಗಳನ್ನು ಅರಿತುಕೊಳ್ಳುವದು ಆಗಲಾರದು[1]. ಇವುಗಳು[2] ಸಾಧನವೆಂಬುದು ಅವುಗಳ ವಿನಿಯೋಗದಿಂದ[3] ಗೊತ್ತುಮಾಡಿಕೊಳ್ಳತಕ್ಕದ್ದಾಗಿರುತ್ತದೆ. (ಆ) ವಿನಿಯೋಗವು ಶ್ರುತಿ, ಲಿಂಗ– ಮುಂತಾದವುಗಳಿಂದ[4] (ಗೊತ್ತಾಗಬೇಕು); ಅದು (ಪೂರ್ವಮೀಮಾಂಸೆಯ) ಮೂರನೆಯ (ಅಧ್ಯಾಯಕ್ಕೆ) ಸೇರಿದ್ದು.

ಉದ್ಗೀಥವೇ ಮುಂತಾದವುಗಳ ಉಪಾಸನೆಗಳನ್ನು ಕರ್ಮದ ಸಮೃದ್ಧಿಗಾಗಿ[5] ಮಾಡಬೇಕಾಗಿರುತ್ತದೆ; ಅವು ಬ್ರಹ್ಮದೃಷ್ಟಿರೂಪವಾಗಿರುತ್ತವೆಯಾಗಿ ಅವಕ್ಕೆ ಬ್ರಹ್ಮಜ್ಞಾನದ ಅಪೇಕ್ಷೆಯಿರುತ್ತದೆ; ಆದ್ದರಿಂದ ಅವುಗಳನ್ನು ಇಲ್ಲಿಯೇ ವಿಚಾರ ಮಾಡಬೇಕಾಗಿರುತ್ತದೆ. ಆ ಕರ್ಮಗಳೂ ಫಲೇಚ್ಛೆಯಿಲ್ಲದೆ ಮಾಡಿದರೆ ಬ್ರಹ್ಮಜ್ಞಾನವನ್ನುಂಟುಮಾಡುತ್ತವೆಯಾದ್ದರಿಂದ ಅವುಗಳಿಗೆ ಸಾದ್ಗುಣ್ಯವನ್ನುಂಟುಮಾಡುವ ಈ (ಉಪಾಸನೆಗಳು) ಈ (ಜ್ಞಾನಕಾಂಡಕ್ಕೆ) ಹೊಂದಿಕೆಯಾಗಿರುತ್ತವೆ ಎಂಬುದು ಯುಕ್ತತರವಾಗಿದೆ[6]. ಆ (ಉಪಾಸನೆ)ಗಳಿಗೆ ಕರ್ಮಸ್ವರೂಪದ ಅಪೇಕ್ಷೆಯಿದೆ ಎಂಬುದು ಎಲ್ಲರಿಗೂ ಸಮ್ಮತವಾಗಿರುತ್ತದೆ.

# ಬ್ರಹ್ಮಜಿಜ್ಞಾಸಾರಂಭದ ವಿಷಯಕ್ಕೆ ಮಹಾಪೂರ್ವಪಕ್ಷ

## (೧) ಬ್ರಹ್ಮವೊಂದೇ ಪರಮಾರ್ಥ, ಮಿಕ್ಕದ್ದೆಲ್ಲವೂ ಅದರಲ್ಲಿ ಕಲ್ಪಿತ

(ಮೂಲ)

೧೦. **ಯದೇಷ್ವಾಹುಃ** ಅಶೇಷವಿಶೇಷಪ್ರತ್ಯನೀಕಚಿನ್ಮಾತ್ರಂ ಬ್ರಹ್ಮೈವ ಪರಮಾರ್ಥಃ ; ತದತಿರೇಕಿನಾನಾವಿಧಜ್ಞಾತೃಜ್ಞೇಯತತ್ಕೃತಜ್ಞಾನಭೇದಾದಿ ಸರ್ವಂ ತಸ್ಮಿನ್ನೇವ ಪರಿಕಲ್ಪಿತಂ ಮಿಥ್ಯಾಭೂತಮ್ ॥

---

1. ಆದ್ದರಿಂದ ಧರ್ಮಜಿಜ್ಞಾಸೆಯು ಮೊದಲು ಆಗಿರಬೇಕು.
2. ನಿತ್ಯಾನಿತ್ಯವಿವೇಕವೇ ಮುಂತಾದವು.
3. ಶ್ರುತಿಯಲ್ಲಿ ಹಾಗೆ ಹೇಳಿರುವದರಿಂದ.
4. ಶಬ್ದದಿಂದ ನೇರಾಗಿ ಹೇಳಿರುವದು 'ಶ್ರುತಿ'. ಶಬ್ದದಿಂದ ಹಾಗೆಂದು ಕಲ್ಪಿಸಬೇಕಾಗಿದ್ದರೆ ಅದು 'ಲಿಂಗ'. ಶ್ರುತಿ, ಲಿಂಗ, ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾ– ಎಂಬಿವುಗಳಲ್ಲಿ ಹಿಂದಿನದಕ್ಕಿಂತ ಮುಂದಿನದು ದುರ್ಬಲವೆಂದು (ಜೈ. ೩–೩–೧೪ರಲ್ಲಿ) ಹೇಳಿದೆ.
5. ನ್ಯೂನಾತಿರೇಕವಿಲ್ಲದ ಸಾದ್ಗುಣ್ಯಕ್ಕಾಗಿ.
6. ಬ್ರಹ್ಮದೃಷ್ಟಿಗೆ ಬ್ರಹ್ಮಜ್ಞಾನವು ಅವಶ್ಯವಾದ್ದರಿಂದ ಅವು ಈ ಮೀಮಾಂಸೆಗೇ ಹೆಚ್ಚು ಒಪ್ಪುತ್ತವೆ– ಎಂದು ಭಾವ.

## (ಶ್ರುತಿಸೂತ್ರಗಳ ಆಧಾರ)

### (ಮೂಲ)

'ಸದೇವ ಸೌಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ. ೬-೨-೧), 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ। ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃಶ್ರೋತ್ರಂ ತದಪಾಣಿಪಾದಮ್। ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಂ ಪರಿಪಶ್ಯನ್ತಿ ಧೀರಾಃ' (ಮುಂ. ೧-೧-೫, ೬), 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧), 'ನಿಷ್ಕಲಂ ನಿಷ್ಕ್ರಿಯಂ ಶಾನ್ತಮ್ ನಿರವದ್ಯಂ ನಿರಞ್ಜನಮ್' (ಶ್ವೇ. ೬-೧೯), 'ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ। ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್' (ಕೇ. ೨-೩), 'ನ ದೃಷ್ಟೇರ್ದ್ರಷ್ಟಾರಂ ಪಶ್ಯೇರ್ನ ಮತೇರ್ಮನ್ತಾರಂ ಮನ್ವೀಥಾಃ' (ಬೃ. ೩-೪-೨), 'ಆನನ್ದೋ ಬ್ರಹ್ಮ' (ತೈ. ೩-೬), 'ಇದಂ ಸರ್ವಂ ಯದಯಮಾತ್ಮಾ' (ಬೃ.೨-೪-೬), 'ನೇಹ ನಾನಾಸ್ತಿ ಕಿಞ್ಚನ। ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ' (ಬೃ. ೪-೪-೧೯, ಕಾ. ೨-೧-೧೧), 'ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ...., ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್....ತತ್ಕೇನ ಕಂ ವಿಜಾನೀಯಾತ್' (ಬೃ. ೪-೫-೧೫), 'ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್' (ಛಾಂ. ೬-೧-೪), 'ಯದಾ ಹ್ಯೇವೈಷ ಏತಸ್ಮಿನ್ನುದರಮನ್ತರಂ ಕುರುತೇ। ಅಥ ತಸ್ಯ ಭಯಂ ಭವತಿ' (ತೈ. ೨-೭), 'ನ ಸ್ಥಾನತೋಽಪಿ ಪರಸ್ಯೋಭಯಲಿಙ್ಗಂ ಸರ್ವತ್ರ ಹಿ' (ಸೂ. ೩-೨-೧೧), 'ಮಾಯಾಮಾತ್ರಂ ತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್' (ಸೂ.೩-೨-೩)॥

### (ಅರ್ಥ)

ಇನ್ನು (ಕೆಲವರು) ಮತ್ತೊಂದು (ವಿಷಯವನ್ನು) ಹೇಳುತ್ತಾರಷ್ಟೆ ? (ಅದೇನೆಂದರೆ)—

ಎಲ್ಲ ವಿಶೇಷಗಳಿಗೂ ವಿರುದ್ಧವಾಗಿರುವ[1] ಚಿನ್ಮಾತ್ರವಾದ ಬ್ರಹ್ಮವೇ ಪರಮಾರ್ಥ; ಅದಕ್ಕಿಂತ ಬೇರೆಯಾದ ನಾನಾವಿಧವಾದ ಜ್ಞಾತೃ, ಜ್ಞೇಯ-ಅವುಗಳಿಂದಾದ ಜ್ಞಾನಭೇದಗಳು- ಇವೇ ಮುಂತಾದದ್ದೆಲ್ಲವೂ ಅದರಲ್ಲಿಯೇ ಸಂಪೂರ್ಣವಾಗಿ ಕಲ್ಪಿತವಾಗಿರುವದರಿಂದ ಮಿಥ್ಯಾಭೂತವಾಗಿದೆ.

---

1. 'ಸರ್ವವಿಶೇಷಪ್ರತ್ಯನೀಕ' ಎಂಬ ವಿಶೇಷಣವು ಯಾವ ಅದ್ವೈತಿಗಳ ಗ್ರಂಥದಲ್ಲಿದೆ ಎಂಬುದು ತಿಳಿದಿಲ್ಲ. 'ಪ್ರತ್ಯಸ್ತಮಿತಸರ್ವವಿಶೇಷ' ಎಂದು ಶಾಂಕರಭಾಷ್ಯದಲ್ಲಿ ಆಗಾಗ್ಗೆ ಬರುತ್ತಿರುತ್ತದೆ.

'ಏನಯ್ಯ, ಇದು ಮೊದಲು ಎರಡನೆಯದಿಲ್ಲದ ಒಂದೇ ಆದ ಸತ್ತೇ ಆಗಿದ್ದಿತು' (ಛಾಂ. ೬-೨-೧), 'ಇನ್ನು ಪರವಿದ್ಯೆ (ಯಾವದೆಂದರೆ) ಯಾವದರಿಂದ ಆ ಅಕ್ಷರವು ಅರಿಯಲ್ಪಡುತ್ತದೆಯೋ (ಅದು). ಯಾವದು ಅದೃಶ್ಯವೂ ಅಗ್ರಾಹ್ಯವೂ ಅಕರಣವೂ, ವರ್ಣವಿಲ್ಲದ್ದೂ, ಚಕ್ಷುಃಶ್ರೋತ್ರಗಳಿಲ್ಲದ್ದೂ ಕೈಕಾಲುಗಳಿಲ್ಲದ್ದೂ ನಿತ್ಯವೂ ವ್ಯಾಪಿಯೂ ಸರ್ವಗತವೂ ಬಹಳ ಸೂಕ್ಷ್ಮವೂ, ಅವ್ಯಯವೂ ಆಗಿರುವದೋ, ಯಾವ ಭೂತಯೋನಿಯನ್ನು ವಿವೇಕಿಗಳು ಎಲ್ಲೆಲ್ಲಿಯೂ ಕಾಣುತ್ತಿರುವರೋ ಅದು (ಅಕ್ಷರವು).' (ಮುಂ. ೧-೧-೫,೬), 'ಸತ್ಯವೂ ಜ್ಞಾನವೂ ಅನಂತವೂ ಆಗಿರುವ ಬ್ರಹ್ಮವನ್ನು' (ತೈ. ೨-೧), 'ನಿಷ್ಕಲವೂ ನಿಷ್ಕ್ರಿಯವೂ ಶಾಂತವೂ ನಿರ್ದುಷ್ಟವೂ, ಮತ್ತೊಂದಕ್ಕೆ ಲೇಪವಿಲ್ಲದ್ದೂ' (ಶ್ವೇ. ೬-೧೯), 'ಯಾವನಿಗೆ (ಅದು) ತಿಳಿಯದಿರುವದೋ ಅವನಿಗೆ ತಿಳಿದಿರುವದು; ಯಾವನಿಗೆ ತಿಳಿದಿರುವದೋ ಅವನು ಅರಿಯನು. ಅರಿಯುವವರಿಗೆ ತಿಳಿಯದೆ ಇರುತ್ತದೆ, ಅರಿಯದವರಿಗೆ ತಿಳಿದಿರುತ್ತದೆ' (ಕೇ. ೨-೩), 'ದೃಷ್ಟಿಯ ದ್ರಷ್ಟೃವನ್ನು ನೋಡಲಾರೆ, ಮತಿಯ ಮಂತೃವನ್ನು ಮನನಮಾಡಲಾರೆ' (ಬೃ. ೩-೪-೨), 'ಆನಂದವು ಬ್ರಹ್ಮ' (ತೈ. ೩-೬), 'ಇವೆಲ್ಲವೂ ಈ ಆತ್ಮನೆಂಬುದೇ' (ಬೃ. ೨-೪-೬), 'ಇಲ್ಲಿ ಸ್ವಲ್ಪವೂ ಭೇದವಿರುವದಿಲ್ಲ; ಇಲ್ಲಿ ಭೇದದಂತೆ ಯಾವನು ಕಾಣುವನೋ ಅವನು ಸಾವಿನಮೇಲೆ ಸಾವನ್ನು ಪಡೆಯುತ್ತಿರುವನು' (ಬೃ. ೪-೪-೧೯, ಕಠ. ೨-೧-೧೧), 'ಎಲ್ಲಿ ದ್ವೈತವಿದ್ದಂತೆ ಇರುವದೋ, ಅಲ್ಲಿ ಒಬ್ಬನು ಇನ್ನೊಬ್ಬನನ್ನು ಕಾಣುತ್ತಿರುವನು....ಇವನಿಗೆ ಎಲ್ಲಿ ಎಲ್ಲವೂ ಆತ್ಮನೇ ಆಗಿಬಿಟ್ಟಿರುವದೋ ಅಲ್ಲಿ ಏತರಿಂದ ಯಾರನ್ನು ಕಂಡಾನು ?....ಅಲ್ಲಿ ಏತರಿಂದ ಯಾರನ್ನು ಅರಿತುಕೊಂಡಾನು ?' (ಬೃ. ೪-೫-೧೫), 'ಕಾರ್ಯವು ಮಾತಿನಿಂದಾದ ಹೆಸರು ಮಾತ್ರ, ಮಣ್ಣೆಂಬುದೇ ಸತ್ಯವು' (ಛಾಂ. ೬-೧-೪), 'ಏಕೆಂದರೆ ಯಾವಾಗ ಇವನು ಈ ಆತ್ಮನಲ್ಲಿ ಸ್ವಲ್ಪಭೇದವನ್ನು ಕೂಡ ಕಾಣುತ್ತಾನೋ, ಆಗ ಅವನಿಗೆ ಭಯವಾಗುತ್ತದೆ' (ತೈ. ೨-೭), 'ಪರಮಾತ್ಮನಿಗೆ ಸ್ಥಾನ(ಉಪಾಧಿ)ಯಿಂದಲೂ (ಸವಿಶೇಷ ನಿರ್ವಿಶೇಷ ಎಂದು) ಎರಡೂ ಲಿಂಗಗಳಿರುವದಿಲ್ಲ; ಎಲ್ಲಾ (ಬ್ರಹ್ಮಸ್ವರೂಪಪರ) ವಾಕ್ಯಗಳಲ್ಲಿಯೂ ನಿರ್ವಿಶೇಷವೆಂದೇ (ಹೇಳಿರುತ್ತದೆ)' (ಸೂ. ೩-೨-೧೧), (ಸ್ವಪ್ನವು) ಮಾಯಾಮಾತ್ರವೇ, ಏಕೆಂದರೆ ಪೂರ್ಣವಾಗಿ ಅಭಿವ್ಯಕ್ತವಾದ ಸ್ವರೂಪವುಳ್ಳದ್ದಲ್ಲ' (ಸೂ. ೩-೨-೩)[1].

---

1. ಇಲ್ಲಿ ಪೂರ್ವಪಕ್ಷಿಗೆ ಸಮ್ಮತವಾದಂತೆಯೇ ಶ್ರುತಿಗಳನ್ನು ಕನ್ನಡಿಸಿದೆ. ಮುಂದೆ ಸಿದ್ಧಾಂತದಲ್ಲಿ ರಾಮಾನುಜರಿಗೆ ಸಮ್ಮತವಾದ ಅರ್ಥಗಳನ್ನು ಕೊಟ್ಟಿದೆ. ಮುಂದೆ ಕೊಟ್ಟಿರುವ ಪುರಾಣವಾಕ್ಯಗಳ ವಿಷಯಕ್ಕೂ ಹೀಗೆಯೇ ತಿಳಿಯಬೇಕು.

## (ಪುರಾಣಗಳ ಆಧಾರ)[1]

(ಮೂಲ)

ಪ್ರತ್ಯಸ್ತಮಿತಭೇದಂ ಯತ್ಸತ್ತಾಮಾತ್ರಮಗೋಚರಮ್ ।
ವಚಸಾಮಾತ್ಮಸಂವೇದ್ಯಂ ತಜ್ಜ್ಞಾನಂ ಬ್ರಹ್ಮಸಂಜ್ಞಿತಮ್ ॥ ವಿ. ೬–೭–೫೩

ಭಾವಾರ್ಥ :– ಯಾವ ಭೇದವೂ ಇಲ್ಲದ ಸತ್ತಾಮಾತ್ರವಾಗಿ ವಾಕ್ಕುಗಳಿಗೆ ಗೋಚರವಲ್ಲದೆ ತನಗೆ ಮಾತ್ರ ಅನುಭವಕ್ಕೆ ಬರುವವೋ ಆ ಜ್ಞಾನಕ್ಕೆ ಬ್ರಹ್ಮವೆಂದು ಹೆಸರು.

ಜ್ಞಾನಸ್ವರೂಪಮತ್ಯನ್ತನಿರ್ಮಲಂ ಪರಮಾರ್ಥತಃ
ತಮೇವಾರ್ಥಸ್ವರೂಪೇಣ ಭ್ರಾನ್ತಿದರ್ಶನತಃ ಸ್ಥಿತಮ್ ॥ ವಿ. ೧–೨–೬

ಭಾವಾರ್ಥ :– ನಿಜವಾಗಿ ಚೈತನ್ಯರೂಪವುಳ್ಳದ್ದಾಗಿ ಅತ್ಯಂತನಿರ್ಮಲವಾಗಿರುತ್ತದೆ. ಅದೇ ಭ್ರಾಂತಿದರ್ಶನದಿಂದ ಅರ್ಥಸ್ವರೂಪವಾಗಿರುತ್ತದೆ.

ಪರಮಾರ್ಥಸ್ತ್ವಮೇವೈಕೋ ನಾನ್ಯೋಽಸ್ತಿ ಜಗತಃ ಪತೇ ।
ವಿ. ೧–೪–೩೮.

ಭಾವಾರ್ಥ :– ಜಗತ್ತಿನ ಪತಿಯೆ, ಪರಮಾರ್ಥವಾಗಿ ನೀನೊಬ್ಬನೇ; ಮತ್ತೊಬ್ಬನಿಲ್ಲ.

ಯದೇತದ್ದೃಶ್ಯತೇ ಮೂರ್ತಮೇತಜ್ಜ್ಞಾನಾತ್ಮನಸ್ತವ ।
ಭ್ರಾನ್ತಿಜ್ಞಾನೇನ ಪಶ್ಯನ್ತಿ ಜಗದ್ರೂಪಮಯೋಗಿನಃ ॥
ಜ್ಞಾನಸ್ವರೂಪಮಖಿಲಂ ಜಗದೇತದಬುದ್ಧಯಃ ।
ಅರ್ಥಸ್ವರೂಪಂ ಪಶ್ಯನ್ತೋ ಭ್ರಾಮ್ಯನ್ತೇ ಮೋಹಸಂಪ್ಲವೇ ॥
ಯೇ ತು ಜ್ಞಾನವಿದಃ ಶುದ್ಧಚೇತಸಸ್ತೇಽಖಿಲಂ ಜಗತ್ ।
ಜ್ಞಾನಾತ್ಮಕಂ ಪ್ರಪಶ್ಯನ್ತಿ ತ್ವದ್ರೂಪಂ ಪರಮೇಶ್ವರ ॥ ವಿ. ೧–೪–೩೯, ೪೦,೪೧

ಭಾವಾರ್ಥ :–ಜ್ಞಾನಸ್ವರೂಪನಾದ ನಿನ್ನ ಈ ಮೂರ್ತಸ್ವರೂಪವು ಕಾಣುತ್ತಿರುವದಷ್ಟೆ? ಯೋಗಿಗಳಲ್ಲದವರು ಭ್ರಾಂತಿಜ್ಞಾನದಿಂದ ಜಗದ್ರೂಪವನ್ನಾಗಿ (ಅದನ್ನು) ಕಾಣುತ್ತಿರುವರು. ಈ ಜಗತ್ತೆಲ್ಲವೂ ಜ್ಞಾನಸ್ವರೂಪವಾಗಿರುತ್ತದೆ. ಬುದ್ಧಿಹೀನರು ಅರ್ಥಸ್ವರೂಪವೆಂದು ಕಾಣುತ್ತಾ ಮೋಹಪ್ರವಾಹದಲ್ಲಿ ತೇಲಾಡುತ್ತಿರುವರು. ಎಲೈ ಪರಮೇಶ್ವರನೆ, ಯಾರಾದರೆ ಜ್ಞಾನವನ್ನು ಬಲ್ಲರೋ, ಶುದ್ಧಚಿತ್ತರೋ, ಅವರು ಜಗತ್ತೆಲ್ಲವನ್ನೂ ಜ್ಞಾನಾತ್ಮಕನಾದ ನಿನ್ನ ರೂಪವೆಂದೇ ಕಾಣುತ್ತಿರುವರು.

ತಸ್ಮಾತ್ಮಪರದೇಹೇಷು ಸತೋಽಪ್ಯೇಕಮಯಂ ಹಿ ಯತ್ ।
ವಿಜ್ಞಾನಂ ಪರಮಾರ್ಥೋಽ ಹಿ ದ್ವೈತಿನೋಽತಥ್ಯದರ್ಶಿನಃ ॥ ವಿ. ೨–೧೪–೩೧

ಭಾವಾರ್ಥ :– ಆತನಿಗೆ ತನ್ನ ದೇಹದಲ್ಲಿಯೂ ಮತ್ತೊಬ್ಬರ ದೇಹದಲ್ಲಿಯೂ ಇರುವ ಒಂದೇ ಚೈತನ್ಯಸ್ವರೂಪವೇ ಪರಮಾರ್ಥವು. ದ್ವೈತಿಗಳು ಮಿಥ್ಯಾದೃಷ್ಟಿಗಳಾಗಿರುತ್ತಾರೆ.

---

1. ಇಲ್ಲಿ ಉದಾಹರಿಸಿರುವ ಪುರಾಣಶ್ಲೋಕಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ಯದ್ಯನ್ಯೋಽಸ್ತಿ ಪರಃ ಕೋಽಪಿ ಮತ್ತಃ ಪಾರ್ಥಿವಸತ್ತಮ ।
ತದೈಷೋಽಹಮಯಂ ಚಾನ್ಯೋ ವಕ್ತುಮೇವಮಪೀಷ್ಯತೇ ॥ ವಿ. ೨-೧೩-೯೦

ಭಾವಾರ್ಥ :- ಎಲೈ ರಾಜಶ್ರೇಷ್ಠನೆ, ನನಗಿಂತ ಬೇರೆಯಾಗಿ ಮತ್ತೊಬ್ಬನು ಯಾರಾದರೂ ಇದ್ದರೆ ಆಗ 'ಇವನು ನಾನು, ಅವನು ಮತ್ತೊಬ್ಬನು' ಎಂದಿಂತೂ ಹೇಳ ಬಹುದಾಗುತ್ತದೆ.

ವೇಣುರನ್ಧ್ರವಿಭೇದೇನ ಭೇದಃ ಷಡ್ಜಾದಿಸಂಜ್ಞಿತಃ ।
ಅಭೇದವ್ಯಾಪಿನೋ ವಾಯೋಸ್ತಥಾಽಸ್ಯ ಪರಮಾತ್ಮನಃ ॥ ವಿ. ೨-೧೪-೩೨

ಭಾವಾರ್ಥ :- ಅಭಿನ್ನವಾಗಿ ವ್ಯಾಪಿಸಿಕೊಂಡಿರುವ ಗಾಳಿಗೆ ಬಿದಿರುಕೋಲಿನ ರಂಧ್ರ ಗಳ ಭೇದದಿಂದ ಷಡ್ಜವೇ ಮುಂತಾದ (ಸ್ವರ)ಭೇದಗಳು ಹೇಗಾಗಿರುವವೋ, ಹಾಗೆಯೇ ಈ ಪರಮಾತ್ಮನಿಗೆ ಭೇದವು.

ಸೋಽಹಂ ಸ ಚ ತ್ವಂ ಸ ಚ ಸರ್ವಮೇತತ್ ।
ಆತ್ಮಸ್ವರೂಪಂ ತ್ಯಜ ಭೇದಮೋಹಮ್ ॥
ಇತೀರಿತಸ್ತೇನ ಸ ರಾಜವರ್ಯಃ ।
ತತ್ಯಾಜ ಭೇದಂ ಪರಮಾರ್ಥದೃಷ್ಟಿಃ ॥ ವಿ. ೨-೧೬-೨೩, ೨೪

ಭಾವಾರ್ಥ :- ಆತನೇ ನಾನು, ಆತನೇ ನೀನು; ಈ ಆತ್ಮಸ್ವರೂಪವೆಲ್ಲವೂ ಆತನೇ, ಭೇದಭ್ರಾಂತಿಯನ್ನು ಬಿಡು- ಎಂದು ಆತನು ಹೇಳಲು ಆ ರಾಜಶ್ರೇಷ್ಠನು ಪರಮಾರ್ಥ ದೃಷ್ಟಿಯುಳ್ಳವನಾಗಿ ಭೇದವನ್ನು ಬಿಟ್ಟುಬಿಟ್ಟನು.

ವಿಭೇದಜನಕೇಽಜ್ಞಾನೇ ನಾಶಮಾತ್ಯನ್ತಿಕಂ ಗತೇ ।
ಆತ್ಮನೋ ಬ್ರಹ್ಮಣೋ ಭೇದಮಸನ್ತಂ ಕಃ ಕರಿಷ್ಯತಿ ॥ ವಿ. ೬-೭-೯೬

ಭಾವಾರ್ಥ :- ಭೇದವನ್ನುಂಟುಮಾಡುವ ಅಜ್ಞಾನವು ಅತ್ಯಂತವಾಗಿ ನಾಶವನ್ನು ಹೊಂದಲಾಗಿ ಆತ್ಮನಿಗೂ ಬ್ರಹ್ಮಕ್ಕೂ ಇಲ್ಲದ ಭೇದವನ್ನು ಯಾವನುತಾನೆ ಮಾಡಿಕೊಂಡಾನು?

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ॥ ಗೀ. ೧೦-೨೦

ಭಾವಾರ್ಥ :- ಎಲೈ ಗುಡಾಕೇಶನೆ, ನಾನು ಎಲ್ಲಾ ಭೂತಗಳ ಅಂತಃಕರಣದಲ್ಲಿ ಯೂ ಇರುವ ಆತ್ಮನು.

ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ॥ ಗೀ. ೧೩-೨

ಭಾವಾರ್ಥ :- ಎಲೆ ಭಾರತನೆ, ಸರ್ವಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನನ್ನು ನಾನೆಂದು ತಿಳಿದುಕೊ.

ನ ತದಸ್ತಿ ವಿನಾ ಯತ್ ಸ್ಯಾನ್ಮಯಾ ಭೂತಂ ಚರಾಚರಮ್ ॥ ಗೀ. ೧೦-೩೯.

ಭಾವಾರ್ಥ :- ಸ್ಥಾವರವಾಗಲಿ ಜಂಗಮವಾಗಲಿ ನಾನಲ್ಲದೆ ಬೇರೆಯಾಗಿರುವ ಪ್ರಾಣಿಯು ಇಲ್ಲವೇಇಲ್ಲ.

(ಮೂಲ)

ಇತ್ಯಾದಿಭಿಃ ವಸ್ತುಸ್ವರೂಪೋಪದೇಶಪರೈಃ ಶಾಸ್ತ್ರೈಃ ನಿರ್ವಿಶೇಷಚಿನ್ಮಾತ್ರಂ ಬ್ರಹ್ಮೈವ ಸತ್ಯಮ್, ಅನ್ಯತ್ ಸರ್ವಂ ಮಿಥ್ಯೇತ್ಯಭಿಧಾನಾತ್ ॥

(ಅರ್ಥ)

ಇವೇ ಮುಂತಾದ ವಸ್ತುಸ್ವರೂಪವನ್ನು ಉಪದೇಶಿಸುವದರಲ್ಲಿ ತಾತ್ಪರ್ಯವುಳ್ಳ ಶಾಸ್ತ್ರಗಳಿಂದ ನಿರ್ವಿಶೇಷಚಿನ್ಮಾತ್ರವಾದ ಬ್ರಹ್ಮವೇ ಸತ್ಯವೆಂದೂ ಉಳಿದದ್ದೆಲ್ಲವೂ ಮಿಥ್ಯೆಯೆಂದೂ ಉಕ್ತವಾಗಿರುತ್ತದೆ.

## (೨) ಮಿಥ್ಯಾತ್ವವೆಂದರೆ ಜ್ಞಾನನಿವರ್ತ್ಯತ್ವ

(ಮೂಲ)

ಮಿಥ್ಯಾತ್ವಂ ನಾಮ ಪ್ರತೀಯಮಾನತ್ವಪೂರ್ವಕಯಥಾವಸ್ಥಿತವಸ್ತುಜ್ಞಾನನಿವರ್ತ್ಯತ್ವಮ್ । ಯಥಾ ರಜ್ಜ್ವಾದ್ಯಧಿಷ್ಠಾನಸರ್ಪಾದೇಃ । ದೋಷವಶಾದ್ಧಿ ತತ್ರ ತತ್ಕಲ್ಪನಮ್ । ಏವಂ ಚಿನ್ಮಾತ್ರವಪುಷಿ ಪರೇ ಬ್ರಹ್ಮಣಿ ದೋಷಪರಿಕಲ್ಪಿತಮಿದಂ ದೇವತಿರ್ಯಙ್ಮನುಷ್ಯಸ್ಥಾವರಾದಿಭೇದಂ ಸರ್ವಂ ಜಗದ್ ಯಥಾವಸ್ಥಿತಬ್ರಹ್ಮಸ್ವರೂಪಾವಬೋಧಬಾಧ್ಯಂ ಮಿಥ್ಯಾರೂಪಮ್ । ದೋಷಶ್ಚ ಸ್ವರೂಪತಿರೋಧಾನವಿವಿಧವಿಚಿತ್ರವಿಕ್ಷೇಪಕರೀ ಸದಸದನಿರ್ವಚನೀಯಾ ಅನಾದ್ಯವಿದ್ಯಾ। 'ಅನೃತೇನ ಹಿ ಪ್ರತ್ಯೂಢಾಃ' (ಛಾಂ. ೮-೩-೨), 'ತೇಷಾಂ ಸತ್ಯಾನಾಂ ಸತಾಮನೃತಮಪಿಧಾನಮ್' (ಛಾಂ. ೮-೩-೧), 'ನಾಸದಾಸೀನ್ನೋ ಸದಾಸೀತ್ತದಾನೀಮ್ ....ತಮ ಆಸೀತ್ತಮಸಾ ಗೂಢಮಗ್ರೇ ಪ್ರಕೇತಮ್' (ತೈ. ಬ್ರಾ. ೨-೮-೯, ಋ. ೧೦-೧೧-೧೨೯-೧,೩), 'ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್' (ಶ್ವೇ. ೨-೧೦), 'ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ' (ಬೃ. ೨-೫-೧೯), 'ಮಮ ಮಾಯಾ ದುರತ್ಯಯಾ' (ಗೀ. ೭-೧೪), 'ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ' (ಗೌ. ಕಾ. ೧-೧೬)[1]-ಇತ್ಯಾದಿಭಿಃ, ನಿರ್ವಿಶೇಷಚಿನ್ಮಾತ್ರಂ ಬ್ರಹ್ಮೈವ, ಅನಾದ್ಯವಿದ್ಯಯಾ ಸದಸದನಿರ್ವಾಚ್ಯಯಾ ತಿರೋಹಿತಸ್ವರೂಪಂ ಸ್ವಗತನಾನಾತ್ವಂ ಪಶ್ಯತಿ-ಇತ್ಯವಗಮ್ಯತೇ॥

(ಅರ್ಥ)

ಮಿಥ್ಯಾತ್ವವೆಂದರೆ ತೋರುತ್ತಿರುವದಾಗಿದ್ದು[2] ಇದ್ದದ್ದು ಇದ್ದಂತೆ ಇರುವ ವಸ್ತುವಿನ ಜ್ಞಾನದಿಂದ ನಿವರ್ತ್ಯವಾಗಿರುವದು.[3] ಹಗ್ಗವೇ ಮುಂತಾದ ಅಧಿಷ್ಠಾನ[4]

1. ಇದು ಮಾಂಡೂಕ್ಯೋಪನಿಷತ್ತಿನ ಭಾಗವೆಂತ ಕೆಲವರ ಮತ; ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ತೋರುತ್ತಿದ್ದು ಬಾಧ್ಯವಾಗುವದು ಮಿಥ್ಯೆ; ಎಂದಿಗೂ ತೋರದ ಮೊಲದ ಕೊಂಬು ಮುಂತಾದದ್ದು ಮಿಥ್ಯೆಯಲ್ಲ.

3. ನಿವರ್ತ್ಯವೆಂದರೆ ಕಾಣದೆ ಹೋಗುವದೊ, ಹುಸಿಯೆಂದು ನಿಶ್ಚಿತವಾಗುವದೊ-ಇಲ್ಲಿ ಸ್ಪಷ್ಟಪಡಿಸಿಲ್ಲ.

4. ಅಧಿಷ್ಠಾನಶಬ್ದವನ್ನು ಕಲ್ಪನೆಗೆ ಆಸ್ಪದವಾದದ್ದು ಎಂಬರ್ಥದಲ್ಲಿ ಅನುಶಾಂಕರ ವೇದಾಂತಿಗಳು ಬಳಸುತ್ತಾರೆ; ಶಾಂಕರಭಾಷ್ಯದಲ್ಲಿ ಅಧಿಷ್ಠಾನಶಬ್ದವನ್ನು ಆಧಾರ, ಶರೀರ-ಎಂಬರ್ಥದಲ್ಲಿ ಮಾತ್ರ ಬಳಸಿದೆ.

ವುಳ್ಳ ಹಾವೇ ಮುಂತಾದವುಗಳ (ಮಿಥ್ಯಾತ್ವವು ಹೇಗೋ ಹಾಗೆ). ಅಲ್ಲಿ ಅದನ್ನು ಕಲ್ಪಿಸುವದು ದೋಷದಿಂದಲೇ ಅಲ್ಲವೆ? ಹೀಗೆ ಚಿನ್ಮಾತ್ರಶರೀರವಾದ ಪರಬ್ರಹ್ಮದಲ್ಲಿ ದೇವತೆಗಳು, ತಿರ್ಯಕ್‌ಪ್ರಾಣಿಗಳು, ಮನುಷ್ಯರು, ಗಿಡಮರಗಳು –ಮುಂತಾದ ಭೇದದಿಂದ (ಕೂಡಿರುವ) ಈ ಪ್ರಪಂಚವೆಲ್ಲವೂ ದೋಷದಿಂದ ಕಲ್ಪಿತವಾಗಿದ್ದು ಇದ್ದದ್ದು ಇದ್ದಂತೆ ಇರುವ ಬ್ರಹ್ಮಸ್ವರೂಪದ ತಿಳಿವಳಿಕೆಯಿಂದ ಬಾಧ್ಯವಾಗುವ ಮಿಥ್ಯಾರೂಪವುಳ್ಳದ್ದು. (ಆ) ದೋಷವು, ಸ್ವರೂಪವನ್ನು ಮರೆಮಾಡಿ, ಬಗೆಬಗೆಯ ವಿಚಿತ್ರವಾದ ವಿಕ್ಷೇಪವನ್ನುಂಟುಮಾಡುವ ಸದಸದನಿರ್ವಚನೀಯವಾದ **ಅನಾದ್ಯವಿದ್ಯೆ.**[1] 'ಅನೃತದಿಂದ'[2]ಲಲ್ಲವೆ, ಹೊರಕ್ಕೆ ಎಳೆಯಲ್ಪಟ್ಟಿರುತ್ತಾರೆ?' (ಛಾಂ. ೮–೩–೨), 'ಸತ್ಯವಾಗಿರುವ ಅವಕ್ಕೆ ಅನೃತವು ಮುಚ್ಚಳ' (ಛಾಂ. ೮–೩–೧), 'ಅಸತ್ತಿರಲಿಲ್ಲ, ಸತ್ತಿರಲಿಲ್ಲ, ತಮಸ್ಸಿನಿಂದ ಮುಸುಕಲ್ಪಟ್ಟ (ಅಪ್ರಕೇತಂ) ಅಪ್ರಜ್ಞಾಯಮಾನವಾದ ತಮಸ್ಸು ಮೊದಲಿತ್ತು' (ತೈ.ಬ್ರಾ. ೨–೮–೯, ಋ. ೧೦–೧೧–೧೨೯–೧,೩), 'ಮಾಯೆಯನ್ನು ಪ್ರಕೃತಿಯೆಂದು ತಿಳಿಯಬೇಕು. ಮಾಯಿಯನ್ನಾದರೆ ಮಹೇಶ್ವರನೆಂದು ತಿಳಿಯಬೇಕು' (ಶ್ವೇ. ೪–೧೦), 'ಇಂದ್ರನು ಮಾಯೆಗಳಿಂದ ಬಹುರೂಪನಾಗಿ ಕಾಣಿಸುತ್ತಾನೆ' (ಬೃ. ೨–೫–೧೯), 'ನನ್ನ ಮಾಯೆ ದಾಟಲಸದಳ' (ಗೀ.೭–೧೪), 'ಅನಾದಿಮಾಯೆಯಿಂದ ನಿದ್ರಿಸುತ್ತಿರುವ ಜೀವನು ಯಾವಾಗ ಎಚ್ಚರುತ್ತಾನೋ' (ಗೌ. ಕಾ. ೧–೧೬)– ಇವೇ ಮುಂತಾದ (ವಚನ)ಗಳಿಂದ ನಿರ್ವಿಶೇಷವಾದ ಚಿನ್ಮಾತ್ರವಾದ ಬ್ರಹ್ಮವೇ[3] ಸದಸದನಿರ್ವಾಚ್ಯವಾದ ಅನಾದ್ಯವಿದ್ಯೆಯಿಂದ ತನ್ನ ರೂಪವು ಮುಚ್ಚಿಹೋಗಿರುವದರಿಂದ ತನ್ನಲ್ಲಿ ನಾನಾತ್ವವನ್ನು ಕಾಣುತ್ತದೆ –ಎಂದು ಗೊತ್ತಾಗುತ್ತದೆ.

## (೩) ಚಿನ್ಮಾತ್ರಬ್ರಹ್ಮವಾದಕ್ಕೆ ಪುರಾಣದ ಆಧಾರ

ಯಥೋಕ್ತಮ್—

**ಜ್ಞಾನಸ್ವರೂಪೋ ಭಗವಾನ್ ಯತೋಽಸಾವಶೇಷಮೂರ್ತಿರ್ನ ತು ವಸ್ತುಭೂತಃ ।**
**ತತೋ ಹಿ ಶೈಲಾಬ್ಧಿಧರಾದಿಭೇದಾನ್ ಜಾನೀಹಿ ವಿಜ್ಞಾನವಿಜೃಮ್ಭಿತಾನಿ ॥**
**ಯದಾ ತು ಶುದ್ಧಂ ನಿಜರೂಪಿ ಸರ್ವಂ ಕರ್ಮಕ್ಷಯೇ ಜ್ಞಾನಮಪಾಸ್ತದೋಷಮ್ ।**
**ತದಾ ಹಿ ಸಙ್ಕಲ್ಪತರೋಃ ಫಲಾನಿ ಭವನ್ತಿ ನೋ ವಸ್ತುಷು ವಸ್ತುಭೇದಾಃ ॥**

ವಿ. ಪು. ೨–೧೨–೩೯, ೪೦

---

1. 'ಅನಾದ್ಯವಿದ್ಯೆ' ಎಂಬುದು ನಾಮರೂಪಬೀಜವೆಂದು ಶಂಕರವ್ಯಾಖ್ಯಾನಕಾರರು ಒಪ್ಪಿರುತ್ತಾರೆ.

2. ಅನುಶಾಂಕರವೇದಾಂತದಲ್ಲಿ ಮಾಯೆ, ಅವಿದ್ಯೆ (ಅನೃತ)– ಇವೆರಡೂ ಪರ್ಯಾಯಶಬ್ದಗಳು.

3. 'ಬ್ರಹ್ಮಕ್ಕೇ ಅವಿದ್ಯೆ' ಎಂದು ಅದ್ವೈತಿಗಳು ಹೇಳುತ್ತಾರೆಂದು ಇಲ್ಲಿಟ್ಟುಕೊಂಡಿದೆ. ಆದ್ದರಿಂದ ಅದ್ವೈತಿಗಳನ್ನು 'ಭ್ರಾಂತಬ್ರಹ್ಮ'ವಾದಿಗಳು ಎಂದು ರಾಮಾನುಜರು ಕರೆಯುತ್ತಾರೆ.

ಭಾವಾರ್ಥ :– ಈ ಭಗವಂತನು ಜ್ಞಾನಸ್ವರೂಪನಾದ್ದರಿಂದ ಎಲ್ಲಾ ರೂಪಗಳುಳ್ಳವನಾದರೂ ಆಯಾ ವಸ್ತುವೇ ಆಗಿರುವನಲ್ಲ; ಆದರಿಂದಲೇ ಬೆಟ್ಟ, ಸಮುದ್ರ, ಭೂಮಿ–ಮುಂತಾದ ಭೇದಗಳೂ ವಿಜ್ಞಾನದ ವಿಲಾಸಗಳು ಎಂದು ತಿಳಿ. ಯಾವಾಗ ಜ್ಞಾನವು ಸರ್ವ ಕರ್ಮಗಳ ಕ್ಷಯವಾಗಲು ಶುದ್ಧವಾಗಿ, ಯಾವ ದೋಷವೂ ಇಲ್ಲದ ತನ್ನ ರೂಪವನ್ನೇ ಪಡೆಯುವದೋ ಆಗ ಸಂಕಲ್ಪವೃಕ್ಷದ ಫಲಗಳಾದ ವಸ್ತುಭೇದಗಳು ವಸ್ತುಗಳಲ್ಲಿ ಆಗುವದಿಲ್ಲವೆಂದು ತಿಳಿ.

ತಸ್ಮಾನ್ನ ವಿಜ್ಞಾನಮೃತೇಽಸ್ತಿ ಕಿಞ್ಚಿತ್ ಕ್ವಚಿತ್ಕದಾಚಿದ್ ದ್ವಿಜ ವಸ್ತುಜಾತಮ್ ।
ವಿಜ್ಞಾನಮೇಕಂ ನಿಜಕರ್ಮಭೇದವಿಭಿನ್ನಚಿತ್ತೈರ್ಬಹುಧಾಽಭ್ಯುಪೇತಮ್ ॥
ಜ್ಞಾನಂ ವಿಶುದ್ಧಂ ವಿಮಲಂ ವಿಶೋಕಮಶೇಷಲೋಭಾದಿನಿರಸ್ತಸಙ್ಗಮ್ ।
ಏಕಂ ಸದೈಕಂ ಪರಮಃ ಪರೇಶಃ ಸ ವಾಸುದೇವೋ ನ ಯತೋಽನ್ಯದಸ್ತಿ ॥
ಸದ್ಭಾವ ಏವಂ ಭವತೋ ಮಯೋಕ್ತೋ ಜ್ಞಾನಂ ಯಥಾ ಸತ್ಯಮಸತ್ಯಮನ್ಯತ್ ।
ಏತತ್ತು ಯತ್ಸಂವ್ಯವಹಾರಭೂತಂ ತತ್ರಾಪಿ ಚೋಕ್ತಂ ಭುವನಾಶ್ರಿತಂ ತೇ ॥
ವಿ. ಪು. ೨–೧೨–೪೩, ೪೪, ೪೫

ಭಾವಾರ್ಥ :–"ಎಲೈ ದ್ವಿಜನೆ, ಆದ್ದರಿಂದ ವಿಜ್ಞಾನವನ್ನು ಬಿಟ್ಟು ಎಲ್ಲಿಯೂ ಎಂದಿಗೂ ಯಾವದೊಂದೂ ವಸ್ತುಜಾತವು ಇರುವದಿಲ್ಲ. ವಿಜ್ಞಾನವೊಂದನ್ನೇ ತಮ್ಮ ಬೇರೆಬೇರೆಯ ಕರ್ಮಗಳಿಂದ ಬೇರೆಬೇರೆಯಾಗಿರುವ ಚಿತ್ತವುಳ್ಳವರು ಬಲುಬಗೆಯಿಂದ ಕೂಡಿರುವದೆಂದು ಅಂಗೀಕರಿಸಿರುತ್ತಾರೆ. ಜ್ಞಾನವು ವಿಶುದ್ಧವಾಗಿರುತ್ತದೆ, ನಿರ್ಮಲವಾಗಿರುತ್ತದೆ, ಶೋಕರಹಿತವಾಗಿರುತ್ತದೆ, ಲೋಭವೇ ಮುಂತಾದದ್ದರ ಸಂಗವಿಲ್ಲದ್ದು, ಒಂದು ಯಾವಾಗಲೂ ಒಂದೇ ಪರಮನೂ ಪರೇಶನೂ ಆಗಿದೆ. ಅದೇ ವಾಸುದೇವನು. ಅವನಿಗಿಂತ ಬೇರೆ ಏನೂ ಇರುವದಿಲ್ಲ. ಹೀಗೆ ಸದ್ಭಾವವನ್ನು ನಿನಗೆ ನಾನು ಹೇಳಿರುತ್ತೇನೆ, ಜ್ಞಾನವೇ ಸತ್ಯವೆಂಬುದನ್ನೂ ಮಿಕ್ಕದ್ದೆಲ್ಲವೂ ಅಸತ್ಯವೆಂಬುದನ್ನೂ ಹೇಳಿರುತ್ತೇನೆ, ಈ ಸಂವ್ಯವಹಾರದಲ್ಲಿದೆಯಲ್ಲ, ಆ ಭುವನವಿಷಯವಾದ ಜ್ಞಾನವನ್ನು ನಿನಗೆ ಹೇಳಿರುತ್ತೇನೆ"
ಎಂದು (ಪುರಾಣದಲ್ಲಿಯೂ) ಹೇಳಿರುತ್ತದೆ.

## (೪) ಬ್ರಹ್ಮಾತ್ಮೈಕತ್ವಜ್ಞಾನದಿಂದ ಅವಿದ್ಯಾನಿವೃತ್ತಿ

### (ಮೂಲ)

ಅಸ್ಯಾಶ್ಚಾವಿದ್ಯಾಯಾಃ ನಿರ್ವಿಶೇಷಚಿನ್ಮಾತ್ರಬ್ರಹ್ಮಾತ್ಮೈಕತ್ವವಿಜ್ಞಾನೇನ ನಿವೃತ್ತಿಂ ವದನ್ತಿ–

'ನ ಪುನರ್ಮೃತ್ಯವೇ ತದೇಕಂ ಪಶ್ಯತಿ' (?), 'ನ ಪಶ್ಯೋ ಮೃತ್ಯುಂ ಪಶ್ಯತಿ' (ಛಾಂ. ೭–೨೬–೨), 'ಯದಾ ಹ್ಯೇವೈಷ ಏತಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯನೇಽಭಯಂ ಪ್ರತಿಷ್ಠಾಂ ವಿನ್ದತೇ। ಅಥ ಸೋಽಭಯಂ ಗತೋ ಭವತಿ' (ತೈ. ೨–೭), 'ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ । ಕ್ಷೀಯನ್ತೇ ಚಾಸ್ಯ ಕರ್ಮಾಣಿ, ತಸ್ಮಿನ್ ದೃಷ್ಟೇ ಪರಾವರೇ' (ಮುಂ.೨–೩–೮), 'ಬ್ರಹ್ಮ ವೇದ ಬ್ರಹ್ಮೈವ ಭವತಿ' (೩–೨–೯), 'ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃ ಪನ್ಥಾಃ' (ಶ್ವೇ.೩–೮)– ಇತ್ಯಾದ್ಯಾಃ ಶ್ರುತಯಃ। ಅತ್ರ ಮೃತ್ಯುಶಬ್ದೇನ ಅವಿದ್ಯಾಭಿ

ಧೀಯತೇ । ಯಥಾ ಸನತ್ಸುಜಾತವಚನಮ್ 'ಪ್ರಮಾದಂ ವೈ ಮೃತ್ಯುಮಹಂ ಬ್ರವೀಮಿ ಸದಾಽ[1]ಪ್ರಮಾದಮಮೃತತ್ವಂ ಬ್ರವೀಮಿ'[2] (ಉದ್ಯೋ. ೪೨-೪) ಇತಿ॥

(ಅರ್ಥ)

ಈ ಅವಿದ್ಯೆಗೆ ನಿರ್ವಿಶೇಷಚಿನ್ಮಾತ್ರಬ್ರಹ್ಮಾತ್ಮೈಕತ್ವವಿಜ್ಞಾನದಿಂದಲೇ ನಿವೃತ್ತಿ- ಎಂದು 'ಆ ಒಂದನ್ನು ಅಪುನರ್ಮೃತ್ಯುವಿಗೆ ಕಾಣುತ್ತಾನೆ' (?)[3], 'ಜ್ಞಾನಿಯು ಮೃತ್ಯುವನ್ನು ಕಾಣುವದಿಲ್ಲ' (ಛಾಂ. ೭-೨೬-೨), 'ಯಾವಾಗ ಇವನು ಈ ಅದೃಶ್ಯನಾದ, ಅಶರೀರನಾದ, ನಿರ್ವಚನಮಾಡಲಾಗದ, ಆಧಾರರಹಿತವಾದ ಅಂಜಿಕೆಯಿಲ್ಲದ ನಿಲುಗಡೆಯನ್ನು ಪಡೆದುಕೊಳ್ಳುತ್ತಾನೋ, ಆಗ ಅವನು ಅಭಯವನ್ನು ಹೊಂದಿದವನಾಗುತ್ತಾನೆ' (ತೈ.೨-೭), 'ಆ ಪರಾವರನನ್ನು ಕಂಡರೆ, ಹೃದಯಗ್ರಂಥಿಯು ಬಿಚ್ಚುವದು, ಸಂಶಯಗಳೆಲ್ಲ ಕತ್ತರಿಸುವವು, ಇವನ ಕರ್ಮಗಳೂ ಕ್ಷಯವಾಗುವವು' (ಮುಂ. ೨-೨-೮), 'ಬ್ರಹ್ಮವನ್ನು ಅರಿತುಕೊಂಡರೆ ಬ್ರಹ್ಮವೇ ಆಗುತ್ತಾನೆ' (ಮುಂ.೩-೨-೯), 'ಆತನನ್ನೇ ಅರಿತುಕೊಂಡರೆ ಅಮೃತತ್ವವನ್ನು ಹೊಂದುತ್ತಾನೆ; ಮತ್ತೊಂದು ಹಾದಿಯಿಲ್ಲ' (ಶ್ವೇ.೩-೮)- ಇವೇ ಮುಂತಾದ ಶ್ರುತಿಗಳು ಹೇಳುತ್ತಿವೆ. ಈ (ಕೊನೆಯ ಶ್ರುತಿಯಲ್ಲಿ) ಮೃತ್ಯು ಎಂದು ಅವಿದ್ಯೆಯನ್ನು ಹೇಳಿರುತ್ತದೆ. ಹೇಗೆಂದರೆ 'ಪ್ರಮಾದವನ್ನೇ ಮೃತ್ಯುವೆಂದು ನಾನು ಹೇಳುತ್ತೇನೆ, ಯಾವಾಗಲೂ ಅಪ್ರಮಾದವಾಗಿರುವದನ್ನೇ ಅಮೃತತ್ವವೆನ್ನುತ್ತೇನೆ' (ಉದ್ಯೋ. ೪೨-೪)- ಎಂದು ಸನತ್ಸುಜಾತನ ವಚನವಿದೆ.

## (೫) ಬ್ರಹ್ಮಾತ್ಮೈಕತ್ವವಿಜ್ಞಾನಕ್ಕೆ ವಾಕ್ಯಪ್ರಮಾಣ

(ಮೂಲ)

'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧), 'ವಿಜ್ಞಾನಮಾನನ್ದಂ ಬ್ರಹ್ಮ' (ಬೃ. ೩-೯-೨೮-೭)- ಇತ್ಯಾದಿ ಶೋಧಕವಾಕ್ಯಾವಸೇಯನಿರ್ವಿಶೇಷಸ್ವರೂಪಬ್ರಹ್ಮಾತ್ಮೈಕತ್ವವಿಜ್ಞಾನಂ ಚ 'ಅಥ ಯೋಽನ್ಯಾಂ ದೇವತಾಮುಪಾಸ್ತೇಽನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದಾಕೃತ್ಸ್ನೋ ಹ್ಯೇಷಃ' (ಬೃ. ೧-೪-೧೦), 'ಆತ್ಮೇತ್ಯೇವೋಪಾಸೀತ' (ಬೃ. ೧-೪-೭), 'ತತ್ತ್ವಮಸಿ' (ಛಾಂ. ೬-೮-೭), 'ತ್ವಂ ವಾ ಅಹಮಸ್ಮಿ ಭಗವೋ ದೇವತೇ । ಅಹಂ ವೈ ತ್ವಮಸಿ ಭಗವೋ ದೇವತೇ' (ಜಾ.?),[4] 'ತದ್ಯೋಽಹಂ ಸೋಽಸೌ ಯೋಽಸೌ ಸೋಽಹಮಸ್ಮಿ'[5] (ಐ.ಆ.೨-೨-೪)

1. ಮಹಾಭಾರತದಲ್ಲಿ 'ತಥಾಽಪ್ರಮಾದಮ್' ಎಂದು ಪಾಠವಿದೆ.
2. 'ಮೋಹೋ ವೈ ಮೃತ್ಯುಃ ಸಂಮತೋ ಯಃ ಕವೀನಾಮ್' ಎಂಬ ವಾಕ್ಯವು ಹೆಚ್ಚಾಗಿ ಪೂ॥ ಪಾಠದಲ್ಲಿದೆ.
3. ಈ ವಾಕ್ಯವು ಎಲ್ಲಿಯದೆಂಬುದು ತಿಳಿಯಲಿಲ್ಲ; ರಾಮಾನುಜರು ಎರಡುಸಲ ಇದನ್ನು ಉದಾಹರಿಸಿರುತ್ತಾರೆ.
4. ಇದು ಜಾಬಾಲದಲ್ಲಿದೆ ಎಂದು ಶಾಂಕರಸೂತ್ರಭಾಷ್ಯ ೪-೧-೩ರಲ್ಲಿದೆ.
5. ಈ ವಾಕ್ಯವೂ ಶಂ. ಸೂ. ಭಾ. ೪-೧-೩ರಲ್ಲಿದೆ; ಅಲ್ಲಿ ವಾಕ್ಯದ ಕೊನೆಯ 'ಅಸ್ಮಿ' ಎಂಬುದಿಲ್ಲ. ಅರಣ್ಯಕದಲ್ಲಿಯೂ ಇಲ್ಲ.

-ಇತ್ಯಾದಿ ವಾಕ್ಯಸಿದ್ಧಮ್ । ವಕ್ಷ್ಯತಿ ಚೈತದೇವ- 'ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ' (ಸೂ. ೪-೧-೩) ಇತಿ। ತಥಾ ಚ ವಾಕ್ಯಕಾರಃ 'ಆತ್ಮೇತ್ಯೇವ ತು ಗೃಹ್ಣೀಯಾತ್ ಸರ್ವಸ್ಯ ತನ್ನಿಷ್ಪತ್ತೇಃ' (ವಾ.) ಇತಿ। ಅನೇನ ಚ ಬ್ರಹ್ಮಾತ್ಮೈಕತ್ವವಿಜ್ಞಾನೇನ ಮಿಥ್ಯಾರೂಪಸ್ಯ ಸಕಾರಣಸ್ಯ ಬನ್ಧಸ್ಯ ನಿವೃತ್ತಿರ್ಯುಕ್ತಾ ॥

(ಅರ್ಥ)

'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' (ತೈ. ೨-೧), 'ವಿಜ್ಞಾನವೂ ಆನಂದವೂ ಬ್ರಹ್ಮ' (ಬೃ. ೩-೯-೨೮-೭)-ಮುಂತಾದ **ಶೋಧಕವಾಕ್ಯ**[1]ಗಳಿಂದ ನಿಶ್ಚಿತವಾಗುವ ನಿರ್ವಿಶೇಷಸ್ವರೂಪವಾದ ಬ್ರಹ್ಮಾತ್ಮರ ಏಕತ್ವದ ವಿಜ್ಞಾನವು 'ಇನ್ನು ಯಾವನು ಮತ್ತೊಂದು ದೇವತೆಯನ್ನು ಇದು ಬೇರೆ, ನಾನು ಬೇರೆ-ಎಂದು ಉಪಾಸನೆಮಾಡುವನೋ ಅವನು ಅರಿಯನು ; ಇವನು ಅಸಂಪೂರ್ಣನಲ್ಲವೆ?' (ಬೃ. ೧-೪-೧೦), 'ಆತ್ಮನೆಂದೇ ಉಪಾಸನೆಮಾಡಬೇಕು' (ಬೃ. ೧-೪-೭), 'ಅದೇ ನೀನಾಗಿರುವೆ' (ಛಾಂ. ೬-೮-೭), 'ಭಗವತಿಯಾದ ದೇವತೆಯೆ, ನೀನೇ ನಾನಾಗಿರುವೆನು ; ಭಗವತಿಯಾದ ದೇವತೆಯೆ, ನಾನೇ ನೀನಾಗಿರುವೆ' (ಜಾ.), 'ಆದ್ದರಿಂದ ನಾನು ಯಾರೋ ಅವನೇ ಆತನು, ಆತನು ಯಾರೋ, ಅವನೇ ನಾನಾಗಿರುತ್ತೇನೆ' (ಐ.ಆ. ೨-೨-೪)- ಮುಂತಾದ ವಾಕ್ಯಗಳಿಂದ ಸಿದ್ಧವಾಗಿರುತ್ತದೆ. (ಸೂತ್ರಕಾರನೂ) ಮುಂದೆ ಇದನ್ನೇ 'ಆತ್ಮನೆಂದು ಬಳಿಸಾರುತ್ತಾರೆ, ಮತ್ತು ತಿಳಿಸುತ್ತಾರೆ' (ಸೂ. ೪-೧-೩)- ಎಂದು ಹೇಳುತ್ತಲೂ ಇದಾನೆ; ಹಾಗೆಂದೇ **ವಾಕ್ಯಕಾರನೂ**[2] 'ಆತ್ಮನೆಂದೇ ಗ್ರಹಿಸಬೇಕು, ಏಕೆಂದರೆ ಪ್ರತಿಯೊಬ್ಬನಿಗೂ ಹಾಗೆಂದೇ ಸಿದ್ಧವಾಗುತ್ತದೆ' (ವಾ.) ಎಂದು ಹೇಳಿರುತ್ತಾನೆ.

ಈ ಬ್ರಹ್ಮಾತ್ಮೈಕತ್ವವಿಜ್ಞಾನದಿಂದ ಮಿಥ್ಯಾರೂಪವಾದ ಸಕಾರಣಬಂಧದ[3] ನಿವೃತ್ತಿಯಾಗುವದು ಯುಕ್ತ.

## (೭) ಶಾಸ್ತ್ರವು ಪ್ರತ್ಯಕ್ಷವಿರುದ್ಧವಾಗಿ ಹೇಳಬಹುದೆ?

(ಮೂಲ)

ನನು ಚ ಸಕಲಭೇದನಿವೃತ್ತಿಃ ಪ್ರತ್ಯಕ್ಷವಿರುದ್ಧಾ ಕಥಮಿವ ಶಾಸ್ತ್ರಜನ್ಯವಿಜ್ಞಾನೇನ ಕ್ರಿಯತೇ ? ಕಥಂ ವಾ 'ರಜ್ಜುರೇಷಾ ನ ಸರ್ಪಃ' ಇತಿ ಜ್ಞಾನೇನ ಪ್ರತ್ಯಕ್ಷವಿರುದ್ಧಾ ಸರ್ಪನಿವೃತ್ತಿಃ ಕ್ರಿಯತೇ ? 'ತತ್ರ ದ್ವಯೋಃ ಪ್ರತ್ಯಕ್ಷಯೋ

1. ಶೋಧಕವಾಕ್ಯವೆಂಬ ಪರಿಭಾಷೆಯು ಅದ್ವೈತಿಗಳ ಗ್ರಂಥದಲ್ಲಿ ಕಾಣುತ್ತಿಲ್ಲ.

2. ಅದ್ವೈತಿಗಳು ಯಾರೂ ಈ ವಾಕ್ಯಕಾರವಚನವನ್ನು ಪ್ರಮಾಣವಾಗಿ ಉದಾಹರಿಸಿಲ್ಲ ; ಪೀಠಿಕೆಯನ್ನು ನೋಡಿ.

3. ಅವಿದ್ಯಾರೂಪವಾದ ಕಾರಣದೊಡನೆ ಮಿಥ್ಯಾಜ್ಞಾನಕೃತಬಂಧವು ಹೋಗುತ್ತದೆ ಎಂದು ಅಭಿಪ್ರಾಯ.

ವಿರೋಧಃ । ಇಹ ತು ಪ್ರತ್ಯಕ್ಷಮೂಲಸ್ಯ ಶಾಸ್ತ್ರಸ್ಯ ಪ್ರತ್ಯಕ್ಷಸ್ಯ ಚ' ಇತಿ ಚೇತ್, ತುಲ್ಯಯೋರ್ವಿರೋಧೇ ವಾ ಕಥಂ ಬಾಧ್ಯಬಾಧಕಭಾವಃ ? ಪೂರ್ವೋತ್ತರಯೋಃ ದುಷ್ಟಕಾರಣಜನ್ಯತ್ವತದಭಾವಾಭ್ಯಾಮ್ ಇತಿ ಚೇತ್, ಶಾಸ್ತ್ರಪ್ರತ್ಯಕ್ಷಯೋರಪಿ ಸಮಾನಮೇತತ್ ॥

ಏತದುಕ್ತಂ ಭವತಿ– ಬಾಧ್ಯಬಾಧಕಭಾವೇ ತುಲ್ಯತ್ವಸಾಪೇಕ್ಷತ್ವನಿರಪೇಕ್ಷತ್ವಾದಿ ನ ಕಾರಣಮ್, ಜ್ವಾಲಾಭೇದಾನುಮಾನೇನ ಪ್ರತ್ಯಕ್ಷೋಪಮರ್ದಾಯೋಗಾತ್ । ತತ್ರ ಹಿ ಜ್ವಾಲೈಕ್ಯಂ ಪ್ರತ್ಯಕ್ಷೇಣಾವಗಮ್ಯತೇ । ಏವಂ ಚ ಸತಿ ದ್ವಯೋಃ ಪ್ರಮಾಣಯೋರ್ವಿರೋಧೇ ಯತ್ ಸಂಭಾವ್ಯಮಾನಾನ್ಯಥಾಸಿದ್ಧಿ, ತದ್ ಬಾಧ್ಯಮ್ ; ಅನನ್ಯಥಾಸಿದ್ಧಮ್ ಅನವಕಾಶಮ್ ಇತರದ್ ಬಾಧಕಮ್-ಇತಿ ಸರ್ವತ್ರ ಬಾಧ್ಯಬಾಧಕಭಾವನಿರ್ಣಯಃ ಇತಿ ॥

(ಅರ್ಥ)

(ಆಕ್ಷೇಪ) :– ಪ್ರತ್ಯಕ್ಷಕ್ಕೆ ವಿರುದ್ಧವಾದ ಸಕಲಭೇದನಿವೃತ್ತಿಯನ್ನು ಶಾಸ್ತ್ರದಿಂದುಂಟಾದ ವಿಜ್ಞಾನವು ಹೇಗೆ ಮಾಡುತ್ತದೆ ?

(ಅದ್ವೈತಿ) :– 'ಇದು ಹಗ್ಗವು, ಹಾವಲ್ಲ' ಎಂಬ ಜ್ಞಾನವಾದರೂ ಪ್ರತ್ಯಕ್ಷವಿರುದ್ಧವಾದ ಸರ್ಪನಿವೃತ್ತಿಯನ್ನು ಹೇಗೆ ಮಾಡುತ್ತದೆ ?

(ಆಕ್ಷೇಪಕ) :– ಆ (ದೃಷ್ಟಾಂತ)ದಲ್ಲಿ ಎರಡು ಪ್ರತ್ಯಕ್ಷಗಳಿಗೆ (ಪರಸ್ಪರ) ವಿರೋಧ ; ಇಲ್ಲಿಯಾದರೊ, ಪ್ರತ್ಯಕ್ಷಮೂಲವಾಗಿರುವ ಶಾಸ್ತ್ರಕ್ಕೂ[1] ಪ್ರತ್ಯಕ್ಷಕ್ಕೂ ವಿರೋಧವಲ್ಲವೆ ?

(ಅದ್ವೈತಿ) :– ಸಮಾನವಾಗಿರುವ ಎರಡಕ್ಕೆ ವಿರೋಧವಾದಾಗಲಾದರೂ ಬಾಧ್ಯಬಾಧಕವು ಹೇಗೆ ?

(ಆಕ್ಷೇಪಕ) :– ಮೊದಲನೆಯದು ದುಷ್ಟಕಾರಣಜನ್ಯವಾಗಿರುತ್ತದೆ, ಎರಡನೆಯದು ಹಾಗಿರುವದಿಲ್ಲ; ಆದ್ದರಿಂದ.

(ಅದ್ವೈತಿ) :– ಶಾಸ್ತ್ರಪ್ರತ್ಯಕ್ಷಗಳಿಗೂ ಇದು ಸಮಾನವಾಗಿರುತ್ತದೆ.

ಇಲ್ಲಿ ಇಷ್ಟನ್ನು ಹೇಳಿದಂತಾಯಿತು: ಬಾಧ್ಯಬಾಧಕಭಾವವಿರುವಲ್ಲಿ (ಎರಡೂ) ಸಮಾನವಾಗಿರುವದು, (ಒಂದನ್ನೊಂದು) ಅಪೇಕ್ಷಿಸಿರುವದು, ಅಪೇಕ್ಷಿಸದೆ ಇರುವದು –ಮುಂತಾದದ್ದೇನೂ ಕಾರಣವಲ್ಲ; ಏಕೆಂದರೆ ಜ್ವಾಲೆಗಳು ಬೇರೆಬೇರೆ ಎಂಬ ಅನು

1. ಪ್ರತ್ಯಕ್ಷಕ್ಕೆ ವಿರುದ್ಧವಾದರೆ ಶಾಸ್ತ್ರವು ಬಾಧಕವಾದೀತೆ ?– ಎಂಬ ಪ್ರಶ್ನೆಯನ್ನು ಬೃ. ಭಾ.ದಲ್ಲಿ ತೆಗೆದು, ಪ್ರಮಾಣಗಳಿಗೆ ಪರಸ್ಪರವಿರೋಧವಿಲ್ಲ– ಎಂದಿದೆ; ಮತ್ತೆಲ್ಲಿಯೂ ಈ ಶಂಕೆಯನ್ನು ಶಂ. ಭಾ.ದಲ್ಲಿ ತೆಗೆದಿಲ್ಲ ; ಬ್ರಹ್ಮಸಿದ್ಧಿಭಾಮತಿಗಳಲ್ಲಿ ಈ ಆಕ್ಷೇಪವನ್ನು ತೆಗೆದಿದೆ. ಪೀಠಿಕೆಯನ್ನು ನೋಡಿ.

ಮಾನದಿಂದ ಪ್ರತ್ಯಕ್ಷವನ್ನು ಬಾಧಿಸುವದು ಆಗುವಂತಿಲ್ಲ; ಅಲ್ಲಿ ಪ್ರತ್ಯಕ್ಷದಿಂದ ಜ್ವಾಲೆಯು ಒಂದೇ ಎಂದು ನಿಶ್ಚಿತವಾಗಿರುತ್ತದೆಯಲ್ಲವೆ? ಹೀಗಿರುವದರಿಂದ ಎರಡು ಪ್ರಮಾಣಗಳಿಗೆ ವಿರೋಧವಾದಾಗ ಯಾವದು ಬೇರೆಯ ಪ್ರಕಾರದಿಂದಲೂ ಸಿದ್ಧವಾಗಬಹುದೆಂದು ಸಂಭಾವಿತವಾಗಿರುತ್ತದೆಯೋ, ಅದು ಬಾಧ್ಯವು, ಮತ್ತೊಂದು ಬಾಧಕ –ಎಂಬುದೇ ಬಾಧ್ಯಬಾಧಕಭಾವವನ್ನು ನಿರ್ಣಯಿಸುವ ಕ್ರಮ.

## (೭) ಶಾಸ್ತ್ರವು ಪ್ರತ್ಯಕ್ಷಕ್ಕಿಂತ ಪ್ರಬಲವೆಂಬುದು ಹೇಗೆ?

(ಮೂಲ)

ತಸ್ಮಾತ್, ಅನಾದಿನಿಧನಾವಿಚ್ಛಿನ್ನಸಂಪ್ರದಾಯಾಸಂಭಾವ್ಯಮಾನದೋಷಗನ್ಧಾನವಕಾಶಶಾಸ್ತ್ರಜನ್ಯನಿರ್ವಿಶೇಷನಿತ್ಯಶುದ್ಧಮುಕ್ತಬುದ್ಧಸ್ವಪ್ರಕಾಶಚಿನ್ಮಾತ್ರಬ್ರಹ್ಮಾತ್ಮಭಾವಾವಬೋಧೇನ ಸಮ್ಭಾವ್ಯಮಾನದೋಷಸಾವಕಾಶಪ್ರತ್ಯಕ್ಷಾದಿಸಿದ್ಧವಿವಿಧವಿಕಲ್ಪರೂಪಬನ್ಧನಿವೃತ್ತಿರ್ಯುಕ್ತೈವ । ಸಮ್ಭಾವ್ಯತೇ ಚ ವಿವಿಧವಿಕಲ್ಪಭೇದಪ್ರಪಞ್ಚಗ್ರಾಹಿಪ್ರತ್ಯಕ್ಷಸ್ಯ ಅನಾದಿಭೇದವಾಸನಾದಿರೂಪಾವಿದ್ಯಾಖ್ಯೋ ದೋಷಃ ॥

(ಅರ್ಥ)

ಆದ್ದರಿಂದ ಆದಿಯೂ ಅಂತವೂ ಇಲ್ಲದ, ಕಡಿವಡೆಯದ ಸಂಪ್ರದಾಯವುಳ್ಳದ್ದರಿಂದ ದೋಷದ ವಾಸನೆಗೆಕೂಡ ಸಂಭಾವನೆಯಿಲ್ಲದ, ನಿರವಕಾಶವಾದ ಶಾಸ್ತ್ರದಿಂದ[1] ಉಂಟಾಗಿರುವ ನಿರ್ವಿಶೇಷವೂ ನಿತ್ಯಶುದ್ಧಮುಕ್ತಬುದ್ಧವೂ[2] ಸ್ವಪ್ರಕಾಶವೂ ಆಗಿರುವ ಚಿನ್ಮಾತ್ರವಾದ ಬ್ರಹ್ಮಾತ್ಮಭಾವದ ಜ್ಞಾನದಿಂದ, ದೋಷವು ಸಂಭಾವಿತವಾಗಿರುವ, ಸಾವಕಾಶವಾಗಿರುವ, ಪ್ರತ್ಯಕ್ಷಾದಿಗಳಿಂದ ಸಿದ್ಧವಾಗಿರುವ ಬಗೆಬಗೆಯ ವಿಕಲ್ಪರೂಪವಾಗಿರುವ ಬಂಧವು ನಿವೃತ್ತವಾಗುವದೆಂಬುದು ಯುಕ್ತವೇ ಆಗಿರುತ್ತದೆ. ವಿಧವಿಧವಾದ ವಿಕಲ್ಪಭೇದಗಳಿಂದ (ಕೂಡಿದ) ಪ್ರಪಂಚದ ಜ್ಞಾನವನ್ನುಂಟುಮಾಡುವ ಪ್ರತ್ಯಕ್ಷ(ಪ್ರಮಾಣ)ಕ್ಕೆ ಅನಾದಿಯಾದ ಭೇದವಾಸನೆಯ ರೂಪವಾಗಿರುವ ಅವಿದ್ಯೆಯೆಂಬ ದೋಷವುಂಟೆಂಬುದು ಸಂಭಾವಿತವೂ ಆಗಿದೆ.

## (೮) ಕರ್ಮಶಾಸ್ತ್ರವು ಜ್ಞಾನಶಾಸ್ತ್ರದಿಂದ ಬಾಧ್ಯ

(ಮೂಲ)

ನನು ಅನಾದಿನಿಧನಾವಿಚ್ಛಿನ್ನಸಂಪ್ರದಾಯತಯಾ ನಿರ್ದೋಷಸ್ಯಾಪಿ ಶಾಸ್ತ್ರಸ್ಯ 'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ' (?) ಇತ್ಯೇವಮಾದೇಃ

1. ವೇದಾಂತಶಾಸ್ತ್ರವು ನಿತ್ಯವಾಗಿ ಅಪೌರುಷೇಯವಾಗಿ ನಿರವಕಾಶವಾಗಿರುವದರಿಂದ ಪ್ರತ್ಯಕ್ಷಕ್ಕಿಂತ ಪ್ರಬಲ ಎಂಬ ವಾದವು ಬ್ರಹ್ಮಸಿದ್ಧಿಯಲ್ಲಿಯೂ ಭಾಮತಿಯಲ್ಲಿಯೂ ಇದೆ.

2. ನಿತ್ಯಶುದ್ಧಬುದ್ಧಮುಕ್ತ– ಎಂಬ ಆನುಕ್ರಮವೇ ಅದ್ವೈತಗ್ರಂಥಗಳಲ್ಲಿರುತ್ತದೆ. ಪೀಠಿಕೆಯನ್ನು ನೋಡಿ.

ಭೇದಾವಲಮ್ಬಿನೋ ಬಾಧ್ಯತ್ವಂ ಪ್ರಸಜ್ಯೇತ । ಸತ್ಯಮ್ । ಪೂರ್ವಾಪರಾಪಚ್ಛೇದೇ ಪೂರ್ವಶಾಸ್ತ್ರವತ್ ಮೋಕ್ಷಶಾಸ್ತ್ರಸ್ಯ ನಿರವಕಾಶತ್ವಾತ್ ತೇನ ಬಾಧ್ಯತ ಏವ ॥

(ಅರ್ಥ)

(ಆಕ್ಷೇಪ) :– ಅದ್ಯಂತವಿಲ್ಲದ, ಕಡಿವಡೆಯದ ಸಂಪ್ರದಾಯವುಳ್ಳದ್ದಾದ್ದರಿಂದ ನಿರ್ದೋಷವಾಗಿದ್ದರೂ 'ಜ್ಯೋತಿಷ್ಟೋಮಯಾಗವನ್ನು ಸ್ವರ್ಗಕಾಮನು ಮಾಡಬೇಕು' (?) ಮುಂತಾದ ಶಾಸ್ತ್ರವು ಭೇದವನ್ನಾಶ್ರಯಿಸಿರುವದರಿಂದ (ವಿದ್ಯೆಯಿಂದ) ಬಾಧಿತವಾಗಬೇಕಾಗಿಬರುವದಲ್ಲ !

(ಸಮಾಧಾನ) :– ನಿಜ, ಪೂರ್ವಾಪರಾಪಚ್ಛೇದವಾದಾಗ ಪೂರ್ವಶಾಸ್ತ್ರವು (ಹೇಗೆ ಬಾಧಿತವಾಗುವದೋ) ಹಾಗೆ ಮೋಕ್ಷಶಾಸ್ತ್ರವು ನಿರವಕಾಶವಾಗಿರುವದರಿಂದ ಅದರಿಂದ (ನೀವು ಹೇಳಿದ[1] ಜ್ಯೋತಿಷ್ಟೋಮಾದಿಶಾಸ್ತ್ರವು) ಬಾಧಿತವೇ ಆಗುತ್ತದೆ.

## (೯) ಸಗುಣಬ್ರಹ್ಮವಾಕ್ಯಗಳೂ ನಿರ್ಗುಣವಾಕ್ಯಗಳಿಂದ ಬಾಧ್ಯ

(ಮೂಲ)

ವೇದಾನ್ತವಾಕ್ಯೇಷ್ವಪಿ ಸಗುಣಬ್ರಹ್ಮೋಪಾಸನಪರಾಣಾಂ ಶಾಸ್ತ್ರಾಣಾಮ್ ಅಯಮೇವ ನ್ಯಾಯಃ, ನಿರ್ಗುಣತ್ವಾತ್ ಪರಸ್ಯ ಬ್ರಹ್ಮಣಃ । ನನು ಚ 'ಯಃ ಸರ್ವಜ್ಞಃ ಸರ್ವವಿತ್' (ಮುಂ. ೧–೧–೭), 'ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (ಶ್ವೇ. ೬–೮), 'ಸತ್ಯಕಾಮಃ ಸತ್ಯಸಙ್ಕಲ್ಪಃ' (ಛಾಂ. ೮–೧–೫)– ಇತ್ಯಾದಿ ಬ್ರಹ್ಮಸ್ವರೂಪಪ್ರತಿಪಾದನಪರಾಣಾಂ ಶಾಸ್ತ್ರಾಣಾಂ ಕಥಂ ಬಾಧ್ಯತ್ವಮ್ ? ನಿರ್ಗುಣವಾಕ್ಯಸಾಮರ್ಥ್ಯಾದಿತಿ ಬ್ರೂಮಃ ॥

ಏತದುಕ್ತಂ ಭವತಿ 'ಅಸ್ಥೂಲಮನಣ್ವಹ್ರಸ್ವಮದೀರ್ಘಮ್' (ಬೃ. ೫-೮-೮)[2] 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨–೧), 'ನಿರ್ಗುಣಮ್' (ಚೂಲಿಕೋಪನಿಷತ್ ೭–೨೫, ಆತ್ಮೋಪನಿಷತ್[3]), 'ನಿರಞ್ಜನಮ್' (ಶ್ವೇ. ೬–೧೯)– ಇತ್ಯಾದಿವಾಕ್ಯಾನಿ ನಿರಸ್ತಸಮಸ್ತವಿಶೇಷಕೂಟಸ್ಥನಿತ್ಯಚೈತನ್ಯಂ ಬ್ರಹ್ಮ ಇತಿ ಪ್ರತಿಪಾದಯನ್ತಿ । ಇತರಾಣಿ ಚ ಸಗುಣಮ್ । ಉಭಯವಿಧವಾಕ್ಯಾನಾಂ

1. ಜ್ಯೋತಿಷ್ಟೋಮದಲ್ಲಿ ಋತ್ವಿಜರು ಯಜ್ಞಶಾಲೆಯಿಂದ ಹೊರಕ್ಕೆ ಬರುವಾಗ ಒಬ್ಬರನ್ನೊಬ್ಬರು ಮುಟ್ಟಿಕೊಂಡೇ ಬರಬೇಕು ; ಆಗ ಸಂಬಂಧವಿಚ್ಛೇದವಾದರೆ ಏನು ಮಾಡಬೇಕು ?– ಎಂಬುದನ್ನು ಗೊತ್ತುಪಡಿಸುವ ನ್ಯಾಯವಿದು. ಇದನ್ನು ಮಂಡನಮಿಶ್ರ, ವಾಚಸ್ಪತಿಮಿಶ್ರ– ಇಬ್ಬರೂ ಉಪಯೋಗಿಸಿಕೊಂಡಿರುತ್ತಾರೆ. ಪರಿಶಿಷ್ಟವನ್ನು ನೋಡಿ.

2. ಪೂ॥ ಪಾಠದಲ್ಲಿ 'ಅದೀರ್ಘಮ್' ಎಂಬ ಮಾತಿಲ್ಲ.

3. 'ಚೂಲಿಕೋಪನಿಷತ್' ಎಂದು ಪೂ॥ ಪಾಠದಲ್ಲಿ ಪರಾಮರ್ಶಿಸಿರುವ ಉಪನಿಷತ್ತು ನಮಗೆ ಸಿಕ್ಕಿಲ್ಲ. ಆತ್ಮೋಪನಿಷತ್ತಿನ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ವಿರೋಧೇ ತೇನೈವಾಪಚ್ಛೇದನ್ಯಾಯೇನ ನಿರ್ಗುಣವಾಕ್ಯಾನಾಂ ಗುಣಾಪೇಕ್ಷತ್ವೇನ ಪರತ್ವಾತ್ ಬಲೀಯಸ್ತ್ವಮ್ ಇತಿ ನ ಕಿಞ್ಚಿದಪಹೀನಮ್ ॥

(ಅರ್ಥ)

ವೇದಾಂತವಾಕ್ಯಗಳಲ್ಲಿಯೂ ಸಗುಣಬ್ರಹ್ಮದ ಉಪಾಸನೆಯಲ್ಲಿ ತಾತ್ಪರ್ಯವುಳ್ಳ ಶಾಸ್ತ್ರಗಳ ವಿಷಯಕ್ಕೂ ಇದೇ ನ್ಯಾಯವು (ಹೊಂದುತ್ತದೆ). ಏಕೆಂದರೆ ಪರಬ್ರಹ್ಮವು ನಿರ್ಗುಣವಾಗಿರುತ್ತದೆ.

(ಆಕ್ಷೇಪ) :– 'ಯಾವನು ಸರ್ವಜ್ಞನೂ ಸರ್ವವನ್ನೂ ಅರಿಯುವವನೂ (ಆಗಿರುತ್ತಾನೋ)' (ಮುಂ. ೨–೨–೭), 'ಇವನ ಪರಶಕ್ತಿಯು ವಿವಿಧವಾಗಿಯೇ ಶ್ರುತವಾಗಿರುತ್ತದೆ, ಜ್ಞಾನಬಲಕ್ರಿಯೆಯೂ ಸ್ವಾಭಾವಿಕವಾಗಿರುತ್ತದೆ' (ಶ್ವೇ. ೬–೮)[1], 'ಸತ್ಯಕಾಮನು, ಸತ್ಯಸಂಕಲ್ಪನು' (ಛಾಂ. ೮–೧–೫)–ಮುಂತಾದ ಬ್ರಹ್ಮಸ್ವರೂಪಪ್ರತಿಪಾದನಪರವಾದ ಶಾಸ್ತ್ರಗಳು ಬಾಧ್ಯವೆಂಬುದು ಹೇಗೆ ?

(ಪರಿಹಾರ) :– ನಿರ್ಗುಣವಾಕ್ಯಗಳ ಸಾಮರ್ಥ್ಯದಿಂದ (ಇವು ಬಾಧ್ಯ) ಎನ್ನುತ್ತೇವೆ.

ಇಲ್ಲಿ ಇಷ್ಟನ್ನು ಹೇಳಿದಂತಾಯಿತು : 'ಅಸ್ಥೂಲ, ಅನಣು, ಅಹ್ರಸ್ವ, ಅದೀರ್ಘ' (ಬೃ. ೩–೮–೮), 'ಸತ್ಯವೂ, ಜ್ಞಾನವೂ, ಅನಂತವೂ ಆದ ಬ್ರಹ್ಮವು' (ತೈ. ೨–೧), 'ನಿರ್ಗುಣ' (ಚೂಲಿಕೋ. ೩–೩ ಆತ್ಮೋಪನಿಷತ್), 'ನಿರಂಜನ' (ಶ್ವೇ. ೬–೧೯)– ಇವೇ ಮುಂತಾದ ವಾಕ್ಯಗಳು ಯಾವ ವಿಶೇಷವೂ ಇಲ್ಲದ ಕೂಟಸ್ಥನಿತ್ಯಚೈತನ್ಯವೇ ಬ್ರಹ್ಮವು– ಎಂದು ಪ್ರತಿಪಾದಿಸುತ್ತಿವೆ; ಉಳಿದ (ವಾಕ್ಯಗಳು) ಸಗುಣವೆನ್ನುತ್ತಿವೆ. (ಈ) ಎರಡು ಬಗೆಯ ವಾಕ್ಯಗಳಿಗೆ ವಿರೋಧವುಂಟಾಗಲಾಗಿ ಅದೇ ಅಪಚ್ಛೇದನ್ಯಾಯದಿಂದ ನಿರ್ಗುಣವಾಕ್ಯಗಳು ಗುಣವನ್ನು ಅಪೇಕ್ಷಿಸುವದರಿಂದ ಇವು ಉತ್ತರವಾಕ್ಯಗಳಾಗಿವೆಯಾಗಿ ಹೆಚ್ಚು ಬಲವುಳ್ಳವಾಗಿವೆ– ಎನ್ನುವದರಿಂದ ಯಾವ ಹಾನಿಯೂ ಆಗುವದಿಲ್ಲ.[2]

## (೧೦) ಸತ್ಯಜ್ಞಾನಾನಂತತ್ವಗಳು ಬ್ರಹ್ಮದ ಗುಣಗಳಲ್ಲ

(ಮೂಲ)

ನನು ಚ 'ಸತ್ಯಂ ಜ್ಞಾನಮನನ್ತಮ್' (ತೈ. ೨–೧) ಇತ್ಯತ್ರ ಸತ್ಯಜ್ಞಾನಾದಯೋ ಗುಣಾಃ ಪ್ರತೀಯನ್ತೇ । ನೇತ್ಯುಚ್ಯತೇ । ಸಾಮಾನಾಧಿಕರಣ್ಯೇನ

1. ಇಲ್ಲಿ ಕೊಟ್ಟಿರುವ ಮುಂಡಕಶ್ವೇತಾಶ್ವತರವಾಕ್ಯಗಳು ನಿರ್ಗುಣಬ್ರಹ್ಮಪರವೆಂದೇ ಶಂ. ಭಾ.

2. ನಿರ್ವಿಷಯವಾದ ನಿಷೇಧವು ಸಂಭವಿಸುವದಿಲ್ಲವಾದ್ದರಿಂದ ಸಗುಣವಾಕ್ಯಗಳಿಂದ ಮೊದಲೇ ಪ್ರಾಪ್ತವಾಗಿದ್ದ ಗುಣಗಳನ್ನು ನಿರ್ಗುಣವಾಕ್ಯಗಳು ನಿಷೇಧಮಾಡುತ್ತವೆ. ಆದ್ದರಿಂದ ಇವು ಪ್ರಬಲ– ಎಂದು ಭಾವ.

ಏಕಾರ್ಥತ್ವಪ್ರತೀತೇಃ । ಅನೇಕಗುಣವಿಶಿಷ್ಟಾಭಿಧಾನೇಽಪಿ ಏಕಾರ್ಥತ್ವಮ್ ಅವಿರುದ್ಧಮ್ ಇತಿ ಚೇತ್ । ಅನಭಿಧಾನಜ್ಞೋ[1] ದೇವಾನಾಂ ಪ್ರಿಯಃ । ಏಕಾರ್ಥತ್ವಂ ನಾಮ ಸರ್ವಪದಾನಾಮ್ ಅರ್ಥೈಕ್ಯಮ್ । ವಿಶಿಷ್ಟಪದಾರ್ಥಾಭಿಧಾನೇ ವಿಶೇಷಣಭೇದೇನ ಪದಾನಾಮ್ ಅರ್ಥಭೇದೋಽವರ್ಜನೀಯಃ ; ತತಶ್ಚ ಏಕಾರ್ಥತ್ವಂ ನ ಸಿಧ್ಯತಿ । ಏವಂ ತರ್ಹಿ ಸರ್ವಪದಾನಾಂ ಪರ್ಯಾಯತಾ ಸ್ಯಾತ್, ಅವಿಶಿಷ್ಟಾರ್ಥಾಭಿಧಾಯಿತ್ವಾತ್ । ಏಕಾರ್ಥಾಭಿಧಾಯಿತ್ವೇಽಪಿ ಅಪರ್ಯಾಯತ್ವಮ್ ಅವಹಿತಮನಾಃ ಶೃಣು । ಏಕತ್ವತಾತ್ಪರ್ಯನಿಶ್ಚಯಾತ್ ಏಕಸ್ಯೈವಾರ್ಥಸ್ಯ ತತ್ತತ್ಪದಾರ್ಥವಿರೋಧಿಪ್ರತ್ಯನೀಕಪರತ್ವೇನ[2] ಸರ್ವಪದಾನಾಮ್ ಅರ್ಥವತ್ತ್ವಮ್ ಏಕಾರ್ಥತ್ವಮ್ ಅಪರ್ಯಾಯತಾ ಚ ॥

ಏತದುಕ್ತಂ ಭವತಿ– ಲಕ್ಷಣತಃ ಪ್ರತಿಪತ್ತವ್ಯಂ ಬ್ರಹ್ಮ ಸಕಲೇತರಪದಾರ್ಥವಿರೋಧಿರೂಪಮ್ । ತದ್ವಿರೋಧಿರೂಪಂ ಸರ್ವಮ್ ಅನೇನ ಪದತ್ರಯೇಣ ಫಲತೋ ವ್ಯುದಸ್ಯತೇ । ತತ್ರ ಸತ್ಯಪದಂ ವಿಕಾರಾಸ್ಪದತ್ವೇನಾಸತ್ಯಾದ್ ವಸ್ತುನೋ ವ್ಯಾವೃತ್ತಬ್ರಹ್ಮಪರಮ್ । ಜ್ಞಾನಪದಂ ಚಾನ್ಯಾಧೀನಪ್ರಕಾಶಜಡರೂಪಾದ್ ವಸ್ತುನೋ ವ್ಯಾವೃತ್ತಪರಮ್ । ಅನನ್ತಪದಂ ಚ ದೇಶತಃ ಕಾಲತೋ ವಸ್ತುತಶ್ಚ ಪರಿಚ್ಛಿನ್ನ[3]ವ್ಯಾವೃತ್ತಪರಮ್ । ನ ಚ ವ್ಯಾವೃತ್ತಿರ್ಭಾವರೂಪೋ ಅಭಾವರೂಪೋ ವಾ ಧರ್ಮಃ, ಅಪಿ ತು ಸಕಲೇತರವಿರೋಧಿ ಬ್ರಹ್ಮೈವ । ಯಥಾ ಶೌಕ್ಲ್ಯಾದೇಃ ಕಾರ್ಷ್ಣ್ಯಾದಿವ್ಯಾವೃತ್ತಿಃ ತತ್ತತ್ಪದಾರ್ಥಸ್ವರೂಪಮೇವ ನ ಧರ್ಮಾನ್ತರಮ್ । ಏವಮ್ ಏಕಸ್ಯೈವ ವಸ್ತುನಃ ಸಕಲೇತರವಿರೋಧ್ಯಾಕಾರತಾಮ್ ಅವಗಮಯದ್ ಅರ್ಥವತ್ತರಮ್ ಏಕಾರ್ಥಮ್ ಅಪರ್ಯಾಯಂ ಚ ಪದತ್ರಯಮ್ ॥

(ಅರ್ಥ)

(ಆಕ್ಷೇಪ) :– 'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' (ತೈ. ೨–೧) ಎಂಬಲ್ಲಿ ಸತ್ಯ, ಜ್ಞಾನ– ಮುಂತಾದವು ಗುಣಗಳು ಎಂದು ತಿಳಿಯಬರುತ್ತಿದೆಯಲ್ಲ!

(ಸಮಾಧಾನ) :– ಇಲ್ಲ ಎನ್ನುತ್ತೇವೆ. ಏಕೆಂದರೆ ಸಾಮಾನಾಧಿಕರಣ್ಯವಿರುವದರಿಂದ ವಾಕ್ಯಕ್ಕೆ ಏಕಾರ್ಥತ್ವವೇ ತೋರುತ್ತಿದೆ.

(ಶಂಕೆ) :– ಅನೇಕಗುಣಗಳಿಂದ ಕೂಡಿದ್ದನ್ನೇ ಹೇಳುತ್ತದೆ ಎಂದರೂ ಏಕಾರ್ಥತ್ವಕ್ಕೆ ಯಾವ ವಿರೋಧವೂ ಆಗುವದಿಲ್ಲವಲ್ಲ!

---

1. 'ಅನಭಿಧಾನಜ್ಞಃ' ಎಂಬ ಕಂ॥ ಪಾಠವನ್ನೇ ಇಟ್ಟುಕೊಂಡಿದೆ ; 'ಅನಭಿಜ್ಞಃ' ಎಂಬ (ಮ॥) ಪಾಠಕ್ಕಿಂತ ಇದು ಉತ್ತಮ.

2. 'ಪದಾರ್ಥವಿರೋಧಿಪ್ರತ್ಯನೀಕತ್ವಪರತ್ವೇನ' ಎಂದು ಕಂ॥ ಪಾಠ.

3. 'ಪರಿಚ್ಛಿನ್ನಾತ್' ಎಂದು ಕಂ॥ ಪಾಠಕ್ಕಿಂತ ಇದೇ ಮೇಲು.

ಸಮಾಧಾನ :– ಈ ಮೂರ್ಖನಿಗೆ (ನಾವು ಹೇಳಿದ್ದು) ತಿಳಿದಿಲ್ಲ. **'ಏಕಾರ್ಥತ್ವ'** ಎಂದರೆ ಎಲ್ಲಾ ಪದಗಳಿಗೂ ಒಂದೇ ಅರ್ಥವಿರುವದು. ವಿಶಿಷ್ಟವಾದ ಪದಾರ್ಥವನ್ನು (ವಾಕ್ಯವು) ಹೇಳಿದರೆ, ವಿಶೇಷಣಗಳು ಬೇರೆಬೇರೆಯಾಗಿರುವದರಿಂದ ಪದಗಳಿಗೆ ಬೇರೆಬೇರೆ ಅರ್ಥವಿರುವದನ್ನು ತಪ್ಪಿಸುವದಕ್ಕಾಗುವದಿಲ್ಲ ; ಅದರಿಂದ ಏಕಾರ್ಥತ್ವವೇ ಸಿದ್ಧಿಸುವದಿಲ್ಲ.

(ಶಂಕೆ) :– ಹೀಗಾದರೆ ಎಲ್ಲಾ ಪದಗಳೂ ಪರ್ಯಾಯವೇ ಎಂದಾದೀತು ; ಏಕೆಂದರೆ ಅವು ಒಂದೇ ಅರ್ಥವನ್ನು ಹೇಳುತ್ತಿವೆ.

(ಸಮಾಧಾನ) :– ಒಂದೇ ಅರ್ಥವನ್ನು ಹೇಳಿದರೂ (ಪದಗಳು) ಪರ್ಯಾಯವಾಗುವದಿಲ್ಲ(ವೆಂಬುದು ಹೇಗೆಂಬುದನ್ನು) ಸಾವಧಾನಮನಸ್ಸಿನಿಂದ ಕೇಳು : ಏಕತ್ವದಲ್ಲಿ (ವಾಕ್ಯಕ್ಕೆ) ತಾತ್ಪರ್ಯವಿದೆ ಎಂದು ನಿಶ್ಚಯವಾಗಿರುವದರಿಂದ ಒಂದೇ ವಸ್ತುವು ಆಯಾ ಪದಾರ್ಥಕ್ಕೆ ವಿರೋಧಿಯಾದದ್ದಕ್ಕೆ ವಿರುದ್ಧವಾಗಿದೆ ಎಂಬುದರಲ್ಲಿ ತಾತ್ಪರ್ಯವಿರುವದರಿಂದ ಎಲ್ಲಾ ಪದಗಳಿಗೂ ಅರ್ಥವಿರುತ್ತದೆ ಎಂಬುದೇ ಏಕಾರ್ಥತ್ವವೂ ಅಪರ್ಯಾಯತ್ವವೂ ಆಗಿರುತ್ತದೆ.[1]

(ಇಲ್ಲಿ) ಇಷ್ಟನ್ನು ಹೇಳಿದಂತಾಯಿತು: ಲಕ್ಷಣದಿಂದ ಅರಿತುಕೊಳ್ಳಬೇಕಾಗಿರುವ ಬ್ರಹ್ಮವು ಮಿಕ್ಕ ಎಲ್ಲಾ ಪದಾರ್ಥಗಳಿಗೂ ವಿರೋಧಿರೂಪವಾಗಿರುತ್ತದೆ[2]. ಅದಕ್ಕೆ ವಿರೋಧಿಯಾದದ್ದೆಲ್ಲವೂ ಈ ಮೂರು ಪದಗಳಿಂದ ನಿರಾಕೃತವಾಗಿರುತ್ತದೆ. ಇವುಗಳೊಳಗೆ **'ಸತ್ಯ'** ಎಂಬ ಪದವು ವಿಕಾರಕ್ಕೆ ಆಶ್ರಯವಾಗಿರುವದರಿಂದ ಅಸತ್ಯವಾಗಿರುವ ವಸ್ತುವಿಗಿಂತ ವ್ಯಾವೃತ್ತ(ಭಿನ್ನ)ವಾದ ಬ್ರಹ್ಮದಲ್ಲಿ ತಾತ್ಪರ್ಯವುಳ್ಳದ್ದು. **ಜ್ಞಾನ**ಪದವು ಮತ್ತೊಂದಕ್ಕೆ ಅಧೀನವಾಗಿರುವ ತೋರಿಕೆಯುಳ್ಳ ಜಡರೂಪವಾದ ವಸ್ತುವಿಗಿಂತ ವ್ಯಾವೃತ್ತವಾದ (ಬ್ರಹ್ಮದಲ್ಲಿ) ತಾತ್ಪರ್ಯವುಳ್ಳದ್ದು. **ಅನಂತ**ವೆಂಬ ಪದವು ದೇಶದಿಂದಲೂ ಕಾಲದಿಂದಲೂ ವಸ್ತುವಿನಿಂದಲೂ ಪರಿಚ್ಛಿನ್ನವಾದದ್ದಕ್ಕಿಂತ ವ್ಯಾವೃತ್ತವಾದ (ಬ್ರಹ್ಮದಲ್ಲಿ) ತಾತ್ಪರ್ಯವುಳ್ಳದ್ದು. 'ವ್ಯಾವೃತ್ತಿ'(ಭೇದ) ಎಂಬುದು ಭಾವರೂಪವಾದ ಅಥವಾ ಅಭಾವರೂಪವಾದ ಧರ್ಮವಲ್ಲ, ಮತ್ತೇನೆಂದರೆ ಮಿಕ್ಕ ಎಲ್ಲದಕ್ಕೂ ವಿರೋಧಿಯಾದ ಬ್ರಹ್ಮವೇ. ಬಿಳುಪೇ ಮುಂತಾದದ್ದು

1. ಈ ವಾಕ್ಯದ ಅಭಿಪ್ರಾಯವನ್ನು ಮುಂದಿನ ಸಮಾಧಾನವಾಕ್ಯದಲ್ಲಿ ವರ್ಣಿಸಿದೆ.

2. ಬ್ರಹ್ಮವು ಮಿಕ್ಕದ್ದೆಲ್ಲಕ್ಕೂ ವಿರೋಧಿ ಎಂದು ಯಾವ ಅದ್ವೈತಗ್ರಂಥದಲ್ಲಿ ಹೇಳಿದೆಯೋ ತಿಳಿಯದು. ಬ್ರಹ್ಮೇತರವಾದದ್ದು ಅನೃತವಾಗಿರುವದರಿಂದ ಅದು ಬ್ರಹ್ಮಕ್ಕೆ ಎರಡನೆಯದೆನಿಸುವದೇ ಇಲ್ಲ. ಸತ್ಯವೆಂದರೆ ಕಾರಣವೆಂದೂ ಜಡವೆಂದೂ ಆಗುವದರಿಂದ ಜ್ಞಾನವೆಂದು ಹೇಳಿದೆ ; ಸತ್ಯವೆಂಬುದು ಅನೃತವಲ್ಲವೆಂಬುದನ್ನು ಹೇಳುತ್ತದೆ ; ಸತ್ತಾವಾಚಕವಾದ ಸತ್ಯಶಬ್ದದಿಂದ ಬ್ರಹ್ಮವು ಲಕ್ಷಿತವಾಗಿದೆ ಎಂದು ಶಂ. ಭಾ.ದಲ್ಲಿ ಹೇಳಿದೆ. ತೈ. ಭಾ. ಪು. ೨೮೩, ೨೮೮, ೨೮೫ ನೋಡಿರಿ.

ಕಪ್ಪೇ ಮುಂತಾದವುಗಳಿಗಿಂತ ಭಿನ್ನವೆಂಬುದು, ಆಯಾ ಪದಾರ್ಥದ ಸ್ವರೂಪವೇ ಹೊರತು ಮತ್ತೊಂದು ಧರ್ಮವಲ್ಲವೋ (ಹಾಗೆಯೇ ಇದು). ಹೀಗೆ ಒಂದೇ ವಸ್ತುವಿಗೆ ಮಿಕ್ಕ ಎಲ್ಲದಕ್ಕೂ ವಿರೋಧಿಯಾಗಿರುವದೆಂಬ ಆಕಾರವನ್ನು ತಿಳಿಸು ವದರಿಂದ (ವಾಕ್ಯವು) ಏಕಾರ್ಥವುಳ್ಳದ್ದು; ಅಪರ್ಯಾಯವೂ ಆಗಿದೆ ಈ ಪದತ್ರಯ.

## (೧೧) ಈ ಲಕ್ಷಣವಾಕ್ಯವು ಅಖಂಡೈಕರಸವಸ್ತುವನ್ನೇ ಹೇಳುತ್ತದೆ

(ಮೂಲ)

ತಸ್ಮಾತ್, ಏಕಮೇವ ಬ್ರಹ್ಮ ಸ್ವಯಂಜ್ಯೋತಿರ್ನಿರ್ಧೂತನಿಖಿಲವಿಶೇಷಮ್ ಇತ್ಯುಕ್ತಂ ಭವತಿ। ಏವಂ ವಾಕ್ಯಾರ್ಥಪ್ರತಿಪಾದನೇ ಸತ್ಯೇವ 'ಸದೇವ ಸೋಮ್ಯೇದ ಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ. ೬-೨-೧) ಇತ್ಯಾದಿಭಿರೈಕಾ-ರ್ಥ್ಯಮ್। 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ' (ತೈ. ೩-೧), 'ಸದೇವ ಸೋಮ್ಯೇದಮಗ್ರ ಆಸೀತ್' (ಛಾಂ.೬-೨-೧), 'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್' (ಐ. ೧-೧-೧) ಇತ್ಯಾದಿಭಿರ್ಜಗತ್ಕಾರಣತಯಾ ಉಪಲಕ್ಷಿತಸ್ಯ ಬ್ರಹ್ಮಣಃ ಸ್ವರೂಪಮಿದಮುಚ್ಯತೇ 'ಸತ್ಯಂ ಜ್ಞಾನಮನನ್ತಮ್' (ತೈ.೨-೧) ಇತಿ॥

ತತ್ರ ಸರ್ವಶಾಖಾಪ್ರತ್ಯಯನ್ಯಾಯೇನ ಕಾರಣವಾಕ್ಯೇಷು ಸರ್ವೇಷು ಸಜಾತೀಯವಿಜಾತೀಯವ್ಯಾವೃತ್ತಮ್ ಅದ್ವಿತೀಯಂ ಬ್ರಹ್ಮಾವಗತಮ್। ಜಗತ್ಕಾರಣತಯಾ ಉಪಲಕ್ಷಿತಸ್ಯ ಬ್ರಹ್ಮಣೋಽದ್ವಿತೀಯಸ್ಯ ಪ್ರತಿಪಿಪಾದಯಿಷಿತಂ ಸ್ವರೂಪಂ ತದವಿರೋಧೇನ ವಕ್ತವ್ಯಮ್। ಅದ್ವಿತೀಯ[1]ಶ್ರುತಿರ್ಗುಣತೋಽಪಿ ಸದ್ವಿತೀಯತಾಂ ನ ಸಹತೇ। ಅನ್ಯಥಾ 'ನಿರಞ್ಜನಮ್' (ಶ್ವೇ. ೬-೧೯), 'ನಿರ್ಗುಣಮ್' (ಆತ್ಮ. ೧), ಇತ್ಯಾದಿಭಿಶ್ಚ ವಿರೋಧಃ। ಅತಶ್ಚೈತಲ್ಲಕ್ಷಣ-ವಾಕ್ಯಮ್ ಅಖಣ್ಡೈಕರಸಮೇವ ಪ್ರತಿಪಾದಯತಿ॥

(ಅರ್ಥ)

ಆದ್ದರಿಂದ ಸ್ವಯಂಜ್ಯೋತಿಯಾದ ಬ್ರಹ್ಮವು ಒಂದೇ, ಎಲ್ಲಾ ವಿಶೇಷಣ ಗಳನ್ನೂ ಕೊಡವಿಕೊಂಡಿರತಕ್ಕದ್ದು – ಎಂದು ಹೇಳಿದಂತೆ ಆಯಿತು. ಹೀಗೆ ವಾಕ್ಯಾರ್ಥವನ್ನು ಪ್ರತಿಪಾದಿಸಿದರೇ 'ಅಯ್ಯ, ಇದು ಮೊದಲು ತನಗೆರಡನೆಯದಿಲ್ಲದ ಸತ್ತೊಂದೇ ಆಗಿತ್ತು' (ಛಾಂ. ೬-೨-೧)– ಮುಂತಾದ ವಾಕ್ಯಗಳಿಗೂ ಇದಕ್ಕೂ ಸಮಾನಾರ್ಥವಾಗುತ್ತದೆ. 'ಯಾವದರಿಂದಲೇ ಈ ಭೂತಗಳು ಹುಟ್ಟುತ್ತವೆ ಯೋ' (ತೈ. ೩-೧), 'ಅಯ್ಯ, ಇದು ಮೊದಲು ಸತ್ತೇ ಆಗಿತ್ತು' (ಛಾಂ. ೬-೨-೧),

1. 'ಅದ್ವಿತೀಯತ್ವ' ಎಂದು ಕಂ॥ ಪಾಠ.

'ಇದು ಮೊದಲು ಆತ್ಮನೊಬ್ಬನೇ ಆಗಿತ್ತು' (ಐ. ೧-೧-೧)- ಮುಂತಾದ ವಾಕ್ಯಗಳಿಂದ ಜಗತ್ಕಾರಣವೆಂದು ಉಪಲಕ್ಷಿತವಾಗಿರುವ ಬ್ರಹ್ಮದ ಸ್ವರೂಪವನ್ನೇ 'ಸತ್ಯವೂ ಜ್ಞಾನವೂ ಅನಂತವೂ' ಆಗಿರುತ್ತದೆ ಎಂದು ಇಲ್ಲಿ ಹೇಳಿರುತ್ತದೆ.

ಇಲ್ಲಿ ಸರ್ವಶಾಖಾಪ್ರತ್ಯಯನ್ಯಾಯದಿಂದ[1] ಎಲ್ಲಾ ಕಾರಣವಾಕ್ಯಗಳಲ್ಲಿಯೂ ಬ್ರಹ್ಮವು ಸಜಾತೀಯವಿಜಾತೀಯಗಳಿಗಿಂತ ಭಿನ್ನವಾದದ್ದು ಎಂದು ನಿಶ್ಚಿತವಾಗುತ್ತದೆ. ಜಗತ್ಕಾರಣವೆಂದು ಉಪಲಕ್ಷಿತವಾಗಿ ಪ್ರತಿಪಾದನೆಮಾಡುವದಕ್ಕೆ ಹುಟ್ಟಿರುವ ಅದ್ವಿತೀಯಬ್ರಹ್ಮದ ಸ್ವರೂಪವನ್ನು ಅದಕ್ಕೆ ವಿರೋಧವಾಗದಂತೆ ಹೇಳಬೇಕು. ಅದ್ವಿತೀಯವೆಂದು ಹೇಳುವ ಶ್ರುತಿಯು ಗೌಣವಾಗಿರುವ ಸದ್ವಿತೀಯತ್ವವನ್ನು ಕೂಡ ಸಹಿಸುವಂತಿಲ್ಲ. ಹಾಗಲ್ಲದೆ ಇದ್ದರೆ 'ನಿರಂಜನವು' (ಶ್ವೇ. ೬-೧೯) 'ನಿರ್ಗುಣವು' (ಚೂ. ಆತ್ಮೋಪನಿಷತ್ ೧)-ಮುಂತಾದ ಶ್ರುತಿಗಳಿಗೆ ವಿರೋಧವಾಗುವದು. ಆದ್ದರಿಂದಲೂ ಈ ಶ್ರುತಿಯು ಅಖಣ್ಡೈಕರಸ[2](ವಾದ ತತ್ತ್ವವನ್ನೇ) ಪ್ರತಿಪಾದಿಸುತ್ತದೆ (ಎಂದು ನಿಶ್ಚಯಿಸಬೇಕು).

## (೧೨) ಲಕ್ಷಣವಾಕ್ಯದಲ್ಲಿ ಎಲ್ಲಾ ಪದಗಳಿಗೂ ಲಕ್ಷಣಾವೃತ್ತಿಯನ್ನು ಕಲ್ಪಿಸುವದೇನೂ ದೋಷವಲ್ಲ

### (ಮೂಲ)

ನನು ಚ ಸತ್ಯಜ್ಞಾನಾದಿಪದಾನಾಂ ಸ್ವಾರ್ಥಪ್ರಹಾಣೇನ ಸ್ವಾರ್ಥವಿರೋಧಿವ್ಯಾವೃತ್ತವಸ್ತುಸ್ವರೂಪೋಪಸ್ಥಾಪನಪರತ್ವೇ ಲಕ್ಷಣಾ ಸ್ಯಾತ್ । ನೈಷ ದೋಷಃ । ಅಭಿಧಾನವೃತ್ತೇರಪಿ ತಾತ್ಪರ್ಯವೃತ್ತೇರ್ಬಲೀಯಸ್ತ್ವಾತ್ । ಸಾಮಾನಾಧಿಕರಣ್ಯಸ್ಯ ಹಿ ಐಕ್ಯ ಏವ ತಾತ್ಪರ್ಯಮಿತಿ ಸರ್ವಸಮ್ಮತಮ್ । ನನು ಚ ಸರ್ವಪದಾನಾಂ ಲಕ್ಷಣಾ ನ ದೃಷ್ಟಚರೀ । ತತಃ ಕಿಮ್ ? ವಾಕ್ಯತಾತ್ಪರ್ಯಾವಿರೋಧೇ ಸತಿ ಏಕಸ್ಯಾಪಿ ನ ದೃಷ್ಟಾ । ಸಮಭಿವ್ಯಾಹೃತಪದಸಮುದಾಯಸ್ಯ ಏತತ್ತಾತ್ಪರ್ಯಮ್ ಇತಿ ನಿಶ್ಚಿತೇ ಸತಿ, ದ್ವಯೋಃ ತ್ರಯಾಣಾಮ್, ಸರ್ವೇಷಾಂ ವಾ ತದವಿರೋಧಾಯ ಏಕಸ್ಯೈವ ಲಕ್ಷಣಾ ನ ದೋಷಾಯ । ತಥಾ ಚ ಶಾಸ್ತ್ರಸ್ಥೈ

---

1. ಜೈ. ೨-೪-೯ರಲ್ಲಿ ಈ ನ್ಯಾಯವಿದೆ ; ಇಲ್ಲಿಯೂ ಮುಂದೆ (ಸೂ. ೩-೩-೧) ಉಪಾಸನೆಗಳ ವಿಷಯಕ್ಕೆ ಅದೇ ನ್ಯಾಯವನ್ನು ಉಪಯೋಗಿಸಿದೆ. ಕಾರಣವಾಕ್ಯಗಳಿಗೂ ಹೀಗೆಯೇ ನಿರ್ಗುಣಪರವಾಗಿ ಅರ್ಥವನ್ನು ಹೇಳುವದು ಯುಕ್ತ ಎಂದು ಭಾವ.

2. 'ಅಖಣ್ಡೈಕರಸ' ಎಂಬ ಮಾತು ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಎಲ್ಲಿಯೂ ಇಲ್ಲ; ಆದ್ದರಿಂದಲೂ ಈ ಪೂರ್ವಪಕ್ಷವನ್ನು ಮತ್ತೆ ಯಾರೋ ಶಂಕರಾನುಯಾಯಿಗಳಾದ ಅದ್ವೈತಿಗಳು ಮಾಡಿರಬೇಕೆಂದು ಗೊತ್ತಾಗುತ್ತದೆ.

ರಭ್ಯುಪಗಮ್ಯತೇ । ಕಾರ್ಯವಾಕ್ಯಾರ್ಥವಾದಿಭಿರ್ಲೌಕಿಕವಾಕ್ಯೇಷು ಸರ್ವೇಷಾಂ ಪದಾನಾಂ ಲಕ್ಷಣಾ ಸಮಾಶ್ರೀಯತೇ। ಅಪೂರ್ವಕಾರ್ಯೇ ಏವ ಲಿಙಾದೇರ್ಮುಖ್ಯ ವೃತ್ತತ್ವಾತ್, ಲಿಙಾದಿಭಿಃ ಕ್ರಿಯಾಕಾರ್ಯಂ ಲಕ್ಷಣಯಾ ಪ್ರತಿಪಾದ್ಯತೇ । ಕಾರ್ಯಾನ್ವಿತಸ್ವಾರ್ಥಾಭಿಧಾಯಿನಾಂ ಚೇತರೇಷಾಂ ಪದಾನಾಮ್ ಅಪೂರ್ವ ಕಾರ್ಯಾನ್ವಿತ ಏವ ಮುಖ್ಯಾರ್ಥ ಇತಿ ಕ್ರಿಯಾಕಾರ್ಯಾನ್ವಿತಪ್ರತಿಪಾದನಂ ಲಾಕ್ಷಣಿಕಮೇವ । ಅತೋ ವಾಕ್ಯತಾತ್ಪರ್ಯಾವಿರೋಧಾಯ ಸರ್ವಪದಾನಾಂ ಲಕ್ಷಣಾಪಿ ನ ದೋಷಃ । ಅತ ಇದಮೇವಾರ್ಥಜಾತಂ ಪ್ರತಿಪಾದಯನ್ತೋ ವೇದಾನ್ತಾಃ ಪ್ರಮಾಣಮ್ ॥

(ಅರ್ಥ)

(ಶಂಕೆ) :– ಸತ್ಯ, ಜ್ಞಾನ– ಮುಂತಾದ ಪದಗಳು ತಮ್ಮ ಅರ್ಥವನ್ನು ಬಿಟ್ಟು, ತಮ್ಮ ಅರ್ಥಕ್ಕೆ ವಿರೋಧಿಯಾಗಿರುವದಕ್ಕಿಂತ ಭಿನ್ನವಾದ ವಸ್ತುವಿನ ಸ್ವರೂಪವನ್ನು ಮುಂದಿರಿಸುವದರಲ್ಲಿ ತಾತ್ಪರ್ಯವುಳ್ಳವುಗಳಾಗಿವೆ ಎಂದರೆ (ಶಬ್ದಕ್ಕೆ) ಲಕ್ಷಣಾವೃತ್ತಿಯಿಂದಾಗುವದಲ್ಲ !

(ಸಮಾಧಾನ) :– ಇದೇನೂ ತಪ್ಪಲ್ಲ. ಏಕೆಂದರೆ ಅಭಿಧಾನವೃತ್ತಿಗಿಂತ ತಾತ್ಪರ್ಯವೃತ್ತಿಯು ಹೆಚ್ಚು ಪ್ರಬಲವಾಗಿರುತ್ತದೆ. ಸಾಮಾನಾಧಿಕರಣ್ಯಕ್ಕೆ ಐಕ್ಯದಲ್ಲಿಯೇ ತಾತ್ಪರ್ಯವೆಂಬುದು ಎಲ್ಲರಿಗೂ ಒಪ್ಪಾಗಿರುತ್ತದೆಯಷ್ಟೆ ?

(ಶಂಕೆ) :– ಇನ್ನೊಂದು ಮಾತು : (ವಾಕ್ಯದಲ್ಲಿರುವ) ಎಲ್ಲಾ ಪದಗಳಿಗೂ ಲಕ್ಷಣೆಯು ಕಂಡಿರುವದಿಲ್ಲವಲ್ಲ !

(ಸಮಾಧಾನ) :– ಅದರಿಂದೇನು ? ವಾಕ್ಯತಾತ್ಪರ್ಯಕ್ಕೆ ವಿರೋಧವಾಗದೆ ಇರುವಾಗ ಒಂದು (ಪದಕ್ಕೆ) ಲಕ್ಷಣಾವೃತ್ತಿಯಿರುವದು ಕಂಡಿಲ್ಲ. ಒಟ್ಟಿಗೆ ಉಚ್ಚರಿಸಿದ ಪದಗಳ ಗುಂಪಿಗೆ ಇದು ತಾತ್ಪರ್ಯವು ಎಂದು ನಿಶ್ಚಿತವಾಗಲಾಗಿ, ಎರಡು (ಪದಗಳಿಗೊ), ಮೂರಕ್ಕೊ, ಎಲ್ಲಾ ಪದಗಳಿಗೂ ಆ (ತಾತ್ಪರ್ಯ)ಕ್ಕೆ ವಿರೋಧವಾಗದಂತೆ – ಒಂದಕ್ಕೇ ಹೇಗೆ ಲಕ್ಷಣೆಯೋ (ಹಾಗೆಯೇ ಇರುವದರಿಂದ) ಯಾವ ದೋಷವೂ ಆಗಲಾರದು, ಹಾಗೆಂದು ಶಾಸ್ತ್ರಜ್ಞರೂ ಒಪ್ಪಿರುತ್ತಾರೆ. ಕಾರ್ಯವೇ ವಾಕ್ಯಾರ್ಥವೆಂದು ಒಪ್ಪಿರುವ ವಾದಿಗಳು ಲೌಕಿಕವಾಕ್ಯಗಳಲ್ಲಿ ಎಲ್ಲಾ ಪದಗಳಿಗೂ ಲಕ್ಷಣೆಯನ್ನು ಆಶ್ರಯಿಸಿರುತ್ತಾರೆ.[1] ಅಪೂರ್ವಕಾರ್ಯದಲ್ಲಿಯೇ

---

1. 'ವಿಷಂ ಭುಙ್ಕ್ಷ್ವ' (ವಿಷವನ್ನು ಉಣ್ಣು) ಎಂಬ ತಂದೆಯ ವಾಕ್ಯದಲ್ಲಿ ನಮಗೆ ಆಗದ ಅವರ ಮನೆಗೆ ಹೋಗಬೇಡವೆಂಬುದರಲ್ಲಿಯೇ ತಾತ್ಪರ್ಯವಿರುವದರಿಂದ ಎರಡು ಪದಗಳಿಗೂ ಲಕ್ಷಣಾವೃತ್ತಿಯಿಂದಲೇ ಅರ್ಥ.

ಲಿಙಾದಿಗಳಿಗೆ ಮುಖ್ಯವೃತ್ತಿಯಿರುವದರಿಂದ[1] ಲಿಙಾದಿಗಳಿಂದ ಕ್ರಿಯಾಕಾರ್ಯವು ಲಕ್ಷಣೆಯಿಂದಲೇ ತಿಳಿಸಲ್ಪಡುತ್ತದೆ. ಕಾರ್ಯಾನ್ವಿತವಾಗಿ ತಮ್ಮತಮ್ಮ ಅರ್ಥವನ್ನು ಹೇಳುವ ಮಿಕ್ಕ ಪದಗಳಿಗೆ ಅಪೂರ್ವಕಾರ್ಯದಲ್ಲಿ ಅನ್ವಿತವಾದದ್ದೇ ಮುಖ್ಯಾರ್ಥ ವಾದದ್ದರಿಂದ ಕ್ರಿಯಾಕಾರ್ಯದಲ್ಲಿ ಅನ್ವಿತವಾದದ್ದನ್ನು ಹೇಳುವದು ಲಕ್ಷಣಾವೃತ್ತಿ ಯಿಂದಲೇ ಆಗಿರುತ್ತದೆ.[2] ಆದ್ದರಿಂದ ವಾಕ್ಯತಾತ್ಪರ್ಯಕ್ಕೆ ವಿರೋಧವುಂಟಾಗದೆ ಇರುವದಕ್ಕಾಗಿ ಎಲ್ಲಾ ಪದಗಳಿಗೂ ಲಕ್ಷಣಾವೃತ್ತಿಯಿರುವದೇನೂ ತಪ್ಪಲ್ಲ.[3] ಆದ್ದರಿಂದ ಈಗ ನಾವು ಹೇಳಿರುವ ಅರ್ಥಜಾತವನ್ನು ತಿಳಿಸುವ ವೇದಾಂತಗಳು ಪ್ರಮಾಣವೇ.[4]

## (೧೩) ಶಾಸ್ತ್ರವು ಪ್ರತ್ಯಕ್ಷವಿರುದ್ಧವೇ ಅಲ್ಲ

### (ಮೂಲ)

ಪ್ರತ್ಯಕ್ಷಾದಿವಿರೋಧೇ ಚ ಶಾಸ್ತ್ರಸ್ಯ ಬಲೀಯಸ್ತ್ವಮುಕ್ತಮ್ । ಸತಿ ಚ ವಿರೋಧೇ ಬಲೀಯಸ್ತ್ವಂ ವಕ್ತವ್ಯಮ್ । ವಿರೋಧ ಏವ ನ ದೃಶ್ಯತೇ । ನಿರ್ವಿ-ಶೇಷಸನ್ಮಾತ್ರಬ್ರಹ್ಮಗ್ರಾಹಿತ್ವಾತ್ ಪ್ರತ್ಯಕ್ಷಸ್ಯ । ನನು ಚ 'ಘಟೋಽಸ್ತಿ', 'ಪಟೋಽಸ್ತಿ' ಇತಿ ನಾನಾಕಾರವಸ್ತುವಿಷಯಂ ಪ್ರತ್ಯಕ್ಷಂ ಕಥಮಿವ ಸನ್ಮಾತ್ರಗ್ರಾಹಿ ಇತ್ಯುಚ್ಯತೇ ? ವಿಲಕ್ಷಣಗ್ರಹಣಾಭಾವೇ ಸತಿ ಸರ್ವೇಷಾಂ ಜ್ಞಾನಾನಾಮ್ ಏಕ ವಿಷಯತ್ವೇನ ಧಾರಾವಾಹಿಕವಿಜ್ಞಾನವತ್ ಏಕವ್ಯವಹಾರಹೇತುತ್ವೈವ ಸ್ಯಾತ್ । ಸತ್ಯಮ್ । ತಥೈವಾತ್ರ ವಿವಿಚ್ಯತೇ । ಕಥಮ್ ? 'ಘಟೋಽಸ್ತಿ' ಇತ್ಯತ್ರ ಅಸ್ತಿತ್ವಂ ತದ್ಭೇದಶ್ಚ ವ್ಯವಹ್ರಿಯತೇ । ನ ಚ ದ್ವಯೋರಪಿ ವ್ಯವಹಾರಯೋಃ ಪ್ರತ್ಯಕ್ಷ ಮೂಲತ್ವಂ ಸಂಭವತಿ । ತಯೋರ್ಭಿನ್ನಕಾಲಜ್ಞಾನಫಲತ್ವಾತ್, ಪ್ರತ್ಯಕ್ಷಜ್ಞಾನಸ್ಯ

---

1. ವೇದದಲ್ಲಿ ಮುಖ್ಯವೃತ್ತಿಯಿಂದ ಅರ್ಥವು ಅಪೂರ್ವಕಾರ್ಯದಲ್ಲಿಯೇ ಇರುತ್ತದೆ. ಕರ್ಮದಿಂದ ಅಪೂರ್ವವನ್ನುಂಟುಮಾಡಿ ಅದರಿಂದ ಸ್ವರ್ಗಾದಿಯನ್ನು ಪಡೆದುಕೊಳ್ಳಬೇಕು– ಎಂಬುದರಲ್ಲಿಯೇ ತಾತ್ಪರ್ಯ. ಆದ್ದರಿಂದ ಕ್ರಿಯೆಯನ್ನು ಮಾಡಬೇಕೆಂಬುದು ಲಕ್ಷಣಾವೃತ್ತಿಯಿಂದಲೇ.

2. ಕಾರಕಪದಗಳೂ ಸ್ಥಾಯಿಕಾರ್ಯಾನ್ವಿತಪರವೇ ಆಗಿರುವಂತೆ ವೇದದಲ್ಲಿ ಪ್ರಯೋಗಿಸಿರುವದು ಕಂಡುಬರುವದರಿಂದ ಕ್ರಿಯಾಕಾರ್ಯಾನ್ವಿತಪ್ರಯೋಗವು ಲಾಕ್ಷಣಿಕವೇ– ಎಂದು ಶ್ರು. ಪ್ರ.

3. ತಾತ್ಪರ್ಯಕ್ಕೆ ವಿರುದ್ಧವಾದರೆ ಲಕ್ಷಣೆಯಿರಬಹುದು –ಎಂದಾದಮೇಲೆ ಒಂದು ಪದಕ್ಕೆ ಹೇಗೋ ಹಾಗೆ ಎರಡು ಮೂರು ಪದಗಳಿಗೂ ಲಕ್ಷಣೆಯಾಗಬಹುದಾಗಿದೆ–ಎಂದರ್ಥ.

4. 'ಅರ್ಥಜಾತ'ವೆಂದರೆ ನಿರ್ವಿಶೇಷವಸ್ತು, ಅದೇ ಪರಮಾರ್ಥವೆಂಬುದು, ಮಿಕ್ಕದ್ದೆಲ್ಲ ಮಿಥ್ಯೆ– ಮುಂತಾದದ್ದು.

ಚ ಏಕಕ್ಷಣವರ್ತಿತ್ವಾತ್ । ತತ್ರ ಸ್ವರೂಪಂ ವಾ ಭೇದೋ ವಾ ಪ್ರತ್ಯಕ್ಷಸ್ಯ ವಿಷಯಃ ?– ಇತಿ ವಿವೇಚನೀಯಮ್ । ಭೇದಗ್ರಹಣಸ್ಯ ಸ್ವರೂಪಗ್ರಹಣ ತತ್ಪ್ರತಿಯೋಗಿಸ್ಮರಣಸವ್ಯಪೇಕ್ಷತ್ವಾದೇವ ಸ್ವರೂಪವಿಷಯತ್ವಮ್ ಅವಶ್ಯಾಶ್ರಯಣೀಯಮ್ ಇತಿ ನ ಭೇದಃ ಪ್ರತ್ಯಕ್ಷೇಣ ಗೃಹ್ಯತೇ । ಅತೋ ಭ್ರಾನ್ತಿಮೂಲ ಏವ ಭೇದವ್ಯವಹಾರಃ ॥

(ಅರ್ಥ)

ಪ್ರತ್ಯಕ್ಷವೇ ಮುಂತಾದವಕ್ಕೆ ವಿರೋಧವಾದರೆ ಶಾಸ್ತ್ರವೇ ಹೆಚ್ಚು ಬಲವುಳ್ಳದ್ದು ಎಂದು ಹೇಳಿದ್ದಾಯಿತು. ವಿರೋಧವಿದ್ದರೇ ಪ್ರಬಲತರವೆಂದು ಹೇಳಬೇಕಾಗುವದು ; ಆದರೆ ವಿರೋಧವೇ ಕಾಣಿಸುವದಿಲ್ಲ ; ಏಕೆಂದರೆ ನಿರ್ವಿಶೇಷಸನ್ಮಾತ್ರವಾದ ಬ್ರಹ್ಮವನ್ನೇ ಪ್ರತ್ಯಕ್ಷವು ಗ್ರಹಿಸುತ್ತದೆ.[1]

(ಆಕ್ಷೇಪ) :– ಘಟವಿದೆ, ಪಟವಿದೆ– ಎಂದು ಬಗೆಬಗೆಯ ಆಕಾರದ ವಸ್ತುವನ್ನು ವಿಷಯೀಕರಿಸುವ ಪ್ರತ್ಯಕ್ಷವು ಸನ್ಮಾತ್ರವನ್ನೇ ಗ್ರಹಿಸುತ್ತದೆ ಎಂದು ಹೇಗೆ ತಾನೆ ಹೇಳಲಾದೀತು ? ವಿಲಕ್ಷಣ(ವಾದ ವಸ್ತುಗಳ) ಗ್ರಹಣವು ಇಲ್ಲದಿದ್ದರೆ, ಎಲ್ಲಾ ಜ್ಞಾನಗಳಿಗೂ ಒಂದೇ ವಿಷಯವಾಗಿಬಿಡುವದರಿಂದ ಧಾರಾವಾಹಿಕ[2] ವಿಜ್ಞಾನದಂತೆ ಒಂದೆಂಬ ವ್ಯವಹಾರಕ್ಕೆ ಕಾರಣವೇ ಆದೀತಲ್ಲ !

(ಸಮಾಧಾನ) :– ನಿಜ. ಹಾಗೆಯೇ ಇಲ್ಲಿ ವಿವೇಚನೆಮಾಡಲಾಗುತ್ತಿದೆ. ಹೇಗೆಂದರೆ, 'ಘಟವಿದೆ' ಎಂಬಲ್ಲಿ ಇರುವಿಕೆಯೂ ಅದರ ಭೇದವೂ ವ್ಯವಹೃತವಾಗಿರುತ್ತದೆ ; ಆದರೆ ಈ ಎರಡು ವ್ಯವಹಾರಗಳೂ ಪ್ರತ್ಯಕ್ಷಮೂಲವೆಂಬುದು ಸಂಭವಿಸಲಾರದು. ಏಕೆಂದರೆ ಅವೆರಡೂ ಬೇರೆಬೇರೆಯ ಕಾಲದ ಜ್ಞಾನಗಳ ಫಲವಾಗಿರುತ್ತವೆ, ಪ್ರತ್ಯಕ್ಷಜ್ಞಾನವಾದರೂ ಒಂದೇ ಕ್ಷಣದಲ್ಲಿರತಕ್ಕದ್ದಾಗಿದೆ. ಇವುಗಳೊಳಗೆ ಪ್ರತ್ಯಕ್ಷಕ್ಕೆ ವಿಷಯವಾದದ್ದು ಸ್ವರೂಪವೊ, ಭೇದವೊ ?– ಎಂಬುದನ್ನು ವಿವೇಚನೆ ಮಾಡಬೇಕು. ಭೇದಗ್ರಹಣಕ್ಕೆ ಸ್ವರೂಪಗ್ರಹಣ ಮತ್ತು ಅದರ ಪ್ರತಿಯೋಗಿಯ ಸ್ಮರಣೆ– ಇವುಗಳ ಅಪೇಕ್ಷೆಯಿರುವದರಿಂದಲೇ ಸ್ವರೂಪವೇ ಅದರ ವಿಷಯವೆಂದು ಅವಶ್ಯವಾಗಿ ಇಟ್ಟುಕೊಳ್ಳಬೇಕಾಗಿರುವದರಿಂದ, ಭೇದವು ಪ್ರತ್ಯಕ್ಷದಿಂದ ಗ್ರಹಿಸಲ್ಪಡುವದಿಲ್ಲ (ಎನ್ನಬೇಕಾಯಿತು). ಆದ್ದರಿಂದ ಭೇದವ್ಯವಹಾರವು ಭ್ರಾಂತಿಮೂಲಕವೇ ಆಗಿರುತ್ತದೆ.

---

1. ನಿರ್ವಿಶೇಷಸನ್ಮಾತ್ರವನ್ನೇ ಪ್ರತ್ಯಕ್ಷವು ಗ್ರಹಿಸುತ್ತದೆ –ಎಂಬ ವಾದವು ಪ್ರಸ್ಥಾನತ್ರಯಭಾಷ್ಯದಲ್ಲಿ ಕಾಣುವದಿಲ್ಲ ; 'ಭೇದಧಿಕ್ಕಾರ'ವೆಂಬ ಈಚಿನ ಗ್ರಂಥದಲ್ಲಿ ಭೇದವು ಪ್ರತ್ಯಕ್ಷವಿಷಯವಲ್ಲವೆಂದಿದೆ. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಕಡಿವಡೆಯದೆ ಆಗುವ ಜ್ಞಾನಕ್ಕೆ ಅನೇಕವಿಷಯಗಳಿರಲಾರವೆಂದು ಭಾವ.

## (೧೪) ಭೇದವೆಂಬುದು ದುರ್ನಿರೂಪ

(ಮೂಲ)

ಕಿಞ್ಚ ಭೇದೋ ನಾಮ ಕಶ್ಚಿತ್ ಪದಾರ್ಥೋ ನ್ಯಾಯವಿದ್ಭಿರ್ನಿರೂಪಯಿತುಂ ನ ಶಕ್ಯತೇ। ಭೇದಸ್ತಾವತ್ ನ ವಸ್ತುಸ್ವರೂಪಮ್, ವಸ್ತುಸ್ವರೂಪೇ ಗೃಹೀತೇ ಸ್ವರೂಪವ್ಯವಹಾರವತ್ ಸರ್ವಸ್ಮಾದ್ ಭೇದವ್ಯವಹಾರಪ್ರಸಕ್ತೇಃ। ನ ಚ ವಾಚ್ಯಮ್ ಸ್ವರೂಪೇ ಗೃಹೀತೇಽಪಿ 'ಭಿನ್ನಃ' ಇತಿ ವ್ಯವಹಾರಸ್ಯ ಪ್ರತಿಯೋಗಿಸ್ಮರಣ ಸವ್ಯಪೇಕ್ಷತ್ವಾತ್ ತತ್ಸ್ಮರಣಾಭಾವೇನ ತದಾನೀಮೇವ ನ ಭೇದವ್ಯವಹಾರಃ ಇತಿ। ಸ್ವರೂಪಮಾತ್ರಭೇದವಾದಿನೋ ಹಿ ಪ್ರತಿಯೋಗ್ಯಪೇಕ್ಷಾ ಚ ನೋತ್ಪ್ರೇಕ್ಷಿತುಂ ಕ್ಷಮಾ ಸ್ವರೂಪಭೇದಯೋಃ ಸ್ವರೂಪತ್ವಾವಿಶೇಷಾತ್। ಯಥಾ ಸ್ವರೂಪವ್ಯವಹಾರೋ ನ ಪ್ರತಿಯೋಗ್ಯಪೇಕ್ಷಃ, ಭೇದವ್ಯವಹಾರೋಽಪಿ ತಥೈವ ಸ್ಯಾತ್। 'ಹಸ್ತಃ ಕರಃ' ಇತಿವತ್ 'ಘಟೋ ಭಿನ್ನಃ' ಇತಿ ಪರ್ಯಾಯತ್ವಂ ಚ ಸ್ಯಾತ್॥

ನಾಪಿ ಧರ್ಮಃ। ಧರ್ಮತ್ವೇ ಸತಿ ತಸ್ಯ ಸ್ವರೂಪಾದ್ ಭೇದೋಽವಶ್ಯಾಶ್ರಯಣೀಯಃ; ಅನ್ಯಥಾ ಸ್ವರೂಪಮೇವ ಸ್ಯಾತ್। ಭೇದೇ ಚ ತಸ್ಯಾಪಿ ಭೇದಸ್ತದ್ಧರ್ಮಃ, ತಸ್ಯಾಪಿ ಇತ್ಯನವಸ್ಥಾ। ಕಿಞ್ಚ ಜಾತ್ಯಾದಿವಿಶಿಷ್ಟವಸ್ತುಗ್ರಹಣೇ ಸತಿ ಭೇದಗ್ರಹಣಮ್, ಭೇದಗ್ರಹಣೇ ಸತಿ ಜಾತ್ಯಾದಿವಿಶಿಷ್ಟವಸ್ತುಗ್ರಹಣಮ್–ಇತ್ಯನ್ಯೋನ್ಯಾಶ್ರಯಣಮ್। ಅತೋ ಭೇದಸ್ಯ ದುರ್ನಿರೂಪತ್ವಾತ್ ಸನ್ಮಾತ್ರಸ್ಯೈವ ಪ್ರಕಾಶಕಂ ಪ್ರತ್ಯಕ್ಷಮ್॥

(ಅರ್ಥ)

ಇದೂ ಅಲ್ಲದೆ, ಭೇದವೆಂಬುದು ಒಂದು ಪದಾರ್ಥವು, (ಅದು ಇಂಥದ್ದು–ಎಂದು) ನ್ಯಾಯವನ್ನು ಬಲ್ಲವರು ಗೊತ್ತುಮಾಡುವದಕ್ಕೆ ಆಗುವಂತಿಲ್ಲ.[1] (ಏಕೆಂದರೆ) ಭೇದವೆಂಬುದು ಮೊದಲನೆಯದಾಗಿ ವಸ್ತುಸ್ವರೂಪವಲ್ಲ; ಏಕೆಂದರೆ (ಹಾಗಿದ್ದರೆ) ವಸ್ತುಸ್ವರೂಪವನ್ನು ಗ್ರಹಿಸಿದರೆ ಸ್ವರೂಪವೆಂಬ ವ್ಯವಹಾರದಂತೆ 'ಇದು ಎಲ್ಲಕ್ಕಿಂತಲೂ ಬೇರೆ' ಎಂಬ ವ್ಯವಹಾರವೂ ಆಗಬೇಕಾಗುವದು. ಸ್ವರೂಪವನ್ನು ಅರಿತುಕೊಂಡಮೇಲೂ ಭಿನ್ನವೆಂಬ ವ್ಯವಹಾರಕ್ಕೆ ಪ್ರತಿಯೋಗಿಯ ಸ್ಮರಣೆಯು ಬೇಕಾಗಿರುವದರಿಂದ, ಆ ಸ್ಮರಣೆಯಿಲ್ಲದ್ದರಿಂದ ಆಗಲೇ ಭೇದವ್ಯವಹಾರವೂ ಆಗುವದಿಲ್ಲ– ಎನ್ನುವದಕ್ಕೆ ಇಲ್ಲ; ಏಕೆಂದರೆ ಸ್ವರೂಪಮಾತ್ರವೇ ಭೇದವೆಂಬ ವಾದಿಗೆ (ಭೇದಕ್ಕೆ) ಪ್ರತಿಯೋಗಿಯ ಅಪೇಕ್ಷೆ ಇದೆ– ಎಂದು ಕಲ್ಪಿಸುವದಕ್ಕಾಗುವದಿಲ್ಲ; ಏಕೆಂದರೆ (ಅವನ ಮತದಲ್ಲಿ) ಸ್ವರೂಪವೂ ಭೇದವೂ ಸ್ವರೂಪವೇ ಎಂಬುದು ಸಮಾನವಾಗಿರುತ್ತದೆ. ಸ್ವರೂಪದ ವ್ಯವಹಾರಕ್ಕೆ ಹೇಗೆ ಪ್ರತಿಯೋಗಿ

1. ಈ ಭೇದವಿಮರ್ಶೆಯ ಪ್ರಕಾರಕ್ಕೆ ಪರಿಶಿಷ್ಟವನ್ನು ನೋಡಿ. ಈ ಬಗೆಯ ವಿಮರ್ಶೆಯು ಶಾಂಕರಭಾಷ್ಯದಲ್ಲಿಲ್ಲ.

ಬೇಕಿಲ್ಲವೋ ಭೇದವ್ಯವಹಾರಕ್ಕೂ ಹಾಗೆಯೇ ಆಗಬಹುದಾಗಿದೆ. ಇದಲ್ಲದೆ ಪಕ್ಷದಲ್ಲಿ) 'ಹಸ್ತ', 'ಕರ'– ಎಂಬಂತೆ 'ಘಟವು', 'ಭಿನ್ನವಾಗಿದೆ' ಎಂಬಿವು ರ್ಯಾಯಗಳೆಂದೂ ಆಗಬಹುದಾಗಿದೆ[1].

**(ಭೇದವು ವಸ್ತುವಿನ) ಧರ್ಮವೂ ಅಲ್ಲ.** ಧರ್ಮವಾದರೆ ಅದು ಸ್ವರೂಪ ಂತ ಬೇರೆ ಎಂದು ಅವಶ್ಯವಾಗಿ ಒಪ್ಪಬೇಕು; ಹಾಗಿಲ್ಲದಿದ್ದರೆ (ಅದೂ) ರೂಪವೇ ಆಗಿಬಿಟ್ಟೀತು. ಸ್ವರೂಪಕ್ಕಿಂತ ಭಿನ್ನವಾದರೆ ಅದರ ಭೇದವೂ ದರ ಧರ್ಮವು; (ಆ ಧರ್ಮದ) ಭೇದವೂ (ಅದರ ಧರ್ಮವು)– ಎಂದು ಅನವಸ್ಥೆ ಯಾಗುವದು. ಇದಲ್ಲದೆ ಜಾತ್ಯಾದಿಗಳಿಂದೊಡಗೂಡಿದ ವಸ್ತುವನ್ನು ಗ್ರಹಿಸಿದರೆ, ಭೇದದ ಗ್ರಹಣ, ಭೇದವನ್ನು ಗ್ರಹಿಸಿದರೆ ಜಾತ್ಯಾದಿವಿಶಿಷ್ಟವಾದ ವಸ್ತುವಿನ ಗ್ರಹಣ– ಎಂದು ಅನ್ಯೋನ್ಯಾಶ್ರಯವಾಗುವದು. ಆದ್ದರಿಂದ (ಹೀಗೆ) ಭೇದ ವೆಂಬುದು ಗೊತ್ತುಪಡಿಸುವದಕ್ಕೆ ಆಗಲಾರದಾದ್ದರಿಂದ **ಪ್ರತ್ಯಕ್ಷವು ಸನ್ಮಾತ್ರವನ್ನೇ ತೋರಿಸುತ್ತದೆ** (ಎಂದಾಯಿತು)[2].

## (೧೫) ಸನ್ಮಾತ್ರವೆಂದರೆ ಅನುಭೂತಿಯೇ

(ಮೂಲ)

ಕಿಞ್ಚ 'ಘಟೋऽಸ್ತಿ', 'ಪಟೋऽಸ್ತಿ', 'ಘಟೋऽನುಭೂಯತೇ', 'ಪಟೋऽನುಭೂಯತೇ' ಇತಿ ಸರ್ವೇ ಪದಾರ್ಥಾಃ ಸತ್ತಾನುಭೂತಿಘಟಿತಾ ಏವ ದೃಶ್ಯನ್ತೇ। ಅತ್ರ ಸರ್ವಾಸು ಪ್ರತಿಪತ್ತಿಷು ಸನ್ಮಾತ್ರಮನುವರ್ತಮಾನಂ ದೃಶ್ಯತ ಇತಿ ತದೇವ ಪರಮಾರ್ಥಃ। ವಿಶೇಷಾಸ್ತು ವ್ಯಾವರ್ತಮಾನತಯಾ ಅಪರಮಾರ್ಥಾಃ। ರಜ್ಜುಸರ್ಪಾದಿವತ್। ಯಥಾ ರಜ್ಜುಃ, ಅಧಿಷ್ಠಾನತಯಾ ಅನುವರ್ತಮಾನಾ ಪರಮಾರ್ಥಾ ಸತೀ ವ್ಯಾವರ್ತಮಾನಾಃ ಸರ್ಪಭೂದಲನಾऽಮ್ಬುಧಾರಾದಯೋऽಪರಮಾರ್ಥಾಃ। ನನು ಚ ರಜ್ಜುಸರ್ಪಾದೌ 'ರಜ್ಜುರಿಯಂ ನ ಸರ್ಪಃ' ಇತ್ಯಾದಿ ರಜ್ಜ್ವಾದ್ಯಧಿಷ್ಠಾನಯಾಥಾರ್ಥ್ಯಜ್ಞಾನೇನ ಬಾಧಿತತ್ವಾತ್ ಸರ್ಪಾದೇರಪಾರಮಾರ್ಥ್ಯಮ್, ನ ವ್ಯಾವರ್ತಮಾನತ್ವಾತ್; ರಜ್ಜ್ವಾದೇರಪಿ ಪಾರಮಾರ್ಥ್ಯಂ ನಾನುವರ್ತಮಾನತಯಾ ಕಿಂ ತು ಅಬಾಧಿತತ್ವಾತ್। ಅತ್ರ ತು ಘಟಾದೀನಾಮಬಾಧಿತಾನಾಂ ಕಥಮ್ ಅಪಾರಮಾರ್ಥ್ಯಮ್? ಉಚ್ಯತೇ। ಘಟಾದೌ ದೃಷ್ಟಾ ವ್ಯಾವೃತ್ತಿಃ; ಸಾ ಕಿಂರೂಪಾ?– ಇತಿ ವಿವೇಚನೀಯಮ್। ಕಿಂ 'ಘಟೋऽಸ್ತಿ' ಇತ್ಯತ್ರ ಪಟಾದ್ಯಭಾವಃ? ಸಿದ್ಧಂ ತರ್ಹಿ– 'ಘಟೋऽಸ್ತಿ' ಇತ್ಯನೇನ ಪಟಾದೀನಾಂ ಬಾಧಿತತ್ವಮ್। ಅತೋ ಬಾಧಫಲಭೂತಾ ವಿಷಯನಿವೃತ್ತಿರ್ವ್ಯಾವೃತ್ತಿಃ। ಸಾ ವ್ಯಾವರ್ತಮಾನಾನಾಮ್ ಅಪಾರಮಾರ್ಥ್ಯಂ ಸಾಧಯತಿ। ರಜ್ಜುವತ್ ಸನ್ಮಾತ್ರಮ್ ಅಬಾಧಿತಮ್ ಅನುವರ್ತತೇ। ತಸ್ಮಾತ್

1. ಏಕೆಂದರೆ ಘಟಸ್ವರೂಪವೇ ಭೇದವಾಗಿರುತ್ತದೆ.

2. [illegible] ಭಾಷ್ಯದಲ್ಲಿಲ್ಲ.

ಪರಮಾರ್ಥಃ, ಅನುವರ್ತಮಾನತ್ವಾತ್, ರಜ್ಜುಸರ್ಪಾ... ...

(೨) ಘಟಾದಯೋಽಪರಮಾರ್ಥಾಃ, ವ್ಯಾವರ್ತಮಾನತ್ವಾತ್, ರಜ್ಜ್ವಾದ್ಯಧಿಷ್ಠಾನ ಸರ್ಪಾದಿವತ್ – ಇತಿ । ಏವಂ ಸತಿ, ಅನುವರ್ತಮಾನಾ ಅನುಭೂತಿರೇವ ಪರಮಾರ್ಥಃ । ಸೈವ ಸತೀ ॥

(ಅರ್ಥ)

ಇದಲ್ಲದೆ, 'ಗಡಿಗೆಯಿದೆ', 'ಬಟ್ಟೆಯಿದೆ', 'ಗಡಿಗೆಯು ಅನುಭವಿಸಲ್ಪಡುತ್ತದೆ', 'ಬಟ್ಟೆಯು ಅನುಭವಿಸಲ್ಪಡುತ್ತದೆ' –ಎಂದು ಎಲ್ಲಾ ಪದಾರ್ಥಗಳೂ ಸತ್ತಾನುಭೂತಿಯಿಂದ (ಇರವಿನ ಅನುಭವದಿಂದ) ಕೂಡಿಕೊಂಡೇ ಕಂಡುಬರುತ್ತವೆ. ಇಲ್ಲಿ ಜ್ಞಾನಗಳಲ್ಲೆಲ್ಲ **ಸನ್ಮಾತ್ರವು (ಇರುವಿಕೆ ಎಂಬ ಸಾಮಾನ್ಯವು) ಅನುವರ್ತಿಸಿಕೊಂಡೇ ಕಂಡುಬರುವದರಿಂದ ಅದೇ ಪರಮಾರ್ಥ**[1]; ವಿಶೇಷಗಳಾದರೋ ವ್ಯಾವರ್ತಮಾನವಾಗಿ (ಭಿನ್ನಭಿನ್ನವಾಗಿ)ರುವದರಿಂದ ಪರಮಾರ್ಥವಲ್ಲ. ಹಗ್ಗದ ಹಾವೇ ಮುಂತಾದವುಗಳಂತೆ (ಇದನ್ನು ಅರಿಯಬೇಕು. ಇದರ ವಿವರ:) ಹೇಗೆ ಹಗ್ಗವು ಅಧಿಷ್ಠಾನವಾಗಿ ಅನುವರ್ತಿಸಿಕೊಂಡೇ ಇರುವದರಿಂದ ಪರಮಾರ್ಥವಾದ ಸತ್ತಾಗಿರುತ್ತದೆಯೋ, ಭಿನ್ನಭಿನ್ನವಾಗಿರುವ ನೆಲದ ಬಿರುಕು, ನೀರಿನ ಧಾರೆ– ಮುಂತಾದವುಗಳು ಅಪರಮಾರ್ಥವಾಗಿರುವವೋ (ಹಾಗೆಯೇ ಇದು).[2]

(ಆಕ್ಷೇಪ) :– ಹಗ್ಗದ ಹಾವು ಮುಂತಾದ (ದೃಷ್ಟಾಂತ)ದಲ್ಲಿ 'ಇದು ಹಗ್ಗ, ಹಾವಲ್ಲ' ಎಂದು ಮುಂತಾಗಿ ಹಗ್ಗವೇ ಮುಂತಾದ ಅಧಿಷ್ಠಾನಗಳ ಯಾಥಾರ್ಥ್ಯವನ್ನು ಅರಿತುಕೊಂಡದ್ದರಿಂದ ಬಾಧಿತವಾಗಿರುವದರಿಂದ ಹಾವು ಮುಂತಾದದ್ದು ಅಪರಮಾರ್ಥವಾಗಿರುವವೇ ಹೊರತು ಭಿನ್ನಭಿನ್ನವಾಗಿರುವದರಿಂದಲ್ಲ, ಹಗ್ಗ ಮುಂತಾದವುಗಳೂ ಪರಮಾರ್ಥವಾಗಿರುವದು ಅನುವರ್ತಿಸಿಕೊಂಡಿರುವದರಿಂದಲ್ಲ; ಮತ್ತೇನೆಂದರೆ ಬಾಧಿತವಾಗದಿರುವದರಿಂದ. ಆದರೆ ಇಲ್ಲಿ ಗಡಿಗೆ ಮುಂತಾದವು ಬಾಧಿತವಾಗದೆ ಇರುವವಲ್ಲ! ಅವು ಅಪರಮಾರ್ಥವೆಂಬುದು ಹೇಗೆ?

(ಪರಿಹಾರ) :– ಹೇಳುತ್ತೇವೆ. ಗಡಿಗೆ ಮುಂತಾದವುಗಳಲ್ಲಿ ಕಾಣಬರುವ ವ್ಯಾವೃತ್ತಿಯು (ಇಲ್ಲವಾಗುವದಿದೆಯಲ್ಲ), ಅದರ ಸ್ವರೂಪವೇನು?– ಎಂದು ವಿವೇಚನೆಮಾಡಬೇಕು. 'ಗಡಿಗೆ ಇದೆ' ಎಂಬಲ್ಲಿ ಬಟ್ಟೆಯೇ ಮುಂತಾದವುಗಳು ಇಲ್ಲದಿರುವದೇ (ಆ ವ್ಯಾವೃತ್ತಿ)ಯೆ? ಹಾಗಾದರೆ 'ಗಡಿಗೆ ಇದೆ' ಎಂಬುದರಿಂದ

---

1. ಈ ತರ್ಕವು ಯಾರದೆಂಬುದು ಗೊತ್ತಾಗಿಲ್ಲ. ಶಂಕರಾಚಾರ್ಯರ ಗೀ. ಭಾ. ೨–೧೬ನ್ನೂ ಆದರ ಆ. ಗಿ. ವ್ಯಾಖ್ಯಾನವನ್ನೂ ನೋಡಿರಿ.

2. ಹಗ್ಗದಲ್ಲಿ ಕಲ್ಪಿತವಾಗಿರುವ ನೆಲದ ಬಿರುಕು ಮುಂತಾದವುಗಳಂತೆ ಸನ್ಮಾತ್ರದಲ್ಲಿ ವಿಶೇಷಗಳು ಕಲ್ಪಿತ– ಎಂದು ಪೂರ್ವಪಕ್ಷಿಯ ಭಾವ.

ಪಟಾದಿಗಳು ಬಾಧಿತವಾಗುವವೆಂದೇ ಸಿದ್ಧವಾಯಿತು. ಆದ್ದರಿಂದ ಬಾಧೆಯ ಫಲವಾಗಿ ವಿಷಯವು ಇಲ್ಲವಾಗುವದೇ ವ್ಯಾವೃತ್ತಿಯು; ಅದು ವ್ಯಾವೃತ್ತವಾದ ಪದಾರ್ಥಗಳು ಅಪರಮಾರ್ಥವೆಂಬುವದನ್ನೇ ಸಾಧಿಸಿಕೊಡುತ್ತದೆ. (ದೃಷ್ಟಾಂತದ) ಹಗ್ಗದಂತೆ ಸನ್ಮಾತ್ರವು ಅಬಾಧಿತವಾಗಿ ಅನುವರ್ತಿಸಿಕೊಂಡಿರುತ್ತದೆ. ಆದ್ದರಿಂದ ಸನ್ಮಾತ್ರಕ್ಕಿಂತ ಅತಿರಿಕ್ತವಾಗಿರುವದೆಲ್ಲವೂ ಅಪರಮಾರ್ಥ. ಈ (ವಿಷಯಕ್ಕೆ) **ಪ್ರಯೋಗವೂ** ಇದೆ: ಹೇಗೆಂದರೆ: (೧) ಸತ್ತು ಪರಮಾರ್ಥ; ಏಕೆಂದರೆ ಅದು ಅನುವರ್ತಿಸಿಕೊಂಡಿರುತ್ತದೆ. ಹಗ್ಗದಹಾವೇ ಮುಂತಾದವುಗಳಲ್ಲಿ ಅನುವರ್ತಿಸಿ ಕೊಂಡಿರುವ ಹಗ್ಗವೇ ಮುಂತಾದದ್ದರಂತೆ ಎಂಬುದು ಇಲ್ಲಿ ದೃಷ್ಟಾಂತ; (೨) 'ಗಡಿಗೆ ಮುಂತಾದವು ಅಪರಮಾರ್ಥ; ಏಕೆಂದರೆ ಅವು ವ್ಯಾವೃತ್ತವಾಗುತ್ತಿವೆ; ಹಗ್ಗವೇ ಮುಂತಾದ ಅಧಿಷ್ಠಾನವುಳ್ಳ ಹಾವೇ ಮುಂತಾದವು ಇದಕ್ಕೆ ದೃಷ್ಟಾಂತ.' ಹೀಗಿರುವದರಿಂದ **ಅನುವರ್ತಿಸಿಕೊಂಡಿರುವ ಅನುಭೂತಿಯೇ ಪರಮಾರ್ಥ; ಅದೇ ಸತ್ತು.**[1]

## (೧೬) ಅನುಭೂತಿಯೂ ಸನ್ಮಾತ್ರವೂ ಒಂದೇ, ಸ್ವತಃಸಿದ್ಧವೇ

(ಮೂಲ)

ನನು ಚ ಸನ್ಮಾತ್ರಮ್ ಅನುಭೂತೇರ್ವಿಷಯತಯಾ ತತೋ ಭಿನ್ನಮ್ । ನೈವಮ್[2] । ಭೇದೋ ಹಿ ಪ್ರತ್ಯಕ್ಷವಿಷಯತ್ವಾತ್,[3] ದುರ್ನಿರೂಪತ್ವಾಚ್ಚ ಪುರಸ್ತಾದೇವ ನಿರಸ್ತಃ । ಅತ ಏವ ಸತೋಽನುಭೂತಿವಿಷಯಭಾವೋಽಪಿ ನ ಪ್ರಮಾಣಪದವೀಮ್ ಅನುಸರತಿ । ತಸ್ಮಾತ್ ಸತ್ ಅನುಭೂತಿರೇವ ॥

ಸಾ ಚ ಸ್ವತಃಸಿದ್ಧಾ । ಅನುಭೂತಿತ್ವಾತ್ । ಅನ್ಯತಃ ಸಿದ್ಧೌ ಘಟಾದಿವದನನುಭೂತಿತ್ವಪ್ರಸಙ್ಗಃ । ಕಿಂ ಚಾನುಭವಾಪೇಕ್ಷಾ ಚಾನುಭೂತೇರ್ನ ಶಕ್ಯಾ ಕಲ್ಪಯಿತುಮ್ । ಸತ್ತಯೈವ ಪ್ರಕಾಶಮಾನತ್ವಾತ್ । ನ ಹ್ಯನುಭೂತಿರ್ವರ್ತಮಾನಾ ಘಟಾದಿವದಪ್ರಕಾಶಾ ದೃಶ್ಯತೇ, ಯೇನ ಪರಾಯತ್ತಪ್ರಕಾಶಾಽಭ್ಯುಪಗಮ್ಯೇತ ॥

(ಅರ್ಥ)

(ಆಕ್ಷೇಪ) :– ಸತ್ತಾಸಾಮಾನ್ಯವು ಅನುಭೂತಿಗೆ ವಿಷಯವಾಗಿರುವದರಿಂದ ಅದಕ್ಕಿಂತ ಬೇರೆಯಲ್ಲವೆ ?

---

1. ಇಲ್ಲಿಯವರೆಗೆ ಅಧಿಷ್ಠಾನವಾದ ಹಗ್ಗವೇ ಮುಂತಾದವುಗಳಂತೆ ಅನುವರ್ತಿಸಿಕೊಂಡಿರುವ ಸತ್ತಾಸಾಮಾನ್ಯವೇ ಪರಮಾರ್ಥವೆಂದು ಸಿದ್ಧಪಡಿಸಿದ್ದಾಯಿತು; ಈಗ ಅನುಭೂತಿಯೂ ಸತ್ತೂ ಒಂದೇ ಎಂಬುದನ್ನು ಸಾಧಿಸುವದಕ್ಕೆ ಪೂರ್ವಪಕ್ಷಿ ಹೊರಟಿರುತ್ತಾನೆ.

1. 'ನೈವಮ್' ಎಂದು ಕಂ॥ ಪಾಠ.
2. 'ಪ್ರತ್ಯಕ್ಷಾವಿಷಯತ್ವಾತ್' ಎಂದು ಕಂ॥ ಪಾಠ.

(ಪರಿಹಾರ) :- ಹೀಗಲ್ಲ. ಭೇದವು ಪ್ರತ್ಯಕ್ಷಕ್ಕೆ ವಿಷಯವಾಗಿರುವದರಿಂದಲೂ ಇಂಥದ್ದೆಂದು ನಿರೂಪಿಸುವದಕ್ಕಾಗದೆ ಇರುವದಾದ್ದರಿಂದಲೂ (ಅದನ್ನು) ಈ ಮೊದಲೇ ನಿರಾಕರಿಸಿದ್ದಾಗಿದೆ. ಆದ್ದರಿಂದಲೇ ಸತ್ತು ಅನುಭೂತಿಗೆ ವಿಷಯ ವೆಂಬುದೂ ಪ್ರಮಾಣಮಾರ್ಗವನ್ನು ಅನುಸರಿಸಲಾರದು. ಆದ್ದರಿಂದ ಸತ್ತೆಂದರೆ ಅನುಭೂತಿಯೇ.[1]

ಆ ಅನುಭೂತಿಯು ಸ್ವತಃಸಿದ್ಧವಾಗಿರುತ್ತದೆ; ಏಕೆಂದರೆ (ಅದು) ಅನುಭೂತಿಯಾಗಿರುತ್ತದೆ. ಮತ್ತೊಂದರಿಂದ ಸಿದ್ಧವಾಗುವದಾದರೆ (ಅದು) ಗಡಿಗೆಯೇ ಮುಂತಾದವುಗಳಂತೆ ಅನುಭೂತಿಯಲ್ಲದೆಹೋಗಬೇಕಾದೀತು. ಇದಲ್ಲದೆ ಅನುಭೂತಿಗೆ ಅನುಭವದ ಅಪೇಕ್ಷೆಯಿದೆ ಎಂದು ಕಲ್ಪಿಸುವದಕ್ಕೆ ಆಗಲಾರದು ; ಏಕೆಂದರೆ ಅದು ಸದ್ರೂಪವಾಗಿಯೇ ಪ್ರಕಾಶಿಸುತ್ತಿರುತ್ತದೆ. ಅನುಭೂತಿಯಿರುವಾಗ ಗಡಿಗೆಯೇ ಮುಂತಾದವುಗಳಂತೆ (ತಾನೇ) ತೋರಿಕೊಳ್ಳದೆ ಇರುವದು ಕಂಡಿಲ್ಲವಷ್ಟೆ ? ಹಾಗಿದ್ದರಲ್ಲವೆ, (ಅದು) ಮತ್ತೊಂದಕ್ಕೆ ಅಧೀನವಾದ ತೋರಿಕೆಯುಳ್ಳದ್ದು ಎಂದು ಒಪ್ಪಬೇಕಾಗುವದು ?

## (೧೭) ಸ್ವತಃಸಿದ್ಧಾನುಭವವಾದದ ಮೇಲಿನ ಶಂಕೆ

(ಮೂಲ)

ಅಥೈವಂ ಮನುಷೇ ಉತ್ಪನ್ನಾಯಾಮಪ್ಯನುಭೂತೌ ವಿಷಯಮಾತ್ರಮೇವ ಭಾಸತೇ 'ಘಟೋಽನುಭೂಯತೇ' ಇತಿ । ನ ಹಿ ಕಶ್ಚಿತ್ 'ಘಟೋಽಯಮ್' ಇತಿ ಜಾನನ್ ತದಾನೀಮೇವ ಅವಿಷಯಭೂತಾಮ್ ಅನಿದಂಭಾವಾಮ್ ಅನುಭೂತಿಮಪ್ಯನುಭವತಿ । ತಸ್ಮಾತ್ ಘಟಾದಿಪ್ರಕಾಶನಿಷ್ಪತ್ತ್ಯಾ ಚಕ್ಷುರಾದಿ ಕರಣಸನ್ನಿಕರ್ಷವತ್, ಅನುಭೂತೇಃ ಸದ್ಭಾವ ಏವ ಹೇತುಃ ; ತದನನ್ತರಮ್ ಅರ್ಥಗತಕಾದಾಚಿತ್ಕಪ್ರಕಾಶಾತಿಶಯಲಿಙ್ಗೇನಾನುಭೂತಿರನುಮೀಯತೇ । ಏವಂ ತರ್ಹಿ ಅನುಭೂತೇರಜಡಾಯಾ ಅರ್ಥವಜ್ಜಡತ್ವಮಾಪದ್ಯತ ಇತಿ ಚೇತ್ ! ಕಿಮಿದಮಜಡತ್ವಂ ನಾಮ ? ನ ತಾವತ್ ಸ್ವಸತ್ತಾಯಾಃ ಪ್ರಕಾಶಾವ್ಯಭಿಚಾರಃ, ಸುಖಾದಿಷ್ವಪಿ ತತ್ಸಂಭವಾತ್ । ನ ಹಿ ಕದಾಚಿದಪಿ ಸುಖಾದಯಃ ಸನ್ತೋ ನೋಪಲಭ್ಯನ್ತೇ । ಅತೋಽನುಭೂತಿಃ ಸ್ವಯಮೇವ ನಾನುಭೂಯತೇ, ಅರ್ಥಾನ್ತರಂ ಸ್ಪೃಶತೋಽಙ್ಗುಲ್ಯಗ್ರಸ್ಯ ಸ್ವಾತ್ಮಸ್ಪರ್ಶವದಶಕ್ಯತ್ವಾತ್ ಇತಿ ॥

---

1. ಸನ್ಮಾತ್ರವೇ ಪ್ರತ್ಯಕ್ಷಕ್ಕೆ ವಿಷಯವೆಂದು ವಾದಿಸಿದವನು ಈ ಅದ್ವೈತಿಯಲ್ಲವೆಂದಾಯಿತು. ಏಕೆಂದರೆ ಅನುಭೂತಿಯು ಏತಕ್ಕೂ ವಿಷಯವಲ್ಲವೆಂದೂ ಭೇದವೆಂಬುದು ದುರ್ನಿರೂಪವಾಗಿರುವದರಿಂದ ವಿಷಯವಿಷಯಿಭಾವವೂ ಇಲ್ಲವೆಂದೂ ಈತನು ಸಾಧಿಸುವದಕ್ಕೆ ಹೊರಟಿರುತ್ತಾನೆ. ಅನುಭೂತಿಯ ವಿಷಯಕ್ಕೆ ಪರಿಶಿಷ್ಟವನ್ನೂ ಪೀಠಿಕೆಯನ್ನೂ ನೋಡಿರಿ.

(ಅರ್ಥ)

ಇನ್ನು (ನೀನು) ಹೀಗೆಂದು ಭಾವಿಸಬಹುದು : ಅನುಭೂತಿಯು ಉಂಟಾಗಿದ್ದರೂ ಬರಿಯ ವಿಷಯವೇ 'ಗಡಿಗೆ ಅನುಭವಕ್ಕೆ ಬರುತ್ತಿದೆ' ಎಂದಿಂತು ತೋರುತ್ತದೆ. 'ಇದು ಗಡಿಗೆ' ಎಂದು ಅರಿತುಕೊಂಡವನು, ಆಗಲೇ ವಿಷಯವಾಗದೆ ಇರುವ 'ಇದು' ಎಂದಾಗದ ಅನುಭೂತಿಯನ್ನೂ ಯಾವನೂ ಅನುಭವಿಸುವದಿಲ್ಲವಷ್ಟೆ? ಆದ್ದರಿಂದ ಗಡಿಗೆಯೇ ಮುಂತಾದವುಗಳ ತೋರಿಕೆಯುಂಟಾಗುವದಕ್ಕೆ ಚಕ್ಷುರಾದಿಕರಣಗಳ ಸಂನಿಕರ್ಷವು (ಹೇಗೆ ಕಾರಣವೋ) ಹಾಗೆ, ಅನುಭೂತಿಯು (ತೋರುವದಕ್ಕೆ ಅದು) ಸದ್ರೂಪವಾಗಿರುವದೇ ಕಾರಣ. ಆ (ಗಡಿಗೆಯೇ ಮುಂತಾದವ್ವರ ತೋರಿಕೆ)ಯಾದಮೇಲೆ ವಿಷಯದಲ್ಲಿ ಒಂದಾನೊಂದು ಕಾಲದಲ್ಲುಂಟಾದ ತೋರಿಕೆಯೆಂಬ ವಿಶೇಷದ ಲಿಂಗದಿಂದ ಅನುಭೂತಿಯನ್ನು ಅನುಮಾನಿಸುತ್ತಾರೆ.[1]

(ಆಕ್ಷೇಪ) :– ಹೀಗಾದರೆ ಅಜಡವಾದ ಅನುಭೂತಿಗೂ ವಿಷಯದಂತೆ ಜಡತ್ವವೇ ಉಂಟಾಗುವದಲ್ಲ !

(ಪರಿಹಾರ) :– ಈ ಅಜಡತ್ವವೆಂಬುದೇನು ? ತನ್ನ ಇರವಿನ ತೋರಿಕೆಯು ಮಾರ್ಪಡದೆ ಇರುವದಂತೂ ಅಲ್ಲ; ಏಕೆಂದರೆ ಆ (ಮಾರ್ಪಾಡಿಲ್ಲದ್ದೆಂಬುದು) ಸುಖಾದಿಗಳಿಗೂ ಇರಬಹುದಾಗಿದೆ; ಸುಖಾದಿಗಳು ಇರುವಾಗ ತೋರುವದಿಲ್ಲ ಎಂಬುದು ಯಾವಾಗಲೂ ಇಲ್ಲವಷ್ಟೆ? ಆದ್ದರಿಂದ ಅನುಭೂತಿಯು ತಾನೇ ಅನುಭವಕ್ಕೆ ಗೊತ್ತಾಗುವದಿಲ್ಲ, ಬೇರೊಂದು ವಸ್ತುವನ್ನು ಮುಟ್ಟುವ ಬೆರಳ ತುದಿಯು ತನ್ನನ್ನೇ ಮುಟ್ಟುವದು ಹೇಗೆ ಅಶಕ್ಯವೋ ಹಾಗೆಯೇ (ಅನುಭವವೂ ತನ್ನನ್ನೇ ಅನುಭವಿಸ)ಲಾರದು.

## (೧೮) ಸ್ವಯಂಸಿದ್ಧಾನುಭವವಾದಿಯ ಪರಿಹಾರ

(ಮೂಲ)

ತದಿದಮ್ ಅನಾಕಲಿತಾನುಭವವಿಭವಸ್ಯ ಸ್ವಮತಿವಿಜೃಮ್ಭಿತಮ್ । ಅನುಭೂತಿವ್ಯತಿರೇಕಿಣೋ ವಿಷಯಧರ್ಮಸ್ಯ ಪ್ರಕಾಶಸ್ಯ ರೂಪಾದಿವದನುಪಲಬ್ಧೇಃ । ಉಭಯಾಭ್ಯುಪೇತಾನುಭೂತ್ಯೈವಾಶೇಷವ್ಯವಹಾರೋಪಪತ್ತೌ ಪ್ರಕಾಶಾಖ್ಯಧರ್ಮಕಲ್ಪನಾನುಪಪತ್ತೇಶ್ಚ । ಅತೋ ನಾನುಭೂತಿರನುಮೀಯತೇ, ನಾಪಿ ಜ್ಞಾನಾನ್ತರಸಿದ್ಧಾ ; ಅಪಿ ತು ಸರ್ವಂ ಸಾಧಯನ್ತೀ ಅನುಭೂತಿಃ, ಸ್ವಯಮೇವ ಸಿಧ್ಯತಿ । ಪ್ರಯೋಗಶ್ಚ ಅನುಭೂತಿಃ, ಅನನ್ಯಾಧೀನಸ್ವಧರ್ಮವ್ಯವಹಾರಾ,

1. ಅನುಭೂತಿಯು ಸ್ವಯಂಪ್ರಕಾಶವಲ್ಲ ; ವಿಷಯಾನುಭವಲಿಂಗದಿಂದ ಊಹಿಸಲ್ಪಡುತ್ತದೆ ಎಂಬುದು ಆಕ್ಷೇಪಣೆಯ ಸಾರ.

ಸ್ವಸಂಬನ್ಧಾತ್ ಅರ್ಥಾನ್ತರೇ ತದ್ಧರ್ಮವ್ಯವಹಾರಹೇತುತ್ವಾತ್ । ಯಃ ಸ್ವಸಂಬನ್ಧಾದರ್ಥಾನ್ತರೇ ಯದ್ಧರ್ಮವ್ಯವಹಾರಹೇತುಃ, ಸ ತಯೋಃ ಸ್ವಸ್ಮಿನ್ ಅನನ್ಯಾಧೀನೋ ದೃಷ್ಟಃ । ಯಥಾ ರೂಪಾದಿಃ, ಚಾಕ್ಷುಷತ್ವಾದೌ । ರೂಪಾದಿರ್ಹಿ ಪೃಥಿವ್ಯಾದೌ ಸ್ವಸಂಬನ್ಧಾತ್ ಚಾಕ್ಷುಷತ್ವಾದಿ ಜನಯನ್ ಸ್ವಸ್ಮಿನ್ ನ ರೂಪಾದಿಸಂಬನ್ಧಾಧೀನಶ್ಚಾಕ್ಷುಷತ್ವಾದೌ । ಅತೋಽನುಭೂತಿಃ, ಆತ್ಮನಃ ಪ್ರಕಾಶಮಾನತ್ವೇ 'ಪ್ರಕಾಶತೇ' ಇತಿ ವ್ಯವಹಾರೇ ಚ ಸ್ವಯಮೇವ ಹೇತುಃ ॥

(ಅರ್ಥ)

ಆ ಈ (ಅಭಿಪ್ರಾಯವು) ಅನುಭವದ ವೈಭವವನ್ನು ಗ್ರಹಿಸದೆ ಇರುವವನ ಸ್ವಬುದ್ಧಿಯ ವಿಕಾಸಮಾತ್ರವು.[1] ಏಕೆಂದರೆ ಅನುಭೂತಿವ್ಯತಿರಿಕ್ತವಾಗಿ ವಿಷಯಧರ್ಮವಾದ ಪ್ರಕಾಶವೆಂಬುದು ರೂಪಾದಿಗಳಂತೆ ಕಾಣಬರುವದಿಲ್ಲ[2] ; ಇಬ್ಬರೂ ಒಪ್ಪಿರುವ ಅನುಭೂತಿಯಿಂದಲೇ ಎಲ್ಲಾ ವ್ಯವಹಾರಗಳೂ ಯುಕ್ತವಾಗುತ್ತಿರುವಲ್ಲಿ 'ಪ್ರಕಾಶ'ವೆಂಬ (ಮತ್ತೊಂದು) ಧರ್ಮವನ್ನು ಕಲ್ಪಿಸುವದು ಯುಕ್ತವೂ ಅಲ್ಲ.[3] ಆದ್ದರಿಂದ ಅನುಭೂತಿಯು ಅನುಮಿತವಾಗುವದಿಲ್ಲ, ಮತ್ತೊಂದು ಜ್ಞಾನದಿಂದ ಸಿದ್ಧವಾಗುವದೂ ಇಲ್ಲ ; ಮತ್ತೇನೆಂದರೆ ಎಲ್ಲವನ್ನೂ ಸಾಧಿಸುವ ಅನುಭೂತಿಯು ತಾನೇ ಸಿದ್ಧವಾಗುತ್ತದೆ. (ಈ ಬಗ್ಗೆ ನ್ಯಾಯದ) ಪ್ರಯೋಗವೂ (ಇದೆ. ಹೇಗೆಂದರೆ), ಅನುಭೂತಿಯು ಮತ್ತೊಂದಕ್ಕೆ ಅಧೀನವಾಗದೆ ಇರುವ ಸ್ವಧರ್ಮವ್ಯವಹಾರವುಳ್ಳದ್ದು[4] ; ಏಕೆಂದರೆ ತನ್ನ ಸಂಬಂಧದಿಂದ ಮತ್ತೊಂದು ವಿಷಯದಲ್ಲಿ ಅದರ ಧರ್ಮದ ವ್ಯವಹಾರಕ್ಕೆ ಹೇತುವಾಗಿದೆ. ಯಾವದು ತನ್ನ ಸಂಬಂಧದಿಂದ ಮತ್ತೊಂದು ವಸ್ತುವಿನಲ್ಲಿ ಯಾವ ಧರ್ಮದ ವ್ಯವಹಾರಕ್ಕೆ ಹೇತುವಾಗಿರುತ್ತದೆಯೋ ಅದು ಅವೆರಡರೊಳಗೆ ತನ್ನಲ್ಲಿ ಅನನ್ಯಾಧೀನವಾಗಿರುವದು ಕಂಡುಬರುತ್ತದೆ ; ಉದಾಹರಣೆಗೆ ರೂಪವೇ ಮುಂತಾದದ್ದು ಚಾಕ್ಷುಷತ್ವಾದಿಗೆ (ಹೇತುವಾಗಿರುತ್ತದೆಯಾದ್ದರಿಂದ ಅನನ್ಯಾಧೀನ). ರೂಪಾದಿಯು ಪೃಥಿವ್ಯಾದಿ

---

1. ಅನುಭೂತಿಯು ಅನುಮಾನದಿಂದ ಸಿದ್ಧವಾಗುತ್ತದೆ ಎಂಬ ಮಾತು ಶಂಕಾವಾದಿಯು ತಾನೇ ಕಲ್ಪಿಸಿಕೊಂಡದ್ದು ; ಅನುಭವದ ಸ್ವಭಾವವನ್ನು ಅರಿತಿದ್ದರೆ ಅವನು ಹೀಗೆ ಕಲ್ಪಿಸುತ್ತಿರಲಿಲ್ಲ.

2. ವಿಷಯವು ತೋರುತ್ತದೆ ಎಂದು ಪ್ರಕಾಶವನ್ನು ಕಲ್ಪಿಸಿ ಅದರಿಂದ ಅನುಭೂತಿಯನ್ನು ಅನುಮಾನಿಸುತ್ತಾರೆ– ಎನ್ನುವದಕ್ಕೆ ವಿಷಯದ ಪ್ರಕಾಶವೆಂಬ ಧರ್ಮವು ಬೇಕಷ್ಟೆ ? ಅದೇ ಇಲ್ಲ. ವಸ್ತುವಿಗೆ ಬಿಳುಪು, ಕೆಂಪು– ಎಂದು ರೂಪವುಂಟು ; ಹಾಗೆ ತೋರುವಿಕೆ ಎಂಬ ಧರ್ಮವು ಇಲ್ಲ.

3. ವಿಷಯವು ತೋರುವದೆಂಬುದೂ ಅನುಭೂತಿಯಿಂದಲೇ ; ಅದಕ್ಕಿಂತ ವ್ಯತಿರಿಕ್ತವಾದ ತೋರಿಕೆಯಿಲ್ಲ.

4. 'ಅನುಭೂತಿ' ಎನ್ನುವ ವ್ಯವಹಾರಕ್ಕೆ ಮತ್ತೊಂದನ್ನು ಬಯಸುವದಿಲ್ಲ.

ಪದಾರ್ಥದಲ್ಲಿ ತನ್ನ ಸಂಬಂಧದಿಂದ ಚಾಕ್ಷುಷತ್ವವೇ ಮುಂತಾದ (ವ್ಯವಹಾರವನ್ನು) ಉಂಟುಮಾಡುವದರಿಂದ ತಾನು ಚಾಕ್ಷುಷವೇ ಮುಂತಾದದ್ದಾಗಿರುವದಕ್ಕೆ ರೂಪಾದಿಸಂಬಂಧಾಧೀನವಾಗಿರುವದಿಲ್ಲ.[1] ಆದ್ದರಿಂದ ಅನುಭೂತಿಯು ತಾನು ಬೆಳಗುವದಕ್ಕೂ 'ಬೆಳಗುತ್ತಿದೆ' ಎಂಬ ವ್ಯವಹಾರಕ್ಕೂ ತಾನೇ ಹೇತುವಾಗಿರುತ್ತದೆ.

## (೧೯) ಅನುಭೂತಿಯು ನಿತ್ಯ

(ಮೂಲ)

ಸೇಯಂ ಸ್ವಯಂಪ್ರಕಾಶಾನುಭೂತಿರ್ನಿತ್ಯಾ ಚ । ಪ್ರಾಗಭಾವಾದ್ಯಭಾವಾತ್। ತದಭಾವಶ್ಚ ಸ್ವತಃಸಿದ್ಧತ್ವಾದೇವ । ನ ಹಿ ಅನುಭೂತೇಃ ಸ್ವತಃಸಿದ್ಧಾಯಾಃ ಪ್ರಾಗಭಾವಃ ಸ್ವತೋ ವಾಽನ್ಯತೋ ವಾ ಅವಗನ್ತುಂ ಶಕ್ಯತೇ । ಅನುಭೂತಿಃ ಸ್ವಾಭಾವಮವಗಮಯನ್ತೀ ಸತೀ ತಾವನ್ನಾವಗಮಯತಿ। ತಸ್ಯಾಃ ಸತ್ತ್ವೇ ವಿರೋಧಾದೇವ ತದಭಾವೋ ನಾಸ್ತೀತಿ ಕಥಂ ಸಾ ಸ್ವಾಭಾವಮ್ ಅವಗಮಯತಿ? ಏವಮ್ ಅಸತ್ಯಪಿ ನಾವಗಮಯತಿ; ಅನುಭೂತಿಃ ಸ್ವಯಮಸತೀ ಸ್ವಾಭಾವೇ ಕಥಂ ಪ್ರಮಾಣಂ ಭವೇತ್? ನಾಪ್ಯನ್ಯತೋಽವಗನ್ತುಂ ಶಕ್ಯತೇ, ಅನುಭೂತೇ ರನನ್ಯಗೋಚರತ್ವಾತ್। ಅಸ್ಯಾಃ ಪ್ರಾಗಭಾವಂ ಸಾಧಯತ್ ಪ್ರಮಾಣಮ್ 'ಅನುಭೂತಿರಿಯಮ್' ಇತಿ ವಿಷಯೀಕೃತ್ಯ ತದಭಾವಂ ಸಾಧಯೇತ್। ಸ್ವತಃಸಿದ್ಧತ್ವೇನ 'ಇಯಮ್' ಇತಿ ವಿಷಯಾಕಾರಾನರ್ಹತ್ವಾತ್, ನ ತತ್ಪ್ರಾಗಭಾವೋಽನ್ಯತಃ ಶಕ್ಯಾವಗಮಃ । ಅತೋಽಸ್ಯಾಃ ಪ್ರಾಗಭಾವಾಭಾವಾತ್ ಉತ್ಪತ್ತಿರ್ನ ಶಕ್ಯತೇ ವಕ್ತುಮಿತಿ ಉತ್ಪತ್ತಿಪ್ರತಿಸಂಬದ್ಧಾಶ್ಚಾನ್ಯೇಽಪಿ ಭಾವವಿಕಾರಾಸ್ತಸ್ಯಾ ನ ಸನ್ತಿ ॥

(ಅರ್ಥ)

ಈ ಸ್ವಯಂಪ್ರಕಾಶನಾದ ಅನುಭೂತಿಯು ನಿತ್ಯವೂ ಆಗಿದೆ. ಏಕೆಂದರೆ ಪ್ರಾಗಭಾವವೇ ಮುಂತಾದವುಗಳು[2] (ಇವಕ್ಕೆ) ಇರುವದಿಲ್ಲ. ಅವು ಇಲ್ಲವೆಂಬುದೂ (ಅನುಭವವು) ಸ್ವತಃಸಿದ್ಧವಾಗಿರುವದರಿಂದಲೇ. ಹೇಗೆಂದರೆ, ಸ್ವತಃಸಿದ್ಧವಾಗಿರುವ

---

1. ಬಿಳುಪು, ಕೆಂಪು— ಮುಂತಾದ ರೂಪವು ಪದಾರ್ಥದಲ್ಲಿ ಬಿಳಿಯದು, ಕೆಂಪಗಿರುವದು— ಮುಂತಾದ ವ್ಯವಹಾರಕ್ಕೆ ಕಾರಣವಾಗಿರುತ್ತದೆ. ಆದರೆ 'ಬಿಳುಪು' ಎಂಬುದು ವ್ಯವಹಾರಕ್ಕೆ ಮತ್ತೊಂದು ರೂಪವನ್ನು ಬಯಸುವದಿಲ್ಲ— ಎಂದರ್ಥ. ಇಲ್ಲಿ ಅನುಭೂತಿಯು ಅನುಭೂತಿಯೆಂಬ ವ್ಯವಹಾರಕ್ಕೆ ಮತ್ತೊಂದು ಧರ್ಮವನ್ನು ಬಯಸದೆ ತಾನೇ ಕಾರಣವಾಗಿದೆ —ಎಂಬುದನ್ನು ಅನುಮಾನದಿಂದ ಸಿದ್ಧಪಡಿಸುವದಕ್ಕೆ ಹೊರಟಿರುವದನ್ನು ಲಕ್ಷಿಸಬೇಕು. ಸ್ವಯಂಸಿದ್ಧವಾದದ್ದೆಂಬುದಕ್ಕೆ ಅನುಮಾನವು ಬೇಕೆ? —ಎಂಬ ಪ್ರಶ್ನೆಯನ್ನು ಇಲ್ಲಿ ತೆಗೆದು ವಿಚಾರಮಾಡಿಲ್ಲ.

2. ಮುಂತಾದವುಗಳು ಎಂದರೆ ಪ್ರಧ್ವಂಸಾಭಾವವೇ ಮುಂತಾದವು. ಇಲ್ಲಿ ಪ್ರಾಗಭಾವಕ್ಕೆ ಹೇಳಿರುವ ಯುಕ್ತಿಯನ್ನೇ ಅವುಗಳಿಗೂ ಅನ್ವಯಿಸಬಹುದೆಂದು ಭಾವ.

ಅನುಭೂತಿಗೆ ಪ್ರಾಗಭಾವವು ತನ್ನಿಂದಲೇ ಆಗಲಿ, ಮತ್ತೊಂದರಿಂದಲೇ ಆಗಲಿ ನಿಶ್ಚಯಿಸುವದಕ್ಕೆ ಆಗುವಂತೆಯೇ ಇಲ್ಲ. (ಹೇಗೆಂದರೆ)[1] ತನ್ನ ಅಭಾವವನ್ನು ನಿಶ್ಚಯಿಸುವ ಅನುಭೂತಿಯು ಮೊದಲನೆಯದಾಗಿ (ಅದು ಸದ್ರೂಪವಾಗಿ) ಇರುವ ದಾದರೆ ನಿಶ್ಚಯಿಸಲಾರದು; ಅದು ಇದ್ದರೆ ವಿರುದ್ಧವಾದ್ದರಿಂದಲೇ ಅದರ ಅಭಾವವು ಇರುವದಿಲ್ಲವಾದ್ದರಿಂದ, ಅದು ಹೇಗೆತಾನೆ ತನ್ನ ಅಭಾವವನ್ನು ನಿಶ್ಚಯಿಸುತ್ತದೆ? ಹೀಗೆಯೇ ಅದು ಇಲ್ಲದಿದ್ದರೂ ನಿಶ್ಚಯಿಸಿಕೊಡಲಾರದು; ಅನುಭೂತಿಯು ತಾನೇ ಇಲ್ಲದೆಇರುವಾಗ ತನ್ನ ಅಭಾವಕ್ಕೆ ಹೇಗೆತಾನೆ ಪ್ರಮಾಣವಾದೀತು? ಮತ್ತೊಂದ ರಿಂದಲೂ (ಪ್ರಾಗಭಾವವನ್ನು) ನಿಶ್ಚಯಿಸುವದು ಆಗಲಾರದು; ಏಕೆಂದರೆ ಅನುಭೂತಿಯು ಮತ್ತೊಂದಕ್ಕೆ ಗೋಚರವೇ ಅಲ್ಲ. ಇದರ ಪ್ರಾಗಭಾವವನ್ನು ಸಾಧಿಸುವ ಪ್ರಮಾಣವು 'ಅನುಭೂತಿಯಿದು' ಎಂದು (ಇದನ್ನು) ವಿಷಯೀಕರಿಸಿ ಇದರ ಅಭಾವವನ್ನು ಸಾಧಿಸಬೇಕು. ಸ್ವತಃಸಿದ್ಧವಾಗಿರುವದರಿಂದ 'ಇದು' ಎಂದು ವಿಷಯೀಕರಿಸುವದಕ್ಕೆ ತಕ್ಕದ್ದಲ್ಲವಾಗಿರುವದರಿಂದ, ಇದರ ಪ್ರಾಗಭಾವವು ಮತ್ತೊಂದರಿಂದ ನಿಶ್ಚಯಿಸುವದಕ್ಕೆ ಆಗಲಾರದು. ಆದ್ದರಿಂದ ಇದಕ್ಕೆ ಪ್ರಾಗಭಾವ ವಿಲ್ಲದ್ದರಿಂದ (ಇದರ) ಉತ್ಪತ್ತಿಯಿದೆ ಎನ್ನುವದಕ್ಕೆ ಆಗುವಂತಿಲ್ಲ; ಆದ್ದರಿಂದ ಉತ್ಪತ್ತಿಗೆ ಗಂಟುಬಿದ್ದಿರುವ ಮಿಕ್ಕ ಭಾವವಿಕಾರಗಳೂ ಇದಕ್ಕೆ ಇಲ್ಲ[2].

## (೨೦) ಅನುಭೂತಿಗೆ ನಾನಾತ್ವವೂ ಇರುವಂತಿಲ್ಲ

(ಮೂಲ)

ಅನುತ್ಪನ್ನೇಯಮ್ ಅನುಭೂತಿಃ, ಆತ್ಮನಿ ನಾನಾತ್ವಮಪಿ ನ ಸಹತೇ; ವ್ಯಾಪಕವಿರುದ್ಧೋಪಲಬ್ಧೇಃ। ನ ಹ್ಯನುತ್ಪನ್ನಂ ನಾನಾಭೂತಂ ದೃಷ್ಟಮ್। ಭೇದಾದೀನಾಮ್ ಅನುಭಾವ್ಯತ್ವೇನ ಚ ರೂಪಾದೇರಿವಾನುಭೂತಿಧರ್ಮತ್ವಂ ನ ಸಂಭವತಿ। ಅತಃ, ಅನುಭೂತೇರನುಭವಸ್ವರೂಪತ್ವಾದೇವ ಅನ್ಯೋಽಪಿ ಕಶ್ಚಿದನು. ಭಾವ್ಯೋ ನಾಸ್ಯಾ ಧರ್ಮಃ। ಯತೋ ನಿರ್ಧೂತನಿಖಿಲಭೇದಾ ಸಂವಿತ್, ಅತ ಏವ ನಾಸ್ಯಾಃ ಸ್ವರೂಪಾತಿರಿಕ್ತ ಆಶ್ರಯೋ ಜ್ಞಾತಾ ನಾಮ ಕಶ್ಚಿದಸ್ತೀತಿ ಸ್ವಪ್ರಕಾಶರೂಪಾ ಸೈವಾಽಽತ್ಮಾ, ಅಜಡತ್ವಾಚ್ಚ। ಅನಾತ್ಮತ್ವವ್ಯಾಪ್ತಂ ಜಡತ್ವಂ ಸಂವಿದಿ ವ್ಯಾವರ್ತಮಾನಮ್ ಅನಾತ್ಮತ್ವಮಪಿ ಹಿ ಸಂವಿದೋ ವ್ಯಾವರ್ತಯತಿ॥

(ಅರ್ಥ)

ಹುಟ್ಟದೆ ಇರುವ ಈ ಅನುಭೂತಿಯು ತನ್ನಲ್ಲಿ ನಾನಾತ್ವವನ್ನು ಸಹಿಸದು; ಏಕೆಂದರೆ (ಇಲ್ಲಿ) ವ್ಯಾಪಕವಿರುದ್ಧವಾದದ್ದು ಕಾಣಬರುತ್ತಿದೆ.[3] (ಹೇಗೆಂದರೆ)

1. ಪ್ರಮೇಯವಾದ ಅನಾತ್ಮಗಳಿಗೆ ಮಾತ್ರ ಪ್ರಾಗಭಾವಾದಿಗಳಿರಬೇಕು; ಆತ್ಮನಿಗೆ ಇವುಗಳು ಇರಲಾರವು ಎಂದು ತರ್ಕದಿಂದ ಸಾಧಿಸುವದಕ್ಕೆ ಹೊರಟಿರುವದೇಕೊ, ತಿಳಿಯದು.

2. ವಸ್ತು ಹುಟ್ಟಿದಮೇಲಲ್ಲವೆ, ಅದಕ್ಕೆ ಬೆಳೆಯುವದು, ಮಾರ್ಪಡುವದು—ಮುಂತಾದ ವಿಕಾರಗಳುಂಟಾಗುವದು? ಆದರೆ ಇದಕ್ಕೆ ಹುಟ್ಟೇಇಲ್ಲ.

3. ಎಲ್ಲೆಲ್ಲಿ ನಾನಾತ್ವವಿದೆಯೋ ಅದು ಹುಟ್ಟಿದ್ದು—ಎಂದು ಉತ್ಪನ್ನತ್ವವು ವ್ಯಾಪಕ; ಇಲ್ಲಿ ಅನುತ್ಪನ್ನವೆಂಬ ವ್ಯಾಪಕವಿರುದ್ಧವೇ ಕಾಣುತಿಗೆ.

ಹುಟ್ಟದೆ ಇರುವದು ನಾನಾರೂಪವಾಗಿರುವದು ಕಂಡಿಲ್ಲ. ಭೇದಾದಿಗಳು ಅನುಭಾವ್ಯವಾಗಿರುವದರಿಂದ ರೂಪವೇ ಮುಂತಾದವುಗಳಂತೆ (ಅವು) ಅನುಭೂತಿಯ ಧರ್ಮವಾಗುವಂತಿಲ್ಲ. ಆದ್ದರಿಂದ ಅನುಭೂತಿಯು ಅನುಭವಸ್ವರೂಪವಾಗಿರುವದರಿಂದಲೇ, ಮತ್ತೆ ಯಾವದೊಂದು ಅನುಭಾವ್ಯವೂ ಈ (ಅನುಭೂತಿಯ) ಧರ್ಮವಲ್ಲ. ಏಕೆಂದರೆ ಸಂವಿತ್ತು (ಜ್ಞಾನವು) ಎಲ್ಲಾ ಭೇದಗಳನ್ನೂ ಕೊಡವಿಕೊಂಡಿರತಕ್ಕದ್ದು. ಆದ್ದರಿಂದಲೇ ಇದಕ್ಕೆ ತನ್ನ ರೂಪಕ್ಕಿಂತ ಬೇರೆಯಾದ **ಆಶ್ರಯನಾದ ಜ್ಞಾತೃವೂ ಯಾವನೂ** ಇರುವದಿಲ್ಲವಾದ್ದರಿಂದ ಸ್ವಪ್ರಕಾಶರೂಪವಾದ ಆ (ಸಂವಿತ್ತೇ) ಆತ್ಮನು ; ಏಕೆಂದರೆ (ಅದು) ಜಡವಲ್ಲದ್ದು. ಅನಾತ್ಮತ್ವವ್ಯಾಪ್ತವಾದ ಜಡತ್ವವು[1] ಸಂವಿತ್ತಿನಲ್ಲಿ ಇಲ್ಲದೆ ಇರುವದರಿಂದ ಸಂವಿತ್ತಿಗೆ ಅನಾತ್ಮತ್ವವನ್ನು ಇಲ್ಲದಂತೆ ಮಾಡುತ್ತದೆ.[2]

## (೨೧) ಜ್ಞಾತೃತ್ವವೂ ಆತ್ಮನಿಗಿಲ್ಲ

### (ಮೂಲ)

ನನು ಚ 'ಅಹಂ ಜಾನಾಮಿ' ಇತಿ ಜ್ಞಾತೃತಾ ಪ್ರತೀತಿಸಿದ್ಧಾ। ನೈವಮ್ । ಸಾ ಭ್ರಾನ್ತಿಸಿದ್ಧಾ ; ರಜತತೇವ ಶುಕ್ತಿಶಕಲಸ್ಯ ; ಅನುಭೂತೇಃ ಸ್ವಾತ್ಮನಿ ಕರ್ತೃತ್ವಾಯೋಗಾತ್ । ಅತಃ, 'ಮನುಷ್ಯೋಽಹಮ್' ಇತ್ಯತ್ಯನ್ತಬಹಿರ್ಭೂತಮನುಷ್ಯತ್ವಾದಿವಿಶಿಷ್ಟಪಿಣ್ಡಾತ್ಮಾಭಿಮಾನವತ್ ಜ್ಞಾತೃತ್ವಮಧ್ಯಸ್ತಮ್ । ಜ್ಞಾತೃತ್ವಂ ಹಿ ಜ್ಞಾನಕ್ರಿಯಾಕರ್ತೃತ್ವಮ್ । ತಚ್ಚ ವಿಕ್ರಿಯಾತ್ಮಕಂ ಜಡಂ ವಿಕಾರಿದ್ರವ್ಯಾಹಙ್ಕಾರಗ್ರನ್ಥಿಸ್ಥಮ್ ಅವಿಕ್ರಿಯೇ ಸಾಕ್ಷಿಣಿ ಚಿನ್ಮಾತ್ರಾತ್ಮನಿ ಕಥಮಿವ ಸಂಭವತಿ ? ದೃಶ್ಯಧೀನಸಿದ್ಧಿತ್ವಾದೇವ ರೂಪಾದೇರಿವ ಕರ್ತೃತ್ವಾದೇರ್ನಾತ್ಮಧರ್ಮತ್ವಮ್ । ಸುಷುಪ್ತಿಮೂರ್ಛಾದೌ ಅಹಂಪ್ರತ್ಯಯಾಪಾಯೇಽಪ್ಯಾತ್ಮಾನುಭವದರ್ಶನೇನ ನಾತ್ಮನೋಽಹಂಪ್ರತ್ಯಯಗೋಚರತ್ವಮ್ । ಕರ್ತೃತ್ವೇ ಅಹಂಪ್ರತ್ಯಯಗೋಚರತ್ವೇ ಚ ಆತ್ಮನೋಽಭ್ಯುಪಗಮ್ಯಮಾನೇ ದೇಹಸ್ಯೇವ ಜಡತ್ವಪರಾಕ್ತ್ವಾನಾತ್ಮತ್ವಾದಿಪ್ರಸಙ್ಗೋ ದುಷ್ಪರಿಹರಃ । ಅಹಂಪ್ರತ್ಯಯಗೋಚರಾತ್ ಕರ್ತೃತಯಾ ಪ್ರಸಿದ್ಧಾತ್ ದೇಹಾತ್ ತತ್ಕ್ರಿಯಾಫಲಸ್ವರ್ಗಾದೇ-

---

1. ಎಲ್ಲೆಲ್ಲಿ ಜಡತ್ವವಿರುವದೋ ಅಲ್ಲಲ್ಲಿ ಅನಾತ್ಮತ್ವವಿರುತ್ತದೆ.

2. ವ್ಯಾಪ್ಯವಾದ ಜಡತ್ವವು ಸಂವಿತ್ತಿನಲ್ಲಿ (ಜ್ಞಾನದಲ್ಲಿ)ಲ್ಲ ; ಆದ್ದರಿಂದ ವ್ಯಾಪಕವಾದ ಅನಾತ್ಮತ್ವ ಅದರಲ್ಲಿಲ್ಲ– ಎಂಬುದು ಸರಿಯಾದ ತರ್ಕವಾಗಲಾರದು ; ಆದ್ದರಿಂದ ಅನಾತ್ಮವ್ಯಾಪ್ತವಾದದ್ದು ಎಂದರೆ ಅನಾತ್ಮತ್ವವನ್ನು ವ್ಯಾಪಿಸಿಕೊಂಡಿರುವದು ; ಎಂದರೆ ಅನಾತ್ಮತ್ವಕ್ಕೆ ವ್ಯಾಪಕ. ವ್ಯಾಪಕವಾದ ಜಡತ್ವವಿಲ್ಲದ್ದರಿಂದ ವ್ಯಾಪ್ಯವಾದ ಅನಾತ್ಮತ್ವವೂ ಇಲ್ಲವೆಂದರ್ಥ– ಎಂದು ಶ್ರು.ಪ್ರ.ದಲ್ಲಿ ವ್ಯಾಖ್ಯಾನಮಾಡಿದೆ. ಇವೆರಡಕ್ಕೂ ಸಮವ್ಯಾಪ್ತಿಯಿದೆ ಎಂಬರ್ಥವನ್ನು ಮಾಡಬಹುದೆ ?– ಎಂಬುದು ಯೋಚಿಸತಕ್ಕದ್ದಾಗಿದೆ. ಮೂಲದಲ್ಲಿಯೇ ಏನಾದರೂ ತ್ರುಟಿಯಾಗಿದ್ದರೂ ಇರಬಹುದು.

ಭೋಕ್ತುರಾತ್ಮನೋಽನ್ಯತ್ವಮಪಿ ಪ್ರಾಮಾಣಿಕಾನಾಂ ಪ್ರಸಿದ್ಧಮೇವ | ತಥಾ ಅಹಮರ್ಥಾತ್ ಜ್ಞಾತುರಪಿ ವಿಲಕ್ಷಣಃ ಸಾಕ್ಷೀ ಪ್ರತ್ಯಗಾತ್ಮಾ ಇತಿ ಪ್ರತಿಪತ್ತವ್ಯಮ್ ||

(ಅರ್ಥ)

(ಆಕ್ಷೇಪ) :– 'ನಾನು ಅರಿಯುತ್ತೇನೆ' ಎಂಬ ಜ್ಞಾತೃತೆಯು ಪ್ರತೀತಿಸಿದ್ಧವಲ್ಲವೆ ?

(ಪರಿಹಾರ) :– ಹಾಗಲ್ಲ, ಆ (ಜ್ಞಾತೃತ್ವವು) ಭ್ರಾಂತಿಸಿದ್ಧವಾದದ್ದು ; ಕಪ್ಪೆಯಚಿಪ್ಪಿನ ತುಂಡಿಗೆ ಬೆಳ್ಳಿಯಾಗಿರುವದೆಂಬುದರಂತೆ. ಏಕೆಂದರೆ ಅನುಭೂತಿಗೆ ತನ್ನ ವಿಷಯದಲ್ಲಿಯೇ ಕರ್ತೃತ್ವವು ಹೊಂದುವದಿಲ್ಲ.[1] ಆದ್ದರಿಂದ 'ನಾನು ಮನುಷ್ಯನು' ಎಂದು ಅತ್ಯಂತಬಾಹ್ಯವಾಗಿರುವ ಮನುಷ್ಯತ್ವಾದಿಗಳಿಂದೊಡಗೂಡಿರುವ ಶರೀರಾತ್ಮಾಭಿಮಾನದಂತೆ ಜ್ಞಾತೃತ್ವವೂ ಅಧ್ಯಸ್ತವಾಗಿರುತ್ತದೆ[2]. (ಹೇಗೆಂದರೆ) ಜ್ಞಾತೃತ್ವವೆಂದರೆ ಜ್ಞಾನಕ್ರಿಯೆಗೆ ಕರ್ತೃವಾಗಿರುವದು. ಅದು ವಿಕಾರಾತ್ಮಕವಾಗಿರುತ್ತದೆ, ಜಡವಾಗಿರುತ್ತದೆ; ವಿಕಾರಿಯಾದ ಅಹಂಕಾರಗ್ರಂಥಿ[3]ಯಲ್ಲಿರುತ್ತದೆಯಾಗಿ ಅವಿಕ್ರಿಯನಾದ ಚಿನ್ಮಾತ್ರನಾದ **ಸಾಕ್ಷಿಯಲ್ಲಿ[4]** ಹೇಗಿದ್ದೀತು? ಕರ್ತೃತ್ವವೇ ಮುಂತಾದದ್ದು ದ್ರಷ್ಟೃವಿಗೆ ಅಧೀನವಾದ ಸಿದ್ಧಿಯುಳ್ಳದ್ದಾದ್ದರಿಂದಲೇ ರೂಪಾದಿಗಳಂತೆ ಅನಾತ್ಮಧರ್ಮವು. **ಸುಷುಪ್ತಿ, ಮೂರ್ಛೆ– ಮುಂತಾದ (ಅವಸ್ಥೆಗಳಲ್ಲಿ)[5]** ಅಹಂಪ್ರತ್ಯಯವು ಹೋಗಿರುವಾಗಲೂ ಆತ್ಮಾನುಭವವು ಕಂಡುಬರುತ್ತಿರುವದರಿಂದ ಆತ್ಮನು ಅಹಂಪ್ರತ್ಯಯಕ್ಕೆ ಗೋಚರನಲ್ಲ. ಆತ್ಮನು ಕರ್ತೃವೆಂದೂ ಅಹಂಪ್ರತ್ಯಯಗೋಚರನೆಂದೂ ಒಪ್ಪಿದರೆ ದೇಹದಂತೆ ಅದಕ್ಕೂ ಜಡತ್ವ, ಬಾಹ್ಯತ್ವ, ಅನಾತ್ಮತ್ವ– ಮುಂತಾದವುಗಳು ಗಂಟುಬೀಳುವದನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವದಿಲ್ಲ. ಅಹಂಪ್ರತ್ಯಯಕ್ಕೆ ಗೋಚರವಾಗಿರುವ, ಕರ್ತೃವೆಂದು ಪ್ರಸಿದ್ಧವಾಗಿರುವ ದೇಹಕ್ಕಿಂತಲೂ ಅದರ ಕ್ರಿಯೆಯ ಫಲವಾದ ಸ್ವರ್ಗಾದಿಯನ್ನನುಭವಿಸುವ ಭೋಕ್ತೃವಾದ ಆತ್ಮನು ಬೇರೆ ಎಂಬುದು ಪ್ರಾಮಾಣಿಕರಿಗೆ[6] ಪ್ರಸಿದ್ಧವೇ

1. ತಾನೇ ಕ್ರಿಯೆಯ ಕರ್ತೃ, ಅದರ ಕರ್ಮವೂ ತಾನೇ ಎಂಬುದು ಹೊಂದುವದಿಲ್ಲ.

2. ಜ್ಞಾತೃತ್ವವು ಅಧ್ಯಸ್ತವೆಂಬುದನ್ನು ಅನುಭವಾನುಸಾರವಾಗಿ ಅಧ್ಯಾಸಭಾಷ್ಯದಲ್ಲಿ ತೋರಿಸಿಕೊಟ್ಟಿರುವದನ್ನು ಇಲ್ಲಿ ಏತಕ್ಕೆ ಅನುವಾದಮಾಡಿಕೊಂಡಿಲ್ಲವೋ ತಿಳಿಯದು.

3. ಅಹಂಕಾರದಲ್ಲಿ ಚಿತ್ತಲ್ಲದೆ ಅಚಿತ್ತಿನಂಶವೂ ಸೇರಿಕೊಂಡಿರುವದರಿಂದ ಅದನ್ನು 'ಗ್ರಂಥಿ' ಎಂದು ಅದ್ವೈತಿಗಳು ಕರೆಯುತ್ತಾರೆ.

4. ಸಾಕ್ಷಿಯ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

5. ಈ ಅವಸ್ಥೆಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

6. ಮೀಮಾಂಸಕರೇ ಮೊದಲಾದವರಿಗೆ ಶಾಸ್ತ್ರಪ್ರಮಾಣದಿಂದ ಅಹಂಪ್ರತ್ಯಯಗಮ್ಯನಾದ ಆತ್ಮನು ದೇಹಕ್ಕಿಂತ ಬೇರೆ ಎಂಬ ಜ್ಞಾನವಿರುತ್ತದೆ.

ಆಗಿರುತ್ತದೆ. ಅದರಂತೆಯೇ ಅಹಮರ್ಥವಾದ ಜ್ಞಾತೃವಿಗಿಂತಲೂ ವಿಲಕ್ಷಣ ನಾದ **ಸಾಕ್ಷಿಯೇ** ಪ್ರತ್ಯಗಾತ್ಮನೆಂದು ಅರಿಯಬೇಕು.[1]

(ಮೂಲ)

ಏವಮ್ ಅವಿಕ್ರಿಯಾನುಭವಸ್ವರೂಪಸ್ಯೈವಾಭಿವ್ಯಞ್ಜಕೋ ಜಡೋಽಪ್ಯಹಙ್ಕಾರಃ ಸ್ವಾಶ್ರಯತಯಾ ತಮಭಿವ್ಯನಕ್ತಿ । ಆತ್ಮಸ್ಥತಯಾ ಅಭಿವ್ಯಙ್ಗ್ಯಾಭಿವ್ಯಞ್ಜನಮಭಿವ್ಯಞ್ಜಕಾನಾಂ ಸ್ವಭಾವಃ । ದರ್ಪಣಜಲಖಣ್ಡಾದಿರ್ಹಿ ಮುಖಚನ್ದ್ರಬಿಮ್ಬ[2]ಗೋತ್ವಾದಿಕಮ್ ಆತ್ಮಸ್ಥತಯಾ ಅಭಿವ್ಯನಕ್ತಿ । ತತ್ಕೃತೋಽಯಂ 'ಜಾನಾಮ್ಯಹಮ್' ಇತಿ ಭ್ರಮಃ । 'ಸ್ವಪ್ರಕಾಶಾಯಾ ಅನುಭೂತೇಃ ಕಥಮಿವ ತದಭಿವ್ಯಙ್ಗ್ಯಜಡರೂಪಾಹಙ್ಕಾರೇಣ ಅಭಿವ್ಯಙ್ಗ್ಯತ್ವಮ್? ಇತಿ ಮಾ ವೋಚಃ । ರವಿಕರನಿಕರಾಭಿವ್ಯಙ್ಗ್ಯಕರತಲಸ್ಯ ತದಭಿವ್ಯಞ್ಜಕತ್ವದರ್ಶನಾತ್; ಜಾಲಕರನ್ಧ್ರನಿಷ್ಕ್ರಾನ್ತದ್ಯುಮಣಿಕಿರಣಾನಾಂ ತದಭಿವ್ಯಙ್ಗ್ಯೇನಾಪಿ ಕರತಲೇನ ಸ್ಫುಟತರಪ್ರಕಾಶೋ ಹಿ ದೃಷ್ಟಚರಃ ॥

ಯತಃ 'ಅಹಂ ಜಾನಾಮಿ' ಇತಿ ಜ್ಞಾತಾಽಯಮಹಮರ್ಥಶ್ಚಿನ್ಮಾತ್ರಾತ್ಮನೋ ನ ಪಾರಮಾರ್ಥಿಕೋ ಧರ್ಮಃ, ಅತ ಏವ ಸುಷುಪ್ತಿಮುಕ್ತ್ಯೋರ್ನಾನ್ವೇತಿ । ತತ್ರ ಹಿ, ಅಹಮರ್ಥೋಽಲ್ಲೇಖವಿಗಮೇನ ಸ್ವಾಭಾವಿಕಾನುಭವಮಾತ್ರರೂಪೇಣಾತ್ಮಾ ಅವಭಾಸತೇ । ಅತ ಏವ ಸುಪ್ತೋತ್ಥಿತಃ ಕದಾಚಿತ್ 'ಮಾಮಪ್ಯಹಂ ನ ಜ್ಞಾತವಾನ್' ಇತಿ ಪರಾಮೃಶತಿ ॥

(ಅರ್ಥ)

ಹೀಗೆ ವಿಕ್ರಿಯಾರಹಿತವಾದ, ಅನುಭವಸ್ವರೂಪಕ್ಕೇ ಅಭಿವ್ಯಂಜಕವಾದ ಅಹಂಕಾರವು ಜಡವಾಗಿದ್ದರೂ ತನಗೆ ಆಶ್ರಯವಾಗಿರುವದರಿಂದ ಆ (ಅನುಭವ) ವನ್ನು ಹೊರಪಡಿಸಿ ತಿಳಿಯಿಸುತ್ತದೆ. ಅಭಿವ್ಯಂಜಕ(ವಾದ ಪದಾರ್ಥ)ಗಳಿಗೆ ಅಭಿವ್ಯಂಗ್ಯವನ್ನು ತಮ್ಮಲ್ಲಿರುವಂತೆ ತೋರಿಸಿಕೊಡುವದು ಸ್ವಭಾವವು. ಕನ್ನಡಿ, ನೀರು, ಮುರಿದಕೋಡು– ಮುಂತಾದವು ಮುಖ, ಚಂದ್ರ, ಗೋತ್ವ– ಮುಂತಾದದ್ದನ್ನು ತಮ್ಮಲ್ಲಿರುವಂತೆ ತೋರಿಸುತ್ತವೆಯಲ್ಲವೆ, (ಹಾಗೆ). ಅದರಿಂದಾದದ್ದೇ 'ನಾನು ಅರಿಯುತ್ತೇನೆ' ಎಂಬೀ ಭ್ರಾಂತಿ. ಸ್ವಪ್ರಕಾಶವಾಗಿರುವ ಅನುಭೂತಿಯು ತನ್ನಿಂದ ಅಭಿವ್ಯಂಗ್ಯವಾಗಿರುವ ಜಡರೂಪವಾದ ಅಹಂಕಾರದಿಂದ ಅಭಿವ್ಯಂಗ್ಯ

1. ವೇದಾಂತಿಗಳಿಗೆ ಅಹಂಪ್ರತ್ಯಯಗಮ್ಯನಾದ ಆತ್ಮನಿಗಿಂತ ನಿಜವಾದ ಆತ್ಮನಾದ ಸಾಕ್ಷಿ ಬೇರೆ –ಎಂಬ ತಿಳಿವಳಿಕೆಯಿರುತ್ತದೆ ಎಂದು ಭಾವ.

2. 'ಮುಖಚನ್ದ್ರ' ಪಾ॥

ವಾಗಿದೆ ಎಂಬುದು ಹೇಗಾದೀತು[1] ?– ಎನ್ನದಿರು. ಏಕೆಂದರೆ ಸೂರ್ಯನ ಕಿರಣಗಳ ಸಮೂಹದಿಂದ ಅಭಿವ್ಯಕ್ತವಾಗುವ ಅಂಗೈಯು ಆ ಸೂರ್ಯಕಿರಣಸಮೂಹವನ್ನು ಅಭಿವ್ಯಕ್ತಿಗೊಳಿಸುವದು ಕಂಡುಬರುತ್ತದೆ; ಜಾಲಕರಂಧ್ರಗಳಿಂದ ತೂರಿಕೊಂಡು ಬಂದ ಸೂರ್ಯಕಿರಣಗಳು ಅವುಗಳಿಂದ ಅಭಿವ್ಯಕ್ತವಾಗುವ ಅಂಗೈಯಿಂದಲೂ ಸ್ಫುಟತರವಾಗಿ ಬೆಳಗುವದು ಕಂಡುಬರುತ್ತದೆಯಷ್ಟೆ ?

'ನಾನು ಅರಿಯುತ್ತೇನೆ' ಎಂದು ಅರಿಯುವ ಈ ಅಹಮರ್ಥವು ಚಿನ್ಮಾತ್ರನಾದ ಆತ್ಮನ ಪಾರಮಾರ್ಥಿಕಧರ್ಮವಲ್ಲವಾದ್ದರಿಂದಲೇ, ಸುಷುಪ್ತಿ, ಮುಕ್ತಿ– ಇವುಗಳಲ್ಲಿ ಅನುಸರಿಸಿಕೊಂಡುಬರುವದಿಲ್ಲ. ಅಲ್ಲಿ ಅಹಮರ್ಥವು ಎದ್ದು ತೋರಿಕೊಳ್ಳುವದು ಹೋಗಿ ಸ್ವಾಭಾವಿಕವಾದ ಅನುಭವಮಾತ್ರರೂಪದಿಂದಲೇ ಆತ್ಮನು ತೋರಿಕೊಳ್ಳುತ್ತಾನಲ್ಲವೆ ? ಆದ್ದರಿಂದ ನಿದ್ರಿಸಿ ಎಚ್ಚತ್ತವನು ಒಮ್ಮೊಮ್ಮೆ 'ನನ್ನನ್ನು ಕೂಡ ನಾನು ಅರಿಯಲಿಲ್ಲ' ಎಂದು ಪರಾಮರ್ಶಿಸುತ್ತಾನೆ.[2]

## ಬ್ರಹ್ಮಾತ್ಮೈಕತ್ವವನ್ನು ತಿಳಿಸುವದಕ್ಕೇ ಉಪನಿಷತ್ತುಗಳು ಹೊರಟಿವೆ

(ಮೂಲ)

೧೧. ತಸ್ಮಾತ್, ಪರಮಾರ್ಥತೋ ನಿರಸ್ತಸಮಸ್ತಭೇದವಿಕಲ್ಪನಿರ್ವಿಶೇಷಚಿನ್ಮಾತ್ರೈಕರಸಕೂಟಸ್ಥನಿತ್ಯಸಂವಿದೇವ ಭ್ರಾನ್ತ್ಯಾ ಜ್ಞಾತೃಜ್ಞೇಯಜ್ಞಾನರೂಪವಿವಿಧವಿಚಿತ್ರಭೇದಾ ವಿವರ್ತತೇ ಇತಿ ತನ್ಮೂಲಭೂತಾವಿದ್ಯಾನಿಬರ್ಹಣಾಯ ನಿತ್ಯಶುದ್ಧಬುದ್ಧಮುಕ್ತಸ್ವಭಾವಬ್ರಹ್ಮಾತ್ಮೈಕತ್ವವಿದ್ಯಾಪ್ರತಿಪತ್ತಯೇ ಸರ್ವೇ ವೇದಾನ್ತಾ ಆರಭ್ಯನ್ತೇ ಇತಿ ||

(ಅರ್ಥ)

ಆದ್ದರಿಂದ ಪರಮಾರ್ಥವಾಗಿ ಸಮಸ್ತಭೇದವಿಕಲ್ಪಗಳನ್ನೂ ನಿರಾಕರಿಸಿಕೊಂಡಿರುವ ನಿರ್ವಿಶೇಷಚಿನ್ಮಾತ್ರೈಕರಸವಾಗಿರುವ ಕೂಟಸ್ಥನಿತ್ಯಸಂವಿತ್ತೇ[3] ಭ್ರಾಂತಿಯಿಂದ ಜ್ಞಾತೃ, ಜ್ಞೇಯ, ಜ್ಞಾನ– ಎಂಬ ರೂಪದ ವಿವಿಧವಾದ ವಿಚಿತ್ರಭೇದಗಳುಳ್ಳದ್ದಾಗಿ ವಿವರ್ತವಾಗುತ್ತದೆ[4] ಯಾದ್ದರಿಂದ ಅದಕ್ಕೆ ಮೂಲವಾಗಿರುವ ಅವಿದ್ಯೆಯನ್ನು ನಾಶಗೊಳಿಸುವದಕ್ಕೆ ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳ

---

1. ಅನುಭವವೇ ಅಹಂಕಾರವನ್ನು ತೋರಿಸುತ್ತದೆ; ಹೀಗಿರುವಲ್ಲಿ ಅಭಿವ್ಯಂಗ್ಯವಾದ ಅಹಂಕಾರವು ಅನುಭವವನ್ನು ವ್ಯಕ್ತಗೊಳಿಸುತ್ತದೆ ಎಂಬುದು ಹೇಗಾದೀತು ?

2. ನಿದ್ರೆಯಿಂದ ಎಚ್ಚತ್ತವನ ನೆನಪಿನಬಗ್ಗೆ ಪರಿಶಿಷ್ಟವನ್ನು ನೋಡಿ.

3. ಅನುಭವವೇ.

4. 'ವಿವರ್ತ'ವೆಂಬ ಶಬ್ದವು ಅನುಶಾಂಕರಗ್ರಂಥಗಳಲ್ಲಿ ಪ್ರಚುರವಾಗಿದೆ; ಭಾಷ್ಯದಲ್ಲಿ ಕಾಣುವದಿಲ್ಲ.

ಬ್ರಹ್ಮಾತ್ಮನ ಏಕತ್ವವನ್ನು ತಿಳಿಯುವ ವಿದ್ಯೆಯನ್ನು ಪಡೆಯುವದಕ್ಕಾಗಿ ವೇದಾಂತಗಳೆಲ್ಲವೂ ಪ್ರಾರಂಭವಾಗಿರುತ್ತವೆ– ಎಂದು ಹೇಳುವರಲ್ಲ,[1]

## ಮಹಾಸಿದ್ಧಾಂತ

### ಚಿನ್ಮಾತ್ರಸ್ವರೂಪಬ್ರಹ್ಮಾತ್ಮವಾದವು ಪ್ರಾಮಾಣಿಕವಲ್ಲ

(ಮೂಲ)

೧೨. ತದಿದಮ್ ಔಪನಿಷದಪರಮಪುರುಷವರಣೀಯತಾಹೇತುಗುಣವಿಶೇಷವಿರಹಿಣಾಮ್ ಅನಾದಿಪಾಪವಾಸನಾದೂಷಿತಾಶೇಷಶೇಮುಷೀಕಾಣಾಮ್ ಅನಧಿಗತಪದವಾಕ್ಯಸ್ವರೂಪತದರ್ಥಯಾಥಾತ್ಮ್ಯಪ್ರತ್ಯಕ್ಷಾದಿಸಕಲಪ್ರಮಾಣವೃತ್ತತದಿತಿಕರ್ತವ್ಯತಾರೂಪಸಮೀಚೀನನ್ಯಾಯಮಾರ್ಗಾಣಾಮ್ ವಿಕಲ್ಪಾಸಹವಿವಿಧಕುತರ್ಕಕಲ್ಕಕಲ್ಪಿತಮ್ ಇತಿ ನ್ಯಾಯಾನುಗೃಹೀತಪ್ರತ್ಯಕ್ಷಾದಿಸಕಲಪ್ರಮಾಣವೃತ್ತಯಾಥಾತ್ಮ್ಯವಿದ್ಭಿರನಾದರಣೀಯಮ್ ॥

(ಅರ್ಥ)

ಉಪನಿಷತ್ತಿನಲ್ಲಿ ಮಾತ್ರವೇ ಹೇಳಿರುವ ಪರಮಪುರುಷನು ಆರಿಸಿಕೊಳ್ಳುವದಕ್ಕೆ ಕಾರಣವಾದ ಗುಣವಿಶೇಷಗಳಿಲ್ಲದವರೂ, ಅನಾದಿಪಾಪವಾಸನೆಯಿಂದ ದೂಷಿತವಾಗಿರುವ ಸರ್ವಾಂತಃಕರಣವುಳ್ಳವರೂ,[2] ವಾಕ್ಯಸ್ವರೂಪದ ಮತ್ತು ಅದರ ಅರ್ಥದ ತತ್ತ್ವವನ್ನು, ಪ್ರತ್ಯಕ್ಷವೇ ಮುಂತಾದ ಸಕಲಪ್ರಮಾಣಗಳ ವೃತ್ತ,[3] ಮತ್ತು ಅದರ ಇತಿಕರ್ತವ್ಯತಾರೂಪವಾದ ಸರಿಯಾದ ನ್ಯಾಯಮಾರ್ಗ–[4] ಇವನ್ನು ಅರಿಯದೆ ಇರುವವರೂ ಆಗಿರುವವರ, ಆ ಈ (ಪೂರ್ವಪಕ್ಷವು) ವಿಕಲ್ಪವನ್ನು ಸಹಿಸದೆ ಇರುವ ವಿವಿಧಕುತರ್ಕಕಲ್ಕದಿಂದ[5] ಕಲ್ಪಿತವಾಗಿರುವದರಿಂದ ನ್ಯಾಯಾನುಗೃಹೀತವಾದ ಪ್ರತ್ಯಕ್ಷಾದಿಸಕಲಪ್ರಮಾಣಗಳ ವೃತ್ತದ ಯಾಥಾತ್ಮ್ಯವನ್ನು ಬಲ್ಲವರು[6] ಆದರಿಸತಕ್ಕದ್ದಲ್ಲ.

---

1. ಆ ಈ ಪೂರ್ವಪಕ್ಷವು ಆದರಿಸತಕ್ಕದ್ದಲ್ಲ– ಎಂದು ವಾಕ್ಯವನ್ನು ಅನ್ವಯಿಸಿಕೊಳ್ಳಬೇಕು

2. ಜನ್ಮಾಂತರದಲ್ಲಿ ಪಾಪವನ್ನು ಮಾಡದೆಇದ್ದರೆ ಜೀವಪರಮಾತ್ಮರಿಬ್ಬರೂ ಒಂದೇ ಎಂದು ಇವರು ಹೇಳುತ್ತಿರಲಿಲ್ಲ ಎಂದು ಭಾವ.

3. ಪ್ರಮಾಣವೃತ್ತವೆಂದರೆ ಪ್ರಮಾಣದ ಸ್ವಭಾವ, ಪ್ರಮಾಣಗಳು ತಿಳಿಸುವ ಕ್ರಮ.

4. ನ್ಯಾಯವೆಂದರೆ ತರ್ಕ ; ತರ್ಕದಿಂದ ಪ್ರಮಾಣವನ್ನು ಶೋಧಿಸಿ ನಿರ್ಣಯಿಸುವ ಮಾರ್ಗವೂ ಈ ಪೂರ್ವಪಕ್ಷಿಗಳಿಗೆ ತಿಳಿಯದು ಎಂದರ್ಥ.

5. ನಿಸ್ಸಾರವಾದ ತರ್ಕದಿಂದ.

6. ತರ್ಕಾನುಗೃಹೀತಪ್ರಮಾಣವನ್ನು ಅನುಸರಿಸಿಯೇ ನಾವು ವಿಚಾರಮಾಡುತ್ತೇವೆ ; ಇವರಿಗೆ ಅದು ತಿಳಿಯದು ಎಂದರ್ಥ. ಪ್ರಮಾಣತರ್ಕಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ. ಶಾಂಕರಮತದಲ್ಲಿ ಪ್ರಮಾಣವನ್ನೂ ಅವಿದ್ಯಕವೆಂದಿದೆ ; ಪೀಠಿಕೆಯನ್ನು ನೋಡಿ.

## (೧) ನಿರ್ವಿಶೇಷವಸ್ತುವಿಗೆ ಪ್ರಮಾಣವೇ ಇಲ್ಲ, ಅದು ಅನುಭವಮಾತ್ರಸಿದ್ಧವಲ್ಲ

(ಮೂಲ)

ತಥಾ ಹಿ—

ನಿರ್ವಿಶೇಷವಸ್ತುವಾದಿಭಿಃ, ನಿರ್ವಿಶೇಷೇ ವಸ್ತುನಿ ಇದಂ ಪ್ರಮಾಣಮ್ ಇತಿ ನ ಶಕ್ಯತೇ ವಕ್ತುಮ್. ಸವಿಶೇಷವಸ್ತುವಿಷಯತ್ವಾತ್ ಸರ್ವಪ್ರಮಾಣಾನಾಮ್ । ಯಸ್ತು ಸ್ವಾನುಭವಸಿದ್ಧಮ್ ಇತಿ ಸ್ವಗೋಷ್ಠೀನಿಷ್ಠಸ್ಸಮಯಃ ಸೋಽಪಿ ಆತ್ಮಸಾಕ್ಷಿಕಸವಿಶೇಷಾನುಭವಾದೇವ ನಿರಸ್ತಃ । 'ಇದಮಹಮ್ ಅದರ್ಶಮ್' ಇತಿ ಕೇನಚಿದ್ ವಿಶೇಷೇಣ ವಿಶಿಷ್ಟವಿಷಯತ್ವಾತ್ ಸರ್ವೇಷಾಮ್ ಅನುಭವಾನಾಮ್ । ಸವಿಶೇಷೋಽಪ್ಯನುಭೂಯಮಾನೋಽನುಭವಃ ಕೇನಚಿದ್ ಯುಕ್ತ್ಯಾಭಾಸೇನ ನಿರ್ವಿಶೇಷ ಇತಿ ನಿಷ್ಕೃಷ್ಯಮಾಣಃ ಸತ್ತಾತಿರೇಕಿಭಿಃ ಸ್ವಾಸಾಧಾರಣೈಃ ಸ್ವಭಾವವಿಶೇಷೈಃ ನಿಷ್ಕ್ರಷ್ಟವ್ಯ ಇತಿ ನಿಷ್ಕರ್ಷಹೇತುಭೂತೈಃ ಸತ್ತಾತಿರೇಕಿಭಿಃ ಸ್ವಾಸಾಧಾರಣೈಃ ಸ್ವಭಾವವಿಶೇಷೈಃ ಸವಿಶೇಷ ಏವಾವತಿಷ್ಠತೇ । ಅತಃ ಕೈಶ್ಚಿದ್ ವಿಶೇಷೈರ್ವಿಶಿಷ್ಟಸ್ಯೈವ ವಸ್ತುನೋಽನ್ಯೇ ವಿಶೇಷಾ ನಿರಸ್ಯನ್ತ ಇತಿ ನ ಕ್ವಚಿನ್ನಿರ್ವಿಶೇಷವಸ್ತುಸಿದ್ಧಿಃ । ಧಿಯೋ ಹಿ ಧೀತ್ವಂ ಸ್ವಪ್ರಕಾಶತಾ ಚ ಜ್ಞಾತುಃ ವಿಷಯಪ್ರಕಾಶನಸ್ವಭಾವತಯಾ ಉಪಲಬ್ಧೇಃ ಸ್ವಾಪಮದಮೂರ್ಛಾಸು ಚ ಸವಿಶೇಷ ಏವಾನುಭವಃ– ಇತಿ ಸ್ವಾವಸರೇ ನಿಪುಣತರಮುಪಪಾದಯಿಷ್ಯಾಮಃ । ಸ್ವಾಭ್ಯುಪಗತಾಶ್ಚ ನಿತ್ಯತ್ವಾದಯೋ ಹ್ಯನೇಕೇ ವಿಶೇಷಾಃ ಸನ್ತ್ಯೇವ । ತೇ ಚ ನ 'ವಸ್ತುಮಾತ್ರಮ್' ಇತಿ ಶಕ್ಯೋಪಪಾದನಾಃ ; ವಸ್ತುಮಾತ್ರಾಭ್ಯುಪಗಮೇ ಸತ್ಯಪಿ ವಿಧಾಭೇದವಿವಾದದರ್ಶನಾತ್ । ಸ್ವಾಭಿಮತತದ್ವಿಧಾಭೇದೈಶ್ಚ ಸ್ವಮತೋಪಪಾದನಾತ್ ಅತಃ ಪ್ರಾಮಾಣಿಕವಿಶೇಷೈರ್ವಿಶಿಷ್ಟಮೇವ ವಸ್ತು– ಇತಿ ವಕ್ತವ್ಯಮ್ ॥

(ಅರ್ಥ)

ಇದು ಹೇಗೆಂದರೆ,

ವಸ್ತುವು ನಿರ್ವಿಶೇಷವೆಂದು ವಾದಿಸುವ ವಾದಿಗಳು ನಿರ್ವಿಶೇಷವಸ್ತುವಿಗೆ 'ಇದು ಪ್ರಮಾಣ' ಎಂದು ಹೇಳುವದಕ್ಕಾಗುವಂತಿಲ್ಲ ; ಏಕೆಂದರೆ ಎಲ್ಲಾ ಪ್ರಮಾಣಗಳಿಗೂ ಸವಿಶೇಷವಸ್ತುವೇ ವಿಷಯವಾಗಿರುತ್ತದೆ . (ಈ ವಸ್ತು) ಸ್ವಾನುಭವಸಿದ್ಧವು ಎಂದು ತಮ್ಮವರ ಗೋಷ್ಠಿಯಲ್ಲಿರುವವರ ಒಪ್ಪಿಗೆ ಇದೆಯಷ್ಟೆ? ಅದು ಕೂಡ ತಮಗೇ ಕಾಣಬರುತ್ತಿರುವ ಸವಿಶೇಷಾನುಭವದಿಂದ ನಿರಾಕೃತವಾಗುತ್ತದೆ ; ಏಕೆಂದರೆ ಎಲ್ಲಾ ಅನುಭವಗಳೂ 'ಇದನ್ನು ನಾನು ಕಂಡೆನು' ಎಂದು ಯಾವದಾದರೊಂದು ವಿಶೇಷದಿಂದ ವಿಶಿಷ್ಟವಾಗಿರುವ ವಿಷಯದಲ್ಲಿಯೇ ಆಗುತ್ತವೆ. ಸವಿಶೇಷ

1. ನಿರ್ವಿಶೇಷಾತ್ಮನು ಸ್ವತಃಸಿದ್ಧ, ವಿಷಯವಲ್ಲ, ಪ್ರಮಾಣಗಳು ಅವಿದ್ಯಾಸಿದ್ಧ – ಎಂದು ಅದ್ವೈತಿಗಳು ಹೇಳುವದನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ವೆಂದೇ ಅನುಭವದಲ್ಲಿರುವ ಅನುಭವವನ್ನೇ ಯಾವದೋ ಒಂದು ಯುಕ್ತ್ಯಾಭಾಸದಿಂದ ನಿರ್ವಿಶೇಷವು ಎಂದು ನಿಷ್ಕರ್ಷೆಮಾಡುವಾಗಲೂ ಸತ್ತಾಸಾಮಾನ್ಯಕ್ಕಿಂತ ಬೇರೆಯಾದ ತನಗೇ ಅಸಾಧಾರಣವಾಗಿರುವ (ಕೆಲವು) ಗೊತ್ತಾದ ಸ್ವಭಾವಗಳಿಂದ ನಿಷ್ಕರ್ಷೆಮಾಡಬೇಕಾಗಿರುವದರಿಂದ ಅಂಥ ನಿಷ್ಕರ್ಷೆಗೆ ಕಾರಣವಾಗಿರುವ ಸತ್ತಾಸಾಮಾನ್ಯವಾದ ತನಗೇ ಅಸಾಧಾರಣವಾಗಿರುವ ಸ್ವಭಾವವಿಶೇಷಗಳಿಂದಲೇ ಕೂಡಿರುವದರಿಂದ ಸವಿಶೇಷವಾಗಿಯೇ ಉಳಿದುಕೊಳ್ಳುತ್ತದೆ. ಆದ್ದರಿಂದ ಕೆಲಕೆಲವು ವಿಶೇಷಗಳಿಂದ ವಿಶಿಷ್ಟವಾಗಿರುವ ವಸ್ತುವಿಗೇ ಮಿಕ್ಕ ವಿಶೇಷಗಳನ್ನು ನಿರಾಕರಿಸುತ್ತಾರಾಗಿ, ಎಲ್ಲಿಯೂ ನಿರ್ವಿಶೇಷವಸ್ತುವು ಸಿದ್ಧವಾಗುವದಿಲ್ಲ. ಬುದ್ಧಿಯ ಬುದ್ಧಿತ್ವವೂ, ಜ್ಞಾತೃವಿನ ಸ್ವಪ್ರಕಾಶತ್ವವೂ ವಿಷಯವನ್ನು ಬೆಳಗುವ ಸ್ವಭಾವದಿಂದಲೇ (ಆಗಿರುತ್ತದೆ)[1].

ನಿದ್ರೆ, ಮದ, ಮೂರ್ಛೆ– ಈ ಅವಸ್ಥೆಗಳಲ್ಲಿಯೂ ಅನುಭವವು ಸವಿಶೇಷವೇ ಎಂದು (ಆ ವಿಷಯವನ್ನು ವಿಚಾರಮಾಡುವ) ಕಾಲಕ್ಕೆ ನಿಪುಣತರವಾಗಿ ಯುಕ್ತಿಗೆ ಹೊಂದಿಸಿ ತೋರಿಸುವೆವು.

ತಾವು ಒಪ್ಪಿರುವ ನಿತ್ಯತ್ವವೇ ಮುಂತಾದ ಅನೇಕ ವಿಶೇಷಗಳೂ (ಅನುಭವಕ್ಕೆ) ಇದ್ದೇಇರುತ್ತವೆ. ಅವು ಬರಿಯ ವಸ್ತುವಷ್ಟೇ ಎಂದು ಯುಕ್ತಿಯಿಂದ ತೋರಿಸುವದಕ್ಕೆ ಆಗುವಂತಿಲ್ಲ. (ಅದೆಲ್ಲ) ವಸ್ತುಮಾತ್ರವೇ ಎಂದು ಒಪ್ಪಿದರೂ (ಅವುಗಳ ಪ್ರಕಾರವಿಶೇಷಗಳ ವಿಷಯಕ್ಕೆ ವಿವಾದವು ಕಂಡುಬರುತ್ತದೆ, ತಮಗೆ ಒಪ್ಪಾಗಿರುವ ಆದರ ಪ್ರಕಾರವಿಶೇಷಗಳಿಂದ ತಮ್ಮ ಮತವನ್ನು ಯುಕ್ತಿಗೆ ಹೊಂದಿಸಿ ಸಾಧಿಸುತ್ತಿರುತ್ತಾರೆ.[2] ಆದ್ದರಿಂದ ವಸ್ತುವು ಪ್ರಾಮಾಣಿಕವಾಗಿರುವ ವಿಶೇಷಗಳಿಂದ ಕೂಡಿಯೇಇರುತ್ತದೆ– ಎಂದು ಹೇಳಬೇಕು.

## (೨) ಶಬ್ದಪ್ರಮಾಣವು ಸವಿಶೇಷವಸ್ತುವನ್ನೇ ಹೇಳೀತು

(ಮೂಲ)

ಶಬ್ದಸ್ಯ ತು ವಿಶೇಷೇಣ ಸವಿಶೇಷ ಏವ ವಸ್ತುನಿ ಅಭಿಧಾನಸಾಮರ್ಥ್ಯಮ್ । ಪದವಾಕ್ಯರೂಪೇಣ ಪ್ರವೃತ್ತೇಃ । ಪ್ರಕೃತಿಪ್ರತ್ಯಯಯೋಗೇನ ಹಿ ಪದತ್ವಮ್ । ಪ್ರಕೃತಿಪ್ರತ್ಯಯಯೋರರ್ಥಭೇದೇನ ಪದಸ್ಯೈವ ವಿಶಿಷ್ಟಾರ್ಥಪ್ರತಿಪಾದನಮ್ ಅವರ್ಜನೀಯಮ್ । ಪದಭೇದಶ್ಚ ಅರ್ಥಭೇದೇ ನಿಬನ್ಧನಃ, ಪದಸಙ್ಘಾತರೂಪಸ್ಯ

1. ಬುದ್ಧಿಯ ಬುದ್ಧಿತ್ವವಾಗಲಿ, ಜ್ಞಾತೃವಿನ ಸ್ವಪ್ರಕಾಶತ್ವವಾಗಲಿ ಸಿದ್ಧವಾಗಬೇಕಾದರೆ ಇದು ಇಂಥ ವಿಷಯವು ಎಂದು ಬೆಳಗಿತೋರಿಸುವದರಿಂದಲೇ ಸಿದ್ಧವಾಗುವದು; ಆದರಿಂದಲೇ ಸವಿಶೇಷತ್ವವು ಏರ್ಪಡುತ್ತದೆ ಎಂದರ್ಥ.

2. ಯಾವ ವಿಶೇಷವೂ ಇಲ್ಲದಿದ್ದರೆ ವಿವಾದಕ್ಕೇ ಕಾರಣವಿರುತ್ತಿರಲಿಲ್ಲ.

ವಾಕ್ಯಸ್ಯ ಅನೇಕಪದಾರ್ಥಸಂಸರ್ಗವಿಶೇಷಾಭಿಧಾಯಿತ್ವೇನ ನಿರ್ವಿಶೇಷವಸ್ತು ಪ್ರತಿಪಾದನಾಸಾಮರ್ಥ್ಯಾತ್ ನ ನಿರ್ವಿಶೇಷವಸ್ತುನಿ ಶಬ್ದಃ ಪ್ರಮಾಣಮ್ ॥

(ಅರ್ಥ)

ವಿಶೇಷವಾಗಿ ಶಬ್ದಕ್ಕಂತೂ ಸವಿಶೇಷವಸ್ತುವನ್ನೇ ಹೇಳುವ ಸಾಮರ್ಥ್ಯ ವಿದೆ[1]; ಏಕೆಂದರೆ (ಅದು) ಪದ, ವಾಕ್ಯ– ಇವುಗಳ ರೂಪದಿಂದಲೇ (ವಸ್ತುವನ್ನು ಹೇಳುವದಕ್ಕೆ) ತೊಡಗಿರುತ್ತದೆ. ಹೇಗೆಂದರೆ, ಪ್ರಕೃತಿ, ಪ್ರತ್ಯಯ– ಇವುಗಳು ಕೂಡಿರುವದೇ ಪದವು; ಪ್ರಕೃತಿಪ್ರತ್ಯಯಗಳೆರಡಕ್ಕೂ ಅರ್ಥವು ಬೇರೆಬೇರೆಯಾಗಿರು ವದರಿಂದ (ಮೊದಲನೆಯದಾಗಿ) ಪದವೇ ವಿಶಿಷ್ಟ(ಪದಾ)ರ್ಥವನ್ನು ಹೇಳುತ್ತದೆ ಎಂಬುದು ತಪ್ಪಿದ್ದಲ್ಲ. ಪದಗಳು ಬೇರೆಬೇರೆಯಾಗಿರುವದು ಅರ್ಥಗಳು ಬೇರೆಬೇರೆ ಯಾಗಿರುವದರಿಂದ. (ಇನ್ನು) ಪದಗಳ ಸಂಘಾತದ ರೂಪವಾಗಿರುವ ವಾಕ್ಯವಂತೂ ಅನೇಕಪದಾರ್ಥಗಳಿಂದ ವಿಶಿಷ್ಟವಾಗಿರುವ ವಿಷಯವನ್ನೇ ಹೇಳುವದರಿಂದ ನಿರ್ವಿಶೇಷವಸ್ತುವನ್ನು ಹೇಳುವದಕ್ಕೆ ಸಾಮರ್ಥ್ಯವಿಲ್ಲದ್ದರಿಂದ ನಿರ್ವಿಶೇಷ ವಸ್ತುವಿನ ವಿಷಯದಲ್ಲಿ ಶಬ್ದವು ಪ್ರಮಾಣವಲ್ಲ.

## (೩) ಪ್ರತ್ಯಕ್ಷವು ನಿರ್ವಿಶೇಷವಸ್ತುವಿಗೆ ಪ್ರಮಾಣವಲ್ಲ

(ಮೂಲ)

ಪ್ರತ್ಯಕ್ಷಸ್ಯ ನಿರ್ವಿಕಲ್ಪಕಸವಿಕಲ್ಪಕಭೇದಭಿನ್ನಸ್ಯ ನ ನಿರ್ವಿಶೇಷವಸ್ತುನಿ ಪ್ರಮಾಣಭಾವಃ । ಸವಿಕಲ್ಪಕಂ ಜಾತ್ಯಾದ್ಯನೇಕಪದಾರ್ಥವಿಶಿಷ್ಟವಿಷಯತ್ವಾ-ದೇವ ಸವಿಶೇಷವಿಷಯಮ್ । ನಿರ್ವಿಕಲ್ಪಕಮಪಿ ಸವಿಶೇಷವಿಷಯಮೇವ । ಸವಿ ಕಲ್ಪಕೇ ಸ್ವಸ್ಮಿನ್ನನುಭೂತಪದಾರ್ಥವಿಶಿಷ್ಟಪ್ರತಿಸಂಧಾನಹೇತುತ್ವಾತ್ । ನಿರ್ವಿ ಕಲ್ಪಕಂ ನಾಮ ಕೇನಚಿದ್ ವಿಶೇಷೇಣ ವಿಯುಕ್ತಸ್ಯ ಗ್ರಹಣಮ್, ನ ಸರ್ವ ವಿಶೇಷರಹಿತಸ್ಯ । ತಥಾಭೂತಸ್ಯ ಕದಾಚಿದಪಿ ಗ್ರಹಣಾದರ್ಶನಾತ್, ಅನುಪ-ಪತ್ತೇಶ್ಚ । ಕೇನಚಿದ್ ವಿಶೇಷೇಣ 'ಇದಮಿತ್ಥಮ್' ಇತಿ ಹಿ ಸರ್ವಾ ಪ್ರತೀತಿ ರುಪಜಾಯತೇ, ತ್ರಿಕೋಣಸಾಸ್ನಾದಿಸಂಸ್ಥಾನವಿಶೇಷೇಣ ವಿನಾ ಕಸ್ಯಚಿದಪಿ ಪದಾರ್ಥಸ್ಯ ಗ್ರಹಣಾಯೋಗಾತ್ । ಅತೋ ನಿರ್ವಿಕಲ್ಪಕಮ್ ಏಕಜಾತೀಯ ದ್ರವ್ಯೇಷು ಪ್ರಥಮಪಿಣ್ಡಗ್ರಹಣಮ್ । ದ್ವಿತೀಯಾದಿಪಿಣ್ಡಗ್ರಹಣಂ ಸವಿಕಲ್ಪಕಮ್ ಇತ್ಯುಚ್ಯತೇ । ತತ್ರ ಪ್ರಥಮಪಿಣ್ಡಗ್ರಹಣೇ ಗೋತ್ವಾದೇರನುವೃತ್ತಾಕಾರತಾ ನ ಪ್ರತೀಯತೇ, ದ್ವಿತೀಯಾದಿಪಿಣ್ಡಗ್ರಹಣೇಷ್ವೇವ ಅನುವೃತ್ತಿಪ್ರತೀತಿಃ । ಪ್ರಥಮ ಪ್ರತೀತ್ಯನುಸಂಹಿತವಸ್ತುಸಂಸ್ಥಾನರೂಪಗೋತ್ವಾದೇರನುವೃತ್ತಿಧರ್ಮವಿಶಿಷ್ಟತ್ವಂ

1. ಶಬ್ದವು ನಿರ್ವಿಶೇಷವಸ್ತುವನ್ನು ಹೇಳುವದಾದೀತೆ? –ಎಂಬ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ದ್ವಿತೀಯಾದಿಪಿಣ್ಡಗ್ರಹಣಾನಪೇಕ್ಷಮ್ ಇತಿ ದ್ವಿತೀಯಾದಿಗ್ರಹಣಸ್ಯ ಸವಿಕಲ್ಪಕತ್ವಮ್ । ಸಾಸ್ನಾದಿವಸ್ತುಸಂಸ್ಥಾನರೂಪಗೋತ್ವಾದೇರನುವೃತ್ತಿರ್ನ ಪ್ರಥಮಪಿಣ್ಡಗ್ರಹಣೇ ಗೃಹ್ಯತ ಇತಿ ಪ್ರಥಮಪಿಣ್ಡಗ್ರಹಣಸ್ಯ ನಿರ್ವಿಕಲ್ಪಕತ್ವಮ್, ನ ಪುನಃ ಸಂಸ್ಥಾನರೂಪಜಾತ್ಯಾದೇರಗ್ರಹಣಾತ್, ಸಂಸ್ಥಾನರೂಪಜಾತ್ಯಾದೇರಪಿ ಐನ್ದ್ರಿಯಿಕತ್ವಾವಿಶೇಷಾತ್ । ಸಂಸ್ಥಾನೇನ ವಿನಾ ಸಂಸ್ಥಾನಿನಃ ಪ್ರತೀತ್ಯನುಪಪತ್ತೇಶ್ಚ ಪ್ರಥಮಪಿಣ್ಡಗ್ರಹಣೇಽಪಿ ಸಸಂಸ್ಥಾನಮೇವ ವಸ್ತು 'ಇತ್ಥಮ್' ಇತಿ ಗೃಹ್ಯತೇ ॥

ಅತೋ ದ್ವಿತೀಯಾದಿಪಿಣ್ಡಗ್ರಹಣೇಷು ಗೋತ್ವಾದೇರನುವೃತ್ತಿಧರ್ಮವಿಶಿಷ್ಟತಾ ಸಂಸ್ಥಾನಿವತ್ ಸಂಸ್ಥಾನವಚ್ಚ ಸರ್ವದೈವ ಗೃಹ್ಯತೇ ಇತಿ ತೇಷು ಸವಿಕಲ್ಪಕತ್ವಮೇವ । ಅತಃ ಪ್ರತ್ಯಕ್ಷಸ್ಯ ಕದಾಚಿದಪಿ ನ ನಿರ್ವಿಶೇಷವಿಷಯತ್ವಮ್ ॥

(ಅರ್ಥ)

ಸವಿಕಲ್ಪಕ, ನಿರ್ವಿಕಲ್ಪಕ- ಎಂದು ಎರಡು ವಿಧವಾಗಿ ಭಿನ್ನವಾಗಿರುವ ಪ್ರತ್ಯಕ್ಷವು ನಿರ್ವಿಶೇಷವಸ್ತುವಿನ ವಿಷಯಕ್ಕೆ ಪ್ರಮಾಣವಲ್ಲ. ಸವಿಕಲ್ಪಕವು ಜಾತಿಯೇ ಮುಂತಾದ ಅನೇಕ ಪದಾರ್ಥಗಳಿಂದೊಡಗೂಡಿದ ವಿಷಯವನ್ನು ತಿಳಿಯಿಸತಕ್ಕದ್ದಾದ್ದರಿಂದಲೇ ಅದಕ್ಕೆ ಸವಿಶೇಷ(ವಸ್ತುವೇ) ವಿಷಯವು. ನಿರ್ವಿಕಲ್ಪಕಕ್ಕೂ ಸವಿಶೇಷ(ವಸ್ತು)ವೇ ವಿಷಯ ; ಏಕೆಂದರೆ (ಅದು) ತನ್ನಲ್ಲಿ ಅನುಭೂತ ಪದಾರ್ಥವಿಶಿಷ್ಟವಾದ ಸ್ಮರಣೆಯು ಸವಿಕಲ್ಪ(ಪ್ರತ್ಯಕ್ಷದಲ್ಲಿ) ಆಗುವದಕ್ಕೆ (ಅದು) ಕಾರಣವಾಗಿರುತ್ತದೆ. **ನಿರ್ವಿಕಲ್ಪಕವೆಂದರೆ** ಯಾವದಾದರೊಂದು ವಿಶೇಷವು ಇಲ್ಲದ್ದರ ಗ್ರಹಣವೇ ಹೊರತು ಯಾವ ವಿಶೇಷವೂ ಇಲ್ಲದ್ದರ ಗ್ರಹಣವಲ್ಲ ; ಏಕೆಂದರೆ ಅಂಥ (ವಸ್ತುವನ್ನು) ಗ್ರಹಿಸುವದು ಯಾವಾಗಲೂ ಕಂಡುಬಂದಿಲ್ಲ ; ಹೊಂದುವಂತೆಯೂ ಇಲ್ಲ. (ಏಕೆಂದರೆ) ಯಾವದಾದರೊಂದು ವಿಶೇಷವಿರುವದರಿಂದ 'ಇದು ಇಂಥದ್ದು' ಎಂದಲ್ಲವೆ, ಪ್ರತಿಯೊಂದು ಜ್ಞಾನವೂ ಆಗುತ್ತದೆ ? ತ್ರಿಕೋಣಾಕಾರ, ಗಂಗೆದೊಗಲು[1]- ಮುಂತಾದ ಆಕಾರವಿಶೇಷವಿಲ್ಲದೆ ಯಾವದೊಂದು ಪದಾರ್ಥದ ಗ್ರಹಣವೂ ಆಗುವಂತಿಲ್ಲ. ಆದ್ದರಿಂದ ಒಂದೇ ಜಾತಿಯ ದ್ರವ್ಯಗಳಲ್ಲಿ ಮೊದಲನೆಯಬಾರಿಗೆ ವಸ್ತುಶರೀರವನ್ನು ಗ್ರಹಿಸುವದು **ನಿರ್ವಿಕಲ್ಪಕ ;** ಎರಡನೆಯ ಸಲ- ಮುಂತಾಗಿ (ಮುಂದೆ) ವಸ್ತುಶರೀರವನ್ನು ಗ್ರಹಿ

1. ಮೊದಲು ವಸ್ತುವನ್ನು ನೋಡುವಾಗಲೂ ಅದರ (ಶುಕ್ತಿಯ) ತ್ರಿಕೋಣಾಕಾರ, (ಎತ್ತಿನ) ಗಂಗೆದೊಗಲು ಮುಂತಾದದ್ದು ಕಂಡೇಕಾಣುತ್ತದೆಯಾದರೂ ಎರಡನೆಯ, ಮೂರನೆಯ ಸಲ, ಅಥವಾ ಇನ್ನೊಂದು ಸಲ ನೋಡಿದಾಗ ಆ ಆಕಾರವು ಇದ್ದುಕೊಂಡೇ ಇದೆ ಎಂಬ ಬುದ್ಧಿಯುಂಟಾಗುತ್ತದೆ.

ಸುವದು **ಸವಿಕಲ್ಪಕವೆನಿಸುತ್ತದೆ.** ಅಲ್ಲಿ ಮೊದಲನೆಯಬಾರಿಗೆ ವಸ್ತುಶರೀರವನ್ನು ಗ್ರಹಿಸುವಾಗ ಗೋತ್ವವೇ ಮುಂತಾದದ್ದು ಅನುವರ್ತಿಸಿರುವಾಕಾರವು ತೋರುವದಿಲ್ಲ ; ಎರಡನೆಯದೇ ಮುಂತಾದ (ವಸ್ತು) ಶರೀರಗ್ರಹಣಗಳಲ್ಲಿಯೇ ಅನುವೃತ್ತಿಯ ಅರಿವು (ಆಗುತ್ತದೆ). ಮೊದಲನೆಯ ಪ್ರತೀತಿಯಲ್ಲಿ ಅರಿತ ವಸ್ತುವಿನಾಕಾರದ ರೂಪವಾದ ಗೋತ್ವವೇ ಮುಂತಾದದ್ದು ಧರ್ಮವಿಶಿಷ್ಟವಾಗಿರುವದು, ಎರಡನೆಯದೇ ಮುಂತಾದ ವಸ್ತುಶರೀರಗ್ರಹಣದಿಂದಲೇ ಆಗುವದರಿಂದ (ಆ) ಎರಡನೆಯದೇ ಮುಂತಾದ ವಸ್ತುಗ್ರಹಣವು 'ಸವಿಕಲ್ಪಕ'ವೆನಿಸುತ್ತದೆ ; ಗಂಗೆದೊಗಲೇ ಮುಂತಾದ ವಸ್ತುವಿನಾಕಾರರೂಪದ ಅನುವೃತ್ತಿಯು ಮೊದಲನೆಯ ವಸ್ತುಗ್ರಹಣದಲ್ಲಿ ಅರಿಯಬರುವದಿಲ್ಲವಾದ್ದರಿಂದ ಮೊದಲನೆಯ ವಸ್ತುಗ್ರಹಣವು **'ನಿರ್ವಿಕಲ್ಪಕ'ವು ;** ಇಷ್ಟೇ ಹೊರತು ಆಕಾರರೂಪವಾದ ಜಾತ್ಯಾದಿಗಳನ್ನು ಅರಿಯುವದಿಲ್ಲವೆಂಬ ಕಾರಣದಿಂದ ಅದು (ನಿರ್ವಿಕಲ್ಪಕ)ವಲ್ಲ. ಏಕೆಂದರೆ ಆಕಾರರೂಪವಾದ ಜಾತ್ಯಾದಿಗಳೂ ಇಂದ್ರಿಯಗೋಚರವೇ ಆಗಿರುವವೆಂಬುದು (ಅದಕ್ಕೂ) ಸಮಾನವಾಗಿರುತ್ತದೆ. ಆಕಾರವಿಲ್ಲದೆ ಆಕಾರವುಳ್ಳ (ವಸ್ತುವಿನ) ಅರಿವು ಆಗುವ ಹಾಗಿಲ್ಲವಾದ್ದರಿಂದಲೂ ಮೊದಲನೆಯ ವಸ್ತುಗ್ರಹಣದಲ್ಲಿಯೂ ಆಕಾರದೊಡನೆಯೇ 'ವಸ್ತುವು ಇಂಥದ್ದು' ಎಂದು ತಿಳಿಯಬರುತ್ತದೆ. ಆದ್ದರಿಂದ ಎರಡನೆಯದೇ ಮುಂತಾದ ವಸ್ತುಗ್ರಹಣಗಳಲ್ಲಿ ಗೋತ್ವವೇ ಮುಂತಾದವುಗಳ ಅನುವೃತ್ತಿಯ ಧರ್ಮದೊಡಗೂಡಿರುವದೆಂಬುದು ಆಕಾರವುಳ್ಳ ವಸ್ತುವಿನಂತೆಯೂ ಆಕಾರದಂತೆಯೂ ಯಾವಾಗಲೂ ಗೃಹೀತವಾಗಿಯೇತೀರುತ್ತದೆಯಾದ್ದರಿಂದ ಅವುಗಳಲ್ಲಿ ಸವಿಕಲ್ಪಕತ್ವವೇ ಇರುತ್ತದೆ. ಆದ್ದರಿಂದ ಪ್ರತ್ಯಕ್ಷವು ಎಂದಿಗೂ ನಿರ್ವಿಶೇಷವಸ್ತುವನ್ನು ವಿಷಯೀಕರಿಸುವದಿಲ್ಲ.[1]

## (೪) ಭೇದಾಭೇದವಾದದ ನಿರಾಕರಣೆ

(ಮೂಲ)

ಅತ ಏವ ಸರ್ವತ್ರ ಭಿನ್ನಾಭಿನ್ನತ್ವಮಪಿ ನಿರಸ್ತಮ್ । ಇದಮಿತ್ಥಮ್ ಇತಿ ಪ್ರತೀತೌ ಇದಮಿತ್ಥಂಭಾವಯೋರೈಕ್ಯಂ ಕಥಮಿವ ಪ್ರತ್ಯೇತುಂ ಶಕ್ಯತೇ ?

---

1. ಮೊದಲು ವಸ್ತುಮಾತ್ರವೇ ಗೃಹೀತವಾಗುವದರಿಂದ ಆ ಜ್ಞಾನವು ನಿರ್ವಿಕಲ್ಪಕವು, ಆಮೇಲೆ ವಿಶೇಷಗಳೂ ಕಾಣಿಸುವದರಿಂದ ಆ ಜ್ಞಾನಗಳು ಸವಿಕಲ್ಪಕ– ಎಂದು ಭಾವಿಸಬಾರದು ; ಮೊದಲೂ ವಿಶೇಷಗಳು ಕಂಡೇಕಾಣುತ್ತವೆ, ಎರಡನೆಯ ಗ್ರಹಣದಿಂದ ವಸ್ತುವಿನ ಜಾತಿಯೇ ಮುಂತಾದವುಗಳ ಅನುವೃತ್ತಿಯು ಪ್ರತೀತವಾಗುತ್ತದೆ. ಇಷ್ಟೇ ನಿರ್ವಿಕಲ್ಪಕ, ಸವಿಕಲ್ಪಕ– ಪ್ರತ್ಯಕ್ಷಗಳಿಗೆ ಇರುವ ಭೇದ. ಎರಡರಲ್ಲಿಯೂ ಸವಿಶೇಷವಸ್ತುವಿನ ಗ್ರಹಣವೇ ಆಗುತ್ತದೆ ಎಂದು ಅಭಿಪ್ರಾಯ. ಈ ಬಗ್ಗೆ ಪರಿಶಿಷ್ಟವನ್ನು ನೋಡಿ.

ತತ್ರ, ಇತ್ಥಂಭಾವಃ ಸಾಸ್ನಾದಿಸಂಸ್ಥಾನವಿಶೇಷಃ, ತದ್ವಿಶೇಷ್ಯಮ್ ದ್ರವ್ಯಮ್ ಇದಮಂಶಃ– ಇತ್ಯನಯೋರೈಕ್ಯಂ ಪ್ರತೀತಿಪರಾಹತಮೇವ | ತಥಾ ಹಿ ಪ್ರಥಮ ಮೇವ ವಸ್ತು ಪ್ರತೀಯಮಾನಂ ಸಕಲೇತರವ್ಯಾವೃತ್ತಮೇವ ಪ್ರತೀಯತೇ | ವ್ಯಾವೃತ್ತಿಶ್ಚ ಗೋತ್ವಾದಿಸಂಸ್ಥಾನವಿಶೇಷವಿಶಿಷ್ಟತಯಾ 'ಇತ್ಥಮ್' ಇತಿ ಪ್ರತೀತೇಃ | ಸರ್ವತ್ರ ವಿಶೇಷಣವಿಶೇಷ್ಯಭಾವಪ್ರತಿಪತ್ತೌ ತಯೋರತ್ಯನ್ತಭೇದಃ ಪ್ರತೀತ್ಯೈವ ಸುವ್ಯಕ್ತಃ | ತತ್ರ ದಣ್ಡಕುಣ್ಡಲಾದಯಃ ಪೃಥಕ್ಸಂಸ್ಥಾನಸಂಸ್ಥಿತಾಃ ಸ್ವನಿಷ್ಠಾಶ್ಚ ಕದಾಚಿತ್ ಕ್ವಚಿತ್ ದ್ರವ್ಯಾನ್ತರವಿಶೇಷಣತಯಾ ಅವತಿಷ್ಠನ್ತೇ | ಗೋತ್ವಾದಯಸ್ತು ದ್ರವ್ಯಸಂಸ್ಥಾನತಯೈವ ಪದಾರ್ಥಭೂತಾಸ್ಸನ್ತಃ ದ್ರವ್ಯವಿಶೇಷಣ ತಯಾ ಅವಸ್ಥಿತಾಃ | ಉಭಯತ್ರ ವಿಶೇಷಣವಿಶೇಷ್ಯಭಾವಃ ಸಮಾನಃ | ತತ ಏವ ತಯೋರ್ಭೇದಪ್ರತಿಪತ್ತಿಶ್ಚ | ಇಯಾಂಸ್ತು ವಿಶೇಷಃ — ಪೃಥಕ್ಸ್ಥಿತಿ ಪ್ರತಿಪತ್ತಿಯೋಗ್ಯಾ ದಣ್ಡಾದಯಃ, ಗೋತ್ವಾದಯಸ್ತು ನಿಯಮೇನ ತದನರ್ಹಾಃ- ಇತಿ | ಅತೋ ವಸ್ತುವಿರೋಧಃ ಪ್ರತೀತಿಪರಾಹತ ಇತಿ ಪ್ರತೀತಿಪ್ರಕಾರನಿಹ್ನವಾ ದೇವೋಚ್ಯತೇ | ಪ್ರತೀತಿಪ್ರಕಾರೋ ಹಿ 'ಇದಮಿತ್ಥಮ್' ಇತ್ಯೇವ ಸರ್ವಸಮ್ಮತಃ ತದೇತತ್ ಸೂತ್ರಕಾರೇಣ 'ನೈಕಸ್ಮಿನ್ನಸಂಭವಾತ್' (ಸೂ. ೨-೨-೩೧) ಇತಿ ಸುವ್ಯಕ್ತಮ್ ಉಪಪಾದಿತಮ್ ||

(ಅರ್ಥ)

ಆದ್ದರಿಂದಲೇ (ಈ) ಎಲ್ಲಾ ಕಡೆಯಲ್ಲಿಯೂ ಭಿನ್ನಾಭಿನ್ನತ್ವವಿದೆ[1] ಎಂಬು ದನ್ನು ನಿರಾಕರಿಸಿದಂತೆ ಆಯಿತು. 'ಇದು ಇಂಥದ್ದು' ಎಂಬ ಪ್ರತೀತಿಯಲ್ಲಿ ಇದು ಇಂಥದ್ದು– ಎಂಬಿವುಗಳಿಗೆ ಐಕ್ಯವನ್ನು ಹೇಗೆತಾನೆ ಅರಿಯುವದಕ್ಕೆ ಆದೀತು ? ಇವುಗಳೊಳಗೆ ಇತ್ಥಂಭಾವವು (ಇಂಥದ್ದು ಎಂಬುದು) ಗಂಗೆದೊಗಲೇ ಮುಂತಾದ ಆಕಾರವಿಶೇಷವು, ಅದರ ವಿಶೇಷ್ಯವಾದ ದ್ರವ್ಯವು 'ಇದು' ಎಂಬಂಶವು- ಎಂದಿರುವದರಿಂದ ಇವೆರಡಕ್ಕೂ ಐಕ್ಯವು ಪ್ರತೀತಿಯಿಂದಲೇ ಬಾಧಿತವೇ ಆಗಿರು ತ್ತದೆ.[2] ಹೇಗೆಂದರೆ– ಮೊಟ್ಟಮೊದಲೇ ವಸ್ತುವು ಜ್ಞಾತವಾಗುವಾಗ ಮಿಕ್ಕ ಎಲ್ಲಾ ವಸ್ತುಗಳಿಗಿಂತ ಭಿನ್ನವಾಗಿಯೇ ಪ್ರತೀತವಾಗುತ್ತದೆ. ಭೇದವೆಂಬುದು ಗೋತ್ವಾದಿಸಂಸ್ಥಾನದಿಂದ ವಿಶಿಷ್ಟವಾಗಿರುವದರಿಂದ 'ಇಂಥದ್ದು' ಎಂದು ತೋರು ವದರಿಂದ ಎಲ್ಲೆಲ್ಲಿಯೂ ವಿಶೇಷಣವಿಶೇಷ್ಯಭಾವದ ಅರಿವಾಗುತ್ತಿರುವಲ್ಲಿ ಅವು ಗಳೆರಡಕ್ಕೂ ಅತ್ಯಂತಭೇದವು ಪ್ರತೀತಿಯಿಂದಲೇ ಸುವ್ಯಕ್ತವು. ಇಲ್ಲಿ ದಂಡ,

---

1. ದ್ರವ್ಯ ಗುಣ, ಜಾತಿ ವ್ಯಕ್ತಿ– ಮುಂತಾದವುಗಳಲ್ಲಿ ಭೇದಾಭೇದವು ಕಾಣಿಸುತ್ತದೆ ಎಂದು ಭಾಸ್ಕರಮತ.

2. ಜಾತಿ, ವ್ಯಕ್ತಿ, ದ್ರವ್ಯ, ಗುಣ– ಎಂದು ಬೇರೆಬೇರೆಯಾಗಿಯೇ ಎರಡೂ ಕಾಣಿಸು ತ್ತಿರುವಲ್ಲಿ ಅವೆರಡೂ ಅಭಿನ್ನವೆಂಬುದು ಪ್ರತೀತಿಬಾಧಿತ.

ಕುಂಡಲ- ಮುಂತಾದವುಗಳು ಬೇರೆಯಾಗಿ ಆಕಾರದಿಂದಲೇ ತನ್ನಲ್ಲಿಯೇ ಇದ್ದು ಕೊಂಡು ಒಮ್ಮೊಮ್ಮೆ ಒಂದೊಂದುಕಡೆಯಲ್ಲಿ ಮತ್ತೊಂದು ದ್ರವ್ಯಕ್ಕೆ ವಿಶೇಷಣ ವಾಗಿರುತ್ತವೆ.[1] ಗೋತ್ವಾದಿಗಳಾದರೊ, ದ್ರವ್ಯದ ಆಕಾರವಾಗಿಯೇ ಪದಾರ್ಥ ಗಳಾಗಿದ್ದು ದ್ರವ್ಯವಿಶೇಷವಾಗಿರುತ್ತವೆ. ಎರಡು ಕಡೆಯಲ್ಲಿಯೂ ವಿಶೇಷಣವಿಶೇಷ್ಯ ಭಾವವು ಸಮಾನವಾಗಿರುತ್ತದೆ; ಅದರಿಂದಲೇ ಅವುಗಳ ಭೇದದ ಜ್ಞಾನವೂ (ಸಮಾನವಾಗಿರುತ್ತದೆ). ಆದರೆ ಇಷ್ಟು ವಿಶೇಷವಿದೆ : ದಂಡಾದಿಗಳು ಬೇರೆ ಇವೆ ಯೆಂಬ ಜ್ಞಾನಕ್ಕೆ ಯೋಗ್ಯವಾಗಿರುತ್ತವೆ, ಗೋತ್ವಾದಿಗಳಾದರೊ, ನಿಯಮವಾಗಿ ಆ (ಜ್ಞಾನಕ್ಕೆ) ಅನರ್ಹವಾಗಿರುತ್ತವೆ ; ಆದ್ದರಿಂದ 'ವಸ್ತುವಿರೋಧವು ಪ್ರತೀತಿ ಬಾಧಿತವಾಗಿದೆ' ಎಂದು ಪ್ರತೀತಿಪ್ರಕಾರವನ್ನು ಅಲ್ಲಗಳೆಯುವದರಿಂದಲೇ ಹೇಳು ತ್ತಿದೀರಿ. 'ಇದು ಇಂಥದ್ದು' ಎಂದೇ ಪ್ರತೀತಿಪ್ರಕಾರವಿರುತ್ತದೆ ಎಂಬುದು ಸರ್ವ ರಿಗೂ ಸಮ್ಮತವಷ್ಟೆ[2] ? ಆ ಇದನ್ನು ಸೂತ್ರಕಾರರು 'ನೈಕಸ್ಮಿನ್ನಸಂಭವಾತ್' (ಸೂ. ೨-೩-೩೧) ಎಂದು ಸುವ್ಯಕ್ತವಾಗಿ ಯುಕ್ತಿಗೆ ಹೊಂದಿಸಿ ಹೇಳಿರುತ್ತಾರೆ.[3]

## (೫) ಅನುಮಾನಕ್ಕೆ ಸವಿಶೇಷವಸ್ತುವೇ ವಿಷಯ

(ಮೂಲ)

ಅತಃ ಪ್ರತ್ಯಕ್ಷಸ್ಯ ಸವಿಶೇಷವಿಷಯತ್ವೇನ ಪ್ರತ್ಯಕ್ಷಾದಿದೃಷ್ಟಸಂಬನ್ಧವಿಶಿಷ್ಟ ವಿಷಯತ್ವಾತ್, ಅನುಮಾನಮಪಿ ಸವಿಶೇಷವಿಷಯಮೇವ। ಪ್ರಮಾಣಸಙ್ಖ್ಯಾ ವಿವಾದೇಽಪಿ ಸರ್ವಾಭ್ಯುಪಗತಪ್ರಮಾಣಾನಾಮ್ ಅಯಮೇವ ವಿಷಯಃ ಇತಿ ನ ಕೇನಾಪಿ ಪ್ರಮಾಣೇನ ನಿರ್ವಿಶೇಷವಸ್ತುಸಿದ್ಧಿಃ। ವಸ್ತುಗತಸ್ವಭಾವವಿಶೇಷೈ ಸ್ತ್ರದೇವ ವಸ್ತು ನಿರ್ವಿಶೇಷಮ್ ಇತಿ ವದನ್ ಜನನೀವನ್ಧ್ಯಾತ್ವಪ್ರತಿಜ್ಞಾಯಾ ಮಿವ ಸ್ವವಾಗ್ವಿರೋಧಮಪಿ ನ ಜಾನಾತಿ ॥

(ಅರ್ಥ)

ಆದ್ದರಿಂದ ಪ್ರತ್ಯಕ್ಷಕ್ಕೆ ಸವಿಶೇಷವೇ ವಿಷಯವಾಗಿರುವದರಿಂದ, ಪ್ರತ್ಯಕ್ಷಾದಿ ಗಳಿಂದ ದೃಷ್ಟವಾದ ಸಂಬಂಧದಿಂದ ವಿಶಿಷ್ಟವಾದದ್ದನ್ನೇ ಹೇಳುವ ಕಾರಣ ಅನು

---

1. ದಂಡವು ಸ್ವತಂತ್ರವಾಗಿಯೂ ಇದ್ದು ದಂಡಧಾರಿಯಾದವನಿಗೆ ವಿಶೇಷಣ ; ಕುಂಡಲವೂ ಹಾಗೆಯೇ ಕುಂಡಲವುಳ್ಳಾತನಿಗೆ ವಿಶೇಷಣ.

2. ಆದ್ದರಿಂದ ಸವಿಶೇಷವಾಗಿಯೇ ವಸ್ತುಪ್ರತೀತಿಯಾಗುತ್ತದೆ ಎಂದಾಯಿತು.

3. ದ್ರವ್ಯವೂ ಅದರ ವಿಶೇಷವೂ ಬೇರೆಬೇರೆಯ ಪದಾರ್ಥಗಳಾದ್ದರಿಂದ ಒಂದೇ ವಸ್ತುವಿನಲ್ಲಿ ವಿರುದ್ಧಧರ್ಮಗಳಿರಲಾರವು ಎಂದು ಸೂತ್ರಕ್ಕೆ ಅರ್ಥ. ಆ ಸೂತ್ರದಲ್ಲಿ ವಸ್ತುವು ವಿಶೇಷ್ಯವಿಶೇಷಣರೂಪವಾಗಿಯೇ ತೋರುತ್ತದೆ- ಎಂಬುದನ್ನು ಒಪ್ಪಿ ಜೈನಮತ ವನ್ನು ಖಂಡಿಸಿದೆ- ಎಂದು ಭಾವ.

ಮಾನಕ್ಕೂ ಸವಿಶೇಷವೇ ವಿಷಯವು. ಪ್ರಮಾಣಗಳ ಸಂಖ್ಯೆಯ ವಿಷಯಕ್ಕೆ (ವಾದಿಗಳಲ್ಲಿ) ವಿವಾದವಿದ್ದರೂ[1] ಎಲ್ಲರೂ ಒಪ್ಪಿರುವ ಪ್ರಮಾಣಗಳಿಗೆ ಈ (ಸವಿಶೇಷವೇ) ವಿಷಯವಾದ್ದರಿಂದ ಯಾವ ಪ್ರಮಾಣದಿಂದಲೂ ನಿರ್ವಿಶೇಷವಸ್ತುವಿನ ಸಿದ್ಧಿಯಿಲ್ಲ. ವಸ್ತುವಿನಲ್ಲಿರುವ ಸ್ವಭಾವವಿಶೇಷಗಳಿಂದ, ಅದೇ ವಸ್ತುವು ನಿರ್ವಿಶೇಷವು ಎಂದು ಹೇಳುವಾತನು 'ನನ್ನ ತಾಯಿ ಬಂಜೆ' ಎಂಬ ಪ್ರತಿಜ್ಞೆಯಲ್ಲಿರುವಂತೆ ತನ್ನ ಮಾತಿನಲ್ಲಿಯೇ ಇರುವ ವಿರೋಧವನ್ನು ಕೂಡ ಅರಿಯದೆಇರುತ್ತಾನೆ.

## (೬) ಪ್ರತ್ಯಕ್ಷವು ಸನ್ಮಾತ್ರವಿಷಯವಲ್ಲ, ಭೇದವು ದುರ್ನಿರೂಪವಲ್ಲ

(ಮೂಲ)

ಯತ್ತು ಪ್ರತ್ಯಕ್ಷಂ ಸನ್ಮಾತ್ರಗ್ರಾಹಿತ್ವೇನ ನ ಭೇದವಿಷಯಮ್, ಭೇದಶ್ಚ ವಿಕಲ್ಪಾಸಹತ್ವಾದ್ ದುರ್ನಿರೂಪಃ ಇತ್ಯುಕ್ತಮ್, ತದಪಿ ಜಾತ್ಯಾದಿವಿಶಿಷ್ಟಸ್ಯೈವ ವಸ್ತುನಃ ಪ್ರತ್ಯಕ್ಷವಿಷಯತ್ವಾತ್ ಜಾತ್ಯಾದೇರೇವ ಪ್ರತಿಯೋಗ್ಯಪೇಕ್ಷಯಾ ವಸ್ತುನಃ ಸ್ವಸ್ಯ ಚ ಭೇದವ್ಯವಹಾರಹೇತುತ್ವಾಚ್ಚ ದೂರೋತ್ಸಾರಿತಮ್ । ಸಂವೇದನವತ್ ರೂಪಾದಿವಚ್ಚ ಪರತ್ರ ವ್ಯವಹಾರವಿಶೇಷಹೇತೋಃ, ಸ್ವಸ್ಮಿನ್ನಪಿ ತದ್ವ್ಯವಹಾರಹೇತುತ್ವಂ ಯುಷ್ಮಾಭಿರಭ್ಯುಪೇತಂ ಭೇದಸ್ಯಾಪಿ ಸಂಭವತ್ಯೇವ । ಅತ ಏವ ಚ ನಾನವಸ್ಥಾ ಅನ್ಯೋನ್ಯಾಶ್ರಯಣಂ ಚ । ಏಕಕ್ಷಣವರ್ತಿತ್ವೇಽಪಿ ಪ್ರತ್ಯಕ್ಷಜ್ಞಾನಸ್ಯ ತಸ್ಮಿನ್ನೇವ ಕ್ಷಣೇ ವಸ್ತುಭೇದರೂಪತತ್ಸಂಸ್ಥಾನರೂಪಗೋತ್ವಾದೇರ್ಗೃಹೀತತ್ವಾತ್ ಕ್ಷಣಾನ್ತರಗ್ರಾಹ್ಯಂ ನ ಕಿಞ್ಚಿದಿಹ ತಿಷ್ಠತಿ ॥

(ಅರ್ಥ)

ಇನ್ನು 'ಪ್ರತ್ಯಕ್ಷವು ಸನ್ಮಾತ್ರವನ್ನೇ ಗ್ರಹಿಸುವದರಿಂದ ಅದಕ್ಕೆ ಭೇದವು ವಿಷಯವಲ್ಲ; ಭೇದವು ಯಾವ ವಿಕಲ್ಪಕ್ಕೂ[2] ಹೊಂದುವಂತಿಲ್ಲವಾದ್ದರಿಂದ ದುರ್ನಿರೂಪವಾಗಿದೆ' ಎಂದಿರಲ್ಲ, ಅದನ್ನು ದೂರವಾಗಿ ಎಸೆದುಬಿಟ್ಟಂತಾಯಿತು; ಏಕೆಂದರೆ ಜಾತ್ಯಾದಿವಿಶಿಷ್ಟವಸ್ತುವೇ ಪ್ರತ್ಯಕ್ಷಕ್ಕೆ ವಿಷಯವಾಗಿರುತ್ತದೆ, ಜಾತಿಯೇ ಮುಂತಾದದ್ದೇ ಪ್ರತಿಯೋಗಿಯ ಅಪೇಕ್ಷೆಯಿಂದ ವಸ್ತುವಿನ ಮತ್ತು ತನ್ನ ಭೇದ ವ್ಯವಹಾರಕ್ಕೆ ಹೇತುವಾಗಿರುತ್ತದೆ.[3] ಜ್ಞಾನದಂತೆಯೂ ರೂಪಾದಿಗಳಂತೆಯೂ

1. ಪ್ರತ್ಯಕ್ಷವೊಂದೇ ಪ್ರಮಾಣವೆಂದು ಚಾರ್ವಾಕರು; ಪ್ರತ್ಯಕ್ಷ, ಅನುಮಾನ– ಎರಡೂ ಪ್ರಮಾಣವೆಂದು ಬೌದ್ಧರು; ಪ್ರತ್ಯಕ್ಷ, ಅನುಮಾನ, ಆಪ್ತವಾಕ್ಯ– ಮೂರೂ ಪ್ರಮಾಣವೆಂದು ಸಾಂಖ್ಯರು– ಇತ್ಯಾದಿ. ಪ್ರಮಾಣಗಳು ಇಷ್ಟೆಂಬ ವಿಷಯಕ್ಕೆ ಹೀಗೆ ವಿವಾದವಿದ್ದರೂ ಎಂದರ್ಥ.

2. ಅದು ವಸ್ತುವಿನ ಸ್ವರೂಪವೊ, ಧರ್ಮವೊ?– ಎಂಬೀ ಎರಡರಲ್ಲಿ ಒಂದಕ್ಕೆ.

3. ಗೋತ್ವವೇ ಮುಂತಾದ ಜಾತಿಯು ಗೋವಿನಲ್ಲಿಯೂ ತನ್ನಲ್ಲಿಯೂ ಮತ್ತೊಂದಕ್ಕಿಂತ ಇದು ಭಿನ್ನ ಎಂಬ ವ್ಯವಹಾರಹೇತುವಾಗಿರುತ್ತದೆ. ಎತ್ತು ಕೋಣವಲ್ಲ, ಗೋತ್ವಜಾತಿಯು ಮಹಿಷತ್ವವಲ್ಲ– ಎಂಬ ಭೇದವ್ಯವಹಾರಕ್ಕೆ ಗೋತ್ವವೇ ಸಾಕು.

ಮತ್ತೊಂದರಲ್ಲಿ ವಿಶೇಷವ್ಯವಹಾರಕ್ಕೆ ಹೇತುವಾಗಿರುವದು ತನ್ನಲ್ಲಿಯೂ ಆ ವ್ಯವಹಾರಕ್ಕೆ ಹೇತುವಾಗಿರಬಹುದೆಂದು ನೀವೂ ಒಪ್ಪಿರುವದು ಭೇದಕ್ಕೂ ಸಂಭವಿಸಲೇ ಬಹುದಾಗಿದೆ.[1] ಆದ್ದರಿಂದಲೇ ಅನವಸ್ಥೆಯಾಗಲಿ ಅನ್ಯೋನ್ಯಾಶ್ರಯವಾಗಲಿ ಆಗುವಂತಿಲ್ಲ.[2] ಪ್ರತ್ಯಕ್ಷಜ್ಞಾನವು ಒಂದು ಕ್ಷಣಮಾತ್ರವೇ ಇರತಕ್ಕದ್ದಾದರೂ[3] ಅದೇ ಕ್ಷಣದಲ್ಲಿಯೇ ವಸ್ತುವಿನ ಭೇದರೂಪವಾದ ಮತ್ತು ಅದರ ಆಕಾರರೂಪವಾದ ಗೋತ್ವಾದಿಗಳನ್ನು ಗ್ರಹಿಸಿಬಿಟ್ಟಿರುವದರಿಂದ, ಇಲ್ಲಿ ಮತ್ತೊಂದು ಕ್ಷಣದಲ್ಲಿ ಗ್ರಹಿಸಬೇಕಾಗಿರುವದು ಏನೂ ಉಳಿದಿರುವದಿಲ್ಲ.[4]

(ಮೂಲ)

ಅಪಿ ಚ ಸನ್ಮಾತ್ರಗ್ರಾಹಿತ್ವೇ 'ಘಟೋಽಸ್ತಿ', 'ಪಟೋಽಸ್ತಿ' ಇತಿ ವಿಶಿಷ್ಟವಿಷಯಾ ಪ್ರತೀತಿರ್ವಿರುಧ್ಯತೇ । ಯದಿ ಚ ಸನ್ಮಾತ್ರಾತಿರೇಕಿವಸ್ತುಸಂಸ್ಥಾನರೂಪಜಾತ್ಯಾದಿಲಕ್ಷಣೋ ಭೇದಃ ಪ್ರತ್ಯಕ್ಷೇಣ ನ ಗೃಹೀತಃ ಕಿಮಿತ್ಯಶ್ವಾರ್ಥೀ ಮಹಿಷದರ್ಶನೇನ ನಿವರ್ತತೇ? ಸರ್ವಾಸು ಪ್ರತಿಪತ್ತಿಷು ಸನ್ಮಾತ್ರಮೇವ ವಿಷಯಶ್ಚೇತ್, ತತ್ತತ್ಪ್ರತಿಪತ್ತಿವಿಷಯಸಹಚಾರಿಣಃ ಸರ್ವೇ ಶಬ್ದಾಃ ಏಕೈಕಪ್ರತಿಪತ್ತಿಷು ಕಿಮಿತಿ ನ ಸ್ಮರ್ಯನ್ತೇ? ಕಿಞ್ಚ ಅಶ್ವೇ ಹಸ್ತಿನಿ ಚ ಸಂವೇದನಯೋರೇಕವಿಷಯತ್ವೇನ ಉಪರಿತನಸ್ಯ ಗೃಹೀತಗ್ರಾಹಿತ್ವಾದ್ ವಿಶೇಷಾಭಾವಾಚ್ಚ ಸ್ಮೃತಿವೈಲಕ್ಷಣ್ಯಂ ನ ಸ್ಯಾತ್ । ಪ್ರತಿಸಂವೇದನಂ ವಿಶೇಷಾಭ್ಯುಪಗಮೇ ಪ್ರತ್ಯಕ್ಷಸ್ಯ ವಿಶಿಷ್ಟಾರ್ಥವಿಷಯತ್ವಮೇವಾಭ್ಯುಪಗತಂ ಭವತಿ । ಸರ್ವೇಷಾಂ ಸಂವೇದನಾನಾಮ್ ಏಕವಿಷಯತಾಯಾಮ್ ಏಕೇನೈವ ಸಂವೇದನೇನ ಅಶೇಷಗ್ರಹಣಾತ್ ಅನ್ಧಬಧಿರಾದ್ಯಭಾವಶ್ಚ ಪ್ರಸಜ್ಯೇತ । ನ ಚ ಚಕ್ಷುಷಾ ಸನ್ಮಾತ್ರಂ ಗೃಹ್ಯತೇ, ತಸ್ಯ ರೂಪರೂಪಿರೂಪೈಕಾರ್ಥಸಮವೇತಪದಾರ್ಥಗ್ರಾಹಿತ್ವಾತ್ । ನಾಪಿ ತ್ವಚಾ ಸ್ಪರ್ಶವದ್ವಸ್ತುವಿಷಯತ್ವಾತ್ । ಶ್ರೋತ್ರಾದೀನ್ಯಪಿ ನ ಸನ್ಮಾತ್ರವಿಷಯಾಣಿ; ಕಿಂ ತು ಶಬ್ದರಸಗನ್ಧಲಕ್ಷಣವಿಶೇಷವಿಷಯಾಣ್ಯೇವ ॥

---

1. ಘಟವು ಪಟವಲ್ಲ, ಘಟಜ್ಞಾನವು ಪಟಜ್ಞಾನವಲ್ಲ– ಎಂಬ ವ್ಯವಹಾರಕ್ಕೆ ಘಟಜ್ಞಾನವೇ ಹೇತು; ಘಟವು ಪಟವಲ್ಲ, ಘಟರೂಪವು ಪಟರೂಪವಲ್ಲ– ಎಂಬ ವ್ಯವಹಾರವು ಅಷ್ಟರಿಂದಲೇ ಆಗಬಹುದು. ಸ್ವಪರನಿರ್ವಾಹಕಪದಾರ್ಥಗಳನ್ನು ನೀವೂ ಒಪ್ಪಿಯೇ ಇರುತ್ತೀರಷ್ಟೆ?

2. ಈ ದೋಷಗಳನ್ನು ಪೂರ್ವಪಕ್ಷಿ (ಪು. ೫೮ರಲ್ಲಿ) ಹೇಳಿದ್ದನು.

3. ಶಬ್ದಬುದ್ಧಿಕರ್ಮಗಳು ಹುಟ್ಟಿದಮೇಲೆ ಒಂದೇ ಕ್ಷಣವಿದ್ದು ನಾಶವಾಗುತ್ತವೆ ಎಂದು ತಾರ್ಕಿಕರ ಮತ.

4. ಯಾವ ಸಮಯದಲ್ಲಿ ಪ್ರತ್ಯಕ್ಷಜ್ಞಾನವಾಗುತ್ತದೆಯೋ ಆಗಲೇ ಜಾತಿಯ ಜ್ಞಾನವೂ ಆಗಿಬಿಟ್ಟಿರುತ್ತದೆ. ವಸ್ತುವನ್ನೂ ವಸ್ತುವಿನ ಭೇದವಾದ ಜಾತಿಯನ್ನೂ ಅದೇ ಕ್ಷಣದಲ್ಲಿ ಗ್ರಹಿಸಿರುವದರಿಂದ ಭೇದವನ್ನು ಗ್ರಹಿಸುವದಕ್ಕೆ ಜ್ಞಾನವು ಮತ್ತೊಂದು ಕ್ಷಣವಿರಬೇಕಾದದ್ದಿಲ್ಲ.

ಅತಃ ಸನ್ಮಾತ್ರಸ್ಯ ಗ್ರಾಹಕಂ ನ ಕಿಞ್ಚಿದಿಹ ದೃಶ್ಯತೇ। ನಿರ್ವಿಶೇಷ ಸನ್ಮಾತ್ರಸ್ಯ ಪ್ರತ್ಯಕ್ಷೇಣೈವ ಗ್ರಹಣೇ ತದ್ವಿಷಯಾಗಮಸ್ಯ ಪ್ರಾಪ್ತವಿಷಯತ್ವೇನ ಅನುವಾದಕತ್ವಮೇವ ಸ್ಯಾತ್। ಸನ್ಮಾತ್ರಬ್ರಹ್ಮಣಃ ಪ್ರಮೇಯಭಾವಶ್ಚ। ತತೋ ಜಡತ್ವನಾಶಿತ್ವಾದಯಸ್ತ್ವಯೈವೋಕ್ತಾಃ.। ಅತೋ ವಸ್ತುಸಂಸ್ಥಾನರೂಪ ಜಾತ್ಯಾದಿಲಕ್ಷಣಭೇದವಿಶಿಷ್ಟವಿಷಯಮೇವ ಪ್ರತ್ಯಕ್ಷಮ್। ಸಂಸ್ಥಾನಾತಿರೇಕಿಣೋಽನೇಕೇಷು ಏಕಾಕಾರಬುದ್ಧಿಬೋಧ್ಯಸ್ಯಾದರ್ಶನಾತ್। ತಾವತೈವ ಗೋತ್ವಾದಿಜಾತಿ ವ್ಯವಹಾರೋಪಪತ್ತೇಃ ಅತಿರೇಕವಾದೇಽಪಿ ಸಂಸ್ಥಾನಸ್ಯ ಸಂಪ್ರತಿಪನ್ನತ್ವಾಚ್ಚ ಸಂಸ್ಥಾನಮೇವ ಜಾತಿಃ ॥

ಸಂಸ್ಥಾನಂ ನಾಮ ಸ್ವಾಸಾಧಾರಣಂ ರೂಪಮ್ ಇತಿ ಯಥಾವಸ್ತು ಸಂಸ್ಥಾನಮ್ ಅನುಸನ್ಧೇಯಮ್। ಜಾತಿಗ್ರಹಣೇನೈವ 'ಭಿನ್ನಃ' ಇತಿ ವ್ಯವಹಾರ ಸಂಭವಾತ್, ಪದಾರ್ಥಾನ್ತರಾದರ್ಶನಾತ್, ಅರ್ಥಾನ್ತರವಾದಿನಾಪಿ ಅಭ್ಯುಪಗತ ತ್ವಾಚ್ಚ ಗೋತ್ವಾದಿರೇವ ಭೇದಃ ॥

(ಅರ್ಥ)

ಇದಲ್ಲದೆ, (ಪ್ರತ್ಯಕ್ಷವು) ಸನ್ಮಾತ್ರವನ್ನೇ ಗ್ರಹಿಸುವದೆಂದಾದರೆ 'ಘಟವಿದೆ', 'ಪಟವಿದೆ' ಎಂದು ವಿಶಿಷ್ಟವಸ್ತುವಿನ ಜ್ಞಾನಕ್ಕೆ ವಿರೋಧವಾಗುವದು[1], ಮತ್ತು ಸನ್ಮಾತ್ರಕ್ಕಿಂತ ಬೇರೆಯಾದ ವಸ್ತುಸಂಸ್ಥಾನರೂಪವಾದ ಜಾತ್ಯಾದಿರೂಪವಾದ ಭೇದವನ್ನು ಪ್ರತ್ಯಕ್ಷವು ಗ್ರಹಿಸಿಲ್ಲವೆನ್ನುವದಾದರೆ, ಕುದುರೆಯು ಬೇಕೆನ್ನುವವನು ಕೋಣವನ್ನು ಕಂಡರೆ ಏಕೆ ಹಿಂತ್ತಸರಿಯುತ್ತಾನೆ[2] ? ಎಲ್ಲಾ ಜ್ಞಾನಗಳಲ್ಲಿಯೂ ಸನ್ಮಾತ್ರವೇ ವಿಷಯವಾಗಿದ್ದರೆ, ಆಯಾ ಜ್ಞಾನವಿಷಯದೊಂದಿಗೆ ಇರುವ ಸರ್ವ ಶಬ್ದಗಳೂ ಒಂದೊಂದು ಪ್ರತಿಪತ್ತಿಗಳಲ್ಲಿ ಏತಕ್ಕೆ ನೆನಪಿಗೆ ಬರುವದಿಲ್ಲ[3] ? ಮತ್ತು ಕುದುರೆಯಲ್ಲಿಯೂ ಆನೆಯಲ್ಲಿಯೂ ಜ್ಞಾನಕ್ಕೆ ಒಂದೇ ವಿಷಯವಾಗಿರುವದರಿಂದ

---

1. 'ಘಟವಿದೆ' ಎಂಬಲ್ಲಿ ಘಟವಿಶಿಷ್ಟವಾದ ಅಸ್ತಿತ್ವವು ಪ್ರತೀತವಾಗುತ್ತದೆ; ಸನ್ಮಾತ್ರವೇ ಪ್ರತ್ಯಕ್ಷಕ್ಕೆ ವಿಷಯವೆಂಬುದು ಈ ಅನುಭವಕ್ಕೆ ವಿರುದ್ಧ.

2. ಕುದುರೆಯನ್ನು ನೋಡುವಾಗಲೂ ಸನ್ಮಾತ್ರವೇ ವಿಷಯ, ಕೋಣವನ್ನು ನೋಡುವಾಗಲೂ ಸನ್ಮಾತ್ರವೇ ವಿಷಯ– ಎಂದು ಒಪ್ಪಿದರೆ ಕೋಣವು ಬೇಡವಾದವನು ಅದನ್ನು ಬಿಟ್ಟು ಹಿಂಜರಿಯಬಾರದಾಗುವದು; ಏಕೆಂದರೆ ಈ ಎರಡು ಜ್ಞಾನಗಳಲ್ಲಿಯೂ ಸನ್ಮಾತ್ರವೊಂದೇ ಗೃಹೀತವಾಗಿರುತ್ತದೆಯಲ್ಲ !

3. ಈ ವಾಕ್ಯಕ್ಕೆ ಅರ್ಥವೇನೆಂಬುದು ಸ್ಫುಟವಾಗಿಲ್ಲ. 'ಘಟೋಽಸ್ತಿ' (ಘಟವಿದೆ) ಎಂಬ ಪ್ರತೀತಿಯಾಗುವಾಗ ಪಟಾದಿಗಳೂ ಇವೆ ಎಂದೇಕೆ ಆಗಬಾರದು ? ಎಲ್ಲೆಲ್ಲಿಯೂ ಸನ್ಮಾತ್ರವೇ ವಿಷಯವಷ್ಟೆ ? –ಎಂದಭಿಪ್ರಾಯವಿರಬಹುದು.

ಮುಂದಿನ ಜ್ಞಾನವು (ಹಿಂದೆ) ಗ್ರಹಿಸಿದ್ದನ್ನೇ ಗ್ರಹಿಸುವದರಿಂದಲೂ (ಅದರಲ್ಲಿ) ವಿಶೇಷವೇನೂ ಇಲ್ಲದ್ದರಿಂದಲೂ ಸ್ಮೃತಿಗಳಲ್ಲಿ ವೈಲಕ್ಷಣ್ಯವು ಆಗಬಾರದಾದೀತು.[1] ಒಂದೊಂದು ಜ್ಞಾನದಲ್ಲಿಯೂ ವಿಶೇಷವನ್ನು ಒಪ್ಪಿದರೆ ಪ್ರತ್ಯಕ್ಷಕ್ಕೆ ವಿಶಿಷ್ಟವಸ್ತುವೇ ವಿಷಯವೆಂದೇ ಒಪ್ಪಿದಂತೆ ಆಗುತ್ತದೆ.[2] ಜ್ಞಾನಗಳಿಗೆಲ್ಲ ಒಂದೇ ವಿಷಯವಾದರೆ ಒಂದೇ ಜ್ಞಾನದಿಂದಲೇ ಎಲ್ಲವನ್ನೂ ಗ್ರಹಿಸಿದಂತೆ ಆಗಿರುವದರಿಂದ ಕುರುಡ, ಕಿವುಡ –ಮುಂತಾದವರು ಇಲ್ಲವೆಂದೂ[3] ಆದೀತು! ಕಣ್ಣಿನಿಂದ ಸನ್ಮಾತ್ರವೇ ಗೃಹೀತ ವಾಗುತ್ತಿಲ್ಲ; ಏಕೆಂದರೆ ಅದು ರೂಪ, ರೂಪಿ– ಎರಡೂ ಒಂದು ವಸ್ತುವಿನಲ್ಲಿ ಸಮವೇತವಾಗಿರುವ ಪದಾರ್ಥವನ್ನು ಗ್ರಹಿಸುತ್ತದೆ[4]; ತ್ವಗಿಂದ್ರಿಯವೂ (ಸನ್ಮಾತ್ರ ವನ್ನು ಗ್ರಹಿಸುವದಿಲ್ಲ); ಏಕೆಂದರೆ ಅದಕ್ಕೆ ಸ್ಪರ್ಶವಿಶಿಷ್ಟವಸ್ತುವೇ ವಿಷಯ. ಶ್ರೋತ್ರಾದಿಗಳಿಗೂ ಸನ್ಮಾತ್ರವು ವಿಷಯವಲ್ಲ; ಮತ್ತೇನೆಂದರೆ ಶಬ್ದ, ರಸ, ಗಂಧ –ಎಂಬ ರೂಪವಾದ ವಿಶೇಷವೇ ಅವಕ್ಕೆ ವಿಷಯವಾಗಿದೆ. ಆದ್ದರಿಂದ ಸನ್ಮಾತ್ರ ವನ್ನೇ ಗ್ರಹಿಸುವ (ಇಂದ್ರಿಯವು) ಇಲ್ಲಿ ಯಾವದೂ ಕಾಣಬರುತ್ತಿಲ್ಲ. ನಿರ್ವಿಶೇಷ ವಾದ ಸನ್ಮಾತ್ರವನ್ನು ಪ್ರತ್ಯಕ್ಷವೇ ಗ್ರಹಿಸುವದಾದರೆ, ಅದನ್ನು ವಿಷಯೀಕರಿಸುವ ಆಗಮಕ್ಕೆ ಮೊದಲು ಅರಿತದ್ದೇ ವಿಷಯವಾಗುವದರಿಂದ ಅನುವಾದಕವೆಂದೇ ಆದೀತು! ಸನ್ಮಾತ್ರಬ್ರಹ್ಮವು ಪ್ರಮೇಯವೆಂದೂ ಆಗುವದು[5]; ಅದರಿಂದ (ಬ್ರಹ್ಮವು) ಜಡ, ನಾಶಿ– ಎಂದು ಮುಂತಾಗಿ ಆಗುವದೆಂದು ನೀನೇ ಹೇಳಿರು ತ್ತೀಯೆ.

ಆದ್ದರಿಂದ ವಸ್ತುವಿನ ಸಂಸ್ಥಾನರೂಪವಾಗಿರುವ ಜಾತಿಯೇ ಮುಂತಾದ ರೂಪದ ಭೇದದಿಂದ ವಿಶಿಷ್ಟವಾದ (ಪದಾರ್ಥ)ವೇ ಪ್ರತ್ಯಕ್ಷಕ್ಕೆ ವಿಷಯ. ಸಂಸ್ಥಾನ ಕ್ಕಿಂತ ಅತಿರಿಕ್ತವಾದ ಅನೇಕ (ಪದಾರ್ಥ)ಗಳಲ್ಲಿ ಏಕಾಕಾರವಾಗಿರುವ ಬುದ್ಧಿಯಿಂದ ಬೋಧ್ಯವಾಗಿರುವ (ಪದಾರ್ಥವು) ಕಾಣಬರದೆ ಇರುವದರಿಂದ, ಅಷ್ಟರಿಂದಲೇ ಗೋತ್ವವೇ ಮುಂತಾದ ಜಾತಿಯ ವ್ಯವಹಾರವು ಆಗಬಹುದಾಗಿರುತ್ತದೆ–

1. ಮೊದಲು ಕುದುರೆಯನ್ನು ನೋಡಿದ್ದು ಆಮೇಲೆ ಕೋಣವನ್ನು ನೋಡಿದರೂ ಸನ್ಮಾತ್ರವನ್ನೇ ಕಾಣುತ್ತಿರುವದರಿಂದ 'ಕೋಣವನ್ನು ನೋಡಿದೆನು' ಎಂಬ ಸ್ಮೃತಿಯಾಗ ಬಾರದಾಗುವದು –ಎಂದರ್ಥ.

2. ಕುದುರೆಯ ಜ್ಞಾನ, ಕೋಣದ ಜ್ಞಾನ– ಇವುಗಳಲ್ಲಿ ವಿಶೇಷವನ್ನು ಒಪ್ಪಿದರೆ ಅಶ್ವತ್ವಾದಿವಿಶಿಷ್ಟಜ್ಞಾನಗಳನ್ನೇ ಒಪ್ಪಿದಂತೆ ಆಗುತ್ತದೆ; ಸನ್ಮಾತ್ರವೇ ಪ್ರತ್ಯಕ್ಷವಿಷಯವೆಂಬ ಪ್ರತಿಜ್ಞೆಯನ್ನು ಬಿಟ್ಟಂತೆ ಆಗುತ್ತದೆ.

3. ಕುರುಡರಿಗೆ ಕಣ್ಣಿಲ್ಲದಿದ್ದರೂ ಸನ್ಮಾತ್ರವು ಪ್ರತ್ಯಕ್ಷವಾಗಿರುತ್ತದೆ. ಕಿವುಡರಿಗೆ ಕಿವಿಯಿಲ್ಲದಿದ್ದರೂ ಸನ್ಮಾತ್ರದ ಪ್ರತ್ಯಕ್ಷವಾಗಿರುತ್ತದೆ. ಆದ್ದರಿಂದ ಇಬ್ಬರೂ ಸನ್ಮಾತ್ರವನ್ನು ಅರಿತವರೇ ಆಗಿರುತ್ತಾರಾದ್ದರಿಂದ ಇಂಥದ್ದನ್ನು ಅರಿಯಲಿಲ್ಲ– ಎಂಬ ವೈಲಕ್ಷಣ್ಯವಿರಬಾರ ದಾಗುವದು.

4. ರೂಪಾದಿಗಳೇನೂ ಸನ್ಮಾತ್ರವಲ್ಲವಷ್ಟೆ?

5. ಏಕೆಂದರೆ ಪ್ರತ್ಯಕ್ಷಪ್ರಮಾಣಕ್ಕೆ ವಿಷಯವಾಗಿರುತ್ತದೆ ಎಂದು ಒಪ್ಪಿರುತ್ತೀರಿ.

(ಎಂದಾಯಿತು. ಸಂಸ್ಥಾನಕ್ಕಿಂತ) ಅತಿರಿಕ್ತವಾದ (ಪದಾರ್ಥವಿದೆ) ಎಂಬ ಪಾವದಲ್ಲಿಯೂ ಸಂಸ್ಥಾನವನ್ನು ಒಪ್ಪಿಯೇ ಇರುವದರಿಂದ ಸಂಸ್ಥಾನವೇ ಜಾತಿ. **ಸಂಸ್ಥಾನವೆಂದರೆ ತನಗೆ ಅಸಾಧಾರಣವಾಗಿರುವ ರೂಪ**[1]ವಾಗಿರುವದರಿಂದ ಆಯಾ ವಸ್ತುವಿಗೆ ತಕ್ಕಂತೆ ಸಂಸ್ಥಾನವನ್ನು ಮನದಂದುಕೊಳ್ಳಬೇಕು. ಜಾತಿಯನ್ನು ಗ್ರಹಿಸಿದ್ದರಿಂದಲೇ 'ಭಿನ್ನ'ವಾಗಿದೆ ಎಂಬ ವ್ಯವಹಾರವು ಆಗಬಹುದಾಗಿರುವದರಿಂದ (ಅದಕ್ಕಿಂತ ಬೇರೆಯಾದ) ಪದಾರ್ಥವು ಕಾಣಬರದೆ ಇರುವದರಿಂದಲೂ ಇನ್ನೊಂದು ಪದಾರ್ಥವಿದೆ ಎಂಬ ವಾದಿಯುಕೂಡ (ಜಾತಿಯನ್ನು) ಒಪ್ಪಿರುವದರಿಂದಲೂ ಗೋತ್ವಾದಿಯೇ ಭೇದವು.

(ಮೂಲ)

ನನು ಚ ಜಾತ್ಯಾದಿರೇವ ಭೇದಶ್ಚೇತ್ ತಸ್ಮಿನ್ ಗೃಹೀತೇ ತದ್ವ್ಯವಹಾರವದ್ ಭೇದವ್ಯವಹಾರೋಽಪಿ ಸ್ಯಾತ್ । ಸತ್ಯಮ್, ಭೇದಶ್ಚ ವ್ಯವಹ್ರಿಯತ ಏವ । ಗೋತ್ವಾದಿವ್ಯವಹಾರಾತ್ । ಗೋತ್ವಾದಿರೇವ ಹಿ ಸಕಲೇತರವ್ಯಾವೃತ್ತಿಃ ; ಗೋತ್ವಾದೌ ಗೃಹೀತೇ ಸಕಲೇತರಸಜಾತೀಯಬುದ್ಧಿವ್ಯವಹಾರಯೋರ್ನಿವೃತ್ತೇಃ ಭೇದಗ್ರಹಣೇನೈವ ಹಿ ಅಭೇದನಿವೃತ್ತಿಃ । 'ಅಯಮಸ್ಮಾದ್ ಭಿನ್ನಃ' ಇತಿ ತು ವ್ಯವಹಾರೇ ಪ್ರತಿಯೋಗಿನಿರ್ದೇಶಸ್ಯ ತದಪೇಕ್ಷತ್ವಾತ್ ಪ್ರತಿಯೋಗ್ಯಪೇಕ್ಷಯಾ 'ಭಿನ್ನ' ಇತಿ ವ್ಯವಹಾರಃ– ಇತ್ಯುಕ್ತಮ್ ॥

(ಅರ್ಥ)

(ಆಕ್ಷೇಪ) :– ಇನ್ನೊಂದು ಶಂಕೆ. ಜಾತ್ಯಾದಿಯೇ ಭೇದವಾದರೆ ಅದನ್ನು ಗ್ರಹಿಸಿದಾಗ ಆ (ಜಾತಿ ಎಂಬ) ವ್ಯವಹಾರದಂತೆ ಭೇದವ್ಯವಹಾರವೂ ಆಗಬೇಕಾಗುವದಲ್ಲ !

(ಪರಿಹಾರ) :– ನಿಜ. ಆದರೆ ಭೇದದ ವ್ಯವಹಾರವು ಆಗಿಯೇ ಆಗುತ್ತದೆ. ಏಕೆಂದರೆ ಗೋತ್ವಾದಿವ್ಯವಹಾರವಿದೆ. ಗೋತ್ವಾದಿಯೇ ಅಲ್ಲವೆ, ಸಕಲೇತರ ಭೇದವೆಂಬುದು ? ಏಕೆಂದರೆ ಗೋತ್ವಾದಿಯನ್ನು ಗ್ರಹಿಸಿದರೆ, ಇತರ ಸಜಾತಿಯ ಎಲ್ಲಾ (ವಸ್ತುಗಳ) ಬುದ್ಧಿ ಮತ್ತು ವ್ಯವಹಾರ– ಇವುಗಳು ನಿವೃತ್ತವಾಗುವವು. ಭೇದವನ್ನು ಗ್ರಹಿಸುವದರಿಂದಲೇ ಅಲ್ಲವೆ, ಅಭೇದವು ನಿವೃತ್ತವಾಗುವದು ? 'ಇದು ಇದಕ್ಕಿಂತ ಭಿನ್ನ' ಎಂದು ಪ್ರತಿಯೋಗಿಯನ್ನು ತಿಳಿಸುವದಾದರೊ, ವ್ಯವಹಾರದಲ್ಲಿ ಅದರ ಅಪೇಕ್ಷೆಯಿರುವದರಿಂದ. ಪ್ರತಿಯೋಗಿಗೆ ಹೋಲಿಸಿದರೆ ಇದು ಭಿನ್ನವು ಎಂಬ ವ್ಯವಹಾರವಾಗುವದು ಎಂದು ಹೇಳಿರುತ್ತೇವೆ.[2]

---

1. ಇದೇ ಜಾತಿ ಎಂದು ಭಾವ.

2. ಹಾನೋಪಾದಾನರೂಪವ್ಯವಹಾರದಲ್ಲಿ 'ಭಿನ್ನ'ವೆಂಬ ವ್ಯವಹಾರವು ಬೇಕಿಲ್ಲ ; ಇದಕ್ಕಿಂತ ಇದು ಬೇರೆ ಎಂದು ಹೋಲಿಕೆಯನ್ನು ತಿಳಿಸುವಾಗ ಮಾತ್ರ ಆ ವ್ಯವಹಾರವಾಗುತ್ತದೆ. ಅಭೇದವ್ಯಾವೃತ್ತಿಯು ಎರಡು ಕಡೆಯಲ್ಲಿಯೂ ಇದೆ.

## (೭) ವ್ಯಾವರ್ತಮಾನವಾದದ್ದು ಅಪರಮಾರ್ಥವೆನ್ನಲಾಗದು

(ಮೂಲ)

ಯತ್ತು ನರ್ಘಟಾದೀನಾಂ ವಿಶೇಷಾಣಾಂ ವ್ಯಾವರ್ತಮಾನತ್ವೇನ ಅಪಾರಮಾರ್ಥ್ಯಮುಕ್ತಮ್, ತದನಾಲೋಚಿತಬಾಧ್ಯಬಾಧಕಭಾವವ್ಯಾವೃತ್ತ್ಯನುವೃತ್ತಿವಿಶೇಷಸ್ಯ ಭ್ರಾನ್ತಿಪರಿಕಲ್ಪಿತಮ್ । ದ್ವಯೋರ್ಜ್ಞಾನಯೋರ್ವಿರೋಧೇ ಹಿ ಬಾಧ್ಯಬಾಧಕಭಾವಃ । ಬಾಧಿತಸ್ಯೈವ ವ್ಯಾವೃತ್ತಿಃ । ಅತ್ರ ಘಟಪಟಾದಿಷು ದೇಶಕಾಲಭೇದೇನ ವಿರೋಧ ಏವ ನಾಸ್ತಿ । ಯಸ್ಮಿನ್ ದೇಶೇ ಯಸ್ಮಿನ್ ಕಾಲೇ ಯಸ್ಯ ಸದ್ಭಾವಃ ಪ್ರತಿಪನ್ನಃ, ತಸ್ಮಿನ್ ದೇಶೇ ತಸ್ಮಿನ್ ಕಾಲೇ ತಸ್ಯಾಭಾವಃ ಪ್ರತಿಪನ್ನಶ್ಚೇತ್, ತತ್ರ ವಿರೋಧಾತ್ ಬಲವತೋ ಬಾಧಕತ್ವಮ್, ಬಾಧಿತಸ್ಯ ಚ ನಿವೃತ್ತಿಃ। ದೇಶಾನ್ತರಕಾಲಾನ್ತರಸಂಬನ್ಧಿತಯಾ ಅನುಭೂತಸ್ಯ ಅನ್ಯದೇಶಕಾಲಯೋರಭಾವಪ್ರತೀತೌ[1] ನ ವಿರೋಧ ಇತಿ ಕಥಮತ್ರ ಬಾಧ್ಯಬಾಧಕಭಾವಃ ? ಅನ್ಯತ್ರ ನಿವೃತ್ತಸ್ಯ ಅನ್ಯತ್ರ ನಿವೃತ್ತಿರ್ವಾ ಕಥಮುಚ್ಯತೇ ? ರಜ್ಜುಸರ್ಪಾದಿಷು ತು ತದ್ದೇಶಕಾಲಸಂಬನ್ಧಿತಯೈವಾಭಾವಪ್ರತೀತೇಃ ವಿರೋಧಃ, ಬಾಧಕತ್ವಮ್, ವ್ಯಾವೃತ್ತಿಶ್ಚ ಇತಿ ದೇಶಕಾಲಾನ್ತರದೃಷ್ಟಸ್ಯ ದೇಶಕಾಲಾನ್ತರವ್ಯಾವರ್ತಮಾನತ್ವಂ ಮಿಥ್ಯಾತ್ವವ್ಯಾಪ್ತಂ ನ ದೃಷ್ಟಮ್ ಇತಿ ನ ವ್ಯಾವರ್ತಮಾನತ್ವಮಾತ್ರಮ್ ಅಪಾರಮಾರ್ಥ್ಯಹೇತುಃ। ಯತ್ತು ಅನುವರ್ತಮಾನತ್ವಾತ್ ಸತ್ ಪರಮಾರ್ಥಃ ಇತಿ ತತ್ ಸಿದ್ಧಮೇವೇತಿ ನ ಸಾಧನಮರ್ಹತಿ । ಅತೋ ನ ಸನ್ಮಾತ್ರಮೇವ ವಸ್ತು ॥

(ಅರ್ಥ)

ಇನ್ನು ಘಟಾದಿವಿಶೇಷಗಳು ಬಿಟ್ಟುಹೋಗುತ್ತಿರುವದರಿಂದ ಅಪರಮಾರ್ಥ ಎಂದೆಯಲ್ಲ[2], ಅದು ಬಾಧ್ಯಬಾಧಕಭಾವ, ವ್ಯಾವೃತ್ತ್ಯನುವೃತ್ತಿಗಳು– ಇವಕ್ಕಿರುವ ವಿಶೇಷವನ್ನು ಆಲೋಚಿಸದಾತನು ಭ್ರಾಂತಿಯಿಂದ ಕಲ್ಪಿಸಿದ್ದು.

ಎರಡು ಜ್ಞಾನಗಳಿಗೆ ಇರುವ ವಿರೋಧವಿದ್ದರಲ್ಲವೆ, ಬಾಧ್ಯಬಾಧಕಭಾವ ? ಬಾಧಿತವಾದದ್ದೇ ಹೋಗಿಬಿಡುತ್ತದೆ. ಇಲ್ಲಿ ಘಟಪಟಾದಿಗಳಿಗೆ ದೇಶಕಾಲಗಳ ಭೇದವಿರುವದರಿಂದ ವಿರೋಧವೇ ಇರುವದಿಲ್ಲ. ಯಾವ ದೇಶದಲ್ಲಿ ಯಾವ ಕಾಲದಲ್ಲಿ ಯಾವದು ಇದೆ ಎಂದು ಜ್ಞಾನವಾಗಿರುವದೋ ಆ ದೇಶದಲ್ಲಿ ಆ ಕಾಲದಲ್ಲಿ ಅದು ಇಲ್ಲವೆಂದು ಜ್ಞಾನವಾದರೆ, ಅಲ್ಲಿ ವಿರೋಧವಿರುವದರಿಂದ ಪ್ರಬಲವಾದದ್ದು

---

1. 'ಪ್ರತಿಪತ್ತೌ' ಎಂದು ಪಾ॥
2. ಹಿಂದೆ (ಪು. ೫೯) ಪೂರ್ವಪಕ್ಷಿಯು ಹೀಗೆಂದು ವಾದಿಸಿದ್ದನು.

ಬಾಧಕವು, ಮತ್ತು ಬಾಧಿತವಾದದ್ದು ನಿವೃತ್ತವಾಗುವದು. ದೇಶಾಂತರ ಕಾಲಾಂತರಸಂಬಂಧಿ ಎಂದು ಅನುಭೂತವಾಗಿದ್ದದ್ದು ಮತ್ತೊಂದು ದೇಶದಲ್ಲಿ ಮತ್ತೊಂದು ಕಾಲದಲ್ಲಿ ಇಲ್ಲವೆಂಬ ಜ್ಞಾನವಾದರೆ, ವಿರೋಧವೇ ಇಲ್ಲವಾಗಿ ಇಲ್ಲಿ ಬಾಧ್ಯಬಾಧಕಭಾವವು ಹೇಗೆ (ಇದ್ದೀತು) ? ಒಂದುಕಡೆಯಲ್ಲಿ ನಿವೃತ್ತವಾದದ್ದು ಇನ್ನೊಂದು ಕಡೆಯಲ್ಲಿ ನಿವೃತ್ತವಾಯಿತೆಂಧಾದರೂ ಹೇಗೆ ಹೇಳಲಾದೀತು ? ಹಗ್ಗದಹಾವೇ ಮುಂತಾದ (ದೃಷ್ಟಾಂತ)ಗಳಲ್ಲಾದರೊ, ಅದೇ ದೇಶಕಾಲಸಂಬಂಧಿ ಯಾಗಿಯೇ ಇಲ್ಲವೆಂಬ ಜ್ಞಾನವಾಗುವದರಿಂದ ವಿರೋಧವೂ, ಬಾಧಕತ್ವವೂ ನಿವೃತ್ತಿಯೂ ಆಗಬಹುದಾಗಿದೆ. ಆದ್ದರಿಂದ ಬೇರೆಯ ದೇಶಕಾಲಗಳಲ್ಲಿ ಕಂಡದ್ದು ಬೇರೆಯ ದೇಶಕಾಲಗಳಲ್ಲಿ ನಿವೃತ್ತವಾಗುವದು ಮಿಥ್ಯಾತ್ವವ್ಯಾಪ್ತವೆಂದು ಕಂಡಿಲ್ಲ[1] ವಾದ್ದರಿಂದ ನಿವೃತ್ತಿಯಾಗುತ್ತದೆ ಎಂಬುದಿಷ್ಟೇ ಅಪರಮಾರ್ಥವೆಂಬುದಕ್ಕೆ ಹೇತು ವಲ್ಲ. ಇನ್ನು ಅನುವರ್ತಿಸಿಕೊಂಡುಬರುವದರಿಂದ ಸತ್ತು ಪರಮಾರ್ಥ–ಎಂದೆಯಲ್ಲ, ಅದು ಸಿದ್ಧವೇ ಆಗಿರುವದರಿಂದ ಸಾಧಿಸುವದಕ್ಕೆ ತಕ್ಕದ್ದಲ್ಲ.[2] ಆದ್ದರಿಂದ ವಸ್ತುವೆಂಬುದು ಬರಿಯ ಸನ್ಮಾತ್ರವಲ್ಲ.

## (೮) ಅನುಭೂತಿಯ ವಿಷಯಕ್ಕೆ ಸಿದ್ಧಾಂತ

(ಮೂಲ)

ಅನುಭೂತಿಸದ್ವಿಶೇಷಯೋಶ್ಚ ವಿಷಯವಿಷಯಿಭಾವೇನ ಭೇದಸ್ಯ ಪ್ರತ್ಯಕ್ಷ ಸಿದ್ಧತ್ವಾತ್, ಅಬಾಧಿತತ್ವಾಚ್ಚ ಅನುಭೂತಿರೇವ ಸತೀ ಇತ್ಯೇತದಪಿ ನಿರಸ್ತಮ್ ॥

ಯತ್ತು ಅನುಭೂತೇಃ ಸ್ವಯಂಪ್ರಕಾಶತ್ವಮುಕ್ತಮ್, ತದ್ವಿಷಯಪ್ರಕಾಶನ ವೇಲಾಯಾಂ ಜ್ಞಾತುರಾತ್ಮನಸ್ತಥೈವ, ನ ತು ಸರ್ವೇಷಾಂ ಸರ್ವದಾ ತಥೈವೇತಿ ನಿಯಮೋಽಸ್ತಿ । ಪರಾನುಭವಸ್ಯ ಹಾನೋಪಾದಾನಾದಿಲಿಙ್ಗಕಾನುಮಾನಜ್ಞಾನ ವಿಷಯತ್ವಾತ್ ; ಸ್ವಾನುಭವಸ್ಯಾಪ್ಯತೀತಸ್ಯ 'ಅಜ್ಞಾಸಿಷಮ್' ಇತಿ ಜ್ಞಾನ ವಿಷಯತ್ವದರ್ಶನಾಚ್ಚ । ಅತೋಽನುಭೂತಿಶ್ಚೇತ್ ಸ್ವತಃಸಿದ್ಧಾ ಇತಿ ವಕ್ತುಂ ನ ಶಕ್ಯತೇ ॥

(ಅರ್ಥ)

ಅನುಭೂತಿ, ಸದ್ವಿಶೇಷ– ಇವೆರಡಕ್ಕೂ ವಿಷಯವಿಷಯಿಭಾವವಿರುವದರಿಂದ (ಅವೆರಡಕ್ಕೂ) ಇರುವ ಭೇದವು ಪ್ರತ್ಯಕ್ಷಸಿದ್ಧವಾಗಿರುವದರಿಂದಲೂ ಅಬಾಧಿತ ವಾಗಿರುವದರಿಂದಲೂ ಅನುಭೂತಿಯೇ ಸತ್ತು– ಎಂಬಿದೂ ನಿರಾಕೃತವಾಯಿತು.

---

1. ಇಲ್ಲಿರುವದೂ ಅಲ್ಲಿಲ್ಲದಿರುವದೂ ಈಗ ಇರುವದೂ ಆಗ ಇಲ್ಲದಿರುವದೂ ಮಿಥ್ಯಾತ್ವವನ್ನೇನೂ ಬಾಧಿಸುವದಿಲ್ಲವಾದ್ದರಿಂದ.

2. ಇದ್ದದ್ದನ್ನು ಸತ್ಯವೆಂದು ಎಲ್ಲರೂ ಒಪ್ಪುತ್ತಾರಾದ್ದರಿಂದ ಅದಕ್ಕೆ ಸಾಧಕಯುಕ್ತಿ ಯೇನೂ ಬೇಡ.

ಇನ್ನು ಅನುಭೂತಿಯು ಸ್ವಯಂಪ್ರಕಾಶವೆಂದೆಯಲ್ಲ, ವಿಷಯವನ್ನು ಬೆಳಗುವ ಕಾಲಕ್ಕೆ ಅದು ಜ್ಞಾತೃವಾದ ತನಗೆ ಹಾಗೆಯೇ ಸರಿ; ಆದರೆ ಎಲ್ಲರಿಗೂ ಯಾವಾಗಲೂ ಹಾಗೆಯೇ ಎಂಬ ನಿಯಮವಿಲ್ಲ. ಏಕೆಂದರೆ ಮತ್ತೊಬ್ಬರ ಅನುಭವವು ಬಿಡುವದ್ದು, ತೆಗೆದುಕೊಳ್ಳುವದು–ಮುಂತಾದ ಲಿಂಗಗಳಿಂದ ಮಾಡುವ ಅನುಮಾನಕ್ಕೆ ವಿಷಯವಾಗಿರುತ್ತದೆ. ತನ್ನ ಅನುಭವವೂ ಕಳೆದುಹೋಗಿದ್ದರೆ 'ತಿಳಿದುಕೊಂಡೆನು' ಎಂಬ ಜ್ಞಾನಕ್ಕೆ ವಿಷಯವಾಗಿರುವದರಿಂದಲೂ (ಹೀಗೆ). ಆದ್ದರಿಂದ **ಅನುಭೂತಿಯಾದರೆ ಸ್ವತಃಸಿದ್ಧ ಎಂದು ಹೇಳುವದಕ್ಕೆ ಶಕ್ಯವಲ್ಲ.**

(ಮೂಲ)

ಅನುಭೂತೇರನುಭಾವ್ಯತ್ವೇ ಅನನುಭೂತಿತ್ವಮ್ ಇತ್ಯಪಿ ದುರುಕ್ತಮ್ । ಸ್ವಗತಾತೀತಾನುಭವಾನಾಂ ಪರಗತಾನುಭವಾನಾಂ ಚಾನುಭಾವ್ಯತ್ವೇನ ಅನನುಭೂತಿತ್ವಪ್ರಸಙ್ಗಾತ್ । ಪರಾನುಭವಾನುಮಾನಾನಭ್ಯುಪಗಮೇ ಚ ಶಬ್ದಾರ್ಥಸಂಬಂಧಗ್ರಹಣಾಭಾವೇನ ಸಮಸ್ತಶಬ್ದವ್ಯವಹಾರೋಚ್ಛೇದಪ್ರಸಙ್ಗಃ । ಆಚಾರ್ಯಸ್ಯ ಜ್ಞಾನವತ್ತ್ವಮ್ ಅನುಮಾಯ ತದುಪಸತ್ತಿಶ್ಚ ಕ್ರಿಯತೇ; ಸಾ ಚ ನೋಪಪದ್ಯತೇ। ನ ಚಾನ್ಯವಿಷಯತ್ವೇಽನನುಭೂತಿತ್ವಮ್। ಅನುಭೂತಿತ್ವಂ ನಾಮ ವರ್ತಮಾನದಶಾಯಾಂ ಸ್ವಸತ್ತಯೈವ ಸ್ವಾಶ್ರಯಂ ಪ್ರತಿ ಪ್ರಕಾಶಮಾನತ್ವಮ್, ಸ್ವಸತ್ತಯೈವ ಸ್ವವಿಷಯಸಾಧನತ್ವಂ ವಾ । ತೇ ಚಾನುಭವಾನ್ತರಾನುಭಾವ್ಯತ್ವೇಽಪಿ ಸ್ವಾನುಭವಸಿದ್ಧೇ ನಾಪಗಚ್ಛತಃ ಇತಿ ನಾನುಭೂತಿತ್ವಮಪಗಚ್ಛತಿ । ಘಟಾದೇಸ್ತು ಅನನುಭೂತಿತ್ವಮ್ ಏತತ್ಸ್ವಭಾವವಿರಹಾತ್ । ನಾನುಭಾವ್ಯತ್ವಾತ್ । ತಥಾ ಅನುಭೂತೇರನನುಭಾವ್ಯತ್ವೇಽಪಿ ಅನನುಭೂತಿತ್ವಪ್ರಸಙ್ಗೋ ದುರ್ವಾರಃ । ಗಗನಕುಸುಮಾದೇರನನುಭಾವ್ಯಸ್ಯ ಅನನುಭೂತಿತ್ವಾತ್ ॥

ಗಗನಕುಸುಮಾದೇರನನುಭೂತಿತ್ವಮಸತ್ತ್ವಪ್ರಯುಕ್ತಮ್, ನಾನನುಭಾವ್ಯತ್ವಪ್ರಯುಕ್ತಮ್ ಇತಿ ಚೇತ್, ಏವಂ ತರ್ಹಿ ಘಟಾದೇರಪ್ಯಜ್ಞಾನಾವಿರೋಧಿತ್ವಮೇವ ಅನನುಭೂತಿತ್ವನಿಬನ್ಧನಮ್, ನಾನುಭಾವ್ಯತ್ವಮ್ ಇತ್ಯಾಸ್ಥೀಯತಾಮ್ । ಅನುಭೂತೇರನುಭಾವ್ಯತ್ವೇ ಅಜ್ಞಾನಾವಿರೋಧಿತ್ವಮಪಿ ತಸ್ಯಾ ಘಟಾದೇರಿವ ಪ್ರಸಜ್ಯತ ಇತಿ ಚೇತ್, ಅನನುಭಾವ್ಯತ್ವೇಽಪಿ ಗಗನಕುಸುಮಾದೇರಿವಾಜ್ಞಾನಾವಿರೋಧಿತ್ವಮಪಿ ಪ್ರಸಜ್ಯತ ಏವ । ಅತೋಽನುಭಾವ್ಯತ್ವೇಽನನುಭೂತಿತ್ವಮಿತ್ಯುಪಹಾಸ್ಯಮ್ ॥

(ಅರ್ಥ)

**ಅನುಭೂತಿಯು ಅನುಭಾವ್ಯವಾದರೆ ಅನುಭೂತಿಯಲ್ಲದೆಹೋಗುವದು ಎಂಬುದೂ ತಪ್ಪುಮಾತು.** ಏಕೆಂದರೆ ತನ್ನ ಕಳೆದುಹೋಗಿರುವ

ಅನುಭವಗಳೂ ಮತ್ತೊಬ್ಬರ ಅನುಭವಗಳೂ ಅನುಭಾವ್ಯವಾಗಿರುವದರಿಂದ (ಅವು) ಅನುಭೂತಿಗಳಲ್ಲವೆನ್ನಬೇಕಾದೀತು. ಮತ್ತೊಬ್ಬರ ಅನುಭವಗಳನ್ನು ಅನುಮಾನಮಾಡುವದಕ್ಕಾಗುತ್ತದೆ ಎಂಬುದನ್ನು ಒಪ್ಪದಿದ್ದರೆ ಶಬ್ದಾರ್ಥಗಳಿಗಿರುವ ಸಂಬಂಧವನ್ನು ಗ್ರಹಿಸುವದಕ್ಕೆ ಆಗದೆ ಇರುವದರಿಂದ ಶಬ್ದವ್ಯವಹಾರವೆಲ್ಲವೂ ಇಲ್ಲವಾಗಬೇಕಾಗುವದು. ಆಚಾರ್ಯನು ಜ್ಞಾನಿ ಎಂದು ಅನುಮಾನಿಸಿಕೊಂಡು ಆತನ ಬಳಿಗೆ (ವಿದ್ಯಾರ್ಜನೆ)ಗೆ ಹೋಗುತ್ತಾರಷ್ಟೆ, ಅದೂ ಹೊಂದದೆಹೋಗುವದು. ಮತ್ತೊಂದಕ್ಕೆ ವಿಷಯವಾದರೆ (ಅನುಭೂತಿಯು) ಅನುಭೂತಿಯಲ್ಲವೆಂಬುದೂ ಸರಿಯಲ್ಲ ; **ಅನುಭೂತಿ** ಎಂದರೆ ಈಗಿನ **ಅವಸ್ಥೆಯಲ್ಲಿ ತನ್ನ ಇರವಿನಿಂದಲೇ ತನ್ನ ಆಶ್ರಯ(ನಾಗಿರುವಾತನಿಗೆ) ಬೆಳಗುತ್ತಿರುವದು, ಅಥವಾ ತನ್ನ ಇರವಿನಿಂದಲೇ ತನ್ನ ವಿಷಯವನ್ನು ಬೆಳಗುವದು.**[1] ಅವೆರಡೂ ಮತ್ತೊಂದನುಭವಕ್ಕೆ ಅನುಭಾವ್ಯವಾಗಿರುತ್ತಿದ್ದರೂ ತನ್ನ ಅನುಭವಸಿದ್ಧವಾಗಿರುವದರಿಂದ ಹೋಗುವದೇ ಇಲ್ಲವಾದ್ದರಿಂದ (ಅವುಗಳ) ಅನುಭೂತಿತ್ವವು ಇಲ್ಲವಾಗಲಾರದು. ಘಟಾದಿಯು ಅನುಭೂತಿಯಲ್ಲವೆಂಬುದು ಈ ಸ್ವಭಾವವಿಲ್ಲದ್ದರಿಂದಲೇ ಹೊರತು, ಅನುಭಾವ್ಯವಾಗಿರುವದರಿಂದಲ್ಲ. ಹೀಗೆಯೇ **ಅನುಭೂತಿಯು ಅನುಭಾವ್ಯವಲ್ಲದಿದ್ದರೂ (ಅದು) ಅನುಭೂತಿಯಲ್ಲದೆಹೋಗಬೇಕಾದೀತೆಂಬುದೂ** ತಪ್ಪಿಸಿಕೊಳ್ಳುವದಕ್ಕಾಗುವದಿಲ್ಲ ; ಏಕೆಂದರೆ ಗಗನಕುಸುಮವೇ ಮುಂತಾದದ್ದು ಅನುಭಾವ್ಯವಲ್ಲವಾದರೂ ಅನುಭೂತಿಯಲ್ಲ.

(ಆಕ್ಷೇಪ) :- ಗಗನಕುಸುಮಾದಿಗಳು ಅನುಭೂತಿಯಲ್ಲವೆಂಬುದು (ಅದು) ಅಸತ್ತಾಗಿರುವದರಿಂದಲೇ ಹೊರತು ಅನನುಭಾವ್ಯವೆಂಬುದರಿಂದಲ್ಲ.

(ಪರಿಹಾರ) :- ಹೀಗಾದರೆ ಘಟಾದಿಯೂ ಅಜ್ಞಾನಾವಿರೋಧಿಯಾಗಿರುವದೇ (ಅದು) ಅನನುಭೂತಿಯಾಗಿರುವದಕ್ಕೆ ನಿಮಿತ್ತವೇ ಹೊರತು ಅನುಭಾವ್ಯವಾಗಿರುವದರಿಂದಲ್ಲ ಎಂದು ಇಟ್ಟುಕೊ !

(ಆಕ್ಷೇಪ) :- ಅನುಭೂತಿಯು ಅನುಭಾವ್ಯವಾದರೆ ಅದಕ್ಕೆ ಅಜ್ಞಾನಾವಿರೋಧಿತ್ವವೂ ಅದಕ್ಕೆ ಘಟಾದಿಗಳಿಗಿರುವಂತೆ ಪ್ರಸಕ್ತವಾಗುತ್ತದೆ.

(ಪರಿಹಾರ) :- ಅನನುಭಾವ್ಯವಾದರೂ ಗಗನಕುಸುಮಾದಿಗಳಂತೆ ಅಜ್ಞಾನಾವಿರೋಧಿತ್ವವೂ ಪ್ರಸಕ್ತವಾಗಿಯೇತೀರುತ್ತದೆ. ಆದ್ದರಿಂದ ಅನುಭಾವ್ಯವಾದರೆ ಅನನುಭೂತಿಯಾಗುವದು ಎಂಬುದು ಉಪಹಾಸ್ಯವು.

---

**1.** **ಅನುಭೂತಿಯ ವಿಷಯಕ್ಕೆ ರಾಮಾನುಜರ ಅಭಿಪ್ರಾಯವು ಎಷ್ಟರಮಟ್ಟಿಗೆ ಸರಿ ಎಂಬುದನ್ನು ಪೀಠಿಕೆಯಲ್ಲಿ ಚರ್ಚಿಸಿದೆ.**

(ಮೂಲ)

ಯತ್ತು ಸಂವಿದಃ ಸ್ವತಃಸಿದ್ಧಾಯಾಃ ಪ್ರಾಗಭಾವಾದ್ಯಭಾವಾತ್ ಉತ್ಪತ್ತಿರ್ನಿರಸ್ಯತೇ ತದನ್ಧಸ್ಯ ಜಾತ್ಯನ್ಧೇನ ಯಷ್ಟಿಃ ಪ್ರದೀಯತೇ। ಪ್ರಾಗಭಾವಸ್ಯ ಗ್ರಾಹಕಾಭಾವಾತ್ ಅಭಾವೋ ನ ಶಕ್ಯತೇ ವಕ್ತುಮ್ ; ಅನುಭೂತ್ಯೈವ ತದ್ಗ್ರಹಣಾತ್ । ಕಥಮನುಭೂತಿಃ ಸತೀ ತದಾನೀಮೇವ ಸ್ವಾಭಾವಂ ವಿರುದ್ಧಮ್ ಅವಗಮಯತಿ ಇತಿ ಚೇತ್? ನ ಹ್ಯನುಭೂತಿಃ ಸ್ವಸಮಕಾಲವರ್ತಿನಮೇವ ಸ್ವಾಭಾವಂ[1] ವಿಷಯೀಕರೋತೀತ್ಯಸ್ತಿ ನಿಯಮಃ ; ಅತೀತಾನಾಗತಯೋರವಿಷಯತ್ವಪ್ರಸಙ್ಗಾತ್ । ಅಥ ಮನ್ಯಸೇ–ಅನುಭೂತಿಪ್ರಾಗಭಾವಾದೇಃ ಸಿದ್ಧ್ಯತಃ, ತತ್ಸಮಕಾಲಭಾವನಿಯಮೋಽಸ್ತೀತಿ । ಕಿಂ ತ್ವಯಾ ಕ್ವಚಿದೇವಂ ದೃಷ್ಟಮ್, ಯೇನ ನಿಯಮಂ ಬ್ರವೀಷಿ ? ಹನ್ತ ತರ್ಹಿ ತತ ಏವ ದರ್ಶನಾದ್ ಪ್ರಾಗಭಾವಃ ಸಿದ್ಧ ಇತಿ ನ ತದಪಹ್ನವಃ[2] । ತತ್ಪ್ರಾಗಭಾವಂ ಚ ತತ್ಸಮಕಾಲವರ್ತಿನಮ್ ಅನುನ್ಮತ್ತಃ ಕೋ ಬ್ರವೀತಿ ? ಇನ್ದ್ರಿಯಜನ್ಮನಃ ಪ್ರತ್ಯಕ್ಷಸ್ಯ ಹ್ಯೇಷ ಸ್ವಭಾವನಿಯಮಃ ಯತ್ ಸ್ವಸಮಕಾಲವರ್ತಿನಃ ಪದಾರ್ಥಸ್ಯ ಗ್ರಾಹಕತ್ವಮ್, ನ ಸರ್ವೇಷಾಂ ಜ್ಞಾನಾನಾಂ ಪ್ರಮಾಣಾನಾಂ ಚ[3]; ಸ್ಮರಣಾನುಮಾನಾಗಮಯೋಗಿಪ್ರತ್ಯಕ್ಷಾದಿಷು ಕಾಲಾನ್ತರವರ್ತಿನೋಽಪಿ ಗ್ರಹಣದರ್ಶನಾತ್ । ಅತ ಏವ ಚ ಪ್ರಮಾಣಸ್ಯ ಪ್ರಮೇಯಾವಿನಾಭಾವಃ। ನ ಹಿ ಪ್ರಮಾಣಸ್ಯ ಸ್ವಸಮಾನಕಾಲವರ್ತಿನಾ ಅವಿನಾಭಾವೋಽರ್ಥಸಂಬನ್ಧಃ, ಅಪಿ ತು ಯದ್ದೇಶಕಾಲಾದಿಸಂಬನ್ಧಿತಯಾ ಯೋಽರ್ಥೋಽವಭಾಸತೇ ತಸ್ಯ ತಥಾವಿಧಾಕಾರಮಿಥ್ಯಾತ್ವಪ್ರತ್ಯನೀಕತಾ। ಅತ ಇದಮಪಿ ನಿರಸ್ತಂ ಸ್ಮೃತಿರ್ನ ಬಾಹ್ಯವಿಷಯಾ ನಷ್ಟೇಽಪ್ಯರ್ಥೇ ಸ್ಮೃತಿದರ್ಶನಾತ್ ಇತಿ ॥

(ಅರ್ಥ)

**ಸ್ವತಃಸಿದ್ಧವಾಗಿರುವ ಸಂವಿತ್ತಿಗೆ ಪ್ರಾಗಭಾವವೇ ಮುಂತಾದದ್ದು ಇಲ್ಲದ್ದರಿಂದ ಉತ್ಪತ್ತಿಯನ್ನು ನಿರಾಕರಿಸುತ್ತೀಯಲ್ಲ[4], ಅದು ಕುರುಡನಿಗೆ ಹುಟ್ಟುಕುರುಡನು ಊರುಗೋಲನ್ನು ಕೊಟ್ಟಂತೆ. ಪ್ರಾಗಭಾವಕ್ಕೆ ಗ್ರಾಹಕನಿಲ್ಲದ್ದರಿಂದ (ಅದು) ಇಲ್ಲವೆಂದು ಹೇಳುವದಾಗಲಾರದು.** ಏಕೆಂದರೆ ಅನುಭೂತಿಯೇ ಅದನ್ನು ಗ್ರಹಿಸುತ್ತದೆ. ಅನುಭೂತಿಯು ಇದ್ದುಕೊಂಡೇ ಆಗಲೇ ವಿರುದ್ಧವಾಗಿ ತನ್ನ ಅಭಾವವನ್ನು ಹೇಗೆ ತಿಳಿಸಿಕೊಟ್ಟೀತು ?– ಎಂದರೆ ಅನುಭೂತಿಯು ತನ್ನ ಸಮಕಾಲವರ್ತಿಯಾದದ್ದನ್ನೇ ವಿಷಯೀಕರಿಸಬೇಕೆಂಬ

---

1. ಈ ಮಾತು ಕಂ॥ ಪಾಠದಲ್ಲಿಲ್ಲ.
2. 'ತದಭಾವನಿಹ್ನವಃ' ಪಾ॥
3. ಈ ವಾಕ್ಯದಲ್ಲಿ 'ನ ಸರ್ವೇಷಾಂ....ಚ' ಎಂಬ ಭಾಗವು ಕಂ॥ ಪಾಠದಲ್ಲಿಲ್ಲ.
4. ಹಿಂದೆ (ಪು. ೬೪ರಲ್ಲಿ) ಪೂರ್ವಪಕ್ಷಿ ಹೀಗೆಂದಿರುತ್ತಾನೆ.

ನಿಯಮವೇನೂ ಇಲ್ಲ; ಏಕೆಂದರೆ (ಹಾಗಾದರೆ) ಆಗಿಹೋದ, ಮುಂದೆ ಆಗಲಿರುವ (ಪದಾರ್ಥಗಳು) ವಿಷಯವಲ್ಲವೆಂದೇ ಆದೀತು.

ಹೀಗಲ್ಲದೆ ಅನುಭೂತಿಯ ಪ್ರಾಗಭಾವವೇ ಮುಂತಾದದ್ದು ಸಿದ್ಧವಾಗ ಬೇಕಾದರೆ ಅದರ ಸಮಕಾಲದಲ್ಲಿಯೇ ಇರಬೇಕೆಂಬ ನಿಯಮವಿದೆ ಎಂದಿಂತು (ನೀನು) ಅಭಿಪ್ರಾಯಪಡುವೆಯಾದರೆ, ನೀನು ಎಲ್ಲಿಯಾದರೂ ಹೀಗಿರುವದನ್ನು ಕಂಡದ್ದರಿಂದ ನಿಯಮವನ್ನು ಹೇಳುತ್ತಿರುವೆಯ? ಒಳ್ಳೆಯದು, ಹಾಗಾದರೆ ಹಾಗೆ ಕಂಡದ್ದರಿಂದಲೇ ಪ್ರಾಗಭಾವವೇ (ಮುಂತಾದದ್ದು) ಸಿದ್ಧವಾಗುವದರಿಂದ ಅದನ್ನು ಅಲ್ಲಗಳೆಯುವದಾಗಲಾರದು. ಅದರ ಪ್ರಾಗಭಾವವು ಅದರ ಸಮಕಾಲದಲ್ಲಿರುತ್ತದೆಯೆಂದು ಹುಚ್ಚನಲ್ಲದ ಯಾವನುತಾನೆ ಹೇಳಿಯಾನು? ಇಂದ್ರಿಯದಿಂದಾಗುವ ಪ್ರತ್ಯಕ್ಷಕ್ಕೇ ಅಲ್ಲವೆ ತನ್ನ ಸಮಕಾಲವರ್ತಿಯಾಗಿರುವ ಪದಾರ್ಥವನ್ನು ಗ್ರಹಿಸುವದೆಂಬುದೇ ಸ್ವಭಾವದ ನಿಯಮ? ಎಲ್ಲಾ ಜ್ಞಾನಗಳಿಗೂ ಪ್ರಮಾಣಗಳಿಗೂ ಈ ನಿಯಮವಿರುವದಿಲ್ಲ; ಏಕೆಂದರೆ ನೆನಪು, ಅನುಮಾನ, ಆಗಮ, ಯೋಗಿಪ್ರತ್ಯಕ್ಷ- ಮುಂತಾದವುಗಳಿಗೆ ಕಾಲಾಂತರದಲ್ಲಿರುವವನ್ನು ಗ್ರಹಿಸುವದು ಕಂಡುಬಂದಿದೆ. ಆದ್ದರಿಂದಲೇ ಪ್ರಮಾಣಕ್ಕೆ ಪ್ರಮೇಯದ ಅವಿನಾಭಾವವೇ ಇರುತ್ತದೆ. ಪ್ರಮಾಣಕ್ಕೆ ತನ್ನ ಸಮಕಾಲವರ್ತಿಯ ಅವಿನಾಭಾವವು ಅರ್ಥಸಂಬಂಧವಲ್ಲ; ಮತ್ತೇನೆಂದರೆ ಯಾವ ಪದಾರ್ಥವು ಯಾವ ದೇಶಕಾಲಗಳ ಸಂಬಂಧಿಯಾಗಿ ಕಾಣಿಸುತ್ತದೆಯೋ, ಅದು ಅಂಥ ಆಕಾರಮಿಥ್ಯಾತ್ವಕ್ಕೆ ವಿರುದ್ಧವಾಗಿರುತ್ತದೆ. ಆದ್ದರಿಂದ ಸ್ಮೃತಿಗೆ ಹೊರಗಿನ ಅರ್ಥವು ವಿಷಯವಿಲ್ಲ, ಏಕೆಂದರೆ ನಷ್ಟವಾದ ಪದಾರ್ಥದ ವಿಷಯದಲ್ಲಿಯೂ ಸ್ಮೃತಿಯಾಗುವದು ಕಂಡಿದೆ – ಎಂಬೀ (ಅಭಿಪ್ರಾಯವನ್ನು) ನಿರಾಕರಿಸಿದಂತೆ ಆಯಿತು.

(ಮೂಲ)

ಅಥೋಚ್ಯೇತ – ನ ತಾವತ್ ಸಂವಿತ್ಪ್ರಾಗಭಾವಃ ಪ್ರತ್ಯಕ್ಷಾವಸೇಯಃ, ಅವರ್ತಮಾನತ್ವಾತ್ । ನ ಚ ಪ್ರಮಾಣಾನ್ತರಾವಸೇಯಃ, ಲಿಙ್ಗಾದ್ಯಭಾವಾತ್ । ನ ಹಿ ಸಂವಿತ್ಪ್ರಾಗಭಾವವ್ಯಾಪ್ತಮ್ ಇಹ ಲಿಙ್ಗಮುಪಲಭ್ಯತೇ[1] । ನ ಚಾಽಽಗಮಸ್ತದ್ವಿಷಯೋ ದೃಷ್ಟಚರಃ । ಅತಸ್ತತ್ಪ್ರಾಗಭಾವಃ ಪ್ರಮಾಣಾಭಾವಾದೇವ ನ ಸೇತ್ಸ್ಯತಿ – ಇತಿ । ಯದ್ಯೇವಂ ಸ್ವತಃಸಿದ್ಧತ್ವವಿಭವಂ ಪರಿತ್ಯಜ್ಯ ಪ್ರಮಾಣಾಭಾವೇಽವರೂಢಶ್ಚೇತ್, ಯೋಗ್ಯಾನುಪಲಬ್ಧ್ಯೈವಾಭಾವಃ ಸಮರ್ಥಿತಃ ಇತ್ಯುಪಶಾಮ್ಯತು ಭವಾನ್ ॥

1. ಈ ವಾಕ್ಯದ ಅನಂತರ ಕಂ॥ ಪಾಠದಲ್ಲಿ 'ನಾನುಪಪತ್ತಿರಪಿ ಕಸ್ಯಚಿದ್ ದೃಶ್ಯತೇ' ಎಂದು ಹೆಚ್ಚಾಗಿದೆ.

(ಅರ್ಥ)

ಇನ್ನು ನೀನು ಹೀಗೆನ್ನಬಹುದು : ಸಂವಿತ್ತಿನ ಪ್ರಾಗಭಾವವು ಮೊದಲನೆಯದಾಗಿ ಪ್ರತ್ಯಕ್ಷದಿಂದ ನಿಶ್ಚಯಿಸತಕ್ಕದ್ದಲ್ಲ ; ಏಕೆಂದರೆ (ಅದು) ವರ್ತಮಾನ(ಕಾಲ)ದಲ್ಲಿಲ್ಲ. ಮತ್ತೊಂದು ಪ್ರಮಾಣದಿಂದಲೂ ನಿಶ್ಚಯಿಸುವದಕ್ಕೆ ಬರುವದಿಲ್ಲ ; ಏಕೆಂದರೆ ಲಿಂಗವೇ ಮುಂತಾದವುಗಳು ಅದಕ್ಕಿರುವದಿಲ್ಲ ; ಹೇಗೆಂದರೆ ಸಂವಿತ್ಪ್ರಾಗಭಾವದಿಂದ ವ್ಯಾಪ್ತವಾಗಿರುವ ಲಿಂಗವು[1] ಇಲ್ಲಿ ಕಾಣಬರುತ್ತಿಲ್ಲವಷ್ಟೆ ? ಅದರ ವಿಷಯಕ್ಕೆ ಆಗಮವನ್ನೂ (ನಾವು) ಕಂಡದ್ದಿಲ್ಲ. ಆದ್ದರಿಂದ ಅದರ ಪ್ರಾಗಭಾವವು ಪ್ರಮಾಣವಿಲ್ಲದ್ದರಿಂದಲೇ ಸಿದ್ಧವಾಗುವದಿಲ್ಲ.

ಹೀಗೆ (ಅನುಭವವು) ಸ್ವತಃಸಿದ್ಧವೆಂಬ ಹೆಚ್ಚುಗಾರಿಕೆಯನ್ನು ಕೈಬಿಟ್ಟು ಪ್ರಮಾಣವಿಲ್ಲವೆಂಬಲ್ಲಿಗೆ ಇಳಿದಿರುವೆಯಾದರೆ, **ಯೋಗ್ಯಾನುಪಲಬ್ಧಿಯಿಂದಲೇ[2] ಅಭಾವವನ್ನು ಸಮರ್ಥಿಸಿದ್ದಾಗಿದೆ** ಎಂದು ನೀನು ಸುಮ್ಮನಾಗು.

(ಮೂಲ)

ಕಿಂ ಚ ಪ್ರತ್ಯಕ್ಷಜ್ಞಾನಂ ಸ್ವವಿಷಯಂ ಘಟಾದಿಕಂ ಸ್ವಸತ್ತಾಕಾಲೇ ಸನ್ತಂ ಸಾಧಯತ್ ತಸ್ಯ ನ ಸರ್ವದಾ ಸತ್ತಾಮ್ ಅವಗಮಯದ್ದೃಶ್ಯತ ಇತಿ ಘಟಾದೇಃ ಪೂರ್ವೋತ್ತರಕಾಲಸತ್ತಾ ನ ಪ್ರತೀಯತೇ । ತದಪ್ರತೀತಿಶ್ಚ ಸಂವೇದನಸ್ಯ ಕಾಲಪರಿಚ್ಛಿನ್ನತಯಾ ಪ್ರತೀತೇಃ । ಘಟಾದಿವಿಷಯಮೇವ ಸಂವೇದನಂ ಸ್ವಯಂ ಕಾಲಾನವಚ್ಛಿನ್ನಂ ಪ್ರತೀತಂ ಚೇತ್ ಸಂವೇದನವಿಷಯೋ ಘಟಾದಿರಪಿ ಕಾಲಾನವಚ್ಛಿನ್ನಃ ಪ್ರತೀಯೇತೇತಿ ನಿತ್ಯಃ ಸ್ಯಾತ್ । ನಿತ್ಯಂ ಚೇತ್ ಸಂವೇದನಂ ಸ್ವತಃಸಿದ್ಧಂ ನಿತ್ಯಮಿತ್ಯೇವ ಪ್ರತೀಯೇತ ; ನ ಚ ತಥಾ ಪ್ರತೀಯತೇ ॥

(ಅರ್ಥ)

ಇದಲ್ಲದೆ ಪ್ರತ್ಯಕ್ಷಜ್ಞಾನವು ತನ್ನ ವಿಷಯವಾದ ಘಟಾದಿಯನ್ನು ತನ್ನ ಇರವಿನ ಕಾಲದಲ್ಲಿ ಇದೆಯೆಂದು ಸಾಧಿಸುತ್ತಾ, ಅದಕ್ಕೆ ಯಾವಾಗಲೂ ಇರವನ್ನೇ ತಿಳಿಯಿಸುವದು ಕಂಡುಬಂದಿಲ್ಲವಾಗಿ ಘಟಾದಿಗಳಿಗೆ ಹಿಂದಿನಮುಂದಿನ ಕಾಲದಲ್ಲಿ ಇರುವಿಕೆಯ ಅರಿವಾಗುವದಿಲ್ಲ ; ಅದರ ಅರಿವಾಗದೆ ಇರುವದು ಸಂವಿತ್ತು ಕಾಲಪರಿಚ್ಛಿನ್ನವಾಗಿಯೇ ತಿಳಿಯಬರುವದರಿಂದ. ಘಟಾದಿವಿಷಯಕವಾಗಿಯೇ ಇರುವ ಅರಿವು ತಾನು ಕಾಲಾವಚ್ಛಿನ್ನವಾಗಿಲ್ಲದೆ ಪ್ರತೀತವಾಗಿದ್ದರೆ ಆ ಅರಿವಿನ ವಿಷಯ

---

1. ಬೆಂಕಿಗೆ ಹೊಗೆ ಎಂಬ ಲಿಂಗವು (ಗುರುತು) ಇರುವಂತೆ ಲಿಂಗವಿದ್ದರೆ ಅನುಮಾನಿಸಬಹುದು ; ಇಲ್ಲಿ ಅದಿಲ್ಲ.

2. ಅನುಪಲಬ್ಧಿಯೂ ಒಂದು ಪ್ರಮಾಣ ; ಅದರಿಂದಲೇ ಪ್ರಾಗಭಾವವು ಸಿದ್ಧವಾಯಿತು ಎಂದಿಟ್ಟುಕೊ –ಎಂದು ಅಭಿಪ್ರಾಯ.

ವಾದ ಘಟಾದಿಯೂ ಕಾಲಾನವಚ್ಛಿನ್ನವಲ್ಲವೆಂದೇ ಪ್ರತೀತವಾಗುತ್ತಿತ್ತಾದ್ದರಿಂದ ನಿತ್ಯವಾಗುತ್ತಿತ್ತು. **ನಿತ್ಯವಾದ ಅರಿವು ಸ್ವತಃಸಿದ್ಧವಾಗಿದ್ದಿದ್ದರೆ ನಿತ್ಯವೆಂದೇ ಪ್ರತೀತವಾಗಬೇಕಿತ್ತು ;** ಆದರೆ ಹಾಗೆ ಪ್ರತೀತವಾಗುತ್ತಿಲ್ಲ.

(ಮೂಲ)

ಏವಮ್ ಅನುಮಾನಾದಿಸಂವಿದೋಽಪಿ ಕಾಲಾನವಚ್ಛಿನ್ನಾಃ ಪ್ರತೀತಾಶ್ಚೇತ್ ಸ್ವವಿಷಯಾನಪಿ ಕಾಲಾನವಚ್ಛಿನ್ನಾನ್ ಪ್ರಕಾಶಯನ್ತೀತಿ ತೇ ಚ ಸರ್ವೇ ಕಾಲಾನವಚ್ಛಿನ್ನಾ ನಿತ್ಯಾಃ ಸ್ಯುಃ । ಸಂವಿದನುರೂಪಸ್ವರೂಪತ್ವಾದ್ ವಿಷಯಾಣಾಮ್ । ನ ಚ ನಿರ್ವಿಷಯಾ ಕಾಚಿತ್ ಸಂವಿದಸ್ತಿ । ಅನುಪಲಬ್ಧೇಃ । ವಿಷಯಪ್ರಕಾಶನತಯೈವೋಪಲಬ್ಧೇರೇವ ಹಿ ಸಂವಿದಃ ಸ್ವಯಂಪ್ರಕಾಶತಾ ಸಮರ್ಥಿತಾ । ಸಂವಿದೋ ವಿಷಯಪ್ರಕಾಶನತಾಸ್ವಭಾವವಿರಹೇ ಸತಿ ಸ್ವಯಂಪ್ರಕಾಶತ್ವಾಸಿದ್ಧೇಃ, ಅನುಭೂತೇರನುಭವಾನ್ತರಾನನುಭಾವ್ಯತ್ವಾಚ್ಚ ಸಂವಿದಸ್ತುಚ್ಛತೈವ ಸ್ಯಾತ್ ॥

(ಅರ್ಥ)

ಹೀಗೆಯೇ ಅನುಮಾನವೇ ಮುಂತಾದ ಸಂವಿತ್ತುಗಳೂ ಕಾಲಾವಚ್ಛಿನ್ನಗಳಲ್ಲವೆಂದು ಪ್ರತೀತವಾಗಿದ್ದರೆ ತಮ್ಮ ವಿಷಯಗಳನ್ನು ಕಾಲಾವಚ್ಛಿನ್ನಗಳಲ್ಲವೆಂದೇ ಪ್ರಕಾಶಿಸುತ್ತಿದ್ದವಾದ್ದರಿಂದ, ಅವೆಲ್ಲವೂ ಕಾಲಾನವಚ್ಛಿನ್ನವೇ ಆಗಿ ನಿತ್ಯವಾಗಿರುತ್ತಿದ್ದವು ; ಏಕೆಂದರೆ ವಿಷಯಗಳು ಸಂವಿತ್ತುಗಳಿಗೆ ಅನುರೂಪವಾದ ಸ್ವರೂಪದ್ದಾಗಿರುತ್ತವೆ. **ವಿಷಯವೇ ಇಲ್ಲದ ಸಂವಿತ್ತು ಯಾವದೊಂದೂ ಇರುವದಿಲ್ಲ;** ಏಕೆಂದರೆ (ಅಂಥದ್ದು ಯಾವದೂ) ಕಂಡುಬರುವದಿಲ್ಲ. ವಿಷಯವನ್ನು ಬೆಳಗುತ್ತಿದೆಯೆಂಬ (ಕಾರಣ)ದಿಂದಲೇ ತೋರಿಬರುತ್ತಿರುವದರಿಂದಲೇ ಅಲ್ಲವೆ, ಸಂವಿತ್ತು ಸ್ವಯಂಪ್ರಕಾಶವೆಂಬುದನ್ನು (ನೀವು) ಸಮರ್ಥಿಸಿರುವದು [1]? ಸಂವಿತ್ತು ವಿಷಯವನ್ನು ಬೆಳಗುವ ಸ್ವಭಾವವಿಲ್ಲವಾದರೆ ಸ್ವಯಂಪ್ರಕಾಶತ್ವವೇ ಸಿದ್ಧಿಸುವದಿಲ್ಲವಾದ್ದರಿಂದಲೂ ಅನುಭೂತಿಯು ಮತ್ತೊಂದು ಅನುಭವಕ್ಕೆ ಅನುಭಾವ್ಯವಲ್ಲವಾದ್ದರಿಂದ (ಅಂಥ) ಸಂವಿತ್ತು ತುಚ್ಛವೇ ಆದೀತು.[2]

---

1. ಅನುಭವವು ಸ್ವಯಂಪ್ರಕಾಶವೆಂಬುದನ್ನು ಯುಕ್ತಿಯಿಂದ ಸಾಧಿಸಿರುವದೇ ಇಲ್ಲಿ ಪೂರ್ವಪಕ್ಷದಲ್ಲಿ ದೋಷ. ಏಕೆಂದರೆ ದೀಪವು ತಾನೇ ಬೆಳಗುವದೆಂಬುದು ಮತ್ತೊಂದನ್ನು ಬೆಳಗುವದೆಂಬ ಕಾರಣದಿಂದ ಅಲ್ಲ ; ಅದಕ್ಕೆ ಬೆಳಗತಕ್ಕ ವಿಷಯವೇ ಇಲ್ಲದಿದ್ದರೂ ಅದು ಬೆಳಗುತ್ತಲೇ ಇರುತ್ತಿತ್ತಲ್ಲವೆ ? ಇದನ್ನು ಲೆಕ್ಕಕ್ಕೆ ಹಿಡಿದಿಲ್ಲ.

2. ಸ್ವಯಂಪ್ರಕಾಶತ್ವವು ವಿಷಯಪ್ರಕಾಶನದಿಂದಲೇ ಎಂದು ಹಿಂದೆ ಹೇಳಿದ್ದಾಗಿದೆ; ಅದೂ ಇಲ್ಲದೆ ಮತ್ತೊಂದು ಅನುಭವಕ್ಕೂ ವಿಷಯವಲ್ಲದ್ದು ಎಂದರೆ ಅದು ವಂಧ್ಯಾಪುತ್ರನಂತೆ ಇಲ್ಲವೇ ಇಲ್ಲವೆಂದಾಗುತ್ತದೆ– ಎಂದು ಅಭಿಪ್ರಾಯ.

## (೬) ಸೌಷುಪ್ತಾನುಭವ

(ಮೂಲ)

ನ ಚ ಸ್ವಾಪಮದಮೂರ್ಛಾದಿಷು ಸರ್ವವಿಷಯಶೂನ್ಯಾ ಕೇವಲೈವ ಸಂವಿತ್ ಪರಿಸ್ಫುರತಿ – ಇತಿ ವಾಚ್ಯಮ್ । ಯೋಗ್ಯಾನುಪಲಬ್ಧಿಪರಾಹತತ್ವಾತ್ । ತಾಸ್ವಪಿ ದಶಾಸು ಅನುಭೂತಿರನುಭೂತಾ ಚೇತ್, ತಸ್ಯಾಃ ಪ್ರಬೋಧಸಮಯೇಽನುಸಂಧಾನಂ ಸ್ಯಾತ್, ನ ಚ ತದಸ್ತಿ ॥

ನನ್ವನುಭೂತಸ್ಯ ಪದಾರ್ಥಸ್ಯ ಸ್ಮರಣನಿಯಮೋ ನ ದೃಷ್ಟಚರಃ । ಅತಃ ಸ್ಮರಣಾಭಾವಃ ಕಥಮನುಭವಾಭಾವಂ ಸಾಧಯೇತ್ ? ಉಚ್ಯತೇ । ನಿಖಿಲ ಸಂಸ್ಕಾರತಿರಸ್ಕೃತಿಕರದೇಹವಿಗಮಾದಿಪ್ರಬಲಹೇತುವಿರಹೇಽಪಿ ಅಸ್ಮರಣನಿಯಮೋಽನುಭವಾಭಾವಮೇವ ಸಾಧಯತಿ । ನ ಕೇವಲಮ್ ಅಸ್ಮರಣನಿಯಮಾದನುಭವಾಭಾವಃ ; ಸುಪ್ತೋತ್ಥಿತಸ್ಯ 'ಇಯನ್ತಂ ಕಾಲಂ ನ ಕಿಞ್ಚಿದಹಮಜ್ಞಾಸಿಷಮ್' ಇತಿ ಪ್ರತ್ಯವಮರ್ಶೇನೈವ ಸಿದ್ಧೇಃ । ನ ಚ ಸತ್ಯಪ್ಯನುಭವೇ ತದಸ್ಮರಣನಿಯಮೋ ವಿಷಯಾವಚ್ಛೇದವಿರಹಾತ್, ಅಹಙ್ಕಾರವಿಗಮಾದ್ ವಾ ಇತಿ ಶಕ್ಯತೇ ವಕ್ತುಮ್; ಅರ್ಥಾನ್ತರಾನನುಭವಸ್ಯ ಅರ್ಥಾನ್ತರಾಭಾವಸ್ಯ ಚಾನುಭೂತಾರ್ಥಾನ್ತರಾಸ್ಮರಣ ಹೇತುತ್ವಾಭಾವಾತ್ । ತಾಸ್ವಪಿ ದಶಾಸು ಅಹಮರ್ಥೋಽನುವರ್ತತ ಇತಿ ಚ ವಕ್ಷ್ಯತೇ ॥

(ಅರ್ಥ)

ಸುಷುಪ್ತಿ, ಮದ, ಮೂರ್ಛೆ–ಮುಂತಾದ (ಅವಸ್ಥೆ)ಗಳಲ್ಲಿ ಯಾವ ವಿಷಯವೂ ಇಲ್ಲದ ಬರಿಯ ಅನುಭವವೇ ತೋರುತ್ತಿರುತ್ತದೆಯಲ್ಲ ! –ಎನ್ನುವಹಾಗೂ ಇಲ್ಲ. ಏಕೆಂದರೆ (ಈ ಮಾತು) ಯೋಗ್ಯಾನುಪಲಬ್ಧಿ[1](ಪ್ರಮಾಣಕ್ಕೆ) ವಿರುದ್ಧವಾಗಿರುತ್ತದೆ. ಆ ಅವಸ್ಥೆಗಳಲ್ಲಿಯೂ ಅನುಭೂತಿಯು ಅನುಭೂತವಾಗಿದ್ದರೆ, ಎಚ್ಚತ್ತ ಕಾಲವಲ್ಲಿ ಅದರ ನೆನಪು ಆಗಬೇಕಾಗಿತ್ತು ; ಅದರೆ ಹಾಗಿಲ್ಲ.

(ಆಕ್ಷೇಪ) :– ಅನುಭೂತವಾದ ಪದಾರ್ಥವನ್ನು ಸ್ಮರಿಸಿಯೇತೀರಬೇಕೆಂಬ ನಿಯಮವನ್ನು (ನಾವು) ಕಂಡಿಲ್ಲವಲ್ಲ[2] ! ಆದ್ದರಿಂದ ಸ್ಮರಣೆಯಿಲ್ಲವೆಂಬುದು ಅನುಭವವಿರಲಿಲ್ಲವೆಂಬುದಕ್ಕೆ ಹೇಗೆ ಸಾಧಕವಾದೀತು ?

(ಪರಿಹಾರ) :– ಹೇಳುತ್ತೇವೆ. ಎಲ್ಲಾ ಸಂಸ್ಕಾರಗಳನ್ನೂ ತಿರಸ್ಕರಿಸುವ ದೇಹವೇ ಇಲ್ಲವಾಗುವದೇ ಮುಂತಾದ ಪ್ರಬಲಹೇತುವಿಲ್ಲದಿದ್ದರೂ ನಿಯಮದಿಂದ

1. ಪ್ರಮಾಣಕ್ಕೆ ಗೋಚರವಾಗಬೇಕಾಗಿದ್ದಾಗ ಕಾಣದೆ ಇರುವದು ಅನುಪಲಬ್ಧಿ ; ಸುಷುಪ್ತ್ಯಾದಿಗಳಲ್ಲಿ ಅನುಭವವಿದ್ದರೆ ಅದರ ಸ್ಮರಣೆಯಾಗಬೇಕಿತ್ತು, ಆದರೆ ಆಗುವದಿಲ್ಲ– ಎಂಬುದೇ ಇಲ್ಲಿ ಯೋಗ್ಯಾನುಪಲಬ್ಧಿ– ಎಂದು ಭಾವ.

2. ಅನುಭವಿಸಿದ್ದನ್ನು ಸ್ಮರಿಸದೆ ಇರುವದೂ ಉಂಟಲ್ಲ ?

ಸ್ಮರಣೆಯಿಲ್ಲದಿರುವದು ಅನುಭವವು ಇಲ್ಲವೆಂಬುದನ್ನೇ ಸಾಧಿಸುತ್ತದೆ. ಅಸ್ಮರಣೆಯು ನಿಯಮದಿಂದಾಗುವದೆಂಬ ಕಾರಣದಿಂದ ಮಾತ್ರವೇ ಅನುಭವವಿಲ್ಲವೆಂದು (ನಾವು ಹೇಳುತ್ತಿಲ್ಲ); ಏಕೆಂದರೆ ನಿದ್ರೆಯಿಂದ ಎಚ್ಚತ್ತವನು 'ಇಷ್ಟುಕಾಲವೂ ನನಗೆ ಏನೂ ತಿಳಿಯಲಿಲ್ಲ' ಎಂದು ಪರಾಮರ್ಶಿಸುವದರಿಂದಲೇ (ಹಾಗೆಂದು) ಸಿದ್ಧವಾಗುತ್ತದೆ.[1] ಅನುಭವವಿದ್ದರೂ ಅದನ್ನು ಸ್ಮರಿಸುವದೇ ಇಲ್ಲವೆಂಬ ನಿಯಮವು, ವಿಷಯಪರಿಚ್ಛೇದವಿಲ್ಲದ್ದರಿಂದಲೋ, ಅಹಂಕಾರವಿಲ್ಲದ್ದರಿಂದಲೋ (ಆಗಬಹುದು) ಎಂದು ಹೇಳುವದಕ್ಕೆ ಆಗುವದಿಲ್ಲ. ಏಕೆಂದರೆ ಒಂದು ಪದಾರ್ಥವನ್ನು ಅನುಭವಿಸದೆ ಇರುವದೂ, ಒಂದು ವಸ್ತುವಿಲ್ಲದಿರುವದೂ ಅನುಭವಿಸಲ್ಪಟ್ಟ ಮತ್ತೊಂದು ಪದಾರ್ಥದ ಅಸ್ಮರಣೆಗೆ ಹೇತುವಾಗಲಾರದು. ಆ (ನಿದ್ರಾಮದಮೂರ್ಛಾದಿ) ಅವಸ್ಥೆಗಳಲ್ಲಿಯೂ ಅಹಮರ್ಥವು[2] ಇದ್ದುಕೊಂಡೇ ಇರುತ್ತದೆ ಎಂದು (ನಾವು) ಮುಂದೆ ಹೇಳುವವರೂ ಆಗಿದೇವೆ.

(ಮೂಲ)

ನನು ಸ್ವಾಪಾದಿದಶಾಸ್ವಪಿ ಸವಿಶೇಷೋಽನುಭವೋಽಸ್ತೀತಿ ಪೂರ್ವಮ್ ಉಕ್ತಮ್। ಸತ್ಯಮುಕ್ತಮ್ । ಸ ತ್ವಾತ್ಮಾನುಭವಃ। ಸ ಚ ಸವಿಶೇಷ ಏವೇತಿ ಸ್ಥಾಪಯಿಷ್ಯತೇ। ಇಹ ತು ಸಕಲವಿಷಯವಿರಹಿಣೀ ನಿರಾಶ್ರಯಾ ಚ ಸಂವಿನ್ನಿಷಿಧ್ಯತೇ। ಕೇವಲೈವ ಸಂವಿದಾತ್ಮಾನುಭವ ಇತಿ ಚೇತ್, ನ। ಸಾ ಚ ಸಾಶ್ರಯೇತಿ ಹ್ಯುಪಪಾದಯಿಷ್ಯತೇ। ಅತೋಽನುಭೂತಿಃ ಸತೀ ಸ್ವಯಂ ಸ್ವಪ್ರಾಗಭಾವಂ ನ ಸಾಧಯತೀತಿ ಪ್ರಾಗಭಾವಾಸಿದ್ಧಿರ್ನ ಶಕ್ಯತೇ ವಕ್ತುಮ್ । ಅನುಭೂತೇರನುಭಾವ್ಯತ್ವಸಂಭವೋಪಪಾದನೇನ, ಅನ್ಯತೋಽಪ್ಯಸಿದ್ಧಿರ್ನಿರಸ್ತಾ । ತಸ್ಮಾತ್ ನ ಪ್ರಾಗಭಾವಾದ್ಯಸಿದ್ಧ್ಯಾ ಸಂವಿದೋಽನುತ್ಪತ್ತಿರುಪಪತ್ತಿಮತೀ ॥

(ಅರ್ಥ)

(ಶಂಕೆ) :– ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿಯೂ ಸವಿಶೇಷವಾದ ಅನುಭವವು ಇದೆ ಎಂದು ಹಿಂದೆ (ಪು. ೭೭ರಲ್ಲಿ) ಹೇಳಿದ್ದಿರಲ್ಲ !

(ಪರಿಹಾರ) :– ನಿಜ, ಹೇಳಿದ್ದೆವು, ಅದು ಸವಿಶೇಷವೇ ಎಂದು (ಮುಂದೆ) ಸ್ಥಾಪಿಸಲಾಗುವದು. ಇಲ್ಲಿಯಾದರೋ ಯಾವ ವಿಷಯವೂ ಇಲ್ಲದ ನಿರಾಶ್ರಯವಾದ ಸಂವಿತ್ತು ಇಲ್ಲ– ಎನ್ನುತ್ತಿದೇವೆ.

---

1. ಎಚ್ಚತ್ತವನಿಗೆ ಆಗುವ ನಿದ್ರೆಯ ಪರಾಮರ್ಶದ ಬಗ್ಗೆ ಪರಿಶಿಷ್ಟವನ್ನು ನೋಡಿ.

2. ನಿದ್ರೆಯಲ್ಲಿ ಯಾವಯಾವ ಪದಾರ್ಥಗಳಿರುತ್ತವೆ ಎಂಬ ಬಗ್ಗೆ ವಾದಿಗಳ ಅಭಿಪ್ರಾಯಭೇದಕ್ಕೆ ಪರಿಶಿಷ್ಟವನ್ನು ನೋಡಿ.

(ಶಂಕೆ) :– ಬರಿಯ ಸಂವಿತ್ತೇ ಆತ್ಮಾನುಭವವೆಂಬುದು ಎಂದರೊ ?

(ಪರಿಹಾರ) :– ಅದೇ ಸಾಶ್ರಯವಾಗಿರುತ್ತದೆ ಎಂದು– (ಮುಂದೆ) ಉಪಪತ್ತಿಪೂರ್ವಕವಾಗಿ ತೋರಿಸಿಕೊಡಲಾಗುವದು ; ಆದ್ದರಿಂದ ಅನುಭೂತಿಯೇ ಸತ್ತು, (ಅದು) ತನ್ನ ಪ್ರಾಗಭಾವವನ್ನು ಸಾಧಿಸಲಾರದಾದ್ದರಿಂದ ಪ್ರಾಗಭಾವವು ಸಿದ್ಧಿಸಲಾರದು– ಎಂದು ಹೇಳುವದಕ್ಕಾಗುವದಿಲ್ಲ. ಅನುಭೂತಿಯು ಅನುಭಾವ್ಯವೂ ಆಗಿರಬಹುದೆಂಬುದನ್ನು ಉಪಪಾದಿಸಿಕೊಡುವದರಿಂದ ಮತ್ತೊಂದರಿಂದಲೂ (ಪ್ರಾಗಭಾವವು) ಸಿದ್ಧಿಸುವದಿಲ್ಲ ಎಂಬುದನ್ನೂ ತಿರಸ್ಕರಿಸಿದಂತೆ ಆಯಿತು.

## (೧೦) ಅನುಭೂತಿಯು ನಿರ್ವಿಕಾರವಲ್ಲ

(ಮೂಲ)

ಯದಪ್ಯಸ್ಯಾ ಅನುತ್ಪತ್ತ್ಯಾ ವಿಕಾರಾನ್ತರನಿರಸನಮ್, ತದಪ್ಯನುಪಪನ್ನಮ್ । ಪ್ರಾಗಭಾವೇ ವ್ಯಭಿಚಾರಾತ್ । ತಸ್ಯ ಹಿ ಜನ್ಮಾಭಾವೇಽಪಿ ವಿನಾಶೋ ದೃಶ್ಯತೇ । 'ಭಾವೇಷು' ಇತಿ ವಿಶೇಷಣೇ ತರ್ಕಕುಶಲತಾ ಆವಿಷ್ಕೃತಾ ಭವತಿ । ತಥಾ ಚ ಭವದಭಿಮತಾ ಅವಿದ್ಯಾ ಅನುತ್ಪನ್ನೈವ ವಿವಿಧವಿಕಾರಾಸ್ಪದಮ್, ತತ್ತ್ವಜ್ಞಾನೋದಯಾದನ್ತವತೀ ಚ ಇತಿ ತಸ್ಯಾಮ್ ಅನೈಕಾನ್ತ್ಯಮ್ । ತದ್ವಿಕಾರಾಃ ಸರ್ವೇ ಮಿಥ್ಯಾಭೂತಾಃ – ಇತಿ ಚೇತ್, ಕಿಂ ಭವತಃ ಪರಮಾರ್ಥಭೂತೋಽಪ್ಯಸ್ತಿ ವಿಕಾರಃ, ಯೇನೈತದ್ ವಿಶೇಷಣಮ್ ಅರ್ಥವದ್ ಭವತಿ ? ನ ಹ್ಯಸೌ ಅಭ್ಯುಪಗಮ್ಯತೇ ॥

(ಅರ್ಥ)

**ಈ (ಅನುಭೂತಿಗೆ) ಉತ್ಪತ್ತಿಯಿಲ್ಲದ್ದರಿಂದ ವಿಕಾರಾಂತರವೂ ಇಲ್ಲವೆಂದು (ಅದನ್ನು) ನಿರಾಕರಿಸಿದೆಯಲ್ಲ,** ಅದೂ ಅಯುಕ್ತ. ಏಕೆಂದರೆ ಪ್ರಾಗಭಾವದಲ್ಲಿ[1] (ಈ ನಿಯಮದ) ವ್ಯಭಿಚಾರವಿದೆ. ಹೇಗೆಂದರೆ ಆ (ಪ್ರಾಗಭಾವಕ್ಕೆ) ಜನ್ಮವಿಲ್ಲದಿದ್ದರೂ ವಿನಾಶವನ್ನು ಒಪ್ಪಲಾಗಿದೆ. 'ಭಾವಗಳಲ್ಲಿ' (ಈ ನಿಯಮ) ಎಂದು ವಿಶೇಷಣ(ವನ್ನು ಹಾಕಿದರೆ) ತರ್ಕಕೌಶಲವನ್ನು ಹೊರಪಡಿಸಿದಂತೆ ಆಗುತ್ತದೆ. ಅದರಿಂದ ನಿಮಗೆ ಒಪ್ಪಾಗಿರುವ ಅವಿದ್ಯೆಯು[2] ಹುಟ್ಟದೆಯೇ ವಿವಿಧವಾದ ವಿಕಾರಗಳಿಗೆ ಆಶ್ರಯವಾಗಿರುತ್ತದೆ, ತತ್ತ್ವಜ್ಞಾನವು ಹುಟ್ಟಿದಾಗ ಅಂತವುಳ್ಳದ್ದೂ (ಆಗುತ್ತದೆ)ಯಾಗಿ ಅದರ ವಿಷಯಕ್ಕೆ ಈ (ನಿಯಮವು)

1. ತಾರ್ಕಿಕರ ಮತದಲ್ಲಿ ಪ್ರಾಗಭಾವವು ಅನಾದಿ, ಸಾಂತ; ಪ್ರಧ್ವಂಸಾಭಾವವು ಸಾದಿ, ಅನಂತ. ಅಭಾವದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. ಪಂಚಪಾದಿಕೆಯೇ ಮುಂತಾದ ವ್ಯಾಖ್ಯಾನಗಳಲ್ಲಿ ಅವಿದ್ಯೆ ಎಂದರೆ ನಾಮರೂಪಶಕ್ತಿ ಭಾವರೂಪ– ಎಂದು ಒಪ್ಪಿದೆ. ಪರಿಶಿಷ್ಟವನ್ನು ನೋಡಿ.

ಏಕಾಂತವಾಗಿಲ್ಲ(ವೆಂದೇ ಆಗುತ್ತದೆ). ಆ (ಅವಿದ್ಯೆಯ) ವಿಕಾರಗಳೆಲ್ಲವೂ, ಮಿಥ್ಯಾಭೂತವಾಗಿವೆಯಲ್ಲ !– ಎನ್ನುವೆಯಾದರೆ, ನಿನ್ನ ಪಕ್ಷದಲ್ಲಿ ಪರಮಾರ್ಥವಾಗಿಯೂ ಇರುವ ವಿಕಾರವೂ ಉಂಟೇನು ? ಹಾಗಿದ್ದರಲ್ಲವೆ, ಈ (ಮಿಥ್ಯಾಭೂತ) ಎಂಬ ವಿಶೇಷಣವು ಸಾರ್ಥಕವಾಗುತ್ತದೆ ? ಆ (ಪರಮಾರ್ಥವಿಕಾರವನ್ನು ನೀನು) ಒಪ್ಪಿಯೇ ಇಲ್ಲವಲ್ಲ !

(ಮೂಲ)

ಯದಪ್ಯನುಭೂತಿರಜತ್ವಾತ್ ಸ್ವಸ್ಮಿನ್ ವಿಭಾಗಂ ನ ಸಹತೇ ಇತಿ, ತದಪಿ ನೋಪಪದ್ಯತೇ, ಅಜಸ್ಯೈವಾತ್ಮನೋ ದೇಹೇನ್ದ್ರಿಯಾದಿಭ್ಯೋ ವಿಭಕ್ತತ್ವಾತ್, ಅನಾದಿತ್ವೇನ ಚಾಭ್ಯುಪಗತಾಯಾ ಅವಿದ್ಯಾಯಾ ಆತ್ಮನೋ ವ್ಯತಿರೇಕಸ್ಯಾವಶ್ಯಾಭ್ರಯಣೀಯತ್ವಾತ್ । ಸ ಚ ವಿಭಾಗೋ ಮಿಥ್ಯಾರೂಪ ಇತಿ ಚೇತ್, ಜನ್ಮಪ್ರತಿಬದ್ಧಃ ಪರಮಾರ್ಥವಿಭಾಗಃ ಕಿಂ ಕ್ವಚಿದ್ದೃಷ್ಟಸ್ತ್ವಯಾ ? ಅವಿದ್ಯಾಯಾ ಆತ್ಮನಃ ಪರಮಾರ್ಥತೋ ವಿಭಾಗಾಭಾವೇ ವಸ್ತುತೋ ಹ್ಯವಿದ್ಯೈವ ಸ್ಯಾದಾತ್ಮಾ, ಅಬಾಧಿತಪ್ರತಿಪತ್ತಿಸಿದ್ಧದೃಶ್ಯಭೇದಸಮರ್ಥನೇನ ದರ್ಶನಭೇದೋಽಪಿ ಸಮರ್ಥಿತ ಏವ । ಛೇದ್ಯಭೇದಾಚ್ಛೇದನಭೇದವತ್ ॥

(ಅರ್ಥ)

**ಅನುಭೂತಿಯು ಜನ್ಮರಹಿತವಾಗಿರುವದರಿಂದ ತನ್ನಲ್ಲಿ (ಯಾವ) ವಿಭಾಗವನ್ನೂ ಸಹಿಸದು ಎಂದೆಯಲ್ಲ,** ಅದೂ ಹೊಂದುವದಿಲ್ಲ. ಅಜನೇ ಆಗಿದ್ದರೂ ಆತ್ಮನು ದೇಹೇಂದ್ರಿಯಾದಿಗಳಿಂದ ವಿಭಕ್ತನಾಗಿರುತ್ತಾನೆ ; ಅನಾದಿ ಎಂದು (ನೀನು) ಒಪ್ಪಿರುವ ಅವಿದ್ಯೆಯು ಆತ್ಮನಿಗಿಂತ ಅತಿರಿಕ್ತವಾಗಿದೆ ಎಂದು ಅವಶ್ಯವಾಗಿ (ನೀನು) ಇಟ್ಟುಕೊಳ್ಳಬೇಕಾಗಿರುತ್ತದೆ. ಆ ವಿಭಾಗವು ಮಿಥ್ಯಾರೂಪವಾದದ್ದು – ಎನ್ನುವೆಯಾದರೆ, ಜನ್ಮಸಂಬಂಧದಿಂದಾಗಿರುವ ಪರಮಾರ್ಥವಿಭಾಗವನ್ನು ನೀನು ಎಲ್ಲಿಯಾದರೂ ಕಂಡಿರುವೆಯೇನು[1] ? ಅವಿದ್ಯೆಯು ಆತ್ಮನಿಂದ ವಿಭಕ್ತವಾಗಿರುವದು ಪರಮಾರ್ಥವಲ್ಲವಾದರೆ, ಆತ್ಮನು ವಸ್ತುತಃ ಅವಿದ್ಯೆಯೇ ಆಗುವನು.[2] ಅಬಾಧಿತವಾದ ಜ್ಞಾನದಿಂದ ದೃಶ್ಯಭೇದವು ಸಿದ್ಧವಾಗುತ್ತದೆಯೆಂದು (ನಾವು) ಸಮರ್ಥಿಸಿರುವದರಿಂದ, ದರ್ಶನದ ಭೇದವನ್ನು ಸಮರ್ಥಿಸಿ

---

1. ಪಾರಮಾರ್ಥಿಕವಾಗಿ ವಿಭಾಗವಿಲ್ಲದಿದ್ದರೂ ವ್ಯವಹಾರದಲ್ಲಿಯೇ ಸತ್ಯಮಿಥ್ಯಾ ವಿಭಾಗವುಂಟು. ವ್ಯಾವಹಾರಿಕವಾಗಿರುವ ಆ ದೇಹಾದಿಗಳಿಗಿಂತ ಜೀವಾತ್ಮನು ಬೇರೆ ಎಂಬುದು ನಿಜವಾದರೂ ಪಾರಮಾರ್ಥಿಕಾತ್ಮನು ವಿಭಕ್ತನಾಗಿಲ್ಲ ಎಂದು ಪೂರ್ವಪಕ್ಷಿ ಹೇಳಬಹುದು ; ಅದನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡಿಲ್ಲ.

2. ಅವಿದ್ಯೆಯು ಅನಿರ್ವಚನೀಯ, ಆತ್ಮನು ಸತ್ಯ– ಎಂಬ ಪೂರ್ವಪಕ್ಷಿಯ ಮತವನ್ನೂ ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ.

ದಂತೆಯೇ ಆಗಿರುತ್ತದೆ. ಭೇದ್ಯದ ಭೇದದಿಂದ ಭೇದನವೂ ಭಿನ್ನವಾಗುವದಲ್ಲವೆ, ಹಾಗೆ.[1]

## (೧೧) ಅನುಭೂತಿಯು ನಿರ್ಧರ್ಮಕವಲ್ಲ

(ಮೂಲ)

ಯದಪಿ ನಾಸ್ಯಾ ದೃಶೇರ್ದೃಶಿರೂಪಾಯಾ ದೃಶ್ಯಃ ಕಶ್ಚಿದಪಿ ಧರ್ಮೋಽಸ್ತಿ । ದೃಶ್ಯತ್ವಾದೇವ ತೇಷಾಂ ನ ದೃಶಿಧರ್ಮತ್ವಮ್ ಇತಿ ಚ, ತದಪಿ ಸ್ವಾಭ್ಯುಪಗತೈಃ ಪ್ರಮಾಣಸಿದ್ಧೈಃ, ನಿತ್ಯತ್ವಸ್ವಯಂಪ್ರಕಾಶತ್ವಾದಿಧರ್ಮೈರುಭಯಮ್ ಅನೈಕಾನ್ತಿಕಮ್। ನ ಚ ತೇ ಸಂವೇದನಮಾತ್ರಮ್, ಸ್ವರೂಪಭೇದಾತ್ । ಸ್ವಸತ್ತಯೈವ ಸ್ವಾಶ್ರಯಂ ಪ್ರತಿ ಕಸ್ಯಚಿದ್ ವಿಷಯಸ್ಯ ಪ್ರಕಾಶನಂ ಹಿ ಸಂವೇದನಮ್ ; ಸ್ವಯಂಪ್ರಕಾಶತಾ ತು ಸ್ವಸತ್ತಯೈವ ಸ್ವಾಶ್ರಯಾಯ ಪ್ರಕಾಶಮಾನತಾ । ಪ್ರಕಾಶಶ್ಚ ಚಿದಚಿದಶೇಷಪದಾರ್ಥಸಾಧಾರಣಂ ವ್ಯವಹಾರಾನುಗುಣ್ಯಮ್ । ಸರ್ವ ಕಾಲವರ್ತಮಾನತ್ವಂ ಹಿ ನಿತ್ಯತ್ವಮ್, ಏಕತ್ವಮೇಕಸಙ್ಖ್ಯಾವಚ್ಛೇದ ಇತಿ । ತೇಷಾಂ ಜಡತ್ವಾದ್ಯಭಾವರೂಪತಾಯಾಮಪಿ ತಥಾಭೂತೈರಪಿ ಚೈತನ್ಯಧರ್ಮ ಭೂತೈಸ್ತೈಸ್ತೈರನೈಕಾನ್ತ್ಯಮ್ ಅಪರಿಹಾರ್ಯಮ್ । ಸಂವಿದಿ ಚ ಸ್ವರೂಪಾತಿ ರೇಕೇಣ ಜಡತ್ವಾದಿಪ್ರತ್ಯನೀಕತ್ವಮ್ ಇತ್ಯಭಾವರೂಪೋ ಭಾವರೂಪೋ ವಾ ಧರ್ಮೋ ನಾಭ್ಯುಪೇತಶ್ಚೇತ್; ತತ್ಸನ್ನಿಷೇಧೋಕ್ತ್ಯಾ ಕಿಮಪಿ ನೋಕ್ತಂ ಭವೇತ್॥

(ಅರ್ಥ)

ಇನ್ನು ಈ ದೃಶಿರೂಪವಾದ (ಅನುಭೂತಿಗೆ)[2] ದೃಶ್ಯವಾದ ಯಾವ **ಧರ್ಮವೂ ಇಲ್ಲ, ದೃಶ್ಯವಾಗಿರುವದರಿಂದ ಆ (ಧರ್ಮಗಳು) ದೃಶಿಯ ಧರ್ಮವಲ್ಲ ಎಂದೆಯಲ್ಲ,** ಅವೆರಡೂ ನೀನು ಒಪ್ಪಿರುವ ಪ್ರಮಾಣಸಿದ್ಧವಾಗಿರುವ ನಿತ್ಯತ್ವ, ಸ್ವಯಂಪ್ರಕಾಶತ್ವ– ಮುಂತಾದ ಧರ್ಮಗಳಿಂದ ಅನೈಕಾಂತಿಕವಾಗಿರುತ್ತದೆ.[3] ಅವು ಬರಿಯ ಸಂವೇದನವೇ ಎನ್ನುವದಕ್ಕೂ ಇಲ್ಲ; ಏಕೆಂದರೆ (ಅವುಗಳ) ಸ್ವರೂಪವು ಬೇರೆಬೇರೆಯಾಗಿದೆ. **ತನ್ನ ಇರವಿನಿಂದಲೇ ತನ್ನ ಆಶ್ರಯಕ್ಕೆ ಯಾವದೋ ಒಂದು ವಿಷಯವನ್ನು ಬೆಳಗಿತೋರುವದೇ ಅಲ್ಲವೆ, ಸಂವೇದನವು ? ಸ್ವಯಂಪ್ರಕಾಶತ್ವವೆಂಬುದಾದರೊ, ತನ್ನ ಇರವಿನಿಂದ**

1. ದೃಶ್ಯಗಳು ಬೇರೆಬೇರೆಯಾದ್ದರಿಂದ ಅವುಗಳ ದರ್ಶನಗಳೂ ಬೇರೆಬೇರೆ. ಭೇದ್ಯವಾದ ಕಟ್ಟಿಗೆಗಳು ಬೇರೆಬೇರೆಯಾದರೆ ಭೇದಕಗಳೂ ಬೇರೆಬೇರೆಯೇ ಆಗಿರಬೇಕಷ್ಟೆ ?– ಎಂದು ಭಾವ.

2. 'ದೃಶಿರೂಪಾಯಾ' ಎಂದಿಷ್ಟೇ ಪಾಠವಿದೆ ಎಂದಿಟ್ಟುಕೊಂಡು ಕನ್ನಡಿಸಿದೆ.

3. ಇವೇ ಧರ್ಮಗಳಾಗಿರುವದರಿಂದ ಧರ್ಮಗಳಲ್ಲವೆಂಬ ನಿಯಮವು ಸರಿಯಲ್ಲ.

**ಲೇ ತನ್ನ ಆಶ್ರಯಕ್ಕೆ ಬೆಳಗಿತೋರುವದು.[1] ಬೆಳಗಿತೋರುವಿಕೆ ಎಂದರೆ ಚಿತ್ತು, ಅಚಿತ್ತು– ಎಂಬ ಎಲ್ಲಾ ಪದಾರ್ಥಗಳಿಗೂ ಸಾಧಾರಣವಾಗಿರುವ ವ್ಯವಹಾರಾನುಗುಣ್ಯವು.[2]** ಎಲ್ಲಾ ಕಾಲದಲ್ಲಿಯೂ ಇರುವದೇ **ನಿತ್ಯತ್ವವು;** ಏಕತ್ವವೆಂದರೆ ಒಂದೆಂಬ ಸಂಖ್ಯೆಯ ಪರಿಚ್ಛೇದವು. ಈ (ಧರ್ಮಗಳು) ಜಡತ್ವವೇ ಮುಂತಾದವು ಅಭಾವರೂಪವಾಗಿವೆ ಎಂದರೂ ಹಾಗಿದ್ದರೂ ಚೈತನ್ಯದ ಧರ್ಮವಾಗಿರುವ ಅವುಗಳಲ್ಲಿ (ನಿಯಮವು) ಅನೈಕಾಂತಿಕವೆಂಬುದನ್ನು[3] ತಪ್ಪಿಸಿಕೊಳ್ಳುವದಕ್ಕೆ ಆಗುವದಿಲ್ಲ. ಸಂವಿತ್ತಿನಲ್ಲಿಯಾದರೊ, ಸ್ವರೂಪಕ್ಕಿಂತ ಅತಿರಿಕ್ತವಾಗಿ ಜಡತ್ವವೇ ಮುಂತಾದದ್ದಕ್ಕೆ ವಿರುದ್ಧವಾದದ್ದು ಎಂದು ಅಭಾವರೂಪವಾದ ಅಥವಾ ಭಾವರೂಪವಾದ ಧರ್ಮವನ್ನು ಅಂಗೀಕರಿಸದೆ ಇದ್ದರೆ ಆಯಾ ನಿಷೇಧವಚನದಿಂದ ಏನನ್ನೂ ಹೇಳಿದಂತೆಯೇ ಆಗುವದಿಲ್ಲ.[4]

## (೧೨) ಅನುಭೂತಿಯೇ ಆತ್ಮನಲ್ಲ

(ಮೂಲ)

ಅಪಿ ಚ ಸಂವಿತ್ ಸಿಧ್ಯತಿ ವಾ ನ ವಾ? ಸಿಧ್ಯತಿ ಚೇತ್ ಸಧರ್ಮತಾ ಸ್ಯಾತ್ । ನ ಚೇತ್ ತುಚ್ಛತಾ, ಗಗನಕುಸುಮಾದಿವತ್ । ಸಿದ್ಧಿರೇವ ಸಂವಿದಿತಿ ಚೇತ್, ಕಸ್ಯ ಕಂ ಪ್ರತಿ? ಇತಿ ವಕ್ತವ್ಯಮ್ । ಯದಿ ನ ಕಸ್ಯಚಿತ್ ಕಞ್ಚಿತ್ ಪ್ರತಿ, ಸಾ ತರ್ಹಿ ನ ಸಿದ್ಧಿಃ । ಸಿದ್ಧಿರ್ಹಿ ಪುತ್ರತ್ವಮಿವ ಕಸ್ಯಚಿತ್ ಕಞ್ಚಿತ್ ಪ್ರತಿ ಭವತಿ । ಆತ್ಮನ ಇತಿ ಚೇತ್ । ಕೋಽಯಮಾತ್ಮಾ? ನನು ಸಂವಿದೇವೇತ್ಯುಕ್ತಮ್ ; ಸತ್ಯಮುಕ್ತಮ್, ದುರುಕ್ತಂ ತು ತತ್ । ತಥಾ ಹಿ ಕಸ್ಯಚಿತ್ ಪುರುಷಸ್ಯ ಕಿಞ್ಚಿದರ್ಥಜಾತಂ ಪ್ರತಿ ಸಿದ್ಧಿರೂಪಾ ತತ್ಸಂಬನ್ಧಿನೀ ಸಾ ಸಂವಿತ್ ಸ್ವಯಂ ಕಥಮಿವಾಽಽತ್ಮಭಾವಮನುಭವೇತ್ ? ॥

ಏತದುಕ್ತಂ ಭವತಿ – ಅನುಭೂತಿರಿತಿ ಸ್ವಾಶ್ರಯಂ ಪ್ರತಿ ಸ್ವಸದ್ಭಾವೇನೈವ ಕಸ್ಯಚಿದ್ವಸ್ತುನೋ ವ್ಯವಹಾರಾನುಗುಣ್ಯಾಪಾದನಸ್ವಭಾವೋ ಜ್ಞಾನಾವಗತಿ ಸಂವಿದಾದ್ಯಪರನಾಮಾ ಸಕರ್ಮಕೋಽನುಭವಿತುರಾತ್ಮನೋ ಧರ್ಮವಿಶೇಷಃ 'ಘಟಮಹಂ ಜಾನಾಮಿ, ಇಮಮರ್ಥಮವಗಚ್ಛಾಮಿ, ಘಟಮಹಂ ಸಂವೇದ್ಮಿ'

---

1. ಹಿಂದೆ ಈ ಲಕ್ಷಣವಾಕ್ಯಗಳ ಅಭಿಪ್ರಾಯವು ಅಗಲೆ (ಪು. ೮೬ರಲ್ಲಿ) ಬಂಧಿದೆ.
2. ಘಟವೂ ತೋರುತ್ತದೆ, ಘಟದ ಜ್ಞಾನವೂ ತೋರುತ್ತದೆ.
3. ಜಡತ್ವಾಭಾವವೇ ಮುಂತಾದವುಗಳು ಅನುಭೂತಿಗಿಂತ ವ್ಯತಿರಿಕ್ತವಾದ ಧರ್ಮಗಳು ಎಂಬುದನ್ನು –ಎಂದರ್ಥ. ಈ ವಾದಸರಣಿಯಿಂದ ಬೆಂಕಿಯಲ್ಲಿ ಬಿಸಿ, ಬೆಳಕು, ಸುಡುವಿಕೆ– ಎಂಬ ಬೇರೆಬೇರೆಯ ಧರ್ಮಗಳೇ ಇರುತ್ತವೆ; ಅವು ಬೆಂಕಿಯ ಸ್ವರೂಪವೇ ಎಂಬುದನ್ನು ಇಲ್ಲಿ ಒಪ್ಪಿಲ್ಲ.
4. ನಿಷೇಧರೂಪವಾದ ವಿಶೇಷಣಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಇತಿ ಸರ್ವೇಷಾಮಾತ್ಮಸಾಕ್ಷಿಕಃ ಪ್ರಸಿದ್ಧಃ । ಏತತ್ಸ್ವಭಾವತಯಾ ಹಿ ತಸ್ಯಾಃ ಸ್ವಯಂಪ್ರಕಾಶತಾ ಭವತಾಪ್ಯುಪಪಾದಿತಾ । ಅಸ್ಯ ಸಕರ್ಮಕಸ್ಯ ಕರ್ತೃಧರ್ಮ ವಿಶೇಷಸ್ಯ ಕರ್ಮತ್ವವತ್ ಕರ್ತೃತ್ವಮಪಿ ದುರ್ಘಟಮಿತಿ ॥

(ಅರ್ಥ)

ಇದೂ ಅಲ್ಲದೆ, ಸಂವಿತ್ತು ಸಿದ್ಧವಾಗಿದೆಯೆ, ಇಲ್ಲವೆ? ಸಿದ್ಧವಾಗಿದೆಯಾದರೆ, (ಅದಕ್ಕೆ ಆ) ಧರ್ಮವಿದೆ ಎಂದಾಗುವದು, ಇಲ್ಲದಿದ್ದರೆ ಆಕಾಶದ ಹೂವಿನಂತೆ(ಅದು) ತುಚ್ಛವೆಂದೇ ಆಗುವದು. ಸಿದ್ಧಿಯೇ ಸಂವಿತ್ತು– ಎಂದರೆ ಆ (ಸಿದ್ಧಿಯು) ಯಾರಿಗೆ ಏತರ (ಸಿದ್ಧಿ) ?–ಎಂಬುವನ್ನೂ ಹೇಳಬೇಕು.[1] ಏತರದ್ದೂ ಅಲ್ಲ, ಯಾರಿಗೂ ಅಲ್ಲ –ಎಂದಾದರೆ ಅದು ಹಾಗಾದರೆ ಸಿದ್ಧಿಯಲ್ಲ. ಏಕೆಂದರೆ ಸಿದ್ಧಿ ಎಂದರೆ ಪುತ್ರತ್ವ ದಂತೆ ಒಂದರದ್ದು ಒಬ್ಬನಿಗೆ ಆಗಿರುತ್ತದೆ. ಆತ್ಮನಿಗೆ ಎಂದರೆ, ಈ ಆತ್ಮನೆಂದರೆ ಯಾರು? 'ಸಂವಿತ್ತೇ' ಎಂದೆನಲ್ಲ! (ಎಂದರೆ), ನಿಜ, ಹೇಳಿದಿರಿ ; ಆದರೆ ಅದು ಸರಿಯಾಗಿ ಹೇಳಿದ್ದಲ್ಲ. ಏಕೆಂದರೆ, ಏತರದ್ದೋ ಯಾವನಿಗೋ ಒಬ್ಬ ಮನುಷ್ಯನಿಗೆ ಯಾವದೋ ವಿಷಯವನ್ನು ಕುರಿತು ಸಿದ್ಧಿಯಾಗಿ ಅವನಿಗೆ ಸೇರಿ ಕೊಂಡಿರುವ ಆ ಸಂವಿತ್ತು ತಾನು ಹೇಗೆತಾನೆ ಆತ್ಮತ್ವವನ್ನು ಅನುಭವಿಸೀತು ?

ಇಲ್ಲಿ ಇಷ್ಟನ್ನು ಹೇಳಿದಂತೆ ಆಗಿರುತ್ತದೆ : **'ಅನುಭೂತಿ' ಎಂದರೆ ತನ್ನ ಆಶ್ರಯಕ್ಕೆ ತನ್ನ ಇರವಿನಿಂದಲೇ ಯಾವದೋ ಒಂದು ವಸ್ತುವನ್ನು ವ್ಯವಹಾರಾನುಗುಣವಾಗಿ ಮಾಡುವ ಸ್ವಭಾವವುಳ್ಳ ಜ್ಞಾನ, ಅವಗತಿ, ಸಂವಿತ್ತು– ಮುಂತಾದ ಬೇರೆಯ ಹೆಸರುಳ್ಳ ಸಕರ್ಮಕವಾದ–ಅನುಭವಿ ಸುವ ಆತ್ಮನ-ಧರ್ಮವಿಶೇಷವು 'ಘಟವನ್ನು ನಾನು ಅರಿಯುತ್ತಿದೇನೆ, ಈ ಅರ್ಥವನ್ನು ಗೊತ್ತುಪಡಿಸಿಕೊಂಡಿರುತ್ತೇನೆ, ಘಟವನ್ನು ನಾನು ಅರಿತಿದೇನೆ' ಎಂದು ಎಲ್ಲರಿಗೂ ಆತ್ಮಸಾಕ್ಷಿಕವಾಗಿ ಪ್ರಸಿದ್ಧವಾಗಿರುವದು.**[2] ಈ ಸ್ವಭಾವದಿಂದಲೇ ಅಲ್ಲವೆ, ಅದು ಸ್ವಯಂಪ್ರಕಾಶವೆಂಬುದನ್ನು ನೀನೂ ಹೊಂದಿಸಿ ತೋರಿಸಿದ್ದು ? ಈ ಸಕರ್ಮಕವಾದ ಕರ್ತೃಧರ್ಮವಿಶೇಷವಾದ (ಅನುಭೂತಿಗೆ) ಕರ್ಮತ್ವದಂತೆ ಕರ್ತೃತ್ವವೂ ಹೊಂದಲೇಆರದು.[3]

1. 'ಕಸ್ಯ?' ಎಂದರೆ ಯಾರಿಗೆ ಸಿದ್ಧಿ ? ಕಂ ಪ್ರತಿ? ಯಾವ ಅರ್ಥದ ವಿಷಯದಲ್ಲಿ ಎಂದು ಅಭಿಪ್ರಾಯವನ್ನು ಕಲ್ಪಿಸಿದೆ. 'ಕಸ್ಯಚಿತ್ ಕಂಚಿತ್ ಪ್ರತಿ' ಎಂಬುದಕ್ಕೆ 'ಎಂಥದ್ದೋ ಅಗಿ ಯಾರಿಗೋ ಒಬ್ಬನಿಗೆ' ಎಂದೂ ಅರ್ಥಮಾಡಬಹುದಾಗುತ್ತದೆ ; ಮುಂದೆ 'ಸ್ವಾಶ್ರಯಂ ಪ್ರತಿ ಕಸ್ಯಚಿದ್ವಸ್ತುನಃ' ಎಂದು ಇದೇ ಪ್ರಘಟ್ಟದಲ್ಲಿ ಪ್ರಯೋಗಿಸಿಯೂ ಇದೆ. ಆದೇ ಸರಿ ಯಾದರೆ 'ಕಸ್ಯಚಿತ್ಪುರುಷಸ್ಯ ಕಿಞ್ಚಿದರ್ಥಜಾತಂ ಪ್ರತಿ' ಎಂಬುದಕ್ಕೆ ಬದಲು 'ಕಞ್ಚಿತ್ ಪುರುಷಂ ಪ್ರತಿ ಕಸ್ಯಚಿದರ್ಥಜಾತಸ್ಯ' ಎಂದೇ ಇರಬೇಕಿತ್ತು –ಎನ್ನಬೇಕಾಗುತ್ತದೆ.

2. ಇದನ್ನು 'ಅನುಭೂತಿ' ಎಂದು ಅದ್ವೈತಿಗಳು ಒಪ್ಪಿದ್ದರೆ? ಈ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

3. ಜ್ಞಾತೃವಿಗೆ ಜ್ಞೇಯದ ವಿಷಯಕ್ಕೆ ಆಗುವ 'ಜ್ಞಾನ' ಎಂದಂತೆ ಆಯಿತು. ಪರಿಶಿಷ್ಟವನ್ನೂ ಪೀಠಿಕೆಯನ್ನೂ ನೋಡಿ.

(ಮೂಲ)

ತಥಾ ಹಿ– ಅಸ್ಯ ಕರ್ತುಃ ಸ್ಥಿರತ್ವಮ್, ಕರ್ತೃಧರ್ಮಸ್ಯ ಸಂವೇದನಾಖ್ಯಸ್ಯ ಸುಖದುಃಖಾದೇರಿವೋತ್ಪತ್ತಿಸ್ಥಿತಿನಿರೋಧಾಶ್ಚ ಪ್ರತ್ಯಕ್ಷಮ್ ಈಕ್ಷ್ಯನ್ತೇ। ಕರ್ತ್ರು ಸ್ಥೈರ್ಯಂ ತಾವತ್ 'ಸ ಏವಾಯಮರ್ಥಃ ಪೂರ್ವಂ ಮಯಾ ಅನುಭೂತಃ' ಇತಿ ಪ್ರತ್ಯಭಿಜ್ಞಾಪ್ರತ್ಯಕ್ಷಸಿದ್ಧಮ್ । 'ಅಹಂ ಜಾನಾಮಿ, ಅಹಮಜ್ಞಾಸಿಷಮ್' 'ಜ್ಞಾತುರೇವ ಮಮೇದಾನೀಂ ಜ್ಞಾನಂ ನಷ್ಟಮ್' ಇತಿ ಚ ಸಂವಿದುತ್ಪತ್ತ್ಯಾದಯಃ ಪ್ರತ್ಯಕ್ಷಸಿದ್ಧಾಃ – ಇತಿ ಕುತಸ್ತದೈಕ್ಯಮ್ ? ಏವಂ ಕ್ಷಣಭಙ್ಗಿನ್ಯಾಃ ಸಂವಿದಃ, ಆತ್ಮತ್ವಾಭ್ಯುಪಗಮೇ ಪೂರ್ವೇದ್ಯುರ್ದೃಷ್ಟಮ್ ಅಪರೇದ್ಯುಃ 'ಇದಮಹಮದರ್ಶಮ್' ಇತಿ ಪ್ರತ್ಯಭಿಜ್ಞಾ ಚ ನ ಘಟತೇ। ಅನ್ಯೇನಾನುಭೂತಸ್ಯ ನ ಹ್ಯನ್ಯೇನ ಪ್ರತ್ಯಭಿಜ್ಞಾನಸಂಭವಃ ॥

(ಅರ್ಥ)

ಹೇಗೆಂದರೆ, ಈ **ಕರ್ತೃವು ಸ್ಥಿರನೆಂಬುವೂ ಕರ್ತೃಧರ್ಮವಾದ ಸಂವೇದನವೆಂಬ ಹೆಸರಿನ (ಪದಾರ್ಥಕ್ಕೆ) ಸುಖದುಃಖಾದಿಗಳಿಗಿರುವಂತೆ ಉತ್ಪತ್ತಿಸ್ಥಿತಿಲಯಗಳೂ ಪ್ರತ್ಯಕ್ಷವಾಗಿ ಕಾಣಿಸುತ್ತಿವೆ.**[1] ಮೊದಲನೆಯದಾಗಿ ಕರ್ತೃವಿನ ಸ್ಥಿರತ್ವವು 'ಅದೇ ಈ ಪದಾರ್ಥವೇ ಪೂರ್ವದಲ್ಲಿ ನನ್ನಿಂದ ಅನುಭೂತವಾಗಿತ್ತು' ಎಂಬ ಪ್ರತ್ಯಭಿಜ್ಞಾಪ್ರತ್ಯಕ್ಷದಿಂದ ಸಿದ್ಧವಾಗಿರುತ್ತದೆ. 'ನಾನು ಅರಿಯುತ್ತಿದೇನೆ, ನಾನು ಅರಿತೆನು, ಜ್ಞಾತೃವೇ ಆಗಿರುವ ನನ್ನ ಜ್ಞಾನವು ಈಗ ನಷ್ಟವಾಯಿತು' ಎಂದು ಸಂವಿತ್ತಿನ ಉತ್ಪತ್ತ್ಯಾದಿಗಳೂ ಪ್ರತ್ಯಕ್ಷಸಿದ್ಧವಾಗಿವೆ; ಹೀಗಿರುವದರಿಂದ ಅವೆರಡಕ್ಕೂ ಐಕ್ಯವು ಎಲ್ಲಿಂದ ಬಂತು ? ಹೀಗೆ ಕ್ಷಣಭಂಗಿಯಾಗಿರುವ ಸಂವಿತ್ತಿಗೆ ಆತ್ಮತ್ವವನ್ನು ಒಪ್ಪಿದರೆ ಹಿಂದಿನ ದಿನ ಕಂಡದ್ದನ್ನು ಮಾರನೆಯ ದಿನ 'ಇದನ್ನು ನಾನು ಕಂಡಿದ್ದೆನು' ಎಂದು ಪ್ರತ್ಯಭಿಜ್ಞೆ(ಮಾಡುವದೂ) ಹೊಂದುವದಿಲ್ಲ. ಒಬ್ಬನು ಅನುಭವಿಸಿದ್ದು ಮತ್ತೊಬ್ಬನಿಗೆ ಪ್ರತ್ಯಭಿಜ್ಞಾತವಾಗುತ್ತದೆ ಎಂಬುದು ಸಂಭವಿಸಲಾರದಷ್ಟೆ ?

(ಮೂಲ)

ಕಿಞ್ಚ, ಅನುಭೂತೇರಾತ್ಮತ್ವಾಭ್ಯುಪಗಮೇ ತಸ್ಯಾಃ ನಿತ್ಯತ್ವೇಽಪಿ ಪ್ರತಿಸನ್ಧಾನಾಸಂಭವ[2]ಸ್ತದವಸ್ಥಃ। ಪ್ರತಿಸನ್ಧಾನಂ ಹಿ ಪೂರ್ವಾಪರಕಾಲಸ್ಥಾಯಿನಮ್ ಅನುಭವಿತಾರಮ್ ಉಪಸ್ಥಾಪಯತಿ, ನಾನುಭೂತಿಮಾತ್ರಮ್ । 'ಅಹಮೇ

---

1. ಕರ್ತೃವಾದ ಆತ್ಮನ ಸ್ಥೈರ್ಯವು ಯಾರಿಗೆ ಪ್ರತ್ಯಕ್ಷವಾಗಿ ಹೇಗೆ ಕಾಣಿಸುತ್ತಿದೆ ? –ಎಂಬುದನ್ನು ವಿಚಾರಮಾಡಿದಂತೆ ಕಾಣಿಸಲಿಲ್ಲ ; ಅನುಭೂತಿಯ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. 'ಪ್ರತಿಸನ್ಧಾನಾಭಾವಃ' ಎಂದು ಕಂ॥ ಪಾಠ.

ವೇದಂ ಪೂರ್ವಮನ್ವಭೂವಮ್' ಇತಿ । ಭವತೋಽಪ್ಯನುಭೂತೇರ್ನ ಹ್ಯನು ಭವಿತೃತ್ವಮಿಷ್ಟಮ್ । ಅನುಭೂತಿರನುಭೂತಿಮಾತ್ರಮೇವ । ಸಂವಿನ್ನಾಮ ಕಾಚಿ ನ್ನಿರಾಶ್ರಯಾ ನಿರ್ವಿಷಯಾ ವಾ ಅತ್ಯನ್ತಾನುಪಲಬ್ಧೇರ್ನ ಸಂಭವತಿ – ಇತ್ಯುಕ್ತಮ್ । ಉಭಯಾಭ್ಯುಪೇತಾ ಸಂವಿದೇವಾಽಽತ್ಮಾ–ಇತ್ಯುಪಲಬ್ಧಿ ಪರಾ ಹತಮ್ । ಅನುಭೂತಿಮಾತ್ರಮೇವ ಪರಮಾರ್ಥ ಇತಿ ನಿಷ್ಕರ್ಷಕಹೇತ್ವಾಭಾಸಾಶ್ಚ ನಿರಾಕೃತಾಃ ॥

(ಅರ್ಥ)

ಮತ್ತು ಅನುಭೂತಿಯೇ ಆತ್ಮನೆಂದು ಒಪ್ಪಿದರೆ ಅದು ನಿತ್ಯವಾಗಿದ್ದರೂ ಅನುಸ್ಮರಣೆಯು ಹೊಂದುವದಿಲ್ಲವೆಂಬುದು ಇದ್ದೇಇರುತ್ತದೆ. ಏಕೆಂದರೆ ಪ್ರತಿ ಸಂಧಾನವು 'ನಾನೇ ಇದನ್ನು ಹಿಂದೆ ಅನುಭವಿಸಿದೆನು' ಎಂದು ಹಿಂದಿನಮುಂದಿನ ಕಾಲಗಳಲ್ಲಿ ಇದ್ದುಕೊಂಡೇ ಇರುವ ಅನುಭವಿತೃವನ್ನು ಮುಂದೆ ತಂದಿಡುತ್ತದೆ, ಬರಿಯ ಅನುಭೂತಿಯನ್ನೇ ಅಲ್ಲ. ನಿನಗೂ ಅನುಭೂತಿಯೇ ಅನುಭವಿತೃ–ಎಂಬುದು ಇಷ್ಟವಲ್ಲ. ಅನುಭೂತಿಯು ಬರಿಯ ಅನುಭೂತಿಮಾತ್ರವೇ. ಸಂವಿತ್ತೆಂಬುದು ಯಾವದೂ ಆಶ್ರಯವಿಲ್ಲದೆ ವಿಷಯವಿಲ್ಲದೆ ಅತ್ಯಂತವಾಗಿ ತಿಳಿಯಬಂದಿಲ್ಲವಾಗಿ (ಅಂಥದ್ದು) ಸಂಭವಿಸುವದೇಇಲ್ಲ ಎಂದು (ಹಿಂದೆ) ಹೇಳಿದೇವೆ.[1] ನಾವಿಬ್ಬರೂ ಒಪ್ಪಿರುವ ಸಂವಿತ್ತೇ ಆತ್ಮನು ಎಂಬುದು (ಲೋಕದಲ್ಲಿ) ಕಂಡುಬರುತ್ತಿರುವದಕ್ಕೆ ವಿರುದ್ಧವಾಗಿದೆ. ಅನುಭೂತಿಮಾತ್ರವೇ ಪರಮಾರ್ಥವೆಂದು ನಿಷ್ಕರ್ಷೆಮಾಡುವ ಹೇತ್ವಾಭಾಸಗಳನ್ನು (ಆಗಲೆ) ನಿರಾಕರಿಸಿಯೂ ಇರುತ್ತೇವೆ.

## (೧೩) ಅಸ್ಮತ್ಪ್ರತ್ಯಯಗೋಚರಾತ್ಮನ ವಿಷಯ

(ಮೂಲ)

ನನು ಚ 'ಅಹಂ ಜಾನಾಮಿ' ಇತ್ಯಸ್ಮತ್ಪ್ರತ್ಯಯೇ ಯೋಽನಿದಮಂಶಃ ಪ್ರಕಾಶೈಕರಸಶ್ಚಿತ್ಪದಾರ್ಥಃ, ಸ ಆತ್ಮಾ । ತಸ್ಮಿನ್ ತದ್ಬಲನಿರ್ಭಾಸಿತತಯಾ ಯುಷ್ಮ ದರ್ಥಲಕ್ಷಣಃ, 'ಅಹಂ ಜಾನಾಮಿ' ಇತಿ ಸಿದ್ಧ್ಯನ್ನಹಮರ್ಥಶ್ಚಿನ್ಮಾತ್ರಾತಿರೇಕೀ ಯುಷ್ಮದರ್ಥ ಏವ ॥

ನೈತದೇವಮ್ । 'ಅಹಂ ಜಾನಾಮಿ' ಇತಿ ಧರ್ಮಧರ್ಮಿತಯಾ ಪ್ರತ್ಯಕ್ಷ ಪ್ರತೀತಿವಿರೋಧಾದೇವ । ಕಿಞ್ಚ–

**ಅಹಮರ್ಥೋ ನ ಚೇದಾತ್ಮಾ ಪ್ರತ್ಯಕ್ತ್ವಂ ನಾಽಽತ್ಮನೋ ಭವೇತ್ ।**
**ಅಹಂಬುದ್ಧ್ಯಾ ಪರಾಗರ್ಥಾತ್ ಪ್ರತ್ಯಗರ್ಥೋ ಹಿ ಭಿದ್ಯತೇ ॥ ೧ ॥**

1. ೯೬ನೆಯ ಪುಟವನ್ನು ನೋಡಿ.

ನಿರಸ್ತಾಖಿಲದುಃಖೋಽಹಮನನ್ತಾನನ್ದಭಾಕ್ ಸ್ವರಾಟ್ ।
ಭವೇಯಮಿತಿ ಮೋಕ್ಷಾರ್ಥೀ ಶ್ರವಣಾದೌ ಪ್ರವರ್ತತೇ ॥ ೨ ॥
ಅಹಮರ್ಥವಿನಾಶಶ್ಚೇನ್ಮೋಕ್ಷ ಇತ್ಯಧ್ಯವಸ್ಯತಿ ।
ಅಪಸರ್ಪೇದಸೌ ಮೋಕ್ಷಕಥಾಪ್ರಸ್ತಾವಗನ್ಧತಃ ॥ ೩ ॥
ಮಯಿ ನಷ್ಟೇಽಪಿ ಮತ್ತೋಽನ್ಯಾ ಕಾಚಿಜ್ಞಪ್ತಿರವಸ್ಥಿತಾ ।
ಇತಿ ತತ್ಪ್ರಾಪ್ತಯೇ ಯತ್ನಃ ಕಸ್ಯಾಪಿ ನ ಭವಿಷ್ಯತಿ ॥ ೪ ॥
ಸ್ವಸಮ್ಬನ್ಧತಯಾ ಹ್ಯಸ್ಯಾಃ ಸತ್ತಾ ವಿಜ್ಞಪ್ತಿತಾದಿ ಚ ।
ಸ್ವಸಮ್ಬನ್ಧವಿಯೋಗೇ ತು ಜ್ಞಪ್ತಿರೇವ ನ ಸಿಧ್ಯತಿ ॥ ೫ ॥
ಛೇತ್ತುಶ್ಛೇದ್ಯಸ್ಯ ಚಾಭಾವೇ ಛೇದನಾದೇರಸಿದ್ಧಿವತ್ ।
ಅತೋಽಹಮರ್ಥೋ ಜ್ಞಾತೈವ ಪ್ರತ್ಯಗಾತ್ಮೇತಿ ನಿಶ್ಚಿತಮ್ ॥ ೬ ॥
ವಿಜ್ಞಾತಾರಮರೇ ಕೇನ ಜಾನಾತ್ಯೇವೇತಿ ಚ ಶ್ರುತಿಃ ।
ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ಚ ಸ್ಮೃತಿಃ ॥ ೭ ॥
ನಾತ್ಮಾ ಶ್ರುತೇರಿತ್ಯಾರಭ್ಯ ಸೂತ್ರಕಾರೋಽಪಿ ವಕ್ಷ್ಯತಿ ।
ಜ್ಞೋಽತ ಏವೇತ್ಯತೋ ನಾತ್ಮಾ ಜ್ಞಪ್ತಿಮಾತ್ರಮಿತಿ ಸ್ಥಿತಮ್ ॥ ೮ ॥

(ಅರ್ಥ)

(ಆಕ್ಷೇಪ) :– 'ನಾನು ಅರಿಯುತ್ತೇನೆ' ಎಂದು ಅಸ್ಮತ್ಪ್ರತ್ಯಯದಲ್ಲಿ ಅನಿದಮಂಶವಾದ ಪ್ರಕಾಶೈಕರಸವಾದ ಚಿತ್ಪದಾರ್ಥವಿದೆಯಲ್ಲ, ಅದೇ ಆತ್ಮನು ; ಅದರಲ್ಲಿ ಅದರ ಬಲದಿಂದ ಹೊಳೆಯುವದಾದ್ದರಿಂದ ಯುಷ್ಮದರ್ಥರೂಪವಾದ 'ನಾನು ಅರಿಯುತ್ತಿದೇನೆ' ಎಂದು ಸಿದ್ಧವಾಗುವ ಅಹಮರ್ಥವು, ಚಿನ್ಮಾತ್ರಕ್ಕಿಂತ ಬೇರೆಯಾದ ಯುಷ್ಮದರ್ಥವೇ ಅಲ್ಲವೆ ?[1]

(ಸಿದ್ಧಾಂತಿ) :– ಇದು ಹೀಗಲ್ಲ. ಏಕೆಂದರೆ 'ನಾನು ಅರಿಯುತ್ತೇನೆ' ಎಂದು ಧರ್ಮಧರ್ಮಿಭಾವದಿಂದ ಆಗುವ ಪ್ರತ್ಯಕ್ಷಜ್ಞಾನಕ್ಕೆ ವಿರುದ್ಧವಾಗಿರುವದರಿಂದಲೇ (ನೀನು ಹೇಳುವದು ಸರಿಯಲ್ಲವೆಂದಾಗುತ್ತದೆ).

ಇದೂ ಅಲ್ಲದೆ—

(೧) ಅಹಮರ್ಥವು ಆತ್ಮನಲ್ಲದೆಹೋದರೆ ಆತ್ಮನಿಗೆ ಪ್ರತ್ಯಕ್ತ್ವವೇ ಆಗಲಾರದು. ಏಕೆಂದರೆ ನಾನು ಎಂಬ ಬುದ್ಧಿಯಿಂದಲೇ ಅಲ್ಲವೆ, ಹೊರಗಿನ ವಿಷಯಕ್ಕಿಂತ ಪ್ರತ್ಯಗರ್ಥವು ಬೇರೆಯಾಗಿರುವದುಃ ?

1. ಇಲ್ಲಿ ಉದಾಹರಿಸಿಕೊಂಡಿರುವ ಪೂರ್ವಪಕ್ಷಕ್ಕೆ ಪರಿಶಿಷ್ಟವನ್ನು ನೋಡಿ. ಪಂಚಪಾದಿಕೆಯಲ್ಲಿ ಈ ಮತವನ್ನು ಪ್ರಕಟಿಸಿರುವಂತೆ ಕಾಣಿಸುತ್ತದೆ.

2. ಶ್ಲೋಕರೂಪವಾಗಿ ರಾಮಾನುಜರು ಸಂಗ್ರಹಿಸಿರುವ ವಾಕ್ಯಗಳನ್ನು ಬಿಡಿಬಿಡಿಯಾಗಿ ಅಚ್ಚುಮಾಡಿಸಿದೆ.

(೨–೩) ಎಲ್ಲಾ ದುಃಖಗಳನ್ನೂ ನೀಗಿಕೊಂಡು ನಾನು ಅನಂತವಾದ ಆನಂದವುಳ್ಳವನೂ ಸ್ವರಾಜನೂ ಆಗಬೇಕು ಎಂದೇ ಮೋಕ್ಷಾರ್ಥಿಯು ಶ್ರವಣಾದಿಗಳಲ್ಲಿ ತೊಡಗುತ್ತಾನೆ. ಮೋಕ್ಷವೆಂಬುದು ಅಹಮರ್ಥದ ನಾಶವೇ ಎಂದು ನಿಶ್ಚಯಿಸಿಕೊಂಡರೆ ಅವನು ಮೋಕ್ಷದ ಮಾತಿನ ಪ್ರಸ್ತಾವವಾಸನೆಯನ್ನುಕೂಡ ಬಿಟ್ಟು ದೂರಕ್ಕೆ ಹೋದಾನು.

(೪) ನಾನು ನಷ್ಟವಾದ ಬಳಿಕವೂ ನನಗಿಂತ ಬೇರೆಯಾದ ಯಾವದೋ ಒಂದು ಜ್ಞಪ್ತಿಯು (ಚೈತನ್ಯವು) ಇದ್ದುಕೊಂಡಿರುತ್ತದೆ– ಎಂದು ಅದರ ಪ್ರಾಪ್ತಿಗಾಗಿ ಯತ್ನವು ಯಾವನಿಗೂ ಉಂಟಾಗಲಾರದು.

(೫–೬) ಈ (ಜ್ಞಾನಕ್ಕೆ) ತನಗೆ ಸಂಬದ್ಧವಾಗಿರುವದರಿಂದಲೇ ಅಲ್ಲವೆ, ಇರವು, ವಿಜ್ಞಪ್ತಿತ್ವವೇ ಮುಂತಾದದ್ದು ? ತನ್ನ ಸಂಬಂಧವೇಇಲ್ಲದಿರುವಾಗ ಜ್ಞಪ್ತಿಯೇ ಸಿದ್ಧಿಸುವದಿಲ್ಲ. ಕತ್ತರಿಸುವವನು, ಮತ್ತು ಕತ್ತರಿಸಲ್ಪಡತಕ್ಕದ್ದು– ಇವುಗಳು ಇಲ್ಲವಾಗಲು ಕತ್ತರಿಸುವದೇ ಮುಂತಾದದ್ದೂ ಹೇಗೆ ಸಿದ್ಧಿಸಲಾರವೋ, ಹಾಗೆಯೇ (ಇದನ್ನು ಅರಿಯಬೇಕು). ಆದ್ದರಿಂದ ಅಹಮರ್ಥವಾದ ಜ್ಞಾತೃವೇ ಪ್ರತ್ಯಗಾತ್ಮನೆಂದು ನಿಶ್ಚಿತವಾಯಿತು.

(೭) 'ಎಲೆ, ವಿಜ್ಞಾತೃವನ್ನು ಏತರಿಂದ ಅರಿತಾನು?' (ಬೃ. ೨–೪–೧೪)[1] ಎಂದು ಶ್ರುತಿಯೂ ಇದೆ. 'ಈ (ಕ್ಷೇತ್ರವನ್ನು) ಯಾವಾತನು ಅರಿಯುತ್ತಾನೋ ಅವನನ್ನು ಕ್ಷೇತ್ರಜ್ಞನೆನ್ನುವರು' (ಗೀ. ೧೩–೧) ಎಂದು ಸ್ಮೃತಿಯೂ ಇದೆ.

(೮) 'ಆತ್ಮನು ಹುಟ್ಟುವದಿಲ್ಲ, ಏಕೆಂದರೆ ಶ್ರುತಿಯಿದೆ' (ಸೂ. ೨–೩–೧೭) ಎಂಬುದರಿಂದ ಹಿಡಿದು ಸೂತ್ರಕಾರನೂ 'ಜ್ಞಾತೃವೆಂಬುದೂ ಆದ್ದರಿಂದಲೇ' (ಸೂ. ೨–೩–೧೮) ಎಂದು ಮುಂದೆ ಹೇಳುವನು. ಆದ್ದರಿಂದ ಆತ್ಮನು ಜ್ಞಪ್ತಿಮಾತ್ರನಲ್ಲ– ಎಂಬುದೇ ನಿಂತಿತು.

(ಮೂಲ)

ಅಹಂಪ್ರತ್ಯಯಸಿದ್ಧೋ ಹ್ಯಸ್ಮದರ್ಥಃ, ಯುಷ್ಮತ್ಪ್ರತ್ಯಯವಿಷಯೋ ಯುಷ್ಮದರ್ಥಃ । ತತ್ರಾಹಂ ಜಾನಾಮೀತಿ ಸಿದ್ಧೋ ಜ್ಞಾತಾ ಯುಷ್ಮದರ್ಥ ಇತಿ ವಚನಂ 'ಜನನೀ ಮೇ ವನ್ಧ್ಯಾ' ಇತಿವದ್ ವ್ಯಾಹತಾರ್ಥಂ ಚ । ನ ಚಾಸೌ ಜ್ಞಾತಾ ಅಹಮರ್ಥೋಽನ್ಯಾಧೀನಪ್ರಕಾಶಃ ಸ್ವಯಂಪ್ರಕಾಶತ್ವಾತ್ । ಚೈತನ್ಯಸ್ವಭಾವತಾ ಹಿ ಸ್ವಯಂಪ್ರಕಾಶತಾ ॥

---

1. ಈ ಶ್ರುತಿಯಲ್ಲಿ 'ಯಾವದರಿಂದ ಇದೆಲ್ಲವನ್ನೂ ಅರಿಯುತ್ತಾನೋ' ಎಂದು ಮೊದಲು ಇದೆ ; 'ಜಾನಾತ್ಯೇವ' ಎಂಬ ಶ್ಲೋಕದ ಭಾಗವು ಆ ವಾಕ್ಯದ ಪರಾಮರ್ಶವೆಂದೂ ಭಾವಿಸಬಹುದೆಂದು ತೋರುತ್ತದೆ ; ಆದರೆ ಈ ಭಾವನೆ ಸರಿಯಲ್ಲವೆಂಬುದು ಮುಂದೆ ಭಾಷ್ಯದಲ್ಲಿ ಇದೇ ವಾಕ್ಯವನ್ನು ಉದಾಹರಿಸಿರುವದರಿಂದ ಗೊತ್ತಾಗುತ್ತದೆ.

(ಅರ್ಥ)

(ನಾನೆಂಬ) ಅಹಂಪ್ರತ್ಯಯದಿಂದ ಸಿದ್ಧವಾಗುವದಲ್ಲವೆ, ಅಸ್ಮದರ್ಥವು ? ನೀನೆಂಬ ಪ್ರತ್ಯಯಕ್ಕೆ ವಿಷಯವಾದದ್ದು ಯುಷ್ಮದರ್ಥ. ಹೀಗಿರುವಲ್ಲಿ 'ಅರಿಯುತ್ತೇನೆ' ಎಂದು ಸಿದ್ಧವಾಗುವ ಜ್ಞಾತೃವು ಯುಷ್ಮದರ್ಥ– ಎಂಬ ಮಾತು 'ನನ್ನ ತಾಯಿ ಬಂಜೆ' ಎಂಬಂತೆ ತನಗೆತಾನೇ ವಿರುದ್ಧವಾದ ಅರ್ಥವುಳ್ಳದ್ದು. ಈ ಜ್ಞಾತೃವಾಗಿರುವ ಅಹಮರ್ಥವು ಮತ್ತೊಂದಕ್ಕೆ ಅಧೀನವಾಗಿರುವ ಪ್ರಕಾಶವುಳ್ಳದ್ದಲ್ಲ, ಏಕೆಂದರೆ (ಅದು) ಸ್ವಯಂಪ್ರಕಾಶವಾಗಿರುತ್ತದೆ. ಚೈತನ್ಯಸ್ವಭಾವವುಳ್ಳದ್ದಾಗಿರುವದೇ ಅಲ್ಲವೆ, ಸ್ವಯಂಪ್ರಕಾಶತ್ವವೆಂಬುದು ?

## (೧೪) ಅಹಮರ್ಥದ ಸ್ವಪ್ರಕಾಶಕ್ಕೆ ದೀಪದೃಷ್ಟಾಂತ

(ಮೂಲ)

ಯಃ ಪ್ರಕಾಶಸ್ವಭಾವಃ, ಸೋಽನನ್ಯಾಧೀನಪ್ರಕಾಶಃ ; ದೀಪವತ್ । ನ ಹಿ ದೀಪಾದೇಃ ಸ್ವಪ್ರಭಾಬಲನಿರ್ಭಾಸಿತತ್ವೇನ, ಅಪ್ರಕಾಶತ್ವಮ್ ಅನ್ಯಾಧೀನಪ್ರಕಾಶತ್ವಂ ಚ ; ಕಿಂ ತರ್ಹಿ, ದೀಪಃ ಸ್ವಯಂಪ್ರಕಾಶಸ್ವಭಾವಃ ಸ್ವಯಮೇವ ಪ್ರಕಾಶತೇ, ಅನ್ಯಾನಪಿ ಪ್ರಕಾಶಯತಿ ಪ್ರಭಯಾ[1] ॥

ಏತದುಕ್ತಂ ಭವತಿ – ಯಥಾ[2] ಏಕಮೇವ ತೇಜೋದ್ರವ್ಯಮ್ ಪ್ರಭಾಪ್ರಭಾವದ್ರೂಪೇಣಾವತಿಷ್ಠತೇ । ಯದ್ಯಪಿ ಪ್ರಭಾ ಪ್ರಭಾವದ್ದ್ರವ್ಯಗುಣಭೂತಾ, ತಥಾಪಿ ತೇಜೋದ್ರವ್ಯಮೇವ ನ ಶೌಕ್ಲ್ಯಾದಿವದ್ ಗುಣಃ । ಸ್ವಾಶ್ರಯಾದನ್ಯತ್ರಾಪಿ ವರ್ತಮಾನತ್ವಾತ್, ರೂಪವತ್ತ್ವಾಚ್ಚ ಶೌಕ್ಲ್ಯಾದಿವೈಧರ್ಮ್ಯಾತ್ ಪ್ರಕಾಶವತ್ತ್ವಾಚ್ಚ ತೇಜೋದ್ರವ್ಯಮೇವ ನಾರ್ಥಾನ್ತರಮ್ । ಪ್ರಕಾಶವತ್ತ್ವಂ ಚ ಸ್ವಸ್ವರೂಪಸ್ಯ, ಅನ್ಯೇಷಾಂ ಚ ಪ್ರಕಾಶಕತ್ವಾತ್ । ಅಸ್ಯಾಸ್ತು ಗುಣತ್ವವ್ಯವಹಾರೋ ನಿತ್ಯತದಾಶ್ರಯತ್ವತಚ್ಛೇಷತ್ವನಿಬನ್ಧನಃ । ನ ಚಾಶ್ರಯಾವಯವಾ ವಿಶೀರ್ಣಾ ಏವ ಪ್ರಚರನ್ತಃ ಪ್ರಭೇತ್ಯುಚ್ಯನ್ತೇ, ಮಣಿದ್ಯುಮಣಿಪ್ರಭೃತೀನಾಂ ವಿನಾಶಪ್ರಸಙ್ಗಾತ್ । ದೀಪೇಽಪಿ ಅವಯವವಿಪ್ರತಿಪತ್ತಿಃ ಕದಾಚಿದಪಿ ನ ಸ್ಯಾತ್ । ನ ಹಿ ವಿಶರಣಸ್ವಭಾವಾವಯವಾ ದೀಪಾಃ, ಚತುರಙ್ಗುಲಮಾತ್ರಂ ನಿಯಮೇನ ಪಿಣ್ಡೀಭೂತಾಃ ಊರ್ಧ್ವಮುದ್ಗಮ್ಯ ತತಃ ಪಶ್ಚಾತ್ ಯುಗಪದೇವ ತಿರ್ಯಕ್ ಊರ್ಧ್ವಮ್, ಅಧಶ್ಚ ಏಕರೂಪಾಃ ವಿಶೀರ್ಣಾಃ ಪ್ರಚರನ್ತೀತಿ ಶಕ್ಯಮ್ ವಕ್ತುಮ್। ಅತಃ ಸಪ್ರಭಾಕಾ ಏವ ದೀಪಾಃ ಪ್ರತಿಕ್ಷಣಮ್ ಉತ್ಪನ್ನಾ ವಿನಶ್ಯನ್ತೀತಿ ಪುಷ್ಕಲಕಾರಣಕ್ರಮೋಪನಿಪಾತಾತ್ ತದ್ವಿನಾಶೇ ವಿನಾಶಾಚ್ಚಾವಗಮ್ಯತೇ । ಪ್ರಭಾಯಾಃ

1. 'ಸ್ವಪ್ರಭಯಾ' ಮ್ಯೆ॥
2. ಇದರ ಅನುವಾದದ ಕೆಳಗಿನ ಟಿಪ್ಪಣಿಯನ್ನು ನೋಡಿ.

ಸ್ವಾಶ್ರಯಸಮೀಪೇ ಪ್ರಕಾಶಾಧಿಕ್ಯಮ್ ಔಷ್ಣ್ಯಾಧಿಕ್ಯಮ್ ಇತ್ಯಾದ್ಯುಪಲಬ್ಧಿ ವ್ಯವಸ್ಥಾಪ್ಯಮ್, ಅಗ್ನ್ಯಾದೀನಾಮ್ ಔಷ್ಣ್ಯಾದಿವತ್ ॥

(ಅರ್ಥ)

ಯಾವದು ಸ್ವಪ್ರಕಾಶವಾಗಿರುತ್ತದೆಯೋ ಅದಕ್ಕೆ ಮತ್ತೊಂದಕ್ಕಧೀನವಾದ ಬೆಳಕು ಇರುವದಿಲ್ಲ; ಉದಾಹರಣೆಗೆ ದೀಪವನ್ನು (ಕೊಡಬಹುದು). ದೀಪಾದಿಗಳು ತನ್ನ ಪ್ರಭೆಯ ಬಲದಿಂದಲೇ ಬೆಳಗುತ್ತಿರುವದರಿಂದ ಪ್ರಕಾಶವಿಲ್ಲವೆಂದಾಗಲಿ, ಮತ್ತೊಂದಕ್ಕೆ ಅಧೀನವಾಗಿರುವ ಬೆಳಕು ಇದೆ ಎಂದಾಗಲಿ ಇರುವದಿಲ್ಲ, ಮತ್ತೇನೆಂದರೆ ದೀಪವು ಸ್ವಯಂಪ್ರಕಾಶದ ಸ್ವಭಾವವುಳ್ಳದ್ದಾದ್ದರಿಂದ ತಾನೇ ಬೆಳಗುತ್ತಿರುತ್ತದೆ. ತನ್ನ ಬೆಳಕಿನಿಂದ ಬೇರೆಯ ಪದಾರ್ಥಗಳನ್ನೂ ಬೆಳಗಿ ತೋರಿಸುತ್ತಿರುತ್ತದೆ.

ಇಲ್ಲಿ ಇಷ್ಟನ್ನು ಹೇಳಿದಂತಾಯಿತು : ಒಂದೇ ತೇಜೋದ್ರವ್ಯವು[1] ಪ್ರಭೆ, ಪ್ರಭೆಯುಳ್ಳದ್ದು– ಎಂಬ ರೂಪದಿಂದ ಇದ್ದುಕೊಂಡಿರುತ್ತದೆ. (ಇದರ ವಿವರ) :– ಪ್ರಭೆಯು ಪ್ರಭೆಯುಳ್ಳ ವಸ್ತುವಿಗೆ ಅಧೀನವಾಗಿದ್ದರೂ ತೇಜೋದ್ರವ್ಯವೇ, ಬಿಳುಪು ಮುಂತಾದದ್ದರಂತೆ (ದೀಪದ ಗುಣವಲ್ಲ). ತನ್ನ ಆಶ್ರಯವಾದ (ದ್ರವ್ಯವನ್ನು ಬಿಟ್ಟು) ಬೇರೆಯ ಕಡೆಯಲ್ಲಿಯೂ ಇರುವದರಿಂದಲೂ ಬಣ್ಣವುಳ್ಳದ್ದಾದ್ದರಿಂದ ಬಿಳುಪು ಮುಂತಾದದ್ದಕ್ಕಿಂತ ಬೇರೆಯ ತರದ್ದಾಗಿರುವದರಿಂದಲೂ ಪ್ರಕಾಶವುಳ್ಳದ್ದಾಗಿರುವದರಿಂದಲೂ (ಅದು) ತೇಜೋದ್ರವ್ಯವೇ ಹೊರತು ಬೇರೊಂದು ಪದಾರ್ಥವಲ್ಲ. ಅದು ಪ್ರಕಾಶವುಳ್ಳದ್ದೆಂಬುದು ತನ್ನ ಸ್ವರೂಪವನ್ನೂ ಬೇರೆಯ ವಸ್ತುಗಳನ್ನೂ ಬೆಳಗಿತೋರಿಸುವದರಿಂದ (ಸಿದ್ಧವಾಗುತ್ತದೆ). ಇದು ಗುಣವೆಂಬ ವ್ಯವಹಾರವಾದರೊ, ಯಾವಾಗಲೂ ಆ (ದ್ರವ್ಯ)ವನ್ನೇ ಆಶ್ರಯಿಸಿಕೊಂಡು ಅದಕ್ಕೆ ಅಧೀನವಾಗಿರುವ ಕಾರಣದಿಂದ ಆದದ್ದು. ಆಶ್ರಯವಾದ (ದೀಪದ್ರವ್ಯದ) ಅವಯವಗಳೇ ಚದರಿಕೊಂಡು ಹಬ್ಬಿರುವದರಿಂದ (ಅವೇ) 'ಪ್ರಭೆ' ಎನ್ನಿಸಿಕೊಳ್ಳುತ್ತವೆ ಎನ್ನುವ ಹಾಗೂ ಇಲ್ಲ; ಏಕೆಂದರೆ (ಹಾಗಾದರೆ) ರತ್ನ, ಸೂರ್ಯ– ಮುಂತಾದವುಗಳು ನಾಶವಾಗಬೇಕಾದೀತು.[2] ದೀಪದಲ್ಲಿಯೂ ಅವಯವಿ ಎಂಬ ಅರಿವು ಎಂದಿಗೂ ಆಗಬಾರದಾಗುವದು ; ಚದರಿಕೊಳ್ಳುವ ಸ್ವಭಾವದ ಅವಯವಗಳುಳ್ಳ ದೀಪಗಳು

1. ಇಲ್ಲಿ 'ಯಥಾ' ಎಂಬ ಮಾತನ್ನು ಕನ್ನಡಿಸದೆ ಬಿಟ್ಟುಬಿಟ್ಟಿದೆ; ಶ್ರುತಪ್ರಕಾಶಿಕೆಯಲ್ಲಿ ಮುಂದೆ 'ಹೀಗೆ ಆತ್ಮನು ಚಿದ್ರೂಪನೇ' ಎಂದಿರುವದರೊಡನೆ ಈ ಮಾತಿಗೆ ಅನ್ವಯ ಎಂದು ಬರೆದಿದೆ. 'ಯಥೈಕ', 'ಯದೇಕ' ಎಂದಿದ್ದು ಕೊನೆಯಲ್ಲಿ 'ಅವತಿಷ್ಠತ ಇತಿ' ಎಂದಿದ್ದರೆ ವಾಕ್ಯದ ಅನ್ವಯವು ಸ್ಫುಟತರವಾಗಿ ಗೊತ್ತಾಗುತ್ತಿತ್ತೆಂದು ಹೇಳಬಹುದು. ದೀಪದ ದೃಷ್ಟಾಂತದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿರಿ.

2. ಒಂದೊಂದು ಕ್ಷಣಕ್ಕೂ ನಾಶವಾಗುತ್ತವೆ ಎನ್ನಬೇಕಾದೀತು. ಶ್ರು. ಪ್ರ.

ಚತುರಂಗುಲದಷ್ಟು ಗೊತ್ತಾಗಿ ಒಟ್ಟಾಗಿ ಮೇಲಕ್ಕೆದ್ದು ಆ ಬಳಿಕ ಒಂದೇ ಕಾಲದಲ್ಲಿ ಅಡ್ಡಡ್ಡಲಾಗಿಯೂ ಮೇಲಕ್ಕೂ ಕೆಳಕ್ಕೂ ಒಂದೇ ರೂಪದಿಂದ ಚದರಿಕೊಂಡು ಚಲಿಸುತ್ತವೆ- ಎಂದು ಹೇಳುವದಕ್ಕೆ ಆಗಲಾರದಷ್ಟೆ? **ಆದ್ದರಿಂದ ಪ್ರಭೆಯುಳ್ಳ ದೀಪಗಳೇ ಪ್ರತಿಕ್ಷಣದಲ್ಲಿಯೂ ಹುಟ್ಟಿಹುಟ್ಟಿ ನಾಶವಾಗುತ್ತಿವೆ -ಎಂದು** ಸಾಕಾದಷ್ಟು ಕಾರಣಕ್ರಮವು ಸೇರಿಕೊಳ್ಳುವದರಿಂದಲೂ ಅವು ನಾಶವಾಗಲು ನಾಶವಾಗುವದರಿಂದಲೂ ನಿಶ್ಚಿತವಾಗುತ್ತದೆ. ಪ್ರಭೆಗೆ ತನ್ನ ಆಶ್ರಯದ ಸಮೀಪದಲ್ಲಿ ಹೆಚ್ಚಿನ ಬೆಳಕೂ ಹೆಚ್ಚಿನ ಬಿಸಿಯೂ ಇರುವದು ತಿಳಿಯಬರುವದರಿಂದ ಗೊತ್ತುಪಡಿಸಬೇಕು. ಬೆಂಕಿ ಮುಂತಾದವುಗಳ ಬಿಸಿಯೇ ಮುಂತಾದವುಗಳಂತೆಯೇ ಇದನ್ನು ತಿಳಿಯಬೇಕು.

## (೧೫) ಸ್ವಯಂಪ್ರಕಾಶನಾದ ಆತ್ಮನು ಜ್ಞಾತೃವೇ, ಜ್ಞಾನಮಾತ್ರವಲ್ಲ

(ಮೂಲ)

ಏವಮಾತ್ಮಾ ಚಿದ್ರೂಪ ಏವ ಚೈತನ್ಯಗುಣಕಃ ಇತಿ | ಚಿದ್ರೂಪತಾ ಹಿ ಸ್ವಯಂಪ್ರಕಾಶತಾ । ತಥಾ ಹಿ ಶ್ರುತಯಃ- 'ಸ ಯಥಾ ಸೈನ್ಧವಘನೋಽನನ್ತರೋಽಬಾಹ್ಯಃ ಕೃತ್ಸ್ನೋ ರಸಘನ ಏವ ಏವಂ ವಾ ಅರೇಽಯಮಾತ್ಮಾಽನನ್ತರೋಽಬಾಹ್ಯಃ ಕೃತ್ಸ್ನಃ ಪ್ರಜ್ಞಾನಘನ ಏವ' (ಬೃ. ೪-೫-೧೩), 'ವಿಜ್ಞಾನಘನ ಏವ (ಬೃ. ೨-೪-೧೨), 'ಅತ್ರಾಯಂ ಪುರುಷಃ ಸ್ವಯಂಜ್ಯೋತಿರ್ಭವತಿ' (ಬೃ. ೪-೩-೯), 'ನ ಹಿ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇ' (ಬೃ.೪-೩-೩೦), 'ಅಥ ಯೋ ವೇದೇದಂ ಜಿಘ್ರಾಣೀತಿ ಸ ಆತ್ಮಾ' (ಛಾಂ.೮-೧೨-೪), 'ಕತಮ ಆತ್ಮಾ ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯನ್ತರ್ಜ್ಯೋತಿಃ ಪುರುಷಃ'(ಬೃ.೪-೩-೭), 'ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮನ್ತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಪುರುಷಃ' (ಪ್ರ. ೪-೯), 'ವಿಜ್ಞಾತಾರಮರೇ ಕೇನ ವಿಜಾನೀಯಾತ್' (ಬೃ. ೪-೫-೧೫), 'ಜಾನಾತ್ಯೇವಾಯಂ ಪುರುಷಃ'[1] (?) 'ನ ಪಶ್ಯೋ ಮೃತ್ಯುಂ ಪಶ್ಯತಿ ನ ರೋಗಂ ನೋತ ದುಃಖತಾಮ್' (ಛಾಂ. ೭-೨೬-೨), 'ಸ ಉತ್ತಮಃ ಪುರುಷಃ[2]....ನೋಪಜನಂ ಸ್ಮರನ್ನಿದಂ ಶರೀರಮ್' (ಛಾಂ. ೮-೧೨-೩), 'ಏವಮೇವಾಸ್ಯ ಪರಿದ್ರಷ್ಟುರಿಮಾಃ ಷೋಡಶಕಲಾಃ ಪುರುಷಾಯಣಾಃ ಪುರುಷಂ ಪ್ರಾಪ್ಯಾಸ್ತಂ ಗಚ್ಛನ್ತಿ'

1. ಈ ಶ್ರುತಿಯು ಯಾವದೆಂಬುದು ತಿಳಿಯಲಿಲ್ಲ; ಹಿಂದೆ (ಪು.೧೦೦) ಸಂಗ್ರಾಹಕ ಶ್ಲೋಕದಲ್ಲಿಯೂ ಹೀಗೆಯೇ ಇದೆ.

2. ಉಪನಿಷತ್ತಿನಲ್ಲಿ 'ಉತ್ತಮಪುರುಷಃ' ಎಂಬ ಸಮಸ್ತಪಾಠವೇ ಇದೆ; ಆದರೆ ಶ್ರೀಭಾಷ್ಯದಲ್ಲಿ ಎಲ್ಲಾ ಪಾಠಗಳಲ್ಲಿಯೂ 'ಉತ್ತಮಃ ಪುರುಷಃ' ಎಂದೇ ಕಾಣುತ್ತದೆ.

(ಪ್ರ. ೬-೫), 'ತಸ್ಮಾದ್ವಾ ಏತಸ್ಮಾನ್ಮನೋಮಯಾತ್। ಅನ್ಯೋಽನ್ತರ ಆತ್ಮಾ ವಿಜ್ಞಾನಮಯಃ' (ತೈ.೨-೪), ಇತ್ಯಾದ್ಯಾಃ। ವಕ್ಷ್ಯತಿ ಚ 'ಜ್ಞೋಽತ ಏವ' (ಸೂ. ೨-೩-೧೯) ಇತಿ ॥

ಅತಃ ಸ್ವಯಂಪ್ರಕಾಶೋಽಯಮಾತ್ಮಾ ಜ್ಞಾತೈವ ನ ಪ್ರಕಾಶಮಾತ್ರಮ್ । ಪ್ರಕಾಶತ್ವಾದೇವ ಕಸ್ಯಚಿದೇವ ಭವೇತ್ ಪ್ರಕಾಶಃ। ದೀಪಾದಿಪ್ರಕಾಶವತ್ । ತಸ್ಮಾತ್, ನಾಽಽತ್ಮಾ ಭವಿತುಮರ್ಹತಿ ಸಂವಿತ್। ಸಂವಿದನುಭೂತಿಜ್ಞಾನಾದಿ ಶಬ್ದಾಃ ಸಂಬನ್ಧಿಶಬ್ದಾ ಇತಿ ಚ ಶಬ್ದಾರ್ಥವಿದಃ। ನ ಹಿ ಲೋಕವೇದಯೋ ರ್ಜಾನಾತ್ಯಾದೇರಕರ್ಮಕಸ್ಯಾಽಕರ್ತೃಕಸ್ಯ ಚ ಪ್ರಯೋಗೋ ದೃಷ್ಟಚರಃ ॥

(ಅರ್ಥ)

ಹೀಗೆ ಆತ್ಮನು ಚಿದ್ರೂಪನೇ ಆಗಿದ್ದು ಚೈತನ್ಯವೆಂಬ ಗುಣವುಳ್ಳವನು[1] ಎಂದು (ಹೇಳಿದಂತಾಯಿತು). ಚಿದ್ರೂಪತ್ವವೇ ಅಲ್ಲವೆ, ಸ್ವಯಂಪ್ರಕಾಶತ್ವ ವೆಂಬುದು ? ಹಾಗೆಂದು **ಶ್ರುತಿಗಳೂ** (ಹೇಳುತ್ತಿವೆ). ಅದು ಹೇಗೆಂದರೆ: 'ಉಪ್ಪಿನ ಹರಳು ಹೇಗೆ ಒಳಗಿಲ್ಲದೆ ಹೊರಗಿಲ್ಲದೆ ಎಲ್ಲವೂ ರಸದ ಗಟ್ಟಿಯೇ ಆಗಿರುವದೋ, ಹೀಗೆಯೇ ಎಲೆ (ಮೈತ್ರೇಯಿ), ಈ ಆತ್ಮನು ಒಳಗಿಲ್ಲದೆ, ಹೊರಗಿಲ್ಲದೆ ಪೂರ ಪ್ರಜ್ಞಾನಘನನೇ' (ಬೃ. ೪-೫-೧೩), 'ವಿಜ್ಞಾನಘನನೇ' (ಬೃ. ೨-೪-೧೨), 'ಇಲ್ಲಿ ಪುರುಷನು ಸ್ವಯಂಜ್ಯೋತಿಯಾಗಿರುತ್ತಾನೆ' (ಬೃ. ೪-೩-೯), 'ವಿಜ್ಞಾತೃ ವಿನ ಅರಿವಿಗೆ ಲೋಪವಾಗಿಬಿಡುವದೆಂಬುದಿಲ್ಲ' (ಬೃ. ೪-೩-೩೦), 'ಇನ್ನು ಇದನ್ನು ಮೂಸುವೆನು- ಎಂದು ಯಾವನು ಅರಿಯುವನೋ ಅವನು ಆತ್ಮನು' (ಛಾಂ. ೮-೧೨-೪), 'ಆತ್ಮನೆಂಬುವನು ಯಾವನು ? ಪ್ರಾಣಗಳ ನಡುವೆ ಯಾವ ಈತನು ವಿಜ್ಞಾನಮಯನಾಗಿ ಹೃದಯದೊಳಗೆ ಜ್ಯೋತಿಯಾಗಿರುವ ಪುರುಷ (ನಿರುವನೋ ಅವನು)' (ಬೃ. ೪-೩-೭), 'ಈ ದ್ರಷ್ಟೃವೂ, ಮುಟ್ಟುವವನೂ, ಶ್ರೋತೃವೂ, ಮೂಸುವವನೂ ರುಚಿನೋಡುವವನೂ, ಮನನಮಾಡುವವನೂ, ಅರಿಯುವವನೂ ಕರ್ತೃವೂ ಆದ ವಿಜ್ಞಾನಾತ್ಮಪುರುಷನಿದಾನಲ್ಲ' (ಪ್ರ. ೪-೯), 'ಎಲೆ, ವಿಜ್ಞಾತೃವನ್ನು ಏತರಿಂದ ಅರಿಯುವದಕ್ಕಾದೀತು ?' (ಬೃ. ೪-೫-೧೫), 'ಈ ಪುರುಷನು ಅರಿತೇಅರಿಯುತ್ತಾನೆ' (?) 'ನೋಡುವ ಜ್ಞಾನಿಯು ಮೃತ್ಯುವನ್ನು ಕಾಣುವದಿಲ್ಲ, ರೋಗವನ್ನು (ಕಾಣುವ)ದಿಲ್ಲ, ದುಃಖತೆಯನ್ನು (ಕಾಣುವ)ದಿಲ್ಲ' (ಛಾಂ. ೭-೨೬-೨), 'ಅವನು ಉತ್ತಮಪುರುಷನು....ಹತ್ತಿರವೇ ಹುಟ್ಟುವ ಈ ಶರೀರವನ್ನು ಸ್ಮರಿಸದೆ' (ಛಾಂ. ೮-೧೨-೩), 'ಹೀಗೆಯೇ ಪರಿದ್ರಷ್ಟೃವಾದ (ಆತ್ಮನ) ಈ ಹದಿನಾರುಕಲೆಗಳು ಪುರುಷಾಯಣಗಳಾಗಿದ್ದು ಪುರುಷನನ್ನು ಸೇರಿ

1. ಆತ್ಮನು ಚಿದ್ದ್ರವ್ಯವೂ ಆಗಿರುತ್ತಾನೆ, ಚೈತನ್ಯಗುಣವುಳ್ಳವನೂ ಆಗಿರುತ್ತಾನೆ- ಸೂರ್ಯನು ಪ್ರಕಾಶಸ್ವರೂಪನೂ ಪ್ರಕಾಶಗುಣವುಳ್ಳವನೂ ಆಗಿರುವಂತೆ- ಎಂಬುದು ಸಿದ್ಧಾಂತಕ್ಕೆ ಒಪ್ಪು. ಗುಣಗುಣಿಭಾವದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಅಸ್ತವಾಗುವವು' (ಪ್ರ. ೬–೫), 'ಆ ಈ ಮನೋಮಯನಿಗಿಂತ ಬೇರೆಯಾಗಿ ಒಳಗಿರುವವನು ವಿಜ್ಞಾನಮಯಾತ್ಮನು' (ತೈ. ೨–೪)- ಇವೇ ಮುಂತಾದ (ಶ್ರುತಿಗಳು ಹಾಗೆನ್ನುತ್ತಿವೆ). (ಸೂತ್ರಕಾರನೂ) ಮುಂದೆ 'ಜ್ಞೋಽತ ಏವ' (ಸೂ.೨-೩-೧೯) (ಆದ್ದರಿಂದ ಜ್ಞಾತೃವು) ಎಂದು ಹೇಳಿಯೂ ಇರುತ್ತಾನೆ.

ಆದ್ದರಿಂದ ಸ್ವಯಂಪ್ರಕಾಶನಾದ ಈ ಆತ್ಮನು ಜ್ಞಾತೃವೇ, ಬರಿಯ ಪ್ರಕಾಶಮಾತ್ರನಲ್ಲ ; (ಪ್ರಕಾಶವು) ಪ್ರಕಾಶವೆಂದಾಗಿರುವದರಿಂದಲೇ ದೊಡ್ಡದೀಪವೇ ಮುಂತಾದ ಪ್ರಕಾಶಗಳಂತೆ ಯಾರಿಗಾದರೂ ಒಬ್ಬನಿಗೆ ಪ್ರಕಾಶವಾದೀತು ; **ಆದ್ದರಿಂದ ಸಂವಿತ್ತು ಆತ್ಮನಾಗಲಾರದು.** 'ಸಂವಿತ್ತು', 'ಅನುಭೂತಿ', 'ಜ್ಞಾನ'– ಮುಂತಾದ ಶಬ್ದಗಳು ಸಂಬಂಧಿಶಬ್ದಗಳೇ ಎಂದು ಶಬ್ದಾರ್ಥವನ್ನು ಬಲ್ಲವರು (ಹೇಳುತ್ತಾರೆ); ಲೋಕದಲ್ಲಿಯಾಗಲಿ ವೇದದಲ್ಲಿಯಾಗಲಿ ಜಾನಾತಿ (ಅರಿವು) ಮುಂತಾದ (ಶಬ್ದವನ್ನು) ಅಕರ್ಮಕವಾಗಿಯೂ ಅಕರ್ತೃವಾಗಿಯೂ ಪ್ರಯೋಗಿಸುವದು ಕಂಡುಬಂದಿಲ್ಲವಷ್ಟೆ ?

## (೧೬) ಬರಿಯ ಜ್ಞಾನವು ಆತ್ಮನಲ್ಲ

(ಮೂಲ)

ಯಚ್ಚೋಕ್ತಮ್ ಅಜಡತ್ವಾತ್ ಸಂವಿದೇವಾಽಽತ್ಮಾ ಇತಿ । ತತ್ರೇದಂ ಪ್ರಷ್ಟವ್ಯಮ್ । ಅಜಡತ್ವಮಿತಿ ಕಿಮಭಿಪ್ರೇತಮ್ ? ಸ್ವಸತ್ತಾಪ್ರಯುಕ್ತಪ್ರಕಾಶತ್ವಮ್ ಇತಿ ಚೇತ್, ತಥಾ ಸತಿ ದೀಪಾದಿಷ್ವನೈಕಾನ್ತ್ಯಮ್ । ಸಂವಿದತಿರಿಕ್ತಪ್ರಕಾಶಧರ್ಮಾನಭ್ಯುಪಗಮೇನ ಅಸಿದ್ಧಿರ್ವಿರೋಧಶ್ಚ । ಅವ್ಯಭಿಚರಿತಪ್ರಕಾಶಸತ್ತಾಕತ್ವಮಪಿ ಸುಖಾದಿಷು ವ್ಯಭಿಚಾರಾನ್ನಿರಸ್ತಮ್ । ಯದ್ಯುಚ್ಯೇತ, ಸುಖಾದಿರನ್ಯಭಿಚರಿತಪ್ರಕಾಶೋಽಪಿ ಅನ್ಯಸ್ಮೈ ಪ್ರಕಾಶಮಾನತಯಾ ಘಟಾದಿವಜ್ಜಡತ್ವೇನ ಅನಾತ್ಮಾ–ಇತಿ। ಜ್ಞಾನಂ ವಾ ಕಿಂ ಸ್ವಸ್ಮೈ ಪ್ರಕಾಶತೇ? ತದಪಿ ಹಿ ಅನ್ಯಸ್ಯೈವಾ-ಹಮರ್ಥಸ್ಯ ಜ್ಞಾತುರವಭಾಸತೇ 'ಅಹಂ ಸುಖೀ' ಇತಿವತ್ 'ಜಾನಾಮ್ಯಹಮ್' ಇತಿ । ಅತಃ ಸ್ವಸ್ಮೈ ಪ್ರಕಾಶಮಾನತ್ವರೂಪಮ್ ಅಜಡತ್ವಂ ಸಂವಿದ್ಯಸಿದ್ಧಮ್। ತಸ್ಮಾತ್ ಸ್ವಾತ್ಮಾನಂ ಪ್ರತಿ ಸ್ವಸತ್ತಯೈವ ಸಿಧ್ಯನ್, ಅಜಡೋಽಹಮರ್ಥ ವಾತ್ಮಾ । ಜ್ಞಾನಸ್ಯಾಪಿ ಪ್ರಕಾಶತಾ ತತ್ಸಂಬನ್ಧಾಯತ್ತಾ । ತತ್ಕೃತಮೇವ ಹಿ ಜ್ಞಾನಸ್ಯ ಸುಖಾದೇರಿವ ಸ್ವಾಶ್ರಯಚೇತನಂ ಪ್ರತಿ ಪ್ರಕಟತ್ವಮ್ ಇತರಂ ಪ್ರತ್ಯ-ಪ್ರಕಟತ್ವಂ ಚ। ಅತೋ ನ ಜ್ಞಪ್ತಿಮಾತ್ರಮಾತ್ಮಾ ಅಪಿ ತು ಜ್ಞಾತೈವಾಽಹಮರ್ಥಃ॥

(ಅರ್ಥ)

ಅಜಡವಾಗಿರುವದರಿಂದ ಸಂವಿತ್ತೇ ಆತ್ಮನು– ಎಂದೆಯಲ್ಲ,[1] ಅಲ್ಲಿ ಇದನ್ನು ಕೇಳತಕ್ಕದ್ದಿದೆ : 'ಅಜಡತ್ವವು' ಎಂಬುದರಿಂದ ಏನು ಅಭಿಪ್ರೇತವಾಗಿದೆ ? ತನ್ನ

1. ಪೂರ್ವಪಕ್ಷದ ೨೦ನೆಯ ವಿಭಾಗವನ್ನು ನೋಡಿ.

ಇರವಿನ ಕಾರಣದಿಂದಲೇ ಬೆಳಗುವದು (ಅಜಡತ್ವವು) ಎಂದರೆ, ಹಾಗಾದರೆ ದೀಪಾದಿಗಳ ವಿಷಯಕ್ಕೂ (ಅದು ಅನ್ವಯಿಸುವದರಿಂದ) ಅನೈಕಾಂತಿಕವಾಗುವದು; ಸಂವಿತ್ತಿಗಿಂತ ವ್ಯತಿರಿಕ್ತವಾದ ಪ್ರಕಾಶವೆಂಬ ಧರ್ಮವನ್ನು (ನೀನು) ಒಪ್ಪಿಲ್ಲವಾದ್ದರಿಂದ ಅಸಿದ್ಧಿಯೂ ವಿರೋಧವೂ ಆಗುವದು. ಅವ್ಯಭಿಚರಿತವಾದ ಪ್ರಕಾಶವಿರುವದು[1]– ಎಂದರೂ ಸುಖಾದಿಗಳಲ್ಲಿ ವ್ಯಭಿಚರಿತವಾಗುವದರಿಂದಲೇ ನಿರಾಕೃತವಾಗುತ್ತದೆ. ಸುಖವೇ ಮುಂತಾದದ್ದು ಅವ್ಯಭಿಚಾರಿಪ್ರಕಾಶವುಳ್ಳದ್ದೇ ಆದರೂ ಮತ್ತೊಬ್ಬರಿಗೇ ಬೆಳಗುವದರಿಂದ ಗಡಿಗೆಯೇ ಮುಂತಾದದ್ದರಂತೆ ಜಡವಾಗಿರುತ್ತದೆಯಾಗಿ ಅನಾತ್ಮಕ, ಎನ್ನುವದಾದರೆ, ಜ್ಞಾನವಾದರೂ ತನಗೇ ಬೆಳಗುತ್ತಿದೆಯೇನು ? ಅದೂ ಅಹಮರ್ಥವಾದ ಜ್ಞಾತೃವೆಂಬ ಮತ್ತೊಬ್ಬನಿಗೇ ಅಲ್ಲವೆ, 'ನಾನು ಅರಿಯುತ್ತೇನೆ' ಎಂದು ಬೆಳಗುವದು ? ಆದ್ದರಿಂದ ತನಗೇ ಬೆಳಗಿತೋರುತ್ತಿರುವದೆಂಬ ರೂಪದ ಅಜಡತ್ವವು ಸಂವಿತ್ತಿನಲ್ಲಿ ಅಸಿದ್ಧ. ಆದ್ದರಿಂದ, **ತನಗೆ ತನ್ನ ಇರವಿನಿಂದಲೇ ಸಿದ್ಧಿಸುವ ಅಜಡನಾಗಿರುವ ಅಹಮರ್ಥವೇ ಆತ್ಮನು.** ಜ್ಞಾನವು ಬೆಳಗಿತೋರುವದೂ ಅವನ ಸಂಬಂಧಕ್ಕೆ ಅಧೀನವಾಗಿರುತ್ತದೆ. ಆ (ಸಂಬಂಧ)ದಿಂದಲೇ ಅಲ್ಲವೆ, ಜ್ಞಾನವು ಸುಖವೇ ಮುಂತಾದದ್ದರಂತೆ ತನ್ನ ಆಶ್ರಯವಾಗಿರುವ ಚೇತನಕ್ಕೆ ಪ್ರಕಟವಾಗಿರುವದು, ಮತ್ತು ಇನ್ನೊಬ್ಬರಿಗೆ ಅಪ್ರಕಟವಾಗಿರುವದು ? ಆದ್ದರಿಂದ ಜ್ಞಪ್ತಿಮಾತ್ರವೇ ಆತ್ಮನಲ್ಲ, ಜ್ಞಾತೃವೇ ಆಗಿರುವ ಅಹಮರ್ಥವೇ ಆತ್ಮನು.

## (೧೭) ಅನುಭೂತಿಯಲ್ಲಿ ಜ್ಞಾತೃತ್ವವು ಕಲ್ಪಿತವಲ್ಲ

(ಮೂಲ)

ಅಥ ಯದುಕ್ತಮ್–ಅನುಭೂತಿಃ ಪರಮಾರ್ಥತೋ ನಿರ್ವಿಷಯಾ ನಿರಾಶ್ರಯಾ ಚ ಸತೀ ಭ್ರಾನ್ತ್ಯಾ ಜ್ಞಾತೃತಯಾ ಅವಭಾಸತೇ ರಜತತಯೇವ ಶುಕ್ತಿಃ, ನಿರಧಿಷ್ಠಾನಭ್ರಮಾನುಪಪತ್ತೇಃ–ಇತಿ ; ತದಯುಕ್ತಮ್ । ತಥಾ ಸತಿ ಅನುಭವಸಾಮಾನಾಧಿಕರಣ್ಯೇನಾನುಭವಿತಾ ಅಹಮರ್ಥಃ ಪ್ರತೀಯೇತ, ಅನುಭೂತಿರಹಮ್' ಇತಿ ಪುರೋಽವಸ್ಥಿತಭಾಸ್ವರದ್ರವ್ಯಾಕಾರತಯಾ ರಜತಾದಿರಿವ । ಅತ್ರ ತು ಪೃಥಗವಭಾಸಮಾನೈವೇಯಮ್ ಅನುಭೂತಿರರ್ಥಾನ್ತರಮ್ ಅಹಮರ್ಥಂ ವಿಶಿನಷ್ಟಿ ; ದಣ್ಡ ಇವ ದೇವದತ್ತಮ್ । ತಥಾ ಹಿ ; 'ಅನುಭವಾಮ್ಯಹಮ್' ಇತಿ ಪ್ರತೀತಿಃ । ತದೇವಮ್ ಅಸ್ಮದರ್ಥಮ್ ಅನುಭೂತಿವಿಶಿಷ್ಟಂ ಪ್ರಕಾಶಯನ್ 'ಅನುಭವಾಮ್ಯಹಮ್' ಇತಿ ಪ್ರತ್ಯಯಃ ದಣ್ಡಮಾತ್ರೇ 'ದಣ್ಡೀ ದೇವದತ್ತಃ' ಇತಿ ಪ್ರತ್ಯಯವದ್ ವಿಶೇಷಣಭೂತಾನುಭೂತಿಮಾತ್ರಾವಲಮ್ಬನಃ ಕಥಮಿವ ಪ್ರತಿಜ್ಞಾಯೇತ ?

1. ಇಲ್ಲಿ ಪ್ರಕಾಶವೆಂಬ ಶಬ್ದವನ್ನು ಎರಡು ಅರ್ಥಗಳಲ್ಲಿ ಪ್ರಯೋಗಿಸಿದಂತೆ ಆಗಿದೆ ; ಪರಿಶಿಷ್ಟವನ್ನು ನೋಡಿ.

(ಅರ್ಥ)

ಇನ್ನು ಅನುಭೂತಿಯು ನಿಜವಾಗಿ ನಿರ್ವಿಷಯವೂ ನಿರಾಶ್ರಯವೂ ಆಗಿದ್ದರೂ ಭ್ರಾಂತಿಯಿಂದ ಕಪ್ಪೆಯಚಿಪ್ಪು ಬೆಳ್ಳಿಯಾಗಿ ತೋರುವಂತೆ – ಜ್ಞಾತೃವಾಗಿ ತೋರುತ್ತಿರುವದು; ಏಕೆಂದರೆ ನಿರಧಿಷ್ಠಾನವಾದ ಭ್ರಾಂತಿಯು ಯುಕ್ತವಲ್ಲ, ಎಂದು ಹೇಳಿದೆಯಲ್ಲ[1], ಅದು ಅಯುಕ್ತ; ಏಕೆಂದರೆ ಹಾಗಿದ್ದರೆ ಎದುರಿಗಿರುವ ಥಳಥಳಿಸುವ ದ್ರವ್ಯಾಕಾರದಿಂದೊಡಗೂಡಿದ್ದಾಗಿರುವದರಿಂದ ಬೆಳ್ಳಿಯೇ ಮುಂತಾದದ್ದು ತೋರುವಂತೆ 'ನಾನು ಅನುಭೂತಿ' ಎಂದು ಅನುಭವ ಸಮಾನಾಧಿಕರಣವಾಗಿ ಅನುಭವಿತೃವಾದ ಅಹಮರ್ಥವೂ ತೋರಬೇಕಿತ್ತು. ಇಲ್ಲಿಯಾದರೋ, ಈ ಅನುಭೂತಿಯು ಬೇರೆಯಾಗಿ ತೋರಿಕೊಂಡೇ ಮತ್ತೊಂದು ಪದಾರ್ಥವಾದ ಅಹಮರ್ಥಕ್ಕೆ ದಂಡವು ದೇವದತ್ತನಿಗೆ ಹೇಗೋ ಹಾಗೆ ವಿಶೇಷಣವಾಗಿರುತ್ತದೆ. 'ನಾನು ಅನುಭವಿಸುತ್ತೇನೆ' ಎಂದೇ ಪರಿಯಲ್ಲಲ್ಲವೆ, ಪ್ರತೀತಿಯಾಗುವದು ? ಅಂತೂ ಹೀಗೆ 'ನಾನು ಅನುಭವಿಸುತ್ತೇನೆ' ಎಂಬ ಪ್ರತ್ಯಯವು ಅಸ್ಮದರ್ಥವನ್ನು ಅನುಭೂತಿವಿಶಿಷ್ಟವಾಗಿಯೇ ಬೆಳಗಿತೋರಿಸುತ್ತಿರುವದಂತ ಸಾಮಾನ್ಯದಲ್ಲಿ 'ದೇವದತ್ತನು ದಂಡಿಯು' ಎಂಬ ಪ್ರತ್ಯಯದಂತೆ ವಿಶೇಷಣವಾಗಿರುವ ಬರಿಯ ಅನುಭೂತಿಯನ್ನು ಮಾತ್ರ ವಿಷಯೀಕರಿಸಿಕೊಂಡಿರುವದೆಂದು ಹೇಗೆ ಹೇಳಲಾದೀತು ?

## (೧೮) ಜ್ಞಾತೃತ್ವವು ಮಿಥ್ಯೆಯಲ್ಲ

(ಮೂಲ)

ಯದಪ್ಯುಕ್ತಮ್ 'ಸ್ಥೂಲೋಽಹಮ್' ಇತ್ಯಾದಿ ದೇಹಾತ್ಮಾಭಿಮಾನವತ ಏವ ಜ್ಞಾತೃತ್ವಪ್ರತಿಭಾಸನಾತ್ ಜ್ಞಾತೃತ್ವಮಪಿ ಮಿಥ್ಯಾ – ಇತಿ । ತದಯುಕ್ತಮ್ । ಆತ್ಮತಯಾ ಅಭಿಮತಾಯಾ ಅನುಭೂತೇರಪಿ ಮಿಥ್ಯಾತ್ವಂ ಸ್ಯಾತ್, ತದ್ವತ ಏವ ಪ್ರತೀತೇಃ । ಸಕಲೇತರೋಪಮರ್ದಿತತ್ತ್ವಜ್ಞಾನಾಬಾಧಿತತ್ವೇನ ಅನುಭೂತೇರ್ನ ಮಿಥ್ಯಾತ್ವಮ್ ಇತಿ ಚೇತ್, ಹನ್ತೈವಂ ಸತಿ ತದಬಾಧಾದೇವ ಜ್ಞಾತೃತ್ವಮಪಿ ನ ಮಿಥ್ಯಾ ॥

(ಅರ್ಥ)

ಇನ್ನು 'ನಾನು ದಪ್ಪವಾಗಿದೇನೆ' ಎಂದು– ದೇಹವೇ ತಾನೆಂಬ ಅಭಿಮಾನವುಳ್ಳವನಿಗೇ ಜ್ಞಾತೃತ್ವವು ತೋರುತ್ತಿರುವದರಿಂದ ಜ್ಞಾತೃತ್ವವೂ ಮಿಥ್ಯೆಯೇ– ಎಂದೆಯಲ್ಲ, ಅದು ಅಯುಕ್ತ. (ಹಾಗಾದರೆ) ಆತ್ಮನೆಂದು ನಿನಗೆ ಅಭಿಮತವಾಗಿರುವ ಅನುಭೂತಿಯೂ (ಹೀಗೆಯೇ) ಮಿಥ್ಯೆ ಎಂದಾದೀತು ! ಏಕೆಂದರೆ ಆ

1. ಪೂರ್ವಪಕ್ಷದ ೨೧ನೆಯ ವಿಭಾಗವನ್ನು ನೋಡಿ. ಸಂದರ್ಭದಲ್ಲಿ ಇಲ್ಲಿ ಹೇಳಲಾಗುವ ಪೂರ್ವಪಕ್ಷಿಯ ಅನೇಕ ಅಭಿಪ್ರಾಯಗಳು ಅಲ್ಲಿ ಬಂದಿವೆ.

(ಅಭಿಮಾನವುಳ್ಳವನಿಗೇ ಆ) ಪ್ರತೀತಿಯೂ ಆಗುತ್ತಿದೆ. ಮಿಕ್ಕದ್ದೆಲ್ಲವನ್ನೂ ಬಾಧಿಸುವ ತತ್ತ್ವಜ್ಞಾನದಿಂದ ಬಾಧಿತವಾಗದೆ ಇರುವದರಿಂದ ಅನುಭೂತಿಯು ಮಿಥ್ಯೆಯಲ್ಲ, ಎನ್ನುವೆಯಾದರೆ ಸಂತೋಷ, ಅದರಿಂದ ಬಾಧಿತವಾಗದೆ ಇರುವದರಿಂದಲೇ ಜ್ಞಾತೃತ್ವವೂ ಮಿಥ್ಯೆಯಲ್ಲ.

## (೧೯) ಅಹಂಕಾರವು ಜ್ಞಾತೃವಲ್ಲ

(ಮೂಲ)

ಯದಪ್ಯುಕ್ತಮ್ ಅವಿಕ್ರಿಯಸ್ಯಾತ್ಮನೋ ಜ್ಞಾನಕ್ರಿಯಾಕರ್ತೃತ್ವರೂಪಂ ಜ್ಞಾತೃತ್ವಂ ನ ಸಂಭವತಿ, ಅತೋ ಜ್ಞಾತೃತ್ವಂ ವಿಕ್ರಿಯಾತ್ಮಕಂ ಜಡಂ ವಿಕಾರಾಸ್ಪದಾವ್ಯಕ್ತಪರಿಣಾಮಾಹಂಕಾರಗ್ರನ್ಥಿಸ್ಥಮ್ ಇತಿ ನ ಜ್ಞಾತೃತ್ವಮಾತ್ಮನಃ, ಅಪಿ ತ್ವನ್ತಃಕರಣರೂಪಸ್ಯಾಹಙ್ಕಾರಸ್ಯ। ಕರ್ತೃತ್ವಾದಿರ್ಹಿ ರೂಪಾದಿವದ್ ದೃಶ್ಯಧರ್ಮಃ। ಕರ್ತೃತ್ವೇ ಅಹಂಪ್ರತ್ಯಯಗೋಚರತ್ವೇ ಚ ಆತ್ಮನೋಽಭ್ಯುಪಗಮ್ಯಮಾನೇ ದೇಹಸ್ಯೇವ ಅನಾತ್ಮತ್ವಪರಾಕ್ತ್ವಜಡತ್ವಾದಿಪ್ರಸಙ್ಗಶ್ಚ – ಇತಿ। ನೈತದುಪಪದ್ಯತೇ। ದೇಹಸ್ಯೇವಾಚೇತನತ್ವಪ್ರಕೃತಿಪರಿಣಾಮತ್ವದೃಶ್ಯತ್ವಪರಾಕ್ತ್ವಪರಾರ್ಥತ್ವಾದಿಯೋಗಾದನ್ತಃಕರಣರೂಪಸ್ಯಾಹಙ್ಕಾರಸ್ಯ, ಚೇತನಾಸಾಧಾರಣಸ್ವಭಾವತ್ವಾಚ್ಚ ಜ್ಞಾತೃತ್ವಸ್ಯ ॥

ಏತದುಕ್ತಂ ಭವತಿ – ಯಥಾ ದೇಹಾದೇ[1]ರ್ದೃಶ್ಯತ್ವಪರಾಕ್ತ್ವಾದಿಹೇತುಭಿಸ್ತದ್ದೃಶ್ಯಸೀಕದ್ರಷ್ಟೃತ್ವಪ್ರತ್ಯಕ್ತ್ವಾದೇ[2]ರ್ವಿವಿಚ್ಯತೇ, ಏವಮ್ ಅನ್ತಃಕರಣರೂಪಾಹಙ್ಕಾರೋಽಪಿ ತದ್ದೃಶ್ಯತ್ವಾದೇವ ತೈರೇವ ಹೇತುಭಿಸ್ತಸ್ಮಾದ್ ವಿವಿಚ್ಯತ ಇತಿ। ಅತೋ ವಿರೋಧಾದೇವ ನ ಜ್ಞಾತೃತ್ವಮಹಙ್ಕಾರಸ್ಯ। ದೃಶಿತ್ವವತ್। ಯಥಾ ದೃಶಿತ್ವಂ ತತ್ಕರ್ಮಣೋಽಹಙ್ಕಾರಸ್ಯ ನಾಭ್ಯುಪಗಮ್ಯತೇ, ತಥಾ ಜ್ಞಾತೃತ್ವಮಪಿ ನ ತತ್ಕರ್ಮಣೋಽಭ್ಯುಪಗನ್ತವ್ಯಮ್ ॥

(ಅರ್ಥ)

ಇನ್ನು ಅವಿಕ್ರಿಯನಾದ ಆತ್ಮನಿಗೆ ಜ್ಞಾನಕ್ರಿಯಾಕರ್ತೃತ್ವರೂಪವಾದ ಜ್ಞಾತೃತ್ವವು ಸಂಭವಿಸಲಾರದು. ಆದ್ದರಿಂದ ಜ್ಞಾತೃತ್ವವು ವಿಕ್ರಿಯಾತ್ಮಕವೂ ಜಡವೂ ಆಗಿರುತ್ತದೆಯಾಗಿ ವಿಕಾರಕ್ಕೆ ಆಶ್ರಯವಾಗಿರುವ, ಅವ್ಯಕ್ತದ ಪರಿಣಾಮವಾದ ಅಹಂಕಾರಗ್ರಂಥಿಯಲ್ಲಿರತಕ್ಕದ್ದು. ಆದ್ದರಿಂದ ಜ್ಞಾತೃತ್ವವು ಆತ್ಮನದಲ್ಲ, ಅಂತಃಕರಣರೂಪವಾದ ಅಹಂಕಾರದ್ದೇ. ಕರ್ತೃತ್ವವೇ ಮುಂತಾದದ್ದು ರೂಪಾದಿಗಳಂತೆ ದೃಶ್ಯಧರ್ಮವಾಗಿದೆ. ಆತ್ಮನಿಗೆ ಕರ್ತೃತ್ವವನ್ನೂ ಅಹಂಪ್ರತ್ಯಯಗೋಚರತ್ವವನ್ನೂ ಒಪ್ಪಿದರೆ ದೇಹಕ್ಕಿರುವಂತೆಯೇ ಅನಾತ್ಮತ್ವ, ಬಾಹ್ಯತ್ವ, ಜಡತ್ವ–

1. 'ದೇಹಾದಿಃ' ಎಂದು ಕಂ॥ ಪಾಠ.
2. 'ಪ್ರತ್ಯಕ್ತ್ವಾದಿಭಿಃ' ಎಂದು ಕಂ॥ ಪಾಠ.

ಇವೇ ಮುಂತಾದವುಗಳು (ಆತ್ಮನಿಗೆ) ಇವೆಯೆಂದಾಗಬೇಕಾದೀತು- ಎಂದೆಯಲ್ಲ, ಅದೂ ಹೊಂದುವದಿಲ್ಲ. ಏಕೆಂದರೆ (ಹೀಗಾದರೆ) ದೇಹವಂತೆಯೇ ಅಂತಃಕರಣ ರೂಪವಾದ ಅಹಂಕಾರವೂ ಅಚೇತನವೂ ಪ್ರಕೃತಿಪರಿಣಾಮವೂ ದೃಶ್ಯವೂ ಹೊರಗಿನ ವಿಷಯವೂ ಪರಾರ್ಥವೂ ಆಗಿರುತ್ತದೆ ; ಜ್ಞಾತೃತ್ವವು ಚೇತನಕ್ಕಿರುವ ಅಸಾಧಾರಣಧರ್ಮವಾಗಿರುತ್ತದೆ.[1]

ಇಷ್ಟನ್ನು ಹೇಳಿದಂತಾಯಿತು : ಹೇಗೆ ದೇಹವೇ ಮುಂತಾದದ್ದು ದೃಶ್ಯವೂ ಪರಾಗ್ವಸ್ತುವೂ ಆಗಿರುವದೇ ಮುಂತಾದ ಹೇತುಗಳಿಂದ ಅದಕ್ಕೆ ವಿರುದ್ಧವಾಗಿರುವ ದ್ರಷ್ಟೃತ್ವ, ಪ್ರತ್ಯಕ್ತ್ವ-ಮುಂತಾದದ್ದಕ್ಕಿಂತ ವಿಂಗಡವಾಗಿರುತ್ತದೆಯೋ ಹೀಗೆಯೇ ಅಂತಃಕರಣರೂಪವಾದ ಅಹಂಕಾರವೂ ಅಂಥ ದ್ರವ್ಯವೇ ಆಗಿರುವದರಿಂದ ಅದೇ ಹೇತುಗಳಿಂದ ಆ (ದ್ರಷ್ಟೃತ್ವವೇ ಮುಂತಾದದ್ದಕ್ಕಿಂತ) ವಿಂಗಡವಾಗಿರುತ್ತವೆ.[2] ಆದ್ದರಿಂದ (ಹೀಗೆ) ವಿರೋಧವಿರುವದರಿಂದಲೇ ಅಹಂಕಾರಕ್ಕೆ ಜ್ಞಾತೃತ್ವವಿರುವದಿಲ್ಲ ; ದೃಶಿತ್ವವು ಹೇಗೆ (ಅದಕ್ಕಿಲ್ಲವೋ ಹಾಗೆಯೇ ಇದು). ಹೇಗೆ ದೃಶಿತ್ವವು ಅದಕ್ಕೆ ವಿಷಯವಾಗಿರುವ ಅಹಂಕಾರಕ್ಕಿಲ್ಲವೆನ್ನುತ್ತೇವೆಯೋ, ಹಾಗೆಯೇ ಜ್ಞಾತೃತ್ವವೂ ಅದಕ್ಕೆ ವಿಷಯವಾಗಿರುವ ಅಹಂಕಾರಕ್ಕೆ ಇಲ್ಲವೆಂದೇ ಹೇಳಬೇಕು.

(ಮೂಲ)

ನ ಚ ಜ್ಞಾತೃತ್ವಂ ವಿಕ್ರಿಯಾತ್ಮಕಮ್ ; ಜ್ಞಾತೃತ್ವಂ ಹಿ ಜ್ಞಾನಗುಣಾಶ್ರಯತ್ವಮ್ । ಜ್ಞಾನಂ ಚಾಸ್ಯ ನಿತ್ಯಸ್ಯ ಸ್ವಾಭಾವಿಕಧರ್ಮತ್ವೇನ ನಿತ್ಯಮ್ ನಿತ್ಯತ್ವಂ ಚಾತ್ಮನೋ 'ನಾತ್ಮಾ ಶ್ರುತೇಃ' (ಸೂ. ೨-೩-೧೮) ಇತ್ಯಾದಿಷು ವಕ್ಷ್ಯತಿ । 'ಜ್ಞೋಽತ ಏವ' (ಸೂ.೨-೧-೧೯) ಇತ್ಯತ್ರ 'ಜ್ಞಃ' ಇತಿ ವ್ಯಪದೇಶೇನ ಜ್ಞಾನಾಶ್ರಯತ್ವಂ ಚ ಸ್ವಾಭಾವಿಕಮ್ ಇತಿ ವಕ್ಷ್ಯತಿ। ಅಸ್ಯ ಜ್ಞಾನಸ್ವರೂಪಸ್ಯೈವ ಮಣಿಪ್ರಭೃತೀನಾಂ ಪ್ರಭಾಶ್ರಯತ್ವಮಿವ ಜ್ಞಾನಾಶ್ರಯತ್ವಮಸ್ಯವಿರುದ್ಧಮ್ ಇತ್ಯುಕ್ತಮ್ । ಸ್ವಯಮ್ ಅಪರಿಚ್ಛಿನ್ನಮೇವ ಜ್ಞಾನಂ ಸಙ್ಕೋಚವಿಕಾಸಾರ್ಹಮ್ ಇತ್ಯುಪಪಾದಯಿಷ್ಯಾಮಃ ॥

(ಅರ್ಥ)

ಜ್ಞಾತೃತ್ವವು ವಿಕ್ರಿಯಾತ್ಮಕವೂ ಅಲ್ಲ. ಜ್ಞಾತೃತ್ವವೆಂದರೆ : ಜ್ಞಾನಗುಣಕ್ಕೆ ಆಶ್ರಯವಾಗಿರುವದಲ್ಲವೆ ? ಜ್ಞಾನವೋ, ಎಂದರೆ ನಿತ್ಯನಾದ ಈ (ಆತ್ಮನ) ಸ್ವಾಭಾವಿಕಧರ್ಮವಾದ್ದರಿಂದ ನಿತ್ಯವಾಗಿರುತ್ತದೆ. ಆತ್ಮನು ನಿತ್ಯವೆಂಬುದನ್ನು ಸೂತ್ರಕಾರನು 'ನಾತ್ಮಾ ಶ್ರುತೇಃ' (ಸೂ. ೨-೩-೧೮) ಮುಂತಾದ (ಸೂತ್ರಗಳಲ್ಲಿ) ಹೇಳುವನು. 'ಜ್ಞೋಽತ ಏವ' (ಸೂ. ೨-೩-೧೯) ಎಂಬಲ್ಲಿ 'ಜ್ಞಃ' ಎಂಬ ಮಾತಿನಿಂದ ಜ್ಞಾನಾಶ್ರಯತ್ವವು ಸ್ವಾಭಾವಿಕವು ಎಂದೂ ಹೇಳುವನು. ಜ್ಞಾನಸ್ವರೂಪನೇ

1-2. ಈ ವಿಷಯದಲ್ಲಿ ಪರಿಶಿಷ್ಟವನ್ನು ನೋಡಿ.

ಆಗಿರುವ ಈ (ಆತ್ಮ)ನಿಗೆ ರತ್ನವೇ ಮುಂತಾದವುಗಳಿಗೆ ಪ್ರಭಾಶ್ರಯತ್ವವಿರುವಂತೆ ಜ್ಞಾನಾಶ್ರಯತ್ವವೂ ವಿರುದ್ಧವಲ್ಲ ಎಂದು (ಆಗಲೆ) ಹೇಳಿದ್ದಾಗಿದೆ. ತಾನು ಅಪರಿಚ್ಛಿನ್ನನೇ ಆಗಿದ್ದರೂ **ಜ್ಞಾನವು ಸಂಕೋಚವಿಕಾಸಗಳಾಗುವದಕ್ಕೆ ತಕ್ಕದ್ದಾಗಿದೆ ಎಂದು ಮುಂದೆ ಹೊಂದಿಸಿ ತೋರಿಸಿಕೊಡುವೆವು.**

## (೨೦) ಆತ್ಮನ ಜ್ಞಾತೃತ್ವದ ಸ್ವರೂಪ

(ಮೂಲ)

ಅತಃ ಕ್ಷೇತ್ರಜ್ಞಾವಸ್ಥಾಯಾಂ ಕರ್ಮಣಾ ಸಙ್ಕುಚಿತಸ್ವರೂಪಂ ತತ್ತತ್ಕರ್ಮಾನುಗುಣತರತಮಭಾವೇನ ವರ್ತತೇ ತಚ್ಚೇನ್ದ್ರಿಯದ್ವಾರೇಣ ವ್ಯವಸ್ಥಿತಮ್ । ತಮಿಮಮ್ ಇನ್ದ್ರಿಯದ್ವಾರಾ ಜ್ಞಾನಪ್ರಸರಮಪೇಕ್ಷ್ಯ ಉದಯಾಸ್ತಮಯವ್ಯಪದೇಶಃ ಪ್ರವರ್ತತೇ । ಜ್ಞಾನಪ್ರಸರೇ ತು ಕರ್ತೃತ್ವಮಸ್ತ್ಯೇವ । ತಚ್ಚ ನ ಸ್ವಾಭಾವಿಕಮ್ । ಅಪಿ ತು ಕರ್ಮಕೃತಮ್ ಇತ್ಯವಿಕ್ರಿಯಸ್ವರೂಪ ಏವಾತ್ಮಾ । ಏವಂರೂಪವಿಕ್ರಿಯಾತ್ಮಕಂ ಜ್ಞಾತೃತ್ವಂ ಜ್ಞಾನಸ್ವರೂಪಸ್ಯ ಆತ್ಮನ ಏವೇತಿ ನ ಕದಾಚಿದಪಿ ಜಡಸ್ಯ ಅಹಙ್ಕಾರಸ್ಯ ಜ್ಞಾತೃತ್ವಸಂಭವಃ ॥

(ಅರ್ಥ)

ಆದ್ದರಿಂದ ಕ್ಷೇತ್ರಜ್ಞಾವಸ್ಥೆಯಲ್ಲಿ ಕರ್ಮದಿಂದ ಸಂಕುಚಿತವಾದ ಸ್ವರೂಪವು ಆಯಾ (ಜೀವನ) ಕರ್ಮಕ್ಕನುಗುಣವಾಗಿ ತರತಮಭಾವದಿಂದ ಇದ್ದುಕೊಂಡಿರುತ್ತದೆ. ಆ (ಜ್ಞಾನದ ಪ್ರಸರವು) ಇಂದ್ರಿಯಗಳ ಮೂಲಕವಾಗಿ (ತರತಮಭಾವದಿಂದ) ಇರುತ್ತದೆ. ಆ ಈ ಇಂದ್ರಿಯದ್ವಾರದಿಂದ ಜ್ಞಾನಪ್ರಸರದ ಅಪೇಕ್ಷೆಯಿಂದ ಹುಟ್ಟುವದು, ಕಾಣದೆಹೋಗುವದು- ಎಂಬ ವ್ಯಪದೇಶವು ಉಂಟಾಗಿರುತ್ತದೆ. ಜ್ಞಾನಪ್ರಸರದಲ್ಲಿ ಮಾತ್ರ ಕರ್ತೃತ್ವವು ಇದ್ದೇ ಇರುತ್ತದೆ. **ಅದು ಸ್ವಾಭಾವಿಕವಲ್ಲ, ಕರ್ಮಕೃತವಾದದ್ದು. ಹೀಗಿರುವದರಿಂದ ಆತ್ಮನು ಅವಿಕ್ರಿಯೆ ಸ್ವರೂಪನೇ ಆಗಿರುತ್ತಾನೆ. ಇಂಥ ವಿಕ್ರಿಯೆಯುಳ್ಳ ಜ್ಞಾತೃತ್ವವು ಜ್ಞಾನಸ್ವರೂಪನಾದ ಆತ್ಮನಿಗೇ ಆದ್ದರಿಂದ ಎಂದಿಗೂ ಜಡರೂಪವಾದ ಅಹಂಕಾರಕ್ಕೆ ಜ್ಞಾತೃತ್ವವು ಸಂಭವಿಸುವದಿಲ್ಲ.**

## (೨೧) ಚಿಚ್ಛಾಯಾಪತ್ತಿಯಿಂದ ಅಹಂಕಾರಕ್ಕೆ ಕರ್ತೃತ್ವವೆನ್ನುವದು ಸರಿಯಲ್ಲ

(ಮೂಲ)

ಜಡಸ್ವರೂಪಸ್ಯಾಪಿ ಅಹಙ್ಕಾರಸ್ಯ ಚಿತ್ಸಂನಿಧಾನೇನ ತಚ್ಛಾಯಾಪತ್ತ್ಯಾ ಸಂಭವಃ ಇತಿ ಚೇತ್, ಕೇಯಂ ಚಿಚ್ಛಾಯಾಪತ್ತಿಃ ? ಕಿಮಹಙ್ಕಾರ

ಚ್ಛಾಯಾಪತ್ತಿಃ ಸಂವಿದಃ, ಉತ ಸಂವಿಚ್ಛಾಯಾಪತ್ತಿರಹಙ್ಕಾರಸ್ಯ ? ನ ತಾವತ್ ಸಂವಿದಃ, ಸಂವಿದೋ ಜ್ಞಾತೃತ್ವಾನಭ್ಯುಪಗಮಾತ್ ; ನಾಪ್ಯಹಙ್ಕಾರಸ್ಯ, ಉಕ್ತ ರೀತ್ಯಾ ತಸ್ಯ ಜಡಸ್ಯ ಜ್ಞಾತೃತ್ವಾಯೋಗಾತ್ । ದ್ವಯೋರಪ್ಯಚಾಕ್ಷುಷತ್ವಾಚ್ಚ । ನ ಹ್ಯಚಾಕ್ಷುಷಾಣಾಂ ಛಾಯಾ ದೃಷ್ಟಾ । ಅಥ, ಅಗ್ನಿಸಂಸರ್ಗಾತ್, ಅಯಃಪಿಣ್ಡಾಷ್ಣ್ಯವತ್ ಚಿತ್ಸಂಪರ್ಕಾತ್ ಜ್ಞಾತೃತ್ವೋಪಲಬ್ಧಿಃ ಇತಿ ಚೇತ್, ನೈತತ್ । ಸಂವಿದಿ ವಸ್ತುತೋ ಜ್ಞಾತೃತ್ವಾನಭ್ಯುಪಗಮಾದೇವ ನ ತತ್ಸಂಪರ್ಕಾದಹಙ್ಕಾರೇ ಜ್ಞಾತೃತ್ವಮ್, ತದುಪಲಬ್ಧಿರ್ವಾ । ಅಹಙ್ಕಾರಸ್ಯ ತ್ವಚೇತನಸ್ಯ ಜ್ಞಾತೃತ್ವಾ-ಸಂಭವಾದೇವ ಸುತರಾಂ ನ ತತ್ಸಂಪರ್ಕಾತ್ ಸಂವಿದಿ ಜ್ಞಾತೃತ್ವಂ ತದುಪಲಬ್ಧಿರ್ವಾ॥

(ಅರ್ಥ)

ಅಹಂಕಾರವು ಜಡರೂಪವಾಗಿದ್ದರೂ ಚಿತ್ತಿನ ಸಂನಿಧಾನದಿಂದ ಅದರ ಛಾಯಾಪತ್ತಿಯಿಂದ ಆ (ಜ್ಞಾತೃತ್ವವು) ಆಗಬಹುದಾಗಿದೆಯಲ್ಲ !– ಎಂದರೆ, ಈ ಚಿಚ್ಛಾಯಾಪತ್ತಿ ಎಂಬುದು ಯಾವದು ? ಸಂವಿತ್ತಿಗೆ ಅಹಂಕಾರದ ಛಾಯಾ ಪತ್ತಿಯೊ, ಅಥವಾ ಅಹಂಕಾರಕ್ಕೆ ಸಂವಿಚ್ಛಾಯಾಪತ್ತಿಯೊ ? ಮೊದಲನೆಯದಾಗಿ ಸಂವಿತ್ತಿಗೆ (ಅಹಂಕಾರಚ್ಛಾಯಾಪತ್ತಿ)ಯಲ್ಲ ; ಏಕೆಂದರೆ ಸಂವಿತ್ತು ಜ್ಞಾತೃವೆಂಬುದನ್ನು (ನೀನು) ಒಪ್ಪಿಲ್ಲ. ಅಹಂಕಾರಕ್ಕೆ (ಸಂವಿಚ್ಛಾಯಾಪತ್ತಿಯೂ) ಅಲ್ಲ ; ಏಕೆಂದರೆ ಹಿಂದೆ ಹೇಳಿರುವಂತೆ ಜಡವಾಗಿರುವ ಅದಕ್ಕೆ ಜ್ಞಾತೃತ್ವವು ಹೊಂದುವದಿಲ್ಲ. (ಈ) ಎರಡೂ ಚಾಕ್ಷುಷವಲ್ಲದ್ದರಿಂದಲೂ (ಇವಕ್ಕೆ ಛಾಯಾಪತ್ತಿಯಿಲ್ಲ) ; ಏಕೆಂದರೆ ಚಕ್ಷುರಿಂದ್ರಿಯಗೋಚರವಲ್ಲದ (ಪದಾರ್ಥ)ಗಳಿಗೆ ಛಾಯೆಯಿರುವದು ಕಂಡಿಲ್ಲವಷ್ಟೆ ?

ಇನ್ನು (ಹೀಗಲ್ಲದೆ) ಬೆಂಕಿಯ ಸಂಪರ್ಕದಿಂದ ಕಬ್ಬಿಣದ ಗಟ್ಟಿಗೆ ಬಿಸಿ (ಬಂದಂತೆ) ಚಿತ್ಸಂಪರ್ಕದಿಂದ ಜ್ಞಾತೃತ್ವವು ತೋರುತ್ತದೆ ಎನ್ನುವೆಯಾದರೆ, ಇದು (ಸರಿ)ಯಲ್ಲ ; ಏಕೆಂದರೆ ಸಂವಿತ್ತಿನಲ್ಲಿ ವಸ್ತುಕೃತವಾದ ಜ್ಞಾತೃತ್ವವನ್ನು (ನೀನು) ಒಪ್ಪಿಲ್ಲವಾದ್ದರಿಂದಲೇ ಅದರ ಸಂಪರ್ಕದಿಂದ ಅಹಂಕಾರದಲ್ಲಿ ಜ್ಞಾತೃತ್ವವಾಗಲಿ, ಅದರ ತೋರಿಕೆಯಾಗಲಿ ಆಗುವಂತಿಲ್ಲ ; ಅಹಂಕಾರಕ್ಕೂ, (ಅದು) ಅಚೇತನವಾಗಿರುವದರಿಂದ ಜ್ಞಾತೃತ್ವವು ಸಂಭವಿಸುವದೇ ಇಲ್ಲವಾಗಿ ಅದರ ಸಂಪರ್ಕದಿಂದ ಸಂವಿತ್ತಿನಲ್ಲಿ ಜ್ಞಾತೃತ್ವವಾಗಲಿ ಅದರ ತೋರಿಕೆಯಾಗಲಿ ಆಗುವಂತೆಯೇ ಇಲ್ಲ.

## (೨೨) ಅಹಂಕಾರವು ಅನುಭೂತಿಯ ಅಭಿವ್ಯಂಜಕ ಎಂಬುದು ಸರಿಯಲ್ಲ

(ಮೂಲ)

ಯದಪ್ಯುಕ್ತಮ್ – ಉಭಯತ್ರ ನ ವಸ್ತುತೋ ಜ್ಞಾತೃತ್ವಮಸ್ತಿ ; ಅಹಙ್ಕಾರಸ್ತು ಅನುಭೂತೇರಭಿವ್ಯಞ್ಜಕಃ ಸ್ವಾತ್ಮಸ್ಥಾಂ ಏವಾನುಭೂತಿಮ್

ಅಭಿವ್ಯನಕ್ತಿ, ಆದರ್ಶಾದಿವತ್ ಇತಿ, ತದಯುಕ್ತಮ್ ಆತ್ಮನಃ ಸ್ವಯಂಜ್ಯೋತಿಷೋ ಜಡಸ್ವರೂಪಾಹಙ್ಕಾರಾಭಿವ್ಯಙ್ಗ್ಯತ್ವಾಯೋಗಾತ್ । ತದುಕ್ತಮ್ 'ಶಾನ್ತಾಙ್ಗಾರ ಇವಾಽಽದಿತ್ಯಮಹಙ್ಕಾರೋ ಜಡಾತ್ಮಕಃ । ಸ್ವಯಞ್ಜ್ಯೋತಿಷಮಾತ್ಮಾನಂ ವ್ಯನಕ್ತೀತಿ ನ ಯುಕ್ತಿಮತ್' (ಆ. ಸಿ. ಪಾ. ೨೭) ಇತಿ । ಸ್ವಯಂಪ್ರಕಾಶಾನುಭವಾಧೀನಸಿದ್ಧಯೋ ಹಿ ಸರ್ವೇ ಪದಾರ್ಥಾಃ । ತತ್ರ ತದಾಯತ್ತಪ್ರಕಾಶೋಽಚಿದಹಙ್ಕಾರೋಽನುದಿತಾನಸ್ತಮಿತಸ್ವರೂಪಪ್ರಕಾಶಮಶೇಷಾರ್ಥಸಿದ್ಧಿಹೇತುಭೂತಮ್ ಅನುಭವಮ್ ಅಭಿವ್ಯನಕ್ತೀತ್ಯಾತ್ಮವಿದಃ ಪರಿಹಸನ್ತಿ । ಕಿಂ ಚ, ಅಹಙ್ಕಾರಾನುಭವಯೋಃ ಸ್ವಭಾವವಿರೋಧಾತ್ ಅನುಭೂತೇರನನುಭೂತಿತ್ವಪ್ರಸಙ್ಗಾಚ್ಚ ನ ವ್ಯಙ್ಕ್ಯವ್ಯಙ್ಗ್ಯಭಾವಃ । ಯಥೋಕ್ತಮ್ 'ವ್ಯಙ್ಕ್ಯವ್ಯಙ್ಗ್ಯತ್ವಮನ್ಯೋನ್ಯಂ ನ ಚ ಸ್ಯಾತ್ ಪ್ರಾತಿಕೂಲ್ಯತಃ । ವ್ಯಙ್ಗ್ಯತ್ವೇಽನನುಭೂತಿತ್ವಮಾತ್ಮನಿ ಸ್ಯಾದ್ಯಥಾ ಘಟೇ'[1] (ಆ. ಸಿ. ಪಾ. ೨೭) ಇತಿ । ನ ಚ ರವಿಕರನಿಕರಾಣಾಂ ಸ್ವಾಭಿವ್ಯಙ್ಗ್ಯಕರತಲಾಭಿವ್ಯಙ್ಗ್ಯತ್ವವತ್, ಸಂವಿದಭಿವ್ಯಙ್ಗ್ಯಾಹಙ್ಕಾರಾಭಿವ್ಯಙ್ಗ್ಯತ್ವಂ ಸಂವಿದಃ ಸಾಧೀಯಃ, ತತ್ರಾಪಿ ರವಿಕರನಿಕರಾಣಾಂ ಕರತಲಾಭಿವ್ಯಙ್ಗ್ಯತ್ವಾಭಾವಾತ್ ; ಕರತಲಪ್ರತಿಹತಗತಯೋ ಹಿ ರಶ್ಮಯೋ ಬಹುಲಾಃ ಸ್ವಯಮೇವ ಸ್ಫುಟತರಮುಪಲಭ್ಯನ್ತ ಇತಿ ತದ್ಬಾಹುಲ್ಯಮಾತ್ರಹೇತುತ್ವಾತ್ ಕರತಲಸ್ಯ ನಾಭಿವ್ಯಞ್ಜಕತ್ವಮ್ ॥

(ಅರ್ಥ)

ಇನ್ನು – ಎರಡಕ್ಕೂ ನಿಜವಾಗಿ ಜ್ಞಾತೃತ್ವವಿಲ್ಲ[2] – ಅಹಂಕಾರವಾದರೊ, ಅನುಭೂತಿಯ ಅಭಿವ್ಯಂಜಕವಾಗಿರುವದರಿಂದ ತನ್ನಲ್ಲಿರುವ ಅನುಭೂತಿಯನ್ನೇ ಅಭಿವ್ಯಕ್ತಿಗೊಳಿಸುತ್ತದೆ ; ಕನ್ನಡಿಯೇ ಮುಂತಾದದ್ದರಂತೆ (ಇದನ್ನು ಅರಿಯಬೇಕು)– ಎಂದೆಯಲ್ಲ, ಅದೂ ಯುಕ್ತವಲ್ಲ. ಏಕೆಂದರೆ ಸ್ವಯಂಜ್ಯೋತಿಯಾದ ಆತ್ಮನನ್ನು ಜಡಸ್ವರೂಪವಾದ ಅಹಂಕಾರವು ಅಭಿವ್ಯಕ್ತಿಗೊಳಿಸುವದೆಂಬುದು ಯುಕ್ತವಾಗುವದಿಲ್ಲ. ಇದನ್ನು–

> **'ಆರಿಹೋದ ಕೆಂಡವು ಸೂರ್ಯನನ್ನು ಹೇಗೆ (ಅಭಿವ್ಯಕ್ತಿಗೊಳಿಸಲಾರದೋ ಹಾಗೆ) ಜಡಾತ್ಮಕವಾದ ಅಹಂಕಾರವು ಸ್ವಯಂಜ್ಯೋತಿಯಾದ ಆತ್ಮನನ್ನು ವ್ಯಕ್ತಗೊಳಿಸುತ್ತದೆ ಎಂಬುದು ಯುಕ್ತಿಯುಕ್ತವಲ್ಲ' (ಆ. ಸಿ. ಪು. ೨೭).**

ಎಂದು (ಯಾಮುನಾಚಾರ್ಯರು ಆತ್ಮಸಿದ್ಧಿಯಲ್ಲಿ) ಹೇಳಿರುತ್ತಾರೆ: ಸ್ವಯಂಪ್ರಕಾಶವಾಗಿರುವ ಅನುಭವಕ್ಕೆ ಅಧೀನವಾಗಿಯೇ ಅಲ್ಲವೆ, ಎಲ್ಲಾ ಪದಾರ್ಥಗಳೂ ಸಿದ್ಧ

---

1. 'ಘಟೇ' ಎಂಬ ಮ॥ ಪಾಠವು ಬರೆದವರ ಕೈತಪ್ಪಿನಿಂದಾದದ್ದು.
2. ಅಧ್ಯಾಸದಿಂದ ಜ್ಞಾತೃತ್ವವು ಕಾಣಿಸುತ್ತದೆ –ಎಂದು ಪೂರ್ವಪಕ್ಷಿಯ ಭಾವ.

ವಾಗುತ್ತವೆ? ಹೀಗಿರುವಲ್ಲಿ ಅದಕ್ಕೆ ಅಧೀನವಾಗಿ ಬೆಳಗುವ ಅಚಿತ್ತಾದ ಅಹಂಕಾರವು ಉದಯಾಸ್ತಮಯಗಳಿಲ್ಲದ ಪ್ರಕಾಶಸ್ವರೂಪದ, ಎಲ್ಲಾ ಪದಾರ್ಥಗಳ ಸಿದ್ಧಿಗೂ ಹೇತುವಾಗಿರುವ ಅನುಭವವನ್ನು ಅಭಿವ್ಯಕ್ತಿಗೊಳಿಸುತ್ತದೆ ಎಂಬುದನ್ನು ಕೇಳಿ ಆತ್ಮಜ್ಞಾನಿಗಳು ನಗುತ್ತಾರೆ.

ಇದಲ್ಲದೆ ಅಹಂಕಾರ, ಅನುಭವ- ಇವುಗಳೆರಡಕ್ಕೂ ಸ್ವಭಾವವಿರೋಧವಿರುವದರಿಂದಲೂ ಅನುಭೂತಿಯು ಅನುಭೂತಿಯಾಗದೆಹೋಗಬೇಕಾಗುವದಾದ್ದರಿಂದಲೂ ವ್ಯಂಗ್ಯವ್ಯಂಜಕಭಾವವಿಲ್ಲ. ಹಾಗೆಂದು (ಆತ್ಮಸಿದ್ಧಿಯಲ್ಲಿ) ಹೇಳಿದೆ.

**'ವಿರುದ್ಧವಾಗಿರುವದರಿಂದ ವ್ಯಕ್ತಿಗೊಳಿಸುವದು, ವ್ಯಕ್ತಿಗೊಳಿಸಲ್ಪಡುವದು- ಎಂಬ ಸಂಬಂಧವೂ ಆಗುವಂತಿಲ್ಲ. (ಅನನುಭೂತಿಯು) ವ್ಯಂಗ್ಯ ಎಂದಾದರೆ ಗಡಿಗೆಯಲ್ಲಿ ಹೇಗೋ ಹಾಗೆ ಅನನುಭೂತಿತ್ವವು ಉಂಟಾಗುವದು' (ಆ. ಸಿ. ಪು. ೨೭).**

ಸೂರ್ಯಕಿರಣಗಳ ಸಮೂಹಗಳು ತಮ್ಮಿಂದ ವ್ಯಕ್ತವಾಗುವ ಅಂಗೈಗೆ ಅಭಿವ್ಯಂಗ್ಯವಾಗುವಂತೆ ಸಂವಿದಭಿವ್ಯಂಗ್ಯವಾದ ಅಹಂಕಾರದಿಂದ ಸಂವಿತ್ತು ಅಭಿವ್ಯಂಗ್ಯವಾಗಬಹುದಾಗಿದೆ ಎಂದು ಹೇಳುವದೂ ಸರಿಯಲ್ಲ. ಏಕೆಂದರೆ ಅಲ್ಲಿಯೂ ಸೂರ್ಯಕಿರಣಸಮೂಹಗಳು ಅಂಗೈನಿಂದ ಅಭಿವ್ಯಕ್ತವಾಗುವದೇಇಲ್ಲ. ಏಕೆಂದರೆ ಅಂಗೈಯು (ತಮ್ಮ) ಗತಿಗೆ ಅಡ್ಡವಾಗಲು ಕಿರಣಗಳು ಬಹಳವಾಗಿವೆಯಾಗಿ ತಾವೇ ಸ್ಫುಟತರವಾಗಿ ತೋರಿಬರುತ್ತವೆ. ಆದ್ದರಿಂದ ಅವುಗಳ ಬಾಹುಲ್ಯವೆಂಬ ಹೇತುವಿನಿಂದ (ಅವು ಕಾಣುತ್ತವೆಯೇ ಹೊರತು) ಅಂಗೈಯೇನೂ (ಅವಕ್ಕೆ) ಅಭಿವ್ಯಂಜಕವಾಗಿರುವದಿಲ್ಲ.

(ಮೂಲ)

ಕಿಂ ಚ, ಅಸ್ಯ ಸಂವಿತ್ಸ್ವರೂಪಸ್ಯಾಽಽತ್ಮನಃ ಅಹಂಕಾರನಿರ್ವರ್ತ್ಯಾ ಅಭಿವ್ಯಕ್ತಿಃ ಕಿಂರೂಪಾ? ನ ತಾವದುತ್ಪತ್ತಿಃ, ಸ್ವತಃಸಿದ್ಧತಯಾ ಅನನ್ಯೋತ್ಪಾದ್ಯತ್ವಾಭ್ಯುಪಗಮಾತ್; ನಾಪಿ ತತ್ಪ್ರಕಾಶನಮ್, ತಸ್ಯಾ ಅನುಭವಾನ್ತರಾನನುಭಾವ್ಯತ್ವಾತ್ । ತತ ಏವ ಚ ನ ತದನುಭವಸಾಧನಾನುಗ್ರಹಃ । ಸ ಹಿ ದ್ವಿಧಾ । ಜ್ಞೇಯಸ್ಯ ಇನ್ದ್ರಿಯಸಂಬನ್ಧಹೇತುತ್ವೇನ ವಾ, ಯಥಾ ಜಾತಿನಿಜಮುಖಾದಿಗ್ರಹಣೇ ವ್ಯಕ್ತಿದರ್ಪಣಾದೀನಾಂ ನಯನಾದೀನ್ದ್ರಿಯಸಂಬನ್ಧಹೇತುತ್ವೇನ; ಬೋದ್ಧೃಗತಕಲ್ಮಷಾಪನಯನೇನ ವಾ, ಯಥಾ ಪರತತ್ತ್ವಾವಬೋಧನಸಾಧನಸ್ಯ ಶಾಸ್ತ್ರಸ್ಯ ಶಮದಮಾದಿನಾ । ಯಥೋಕ್ತಮ್ 'ಕರಣಾನಾಮಭೂಮಿತ್ವಾನ್ನ ತತ್ಸಂಬನ್ಧಹೇತುತಾ' (ಆ. ಸಿ. ಪಾ. ೨೮) ಇತಿ ॥

(ಅರ್ಥ)

ಇದಲ್ಲದೆ, ಈ ಸಂವಿತ್ಸ್ವರೂಪನಾದ ಆತ್ಮನಿಗೆ ಅಹಂಕಾರದಿಂದ ಆಗಬೇಕಾಗಿರುವ ಅಭಿವ್ಯಕ್ತಿಯು ಎಂಥದ್ದು ? ಮೊದಲನೆಯದಾಗಿ ಅದು ಉತ್ಪತ್ತಿಯಲ್ಲ ; ಏಕೆಂದರೆ (ಅದು) 'ಸ್ವತಃಸಿದ್ಧವಾಗಿರುವದರಿಂದ ಮತ್ತೊಂದರಿಂದ ಹುಟ್ಟುವದಲ್ಲ' ಎಂದು ಒಪ್ಪಿರುತ್ತೀಯೆ. ಅದನ್ನು ಬೆಳಗುವದೂ ಅಲ್ಲ ; ಏಕೆಂದರೆ ಅದು ಮತ್ತೊಂದು ಅನುಭವದಿಂದ ಅನುಭವಿಸಲ್ಪಡತಕ್ಕದ್ದಲ್ಲ. ಆದ್ದರಿಂದಲೇ ಅದನ್ನು ಅನುಭವಿಸುವ ಸಾಧನವನ್ನು ಅನುಗ್ರಹಿಸುವದೆಂದು ಹೇಳುವದಕ್ಕೂ ಆಗುವಂತಿಲ್ಲ ; ಏಕೆಂದರೆ ಆ (ಅನುಗ್ರಹಿಸುವದು) ಎರಡು ಪ್ರಕಾರದಿಂದಾಗಬಹುದಾಗಿದೆ : (ಹೇಗೆಂದರೆ), ಜ್ಞೇಯಕ್ಕೆ ಇಂದ್ರಿಯಸಂಬಂಧವಾಗುವದಕ್ಕೆ ಹೇತುವಾಗುವದರಿಂದ, (ಆಗುವದೊಂದು); ಉದಾಹರಣೆಗೆ ಜಾತಿ, ತನ್ನ ಮುಖ– ಇವೇ ಮುಂತಾದವನ್ನು ಗ್ರಹಿಸುವದಕ್ಕೆ ವ್ಯಕ್ತಿ, ಕನ್ನಡಿ– ಮುಂತಾದವುಗಳಿಗೆ ಕಣ್ಣೇ ಮುಂತಾದ ಇಂದ್ರಿಯಸಂಬಂಧವನ್ನುಂಟುಮಾಡುವದಕ್ಕೆ ಹೇತುವಾಗಿರುವಿಕೆ, ಅಥವಾ ಅರಿಯುವ (ಸಾಧನ)ದಲ್ಲಿರುವ ಕಲ್ಮಷವನ್ನು ಹೋಗಲಾಡಿಸುವದು (ಇನ್ನೊಂದು). ಉದಾಹರಣೆಗೆ: ಪರತತ್ತ್ವವನ್ನು ತಿಳಿಸುವದಕ್ಕೆ ಸಾಧನವಾಗಿರುವ ಶಾಸ್ತ್ರದ (ಗ್ರಹಣವನ್ನು) ಶಮದಮಾದಿಗಳಿಂದ ಸರಿಪಡಿಸಿಕೊಳ್ಳುವದರಿಂದ (ಸಾಧನ ಸಂಬಂಧವನ್ನುಂಟುಮಾಡಿಕೊಡಬಹುದು). ಈ ಎರಡು ಬಗೆಯಿಂದಲೂ ಇಲ್ಲಿ ಅಭಿವ್ಯಕ್ತಿಯಾಗುವದೆನ್ನುವದಕ್ಕಾಗುವದಿಲ್ಲ – ಹೀಗೆಂದು **(ಆತ್ಮಸಿದ್ಧಿಯಲ್ಲಿ)** ಹೇಳಿದೆ :–

'(ಅನುಭೂತಿಯು) ಕರಣಗಳಿಗೆ ವಿಷಯವಲ್ಲವಾದ್ದರಿಂದ ಅವುಗಳ ಸಂಬಂಧಕ್ಕೆ ಕಾರಣವಾಗುವದೂ (ಅಭಿವ್ಯಕ್ತಿಹೇತುವಲ್ಲ)' (ಆ. ಸಿ. ಪು. ೨೩).

(ಮೂಲ)

ಕಿಂ ಚ, ಅನುಭೂತೇರನುಭಾವ್ಯತ್ವಾಭ್ಯುಪಗಮೇಽಪಿ ಅಹಮರ್ಥೇನ ನ ತದನುಭವಸಾಧನಾನುಗ್ರಹಃ ಸುವಚಃ । ಸ ಹಿ ಅನುಭಾವ್ಯಾನುಭವೋತ್ಪತ್ತಿ ಪ್ರತಿಬನ್ಧಕನಿರಸನೇನ ಭವೇತ್ । ಯಥಾ ರೂಪಾದಿಗ್ರಹಣೋತ್ಪತ್ತಿನಿರೋಧಿ ಸಂತಮಸನಿರಸನೇನ ಚಕ್ಷುಷೋ ದೀಪಾದಿನಾ । ನ ಚೇಹ ತಥಾವಿಧಂ ನಿರಸನೀಯಂ ಸಂಭಾವ್ಯತೇ । ನ ತಾವತ್ ಸಂವಿದಾತ್ಮಗತಂ ತಜ್ಜ್ಞಾನೋತ್ಪತ್ತಿ ನಿರೋಧಿ ಕಿಞ್ಚಿದಸ್ಯಹಙ್ಕಾರಾಪನೇಯಮ್ ಅಸ್ತಿ । ಅಸ್ತಿ ಹ್ಯಜ್ಞಾನಮ್ ಇತಿ ಚೇತ್; ನ, ಅಜ್ಞಾನಸ್ಯಾಹಙ್ಕಾರಾಪನೋದ್ಯತ್ವಾನಭ್ಯುಪಗಮಾತ್। ಜ್ಞಾನಮೇವ ಹಿ ಅಜ್ಞಾನಸ್ಯ ನಿವರ್ತಕಮ್ । ನ ಚ ಸಂವಿದಾಶ್ರಯತ್ವಮ್ ಅಜ್ಞಾನಸ್ಯ ಸಂಭವತಿ ; ಜ್ಞಾನಸಮಾನಾಶ್ರಯತ್ವಾತ್ ತತ್ಸಮಾನವಿಷಯತ್ವಾಚ್ಚ ಜ್ಞಾತೃಭಾವವಿಷಯಭಾವವಿರಹಿತೇ ಜ್ಞಾನಮಾತ್ರೇ ಸಾಕ್ಷಿಣಿ ನಾಜ್ಞಾನಂ ಭವಿತು

ಮರ್ಹತಿ | ಯಥಾ ಜ್ಞಾನಾಶ್ರಯತ್ವಪ್ರಸಕ್ತಿಶೂನ್ಯತ್ವೇನ ಘಟಾದೇರ್ನಾಜ್ಞಾನಾಶ್ರಯತ್ವಮ್, ತಥಾ ಜ್ಞಾನಮಾತ್ರೇಽಪಿ ಜ್ಞಾನಾಶ್ರಯತ್ವಾಭಾವೇನ ನಾಜ್ಞಾನಾಶ್ರಯತ್ವಂ ಸ್ಯಾತ್ | ಸಂವಿದೋಽಜ್ಞಾನಾಶ್ರಯತ್ವಾಭ್ಯುಪಗಮೇಽಪಿ ಆತ್ಮತಯಾಽಭ್ಯುಪಗತಾಯಾಃ ತಸ್ಯಾ ಜ್ಞಾನವಿಷಯತ್ವಾಭಾವೇನ ಜ್ಞಾನೇನ ನ ತದ್ಗತಾಜ್ಞಾನನಿವೃತ್ತಿಃ| ಜ್ಞಾನಂ ಹಿ ಸ್ವವಿಷಯ ಏವಾಜ್ಞಾನಂ ನಿವರ್ತಯತಿ | ಯಥಾ ರಜ್ಜ್ವಾದೌ | ಅತೋ ನ ಕೇನಾಪಿ ಕದಾಚಿತ್ ಸಂವಿದಾಶ್ರಯಮ್ ಅಜ್ಞಾನಮ್ ಉಚ್ಛಿದ್ಯೇತ | ಅಸ್ಯ ಚ ಸದಸದನಿರ್ವಚನೀಯಸ್ಯಾಜ್ಞಾನಸ್ಯ ಸ್ವರೂಪಮೇವ ದುರ್ನಿರೂಪಮ್ ಇತ್ಯುಪರಿಷ್ಟಾದ್ ವಕ್ಷ್ಯತೇ | ಜ್ಞಾನಪ್ರಾಗಭಾವರೂಪಸ್ಯ ಚಾಜ್ಞಾನಸ್ಯ ಜ್ಞಾನೋತ್ಪತ್ತಿವಿರೋಧಿತ್ವಾಭಾವೇನ ನ ತನ್ನಿರಸನೇನ ತಜ್ಜ್ಞಾನಸಾಧನಾನುಗ್ರಹಃ | ಅತೋ ನ ಕೇನಾಪಿ ಪ್ರಕಾರೇಣಾಹಙ್ಕಾರೇಣಾನುಭೂತೇರಭಿವ್ಯಕ್ತಿಃ ||

(ಅರ್ಥ)

ಅನುಭೂತಿಯು ಅನುಭಾವ್ಯವೆಂದು ಒಪ್ಪಿದರೂ[1] ಅಹಮರ್ಥವಾದ ಅಹಂಕಾರವು ಅದನ್ನು ಅನುಭವಿಸುವ ಸಾಧನವನ್ನು ಅನುಗ್ರಹಿಸುವದೆಂದು ಹೇಳುವದು ಸರಿಯಾಗುವಂತಿಲ್ಲ. ಏಕೆಂದರೆ ಆ (ಅನುಭವಸಾಧನಾನುಗ್ರಹವೆಂಬುದು) ಅನುಭಾವ್ಯದ ಅನುಭವದ ಉತ್ಪತ್ತಿಗೆ (ಇರುವ) ಅಡ್ಡಿಯನ್ನು ತೆಗೆದುಹಾಕುವದರಿಂದಲೇ ಆಗಬೇಕು; ಉದಾಹರಣೆಗೆ ರೂಪಾದಿಗಳ ಗ್ರಹಣವು ಹುಟ್ಟುವದಕ್ಕೆ ಅಡ್ಡಿಯಾಗಿರುವ ಕಗ್ಗತ್ತಲೆಯನ್ನು ತೊಲಗಿಸುವದರಿಂದ ಚಕ್ಷುರಿಂದ್ರಿಯಕ್ಕೆ ದೀಪವೇ ಮುಂತಾದದ್ದು (ಅನುಗ್ರಹವನ್ನು ಮಾಡುತ್ತದೆಯಲ್ಲ, ಹಾಗೆ). ಆದರೆ ಇಲ್ಲಿ ತೊಲಗಿಸಬೇಕಾದ (ಅಡ್ಡಿಯು) ಯಾವದೂ ಇರುವದಿಲ್ಲ. ಮೊದಲನೆಯದಾಗಿ ಸಂವಿದ್ರೂಪನಾದ ಆತ್ಮನಲ್ಲಿ ಅವನ ವಿಷಯದ ಜ್ಞಾನೋತ್ಪತ್ತಿಗೆ ಅಡ್ಡಲಾಗಿರುವ ಯಾವದೊಂದನ್ನೂ ಅಹಂಕಾರವು ತೆಗೆದುಹಾಕಬೇಕಾದದ್ದು ಇರುವದಿಲ್ಲ.

(ಶಂಕೆ) :– ಅಜ್ಞಾನವಿದೆಯಲ್ಲ !

(ಪರಿಹಾರ) :– ಹಾಗಲ್ಲ, ಏಕೆಂದರೆ ಅಜ್ಞಾನವು ಅಹಂಕಾರದಿಂದ ಹೋಗತಕ್ಕದ್ದೆಂದು ನೀನು ಒಪ್ಪಿರುವದಿಲ್ಲ. ಜ್ಞಾನವೇ ಅಲ್ಲವೆ, ಅಜ್ಞಾನವನ್ನು ತೊಲಗಿಸುವದು ? ಅಜ್ಞಾನವು ಸಂವಿತ್ತನ್ನು ಆಶ್ರಯಿಸಿರುತ್ತದೆ ಎಂಬುದು ಸಂಭವಿಸುವದೂ ಇಲ್ಲ. (ಏಕೆಂದರೆ ಅಜ್ಞಾನವು) ಜ್ಞಾನವಿರುವ ಆಶ್ರಯದಲ್ಲಿಯೇ ಇರುವದರಿಂದಲೂ ಜ್ಞಾನದ ವಿಷಯವನ್ನೇ ವಿಷಯೀಕರಿಸುವದರಿಂದಲೂ ಜ್ಞಾತೃಭಾವವಾಗಲಿ ವಿಷಯತ್ವವಾಗಲಿ ಇಲ್ಲದ ಬರಿಯ ಜ್ಞಾನರೂಪವಾದ ಸಾಕ್ಷಿಯಲ್ಲಿ

1. ಹೀಗೆಂದು ಪೂರ್ವಪಕ್ಷಿಯು ಒಪ್ಪಿಲ್ಲವೆಂಬುದನ್ನು ಇಟ್ಟುಕೊಂಡೇ ಈವರೆಗೆ ಖಂಡನೆಯನ್ನು ಹೇಳಲಾಗಿತ್ತು.

ಅಜ್ಞಾನವು ಇರಲಾರದು. ಜ್ಞಾನಕ್ಕೆ ಆಶ್ರಯವಾಗಿರುವ ಪ್ರಸಕ್ತಿಯೇ ಇಲ್ಲದ ಘಟವೇ ಮುಂತಾದದ್ದಕ್ಕೆ ಹೇಗೆ ಜ್ಞಾನಾಶ್ರಯತ್ವವು (ಸಂಭವಿಸುವದಿಲ್ಲವೋ) ಹಾಗೆಯೇ ಬರಿಯ ಜ್ಞಾನರೂಪನಾಗಿರುವ (ಆತ್ಮನಲ್ಲಿ)ಯೂ ಜ್ಞಾನಾಶ್ರಯತ್ವ ವಿಲ್ಲದ್ದರಿಂದ ಅಜ್ಞಾನಾಶ್ರಯತ್ವವೂ ಇರಲಾರದು.

ಸಂವಿತ್ತು ಅಜ್ಞಾನಕ್ಕೆ ಆಶ್ರಯವೆಂದು ಒಪ್ಪಿದರೂ ಅದು ಆತ್ಮನೇ ಎಂದು (ನೀನು) ಒಪ್ಪಿರುವದರಿಂದ ಅದರಲ್ಲಿ ಜ್ಞಾನವಿಷಯತ್ವವು ಇಲ್ಲದಿರುವದರಿಂದ ಜ್ಞಾನದಿಂದ ಅದರಲ್ಲಿರುವ ಅಜ್ಞಾನವು ತೊಲಗುವದೆಂಬುದು ಆಗಲಾರದು. ಜ್ಞಾನವು ತನಗೆ ವಿಷಯವಾಗಿರುವ (ಪದಾರ್ಥದಲ್ಲಿರುವ) ಅಜ್ಞಾನವನ್ನೇ– ಉದಾಹರಣೆಗೆ ಹಗ್ಗವೇ ಮುಂತಾದದ್ದರಲ್ಲಿರುವ (ಅಜ್ಞಾನವನ್ನೇ)– ತೊಲಗಿಸು ತ್ತದೆ. ಆದ್ದರಿಂದ ಸಂವಿತ್ತನ್ನಾಶ್ರಯಿಸಿರುವ ಅಜ್ಞಾನವನ್ನು ಏತರಿಂದಲೂ ಎಂದಿಗೂ ನಾಶಗೊಳಿಸಲಾಗಲಾರದು. ಈ **ಸದಸದನಿರ್ವಚನೀಯ**[1](ರೂಪ) ವಾಗಿರುವ ಅಜ್ಞಾನದ ಸ್ವರೂಪವನ್ನೇ ಇಂಥದ್ದೆಂದು ಗೊತ್ತುಪಡಿಸುವದಾಗಲಾರ ದೆಂದು ಮುಂದೆ[2] ಹೇಳಲಾಗುವದು. ಜ್ಞಾನಪ್ರಾಗಭಾವರೂಪವಾದ ಅಜ್ಞಾನವು ಜ್ಞಾನೋತ್ಪತ್ತಿಗೆ ವಿರೋಧಿಯಾಗಿರುವಂತಿಲ್ಲವಾಗಿ ಅದನ್ನು ತೊಲಗಿಸುವದರಿಂದ ಆ (ಅನುಭವದ) ಜ್ಞಾನಸಾಧನವನ್ನು ಅನುಗ್ರಹಿಸುವದು ಆಗಲಾರದು.

ಆದ್ದರಿಂದ ಯಾವ ಪ್ರಕಾರದಿಂದಲೂ ಅಹಂಕಾರದಿಂದ ಅನುಭೂತಿಯ ಅಭಿವ್ಯಕ್ತಿಯು ಆಗುವಂತಿಲ್ಲ.[3]

(ಮೂಲ)

ನ ಚ ಸ್ವಾಶ್ರಯತಯಾ ಅಭಿವ್ಯಜ್ಯಾಭಿವ್ಯಞ್ಜನವತ್ ಅಭಿವ್ಯಞ್ಜಕಾನಾಂ ಸ್ವಭಾವಃ । ಪ್ರದೀಪಾದಿಷು ಅದರ್ಶನಾತ್ । ಯಥಾವಸ್ಥಿತಪದಾರ್ಥಪ್ರತೀತ್ಯನು ಗುಣಸ್ವಾಭಾವ್ಯಾಚ್ಚ ಜ್ಞಾನತತ್ಸಾಧನಯೋಃ ಅನುಗ್ರಾಹಕಸ್ಯ ಚ । ತಚ್ಚ ಸ್ವತಃ ಪ್ರಾಮಾಣ್ಯನ್ಯಾಯಸಿದ್ಧಮ್ । ನ ಚ ದರ್ಪಣಾದಿರ್ಮುಖಾದೇರಭಿವ್ಯಞ್ಜಕಃ, ಅಪಿ ತು ಚಾಕ್ಷುಷತೇಜಃಪ್ರತಿಫಲನರೂಪದೋಷಹೇತುಃ । ತದ್ದೋಷಕೃತಶ್ಚ ತತ್ರಾನ್ಯಥಾವಭಾಸಃ । ಅಭಿವ್ಯಞ್ಜಕಸ್ತು ಆಲೋಕಾದಿರೇವ । ನ ಚೇಹ ತಥಾ ಅಹಙ್ಕಾರೇಣ ಸಂವಿದಿ ಸ್ವಪ್ರಕಾಶಾಯಾಂ ತಾದೃಶದೋಷಾಪಾದನಂ ಸಂಭವತಿ ।

---

1. ವ್ಯಾಖ್ಯಾನಪ್ರಸ್ಥಾನದಲ್ಲಿ ಅಜ್ಞಾನವೂ ಅಜ್ಞಾನದಿಂದ ತೋರುವ ಹುಸಿತೋರಿಕೆ ಯೂ ಸದಸದನಿರ್ವಚನೀಯ. ಪರಿಶಿಷ್ಟವನ್ನು ನೋಡಿ.

2. ಅನಿರ್ವಚನೀಯಾವಿದ್ಯಾವಾದದ ಖಂಡನೆಯ ಪ್ರಕರಣದಲ್ಲಿ ಇದೇ ಪೂರ್ವ ಪಕ್ಷದ ಖಂಡನೆಯಲ್ಲಿ.

3. ಉತ್ಪತ್ತಿ, ಬೆಳಗಿತೋರಿಸುವದು, ಅನುಭವಸಾಧನಾನುಗ್ರಹ– ಎಂಬ ಮೂರು ಪ್ರಕಾರಗಳಿಂದಲೂ.

ವ್ಯಕ್ತೇಸ್ತು ಜಾತಿರಾಕಾರ ಇತಿ ತದಾಶ್ರಯತಯಾ ಪ್ರತೀತಿಃ, ನ ತು ವ್ಯಕ್ತಿವ್ಯಙ್ಗ್ಯತ್ವಾತ್ । ಅತೋಽನ್ತಃಕರಣಭೂತಾಹಙ್ಕಾರಸ್ಥತಯಾ ಸಂವಿದುಪಲಬ್ಧೇರ್ವಸ್ತುತೋ ದೋಷತೋ ವಾ ನ ಕಿಞ್ಚಿದಿಹ ಕಾರಣಮ್ ಇತಿ ನಾಹಙ್ಕಾರಸ್ಯ ಜ್ಞಾತೃತ್ವಮ್, ತಥಾ ಉಪಲಬ್ಧಿರ್ವಾ । ತಸ್ಮಾತ್, ಸ್ವತ ಏವ ಜ್ಞಾತೃತಯಾ ಸಿಧ್ಯನ್ ಅಹಮರ್ಥ ಏವ ಪ್ರತ್ಯಗಾತ್ಮಾ। ನ ಜ್ಞಪ್ತಿಮಾತ್ರಮ್ । ಅಹಂಭಾವವಿಗಮೇ ತು ಜ್ಞಪ್ತೇರಪಿ ನ ಪ್ರತ್ಯಕ್ತ್ವಸಿದ್ಧಿರಿತ್ಯುಕ್ತಮ್ ॥

(ಅರ್ಥ)

ಅಭಿವ್ಯಂಜಕಗಳಿಗೆ ಅಭಿವ್ಯಂಗ್ಯಗಳನ್ನು ತಮ್ಮ ಆಶ್ರಯವೆಂತ ವ್ಯಕ್ತಗೊಳಿಸುವದೇನೂ ಸ್ವಭಾವವಲ್ಲ ; ಏಕೆಂದರೆ ಪ್ರದೀಪವೇ ಮುಂತಾದ (ಅಭಿವ್ಯಂಜಕಗಳಲ್ಲಿ) ಅದು ಕಂಡುಬರುವದಿಲ್ಲ. ಜ್ಞಾನ ಮತ್ತು ಅದರ ಸಾಧನ – ಇವಕ್ಕೂ ಅನುಗ್ರಾಹಕಕ್ಕೂ ವಸ್ತುವು ಇದ್ದದ್ದು ಇದ್ದಂತೆಯೇ ಪ್ರತೀತಿಯಾಗುವದಕ್ಕೆ ಅನುಗುಣವಾಗಿ ಇರುವದೇ ಸ್ವಭಾವವಾಗಿರುವದರಿಂದಲೂ (ಹೀಗೆ). ಇದು **ಸ್ವತಃಪ್ರಾಮಾಣ್ಯನ್ಯಾಯಸಿದ್ಧವಾಗಿರುತ್ತದೆ.**[1] ಕನ್ನಡಿಯೇ ಮುಂತಾದದ್ದು ಮುಖವೇ ಮುಂತಾದದ್ದರ ಅಭಿವ್ಯಂಜಕವೂ ಅಲ್ಲ, ಮತ್ತೇನೆಂದರೆ : ಚಾಕ್ಷುಷತೇಜಸ್ಸು ಮಾರುಹೊಳೆಯುವದೆಂಬ ದೋಷಕ್ಕೆ (ಹೇತು)ವದು. ಆ ದೋಷದಿಂದಲೇ[2] ಅಲ್ಲಿ ಮತ್ತೊಂದು ರೀತಿಯಲ್ಲಿ ತೋರುವದು. ಅಭಿವ್ಯಂಜಕವಾದರೊ, ಬೆಳಕು ಮುಂತಾದದ್ದೇ. ಆದರೆ ಇಲ್ಲಿ ಹಾಗೆ ಸ್ವಪ್ರಕಾಶವಾದ ಸಂವಿತ್ತಿನಲ್ಲಿ ಅರಿವು ದೋಷವನ್ನುಂಟುಮಾಡುತದು ಸಂಭವಿಸುವದಿಲ್ಲ. ವ್ಯಕ್ತಿಗಾದರೊ, ಜಾತಿಯು ಆಕಾರವಾಗಿರುವದರಿಂದ ಅದಕ್ಕೆ ಆಶ್ರಯವಾಗಿರುವಂತೆ ಪ್ರತೀತಿ(ಯಾಗುತ್ತದೆ)ಯೇ ಹೊರತು (ಜಾತಿಯು) ವ್ಯಕ್ತಿಗೆ ವ್ಯಂಗ್ಯವಾಗಿರುವದರಿಂದಲ್ಲ. ಆದ್ದರಿಂದ ಒಳಗಿನ ಕರಣವಾದ ಅಹಂಕಾರದಲ್ಲಿರುವಂತೆ ಸಂವಿತ್ತು ತೋರುವದಕ್ಕೆ ವಸ್ತುವಿನಿಂದಲೇ ಆಗಲಿ ದೋಷದಿಂದಲೇ ಆಗಲಿ ಇಲ್ಲಿ ಯಾವದೂ ಕಾರಣವಲ್ಲವಾದ್ದರಿಂದ ಅಹಂಕಾರಕ್ಕೆ ಜ್ಞಾತೃತ್ವವಾಗಲಿ ಹಾಗೆ (ಅದನ್ನು ಆಶ್ರಯಿಸಿಕೊಂಡು) ತೋರುವದಾಗಲಿ ಇರುವದಿಲ್ಲ. ಆದ್ದರಿಂದ **ತಾನೇ ಜ್ಞಾತೃವೆಂದು ಸಿದ್ಧವಾಗಿರುವ ಅಹಮರ್ಥವೇ ಪ್ರತ್ಯಗಾತ್ಮನು ; (ಅವನು) ಬರಿಯ ಜ್ಞಪ್ತಿಯಲ್ಲ.** ಅಹಂಭಾವವಿಲ್ಲದೆ ಹೋದರೂ ಜ್ಞಪ್ತಿಗೂ ಪ್ರತ್ಯಕ್ತ್ವವು ಸಿದ್ಧವಾಗಲಾರದು– ಎಂದು ಆಗಲೆ ಹೇಳಿರುತ್ತೇವೆ.

---

1. ಪ್ರಮಾಣಗಳು ಸ್ವತಃಪ್ರಮಾಣ, ಪರತಃ ಅಪ್ರಮಾಣ– ಎಂಬ ನ್ಯಾಯ.

2. ತೇಜಸ್ಸು ಹಿಂತಿರುಗುವದೆಂಬ ದೋಷದಿಂದಲೇ ಹೊರತು ಅಭಿವ್ಯಂಜಕಸ್ವಭಾವದಿಂದಲ್ಲ.

## (೨೩) ಸುಷುಪ್ತಿಯಲ್ಲಿಯೂ ಅಹಂಭಾವವು ಹೋಗುವದಿಲ್ಲ

(ಮೂಲ)

ತಮೋಗುಣಾಭಿಭವಾತ್ ಪರಾಗರ್ಥಾನುಭವಾಭಾವಾಚ್ಚ ಅಹಮರ್ಥಸ್ಯ ವಿವಿಕ್ತಸ್ಫುಟಪ್ರತಿಭಾಸಾಭಾವೇಽಪಿ ಆಪ್ರಬೋಧಾತ್ 'ಅಹಮ್' ಇತ್ಯೇಕಾಕಾರೇಣ ಆತ್ಮನಃ ಸ್ಫುರಣಾತ್ ಸುಷುಪ್ತಾವಪಿ ನಾಹಂಭಾವವಿಗಮಃ । ಭವದಭಿಮತಾಯಾ ಅನುಭೂತೇರಪಿ ತಥೈವ ಪ್ರಥಾ – ಇತಿ ವಕ್ತವ್ಯಮ್ । ನ ಹಿ ಸುಪ್ತೋತ್ಥಿತಃ ಕಶ್ಚಿತ್ 'ಅಹಂಭಾವವಿಯುಕ್ತಾರ್ಥಾನ್ತರಪ್ರತ್ಯನೀಕಾಕಾರಾ ಜ್ಞಪ್ತಿಃ ಅಹಮಜ್ಞಾನಸಾಕ್ಷಿತಯಾ ಅವತಿಷ್ಠತ[1] ಇತ್ಯೇವಂವಿಧಾಂ ಸ್ವಾಪಸಮಕಾಲಾಮ್ ಅನುಭೂತಿಂ ಪರಾಮೃಶತಿ । ಏವಂ ಹಿ ಸುಪ್ತೋತ್ಥಿತಸ್ಯ ಪರಾಮರ್ಶಃ – 'ಸುಖಮಹಮಸ್ವಾಪ್ಸಮ್' ಇತಿ । ಅನೇನ ಪ್ರತ್ಯವಮರ್ಶೇನ ತದಾನೀಮಪಿ ಅಹಮರ್ಥಸ್ಯೈವಾಽಽತ್ಮನಃ ಸುಖಿತ್ವಂ ಜ್ಞಾತೃತ್ವಂ ಚ ಜ್ಞಾಯತೇ । ನ ಚ ವಾಚ್ಯಮ್ 'ಯಥಾ ಇದಾನೀಂ ಸುಖಂ ಭವತಿ, ತಥಾ ತದಾನೀಮ್ ಅಸ್ವಾಪ್ಸಮ್' ಇತ್ಯೇಷಾ ಪ್ರತಿಪತ್ತಿಃ – ಇತಿ । ಅತದ್ರೂಪತ್ವಾತ್ ಪ್ರತಿಪತ್ತೇಃ । ನ ಚ ಅಹಮರ್ಥಸ್ಯಾಽಽತ್ಮನೋಽಸ್ಥಿರತ್ವೇನ ತದಾನೀಮ್ ಅಹಮರ್ಥಸ್ಯ ಸುಖಿತ್ವಾನುಸಂಧಾನಾನುಪಪತ್ತಿಃ, ಯತಃ ಸುಷುಪ್ತಿದಶಾಯಾಃ ಪ್ರಾಗನುಭೂತಂ ವಸ್ತು ಸುಪ್ತೋತ್ಥಿತೋ 'ಮಯಾ ಇದಂ ಕೃತಮ್', 'ಮಯಾ ಇದಮನುಭೂತಮ್', 'ಅಹಮೇತದವೋಚಮ್' ಇತಿ ಪರಾಮೃಶತಿ । 'ಏತಾವನ್ತಂ ಕಾಲಂ ನ ಕಿಞ್ಚಿದಹಮಜ್ಞಾಸಿಷಮ್' ಇತಿ ಚ ಪರಾಮೃಶತಿ – ಇತಿ ಚೇತ್, ತತಃ ಕಿಮ್ ? 'ನ ಕಿಞ್ಚಿತ್' ಇತಿ ಕೃತ್ಸ್ನಪ್ರತಿಷೇಧಃ – ಇತಿ ಚೇತ್ ; ನ, 'ನಾಹಮವೇದಿಷಮ್' ಇತಿ ವೇದಿತುರಹಮರ್ಥಸ್ಯೈವಾನುವೃತ್ತೇರ್ವೇದ್ಯವಿಷಯೋ ಹಿ ಸ ಪ್ರತಿಷೇಧಃ । 'ನ ಕಿಞ್ಚಿತ್' ಇತಿ ನಿಷೇಧಸ್ಯ ಕೃತ್ಸ್ನವಿಷಯತ್ವೇ ಭವದಭಿಮತಾ ಅನುಭೂತಿರಪಿ ಪ್ರತಿಷಿದ್ಧಾ ಸ್ಯಾತ್ । ಸುಷುಪ್ತಿಸಮಯೇ ತು ಅನುಸಂಧೀಯಮಾನಮ್ ಅಹಮರ್ಥಮಾತ್ಮಾನಂ ಜ್ಞಾತಾರಮ್ 'ಅಹಮ್' ಇತಿ ಪರಾಮೃಶ್ಯ 'ನ ಕಿಞ್ಚಿದವೇದಿಷಮ್' ಇತಿ ವೇದನೇ ತಸ್ಯ ಪ್ರತಿಷಿಧ್ಯಮಾನೇ, ತಸ್ಮಿನ್ ಕಾಲೇ ನಿಷಿಧ್ಯಮಾನಾಯಾಃ ವಿತ್ತೇಃ ಸಿದ್ಧಿಮ್ ಅನುವರ್ತಮಾನಸ್ಯ ಜ್ಞಾತುರಹಮರ್ಥಸ್ಯ ಚಾಸಿದ್ಧಿಮ್, ಅನೇನೈವ 'ನ ಕಿಞ್ಚಿದಹಮವೇದಿಷಮ್' ಇತಿ ಪರಾಮರ್ಶೇನ ಸಾಧಯನ್, ತಮಿಮಮರ್ಥಂ ದೇವಾನಾಮೇವ ಸಾಧಯತು ॥

(ಅರ್ಥ)

ತಮೋಗುಣದಿಂದ ತಿರಸ್ಕೃತವಾಗಿರುವದರಿಂದಲೂ ಹೊರಗಿನ ಅರ್ಥದ ಅನುಭವವಿಲ್ಲವಾದ್ದರಿಂದಲೂ ಅಹಮರ್ಥವು ಬಿಂಗಡವಾಗಿ ಸ್ಫುಟವಾಗಿ ತೋರದೆ

1. ಈ ಶಬ್ದವು ಏನೋ ತಪ್ಪಾಗಿ ಬಿದ್ದಿರಬೇಕು. 'ಅವತಿಷ್ಠತ' (ಮು॥), 'ಅವತಿಷ್ಠ' (ಮೈ॥), 'ಅವತಿಷ್ಠೇ' –ಎಂದು ಪಾಠಭೇದಗಳು ಇವೆ.

ಇದ್ದರೂ ಎಚ್ಚರವಾಗುವವರೆಗೂ 'ನಾನು' ಎಂದು ಒಂದೇ ಆಕಾರದಿಂದ ಆತ್ಮನು ತೋರುತ್ತಿರುವದರಿಂದ[1] ಸುಷುಪ್ತಿಯಲ್ಲಿಯೂ ಅಹಂಭಾವವು ಹೋಗಿರುವದಿಲ್ಲ ; ನಿಮಗೆ ಒಪ್ಪಾಗಿರುವ ಅನುಭೂತಿಗೂ ಹೀಗೆಯೇ ತೋರಿಕೆ ಎಂದು ಹೇಳಬೇಕು. ನಿದ್ರೆಯಿಂದೆದ್ದವನು ಅಹಂಭಾವವಿಯುಕ್ತವಾದ, ಮತ್ತೊಂದು ಅರ್ಥಕ್ಕೆ ಪ್ರತ್ಯನೀಕವಾದ, ಜ್ಞಪ್ತಿಯಾದ ನಾನು ಅಜ್ಞಾನಸಾಕ್ಷಿಯಾಗಿದ್ದೇನೆ ಎಂದೀ ಪ್ರಕಾರವಾದ ಸುಷುಪ್ತಿಸಮಕಾಲವಾದ ಅನುಭವವನ್ನು ಪರಾಮರ್ಶಿಸುವದಿಲ್ಲನಷ್ಟೆ[2] ? 'ನಾನು ಸುಖವಾಗಿ ನಿದ್ರಿಸಿದೆನು' ಎಂದಿಂತಲ್ಲವೆ, ನಿದ್ರೆಯಿಂದೆದ್ದವನ ಪರಾಮರ್ಶ ? ಈ ಪ್ರತ್ಯಮರ್ಶದಿಂದ ಆಗಲೂ ಅಹಮರ್ಥವಾಗಿದ್ದ ಆತ್ಮನಿಗೇ ಸುಖಿತ್ವವೂ ಜ್ಞಾತೃತ್ವವೂ ತಿಳಿದುಬರುತ್ತದೆ.

'ಈಗ ಸುಖವಾಗಿದೆಯಲ್ಲ, ಹಾಗೆಯೇ ಆಗಲೂ ನಿದ್ರಿಸಿದೆನು' ಎಂದು ಈ ಜ್ಞಾನವು (ಹೇಳುತ್ತದೆ) ಎಂದೂ ಹೇಳುವದಕ್ಕಾಗುವಂತಿಲ್ಲ. ಏಕೆಂದರೆ ಜ್ಞಾನವು ಆ ರೂಪದಲ್ಲಿಲ್ಲ. ಅಹಮರ್ಥವಾದ ಆತ್ಮನು ಅಸ್ಥಿರವಾಗಿರುವದರಿಂದ, ಆಗ ಅಹಮರ್ಥವಾದ (ಆತ್ಮನಿಗೆ) ಸುಖಿತ್ವವು ಇರುವದು ಹೊಂದುವದಿಲ್ಲ– ಎಂದೂ ಹೇಳುವದಕ್ಕಿಲ್ಲ. ಏಕೆಂದರೆ ಸುಷುಪ್ತ್ಯಾವಸ್ಥೆಗಿಂತ ಮೊದಲು ಅನುಭವಿಸಿದ ವಸ್ತುವನ್ನು ಸುಷುಪ್ತಿಯಿಂದ ಎದ್ದವನು 'ನಾನು ಇದನ್ನು ಮಾಡಿದ್ದೆನು', 'ನಾನು ಇದನ್ನು ಅನುಭವಿಸಿದ್ದೆನು', 'ನಾನು ಈ (ಮಾತನ್ನು) ಹೇಳಿದ್ದೆನು' ಎಂದು ಪರಾಮರ್ಶಿಸುತ್ತಾನೆ.

'ಇಷ್ಟು ಕಾಲದವರೆಗೂ ನಾನು ಏನನ್ನೂ ಅರಿಯಲಿಲ್ಲ' ಎಂದೂ ಪರಾಮರ್ಶಿಸುತ್ತಾನಲ್ಲ !– ಎಂದರೆ ಅದರಿಂದೇನು (ನಿರ್ಣಯವಾಗುತ್ತದೆ) ?

(ಪೂರ್ವಪಕ್ಷಿ) :– 'ಏನನ್ನೂ (ಅರಿಯ)ಲಿಲ್ಲ' ಎಂದು ಎಲ್ಲವನ್ನೂ ಅಲ್ಲಗಳೆದನೆಂದು (ಗೊತ್ತಾಗುತ್ತದೆ)ಯಲ್ಲವೆ ?

(ಸಿದ್ಧಾಂತಿ) :– ಹಾಗಲ್ಲ. 'ನಾನು ಅರಿಯಲಿಲ್ಲ' –ಎಂದು ಅರಿಯುವ ಅಹಮರ್ಥ(ವಾದ ಆತ್ಮನೇ) ಅನುವರ್ತಿಸಿಕೊಂಡುಬಂದಿರುತ್ತಾನೆ ; ಆ ಪ್ರತಿಷೇಧವು ವೇದ್ಯವಿಷಯವೇ ಆಗಿರುತ್ತದೆ. 'ಏನನ್ನೂ (ಅರಿಯ)ಲಿಲ್ಲ' ಎಂಬುದು ಎಲ್ಲದರ

1. ಎಚ್ಚರವಾಗುವವರೆಗೂ 'ನಾನು' ಎಂದು ಒಂದೇ ಆಕಾರದಿಂದ ತೋರುತ್ತಿರುವದೆಂಬುದು ಅನುಭವವಿರುದ್ಧ. ಶ್ರು.ಪ್ರ. ಯಲ್ಲಿ ಭಾಷ್ಯದ ಅಭಿಪ್ರಾಯವನ್ನು ವಿವರಿಸುವಾಗ 'ಒಂದೇ ಆಕಾರ'ವೆಂದರೆ ಎಲ್ಲಾ ಆತ್ಮರಿಗೂ ಸಾಧಾರಣವಾಗಿರುವ ಪ್ರತ್ಯಕ್ತ್ವಾತ್ಮಕವೆಂದು ಬರೆದಿದೆ. 'ನಾನು' ಎಂದರೆ ಆ ಶಬ್ದದಿಂದ ತೋರುವ ಅರ್ಥ– ಎಂದರ್ಥವೆಂದು ಬರೆದಿದೆ.

2. ಅಹಂಭಾವವಿಲ್ಲದ ಜ್ಞಪ್ತಿಯ ಆಕಾರವು ಸುಷುಪ್ತಿಯಲ್ಲಿದ್ದರೆ ಆಗ 'ನಾನು ಅಜ್ಞಾನಸಾಕ್ಷಿಯಾದ ಜ್ಞಪ್ತಿ ಎಂದಿಂತು ಅನುಭವವಾಯಿತು'– ಎಂದು ಎಚ್ಚತ್ತಾಗ ಪರಾಮರ್ಶವಿರಬೇಕಿತ್ತೆಂದು ಭಾವ. ಸುಷುಪ್ತಿಪರಾಮರ್ಶದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಯನ್ನು ಇಲ್ಲವೆಂದಂತೆ ಆದೀತು ! ವಿಷಯವಾದ ನಿಷೇಧವೇ ಎನ್ನುವದಾದರೆ ನಿನಗೆ ಅಭಿಮತವಾಗಿರುವ ಅನುಭೂತಿಯು ಸುಷುಪ್ತಿಸಮಯದಲ್ಲಿ ಅರಿಯಬರುವ ಅಹಮರ್ಥವಾದ ಆತ್ಮನಾದ ಜ್ಞಾತೃವನ್ನು 'ನಾನು' ಎಂದು ಪರಾಮರ್ಶಿಸಿ 'ಏನನ್ನೂ ತಿಳಿಯಲಿಲ್ಲ' ಎಂಬ ಜ್ಞಾನದಲ್ಲಿ ಅವನನ್ನು ಅಲ್ಲಗಳೆದಿದೆಯೆಂದರೆ, ಆ ಕಾಲದಲ್ಲಿ ಇರಲಿಲ್ಲವೆಂಬ ಅರಿವಿನ ಸಿದ್ಧಿಯನ್ನೂ ಅನುವರ್ತಿಸಿಕೊಂಡುಬಂದಿರುವ ಜ್ಞಾತೃವಾದ ಅಹಮರ್ಥದ ಸಿದ್ಧಿಯನ್ನೂ 'ಏನನ್ನೂ ಅರಿಯಲಿಲ್ಲ' ಎಂಬ ಇದೇ ಪರಾಮರ್ಶದಿಂದ ಸಾಧಿಸುವವನು **ಈ ಅರ್ಥವನ್ನು ದೇವತೆಗಳಿಗೇ[1] ಸಾಧಿಸಲಿ!**

(ಮೂಲ)

'ಮಾಮಪ್ಯಹಂ ನ ಜ್ಞಾತವಾನ್' ಇತಿ ಅಹಮರ್ಥಸ್ಯಾಪಿ ತದಾನೀಮ್ ಅನನುಸಂಧಾನಂ ಪ್ರತೀಯತ ಇತಿ ಚೇತ್, ಸ್ವಾನುಭವಸ್ವವಚನಯೋರ್ವಿರೋಧಮಪಿ ನ ಜಾನನ್ತಿ ಭವನ್ತಃ । 'ಅಹಂ ಮಾಂ ನ ಜ್ಞಾತವಾನ್' ಇತಿ ಹಿ ಅನುಭವವಚನೇ । 'ಮಾಮ್' ಇತಿ ಕಿಂ ನಿಷಿಧ್ಯತ ಇತಿ ಚೇತ್, ಸಾಧು ಪೃಷ್ಟಂ ಭವತಾ । ತದುಚ್ಯತೇ– ಅಹಮರ್ಥಸ್ಯ ಜ್ಞಾತುರನುವೃತ್ತೇರ್ನ ಸ್ವರೂಪಂ ನಿಷಿಧ್ಯತೇ, ಅಪಿ ತು ಪ್ರಬೋಧಸಮಯೇ ಅನುಸಂಧೀಯಮಾನಸ್ಯಾಹಮರ್ಥಸ್ಯ ವರ್ಣಾಶ್ರಮಾದಿವಿಶಿಷ್ಟತಾ । 'ಅಹಂ ಮಾಂ ನ ಜ್ಞಾತವಾನ್' ಇತ್ಯುಕ್ತೇಃ ವಿಷಯೋ ವಿವೇಚನೀಯಃ । ಜಾಗರಿತಾವಸ್ಥಾನುಸಂಹಿತಜಾತ್ಯಾದಿವಿಶಿಷ್ಟೋಽಸ್ಮದರ್ಥೋ 'ಮಾಮ್' ಇತ್ಯಂಶಸ್ಯ ವಿಷಯಃ । ಸ್ವಾಪ್ಯಯಾವಸ್ಥಾಪ್ರಸಿದ್ಧಾವಿಶದಸ್ವಾನುಭವೈಕತಾನಶ್ಚಾಹಮರ್ಥಃ 'ಅಹಮ್' ಇತ್ಯಂಶಸ್ಯ ವಿಷಯಃ । ಅತ್ರ 'ಸುಪ್ತೋಽಹಮ್' 'ಈದೃಶೋಽಹಮ್' ಇತಿ ಚ ಮಾಮಪಿ ನ ಜ್ಞಾತವಾನಹಮ್, ಇತ್ಯೇವ ಖಲ್ವನುಭವಪ್ರಕಾರಃ ॥

(ಅರ್ಥ)

(ಶಂಕೆ) :– 'ನಾನು ನನ್ನನ್ನು ಅರಿಯಲಿಲ್ಲ' ಎಂದು ಅಹಮರ್ಥವನ್ನು ಕೂಡ ಅನುಭವಿಸಲಿಲ್ಲ ಎಂದು ತೋರುತ್ತದೆಯಲ್ಲ !

(ಸಮಾಧಾನ) :– ತಮ್ಮ ಅನುಭವವಚನಗಳಲ್ಲಿರುವ ವಿರೋಧವನ್ನು ಕೂಡ ತಾವು ಅರಿತಿರುವದಿಲ್ಲ. 'ನಾನು ನನ್ನನ್ನು ಅರಿಯಲಿಲ್ಲ' ಎಂದಲ್ಲವೆ, ಅನುಭವ ವಚನಗಳು ?

---

1. ಇಲ್ಲಿ 'ದೇವಾನಾಮೇವ' ಎಂಬ ವಾಕ್ಯಕ್ಕೆ ಏನರ್ಥವೆಂಬುದು ತಟ್ಟನೆ ಹೊಳೆಯುವಂತಿಲ್ಲ. 'ದೇವಾನಾಂ ಪ್ರಿಯ ಏವ' (ಮೂರ್ಖನೇ) ಎಂಬ ಪೂ॥ ಪಾಠಕ್ಕೆ ಮತ್ತೆಲ್ಲಿಯೂ ಪುಷ್ಟಿ ದೊರೆಯಲಾರದು. 'ಅರ್ಚಾರೂಪರಾದ' ಮಾತನಾಡದ ದೇವತೆಗಳಿಗೇ ಹೇಳಲಿ! ಎಂದು ಒಂದರ್ಥ ; 'ಕ್ಷಮಾವಂತರಾದ ದೇವತೆಗಳಿಗೇ' ಎಂದು ಇನ್ನೊಂದು ಅರ್ಥ ; ಪ್ರತಿವಾದಿಗಳಿಲ್ಲದೆ (ಬರಿಯ ಪರೋಕ್ಷದೇವತೆಗಳಿರುವಲ್ಲಿ) ಎಂದು ಮತ್ತೊಂದು ಅರ್ಥ– ಹೀಗೆ ಮೂರು ಅರ್ಥಗಳನ್ನು ಶ್ರು.ಪ್ರ.ಯಲ್ಲಿ ಕೊಟ್ಟಿದೆ. 'ಇರುವದನ್ನು ಇಲ್ಲವೆನ್ನುವದೂ ಇಲ್ಲದ್ದನ್ನು ಇದೆ ಎನ್ನುವದೂ' ಅನುಭವವಿರುದ್ಧವಾದೀತು– ಎಂಬುದು ವಾಕ್ಯದ ತಾತ್ಪರ್ಯ.

(ಪ್ರಶ್ನೆ) :– 'ನನ್ನನ್ನು (ಅರಿಯಲಿಲ್ಲ)' ಎಂದು ಏನನ್ನು ಇಲ್ಲವೆಂದಿದೆ ?

(ಉತ್ತರ) :– ಚೆನ್ನಾಗಿ ಕೇಳಿರುತ್ತೀಯೆ, ಅದನ್ನು ಹೇಳುತ್ತೇವೆ. ಅಹಮರ್ಥವಾಗಿರುವ ಜ್ಞಾತೃವು ಅನುವರ್ತಿಸಿಕೊಂಡಿರುವದರಿಂದ (ಅವನ) ಸ್ವರೂಪವನ್ನೇನೂ ಇಲ್ಲವೆಂದಿಲ್ಲ ; ಮತ್ತೇನನ್ನೆಂದರೆ ಎಚ್ಚರಕಾಲದಲ್ಲಿ ಅನುಭವಕ್ಕೆ ಬರುತ್ತಿರುವ ಅಹಮರ್ಥದ ವರ್ಣಾಶ್ರಮಾದಿವಿಶಿಷ್ಟತ್ವವನ್ನು. **'ನಾನು ನನ್ನನ್ನು ಅರಿಯಲಿಲ್ಲ' ಎಂದು ಹೇಳುವಾಗ ಅದರ ವಿಷಯವೇನೆಂಬುದನ್ನು ವಿವೇಚನೆಮಾಡಬೇಕಾಗಿದೆ. ಎಚ್ಚರದವಸ್ಥೆಯಲ್ಲಿ ಅನುಸಂಧಾನಕ್ಕೆ ಬರುವ ಜಾತ್ಯಾದಿವಿಶಿಷ್ಟವಾದ ಅಸ್ಮದರ್ಥವು (ಇಲ್ಲಿ) 'ನನ್ನನ್ನು' ಎಂಬಂಶಕ್ಕೆ ವಿಷಯ. ಸ್ವಾಪ್ಯಯಾವಸ್ಥೆಯಲ್ಲಿ ಪ್ರಸಿದ್ಧವಾಗಿರುವ ಅಸ್ಪಷ್ಟವಾದ ತನ್ನ ಅನುಭವೈಕರೂಪವಾದ ಅಹಮರ್ಥವೇ 'ನಾನು' ಎಂಬಂಶದ ವಿಷಯ. ಇಲ್ಲಿ 'ನಿದ್ರಿಸಿರುತ್ತೇನೆ ನಾನು' ಎಂದೂ 'ನಾನು ಇಂಥವನು'– ಎಂದೂ 'ನನ್ನನ್ನುಕೂಡ ನಾನು ಅರಿಯಲಿಲ್ಲ'– ಎಂದಲ್ಲವೆ, ಅನುಭವದ ಪ್ರಕಾರ[1] ?**

## (೨೪) ಪೂರ್ವಪಕ್ಷಿಯ ಪ್ರಕ್ರಿಯೆಯಂತೆಯೂ ನಿದ್ರೆಯಲ್ಲಿ ಜ್ಞಾತೃತ್ವವಿದೆ

(ಮೂಲ)

ಕಿಂ ಚ, ಸುಷುಪ್ತೌ ಆತ್ಮಾ ಅಜ್ಞಾನಸಾಕ್ಷಿತ್ವೇನಾಽಽಸ್ತೇ ಇತಿ ಹಿ ಭವದೀಯಾ ಪ್ರಕ್ರಿಯಾ । ಸಾಕ್ಷಿತ್ವಂ ಚ ಸಾಕ್ಷಾಜ್ಜ್ಞಾತೃತ್ವಮೇವ । ನ ಹ್ಯಜಾನತಃ ಸಾಕ್ಷಿತ್ವಮ್ । ಜ್ಞಾತೈವ ಹಿ ಲೋಕವೇದಯೋಃ ಸಾಕ್ಷೀ ಇತಿ ವ್ಯಪದಿಶ್ಯತೇ, ನ ಜ್ಞಾನಮಾತ್ರಮ್ । ಸ್ಮರತಿ ಚ ಭಗವಾನ್ ಪಾಣಿನಿಃ 'ಸಾಕ್ಷಾದ್ದ್ರಷ್ಟರಿ ಸಂಜ್ಞಾಯಾಮ್' (ಪಾ.ಸೂ. ೫–೨–೯೧) ಇತಿ ಸಾಕ್ಷಾಜ್ಜ್ಞಾತರ್ಯೇವ ಸಾಕ್ಷಿಶಬ್ದಮ್ । ಸ ಚಾಯಂ ಸಾಕ್ಷೀ 'ಜಾನಾಮಿ' ಇತಿ ಪ್ರತೀಯಮಾನಃ 'ಅಸ್ಮದರ್ಥ' ಏವೇತಿ ಕುತಸ್ತದಾನೀಮ್ ಅಹಮರ್ಥೋ ನ ಪ್ರತೀಯೇತ ? ಆತ್ಮನೇ ಸ್ವಯಮ್ ಅವಭಾಸಮಾನಃ, 'ಅಹಮ್' ಇತ್ಯೇವಾವಭಾಸತ ಇತಿ ಸ್ವಾಪಾದ್ಯವಸ್ಥಾಸ್ವಪಿ ಆತ್ಮಾ ಪ್ರಕಾಶಮಾನ ಅಹಮಿತ್ಯೇವಾವಭಾಸತ ಇತಿ ಸಿದ್ಧಮ್ ॥

(ಅರ್ಥ)

ಇದಲ್ಲದೆ, **ಸುಷುಪ್ತಿಯಲ್ಲಿ ಆತ್ಮನು ಅಜ್ಞಾನಕ್ಕೆ[2] ಸಾಕ್ಷಿಯಾಗಿ[3]**

---

1. ಅಹಂಪ್ರತ್ಯಯದ ವಿಷಯಕ್ಕೆ ಪೀಠಿಕೆಯನ್ನೂ ಪರಿಶಿಷ್ಟವನ್ನೂ ನೋಡಿರಿ.

2. ಇಲ್ಲಿ ಹೇಳಿರುವ ಅಜ್ಞಾನವು ಶಾಂಕರಭಾಷ್ಯದ ವ್ಯಾಖ್ಯಾನಕಾರರಿಗೆ ಅಭಿಮತವಾದ ಮೂಲಾವಿದ್ಯೆ. ಪರಿಶಿಷ್ಟವನ್ನು ನೋಡಿ.

3. ಸಾಕ್ಷಿಯ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

**ಇರುತ್ತಾನೆ ಎಂಬುದು ನಿಮ್ಮ ಪ್ರಕ್ರಿಯೆ.** ಸಾಕ್ಷಿತ್ವ ಎಂದರೆ ನೇರಾಗಿ ಅರಿಯುವವನಾಗಿರುವದೇ. ಅರಿಯದೆ ಇರುವವನಿಗೆ ಸಾಕ್ಷಿತ್ವವು ಇಲ್ಲವಷ್ಟೆ? ಜ್ಞಾತೃವನ್ನೇ ಅಲ್ಲವೆ, ಲೋಕದಲ್ಲಿಯೂ ವೇದದಲ್ಲಿಯೂ **'ಸಾಕ್ಷಿ'** ಎಂದು ಕರೆಯುತ್ತಾರೆ? ಬರಿಯ ಜ್ಞಾನವನ್ನು (ಹಾಗೆಂದು ಕರೆ)ಯುವದಿಲ್ಲವಷ್ಟೆ? ಭಗವಂತನಾದ **ಪಾಣಿನಿಯೂ 'ಸಾಕ್ಷಾದ್ದ್ರಷ್ಟರಿ ಸಂಜ್ಞಾಯಾಮ್'** (ಪಾ. ೫-೨-೯೧) ನೇರಾಗಿ ನೋಡುವವನು ಎಂಬರ್ಥವನ್ನು ಹೇಳುವ ಸಂಜ್ಞಾನಾಮವಾದಾಗ 'ಸಾಕ್ಷಿ' ಎಂಬ ಶಬ್ದವು ಬರುತ್ತದೆ- ಎಂದೇ (ವ್ಯಾಕರಣ)ಸ್ಮೃತಿಯಲ್ಲಿ ಬರೆದಿರುತ್ತಾನೆ. ಅಂಥ ಈ ಸಾಕ್ಷಿಯು 'ಅರಿಯುತ್ತೇನೆ' ಎಂದೇ ಪ್ರತೀತನಾಗುತ್ತಿರುವದರಿಂದ ಅಸ್ಮದರ್ಥವೇ ಆಗುತ್ತಿರುವಲ್ಲಿ ಆಗ ಅಹಮರ್ಥವು ಏಕೆತಾನೆ ತೋರಿಬರದೆ ಇದ್ದೀತು? ತನಗೆತಾನೇ ತೋರಿಕೊಳ್ಳುವವನು 'ನಾನು' ಎಂದೇ ತೋರಿಕೊಳ್ಳುತ್ತಾನಾದ್ದರಿಂದ **ಗಾಢನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿಯೂ ಆತ್ಮನು ಬೆಳಗುವಾಗ 'ನಾನು' ಎಂದೇ ತೋರುತ್ತಾನೆ ಎಂದು ಸಿದ್ಧವಾಯಿತು.**

## (೨೫) ಮೋಕ್ಷಾವಸ್ಥೆಯಲ್ಲಿಯೂ ಅಹಮರ್ಥವಿದೆ

(ಮೂಲ)

ಯತ್ತು ಮೋಕ್ಷದಶಾಯಾಮ್ ಅಹಮರ್ಥೋ ನಾನುವರ್ತತ ಇತಿ। ತದಪೇಶಲಮ್। ತಥಾ ಸತಿ ಆತ್ಮನಾಶ ಏವಾಪವರ್ಗಃ ಪ್ರಕಾರಾನ್ತರೇಣ ಪ್ರತಿಜ್ಞಾತಃ ಸ್ಯಾತ್। ನ ಚ ಅಹಮರ್ಥೋ ಧರ್ಮಮಾತ್ರಮ್। ಯೇನ ತದ್ವಿಗಮೇಽಪಿ ಅವಿದ್ಯಾನಿವೃತ್ತಾವಿವ ಸ್ವರೂಪಮ್ ಅವತಿಷ್ಠೇತ। ಪ್ರತ್ಯುತ ಸ್ವರೂಪಮೇವಾಹಮರ್ಥ ಆತ್ಮನಃ। ಜ್ಞಾನಂ ತು ತಸ್ಯ ಧರ್ಮಃ 'ಅಹಂ ಜಾನಾಮಿ', 'ಜ್ಞಾನಂ ಮೇ ಜಾತಮ್' ಇತಿ ಚಾಹಮರ್ಥಧರ್ಮತಯಾ ಜ್ಞಾನಪ್ರತೀತೇರೇವ॥

(ಅರ್ಥ)

ಇನ್ನು **ಮೋಕ್ಷಾವಸ್ಥೆಯಲ್ಲಿ** ಅಹಮರ್ಥವು ಅನುವರ್ತಿಸಿಕೊಂಡಿರುವದಿಲ್ಲ ಎಂದೆಯಲ್ಲ,[1] ಅದು ಚೆನ್ನಾಗಿಲ್ಲ. ಹಾಗಾದರೆ 'ತನ್ನ ನಾಶವೇ ಮೋಕ್ಷ' ಎಂದು ಬೇರೆಯ ಪ್ರಕಾರದಿಂದ ಹೇಳಿದಂತೆ ಆದೀತು. **ಅಹಮರ್ಥವು ಬರಿಯ ಧರ್ಮವೂ ಅಲ್ಲ,** ಹಾಗಿದ್ದಿದ್ದರೆ ಅವಿದ್ಯೆಯು ತೊಲಗಿದಮೇಲೆ ತನ್ನ ಸ್ವರೂಪವೇ ಉಳಿದುಕೊಳ್ಳುವಂತೆ, ಆ ಅಹಮರ್ಥವು ಹೋದಮೇಲೂ ಸ್ವರೂಪವು ಉಳಿದುಕೊಳ್ಳಬಹುದಾಗಿತ್ತು. ಇದಕ್ಕೆ ಬದಲು **ಅಹಮರ್ಥವೆಂಬುದು ಆತ್ಮನ ಸ್ವರೂಪವೇ ಆಗಿರುತ್ತದೆ; ಜ್ಞಾನವು ಅದರ ಧರ್ಮವು.**[2] 'ನಾನು

1. ಪೂರ್ವಪಕ್ಷಿಯು ಹಿಂದೆ (ಪು. ೬೯ರಲ್ಲಿ) ಹೀಗೆಂದಿದ್ದನು.

2. ಶಂಕರಪ್ರಸ್ಥಾನಕ್ಕೂ ರಾಮಾನುಜಪ್ರಸ್ಥಾನಕ್ಕೂ ಇರುವ ವೈಲಕ್ಷಣ್ಯವೇ ಇದು. ಅಹಮರ್ಥಜ್ಞಾತೃತ್ವಗಳ ವಿಷಯದಲ್ಲಿ ಪೀಠಿಕೆಯನ್ನು ನೋಡಿ.

ಅರಿಯುತ್ತೇನೆ' ಎಂದೂ 'ನನಗೆ ಜ್ಞಾನವು ಉಂಟಾಯಿತು' ಎಂದೂ ಅಹಮರ್ಥದ ಧರ್ಮವಾಗಿ ಜ್ಞಾನವು ಪ್ರತೀತವಾಗುವದರಿಂದಲೇ (ಹೀಗೆಂದು ಸಿದ್ಧವಾಗುತ್ತದೆ).

(ಮೂಲ)

ಅಪಿ ಚ ಯಃ ಪರಮಾರ್ಥತೋ ಭ್ರಾನ್ತ್ಯಾ ವಾ ಆಧ್ಯಾತ್ಮಿಕಾದಿದುಃಖೈರ್ದುಃಖಿತಯಾ ಸ್ವಾತ್ಮಾನಮನುಸಂಧತ್ತೇ 'ಅಹಂ ದುಃಖೀ' ಇತಿ, 'ಸರ್ವಮೇತದ್ದುಃಖಜಾತಮ್ ಅಪುನರ್ಭವಮಪೋಹ್ಯ ಕಥಮಹಮ್ ಅನಾಕುಲಃ ಸ್ವಸ್ಥೋ ಭವೇಯಮ್' ಇತ್ಯುತ್ಪನ್ನಮೋಕ್ಷರಾಗಃ, ಸ ಏವ ತತ್ಸಾಧನೇ ಪ್ರವರ್ತತೇ । ಸ ಸಾಧನಾನುಷ್ಠಾನೇನ ಯದಿ 'ಅಹಮೇವ ನ ಭವಿಷ್ಯಾಮಿ' ಇತ್ಯವಗಚ್ಛೇತ್, ಅಪಸರ್ಪೇದೇವಾಸೌ ಮೋಕ್ಷಕಥಾಪ್ರಸ್ತಾವಾತ್ ತತಶ್ಚ ಅಧಿಕಾರಿವಿರಹಾದೇವ ಸರ್ವಂ ಮೋಕ್ಷಶಾಸ್ತ್ರಮ್ ಅಪ್ರಮಾಣಂ ಸ್ಯಾತ್ । ಅಹಮುಪಲಕ್ಷಿತಂ ಪ್ರಕಾಶಮಾತ್ರಮ್ ಅಪವರ್ಗೇಽವತಿಷ್ಠತೇ ಇತಿ ಚೇತ್, ಕಿಮನೇನ ? ಮಯಿ ನಷ್ಟೇಽಪಿ ಕಿಮಪಿ ಪ್ರಕಾಶಮಾತ್ರಮಪವರ್ಗೇ ಅವತಿಷ್ಠತೇ ಇತಿ ಮತ್ವಾ ನ ಹಿ ಕಶ್ಚಿದ್ ಬುದ್ಧಿಪೂರ್ವಕಾರೀ ಪ್ರಯತತೇ । ಅತಃ ಅಹಮರ್ಥಸ್ಯೈವ ಜ್ಞಾತೃತಯಾ ಸಿದ್ಧ್ಯತಃ ಪ್ರತ್ಯಗಾತ್ಮತ್ವಮ್ । ಸ ಚ ಪ್ರತ್ಯಗಾತ್ಮಾ ಮುಕ್ತಾವಪಿ ಅಹಮಿತ್ಯೇವ ಪ್ರಕಾಶತೇ ಸ್ವಸ್ಮೈ ಪ್ರಕಾಶಮಾನತ್ವಾತ್ । ಯೋ ಯಃ ಸ್ವಸ್ಮೈ ಪ್ರಕಾಶತೇ, ಸ ಸರ್ವೋಽಹಮಿತ್ಯೇವ ಪ್ರಕಾಶತೇ, ಯಥಾ ತಥಾಽವಭಾಸಮಾನತ್ವೇನೋಭಯವಾದಿಸಮ್ಮತಃ ಸಂಸಾರ್ಯಾತ್ಮಾ । ಯಃ ಪುನರಹಮ್ ಇತಿ ನ ಚಕಾಸ್ತಿ, ನಾಸೌ ಸ್ವಸ್ಮೈ ಪ್ರಕಾಶತೇ, ಯಥಾ ಘಟಾದಿಃ । ಸ್ವಸ್ಮೈ ಪ್ರಕಾಶತೇ ಚಾಯಂ ಮುಕ್ತಾತ್ಮಾ । ಸ ತಸ್ಮಾತ್ ಅಹಮಿತ್ಯೇವ ಪ್ರಕಾಶತೇ ॥

(ಅರ್ಥ)

ಇದೂ ಅಲ್ಲದೆ, ಯಾವನು ನಿಜವಾಗಿಯೇ, ಅಥವಾ ಭ್ರಾಂತಿಯಿಂದ ಆಧ್ಯಾತ್ಮಿಕವೇ ಮುಂತಾದ ದುಃಖಗಳಿಂದ ದುಃಖಿಯೆಂದು ತನ್ನನ್ನು 'ನಾನು ದುಃಖಿಯು' ಎಂದು ಅನುಸಂಧಾನಮಾಡಿಕೊಂಡಿರುವನೋ (ಯಾವನಿಗೆ) 'ಈ ಎಲ್ಲಾ ದುಃಖಜಾತವನ್ನೂ ಮತ್ತೆ ಹುಟ್ಟದಂತೆ ನೀಗಿಕೊಂಡು 'ಹೇಗೆ ನಾನು ಯಾವ ದುಃಖವೂ ಇಲ್ಲದೆ ಸ್ವಸ್ಥನಾದೇನು!'– ಎಂದು (ಯಾವನಿಗೆ) ಮೋಕ್ಷಾಪೇಕ್ಷೆಯುಂಟಾಗಿರುವದೋ ಅವನೇ ಆ ಮೋಕ್ಷಸಾಧನದಲ್ಲಿ ತೊಡಗುವನು. ಅವನು 'ಸಾಧನಾನುಷ್ಠಾನದಿಂದ ನಾನೇ ಇಲ್ಲವಾಗುವೆನು' ಎಂದು ಗೊತ್ತುಮಾಡಿಕೊಂಡನಾದರೆ, ಮೋಕ್ಷದ ಮಾತಿನ ಪ್ರಸ್ತಾಪವನ್ನೇ ಬಿಟ್ಟು ಅತ್ತ ಸರಿದಾನು! ಅದರಿಂದ ಅಧಿಕಾರಿಯೇ ಇಲ್ಲದ್ದರಿಂದ ಮೋಕ್ಷಶಾಸ್ತ್ರವೆಲ್ಲವೂ ಅಪ್ರಮಾಣವಾದೀತು! 'ಅಹಂಕಾರೋಪಲಕ್ಷಿತವಾದ ಪ್ರಕಾಶಮಾತ್ರವು ಮೋಕ್ಷದಲ್ಲಿದ್ದುಕೊಂಡಿರುತ್ತದೆಯಲ್ಲ!' ಎಂದರೆ ಅದರಿಂದೇನು? ನಾನು ನಾಶವಾದಮೇಲೂ ಯಾವದೋ

ಒಂದು ಪ್ರಕಾಶಮಾತ್ರವಾದದ್ದು ಮೋಕ್ಷದಲ್ಲಿ ಉಳಿದುಕೊಂಡಿರುತ್ತದೆ ಎಂದು ಕೊಂಡು ಬುದ್ಧಿಪೂರ್ವಕವಾಗಿ (ಕೆಲಸವನ್ನು) ಮಾಡುವವನು ಯಾವನೂ ಪ್ರಯತ್ನಿಸುವದಿಲ್ಲವಷ್ಟೆ ? ಆದ್ದರಿಂದ ಜ್ಞಾತೃರೂಪದಿಂದ ಸಿದ್ಧವಾಗುವ ಅಹಮರ್ಥವೇ ಪ್ರತ್ಯಗಾತ್ಮನು. ಆ ಪ್ರತ್ಯಗಾತ್ಮನು ಮುಕ್ತಿಯಲ್ಲಿಯೂ ನಾನೆಂದೇ ತೋರಿಕೊಳ್ಳುತ್ತಿರುತ್ತಾನೆ; ಏಕೆಂದರೆ ತನಗಾಗಿ (ಅವನು) ಬೆಳಗಿತೋರುತ್ತಿರುತ್ತಾನೆ. **ಯಾವಯಾವನು ತನಗಾಗಿ ಬೆಳಗಿತೋರುತ್ತಾನೋ ಅವನು ಪ್ರತಿಯೊಬ್ಬನೂ ನಾನೆಂದೇ ತೋರಿಕೊಳ್ಳುತ್ತಾನೆ ; ಹಾಗೆ ತೋರಿಕೊಳ್ಳುತ್ತಾನೆಂದು ಉಭಯವಾದಿಗಳಿಗೂ ಸಂಮತವಾಗಿರುವ ಸಂಸಾರ್ಯಾತ್ಮನೇ ಇದಕ್ಕೆ ಉದಾಹರಣೆ. ಇದಕ್ಕೆ ಬದಲಾಗಿ ಯಾವದು 'ನಾನು' ಎಂದು ತೋರಿಕೊಳ್ಳುವದಿಲ್ಲವೋ, ಅದು ತನಗೆತಾನೇ ತೋರಿಕೊಳ್ಳುವದಿಲ್ಲ ; ಘಟವೇ ಮುಂತಾದದ್ದೇ ಇದಕ್ಕೆ ಉದಾಹರಣೆ. ಈ ಮುಕ್ತಾತ್ಮನು ತನಗೆತಾನೇ ತೋರಿಕೊಳ್ಳುತ್ತಾನೆ ; ಆದ್ದರಿಂದ (ಇವನು) 'ನಾನು' ಎಂದೇ ತೋರಿಕೊಳ್ಳುತ್ತಾನೆ.**

(ಮೂಲ)

ನ ಚ ಅಹಮಿತಿ ಪ್ರಕಾಶಮಾನತ್ವೇನ ತಸ್ಯಾಜ್ಞತ್ವಸಂಸಾರಿತ್ವಾದಿಪ್ರಸಙ್ಗಃ। ಮೋಕ್ಷವಿರೋಧಾತ್, ಅಜ್ಞತ್ವಾದ್ಯಹೇತುತ್ವಾಚ್ಚ, ಅಹಂಪ್ರತ್ಯಯಸ್ಯ। ಅಜ್ಞಾನಂ ನಾಮ ಸ್ವರೂಪಾಜ್ಞಾನಮ್, ಅನ್ಯಥಾಜ್ಞಾನಮ್, ವಿಪರೀತಜ್ಞಾನಂ ವಾ ? 'ಅಹಮ್' ಇತ್ಯೇವ ಆತ್ಮನಃ ಸ್ವರೂಪಮ್, ಇತಿ ಸ್ವರೂಪಜ್ಞಾನರೂಪೋಽಹಂ-ಪ್ರತ್ಯಯೋ ನಾಜ್ಞತ್ವಮಾಪಾದಯತಿ । ಕುತಃ ಸಂಸಾರಿತ್ವಮ್ ? ಅಪಿ ತು ತದ್ವಿರೋಧಿತ್ವಾನ್ನಾಶಯತ್ಯೇವ ॥

ಬ್ರಹ್ಮಾತ್ಮಭಾವಾಪರೋಕ್ಷ್ಯನಿರ್ಧೂತನಿರವಶೇಷಾವಿದ್ಯಾನಾಮಪಿ ವಾಮದೇವಾದೀನಾಮ್ 'ಅಹಮ್' ಇತ್ಯೇವಾಽಽತ್ಮಾನುಭವದರ್ಶನಾಚ್ಚ। ಶ್ರೂಯತೇ ಹಿ 'ತದ್ಧೈತತ್ ಪಶ್ಯನ್ನೃಷಿರ್ವಾಮದೇವಃ ಪ್ರತಿಪೇದೇ ಅಹಂ ಮನುರಭವಂ ಸೂರ್ಯಶ್ಚೇತಿ' (ಬೃ. ೧-೪-೧೦), 'ಅಹಮೇಕಃ ಪ್ರಥಮಮಾಸಂ ವರ್ತಾಮಿ ಚ ಭವಿಷ್ಯಾಮಿ ಚ' (ಅ. ಶಿ. ೯) ಇತ್ಯಾದಿ। ಸಕಲೇತರಾಜ್ಞಾನವಿರೋಧಿಸಚ್ಛಬ್ದಪ್ರತ್ಯಯಮಾತ್ರಭಾಜಃ ಪರಸ್ಯ ಬ್ರಹ್ಮಣೋ ವ್ಯವಹಾರೋಽಪ್ಯೇವಮೇವ ; 'ಹನ್ತಾಹಮಿಮಾಸ್ತಿಸ್ರೋ ದೇವತಾಃ' (ಛಾಂ. ೬-೩-೨), 'ಬಹು ಸ್ಯಾಂ ಪ್ರಜಾಯೇಯ' (ತೈ. ೨-೬), 'ಸ ಈಕ್ಷತ ಲೋಕಾನ್ನು ಸೃಜಾ ಇತಿ' (ಐ. ೧-೧-೧) । ತಥಾ 'ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ । 'ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ' (ಗೀ. ೧೫-೧೮), 'ಅಹಮಾತ್ಮಾ ಗುಡಾಕೇಶ' (ಗೀ. ೧೦-೨೦), 'ನ ತ್ವೇವಾಹಂ ಜಾತು ನಾಸಮ್' (ಗೀ. ೨-೧೨),

'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ' (ಗೀ. ೭-೬), 'ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ' (ಗೀ. ೧೦-೮), 'ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್' (ಗೀ. ೧೨-೭) 'ಅಹಂ ಬೀಜಪ್ರದಃ ಪಿತಾ' (ಗೀ. ೧೪-೪), 'ವೇದಾಹಂ ಸಮತೀತಾನಿ' (ಗೀ. ೭-೨೬) ಇತ್ಯಾದಿಷು॥

(ಅರ್ಥ)

'ನಾನು' ಎಂದು ತೋರಿಕೊಳ್ಳುವದರಿಂದ ಆ (ಮುಕ್ತನಿಗೆ) ಅಜ್ಞತ್ವವೂ ಸಂಸಾರಿತ್ವವೂ ಬಂದೊಂದಗುವದು ಎನ್ನುವದಕ್ಕಿಲ್ಲ. ಏಕೆಂದರೆ (ಹಾಗಾಗುವದು) ಮೋಕ್ಷಕ್ಕೆ ವಿರುದ್ಧವಾಗುವದು; ಅಹಂಪ್ರತ್ಯಯವು ಅಜ್ಞತ್ವಾದಿಗಳಿಗೆ ಹೇತುವಲ್ಲವಾದ್ದರಿಂದಲೂ (ಹೀಗೆಂದು ಅರಿಯಬೇಕು). ಅಜ್ಞಾನವೆಂದರೆ ಸ್ವರೂಪವನ್ನು ಅರಿಯದೆ ಇರುವದು, ಬೇರೊಂದು ರೀತಿಯಲ್ಲಿ ಅರಿತುಕೊಳ್ಳುವದು,[1] ಅಥವಾ ತಪ್ಪಾಗಿಯೇ ಅರಿತುಕೊಂಡಿರುವದು. 'ನಾನು' ಎಂಬುದೇ ಆತ್ಮನ ಸ್ವರೂಪವಾದ್ದರಿಂದ ಸ್ವರೂಪಜ್ಞಾನರೂಪವಾದ 'ಅಹಂಪ್ರತ್ಯಯ'ವು ಅಜ್ಞತ್ವವನ್ನುಂಟುಮಾಡಲಾರದು; (ಇನ್ನು) ಸಂಸಾರಿತ್ವವೆಲ್ಲಿಂದ (ಬಂದೀತು)? ಇದಕ್ಕೆ ಬದಲಾಗಿ ಅದಕ್ಕೆ ವಿರೋಧವಾಗಿರುವದರಿಂದ (ಅಜ್ಞತ್ವವನ್ನೂ ಸಂಸಾರಿತ್ವವನ್ನೂ) ನಾಶಗೊಳಿಸಿಯೇ ತೀರುವದು.

ಬ್ರಹ್ಮಾತ್ಮಭಾವಾಪರೋಕ್ಷ್ಯದಿಂದ[2] ಅವಿದ್ಯೆಯನ್ನು ಸ್ವಲ್ಪವೂ ಉಳಿಯದಂತೆ ಕಳೆದುಹಾಕಿಕೊಂಡವರಾದ ವಾಮದೇವಾದಿಗಳಿಗೂ 'ನಾನು' ಎಂದೇ ಆತ್ಮಾನುಭವವಿರುವದು ಶಾಸ್ತ್ರದಲ್ಲಿ ಕಂಡಿರುವದರಿಂದಲೂ (ಹೀಗೆ). ಶ್ರುತಿಯಲ್ಲಿಯೂ "ಆ ಇದನ್ನು ಕಂಡುಕೊಂಡ ವಾಮದೇವಋಷಿಯು 'ನಾನು ಮನುವಾದೆನು, ಸೂರ್ಯನೂ ಆದೆನು' ಎಂಬ ಮಂತ್ರವನ್ನು) ಪಡೆದನು" (ಬೃ. ೧-೪-೧೦) ಎಂದು (ಹೇಳಿದೆ). 'ನಾನೊಬ್ಬನೇ ಮೊದಲು ಇದ್ದೆನು. (ಈಗಲೂ) ಇರುತ್ತೇನೆ, ಮುಂದೆಯೂ ಇರುವೆನು' (ಅ.ಶಿ. ಖಂ. ೯) ಎಂದುಮುಂತಾಗಿ (ಹೇಳಿದೆ). ಮಿಕ್ಕ ಎಲ್ಲಾ ಅಜ್ಞಾನಕ್ಕೂ ವಿರೋಧಿಯಾದ, ಸಚ್ಛಬ್ದಪ್ರತ್ಯಯಗಳಿಗೆ ಮಾತ್ರ ತಕ್ಕ ಪರಬ್ರಹ್ಮದ ವ್ಯವಹಾರವೂ ಹೀಗೆಯೇ. 'ಒಳ್ಳೆಯದು, ನಾನು ಈ ಮೂರು ದೇವತೆಗಳನ್ನು (ಅನುಪ್ರವೇಶಮಾಡಿ ನಾಮರೂಪಗಳನ್ನು ವಿಂಗಡಿಸುವೆನು)' (ಛಾಂ. ೬-೩-೨), 'ಬಹುವಾಗುವೆನು, ಉತ್ಪತ್ತಿಯಾಗುವೆನು' (ತೈ. ೨-೬),

---

1. ಶಂಖವು ಹಳದಿ ಎಂಬಂತೆ ಪ್ರಕಾರಾಂತರವುಳ್ಳದ್ದೆಂಬ ಜ್ಞಾನವು ಅನ್ಯಥಾಜ್ಞಾನ ಎಂದು ಶ್ರು. ಪ್ರ. ; ಇದನ್ನು ವಿಪರೀತಜ್ಞಾನದಲ್ಲಿಯೇ ಸೇರಿಸಬಹುದಾದ್ದರಿಂದ ಇಲ್ಲಿ 'ಸಂಶಯಿತಜ್ಞಾನಂ' ಎಂದಿದ್ದರೆ ಚೆನ್ನಾಗಿತ್ತೆಂದು ಹೇಳಬೇಕಾಗಿದೆ.

2. ಬ್ರಹ್ಮವೇ ನನ್ನ ಆತ್ಮನು- ಎಂಬ ಜ್ಞಾನ- ಎಂದು ಸಿದ್ಧಾಂತಕ್ಕೆ ತಕ್ಕ ಅರ್ಥ. 'ಬ್ರಹ್ಮವೇ ನಾನು' ಎಂಬ ಜ್ಞಾನ ಎಂದು ಪೂರ್ವಪಕ್ಷಿಗೆ ಒಪ್ಪಾದ ಅರ್ಥ.

'ಲೋಕಗಳನ್ನು ಸೃಷ್ಟಿಸುವೆನು - ಎಂದು ಆತನು ಯೋಚಿಸಿಕೊಂಡನು' (ಐ. ೧-೧-೧, ಎಂದೂ) ಶ್ರುತಿಯಲ್ಲಿದೆ. ಇದರಂತೆ 'ಕ್ಷರವನ್ನು ಮೀರಿರುವೆನಾದ್ದರಿಂದಲೂ ಅಕ್ಷರಕ್ಕಿಂತಲೂ ಉತ್ತಮನಾಗಿರುವೆನಾದ್ದರಿಂದಲೂ ಲೋಕದಲ್ಲಿಯೂ[1] ವೇದದಲ್ಲಿಯೂ ಪುರುಷೋತ್ತಮನೆಂದು ಪ್ರಸಿದ್ಧನಾಗಿರುತ್ತೇನೆ' (ಗೀ. ೧೫-೧೮), 'ಎಲೈ ಗುಡಾಕೇಶನೆ, ನಾನು (ಸರ್ವಭೂತಗಳ ಹೃದಯಾಶಯದಲ್ಲಿಯೂ ಇರುವ) ಆತ್ಮನು' (ಗೀ. ೧೦-೨೦), 'ನಾನು ಎಂದಿಗೂ ಇರದೆ ಇರಲಿಲ್ಲ' (ಗೀ. ೨-೧೨), 'ನಾನು ಇಡಿಯ ಜಗತ್ತಿಗೆ ಉತ್ಪತ್ತಿಕಾರಣನೂ ಲಯಕಾರಣನೂ (ಆಗಿದೇನೆ)' (ಗೀ. ೭-೬), 'ನಾನು ಎಲ್ಲಕ್ಕೂ ಉತ್ಪತ್ತಿಕಾರಣನು, ನನ್ನಿಂದಲೇ ಎಲ್ಲವೂ ಪ್ರವರ್ತಿಸುತ್ತಿರುವದು' (ಗೀ. ೧೦-೮), 'ಅವರನ್ನು ನಾನು ಮೃತ್ಯುಸಂಸಾರ ಸಾಗರದಿಂದ ಉದ್ಧಾರಮಾಡುವೆನು' (ಗೀ. ೧೨-೭), 'ನಾನು ಬೀಜವನ್ನು ಕೊಡುವ ತಂದೆ') ಗೀ. ೧೪-೪), 'ನಾನು ಆಗಿಹೋಗಿರುವ(ದೆಲ್ಲವನ್ನೂ) ಬಲ್ಲೆನು' (ಗೀ. ೭-೨೬)- ಮುಂತಾದ (ಸ್ಮೃತಿ)ಗಳಲ್ಲಿಯೂ (ಹೇಳಿದೆ).

## (೨೬) ಭಗವಂತನು ಅಹಂಕಾರವನ್ನು ಕ್ಷೇತ್ರದಲ್ಲಿ ಸೇರಿಸಿರುವದೇಕೆ ?

### (ಮೂಲ)

ಯದಿ ಅಹಮಿತ್ಯೇವಾಽಽತ್ಮನಃ ಸ್ವರೂಪಮ್, ಕಥಂ ತರ್ಹಿ ಅಹಂಕಾರಸ್ಯ ಕ್ಷೇತ್ರಾನ್ತರ್ಭಾವೋ ಭಗವತೈವೋಪದಿಶ್ಯತೇ 'ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ' (ಗೀ. ೧೩-೫) ಇತಿ ? ಉಚ್ಯತೇ । ಸ್ವರೂಪೋಪದೇಶೇಷು ಸರ್ವೇಷು 'ಅಹಮ್' ಇತ್ಯೇವೋಪದೇಶಾತ್, ತಥೈವಾತ್ಮಸ್ವರೂಪಪ್ರತಿಪತ್ತೇಶ್ಚ 'ಅಹಮ್' ಇತ್ಯೇವ ಪ್ರತ್ಯಗಾತ್ಮನಃ ಸ್ವರೂಪಮ್ । ಅವ್ಯಕ್ತಪರಿಣಾಮಭೇದಸ್ಯ ಅಹಂಕಾರಸ್ಯ ಕ್ಷೇತ್ರಾನ್ತರ್ಭಾವೋ ಭಗವತೈವೋಪದಿಶ್ಯತೇ । ಸ ತು, ಅನಾತ್ಮನಿ ದೇಹೇ ಅಹಂಭಾವಕರಣಹೇತುತ್ವೇನ 'ಅಹಂಕಾರ' ಇತ್ಯುಚ್ಯತೇ । ಅಸ್ಯ ತು ಅಹಂಕಾರಶಬ್ದಸ್ಯ ಅಭೂತತದ್ಭಾವೇಽರ್ಥೇ ಚ್ವಿಪ್ರತ್ಯಯಮುತ್ಪಾದ್ಯ ವ್ಯುತ್ಪತ್ತಿರ್ದ್ರಷ್ಟವ್ಯಾ । ಅಯಮೇವ ತು ಅಹಂಕಾರಃ ಉತ್ಕೃಷ್ಟಜನಾವಮಾನಹೇತುಃ, ಗರ್ವಾಪರನಾಮಾ ಶಾಸ್ತ್ರೇಷು ಬಹುಶೋ ಹೇಯತಯಾ ಪ್ರತಿಪಾದ್ಯತೇ । ತಸ್ಮಾತ್, ಬಾಧಕಾಪೇತಾ ಅಹಂಬುದ್ಧಿಃ, ಸಾಕ್ಷಾದಾತ್ಮಗೋಚರೈವ । ಶರೀರಗೋಚರಾ ತು ಅಹಂಬುದ್ಧಿರವಿದ್ಯೈವ । ಯಥೋಕ್ತಂ ಭಗವತಾ ಪರಾಶರೇಣ 'ಶ್ರೂಯತಾಂ ಚಾಪ್ಯವಿದ್ಯಾಯಾಃ ಸ್ವರೂಪಂ ಕುಲನನ್ದನ । ಅನಾತ್ಮನ್ಯಾತ್ಮಬುದ್ಧಿರ್ಯಾ' (ವಿ. ಪು. ೬-೭-೧೦, ೧೧) ಇತಿ । ಯದಿ ಜ್ಞಪ್ತಿಮಾತ್ರಮೇವಾಽಽತ್ಮಾ, ತದಾ

1. ವೇದವನ್ನು ಬಿಟ್ಟು ಉಳಿದ ಕಾವ್ಯಾದಿಗಳಲ್ಲಿಯೂ.

ಅನಾತ್ಮನ್ಯಾತ್ಮಾಭಿಮಾನೇ ಶರೀರೇ ಜ್ಞಪ್ತಿಮಾತ್ರಪ್ರತಿಭಾಸಃ ಸ್ಯಾತ್ । ನ ಜ್ಞಾತೃತ್ವಪ್ರತಿಭಾಸಃ । ತಸ್ಮಾತ್, ಜ್ಞಾತಾ ಅಹಮರ್ಥ ಏವಾಽಽತ್ಮಾ । ತದುಕ್ತಮ್ ।

**ಅತಃ ಪ್ರತ್ಯಕ್ಷಸಿದ್ಧತ್ವಾದುಕ್ತನ್ಯಾಯಾಗಮಾನ್ವಯಾತ್ ।**
**ಅವಿದ್ಯಾಯೋಗತಶ್ಚಾಽಽತ್ಮಾ ಜ್ಞಾತಾಽಹಮಿತಿ ಭಾಸತೇ ॥**
(ಆ. ಸಿ. ಪಾ. ೩೨)

**ಇತಿ । ತಥಾ ಚ–**

**ದೇಹೇನ್ದ್ರಿಯಮನಃಪ್ರಾಣಧೀಭ್ಯೋಽನ್ಯೋಽನನ್ಯಸಾಧನಃ ।**
**ನಿತ್ಯೋ ವ್ಯಾಪೀ ಪ್ರತಿಕ್ಷೇತ್ರಮಾತ್ಮಾ ಭಿನ್ನಃ ಸ್ವತಃ ಸುಖೀ ॥**
(ಆ. ಸಿ. ಪಾ. ೬)

ಇತಿ ಅನನ್ಯಸಾಧನಃ=ಸ್ವಪ್ರಕಾಶಃ ; ವ್ಯಾಪೀ=ಅತಿಸೂಕ್ಷ್ಮತಯಾ ಸರ್ವಾಚೇತನಾನ್ತಃಪ್ರವೇಶನಸ್ವಭಾವಃ ॥

(ಅರ್ಥ)

(ಶಂಕೆ) :– 'ನಾನು' ಎಂಬಿದೇ ಆತ್ಮನ ಸ್ವರೂಪವಾದರೆ, ಅಹಂಕಾರವನ್ನು ಕ್ಷೇತ್ರದೊಳಗೇ ಅಡಕಮಾಡಿ ಭಗವಂತನು ಉಪದೇಶಿಸಿರುವನಲ್ಲ, ಇದು ಹೇಗೆ ? 'ಮಹಾಭೂತಗಳು ಅಹಂಕಾರ, ಬುದ್ಧಿ, ಮತ್ತು ಅವ್ಯಕ್ತವು' (ಗೀ. ೧೩-೫) ಎಂದಿರುತ್ತಾನಲ್ಲ !

(ಸಮಾಧಾನ) :– ಹೇಳುತ್ತೇವೆ. (ಆತ್ಮನ) ಸ್ವರೂಪವನ್ನು ಉಪದೇಶಿಸುವ (ವಾಕ್ಯ)ಗಳಲ್ಲೆಲ್ಲ 'ನಾನು' ಎಂದೇ ಉಪದೇಶಿಸಿರುವದರಿಂದಲೂ,[1] ಹಾಗೆಯೇ ಆತ್ಮಸ್ವರೂಪಾನುಭವವಿರುವದರಿಂದಲೂ 'ನಾನು' ಎಂಬುದೇ ಪ್ರತ್ಯಗಾತ್ಮನ ಸ್ವರೂಪವು. ಅವ್ಯಕ್ತಪರಿಣಾಮವಿಶೇಷವಾದ ಅಹಂಕಾರವು ಕ್ಷೇತ್ರದೊಳಗೆ ಅಡಕವಾಗಿದೆಯೆಂದು **ಭಗವಂತನೇ** ಉಪದೇಶಿಸಿರುತ್ತಾನೆ. ಆದಾದರೊ, ಅನಾತ್ಮವಾದ ದೇಹದಲ್ಲಿ ಅಹಂತೆಯನ್ನು ಮಾಡುವದಕ್ಕೆ ಹೇತುವಾಗಿರುವದರಿಂದ 'ಅಹಂಕಾರ' ಎನ್ನುವರು. ಈ ಅಹಂಕಾರಶಬ್ದಕ್ಕಾದರೊ, ಅಭೂತತದ್ಭಾವಾರ್ಥದಲ್ಲಿ[2] ಉತ್ಕೃಷ್ಟವಾದ ಜನರನ್ನು ಅವಮಾನಗೊಳಿಸುವದಕ್ಕೆ ಕಾರಣವಾಗಿರುವದರಿಂದ **'ಗರ್ವ'** ಎಂಬ ಮತ್ತೊಂದು ಹೆಸರಿನಿಂದ ಶಾಸ್ತ್ರಗಳಲ್ಲಿ ಬಹಳವಾಗಿ

---

1. ಆತ್ಮಜ್ಞಾನಪರವಾದ ವಾಕ್ಯಗಳಲ್ಲಿರುವ 'ನಾನು' ಎಂಬ ರೂಪದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. ಅದಲ್ಲದ್ದನ್ನು (=ದೇಹವನ್ನು) ಅದೆಂದು (ನಾನೆಂದು) ಬಗೆಯುವದೆಂಬ ಅರ್ಥದಲ್ಲಿ.

(ಇದನ್ನು) ಬಿಡತಕ್ಕದ್ದೆಂದು ಪ್ರತಿಪಾದಿತವಾಗಿರುತ್ತದೆ. ಆದ್ದರಿಂದ **ಬಾಧಕವಿಲ್ಲದ ಅಹಂಬುದ್ಧಿಗೆ ನೇರಾಗಿ ಆತ್ಮನೇ ವಿಷಯ; ಶರೀರವಿಷಯಕವಾದ ಅಹಂಬುದ್ಧಿಯು ಅವಿದ್ಯೆಯೇ.** ಹೀಗೆಂದು ಭಗವಾನ್ **ಪರಾಶರನು** 'ಹಾಗಾದರೆ ಎಲೈ ಕುಲನಂದನನೆ, ಅವಿದ್ಯೆಯ ಸ್ವರೂಪವನ್ನು ಕೇಳು; ಅನಾತ್ಮನಲ್ಲಿ ಆತ್ಮಬುದ್ಧಿಯಿದೆಯಲ್ಲ[1] (ಇದೇ ಅವಿದ್ಯೆ)' (ವಿ. ಪು. ೬-೭-೧೦, ೧೧) ಎಂದು ಹೇಳಿರುತ್ತಾನೆ. ಜ್ಞಪ್ತಿಮಾತ್ರವೇ ಆತ್ಮವಾಗಿದ್ದರೆ, ಆಗ ಅನಾತ್ಮನಲ್ಲಿ ತಾನೆಂಬ ಅಭಿಮಾನವಾಗುವಾಗ ಜ್ಞಪ್ತಿಮಾತ್ರವೇ ತೋರಿಕೊಳ್ಳಬೇಕಾಗಿತ್ತು; ಜ್ಞಾತೃತ್ವವು ತೋರಬಾರದಾಗಿತ್ತು.[2] ಆದ್ದರಿಂದ ಜ್ಞಾತೃವಾದ ಅಹಮರ್ಥವೇ ಆತ್ಮನು. ಹೀಗೆಂದು (ಆತ್ಮಸಿದ್ಧಿಯಲ್ಲಿ)

> "ಆದ್ದರಿಂದ ಪ್ರತ್ಯಕ್ಷಸಿದ್ಧವಾಗಿರುವದರಿಂದ (ಹಿಂದೆ) ಹೇಳಿರುವ ಯುಕ್ತಿ, ಶಾಸ್ತ್ರಗಳ ಅನುಗಮವಿರುವದರಿಂದಲೂ ಅವಿದ್ಯೆಯ ಸಂಬಂಧವಿಲ್ಲದ್ದರಿಂದಲೂ, ಜ್ಞಾತೃವಾದ ಆತ್ಮನು ನಾನು ಎಂದು ತೋರುತ್ತಾನೆ" (ಆ. ಸಿ. ಪು. ೩೨).

ಮತ್ತು

> "ಆತ್ಮನು ದೇಹ, ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿ- ಇವುಗಳಿಗಿಂತ (ಬೇರೆಯಾಗಿ?) ಮತ್ತೊಂದರಿಂದ ಸಿದ್ಧಪಡಿಸಬೇಕಾದದ್ದಿಲ್ಲದವನು, ನಿತ್ಯನು, ಒಂದೊಂದು ಕ್ಷೇತ್ರಕ್ಕೂ ಭಿನ್ನನು, ಸ್ವತಃ ಸುಖಿಯು" (ಆ. ಸಿ. ಪು. ೬).

(ಈ ಶ್ಲೋಕದಲ್ಲಿ) 'ಅನನ್ಯಸಾಧನಃ' ಎಂದರೆ ಸ್ವಪ್ರಕಾಶನು; 'ವ್ಯಾಪಿಯು' ಎಂದರೆ ಅತಿಸೂಕ್ಷ್ಮನಾಗಿರುವದರಿಂದ ಅಚೇತನಗಳಲ್ಲೆಲ್ಲ ಒಳಹೊಗುವ ಸ್ವಭಾವದವನು- ಎಂದರ್ಥ.

## (೨೭) ಪ್ರತ್ಯಕ್ಷವು ದೋಷಮೂಲವೆ, ಶಾಸ್ತ್ರವು ನಿರ್ದೋಷವೆ?

(ಮೂಲ)

ಯದುಕ್ತಮ್, ದೋಷಮೂಲತ್ವೇನ ಅನ್ಯಥಾಸಿದ್ಧಿಸಂಭಾವನಯಾ ಸಕಲಭೇದಾವಲಮ್ಬಿಪ್ರತ್ಯಕ್ಷಸ್ಯ ಶಾಸ್ತ್ರಬಾಧ್ಯತ್ವಮ್ ಇತಿ। ಕೋಽಯಂ ದೋಷಃ?

---

1. ಕೇಶಿಧ್ವಜನು ಖಾಂಡಿಕ್ಯಜನಕನಿಗೆ ಹೇಳಿದ ವಾಕ್ಯವಿದು. ಪೂರ್ಣವಾಕ್ಯವು ಹೀಗಿದೆ: 'ತಚ್ಛ್ರೂಯತಾಮವಿದ್ಯಾಯಾಃ ಸ್ವರೂಪಂ ಕುಲನನ್ದನ ॥ ಅನಾತ್ಮನ್ಯಾತ್ಮಬುದ್ಧಿರ್ಯಾ ಚಾಸ್ವೇ ಸ್ವಮಿತಿ ಯಾ ಮತಿಃ। ಸಂಸಾರತರುಸಂಭೂತಿಬೀಜಮೇತದ್ದ್ವಿಧಾ ಸ್ಥಿತಮ್' ॥ ಇದರ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. ಒಂದನ್ನೊಂದೆಂದು ತಿಳಿಯುವಾಗ 'ಇದು ಬೆಳ್ಳಿಯೇ' ಎಂಬಂತೆ 'ಇದು ಜ್ಞಪ್ತಿಯೇ' ಎಂದಾಗಬೇಕಾಗಿತ್ತು ಎಂದು ಭಾವ. ಅಧ್ಯಾಸದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

–ಇತಿ ವಕ್ತವ್ಯಮ್, ಯನ್ಮೂಲತಯಾ ಪ್ರತ್ಯಕ್ಷಸ್ಯ ಅನ್ಯಥಾಸಿದ್ಧಿಃ । ಅನಾದಿ ಭೇದವಾಸನೈವ ಹಿ ದೋಷಃ – ಇತಿ ಚೇತ್, ಭೇದವಾಸನಾಯಾಸ್ತಿಮಿರಾದಿವದ್ ಯಥಾವಸ್ಥಿತವಸ್ತುವಿಪರೀತಜ್ಞಾನಹೇತುತ್ವಂ ಕಿಮನ್ಯತ್ರ ಜ್ಞಾತಪೂರ್ವಮ್ ? ಅನೇನೈವ ಶಾಸ್ತ್ರವಿರೋಧೇನ ಜ್ಞಾಸ್ಯತ ಇತಿ ಚೇತ್ ನ, ಅನ್ಯೋನ್ಯಾಶ್ರಯಣಾತ್ । ಶಾಸ್ತ್ರಸ್ಯ ನಿರಸ್ತನಿಖಿಲವಿಶೇಷವಸ್ತುಬೋಧಿತ್ವನಿಶ್ಚಯೇ ಸತಿ ಭೇದವಾಸನಾಯಾ ದೋಷತ್ವನಿಶ್ಚಯಃ, ಭೇದವಾಸನಾಯಾಃ ದೋಷತ್ವನಿಶ್ಚಯೇ ಸತಿ ಶಾಸ್ತ್ರಸ್ಯ ನಿರಸ್ತನಿಖಿಲವಿಶೇಷವಸ್ತುಬೋಧಿತ್ವನಿಶ್ಚಯಃ – ಇತಿ । ಕಿಂ ಚ ಯದಿ ಭೇದವಾಸನಾಮೂಲತ್ವೇನ ಪ್ರತ್ಯಕ್ಷಸ್ಯ ವಿಪರೀತಾರ್ಥತ್ವಮ್, ಶಾಸ್ತ್ರಮಪಿ ತನ್ಮೂಲತ್ವೇನ ತಥೈವ ಸ್ಯಾತ್ ॥

ಅಥೋಚ್ಯೇತ– ದೋಷಮೂಲತ್ವೇಽಪಿ ಶಾಸ್ತ್ರಸ್ಯ ಪ್ರತ್ಯಕ್ಷಾವಗತಸಕಲಭೇದನಿರಸನಜ್ಞಾನಹೇತುತ್ವೇನ ಪರತ್ವಾತ್ ತತ್ ಪ್ರತ್ಯಕ್ಷಸ್ಯ ಬಾಧಕಮಿತಿ, ತನ್ನ । ದೋಷಮೂಲತ್ವೇ ಜ್ಞಾತೇ ಸತಿ ಪರತ್ವಮಕಿಞ್ಚಿತ್ಕರಮ್ । ರಜ್ಜುಸರ್ಪಜ್ಞಾನನಿಮಿತ್ತಭಯೇ ಸತಿ ಭ್ರಾನ್ತೋಽಯಮಿತಿ ಪರಿಜ್ಞಾತೇನ ಕೇನಚಿತ್ 'ನಾಯಂ ಸರ್ಪೋ ಮಾ ಭೈಷೀಃ' ಇತ್ಯುಕ್ತೇಽಪಿ ಭಯಾನಿವೃತ್ತಿದರ್ಶನಾತ್ । ಶಾಸ್ತ್ರಸ್ಯ ಚ ದೋಷಮೂಲತ್ವಂ ಶ್ರವಣವೇಲಾಯಾಮೇವ ಜ್ಞಾತಮ್ । ಶ್ರವಣಾವಗತನಿಖಿಲಭೇದೋಪಮರ್ದಿಬ್ರಹ್ಮಾತ್ಮೈಕತ್ವವಿಜ್ಞಾನಾಭ್ಯಾಸರೂಪತ್ವಾನ್ಮನನಾದೇಃ ॥

(ಅರ್ಥ)

ಇನ್ನು ದೋಷಮೂಲವಾಗಿರುವದರಿಂದ, ಅನ್ಯಥಾಸಿದ್ಧಿಯೂ ಸಂಭಾವಿತವಾಗಿರುವದರಿಂದ ಭೇದಾವಲಂಬಿಯಾದ ಪ್ರತ್ಯಕ್ಷವೆಲ್ಲವೂ ಶಾಸ್ತ್ರಬಾಧ್ಯ –ಎಂದೆಯಲ್ಲ,[1] ಆ ದೋಷವು ಯಾವದು ? ಎಂಬುದನ್ನು (ನೀನು) ಹೇಳಬೇಕಾಗಿದೆ.

(ಪೂರ್ವಪಕ್ಷಿ) :– ಯಾವದರ ಕಾರಣದಿಂದ ಪ್ರತ್ಯಕ್ಷವು ಬೇರೆಯ ರೀತಿಯಿಂದಲೂ ಸಿದ್ಧವಾಗುತ್ತದೆಯೋ (ಆ) ಅನಾದಿಭೇದವಾಸನೆಯೇ ದೋಷ.

(ಸಿದ್ಧಾಂತಿ) :– ತಿಮಿರವೇ ಮುಂತಾದದ್ದರಂತೆ ಭೇದವಾಸನೆಯು ವಸ್ತು ಹೇಗಿದೆಯೋ ಅದಕ್ಕೆ ವಿಪರೀತವಾಗಿರುವ ಜ್ಞಾನವನ್ನುಂಟುಮಾಡುವ ಹೇತುವಾಗಿದೆ– ಎಂಬುದು ಮತ್ತೆಲ್ಲಿಯಾದರೂ ಗೊತ್ತಾಗಿದೆಯೊ ?

(ಪೂರ್ವಪಕ್ಷಿ) :– ಈ ಶಾಸ್ತ್ರವಿರೋಧದಿಂದಲೇ (ಹಾಗೆಂದು) ತಿಳಿಯಬಹುದಲ್ಲ ?

---

1. ಹಿಂದೆ (೯೩ನೆಯ ಪುಟದಲ್ಲಿ) ಪೂರ್ವಪಕ್ಷಿ ಹೀಗೆಂದಿರುತ್ತಾನೆ. ಪರಿಶಿಷ್ಟವನ್ನು ನೋಡಿ.

(ಸಿದ್ಧಾಂತಿ) :- ಇದು ಸರಿಯಲ್ಲ, ಏಕೆಂದರೆ ಅನ್ಯೋನ್ಯಾಶ್ರಯವಾಗುತ್ತದೆ. ಶಾಸ್ತ್ರವು ಯಾವ ವಿಶೇಷವೂ ಇಲ್ಲದ ವಸ್ತುವನ್ನು ಬೋಧಿಸುತ್ತದೆ ಎಂದು ನಿಶ್ಚಯವಾದರೆ ಭೇದವಾಸನೆಯು ದೋಷವೆಂಬ ನಿಶ್ಚಯವಾಗುತ್ತದೆ, ಭೇದ ವಾಸನೆಯು ದೋಷ ಎಂದು ನಿಶ್ಚಯವಾದರೆ ಶಾಸ್ತ್ರವು ಯಾವ ವಿಶೇಷವೂ ಇಲ್ಲದ ವಸ್ತುವನ್ನು ಬೋಧಿಸುತ್ತದೆಯೆಂಬ ನಿಶ್ಚಯವಾಗುತ್ತದೆ ಎಂದು (ಅನ್ಯೋನ್ಯಾಶ್ರಯ ದೋಷವು ಬಂದೊದಗುತ್ತದೆ). ಇದಲ್ಲದೆ ಭೇದವಾಸನಾಮೂಲಕವಾಗಿರುವದರಿಂದ ಪ್ರತ್ಯಕ್ಷವು ವಿಪರೀತಾರ್ಥವನ್ನು (ತಿಳಿಸುತ್ತದೆ) ಎಂದಾದರೆ ಶಾಸ್ತ್ರವೂ ಆ (ಭೇದ ವಾಸನೆಯ ಮೂಲಕ)ವೇ ಆಗಿರುವದರಿಂದ ಹಾಗೆಯೇ (ವಿಪರೀತಾರ್ಥತ್ವವು ಆದೀತು).[1]

ಇನ್ನು (ನೀನು) ಶಾಸ್ತ್ರವು ದೋಷಮೂಲಕವಾಗಿದ್ದರೂ ಪ್ರತ್ಯಕ್ಷದಿಂದ ನಿಶ್ಚಯವಾಗುವ ಸಕಲಭೇದಗಳನ್ನೂ ಬಾಧಿಸುವ ಜ್ಞಾನಕ್ಕೆ ಹೇತುವಾಗಿರುವದ ರಿಂದ, (ಅದು) ಪರ(ಪ್ರಮಾಣ)ವಾಗಿದೆಯಾಗಿ ಪ್ರತ್ಯಕ್ಷಕ್ಕೆ ಬಾಧಕವು– ಎಂದು ಹೇಳಬಹುದು. ಅದು ಸರಿಯಲ್ಲ, ಏಕೆಂದರೆ ದೋಷಮೂಲಕವಾಗಿದೆ ಎಂದು ನಿಶ್ಚಿತವಾದರೆ (ಶಾಸ್ತ್ರವು) ಪರವಾಗಿದೆ ಎನ್ನುವದರಿಂದ ಯಾವ ಹೆಚ್ಚುಕಡಿಮೆಯೂ ಆಗುವಂತಿಲ್ಲ. ಹಗ್ಗದ ಹಾವಿನನಿಮಿತ್ತದಿಂದ ಅಂಜಿಕೆಯಾಗಿರುವಲ್ಲಿ 'ಇವನು ಭ್ರಾಂತನು' ಎಂದು ನಿಶ್ಚಯವಾಗಿರುವ ಯಾವನಾದರೊಬ್ಬನು 'ಇದು ಹಾವಲ್ಲ, ಹೆದರದಿರು' ಎಂದು ಹೇಳಿದರೂ ಅಂಜಿಕೆಯು ಹೋಗುವದಿಲ್ಲವೆಂಬುದು ಕಂಡಿದೆ. ಶಾಸ್ತ್ರವು ದೋಷಮೂಲಕವಾಗಿದೆ– ಎಂಬುದು ಶ್ರವಣವೇಳೆಯಲ್ಲಿಯೇ ಗೊತ್ತಾಗಿ ಬಿಟ್ಟಿರುತ್ತದೆ. **ಮನನವೇ** ಮುಂತಾದದ್ದು ಶ್ರವಣದಿಂದ ನಿಶ್ಚಿತವಾಗಿರುವ ಭೇದ ನೆಲ್ಲವನ್ನೂ ಬಾಧಿಸುವ ಬ್ರಹ್ಮಾತ್ಮೈಕತ್ವವಿಜ್ಞಾನದ ಅಭ್ಯಾಸರೂಪವಾಗಿಯೇ ಇರುವದರಿಂದ (ಅದೂ) ಫಲಕಾರಿಯಾಗಲಾರದು.[2]

(ಮೂಲ)

ಅಪಿ ಚ 'ಇದಂ ಶಾಸ್ತ್ರಮ್; ಏತಚ್ಚಾಸಂಭಾವ್ಯಮಾನದೋಷಮ್; ಪ್ರತ್ಯಕ್ಷಂ ತು ಸಂಭಾವ್ಯಮಾನದೋಷಮ್ ಇತಿ ಕೇನಾವಗತಂ ತ್ವಯಾ ? ನ ತಾವತ್ ಸ್ವತಃಸಿದ್ಧಾ ನಿರ್ಧೂತನಿಖಿಲವಿಶೇಷಾ ಅನುಭೂತಿರಿಮಮರ್ಥಮ್ ಅವಗಮಯತಿ; ತಸ್ಯಾಃ ಸರ್ವವಿಷಯವಿರಕ್ತತ್ವಾತ್ । ಶಾಸ್ತ್ರಪಕ್ಷಪಾತವಿರಹಾಚ್ಚ । ನಾಪ್ಯೈನ್ದ್ರಿಯಕಂ ಪ್ರತ್ಯಕ್ಷಮ್, ದೋಷಮೂಲತ್ವೇನ ವಿಪರೀತಾರ್ಥತ್ವಾತ್ ।

---

1. ಪ್ರತ್ಯಕ್ಷಕ್ಕೆ ಭೇದವಾಸನೆಯು ಕಾರಣವೆಂಬಂತೆಯೇ ಶಾಸ್ತ್ರಕ್ಕೂ ಶಾಸ್ತ್ರ, ಅದು ಹೇಳುವ ವಿಷಯ– ಮುಂತಾದ ಭೇದವು ಇದ್ದೇ ಇರುತ್ತದೆ. ಆದ್ದರಿಂದ ಭೇದವಾಸನೆಯ ಮೂಲಕವಾಗಿರುವ ಶಾಸ್ತ್ರವೂ ವಿಪರೀತಾರ್ಥವನ್ನು ಹೇಳುತ್ತದೆ ಎಂದಾದೀತು– ಎಂದರ್ಥ.

2. ಮನನದ ಈ ಲಕ್ಷಣವನ್ನು ಯಾವ ಅದ್ವೈತಗ್ರಂಥದಲ್ಲಿ ಒಪ್ಪಿದೆಯೋ ತಿಳಿಯದು.

ತನ್ಮೂಲತ್ವಾದೇವ ಸಾನ್ಯಾನ್ಯಪಿ (ಪ್ರಮಾಣಾನಿ) | ಅತಃ ಸ್ವಪಕ್ಷಸಾಧನ ಪ್ರಮಾಣಾನಭ್ಯುಪಗಮಾನ್ನ ಸ್ವಾಭಿಮತಾರ್ಥಸಿದ್ಧಿಃ ||

ನನು ವ್ಯಾವಹಾರಿಕಪ್ರಮಾಣಪ್ರಮೇಯವ್ಯವಹಾರೋಽಸ್ಮಾಕಮಪ್ಯಸ್ತ್ಯೇವ | ಕೋಽಯಂ ವ್ಯಾವಹಾರಿಕೋ ನಾಮ ? ಆಪಾತಪ್ರತೀತಿಸಿದ್ಧೋ[1] ಯುಕ್ತಿಭಿರ್ನಿರೂಪಿತೋ ನ ತಥಾ ಅವಸ್ಥಿತಃ– ಇತಿ ಚೇತ್, ಕಿಂ ತೇನ ಪ್ರಯೋಜನಮ್ ? ಪ್ರಮಾಣತಯಾ ಪ್ರತಿಪನ್ನೇಽಪಿ ಯೌಕ್ತಿಕಬಾಧಾದೇವ ಪ್ರಮಾಣಕಾರ್ಯಾಭಾವಾತ್| ಅಥೋಚ್ಯೇತ, ಶಾಸ್ತ್ರಪ್ರತ್ಯಕ್ಷಯೋರ್ದ್ವಯೋರಪ್ಯವಿದ್ಯಾಮೂಲತ್ವೇಽಪಿ ಪ್ರತ್ಯಕ್ಷವಿಷಯಸ್ಯ ಶಾಸ್ತ್ರೇಣ ಬಾಧೋ ದೃಶ್ಯತೇ ; ಶಾಸ್ತ್ರವಿಷಯಸ್ಯ ಸದದ್ವಿತೀಯ ಬ್ರಹ್ಮಣಃ ಪಶ್ಚಾತ್ತನಬಾಧಾದರ್ಶನೇನ ನಿರ್ವಿಶೇಷಾನುಭೂತಿಮಾತ್ರಂ ಬ್ರಹ್ಮೈವ ಪರಮಾರ್ಥಃ ಇತಿ, ತದಯುಕ್ತಮ್, ಅಬಾಧಿತಸ್ಯಾಪಿ ದೋಷಮೂಲಸ್ಯ ಅಪಾರಮಾರ್ಥ್ಯನಿಶ್ಚಯಾತ್ ||

ಏತದುಕ್ತಂ ಭವತಿ | ಯಥಾ ಸಕಲೇತರಕಾಚಾದಿದೋಷರಹಿತಪುರುಷಾನ್ತರಾಗೋಚರಗಿರಿಗುಹಾಸು ವಸತಸ್ತೈಮಿರಿಕಜನಸ್ಯ ಅಜ್ಞಾತಸ್ವತಿಮಿರಸ್ಯ ಸರ್ವಸ್ಯ ತಿಮಿರದೋಷಾವಿಶೇಷೇಣ ದ್ವಿಚನ್ದ್ರಜ್ಞಾನಮ್ ಅವಿಶಿಷ್ಟಂ ಜಾಯತೇ | ನ ತತ್ರ ಬಾಧಕಪ್ರತ್ಯಯೋಽಸ್ತೀತಿ ನ ತನ್ಮಿಥ್ಯಾ ನ ಭವತೀತಿ ತದ್ವಿಷಯಭೂತಂ ದ್ವಿಚನ್ದ್ರತ್ವಮಪಿ ಮಿಥ್ಯೈವ | ದೋಷೋ ಹಿ ಅಯಥಾರ್ಥಜ್ಞಾನಹೇತುಃ | ತಥಾ ಬ್ರಹ್ಮಜ್ಞಾನಮ್ ಅವಿದ್ಯಾಮೂಲತ್ವೇನ ಬಾಧಕಜ್ಞಾನರಹಿತಮಪಿ ಸ್ವವಿಷಯೇಣ ಬ್ರಹ್ಮಣಾ ಸಹ ಮಿಥ್ಯೈವ– ಇತಿ | ಭವನ್ತಿ ಚಾತ್ರ ಪ್ರಯೋಗಾಃ- ವಿವಾದಾಧ್ಯಾಸಿತಂ ಬ್ರಹ್ಮ ಮಿಥ್ಯಾ, ಅವಿದ್ಯಾವತ ಉತ್ಪನ್ನಜ್ಞಾನವಿಷಯತ್ವಾತ್, ಪ್ರಪಞ್ಚವತ್ | ಬ್ರಹ್ಮ ಮಿಥ್ಯಾ, ಜ್ಞಾನವಿಷಯತ್ವಾತ್, ಪ್ರಪಞ್ಚವತ್ | ಬ್ರಹ್ಮ ಮಿಥ್ಯಾ, ಅಸತ್ಯಹೇತುಜನ್ಯಜ್ಞಾನವಿಷಯತ್ವಾತ್, ಪ್ರಪಞ್ಚವದೇವ ||

(ಅರ್ಥ)

ಇದೂ ಅಲ್ಲದೆ, 'ಇದು ಶಾಸ್ತ್ರವು, ಇದರಲ್ಲಿ ದೋಷವು ಸಂಭಾವಿತವಾಗಿಲ್ಲ[2] ; ಪ್ರತ್ಯಕ್ಷವಾದರೊ, ಸಂಭಾವಿತದೋಷವುಳ್ಳದ್ದು' ಎಂದು ನಿನಗೆ ಏತರಿಂದ ಗೊತ್ತಾಯಿತು ? ಮೊದಲನೆಯದಾಗಿ ಸ್ವತಃಸಿದ್ಧವಾದ ಯಾವ ವಿಶೇಷವೂ ಇಲ್ಲದ ಅನುಭೂತಿಯು ಈ ಅರ್ಥವನ್ನು ಗೊತ್ತುಪಡಿಸುತ್ತದೆ (ಎನ್ನು)ವದಕ್ಕಿಲ್ಲ ; ಏಕೆಂದರೆ ಅದು ಎಲ್ಲಾ ವಿಷಯಗಳಲ್ಲಿಯೂ ವಿರಕ್ತಿಯುಳ್ಳದ್ದಾಗಿದೆ[3] ; ಶಾಸ್ತ್ರದಲ್ಲಿ

1. 'ಪ್ರತೀತಸಿದ್ಧೋ' ಎಂದು ಪಾ||

2. 'ಶಾಸ್ತ್ರವು ನಿರ್ದೋಷ'ವೆಂಬ ವಿಷಯಕ್ಕೆ ವಾದಿಗಳ ಮತಭೇದವನ್ನು ಪರಿಶಿಷ್ಟದಲ್ಲಿ ನೋಡಿ.

3. ಅನುಭೂತಿಯು ಎಲ್ಲವನ್ನೂ ಒಂದೇಸಮನಾಗಿ ಬೆಳಗಿತೋರಿಸುತ್ತದೆ.

ಪಕ್ಷಪಾತವುಳ್ಳದ್ದೂ ಆಗಿಲ್ಲ.[1] ಇಂದ್ರಿಯದಿಂದಾಗುವ ಪ್ರತ್ಯಕ್ಷವೂ ಗೊತ್ತುಪಡಿಸಿ ಕೊಡಲಾರದು ; ಏಕೆಂದರೆ (ಅದು) ದೋಷಮೂಲವಾಗಿರುವದರಿಂದ ವಿಪರೀತ ವಾದ ಅರ್ಥವನ್ನು ತಿಳಿಸಿಕೊಡುವದಾಗಿರುತ್ತದೆ. ಆ (ಪ್ರತ್ಯಕ್ಷ)ಮೂಲಕವಾಗಿರು ವದರಿಂದಲೇ ಮಿಕ್ಕ ಪ್ರಮಾಣಗಳೂ ಗೊತ್ತುಪಡಿಸಲಾರವು. ಆದ್ದರಿಂದ ನಿನ್ನ ಪಕ್ಷವನ್ನು ಸಾಧಿಸುವ ಪ್ರಮಾಣವನ್ನೇ ಒಪ್ಪದೆಇರುವದರಿಂದ ನಿನಗೆ ಬೇಕಾಗಿರು ವದು[2] ಸಿದ್ಧವಾಗುವಂತಿಲ್ಲ.

(ಪೂರ್ವಪಕ್ಷಿ) ;– **ವ್ಯಾವಹಾರಿಕವಾದ ಪ್ರಮಾಣಪ್ರಮೇಯವ್ಯವ-ಹಾರವು**[3] ನಮಗೂ ಇದ್ದೇಇದೆಯಲ್ಲ !

(ಸಿದ್ಧಾಂತಿ) :– ಈ ವ್ಯಾವಹಾರಿಕವಾದದ್ದೆಂಬುದು ಯಾವದು ?

(ಪೂರ್ವಪಕ್ಷಿ) :– ತಟ್ಟನೆ ನೋಡಿದರೆ ತೋರುವದರಿಂದ ಸಿದ್ಧವಾಗಿ, ಯುಕ್ತಿಗಳಿಂದ ಪರೀಕ್ಷಿಸಿದಾಗ ಹಾಗೆಂದು ಸಿದ್ಧವಾಗದೆ ಇರುವದೇ (ವ್ಯಾವ-ಹಾರಿಕವು).

(ಸಿದ್ಧಾಂತಿ) :– ಅದರಿಂದೇನು ಪ್ರಯೋಜನ ? ಪ್ರಮಾಣವೆಂದು ಗೊತ್ತಾದ ಮೇಲೂ ಯುಕ್ತಿಯಿಂದ ಬಾಧಿತವಾಗುವದರಿಂದಲೇ ಪ್ರಮಾಣದ ಕಾರ್ಯವು ಆಗುವದಿಲ್ಲವಾದ್ದರಿಂದ (ಏನೂ ಪ್ರಯೋಜನವಾಗಲಾರದು). ಹೀಗಲ್ಲದೆ ಶಾಸ್ತ್ರ, ಪ್ರತ್ಯಕ್ಷ– ಈ ಎರಡೂ ಅವಿದ್ಯಾಮೂಲಕವೇ ಆಗಿದ್ದರೂ ಪ್ರತ್ಯಕ್ಷವಿಷಯವು ಶಾಸ್ತ್ರ ದಿಂದ ಬಾಧಿತವಾಗುವದು ಕಂಡುಬರುತ್ತದೆ. ಶಾಸ್ತ್ರವಿಷಯವಾದ ಸದ್ರೂಪವಾದ ಅದ್ವಿತೀಯಬ್ರಹ್ಮವು ಆ ಬಳಿಕ ಬಾಧಿತವಾಗುವದು ಕಂಡುಬರುವದಿಲ್ಲವಾದ್ದರಿಂದ ನಿರ್ವಿಶೇಷಾನುಭೂತಿಮಾತ್ರವಾದ ಬ್ರಹ್ಮವು ಪರಮಾರ್ಥವೇ ಎಂದು ಹೇಳುವ ದಾದರೆ, ಅದು ಯುಕ್ತವಲ್ಲ : ಏಕೆಂದರೆ ಅಬಾಧಿತವಾಗಿದ್ದರೂ ದೋಷಮೂಲಕ ವಾಗಿರುವದು ಪರಮಾರ್ಥವಲ್ಲವೆಂದು ನಿಶ್ಚಿತವಾಗಿರುತ್ತದೆ.

(ಇಲ್ಲಿ) ಇಷ್ಟನ್ನು ಹೇಳಿದಂತಾಯಿತು; ಕಣ್ಣುಪರೆಯೇ ಮುಂತಾದ ದೋಷ ಗಳಿಲ್ಲದ ಮಿಕ್ಕ ಜನರು ಯಾರಿಗೂ ಗೋಚರವಲ್ಲದ ಬೆಟ್ಟದ ಗವಿಗಳಲ್ಲಿ ವಾಸ ಮಾಡಿಕೊಂಡಿರುವ, ತಮಗೆ ಪರೆಯಿದೆ ಎಂಬುದನ್ನರಿಯದ ತೈಮಿರಿಕಜನಕ್ಕೆಲ್ಲ

---

1. ಶಾಸ್ತ್ರವು ಪ್ರಮಾಣವೆಂದೇನೂ ಹೇಳುವದಿಲ್ಲ.

2. ಶಾಸ್ತ್ರವನ್ನುಳಿದ ಮಿಕ್ಕ ಪ್ರಮಾಣಗಳು ದೋಷಮೂಲಕವೆಂಬುದು ನಿನಗೆ ಬೇಕಾಗಿದೆ, ಅದೇ ಸಿದ್ಧಿಸುವದಿಲ್ಲ.

3. ಪರಮಾರ್ಥದೃಷ್ಟಿಯಿಂದ ನಾವು ಪ್ರಮಾಣವ್ಯವಹಾರವನ್ನು ತಿರಸ್ಕರಿಸಿದರೂ ವ್ಯಾವಹಾರಿಕದೃಷ್ಟಿಯಿಂದ ಅದನ್ನು ಒಪ್ಪುತ್ತೇವೆ– ಎಂದರ್ಥ. ಇದರ ವಿಷಯಕ್ಕೆ ಪರಿಶಿಷ್ಟ ವನ್ನು ನೋಡಿ.

ಆ ಪರೆಯ ದೋಷವು ಸಮವಾಗಿಯೇ ಇರುವದರಿಂದ ಇಬ್ಬರು ಚಂದ್ರರ ಜ್ಞಾನವು ಸಮಾನವಾಗಿಯೇ ಉಂಟಾಗುತ್ತದೆ ; ಅಲ್ಲಿ ಬಾಧಕಪ್ರತ್ಯಯವು ಯಾವದೂ ಇಲ್ಲವೆಂಬ ಕಾರಣದಿಂದ ಅದೇನೂ ಮಿಥ್ಯೆಯಲ್ಲದೆಹೋಗುವದಿಲ್ಲವಾಗಿ ಆ (ಜ್ಞಾನಕ್ಕೆ) ವಿಷಯವಾಗಿರುವ ದ್ವಿಚಂದ್ರತ್ವವೂ ಮಿಥ್ಯೆಯೇ. ಅಯಥಾರ್ಥ ಜ್ಞಾನಕ್ಕೆ ದೋಷವೇ ಅಲ್ಲವೆ, ಕಾರಣ ? ಹಾಗೆಯೇ ಬ್ರಹ್ಮಜ್ಞಾನವು ಅವಿದ್ಯಾ ಮೂಲಕವಾಗಿರುವದರಿಂದ (ತನಗೆ) ಬಾಧಕಜ್ಞಾನವಿಲ್ಲದಿದ್ದರೂ ತನಗೆ ವಿಷಯ ವಾಗಿರುವ ಬ್ರಹ್ಮದೊಡನೆಯೇ ಮಿಥ್ಯೆಯೇ ಆಗಿರುತ್ತದೆ. ಈ ವಿಷಯದಲ್ಲಿ (ಅನುಮಾನ)ಪ್ರಯೋಗಗಳೂ ಇವೆ : (ಹೇಗೆಂದರೆ) : (೧) ವಿವಾದಕ್ಕೆ ವಿಷಯ ವಾದ ಬ್ರಹ್ಮವು ಮಿಥ್ಯೆ ; ಏಕೆಂದರೆ (ಅದು) ಪ್ರಪಂಚದಂತೆ ಅವಿದ್ಯಾವಂತನಿಗೆ ಉಂಟಾದ ಜ್ಞಾನಕ್ಕೆ ವಿಷಯವಾಗಿರುತ್ತದೆ; (೨) ಬ್ರಹ್ಮವು ಮಿಥ್ಯೆ, ಏಕೆಂದರೆ (ಅದು) ಜ್ಞಾನಕ್ಕೆ ವಿಷಯವಾಗಿರುತ್ತದೆ ; ಪ್ರಪಂಚವೇ ಇಲ್ಲಿ ದೃಷ್ಟಾಂತ. (೩) ಬ್ರಹ್ಮವು ಮಿಥ್ಯೆ ; ಏಕೆಂದರೆ (ಅದು) ಅಸತ್ಯವಾದ ಹೇತುವಿನಿಂದ ಹುಟ್ಟಿದ ಜ್ಞಾನಕ್ಕೆ ವಿಷಯವಾಗಿದೆ ; ಇದಕ್ಕೂ ಪ್ರಪಂಚವೇ ದೃಷ್ಟಾಂತ.[1]

## (೨೮) ಅಸತ್ಯಕಾರಣದಿಂದ ಪರಮಾರ್ಥಜ್ಞಾನವುಂಟಾಗಲಾರದು

(ಮೂಲ)

ನ ಚ ವಾಚ್ಯಮ್ ಸ್ವಾಪ್ನಸ್ಯ ಹಸ್ತ್ಯಾದಿವಿಜ್ಞಾನಸ್ಯ ಅಸತ್ಯಸ್ಯ ಪರಮಾರ್ಥ ಶುಭಾ ಶುಭಪ್ರತಿಪತ್ತಿಹೇತುಭಾವವತ್ ಅವಿದ್ಯಾಮೂಲತ್ವೇನ ಅಸತ್ಯಸ್ಯಾಪಿ ಶಾಸ್ತ್ರಸ್ಯ ಪರಮಾರ್ಥಭೂತಬ್ರಹ್ಮವಿಷಯಪ್ರತಿಪತ್ತಿಹೇತುಭಾವೋ ನ ವಿರುದ್ಧಃ – ಇತಿ | ಸ್ವಾಪ್ನಜ್ಞಾನಸ್ಯಾಸತ್ಯತ್ವಾಭಾವಾತ್ | ತತ್ರ ಹಿ ವಿಷಯಾಣಾಮೇವ ಮಿಥ್ಯಾತ್ವಮ್ | ತೇಷಾಮೇವ ಹಿ ಬಾಧೋ ದೃಶ್ಯತೇ, ನ ಜ್ಞಾನಸ್ಯ | ನ ಹಿ ಮಯಾ ಸ್ವಪ್ನವೇಲಾ-ಯಾಮ್ 'ಅನುಭೂತಂ ಜ್ಞಾನಮಪಿ ನ ವಿದ್ಯತ ಇತಿ ಕಸ್ಯಚಿದಪಿ ಪ್ರತ್ಯಯೋ ಜಾಯತೇ | ದರ್ಶನಂ ತು ವಿದ್ಯತೇ, ಅರ್ಥಾ ನ ಸನ್ತಿ' – ಇತಿ ಹಿ ಬಾಧಕ ಪ್ರತ್ಯಯಃ । ಮಾಯಾವಿನೋ ಮನ್ತ್ರೌಷಧಾದಿಪ್ರಭವಂ ಮಾಯಾಮಯಂ ಜ್ಞಾನಂ ಸತ್ಯಮೇವ ಪ್ರೀತೇರ್ಭಯಸ್ಯ ಚ ಹೇತುಃ ; ತತ್ರಾಪಿ ಜ್ಞಾನಸ್ಯಾಬಾಧಿತ-ತ್ವಾತ್ | ವಿಷಯೇನ್ದ್ರಿಯಾದಿದೋಷಜನ್ಯಂ ರಜ್ಜ್ವಾದೌ ಸರ್ಪಾದಿವಿಜ್ಞಾನಂ ಸತ್ಯ ಮೇವ ಭಯಾದಿಹೇತುಃ | ಸತ್ಯೈವ ಅದಷ್ಟೇऽಪಿ ಸ್ವಾತ್ಮನಿ ಸರ್ಪಸಂನಿಧಾನಾದ್ ದಷ್ಟಬುದ್ಧಿಃ । ಸತ್ಯೈವ ಶಙ್ಕಾವಿಷಬುದ್ಧಿರ್ಮರಣಹೇತುಭೂತಾ | ವಸ್ತುಭೂತ ಏವ ಜಲಾದೌ ಮುಖಾದಿಪ್ರತಿಭಾಸೋ ವಸ್ತುಭೂತಮುಖಗತವಿಶೇಷನಿಶ್ಚಯ ಹೇತುಃ । ಏಷಾಂ ಸಂವೇದನಾನಾಮ್ ಉತ್ಪತ್ತಿಮತ್ತ್ವಾತ್ | ಅರ್ಥಕ್ರಿಯಾಕಾರಿ

1. ಈ ಅನುಮಾನಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ತ್ವಾಚ್ಚ ಸತ್ಯತ್ವಮ್ ಅವಸೀಯತೇ । ಹಸ್ತ್ಯಾದೀನಾಮಭಾವೇಽಪಿ ಕಥಂ ತದ್ಬುದ್ಧಯಃ ಸತ್ಯಾ ಭವನ್ತೀತಿ ಚೇತ್, ನೈತತ್; ಬುದ್ಧೀನಾಂ ಸಾಲಮ್ಬನತ್ವಮಾತ್ರನಿಯಮಾತ್ । ಅರ್ಥಸ್ಯ ಪ್ರತಿಭಾಸಮಾನತ್ವಮೇವ ಹಿ ಆಲಮ್ಬನತ್ವೇ ಅಪೇಕ್ಷಿತಮ್, ಪ್ರತಿಭಾಸಮಾನತಾ ಚಾಸ್ಯೈವ ದೋಷವಶಾತ್ । ಸ ತು ಬಾಧಿತೋಽಸತ್ಯ ಇತ್ಯವಸೀಯತೇ । ಅಬಾಧಿತಾ ಹಿ ಬುದ್ಧಿಃ ಸತ್ಯೈವೇತ್ಯುಕ್ತಮ್ ॥

(ಅರ್ಥ)

ಕನಸಿನ ಆನೆಯೇ ಮುಂತಾದದ್ದರ ಜ್ಞಾನವು ಅಸತ್ಯವಾದರೂ ಪರಮಾರ್ಥವಾದ ಶುಭದ ಅಥವಾ ಅಶುಭದ ಪ್ರಾಪ್ತಿಗೆ ಹೇತುವಾಗಿರುವಂತೆ, ಶಾಸ್ತ್ರವು ಅಸತ್ಯವಾಗಿದ್ದರೂ ಪರಮಾರ್ಥವಾದ ಬ್ರಹ್ಮವಿಷಯದ ಜ್ಞಾನಕ್ಕೆ ಹೇತುವಾಗಿರುವದು ವಿರುದ್ಧವಲ್ಲ–ಎಂದೂ ಹೇಳಬಾರದು. ಏಕೆಂದರೆ (೧) ಕನಸಿನ ಜ್ಞಾನವು ಅಸತ್ಯವೆಂಬುದಿಲ್ಲ.[1] ಅಲ್ಲಿ ವಿಷಯಗಳು ಮಾತ್ರವೇ ಮಿಥ್ಯೆ ; ಅವುಗಳಿಗೆ ಬಾಧೆಯಾಗುತ್ತದೆಯೇ ಹೊರತು ಜ್ಞಾನಕ್ಕೆ ಬಾಧೆಯಾಗುವದಿಲ್ಲವಷ್ಟೆ? 'ಕನಸಿನ ಕಾಲಕ್ಕೆ ನಾನು ಅನುಭವಿಸಿದ ಜ್ಞಾನವೂ ಇಲ್ಲ' ಎಂದು ಯಾರಿಗೂ ಪ್ರತ್ಯಯವುಂಟಾಗುವದಿಲ್ಲವಷ್ಟೆ? 'ಕಂಡದ್ದುಂಟು, ಪದಾರ್ಥಗಳು ಇಲ್ಲ' ಎಂದಲ್ಲವೆ, ಬಾಧಕಪ್ರತ್ಯಯ ?

(೨) ಮಾಯಾವಿಯ ಮಂತ್ರ, ಔಷಧ– ಮುಂತಾದದ್ದರಿಂದ ಉಂಟಾದ ಮಾಯಾಮಯವಾದ ಜ್ಞಾನವು[2] ಸತ್ಯವೇ ಆಗಿದ್ದು ಪ್ರೀತಿಗೂ ಹೆದರಿಕೆಗೂ ಕಾರಣವಾಗಿರುತ್ತದೆ ; ಏಕೆಂದರೆ ಅಲ್ಲಿಯೂ ಜ್ಞಾನವು ಅಬಾಧಿತವಾಗಿರುತ್ತದೆ. ವಿಷಯೇಂದ್ರಿಯದೋಷಗಳಿಂದ (೩) ಹಗ್ಗವೇ ಮುಂತಾದವುಗಳಲ್ಲಿ ಉಂಟಾಗುವ ಹಾವೇ ಮುಂತಾದದ್ದರ ಜ್ಞಾನವು ಸತ್ಯವೇ ಆಗಿದ್ದು ಅಂಜಿಕೆಯೇ ಮುಂತಾದದ್ದಕ್ಕೆ ಕಾರಣವಾಗಿರುತ್ತದೆ. ತಾನು ಕಚ್ಚಲ್ಪಡದೆ ಇದ್ದರೂ ಹಾವಿನ ಸಂನಿಧಾನದಿಂದ ಕಚ್ಚಲ್ಪಟ್ಟೆ– ಎಂದಾಗುವ ಜ್ಞಾನವು ಸತ್ಯವೇ ಆಗಿದ್ದು, (೪) ಶಂಕಾವಿಷದ ಜ್ಞಾನವು ಸತ್ಯವೇ ಆಗಿದ್ದು ಸಾವಿಗೆ ಕಾರಣವಾಗಿರುತ್ತದೆ. (೫) ಜಲಾದಿಯಲ್ಲಿ ಮುಖವೇ ಮುಂತಾದದ್ದರ ತೋರಿಕೆಯು ಸತ್ಯವೇ ಆಗಿದ್ದು ವಸ್ತುವಾಗಿರುವ ಮುಖದಲ್ಲಿರುವ ವಿಶೇಷ(ರೂಪವನ್ನು) ನಿಶ್ಚಯಿಸುವದಕ್ಕೆ ಹೇತುವಾಗಿರುತ್ತದೆ. **ಈ ಜ್ಞಾನಗಳು ಹುಟ್ಟುವುಳ್ಳವಾಗಿರುವದರಿಂದಲೂ ಅರ್ಥಕ್ರಿಯೆಾಕಾರಿಗಳಾಗಿರುವದರಿಂದಲೂ ಸತ್ಯವೆಂದು ನಿಶ್ಚಯವಾಗುತ್ತದೆ ;** ಆನೆಯೇ ಮುಂತಾದವುಗಳು ಇಲ್ಲದಿದ್ದರೂ ಅವುಗಳ ಅರಿವುಗಳು ಸತ್ಯವಾಗಿರುವವಲ್ಲ,

1. ಜ್ಞಾನವು ಸತ್ಯ, ವಿಷಯವು ಹುಸಿ– ಎಂದು ಭಾವ. ಮಿಥ್ಯಾಜ್ಞಾನ, ಮಿಥ್ಯಾವಿಷಯ– ಇವುಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. ನೋಡಿದ ವಿಷಯವು ಮಾಯಿಕವಾಗಿರುವಂತೆ, ಅದನ್ನು ನೋಡಿದೆನೆಂಬುದೂ ಮಾಯಿಕವೇ. ಅದರೂ ಅದು ಅಬಾಧಿತವಾಗಿರುವದರಿಂದ ಸತ್ಯವೇ– ಎಂದರ್ಥ.

ಅದು ಹೇಗಾಯಿತು ? ಎಂದರೆ ಇದೇನೂ (ತಪ್ಪಲ್ಲ), ಏಕೆಂದರೆ ಅರಿವುಗಳಿಗೆ ವಿಷಯವಿರಬೇಕೆಂಬುದಿಷ್ಟೇ ನಿಯಮ. ಪರಮಾರ್ಥವು (ಜ್ಞಾನಕ್ಕೆ) ವಿಷಯ ವಾಗಿರುವದಕ್ಕೆ ತೋರಿಕೆಯೊಂದೇ ಬೇಕಷ್ಟೆ? (ಆ) ತೋರಿಕೆಯು ದೋಷ ವಶದಿಂದಾಗಿ ಇದ್ದೇಇರುತ್ತದೆ. ಆದರೆ ಅದು ಬಾಧಿತವಾದಬಳಿಕ ಅಸತ್ಯವೆಂದು ನಿಶ್ಚಯವಾಗುತ್ತದೆ. ಅಬಾಧಿತವಾದ ಅರಿವು ಸತ್ಯವೆಂದೇ ಅಲ್ಲವೆ, ಹೇಳಿರುತ್ತೇವೆ ?

(ಮೂಲ)

ರೇಖಯಾ ವರ್ಣಪ್ರತಿಪತ್ತಾವಪಿ ನಾಸತ್ಯಾತ್ ಸತ್ಯಬುದ್ಧಿಃ, ರೇಖಾಯಾಃ ಸತ್ಯತ್ವಾತ್। ನನು ವರ್ಣಾತ್ಮನಾ ಪ್ರತಿಪನ್ನಾ ರೇಖಾ ವರ್ಣಬುದ್ಧಿಹೇತುಃ, ವರ್ಣಾ-ತ್ಮತಾ ತು ಅಸತ್ಯಾ। ನೈವಮ್; ವರ್ಣಾತ್ಮತಾಯಾ ಅಸತ್ಯಾಯಾ ಉಪಾಯತ್ವಾ ಯೋಗಾತ್। ಅಸತೋ ನಿರುಪಾಖ್ಯಸ್ಯ ಹಿ ಉಪಾಯತ್ವಂ ನ ದೃಷ್ಟಮ್, ಅನುಪ ಪನ್ನಂ ಚ। ಅಥ ತಸ್ಯಾಂ ವರ್ಣಬುದ್ಧೇರುಪಾಯತ್ವಮ್, ಏವಂ ತರ್ಹಿ ಅಸತ್ಯಾತ್ ಸತ್ಯಬುದ್ಧಿರ್ನ ಸ್ಯಾತ್। ಬುದ್ಧೇಃ ಸತ್ಯತ್ವಾದೇವ। ಉಪಾಯೋಪೇಯಯೋರೇಕತ್ವ ಪ್ರಸಙ್ಗಶ್ಚ, ಉಭಯೋರ್ವರ್ಣಬುದ್ಧಿತ್ವಾವಿಶೇಷಾತ್। ರೇಖಾಯಾ ಅವಿದ್ಯಮಾನ ವರ್ಣಾತ್ಮನಾ ಉಪಾಯತ್ವೇ ಚ, ಏಕಸ್ಯಾಮೇವ ರೇಖಾಯಾಮ್ ಅವಿದ್ಯಮಾನ ಸರ್ವವರ್ಣಾತ್ಮಕತ್ವಸ್ಯ ಸುಲಭತ್ವಾತ್ ಏಕರೇಖಾದರ್ಶನಾತ್ ಸರ್ವವರ್ಣಪ್ರತಿ ಪತ್ತಿಃ ಸ್ಯಾತ್। ಅಥ ಪಿಣ್ಡವಿಶೇಷೇ ದೇವದತ್ತಾದಿರೂಪಶಬ್ದಸಙ್ಕೇತವತ್ ಚಕ್ಷು ರ್ಗ್ರಾಹ್ಯರೇಖಾವಿಶೇಷೇ, ಶ್ರೋತ್ರಗ್ರಾಹ್ಯವರ್ಣವಿಶೇಷಸಂಕೇತವಶಾತ್ ರೇಖಾ ವಿಶೇಷೋ ವರ್ಣವಿಶೇಷಬುದ್ಧಿಹೇತುಃ – ಇತಿ। ಹನ್ತ ತರ್ಹಿ ಸತ್ಯಾದೇವ ಸತ್ಯ ಪ್ರತಿಪತ್ತಿಃ, ರೇಖಾಯಾಃ ಸಙ್ಕೇತಸ್ಯ ಚ ಸತ್ಯತ್ವಾತ್. ರೇಖಾಗವಯಾದಪಿ ಸತ್ಯಗವಯಬುದ್ಧಿಃ ಸಾದೃಶ್ಯನಿಬನ್ಧನಾ, ಸಾದೃಶ್ಯಂ ಚ ಸತ್ಯಮೇವ ॥

(ಅರ್ಥ)

(೬) ಗೆರೆಯಿಂದ ವರ್ಣದ ಜ್ಞಾನವಾಗುವಾಗಲೂ ಅಸತ್ಯದಿಂದ ಸತ್ಯಜ್ಞಾನ ವಾಗುವದಿಲ್ಲ. ಏಕೆಂದರೆ ಗೆರೆಯು ಸತ್ಯವಾಗಿರುತ್ತದೆ.

(ಶಂಕೆ) :– ವರ್ಣರೂಪದಿಂದ ಅರಿತ ಗೆರೆಯೇ ವರ್ಣಬುದ್ಧಿಗೆ ಹೇತುವಲ್ಲವೆ? (ಅದು) ವರ್ಣರೂಪವೆಂಬುದು ಅಸತ್ಯ. ಅಲ್ಲವೆ ?

(ಪರಿಹಾರ) :– ಹಾಗಲ್ಲ, ಏಕೆಂದರೆ ಅಸತ್ಯವಾದ ವರ್ಣರೂಪತ್ವವು ಉಪಾಯವಲ್ಲ. ಇಂಥದ್ದೆಂದು ಹೇಳುವದಕ್ಕೆ ಬಾರದ ಅಸತ್ತು ಉಪಾಯ ವಾಗಿರುವದೆಂಬುದು ಕಂಡುಬಂದಿಲ್ಲ, ಯುಕ್ತವೂ ಅಲ್ಲ. ಹೀಗಲ್ಲದೆ, ಆ (ವರ್ಣಾ ತ್ಮತ್ವದಲ್ಲಿರುವ) ವರ್ಣಬುದ್ಧಿಯು ಉಪಾಯವಾಗಲಿ! –ಎಂದರೆ, ಹಾಗಾದರೆ ಅಸತ್ಯದಿಂದ ಸತ್ಯಬುದ್ಧಿಯಾಗಲಿಲ್ಲ. ಏಕೆಂದರೆ ಬುದ್ಧಿಯು ಸತ್ಯವೇ ಆಗಿರುತ್ತದೆ.

ಮತ್ತು ಉಪಾಯ, ಉಪೇಯ – ಈ ಎರಡೂ ಒಂದೇ ಎಂದಾಗಿಬಿಡುವದು. ಏಕೆಂದರೆ ಎರಡೂ ವರ್ಣಬುದ್ಧಿಗಳೇ ಆಗಿರುತ್ತವೆ. ಗೆರೆಯು ತನ್ನಲ್ಲಿಲ್ಲದ ವರ್ಣ ರೂಪದಿಂದ ಉಪಾಯವೆಂದರೆ, ಒಂದೇ ಗೆರೆಯಲ್ಲಿ ಇಲ್ಲದ ಸರ್ವವರ್ಣರೂಪಗಳೂ ಇರುವದು ಸುಲಭವಾಗುವದರಿಂದ ಒಂದು ಗೆರೆಯನ್ನು ಕಂಡರೆ ಎಲ್ಲಾ ವರ್ಣಗಳ ಜ್ಞಾನವೂ ಆಗಬಹುದಾಗುವದು. ಹಾಗಲ್ಲದೆ ಒಂದಾನೊಂದು ದೇಹದಲ್ಲಿ 'ದೇವದತ್ತನು' ಮುಂತಾದ ಶಬ್ದಸಂಕೇತದಂತೆ ಚಕ್ಷುರ್ಗ್ರಾಹ್ಯವಾದ ಒಂದಾನೊಂದು ಗೆರೆಯಲ್ಲಿ ಶ್ರೋತ್ರಗ್ರಾಹ್ಯವಾದ ಒಂದಾನೊಂದು ವರ್ಣಸಂಕೇತದ ವಶದಿಂದ ಒಂದೊಂದು ಗೆರೆಯು ಒಂದೊಂದು ವರ್ಣವೆಂಬ ಜ್ಞಾನಕ್ಕೆ ಹೇತುವಾಗಿರುತ್ತದೆ– ಎನ್ನುವದಾದರೆ, ಸರಿ, ಹಾಗಾದರೆ, ಸತ್ಯದಿಂದಲೇ ಸತ್ಯಜ್ಞಾನವಾಗುವದೆಂದಾಗುವದು ; ಏಕೆಂದರೆ ಗೆರೆಯೂ ಸಂಕೇತವೂ ಸತ್ಯವಾಗಿಯೇ ಇರುತ್ತವೆ. ಗೆರೆಯಿಂದ ಬರೆದುತೋರಿಸಿದ ಗವಯದಿಂದ ಸತ್ಯವಾದ ಗವಯದ ಜ್ಞಾನವಾಗುವದು ಸಾದೃಶ್ಯನಿಮಿತ್ತದಿಂದ; ಸಾದೃಶ್ಯವೂ ಸತ್ಯವೇ (ಆಗಿರುತ್ತದೆ).

(ಮೂಲ)

ನ ಚ ಏಕರೂಪಸ್ಯ ಶಬ್ದಸ್ಯ ನಾದವಿಶೇಷೇಣ ಅರ್ಥಭೇದಬುದ್ಧಿಹೇತುತ್ವೇಽಪಿ ಅಸತ್ಯಾತ್ ಸತ್ಯಪ್ರತಿಪತ್ತಿಃ । ನಾನಾನಾದಾಭಿವ್ಯಕ್ತಸ್ಯೈಕಸ್ಯೈವ ಶಬ್ದಸ್ಯ ತತ್ತನ್ನಾದಾಭಿವ್ಯಙ್ಗ್ಯಸ್ವರೂಪೇಣ ಅರ್ಥವಿಶೇಷೈಃ ಸಹ ಸಂಬನ್ಧಗ್ರಹಣವಶಾತ್ ಅರ್ಥಭೇದಬುದ್ಧ್ಯುತ್ಪತ್ತಿಹೇತುತ್ವಾತ್। ಶಬ್ದಸ್ಯೈಕರೂಪತ್ವಮಪಿ ನ ಸಾಧೀಯಃ, ಗಕಾರಾದೇರ್ಬೋಧಕಸ್ಯೈವ ಶ್ರೋತ್ರಗ್ರಾಹ್ಯತ್ವೇನ ಶಬ್ದತ್ವಾತ್। ಅತೋಽಸತ್ಯಾತ್, ಶಾಸ್ತ್ರಾತ್ ಸತ್ಯಬ್ರಹ್ಮವಿಷಯಪ್ರತಿಪತ್ತಿರ್ದುರುಪಪಾದಾ ॥

(ಅರ್ಥ)

ಒಂದೇ ರೂಪವಾದ ಶಬ್ದವು ಆಯಾ ನಾದದ ಭೇದದಿಂದ ಬೇರೆಬೇರೆಯ ಅರ್ಥವನ್ನು ಕೊಡುವದಕ್ಕೆ ಹೇತುವಾಗಿದ್ದರೂ[1] ಅಸತ್ಯದಿಂದ ಸತ್ಯಬುದ್ಧಿಯೂದಂತಲ್ಲ. ಏಕೆಂದರೆ ಬೇರೆಬೇರೆಯ ನಾದದಿಂದ ಅಭಿವ್ಯಕ್ತವಾಗಿರುವ ಶಬ್ದವೊಂದೇ ಆಯಾ ನಾದಭೇದದಿಂದ ಅಭಿವ್ಯಕ್ತವಾಗುವ ಸ್ವರೂಪದಿಂದ ಬೇರೆ ಬೇರೆಯ ಅರ್ಥಗಳೊಡನೆ ಸಂಬಂಧಗ್ರಹಣವಾಗುವದರಿಂದ ಬೇರೆಬೇರೆಯ ಅರ್ಥದ ಬುದ್ಧಿ ಹುಟ್ಟುವದಕ್ಕೆ ಕಾರಣವಾಗಿರುತ್ತದೆ.[2] ಶಬ್ದವು ಏಕರೂಪವಾಗಿದೆ

1. ಏಕರೂಪವಾದ ಶಬ್ದವೆಂದರೆ ಸ್ಫೋಟವು, ಅದನ್ನು ಅಭಿವ್ಯಕ್ತಗೊಳಿಸುವ ನಾದಗಳು ಬಹಳ. ಕತ್ವ, ಖತ್ವ– ಮುಂತಾದ ಭೇದಗಳು ವ್ಯಂಜಕಕ್ಕೆ ಸೇರಿದ್ದರೂ ಶಬ್ದದಲ್ಲಿ ಆರೋಪಿತವಾಗಿ ಬೇರೆಬೇರೆ ಅರ್ಥಕ್ಕೆ ಕಾರಣವು. ಆದ್ದರಿಂದ ಅಸತ್ಯದಿಂದ ಸತ್ಯಜ್ಞಾನವಾಯಿತು– ಎಂಬರ್ಥವನ್ನು ಶ್ರು. ಪ್ರ.ಯಲ್ಲಿ ತೆಗೆದಿದೆ.

2. ಇಲ್ಲಿ ಅಭಿವ್ಯಕ್ತಿವಿಶೇಷವು ಸತ್ಯವೇ ಆದ್ದರಿಂದ ಪೂರ್ವಪಕ್ಷವು ಸರಿಯಲ್ಲ. ಶ್ರು. ಪ್ರ.

ಎಂಬುದೂ ಸರಿಯಲ್ಲ[1]; ಏಕೆಂದರೆ ಗಕಾರವೇ ಮುಂತಾದ ಬೋಧಕವೇ[2] ಶ್ರೋತ್ರಗ್ರಾಹ್ಯವಾಗಿರುವದರಿಂದ ಶಬ್ದವಾಗಿರುತ್ತದೆ. ಆದ್ದರಿಂದ ಅಸತ್ಯವಾದ ಶಾಸ್ತ್ರದಿಂದ ಸತ್ಯಬ್ರಹ್ಮವಿಷಯಕವಾದ ಜ್ಞಾನವು (ಆಗುವದೆಂಬುದನ್ನು) ಉಪಪಾದಿಸುವದು ಆಗಲಾರದು.

## (೨೯) ಶಾಸ್ತ್ರದ ಅಸತ್ಯತ್ವದ ವಿಷಯಕ್ಕೆ ಶಂಕಾಪರಿಹಾರ

(ಮೂಲ)

ನನು ನ ಶಾಸ್ತ್ರಸ್ಯ ಗಗನಕುಸುಮವದಸತ್ಯತ್ವಮ್ । ಪ್ರಾಗದ್ವೈತಜ್ಞಾನಾತ್ ಸದ್ಬುದ್ಧಿಬೋಧ್ಯತ್ವಾತ್ । ಉತ್ಪನ್ನೇ ತತ್ತ್ವಜ್ಞಾನೇ ಹಿ ಅಸತ್ಯತ್ವಂ ಶಾಸ್ತ್ರಸ್ಯ । ನ ತದಾ ಶಾಸ್ತ್ರಂ ನಿರಸ್ತನಿಖಿಲಭೇದಚಿನ್ಮಾತ್ರಬ್ರಹ್ಮಜ್ಞಾನೋಪಾಯಃ । ಯದಾ ಉಪಾಯಃ, ತದಾ ಅಸ್ತ್ಯೇವ ಶಾಸ್ತ್ರಮ್, ಅಸ್ತೀತಿ ಬುದ್ಧೇಃ । ನೈವಮ್ । ಅಸತಿ ಶಾಸ್ತ್ರೇ ಅಸ್ತಿ ಶಾಸ್ತ್ರಮ್ ಇತಿ ಬುದ್ಧೇರ್ಮಿಥ್ಯಾತ್ವಾತ್ । ತತಃ ಕಿಮ್ ? ಇದಂ ತತಃ–ಮಿಥ್ಯಾಭೂತಶಾಸ್ತ್ರಜನ್ಯಜ್ಞಾನಸ್ಯ ಮಿಥ್ಯಾತ್ವೇನ ತದ್ವಿಷಯಸ್ಯಾಪಿ ಬ್ರಹ್ಮಣೋ ಮಿಥ್ಯಾತ್ವಮ್। ಯಥಾ ಧೂಮಬುದ್ಧ್ಯಾ ಗೃಹೀತಬಾಷ್ಪಜನ್ಯಾಗ್ನಿಜ್ಞಾನಸ್ಯ ಮಿಥ್ಯಾತ್ವೇನ ತದ್ವಿಷಯಸ್ಯಾಗ್ನೇರಪಿ ಮಿಥ್ಯಾತ್ವಮ್ । ಪಶ್ಚಾತ್ತನಬಾಧಾದರ್ಶನಂ ಚ ಸಿದ್ಧಮ್ । ಶೂನ್ಯಮೇವ ತತ್ತ್ವಮ್ ಇತಿ ವಾಕ್ಯೇನ ತಸ್ಯಾಪಿ ಬಾಧದರ್ಶನಾತ್ । ತತ್ತು ಭ್ರಾನ್ತಿಮೂಲಮ್ ಇತಿ ಚೇತ್ । ಏತದಪಿ ಭ್ರಾನ್ತಿಮೂಲಮಿತಿ ತ್ವಯೈವೋಕ್ತಮ್ । ಪಾಶ್ಚಾತ್ತ್ಯಬಾಧಾದರ್ಶನಂ ತು ತಸ್ಯೈವ ಇತ್ಯಲಮ-ಪ್ರತಿಷ್ಠಿತಕುತರ್ಕಪರಿಹಾಸನೇನ ॥

(ಅರ್ಥ)

(ಪೂರ್ವಪಕ್ಷಿ) :– **ಶಾಸ್ತ್ರವು** ಆಕಾಶಪುಷ್ಪದಂತೆ ಅಸತ್ಯವಲ್ಲವಲ್ಲ ! ಏಕೆಂದರೆ ಅದ್ವೈತಜ್ಞಾನಕ್ಕಿಂತ ಮುಂಚೆ (ಅದು) ಸತ್ತೆಂಬ ಬುದ್ಧಿಯಿಂದ ತಿಳಿಯಬರುತ್ತಿರುತ್ತದೆ. ತತ್ತ್ವಜ್ಞಾನವು ಉಂಟಾದಮೇಲಲ್ಲವೆ, ಶಾಸ್ತ್ರವು ಅಸತ್ಯ ? ಆಗ ಶಾಸ್ತ್ರವು ಯಾವ ಭೇದವೂ ಇಲ್ಲದ ಚಿನ್ಮಾತ್ರಬ್ರಹ್ಮದ ಜ್ಞಾನಕ್ಕೆ ಉಪಾಯವಾಗಿರುವದಿಲ್ಲ ; ಯಾವಾಗ (ಅದಕ್ಕೆ) ಉಪಾಯವಾಗಿರುತ್ತದೆಯೋ ಆಗ ಶಾಸ್ತ್ರವು ಇದ್ದೇ ಇರುತ್ತದೆ, ಏಕೆಂದರೆ 'ಇದೆ' ಎಂಬ ಬುದ್ಧಿಯು (ಆಗ ಇರುತ್ತದೆ).

---

1. ಇಲ್ಲಿ ಏಕರೂಪತ್ವವನ್ನು ಒಪ್ಪಿದ್ದನ್ನು ಬಿಟ್ಟು ಹೇಳುತ್ತಾರೆ– ಎಂದು ಶ್ರು. ಪ್ರ.

2. ಗಕಾರಾದಿವರ್ಣಗಳೇ ಶಬ್ದವು ಎಂಬ ಉಪವರ್ಷಪಕ್ಷವನ್ನೇ ಶಾಂಕರಭಾಷ್ಯದಲ್ಲಿ ಸೂ.ಭಾ. ೧–೩–೨೮, ಪು. ೧೨೫ರಲ್ಲಿ ಒಪ್ಪಿ ಸ್ಫೋಟವಾದವನ್ನು ನಿರಾಕರಿಸಿದೆ. ಪರಿಶಿಷ್ಟವನ್ನು ನೋಡಿ. ಇಲ್ಲಿ ಸ್ಫೋಟವಾದವನ್ನವಲಂಬಿಸಿರುವ ಅದ್ವೈತಿಪೂರ್ವಪಕ್ಷಿ ಯಾರೆಂಬುದನ್ನು ಗೊತ್ತುಪಡಿಸುವದು ಅವಶ್ಯ.

(ಸಿದ್ಧಾಂತಿ) :– ಹಾಗಲ್ಲ; ಏಕೆಂದರೆ ಶಾಸ್ತ್ರವು ಇಲ್ಲದಿರುವಾಗ ಶಾಸ್ತ್ರವಿದೆ ಎಂಬ ಬುದ್ಧಿಯು ಮಿಥ್ಯೆಯಾಗಿರುತ್ತದೆ.

(ಪೂರ್ವಪಕ್ಷಿ) :– ಅದರಿಂದೇನು (ಸಿದ್ಧವಾಗುತ್ತದೆ) ?

(ಸಿದ್ಧಾಂತಿ) :– ಅದರಿಂದ ಇದು, (ಸಿದ್ಧವಾಗುತ್ತದೆ): **ಮಿಥ್ಯಾಭೂತವಾದ ಶಾಸ್ತ್ರಜನ್ಯಜ್ಞಾನವು ಮಿಥ್ಯೆಯಾಗಿರುವದರಿಂದ**[1] **ಆ ಜ್ಞಾನಕ್ಕೆ ವಿಷಯವಾಗಿರುವ ಬ್ರಹ್ಮವೂ ಮಿಥ್ಯೆ.** ಹೇಗೆ 'ಹೊಗೆ' ಎಂಬ ಬುದ್ಧಿಯಿಂದ ಗ್ರಹಿಸಿದ ನೀರಿನ ಆವಿಯಿಂದ ಉಂಟಾದ ಬೆಂಕಿಯ ಜ್ಞಾನವು ಮಿಥ್ಯೆಯಾಗಿರುವದರಿಂದ ಆ (ಜ್ಞಾನಕ್ಕೆ) ವಿಷಯವಾದ ಬೆಂಕಿಯೂ ಮಿಥ್ಯೆಯೋ (ಹಾಗೆ). ಆ ಮೇಲಿನ ಬಾಧೆಯು ಕಂಡುಬರುವದಿಲ್ಲವೆಂಬುದೂ ಅಸಿದ್ಧ; ಏಕೆಂದರೆ 'ಶೂನ್ಯವೇ ತತ್ತ್ವ' ಎಂಬ ವಾಕ್ಯದಿಂದ ಅದೂ ಬಾಧಿತವಾಗುವದು ಕಂಡುಬರುತ್ತದೆ.[2]

(ಪೂರ್ವಪಕ್ಷಿ) :– ಆ (ವಾಕ್ಯವು) ಭ್ರಾಂತಿನಿಮಿತ್ತವಾದದ್ದಲ್ಲವೆ ?

(ಸಿದ್ಧಾಂತಿ) :– ಈ (ಶಾಸ್ತ್ರವೂ) ಭ್ರಾಂತಿಮೂಲಕವಾಗಿದೆ ಎಂದು ನೀನೇ ಹೇಳಿರುತ್ತೀಯೆ.[3] ಆಮೇಲೆ ಬಾಧೆಯಿಲ್ಲವೆಂಬುದಾದರೋ ಆ (ಶೂನ್ಯವಾಕ್ಯಕ್ಕೇ). ಹೀಗಿರುವದರಿಂದ ನಿಲುಗಡೆಯಿಲ್ಲದ ಕುತರ್ಕವನ್ನು ಪರಿಹಾಸಮಾಡಿದ್ದು ಸಾಕು.

## (೩೦) ವೇದಾಂತವಾಕ್ಯಗಳು ನಿರ್ವಿಶೇಷವಸ್ತುಪರವಲ್ಲ

(ಮೂಲ)

ಯದುಕ್ತಮ್ – ವೇದಾನ್ತವಾಕ್ಯಾನಿ ನಿರ್ವಿಶೇಷಜ್ಞಾನೈಕರಸವಸ್ತುಮಾತ್ರಪ್ರತಿಪಾದನಪರಾಣಿ 'ಸದೇವ ಸೋಮ್ಯೇದಮಗ್ರ ಆಸೀತ್' (ಛಾಂ. ೬–೨–೧) ಇತ್ಯೇವಮಾದೀನಿ ಇತಿ। ತದಯುಕ್ತಮ್। ಏಕವಿಜ್ಞಾನೇನ ಸರ್ವವಿಜ್ಞಾನಪ್ರತಿಜ್ಞೋಪಪಾದನಮುಖೇನ ಸಚ್ಛಬ್ದವಾಚ್ಯಸ್ಯ ಪರಸ್ಯ ಬ್ರಹ್ಮಣಃ, ಜಗದುಪಾದಾನತ್ವಮ್, ಜಗನ್ನಿಮಿತ್ತತ್ವಮ್, ಸರ್ವಜ್ಞತಾ, ಸರ್ವಶಕ್ತಿಯೋಗಃ, ಸತ್ಯಸಙ್ಕಲ್ಪತ್ವಮ್, ಸರ್ವಾನ್ತರತ್ವಮ್, ಸರ್ವಾಧಾರತ್ವಮ್, ಸರ್ವನಿಯಮನಮ್– ಇತ್ಯಾ

---

1. ಜ್ಞಾನಮಿಥ್ಯಾತ್ವ, ಪದಾರ್ಥಮಿಥ್ಯಾತ್ವ– ಇವುಗಳ ವಿವೇಚನೆಯ ಬಗೆಗೆ ಪರಿಶಿಷ್ಟವನ್ನು ನೋಡಿ.

2. ಶೂನ್ಯವಾದಿಯ ವಾಕ್ಯದಿಂದ ಬಾಧಿತವಾಗುತ್ತದೆ– ಎಂದರ್ಥ. ಈ ವಿಷಯದಲ್ಲಿ ಪರಿಶಿಷ್ಟವನ್ನು ನೋಡಿ. ಇಲ್ಲಿ ವಾಕ್ಯಮಾತ್ರದಿಂದ ಬಾಧಿತವಾಗುವದು ಕಂಡು ಬಂದಿದೆಯೆ ?– ಎಂದು ಶಂಕೆ ಏಳುತ್ತದೆ.

3. ವೇದವು ಅಸತ್ಯವು, ಅಪ್ರಮಾಣವು– ಎಂಬುದು ಶೂನ್ಯವಾದಿಗೂ ಮಾಯಾವಾದಿಗೂ ಸಮಾನ– ಎಂದು ಶ್ರು. ಪ್ರ.

ದ್ಯನೇಕಕಲ್ಯಾಣಗುಣವಿಶಿಷ್ಟತಾಮ್, ಕೃತ್ಸ್ನಸ್ಯ ಜಗತಸ್ತದಾತ್ಮಕತಾಂ ಚ ಪ್ರತಿಪಾದ್ಯ 'ಏವಂಭೂತಬ್ರಹ್ಮಾತ್ಮಕಸ್ತ್ವಮಸಿ' ಇತಿ ಶ್ವೇತಕೇತುಂ ಪ್ರತ್ಯುಪದೇಶಾಯ ಪ್ರವೃತ್ತತ್ವಾತ್ ಪ್ರಕರಣಸ್ಯ । ಪ್ರಪಞ್ಚಿತಶ್ಚಾಽಯಮರ್ಥೋ **ವೇದಾರ್ಥಸಂಗ್ರಹೇ** । ಅತ್ರಾಪಿ ಆರಮ್ಭಣಾಧಿಕರಣೇ ನಿಪುಣತರಮ್ ಉಪಪಾದಯಿಷ್ಯತೇ॥

'ಅಥ ಪರಾ ಯಯಾ ತದಕ್ಷರಮ್' (ಮುಂ. ೧-೧-೫) ಇತ್ಯತ್ರಾಪಿ ಪ್ರಾಕೃತಾನ್ ಹೇಯಗುಣಾನ್ ಪ್ರತಿಷಿಧ್ಯ ನಿತ್ಯತ್ವವಿಭುತ್ವಸೂಕ್ಷ್ಮತ್ವಸರ್ವಗತತ್ವಾವ್ಯಯತ್ವಭೂತಯೋನಿತ್ವಸಾರ್ವಜ್ಞ್ಯಾದಿಕಲ್ಯಾಣಗುಣಯೋಗಃ ಪರಸ್ಯ ಬ್ರಹ್ಮಣಃ ಪ್ರತಿಪಾದಿತಃ ॥

'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) ಇತ್ಯತ್ರಾಪಿ ಸಾಮಾನಾಧಿಕರಣ್ಯಸ್ಯ ಅನೇಕವಿಶೇಷಣವಿಶಿಷ್ಟೈಕಾರ್ಥಾಭಿಧಾನವ್ಯುತ್ಪತ್ತ್ಯಾ ನ ನಿರ್ವಿಶೇಷವಸ್ತುಸಿದ್ಧಿಃ । ಪ್ರವೃತ್ತಿನಿಮಿತ್ತಭೇದೇನೈಕಾರ್ಥವೃತ್ತಿತ್ವಂ ಹಿ ಸಾಮಾನಾಧಿಕರಣ್ಯಮ್ । ತತ್ರ ಸತ್ಯಜ್ಞಾನಾದಿಪದಮುಖ್ಯಾರ್ಥೈರ್ಗುಣೈಃ, ತತ್ತದ್ಗುಣವಿರೋಧ್ಯಾಕಾರಪ್ರತ್ಯನೀಕಾಕಾರೈರ್ವಾ ಏಕಸ್ಮಿನ್ನೇವಾರ್ಥೇ ಪದಾನಾಂ ಪ್ರವೃತ್ತೌ ನಿಮಿತ್ತಭೇದೋಽವಶ್ಯಾಶ್ರಯಣೀಯಃ । ಇಯಾಂಸ್ತು ವಿಶೇಷಃ– ಏಕಸ್ಮಿನ್ ಪಕ್ಷೇ ಪದಾನಾಂ ಮುಖ್ಯಾರ್ಥತಾ, ಅಪರಸ್ಮಿಂಶ್ಚ ತೇಷಾಂ ಲಕ್ಷಣಾ । ನ ಚ ಅಜ್ಞಾನಾದೀನಾಂ ಪ್ರತ್ಯನೀಕತಾ ವಸ್ತುಸ್ವರೂಪಮೇವ, ಏಕೇನೈವ ಪದೇನ ಸ್ವರೂಪಂ ಪ್ರತಿಪನ್ನಮ್ ಇತಿ ಪದಾನ್ತರಪ್ರಯೋಗವೈಯರ್ಥ್ಯಾತ್ । ತಥಾ ಸತಿ ಸಾಮಾನಾಧಿಕರಣ್ಯಾಸಿದ್ಧಿಶ್ಚ, ಏಕಸ್ಮಿನ್ ವಸ್ತುನಿ ವರ್ತಮಾನಾನಾಂ ಪದಾನಾಂ ನಿಮಿತ್ತಭೇದಾನಾಶ್ರಯಣಾತ್ । ನ ಚ ಏಕಸ್ಯೈವಾರ್ಥಸ್ಯ ವಿಶೇಷಣಭೇದೇನ ವಿಶಿಷ್ಟತಾಭೇದಾತ್ ಅನೇಕಾರ್ಥತ್ವಂ ಪದಾನಾಂ ಸಾಮಾನಾಧಿಕರಣ್ಯವಿರೋಧಿ; ಏಕಸ್ಯೈವ ವಸ್ತುನೋಽನೇಕವಿಶೇಷಣವಿಶಿಷ್ಟತಾಪ್ರತಿಪಾದನಪರತ್ವಾತ್ ಸಾಮಾನಾಧಿಕರಣ್ಯಸ್ಯ; ಭಿನ್ನಪ್ರವೃತ್ತಿನಿಮಿತ್ತಾನಾಂ ಶಬ್ದಾನಾಮ್ ಏಕಸ್ಮಿನ್ನರ್ಥೇ ವೃತ್ತಿಃ ಸಾಮಾನಾಧಿಕರಣ್ಯಮ್' (ಕೈಯಟ)[1] ಇತಿ ಹಿ ಶಾಬ್ದಿಕಾಃ ॥

---

1. ಇಲ್ಲಿರುವದು ಕೈಯಟವಾಕ್ಯದ ಅರ್ಥ. ಅಲ್ಲಿರುವ ವಾಕ್ಯವು ಹೀಗಿದೆ :

**"ಸಾಮಾನಾಧಿಕರಣ್ಯಂ ಶಬ್ದಯೋರೇವ ಕೇಚಿದಿಚ್ಛನ್ತಿ । ದ್ವಾಭ್ಯಾಂ ಭಿನ್ನಪ್ರವೃತ್ತಿನಿಮಿತ್ತಾಭ್ಯಾಮ್ ಏಕಸ್ಯಾಧಿಕರಣಸ್ಯ ಅಭಿಧೇಯಸ್ಯ ಪ್ರತಿಪಾದನಾತ್ ವಿಶೇಷಣವಿಶೇಷ್ಯಾರ್ಥಪ್ರತಿಪಾದನಾಚ್ಚ ವಿಶೇಷಣವಿಶೇಷ್ಯತ್ವಮ್ । ಅನ್ಯೇ ತು 'ನೀಲಮುತ್ಪಲಮ್' ಇತಿ ಪ್ರವೃತ್ತಿನಿಮಿತ್ತಯೋರ್ಜಾತಿಗುಣಯೋಃ ಏಕಮಧಿಕರಣಮ್ ಆಶ್ರಯಃ ಇತಿ ಸಾಮಾನಾಧಿಕರಣ್ಯಮ್ ವಿಶೇಷಣವಿಶೇಷ್ಯಭಾವಂ ಚ ಅರ್ಥಯೋರೇವ ಮನ್ಯನ್ತೇ ॥"**

**—'ವೃದ್ಧಿರಾದೈಚ್' ಸೂತ್ರ, ವ್ಯಾಕರಣಭಾಷ್ಯವ್ಯಾಖ್ಯಾ.**

(ಅರ್ಥ)

**'ಸದೇವ ಸೋಮ್ಯೇದಮಗ್ರ ಆಸೀತ್'** (ಛಾಂ. ೬-೨-೧) ಎಂಬುದೇ ಮುಂತಾದ ವೇದಾಂತವಾಕ್ಯಗಳು ನಿರ್ವಿಶೇಷಚೈತನ್ಯೈಕರಸವಾದ ವಸ್ತುಮಾತ್ರ ವನ್ನು ಪ್ರತಿಪಾದನಮಾಡುವದರಲ್ಲಿ ತಾತ್ಪರ್ಯವುಳ್ಳವಾಗಿವೆ- ಎಂದು ಹಿಂದೆ ಹೇಳಿದೆಯಲ್ಲ,[1] ಅದು ಅಯುಕ್ತ. ಏಕೆಂದರೆ ಒಂದರ ವಿಜ್ಞಾನದಿಂದ ಸರ್ವವನ್ನೂ ಅರಿತಂತೆ - ಎಂಬ ಪ್ರತಿಜ್ಞೆಯನ್ನು[2] ಉಪಪಾದನೆಮಾಡುವ ಮೂಲಕ 'ಸತ್' ಎಂಬ ಶಬ್ದಕ್ಕೆ ವಾಚ್ಯವಾದ ಪರಬ್ರಹ್ಮವು ಜಗತ್ತಿಗೆ ಉಪಾದಾನ(ಕಾರಣ), ಜಗತ್ತಿಗೆ ನಿಮಿತ್ತಕಾರಣ, ಸರ್ವಜ್ಞವು, ಸರ್ವಶಕ್ತಿಯುಕ್ತವಾದದ್ದು, ಸತ್ಯಸಂಕಲ್ಪ ಗಳುಳ್ಳದ್ದು, ಸರ್ವಾಂತರ (ಎಲ್ಲಕ್ಕೂ ಒಳಗಿರತಕ್ಕದ್ದು), ಸರ್ವಕ್ಕೂ ಆಧಾರ, ಎಲ್ಲಕ್ಕೂ ನಿಯಾಮಕ- ಎಂಬಿದೇ ಮುಂತಾದ ಅನೇಕ ಕಲ್ಯಾಣಗುಣಗಳಿಂದೊಡ ಗೂಡಿದ್ದೆಂದೂ ಜಗತ್ತೆಲ್ಲಕ್ಕೂ ಅದೇ ಆತ್ಮನೆಂದೂ ಪ್ರತಿಪಾದಿಸಿ, 'ಇಂಥ ಬ್ರಹ್ಮ ವನ್ನು ಆತ್ಮನಾಗಿ ಉಳ್ಳವನು ನೀನು' ಎಂದು ಶ್ವೇತಕೇತುವಿಗೆ ಉಪದೇಶಮಾಡು ವದಕ್ಕೆ ಪ್ರಕರಣವು ಹೊರಟಿರುತ್ತದೆ. ಈ ವಿಷಯವನ್ನು **ವೇದಾರ್ಥಸಂಗ್ರಹ ದಲ್ಲಿ**[3] ವಿಸ್ತಾರವಾಗಿ ತಿಳಿಸಿರುತ್ತದೆ. ಈ (ಭಾಷ್ಯ)ದಲ್ಲಿಯೂ **ಆರಂಭಣಾಧಿ ಕರಣದಲ್ಲಿ** ಬಹಳ ಚೆನ್ನಾಗಿ ಉಪಪಾದಿಸಲಾಗುವದು.

**'ಅಥ ಪರಾ ಯಯಾ ತದಕ್ಷರಮ್'** (ಮುಂ. ೧-೧-೫) ಎಂದು (ಮುಂತಾಗಿರುವ ವಾಕ್ಯ)ದಲ್ಲಿಯೂ ಪ್ರಾಕೃತವಾದ **ಹೇಯಗುಣಗಳನ್ನು** ಅಲ್ಲ ಗಳೆದು ನಿತ್ಯತ್ವ, ವಿಭುತ್ವ, ಸೂಕ್ಷ್ಮತ್ವ, ಸರ್ವಗತತ್ವ, ಅವ್ಯಯತ್ವ, ಭೂತ ಯೋನಿತ್ವ, ಸರ್ವಜ್ಞತ್ವ- ಇವೇ ಮುಂತಾದ **ಕಲ್ಯಾಣಗುಣಗಳ** ಸಂಬಂಧವನ್ನು ಬ್ರಹ್ಮಕ್ಕೆ ಪ್ರತಿಪಾದಿಸಲಾಗಿದೆ.[4]

**'ಸತ್ಯಂ ಜ್ಞಾನಮನನ್ತಂ ಬ್ರಹ್ಮ'** (ತೈ. ೨-೧) ಎಂಬ (ವಾಕ್ಯ)ದಲ್ಲಿಯೂ **ಸಾಮಾನಾಧಿಕರಣ್ಯಕ್ಕೆ**[5] ಅನೇಕ ವಿಶೇಷಣಗಳಿಂದೊಡಗೂಡಿದ ಒಂದು ಅರ್ಥ ವನ್ನೇ ತಿಳಿಸುವದೆಂಬ ವ್ಯುತ್ಪತ್ತಿಯಿರುವದರಿಂದ ನಿರ್ವಿಶೇಷವಸ್ತುವು ಸಿದ್ಧವಾಗು ವದಿಲ್ಲ. (ಶಬ್ದ)ಪ್ರವೃತ್ತಿನಿಮಿತ್ತಗಳು ಬೇರೆಬೇರೆಯಾಗುವದರಿಂದ ಒಂದೇ ಪದಾರ್ಥದಲ್ಲಿ (ಶಬ್ದಗಳ) ವೃತ್ತಿಯಿರುವದೇ ಸಾಮಾನಾಧಿಕರಣ್ಯ. ಅಲ್ಲಿ ಸತ್ಯ,

---

1. ಇಲ್ಲಿರುವ ವಾಕ್ಯಗಳನ್ನು ಪೂರ್ವಪಕ್ಷದಲ್ಲಿ ೩೭, ೪೦ನೆಯ ಪುಟಗಳಲ್ಲಿ ಉದಾಹರಿಸಿತ್ತು.

2. ಈ ಪ್ರತಿಜ್ಞೆಯ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

3. ಕಾರ್ಯಾಲಯದಲ್ಲಿ ಪ್ರಕಟವಾಗಿರುವ ವೇದಾರ್ಥಸಂಗ್ರಹ (೨೨ನೆಯ ಪುಟ) ವನ್ನು ನೋಡಿ.

4. ಬ್ರಹ್ಮವಿಷಯದ ನಿಷೇಧಮುಖವಾಕ್ಯಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

5. ಸಾಮಾನಾಧಿಕರಣ್ಯದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಜ್ಞಾನ- ಮುಂತಾದ ಪದಗಳ ಮುಖ್ಯಾರ್ಥವಾಗಿರುವ ಗುಣಗಳಿಂದಲಾಗಲಿ, ಆಯಾ ಗುಣಗಳಿಗೆ ವಿರೋಧಿಯಾದ ಆಕಾರಕ್ಕೆ ವಿರುದ್ಧವಾದ ಆಕಾರಗಳಿಂದಲಾಗಲಿ, ಒಂದೇ ಪದಾರ್ಥದಲ್ಲಿ ಪದಗಳ ಪ್ರವೃತ್ತಿಯಾಗುವದೆಂಬಲ್ಲಿ ನಿಮಿತ್ತಭೇದವನ್ನಂತೂ ಅವಶ್ಯವಾಗಿ ಆಶ್ರಯಿಸಬೇಬೇಕು. ಆದರೆ ಇಷ್ಟು ವಿಶೇಷವುಂಟು ; ಒಂದು ಪಕ್ಷದಲ್ಲಿ[1] ಪದಗಳಿಗೆ ಮುಖ್ಯಾರ್ಥ, ಇನ್ನೊಂದರಲ್ಲಿ[2] ಆ (ಪದಗಳಿಗೆ) ಲಕ್ಷಣೆ (ಯನ್ನು ಹೇಳಬೇಕಾಗುವದು).[3] ಅಜ್ಞಾನಾದಿಗಳಿಗೆ ವಿರುದ್ಧವಾಗಿರುವದು ವಸ್ತುಸ್ವರೂಪವೇ (ಎಂದು ಹೇಳುವ)ದಕ್ಕೆ ಆಗುವದಿಲ್ಲ.[4] (ಹೇಗೆಂದರೆ) ಒಂದೇ ಪದದಿಂದ ಸ್ವರೂಪವನ್ನು ಅರಿತುಕೊಂಡಾಗಿರುವದರಿಂದ ಮತ್ತೊಂದು ಪದದ ಪ್ರಯೋಗವು ವ್ಯರ್ಥವಾಗುವದು. ಹಾಗಾದರೆ ಸಾಮಾನಾಧಿಕರಣ್ಯ ಸಿದ್ಧಿಯಾಗದೆ ಹೋಗುವದು, ಏಕೆಂದರೆ (ಆಗ) ಒಂದೇ ವಸ್ತುವಿನಲ್ಲಿ ವೃತ್ತಿಯುಳ್ಳ ಪದಗಳಿಗೆ (ಪ್ರವೃತ್ತಿ)ನಿಮಿತ್ತಭೇದವನ್ನು ಆಶ್ರಯಿಸಿರುವದಿಲ್ಲ, ಒಂದೇ ಅರ್ಥಕ್ಕೆ ಬೇರೆಬೇರೆಯ ವಿಶೇಷಣದಿಂದ ವಿಶಿಷ್ಟತ್ವವು ಬೇರೆಯಾಗುವದರಿಂದ ಪದಗಳಿಗೆ ಅನೇಕಾರ್ಥಗಳನ್ನು ಕಲ್ಪಿಸುವದು ಸಾಮಾನಾಧಿಕರಣ್ಯಕ್ಕೆ ವಿರುದ್ಧವೂ ಅಲ್ಲ. ಏಕೆಂದರೆ ಒಂದೇ ವಸ್ತು ಅನೇಕವಿಶೇಷಣಗಳಿಂದ ಕೂಡಿರುತ್ತದೆ ಎಂದು ತಿಳಿಯಿಸುವದರಲ್ಲಿಯೇ ಸಾಮಾನಾಧಿಕರಣ್ಯಕ್ಕೆ ತಾತ್ಪರ್ಯವಿರುತ್ತದೆ. ಬೇರೆಬೇರೆಯ ಪ್ರವೃತ್ತಿನಿಮಿತ್ತಗಳುಳ್ಳ ಶಬ್ದಗಳಿಗೆ ಒಂದೇ ಅರ್ಥದಲ್ಲಿ ವೃತ್ತಿಯಿರುವದೇ **ಸಾಮಾನಾಧಿಕರಣ್ಯ** ಎಂದಲ್ಲವೆ, ಶಾಬ್ದಿಕರು (ಹೇಳುತ್ತಾರೆ) ?

(ಮೂಲ)

ಯದುಕ್ತಮ್– 'ಏಕಮೇವಾದ್ವಿತೀಯಮ್' (ಛಾಂ. ೬-೨-೧)–ಇತ್ಯತ್ರ ಅದ್ವಿತೀಯಪದಂ. ಗುಣತೋಽಪಿ ಸದ್ವಿತೀಯತಾಂ ನ ಸಹತೇ; ಅತಃ ಸರ್ವಶಾಖಾ ಪ್ರತ್ಯಯನ್ಯಾಯೇನ ಕಾರಣವಾಕ್ಯಾನಾಮ್ ಅದ್ವಿತೀಯವಸ್ತುಪ್ರತಿಪಾದನಪರತ್ವಮ್ ಅಭ್ಯುಪಗಮನೀಯಮ್, ಕಾರಣತಯಾ ಉಪಲಕ್ಷಿತಸ್ಯ ಅದ್ವಿತೀಯಸ್ಯ ಬ್ರಹ್ಮಣಃ, ಲಕ್ಷಣಮಿದಮುಚ್ಯತೇ 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧)

---

1. ಸತ್ಯಜ್ಞಾನಾದಿಪದಗಳು ಸತ್ಯತ್ವಾದಿಗುಣಗಳನ್ನು ಹೇಳುತ್ತವೆ ಎಂಬ ಸಿದ್ಧಾಂತಿ ಪಕ್ಷದಲ್ಲಿ.

2. ಅನೃತತ್ವವೇ ಮುಂತಾದವುಗಳ ವಿರುದ್ಧವಾದ ಆಕಾರವುಳ್ಳ ಬ್ರಹ್ಮ- ಎಂಬ ಅದ್ವೈತಿಯ ಪಕ್ಷದಲ್ಲಿ.

3. ನಿರ್ವಿಶೇಷವಸ್ತುವಾಚಕತ್ವವೇನೂ ಪದಗಳಿಗಿಲ್ಲವಷ್ಟೆ- ಎಂದು ಭಾವ.

4. ಜ್ಞಾನವೆಂದರೆ ಅಜ್ಞಾನಕ್ಕೆ ವಿರುದ್ಧವಾದದ್ದು ; ಏಕೆಂದರೆ ಬ್ರಹ್ಮವಸ್ತುವಿನ ಸ್ವರೂಪವೇ ಎಂದು ಪೂರ್ವಪಕ್ಷಿ ಹೇಳಿಯಾನೆಂದು ಹೀಗೆಂದಿದೆ.

ಇತಿ| ಅತೋ ಲಿಲಕ್ಷಯಿಷಿತಮ್ ಬ್ರಹ್ಮ ನಿರ್ಗುಣಮೇವ; ಅನ್ಯಥಾ 'ನಿರ್ಗುಣಮ್' (?)[1] 'ನಿರಞ್ಜನಮ್' (ಶ್ವೇ. ೬-೧೯) ಇತ್ಯಾದಿಭಿರ್ವಿರೋಧಶ್ಚ ಇತಿ ॥

ತದನುಪಪನ್ನಮ್ । ಜಗದುಪಾದಾನಸ್ಯ ಬ್ರಹ್ಮಣಃ ಸ್ವವ್ಯತಿರಿಕ್ತಾಧಿಷ್ಠಾತ್ರನ್ತರನಿವಾರಣೇನ ವಿಚಿತ್ರಶಕ್ತಿಯೋಗಪ್ರತಿಪಾದನಪರತ್ವಾತ್ ಅದ್ವಿತೀಯಪದಸ್ಯ| ತಥೈವ ವಿಚಿತ್ರಶಕ್ತಿಯೋಗಮೇವ ಅವಗಮಯತಿ 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ ತತ್ತೇಜೋಽಸೃಜತ' (ಛಾಂ. ೬-೨-೩) ಇತ್ಯಾದಿ| ಅವಿಶೇಷೇಣ 'ಅದ್ವಿತೀಯಮ್' ಇತ್ಯುಕ್ತೇ ನಿಮಿತ್ತಾನ್ತರಮಾತ್ರನಿಷೇಧಃ ಕಥಂ ಜ್ಞಾಯತ ಇತಿ ಚೇತ್, ಸಿಸೃಕ್ಷೋರ್ಬ್ರಹ್ಮಣ ಉಪಾದಾನಕಾರಣತ್ವಂ 'ಸದೇವ ಸೋಮ್ಯೇದಮಗ್ರ ಆಸೀದೇಕಮೇವ' (ಛಾಂ. ೬-೨-೧) ಇತಿ ಪ್ರತಿಪಾದಿತಮ್ | ಕಾರ್ಯೋತ್ಪತ್ತಿಸ್ವಾಭಾವ್ಯೇನ ಬುದ್ಧಿಸ್ಥಂ ನಿಮಿತ್ತಾನ್ತರಮ್ ಇತಿ ತದೇವಾದ್ವಿತೀಯಪದೇನ ನಿಷಿಧ್ಯತ ಇತ್ಯವಗಮ್ಯತೇ। ಸರ್ವನಿಷೇಧೇ ಹಿ ಸ್ವಾಭ್ಯುಪಗತಾಃ ಸಾಧಯಿಷಿತಾ ನಿತ್ಯತ್ವಾದಯಶ್ಚ ನಿಷಿದ್ಧಾಃ ಸ್ಯುಃ| ಸರ್ವಶಾಖಾಪ್ರತ್ಯಯನ್ಯಾಯಶ್ಚಾತ್ರ ಭವತೋ ವಿಪರೀತಫಲಃ, ಸರ್ವಶಾಖಾಸು ಕಾರಣಾನ್ವಯಿನಾಂ ಸರ್ವಜ್ಞತ್ವಾದೀನಾಂ ಗುಣಾನಾಮ್ ಅತ್ರೋಪಸಂಹಾರಹೇತುತ್ವಾತ್ | ಅತಃ ಕಾರಣವಾಕ್ಯಸ್ವಭಾವಾದಪಿ 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) ಇತ್ಯನೇನ ಸವಿಶೇಷಮೇವ ಪ್ರತಿಪಾದ್ಯತ ಇತಿ ವಿಜ್ಞಾಯತೇ ॥

(ಅರ್ಥ)

**'ಏಕಮೇವಾದ್ವಿತೀಯಮ್'** (ತನಗೆರಡನೆಯದಿಲ್ಲದ ಒಂದೇ. ಛಾಂ. ೬-೨-೧) ಎಂಬಲ್ಲಿ ಅದ್ವಿತೀಯಪದವು ಗುಣಗಳಿಂದಲೂ[2] ಸದ್ವಿತೀಯತ್ವವನ್ನು ಸಹಿಸುವದಿಲ್ಲ. ಆದ್ದರಿಂದ 'ಸರ್ವಶಾಖಾಪ್ರತ್ಯಯನ್ಯಾಯ'ದಿಂದ[3] ಕಾರಣವಾಕ್ಯಗಳು ಅದ್ವಿತೀಯವಸ್ತುಪ್ರತಿಪಾದನದಲ್ಲಿಯೇ ತಾತ್ಪರ್ಯವುಳ್ಳವುಗಳೆಂದು ಒಪ್ಪಬೇಕು. ಕಾರಣತ್ವದಿಂದ ಉಪಲಕ್ಷಿತವಾದ ಆ ಅದ್ವಿತೀಯಬ್ರಹ್ಮಕ್ಕೆ 'ಸತ್ಯವೂ ಜ್ಞಾನವೂ ಅನಂತವೂ' ಆದ ಬ್ರಹ್ಮವು, ಎಂಬೀ ಲಕ್ಷಣವನ್ನು ಹೇಳಿದೆಯಾದ್ದ

1. ಇದು 'ಮಾಂತ್ರಿಕೋಪನಿಷತ್ತು' ಎಂದು ವಾ॥ 'ಚೂಲಿಕೋಪನಿಷತ್ತು' ಎಂದು ಪೂ॥ ಸಂಸ್ಕರಣ. ಈ ಎರಡು ಉಪನಿಷತ್ತುಗಳನ್ನೂ ಶಂಕರಾಚಾರ್ಯರು ಎಲ್ಲಿಯೂ ಉದಾಹರಿಸಿಲ್ಲ.

2. ಅದ್ವಿತೀಯಪದಕ್ಕೆ ಸಜಾತೀಯಭೇದವನ್ನು ಅಲ್ಲಗಳೆಯುವದರಲ್ಲಿ ತಾತ್ಪರ್ಯವಿದೆಯಾದ್ದರಿಂದ ಗುಣಗಳು ಬ್ರಹ್ಮಕ್ಕೆ ಇರುವಂತಿಲ್ಲ. ಪ್ರ. ಪ್ರ.

3. ಒಂದು ಶಾಖೆಯಲ್ಲಿರುವ ಸಗುಣವಾಕ್ಯವು ಮತ್ತೊಂದರಲ್ಲಿರುವ ನಿರ್ಗುಣವಾಕ್ಯದೊಡನೆ ಸೇರಿದಾಗ ನಿರ್ಗುಣವಾಕ್ಯವು ಅಪಚ್ಛೇದನ್ಯಾಯದಿಂದ ಪ್ರಬಲವಾದ್ದರಿಂದ ಸಗುಣತ್ವವು ಬಾಧಿತವಾಗುತ್ತದೆ. ಪ್ರ. ಪ್ರ.

ರಿಂದ ಲಕ್ಷಣವನ್ನು ಹೇಳಬೇಕೆಂದಿರುವ ಬ್ರಹ್ಮವು ನಿರ್ಗುಣವೇ; ಹಾಗಿಲ್ಲದಿದ್ದರೆ 'ನಿರ್ಗುಣ'ವು (?), 'ನಿರಂಜನವು' (ಶ್ವೇ. ೬–೧೯) ಮುಂತಾದ (ವಾಕ್ಯಗಳಿಗೆ) ವಿರೋಧವೂ (ಆಗುತ್ತದೆ) ಎಂದೆಯಷ್ಟೆ ?

ಅದು ಅಯುಕ್ತ. ಏಕೆಂದರೆ ಅದ್ವಿತೀಯಪದಕ್ಕೆ ಜಗತ್ತಿಗೆ ಉಪಾದಾನವಾಗಿರುವ ಬ್ರಹ್ಮಕ್ಕೆ ತನಗಿಂತ ವ್ಯತಿರಿಕ್ತವಾಗಿರುವ ಮತ್ತೊಂದು ಅಧಿಷ್ಠಾತೃವನ್ನು ನಿವಾರಣೆಮಾಡಿ ವಿಚಿತ್ರಶಕ್ತಿಯ ಸಂಬಂಧವನ್ನು ಪ್ರತಿಪಾದನೆಮಾಡುವದರಲ್ಲಿ ತಾತ್ಪರ್ಯವಿದೆ. ಆದ್ದರಿಂದಲೇ ವಿಚಿತ್ರಶಕ್ತಿಯ ಸಂಬಂಧವನ್ನೇ (ಶ್ರುತಿಯು) 'ಅದು ಬಹುವಾಗುವೆನು, ಉತ್ಪತ್ತಿಯಾಗುವೆನು– ಎಂದು ಯೋಚಿಸಿತು. ಅದು ತೇಜಸ್ಸನ್ನು ಸೃಷ್ಟಿಸಿತು' (ಛಾಂ. ೬–೨–೩) ಎಂದು ಮುಂತಾಗಿ ಗೊತ್ತುಪಡಿಸಿ ಕೊಡುತ್ತದೆ.

(ಶಂಕೆ) :– ಸಾಮಾನ್ಯವಾಗಿ 'ಅದ್ವಿತೀಯಮ್' (ಎರಡನೆಯದಿಲ್ಲದ್ದು) ಎಂದು ಹೇಳಿದಮಾತ್ರದಿಂದ ಮತ್ತೊಂದು ನಿಮಿತ್ತವನ್ನೇ ಅಲ್ಲಗಳೆದಿದೆ ಎಂದು ಹೇಗೆ ಅರಿತುಕೊಳ್ಳಬೇಕು ?

(ಸಮಾಧಾನ) :– ಸೃಷ್ಟಿಮಾಡಲೆಳಸಿರುವ ಬ್ರಹ್ಮವು ಉಪಾದಾನಕಾರಣವೆಂಬುದನ್ನು 'ಅಪ್ಪ, ಇದು ಮೊದಲು ಸತ್ತೊಂದೇ ಆಗಿತ್ತು' ಎಂದು ಪ್ರತಿಪಾದಿಸಲಾಗಿದೆ. ಕಾರ್ಯದ ಉತ್ಪತ್ತಿಯ ಸ್ವಭಾವವನ್ನು (ನೋಡಿದರೆ) ಮತ್ತೊಂದು ನಿಮಿತ್ತ(ವಿರಬೇಕೆಂಬುದು) ಬುದ್ಧಿಯಲ್ಲಿರುವದರಿಂದ, ಅದನ್ನೇ ಅದ್ವಿತೀಯ(ವೆಂಬ) ಪದದಿಂದ ಅಲ್ಲಗಳೆದಿದೆ ಎಂದು ಗೊತ್ತಾಗುತ್ತದೆ. ಏಕೆಂದರೆ ಎಲ್ಲವನ್ನೂ ಅಲ್ಲಗಳೆದಿದೆ ಎನ್ನುವದಾದರೆ, ನಿಮಗೆ ಒಪ್ಪಿಗಿದ್ದು ಸಾಧಿಸಬೇಕೆಂದಿರುವ ನಿತ್ಯತ್ವವೇ ಮುಂತಾದ (ಧರ್ಮಗಳನ್ನೂ) ಅಲ್ಲಗಳೆದಂತಾದೀತು. ಸರ್ವಶಾಖಾಪ್ರತ್ಯಯವಂತೂ ಇಲ್ಲಿ ನಿನಗೆ ವಿಪರೀತವಾದ ಫಲವನ್ನೇ (ಕೊಡುತ್ತದೆ) ; ಏಕೆಂದರೆ ಎಲ್ಲಾ ಶಾಖೆಗಳಲ್ಲಿಯೂ ಕಾರಣಕ್ಕೆ ಸೇರಿಕೊಂಡುಬಂದಿರುವ ಸರ್ವಜ್ಞತ್ವವೇ ಮುಂತಾದ ಗುಣಗಳನ್ನು ಇಲ್ಲಿಯೂ ಉಪಸಂಹಾರಮಾಡಿಕೊಳ್ಳುವದಕ್ಕೆ (ಅದು) ಹೇತುವಾಗಿರುತ್ತದೆ. ಆದ್ದರಿಂದ ಕಾರಣವಾಕ್ಯದ ಸ್ವಭಾವವನ್ನು (ಆಲೋಚಿಸಿದರೂ) 'ಸತ್ಯವೂ ಜ್ಞಾನವೂ ಅನಂತವೂ' ಎಂಬೀ (ವಾಕ್ಯ)ದಿಂದ[1] ಸವಿಶೇಷ (ವಸ್ತುವೇ) ಪ್ರತಿಪಾದಿತವಾಗಿದೆ ಎಂದು ನಿಶ್ಚಯವಾಗುತ್ತದೆ.

(ಮೂಲ)

ನ ಚ ನಿರ್ಗುಣವಾಕ್ಯವಿರೋಧಃ, ಪ್ರಾಕೃತಹೇಯಗುಣವಿಷಯತ್ವಾತ್ ತೇಷಾಮ್ 'ನಿರ್ಗುಣಮ್' (?), 'ನಿರಞ್ಜನಮ್' (ಶ್ವೇ. ೬–೧೯), 'ನಿಷ್ಕಲಂ ನಿಷ್ಕ್ರಿಯಂ ಶಾನ್ತಮ್' (ಶ್ವೇ. ೬–೧೯) ಇತ್ಯಾದೀನಾಮ್ ॥

1. ಈ ವಾಕ್ಯದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಜ್ಞಾನಮಾತ್ರಸ್ವರೂಪವಾದಿನ್ಯೋಽಪಿ ಶ್ರುತಯಃ । ಬ್ರಹ್ಮಣೋ ಜ್ಞಾನಸ್ವರೂಪತಾಮಭಿದಧತಿ; ನ ತಾವತಾ ನಿರ್ವಿಶೇಷಜ್ಞಾನಮಾತ್ರಮೇವ ತತ್ತ್ವಮ್, ಜ್ಞಾತುರೇವ ಜ್ಞಾನಸ್ವರೂಪತ್ವಾತ್ । ಜ್ಞಾನಸ್ವರೂಪಸ್ಯೈವ ತಸ್ಯ ಜ್ಞಾನಾಶ್ರಯತ್ವಂ ಮಣಿದ್ಯುಮಣಿದೀಪಾದಿವದ್ ಯುಕ್ತಮೇವೇತ್ಯುಕ್ತಮ್ । ಜ್ಞಾತೃತ್ವಮೇವ ಹಿ ಸರ್ವಾಃ ಶ್ರುತಯೋ ವದನ್ತಿ । 'ಯಃ ಸರ್ವಜ್ಞಃ ಸರ್ವವಿತ್' (ಮುಂ. ೧-೧-೯), 'ತದೈಕ್ಷತ' (ಛಾಂ. ೬-೨-೩), 'ಸೇಯಂ ದೇವತೈಕ್ಷತ' (ಛಾಂ. ೬-೩-೨), 'ಸ ಈಕ್ಷತ ಲೋಕಾನ್ನು ಸೃಜಾ ಇತಿ' (ಐ. ೧-೧), 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್' (ಕಾ. ೨-೨-೧೩), 'ಜ್ಞಾಜ್ಞೌ ದ್ವಾವಜಾವೀಶಾನೀಶೌ' (ಶ್ವೇ. ೧-೯), 'ತಮೀಶ್ವರಾಣಾಂ ಪರಮಂ ಮಹೇಶ್ವರಂ ತಂ ದೇವತಾನಾಂ ಪರಮಂ ಚ ದೈವತಮ್ । ಪತಿಂ ಪತೀನಾಂ ಪರಮಂ ಪರಸ್ತಾದ್ ವಿದಾಮ ದೇವಂ ಭುವನೇಶಮೀಡ್ಯಮ್' (ಶ್ವೇ. ೬-೭), 'ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (ಶ್ವೇ. ೬-೮), 'ಏಷ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಙ್ಕಲ್ಪಃ' (ಛಾಂ. ೮-೧-೫) ಇತ್ಯಾದ್ಯಾಃ ಶ್ರುತಯೋ ಜ್ಞಾತೃತ್ವಪ್ರಮುಖಾನ್ ಕಲ್ಯಾಣಗುಣಾನ್ ಜ್ಞಾನಸ್ವರೂಪಸ್ಯೈವ ಬ್ರಹ್ಮಣಃ ಸ್ವಾಭಾವಿಕಾನ್ ವದನ್ತಿ । ಸಮಸ್ತಹೇಯರಹಿತತಾಂ ಚ ॥

ನಿರ್ಗುಣವಾಕ್ಯಾನಾಂ ಸಗುಣವಾಕ್ಯಾನಾಂ ಚ ವಿಷಯಮ್ 'ಅಪಹತಪಾಪ್ಮೇತ್ಯಾದ್ಯಪಿಪಾಸ' ಇತ್ಯನ್ತೇನ ಹೇಯಗುಣಾನ್ ಪ್ರತಿಷಿಧ್ಯ 'ಸತ್ಯಕಾಮಃ ಸತ್ಯಸಙ್ಕಲ್ಪಃ' ಇತಿ ಬ್ರಹ್ಮಣಃ ಕಲ್ಯಾಣಗುಣಾನ್ ವಿದಧತೀ ಇಯಂ ಶ್ರುತಿರೇವ ವಿವಿನಕ್ತೀತಿ ಸಗುಣನಿರ್ಗುಣವಾಕ್ಯಯೋರ್ವಿರೋಧಾಭಾವಾತ್ ; ಅನ್ಯತರಸ್ಯ ಮಿಥ್ಯಾವಿಷಯತಾಶ್ರಯಣಮಪಿ ನಾಶಙ್ಕನೀಯಮ್ ॥

(ಅರ್ಥ)

ನಿರ್ಗುಣವಾಕ್ಯಕ್ಕೆ (ಇದರಿಂದ) ವಿರೋಧವೂ ಆಗುವದಿಲ್ಲ. ಏಕೆಂದರೆ 'ನಿರ್ಗುಣ' (?), 'ನಿರಂಜನ' (ಶ್ವೇ.೬-೧೯), 'ನಿಷ್ಕಲವೂ ನಿಷ್ಕ್ರಿಯವೂ ಶಾಂತವೂ' (ಶ್ವೇ. ೬-೧೯)- ಮುಂತಾದ ಆ (ಶ್ರುತಿ)ಗಳಿಗೆ ಪ್ರಾಕೃತಹೇಯ ಗುಣಗಳೇ ವಿಷಯ.[1]

---

1. ಪ್ರಾಕೃತವಾದ ಹೇಯಗುಣಗಳನ್ನು ಮಾತ್ರ ಅವು ಅಲ್ಲಗಳೆಯುವವೇ ಹೊರತು ಬ್ರಹ್ಮಕ್ಕೆ ಯಾವ ಗುಣವೂ ಇಲ್ಲವೆಂದೇನೂ ಹೇಳುವದಿಲ್ಲ- ಎಂಬರ್ಥ.

ಜ್ಞಾನಮಾತ್ರವೇ (ಬ್ರಹ್ಮದ) ಸ್ವರೂಪವೆಂದು ಹೇಳುವ ಶ್ರುತಿಗಳೂ ಬ್ರಹ್ಮವು ಜ್ಞಾನಸ್ವರೂಪವಾಗಿದೆ ಎಂದು ಹೇಳುತ್ತವೆ; ಅಷ್ಟುಮಾತ್ರದಿಂದ ನಿರ್ವಿಶೇಷಜ್ಞಾನ ಮಾತ್ರವೇ ತತ್ತ್ವವೆಂದಾಗುವದಿಲ್ಲ; ಏಕೆಂದರೆ ಜ್ಞಾತೃವೇ ಜ್ಞಾನಸ್ವರೂಪ ನಾಗಿರುತ್ತಾನೆ. ಜ್ಞಾತೃರೂಪನಾಗಿರುವ (ಬ್ರಹ್ಮವೇ) ರತ್ನ, ಸೂರ್ಯ, ದೀಪ-ಮುಂತಾದವುಗಳಂತೆ ಜ್ಞಾನ(ಗುಣ)ಕ್ಕೆ ಆಶ್ರಯನಾಗಿರುತ್ತಾನೆಂದು (ಹಿಂದೆ) ಹೇಳಿಯೇಇರುತ್ತೇವೆ.[1] ಎಲ್ಲಾ ಶ್ರುತಿಗಳೂ ಜ್ಞಾತೃತ್ವವನ್ನೇ ಅಲ್ಲವೆ, ಹೇಳುತ್ತಿವೆ ?[2] 'ಯಾವನು ಸರ್ವಜ್ಞನೂ ಸರ್ವವಿದನೂ (ಆಗಿರುತ್ತಾನೋ)' (ಮುಂ. ೧-೧-೯), 'ಅದು ಹೀಗೆಂದು ಆಲೋಚಿಸಿತು' (ಛಾಂ. ೬-೨-೩), 'ಆ ಈ ದೇವತೆಯು ಹೀಗೆಂದು ಆಲೋಚಿಸಿತು' (ಛಾಂ. ೬-೩-೨), 'ಅವನು ಲೋಕಗಳನ್ನು ಸೃಷ್ಟಿಸುವೆನು ಎಂದು ಆಲೋಚಿಸಿಕೊಂಡನು' (ಐ. ೧-೧), 'ನಿತ್ಯರುಗಳಿಗೆಲ್ಲ ನಿತ್ಯನಾಗಿ ಚೇತನರುಗಳಿಗೆ ಚೇತನನಾಗಿ, ತಾನೊಬ್ಬನೇ ಬಹು(ಜೀವರಿಗೆ) ಕಾಮುಗಳನ್ನು ಒದಗಿಸಿಕೊಡುವನೋ' (ಕಾ. ೨-೨-೧೩), 'ಜ್ಞ, ಅಜ್ಞ- ಇಬ್ಬರೂ ಜನ್ಮರಹಿತರು, ಈಶ ಮತ್ತು ಅನೀಶರಾಗಿರುವರು' (ಶ್ವೇ. ೧-೯), 'ಈಶ್ವರರುಗಳಿಗೆಲ್ಲ ಹೆಚ್ಚಿನವನಾದ ಆ ಮಹೇಶ್ವರನನ್ನು, ದೇವತೆಗಳಿಗೆಲ್ಲ ಹೆಚ್ಚಿನ ದೇವತೆಯಾಗಿರುವವನನ್ನು, ಪತಿಗಳಿಗೆಲ್ಲ ಪರಮಪತಿಯಾದವನನ್ನು (ಎಲ್ಲಕ್ಕೂ) ಆಚೆ ಇರುವ, ಭುವನಗಳಿಗೆಲ್ಲ ಒಡೆಯನಾದ, ಸ್ತುತ್ಯನಾದ ಆ ದೇವನನ್ನು ನಾವು ಅರಿಯುವಂತಾಗಲಿ!' (ಶ್ವೇ.೬-೭), 'ಆತ್ಮನಿಗೆ ಕಾರ್ಯವೂ ಇಲ್ಲ, ಕರಣವೂ ಇಲ್ಲ, ಆತನಿಗೆ ಸಮನಾದವನೂ ಹೆಚ್ಚಿನವನೂ ಇಲ್ಲ. ಇವನ ಪರಶಕ್ತಿಯು ವಿವಿಧವಾಗಿದೆಯೆಂದೇ ಹೇಳುತ್ತಾರೆ. ಜ್ಞಾನ, ಬಲ, ಕ್ರಿಯೆ-ಇವು (ಆತನಿಗೆ) ಸ್ವಾಭಾವಿಕ (ವಾಗಿರುತ್ತವೆ) (ಶ್ವೇ. ೬-೮), 'ಈ ಆತ್ಮನು ಪಾಪಗಳನ್ನೆಲ್ಲ ನಾಶಪಡಿಸಿಕೊಂಡಿರುವವನು, ಮುಪ್ಪಿಲ್ಲದವನು, ಸಾವಿಲ್ಲದವನು, ಶೋಕವಿಲ್ಲದವನು, ಹಸಿವಿಲ್ಲದವನು, ನೀರಡಿಕೆಯಿಲ್ಲದವನು, ಸತ್ಯಕಾಮನು, ಸತ್ಯಸಂಕಲ್ಪನು' (ಛಾಂ. ೮-೧-೫)-ಇವೇ ಮುಂತಾದ ಶ್ರುತಿಗಳು ಜ್ಞಾತೃತ್ವವೇ ಮುಂತಾದ ಕಲ್ಯಾಣಗುಣಗಳು ಜ್ಞಾನಸ್ವರೂಪವೇ ಆಗಿರುವ ಬ್ರಹ್ಮಕ್ಕೆ ಸ್ವಾಭಾವಿಕವಾಗಿರುವವೆಂದೂ ಯಾವ ಹೇಯ ಗುಣಗಳೂ ಇಲ್ಲದವನೆಂದೂ ಹೇಳುತ್ತವೆ. ನಿರ್ಗುಣವಾಕ್ಯಗಳ ಮತ್ತು ಸಗುಣವಾಕ್ಯಗಳ ವಿಷಯವು ಯಾವದೆಂಬುದನ್ನು[3] 'ಅಪಹತಪಾಪ್ಮನು' ಎಂದುಮುಂತಾಗಿ

---

1. ೧೧೦ನೆಯ ಪುಟವನ್ನು ನೋಡಿ.

2. ಜ್ಞಾನಸ್ವರೂಪಮಾತ್ರವನ್ನೇನೂ ಹೇಳುವದಿಲ್ಲ. ಇವುಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

3. ನಿರ್ಗುಣಶ್ರುತಿಗಳಿಗೆ ಹೇಯಗುಣಗಳನ್ನು ನಿಷೇಧಿಸುವದೇ ಗುರಿ; ಸಗುಣಶ್ರುತಿಗಳಿಗೆ ಕಲ್ಯಾಣಗುಣಗಳನ್ನು ತಿಳಿಸುವದೇ ಗುರಿ-ಎಂಬುದನ್ನು. ಈ ವಿಷಯಕ್ಕೆ ಪೀಠಿಕೆಯನ್ನೂ ಪರಿಶಿಷ್ಟವನ್ನೂ ನೋಡಿ.

'ನೀರಡಿಕೆಯಿಲ್ಲದವನು' ಎಂಬವರೆಗಿನ (ಗ್ರಂಥ)ದಿಂದ ಹೇಯಗುಣಗಳನ್ನು ಅಲ್ಲಗಳೆದು 'ಸತ್ಯಕಾಮನು ಸತ್ಯಸಂಕಲ್ಪನು' ಎಂದು ಬ್ರಹ್ಮಕ್ಕೆ ಕಲ್ಯಾಣಗುಣಗಳನ್ನು ವಿಧಾನಮಾಡುವ ಈ ಶ್ರುತಿಯೇ ವಿಂಗಡಿಸಿ ತಿಳಿಸುತ್ತದೆಯಾದ್ದರಿಂದ ಸಗುಣ ನಿರ್ಗುಣವಾಕ್ಯಗಳಿಗೆ ವಿರೋಧವಿಲ್ಲದಿರುವದರಿಂದ ಇವೆರಡರೊಳಗೆ ಒಂದು ಮಿಥ್ಯಾ ವಿಷಯಕವೆಂಬುವನ್ನು ಆಶ್ರಯಿಸಬೇಕೆಂದೂ ಶಂಕಿಸಬಾರದು.

(ಮೂಲ)

'ಭೀಷಾಽಸ್ಮಾದ್ವಾತಃ ಪವತೇ' (ತೈ. ೨-೮) ಇತ್ಯಾದಿನಾ ಬ್ರಹ್ಮಗುಣಾನ್ ಆರಭ್ಯ 'ತೇ ಯೇ ಶತಮ್' (ತೈ. ೨-೮) ಇತ್ಯನುಕ್ರಮೇಣ ಕ್ಷೇತ್ರಜ್ಞಾನನ್ದಾತಿಶಯಮುಕ್ತ್ವಾ 'ಯತೋ ವಾಚೋ ನಿವರ್ತನ್ತೇ। ಅಪ್ರಾಪ್ಯ ಮನಸಾ ಸಹ। ಆನನ್ದಂ ಬ್ರಹ್ಮಣೋ ವಿದ್ವಾನ್' (ತೈ. ೨-೯) ಇತಿ ಬ್ರಹ್ಮಣಃ ಕಲ್ಯಾಣಗುಣಾನನ್ತ್ಯಮ್ ಆತ್ಯಾದರೇಣ ವದತಿ- ಇಯಂ ಶ್ರುತಿಃ ॥

(ಅರ್ಥ)

'ಈ (ಬ್ರಹ್ಮ)ದ ಅಂಜಿಕೆಯಿಂದ ಗಾಳಿಯು ಬೀಸುತ್ತದೆ' (ತೈ. ೨-೮) ಮುಂತಾದ ವಾಕ್ಯದಿಂದ ಬ್ರಹ್ಮದ ಗುಣಗಳನ್ನು (ಹೇಳುವದಕ್ಕೆ) ಆರಂಭಿಸಿ, 'ಆ (ಮಾನುಷಾ)ನಂದಗಳು ನೂರಾದರೆ' (ತೈ. ೨-೮) ಎಂದು ಅನುಕ್ರಮವಾಗಿ ಕ್ಷೇತ್ರಜ್ಞರ ಆನಂದದ ಹೆಚ್ಚಿಗೆಯನ್ನು ಹೇಳಿ, 'ಯಾವದರಿಂದ ವಾಕ್ಕುಗಳು ಮನಸ್ಸಿನೊಡನೆ (ಅದನ್ನು) ಮುಟ್ಟಲಾರದೆ ಹಿಂತಿರುಗುವವೋ, (ಆ) ಬ್ರಹ್ಮದ ಆನಂದವನ್ನು ಅರಿತಾತನು' (ತೈ. ೨-೯) ಎಂದು ಬ್ರಹ್ಮದ **ಕಲ್ಯಾಣಗುಣಗಳ ಆನಂತ್ಯ**ವನ್ನು[1] ಈ ಶ್ರುತಿಯು ಅತ್ಯಾದರದಿಂದ ಹೇಳುತ್ತಿದೆ.

(ಮೂಲ)

'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ। ಬ್ರಹ್ಮಣಾ ವಿಪಶ್ಚಿತಾ' (ತೈ. ೭-೧) ಇತಿ ಬ್ರಹ್ಮವೇದನಫಲಮ್ ಅವಗಮಯದ್ ವಾಕ್ಯಂ ಪರಸ್ಯ ವಿಪಶ್ಚಿತೋ ಬ್ರಹ್ಮಣೋ ಗುಣಾನನ್ತ್ಯಂ ಬ್ರವೀತಿ। ವಿಪಶ್ಚಿತಾ ಬ್ರಹ್ಮಣಾ ಸಹ ಸರ್ವಾನ್ ಕಾಮಾನ್ ಸಮಶ್ನುತೇ। ಕಾಮ್ಯನ್ತ ಇತಿ ಕಾಮಾಃ; ಕಲ್ಯಾಣ ಗುಣಾಃ। ಬ್ರಹ್ಮಣಾ ಸಹ ತದ್ಗುಣಾನ್ ಸರ್ವಾನ್ ಅಶ್ನುತೇ ಇತ್ಯರ್ಥಃ। ದಹರವಿದ್ಯಾಯಾಂ 'ತಸ್ಮಿನ್ ಯದನ್ತಸ್ತದನ್ವೇಷ್ಟವ್ಯಮ್' (ಛಾಂ. ೮-೧-೧) ಇತಿವದ್ ಗುಣಪ್ರಾಧಾನ್ಯಂ ವಕ್ತುಂ ಸಹಶಬ್ದಃ। ಫಲೋಪಾಸನಯೋಃ ಪ್ರಕಾರೈಕ್ಯಂ 'ಯಥಾಕ್ರತುರಸ್ಮಿನ್ ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ' (ಛಾಂ. ೩-೧೪-೧) ಇತಿ ಶ್ರುತ್ಯೈವ ಸಿದ್ಧಮ್ ॥

---

1. ಮಾತಿನಿಂದ ಹೇಳುವದಕ್ಕಾಗಲಿ ಮನಸ್ಸಿನಿಂದ ಚಿಂತಿಸುವದಕ್ಕಾಗಲಿ ಆಗದಷ್ಟು ಅನಂತವೆಂಬುದನ್ನು – ಎಂದರ್ಥ.

(ಅರ್ಥ)

'ಅವನು ಎಲ್ಲಾ ಕಾಮುಗಳನ್ನೂ ಸರ್ವಜ್ಞನಾದ ಬ್ರಹ್ಮದೊಡನೆ ಪಡೆದು ಕೊಳ್ಳುತ್ತಾನೆ' (ತೈ. ೨–೧) ಎಂದು ಬ್ರಹ್ಮವೇದನದ ಫಲವನ್ನು ಗೊತ್ತುಪಡಿಸುವ ವಾಕ್ಯವು ಹೆಚ್ಚಿನ ಸರ್ವಜ್ಞನಾದ ಬ್ರಹ್ಮದ ಗುಣಗಳು ಅನಂತವೆಂದು ಹೇಳುತ್ತಿದೆ. **'ವಿಪಶ್ಚಿತಾ ಬ್ರಹ್ಮಣಾ ಸಹ ಸರ್ವಾನ್ ಕಾಮಾನ್ ಸಮಶ್ನುತೇ'** (ಎಂದು ಅನ್ವಯ). ಕಾಮುಗಳು ಎಂದರೆ ಕಾಮಿಸಲ್ಪಡುವ ಕಲ್ಯಾಣಗುಣಗಳು. ಬ್ರಹ್ಮದೊಡನೆ ಅದರ ಗುಣಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ ಎಂದರ್ಥ. **ದಹರ ವಿದ್ಯೆಯಲ್ಲಿ** 'ಅದರೊಳಗೆ ಯಾವದಿದೆಯೋ ಅದನ್ನು ಹುಡುಕಿಕೊಳ್ಳಬೇಕು' (ಛಾಂ.೮–೧–೧) ಎಂಬಲ್ಲಿ ಹೇಗೋ ಹಾಗೆಯೇ ಇಲ್ಲಿಯೂ ಗುಣಗಳಿಗೆ ಪ್ರಾಧಾನ್ಯವನ್ನು ಹೇಳುವದಕ್ಕೆ 'ಸಹ' ಎಂಬ ಶಬ್ದವನ್ನು ಪ್ರಯೋಗಿಸಿದೆ. ಫಲ, ಉಪಾಸನೆ –ಇವೆರಡೂ ಒಂದೇ ಪ್ರಕಾರವೆಂಬುದು 'ಈ ಲೋಕದಲ್ಲಿ ಎಂಥ ಕ್ರತುವುಳ್ಳವನಾಗಿರುತ್ತಾನೋ ಹಾಗೆಯೇ ಇಲ್ಲಿಂದ ಹೋದಬಳಿಕ ಆಗುವನು' (ಛಾಂ. ೩–೧೪–೧) ಂಬ ಶ್ರುತಿಯಿಂದಲೇ ಸಿದ್ಧವಾಗಿರುತ್ತದೆ.

(ಮೂಲ)

'ಯಸ್ಯಾಮತಂ ತಸ್ಯ ಮತಮ್', 'ಅವಿಜ್ಞಾತಂ ವಿಜಾನತಾಮ್' (ಕೇ. ೨–೩) ಇತಿ ಬ್ರಹ್ಮಣೋ ಜ್ಞಾನಾವಿಷಯತ್ವಮುಕ್ತಂ[1] ಚೇತ್, 'ಬ್ರಹ್ಮವಿದಾಪ್ನೋತಿ ಪರಮ್' (ತೈ.೨–೧), 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ.೩-೨-೯) ಇತಿ ಜ್ಞಾನಾನ್ಮೋಕ್ಷೋಪದೇಶೋ ನ ಸ್ಯಾತ್ । 'ಅಸನ್ನೇವ ಸ ಭವತಿ । ಅಸದ್ಬ್ರಹ್ಮೇತಿ ವೇದ ಚೇತ್ । ಅಸ್ತಿ ಬ್ರಹ್ಮೇತಿ ಚೇದ್ ವೇದ । ಸನ್ತಮೇನಂ ತತೋ ವಿದುಃ' (ತೈ.೨–೬) ಇತಿ ಬ್ರಹ್ಮವಿಷಯಜ್ಞಾನಸದ್ಭಾವಾಸದ್ಭಾವಾಭ್ಯಾಮ್ ಆತ್ಮನಾಶಾಽಽತ್ಮಸತ್ತಾಂ ಚ ವದತಿ। ಅತ ಬ್ರಹ್ಮವಿಷಯವೇದನಮೇವಾಪವರ್ಗೋಪಾಯಂ ಸರ್ವಾಃ ಶ್ರುತಯೋ ವಿದಧತಿ । ಜ್ಞಾನಂ ಚೋಪಾಸನಾತ್ಮಕಮ್, ಉಪಾಸ್ಯಂ ಚ ಬ್ರಹ್ಮ ಸಗುಣಮ್ ಇತ್ಯುಕ್ತಮ್। 'ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ' (ತೈ. ೨ –೯) ಇತಿ ಬ್ರಹ್ಮಣೋಽನನ್ತಸ್ಯ, ಅಪರಿಚ್ಛಿನ್ನಗುಣಸ್ಯ ವಾಙ್ಮನಸಯೋರೇತಾವದಿತಿ ಪರಿಚ್ಛೇದಾಯೋಗ್ಯತ್ವಶ್ರವಣೇನ 'ಬ್ರಹ್ಮೈತಾವದ್' ಇತಿ ಬ್ರಹ್ಮಪರಿಚ್ಛೇದಜ್ಞಾನವತಾಮ್ ಬ್ರಹ್ಮ ವಿಜ್ಞಾತಮ್ ಅಮತಮ್ ಇತ್ಯುಕ್ತಮ್, ಅಪರಿಚ್ಛಿನ್ನತ್ವಾದ್ ಬ್ರಹ್ಮಣಃ । ಅನ್ಯಥಾ 'ಯಸ್ಯಾಮತಂ ತಸ್ಯ ಮತಮ್.... ವಿಜ್ಞಾತಮವಿಜಾನತಾಮ್' (ಕೇ. ೨–೩) ಇತಿ ಮತತ್ವ ವಿಜ್ಞಾತತ್ವವಚನಂ ತತ್ರೈವ ವಿರುಧ್ಯತೇ ॥

---

1. 'ಉಕ್ತಮಿತಿ ಚೇತ್' ಎಂಬ ಪೂ॥ ಪಾಠವು ಸರಿಯಲ್ಲ ; ಇದರ ಅನುವಾದದ ಟಿಪ್ಪಣಿಯನ್ನು ನೋಡಿ.

(ಅರ್ಥ)

'ಯಸ್ಯಾಮತಮ್ ತಸ್ಯ ಮತಮ್, ಅವಿಜ್ಞಾತಂ ವಿಜಾನತಾಮ್', ('ಯಾವನಿಗೆ ಅಮತವೋ ಅವನಿಗೆ ಮತವು, ಅರಿತವರಿಗೆ ಅವಿಜ್ಞಾತವು') (ಕೇ. ೨-೩) ಎಂಬಲ್ಲಿ ಜ್ಞಾನಕ್ಕೆ (ಬ್ರಹ್ಮವು) ಅವಿಷಯವೆಂದು ಹೇಳಿದ್ದರೆ[1] 'ಬ್ರಹ್ಮವನ್ನು ಅರಿತುಕೊಂಡವನು ಪರ(ಪುರುಷಾರ್ಥವನ್ನು) ಪಡೆದುಕೊಳ್ಳುತ್ತಾನೆ' (ತೈ. ೨-೧), 'ಬ್ರಹ್ಮವನ್ನರಿತರೆ ಬ್ರಹ್ಮವೇ ಆಗುತ್ತಾನೆ' (ಮುಂ. ೩-೨-೯) ಎಂದು ಜ್ಞಾನದಿಂದ ಮೋಕ್ಷವಾಗುವದೆಂದು (ಶ್ರುತಿಯಲ್ಲಿ) ಉಪದೇಶವಿರುತ್ತಿರಲಿಲ್ಲ. 'ಬ್ರಹ್ಮವು ಅಸತ್ತೆಂದು ತಿಳಿದನಾದರೆ ಅವನು ಅಸತ್ತೇ ಆಗುವನು; ಬ್ರಹ್ಮವು ಇದೆ ಎಂದರಿತನಾದರೆ ಇವನು ಇದಾನೆಂದು ತಿಳಿಯುತ್ತಾರೆ' (ತೈ. ೨-೬) ಎಂದು ಬ್ರಹ್ಮವಿಷಯದ ಜ್ಞಾನವು ಇರುವದು, ಇಲ್ಲದ್ದು- ಇವುಗಳಿಂದ ತನ್ನ ನಾಶ ಮತ್ತು ಇರವು- ಎಂದೂ (ಶ್ರುತಿ) ಹೇಳುತ್ತಿದೆ. ಆದ್ದರಿಂದ ಬ್ರಹ್ಮವಿಷಯವಾದ ವೇದನವನ್ನೇ ಮೋಕ್ಷಕ್ಕೆ ಉಪಾಯವೆಂದು ಶ್ರುತಿಗಳೂ ಹೇಳುತ್ತಿವೆ. (ಇಲ್ಲಿ) ಜ್ಞಾನವೆಂಬುದು ಉಪಾಸನಾರೂಪವಾದದ್ದು. ಉಪಾಸ್ಯವಾದ ಬ್ರಹ್ಮವು ಸಗುಣ- ಎಂದು (ಹಿಂದೆಯೇ)[2] ಹೇಳಿರುತ್ತೇವೆ. 'ಯಾವದನ್ನು ಮುಟ್ಟಲಾರದೆ ವಾಕ್ಕುಗಳು ಮನಸ್ಸಿನೊಡನೆ ಹಿಂತಿರುಗುವವೋ' (ತೈ. ೨-೯) ಎಂದು ಅನಂತವಾದ ಬ್ರಹ್ಮವು, ಇಷ್ಟೆಂಬ (ಲೆಕ್ಕವಿಲ್ಲದ) ಗುಣವುಳ್ಳದ್ದಾದ್ದರಿಂದ ವಾಙ್ಮನಸ್ಸುಗಳು ಇಷ್ಟೇ ಎಂಬ ಪರಿಚ್ಛೇದಕ್ಕೆ ತಕ್ಕದ್ದಲ್ಲವೆಂದು ಶ್ರುತಿಯಲ್ಲಿರುವದರಿಂದ ಬ್ರಹ್ಮವು ಇಂತಿಷ್ಟೇ ಎಂಬ ಪರಿಚ್ಛೇದಜ್ಞಾನವುಳ್ಳವರಿಗೆ ಬ್ರಹ್ಮವು 'ಅವಿಜ್ಞಾತವೂ ಅಮತವೂ' (ಆಗಿರುತ್ತದೆ) ಎಂದು ಹೇಳಿರುತ್ತದೆ; ಏಕೆಂದರೆ ಬ್ರಹ್ಮವು ಅಪರಿಚ್ಛಿನ್ನವಾಗಿರುತ್ತದೆ. ಹೀಗಲ್ಲದೆ ಇದ್ದರೆ[3] 'ಯಾವನಿಗೆ ಅಮತವಾಗಿರುತ್ತದೆಯೋ ಅವನಿಗೆ ಮತವಾಗಿರುತ್ತದೆ.... ಅರಿತುಕೊಳ್ಳದೆ ಇರುವವರಿಗೆ ವಿಜ್ಞಾತವಾಗಿರುತ್ತದೆ' ಎಂದು (ಬ್ರಹ್ಮವು) ಮತವೂ ವಿಜ್ಞಾತವೂ ಆಗಿರುತ್ತದೆ- (ಕೇ. ೨-೩) ಎಂದು ಹೇಳಿರುವದಕ್ಕೆ ಆ (ಶ್ರುತಿಯಲ್ಲಿ)ಯೇ ವಿರುದ್ಧವಾಗುತ್ತದೆ.[4]

---

1. ಬ್ರಹ್ಮವು ಜ್ಞಾನಕ್ಕೆ ವಿಷಯವಲ್ಲವೆಂದಾಗಲಿ, ಉಪಾಸನೆಗೆ ವಿಷಯವಲ್ಲವೆಂದಾಗಲಿ, ಸಗುಣೋಪಾಸನೆಗೆ ವಿಷಯವಲ್ಲವೆಂದಾಗಲಿ ಶ್ರುತಿಯಲ್ಲಿ ಹೇಳಿಲ್ಲ ಎಂದು ಭಾವ. ಶ್ರು. ಪ್ರ.ಯನ್ನು ನೋಡಿ.

2. ೩೩ನೆಯ ಪುಟದಲ್ಲಿ.

3. ನಿಜವಾಗಿಯೂ ಬ್ರಹ್ಮವು ಜ್ಞಾನಕ್ಕೆ ವಿಷಯವಲ್ಲ ಎಂದೇ ಶ್ರುತಿಯ ಅಭಿಪ್ರಾಯವೆಂದರೆ.

4. ಇಲ್ಲಿ ಅವನಿಗೆ ಮತವಾಗಿದೆ, ವಿಜ್ಞಾತವಾಗಿದೆ ಎಂದು ಸ್ಪಷ್ಟವಾಗಿ ಹೇಳಿರುತ್ತದೆಯಲ್ಲವೆ? ಆದ್ದರಿಂದ ಅಮತ, ಅವಿಜ್ಞಾತ- ಎಂದೇ ಅರ್ಥವನ್ನು ಮಾಡಿದರೆ ಇದಕ್ಕೆ ವಿರುದ್ಧವಾಗುತ್ತದೆ ಎಂದರ್ಥ.

(ಮೂಲ)

ಯತ್ತು 'ನ ದೃಷ್ಟೇರ್ದ್ರಷ್ಟಾರಂ .... ನ ಮತೇರ್ಮನ್ತಾರಮ್' (ಬೃ. ೩-೪-೨) ಇತಿ ಶ್ರುತಿಃ, ದೃಷ್ಟೇರ್ಮತೇರ್ವ್ಯತಿರಿಕ್ತಂ ದ್ರಷ್ಟಾರಂ ಮನ್ತಾರಂ ಚ ಪ್ರತಿಷೇಧತಿ ಇತಿ, ತದಾಗನ್ತುಕಚೈತನ್ಯಗುಣಯೋಗಿತಯಾ ಜ್ಞಾತುರಜ್ಞಾನಸ್ವರೂಪತಾಂ ಕುತರ್ಕಸಿದ್ಧಾಂ ಮತ್ವಾ 'ನ ತಥಾ ಆತ್ಮಾನಂ ಪಶ್ಯೇಃ, ನ ಮನ್ವೀಥಾಃ, ಅಪಿ ತು ದ್ರಷ್ಟಾರಂ ಮನ್ತಾರಮಪಿ ಆತ್ಮಾನಂ ದೃಷ್ಟಿಮತಿರೂಪಮೇವ ಪಶ್ಯೇಃ' ಇತ್ಯಭಿದಧಾತಿ ಇತಿ ಪರಿಹೃತಮ್ । ಅಥವಾ ದೃಷ್ಟೇರ್ದ್ರಷ್ಟಾರಮ್, ಮತೇರ್ಮನ್ತಾರಂ ಜೀವಾತ್ಮಾನಂ ಪ್ರತಿಷಿಧ್ಯ ಸರ್ವಭೂತಾನ್ತರಾತ್ಮಾನಂ ಪರಮಾತ್ಮಾನಮೇವೋಪಾಸ್ಸ್ವ, ಇತಿ ವಾಕ್ಯಾರ್ಥಃ। ಅನ್ಯಥಾ 'ವಿಜ್ಞಾತಾರಮರೇ ಕೇನ ವಿಜಾನೀಯಾತ್' (ಬೃ. ೨-೪-೧೪) ಇತ್ಯಾದಿ ಜ್ಞಾತೃತ್ವಶ್ರುತಿವಿರೋಧಶ್ಚ ॥

(ಅರ್ಥ)

ಇನ್ನು 'ನ ದೃಷ್ಟೇರ್ದ್ರಷ್ಟಾರಂ.... ನ ಮತೇರ್ಮನ್ತಾರಮ್'( ಬೃ. ೩-೪-೨) ಎಂಬ ಶ್ರುತಿಯು ದೃಷ್ಟಿಗಿಂತಲೂ ಮತಿಗಿಂತಲೂ ವ್ಯತಿರಿಕ್ತನಾದ ದ್ರಷ್ಟೃವನ್ನೂ ಮಂತೃವನ್ನೂ ಅಲ್ಲಗಳೆಯುತ್ತದೆ- ಎಂದೆಯಲ್ಲ[1], ಅದು ಆಗಂತುಕವಾದ ಚೈತನ್ಯಗುಣಯೋಗವಿರುವದರಿಂದ ಜ್ಞಾತೃವು ಅಜ್ಞಾನಸ್ವರೂಪವೆಂದು ಕುತರ್ಕದಿಂದ ಸಿದ್ಧವಾಗುವದೆಂಬ ಅಭಿಪ್ರಾಯದಿಂದ 'ಹಾಗೆಂದು ಆತ್ಮನನ್ನು ತಿಳಿಯದಿರು[2], ಯೋಚಿಸಿಕೊಳ್ಳಬೇಡ, ಮತ್ತೆ ಹೇಗೆಂದರೆ ದ್ರಷ್ಟೃವೂ ಮಂತೃವೂ ಆಗಿರುವ ಆತ್ಮನನ್ನು ದೃಷ್ಟಿಮತಿಗಳ ರೂಪವಾಗಿಯೇ ಇರುವನೆಂದು ಕಾಣು' ಎಂದು ಹೇಳುತ್ತಿದೆ- ಎಂದು ಪರಿಹರಿಸಿದ್ದಾಗಿದೆ. ಅಥವಾ ದೃಷ್ಟಿಯ ದ್ರಷ್ಟೃವೂ ಮತಿಯ ಮಂತೃವೂ ಆಗಿರುವ ಜೀವಾತ್ಮನನ್ನು ಪ್ರತಿಷೇಧಿಸಿ ಸರ್ವಭೂತಗಳಿಗೂ ಅಂತರಾತ್ಮನಾಗಿರುವ ಪರಮಾತ್ಮನನ್ನೇ ಉಪಾಸನೆಮಾಡು- ಎಂದು ಈ ವಾಕ್ಯಕ್ಕೆ ಅರ್ಥ.[3] ಹಾಗೆ (ಇಟ್ಟುಕೊಳ್ಳದೆಹೋದರೆ) 'ಎಲೆ, ವಿಜ್ಞಾತೃವನ್ನು ಏತರಿಂದ ಅರಿತುಕೊಳ್ಳುವದಕ್ಕಾದೀತು ?' (ಬೃ. ೨-೪-೧೪) ಎಂದುಮುಂತಾಗಿ ಜ್ಞಾತೃತ್ವವನ್ನು ಹೇಳುವ ಶ್ರುತಿಗೆ ವಿರೋಧವಾದೀತು.[4]

---

1. ಇದು 'ದೃಷ್ಟೇಃ', 'ಮತೇಃ' ಎಂಬಿವು ಪಂಚಮೀವಿಭಕ್ತಿಯೆಂಬ ದೃಷ್ಟಿಯಿಂದ ಹೇಳಿದ್ದು.

2. ಅಜ್ಞಾನಸ್ವರೂಪನೆಂದೂ ತಿಳಿಯದಿರು, ಅವನು ಜ್ಞಾನಸ್ವರೂಪನೇ ಆಗಿರುತ್ತಾನೆ -ಎಂದರ್ಥ.

3. ಇಲ್ಲಿ ಜೀವನಿಷೇಧವು ಪ್ರಕೃತವೆ ?- ಎಂಬ ಬಗೆಗೆ ಪರಿಶಿಷ್ಟವನ್ನು ನೋಡಿ.

4. ಅಲ್ಲಿ ಪರಮಾತ್ಮನು ವಿಜ್ಞಾತೃವೆಂದೇ ಹೇಳಿರುತ್ತದೆ- ಎಂದಭಿಪ್ರಾಯ.

(ಮೂಲ)

'ಆನನ್ದೋ ಬ್ರಹ್ಮ' (ತೈ. ೩-೬) ಇತಿ, ಆನನ್ದಮಾತ್ರಮೇವ ಬ್ರಹ್ಮ ಸ್ವರೂಪಂ ಪ್ರತೀಯತ ಇತಿ ಯದುಕ್ತಮ್, ತತ್ ಜ್ಞಾನಾಶ್ರಯಸ್ಯ ಬ್ರಹ್ಮಣೋ ಜ್ಞಾನಂ ಸ್ವರೂಪಮ್ ಇತಿ ವದತಿ – ಇತಿ ಪರಿಹೃತಮ್ । ಜ್ಞಾನಮೇವ ಹಿ ಅನುಕೂಲಮ್ 'ಆನನ್ದಃ' ಇತ್ಯುಚ್ಯತೇ । 'ವಿಜ್ಞಾನಮಾನನ್ದಂ ಬ್ರಹ್ಮ' (ಬೃ. ೩-೯-೨೮) ಇತಿ ಆನನ್ದರೂಪಮೇವ ಜ್ಞಾನಂ ಬ್ರಹ್ಮ – ಇತ್ಯರ್ಥಃ । ಅತ ಏವ ಭವತಾಮ್ ಏಕರಸತಾ । ಅಸ್ಯ ಜ್ಞಾನಸ್ವರೂಪಸ್ಯೈವ ಜ್ಞಾತೃತ್ವಮಪಿ ಶ್ರುತಿಶತಸಮಧಿಗತಮ್ ಇತ್ಯುಕ್ತಮ್ । ತದ್ವದೇವ 'ಸ ಏಕೋ ಬ್ರಹ್ಮಣ ಆನನ್ದಃ' (ತೈ. ೨-೮), 'ಆನನ್ದಂ ಬ್ರಹ್ಮಣೋ ವಿದ್ವಾನ್' (ತೈ. ೨-೯) ಇತಿ ವ್ಯತಿರೇಕನಿರ್ದೇಶಾಚ್ಚ ನಾಽಽನನ್ದಮಾತ್ರಂ ಬ್ರಹ್ಮ, ಅಪಿ ತು ಆನನ್ದಿ । ಜ್ಞಾತೃತ್ವಮೇವ ಹಿ ಆನನ್ದಿತ್ವಮ್ ॥

(ಅರ್ಥ)

'ಆನಂದವು ಬ್ರಹ್ಮ' (ತೈ. ೩-೬) ಎಂಬ (ಶ್ರುತಿಯಲ್ಲಿ) ಆನಂದಮಾತ್ರವೇ ಬ್ರಹ್ಮಸ್ವರೂಪವೆಂದು ಹೇಳಿದೆಯಲ್ಲ, ಆ ಅಭಿಪ್ರಾಯವನ್ನೇ ಜ್ಞಾನಕ್ಕೆ ಆಶ್ರಯವಾಗಿರುವ ಬ್ರಹ್ಮಕ್ಕೆ ಜ್ಞಾನವೇ ಸ್ವರೂಪವು ಎಂದು (ಶ್ರುತಿ) ಹೇಳುತ್ತಿದೆ– ಎಂದು ಪರಿಹರಿಸಿದ್ದಾಗಿದೆ. ಜ್ಞಾನವು ಅನುಕೂಲವಾಗಿದ್ದರೆ (ಅದನ್ನೇ) ಆನಂದ(ವೆಂದು) ಕರೆಯುತ್ತಾರಲ್ಲವೆ ? 'ವಿಜ್ಞಾನಮಾನನ್ದಂ ಬ್ರಹ್ಮ' (ಬೃ. ೩-೯-೨೮) ಎಂಬ (ಶ್ರುತಿಗೆ) ಆನಂದರೂಪವಾಗಿಯೇ ಇರುವ ಜ್ಞಾನವು ಬ್ರಹ್ಮವು–ಎಂದರ್ಥ. ಆದ್ದರಿಂದಲೇ ನಿಮ್ಮ (ಮತದಲ್ಲಿ) ಏಕರಸತ್ವವು (ಬ್ರಹ್ಮಕ್ಕೆ ಎಂಬುದು ಹೊಂದುತ್ತದೆ). ಈ (ಆತ್ಮನು) ಜ್ಞಾನಸ್ವರೂಪವೇ ಆಗಿದ್ದು ಜ್ಞಾತೃವಾಗಿರುತ್ತಾನೆ– ಎಂಬುದು ನೂರಾರು ಶ್ರುತಿಗಳಿಂದ ಗೊತ್ತಾಗಿರುತ್ತದೆ ಎಂದು ಹೇಳಿದ್ದಾಗಿದೆ. ಅದರಂತೆಯೇ 'ಅದೊಂದು ಬ್ರಹ್ಮದ ಆನಂದವು' (ತೈ. ೨-೮), 'ಬ್ರಹ್ಮದ ಆನಂದವನ್ನು ಅರಿತವನು' (ತೈ. ೨-೯) ಎಂದು ವ್ಯತಿರೇಕನಿರ್ದೇಶಮಾಡಿರುವದರಿಂದಲೂ ಬ್ರಹ್ಮವು ಬರಿಯ ಆನಂದವೇ ಅಲ್ಲ, ಮತ್ತೇನೆಂದರೆ ಆನಂದಿಯೂ ಆಗಿರುತ್ತದೆ. **ಜ್ಞಾತೃತ್ವವೇ ಅಲ್ಲವೆ, ಆನಂದಿತ್ವವು ?**

(ಮೂಲ)

ಯದಿದಮುಕ್ತಮ್ 'ಯತ್ರ ಹಿ ದ್ವೈತಮಿವ ಭವತಿ' (ಬೃ. ೨-೪-೧೪), 'ನೇಹ ನಾನಾಽಸ್ತಿ ಕಿಞ್ಚನ । ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ' (ಬೃ. ೪-೪-೧೯), 'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್' (ಬೃ. ೨-೪-೧೪) ಇತಿ ಭೇದನಿಷೇಧೋ ಬಹುಧಾ ದೃಶ್ಯತೇ ಇತಿ, ತತ್ ಕೃತ್ಸ್ನಸ್ಯ ಜಗತೋ ಬ್ರಹ್ಮಕಾರ್ಯತಯಾ ತದನ್ತರ್ಯಾಮಿ

ಕತಯಾ ಚ ತದಾತ್ಮಕತ್ವೇನೈಕ್ಯಾತ್, ತತ್ಪ್ರತ್ಯನೀಕನಾನಾತ್ವಂ ಪ್ರತಿಷಿಧ್ಯತೇ, ನ ಪುನಃ 'ಬಹು ಸ್ಯಾಂ ಪ್ರಜಾಯೇಯ' (ತೈ. ೨-೬) ಇತಿ ಬಹುಭವನಸಂಕಲ್ಪಪೂರ್ವಕಂ ಬ್ರಹ್ಮಣೋ ನಾನಾತ್ವಂ ಶ್ರುತಿಸಿದ್ಧಂ ಪ್ರತಿಷಿಧ್ಯತ ಇತಿ ಪರಿಹೃತಮ್ । ನಾನಾತ್ವನಿಷೇಧಾತ್ ಇಯಮ್ ಅಪರಮಾರ್ಥವಿಷಯಾ – ಇತಿ ಚೇತ್ ; ನ, ಪ್ರತ್ಯಕ್ಷಾದಿಸಕಲಪ್ರಮಾಣಾನವಗತಂ ನಾನಾತ್ವಂ ದುರಾರೋಹಂ ಬ್ರಹ್ಮಣಃ ಪ್ರತಿಪಾದ್ಯ ತದೇವ ಬಾಧ್ಯತ ಇತ್ಯುಪಹಾಸ್ಯಮಿದಮ್ ॥

(ಅರ್ಥ)

**'ಯತ್ರ ಹಿ ದ್ವೈತಮಿವ ಭವತಿ....'**, 'ಎಲ್ಲಿ ದ್ವೈತವಿದ್ದಂತೆ ಇರುವದೋ' (ಬೃ. ೨-೪-೧೪), 'ಇಲ್ಲಿ ಸ್ವಲ್ಪವೂ ನಾನಾತ್ವವಿರುವದಿಲ್ಲ; ಯಾವನು ಇಲ್ಲಿ ನಾನಾತ್ವವಿದ್ದಂತೆ ಕಾಣುತ್ತಾನೋ ಅವನು ಸಾವಿನಮೇಲೆ ಸಾವನ್ನು ಕಾಣುತ್ತಾನೆ' (ಬೃ. ೪-೪-೧೯). 'ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಯಿತೋ, ಅಲ್ಲಿ ಏತರಿಂದ ಯಾರನ್ನು ಕಂಡಾನು ?' (ಬೃ. ೨-೪-೧೪)- ಎಂದು ಭೇದವನ್ನು ಅಲ್ಲಗಳೆದಿರುವದು ಬಹುವಾಗಿ ಕಾಣಬರುತ್ತದೆ ಎಂದಿರಲ್ಲ, ಅದು ಇಡಿಯ ಜಗತ್ತು ಬ್ರಹ್ಮಕಾರ್ಯವಾಗಿರುವದರಿಂದಲೂ ಅದಕ್ಕೆ ಆ (ಬ್ರಹ್ಮವೇ) ಅಂತರ್ಯಾಮಿಯಾಗಿರುವದರಿಂದಲೂ ಅವನ್ನೇ ಆತ್ಮನಾಗುಳ್ಳದ್ದಾಗಿದೆಯಾಗಿ ಒಂದಾಗಿರುವದರಿಂದ, ಅವಕ್ಕೆ ವಿರುದ್ಧವಾದ ನಾನಾತ್ವವನ್ನು ಅಲ್ಲಗಳೆಯುತ್ತದೆಯೇ ಹೊರತು 'ಬಹುವಾಗುವೆನು, ಉತ್ಪತ್ತಿಯಾಗುವೆನು' (ತೈ. ೨-೬) ಎಂದು ಬಹುವಾಗುವ ಸಂಕಲ್ಪಪೂರ್ವಕವಾಗಿ ಬ್ರಹ್ಮವು ನಾನಾತ್ವವನ್ನು (ಪಡೆದಿದೆಯೆಂಬ) ಸಿದ್ಧವಾಗಿರುವದನ್ನೇ ಅಲ್ಲಗಳೆಯುವದಿಲ್ಲ- ಎಂದು ಪರಿಹರಿಸಿದ್ದಾಗಿದೆ. 'ನಾನಾತ್ವವನ್ನು ಪ್ರತಿಷೇಧಿಸಿರುವದರಿಂದ ಈ (ನಾನಾತ್ವಶ್ರುತಿಯು) ಅಪರಮಾರ್ಥವಿಷಯವಾದದ್ದು' ಎನ್ನುವಿರಾದರೆ ಹಾಗಲ್ಲ. ಪ್ರತ್ಯಕ್ಷಾದಿಯಾದ ಯಾವ ಪ್ರಮಾಣಗಳಿಂದಲೂ ಸಿದ್ಧವಾಗದೆ ಇರುವ ಅರಿಯಲಸಾಧ್ಯವಾದ ನಾನಾತ್ವವನ್ನು ಬ್ರಹ್ಮಕ್ಕೆ ಹೇಳಿ ಆ (ನಾನಾತ್ವ)ವನ್ನೇ (ಶ್ರುತಿಯಲ್ಲಿ) ಬಾಧಿಸಿರುತ್ತದೆ ಎಂಬುದಿದು ನಗೆಗೀಡಾದದ್ದು.[1]

(ಮೂಲ)

'ಯದಾ ಹ್ಯೇವೈಷ ಏತಸ್ಮಿನ್ನುದರಮನ್ತರಂ ಕುರುತೇ । ಅಥ ತಸ್ಯ ಭಯಂ ಭವತಿ ।' (ತೈ. ೨-೭) ಇತಿ ಬ್ರಹ್ಮಣಿ ನಾನಾತ್ವಂ ಪಶ್ಯತೋ ಭಯಪ್ರಾಪ್ತಿರಿತಿ ಯದುಕ್ತಮ್, ತದಸತ್; 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತ ಉಪಾಸೀತ' (ಛಾಂ. ೩-೧೪-೧) ಇತಿ ತನ್ನಾನಾತ್ವಾನುಸಂಧಾನಸ್ಯ ಶಾನ್ತಿ

1. ಬ್ರಹ್ಮವು ಬಹುರೂಪವಾಗಿ ಆಯಿತೆಂಬುದು ಶಾಸ್ತ್ರದಿಂದ ಹೊರತು ಮತ್ತೆ ಯಾವ ಪ್ರಮಾಣದಿಂದಲೂ ಗೊತ್ತಾಗುವದಿಲ್ಲ ; ಅದನ್ನೇ ಶ್ರುತಿಯು ತಾನೇ ಹೇಳಿ ಮತ್ತೆ ತಾನೇ ಹೇಗೆ ಅಲ್ಲಗಳೆದೀತು ?- ಎಂದು ಭಾವ.

ಹೇತುತ್ವೋಪದೇಶಾತ್ । ತಥಾ ಹಿ । ಸರ್ವಸ್ಯ ಜಗತಃ ತದುತ್ಪತ್ತಿಸ್ಥಿತಿಲಯ ಕರ್ಮತಯಾ ತದಾತ್ಮಕತ್ವಾನುಸಂಧಾನೇನ ಅತ್ರ ಶಾನ್ತಿರ್ವಿಧೀಯತೇ । ಅತೋ ಯಥಾವಸ್ಥಿತದೇವತಿರ್ಯಙ್ಮನುಷ್ಯಸ್ಥಾವರಾದಿಭೇದಭಿನ್ನಂ ಜಗತ್ ಬ್ರಹ್ಮಾತ್ಮಕಮ್ ಇತ್ಯನುಸಂಧಾನಸ್ಯ ಶಾನ್ತಿಹೇತುತಯಾ ಅಭಯಪ್ರಾಪ್ತಿಹೇತುತ್ವೇನ ನ ಭಯಹೇತುತ್ವಪ್ರಸಙ್ಗಃ । ಏವಂ ತರ್ಹಿ 'ಅಥ ತಸ್ಯ ಭಯಂ ಭವತಿ' (ತೈ. ೨-೭) ಇತಿ ಕಿಮುಚ್ಯತೇ ? ಇದಮುಚ್ಯತೇ 'ಯದಾ ಹ್ಯೇವೈಷ ಏತಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯನೇಽಭಯಂ ಪ್ರತಿಷ್ಠಾಂ ವಿನ್ದತೇ । ಅಥ ಸೋಽಭಯಂ ಗತೋ ಭವತಿ' (ತೈ. ೨-೭) ಇತ್ಯಭಯಪ್ರಾಪ್ತಿಹೇತುತ್ವೇನ ಬ್ರಹ್ಮಣಿ ಯಾ ಪ್ರತಿಷ್ಠಾ ಅಭಿಹಿತಾ, ತಸ್ಯಾ ವಿಚ್ಛೇದೇ ಭಯಂ ಭವತಿ – ಇತಿ । ಯಥೋಕ್ತಂ **ಮಹರ್ಷಿಭಿಃ** 'ಯನ್ಮುಹೂರ್ತಂ ಕ್ಷಣಂ ವಾಪಿ ವಾಸುದೇವೋ ನ ಚಿನ್ತ್ಯತೇ । ಸಾ ಹಾನಿಸ್ತನ್ಮಹಚ್ಛಿದ್ರಂ ಸಾ ಭ್ರಾನ್ತಿಃ ಸಾ ಚ ವಿಕ್ರಿಯಾ ॥' (ಗಾರುಡ ಪು. ಪೂರ್ವ ಖಂ. ೨೨೨-೨೨) ಇತ್ಯಾದಿ[1] । ಬ್ರಹ್ಮಣಿ ಪ್ರತಿಷ್ಠಾಯಾ ಅನ್ತರಮ್ ಅವಕಾಶೋ ವಿಚ್ಛೇದ ಏವ ॥

(ಅರ್ಥ)

'**ಯದಾ ಹ್ಯೇವೈಷ ಏತಸ್ಮಿನ್ ....**' (ಈತನು ಯಾವಾಗ ಇವನಲ್ಲಿ ಸ್ವಲ್ಪವಾದರೂ ಅಂತರವನ್ನು ಮಾಡುವನೋ, ಆಗಲೆ ಅವನಿಗೆ ಭಯವಾಗುತ್ತದೆ– ತೈ. ೨-೭) ಎಂದು ಬ್ರಹ್ಮದಲ್ಲಿ ನಾನಾತ್ವವನ್ನು ಕಾಣುವವನಿಗೆ ಭಯವು ಪ್ರಾಪ್ತ ವಾಗುವದು – ಎಂದಿರಲ್ಲ, ಅದು ಸರಿಯಲ್ಲ. ಏಕೆಂದರೆ 'ಇದೆಲ್ಲವೂ ಬ್ರಹ್ಮವೇ, ಏಕೆಂದರೆ ಅದರಿಂದ ಹುಟ್ಟಿ, ಅದರಲ್ಲಿ ಲಯವಾಗಿ ಅದರಲ್ಲಿ ವ್ಯಾಪಾರಮಾಡುತ್ತಿರುತ್ತದೆ– ಎಂದು ಶಾಂತನಾಗಿ ಉಪಾಸನೆಮಾಡಬೇಕು' (ಛಾಂ. ೩-೧೪-೧) ಎಂದು ಆ (ಬ್ರಹ್ಮದ) ನಾನಾತ್ವವನ್ನು ಅನುಸಂಧಾನಮಾಡುವದು ಶಾಂತಿಗೆ ಕಾರಣವೆಂದು ಉಪದೇಶಿಸಿರುತ್ತದೆ. ಇದರ ವಿವರ :— ಇಡಿಯ ಜಗತ್ತು ಅದರಿಂದಲೇ ಉತ್ಪತ್ತಿ, ಸ್ಥಿತಿ, ಲಯ – ಎಂಬ ಕ್ರಿಯೆಗಳಿಗೆ ಕರ್ಮವಾಗಿರುವದರಿಂದ, ಆ ಬ್ರಹ್ಮವೇ (ಅದಕ್ಕೆ) ಆತ್ಮನು ಎಂದು ಅನುಸಂಧಾನಮಾಡುವದರಿಂದ ಶಾಂತಿಯಾಗುತ್ತದೆ ಎಂದು ಇಲ್ಲಿ ಹೇಳಿದೆ.[2] ಆದ್ದರಿಂದ ದೇವತೆಗಳು, ತಿರ್ಯಕ್ಪ್ರಾಣಿಗಳು, ಮನುಷ್ಯರು, ಸ್ಥಾವರಪ್ರಾಣಿಗಳು– ಮುಂತಾದ ಭೇದಗಳಿಂದ ಭಿನ್ನವಾಗಿರುವ ಈ ಜಗತ್ತು ತಾನಿರುವಂತೆಯೇ ಬ್ರಹ್ಮನನ್ನೇ ಆತ್ಮನಾಗಿ ಉಳ್ಳದ್ದಾಗಿರುತ್ತದೆ–ಎಂದು ಅನುಸಂಧಾನಮಾಡುವದು ಶಾಂತಿಗೆ ಕಾರಣವಾಗುವ ಮೂಲಕ ಅಭಯಪ್ರಾಪ್ತಿಗೆ ಹೇತುವಾಗಿರುವದರಿಂದ (ಅದು) ಭಯಕ್ಕೆ ಕಾರಣವಾಗುವ ಪ್ರಸಕ್ತಿಯಿರುವದಿಲ್ಲ.

1. ನಮಗೆ ದೊರತಿರುವ ಅಚ್ಚಾಗಿರುವ ಗರುಡಪುರಾಣದಲ್ಲಿ ಈ ಶ್ಲೋಕವು ಹೀಗಿದೆ:
   ಸಾ ಹಾನಿಸ್ತನ್ಮಹಾಚ್ಛಿದ್ರಂ ಸಾ ಚಾರ್ಥಜಡಮೂಕತಾ ।
   ಯನ್ಮುಹೂರ್ತಂ ಕ್ಷಣೋ ವಾಪಿ ವಾಸುದೇವೋ ನ ಚಿನ್ತ್ಯತೇ ॥
2. ಈ ಶ್ರುತಿಯ ಅಭಿಪ್ರಾಯಕ್ಕೆ ಪರಿಶಿಷ್ಟವನ್ನು ನೋಡಿ.

(ಶಂಕೆ) :– ಹಾಗಾದರೆ ' ಆಗ ಅವನಿಗೆ ಭಯವಾಗುತ್ತದೆ ' (ತೈ. ೨–೭) ಎಂಬಲ್ಲಿ ಏನು ಹೇಳಿದೆ ?

(ಪರಿಹಾರ) :– (ಅಲ್ಲಿ) ಹೇಳಿರುವದಿದು : 'ಯಾವಾಗಲಾದರೆ ಈ ಅದೃಶ್ಯನಾದ, ಅನಾತ್ಮ್ಯನಾದ, ಅನಿರುಕ್ತನಾದ ಅನಿಲಯನನಾದ (ಪರಮಾತ್ಮನಲ್ಲಿ) ಅಭಯವಾಗಿ ಪ್ರತಿಷ್ಠೆಯನ್ನು ಹೊಂದುತ್ತಾನೋ ಅವನು ಆಗ ಅಭಯವನ್ನು ಹೊಂದುತ್ತಾನೆ' (ತೈ. ೨–೭) ಎಂಬ (ವಾಕ್ಯದಲ್ಲಿ) ಅಭಯಕ್ಕೆ ಹೇತುವೆಂದು ಪ್ರತಿಷ್ಠೆಯನ್ನು ಹೇಳಿದೆಯಲ್ಲ, ಅದರ ವಿಚ್ಛೇದವಾದರೆ ಭಯವಾಗುತ್ತದೆ– ಎಂದು (ಆ ವಾಕ್ಯದಲ್ಲಿ ಹೇಳಿರುತ್ತದೆ.) ಹೀಗೆಂದು ಮಹರ್ಷಿಗಳು 'ಒಂದು ಮುಹೂರ್ತವಾಗಲಿ, (ಕೊನೆಗೆ) ಕ್ಷಣವಾಗಲಿ ವಾಸುದೇವನನ್ನು ಚಿಂತಿಸದೆ ಇರುವರಲ್ಲ, ಅದೇ ಹಾನಿ, ಅದೇ ಮಹಾಚ್ಛಿದ್ರವು, ಅದೇ ಭ್ರಾಂತಿಯು, ಅದೇ ವಿಕ್ರಿಯೆಯು' (ಗಾರುಡ ಪು. ಪೂರ್ವಖಂಡ ೨೨೨–೨೨) ಎಂದು ಮುಂತಾಗಿ ಹೇಳಿರುತ್ತಾರೆ. ಬ್ರಹ್ಮದಲ್ಲಿ ಪ್ರತಿಷ್ಠಿತನಾಗಿರುವ (ನಿಲುಗಡೆಗೆ) 'ಅಂತರವು' ಎಂದರೆ ಅವಕಾಶವು[1], ವಿಚ್ಛೇದವೇ.

(ಮೂಲ)

ಯದುಕ್ತಮ್ 'ನ ಸ್ಥಾನತೋಽಪಿ' (ಸೂ. ೩–೨–೧೧) ಇತಿ ಸರ್ವವಿಶೇಷರಹಿತಂ ಬ್ರಹ್ಮ ಇತಿ ಚ ವಕ್ಷ್ಯತೀತಿ । ತನ್ನ । ಸವಿಶೇಷಂ ಬ್ರಹ್ಮ – ಇತ್ಯೇವ ಹಿ ತತ್ರ ವಕ್ಷ್ಯತಿ । 'ಮಾಯಾಮಾತ್ರಂ ತು' (ಸೂ. ೩–೨–೩) ಇತಿ ಚ ಸ್ವಾಪ್ನಾನಾಮಪಿ ಅರ್ಥಾನಾಂ ಜಾಗರಿತಾವಸ್ಥಾನುಭೂತಪದಾರ್ಥವೈಧರ್ಮ್ಯೇಣ ಮಾಯಾಮಾತ್ರತ್ವಮ್ ಉಚ್ಯತ ಇತಿ ಜಾಗರಿತಾವಸ್ಥಾನುಭೂತಾನಾಮಿವ[2] ಪಾರಮಾರ್ಥಿಕತ್ವಮೇವ ವಕ್ಷ್ಯತಿ ॥

(ಅರ್ಥ)

' ನ ಸ್ಥಾನತೋಽಪಿ ' (ಸ್ಥಾನದಿಂದಲೂ ೩–೨–೧೧) ಎಂಬಲ್ಲಿ ಬ್ರಹ್ಮವು ಯಾವ ವಿಶೇಷವೂ ಇಲ್ಲದ್ದು ಎಂದು (ಸೂತ್ರಕಾರರು) ಮುಂದೆ ಹೇಳುವರು– ಎಂದಿರಲ್ಲ, ಅದು ಹಾಗಲ್ಲ ; ಏಕೆಂದರೆ ಬ್ರಹ್ಮವು ಸವಿಶೇಷವು ಎಂದೇ ಅಲ್ಲವೆ, ಅಲ್ಲಿ ಹೇಳಿರುತ್ತಾರೆ?[3] 'ಮಾಯಾಮಾತ್ರಂ ತು' (ಸೂ. ೩–೨–೩) ಎಂದು ಸ್ವಾಪ್ನ

---

1. ಆದ್ದರಿಂದ ಇಲ್ಲಿ ಭೇದನಿಷೇಧವೇನೂ ಇಲ್ಲ.

2. "ಜಾಗರಿತಾವಸ್ಥಾನುಭೂತಾನಾಮಿವ" ಎಂಬ ಮಾತು ಪೂ॥ ಪಾಠದಲ್ಲಿಲ್ಲ.

3. ಪೃಥಿವ್ಯಾದಿಸ್ಥಾನಗಳಿಂದಲೂ ಪರಬ್ರಹ್ಮಕ್ಕೆ ಅಪುರುಷಾರ್ಥಸಂಬಂಧವಿರುವದಿಲ್ಲ. ಅದು ಉಭಯಲಿಂಗವು– ಹೇಯಗುಣವಿಲ್ಲದ್ದು, ಕಲ್ಯಾಣಗುಣಗಳುಳ್ಳದ್ದು– ಎಂದು ಶ್ರುತಿಸ್ಮೃತಿಗಳಲ್ಲೆಲ್ಲ ಹೇಳಿರುತ್ತದೆ ಎಂದು ಆ ಸೂತ್ರಕ್ಕೆ ರಾಮಾನುಜಸಂಮತವಾದ ಅರ್ಥ.

ಪದಾರ್ಥಗಳಿಗೂ ಜಾಗರಿತಾವಸ್ಥೆಯಲ್ಲಿ ಅನುಭವಿಸಿದ ಪದಾರ್ಥಗಳಿಗಿಂತ ವಿಲಕ್ಷಣ ವಾಗಿ ಮಾಯಾಮಾತ್ರತ್ವವನ್ನು ಹೇಳಿದೆಯಾದ್ದರಿಂದ[1] ಜಾಗರಿತಾವಸ್ಥೆಯಲ್ಲಿ ಅನುಭವಿಸಿದ (ಪದಾರ್ಥಗಳಂತೆಯೇ) ಅವು ಪರಮಾರ್ಥವೆಂದೇ ಮುಂದೆ ಹೇಳುವರು.

## (೩೧) ಸ್ಮೃತಿಪುರಾಣಗಳಲ್ಲಿಯೂ ನಿರ್ವಿಶೇಷಜ್ಞಾನವೇ ಪರಮಾರ್ಥವೆಂದು ಹೇಳಿಲ್ಲ

(ಮೂಲ)

ಸ್ಮೃತಿಪುರಾಣಯೋರಪಿ ನಿರ್ವಿಶೇಷಜ್ಞಾನಮಾತ್ರಮೇವ ಪರಮಾರ್ಥಃ, ಅನ್ಯದಪಾರಮಾರ್ಥಿಕಮ್ ಇತಿ ಪ್ರತೀಯತ ಇತಿ ಯದಭಿಹಿತಮ್, ತದಸತ್–

'ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಮ್' । (ಗೀ. ೧೦–೩)
'ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥
ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ ।
ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ ಭೂತಭಾವನಃ ॥' (ಗೀ. ೯–೪೫)
'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥
ಮತ್ತಃ ಪರತರಂ ನಾನ್ಯತ್ ಕಿಞ್ಚಿದಸ್ತಿ ಧನಞ್ಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥' (ಗೀ. ೭–೬, ೭)
'ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್' ॥ (ಗೀ. ೧೦–೪೨)
'ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥
ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ' ॥
(ಗೀ. ೧೫–೧೭, ೧೮)

(ಅರ್ಥ)

ಸ್ಮೃತಿಪುರಾಣಗಳಲ್ಲಿಯೂ ನಿರ್ವಿಶೇಷಜ್ಞಾನವೊಂದೇ ಪರಮಾರ್ಥವೆಂದೂ ಮಿಕ್ಕದ್ದು ಅಪಾರಮಾರ್ಥಿಕವೆಂದೂ (ಹೇಳಿರುವದು) ಕಂಡುಬರುತ್ತದೆ ಎಂದು ಹೇಳಿದರಲ್ಲ, ಅದು ಸರಿಯಲ್ಲ–

'ಯಾವನು ನಾನು ಅಜನೂ ಅನಾದಿಯೂ ಲೋಕಮಹೇಶ್ವರನೂ ಎಂದು ಅರಿತುಕೊಳ್ಳುವನೋ' (ಗೀತಾ. ೧೦–೩)

1. ಮಿಕ್ಕ ಪುರುಷರ ಅನುಭವಕ್ಕೆ ಬಾರದೆ ಇರುವಂಥ ಆಶ್ಚರ್ಯಕರವಾದ ಪದಾರ್ಥಗಳನ್ನು ಭಗವಂತನೇ ಸೃಷ್ಟಿಸುತ್ತಾನೆ; ಜೀವನ ಸ್ವರೂಪವು ಪೂರ್ಣವಾಗಿ ಅಭಿವ್ಯಕ್ತವಾಗಿರುವದಿಲ್ಲವಾದ್ದರಿಂದ ಅದು ಜೀವನ ಸೃಷ್ಟಿಯಲ್ಲ– ಎಂಬುದು ಈ ಸೂತ್ರಕ್ಕೆ ರಾಮಾನುಜಸಂಮತವಾದ ಅರ್ಥ.

'ಸರ್ವಭೂತಗಳೂ ನನ್ನಲ್ಲಿರುವವು, ನಾನು ಮಾತ್ರ ಅವುಗಳಲ್ಲಿರುವದಿಲ್ಲ. ಭೂತಗಳು ನನ್ನಲ್ಲಿಲ್ಲವೂ ಇಲ್ಲ; ನನ್ನ ಐಶ್ವರಯೋಗವನ್ನು ನೋಡು!' ಭೂತ ಭಾವನನಾದ ನನ್ನ ಆತ್ಮನು ಭೂತಗಳನ್ನು ಧರಿಸಿರುತ್ತಾನೆ, ಆದರೆ ಭೂತಗಳಲ್ಲಿರು ವದಿಲ್ಲ' (ಗೀ. ೯–೪,೫), 'ನಾನು ಇಡಿಯ ಜಗತ್ತಿನ ಉತ್ಪತ್ತಿಯೂ ಪ್ರಲಯವೂ ಆಗಿರುತ್ತೇನೆ. ನನಗಿಂತ ಹೆಚ್ಚಿನದು ಯಾವದೂ ಇಲ್ಲ ಕಾಣಯ್ಯ, ಧನಂಜಯ ; ಇದೆಲ್ಲವೂ ನನ್ನಲ್ಲಿ ಸೂತ್ರದಲ್ಲಿ ರತ್ನಸಮೂಹದಂತೆ ಪೋಣಿಸಲ್ಪಟ್ಟಿರುವದು' (ಗೀ.೭–೬,೭), 'ನಾನು ಒಂದು ಅಂಶದಿಂದ ಈ ಇಡಿಯ ಜಗತ್ತನ್ನು ಎತ್ತಿಹಿಡಿದು ಕೊಂಡು ಇರುವೆನು' (ಗೀ. ೧೦–೪೨), 'ಪರಮಾತ್ಮನೆಂದು ಉಕ್ತನಾಗಿರುವ ಉತ್ತಮಪುರುಷನಾದರೊ, ಮತ್ತೊಬ್ಬನು; ಆ ಅವ್ಯಯನಾದ ಈಶ್ವರನು ಲೋಕ ತ್ರಯವನ್ನು ಹೊಕ್ಕು ಧರಿಸಿರುತ್ತಾನೆ. ನಾನು ಕ್ಷರವನ್ನೂ ಮೀರಿ ಅಕ್ಷರಕ್ಕಿಂತಲೂ ಉತ್ತಮನಾಗಿರುವೆನಲ್ಲ, ಆದರಿಂದಲೇ ಲೋಕದಲ್ಲಿಯೂ ವೇದದಲ್ಲಿಯೂ ಪುರು ಷೋತ್ತಮನೆಂದು ಪ್ರಸಿದ್ಧನಾಗಿರುವೆನು' (ಗೀ. ೧೫–೧೭, ೧೮).[1]

(ಮೂಲ)

ಸ ಸರ್ವಭೂತಪ್ರಕೃತಿಂ ವಿಕಾರಾನ್ ಗುಣಾದಿದೋಷಾಂಶ್ಚ ಮುನೇ ವ್ಯತೀತಃ ।
ಅತೀತಸರ್ವಾವರಣೋಽಖಿಲಾತ್ಮಾ ತೇನಾಸ್ತೃತಂ ಯದ್ಭುವನಾಂತರಾಲೇ ॥
ಸಮಸ್ತಕಲ್ಯಾಣಗುಣಾತ್ಮಕೋಽಸೌ ಸ್ವಶಕ್ತಿಲೇಶಾದ್ಧೃತಭೂತಸರ್ಗಃ[2] ।
ಇಚ್ಛಾಗೃಹೀತಾಭಿಮತೋರುದೇಹಃ ಸಂಸಾಧಿತಾಶೇಷಜಗದ್ಧಿತೋಽಸೌ ॥
ತೇಜೋಬಲೈಶ್ವರ್ಯಮಹಾವಬೋಧಸುವೀರ್ಯಶಕ್ತ್ಯಾದಿಗುಣೈಕರಾಶಿಃ ।
ಪರಃ ಪರಾಣಾಂ ಸಕಲಾ ನ ಯತ್ರ ಕ್ಲೇಶಾದಯಃ ಸನ್ತಿ ಪರಾವರೇಶೇ ॥
ಸ ಈಶ್ವರೋ ವ್ಯಷ್ಟಿಸಮಷ್ಟಿರೂಪೋಽವ್ಯಕ್ತಸ್ವರೂಪಃ ಪ್ರಕಟಸ್ವರೂಪಃ ।
ಸರ್ವೇಶ್ವರಃ ಸರ್ವದೃಕ್ಸರ್ವವೇತ್ತಾ ಸಮಸ್ತಶಕ್ತಿಃ ಪರಮೇಶ್ವರಾಖ್ಯಃ ॥
ಸಂಜ್ಞಾಯತೇ ಯೇನ ತದಸ್ತದೋಷಂ ಶುದ್ಧಂ ಪರಂ ನಿರ್ಮಲಮೇಕರೂಪಮ್ ।
ಸಂದೃಶ್ಯತೇ ವಾಽಪ್ಯಧಿಗಮ್ಯತೇ ವಾ ತಜ್ಜ್ಞಾನಮಜ್ಞಾನಮತೋಽನ್ಯದುಕ್ತಮ್ ॥

ವಿ. ಪು. ೬–೫–೮೩ರಿಂದ ೮೭ರವರೆಗೆ

**ಭಾವಾರ್ಥ** :– ಆತನು ಸರ್ವಭೂತಗಳ ಪ್ರಕೃತಿಯನ್ನೂ ವಿಕಾರಗಳನ್ನೂ ಗುಣಗಳೇ ಮುಂತಾದವುಗಳನ್ನೂ ದೋಷಗಳನ್ನೂ ಮೀರಿರುವನಯ್ಯ, ಮುನಿಯೆ, ಸರ್ವಾವರಣಗಳನ್ನೂ ಮೀರಿರುವನು, ಎಲ್ಲಕ್ಕೂ ಆತ್ಮನು ; ಭುವನಮಧ್ಯದಲ್ಲಿ ಏನೇನಿದೆಯೋ ಅದೆಲ್ಲವೂ ಆತನಿಂದ ವ್ಯಾಪ್ತವಾಗಿರುತ್ತದೆ. ಅವನು ಸಮಸ್ತ ಕಲ್ಯಾಣಗುಣಗಳುಳ್ಳ ಸ್ವಭಾವದವನು; ತನ್ನ ಶಕ್ತಿಯ ಒಂದಂಶದಿಂದ ಭೂತಸೃಷ್ಟಿ

1. ಇಲ್ಲಿಯವರೆಗೆ ಗೀತಾಸ್ಮೃತಿವಾಕ್ಯಗಳನ್ನು ಉದಾಹರಿಸಿರುತ್ತಾರೆ ; ಇನ್ನು ಮುಂದೆ ಪುರಾಣವಾಕ್ಯಗಳನ್ನು ಉದಾಹರಿಸಿರುವರು.

2. 'ಭೂತವರ್ಗಃ' ಪಾ॥

ಯನ್ನೆಲ್ಲ ಧರಿಸಿರುವವನು. ಇಚ್ಛಾಮಾತ್ರದಿಂದ ಸ್ವೀಕರಿಸಿದ ಅಭಿಮತವಾದ ಶ್ರೇಷ್ಠವಾದ ದೇಹವುಳ್ಳಾತನು, ಅವನು ಸರ್ವಜಗತ್ತಿನ ಹಿತವನ್ನೂ ಸಾಧಿಸಿರುವಾತನು; ತಾನೊಬ್ಬನೇ ತೇಜಸ್ಸು, ಬಲ, ಐಶ್ವರ್ಯ, ಮಹಾಜ್ಞಾನ, ಸುವೀರ್ಯ, ಶಕ್ತಿ– ಮುಂತಾದ ಗುಣಗಳ ರಾಶಿಯಾಗಿರುವವನು ; ಪರರಾಗಿರುವವರಿಗೆಲ್ಲರಿಗಿಂತಲೂ ಪರನು, ಕ್ಲೇಶಸೇ ಮುಂತಾದವು ಆ ಪರಾವರೇಶನಲ್ಲಿ ಇರುವದೇ ಇಲ್ಲ. ಆ ಈಶ್ವರನೇ ವ್ಯಷ್ಟಿಸಮಷ್ಟಿರೂಪನೂ ಅವ್ಯಕ್ತಸ್ವರೂಪನೂ ಪ್ರಕಟಸ್ವರೂಪನೂ ಆಗಿರುವವನು ; ಸರ್ವೇಶ್ವರನು, ಸರ್ವದರ್ಶಿ, ಸರ್ವವನ್ನೂ ಬಲ್ಲವನು, ಸಮಸ್ತಶಕ್ತಿಗಳುಳ್ಳವನು, ಪರಮೇಶ್ವರನೆಂಬ ಹೆಸರುಳ್ಳವನು. ಯಾವ ದೋಷವೂ ಇಲ್ಲದೆ, ಶುದ್ಧವಾಗಿ ಅತ್ಯಂತನಿರ್ಮಲವಾಗಿ ಏಕರೂಪವಾಗಿರುವ ಅದು ಏತರಿಂದ ಅರಿಯಲ್ಪಡುತ್ತದೆಯೋ, ನೋಡಲ್ಪಡುತ್ತದೆಯೋ, ಅಥವಾ ಗೊತ್ತುಮಾಡಲ್ಪಡುತ್ತದೋ ಅದೇ **ಜ್ಞಾನವು,** ಅದಕ್ಕಿಂತ ಬೇರೆಯಾದದ್ದು ಅಜ್ಞಾನವೆನಿಸುವದು.[1]

(ಮೂಲ)

"ಶುದ್ಧೇ ಮಹಾವಿಭೂತ್ಯಾಖ್ಯೇ ಪರೇ ಬ್ರಹ್ಮಣಿ ಶಬ್ದ್ಯತೇ ।
ಮೈತ್ರೇಯ ಭಗವಚ್ಛಬ್ದಃ ಸರ್ವಕಾರಣಕಾರಣೇ ॥
ಸಂಭರ್ತೇತಿ ತಥಾ ಭರ್ತಾ ಭಕಾರೋಽರ್ಥದ್ವಯಾನ್ವಿತಃ ।
ನೇತಾ ಗಮಯಿತಾ ಸ್ರಷ್ಟಾ ಗಕಾರಾರ್ಥಸ್ತಥಾ ಮುನೇ ॥
ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ ।
ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥
ವಸನ್ತಿ ತತ್ರ ಭೂತಾನಿ ಭೂತಾತ್ಮನ್ಯಖಿಲಾತ್ಮನಿ ।
ಸ ಚ ಭೂತೇಷ್ವಶೇಷೇಷು ವಕಾರಾರ್ಥಸ್ತತೋಽವ್ಯಯಃ ॥"

ವಿ. ಪು. ೬-೫-೭೨ರಿಂದ ೭೫.

**ಭಾವಾರ್ಥ:**– ಶುದ್ಧನಾದ, ಮಹಾವಿಭೂತಿ ಎಂಬ ಹೆಸರುಳ್ಳ ಸರ್ವಕಾರಣಗಳಿಗೂ ಕಾರಣವಾಗಿರುವ ಪರಬ್ರಹ್ಮದಲ್ಲಿ ಎಲೈ ಮೈತ್ರೇಯನೆ, **ಭಗವಚ್ಛಬ್ದವು** ವರ್ತಿಸುತ್ತದೆ.[2] ಸಂಭರಣ (ಉಪಕರಣಗಳ ಸೃಷ್ಟಿಯನ್ನು) ಮಾಡುವವನೆಂದೂ ಭರ್ತೃ(ಸ್ವಾಮಿ)ಯಾಗಿರುವದೆಂದೂ **ಭಕಾರಕ್ಕೆ** ಎರಡು ಅರ್ಥ. ಎಲೈ ಮುನಿಯೆ,

---

1. ಗೀತಾಶ್ಲೋಕಗಳಲ್ಲಿ ಎಲ್ಲವೂ ಭಗವಚ್ಛೇಷ, ಆತನಿಂದಲೇ ಧಾರ್ಯ, ನಿಯಾಮ್ಯ, ವ್ಯಾಪ್ಯ, ಭಗವಂತನ ಶರೀರ– ಎಂದು ಮುಂತಾಗಿ ಪ್ರತಿಪಾದಿತವಾಗಿದೆ. 'ಪ್ರತ್ಯಸ್ತಮಿತಭೇದಮ್' ಎಂಬ ಶ್ಲೋಕದ ಅರ್ಥವನ್ನು ಹೇಳುವದಕ್ಕೆ ಹೊರಟು ಅದರ ಉಪಕ್ರಮೋಪಸಂಹಾರವಾಕ್ಯಗಳು ಸವಿಶೇಷಪರವೆಂದು ತಿಳಿಸುವದಕ್ಕೆ ಈ ಪುರಾಣಶ್ಲೋಕಗಳನ್ನು ಕೊಟ್ಟಿದೆ. ಶ್ರು. ಪ್ರ.

2. ಪರಮಕಾರಣನು, ಎಲ್ಲಾ ಕಾರ್ಯಗಳನ್ನೂ ಸೃಷ್ಟಿಸುವಾತನು ಎಂಬರ್ಥದಲ್ಲಿ ಭಗವಚ್ಛಬ್ದವು ಬಂದಿದೆ ಎಂದರ್ಥ.

ನೇತೃವಾಗಿರುವದು, ಪಡೆಯಿಸುವದು, ಸೃಷ್ಟಿಮಾಡುವದು- ಎಂಬುದು ಗಕಾರದ ಅರ್ಥವು. ಸಮಗ್ರವಾದ ಐಶ್ವರ್ಯ, ವೀರ್ಯ, ಯಶಸ್ಸು, ಶ್ರೀ, ಜ್ಞಾನ ವೈರಾಗ್ಯಗಳೆಂಬೆರಡು- ಈ ಆರಕ್ಕೆ '**ಭಗ**' ಎಂದು ಹೆಸರು. ಭೂತಾತ್ಮನೂ ಅಖಿಲಾತ್ಮನೂ ಆದ ಆತನಲ್ಲಿ ಭೂತಗಳು ವಾಸವಾಗಿರುತ್ತವೆ ; ಆತನು ಎಲ್ಲಾ ಭೂತಗಳಲ್ಲಿಯೂ ವಾಸವಾಗಿರುತ್ತಾನೆ ; ಆದ್ದರಿಂದ ಅವ್ಯಯನಾದ ( ಆ ಭಗವಂತನು) **ವಕಾರಾರ್ಥವು.**

(ಮೂಲ)

**"ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ ।**
**ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ ॥" ವಿ. ಪು. ೬-೫-೭೯.**

**ಭಾವಾರ್ಥ :-** ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು- **ಇವು** ಹೇಯವಾದ ಗುಣಗಳೇ ಮುಂತಾದವುಗಳನ್ನು ಬಿಟ್ಟಿರುವದರಿಂದ '**ಭಗವತ್**' ಎಂಬ ಶಬ್ದಕ್ಕೆ ವಾಚ್ಯವಾಗಿರುತ್ತವೆ.

(ಮೂಲ)

**"ಏವಮೇಷ ಮಹಾಶಬ್ದೋ[1] ಮೈತ್ರೇಯ ಭಗವಾನಿತಿ ।**
**ಪರಮಬ್ರಹ್ಮಭೂತಸ್ಯ ವಾಸುದೇವಸ್ಯ ನಾನ್ಯಗಃ ॥**
**ತತ್ರ ಪೂಜ್ಯಪದಾರ್ಥೋಕ್ತಿಪರಿಭಾಷಾಸಮನ್ವಿತಃ ।**
**ಶಬ್ದೋಽಯಂ ನೋಪಚಾರೇಣ ಹ್ಯನ್ಯತ್ರ ಹ್ಯುಪಚಾರತಃ" ॥**

**ವಿ. ಪು. ೬-೫-೭೬, ೭೭.**

**ಭಾವಾರ್ಥ :-** ಮೈತ್ರೇಯನೆ, 'ಭಗವಾನ್' ಎಂಬ ಈ ಮಹಾಶಬ್ದವು ಪರಮಬ್ರಹ್ಮವಾಗಿರುವ ವಾಸುದೇವನಿಗೇ ಹೊರತು ಮತ್ತೊಬ್ಬರಿಗಲ್ಲ, ಆತನಲ್ಲಿ ಪೂಜ್ಯನೆಂಬ ಪದಾರ್ಥವನ್ನು ಹೇಳುವ ಉಕ್ತಿಯಿಂದಲೂ, ಪರಿಭಾಷೆಯಿಂದಲೂ ಕೂಡಿ ಈ ಶಬ್ದವು ವರ್ತಿಸುತ್ತದೆ, ಉಪಚಾರದಿಂದಲ್ಲ ; ಮಿಕ್ಕಕಡೆಗಳಲ್ಲಿ ಉಪಚಾರದಿಂದಲೇ.

(ಮೂಲ)

**"ಸಮಸ್ತಾಃ ಶಕ್ತಯಶ್ಚೈತಾ ನೃಪ ಯತ್ರ ಪ್ರತಿಷ್ಠಿತಾಃ ।**
**ತದ್ವಿಶ್ವರೂಪವೈರೂಪ್ಯಂ ರೂಪಮನ್ಯದ್ ಹರೇರ್ಮಹತ್ ॥**
**ಸಮಸ್ತಶಕ್ತಿರೂಪಾಣಿ ತತ್ಕರೋತಿ ಜನೇಶ್ವರ ।**
**ದೇವತಿರ್ಯಙ್‌ಮನುಷ್ಯಾಖ್ಯಾಚೇಷ್ಟಾವನ್ತಿ ಸ್ವಲೀಲಯಾ ॥**
**ಜಗತಾಮುಪಕಾರಾಯ ನ ಸಾ ಕರ್ಮನಿಮಿತ್ತಜಾ ।**
**ಚೇಷ್ಟಾ ತಸ್ಯಾಪ್ರಮೇಯಸ್ಯ ವ್ಯಾಪಿನ್ಯವ್ಯಾಹತಾತ್ಮಿಕಾ ॥**

**ವಿ. ಪು. ೬-೭-೭೦, ೭೧, ೭೨.**

1. 'ಮಹಾಞ್ಛಬ್ದೋ' ಪಾ॥

**ಭಾವಾರ್ಥ :–** ಈ ಶಕ್ತಿಗಳೆಲ್ಲವೂ ಯಾವದರಲ್ಲಿ ನೆಲೆನಿಂತಿರುವವೋ ಎಲೈ ನೃಪನೆ, ಆ ವಿಶ್ವರೂಪದಿಂದ ವಿಲಕ್ಷಣವಾಗಿರುವ ಮತ್ತೊಂದು ಮಹಾರೂಪವು ಹರಿಯದು. ಎಲೈ ಜನೇಶ್ವರನೆ, ಅದು ದೇವತೆಗಳು. ತಿರ್ಯಕ್ಪ್ರಾಣಿಗಳು, ಮನುಷ್ಯರು– ಎಂಬ ನಾಮಕ್ರಿಯೆಗಳುಳ್ಳ ಸಮಸ್ತಶಕ್ತಿರೂಪಗಳನ್ನೂ ತನ್ನ ಲೀಲೆಯಿಂದ ಜಗತ್ತಿನ ಉಪಕಾರಕ್ಕಾಗಿ ಧರಿಸುತ್ತಾನೆ. ಅದು ಕರ್ಮನಿಮಿತ್ತದಿಂದ ಆಗಿರುವದಲ್ಲ, ಆ ಅಪ್ರಮೇಯನಾದ ಪರಮಾತ್ಮನ ವ್ಯಾಪಾರವು ವ್ಯಾಪಿಯಾಗಿಯೂ ಅವ್ಯಾಹತಸ್ವಭಾವವುಳ್ಳದ್ದೂ ಆಗಿರುತ್ತದೆ.

(ಮೂಲ)

"ಏವಂಪ್ರಕಾರಮಮಲಂ ನಿತ್ಯಂ ವ್ಯಾಪಕಮಕ್ಷಯಮ್ ।
ಸಮಸ್ತಹೇಯರಹಿತಂ ವಿಷ್ಣ್ವಾಖ್ಯಂ ಪರಮಂ ಪದಮ್ ॥"
ವಿ. ಪು. ೧–೨೨–೫೩

**ಭಾವಾರ್ಥ :–** ವಿಷ್ಣುವೆಂಬ ಹೆಸರಿನ ಪರಮಪದವು ಇಂಥ ಪ್ರಕಾರದ್ದು, ನಿರ್ಮಲವಾದದ್ದು, ನಿತ್ಯವಾದದ್ದು, ವ್ಯಾಪಕವಾದದ್ದು, ಅಕ್ಷಯವಾದದ್ದು, ಯಾವ ಹೇಯ(ಗುಣವೂ) ಇಲ್ಲದ್ದು.

(ಮೂಲ)

"ಪರಃ ಪರಾಣಾಂ ಪರಮಃ ಪರಮಾತ್ಮಾಽಽತ್ಮಸಂಸ್ಥಿತಃ ।
ರೂಪವರ್ಣಾದಿನಿರ್ದೇಶವಿಶೇಷಣವಿವರ್ಜಿತಃ ॥
ಅಪಕ್ಷಯವಿನಾಶಾಭ್ಯಾಂ ಪರಿಣಾಮರ್ಧಿಜನ್ಮಭಿಃ ।
ವರ್ಜಿತಃ ಶಕ್ಯತೇ ವಕ್ತುಂ ಯಃ ಸದಾಽಸ್ತೀತಿ ಕೇವಲಮ್ ॥
ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ ।
ತತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ ॥
ತದ್ಬ್ರಹ್ಮ ಪರಮಂ ನಿತ್ಯಮಜಮಕ್ಷರಮವ್ಯಯಮ್ ।
ಏಕಸ್ವರೂಪಂ ಚ ಸದಾ ಹೇಯಾಭಾವಾಚ್ಚ ನಿರ್ಮಲಮ್ ॥
ತದೇವ ಸರ್ವಮೇವೈತದ್ ವ್ಯಕ್ತಾವ್ಯಕ್ತಸ್ವರೂಪವತ್ ।
ತಥಾ ಪುರುಷರೂಪೇಣ ಕಾಲರೂಪೇಣ ಚ ಸ್ಥಿತಮ್ ॥"
ವಿ. ಪು. ೧–೨–೧೦,೧೧,೧೨,೧೩,೧೪.

**ಭಾವಾರ್ಥ :–** ಹೆಚ್ಚಿನದೆಲ್ಲವುಗಳಿಗೂ ಹೆಚ್ಚಿನವನು, ಪರಮನು, ಪರಮಾತ್ಮನು, ತನ್ನ ಸ್ವರೂಪದಲ್ಲಿಯೇ ಇರತಕ್ಕವನು; ರೂಪ, ವರ್ಣ– ಮುಂತಾದ ವಿಶೇಷಣರಹಿತನು ; ಅಪಕ್ಷಯವಿನಾಶಗಳಿಂದಲೂ ಪರಿಣಾಮ, ವೃದ್ಧಿ, ಜನ್ಮ– ಇವುಗಳಿಂದಲೂ ರಹಿತನು[1]. ಯಾವಾಗಲೂ 'ಇದಾನೆ' ಎಂದು ಮಾತ್ರವೇ ಹೇಳು

---

1. ಕರ್ಮಕೃತರೂಪಾದಿರಹಿತನು, ಆದ್ದರಿಂದ ಕಾಲಾಪರಿಚ್ಛಿನ್ನನು ಎಂದರ್ಥ. ಅತನು ಅನಿತ್ಯವಾದ ಕರ್ತೃಕರ್ಮರೂಪಾದಿವರ್ಜಿತನು ಎಂದರ್ಥ ಶ್ರು. ಪ್ರ.

ವದಕ್ಕೆ ಶಕ್ಯನಾದವನು.[1] ಇವನು ಎಲ್ಲೆಲ್ಲಿಯೂ ವಾಸಮಾಡಿಕೊಂಡಿರುತ್ತಾನೆ. ಸಮಸ್ತವೂ ಇವನಲ್ಲಿದೆ-ಎಂಬ ಕಾರಣದಿಂದ 'ವಾಸುದೇವನು' ಎಂದು ವಿದ್ವಾಂಸರು ಹೇಳುತ್ತಾರೆ. ಅದೇ ಪರಮನಿತ್ಯವಾದ ಬ್ರಹ್ಮವು, ಅಜವಾದದ್ದು, ನಾಶರಹಿತ ವಾದದ್ದು, ಅವ್ಯಯವಾದದ್ದು, ಒಂದೇ ಸ್ವರೂಪವುಳ್ಳದ್ದು, ಯಾವಾಗಲೂ ಹೇಯ ವಿಲ್ಲದ್ದಾದ್ದರಿಂದ ನಿರ್ಮಲವಾಗಿರುವದು. ಈ ವ್ಯಕ್ತಾವ್ಯಕ್ತಸ್ವರೂಪವುಳ್ಳದ್ದು ಅದೇ, (ಅದೇ) ಪುರುಷರೂಪದಿಂದಲೂ ಕಾಲರೂಪದಿಂದಲೂ ಇರುವದು.[2]

(ಮೂಲ)

"ಪ್ರಕೃತಿರ್ಯಾ ಮಯಾऽಖ್ಯಾತಾ ವ್ಯಕ್ತಾವ್ಯಕ್ತಸ್ವರೂಪಿಣೀ ।
ಪುರುಷಶ್ಚಾಪ್ಯುಭಾವೇತೌ ಲೀಯೇತೇ ಪರಮಾತ್ಮನಿ ॥
ಪರಮಾತ್ಮಾ ಚ ಸರ್ವೇಷಾಮಾಧಾರಃ ಪರಮೇಶ್ವರಃ ।
ವಿಷ್ಣುನಾಮಾ ಸ ವೇದೇಷು ವೇದಾನ್ತೇಷು ಚ ಗೀಯತೇ" ॥

ವಿ. ಪು. ೬-೪-೩೯, ೪೦

ಭಾವಾರ್ಥ :- ವ್ಯಕ್ತಾವ್ಯಕ್ತಸ್ವರೂಪವುಳ್ಳ ಯಾವ ಪ್ರಕೃತಿಯನ್ನು ನಾನು ಹೇಳಿರುವೆನೋ ಅದೂ ಮತ್ತು ಪುರುಷನೂ ಇವೆರಡೂ ಪರಮಾತ್ಮನಲ್ಲಿ ಲಯ ವಾಗುತ್ತವೆ. ಪರಮಾತ್ಮನಾದ ಪರಮೇಶ್ವರನು ಎಲ್ಲವುಗಳಿಗೂ ಆಧಾರನಾಗಿರು ತ್ತಾನೆ. ವೇದಗಳಲ್ಲಿಯೂ ವೇದಾಂತಗಳಲ್ಲಿಯೂ ಅವನು ವಿಷ್ಣುವೆಂಬ ಹೆಸರು ಳ್ಳಾತನೆಂದು ಉಕ್ತನಾಗಿರುತ್ತಾನೆ.

(ಮೂಲ)

ದ್ವೇ ರೂಪೇ ಬ್ರಹ್ಮಣಸ್ತಸ್ಯ ಮೂರ್ತಂ ಚಾಮೂರ್ತಮೇವ ಚ ।
ಕ್ಷರಾಕ್ಷರಸ್ವರೂಪೇ ತೇ ಸರ್ವಭೂತೇಷು ಚ ಸ್ಥಿತೇ ॥
ಅಕ್ಷರಂ ತತ್ ಪರಂ ಬ್ರಹ್ಮ ಕ್ಷರಂ ಸರ್ವಮಿದಂ ಜಗತ್ ।
ಏಕದೇಶಸ್ಥಿತಸ್ಯಾಗ್ನೇರ್ಜ್ಯೋತ್ಸ್ನಾ ವಿಸ್ತಾರಿಣೀ ಯಥಾ ।
ಪರಸ್ಯ ಬ್ರಹ್ಮಣಃ ಶಕ್ತಿಃ ತಥೇದಮಖಿಲಂ ಜಗತ್ ॥

ವಿ. ಪು. ೧-೨೨-೫೫, ೫೬

ಭಾವಾರ್ಥ :— ಆ ಬ್ರಹ್ಮಕ್ಕೆ ಮೂರ್ತವು ಮತ್ತು ಅಮೂರ್ತವು- ಎಂದು ಎರಡು ರೂಪಗಳು. ಅವೆರಡೂ ಕ್ಷರಾಕ್ಷರಸ್ವರೂಪವಾಗಿ ಸರ್ವಭೂತಗಳಲ್ಲಿ ಯೂ ಇರುತ್ತವೆ. ಅಕ್ಷರವೆಂದರೆ ಆ ಪರಬ್ರಹ್ಮವು, ಕ್ಷರವೆಂದರೆ ಈ ಎಲ್ಲಾ ಜಗತ್ತು.[3] ಒಂದು ಕಡೆಯಲ್ಲಿರುವ ಅಗ್ನಿಯ ಬೆಳಕು ಹೇಗೆ ಹರಡಿಕೊಂಡಿರು

1. ವಿಕಾರಗಳಿಲ್ಲದ್ದರಿಂದ ಯಾವಾಗಲೂ ಇದಾನೆ ಎಂದೇ ಹೇಳುವದಕ್ಕೆ ಶಕ್ಯನು. 'ಹುಟ್ಟುತ್ತಾನೆ' ಮುಂತಾದ ಶಬ್ದಗಳಿಂದ ಹೇಳುವದಕ್ಕೆ ಆಗುವವನಲ್ಲ ಎಂದು 'ಕೇವಲ' ಶಬ್ದದ ಅರ್ಥ. ಶ್ರು. ಪ್ರ.

2. ಅದೇ ಸಮಸ್ತಚಿದಚಿಚ್ಛರೀರಕವಾಗಿರುವದರಿಂದ ವಸ್ತುಪರಿಚ್ಛೇದವಿಲ್ಲದ್ದು ಎಂದರ್ಥ. ಶ್ರು. ಪ್ರ.

3. ಮೂರ್ತಾಮೂರ್ತಗಳೆಂದರೆ ಜಡ ಮತ್ತು ಮುಕ್ತನಾದ ಜೀವ-ಎಂದು ಶ್ರು.ಪ್ರ. ಪರಿಶಿಷ್ಟವನ್ನು ನೋಡಿ.

ವದೋ, ಹಾಗೆಯೇ ಪರಬ್ರಹ್ಮದ ಶಕ್ತಿಯು ಈ ಜಗತ್ತೆಲ್ಲವನ್ನೂ ವ್ಯಾಪಿಸಿ ಕೊಂಡಿರುತ್ತದೆ.

(ಮೂಲ)

ವಿಷ್ಣುಶಕ್ತಿಃ ಪರಾ ಪ್ರೋಕ್ತಾ ಕ್ಷೇತ್ರಜ್ಞಾಖ್ಯಾ ತಥಾಽಪರಾ ।
ಅವಿದ್ಯಾ ಕರ್ಮಸಂಜ್ಞಾಽನ್ಯಾ ತೃತೀಯಾ ಶಕ್ತಿರಿಷ್ಯತೇ ॥
ಯಯಾ ಕ್ಷೇತ್ರಜ್ಞಶಕ್ತಿಃ ಸಾ ವೇಷ್ಟಿತಾ ನೃಪ ಸರ್ವಗಾ ।
ಸಂಸಾರತಾಪಾನಖಿಲಾನವಾಪ್ನೋತ್ಯತಿಸನ್ತತಾನ್ ।
ತಯಾ ತಿರೋಹಿತತ್ವಾಚ್ಚ ಶಕ್ತಿಃ ಕ್ಷೇತ್ರಜ್ಞಸಂಜ್ಞಿತಾ ।
ಸರ್ವಭೂತೇಷು ಭೂಪಾಲ ತಾರತಮ್ಯೇನ ವರ್ತತೇ ॥

ವಿ. ಪು. ೬-೭-೬೧, ೬೨, ೬೩

**ಭಾವಾರ್ಥ :—** ವಿಷ್ಣುಶಕ್ತಿಯು ಪರಶಕ್ತಿ ಎನಿಸುವದು ; ಕ್ಷೇತ್ರಜ್ಞನೆಂಬ ಹೆಸರಿನ ( ಶಕ್ತಿಯು ) ಅಪರಶಕ್ತಿಯು ; ಕರ್ಮವೆಂಬ ಹೆಸರಿನ ಅವಿದ್ಯಾ (ಶಕ್ತಿಯು) ಮೂರನೆಯದಾದ ಮತ್ತೊಂದು ಶಕ್ತಿಯೆಂದು ಅಂಗೀಕೃತವಾಗಿರುತ್ತದೆ; ರಾಜನೆ, ಯಾವದರಿಂದ ಆ ಸರ್ವಗತವಾದ ಕ್ಷೇತ್ರಜ್ಞಶಕ್ತಿಯು ಮುಸುಕಲ್ಪಟ್ಟಿರುವದೋ, ಕ್ಷೇತ್ರಜ್ಞನೆಂಬ ಹೆಸರಿನ ಆ ಶಕ್ತಿಯು ಅದರಿಂದ ಮರೆಯಾಗಿರುವದರಿಂದ ಎಲೈ ಭೂಪಾಲನೆ, ಅತ್ಯಂತವಾಗಿ ಸಂತತವಾಗಿರುವ ಸಂಸಾರತಾಪಗಳೆಲ್ಲವನ್ನೂ ಪಡೆಯುತ್ತಿರುವದು, ಸರ್ವಭೂತಗಳಲ್ಲಿಯೂ ತಾರತಮ್ಯದಿಂದ ಇದ್ದುಕೊಂಡಿರುವದು.

(ಮೂಲ)

ಪ್ರಧಾನಂ ಚ ಪುಮಾಂಶ್ಚೈವ ಸರ್ವಭೂತಾತ್ಮಭೂತಯಾ ।
ವಿಷ್ಣುಶಕ್ತ್ಯಾ ಮಹಾಬುದ್ಧೇ ವೃತೌ ಸಂಶ್ರಯಧರ್ಮಿಣೌ ॥
ತಯೋಃ ಸೈವ ಪೃಥಗ್ಭಾವಕಾರಣಂ ಸಂಶ್ರಯಸ್ಯ ಚ ।
ಯಥಾ ಸಕ್ತಂ ಜಲೇ ವಾತೋ ಬಿಭರ್ತಿ ಕಣಿಕಾಶತಮ್ ।
ಶಕ್ತಿಃ ಸಾಪಿ ತಥಾ ವಿಷ್ಣೋಃ ಪ್ರಧಾನಪುರುಷಾತ್ಮನಃ[1] ॥

ವಿ. ಪು. ೨-೭-೨೯, ೩೦, ೩೧, ೩೨

**ಭಾವಾರ್ಥ :—** ಪ್ರಧಾನವೂ ಪುರುಷನೂ ಸರ್ವಭೂತಗಳಿಗೂ ಆತ್ಮನಾಗಿರುವ, ಆಶ್ರಯಿಸಿಕೊಂಡಿರುವ ಧರ್ಮವುಳ್ಳವಾದ್ದರಿಂದ, ಎಲೈ ಮಹಾಬುದ್ಧಿಯೆ, ವಿಷ್ಣುಶಕ್ತಿಯಿಂದ[2] ಆವೃತವಾಗಿರುತ್ತವೆ.[3] ಅವೆರಡಕ್ಕೂ ಅದೇ ಪೃಥಗ್ಭಾವಕ್ಕೆ ಕಾರಣವು, ಸಂಶ್ರಯಕ್ಕೂ[4] ಕಾರಣವು. ಹೇಗೆ ನೀರಿನಲ್ಲಿ ಅಂಟಿಕೊಂಡಿ

1. 'ಪ್ರಧಾನಪುರುಷಾತ್ಮಕಮ್' ಎಂದು ಪುರಾಣದಲ್ಲಿರುವ ಪಾಠ.
2. ವಿಷ್ಣುವಿನ ನಿಯಮನಶಕ್ತಿಯಿಂದ ಶ್ರು. ಪ್ರ.
3. ವ್ಯಾಪ್ತವಾಗಿರುತ್ತದೆ. ಶ್ರು. ಪ್ರ.
4. 'ಪೃಥಗ್ಭಾವ'ವೆಂದರೆ ಉಪಕರಣೋಪಕರಣಿತ್ವವೆಂಬ ಸಂಬಂಧವಿಲ್ಲದಿರುವದು, ಸಂಶ್ರಯವೆಂದರೆ ಕರಣಕರಣಿತ್ವಸಂಬಂಧ ; ಅಥವಾ ಸಂಶ್ರಯವೆಂದರೆ ಸಂಸಾರ ; ಪೃಥಗ್ಭಾವವೆಂದರೆ ಮೋಕ್ಷ. ಇವೆಲ್ಲವೂ ಭಗವನ್ನಿಯಮನಾಧೀನ. ಶ್ರು. ಪ್ರ.

ರುವ ಗಾಳಿಯು ನೂರಾರು ಹನಿಗಳನ್ನು ಧರಿಸಿರುವದೋ, ಹಾಗೆಯೇ ವಿಷ್ಣುವಿನ ಆ ಶಕ್ತಿಯೂ ಪ್ರಧಾನವನ್ನೂ ಪುರುಷಾತ್ಮನನ್ನೂ ಧರಿಸಿರುವದು.

(ಮೂಲ)

"ತದೇತದಕ್ಷಯಂ[1] ನಿತ್ಯಂ ಜಗನ್ಮುನಿವರಾಖಿಲಮ್ ।
ಆವಿರ್ಭಾವತಿರೋಭಾವಜನ್ಮನಾಶವಿಕಲ್ಪವತ್" ॥ ವಿ. ಪು. ೧-೨೨-೬೦

ಭಾವಾರ್ಥ :- ಎಲೈ ಮುನಿಶ್ರೇಷ್ಠನೆ, ಈ ಜಗತ್ತೆಲ್ಲವೂ ತೋರುವಿಕೆ, ಮರೆಯಾಗುವಿಕೆ, ಜನ್ಮ, ನಾಶ- ಎಂಬ ವಿಕಲ್ಪವುಳ್ಳದ್ದಾದರೂ ಅಕ್ಷಯವು, ನಿತ್ಯವು.

## (೩೨) ಸ್ಮೃತಿಪುರಾಣವಚನಗಳಿಂದ ಸಿದ್ಧವಾದ ಅರ್ಥ

(ಮೂಲ)

ಇತ್ಯಾದಿನಾ ಪರಂ ಬ್ರಹ್ಮ ಸ್ವಭಾವತ ಏವ ನಿರಸ್ತನಿಖಿಲದೋಷಗನ್ಧಂ ಸಮಸ್ತಕಲ್ಯಾಣಗುಣಾತ್ಮಕಂ ಜಗದುತ್ಪತ್ತಿಸ್ಥಿತಿಸಂಹಾರಾನ್ತಃಪ್ರವೇಶನಿಯಮನಾದಿ ಲೀಲಂ ಪ್ರತಿಪಾದ್ಯ, ಕೃತ್ಸ್ನಸ್ಯ ಚಿದಚಿದ್ವಸ್ತುನಃ ಸರ್ವಾವಸ್ಥಾವಸ್ಥಿತಸ್ಯ ಪಾರಮಾರ್ಥಿಕಸ್ಯೈವ ಪರಸ್ಯ ಬ್ರಹ್ಮಣಃ ಶರೀರತಯಾ ರೂಪತ್ವಮ್, ಶರೀರರೂಪತನ್ವಂಶಶಕ್ತಿವಿಭೂತ್ಯಾದಿಶಬ್ದೈಃ ತತ್ತಚ್ಛಬ್ದಸಾಮಾನಾಧಿಕರಣ್ಯೇನ ಚ ಅಭಿಧಾಯ, ತದ್ವಿಭೂತಿಭೂತಸ್ಯ ಚಿದ್ವಸ್ತುನಃ, ಸ್ವರೂಪೇಣಾವಸ್ಥಿತಿಮ್, ಅಚಿನ್ಮಿಶ್ರತಯಾ ಕ್ಷೇತ್ರಜ್ಞರೂಪೇಣ ಸ್ಥಿತಿಂ ಚೋಕ್ತ್ವಾ ಕ್ಷೇತ್ರಜ್ಞಾವಸ್ಥಾಯಾಂ ಪುಣ್ಯಪಾಪಾತ್ಮಕಕರ್ಮರೂಪಾವಿದ್ಯಾವೇಷ್ಟಿತತ್ವೇನ ಸ್ವಾಭಾವಿಕಜ್ಞಾನರೂಪತ್ವಾನನುಸಂಧಾನಮ್, ಅಚಿದ್ರೂಪಪದಾರ್ಥಾಕಾರತಯಾ[2] ಅನುಸಂಧಾನಂ ಚ ಪ್ರತಿಪಾದಿತಮ್ ಇತಿ- ಪರಂ ಬ್ರಹ್ಮ ಸವಿಶೇಷಮ್, ತದ್ವಿಭೂತಿಭೂತಂ ಜಗದಪಿ ಪಾರಮಾರ್ಥಿಕಮೇವ ಇತಿ ಜ್ಞಾಯತೇ ॥

(ಅರ್ಥ)

ಇದೇ ಮುಂತಾದ (ವಚನಜಾತ)ದಿಂದಲೂ (೧) ಪರಬ್ರಹ್ಮವು ಸ್ವಭಾವದಿಂದಲೇ ಯಾವ ದೋಷವಾಸನೆಯೂ ಇಲ್ಲದ ಸಮಸ್ತಕಲ್ಯಾಣಗುಣಾತ್ಮಕವಾದದ್ದು, ಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರ, (ಅದರ) ಒಳಕ್ಕೆ ಪ್ರವೇಶ, (ಅದನ್ನು) ನಿಯಮಿಸುವದು- ಮುಂತಾದ ಲೀಲೆಗಳುಳ್ಳದ್ದು -ಎಂದು ಪ್ರತಿಪಾದಿಸಿ (೨) ಎಲ್ಲಾ ಚಿದಚಿದ್ವಸ್ತುವೂ ಯಾವ ಅವಸ್ಥೆಯಲ್ಲಿ

---

1. 'ತದೇತದಕ್ಷರಮ್' ಎಂದು ಪಾ॥
2. 'ಅಚಿದ್ರೂಪತದರ್ಥಾ' ಪಾ॥

ದ್ವರೂ ಪರಮಾರ್ಥವೇ ಆಗಿದ್ದು ಪರಬ್ರಹ್ಮದ ಶರೀರವಾಗಿರುವದರಿಂದ (ಅದರ) ರೂಪವೆಂದೂ; 'ಶರೀರ', 'ರೂಪ', 'ತನು', 'ಅಂಶ', 'ಶಕ್ತಿ', 'ವಿಭೂತಿ'– ಮುಂತಾದ ಶಬ್ದಗಳಿಂದಲೂ ಆಯಾ ಶಬ್ದದ ಸಾಮಾನಾಧಿಕರಣ್ಯ ದಿಂದಲೂ ಹೇಳಿದೆ. (೩) ಅದರ ವಿಭೂತಿಯಾಗಿರುವ ಚಿದ್ವಸ್ತುವಿಗೆ ಸ್ವರೂಪ ದಿಂದ ಇರುವಿಕೆಯನ್ನೂ, ಅಚಿನ್ಮಿಶ್ರವಾಗಿರುವದರಿಂದ ಕ್ಷೇತ್ರಜ್ಞರೂಪ ದಿಂದ ಇರುವಿಕೆಯನ್ನೂ ಹೇಳಿ, ಕ್ಷೇತ್ರಜ್ಞಾವಸ್ಥೆಯಲ್ಲಿ ಪುಣ್ಯಪಾಪಗಳೆಂಬ ಕರ್ಮರೂಪವಾದ ಅವಿದ್ಯೆಯಿಂದ ಸುತ್ತುವರಿಯಲ್ಪಟ್ಟಿರುವದರಿಂದ ಸ್ವಾಭಾವಿಕವಾದ ಜ್ಞಾನರೂಪವನ್ನರಿಯದಿರುವಿಕೆಯನ್ನೂ ಅಚಿದ್ರೂಪ ವಾದ ಅರ್ಥದ ಆಕಾರದಿಂದ ತಿಳಿದಿರುವಿಕೆಯನ್ನೂ ಪ್ರತಿಪಾದಿಸಿರುತ್ತದೆ.

ಆದ್ದರಿಂದ ಪರಬ್ರಹ್ಮವು ಸವಿಶೇಷವೇ, ಅದರ ವಿಭೂತಿಯಾಗಿರುವ ಜಗತ್ತೂ ಪಾರಮಾರ್ಥಿಕವೇ ಎಂದು ಗೊತ್ತಾಗುತ್ತದೆ.

## (೩೩) ಪುರಾಣಶ್ಲೋಕಗಳಿಗೆ[1] ಸರಿಯಾದ ಅರ್ಥ

### (ಮೂಲ)

'ಪ್ರತ್ಯಸ್ತಮಿತಭೇದಮ್' (ವಿ. ಪು. ೬-೭-೫೩) ಇತ್ಯತ್ರ ದೇವಮನುಷ್ಯಾದಿ ಪ್ರಕೃತಿಪರಿಣಾಮವಿಶೇಷಸಂಸೃಷ್ಟಸ್ಯಾಪ್ಯಾತ್ಮನಃ ಸ್ವರೂಪಂ ತದ್ಗತಭೇದರಹಿತ ತ್ವೇನ ತದ್ಭೇದವಾಚಿದೇವಾದಿಶಬ್ದಾಗೋಚರಂ ಜ್ಞಾನಸತ್ತೈಕಲಕ್ಷಣಂ ಸ್ವಸಂವೇ-ದ್ಯಂ ಯೋಗಯುಙ್ಮನಸೋ ನ ಗೋಚರ ಇತ್ಯುಚ್ಯತೇ ಇತಿ। ಅನೇನ ನ ಪ್ರಪಞ್ಚಾ-ಪಲಾಪಃ। ಕಥಮಿದಮವಗಮ್ಯತ ಇತಿ ಚೇತ್, ತದುಚ್ಯತೇ– ಅಸ್ಮಿನ್ ಪ್ರಕರಣೇ ಸಂಸಾರೈಕಭೇಷಜತಯಾ ಯೋಗಮಭಿಧಾಯ ಯೋಗಾವಯವಾನ್ ಪ್ರತ್ಯಾಹಾರ ಪರ್ಯನ್ತಾಂಶ್ಚೋಕ್ತ್ವಾ, ಧಾರಣಾಸಿದ್ಧ್ಯರ್ಥಂ ಶುಭಾಶ್ರಯಂ ವಕ್ತುಂ ಪರಸ್ಯ ಬ್ರಹ್ಮಣೋ ವಿಷ್ಣೋಃ ಶಕ್ತಿಶಬ್ದಾಭಿಧೇಯಂ ರೂಪದ್ವಯಂ ಮೂರ್ತಾಮೂರ್ತ ವಿಭಾಗೇನ ಪ್ರತಿಪಾದ್ಯ, ತೃತೀಯಶಕ್ತಿರೂಪಕರ್ಮಾಖ್ಯಾವಿದ್ಯಾವೇಷ್ಟಿತಮ್ ಅಚಿದ್ವಿಶಿಷ್ಟಂ ಕ್ಷೇತ್ರಜ್ಞಂ ಮೂರ್ತಾಖ್ಯವಿಭಾಗಂ ಭಾವನಾತ್ರಯಾನ್ವಯಾದ್ ಅಶುಭಮ್ ಇತ್ಯುಕ್ತ್ವಾ, ದ್ವಿತೀಯಸ್ಯ ಕರ್ಮಾಖ್ಯಾವಿದ್ಯಾವಿರಹಿಣಃ ಅಚಿ ದ್ವಿಯುಕ್ತಸ್ಯ ಜ್ಞಾನೈಕಾಕಾರಸ್ಯ ಅಮೂರ್ತಾಖ್ಯವಿಭಾಗಸ್ಯ ನಿಷ್ಪನ್ನಯೋಗಿ ಧ್ಯೇಯತಯಾ ಯೋಗಯುಙ್ಮನಸೋಽನಾಲಮ್ಬನತಯಾ ಸ್ವತಃ ಶುದ್ಧಿವಿರಹಾಚ್ಚ ಶುಭಾಶ್ರಯತ್ವಂ ಪ್ರತಿಷಿಧ್ಯ, ಪರಶಕ್ತಿರೂಪಮಿದಮ್ ಅಮೂರ್ತಮಪರಶಕ್ತಿರೂಪಂ ಕ್ಷೇತ್ರಜ್ಞಾಖ್ಯಮೂರ್ತಂ ಚ– ಪರಶಕ್ತಿರೂಪಸ್ಯಾಽಽತ್ಮನಃ ಕ್ಷೇತ್ರಜ್ಞತಾಪತ್ತಿಹೇತು ಭೂತತೃತೀಯಶಕ್ತ್ಯಾಖ್ಯಕರ್ಮರೂಪಾವಿದ್ಯಾ ಚ-ಇತ್ಯೇತತ್ ಶಕ್ತಿತ್ರಯಾಶ್ರಯೋ

1. ಇದು ಖಾಂಡಿಕ್ಯಕೇಶಿಧ್ವಜರ ಸಂವಾದದಲ್ಲಿ ಬಂದಿರುವ ವಾಕ್ಯ.

ಭಗವದಸಾಧಾರಣಮ್ 'ಆದಿತ್ಯವರ್ಣಮ್' ಇತ್ಯಾದಿವೇದಾನ್ತಸಿದ್ಧಂ ಮೂರ್ತ ರೂಪಂ ಶುಭಾಶ್ರಯ ಇತ್ಯುಕ್ತಮ್ ॥

(ಅರ್ಥ)

**'ಪ್ರತ್ಯಸ್ತಮಿತಭೇದಮ್'**[1] (ವಿ. ಪು. ೬–೭–೫೩) ಎಂಬಲ್ಲಿ ದೇವತೆಗಳು, ಮನುಷ್ಯರು– ಮುಂತಾದ ಪ್ರಕೃತಿಯ ಪರಿಣಾಮವಿಶೇಷಗಳಿಂದ ಸಂಬದ್ಧವಾಗಿದ್ದರೂ ಆತ್ಮನ ಸ್ವರೂಪವು ಅದರಿಂದಾದ ಭೇದವಿಲ್ಲದೆ ಇರುವದರಿಂದ, ಆ ಭೇದವನ್ನು ಹೇಳುವ 'ದೇವ' ಮುಂತಾದ ಶಬ್ದಗಳಿಗೆ ಅಗೋಚರವಾಗಿ ಜ್ಞಾನ ಸತ್ತೆಯೆಂಬ ಒಂದೇ ಲಕ್ಷಣವುಳ್ಳದ್ದಾಗಿ ಸ್ವಸಂವೇದ್ಯವಾಗಿ 'ಯೋಗಯುಕ್ತರಾದವರ ಮನಸ್ಸಿಗೆ ವಿಷಯವಲ್ಲ' (ವಿ. ಪು. ೬–೭–೫೫) ಎಂದು ಹೇಳಿದೆಯಾಗಿ ಇಷ್ಟು ಮಾತ್ರದಿಂದ ಪ್ರಪಂಚವನ್ನು ಅಲ್ಲಗಳೆದಂತೆ ಆಗುವದಿಲ್ಲ.

(ಪ್ರಶ್ನೆ) :– ಇದು ಹೇಗೆ ಗೊತ್ತಾಗುತ್ತದೆ ?

(ಉತ್ತರ) :– ಅದನ್ನು ಹೇಳುವೆವು. ಈ ಪ್ರಕರಣದಲ್ಲಿ ಸಂಸಾರಕ್ಕೆಲ್ಲ ಒಂದೇ ಚಿಕಿತ್ಸೆಯೆಂದು **ಯೋಗವನ್ನು** ಹೇಳಿ (ವಿ. ೬–೭–೨೫) ಪ್ರತ್ಯಾಹಾರದವರೆಗಿನ ಯೋಗಾಂಗಗಳನ್ನು ಹೇಳಿ (ವಿ. ಪು. ೬–೭–೩೬ರಿಂದ ೪೫) **ಧಾರಣೆಯನ್ನು** ಸಾಧಿಸುವದಕ್ಕಾಗಿ ಶುಭಾಶ್ರಯನಾದ (ಪರಮಾತ್ಮನನ್ನು) ಹೇಳುವದಕ್ಕೋಸ್ಕರ (ವಿ.ಪು. ೬–೭–೪೬) ಪರಬ್ರಹ್ಮವಾದ ವಿಷ್ಣುವಿನ ಶಕ್ತಿ ಎಂಬ ಹೆಸರಿನಿಂದ ಕರೆದಿರುವ ಎರಡುರೂಪಗಳನ್ನು ಮೂರ್ತ, ಅಮೂರ್ತ–ಎಂದು ವಿಂಗಡಿಸಿ ತಿಳಿಸಿಕೊಟ್ಟು (ವಿ. ಪು. ೬–೭–೪೭) ಮೂರನೆಯ ಶಕ್ತಿರೂಪವಾದ 'ಕರ್ಮ'ವೆಂಬ ಅವಿದ್ಯಾವೇಷ್ಟಿತವಾಗಿ (ವಿ. ಪು. ೬–೭–೬೨) ಅಚಿದ್ವಿಶಿಷ್ಟವಾಗಿರುವ ಕ್ಷೇತ್ರಜ್ಞನೆಂಬ ಮೂರ್ತಾಖ್ಯವಿಭಾಗವು ಭಾವನಾತ್ರಯದಿಂದ ಕೂಡಿರುವದರಿಂದ ಅಶುಭವೆಂದು ಹೇಳಿ (ವಿ. ಪು. ೬–೭–೪೮,೪೯), ಎರಡನೆಯದು ಕರ್ಮವೆಂಬ ಅವಿದ್ಯಾರಹಿತವಾಗಿದ್ದು ಅಚಿದ್ವಿಯುಕ್ತವಾಗಿ ಜ್ಞಾನೈಕಾಕಾರವಾಗಿರುವ ಅಮೂರ್ತವೆಂಬ ವಿಭಾಗವು (ವಿ.ಪು.೬–೭–೬೯) ಸಿದ್ಧಯೋಗಿಧ್ಯೇಯವೆಂದೂ ಯೋಗಿಯ ಮನಸ್ಸಿಗೆ ಆಲಂಬನವಲ್ಲದ್ದರಿಂದಲೂ ಅದಕ್ಕೆ ಸ್ವತಃಶುದ್ಧಿಯಿಲ್ಲದ್ದರಿಂದಲೂ (ಅದೂ) ಶುಭಾಶ್ರಯವಲ್ಲವೆಂದೂ ಹೇಳಿ ಪರಶಕ್ತಿರೂಪವಾದ ಈ **ಅಮೂರ್ತ,** ಮತ್ತು ಅಪರಶಕ್ತಿರೂಪವಾದ ಕ್ಷೇತ್ರಜ್ಞನೆಂಬ ಹೆಸರಿನ **ಮೂರ್ತ,** ಮತ್ತು ಪರಶಕ್ತಿರೂಪನಾದ

1. ಇಲ್ಲಿಂದ ಹಿಡಿದು ಹಿಂದೆ ಪೂರ್ವಪಕ್ಷಿ ಉದಾಹರಿಸಿದ್ದ ಪುರಾಣಶ್ಲೋಕಗಳಿಗೆ ಸಿದ್ಧಾಂತಾನುಗುಣವಾದ ಅರ್ಥವೇ ಇದೆ, ನಿರ್ವಿಶೇಷಚಿನ್ಮಾತ್ರಪರತ್ವವಿಲ್ಲ– ಎಂಬುದನ್ನು ತೋರಿಸುವದಕ್ಕಾಗಿ ಪ್ರಕರಣಾದಿಗಳನ್ನು ಪರ್ಯಾಲೋಚನೆಮಾಡುತ್ತಾರೆ. ಇದಕ್ಕಾಗಿಯೇ ಹಿಂದೆ ಪುರಾಣಶ್ಲೋಕಗಳನ್ನು ವಿಸ್ತಾರವಾಗಿ ಉದಾಹರಿಸಿದ್ದು.

ಆತ್ಮನಿಗೆ ಕ್ಷೇತ್ರಜ್ಞತ್ವವನ್ನು ಪಡೆಯುವದಕ್ಕೆ ಕಾರಣವಾದ ಮೂರನೆಯ ಶಕ್ತಿ ಎಂಬ ಕರ್ಮರೂಪವಾದ **ಅವಿದ್ಯೆ**– ಎಂಬೀ ಮೂರು ಶಕ್ತಿಗಳಿಗೂ ಆಶ್ರಯವಾಗಿರುವ ಭಗವಂತನ ಅಸಾಧಾರಣವಾದ 'ಆದಿತ್ಯವರ್ಣವು' (ತೈ.ಆ.) ಮುಂತಾದ ವೇದಾಂತ ಪ್ರಸಿದ್ಧವಾದ ಮೂರ್ತರೂಪವೇ **ಶುಭಾಶ್ರಯವು** ಎಂದು ಹೇಳಿರುತ್ತದೆ.

(ಮೂಲ)

ಅತ್ರ ಪರಿಶುದ್ಧಾತ್ಮಸ್ವರೂಪಸ್ಯ ಶುಭಾಶ್ರಯಾನರ್ಹತಾಂ ವಕ್ತುಂ 'ಪ್ರತ್ಯಸ್ತ-ಮಿತಭೇದಂ ಯತ್' ಇತ್ಯುಚ್ಯತೇ, ತಥಾ ಹಿ–

**ನ ತದ್ಯೋಗಯುಜಾ ಶಕ್ಯಂ ನೃಪ ಚಿನ್ತಯಿತುಂ ಯತಃ ।**
**ದ್ವಿತೀಯಂ ವಿಷ್ಣುಸಂಜ್ಞಸ್ಯ ಯೋಗಿಧ್ಯೇಯಂ ಪರಂ ಪದಮ್[1] ॥**
**ಸಮಸ್ತಾಃ ಶಕ್ತಯಶ್ಚೈತಾ ನೃಪ ಯತ್ರ ಪ್ರತಿಷ್ಠಿತಾಃ ।**
**ತದ್ವಿಶ್ವರೂಪವೈರೂಪ್ಯಂ ರೂಪಮನ್ಯದ್ ಹರೇರ್ಮಹತ್ ॥**

**(ವಿ. ಪು. ' –೭–೫೫, ೬೯, ೭೦)**

ಇತಿ ಚ ವದತಿ ॥

ತಥಾ ಚತುರ್ಮುಖಸನಕಸನನ್ದನಾದೀನಾಂ ಜಗದನ್ತರ್ವರ್ತಿನಾಮ್ ಅವಿದ್ಯಾವೇಷ್ಟಿತತ್ವೇನ ಶುಭಾಶ್ರಯಾನರ್ಹತಾಮುಕ್ತ್ವಾ ಬದ್ಧಾನಾಮೇವ ಪಶ್ಚಾದ್ ಯೋಗೇನ ಉದ್ಭೂತಬೋಧಾನಾಂ ಸ್ವಸ್ವರೂಪಾಪನ್ನಾನಾಂ ಚ ಸ್ವತಃ ಶುದ್ಧಿವಿರಹಾತ್ ಭಗವತಾ ಶೌನಕೇನ ಶುಭಾಶ್ರಯತಾ ನಿಷಿದ್ಧಾ—

**ಆಬ್ರಹ್ಮಸ್ತಮ್ಬಪರ್ಯನ್ತಾ ಜಗದನ್ತರ್ವ್ಯವಸ್ಥಿತಾಃ ।**
**ಪ್ರಾಣಿನಃ ಕರ್ಮಜನಿತಸಂಸಾರವಶವರ್ತಿನಃ ॥**
**ಯತಸ್ತತೋ ನ ತೇ ಧ್ಯಾನೇ ಧ್ಯಾನಿನಾಮುಪಕಾರಕಾಃ ।**
**ಅವಿದ್ಯಾನ್ತರ್ಗತಾಃ ಸರ್ವೇ ತೇ ಹಿ ಸಂಸಾರಗೋಚರಾಃ ॥**
**ಪಶ್ಚಾದುದ್ಭೂತಬೋಧಾಶ್ಚ ಧ್ಯಾನೇನೈವೋಪಕಾರಕಾಃ ।**
**ನೈಸರ್ಗಿಕೋ ನ ವೈ ಬೋಧಸ್ತೇಷಾಮಪ್ಯನ್ಯತೋ ಯತಃ ॥**
**ತಸ್ಮಾತ್ತದಮಲಂ ಬ್ರಹ್ಮ ನಿಸರ್ಗಾದೇವ ಬೋಧವತ್ ॥**

**(ಭವಿಷ್ಯತ್ಪುರಾಣಾನ್ತರ್ಗತ ಶ್ರೀವಿಷ್ಣುಧರ್ಮೇ, ೧೦೪–೩೩,೩೪,೩೫,೩೬)**

ಇತ್ಯಾದಿನಾ ಪರಸ್ಯ ಬ್ರಹ್ಮಣೋ ವಿಷ್ಣೋಃ ಸ್ವರೂಪಂ ಸ್ವಾಸಾಧಾರಣಮೇವ ಶುಭಾಶ್ರಯ ಇತ್ಯುಕ್ತಮ್ । ಅತೋಽತ್ರ ನ ಭೇದಾಪಲಾಪಃ ಪ್ರತೀಯತೇ ॥

(ಅರ್ಥ)

ಇಲ್ಲಿ ಪರಿಶುದ್ಧಾತ್ಮಸ್ವರೂಪಕ್ಕೂ ಶುಭಾಶ್ರಯತ್ವವಿಲ್ಲವೆಂದು ಹೇಳುವದಕ್ಕಾಗಿ 'ಪ್ರತ್ಯಸ್ತಮಿತಭೇದಂ ಯತ್' (ಯಾವದು ಭೇದವೂ ಇಲ್ಲದ್ದೋ) ಎಂದಿದೆ. ಆದ್ದರಿಂದಲೇ–

---

1. **'ಮಹಾಮತೇ' ಎಂದು ವಿ.ಪು.ದ ಪಾಠ.**

'ನೃಪನೆ, ಅದು ಯೋಗಯುಕ್ತನಿಂದ ಚಿಂತಿಸುವದಕ್ಕೆ ಆಗುವಂತಿಲ್ಲವಾದ್ದರಿಂದಲೂ (ವಿಶ್ವಮಯವಾದ ಹರಿಯ ಸ್ಥೂಲರೂಪವನ್ನು ಚಿಂತಿಸಬೇಕು. ವಿ. ಪು. ೬–೭-೫೫)[1] ಮಹಾಮತಿಯೆ, ವಿಷ್ಣುಸಂಜ್ಞವಾದ ಬ್ರಹ್ಮದ ಎರಡನೆಯ ಅಮೂರ್ತರೂಪವು ಯೋಗಿಧ್ಯೇಯವಾಗಿರುತ್ತದೆ (ಅದನ್ನು ಸತ್ ಎನ್ನುತ್ತಾರೆ. ವಿ. ಪು. ೬–೭–೬೯), ನೃಪನೆ, ಈ ಶಕ್ತಿಗಳೆಲ್ಲ ಯಾವದರಲ್ಲಿ ಆಶ್ರಯಿಸಿಕೊಂಡಿರುವವೋ ಅದು ವಿಶ್ವರೂಪಕ್ಕಿಂತ ವಿಲಕ್ಷಣವಾದ, ಹರಿಯ ಮತ್ತೊಂದು ಮಹಾರೂಪವು' (ವಿ. ಪು. ೬–೭–೭೦) ಎಂದು ಹೇಳಿರುತ್ತಾನೆ.

ಆದ್ದರಿಂದಲೇ ಚತುರ್ಮುಖ, ಸನಕ, ಸನಂದನ– ಮುಂತಾದವರು ಜಗತ್ತಿನಲ್ಲಿಯೇ ಅಂತರ್ಭೂತರಾಗಿ ಅವಿದ್ಯಾವೇಷ್ಟಿತರಾಗಿರುವದರಿಂದ (ಅವರು ಶುಭಾಶ್ರಯತ್ವಕ್ಕೆ ಅರ್ಹರಲ್ಲವೆಂದು ಹೇಳಿ, ಬದ್ಧರಾದವರೇ ಮತ್ತೆ ಯೋಗದಿಂದ ಜ್ಞಾನವು ಉದ್ಭೂತವಾಗಲು ತಮ್ಮ ಸ್ವರೂಪವನ್ನು ಪಡೆದುಕೊಂಡವರಿಗೆ, ಸ್ವತಃ ಶುದ್ಧಿಯಿಲ್ಲದ್ದರಿಂದ ಶುಭಾಶ್ರಯತ್ವವಿಲ್ಲವೆಂದು ಪೂಜ್ಯನಾದ **ಶೌನಕನು** ಹೇಳಿರುತ್ತಾನೆ.

'ಬ್ರಹ್ಮನಿಂದ ಮೊದಲುಮಾಡಿಕೊಂಡು ಸ್ತಂಬದವರೆಗೆ ಪ್ರಾಣಿಗಳು ಜಗತ್ತಿನ ಒಳಗೇ ಇದ್ದುಕೊಂಡಿರುತ್ತವೆ. (ಅವು) ಕರ್ಮದಿಂದುಂಟಾದ ಸಂಸಾರದ ವಶದಲ್ಲಿ ಇರುತ್ತವೆ. ಆದ್ದರಿಂದ ಧ್ಯಾನಿಗಳಿಗೆ ಅವು ಧ್ಯಾನಕ್ಕೆ ಉಪಕಾರಕಗಳಲ್ಲ. ಏಕೆಂದರೆ ಅವೆಲ್ಲವೂ ಅವಿದ್ಯೆಯಲ್ಲಿಯೇ ಅಡಕವಾಗಿರುತ್ತವೆ ; ಸಂಸಾರಕ್ಕೆ ಗೋಚರವಾಗಿರುತ್ತವೆ. (ಯೋಗಸಿದ್ಧಿಯಾದ) ಬಳಿಕ ಜ್ಞಾನವುಂಟಾದ ಪ್ರಾಣಿಗಳೂ ಧ್ಯಾನಕ್ಕೆ ಉಪಕಾರಕಗಳಲ್ಲ; ಏಕೆಂದರೆ ಅವಕ್ಕೆ ಸ್ವಾಭಾವಿಕವಾದ ಬೋಧವಿರುವದಿಲ್ಲ; ಅವಕ್ಕೆ ಮತ್ತೊಂದರಿಂದಲೇ (ಜ್ಞಾನ)ವಾಗುತ್ತಿರುವದು. ಆದ್ದರಿಂದ ಸ್ವಭಾವದಿಂದಲೇ ಬೋಧವುಳ್ಳ ಆ ಬ್ರಹ್ಮವೇ ನಿರ್ಮಲವಾದದ್ದು' (ಭ. ಪುರಾಣಾಂತರ್ಗತ, ವಿಷ್ಣುಧರ್ಮ ೧೦೪–೨೩ರಿಂದ ೨೬)

ಇದೇ ಮುಂತಾದ (ವಚನಜಾತದಿಂದ) ಪರಬ್ರಹ್ಮವಾದ ವಿಷ್ಣುವಿನ ಸ್ವರೂಪಕ್ಕೆ ಅಸಾಧಾರಣವಾಗಿಯೇ ಇರುವದರಿಂದ (ಅದೇ) ಶುಭಾಶ್ರಯವಾಗಿರುತ್ತದೆ– ಎಂದು ಉಕ್ತವಾಗಿರುತ್ತದೆ. ಆದ್ದರಿಂದ ಇಲ್ಲಿ ಭೇದವನ್ನು ಅಲ್ಲಗಳೆದದ್ದೇನೂ ಕಾಣಬರುತ್ತಿಲ್ಲ.

---

1. ಇಲ್ಲಿ ಮೂರ್ತಾಮೂರ್ತವಿಭಾಗವು, ಯೋಗಕ್ಕೆ ಅನಾಲಂಬನವೆಂಬುದನ್ನು ಹೇಳಿದೆ. ಸ್ವತಃಶುದ್ಧಿಯು ಜೀವನಿಗೆ ಇಲ್ಲವೆಂಬುದನ್ನು ಪ್ರಕರಣದಿಂದ ಅರಿತುಕೊಳ್ಳಬೇಕು. 'ಅನ್ಯೇ ತು ಪುರುಷವ್ಯಾಘ್ರ ಚೇತಸೋ ಯೇ ವ್ಯಪಾಶ್ರಯಾಃ । ಅಶುದ್ಧಾಸ್ತೇ ಸಮಸ್ತಾಸ್ತು ದೇವಾದ್ಯಾಃ ಕರ್ಮಯೋನಯಃ' (ವಿ. ಪು. ೬–೭–೭೭) ಎಂಬ ಶ್ಲೋಕದಲ್ಲಿ ಹಾಗೆಂದು ಹೇಳಿದೆ. ಶ್ರು.ಪ್ರ.

(ಮೂಲ)

'ಜ್ಞಾನಸ್ವರೂಪಮ್' (ವಿ.ಪು. ೧-೨-೬) ಇತ್ಯತ್ರಾಪಿ ಜ್ಞಾನವ್ಯತಿರಿಕ್ತಸ್ಯ ಅರ್ಥಜಾತಸ್ಯ ಕೃತ್ಸ್ನಸ್ಯ ನ ಮಿಥ್ಯಾತ್ವಂ ಪ್ರತಿಪಾದ್ಯತೇ ; ಜ್ಞಾನಸ್ವರೂಪಸ್ಯ ಆತ್ಮನೋ ದೇವಮನುಷ್ಯಾದ್ಯರ್ಥಾಕಾರೇಣಾವಭಾಸೋ ಭ್ರಾನ್ತಿಃ ಇತ್ಯೇತಾವನ್ಮಾತ್ರವಚನಾತ್ । ನ ಹಿ ಶುಕ್ತಿಕಾಯಾ ರಜತತಯಾ ಅವಭಾಸೋ ಭ್ರಾನ್ತಿಃ ಇತ್ಯುಕ್ತೇ ಜಗತಿ ಕೃತ್ಸ್ನಂ ರಜತಜಾತಂ ಮಿಥ್ಯಾ ಭವತಿ । ಜಗದ್ಬ್ರಹ್ಮಣೋಃ ಸಾಮಾನಾಧಿಕರಣ್ಯೇನ ಐಕ್ಯಪ್ರತೀತೇಃ, ಬ್ರಹ್ಮಣೋ ಜ್ಞಾನಸ್ವರೂಪಸ್ಯ ಅರ್ಥಾಕಾರತಾ ಭ್ರಾನ್ತಿರಿತ್ಯುಕ್ತೇ ಸತಿ ಅರ್ಥಜಾತಸ್ಯ ಕೃತ್ಸ್ನಸ್ಯ ಮಿಥ್ಯಾತ್ವಮುಕ್ತಂ ಸ್ಯಾತ್- ಇತಿ ಚೇತ್ । ತದಸತ್, ಅಸ್ಮಿನ್ ಶಾಸ್ತ್ರೇ ಪರಸ್ಯ ಬ್ರಹ್ಮಣೋ ವಿಷ್ಣೋಃ ನಿರಸ್ತಾಜ್ಞಾನಾದಿನಿಖಿಲದೋಷಗನ್ಧಸ್ಯ ಸಮಸ್ತಕಲ್ಯಾಣಗುಣಾತ್ಮಕಸ್ಯ ಮಹಾವಿಭೂತೇಃ, ಪ್ರತಿಪನ್ನತಯಾ ತಸ್ಯ ಭ್ರಾನ್ತಿದರ್ಶನಾಸಂಭವಾತ್ । ಸಮಾನಾಧಿಕರಣ್ಯೇನ ಐಕ್ಯಪ್ರತಿಪಾದನಂ ಚ ಬಾಧಾಸಹಮವಿರುದ್ಧಂ ಚ ಇತ್ಯನನ್ತರಮೇವ ಉಪಪಾದಯಿಷ್ಯತೇ । ಅತೋऽಯಮಪಿ ಶ್ಲೋಕೋ ನಾರ್ಥಸ್ವರೂಪಸ್ಯ ಬಾಧಕಃ॥

(ಅರ್ಥ)

**'ಜ್ಞಾನಸ್ವರೂಪಮ್'** (ವಿ.ಪು. ೧-೨-೬) ಎಂಬಲ್ಲಿಯೂ ಜ್ಞಾನಕ್ಕಿಂತ ವ್ಯತಿರಿಕ್ತವಾದ ಅರ್ಥಜಾತವೆಲ್ಲವೂ ಮಿಥ್ಯೆ ಎಂದು ಪ್ರತಿಪಾದಿಸಿರುವದಿಲ್ಲ ; ಜ್ಞಾನಸ್ವರೂಪನಾದ ಆತ್ಮನು ದೇವ, ಮನುಷ್ಯ- ಮುಂತಾದ ಅರ್ಥಗಳ ಆಕಾರದಿಂದ ತೋರುವದು ಭ್ರಾಂತಿ- ಎಂದಿಷ್ಟೇ (ಇಲ್ಲಿ) ಹೇಳಿರುತ್ತದೆ. 'ಕಪ್ಪೆಚಿಪ್ಪು ಬೆಳ್ಳಿಯೆಂದು ತೋರುವದು ಭ್ರಾಂತಿ' ಎಂದರೆ ಜಗತ್ತಿನಲ್ಲಿರುವ ಬೆಳ್ಳಿಯ ಸಮೂಹವೆಲ್ಲ ಮಿಥ್ಯೆಯಾಗುವದಿಲ್ಲವಷ್ಟೆ ?

(ಶಂಕೆ) :- ಜಗತ್ತು ಮತ್ತು ಬ್ರಹ್ಮ- ಇವುಗಳನ್ನು ಸಮಾನಾಧಿಕರಣವಾಗಿ ಹೇಳಿರುವದರಿಂದಲೇ ಐಕ್ಯದ ಅರಿವು ಆಗುತ್ತಿರುವದರಿಂದ 'ಜ್ಞಾನಸ್ವರೂಪವಾದ ಬ್ರಹ್ಮವು ಅರ್ಥಾಕಾರವಾಗಿರುವದು 'ಭ್ರಾಂತಿ' ಎಂದೂ ಅರ್ಥಜಾತವೆಲ್ಲವೂ ಮಿಥ್ಯೆ, ಯೆಂದೂ ಹೇಳಿದಂತೆಯೇ ಆಗುವದಲ್ಲ !'

(ಪರಿಹಾರ) :- ಅದು ಸರಿಯಲ್ಲ. ಏಕೆಂದರೆ, ಈ ಶಾಸ್ತ್ರದಲ್ಲಿ ಪರಬ್ರಹ್ಮವಾದ ವಿಷ್ಣುವು ಅಜ್ಞಾನವೇ ಮುಂತಾದ ಸರ್ವದೋಷಗಳ ಗಂಧವೂ ಇಲ್ಲದೆ ಸಮಸ್ತಕಲ್ಯಾಣಗುಣಾತ್ಮಕವಾದ ಮಹಾವಿಭೂತಿಯುಳ್ಳವನೆಂದೇ ತಿಳಿದುಬರುವದರಿಂದ ಅವನಿಗೆ ಭ್ರಾಂತಿದರ್ಶನವೆಂಬುದು ಸಂಭವಿಸಲಾರದು. ಸಾಮಾನಾಧಿಕರಣ್ಯದಿಂದ ಐಕ್ಯವನ್ನು ಪ್ರತಿಪಾದಿಸುವದು ಬಾಧಾಸಹವೂ ಅವಿರುದ್ಧವೂ ಆಗಿರುತ್ತದೆ ಎಂದು[1] ಇಷ್ಟರಲ್ಲಿಯೇ ಪ್ರತಿಪಾದಿಸಲಾಗುವದು. ಆದ್ದರಿಂದ ಈ ಶ್ಲೋಕವೂ ಅರ್ಥಸ್ವರೂಪವನ್ನು ಬಾಧಿಸುವದಿಲ್ಲ.

1. ಪರಮಾತ್ಮನೇ ಜಗತ್ತು-ಎಂಬುದು ಬಾಧಿತವಾಗುವದಿಲ್ಲ. ವಿರುದ್ಧವೂ ಅಲ್ಲ ಎಂದು.

(ಮೂಲ)

ತಥಾ ಹಿ। 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ। ಯೇನ ಜಾತಾನಿ ಜೀವನ್ತಿ। ಯತ್ ಪ್ರಯನ್ತ್ಯಭಿಸಂವಿಶನ್ತಿ। ತದ್ ವಿಜಿಜ್ಞಾಸಸ್ವ। ತದ್ಬ್ರಹ್ಮ' (ತೈ. ೩-೧) ಇತಿ ಜಗಜ್ಜನ್ಮಾದಿಕಾರಣಂ ಬ್ರಹ್ಮ- ಇತ್ಯವಸಿತೇ ಸತಿ 'ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್। ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರತರಿಷ್ಯತಿ' (ಆದಿ. ೧-೨೬೩) ಇತಿ ಶಾಸ್ತ್ರೇಣ ಅರ್ಥಸ್ಯ ಇತಿಹಾಸಪುರಾಣಾಭ್ಯಾಮ್ ಉಪಬೃಂಹಣಂ ಕಾರ್ಯಮ್ ಇತಿ ವಿಜ್ಞಾಯತೇ। ಉಪಬೃಂಹಣಂ ನಾಮ ವಿದಿತಸಕಲವೇದತದರ್ಥಾನಾಂ ಸ್ವಯೋಗಮಹಿಮಸಾಕ್ಷಾತ್ಕೃತವೇದತತ್ತ್ವಾರ್ಥಾನಾಂ ವಾಕ್ಯೈಃ ಸ್ವಾವಗತವೇದವಾಕ್ಯಾರ್ಥವ್ಯಕ್ತೀಕರಣಮ್। ಸಕಲಶಾಖಾನುಗತಸ್ಯ ವಾಕ್ಯಾರ್ಥಸ್ಯ ಅಲ್ಪಭಾಗಶ್ರವಣಾತ್ ದುರವಗಮತ್ವೇನ ತೇನ ವಿನಾ ನಿಶ್ಚಯಾಯೋಗಾತ್ ಉಪಬೃಂಹಣಂ ಹಿ ಕಾರ್ಯಮೇವ॥

ತತ್ರ ಪುಲಸ್ತ್ಯವಸಿಷ್ಠವರಪ್ರದಾನಲಬ್ಧಪರದೇವತಾಪಾರಮಾರ್ಥ್ಯಜ್ಞಾನವತೋ ಭಗವತಃ ಪರಾಶರಾತ್ ಸ್ವಾವಗತವೇದಾರ್ಥೋಪಬೃಂಹಣಮಿಚ್ಛನ್ ಮೈತ್ರೇಯಃ ಪರಿಪಪ್ರಚ್ಛ-

'ಸೋಹಮಿಚ್ಛಾಮಿ ಧರ್ಮಜ್ಞ ಶ್ರೋತುಂ ತ್ವತ್ತೋ ಯಥಾ ಜಗತ್।
ಬಭೂವ ಭೂಯಶ್ಚ ಯಥಾ ಮಹಾಭಾಗ ಭವಿಷ್ಯತಿ॥
ಯನ್ಮಯಂ ಚ ಜಗದ್ ಬ್ರಹ್ಮನ್ ಯತಶ್ಚೈತಚ್ಚರಾಚರಮ್।
ಲೀನಮಾಸೀದ್ ಯಥಾ ಯತ್ರ ಲಯಮೇಷ್ಯತಿ ಯತ್ರ ಚ॥

ವಿ. ಪು. ೧-೧-೪,೫

ಇತ್ಯಾದಿನಾ॥

ಅತ್ರ ಬ್ರಹ್ಮಸ್ವರೂಪವಿಶೇಷತದ್ವಿಭೂತಿಭೇದಪ್ರಕಾರತದಾರಾಧನಸ್ವರೂಪಫಲವಿಶೇಷಾಶ್ಚ ಪೃಷ್ಟಾಃ। ಬ್ರಹ್ಮಸ್ವರೂಪವಿಶೇಷಪ್ರಶ್ನೇಷು 'ಯತಶ್ಚೈತಚ್ಚರಾಚರಮ್' ಇತಿ ನಿಮಿತ್ತೋಪಾದಾನಯೋಃ ಪೃಷ್ಟತ್ವಾತ್। 'ಯನ್ಮಯಮ್' ಇತ್ಯನೇನ ಸೃಷ್ಟಿಸ್ಥಿತಿಲಯಕರ್ಮಭೂತಂ ಜಗತ್ ಕಿಮಾತ್ಮಕಮ್?- ಇತಿ ಪೃಷ್ಟಮ್। ತಸ್ಯ ಚೋತ್ತರಂ 'ಜಗಚ್ಚ ಸಃ' ಇತಿ। ಇದಂ ಚ ತಾದಾತ್ಮ್ಯಮ್ ಅನ್ತರ್ಯಾಮಿರೂಪೇಣ ಆತ್ಮತಯಾ ವ್ಯಾಪ್ತಿಕೃತಮ್, ನ ತು ವ್ಯಾಪ್ಯವ್ಯಾಪಕಯೋರ್ವಸ್ತ್ವೈಕ್ಯಕೃತಮ್। 'ಯನ್ಮಯಮ್' ಇತಿ ಪ್ರಶ್ನಸ್ಯ ಉತ್ತರತ್ವಾತ್ 'ಜಗಚ್ಚ ಸಃ' ಇತಿ ಸಾಮಾನಾಧಿಕರಣ್ಯಸ್ಯ 'ಯನ್ಮಯಮ್' ಇತಿ ಮಯಡತ್ರ ನ ವಿಕಾರಾರ್ಥಃ, ಪೃಥಕ್ ಪ್ರಶ್ನವೈಯರ್ಥ್ಯಾತ್ ; ನಾಪಿ ಪ್ರಾಣಮಯಾದಿವತ್

1. ಸಾಮಾನಾಧಿಕರಣ್ಯವನ್ನು ಹೇಳಿದರೂ ಬಾಧೆಯಿಲ್ಲದಂತೆ ಐಕ್ಯವನ್ನು ಹೇಳಬಹುದು- ಎಂದು.

ಸ್ವಾರ್ಥಿಕಃ । 'ಜಗಚ್ಚ ಸಃ' ಇತ್ಯುತ್ತರಾನುಪಪತ್ತೇಃ । ತದಾ ಹಿ 'ವಿಷ್ಣುರೇವ' ಇತ್ಯುತ್ತರಮಭವಿಷ್ಯತ್ । ಅತಃ ಪ್ರಾಚುರ್ಯಾರ್ಥ ಏವ । 'ತತ್ಪ್ರಕೃತವಚನೇ ಮಯಟ್' (ಪಾ. ೫-೪-೨೧) ಇತಿ ಮಯಟ್ । ಕೃತ್ಸ್ನಂ ಚ ಜಗತ್ ತಚ್ಛರೀರತಯಾ ತತ್ಪ್ರಚುರಮೇವ । ತಸ್ಮಾತ್, 'ಯನ್ಮಯಮ್' ಇತ್ಯಸ್ಯ ಪ್ರತಿವಚನಂ 'ಜಗಚ್ಚ ಸಃ' ಇತಿ ಸಾಮಾನಾಧಿಕರಣ್ಯಂ ಜಗದ್ಬ್ರಹ್ಮಣೋಃ ಶರೀರಾತ್ಮಭಾವನಿಬನ್ಧನಮ್ ಇತಿ ನಿಶ್ಚೀಯತೇ। ಅನ್ಯಥಾ ನಿರ್ವಿಶೇಷವಸ್ತುಪ್ರತಿಪಾದನಪರೇ ಶಾಸ್ತ್ರೇ ಅಭ್ಯುಪಗಮ್ಯಮಾನೇ ಸರ್ವಾಣ್ಯೇತಾನಿ ಪ್ರಶ್ನಪ್ರತಿವಚನಾನಿ ನ ಸಂಗಚ್ಛನ್ತೇ । ತದ್ವಿವರಣರೂಪಂ ಕೃತ್ಸ್ನಂ ಚ ಶಾಸ್ತ್ರಂ ನ ಸಂಗಚ್ಛತೇ । ತಥಾ ಹಿ ಸತಿ 'ಪ್ರಪಞ್ಚಭ್ರಮಸ್ಯ ಕಿಮಧಿಷ್ಠಾನಮ್ ?' ಇತ್ಯೇವಂರೂಪಸ್ಯ ಏಕಸ್ಯ ಪ್ರಶ್ನಸ್ಯ 'ನಿರ್ವಿಶೇಷಜ್ಞಾನಮಾತ್ರಮ್' ಇತ್ಯೇವಂರೂಪಮ್ ಏಕಮೇವೋತ್ತರಂ ಸ್ಯಾತ್ । ಜಗದ್ಬ್ರಹ್ಮಣೋರೇಕದ್ರವ್ಯತ್ವಪರೇ ಚ ಸಾಮಾನಾಧಿಕರಣ್ಯೇ ಸತ್ಯಸಙ್ಕಲ್ಪತ್ವಾದಿಕಲ್ಯಾಣಗುಣೈಕತಾನತಾ ನಿಖಿಲಹೇಯಪ್ರತ್ಯನೀಕತಾ ಚ ಬಾಧ್ಯೇತ । ಸರ್ವಾಶುಭಾಸ್ಪದಂ ಚ ಬ್ರಹ್ಮ ಭವೇತ್ । ಆತ್ಮಶರೀರಭಾವ ಏವೇದಂ ಸಾಮಾನಾಧಿಕರಣ್ಯಂ ಮುಖ್ಯವೃತ್ತಮ್ ಇತಿ ಸ್ಥಾಪ್ಯತೇ ॥

**(ಅರ್ಥ)**

ಇದು ಹೇಗೆಂದರೆ, ['ಯತೋ ವಾ....'] 'ಯಾವದರಿಂದ ಈ ಭೂತಗಳು ಹುಟ್ಟುತ್ತವೆಯೋ, ಹುಟ್ಟಿದವು ಯಾವದರಿಂದ ಜೀವಿಸಿರುತ್ತವೆಯೋ, ಯಾವದನ್ನು ಕುರಿತು ಹೋಗುತ್ತವೆಯೋ ಅದನ್ನು ವಿಜಿಜ್ಞಾಸೆಮಾಡು, ಅದು ಬ್ರಹ್ಮ' (ತೈ. ೩-೧) ಎಂದು ಜಗತ್ತಿನ ಜನ್ಮಾದಿಗಳಿಗೆ ಕಾರಣವು ನಿಶ್ಚಿತವಾಗಲಾಗಿ **'ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ । ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರತರಿಷ್ಯತಿ'** ''ಇತಿಹಾಸಪುರಾಣಗಳಿಂದ ವೇದಸಮುಪಬೃಂಹಣಮಾಡಬೇಕು. ಅಲ್ಪಶ್ರವಣಮಾಡಿದವನಿಗೆ ವೇದವು 'ನನ್ನನ್ನು ಇವನು ವಂಚಿಸುವನು'- ಎಂದು ಹೆದರುತ್ತದೆ'' (ಆದಿ. ೧-೨೭೩) ಎಂಬ ಶಾಸ್ತ್ರದಿಂದ ವೇದಾರ್ಥವನ್ನು ಇತಿಹಾಸಪುರಾಣಗಳಿಂದ ಸರಿಯಾಗಿ ಉಪಬೃಂಹಣಮಾಡಬೇಕು ಎಂದು ತಿಳಿಯಬರುತ್ತದೆ. (ಇಲ್ಲಿ) **ಉಪಬೃಂಹಣವೆಂದರೆ**[1] ಸಕಲವೇದವನ್ನೂ ಅದರ ಅರ್ಥವನ್ನೂ ತಿಳಿದುಕೊಂಡು ತಮ್ಮ ಯೋಗಮಹಿಮೆಯಿಂದ ವೇದತತ್ತ್ವಾರ್ಥಗಳನ್ನು ಸಾಕ್ಷಾತ್ಕರಿಸಿಕೊಂಡಿರುವವರು ವಾಕ್ಯಗಳಿಂದ ತಾವು ನಿಶ್ಚಯಿಸಿ ಅರಿತುಕೊಂಡಿರುವ ವೇದವಾಕ್ಯಾರ್ಥವನ್ನು ವ್ಯಕ್ತೀಕರಿಸುವದು. ಸಕಲಶಾಖೆಗಳಲ್ಲಿಯೂ ಇರುವ ವಾಕ್ಯಾರ್ಥವನ್ನು ಅಲ್ಪಭಾಗದ ಶ್ರವಣದಿಂದ ತಿಳಿಯುವದು ಕಷ್ಟವಾದ್ದರಿಂದ, ಅದಿಲ್ಲದೆ ನಿಶ್ಚಯಿಸುವದು ಆಗಲಾರದಾದ್ದರಿಂದ ಉಪಬೃಂಹಣವನ್ನು ಮಾಡಲೇಬೇಕು. ಇಲ್ಲಿ **ಪುಲಸ್ತ್ಯ,**

1. **ಉಪಬೃಂಹಣದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.**

ವಸಿಷ್ಠ– ಇವರ ವರಪ್ರದಾನದಿಂದ ಪರದೇವತೆಯ ಪಾರಮಾರ್ಥತತ್ತ್ವದ ಜ್ಞಾನವನ್ನು ಪಡೆದುಕೊಂಡ ಭಗವಂತನಾದ **ಪರಾಶರನಿಂದ** ವೇದಾರ್ಥವನ್ನು ಉಪಬೃಂಹಣಮಾಡಿಸಲಿಚ್ಛಿಸುವವನಾಗಿ **ಮೈತ್ರೇಯನು** "ಎಲೈ ಧರ್ಮಜ್ಞನೆ, ಆ ನಾನು ನಿನ್ನಿಂದ– ಜಗತ್ತು ಹೇಗೆ ಉಂಟಾಯಿತೊ, ಮತ್ತೆ ಹೇಗೆ ಆಗುತ್ತದೆಯೋ, ಎಲೈ ಬ್ರಾಹ್ಮಣನೆ, (ಈ) ಜಗತ್ತು ಯನ್ಮಯವಾಗಿರುತ್ತದೆಯೋ ಈ ಚರಾಚರವು ಏತರಿಂದ (ಆಗಿರುವದೋ) ಏತರಲ್ಲಿ ಹೇಗೆ ಲೀನವಾಗಿದ್ದಿತೋ, ಮತ್ತು ಏತರಲ್ಲಿ ಲಯವನ್ನು ಹೊಂದುವದೋ – ಅದನ್ನು ಶ್ರವಣಮಾಡಲಿಚ್ಛಿಸುತ್ತೇನೆ" ಎಂದು ಮುಂತಾದ ವಾಕ್ಯಸಂದರ್ಭದಿಂದ ಪರಿಪ್ರಶ್ನೆಮಾಡಿದನು.[1]

ಇಲ್ಲಿ ಬ್ರಹ್ಮದ ಸ್ವರೂಪವಿಶೇಷವನ್ನೂ ಅದರ ವಿಭೂತಿಭೇದದ ಪ್ರಕಾರಗಳನ್ನೂ ಅದರ ಆರಾಧನೆಯ ಸ್ವರೂಪವನ್ನೂ ಫಲವಿಶೇಷಗಳನ್ನೂ ಕೇಳಿರುತ್ತಾನೆ. ಬ್ರಹ್ಮಸ್ವರೂಪವಿಶೇಷದ ಪ್ರಶ್ನೆಗಳಲ್ಲಿ **'ಯತಶ್ಚೈತಚ್ಚರಾಚರಮ್'** (ಈ ಚರಾಚರವು ಏತರಿಂದ ಆಗಿದೆ ?)– ಎಂದು ನಿಮಿತ್ತೋಪಾದಾನಗಳನ್ನು ಕೇಳಿರುವದರಿಂದ 'ಯನ್ಮಯವೋ' ಎಂಬಿದರಿಂದ ಸೃಷ್ಟಿಸ್ಥಿತಿಲಯಕರ್ಮಭೂತವಾದ ಜಗತ್ತು ಯಾವದನ್ನು ಆತ್ಮವಾಗಿ ಉಳ್ಳದ್ದು?– ಎಂದು ಕೇಳಿರುತ್ತದೆ ಎಂದಾಯಿತು; ಅದಕ್ಕೆ ಉತ್ತರವು 'ಜಗತ್ಸ್ಚ ಸಃ' (ವಿ. ಪು. ೧–೧–೩೧) ಎಂಬುದು[2]. ಈ ತಾದಾತ್ಮ್ಯವು ಅಂತರ್ಯಾಮಿರೂಪದಿಂದ ಆತ್ಮನಾಗಿರುವದರಿಂದ (ಪರಮಾತ್ಮನು) ವ್ಯಾಪಿಸಿರುವದರಿಂದಾದದ್ದೇ ಹೊರತು, ವ್ಯಾಪ್ಯವ್ಯಾಪಕಗಳು ಒಂದೇ ಪದಾರ್ಥವಾಗಿರುವದರಿಂದಾದದ್ದಲ್ಲ.[3] 'ಯನ್ಮಯವೋ' ಎಂಬ ಪ್ರಶ್ನೆಗೆ 'ಜಗತ್ಸ್ಚ ಸಃ' ಎಂಬ ಸಾಮಾನಾಧಿಕರಣ್ಯವು ಉತ್ತರವಾಗಿರುವದರಿಂದ 'ಯನ್ಮಯವೋ' ಎಂಬಲ್ಲಿರುವ ಮಯಟ್‌ಪ್ರತ್ಯಯವು ವಿಕಾರಾರ್ಥವಲ್ಲ, ಏಕೆಂದರೆ (ಆ ಅದನ್ನು) ಬೇರೆಯಾಗಿ ಕೇಳಿರುವದು ವ್ಯರ್ಥವೆಂದಾಗುತ್ತದೆ. 'ಪ್ರಾಣಮಯ' ಮುಂತಾದ ಕಡೆಗಳಲ್ಲಿರುವಂತೆ ಸ್ವಾರ್ಥಿಕಪ್ರತ್ಯಯವೂ ಇದಲ್ಲ;[4] ಏಕೆಂದರೆ (ಹಾಗಿದ್ದರೆ) 'ಜಗತ್ಸ್ಚ ಸಃ' ಎಂಬ ಉತ್ತರವು ಹೊಂದುವದಿಲ್ಲ. (ಹಾಗೆ ಸ್ವಾರ್ಥಿಕವಾಗಿದ್ದರೆ) ಆ ವಿಷ್ಣುವೇ–ಎಂದು ಉತ್ತರವಾಗಬೇಕಿತ್ತು. ಆದ್ದರಿಂದ ಇದು ಪ್ರಾಚುರ್ಯಾರ್ಥವೇ.[5]

---

1. ವಿಷಯವನ್ನು ತಿಳಿದುಕೊಳ್ಳಬೇಕೆಂಬ ಶಿಷ್ಯನು ಕೇಳುವ ಪ್ರಕಾರವು ಪರಿಪ್ರಶ್ನೆ.
2. ಆದ್ದರಿಂದ ಜಗತ್ತಿಗೆ ವಿಷ್ಣುವೇ ಆತ್ಮನು– ಎಂಬುದು ಅದರ ಅರ್ಥ.
3. ವ್ಯಾಪಕವಾದದ್ದಕ್ಕಿಂತ ವ್ಯಾಪ್ಯವು ಬೇರೆಯಿಲ್ಲ, ಜಗತ್ತು ಬ್ರಹ್ಮವೇ– ಎಂಬರ್ಥವುಳ್ಳದ್ದಲ್ಲ.
4. ಪಂಚಕೋಶಗಳ ವಿಚಾರವು ಬರುವಾಗ ಪ್ರಾಣಮಯನೆಂಬ ಶಬ್ದದಲ್ಲಿ ಮಯಟ್ ಪ್ರತ್ಯಯವು ಸ್ವಾರ್ಥಿಕವೇ ಎಂಬುದನ್ನು ಶ್ರೀಭಾಷ್ಯದಲ್ಲಿ ತಿಳಿಸಿಕೊಡಲಾಗುವದು.
5. ವಿಕಾರಾರ್ಥವಲ್ಲ ; ಪ್ರಕೃತದಲ್ಲಿರುವ ಸಾಮಾನಾಧಿಕರಣ್ಯಕ್ಕೆ ಪ್ರಾಚುರ್ಯಾರ್ಥವನ್ನು ಏಕೆ ತೆಗೆದುಕೊಳ್ಳಬೇಕೆಂಬುದಕ್ಕೆ ಪರಮಾತ್ಮನ ಶರೀರವೇ ಜಗತ್ತಾಗಿರುವದರಿಂದ– ಎಂದು ಇಲ್ಲಿ ಯುಕ್ತಿಯನ್ನು ಹೇಳಿದಂತಾಗಿದೆ.

**‘ತತ್ಪ್ರಕೃತವಚನೇ ಮಯಟ್’** (ಪಾ. ೫-೪-೨೧) ಎಂಬ ಸೂತ್ರದಂತೆ (ಇಲ್ಲಿ ಪ್ರಾಚುರ್ಯಾರ್ಥದಲ್ಲಿ) ಮಯಟ್‌ಪ್ರತ್ಯಯವು ಬಂದಿದೆ. ಇಡಿಯ ಜಗತ್ತು ಆತನ ಶರೀರವಾಗಿರುವದರಿಂದ ತತ್ಪ್ರಚುರವಾಗಿಯೇ ಇದೆ. ಆದ್ದರಿಂದ ‘ಯನ್ಮಯವೋ’ ಎಂಬುದಕ್ಕೆ ಪ್ರತ್ಯುತ್ತರವಾಗಿ (ಬಂದಿರುವ) ‘ಜಗತ್ತು ಅವನೇ’ ಎಂಬ ಸಾಮಾನಾಧಿಕರಣ್ಯವು ಜಗತ್ತು ಮತ್ತು ಬ್ರಹ್ಮ- ಇವೆರಡಕ್ಕೂ ಶರೀರಾತ್ಮಭಾವನಿಮಿತ್ತದಿಂದ[1] (ಹೇಳಿದ್ದು) ಎಂದು ನಿಶ್ಚಿತವಾಗುತ್ತದೆ. ಹೀಗಲ್ಲದೆ ಶಾಸ್ತ್ರವು ನಿರ್ವಿಶೇಷವಸ್ತುಪ್ರತಿಪಾದನೆಯಲ್ಲಿ ತಾತ್ಪರ್ಯವುಳ್ಳದ್ದೆಂದು ಅಂಗೀಕರಿಸಿದರೆ ಈ ಯಾವ ಪ್ರಶ್ನೋತ್ತರಗಳೂ ಹೊಂದುವದಿಲ್ಲ; ಅವನ್ನು ವಿವರಿಸುವದಕ್ಕೆ ಹೊರಟಿರುವ ಇಡಿಯ ಶಾಸ್ತ್ರವೂ ಅಸಂಗತವಾಗುವದು. ಏಕೆಂದರೆ ಹಾಗೆ (ನಿರ್ವಿಶೇಷವಸ್ತುಪ್ರತಿಪಾದನಪರವೇ) ಆಗಿದ್ದರೆ ‘ಪ್ರಪಂಚಭ್ರಮಕ್ಕೆ ಅಧಿಷ್ಠಾನವು ಯಾವದು?’ ಎಂಬ ಒಂದೇ ಪ್ರಶ್ನೆಗೆ ‘ನಿರ್ವಿಶೇಷಜ್ಞಾನಮಾತ್ರವೇ (ಅಧಿಷ್ಠಾನವು)’ ಎಂಬ ಒಂದೇ ಉತ್ತರವಿರಬೇಕಾಗಿತ್ತು. **ಜಗದ್ಬ್ರಹ್ಮಗಳೆರಡೂ ಒಂದೇ ದ್ರವ್ಯ -ಎಂಬುದರಲ್ಲಿಯೇ ಸಾಮಾನಾಧಿಕರಣ್ಯಕ್ಕೆ ತಾತ್ಪರ್ಯವಾಗಿದ್ದಿದ್ದರೆ ಸತ್ಯಸಂಕಲ್ಪತ್ವವೇ ಮುಂತಾದ ಕಲ್ಯಾಣಗುಣೈಕತಾನತೆಯೂ ನಿಖಿಲಹೇಯವಿರೋಧಿತ್ವವೂ ಬಾಧಿತವಾಗುತ್ತಿತ್ತು; ಬ್ರಹ್ಮವು ಸರ್ವಾಶುಭಾಸ್ಪದವೆಂದೂ ಆಗುತ್ತಿತ್ತು.** (ಆದ್ದರಿಂದ) ಆತ್ಮಶರೀರಭಾವವನ್ನೊಪ್ಪಿದರೇ ಈ ಸಾಮಾನಾಧಿಕರಣ್ಯವು ಮುಖ್ಯವೃತ್ತಿಯಿಂದ ಹೊಂದುತ್ತದೆ[2] ಎಂದೇ ಸ್ಥಾಪಿತವಾಗುತ್ತದೆ.

(ಮೂಲ)

ಅತಃ, ‘ವಿಷ್ಣೋಃ ಸಕಾಶಾದುದ್ಭೂತಂ ಜಗತ್ತತ್ರೈವ ಚ ಸ್ಥಿತಮ್ । ಸ್ಥಿತಿಸಂಯಮಕರ್ತಾಽಸೌ ಜಗತೋಽಸ್ಯ ಜಗಚ್ಚ ಸಃ ॥’ (ವಿ.ಪು. ೧-೧-೩೧) ಇತಿ ಸಂಗ್ರಹೇಣೋಕ್ತಮರ್ಥಂ ‘ಪರಃ ಪರಾಣಾಮ್’ (ವಿ.ಪು. ೬-೫-೮೫) ಇತ್ಯಾರಭ್ಯ ವಿಸ್ತರೇಣ ವಕ್ತುಂ ಪರಬ್ರಹ್ಮಭೂತಂ ಭಗವನ್ತಂ ವಿಷ್ಣುಂ ಸ್ವೇನೈವ ಸ್ವರೂಪೇಣಾವಸ್ಥಿತಮ್ ‘ಅವಿಕಾರಾಯ’ (ವಿ. ಪು. ೧-೨-೧) ಇತಿ ಶ್ಲೋಕೇನ ಪ್ರಥಮಂ ಪ್ರಣಮ್ಯ, ತಮೇವ ಹಿರಣ್ಯಗರ್ಭಸ್ವಾವತಾರಶಙ್ಕರರೂಪತ್ರಿಮೂರ್ತಿಪ್ರಧಾನಕಾಲಕ್ಷೇತ್ರಜ್ಞಸಮಷ್ಟಿವ್ಯಷ್ಟಿರೂಪೇಣಾವಸ್ಥಿತಂ ಚ ನಮಸ್ಕರೋತಿ । ತತ್ರ ‘ಜ್ಞಾನಸ್ವರೂಪಮ್’ ಇತ್ಯಯಂ ಶ್ಲೋಕಃ ಕ್ಷೇತ್ರಜ್ಞವ್ಯಷ್ಟ್ಯಾತ್ಮನಾಽಪ್ಯವಸ್ಥಿತಸ್ಯ ಪರಮಾತ್ಮನಃ ಸ್ವಭಾವಮಾಹ । ತಸ್ಮಾತ್ ನಾತ್ರ ನಿರ್ವಿಶೇಷವಸ್ತುಪ್ರತೀತಿಃ ॥

(ಅರ್ಥ)

ಆದ್ದರಿಂದ ‘ವಿಷ್ಣುವಿನಿಂದ ಹುಟ್ಟಿದ ಜಗತ್ತು ಆತನಲ್ಲಿಯೇ ನಿಂತಿರುತ್ತದೆ; ಆತನೇ ಈ ಜಗತ್ತಿನ ಸ್ಥಿತಿ, ಸಂಯಮ- ಇವುಗಳನ್ನು ಮಾಡುವಾತನು; ಜಗತ್ತೂ

---

1. ಶರೀರಾತ್ಮಭಾವವನ್ನಿಟ್ಟುಕೊಂಡೇ ಸಾಮಾನಾಧಿಕರಣ್ಯದ ಪ್ರಯೋಗಗಳಾಗಿವೆ ಎಂಬುದೇ ಇಲ್ಲಿ ಪರಮಸಿದ್ಧಾಂತ.

2. ಈ ವಿಷಯಕ್ಕೆ ಪೀಠಿಕೆಯನ್ನೂ ಪರಿಶಿಷ್ಟವನ್ನೂ ನೋಡಿ.

ಆತನೇ' (ವಿ. ಪು. ೧-೧-೩೧) ಎಂದು ಸಂಗ್ರಹವಾಗಿ ಹೇಳಿರುವ ಅರ್ಥವನ್ನು 'ಪರಃ ಪರಾಣಾಮ್' (ಹೆಚ್ಚಿನವನಿಗಿಂತಲೂ ಹೆಚ್ಚಿನವನು ವಿ.ಪು. ೬-೫-೮೫) ಎಂಬಲ್ಲಿಂದ ಹಿಡಿದು ವಿಸ್ತಾರವಾಗಿ ಹೇಳುವದಕ್ಕಾಗಿ ಪರಬ್ರಹ್ಮವಾಗಿರುವ ಭಗವಂತನಾದ ವಿಷ್ಣುವನ್ನು ತನ್ನ ರೂಪದಿಂದಲೇ ಇರುವ (ಸ್ಥಿತಿಯಲ್ಲಿ) 'ಅವಿಕಾರಾಯ' (ವಿ. ಪು. ೧-೨-೧) ಎಂಬ ಶ್ಲೋಕದಿಂದ ಮೊದಲು ನಮಸ್ಕರಿಸಿ, ಆತನನ್ನೇ ಹಿರಣ್ಯಗರ್ಭ, ತನ್ನ ಅವತಾರ, ಶಂಕರ- ಎಂಬ ಸ್ವರೂಪದ ತ್ರಿಮೂರ್ತಿಗಳು, ಪ್ರಧಾನ, ಕಾಲ, ಕ್ಷೇತ್ರಜ್ಞ, ಸಮಷ್ಟಿ, ವ್ಯಷ್ಟಿ- ಇವುಗಳ ರೂಪದಿಂದ ಇರುವ (ಸ್ಥಿತಿಯಲ್ಲಿ)ಯೂ ನಮಸ್ಕರಿಸುತ್ತಾನೆ. ಇಲ್ಲಿ 'ಜ್ಞಾನಸ್ವರೂಪಮ್' ಎಂಬೀ ಶ್ಲೋಕವು ಕ್ಷೇತ್ರಜ್ಞವ್ಯಷ್ಟಿರೂಪದಿಂದ ಇರುವ ಪರಮಾತ್ಮನ ಸ್ವಭಾವವನ್ನು ಹೇಳುತ್ತದೆ. ಆದ್ದರಿಂದ ಇಲ್ಲಿ ನಿರ್ವಿಶೇಷವಸ್ತುವಿನ ಪ್ರತೀತಿಯೇನೂ ಇರುವದಿಲ್ಲ.

(ಮೂಲ)

ಯದಿ ನಿರ್ವಿಶೇಷಜ್ಞಾನರೂಪಬ್ರಹ್ಮಾಧಿಷ್ಠಾನಭ್ರಮಪ್ರತಿಪಾದನಪರಂ ಶಾಸ್ತ್ರಮ್, ತರ್ಹಿ 'ನಿರ್ಗುಣಸ್ಯಾಪ್ರಮೇಯಸ್ಯ ಶುದ್ಧಸ್ಯಾಪ್ಯಮಲಾತ್ಮನಃ | ಕಥಂ ಸರ್ಗಾದಿಕರ್ತೃತ್ವಂ ಬ್ರಹ್ಮಣೋಽಭ್ಯುಪಗಮ್ಯತೇ ||' (ವಿ. ಪು. ೧-೩-೧) ಇತಿ ಚೋದ್ಯಮ್, 'ಶಕ್ತಯಃ ಸರ್ವಭಾವಾನಾಮಚಿನ್ತ್ಯಜ್ಞಾನಗೋಚರಾಃ | ಯತೋಽತೋ ಬ್ರಹ್ಮಣಸ್ತಾಸ್ತು ಸರ್ಗಾದ್ಯಾ ಭಾವಶಕ್ತಯಃ || ಭವನ್ತಿ ತಪತಾಂ ಶ್ರೇಷ್ಠ ಪಾವಕಸ್ಯ ಯಥೋಷ್ಣತಾ ||' (ವಿ.ಪು. ೧-೩-೨,೩) ಇತಿ ಪರಿಹಾರಶ್ಚ ನ ಘಟತೇ | ತಥಾ ಹಿ ಸತಿ ನಿರ್ಗುಣಸ್ಯ ಬ್ರಹ್ಮಣಃ ಕಥಂ ಸರ್ಗಾದಿಕರ್ತೃತ್ವಮ್? 'ನ ಬ್ರಹ್ಮಣಃ ಪಾರಮಾರ್ಥಿಕಃ ಸರ್ಗಃ, ಅಪಿ ತು ಭ್ರಾನ್ತಿಪರಿಕಲ್ಪಿತಃ' ಇತಿ ಚೋದ್ಯಪರಿಹಾರೌ ಸ್ಯಾತಾಮ್ | ಉತ್ಪತ್ತ್ಯಾದಿಕಾರ್ಯಂ ಸತ್ತ್ವಾದಿಗುಣಯುಕ್ತಾಪರಿಪೂರ್ಣಕರ್ಮವಶ್ಯೇಷು ದೃಷ್ಟಮ್ ಇತಿ ಸತ್ತ್ವಾದಿಗುಣರಹಿತಸ್ಯ ಪರಿಪೂರ್ಣಸ್ಯ ಅಕರ್ಮವಶ್ಯಸ್ಯ ಕರ್ಮಸಂಬನ್ಧಾನರ್ಹಸ್ಯ ಕಥಂ ಸರ್ಗಾದಿಕರ್ತೃತ್ವಮ್ ಅಭ್ಯುಪಗಮ್ಯತೇ ?- ಇತಿ ಚೋದ್ಯಮ್ | ದೃಷ್ಟಸಕಲವಿಸಜಾತೀಯಸ್ಯ, ಬ್ರಹ್ಮಣೋ ಯಥೋದಿತಸ್ವಭಾವಸ್ಯೈವ ಜಲಾದಿವಿಸಜಾತೀಯಸ್ಯಾಗ್ನ್ಯೇದೇ-ರೌಷ್ಣ್ಯಾದಿಶಕ್ತಿಯೋಗವತ್ ಸರ್ವಶಕ್ತಿಯೋಗೋ ನ ವಿರುಧ್ಯತ ಇತಿ ಪರಿಹಾರಃ||

(ಅರ್ಥ)

ನಿರ್ವಿಶೇಷವಾದ ಜ್ಞಾನಸ್ವರೂಪವಾದ ಬ್ರಹ್ಮವೆಂಬ ಅಧಿಷ್ಠಾನವುಳ್ಳ ಭ್ರಮೆಯನ್ನೇ ಪ್ರತಿಪಾದಿಸುವದರಲ್ಲಿ ಶಾಸ್ತ್ರಕ್ಕೆ ತಾತ್ಪರ್ಯವಿದ್ದರೆ 'ನಿರ್ಗುಣನೂ ಅಪ್ರಮೇಯನೂ ಶುದ್ಧನೂ ನಿರ್ಮಲಸ್ವರೂಪನೂ ಆಗಿದ್ದರೂ ಬ್ರಹ್ಮವು ಸೃಷ್ಟಿಯೇ ಮುಂತಾದ (ಕ್ರಿಯೆಗೆ) ಕರ್ತೃವು ಎಂದು ಹೇಗೆ ಒಪ್ಪಲಾಗಿದೆ?' (ವಿ.ಪು. ೧-೩-೧) ಎಂಬ ಚೋದ್ಯವೂ 'ಎಲೈ ತಪಸ್ವಿಶ್ರೇಷ್ಠನೆ, ಎಲ್ಲಾ ಪದಾರ್ಥಗಳಿಗೂ ಅಚಿಂತ್ಯ ಜ್ಞಾನಕ್ಕೆ ಗೋಚರವಾಗಿರುವ ಶಕ್ತಿಗಳಿರುವವಲ್ಲವೆ ? ಆದ್ದರಿಂದ ಬ್ರಹ್ಮಕ್ಕೂ

ಸೃಷ್ಟಿಯೇ ಮುಂತಾದ ಭಾವಶಕ್ತಿಗಳು– ಅಗ್ನಿಗೆ ಬಿಸಿ (ಎಂಬ ಶಕ್ತಿ) ಇರುವಂತೆ ಇರುತ್ತವೆ' (ವಿ. ಪು. ೧–೩–೨,೩) ಎಂಬ **ಪರಿಹಾರವೂ** ಹೊಂದುವದಿಲ್ಲ.[1] ಏಕೆಂದರೆ ಈ ಪಕ್ಷದಲ್ಲಿ 'ನಿರ್ಗುಣವಾದ ಬ್ರಹ್ಮಕ್ಕೆ ಹೇಗೆ ಸೃಷ್ಟಿಯೇ ಮುಂತಾದ (ಕ್ರಿಯಾ)ಕರ್ತೃತ್ವ ?' ಬ್ರಹ್ಮದ ಸೃಷ್ಟಿಯು ಪಾರಮಾರ್ಥಿಕವಲ್ಲ, ಮತ್ತೇನೆಂದರೆ ಭ್ರಾಂತಿಯಿಂದ ಪರಿಕಲ್ಪಿತವಾದದ್ದು– ಎಂದು ಚೋದ್ಯಪರಿಹಾರಗಳು ಇರಬೇಕಾಗುವದು.[2] ಉತ್ಪತ್ತಿಯೇ ಮುಂತಾದ ಕಾರ್ಯವು ಸತ್ತ್ವವೇ ಮುಂತಾದ ಗುಣಗಳಿಂದೊಡಗೂಡಿದ ಅಪರಿಪೂರ್ಣರಾದ, ಕರ್ಮಪರವಶರಲ್ಲಿ ಕಂಡುಬರುತ್ತದೆ ; ಸತ್ತ್ವವೇ ಮುಂತಾದ ಗುಣಗಳಿಲ್ಲದ[3] ಪರಿಪೂರ್ಣನಾದ, ಕರ್ಮವಶನಲ್ಲದ, ಕರ್ಮಸಂಬಂಧಕ್ಕೆ ಯೋಗ್ಯನಲ್ಲದ (ಬ್ರಹ್ಮಕ್ಕೆ) ಸೃಷ್ಟಿಯೇ ಮುಂತಾದ (ಕ್ರಿಯೆಗಳ) ಕರ್ತೃತ್ವವನ್ನು ಒಪ್ಪಿರುವದು ಹೇಗೆ ಸರಿ ?– ಎಂಬುದು (ಇಲ್ಲಿ) ಚೋದ್ಯವು. (ಲೋಕದಲ್ಲಿ) ಕಂಡುಬರುವ ಸಕಲವಸ್ತುಗಳಿಗಿಂತಲೂ ವಿಸಜಾತೀಯವಾಗಿರುವ ಬ್ರಹ್ಮವು (ಈಗ) ಹೇಳಿದಂಥ ಸ್ವಭಾವವುಳ್ಳದ್ದೇ ಆದರೂ ನೀರೇ ಮುಂತಾದ ಪದಾರ್ಥಗಳಿಗಿಂತ ವಿಸಜಾತೀಯವಾದ ಬೆಂಕಿಯೇ ಮುಂತಾದ ಪದಾರ್ಥಕ್ಕೆ ಬಿಸಿಯೇ ಮುಂತಾದ ಶಕ್ತಿಗಳ ಸಂಬಂಧವಿರುವಂತೆ ಸರ್ವಶಕ್ತಿಗಳ ಸಂಬಂಧವೂ ಇರುವದು ವಿರುದ್ಧವಲ್ಲ– ಎಂದು ಪರಿಹಾರ.[4]

(ಮೂಲ)

'ಪರಮಾರ್ಥಸ್ತ್ವಮೇವೈಕಃ' (ವಿ.ಪು. ೧–೪–೩೮) ಇತ್ಯಾದ್ಯಪಿ ನ ಕೃತ್ಸ್ನಸ್ಯ ಅಪಾರಮಾರ್ಥ್ಯಂ ವದತಿ ; ಅಪಿ ತು ಕೃತ್ಸ್ನಸ್ಯ ತದಾತ್ಮತಯಾ ತದ್ವ್ಯತಿರೇಕೇಣಾವಸ್ಥಿತಸ್ಯ ಅಪಾರಮಾರ್ಥ್ಯಮ್ । ತದೇವೋಪಪಾದಯತಿ 'ತವೈಷ ಮಹಿಮಾ ಯೇನ ವ್ಯಾಪ್ತಮೇತಚ್ಚರಾಚರಮ್' (ವಿ. ಪು. ೧–೪–೩೮) ಇತಿ । ಯೇನ ತ್ವಯೇದಂ ಚರಾಚರಂ ವ್ಯಾಪ್ತಮ್, ಅತಸ್ತ್ವದಾತ್ಮಕಮೇವೇದಂ ಸರ್ವಮ್ ಇತಿ ತ್ವದನ್ಯಃ ಕೋಽಪಿ ನಾಸ್ತಿ। ಅತಃ ಸರ್ವಾತ್ಮಕತಯಾ ತ್ವಮೇವೈಕಃ ಪರಮಾರ್ಥಃ । ಅತ ಇದಮುಚ್ಯತೇ 'ತವೈಷ ಮಹಿಮಾ ಯಾ ಸರ್ವವ್ಯಾಪ್ತಿಃ' ಇತಿ । ಅನ್ಯಥಾ 'ತವೈಷಾ ಭ್ರಾನ್ತಿಃ' ಇತಿ ವಕ್ತವ್ಯಮ್ । 'ಜಗತಃ ಪತೇ', 'ತ್ವಮ್'– ಇತ್ಯಾದೀನಾಂ ಪದಾನಾಂ ಲಕ್ಷಣಾ ಚ ಸ್ಯಾತ್ । ಲೀಲಯಾ ಮಹೀಮ್ ಉದ್ಧರತೋ ಭಗವತೋ ಮಹಾವರಾಹಸ್ಯ ಸ್ತುತಿಪ್ರಕರಣವಿರೋಧಶ್ಚ॥

1. ಬ್ರಹ್ಮವು ಸೃಷ್ಟಿಕರ್ತೃವು ಹೇಗೆ– ಎಂಬ ಪ್ರಶ್ನೆ ನಿರ್ವಿಶೇಷವಾದಕ್ಕೆ ಹೊಂದುವದಿಲ್ಲ, ಅನೇಕಶಕ್ತಿಗಳಿವೆ ಎಂಬುದೂ ಹೊಂದುವದಿಲ್ಲ.

2. ಹಾಗೇನೂ ಇಲ್ಲ– ಎಂದು ಅಭಿಪ್ರಾಯ. ಈ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

3. 'ನಿರ್ಗುಣ'ವೆಂಬ ವಿಶೇಷಣದ ಅರ್ಥದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

4. ಪರಮಾತ್ಮನ ಸರ್ವಶಕ್ತಿತ್ವದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

(ಅರ್ಥ)

'ಪರಮಾರ್ಥಸ್ತ್ವಮೇವೈಕಃ' (ವಿ.ಪು.೧-೪-೩೮) ಮುಂತಾದ (ಗ್ರಂಥವೂ) ಎಲ್ಲವೂ ಅಪರಮಾರ್ಥ ಎಂದೇನೂ ಹೇಳುವದಿಲ್ಲ, ಮತ್ತೇನೆಂದರೆ, ಎಲ್ಲಕ್ಕೂ ಆ (ಆತ್ಮನೇ) ಆತ್ಮನಾಗಿರುವದರಿಂದ ಆತ್ಮನಿಗಿಂತ ವ್ಯತಿರಿಕ್ತವಾಗಿದೆ ಎಂಬುದು ಅಪರಮಾರ್ಥವೆಂದು ಹೇಳುತ್ತಿದೆ. 'ತವೈಷ ಮಹಿಮಾ ಯೇನ ವ್ಯಾಪ್ತಮೇತ ಚ್ಚರಾಚರಮ್' (ವಿ. ಪು. ೧-೪-೩೮) ಈ ಚರಾಚರವು ನಿನ್ನಿಂದಲೇ ವ್ಯಾಪ್ತ ವಾಗಿದೆಯಲ್ಲವೆ, ಇದು ನಿನ್ನ ಮಹಿಮೆಯೇ –ಎಂದು ಅದಕ್ಕೆ ಉಪಪತ್ತಿಯನ್ನು ಹೇಳಿದೆ. ಈ ನಿನ್ನಿಂದಲೇ ಚರಾಚರಾತ್ಮಕವಾದ (ಜಗತ್ತು) ವ್ಯಾಪ್ತವಾಗಿದೆ ಯಷ್ಟೆ, ಆದ್ದರಿಂದ ಇದೆಲ್ಲಕ್ಕೂ ನೀನೇ ಆತ್ಮನು; ಆದ್ದರಿಂದ ನಿನಗಿಂತ ಬೇರೆಯಾಗಿ ಯಾವದೂ ಇಲ್ಲ. ಆದ್ದರಿಂದ ಸರ್ವಕ್ಕೂ ಆತ್ಮನಾಗಿರುವದರಿಂದ ನೀನೊಬ್ಬನೇ ಪರಮಾರ್ಥವು. ಆದ್ದರಿಂದ ಸರ್ವವ್ಯಾಪ್ತಿ ಎಂಬುದಿದೆಯಲ್ಲ, ಇದು ನಿನ್ನ ಮಹಿಮೆ –ಎಂದಿರುತ್ತದೆ. ಹೀಗಲ್ಲದಿದ್ದರೆ, 'ಇದು ನಿನ್ನ ಭ್ರಾಂತಿಯು'[1] ಎಂದು ಹೇಳಬೇಕಾಗಿತ್ತು, 'ಜಗತಃ ಪತೇ' (ಜಗತ್ತಿನ ಪತಿಯೆ), 'ತ್ವಮ್' (ನೀನು) ಮುಂತಾದ ಪದಗಳಿಗೆ ಲಕ್ಷಣಾ(ವೃತ್ತಿ)ಯೂ ಆಗುತ್ತಿತ್ತು. ಲೀಲೆಯಿಂದ ಭೂಮಿಯನ್ನು ಎತ್ತಿರುವ ಭಗವಂತನಾದ ಮಹಾವರಾಹನ ಸ್ತುತಿಯ ಪ್ರಕರಣ ವಾಗಿರುವ (ಇದಕ್ಕೂ) ವಿರೋಧವಾಗುತ್ತಿತ್ತು.[2]

(ಮೂಲ)

ಯತಃ ಕೃತ್ಸ್ನಂ ಜಗತ್ ಜ್ಞಾನಾತ್ಮನಾ ತ್ವಯಾ ಆತ್ಮತಯಾ ವ್ಯಾಪ್ತ ತ್ವೇನ ತವ ಮೂರ್ತಮ್, ತಸ್ಮಾತ್ ತ್ವದಾತ್ಮಕತ್ವಾನುಭವಸಾಧನಯೋಗವಿರ ಹಿಣಃ ಏತತ್ ಕೇವಲದೇವಮನುಷ್ಯಾದಿರೂಪಮ್ ಇತಿ ಭ್ರಾನ್ತಿಜ್ಞಾನೇನ ಪಶ್ಯನ್ತಿ ಇತ್ಯಾಹ 'ಯದೇತದ್ದೃಶ್ಯತೇ' (ವಿ. ಪು. ೧-೪-೩೯) ಇತಿ ॥

ನ ಕೇವಲಂ ವಸ್ತುತಸ್ತ್ವದಾತ್ಮಕಂ ಜಗತ್ ದೇವಮನುಷ್ಯಾದ್ಯಾತ್ಮಕಮಿತಿ ದರ್ಶನಮೇವ ಭ್ರಮಃ । ಜ್ಞಾನಾಕಾರಾಣಾಮಾತ್ಮನಾಂ ದೇವಮನುಷ್ಯಾದ್ಯರ್ಥಾ- ಕಾರತ್ವದರ್ಶನಮಪಿ ಭ್ರಮಃ- ಇತ್ಯಾಹ 'ಜ್ಞಾನಸ್ವರೂಪಮಖಿಲಮ್' (ವಿ. ಪು. ೧-೪-೪೦) ಇತಿ ॥

---

1. ಅದ್ವೈತಮತದಲ್ಲಿ ಜಗತ್ತೆಲ್ಲವೂ ಭ್ರಾಂತಿಕಾರ್ಯವಾದ್ದರಿಂದ ಇದು ಭಗವಂತನ ಮಹಿಮೆಯೆನ್ನುವದು ತಪ್ಪಾಗುವದು- ಎಂದು ಭಾವ. ಈ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. ಈ ಅಧ್ಯಾಯದಲ್ಲಿ ಭೂಮಿಯನ್ನು ಎತ್ತಿತಂದ ಮಹಾವರಾಹಭಗವಂತನನ್ನು ಮುನಿಗಳು ಸ್ತೋತ್ರಮಾಡಿರುತ್ತಾರೆ. ಈ ಪ್ರಕರಣದಲ್ಲಿ ಜಗತ್ತನ್ನು ಭ್ರಾಂತಿ ಎನ್ನುವದು ವಿರುದ್ಧ ಎಂದು ಭಾವ.

ಯೇ ಪುನರ್ಬುದ್ಧಿಮನ್ತೋ ಜ್ಞಾನಸ್ವರೂಪಾತ್ಮವಿದಃ, ಸರ್ವಸ್ಯ ಭಗವದಾತ್ಮಕತ್ವಾನುಭವಸಾಧನಯೋಗಯೋಗ್ಯಪರಿಶುದ್ಧಮನಸಶ್ಚ ತೇ ದೇವಮನುಷ್ಯಾದಿಪ್ರಕೃತಿಪರಿಣಾಮವಿಶೇಷಶರೀರರೂಪಮಿದಮಖಿಲಂ ಜಗಚ್ಛರೀರಾತಿರಿಕ್ತ ಜ್ಞಾನಸ್ವರೂಪಾತ್ಮಕಂ ತ್ವಚ್ಛರೀರಂ ಚ ಪಶ್ಯನ್ತಿ ಇತ್ಯಾಹ 'ಯೇ ತು ಜ್ಞಾನವಿದಃ' (ವಿ. ಪು. ೧-೪-೪೧) ಇತಿ ॥

ಅನ್ಯಥಾ ಶ್ಲೋಕಾನಾಂ ಪೌನರುಕ್ತ್ಯಮ್, ಪದಾನಾಂ ಲಕ್ಷಣಾ, ಅರ್ಥವಿರೋಧಃ, ಪ್ರಕರಣವಿರೋಧಃ, ಶಾಸ್ತ್ರತಾತ್ಪರ್ಯವಿರೋಧಶ್ಚ ॥

(ಅರ್ಥ)

ಇಡಿಯ ಜಗತ್ತನ್ನು ಜ್ಞಾನಸ್ವರೂಪನಾದ ನೀನು ಆತ್ಮನಾಗಿ ವ್ಯಾಪಿಸಿಕೊಂಡಿರುವದರಿಂದ ನಿನ್ನ ರೂಪವಾಗಿದೆಯಲ್ಲವೆ ? ಆದ್ದರಿಂದ (ಅದಕ್ಕೆ) ನೀನೇ ಆತ್ಮನೆಂಬುದನ್ನು ಅನುಭವಿಸುವದಕ್ಕೆ ಬೇಕಾದ ಯೋಗವೆಂಬ ಸಾಧನವಿಲ್ಲದವರು ಇದು ಕೇವಲ ದೇವಮನುಷ್ಯಾದಿರೂಪವಾಗಿದೆ ಎಂದು– ಭ್ರಾಂತಿಜ್ಞಾನದಿಂದ ತಿಳಿಯುತ್ತಿರುವರು ಎಂದು 'ಯದೇತದ್ದೃಶ್ಯತೇ' (ವಿ. ಪು. ೧-೪-೩೯) ಎಂಬ ಶ್ಲೋಕದಿಂದ ಹೇಳಿರುತ್ತದೆ.[1] ನಿಜವಾಗಿ ನಿನ್ನನ್ನೇ ಆತ್ಮನಾಗುಳ್ಳ ಜಗತ್ತನ್ನು ದೇವಮನುಷ್ಯಾದ್ಯಾತ್ಮಕವೆಂದು ತಿಳಿಯುವದು ಮಾತ್ರವೇ ಭ್ರಾಂತಿಯಲ್ಲ ; ಜ್ಞಾನಾಕಾರವಾಗಿರುವ ಆತ್ಮರುಗಳನ್ನು ದೇವಮನುಷ್ಯಾದ್ಯರ್ಥಗಳ ಆಕಾರವುಳ್ಳವರೆಂದು ತಿಳಿಯುವದೂ ಭ್ರಮೆಯೇ ಎಂದು 'ಜ್ಞಾನಸ್ವರೂಪಮಖಿಲಮ್' (ವಿ. ಪು. ೧-೪-೪೦) ಎಂಬಲ್ಲಿ ಹೇಳಿದೆ.[2] ಆದರೆ ಯಾರು ಸರಿಯಾದ ಜ್ಞಾನವುಳ್ಳವರೋ, ಜ್ಞಾನಸ್ವರೂಪನಾದ ಆತ್ಮನನ್ನು ಅರಿತುಕೊಂಡಿರುವರೋ, ಎಲ್ಲಕ್ಕೂ ಭಗವಂತನು ಆತ್ಮನೆಂಬುದನ್ನು ಅನುಭವಿಸುವದಕ್ಕೆ ಸಾಧನವಾದ ಯೋಗದಿಂದ ಯೋಗ್ಯವಾದ ಪರಿಶುದ್ಧಮನಸ್ಸುಳ್ಳವರಾಗಿರುವರೋ, ಅವರು ದೇವತೆಗಳು, ಮನುಷ್ಯರು– ಮುಂತಾದ ಪ್ರಕೃತಿಪರಿಣಾಮವಿಶೇಷಗಳಾದ ಶರೀರರೂಪವಾಗಿರುವ ಈ ಅಖಿಲ ಜಗತ್ತನ್ನೂ ಶರೀರಾತಿರಿಕ್ತವಾದ ಜ್ಞಾನಸ್ವರೂಪಾತ್ಮಕವಾದ ನಿನ್ನ ಶರೀರವನ್ನೂ ನೋಡುತ್ತಾರೆ– ಎಂದು 'ಯೇ ತು ಜ್ಞಾನವಿದಃ' (ವಿ. ಪು. ೧-೪-೪೧) ಎಂಬ ಶ್ಲೋಕದಲ್ಲಿ ಹೇಳಿರುತ್ತದೆ.

---

1. ಜ್ಞಾನರೂಪನಾಗಿರುವ ಪರಮಾತ್ಮನಿಗೆ ಜಗದ್ರೂಪವು ಭ್ರಾಂತಿ– ಎಂದೇನೂ ಅಲ್ಲಿ ಹೇಳಿಲ್ಲ– ಎಂದು ಭಾವ.

2. ಜಗತ್ತು ಜ್ಞಾನರೂಪವೇ ಆಗಿದ್ದರೂ ಅರ್ಥರೂಪವೆಂದು ಭ್ರಾಂತರು ತಿಳಿಯುತ್ತಾರೆ– ಎಂದೇನೂ ಈ ಶ್ಲೋಕಕ್ಕೆ ಅಭಿಪ್ರಾಯವಿಲ್ಲ– ಎಂದು ಭಾವ. ಈ ಶ್ಲೋಕಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

**ಹೀಗಲ್ಲದೆ ಇದ್ದರೆ (ಈ) ಶ್ಲೋಕಗಳಿಗೆ ಪೌನರುಕ್ತ್ಯ,[1] ಪದಗಳಿಗೆ ಲಕ್ಷಣೆ, ಅರ್ಥವಿರೋಧ, ಪ್ರಕರಣವಿರೋಧ, ಶಾಸ್ತ್ರತಾತ್ಪರ್ಯವಿರೋಧವೂ ಆಗುತ್ತದೆ.**

(ಮೂಲ)

'ತಸ್ಯಾऽऽತ್ಮಪರದೇಹೇಷು ಸತೋऽಪ್ಯೇಕಮಯಮ್' (ವಿ. ಪು. ೨-೧೪-೩೧) ಇತ್ಯತ್ರ ಸರ್ವೇಷ್ವಾತ್ಮಸು ಜ್ಞಾನೈಕಾಕಾರತಯಾ ಸಮಾನೇಷು ಸತ್ಸು, ದೇವಮನುಷ್ಯಾದಿಪ್ರಕೃತಿಪರಿಣಾಮವಿಶೇಷರೂಪಪಿಣ್ಡಸಂಸರ್ಗಕೃತಮ್ ಆತ್ಮಸು ದೇವಾದ್ಯಾಕಾರೇಣ ದ್ವೈತದರ್ಶನಮ್ ಅತಥ್ಯಮ್ ಇತ್ಯುಚ್ಯತೇ, ಪಿಣ್ಡಗತಮ್ ಆತ್ಮಗತಮಪಿ ದ್ವೈತಂ ನ ಪ್ರತಿಷಿಧ್ಯತೇ । ದೇವಮನುಷ್ಯಾದಿವಿವಿಧವಿಚಿತ್ರಪಿಣ್ಡೇಷು ವರ್ತಮಾನಂ ಸರ್ವಮ್ ಆತ್ಮವಸ್ತು ಸಮಮ್ ಇತ್ಯರ್ಥಃ । ಯಥೋಕ್ತಂ ಭಗವತಾ 'ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ' (ಗೀ. ೫-೧೮), 'ನಿರ್ದೋಷಂ ಹಿ ಸಮಂ ಬ್ರಹ್ಮ' (ಗೀ. ೫-೧೯) ಇತ್ಯಾದಿಷು । 'ತಸ್ಯಾತ್ಮಪರದೇಹೇಷು ಸತೋऽಪಿ' ಇತಿ ದೇಹಾತಿರಿಕ್ತೇ ವಸ್ತುನಿ ಸ್ವಪರವಿಭಾಗಸ್ಯ ಉಕ್ತತ್ವಾತ್ ॥

(ಅರ್ಥ)

**'ತಸ್ಯಾತ್ಮಪರದೇಹೇಷು ಸತೋऽಪ್ಯೇಕಮಯಮ್'**(ವಿ.ಪು.೨-೧೪-೩೧) ಎಂಬ (ಶ್ಲೋಕದಲ್ಲಿ) ಎಲ್ಲಾ ಆತ್ಮರುಗಳಲ್ಲಿಯೂ ಜ್ಞಾನವೆಂಬ ಒಂದೇ ಆಕಾರವು ಸಮಾನವಾಗಿದ್ದರೂ ದೇವತೆ, ಮನುಷ್ಯ ಮುಂತಾದ ಪ್ರಕೃತಿಪರಿಣಾಮವಿಶೇಷರೂಪವಾದ ದೇಹಸಂಬಂಧದಿಂದ ಎಲ್ಲಾ ಆತ್ಮರುಗಳಲ್ಲಿಯೂ ದೇವತಾದ್ಯಾಕಾರದಿಂದ ದ್ವೈತದರ್ಶನವು ನಿಜವಲ್ಲ- ಎಂದು ಹೇಳಿರುತ್ತದೆಯೇ ಹೊರತು **ದೇಹಗತವಾದ ಮತ್ತು ಆತ್ಮಗತವಾದ ದ್ವೈತವೂ ಇಲ್ಲವೆಂದಿಲ್ಲ.**[2] ದೇವತೆ, ಮನುಷ್ಯ-ಮುಂತಾದ ವಿವಿಧವಾದ ಬಗೆಬಗೆಯಾದ ದೇಹಗಳಲ್ಲಿ ಇರುವ ಆತ್ಮವೊಂದೊಂದೂ ಸಮವಾಗಿದೆ ಎಂದರ್ಥ. ಹೀಗೆಂದು ಭಗವಂತನು 'ನಾಯಿಯಲ್ಲಿಯೂ ಚಂಡಾಲ

---

1. 'ಪರಮಾರ್ಥಸ್ತ್ವಮೈವೈಕಃ' ಎಂಬ ಶ್ಲೋಕದ ಅಭಿಪ್ರಾಯವನ್ನು ವಿವರಿಸುವದೇ ಮುಂದಿನ ಮೂರು ಶ್ಲೋಕಗಳಿಗೆ ಗುರಿ ಎಂದು ನಾವು ತೋರಿಸಿಕೊಟ್ಟಿರುವಂತೆ ಕಲ್ಪಿಸದೆಹೋದರೆ, ಇಲ್ಲಿ ಹೇಳಿರುವ ದೋಷಗಳೆಲ್ಲವೂ 'ಪರಮಾತ್ಮನೊಬ್ಬನೇ ಸತ್ಯ, ಮಿಕ್ಕದ್ದೆಲ್ಲವೂ ಮಿಥ್ಯೆ' ಎಂಬ ವಾದಿಗಳಿಗೆ ಗಂಟುಬೀಳುವವು- ಎಂದು ಭಾವ. ಪರಿಶಿಷ್ಟವನ್ನು ನೋಡಿ.

2. ಈ ಶ್ಲೋಕದಲ್ಲಿ ಆತ್ಮರು ಅನೇಕರೆಂದೂ ಹೇಳಿದೆ ಎಂಬ ಅಭಿಪ್ರಾಯದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ನಲ್ಲಿಯೂ ಪಂಡಿತರು ಸಮದರ್ಶಿಗಳು' (ಗೀ. ೫–೧೮), 'ಬ್ರಹ್ಮವು ನಿರ್ದೋಷವೂ ಸಮವೂ ಅಲ್ಲವೆ ?' (ಗೀ. ೫–೧೯) ಎಂದು ಹೇಳಿರುತ್ತಾನೆ.

(ಮೂಲ)

'ಯದ್ಯನ್ಯೋಽಸ್ತಿ ಪರಃ ಕೋಽಪಿ' (ವಿ. ಪು. ೨–೧೩–೯೦) ಇತ್ಯತ್ರಾಪಿ ನಾತ್ಮೈಕ್ಯಂ ಪ್ರತೀಯತೇ । 'ಯದಿ ಮತ್ತಃ ಪರಃ ಕೋಽಪ್ಯನ್ಯಃ' ಇತ್ಯೇಕಸ್ಮಿನ್ನೇವಾರ್ಥೇ ಪರಶಬ್ದಾನ್ಯಶಬ್ದಯೋಃ ಪ್ರಯೋಗಾಯೋಗಾತ್ । ತತ್ರ ಪರಶಬ್ದಃ ಸ್ವವ್ಯತಿರಿಕ್ತಾತ್ಮವಚನಃ ; ಅನ್ಯಶಬ್ದಸ್ತಸ್ಯಾಪಿ ಜ್ಞಾನೈಕಾಕಾರತ್ವಾತ್ ಅನ್ಯಾಕಾರತ್ವಪ್ರತಿಷೇಧಾರ್ಥಃ । ಏತದುಕ್ತಂ ಭವತಿ – 'ಯದಿ ಮದ್ವ್ಯತಿರಿಕ್ತಃ ಕೋಽಪ್ಯಾತ್ಮಾ ಮದಾಕಾರಭೂತಜ್ಞಾನಾಕಾರಾದನ್ಯಾಕಾರೋಽಸ್ತಿ ತದಾ 'ಅಹಮೇವಮಾಕಾರಃ । ಅಯಂ ಚಾನ್ಯಾದೃಶಾಕಾರಃ' ಇತಿ ಶಕ್ಯತೇ ವ್ಯಪದೇಷ್ಟುಮ್ ; ನ ಚೈವಮಸ್ತಿ । ಸರ್ವೇಷಾಂ ಜ್ಞಾನೈಕಾಕಾರತ್ವೇನ ಸಮಾನತ್ವಾದೇವ ಇತಿ ॥

(ಅರ್ಥ)

**'ಯದ್ಯನ್ಯೋಽಸ್ತಿ ಪರಃ ಕೋಽಪಿ'** (ವಿ. ಪು. ೨–೧೩–೯೦) ಎಂಬ (ಶ್ಲೋಕ)ದಲ್ಲಿಯೂ ಆತ್ಮೈಕ್ಯದ ಪ್ರತೀತಿಯಾಗುತ್ತಿಲ್ಲ ; ಏಕೆಂದರೆ (ಹಾಗಿದ್ದರೆ) 'ನನಗಿಂತ ಮತ್ತೊಬ್ಬನು ಯಾವನಾದರೂ ಬೇರೆ (ಇದ್ದರೆ) ಎಂದು ಒಂದೇ ಅರ್ಥದಲ್ಲಿ ಪರಶಬ್ದ, ಅನ್ಯಶಬ್ದ (ಈ ಎರಡನ್ನೂ) ಪ್ರಯೋಗಿಸುವದು ಹೊಂದುವದಿಲ್ಲ. ಅಲ್ಲಿ 'ಪರ'ಶಬ್ದವು ತನಗಿಂತ ವ್ಯತಿರಿಕ್ತನಾದ ಆತ್ಮನನ್ನು ಹೇಳುವದು; ಅನ್ಯಶಬ್ದವು ಅವನೂ ಜ್ಞಾನವೆಂಬ ಅದೇ ಆಕಾರವುಳ್ಳವನಾಗಿರುವದರಿಂದ ಮತ್ತೊಂದು ಆಕಾರವಿಲ್ಲ ಎಂದು (ಅನ್ಯಾಕಾರವನ್ನು) ಅಲ್ಲಗಳೆಯುವದಕ್ಕಾಗಿ ಬಂದಿದೆ. ಇಲ್ಲಿ ಇಷ್ಟನ್ನು ಹೇಳಿದಂತೆ ಆಗಿರುತ್ತದೆ. 'ನನಗಿಂತ ವ್ಯತಿರಿಕ್ತನಾಗಿರುವ ಯಾವನಾದರೂ ಆತ್ಮನು ನನ್ನ ಆಕಾರವಾಗಿರುವ ಜ್ಞಾನಾಕಾರಕ್ಕಿಂತ ಬೇರೆಯ ಆಕಾರದವನಾಗಿದ್ದರೆ, ಆಗ 'ನಾನು ಇಂಥ ಆಕಾರದವನು, ಇವನು ಇನ್ನೊಂದು ಆಕಾರದವನು' ಎಂದು ಹೇಳುವದಕ್ಕೆ ಬರುತ್ತದೆ ; ಆದರೆ ಹಾಗಿಲ್ಲ, ಏಕೆಂದರೆ ಎಲ್ಲರೂ ಜ್ಞಾನವೆಂಬ ಒಂದೇ ಆಕಾರವುಳ್ಳವರಾಗಿರುತ್ತಾರೆ[1] ಎಂಬುದು (ವಾಕ್ಯಾರ್ಥ).

---

1. ಇಲ್ಲಿ ಆತ್ಮರ ಆಕಾರಭೇದನಿಷೇಧವೆ, ಆತ್ಮಭೇದನಿಷೇಧವೆ ?– ಎಂಬ ಬಗೆ ಪರಿಶಿಷ್ಟವನ್ನು ನೋಡಿ.

(ಮೂಲ)

'ವೇಣುರನ್ಧ್ರವಿಭೇದೇನ' (ವಿ. ಪು. ೨-೧೪-೩೨) ಇತ್ಯತ್ರಾಪಿ ಆಕಾರ ವೈಷಮ್ಯಮ್ ಆತ್ಮನಾಂ ನ ಸ್ವರೂಪಕೃತಮ್, ಅಪಿ ತು ದೇವಾದಿಪಿಣ್ಡಪ್ರವೇಶ ಕೃತಮ್ - ಇತ್ಯುಪದಿಶ್ಯತೇ ನಾತ್ಮೈಕ್ಯಮ್। ದೃಷ್ಟಾನ್ತೇ ಚ ಅನೇಕರನ್ಧ್ರ ವರ್ತಿನಾಂ ವಾಯ್ವಂಶಾನಾಂ ನ ಸ್ವರೂಪೈಕ್ಯಮ್, ಅಪಿ ತು ಆಕಾರಸಾಮ್ಯಮೇವ। ತೇಷಾಂ ವಾಯುತ್ವೇನ ಏಕಾಕಾರಾಣಾಂ ರನ್ಧ್ರಭೇದನಿಷ್ಕ್ರಮಣಕೃತೋ ಹಿ ಷಡ್ಜಾದಿಸಂಜ್ಞಾಭೇದಃ। ಏವಮ್ ಆತ್ಮನಾಂ ದೇವಾದಿಸಂಜ್ಞಾಭೇದಃ। ಯಥಾ ತೈಜಸಾಽಪ್ಯಪಾರ್ಥಿವದ್ರವ್ಯಾಂಶಭೂತಾನಾಂ ಪದಾರ್ಥಾನಾಂ ತತ್ತದ್ದ್ರವ್ಯತ್ವೇನ ಐಕ್ಯಮೇವ, ನ ಸ್ವರೂಪೈಕ್ಯಮ್, ತಥಾ ವಾಯವೀಯಾನಾಮಂಶಾನಾಮಪಿ ಸ್ವರೂಪಭೇದೋಽವರ್ಜನೀಯಃ ॥

(ಅರ್ಥ)

**'ವೇಣುರನ್ಧ್ರವಿಭೇದೇನ'** (ವಿ.ಪು. ೨-೧೪-೩೨) ಎಂಬಲ್ಲಿಯೂ ಆತ್ಮರುಗಳಿಗೆ ಇರುವ ಆಕಾರದ ವೈಷಮ್ಯವು ಸ್ವರೂಪದಿಂದಾಗಿರುವದಿಲ್ಲ. ಮತ್ತೇನೆಂದರೆ ದೇವತೆಗಳೇ ಮುಂತಾದವರು ದೇಹದೊಳಗೆ ಪ್ರವೇಶಿಸಿದ್ದರಿಂದಾದದ್ದು - ಎಂದು ಹೇಳಿದೆಯೇ ಹೊರತು ಆತ್ಮೈಕ್ಯವನ್ನು ಹೇಳಿರುವದಿಲ್ಲ. ದೃಷ್ಟಾಂತದಲ್ಲಿ ಅನೇಕ ರಂಧ್ರಗಳಲ್ಲಿರುವ ವಾಯುವಿನ ಅಂಶಗಳಿಗೆ ಸ್ವರೂಪದಿಂದ ಐಕ್ಯವಿರುವದಿಲ್ಲ. ಮತ್ತೇನೆಂದರೆ ಆಕಾರದ ಸಾಮ್ಯವೇ. ಅವು ವಾಯು ಎಂಬ (ಆಕಾರ)ದಿಂದ ಏಕಾಕಾರವುಳ್ಳವಾಗಿರುವದರಿಂದ ಬೇರೆಬೇರೆಯ ರಂಧ್ರದಿಂದ ಹೊರಕ್ಕೆ ಬರುವದರಿಂದಲೇ ಅಲ್ಲವೆ, 'ಷಡ್ಜ'ವೇ ಮುಂತಾದ ಹೆಸರುಗಳ ಭೇದವಾಗಿರುವದು ? ಹೀಗೆಯೇ ಆತ್ಮರುಗಳಿಗೆ ದೇವತೆಗಳು- ಮುಂತಾದ ಹೆಸರುಗಳ ಭೇದವಾಗಿರುತ್ತದೆ. ಹೇಗೆ ತೇಜಸ್ಸಿನಿಂದಾದ, ಅಪ್ಪಿನಿಂದಾದ, ಪೃಥಿವಿಯಿಂದಾದ ದ್ರವ್ಯಾಂಶಗಳಾಗಿರುವ ಪದಾರ್ಥಗಳು ಆಯಾ ದ್ರವ್ಯದ ರೂಪದಿಂದ ಒಂದು ಎಂದು ತಿಳಿಯಬೇಕೇಹೊರತು ಸ್ವರೂಪದಿಂದ (ಅವೆಲ್ಲ) ಒಂದೇ ಎಂದಾಗುವದಿಲ್ಲವೋ ಹಾಗೆಯೇ ವಾಯುವಿನ ಅಂಶಗಳೂ ಸ್ವರೂಪದಿಂದ ಬೇರೆಬೇರೆಯೇ। ಎಂಬುದನ್ನು ತಪ್ಪಿಸಿಕೊಳ್ಳುವದಕ್ಕಾಗುವದಿಲ್ಲ.

(ಮೂಲ)

'ಸೋಽಹಂ ಸ ಚ ತ್ವಮ್' (ವಿ. ಪು. ೨-೧೬-೨೩) ಇತಿ ಸರ್ವಾತ್ಮನಾಂ ಪೂರ್ವೋಕ್ತಂ ಜ್ಞಾನಾಕಾರತ್ವಂ ತಚ್ಛಬ್ದೇನ ಪರಾಮೃಶ್ಯ ತತ್ಸಾಮಾನಾಧಿಕರಣ್ಯೇನ 'ಅಹಮ್', 'ತ್ವಮ್'- ಇತ್ಯಾದೀನಾಮ್ ಅರ್ಥಾನಾಂ ಜ್ಞಾನಮೇವಾಽಽ

1. ಈ ಶ್ಲೋಕದ ಮತ್ತು ಮುಂದಿನ ಶ್ಲೋಕದ ಅರ್ಥದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಕಾರ ಇತ್ಯುಪಸಂಹರನ್ ದೇವಾದ್ಯಾಕಾರಭೇದೇನ ಆತ್ಮಸು ಭೇದಮೋಹಂ ಪರಿತ್ಯಜ ಇತ್ಯಾಹ। ಅನ್ಯಥಾ ದೇಹಾತಿರಿಕ್ತಾತ್ಮೋಪದೇಶ್ಯಸ್ವರೂಪೇ 'ಅಹಮ್', 'ತ್ವಮ್', 'ಸರ್ವಮೇತತ್' ಆತ್ಮಸ್ವರೂಪಮ್ ಇತಿ ಭೇದನಿರ್ದೇಶೋ ನ ಘಟತೇ। ಅಹಂ ತ್ವಮಾದಿಶಬ್ದಾನಾಮುಪಲಕ್ಷ್ಯೇಣ ಸರ್ವಮೇತದಾತ್ಮಸ್ವರೂಪಮ್ ಇತ್ಯನೇನ ಸಾಮಾನಾಧಿಕರಣ್ಯಾದುಪಲಕ್ಷಣತ್ವಮಪಿ ನ ಸಂಗಚ್ಛತೇ। ಸೋಽಪಿ ಯಥೋಪದೇಶಮ್ ಅಕರೋತ್ ಇತ್ಯಾಹ 'ತತ್ಯಾಜ ಭೇದಂ ಪರಮಾರ್ಥವೃಷ್ಟಿಃ' (ವಿ. ಪು. ೨-೧೬-೨೪) ಇತಿ। ಕುತಶ್ಚೈಷ ನಿರ್ಣಯಃ? ಇತಿ ಚೇತ್. ದೇಹಾತ್ಮವಿವೇಕವಿಷಯತ್ವಾದುಪದೇಶಸ್ಯ। ತಚ್ಚ 'ಪಿಣ್ಡಃ ಪೃಥಗ್ಯತಃ ಪುಂಸಃ ಶಿರಃಪಾಣ್ಯಾದಿಲಕ್ಷಣಃ' (ವಿ. ಪು. ೨-೧೩-೮೯) ಇತಿ ಪ್ರಕ್ರಮಾತ್ ॥

(ಅರ್ಥ)

**'ಸೋಽಹಂ ಚ ಸ ತ್ವಮ್'** (ವಿ. ಪು. ೨-೧೬-೨೩) ಎಂಬುದು ಎಲ್ಲಾ ಆತ್ಮರುಗಳಿಗೂ ಹಿಂದೆ[1] ಹೇಳಿರುವ ಜ್ಞಾನಾಕಾರತ್ವವನ್ನು ತಚ್ಛಬ್ದದಿಂದ (ಅವರೇ) ಎಂದು ಪರಾಮರ್ಶವನ್ನು ಮಾಡಿ ಅದರೊಡನೆ ಸಾಮಾನಾಧಿಕರಣ್ಯವಾಗಿ 'ಅಹಮ್' (ನಾನು), 'ತ್ವಮ್' (ನೀನು)– ಮುಂತಾದ ಅರ್ಥಗಳಿಗೆ ಜ್ಞಾನವೇ ಆಕಾರವು ಎಂದು ಉಪಸಂಹಾರಮಾಡಿರುವದರಿಂದ ದೇವಾದಿಗಳೆಂಬ ಆಕಾರಭೇದದಿಂದ ಆತ್ಮರುಗಳಲ್ಲಿ ಭೇದಭ್ರಾಂತಿಯನ್ನು ಬಿಡು– ಎಂದು ಹೇಳಿರುತ್ತಾನೆ. ಹೀಗಲ್ಲದೆ ಇದ್ದರೆ ದೇಹಾತಿರಿಕ್ತವಾದ ಆತ್ಮನೆಂದು ಉಪದೇಶಿಸಿರುವ ಸ್ವರೂಪದಲ್ಲಿ 'ನಾನು', 'ನೀನು', 'ಇದೆಲ್ಲವೂ ಆತ್ಮಸ್ವರೂಪವು'– ಎಂದು ಭೇದವನ್ನು ತಿಳಿಸಿರುವದು ಹೊಂದುವದಿಲ್ಲ. 'ನಾನು', 'ನೀನು' ಮುಂತಾದ ಶಬ್ದಗಳಿಗೆ ಉಪಲಕ್ಷ್ಯವಾದ 'ಇದೆಲ್ಲವೂ ಆತ್ಮಸ್ವರೂಪವು' ಎಂಬಿದರೊಡನೆ ಸಾಮಾನಾಧಿಕರಣ್ಯವಿರುವದರಿಂದ ಅವು ಉಪಲಕ್ಷಣವೆಂಬುದೂ ಹೊಂದುವದಿಲ್ಲ. ಸಾಮಾನಾಧಿಕರಣ್ಯದಿಂದ ಉಪಲಕ್ಷಣತ್ವವನ್ನು ಹೇಳಿರುವದೂ ಸಂಗತವಾಗುವದಿಲ್ಲ.[2]

1. ಹಿಂದಿನ ನಾಲ್ಕು ಅಧ್ಯಾಯಗಳಲ್ಲಿ ಶ್ರು. ಪ್ರ.

2. ಇದು ಎಲ್ಲಾ ಭೇದವನ್ನೂ ನಿಷೇಧಮಾಡುತ್ತದೆ ಎಂದಿಟ್ಟುಕೊಂಡರೆ 'ಅಹಂ, ತ್ವಮ್' ಮುಂತಾದ ಶಬ್ದಗಳನ್ನು ದೇಹಾತಿರಿಕ್ತವಾದ ಆತ್ಮನಲ್ಲಿ ಉಪಯೋಗಿಸಿರುವದು ಹೊಂದುವದಿಲ್ಲ. ಈ ಶಬ್ದಗಳು ದೇಹಪರವೆಂದು ಹೇಳುವದಕ್ಕೆ ಬರುವದಿಲ್ಲ. ತಚ್ಛಬ್ದದಿಂದ ಆತ್ಮನನ್ನು ಪರಾಮರ್ಶಮಾಡಿ ಅವನಿಗೂ ದೇಹಗಳಿಗೂ ಐಕ್ಯವನ್ನು ಹೇಳುವದಕ್ಕಿಲ್ಲವಷ್ಟೆ? ಇವು ಅಂತಃಕರಣಪರವೂ ಅಲ್ಲ; ಏಕೆಂದರೆ ಅಂತಃಕರಣಗಳಿಗೂ ಆತ್ಮನಿಗೂ ಅಥವಾ ಅಂತಃಕರಣಗಳಿಗೂ ದೇಹಗಳಿಗೂ ಪರಸ್ಪರವಾಗಿ ಐಕ್ಯವನ್ನು ಹೇಳಿರುವದಿಲ್ಲ. ಹೀಗೆಯೇ ದೇಹವಿಶಿಷ್ಟಾಂತಃಕರಣವನ್ನೂ ಇವು ಹೇಳಲಾರವು. ಈ ಪದಗಳು ಉಪಲಕ್ಷಣವಾಗಿರುತ್ತವೆ; ಉಪಲಕ್ಷ್ಯವಾದ ಆತ್ಮವಸ್ತುವಿನಲ್ಲಿ ಭೇದವಿಲ್ಲ ಎಂದೂ ಹೇಳುವದಕ್ಕೆ ಬರುವದಿಲ್ಲ. ಅಹಂತ್ವಮಾದಿಶಬ್ದಗಳು ಉಪಲಕ್ಷ್ಯವಾಚಕವೆಂದು ನೀವು ಒಪ್ಪುವ ಆತ್ಮಶಬ್ದದೊಡನೆ ಸಾಮಾನಾಧಿಕರಣ್ಯವಾಗಿ ಬಳಸಿರುತ್ತದೆ. ಶ್ರು. ಪ್ರ.

'ಅವನೂ ಉಪದೇಶಕ್ಕೆ (ಅನುಗುಣವಾಗಿ) ಮಾಡಿದನು' ಎಂದು 'ತತ್ಯಾಜ ಭೇದಂ ಪರಮಾರ್ಥದೃಷ್ಟಿಃ' (ವಿ. ಪು. ೨–೧೬–೨೪) ಪರಮಾರ್ಥದೃಷ್ಟಿಯುಳ್ಳವನಾಗಿ ಭೇದವನ್ನು ಬಿಟ್ಟನು– ಎಂದಿದೆ.

ಇದೇ ನಿರ್ಣಯವೆಂಬುದಕ್ಕೆ ಇನ್ನು ಯಾವ ಕಾರಣವಿದೆ ?– ಎಂದರೆ, (ಈ) ಉಪದೇಶವು ದೇಹಾತ್ಮರುಗಳ ವಿವೇಚನವನ್ನು ತಿಳಿಸುವದಕ್ಕೆ ಬಂದಿರುತ್ತದೆಯಾದ್ದರಿಂದ (ಎನ್ನುತ್ತೇವೆ) ; ಅದು (ಹೇಗೆ ಗೊತ್ತು ?) ಎಂದರೆ ಈ ಉಪದೇಶವು ದೇಹಗಳಿಗೂ ಆತ್ಮನಿಗೂ ಇರುವ ವಿವೇಕವನ್ನು ತಿಳಿಸುವದಕ್ಕೆ ಬಂದಿರುವದರಿಂದ. 'ಹಾಗೆಂಬುದು ಪುರುಷನ ಶಿರಃಪಾಣ್ಯಾದಿರೂಪವಾದ ಶರೀರವು ಬೇರೆಯಾಗಿರುವದರಿಂದ' (ವಿ. ಪು. ೨–೧೩–೮೯) ಎಂದು ಉಪಕ್ರಮವಾಗಿರುವದರಿಂದ (ಗೊತ್ತಾಗುತ್ತದೆ).[1]

(ಮೂಲ)

'ವಿಭೇದಜನಕೇಽಜ್ಞಾನೇ'[2] (ವಿ. ೬–೭–೯೬) ಇತಿ ಚ ನಾತ್ಮಸ್ವರೂಪೈಕ್ಯಪರಮ್, ನಾಪಿ ಜೀವಪರಯೋಃ । ಆತ್ಮಸ್ವರೂಪೈಕ್ಯಮ್ ಉಕ್ತರೀತ್ಯಾ ನಿಷಿದ್ಧಮ್ ಜೀವಪರಯೋರಪಿ ಸ್ವರೂಪೈಕ್ಯಂ ದೇಹಾತ್ಮನೋರಿವ ನ ಸಂಭವತಿ ॥

ತಥಾ ಚ ಶ್ರುತಿಃ 'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ' (ಮುಂ. ೩–೧–೧), 'ಋತಂ ಪಿಬನ್ತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ । ಛಾಯಾತಪೌ ಬ್ರಹ್ಮವಿದೋ ವದನ್ತಿ ಪಞ್ಚಾಗ್ನಯೋ ಯೇ ಚ ತ್ರಿಣಾಚಿಕೇತಾಃ' (ಕಾ. ೧–೩–೧), 'ಅನ್ತಃಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' (ತೈ. ಆ. ೩–೨೦) ಇತ್ಯಾದ್ಯಾಃ[3] । ಅಸ್ಮಿನ್ನಪಿ ಶಾಸ್ತ್ರೇ

**ಸ ಸರ್ವಭೂತಪ್ರಕೃತಿಂ ವಿಕಾರಾನ್**
**ಗುಣಾದಿದೋಷಾಂಶ್ಚ ಮುನೇ ವ್ಯತೀತಃ ।**
**ಅತೀತಸರ್ವಾವರಣೋಽಖಿಲಾತ್ಮಾ**
**ತೇನಾಸ್ತೃತಂ ಯದ್ಭುವನಾನ್ತರಾಲೇ ॥**
**ಸಮಸ್ತಕಲ್ಯಾಣಗುಣಾತ್ಮಕೋಽಸೌ ॥** (ವಿ. ಪು. ೬–೫–೮೩, ೮೪)
**ಪರಃ ಪರಾಣಾಂ ಸಕಲಾ ನ ಯತ್ರ ಕ್ಲೇಶಾದಯಃ ಸನ್ತಿ ಪರಾವರೇಶೇ ॥**
ವಿ. ಪು. ೬–೫–೮೫

**ಅವಿದ್ಯಾಕರ್ಮಸಂಜ್ಞಾಽನ್ಯಾ ತೃತೀಯಾ ಶಕ್ತಿರಿಷ್ಯತೇ ।**
**ಯಯಾ ಕ್ಷೇತ್ರಜ್ಞಶಕ್ತಿಃ ಸಾ ವೇಷ್ಟಿತಾ ನೃಪ ಸರ್ವಗಾ ॥**
ವಿ. ಪು. ೬–೭–೬೧, ೬೨

---

1. ಶ್ಲೋಕಾರ್ಥದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.
2. 'ವಿಭೇದಜನಕೇ ಜ್ಞಾನೇ' ಎಂಬ ಮು॥ ಪಾಠಕ್ಕಿಂತ ಈ ಪೂ॥ ಪಾಠವೇ ಮೇಲು.
3. 'ಶ್ರುತಿಃ' ಎಂಬ ಏಕವಚನಕ್ಕೆ ಸರಿಯಾಗಿ 'ಇತ್ಯಾದ್ಯಾ' ಎಂದು ತಿದ್ದಿಕೊಂಡಿದೆ.

ಇತಿ ಭೇದವ್ಯಪದೇಶಾತ್ । 'ಉಭಯೇಽಪಿ ಹಿ ಭೇದೇನೈನಮಧೀಯತೇ' (ಸೂ. ೧–೨–೨೧), 'ಭೇದವ್ಯಪದೇಶಾಚ್ಚಾನ್ಯಃ' (ಸೂ. ೧–೧–೨೨), 'ಅಧಿಕಂ ತು ಭೇದನಿರ್ದೇಶಾತ್' (ಸೂ. ೨–೧–೨೨) ಇತ್ಯಾದಿಸೂತ್ರೇಷು ಚ । 'ಯ ಆತ್ಮನಿ ತಿಷ್ಠನ್ನಾತ್ಮನೋಽನ್ತರೋ ಯಮಾತ್ಮಾ ನ ವೇದ ಯಸ್ಯಾಽಽತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ' (ಬೃ. ಮಾ. ೩–೭–೨೨), 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' (ಬೃ. ೪–೩–೨೧), 'ಪ್ರಾಜ್ಞೇನಾಽಽತ್ಮನಾಽನ್ವಾರೂಢಃ' (ಬೃ. ೪–೩–೩೫) ಇತ್ಯಾದಿಭಿರುಭಯೋರನ್ಯೋನ್ಯಪ್ರತ್ಯನೀಕಾಕಾರೇಣ ಸ್ವರೂಪನಿರ್ಣಯಾತ್ ॥

(ಅರ್ಥ)

**'ವಿಭೇದಜನಕೇಽಜ್ಞಾನೇ'** (ವಿ.ಪು. ೬–೭–೯೪) ಎಂಬುದೂ ಆತ್ಮಸ್ವರೂಪೈಕ್ಯಪರವಲ್ಲ; ಜೀವಪರಮಾತ್ಮರ ಐಕ್ಯದಲ್ಲಿಯೂ (ತಾತ್ಪರ್ಯವುಳ್ಳದ್ದಲ್ಲ). ಆತ್ಮಸ್ವರೂಪೈಕ್ಯವು ಹಿಂದೆ ಹೇಳಿರುವ ರೀತಿಯಿಂದ[1] ನಿಷಿದ್ಧವಾಗಿರುತ್ತದೆ.

ಜೀವಪರಮಾತ್ಮರಿಗೂ– ದೇಹಾತ್ಮರುಗಳಂತೆಯೇ–ಸ್ವರೂಪೈಕ್ಯವು ಸಂಭವಿಸುವದಿಲ್ಲ.[2] ಅದಕ್ಕನುಗುಣವಾಗಿಯೇ 'ಜೊತೆಯಲ್ಲಿರುವ ಪರಸ್ಪರಸಖರಾದ ಎರಡು ಪಕ್ಷಿಗಳು ಒಂದೇ ವೃಕ್ಷವನ್ನು ಅಪ್ಪಿಕೊಂಡಿರುವವು ; ಅವುಗಳಲ್ಲಿ ಒಂದು ಅರಳೀಹಣ್ಣನ್ನು ಸವಿದು ತಿನ್ನುತ್ತದೆ ; ಇನ್ನೊಂದು ತಿನ್ನದೆ ನೋಡುತ್ತಿರುತ್ತದೆ' (ಮುಂ. ೩–೧–೧), 'ಪರಮಪರಾರ್ಧ್ಯವಾದ ಸುಕೃತದ ಲೋಕದಲ್ಲಿ ಋತವನ್ನು ಪಾನಮಾಡುತ್ತಿರುವ (ಹೃದಯಗುಹೆಯನ್ನು) ಹೊಕ್ಕಿರುವರಿಬ್ಬರನ್ನೂ ನೆರಳು ಬಿಸಿಲುಗಳಂತಿರುವರೆಂದು ಬ್ರಹ್ಮವಿದರೂ ಪಂಚಾಗ್ನಿಗಳೂ ಮತ್ತು ತ್ರಿಣಾಚಿಕೇತರೂ ಹೇಳುತ್ತಿರುವರು' (ಕಾ. ೧–೩–೧), 'ಒಳಹೊಕ್ಕು ಜೀವರನ್ನು ಶಾಸನಮಾಡುವ ಸರ್ವಾತ್ಮನು'[3] (ತೈ. ಆ. ೩–೨೧) –ಮುಂತಾದ ಶ್ರುತಿಯೂ ಇದೆ.

**ಈ ಶಾಸ್ತ್ರದಲ್ಲಿಯೂ[4] 'ಸ ಸರ್ವಭೂತಪ್ರಕೃತಿಮ್'** ಆತನು ಸರ್ವಭೂತಗಳ ಪ್ರಕೃತಿಯನ್ನೂ ವಿಕಾರಗಳನ್ನೂ ಗುಣಗಳೇ ಮುಂತಾದವುಗಳ ದೋಷವನ್ನೂ ಮೀರಿರುವನಯ್ಯ ಮುನಿಯೆ. ಸರ್ವಾವರಣಗಳನ್ನೂ ಮೀರಿರುವನು ; ಎಲ್ಲರ ಆತ್ಮನಾದ ಅವನಿಂದ ಭುವನದ ಮಧ್ಯದಲ್ಲಿ ಏನೇನಿರುವದೋ ಅದೆಲ್ಲವೂ ವ್ಯಾಪ್ತವಾಗಿರುವದು' (ವಿ. ಪು. ೬–೫–೮೩), 'ಅವನು ಸಮಸ್ತಕಲ್ಯಾಣಗುಣಾತ್ಮಕನು'

---

1. ಹಿಂದಿನ ನಾಲ್ಕು ಅಧ್ಯಾಯಗಳಲ್ಲಿ ಪ್ರತಿಪಾದಿಸಿರುವ ರೀತಿಯಿಂದ. ಶ್ರು. ಪ್ರ.

2. ಆತ್ಮನು ಅದ್ವೈತರೂಪನು– ಎಂಬುದನ್ನು ಮೊದಲನೆಯ ವಿಕಲ್ಪದಿಂದ ಅಲ್ಲಗಳೆದದ್ದಾಯಿತು ; ಪರಮಾತ್ಮನೂ ಜೀವನೂ ಒಬ್ಬನೇ ಆತ್ಮ– ಎಂಬುದನ್ನು ಇಲ್ಲಿ ಅಲ್ಲಗಳೆದಿದೆ.

3. ಈ ಶ್ರುತಿವಾಕ್ಯಗಳು ಪರಮಾತ್ಮನನ್ನು ಜೀವಾತ್ಮನಿಗಿಂತ ಭಿನ್ನನೆಂದೇ ಹೇಳುತ್ತವೆ.

4. ಈ ಪುರಾಣದಲ್ಲಿಯೂ.

(ವಿ. ಪು. ೬–೫–೮೪), 'ಹೆಚ್ಚಿನವರೆಲ್ಲರಿಗಿಂತಲೂ ಹೆಚ್ಚಿನವನು, ಆ ಪರಾವರೇಶನಲ್ಲಿ ಕ್ಲೇಶಾದಿಗಳು ಇರುವದಿಲ್ಲ' (ವಿ. ಪು. ೬–೫–೮೫), 'ಕರ್ಮವೆಂಬ ಹೆಸರಿನ ಅವಿದ್ಯೆಯು ಮೂರನೆಯ ಶಕ್ತಿಯೆನಿಸುವದು; ಎಲೈ ರಾಜನೆ,ಅದರಿಂದ ಆ ಸರ್ವಗತವಾದ ಕ್ಷೇತ್ರಜ್ಞಶಕ್ತಿಯು ಸುತ್ತುವರಿಯಲ್ಪಟ್ಟಿರುವದು' (ವಿ.ಪು. ೬-೭-೬೧, ೬೨)- ಎಂದು ಭೇದವನ್ನೇ ಹೇಳಿರುತ್ತದೆ. 'ಎರಡು ಶಾಖೆಯವರೂ ಈ (ಆತ್ಮನನ್ನು) ಭೇದದಿಂದಲೇ ಅಧ್ಯಯನಮಾಡುತ್ತಿದಾರಲ್ಲವೆ ?' (ಸೂ. ೧–೨–೨೧), 'ಭೇದವನ್ನು ತಿಳಿಸಿರುವದರಿಂದಲೂ (ಅವನು ಜೀವನಿಗಿಂತ) ಅನ್ಯನು' (ಸೂ. ೧-೧-೨೨), 'ದುಃಖಿಯಾದ ಪ್ರತ್ಯಗಾತ್ಮನಿಗಿಂತ (ಬ್ರಹ್ಮವು) ಅಧಿಕವಾಗಿರುತ್ತದೆ, ಏಕೆಂದರೆ (ಅದಕ್ಕಿಂತ) ಭಿನ್ನವೆಂದೇ (ಶ್ರುತಿಯಲ್ಲಿ) ನಿರ್ದೇಶಮಾಡಿರುತ್ತದೆ' (ಸೂ. ೨–೧–೨೨)- ಮುಂತಾದ **ಸೂತ್ರಗಳಲ್ಲಿಯೂ**[1] 'ಯಾವನು ಆತ್ಮನಲ್ಲಿರುವವನಾಗಿ, ಆತ್ಮನಿಗಿಂತಲೂ ಒಳಗಿರುವವನೋ ಯಾವನು ಆತ್ಮನನ್ನು ಅರಿಯನೋ, ಯಾವನಿಗೆ ಆತ್ಮನು ಶರೀರವೋ, ಯಾವನು ಆತ್ಮನನ್ನು ಒಳಗಿದ್ದು ಹಿಡಿತದಲ್ಲಿಟ್ಟುಕೊಂಡಿರುವನೋ' (ಬೃ. ಮಾ. ೩–೭–೨೨), 'ಪ್ರಾಜ್ಞನಾದ ಆತ್ಮನಿಂದ ಆಲಿಂಗಿತನಾಗಿ' (ಬೃ. ೪–೩–೨೧), 'ಪ್ರಾಜ್ಞನಾದ ಆತ್ಮನಿಂದ ಅನ್ವಾರೂಢನಾಗಿ' (ಬೃ. ೪–೩–೩೫)- ಮುಂತಾದ (ಶ್ರುತಿಗಳಿಂದ) ಇಬ್ಬರೂ ಪರಸ್ಪರವಿರುದ್ಧಾಕಾರವುಳ್ಳವರೆಂದೇ (ಅವರ) ಸ್ವರೂಪವನ್ನು ನಿರ್ಣಯಿಸಿದೆ.[2]

(ಮೂಲ)

ನಾಪಿ ಸಾಧನಾನುಷ್ಠಾನೇನ ನಿರ್ಮುಕ್ತಾವಿದ್ಯಸ್ಯ ಪರೇಣ ಸ್ವರೂಪೈಕ್ಯಸಂಭವಃ | ಅವಿದ್ಯಾಶ್ರಯತ್ವಯೋಗ್ಯಸ್ಯ ತದನರ್ಹತ್ವಾಸಂಭವಾತ್ | ಯಥೋಕ್ತಮ್– 'ಪರಮಾತ್ಮಾತ್ಮನೋರ್ಯೋಗಃ ಪರಮಾರ್ಥ ಇತೀಷ್ಯತೇ | ಮಿಥ್ಯೈತದನ್ಯದ್ದ್ರವ್ಯಂ ಹಿ ನೈತಿ ತದ್ದ್ರವ್ಯತಾಂ ಯತಃ' (ವಿ. ಪು. ೨–೧೪–೨೭) ಇತಿ | ಮುಕ್ತಸ್ಯ ತು ತದ್ಧರ್ಮತಾಪತ್ತಿರೇವೇತಿ ಭಗವದ್ಗೀತಾಸು ಉಕ್ತಮ್– "ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ | ಸರ್ಗೇಽಪಿ ನೋಪಜಾಯನ್ತೇ ಪ್ರಲಯೇ ನ ವ್ಯಥನ್ತಿ ಚ' (ಗೀ. ೧೪–೨–೭) ಇತಿ | ಇಹಾಪಿ 'ಆತ್ಮಭಾವಂ ನಯತ್ಯೇನಂ ತದ್ಬ್ರಹ್ಮ ಧ್ಯಾಯಿನಂ ಮುನೇ | ವಿಕಾರ್ಯಮಾತ್ಮನಃ ಶಕ್ತ್ಯಾ ಲೋಹಮಾಕರ್ಷಕೋ ಯಥಾ' (ವಿ. ಪು. ೬–೭–೩೦) ಇತಿ | ಆತ್ಮಭಾವಮ್– ಆತ್ಮನಃ ಸ್ವಭಾವಮ್ | ನ ಹ್ಯಾಕರ್ಷಕಸ್ವರೂಪಾಪತ್ತಿರಾಕೃಷ್ಯಮಾಣಸ್ಯ | ವಕ್ಷ್ಯತಿ ಚ– 'ಜಗದ್ವ್ಯಾಪಾರವರ್ಜಂ ಪ್ರಕರಣಾದಸಂನಿಹಿತತ್ವಾಚ್ಚ' (ಸೂ. ೪–೪–೧೭), 'ಭೋಗಮಾತ್ರಸಾಮ್ಯಲಿಙ್ಗಾಚ್ಚ' (ಸೂ. ೪–೪–

1. ಸೂತ್ರಗಳೂ ಶ್ರುತ್ಯಾಧಾರದಿಂದ ಭೇದವನ್ನೇ ಹೇಳುತ್ತವೆ.
2. ಈ ಸೂತ್ರಗಳ ಅಭಿಪ್ರಾಯದ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

೨೧), 'ಮುಕ್ತೋಽಪಸೃಪ್ಯವ್ಯಪದೇಶಾಚ್ಚ' (ಸೂ. ೧-೩-೨) ಇತಿ। **ವೃತ್ತಿರಪಿ** 'ಜಗದ್ವ್ಯಾಪಾರವರ್ಜಂ ಸಮಾನೋ ಜ್ಯೋತಿಷಾ' (ವೃ.) ಇತಿ। **ದ್ರಮಿಡಭಾಷ್ಯಕಾರಶ್ಚ** 'ದೇವತಾಸಾಯುಜ್ಯಾದಶರೀರಸ್ಯಾಪಿ ದೇವತಾವತ್ ಸರ್ವಾರ್ಥಸಿದ್ಧಿಃ ಸ್ಯಾತ್' (ದ್ರ. ಭಾ.) ಇತ್ಯಾಹ। ಶ್ರುತಯಶ್ಚ 'ಯ ಇಹಾತ್ಮಾನಮನುವಿದ್ಯ ವ್ರಜನ್ತ್ಯೇತಾಂಶ್ಚ ಸತ್ಯಾನ್ ಕಾಮಾಂಸ್ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ' (ಛಾಂ. ೮-೧-೬), 'ಬ್ರಹ್ಮವಿದಾಪ್ನೋತಿ ಪರಮ್' (ತೈ. ೨-೧), 'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ। ಬ್ರಹ್ಮಣಾ ವಿಪಶ್ಚಿತಾ' (ತೈ. ೨-೧), 'ಏತಮಾನನ್ದಮಯಮಾತ್ಮಾನಮುಪಸಂಕ್ರಮ್ಯ', 'ಇಮಾನ್ ಲೋಕಾನ್ ಕಾಮಾನ್ನೀ ಕಾಮರೂಪ್ಯನುಸಞ್ಚರನ್' (ತೈ. ೩-೧೦), 'ಸ ತತ್ರ ಪರ್ಯೇತಿ' (ಛಾಂ. ೮-೧೨-೩), 'ರಸೋ ವೈ ಸಃ। ರಸಂ ಹ್ಯೇವಾಯಂ ಲಬ್ಧ್ವಾಽಽನನ್ದೀ ಭವತಿ' (ತೈ. ೨-೭), 'ಯಥಾ ನದ್ಯಃ ಸ್ಯನ್ದಮಾನಾಃ ಸಮುದ್ರೇ ಅಸ್ತಂ ಗಚ್ಛನ್ತಿ ನಾಮರೂಪೇ ವಿಹಾಯ। ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್' (ಮುಂ. ೩-೨-೮), 'ತಥಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಞ್ಜನಃ ಪರಮಂ ಸಾಮ್ಯಮುಪೈತಿ' (ಮುಂ ೩-೧-೩) ಇತ್ಯಾದ್ಯಾಃ ॥

(ಅರ್ಥ)

ಸಾಧನದ ಅನುಷ್ಠಾನದಿಂದ ಅವಿದ್ಯೆಯನ್ನು ತೊಲಗಿಸಿಕೊಂಡಿರುವವನಿಗೂ ಪರಮಾತ್ಮನೊಡನೆ ಸ್ವರೂಪೈಕ್ಯ(ವಾಗುವ) ಸಂಭವವಿರುವದಿಲ್ಲ; ಏಕೆಂದರೆ ಅವಿದ್ಯೆಗೆ ಆಶ್ರಯನಾಗಿರುವದಕ್ಕೆ ಯೋಗ್ಯನಾದವನಿಗೆ ಆ (ಆಶ್ರಯತ್ವಕ್ಕೆ) ಅನರ್ಹನಾಗಿರುವದೆಂಬುದು ಸಂಭವಿಸುವದಿಲ್ಲ.[1]

ಹಾಗೆಂದು 'ಪರಮಾತ್ಮ, ಆತ್ಮ- ಈ ಇಬ್ಬರಿಗೂ (ಆಗುವ) ಸಂಬಂಧವು ಪರಮಾರ್ಥವೆನಿಸುತ್ತದೆ. ಏಕೆಂದರೆ ಇನ್ನೊಂದು ದ್ರವ್ಯವು ಆ ದ್ರವ್ಯದ ಸ್ವಭಾವವನ್ನು ಹೊಂದುವದಿಲ್ಲ' (ವಿ. ಪು. ೨-೧೪-೨೭). ಮುಕ್ತನಿಗಾದರೊ, ಆ (ಪರಮಾತ್ಮನ) ಧರ್ಮವನ್ನು ಹೊಂದುವದೇ ಎಂದು "ಈ ಜ್ಞಾನವನ್ನು ಆಶ್ರಯಿಸಿಕೊಂಡು ನನ್ನ ಸಾಧರ್ಮ್ಯವನ್ನು ಹೊಂದಿದವರು ಸೃಷ್ಟಿಯಲ್ಲಿಯೂ ಹುಟ್ಟುವದಿಲ್ಲ, ಪ್ರಲಯದಲ್ಲಿಯೂ ವ್ಯಥೆಪಡುವದಿಲ್ಲ'' (ಗೀ.೧೪-೨) ಎಂದು ಭಗವದ್ಗೀತೆಗಳಲ್ಲಿ ಹೇಳಿರುತ್ತದೆ. **ಈ (ಪುರಾಣ)ದಲ್ಲಿಯೂ** 'ಎಲೈ ಮುನಿಯೆ, ಆ ಬ್ರಹ್ಮವು

---

**1. ಆತ್ಮೈಕ್ಯ, ಜೀವಪರಮಾತ್ಮೈಕ್ಯ- ಇವುಗಳನ್ನು ಹಿಂದೆ ನಿರಾಕರಿಸಿರುತ್ತದೆ. ಈಗ ಮುಕ್ತಾತ್ಮನಿಗೂ ಪರಮಾತ್ಮನಿಗೂ ಐಕ್ಯವನ್ನು ಈ 'ವಿಭೇದಜನಕೇ' ಎಂಬ ವಾಕ್ಯವು ಹೇಳಲಾರದು ಎಂಬುದನ್ನು ವಿವರಿಸಿ ತಿಳಿಸಲಾಗುತ್ತದೆ. ಬುದ್ಧ ಮುಕ್ತ ಜೀವನಿಗಿಂತಲೂ ಪರಮಾತ್ಮನು ವಿಲಕ್ಷಣನು ಎಂಬುದೇ ರಾಮಾನುಜರ ಸಿದ್ಧಾಂತ.**

ಧ್ಯಾತೃವಾದವನಿಗೆ – ವಿಕಾರ್ಯವಾದ ಲೋಹವನ್ನು ತನ್ನ ಶಕ್ತಿಯಿಂದ ಹೇಗೆ ಅಯಸ್ಕಾಂತವು ತನ್ನ ಸ್ವಭಾವದ್ದಾಗಿ ಮಾಡುವದೋ ಹಾಗೆ – ತನ್ನ ಸ್ವಭಾವವನ್ನು ಪಡೆಯಿಸುತ್ತದೆ' (ವಿ.ಪು. ೬–೭–೩೦). (ಈ ಶ್ಲೋಕದಲ್ಲಿ) 'ಆತ್ಮಭಾವಮ್' ಎಂದರೆ ತನ್ನ ಸ್ವಭಾವವನ್ನು ಎಂದರ್ಥ. ಏಕೆಂದರೆ ಆಕರ್ಷಕವಾದ (ಅಯಸ್ಕಾಂತದ) ಸ್ವರೂಪವೇ ಆಕೃಷ್ಯವಾದ (ಲೋಹಕ್ಕೆ) ಬರುವದಿಲ್ಲ.

(ಸೂತ್ರಕಾರನು) ಮುಂದೆ ಜಗತ್ತಿನ ಸ್ವರೂಪಸ್ಥಿತ್ಯಾದಿಗಳನ್ನು ನಿಯಮಿಸುವ ಜಗದ್ವ್ಯಾಪಾರವನ್ನು ಬಿಟ್ಟು ಮಿಕ್ಕದ್ದೇ (ಮುಕ್ತನ) ಐಶ್ವರ್ಯವು. ಏಕೆಂದರೆ (ಆ ವ್ಯಾಪಾರವು ಬ್ರಹ್ಮದ) ಪ್ರಕರಣದಲ್ಲಿಯೇ ಉಕ್ತವಾಗಿರುತ್ತದೆ, ಮತ್ತು '(ಜೀವನು ಆ ಪ್ರಕರಣದಲ್ಲಿ) ಸನ್ನಿಹಿತನಾಗಿರುವದಿಲ್ಲ', '(ಬ್ರಹ್ಮದ ಯಾಥಾತ್ಮ್ಯವನ್ನು ಅನುಭವಿಸುವ ಭೋಗಮಾತ್ರದಲ್ಲಿಯೇ (ಮುಕ್ತನಿಗೆ ಬ್ರಹ್ಮ) ಸಮಾನತೆಯನ್ನು (ಹೇಳಿರುವದೆಂಬ) ಲಿಂಗವಿರುವದರಿಂದಲೂ' (ಸೂ. ೪-೪-೨೧) 'ಮುಕ್ತಿಯಿಂದಲೂ ಪ್ರಾಪ್ಯನೆಂದು ಹೇಳಿರುವದರಿಂದಲೂ (ದ್ಯುಭ್ವಾದ್ಯಾಯತನವೆಂಬುದು ಬ್ರಹ್ಮವೇ)' (ಸೂ. ೧–೩–೨) ಎಂದು ಮುಂದೆ ಹೇಳಿರುತ್ತಾನೆ. 'ಜಗದ್ವ್ಯಾಪಾರವನ್ನು ಬಿಟ್ಟು (ಮಿಕ್ಕ ವಿಷಯಕ್ಕೆ) ಜ್ಯೋತೀರೂಪವಾದ ಬ್ರಹ್ಮಕ್ಕೆ ಸಮಾನನು' (ದ್ರ. ಭಾ.) ಎಂದು **ವೃತ್ತಿ**ಯೂ ಇದೆ. **ದ್ರಮಿಡಭಾಷ್ಯಕಾರನೂ** 'ದೇವತಾಸಾಯುಜ್ಯದಿಂದ ಅಶರೀರನಾದವನಿಗೂ ದೇವತೆಯಂತೆ ಸರ್ವಾರ್ಥಗಳ ಸಿದ್ಧಿಯೂ ಆದೀತು' (ದ್ರ. ಭಾ.) ಎಂದಿರುತ್ತಾನೆ. 'ಯಾರು ಇಲ್ಲಿ ಆತ್ಮನನ್ನು ಅರಿತುಕೊಂಡು, ಈ ಸತ್ಯಕಾಮಗಳನ್ನು ಅರಿತುಕೊಂಡು ಹೋಗುವರೋ, ಅವರಿಗೆ ಸರ್ವಲೋಕಗಳಲ್ಲಿಯೂ ಕಾಮಚಾರವುಂಟಾಗುವದು' (ಛಾಂ. ೮–೧–೬), 'ಬ್ರಹ್ಮವನ್ನರಿತವನು ಪರ(ಗತಿಯನ್ನು) ಪಡೆಯುತ್ತಾನೆ' (ತೈ. ೨–೧), 'ಅವನು ಸರ್ವಕಾಮಗಳನ್ನೂ ಸರ್ವಜ್ಞನಾದ ಬ್ರಹ್ಮದೊಡನೆ ಪಡೆದುಕೊಳ್ಳುತ್ತಾನೆ' (ತೈ. ೨–೧), 'ಈ ಆನಂದಮಯನನ್ನು ಪಡೆದು ಈ ಲೋಕಗಳನ್ನು ಕಾಮಾನ್ನಿಯೂ ಕಾಮರೂಪಿಯೂ ಆಗಿ ಸಂಚರಿಸುತ್ತಾ' (ತೈ. ೩–೧೦), 'ಆತನು ಅಲ್ಲಿ ಸಂಚರಿಸುವನು' (ಛಾಂ. ೮–೧೨–೩), 'ಆತನು ರಸವೇ ಅಲ್ಲವೆ? ರಸವನ್ನೇ ಈ (ಜೀವನು) ಪಡೆದದ್ದರಿಂದ ಆನಂದಿಯಾಗುತ್ತಾನೆ' (ತೈ. ೨–೭), 'ಹೇಗೆ ಹರಿಯುವ ನದಿಗಳು ನಾಮರೂಪಗಳನ್ನು ಬಿಟ್ಟು ಸಮುದ್ರದಲ್ಲಿ ಕಾಣದಂತಾಗುವವೋ, ಹಾಗೆಯೇ ಜ್ಞಾನಿಯು ನಾಮರೂಪದಿಂದ ವಿಮುಕ್ತನಾಗಿ ಪರಕ್ಕಿಂತಲೂ ಪರನಾದ ದಿವ್ಯ ಪುರುಷನನ್ನು ಸೇರುತ್ತಾನೆ' (ಮು. ೩–೨–೮), 'ಹಾಗೆಯೇ ಜ್ಞಾನಿಯು ಪುಣ್ಯಪಾಪಗಳನ್ನು ಕೊಡವಿಹಾಕಿ ನಿರಂಜನನಾಗಿ ಪರಮಸಾಮ್ಯವನ್ನು ಹೊಂದುತ್ತಾನೆ' (ಮುಂ. ೩–೧–೩) ಎಂದುಮುಂತಾಗಿ ಶ್ರುತಿಗಳೂ ಇವೆ.[1]

1. ಸೂತ್ರ, ವೃತ್ತಿ, ದ್ರಮಿಡಭಾಷ್ಯ, ಶ್ರುತಿಗಳು – ಈ ಎಲ್ಲಾ ಪ್ರಮಾಣಗಳಿಂದ ಮುಕ್ತಜೀವನಿಗೂ ಪರಮಾತ್ಮನಿಗೂ ಭೇದವೇ ಸಿದ್ಧವಾಗುತ್ತದೆ ಎಂದು ಅಭಿಪ್ರಾಯ.

(ಮೂಲ)

ಪರವಿದ್ಯಾಸು ಸರ್ವಾಸು ಸಗುಣಮೇವ ಬ್ರಹ್ಮ ಉಪಾಸ್ಯಮ್ । ಫಲಂ ಚೈಕರೂಪಮೇವ ; ಅತೋ ವಿದ್ಯಾವಿಕಲ್ಪಃ ಇತಿ ಸೂತ್ರಕಾರೇಣೈವ 'ಆನನ್ದಾದಯಃ ಪ್ರಧಾನಸ್ಯ' (ಸೂ. ೩-೩-೧೧), 'ವಿಕಲ್ಪೋಽವಿಶಿಷ್ಟಫಲತ್ವಾತ್' (ಸೂ. ೩-೩-೫೭)- **ಇತ್ಯಾದಿಷೂಕ್ತಮ್** । ವಾಕ್ಯಕಾರೇಣ ಚ ಸಗುಣಸ್ಯೈವೋಪಾಸ್ಯತ್ವಂ ವಿದ್ಯಾವಿಕಲ್ಪಶ್ಚೋಕ್ತಃ 'ಯುಕ್ತಂ ತದ್ಗುಣಕೋಪಾಸನಾತ್' (ವಾ.) ಇತಿ । ಭಾಷ್ಯಕೃತಾ ವ್ಯಾಖ್ಯಾತಂ ಚ- 'ಯದ್ಯಪಿ ಸಚ್ಚಿತ್ತಃ' (ಬ್ರ. ಭಾ.) ಇತ್ಯಾದಿನಾ । 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ. ೩-೨-೯) ಇತ್ಯತ್ರಾಪಿ 'ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್'(ಮುಂ.೩-೨-೮), 'ನಿರಞ್ಜನಃ ಪರಮಂ ಸಾಮ್ಯಮುಪೈತಿ' (ಮುಂ. ೩-೧-೩), 'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ' (ಛಾಂ. ೮-೧೨-೩)- ಇತ್ಯಾದಿಭಿರೈಕಾರ್ಥ್ಯಾತ್ ಪ್ರಾಕೃತನಾಮರೂಪಾಭ್ಯಾಂ ವಿನಿರ್ಮುಕ್ತಸ್ಯ ನಿರಸ್ತತತ್ಕೃತಭೇದಸ್ಯ ಜ್ಞಾನೈಕಾಕಾರತಯಾ ಬ್ರಹ್ಮಪ್ರಕಾರತಾ ಉಚ್ಯತೇ । ಪ್ರಕಾರೈಕ್ಯೇ ಚ ತತ್ತ್ವವ್ಯವಹಾರೋ ಮುಖ್ಯ ಏವ । ಯಥಾ 'ಸೋಽಯಂ ಗೌಃ' ಇತಿ ॥

(ಅರ್ಥ)

ಪರವಿದ್ಯೆಗಳಲ್ಲೆಲ್ಲ ಸಗುಣಬ್ರಹ್ಮವೇ[1] ಉಪಾಸ್ಯವಾಗಿರುತ್ತದೆ ; ಅವುಗಳ ಫಲವೂ ಒಂದೇ ರೂಪವುಳ್ಳದ್ದು.[2] ಆದ್ದರಿಂದ ವಿದ್ಯೆಗಳನ್ನು ವಿಕಲ್ಪದಿಂದ (ಮಾಡಬೇಕು)[3] ಎಂದು **ಸೂತ್ರಕಾರನೇ (ಆನನ್ದಾದಯಃ ಪ್ರಧಾನಸ್ಯ) ಆನಂದವೇ** ಮುಂತಾದ ಗುಣಗಳು ಗುಣಿಯಾದ ಬ್ರಹ್ಮಕ್ಕಿಂತ ಅಪೃಥಗ್ಭಾವದಿಂದಿರುವದರಿಂದ 'ಅವನ್ನು ಎಲ್ಲಾ ಉಪಾಸನೆಗಳಲ್ಲಿಯೂ ಉಪಸಂಹಾರಮಾಡಿಕೊಳ್ಳಬೇಕು' (ಸೂ. ೩-೩-೧೧), **(ವಿಕಲ್ಪೋಽವಿಶಿಷ್ಟಫಲತ್ವಾತ್)** ಬ್ರಹ್ಮಾನಂದಾನುಭವವೆಂಬ ಸಮಾನಫಲವೇ ಎಲ್ಲಕ್ಕೂ ಇರುವದರಿಂದ ಉಪಾಸನೆಗಳನ್ನು ವಿಕಲ್ಪದಿಂದಲೇ ಮಾಡತಕ್ಕದ್ದು (ಸೂ. ೩-೩-೫೭) ಮುಂತಾದ ಸೂತ್ರಗಳಲ್ಲಿ ಹೇಳಿರುತ್ತಾನೆ. **ವಾಕ್ಯಕಾರನೂ** 'ಸಗುಣವನ್ನೇ ಉಪಾಸನೆಮಾಡಬೇಕೆಂದೂ ಉಪಾಸನೆಗಳನ್ನು ವಿಕಲ್ಪದಿಂದಲೇ ಮಾಡಬೇಕೆಂದೂ ಆ ಗುಣವುಳ್ಳ ಬ್ರಹ್ಮವನ್ನು ಉಪಾಸನೆಮಾಡುವದು ಯುಕ್ತವು' (ವಾ.) ಎಂಬ ವಾಕ್ಯದಿಂದ ಹೇಳಿರುತ್ತಾನೆ. **ಭಾಷ್ಯಕಾರನು** (ಅದನ್ನು) 'ಯದ್ಯಪಿ ಸಚ್ಚಿತ್ತಃ' (ಸದ್ವಿದ್ಯಾನಿಷ್ಠನಾಗಿದ್ದರೂ) ಎಂದು (ಹೀಗೆಯೇ) ವ್ಯಾಖ್ಯಾನಮಾಡಿರುತ್ತಾನೆ. (ಬ್ರಹ್ಮ ವೇದ ಬ್ರಹ್ಮೈವ

1. **ನಿರ್ಗುಣೋಪಾಸ್ತಿಯನ್ನಾಗಲಿ ಜ್ಞಾನವನ್ನಾಗಲಿ ಎಲ್ಲಿಯೂ ಹೇಳಿಲ್ಲ-ಎಂದರ್ಥ.**
2. **ಬ್ರಹ್ಮಸಾಮ್ಯ, ಬ್ರಹ್ಮಾನುಭವ- ಎಂಬುದು ಎಲ್ಲಾ ವಿದ್ಯೆಗಳಿಗೂ ಸಮಾನ.**
3. **ಎರಡುಮೂರನ್ನು ಸೇರಿಸಿಕೊಂಡು ಮಾಡಬೇಕಾದದ್ದಿಲ್ಲ ; ಒಂದೊಂದೇ ಸಾಕು.**

ಭವತಿ) ಬ್ರಹ್ಮವನ್ನು ಅರಿತುಕೊಂಡರೆ ಬ್ರಹ್ಮವೇ ಆಗುತ್ತಾನೆ' (ಮುಂ. ೩-೨-೯) ಎಂಬೀ ವಾಕ್ಯದಲ್ಲಿಯೂ 'ನಾಮರೂಪದಿಂದ ವಿಮುಕ್ತನಾಗಿ ಪರಕ್ಕಿಂತಲೂ ಪರನಾದ ದಿವ್ಯಪುರುಷನನ್ನು ಸೇರುತ್ತಾನೆ' (ಮುಂ. ೩-೨-೮), 'ನಿರಂಜನನಾಗಿ ಪರಮಸಾಮ್ಯವನ್ನು ಹೊಂದುತ್ತಾನೆ' (ಮುಂ. ೩-೧-೩), 'ಹೆಚ್ಚಿನ ಜ್ಯೋತಿಯನ್ನು ಸೇರಿ ತನ್ನ ರೂಪದಿಂದ ಕೂಡಿದವನಾಗುತ್ತಾನೆ' (ಛಾಂ. ೮-೧೨-೩)-ಮುಂತಾದ (ಶ್ರುತಿಗಳಿಗೆ) ಹೊಂದುಗಡೆಯಾದ ಅರ್ಥವು ಬರುವದಕ್ಕಾಗಿ ಪ್ರಾಕೃತ ನಾಮರೂಪಗಳಿಂದ ವಿಮುಕ್ತನಾಗಿ ಅವುಗಳಿಂದಾಗಿರುವ ಭೇದವನ್ನು ತೊಲಗಿಸಿಕೊಂಡ ಜೀವನಿಗೆ ಜ್ಞಾನೈಕಾಕಾರದಿಂದ ಬ್ರಹ್ಮಪ್ರಕಾರತ್ವವುಂಟಾಗುವದೆಂದು ಹೇಳಿರುತ್ತದೆ. **ಪ್ರಕಾರೈಕ್ಯವಿರುವಲ್ಲಿ- 'ಅದೇ ಈ ಹಸು' ಎಂಬಂತೆ- ಅದೇ (ಪದಾರ್ಥವೆಂದು) ವ್ಯವಹರಿಸುವದು ಮುಖ್ಯ(ವ್ಯವಹಾರವೇ) ಆಗಿರುತ್ತದೆ.**[1]

(ಮೂಲ)

ಅತ್ರಾಪಿ-"ವಿಜ್ಞಾನಂ ಪ್ರಾಪಕಂ ಪ್ರಾಪ್ಯೇ ಪರೇ ಬ್ರಹ್ಮಣಿ ಪಾರ್ಥಿವ | ಪ್ರಾಪಣೀಯಸ್ತಥೈವಾಽತ್ಮಾ ಪ್ರಕ್ಷೀಣಾಶೇಷಭಾವನಃ |" (ವಿ. ಪು. ೬-೭-೯೩) ಇತಿ | ಪರಬ್ರಹ್ಮಧ್ಯಾನಾದಾತ್ಮಾ ಪರಬ್ರಹ್ಮವತ್ ಪ್ರಕ್ಷೀಣಾಶೇಷಭಾವನಃ-ಕರ್ಮಭಾವನಾ, ಬ್ರಹ್ಮಭಾವನಾ, ಉಭಯಭಾವನಾ ಇತಿ-ಭಾವನಾತ್ರಯಾರಹಿತಃ -ಪ್ರಾಪಣೀಯ ಇತ್ಯಭಿಧಾಯ 'ಕ್ಷೇತ್ರಜ್ಞಃ ಕರಣೀ ಜ್ಞಾನಂ ಕರಣಂ ತಸ್ಯ ವೈ ದ್ವಿಜ | ನಿಷ್ಪಾದ್ಯ ಮುಕ್ತಿಕಾರ್ಯಂ ಹಿ ಕೃತಕೃತ್ಯಂ ನಿವರ್ತಯೇತ್'[2] (ವಿ. ಪು. ೬-೭-೯೪), ಇತಿ ಕರಣಸ್ಯ ಪರಬ್ರಹ್ಮಧ್ಯಾನರೂಪಸ್ಯ ಪ್ರಕ್ಷೀಣಾಶೇಷಭಾವನಾತ್ಮಸ್ವರೂಪಪ್ರಾಪ್ತ್ಯಾ ಕೃತಕೃತ್ಯತ್ವೇನ ನಿವೃತ್ತಿವಚನಾತ್ ಯಾವತ್ಸಿದ್ಧ್ಯನುಷ್ಠೇಯಮ್ ಇತ್ಯುಕ್ತ್ವಾ 'ತದ್ಭಾವಭಾವಮಾಪನ್ನಸ್ತದಾಸೌ ಪರಮಾತ್ಮನಾ | ಭವತ್ಯಭೇದೀ ಭೇದಶ್ಚ ತಸ್ಯಾಜ್ಞಾನಕೃತೋ ಭವೇತ್' (ವಿ. ಪು. ೬-೭-೯೫) ಇತಿ ಮುಕ್ತಸ್ಯ ಸ್ವರೂಪಮಾಹ | ತದ್ಭಾವಃ ಬ್ರಹ್ಮಣೋ ಭಾವಃ ಸ್ವಭಾವಃ ; ನ ತು ಸ್ವರೂಪೈಕ್ಯಮ್ 'ತದ್ಭಾವಭಾವಮಾಪನ್ನಃ' ಇತಿ ದ್ವಿತೀಯಭಾವಶಬ್ದಾನನ್ವಯಾತ್, ಪೂರ್ವೋಕ್ತಾರ್ಥವಿರೋಧಾಚ್ಚ | ಯದ್ ಬ್ರಹ್ಮಣಃ ಪ್ರಕ್ಷೀಣಾಶೇಷಭಾವನತ್ವಂ, ತದಾಪತ್ತಿಸ್ತದ್ಭಾವಭಾವಾಪತ್ತಿಃ | ಯದಾ ಏವಮಾಪನ್ನಃ ತದಾ ಅಸೌ ಪರಮಾತ್ಮನಾ ಅಭೇದೀ ಭವತಿ – ಭೇದರಹಿತೋ ಭವತಿ ; ಜ್ಞಾನೈಕಾಕಾರತಯಾ ಪರಮಾತ್ಮನಾ ಏಕಪ್ರಕಾರಸ್ಯಾಸ್ಯ ತಸ್ಮಾದ್ ಭೇದೋ ದೇವಾದಿ

---

1. 'ಅದೇ ಈ ಹಸು' ಎಂಬಲ್ಲಿ ಗೋತ್ವವೆಂಬ ಪ್ರಕಾರವು ಒಂದೇ ಆಗಿರುವದರಿಂದ ಹಸುವು ಅದೇ ಎಂದಿರುತ್ತದೆ. ಹೀಗೆ ಜ್ಞಾನಾಕಾರಪ್ರಕಾರವು ಒಂದೇ ಆಗಿರುವದರಿಂದ ಪ್ರಕಾರಿಯಾದ ಆತ್ಮನನ್ನು ಒಬ್ಬನೇ ಎಂದು ವ್ಯವಹರಿಸುವದು ಗೌಣವಲ್ಲ ಎಂದಭಿಪ್ರಾಯ.

2. 'ಕರಣಂ ತಸ್ಯ ತೇನ ತತ್ |....ಕೃತಕೃತ್ಯೋ ನಿವರ್ತತೇ' ಎಂದು ಮುದ್ರಿತ ವಿ. ಪು.ದಲ್ಲಿರುವ ಪಾಠ.

ರೂಪಃ । ತದನ್ವಯೋಽಸ್ಯ ಕರ್ಮರೂಪಾಜ್ಞಾನಮೂಲಃ, ನ ಸ್ವರೂಪಕೃತಃ । ಸ ತು ದೇವಾದಿಭೇದಃ, ಪರಬ್ರಹ್ಮಧ್ಯಾನೇನ ಮೂಲಭೂತಾಜ್ಞಾನರೂಪೇ ಕರ್ಮಣಿ ವಿನಷ್ಟೇ ಹೇತ್ವಭಾವಾತ್ ನಿವರ್ತತ ಇತ್ಯಭೇದೀ ಭವತಿ । ಯಥೋಕ್ತಮ್- 'ಏಕಸ್ವರೂಪಭೇದಸ್ತು[1] ಬಾಹ್ಯಕರ್ಮಪ್ರವೃತ್ತಿಜಃ । ದೇವಾದಿಭೇದೇಽಪಧ್ವಸ್ತೇ ನಾಸ್ತ್ಯೇವಾವರಣೋ ಹಿ ಸಃ' (ವಿ. ಪು. ೨-೧೪-೩೩) ಇತಿ ॥

ಏತದೇವ ವಿವೃಣೋತಿ- 'ವಿಭೇದಜನಕೇಽಜ್ಞಾನೇ ನಾಶಮಾತ್ಯನ್ತಿಕಂ ಗತೇ । ಆತ್ಮನೋ ಬ್ರಹ್ಮಣೋ ಭೇದಮಸನ್ತಂ ಕಃ ಕರಿಷ್ಯತಿ' (ವಿ. ಪು. ೬-೭-೯೬) ಇತಿ । ವಿಭೇದಃ - ವಿವಿಧೋ ಭೇದಃ, ದೇವತಿರ್ಯಙ್ಮನುಷ್ಯಸ್ಥಾವರಾತ್ಮಕಃ । ಯಥೋಕ್ತಂ-ಶೌನಕೇನಾಪಿ- 'ಚತುರ್ವಿಧೋಽಪಿ ಭೇದೋಽಯಂ ಮಿಥ್ಯಾಜ್ಞಾನ ನಿಬನ್ಧನಃ' (ವಿ. ಧ. ೧೦೦-೨೧) ಇತಿ । ಆತ್ಮನಿ ಜ್ಞಾನರೂಪೇ ದೇವಾದಿರೂಪ ವಿವಿಧಹೇತುಭೂತಕರ್ಮಾಖ್ಯಾಜ್ಞಾನೇ ಪರಬ್ರಹ್ಮಧ್ಯಾನೇನ ಆತ್ಯನ್ತಿಕನಾಶಂ ಗತೇ ಸತಿ ಹೇತ್ವಭಾವಾತ್ ಅಸನ್ತಂ ಪರಸ್ಮಾದ್ ಬ್ರಹ್ಮಣ ಆತ್ಮನೋ ದೇವಾದಿ ರೂಪಭೇದಂ ಕಃ ಕರಿಷ್ಯತಿ ?- ಇತ್ಯರ್ಥಃ । 'ಅವಿದ್ಯಾ ಕರ್ಮಸಂಜ್ಞಾಽನ್ಯಾ' (ವಿ. ಪು. ೬-೭-೬೧) ಇತಿ ಹಿ ಅತ್ರೈವೋಕ್ತಮ್ ॥

(ಅರ್ಥ)

ಈ ಪುರಾಣದಲ್ಲಿಯೂ 'ಎಲೈ ರಾಜನೆ, ಪ್ರಾಪ್ಯವಾದ ಪರಬ್ರಹ್ಮದ ವಿಷಯದಲ್ಲಿ ವಿಜ್ಞಾನವು ಪ್ರಾಪಕವು, ಎಲ್ಲಾ ಭಾವನೆಗಳನ್ನೂ ಸವೆಯಿಸಿಕೊಂಡ ಆತ್ಮನು ಪ್ರಾಪಣೀಯನು' (ವಿ.ಪು.೬-೭-೯೩) ಎಂದು ಹೇಳಿರುತ್ತದೆ. ಪರಬ್ರಹ್ಮದ ಭಾವನೆಯಿಂದ ಆತ್ಮನು ಪರಬ್ರಹ್ಮದಂತೆ ಎಲ್ಲಾ ಭಾವನೆಗಳನ್ನೂ ಸವೆಯಿಸಿ ಕೊಂಡು, ಕರ್ಮಭಾವನೆ, ಬ್ರಹ್ಮಭಾವನೆ, ಈ ಎರಡೂ ವಿಧವಾದ ಭಾವನೆ ಎಂಬ- ಭಾವನಾತ್ರಯರಹಿತನಾಗಿರುವ (ಆತ್ಮನು) ಪ್ರಾಪಣೀಯನು ಎಂದು ಶ್ಲೋಕದ ಅಭಿಪ್ರಾಯವನ್ನು ಹೇಳಿ 'ಎಲೈ ದ್ವಿಜನೆ, (ಕ್ಷೇತ್ರಜ್ಞನು) ಕರಣವುಳ್ಳ ವನು, ಅವನಿಗೆ ಜ್ಞಾನವೇ ಕರಣವು ; ಅದು (ಮುಕ್ತಿ) (ಎಂಬ) ಕಾರ್ಯವನ್ನು ಉಂಟುಮಾಡಿ ಕೃತಕೃತ್ಯವಾದಮೇಲೆ (ಅದನ್ನು) ಬಿಡಬೇಕು'[2] (ವಿ. ಪು. ೬- ೭-೯೪) ಎಂದು ಪರಬ್ರಹ್ಮಧ್ಯಾನರೂಪವಾದ ಕರಣಕ್ಕೆ ಎಲ್ಲಾ ಭಾವನೆಗಳೂ ಸವೆದು (ಆತ್ಮನು) ಸ್ವರೂಪವನ್ನು ಪಡೆದದ್ದರಿಂದ ನಿವೃತ್ತಿಯನ್ನು ಹೇಳಿರು ವದರಿಂದ ಸಿದ್ಧಿಯಾಗುವವರೆಗೂ (ಅದನ್ನು) ಮಾಡತಕ್ಕದ್ದು ಎಂದು ಹೇಳಿ,

---

1. 'ಏಕತ್ವರೂಪ' ಪಾ॥

2. 'ನಿವರ್ತಯೇತ್'-ಎಂಬುದಕ್ಕೆ ಪ್ರೇರಣಾರ್ಥವಾದರೆ ಹೀಗೆ ಅರ್ಥ; ಣಿಜರ್ಥವು ಅವಿವಕ್ಷಿತವಾದರೆ ತೊಲಗುವದು- ಎಂದರ್ಥ. ಮುಕ್ತಿಯಾಗುವವರೆಗೆ ಉಪಾಸನೆಯ ಅನುಷ್ಠಾನ -ಎಂಬರ್ಥವು ಇದರಿಂದ ಹೊರಡುತ್ತದೆ.

'ತದ್ಭಾವಭಾವವನ್ನು ಪಡೆದುಕೊಂಡ ಅವನು ಆಗ ಪರಮಾತ್ಮನೊಡನೆ 'ಅಭೇದಿಯಾಗುತ್ತಾನೆ, ಅವನಿಗೆ (ಇರುವ ಭೇದವು) ಅಜ್ಞಾನಕೃತವಾಗಿರುವದು' (ವಿ.ಪು. ೬-೭-೯೫) ಎಂಬ (ಶ್ಲೋಕದಿಂದ) ಮುಕ್ತನ ಸ್ವರೂಪವನ್ನು ಹೇಳಿರುತ್ತಾನೆ. (ಇಲ್ಲಿ) ತದ್ಭಾವ- ಎಂದರೆ ಬ್ರಹ್ಮದ ಭಾವವು, ಸ್ವಭಾವವು ಎಂದರ್ಥವೇ ಹೊರತು ಸ್ವರೂಪೈಕ್ಯವಲ್ಲ ; ಏಕೆಂದರೆ (ಹಾಗಿದ್ದರೆ) 'ತದ್ಭಾವಭಾವಾಪನ್ನಃ'[1] ಎಂಬಲ್ಲಿ ಎರಡನೆಯ ಭಾವಶಬ್ದಕ್ಕೆ ಅನ್ವಯವಾಗುವದಿಲ್ಲ ; ಹಿಂದೆ ಹೇಳಿರುವ ಅರ್ಥಕ್ಕೆ[2] ವಿರೋಧವೂ ಆಗುವದು.

ಬ್ರಹ್ಮಕ್ಕೆ ಯಾವ ಭಾವನೆಯೂ ಇರುವದಿಲ್ಲವಷ್ಟೆ ? ಅದನ್ನು ಪಡೆದುಕೊಳ್ಳುವದೇ ತದ್ಭಾವಭಾವಾಪತ್ತಿ.[3] ಯಾವಾಗ ಹೀಗಾಗುವನೋ ಆಗ ಅವನು ಪರಮಾತ್ಮನೊಡನೆ ಅಭೇದಿಯಾಗುವನು, ಭೇದವಿಲ್ಲದವನಾಗುವನು. ಜ್ಞಾನವೆಂಬುದೊಂದೇ (ಇವನ ಆಕಾರವಾದ್ದರಿಂದ ಪರಮಾತ್ಮನಿಗೆ ಸಮಾನವಾದ ಪ್ರಕಾರವುಳ್ಳ ಅವರಿಗೆ, ಅದರಿಂದ ಭೇದವು, ಎಂದರೆ ದೇವಾದಿರೂಪವು; (ಭೇದವು ಇವನಿಗೆ ಸಂಬದ್ಧವಾಗಿರುವದಕ್ಕೆ) ಕರ್ಮರೂಪವಾದ ಅಜ್ಞಾನವೇ ಕಾರಣವೇ ಹೊರತು, ಅದು ಸ್ವರೂಪದಿಂದಾಗಿರುವದಲ್ಲ. ಆ ದೇವಾದಿಭೇದವು-ಪರಬ್ರಹ್ಮಧ್ಯಾನದಿಂದ ಮೂಲಭೂತವಾದ ಅಜ್ಞಾನರೂಪವಾದ ಕರ್ಮವು ನಷ್ಟವಾಗಲಾಗಿ-ಕಾರಣವಿಲ್ಲದ್ದರಿಂದ ತೊಲಗುವದು. ಆದ್ದರಿಂದ ಅಭೇದಿಯಾಗುವನು. ಹಾಗೆಂದು 'ಒಂದೇ ರೂಪದಿಂದ ಬೇರೆಯಾಗಿರುವದು ಬಾಹ್ಯಕರ್ಮದ ಆವರಣದಿಂದ ಹುಟ್ಟಿದ್ದು, ದೇವತೆಯೇ ಮುಂತಾದ ಭೇದವು ನಷ್ಟವಾಗಲಾಗಿ ಆ ಆವರಣವು ಇರುವದೇ ಇಲ್ಲವಷ್ಟೆ ?' (ವಿ. ಪು. ೨-೧೪-೩೩) ಎಂಬಲ್ಲಿ ಹೇಳಿರುತ್ತದೆ. ಇದನ್ನೇ-

**ವಿಭೇದಜನಕೇಽಜ್ಞಾನೇ ನಾಶಮಾತ್ಯನ್ತಿಕಂ ಗತೇ ।**
**ಆತ್ಮನೋ ಬ್ರಹ್ಮಣೋ ಭೇದಮಸನ್ತಂ ಕಃ ಕರಿಷ್ಯತಿ ॥**

ವಿ. ಪು. ೬-೭-೯೬

ಎಂಬ ಈ ಶ್ಲೋಕದಲ್ಲಿ ವಿವರಿಸಿರುತ್ತದೆ. ಇಲ್ಲಿ 'ವಿಭೇದ' ಎಂದರೆ ವಿವಿಧವಾದ ಭೇದವು; ದೇವತೆ, ತಿರ್ಯಕ್ಪ್ರಾಣಿ, ಮನುಷ್ಯ, ಸ್ಥಾವರ, ಎಂಬ ರೂಪದ ಭೇದವು; ಹೀಗೆಂದು **ಶೌನಕನೂ** 'ನಾಲ್ಕು ವಿಧವಾದ ಈ ಭೇದವು ಮಿಥ್ಯಾಜ್ಞಾನದಿಂದ ಆಗಿರುತ್ತದೆ' (ವಿ. ಧ. ೧೦೦-೨೧) ಎಂದು ಹೇಳಿರುತ್ತಾನೆ. ಜ್ಞಾನರೂಪನಾದ ಆತ್ಮನಲ್ಲಿ ದೇವಾದಿರೂಪವಾದ ವಿವಿಧಭೇದಕ್ಕೆ ಕಾರಣವಾಗಿರುವ ಕರ್ಮವೆಂಬ

1. 'ತದ್ಭಾವ' ಎಂಬುದು 'ಉಪಮಾನಬಹುವ್ರೀಹಿ'. ಶ್ರು. ಪ್ರ. ಪರಿಶಿಷ್ಟವನ್ನು ನೋಡಿ.
2. 'ಜ್ಞಾನಾಕಾರೈಕ್ಯ'ವೆಂಬರ್ಥಕ್ಕೆ.
3. ಈ ಶ್ಲೋಕದ ಅರ್ಥವನ್ನು ನಿರ್ಣಯಿಸುವದಕ್ಕೇ ಈವರೆಗಿನ ವಿಚಾರ.

ಅಜ್ಞಾನವು ಪರಬ್ರಹ್ಮಧ್ಯಾನದಿಂದ ಆತ್ಯಂತಿಕವಾಗಿ ನಾಶವಾಗಲಾಗಿ ಕಾರಣ ವಿಲ್ಲದ್ದರಿಂದ ಪರಬ್ರಹ್ಮನಿಗಿಂತ ಆತ್ಮನು ದೇವಾದಿರೂಪದಿಂದ ಭಿನ್ನನಾಗಿರುವನೆಂಬ ಇಲ್ಲದೆ ಇರುವ (ಭೇದವನ್ನು) ಯಾವನುತಾನೆ ಮಾಡಿಯಾನು ? 'ಕರ್ಮವೆಂಬ ಹೆಸರಿನ ಅವಿದ್ಯೆ ಮತ್ತೊಂದು' (ವಿ. ಪು. ೬-೭-೬೧) ಎಂದು ಇಲ್ಲಿಯೇ ಹೇಳಿದೆಯಷ್ಟೆ ?

(ಮೂಲ)

'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' (ಗೀ. ೧೩-೨) ಇತ್ಯಾದಿನಾ ಅನ್ತರ್ಯಾಮಿ ರೂಪೇಣ ಸರ್ವಸ್ಯಾऽऽತ್ಮತಯಾ ಐಕ್ಯಾಭಿಧಾನಮ್ । ಅನ್ಯಥಾ 'ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋऽಕ್ಷರ ಉಚ್ಯತೇ । ಉತ್ತಮಃ ಪುರುಷಸ್ತ್ವನ್ಯಃ' (ಗೀ. ೧೫-೧೬, ೧೭) ಇತ್ಯಾದಿಭಿರ್ವಿರೋಧಃ । ಅನ್ತರ್ಯಾಮಿರೂಪೇಣ ಸರ್ವೇಷಾ ಮಾತ್ಮತ್ವಂ ತತ್ರೈವ ಭಗವತಾ ಅಭಿಹಿತಮ್ 'ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ ।' (ಗೀ. ೧೮-೬೧), 'ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟಃ' (೧೫-೧೫), ಇತಿ ಚ । 'ಅಹಮಾತ್ಮಾ ಗುಡಾಕೇಶ ಸರ್ವಭೂತಾ ಶಯಸ್ಥಿತಃ' (ಗೀ. ೧೦-೨೦) ಇತಿ ಚ ತದೇವೋಚ್ಯತೇ । ಭೂತಶಬ್ದೋ ಹಿ ಆತ್ಮಪರ್ಯನ್ತದೇಹವಚನಃ । ಯತಃ ಸರ್ವೇಷಾಮಯಮಾತ್ಮಾ, ತತ ಏವ ಸರ್ವೇಷಾಂ ತಚ್ಛರೀರತಯಾ ಪೃಥಗವಸ್ಥಾನಂ ಪ್ರತಿಷಿಧ್ಯತೇ 'ನ ತದಸ್ತಿ ವಿನಾ ಯತ್ ಸ್ಯಾತ್' (ಗೀ. ೧೦-೩೯) ಇತಿ । ಭಗವದ್ವಿಭೂತ್ಯುಪಸಂಹಾರ ಶ್ಚಾಯಮ್ ಇತಿ ತಥೈವಾಭ್ಯುಪಗನ್ತವ್ಯಮ್ । ತತ ಇದಮುಚ್ಯತೇ 'ಯದ್ಯದ್ ವಿಭೂತಿಮತ್ ಸತ್ತ್ವಂ ಶ್ರೀಮದೂರ್ಜಿತಮೇವ ವಾ । ತತ್ತದೇವಾವಗಚ್ಛ ತ್ವಂ ಮಮ ತೇಜೋಂऽಶಸಂಭವಮ್' (ಗೀ. ೧೦-೪೧), 'ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್' (ಗೀ. ೧೦-೪೨) ಇತಿ ॥

(ಅರ್ಥ)

'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' (ಗೀ. ೧೩-೨) 'ಕ್ಷೇತ್ರಜ್ಞನನ್ನು ನಾನೆಂದೇ ತಿಳಿ' ಮುಂತಾದ ವಾಕ್ಯದಿಂದ ಅಂತರ್ಯಾಮಿರೂಪದಿಂದ ಎಲ್ಲಕ್ಕೂ ಆತ್ಮನಾಗಿರು ವದರಿಂದ ಐಕ್ಯವನ್ನು ಹೇಳಿರುತ್ತದೆ. ಹೀಗಲ್ಲದಿದ್ದರೆ 'ಸರ್ವಭೂತಗಳೂ ಕ್ಷರವು, ಕೂಟಸ್ಥವು[1] ಅಕ್ಷರವೆನಿಸುವದು ; ಉತ್ತಮಪುರುಷನಾದರೋ, (ಇವೆರಡಕ್ಕಿಂತ) ಬೇರೆ' (ಗೀ. ೧೫-೧೬, ೧೭) ಮುಂತಾದ (ವಾಕ್ಯಗಳಿಗೆ) ವಿರೋಧವಾಗುವದು. ಅಂತರ್ಯಾಮಿಯು ರೂಪದಿಂದ ಎಲ್ಲರಿಗೂ ಆತ್ಮನಾಗಿರುವನೆಂಬುದು ಅಲ್ಲಿಯೇ ಭಗವಂತನಿಂದ 'ಅರ್ಜುನನೆ, ಈಶ್ವರನು ಸರ್ವಭೂತಗಳ ಹೃತ್ಪ್ರದೇಶದಲ್ಲಿ ಇರು

---

1. ಕ್ಷರ, ಅಕ್ಷರ– ಇವಕ್ಕಿಂತ ಪುರುಷೋತ್ತಮನು ಬೇರೆ ಎಂಬ ನಿಮ್ಮ ಅರ್ಥಕ್ಕೇ ವಿರುದ್ಧವಾಗುವದು ; ಆದ್ದರಿಂದ ಕ್ಷೇತ್ರಜ್ಞರಿಗೆಲ್ಲ ಅಂತರ್ಯಾಮಿ ಒಬ್ಬನೇ ಎಂದೇ ಅರ್ಥ.

ತ್ಮಾನೆ' (ಗೀ. ೧೮-೬೧), 'ಪ್ರತಿಯೊಬ್ಬನ ಹೃದಯದಲ್ಲಿಯೂ ನಾನು ಇರುವೆನು' (ಗೀ. ೧೫-೧೫) ಎಂದೂ ಉಕ್ತವಾಗಿರುತ್ತದೆ. 'ಎಲೈ ಗುಡಾಕೇಶನೆ, ಸರ್ವ ಭೂತಗಳ ಆಶಯದಲ್ಲಿರುವ ಆತ್ಮನು ನಾನೇ' (ಗೀ. ೧೦-೨೦) ಎಂದು ಹೇಳಿರುವದೂ ಅದನ್ನೇ. ಏಕೆಂದರೆ ಭೂತಶಬ್ದವು ಆತ್ಮಪರ್ಯಂತವಾಗಿರುವ ದೇಹವನ್ನು ಹೇಳುತ್ತದೆ. ಇವನು ಎಲ್ಲರಿಗೂ ಆತ್ಮನಾಗಿರುವನಷ್ಟೆ ? ಆದ್ದರಿಂದಲೇ 'ನಾನಿಲ್ಲದೆ ಬೇರೆಯಾಗಿರುವದು ಯಾವದೂ ಇಲ್ಲ' ಎಂದು (ಗೀ. ೧೦-೩೯) ಎಲ್ಲರೂ ಆತನ ಶರೀರವಾಗಿರುವದರಿಂದ (ಅವನಿಗಿಂತ) ಬೇರೆಯಾಗಿದಾರೆಂಬುದನ್ನು ಅಲ್ಲಗಳೆದಿದೆ. ಇದು ಭಗವಂತನ ವಿಭೂತಿಗಳ ಉಪಸಂಹಾರವಾಗಿದೆಯಾದ್ದರಿಂದಲೂ ಹಾಗೆಂದೇ ಅಂಗೀಕರಿಸಬೇಕು. ಆದ್ದರಿಂದ 'ಯಾವಯಾವದು ವಿಭೂತಿಮಂತವಾಗಿರುವದೋ, ಶ್ರೀಮಂತವಾಗಿರುವದೋ, ಊರ್ಜಿತವಾಗಿರುವದೋ, ಅದದನ್ನೇ ನನ್ನ ತೇಜಸ್ಸಿನ ಅಂಶದಿಂದ ಹುಟ್ಟಿರುವದೆಂದು ತಿಳಿ' (ಗೀ. ೧೦-೪೧) 'ನಾನು ಈ ಇಡಿಯ ಜಗತ್ತನ್ನು ಒಂದಂಶದಿಂದ ಎತ್ತಿಹಿಡಿದು ಇರುತ್ತೇನೆ' (ಗೀ. ೧೦-೪೨)- ಎಂದು ಹೇಳಿರುತ್ತದೆ.

## ಶಾಸ್ತ್ರವು ನಿರ್ವಿಶೇಷಪರವಲ್ಲವೆಂಬುದರ ಉಪಸಂಹಾರ

(ಮೂಲ)

೧೩. ಅತಃ ಶಾಸ್ತ್ರೇಷು ನ ನಿರ್ವಿಶೇಷವಸ್ತುಪ್ರತಿಪಾದನಮಸ್ತಿ, ನಾಪ್ಯರ್ಥಜಾತಸ್ಯ ಭ್ರಾನ್ತತ್ವಪ್ರತಿಪಾದನಮ್ । ನಾಪಿ ಚಿದಚಿದೀಶ್ವರಾಣಾಂ ಸ್ವರೂಪಭೇದನಿಷೇಧಃ ॥

(ಅರ್ಥ)

ಆದ್ದರಿಂದ ಶಾಸ್ತ್ರಗಳಲ್ಲಿ ನಿರ್ವಿಶೇಷವಸ್ತುವಿನ ಪ್ರತಿಪಾದನೆಯಿರುವದಿಲ್ಲ ; ಪದಾರ್ಥಗಳಿಗೆ ಭ್ರಾಂತತ್ವವನ್ನು ಪ್ರತಿಪಾದಿಸಿರುವದೂ ಇಲ್ಲ ; ಚಿತ್ತು, ಅಚಿತ್ತು, ಈಶ್ವರ- ಇವರ ಸ್ವರೂಪಭೇದವನ್ನು ಅಲ್ಲಗಳೆದಿರುವದೂ ಇಲ್ಲ.[1]

---

1. ಪೂರ್ವಪಕ್ಷಿಯು ಶಾಸ್ತ್ರವು ನಿರ್ವಿಶೇಷವಾದ ಅದ್ವಿತೀಯಬ್ರಹ್ಮವನ್ನೇ ತಾತ್ಪರ್ಯದಿಂದ ತಿಳಿಸುತ್ತದೆ- ಎಂದು ಅಗ್ರಹವನ್ನು ತೊಟ್ಟಿರುತ್ತಾನೆ. ಆದರೆ ಅವನು ಉದಾಹರಿಸಿರುವ ನಿರ್ಗುಣವಾಕ್ಯಗಳು ಹೇಯಗುಣಗಳನ್ನು ಅಲ್ಲಗಳೆಯುತ್ತವೆಯೆಂದೂ ಸಕಲಕಲ್ಯಾಣಗುಣಗಣದಿಂದ ಕೂಡಿರುವ ಬ್ರಹ್ಮವನ್ನೇ ಶ್ರುತಿಸ್ಮೃತಿಪುರಾಣಗಳು ಪ್ರತಿಪಾದಿಸುತ್ತವೆಯೆಂದೂ ನಾವು ತೋರಿಸಿರುತ್ತೇವೆ. ಬ್ರಹ್ಮವು ಅದ್ವಿತೀಯವೆಂಬುದನ್ನು ಸಾಧಿಸುವದಕ್ಕಾಗಿ ಜೀವಬ್ರಹ್ಮರಿಗೆ ಐಕ್ಯವನ್ನೇ ಶಾಸ್ತ್ರಗಳು ಹೇಳುತ್ತವೆಯೆಂದೂ ಜೀವತ್ವವೂ ಅಚಿತ್ಪದಾರ್ಥಗಳೂ ಭ್ರಾಂತಿಸಿದ್ಧವೆಂದೂ ಅವನು ವಾಕ್ಯವ್ಯಾಖ್ಯಾನದಿಂದ ತೋರಿಸುವದಕ್ಕೆ ಪ್ರಯತ್ನಿಸಿರುತ್ತಾನೆ. ಇದೂ ತಪ್ಪೆಂದು ನಾವು ಸ್ಪಷ್ಟಗೊಳಿಸಿರುತ್ತೇವೆ- ಎಂದು ಅಭಿಪ್ರಾಯ.

# ಅವಿದ್ಯಾವಾದನಿರಾಸ

## (1) ಅವಿದ್ಯಾಶ್ರಯಾನುಪಪತ್ತಿ

(ಮೂಲ)

೧೪. ಯದಪ್ಯುಚ್ಯತೇ – ನಿರ್ವಿಶೇಷೇ ಸ್ವಯಂಪ್ರಕಾಶೇ ವಸ್ತುನಿ ದೋಷಪರಿಕಲ್ಪಿತಮ್ ಈಶೇಶಿತವ್ಯಾದ್ಯನನ್ತವಿಕಲ್ಪಂ ಸರ್ವಂ ಜಗತ್ | ದೋಷಶ್ಚ ಸ್ವರೂಪತಿರೋಧಾನವಿವಿಧವಿಚಿತ್ರವಿಕ್ಷೇಪಕರೀ ಸದಸದನಿರ್ವಚನೀಯಾ ಅನಾದ್ಯವಿದ್ಯಾ | ಸಾ ಚ ಅವಶ್ಯಾಭ್ಯುಪಗಮನೀಯಾ 'ಅನೃತೇನ ಹಿ ಪ್ರತ್ಯೂಢಾಃ' (ಛಾಂ. ೮-೩-೨) ಇತ್ಯಾದಿಭಿಃ ಶ್ರುತಿಭಿಃ ಬ್ರಹ್ಮಣಸ್ತತ್ತ್ವಮಸ್ಯಾದಿವಾಕ್ಯಸಾಮಾನಾಧಿಕರಣ್ಯಾವಗತಜೀವೈಕ್ಯಾನುಪಪತ್ತ್ಯಾ ಚ | ಸಾ ತು ನ ಸತೀ, ಭ್ರಾನ್ತಿಬಾಧಯೋರಯೋಗಾತ್ ; ನಾಪ್ಯಸತೀ, ಖ್ಯಾತಿಬಾಧಯೋಶ್ಚಾಯೋಗಾತ್ | ಅತಃ ಕೋಟಿದ್ವಯವಿನಿರ್ಮುಕ್ತೇಯಮವಿದ್ಯಾ ಇತಿ ತತ್ತ್ವವಿದಃ—ಇತಿ ||

ತದಯುಕ್ತಮ್ | ಸಾ ಹಿ ಕಿಮಾಶ್ರಿತ್ಯ ಭ್ರಮಂ ಜನಯತಿ ? ನ ತಾವತ್ ಜೀವಮಾಶ್ರಿತ್ಯ | ಅವಿದ್ಯಾಪರಿಕಲ್ಪಿತತ್ವಾತ್ ಜೀವಭಾವಸ್ಯ; ನಾಪಿ ಬ್ರಹ್ಮಾಶ್ರಿತ್ಯ, ತಸ್ಯ ಸ್ವಯಂಪ್ರಕಾಶಜ್ಞಾನಸ್ವರೂಪತ್ವೇನಾವಿದ್ಯಾವಿರೋಧಿತ್ವಾತ್ | ಸಾ ಹಿ ಜ್ಞಾನಬಾಧ್ಯಾ ಅಭಿಮತಾ ||

**ಜ್ಞಾನರೂಪಂ ಪರಂ ಬ್ರಹ್ಮ ತನ್ನಿವರ್ತ್ಯಂ ಮೃಷಾತ್ಮಕಮ್ |**
**ಅಜ್ಞಾನಂ ಚೇತ್ತಿರಸ್ಕುರ್ಯಾತ್ ಕಃ ಪ್ರಭುಸ್ತನ್ನಿವರ್ತನೇ || ೧ ||**

**ಜ್ಞಾನಂ ಬ್ರಹ್ಮೇತಿ ಚೇಜ್ಜ್ಞಾನಮಜ್ಞಾನಸ್ಯ ನಿವರ್ತಕಮ್ |**
**ಬ್ರಹ್ಮವತ್ತತ್ಪ್ರಕಾಶತ್ವಾತ್ತದಪಿ ಹ್ಯನಿವರ್ತಕಮ್ || ೨ ||**

**ಜ್ಞಾನಂ ಬ್ರಹ್ಮೇತಿ ವಿಜ್ಞಾನಮಸ್ತಿ ಚೇತ್ ಸ್ಯಾತ್ ಪ್ರಮೇಯತಾ |**
**ಬ್ರಹ್ಮಣೋಽನನುಭೂತಿತ್ವಂ ತ್ವದುಕ್ತ್ಯೈವ ಪ್ರಸಜ್ಯತೇ[1] || ೩ ||**

ಜ್ಞಾನಸ್ವರೂಪಂ ಬ್ರಹ್ಮೇತಿ ಜ್ಞಾನಂ ತಸ್ಯಾ ಅವಿದ್ಯಾಯಾ ಬಾಧಕಮ್, ನ ಸ್ವರೂಪಭೂತಂ ಜ್ಞಾನಮಿತಿ ಚೇತ್, ನ | ಉಭಯೋರಪಿ ಬ್ರಹ್ಮಸ್ವರೂಪಪ್ರಕಾಶತ್ವೇ ಸತಿ ಅನ್ಯತರಸ್ಯಾವಿದ್ಯಾವಿರೋಧಿತ್ವಮ್, ಅನ್ಯತರಸ್ಯ ನೇತಿ ವಿಶೇಷಾನವಗಮಾತ್ ||

---

1. ಇವು ನಾಥಮುನಿಕೃತವೆಂದು ಮ|| ಟಿಪ್ಪಣಿಯಲ್ಲಿದೆ.

(ಅರ್ಥ)

ಇನ್ನು (ಅದ್ವೈತಿಯು) ಹೀಗೆ ಹೇಳುತ್ತಾನೆ : 'ನಿರ್ವಿಶೇಷವಾದ ಸ್ವಯಂ ಪ್ರಕಾಶವಾದ (ಬ್ರಹ್ಮ)ವಸ್ತುವಿನಲ್ಲಿ **ದೋಷದಿಂದ**[1] ಈಶ, ಈಶಿತವ್ಯ-ಮುಂತಾದ ಅನಂತವಿಕಲ್ಪಗಳುಳ್ಳ ಎಲ್ಲಾ ಜಗತ್ತೂ, (ಬ್ರಹ್ಮದ) ಸ್ವರೂಪವನ್ನು ಮರೆಮಾಡಿ[2] ಬಗೆಬಗೆಯ **ವಿಕ್ಷೇಪ**ಗಳನ್ನು ಮಾಡುವ[3] **ಸದಸದನಿರ್ವಚನೀಯ**[4] ಅನಾದ್ಯವಿದ್ಯೆ. 'ಅನೃತದಿಂದ ಹೊರಕ್ಕೆ ಹಾಕಲ್ಪಟ್ಟಿರುವರಲ್ಲವೆ ?' (ಛಾಂ. ೮-೩-೨) ಮುಂತಾದ ಶ್ರುತಿಗಳಿಂದಲೂ[5] - 'ತತ್ತ್ವಮಸಿ' ಮುಂತಾದ ವಾಕ್ಯಗಳಿಂದಲೂ ಸಾಮಾನಾಧಿಕರಣ್ಯದಿಂದ ಗೊತ್ತಾಗುವ - ಬ್ರಹ್ಮವೂ ಜೀವವೂ ಒಂದೇ ಎಂಬುದು (ಬೇರೆಯ ರೀತಿಯಿಂದ) ಹೊಂದದೆ ಇರುವದರಿಂದಲೂ[6] ಅದನ್ನು ಅವಶ್ಯವಾಗಿ ಒಪ್ಪಬೇಕು. ಅದಾದರೊ ಸತ್ತಲ್ಲ, ಏಕೆಂದರೆ (ಹಾಗಿದ್ದರೆ) ಭ್ರಾಂತಿಬಾಧೆಗಳು ಹೊಂದುವದಿಲ್ಲ; ಅಸತ್ತೂ ಅಲ್ಲ, ಏಕೆಂದರೆ ಹಾಗಿದ್ದರೆ ಖ್ಯಾತಿಬಾಧೆಗಳು ಹೊಂದುವದಿಲ್ಲ.[7] ಆದ್ದರಿಂದ (ಈ) ಎರಡು ಕೋಟಿಗಳೂ ಇಲ್ಲದ್ದು ಈ ಅವಿದ್ಯೆ ಎಂದು ತತ್ತ್ವವನ್ನು ಬಲ್ಲವರು (ಒಪ್ಪಿರುತ್ತಾರೆ).

ಅದು ಸರಿಯಲ್ಲ. ಏಕೆಂದರೆ ಆ (ಅವಿದ್ಯೆ)ಯು ಏನನ್ನು ಆಶ್ರಯಿಸಿಕೊಂಡು[8] ಭ್ರಮೆಯನ್ನುಂಟುಮಾಡುತ್ತದೆ ? ಮೊದಲನೆಯದಾಗಿ ಜೀವನನ್ನು ಆಶ್ರಯಿಸಿ ಕೊಂಡು (ಭ್ರಾಂತಿಯನ್ನುಂಟುಮಾಡುತ್ತದೆ-ಎನ್ನಲಾಗದು); ಏಕೆಂದರೆ ಜೀವತ್ವವು ಅವಿದ್ಯಾಕಲ್ಪಿತವಾಗಿರುತ್ತದೆ. ಬ್ರಹ್ಮವನ್ನಾಶ್ರಯಿಸಿಯೂ ಅಲ್ಲ ; ಏಕೆಂದರೆ

---

1. ಅವಿದ್ಯಾದೋಷದಿಂದ ; ದೋಷದ ವಿಷಯಕ್ಕೆ ಹಿಂದೆ ೬೨ನೆಯ ಪುಟದಲ್ಲಿ ಬರೆದಿರುವ ಟಿಪ್ಪಣಿಯನ್ನು ನೋಡಿ. ಅವಿದ್ಯೆಯೇ ದೋಷವೆಂಬುದನ್ನು ಪಂಚಪಾದಿಕೆಯಲ್ಲಿ ಮೊದಲು ಹೇಳಿತ್ತು. ಅವಿದ್ಯಾವಾದವನ್ನು ಈಚಿನ ವ್ಯಾಖ್ಯಾನಕಾರರು ಬೆಳೆಯಿಸಿರುತ್ತಾರೆ.

2. ಇದೇ ಅವಿದ್ಯೆಯ ಆವರಣಶಕ್ತಿ ಎಂದು ಭಾವ.

3. ಇದು ಅವಿದ್ಯೆಯ ವಿಕ್ಷೇಪಶಕ್ತಿಯ ಫಲ.

4. ಇದು ಅವಿದ್ಯೆಯ ಸ್ವರೂಪ.

5. ಇದು ಅವಿದ್ಯೆಗೆ ಶ್ರುತಿಪ್ರಮಾಣ.

6. ಇದು ಅವಿದ್ಯೆಗೆ ಶ್ರುತ್ಯರ್ಥಾಪತ್ತಿಪ್ರಮಾಣ; ದೃಷ್ಟಾರ್ಥಾಪತ್ತಿಯನ್ನು-ದೋಷವಿಲ್ಲದೆ ಭ್ರಾಂತಿಯು ಜಗತ್ತು ತೋರಲಾರದು- ಎಂದು ಮೊದಲೇ ಹೇಳಿದೆ. ಇಷ್ಟು ಭಾಗವೂ ಪಂಚಪಾದಿಕೆಯಲ್ಲಿದೆ ; ಇಷ್ಟಸಿದ್ಧ್ಯಾದಿಗಳಲ್ಲಿ ವಿಸ್ತಾರವಾಗಿ ಚರ್ಚೆಮಾಡಿರುತ್ತದೆ. ಪರಿಶಿಷ್ಟವನ್ನು ನೋಡಿ.

7. ಈ ಯುಕ್ತಿಯು ಇಷ್ಟಸಿದ್ಧಿಯೇ ಮುಂತಾದವುಗಳಲ್ಲಿದೆ.

8. ಇಲ್ಲಿ ಹೇಳಿರುವ ಅವಿದ್ಯೆಗೆ ಆಶ್ರಯವಿಷಯಪ್ರಮಾಣಸ್ವರೂಪ - ಮುಂತಾದವುಗಳು ಯಾವವೂ ಹೊಂದುವದಿಲ್ಲವೆಂದು ಇಲ್ಲಿ ಯುಕ್ತಿಯಿಂದ ಪ್ರತಿಪಾದಿಸಿದೆ.

ಸ್ವಯಂಪ್ರಕಾಶಜ್ಞಾನಸ್ವರೂಪವಾಗಿರುವದರಿಂದ (ಅದು) ಅವಿದ್ಯೆಗೆ ವಿರುದ್ಧವಾಗಿರುತ್ತದೆ.[1] ಆ (ಅವಿದ್ಯೆಯು) ಜ್ಞಾನದಿಂದ ಬಾಧ್ಯವೆಂದಲ್ಲವೆ, (ನಿಮ್ಮ) ಮತಃ ?

(ಶ್ಲೋಕಗಳ ಭಾವಾರ್ಥ)

"ಜ್ಞಾನರೂಪವಾಗಿರುವ ಪರಬ್ರಹ್ಮವನ್ನು ಆ (ಜ್ಞಾನ)ದಿಂದ ಬಾಧ್ಯವಾಗಿರುವ ಮಿಥ್ಯಾರೂಪವಾದ ಅಜ್ಞಾನವು ಮುಸುಕಿಕೊಂಡಿರುವದಾದರೆ, ಅದನ್ನು ತೊಲಗಿಸುವದಕ್ಕೆ ಯಾರು(ತಾನೆ) ಶಕ್ತರಾದಾರು ? 'ಬ್ರಹ್ಮವು ಜ್ಞಾನ' ಎಂಬ ಜ್ಞಾನವೇ ಆ (ಅಜ್ಞಾನದ) ನಿವರ್ತಕವು- ಎನ್ನುವೆಯಾದರೆ ಬ್ರಹ್ಮದಂತೆಯೇ ಆ ಬ್ರಹ್ಮವನ್ನು ಪ್ರಕಾಶಮಾಡುವದಾದ್ದರಿಂದ ಆ ಜ್ಞಾನವೂ ನಿವರ್ತಕವಲ್ಲವೆಂದೇ (ಆಗುತ್ತದೆ). 'ಬ್ರಹ್ಮವು ಜ್ಞಾನರೂಪ' ಎಂಬ ವಿಜ್ಞಾನವು ಇದೆ ಎಂದರೆ, ಬ್ರಹ್ಮಕ್ಕೆ ಪ್ರಮೇಯತ್ವವೆಂದಾಗುವದು. (ಆಗ) ನಿನ್ನ ಮಾತಿನಿಂದಲೇ (ಅದು) ಅನುಭೂತಿಯಲ್ಲವೆಂಬ ಪ್ರಸಂಗವೂ (ಬರುತ್ತದೆ)."

'ಬ್ರಹ್ಮವು ಜ್ಞಾನಸ್ವರೂಪವು' ಎಂಬ ಜ್ಞಾನವೇ ಆ ಅವಿದ್ಯೆಗೆ ಬಾಧಕವೇ ಹೊರತು ಸ್ವರೂಪಜ್ಞಾನವು (ನಿವರ್ತಕ)ವಲ್ಲ ಎಂದರೆ ಎರಡೂ ಬ್ರಹ್ಮಸ್ವರೂಪ ಪ್ರಕಾಶಕವೇ ಆಗಿದ್ದರೂ ಇವೆರಡರಲ್ಲಿ ಒಂದು ಅವಿದ್ಯಾವಿರೋಧಿ, ಇನ್ನೊಂದು (ವಿರೋಧಿ)ಯಲ್ಲ- ಎಂದು ವಿಶೇಷವನ್ನು ಗೊತ್ತುಪಡಿಸುವದು ಆಗಲಾರದುಃ (ಎಂದರ್ಥ).

(ಮೂಲ)

ಏತದುಕ್ತಂ ಭವತಿ—'ಜ್ಞಾನಸ್ವರೂಪಂ ಬ್ರಹ್ಮ' ಇತ್ಯನೇನ ಜ್ಞಾನೇನ ಬ್ರಹ್ಮಣಿ ಯಃ ಸ್ವಭಾವೋಽವಗಮ್ಯತೇ, ಸ ಬ್ರಹ್ಮಣಃ ಸ್ವಯಂಪ್ರಕಾಶತ್ವೇನ ಸ್ವಯಮೇವ ಪ್ರಕಾಶತ ಇತಿ, ಅವಿದ್ಯಾವಿರೋಧಿತ್ವೇ ನ ಕಶ್ಚಿದ್ವಿಶೇಷಃ ಸ್ವರೂಪ ತದ್ವಿಷಯಜ್ಞಾನಯೋಃ ಇತಿ ॥

ಕಿಂ ಚ ಅನುಭವಸ್ವರೂಪಸ್ಯ ಬ್ರಹ್ಮಣಃ, ಅನುಭವಾನ್ತರಾನನುಭಾವ್ಯತ್ವೇನ ಭವತೋ ನ ತದ್ವಿಷಯಂ ಜ್ಞಾನಮಸ್ತಿ । ಅತೋ ಜ್ಞಾನಮಜ್ಞಾನವಿರೋಧಿ ಚೇತ್ ಸ್ವಯಮೇವ ವಿರೋಧಿ ಭವತೀತಿ ನಾಸ್ಯ ಬ್ರಹ್ಮಾಶ್ರಯತ್ವಸಂಭವಃ।

1. ಈ ಆಶ್ರಯಾದ್ಯನುಪಪತ್ತಿಯ ವಿಚಾರಕ್ಕೆ ಪರಿಶಿಷ್ಟವನ್ನು ನೋಡಿ.

2. ಜ್ಞಾನರೂಪವಾದ ಬ್ರಹ್ಮದಿಂದಲೂ ಅದು ಬಾಧ್ಯವಾಗಬೇಕು- ಎಂದು ಭಾವ. ಇದರ ವಿವರವು ಮುಂದಿನ ಗ್ರಂಥದಲ್ಲಿ ಬರುವದು.

3. ಸ್ವರೂಪಜ್ಞಾನವು ಕಾರಕವಲ್ಲ, ವೃತ್ತಿಜ್ಞಾನವು ಜನ್ಯವಾಗಿರುತ್ತದೆ. ಹೊರ ತೋರಿಕೊಂಡ ಬೆಂಕಿಯು ಕಟ್ಟಿಗೆಯನ್ನು ಸುಡುತ್ತದೆಯಾದರೂ ಕಟ್ಟಿಗೆಯಲ್ಲಿಯೇ ಅನಭಿವ್ಯಕ್ತವಾಗಿ ಸಾಮಾನ್ಯರೂಪದಿಂದಿರುವ ಬೆಂಕಿಯು ಸುಡುವದಿಲ್ಲ- ಎಂಬ ಯುಕ್ತಿಯನ್ನು ಅದ್ವೈತಿಗಳು ಒಡ್ಡುತ್ತಿರುತ್ತಾರೆ. ಅದನ್ನು ಇಲ್ಲಿ ಸಮಾಲೋಚನೆಗೆ ತೆಗೆದುಕೊಂಡಿಲ್ಲ.

ಶುಕ್ತ್ಯಾದಯಸ್ತು ಸ್ವಯಾಥಾತ್ಮ್ಯಪ್ರಕಾಶೇ ಸ್ವಯಮಸಮರ್ಥಾಃ, ಸ್ವಾಜ್ಞಾನಾವಿರೋಧಿನಃ, ತನ್ನಿವರ್ತನೇ ಚ ಜ್ಞಾನಾನ್ತರಮಪೇಕ್ಷನ್ತೇ। ಬ್ರಹ್ಮ ತು ಸ್ವಾನುಭವಸಿದ್ಧಸ್ವಯಾಥಾತ್ಮ್ಯಮ್ ಇತಿ ಸ್ವಾಜ್ಞಾನವಿರೋಧ್ಯೇವ; ತತ ಏವ ನಿವರ್ತಕಾನ್ತರಂ ಚ ನಾಪೇಕ್ಷತೇ॥

ಅಥೋಚ್ಯೇತ–ಬ್ರಹ್ಮವ್ಯತಿರಿಕ್ತಸ್ಯ ಮಿಥ್ಯಾತ್ವಜ್ಞಾನಮ್ ಅಜ್ಞಾನವಿರೋಧಿ–ಇತಿ ; ನ। ಇದಂ ಬ್ರಹ್ಮವ್ಯತಿರಿಕ್ತಮಿಥ್ಯಾತ್ವಜ್ಞಾನಮ್, ಕಿಂ ಬ್ರಹ್ಮ-ಯಾಥಾತ್ಮ್ಯಜ್ಞಾನವಿರೋಧಿ, ಉತ ಪ್ರಪಞ್ಚಸತ್ಯತ್ವರೂಪಾಜ್ಞಾನವಿರೋಧಿ ?–ಇತಿ ವಿವೇಚನೀಯಮ್। ನ ತಾವತ್ ಬ್ರಹ್ಮಯಾಥಾತ್ಮ್ಯಜ್ಞಾನವಿರೋಧಿ ; ಅತದ್ವಿಷಯತ್ವಾತ್। ಜ್ಞಾನಾಜ್ಞಾನಯೋರೇಕವಿಷಯತ್ವೇನ ಹಿ ವಿರೋಧಃ। ಪ್ರಪಞ್ಚಮಿಥ್ಯಾತ್ವಜ್ಞಾನಂ ತತ್ಸತ್ಯತ್ವರೂಪಾಜ್ಞಾನೇನ ವಿರುಧ್ಯತೇ। ತೇನ ಪ್ರಪಞ್ಚಸತ್ಯತ್ವರೂಪಾಜ್ಞಾನಮೇವ ಬಾಧಿತಮಿತಿ ಬ್ರಹ್ಮಸ್ವರೂಪಾಜ್ಞಾನಂ ತಿಷ್ಠತ್ಯೇವ। ಬ್ರಹ್ಮಸ್ವರೂಪಾಜ್ಞಾನಂ ನಾಮ ತಸ್ಯ ಸದ್ವಿತೀಯತ್ವಮೇವ। ತತ್ತು ತದ್ವ್ಯತಿರಿಕ್ತಸ್ಯ ಮಿಥ್ಯಾತ್ವಜ್ಞಾನೇನ ನಿವೃತ್ತಮ್। ಸ್ವರೂಪಂ ತು ಸ್ವಾನುಭವಸಿದ್ಧಮ್ ಇತಿ ಚೇತ್, ನ। ಬ್ರಹ್ಮಣೋಽದ್ವಿತೀಯತ್ವಂ ಸ್ವರೂಪಂ ಸ್ವಾನುಭವಸಿದ್ಧಮಿತಿ ತದ್ವಿರೋಧಿಸದ್ವಿತೀಯತ್ವರೂಪಾಜ್ಞಾನಂ ತದ್ಬಾಧಶ್ಚ ನ ಸ್ಯಾತಾಮ್। ಅದ್ವಿತೀಯತ್ವಂ ಧರ್ಮ ಇತಿ ಚೇತ್, ನ। ಅನುಭವಸ್ವರೂಪಸ್ಯ ಬ್ರಹ್ಮಣೋಽನುಭಾವ್ಯಧರ್ಮವಿರಹಸ್ಯ ಭವತೈವ ಪ್ರತಿಪಾದಿತತ್ವಾತ್। ಅತೋ ಜ್ಞಾನಸ್ವರೂಪಸ್ಯ ಬ್ರಹ್ಮಣೋ ವಿರೋಧಾದೇವ ನಾಜ್ಞಾನಾಶ್ರಯತ್ವಮ್ ॥

(ಅರ್ಥ)

ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ : 'ಬ್ರಹ್ಮವು ಜ್ಞಾನಸ್ವರೂಪವು' ಎಂಬುದರಿಂದ ಬ್ರಹ್ಮದಲ್ಲಿ ಯಾವ ಸ್ವಭಾವವು (ಇದೆಯೆಂದು) ಗೊತ್ತಾಗುತ್ತದೆಯೋ, ಅದು ಸ್ವಯಂಪ್ರಕಾಶವಾಗಿರುವದರಿಂದ ತಾನೇ ಬೆಳಗುತ್ತಿರುವದರಿಂದ ಅವಿದ್ಯೆಗೆ ವಿರುದ್ಧವಾಗಿರುವ ವಿಷಯದಲ್ಲಿ ಅದರ ಸ್ವರೂಪಕ್ಕೂ ಅದರ ವಿಷಯದ ಜ್ಞಾನ–ಇವೆರಡಕ್ಕೂ ಯಾವ ವಿಶೇಷವೂ ಇರುವದಿಲ್ಲ. ಇದಲ್ಲದೆ ಅನುಭವಸ್ವರೂಪವಾಗಿರುವ ಬ್ರಹ್ಮವು ಮತ್ತೊಂದು ಅನುಭವದಿಂದ ಅನುಭವಿಸಲ್ಪಡುವದಲ್ಲವಾದ್ದರಿಂದ ನಿನ್ನ ಪಕ್ಷದಲ್ಲಿ ಆ (ಬ್ರಹ್ಮದ) ವಿಷಯದ ಜ್ಞಾನವೇ ಇರುವದಿಲ್ಲ. ಆದ್ದರಿಂದ ಜ್ಞಾನವು ಅಜ್ಞಾನವಿರೋಧಿಯಾದರೆ ತಾನೇ ಅದಕ್ಕೆ ವಿರುದ್ಧವಾಗಿರುತ್ತದೆಯಾದ್ದರಿಂದ ಆ (ಅವಿದ್ಯೆಗೆ) ಬ್ರಹ್ಮವು ಆಶ್ರಯವೆಂಬುದು ಆಗಲಾರದು. ಶುಕ್ತ್ಯಾದಿಗಳಾದರೋ, ತಮ್ಮ ನಿಜವಾದ ಸ್ವರೂಪವನ್ನು ತೋರಿಸುವದಕ್ಕೆ ತಾವೇ ಶಕ್ತವಾಗಿರುವದಿಲ್ಲವಾಗಿ ತಮ್ಮ (ವಿಷಯದ) ಅಜ್ಞಾನಕ್ಕೆ ವಿರುದ್ಧವಾಗಿರುವದಿಲ್ಲ, ಆ (ಅಜ್ಞಾನ)ವನ್ನು ತೊಲಗಿಸುವದಕ್ಕೆ ಮತ್ತೊಂದು ಜ್ಞಾನವನ್ನು ಬಯಸುತ್ತವೆ. ಬ್ರಹ್ಮವೊ,

ತನ್ನ ಅನುಭವದಿಂದಲೇ ತನ್ನ ನಿಜವಾದ ಸ್ವರೂಪವು ಸಿದ್ಧವಾಗಿರುವದರಿಂದ ತನ್ನ ಅಜ್ಞಾನಕ್ಕೆ ವಿರೋಧಿಯೇ : ಆದ್ದರಿಂದ ಮತ್ತೊಂದು (ಅಜ್ಞಾನ)ನಿವರ್ತಕ (ಜ್ಞಾನ)ವನ್ನು ಬಯಸುವದಿಲ್ಲ.

ಇನ್ನು ನೀವು 'ಬ್ರಹ್ಮವ್ಯತಿರಿಕ್ತ(ಪದಾರ್ಥವು) ಮಿಥ್ಯೆ- ಎಂಬ ಜ್ಞಾನವೇ ಅಜ್ಞಾನಕ್ಕೆ ವಿರೋಧಿ' ಎನ್ನಬಹುದು. ಅದು ಸರಿಯಲ್ಲ. (ಏಕೆಂದರೆ) ಬ್ರಹ್ಮ ವ್ಯತಿರಿಕ್ತವಾದದ್ದು ಮಿಥ್ಯೆ-ಎಂಬೀ ಜ್ಞಾನವು ಬ್ರಹ್ಮದ ನಿಜಸ್ವರೂಪದ ಅಜ್ಞಾನಕ್ಕೆ ವಿರೋಧಿಯೊ, ಅಥವಾ ಪ್ರಪಂಚವು ಸತ್ಯ ಎಂಬ ರೂಪದ ಅಜ್ಞಾನಕ್ಕೆ ವಿರೋಧಿಯೊ ?- ಎಂಬಿದನ್ನು ವಿವೇಚನೆಮಾಡಬೇಕಾಗಿದೆ. ಮೊದಲನೆಯದಾಗಿ (ಅದು) ಬ್ರಹ್ಮದ ನಿಜವಾದ ಸ್ವರೂಪದ ಅಜ್ಞಾನಕ್ಕೆ ವಿರೋಧಿಯಲ್ಲ, ಏಕೆಂದರೆ ಅದು (ಆ ಸ್ವರೂಪಜ್ಞಾನಕ್ಕೆ) ವಿರೋಧಿಯಲ್ಲ. ಜ್ಞಾನಾಜ್ಞಾನಗಳಿಗೆ ಒಂದೇ ವಿಷಯ ವಿದ್ದಾಗಲಲ್ಲವೆ, (ಒಂದಕ್ಕೊಂದಕ್ಕೆ) ವಿರೋಧ ? ಪ್ರಪಂಚವು ಮಿಥ್ಯೆ ಎಂಬ ಜ್ಞಾನವು, ಅದು ಸತ್ಯವೆಂಬ ರೂಪದ ಅಜ್ಞಾನಕ್ಕೆ ವಿರುದ್ಧವಾಗಿರುತ್ತದೆ. ಆದರಿಂದ ಪ್ರಪಂಚವು ಸತ್ಯವೆಂಬ ರೂಪದ ಅಜ್ಞಾನವು ಮಾತ್ರ ಬಾಧಿತವಾಗುವದರಿಂದ ಬ್ರಹ್ಮಸ್ವರೂಪದ ಅಜ್ಞಾನವು (ಹಾಗೆಯೇ) ಇದ್ದುಕೊಂಡೇ ಇರುತ್ತದೆ.[1]

(ಪೂರ್ವಪಕ್ಷಿ) :- ಬ್ರಹ್ಮಸ್ವರೂಪದ ಅಜ್ಞಾನ- ಎಂದರೆ ಅದು ಸದ್ವಿತೀಯ ಎಂಬುದೇ ; ಅದಾದರೊ ಅದಕ್ಕಿಂತ ವ್ಯತಿರಿಕ್ತವಾದದ್ದು ಮಿಥ್ಯೆ ಎಂಬ ಜ್ಞಾನದಿಂದ ನಿವೃತ್ತವಾಯಿತು. ಸ್ವರೂಪವು ಸ್ವಾನುಭವಸಿದ್ಧವೇ.

(ಸಿದ್ಧಾಂತಿ) :- ಹಾಗಲ್ಲ. ಬ್ರಹ್ಮದ ಅದ್ವಿತೀಯತ್ವವೆಂಬ ಸ್ವರೂಪವು ಸ್ವಾನುಭವಸಿದ್ಧವಾಗಿರುವದರಿಂದ ಅದಕ್ಕೆ ವಿರೋಧಿಯಾದ ಸದ್ವಿತೀಯತ್ವರೂಪವಾದ ಅಜ್ಞಾನವಾಗಲಿ, ಅದರ ಬಾಧವಾಗಲಿ ಆಗಲೇಅರವು.

(ಪೂರ್ವಪಕ್ಷಿ) :- ಅದ್ವಿತೀಯತ್ವವೆಂಬುದು (ಬ್ರಹ್ಮದ) ಧರ್ಮ[2] ಎಂದರೊ?

(ಸಿದ್ಧಾಂತಿ) :- ಹಾಗಲ್ಲ. ಏಕೆಂದರೆ ಅನುಭವಸ್ವರೂಪವಾಗಿರುವ ಬ್ರಹ್ಮಕ್ಕೆ ಅನುಭಾವ್ಯವಾದ ಧರ್ಮವು ಇಲ್ಲ ಎಂಬುವನ್ನು ನೀನೇ ಪ್ರತಿಪಾದನೆಮಾಡಿರುತ್ತೀಯೆ. ಆದ್ದರಿಂದ ಜ್ಞಾನಸ್ವರೂಪವಾದ ಬ್ರಹ್ಮವು (ಅಜ್ಞಾನಕ್ಕೆ) ವಿರುದ್ಧವಾಗಿರುವದರಿಂದಲೇ ಅಜ್ಞಾನಕ್ಕೆ ಆಶ್ರಯವಲ್ಲ.[3]

---

1. ಬ್ರಹ್ಮವು ಇಂಥದ್ದೆಂಬುದನ್ನು ಅರಿಯದ ಅಜ್ಞಾನ, 'ಪ್ರಪಂಚವು ಸತ್ಯ' ಎಂಬ ಅಜ್ಞಾನ- ಇವೆರಡೂ ಬೇರೆಬೇರೆ ಎಂದು ಇಲ್ಲಿ ಇಟ್ಟುಕೊಂಡು ವಿಕಲ್ಪಿಸಿರುತ್ತದೆ ಎಂದು ಸ್ಪಷ್ಟವಾಗಿದೆ. ಈ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. ಅದ್ವೈತಿಗಳು ಅದ್ವೈತತ್ವವು ಬ್ರಹ್ಮದ ಧರ್ಮವೆಂದೇನೂ ಹೇಳುವದಿಲ್ಲ. ಈ ಶಂಕೆಯನ್ನು ಇಲ್ಲಿ ಏತಕ್ಕೆ ತಂದಿದೆಯೋ ತಿಳಿಯಲಿಲ್ಲ.

3. ಆದ್ದರಿಂದ ಜೀವನೂ ಅವಿದ್ಯೆಗೆ ಆಶ್ರಯನಲ್ಲ, ಬ್ರಹ್ಮವೂ ಅಲ್ಲ- ಎಂದು ಉಪಸಂಹಾರ.

## (2) ತಿರೋಧಾನಾನುಪಪತ್ತಿ

(ಮೂಲ)

ಕಿಂ ಚ – ಅವಿದ್ಯಯಾ ಪ್ರಕಾಶೈಕಸ್ವರೂಪಂ ಬ್ರಹ್ಮ ತಿರೋಹಿತಮಿತಿ ವದತಾ ಸ್ವರೂಪನಾಶ ಏವೋಕ್ತಃ ಸ್ಯಾತ್ । ಪ್ರಕಾಶತಿರೋಧಾನಂ ನಾಮ ಪ್ರಕಾಶೋತ್ಪತ್ತಿಪ್ರತಿಬನ್ಧಃ, ವಿದ್ಯಮಾನಸ್ಯ ವಿನಾಶೋ ವಾ । ಪ್ರಕಾಶಸ್ಯ ಅನುತ್ಪಾದ್ಯತ್ವಾಭ್ಯುಪಗಮೇನ ಪ್ರಕಾಶತಿರೋಧಾನಂ ಪ್ರಕಾಶನಾಶ ಏವ ॥

(ಅರ್ಥ)

ಮತ್ತು ಅವಿದ್ಯೆಯಿಂದ ಪ್ರಕಾಶೈಕಸ್ವರೂಪವಾಗಿರುವ ಬ್ರಹ್ಮವು ಮುಸಕಲ್ಪಟ್ಟಿದೆ[1] ಎಂದು ಹೇಳುವವನು (ಬ್ರಹ್ಮದ) ಸ್ವರೂಪನಾಶವನ್ನೇ ಹೇಳಿದಂತಾದೀತು. (ಹೇಗೆಂದರೆ) ಪ್ರಕಾಶವು ಮರೆಯಾಗುವದು ಎಂದರೆ (೧) ಪ್ರಕಾಶವು ಹುಟ್ಟುವದಕ್ಕೆ ಅಡ್ಡಿ ; ಅಥವಾ ಇರುವ (ಪ್ರಕಾಶವು) ವಿನಾಶವಾಗುವದು. (ಬ್ರಹ್ಮದ) ಪ್ರಕಾಶವು ಹುಟ್ಟುವದಿಲ್ಲವೆಂಬುದನ್ನು ಒಪ್ಪಿರುವದರಿಂದ ಪ್ರಕಾಶತಿರೋಧಾನವೆಂದರೆ ಪ್ರಕಾಶದ ನಾಶವೇ (ಎಂದಾಗುತ್ತದೆ).[2]

## (3) ಭ್ರಾಂತ್ಯನುಪಪತ್ತಿ

(ಮೂಲ)

ಅಪಿ ಚ ನಿರ್ವಿಷಯಾ ನಿರಾಶ್ರಯಾ ಸ್ವಪ್ರಕಾಶಾ ಇಯಮ್ ಅನುಭೂತಿಃ, ಸ್ವಾಶ್ರಯದೋಷವಶಾತ್ ಅನನ್ತಾಶ್ರಯಮ್ ಅನನ್ತವಿಷಯಮ್ ಆತ್ಮಾನಮನುಭವತಿ ಇತ್ಯತ್ರ ಕಿಮಯಂ ಸ್ವಾಶ್ರಯದೋಷಃ ಪರಮಾರ್ಥಭೂತಃ, ಉತ ಅಪರಮಾರ್ಥಭೂತಃ ?– ಇತಿ ವಿವೇಚನೀಯಮ್ । ನ ತಾವತ್ ಪರಮಾರ್ಥಃ, ಅನಭ್ಯುಪಗಮಾತ್ । ನಾಪ್ಯಪರಮಾರ್ಥಃ, ತಥಾ ಸತಿ ಹಿ ದ್ರಷ್ಟೃತ್ವೇನ ವಾ ದೃಶ್ಯತ್ವೇನ ವಾ ದೃಶಿತ್ವೇನ ವಾ ಅಭ್ಯುಪಗಮನೀಯಃ । ನ ತಾವದ್ ದೃಶಿಃ,

---

1. ಅವಿದ್ಯೆಯು ಜೀವನ ಬ್ರಹ್ಮಸ್ವರೂಪವನ್ನು ಮುಸುಕಿರುತ್ತದೆ– ಎಂದು ಮೂಲಾವಿದ್ಯಾವಾದಿಗಳು ಹೇಳುತ್ತಾರೆ. ಬ್ರಹ್ಮವನ್ನು ಅದು ಮುಸುಕಲಾರದು– ಎಂಬುದಕ್ಕೆ ಇಲ್ಲಿ ಯುಕ್ತಿಯನ್ನು ಹೇಳಿದೆ.

2. ಲೋಕದಲ್ಲಿ ಪ್ರಕಾಶದ ಉತ್ಪತ್ತಿ, ವಿನಾಶ– ಇವಲ್ಲದೆ ಗಡಿಗೆ ಮುಚ್ಚಿದ ದೀಪದಂತೆ ಪ್ರಕಾಶವೂ ಇದ್ದು ಮತ್ತೊಂದರಿಂದ ಆವೃತವಾಗಿರುವದು– ಎಂಬ ಮತ್ತೊಂದು ತಿರೋಧಾನಹೇತುವೂ ಇದೆ. ಅದನ್ನು ಇಲ್ಲಿ ಸೇರಿಸಿಲ್ಲವಾದರೂ ಬ್ರಹ್ಮಕ್ಕೆ ಅಂಥ ಮುಸುಕೂ ಇರುವಂತಿಲ್ಲ. ಇಲ್ಲಿ ಅವಿದ್ಯೆಯ ಆವರಣಶಕ್ತಿಯನ್ನು ನಿರಾಕರಿಸಿದಂತೆ ಆಯಿತು. ಅದಕ್ಕೆ ಬ್ರಹ್ಮವು ವಿಷಯವಾಗಲಾರದು ಎಂದೂ ಹೇಳಿದಂತೆ ಆಗಿರುತ್ತದೆ.

ದೃಶಿಸ್ವರೂಪಭೇದಾನಭ್ಯುಪಗಮಾತ್; ಭ್ರಮಾಧಿಷ್ಠಾನಭೂತಾಯಾಸ್ತು ಸಾಕ್ಷಾದ್ದೃಶೇಃ ಮಾಧ್ಯಮಿಕಪಕ್ಷಪ್ರಸಙ್ಗೇನ ಅಪಾರಮಾರ್ಥ್ಯಾನಭ್ಯುಪಗಮಾಚ್ಚ | ದ್ರಷ್ಟೃದೃಶ್ಯಯೋಸ್ತದವಚ್ಛಿನ್ನಾಯಾ ದೃಶೇಶ್ಚ ಕಾಲ್ಪನಿಕತ್ವೇನ ಮೂಲದೋಷಾನ್ತರಾಪೇಕ್ಷಯಾ ಅನವಸ್ಥಾ ಸ್ಯಾತ್ | ಅಥೈತತ್ಪರಿಜಿಹೀರ್ಷಯಾ ಪರಮಾರ್ಥಸತೀ ಅನುಭೂತಿರೇವ ಬ್ರಹ್ಮರೂಪಾ ದೋಷಃ ಇತಿ ಚೇತ್ | ಬ್ರಹ್ಮೈವ ಚೇದ್ದೋಷಃ ಪ್ರಪಞ್ಚದರ್ಶನಸ್ಯೈವ ತನ್ಮೂಲಂ ಸ್ಯಾತ್ | ಕಿಂ ಪ್ರಪಞ್ಚತುಲ್ಯಾವಿದ್ಯಾನ್ತರಪರಿಕಲ್ಪನೇನ ? ಬ್ರಹ್ಮಣೋ ದೋಷತ್ವೇ ಸತಿ ತಸ್ಯ ನಿತ್ಯತ್ವೇನ ಅನಿರ್ಮೋಕ್ಷಶ್ಚ ಸ್ಯಾತ್ | ಅತೋ ಯಾವದ್ ಬ್ರಹ್ಮವ್ಯತಿರಿಕ್ತಪಾರಮಾರ್ಥಿಕದೋಷಾನಭ್ಯುಪಗಮಃ, ನ ತಾವದ್ ಭ್ರಾನ್ತಿರುಪಪಾದಿತಾ ಭವತಿ ||

(ಅರ್ಥ)

ಇದೂ ಅಲ್ಲದೆ (ತನಗೆ) ಯಾವ ವಿಷಯವೂ ಇಲ್ಲದ ಯಾವ ಆಶ್ರಯವೂ ಇಲ್ಲದ ಸ್ವಪ್ರಕಾಶವಾಗಿರುವ ಈ **ಅನುಭೂತಿ**ಯು ತನ್ನನ್ನು ಆಶ್ರಯಿಸಿಕೊಂಡಿರುವ ದೋಷದ ನಿಮಿತ್ತದಿಂದ ಅನಂತವಾದ ಆಶ್ರಯಗಳುಳ್ಳದ್ದಾಗಿಯೂ ಅನಂತ ವಿಷಯಗಳುಳ್ಳದ್ದಾಗಿಯೂ ತಾನು ಇರುವಂತೆ ಅನುಭವಿಸುತ್ತದೆ– ಎಂಬಲ್ಲಿ ಈ ತನ್ನನ್ನಾಶ್ರಯಿಸಿಕೊಂಡಿರುವ **ದೋಷವು** ಪರಮಾರ್ಥವೆ ಅಥವಾ ಅಪರಮಾರ್ಥವೆ ?– ಎಂಬಿದನ್ನು ವಿವೇಚನೆಮಾಡಬೇಕು. ಮೊದಲನೆಯದಾಗಿ ಅದು **ಪರಮಾರ್ಥವಲ್ಲ ;** ಏಕೆಂದರೆ (ಹಾಗೆಂದು) ನೀವು ಒಪ್ಪಿರುವದಿಲ್ಲ.[1]

ಅದು **ಅಪರಮಾರ್ಥವೂ ಅಲ್ಲ ;** ಏಕೆಂದರೆ ಹಾಗಿದ್ದರೆ ಅದು (1) ದ್ರಷ್ಟೃವೆಂದೊ (2) ದೃಶ್ಯವೆಂದೊ (3) ದರ್ಶನವೆಂದೊ ಅಂಗೀಕರಿಸಬೇಕು. (ಇವುಗಳೊಳಗೆ) ಮೊದಲನೆಯದಾಗಿ (ಅದು) ದರ್ಶನವಲ್ಲ, ಏಕೆಂದರೆ (ನೀವು) ದರ್ಶನದ ಸ್ವರೂಪದಲ್ಲಿ ಭೇದವನ್ನು ಒಪ್ಪಿರುವದಿಲ್ಲ.[2] ಭ್ರಮೆಗೆ ಅಧಿಷ್ಠಾನವಾಗಿರುವ ಸಾಕ್ಷಾದ್ದರ್ಶನಕ್ಕಾದರೋ ಮಾಧ್ಯಮಿಕರ ಪಕ್ಷವೇ ಪ್ರಸಕ್ತಿಯಾಗುವದರಿಂದ (ಅದನ್ನು) ನೀವು ಅಪಾರಮಾರ್ಥಿಕವೆಂದು ಒಪ್ಪುವದೂ ಇಲ್ಲ.[3] ದ್ರಷ್ಟೃ, ದೃಶ್ಯ– ಇವೂ ಅವುಗಳಿಂದ ಪರಿಚ್ಛಿನ್ನವಾಗಿರುವ ದರ್ಶನವೂ ಕಾಲ್ಪನಿಕವಾಗಿರು

---

1. ಒಪ್ಪಿದರೆ ಅದ್ವೈತಹಾನಿ.

2. ದರ್ಶನವೇ ಬ್ರಹ್ಮ, ಅದರಲ್ಲಿ ಪರಮಾರ್ಥ, ಅಪರಮಾರ್ಥ– ಎಂಬ ಭೇದವು ನಿಮಗೆ ಸಮ್ಮತವಲ್ಲ.

3. ಬ್ರಹ್ಮವೇ ಅಧಿಷ್ಠಾನ, ಅದೂ ಅಪರಮಾರ್ಥವೆಂದಾದರೆ ನಿಮ್ಮ ಮತವು ಶೂನ್ಯವಾದವೇ ಆಗಿಬಿಡುವದು.

ವದರಿಂದ (ಕಲ್ಪನೆಗೆ) ಮೂಲವಾದ ಮತ್ತೊಂದು ದೋಷವು ಬೇಕಾಗುವದಾಗಿ[1] ಅನವಸ್ಥೆಯಾಗುವದು.

ಇನ್ನು ಈ (ದೋಷವನ್ನು) ಪರಿಹರಿಸುವದಕ್ಕಾಗಿ ಪರಮಾರ್ಥಸತ್ತಾಗಿರುವ ಬ್ರಹ್ಮರೂಪವಾದ ಅನುಭೂತಿಯೇ ದೋಷವು – ಎನ್ನುವದಾದರೆ, ಬ್ರಹ್ಮವೇ ದೋಷವಾದರೆ ಪ್ರಪಂಚದರ್ಶನಕ್ಕೇ ಅದು ಕಾರಣವಾಗಬಹುದಲ್ಲ, ಪ್ರಪಂಚಕ್ಕೆ ಸಮಾನವಾದ ಮತ್ತೊಂದು ಅವಿದ್ಯೆಯೆಂಬ (ದೋಷಾಂತರ)ವನ್ನು ಕಲ್ಪಿಸಿದ್ದರಿಂದ ಆಗಬೇಕಾದದ್ದಾದರೂ ಏನು[2] ? ಬ್ರಹ್ಮವು ದೋಷವಾದರೆ, ಅದು ನಿತ್ಯವಾಗಿರುವದರಿಂದ ಮೋಕ್ಷವು ಆಗುವದೇಇಲ್ಲ ಎಂದು ಆಗಿಬಿಡುವದು. ಆದ್ದರಿಂದ **ಎಲ್ಲಿಯವರೆಗೆ ಪಾರಮಾರ್ಥಿಕವಾದ ದೋಷವನ್ನು ಒಪ್ಪುವದಿಲ್ಲವೋ ಅಲ್ಲಿಯವರೆಗೆ ಭ್ರಾಂತಿಗೆ ಉಪಪತ್ತಿಯನ್ನು ಹೇಳಿದಂತಾಗುವದೇ[3] ಇಲ್ಲ.**

## (4) ಅನಿರ್ವಚನೀಯತ್ವಾನುಪಪತ್ತಿ

### (ಮೂಲ)

ಅನಿರ್ವಚನೀಯತ್ವಂ ಚ ಕಿಮಭಿಪ್ರೇತಮ್ ? ಸದಸದ್ವಿಲಕ್ಷಣತ್ವಮ್, ಇತಿ ಚೇತ್ । ತಥಾವಿಧಸ್ಯ ವಸ್ತುನಃ ಪ್ರಮಾಣಶೂನ್ಯತ್ವೇನ ಅನಿರ್ವಚನೀಯತೈವ ಸ್ಯಾತ್ । ಏತದುಕ್ತಂ ಭವತಿ—ಸರ್ವಂ ಹಿ ವಸ್ತುಜಾತಂ ಪ್ರತೀತಿವ್ಯವಸ್ಥಾಪ್ಯಮ್। ಸರ್ವಾ ಚ ಪ್ರತೀತಿಃ, ಸದಸದಾಕಾರಾ । ಸದಸದಾಕಾರಾಯಾಸ್ತು ಪ್ರತೀತೇಃ, ಸದಸದ್ವಿಲಕ್ಷಣಂ ವಿಷಯಃ ಇತ್ಯಭ್ಯುಪಗಮ್ಯಮಾನೇ ಸರ್ವಂ ಸರ್ವಪ್ರತೀತೇರ್ವಿಷಯಃ ಸ್ಯಾತ್ ಇತಿ ॥

### (ಅರ್ಥ)

ಮತ್ತು **ಅನಿರ್ವಚನೀಯವೆಂ**ದರೆ ಏನೆಂದು (ನಿಮ್ಮ) ಅಭಿಪ್ರಾಯ ? ಸದಸದ್ವಿಲಕ್ಷಣವಾಗಿರುವದು[4]– ಎಂದರೆ ಅಂಥ ವಸ್ತುವು ಪ್ರಮಾಣಶೂನ್ಯವಾಗಿರುವದರಿಂದ ಅನಿರ್ವಚನೀಯವೆಂದೇ[5] ಆಗುವದು. ಹೀಗೆಂದದ್ದರ ಅಭಿಪ್ರಾಯ

1. ದೋಷವಿಲ್ಲದೆ ಭ್ರಾಂತಿಯಿಲ್ಲ ಎಂಬುದು– ಇಲ್ಲಿ ಇಟ್ಟುಕೊಂಡಿರುವ ನಿಯಮ ; ಇದನ್ನು ೧೯೨ನೆಯ ಪುಟದಲ್ಲಿ ಹೇಳಿದೆ.

2. ಜಗದ್ಭ್ರಮೆಗೆ ಕಾರಣವೇನು?–ಎಂಬುದೇ ಪ್ರಕೃತವಿಚಾರ ; ಅದಕ್ಕಾಗಿಯಲ್ಲವೆ, ನೀವು ಬ್ರಹ್ಮಾಶ್ರಿತವಾಗಿರುವ ಅವಿದ್ಯಾದೋಷವನ್ನು ಕಲ್ಪಿಸುವದು ? –ಎಂದು ಭಾವ.

3. ಭ್ರಾಂತಿಗೆ ಪಾರಮಾರ್ಥಿಕದೋಷವು ಬೇಕೆಂಬುದನ್ನು ರಾಮಾನುಜರು ಮತ್ತೆ ಮತ್ತೆ ಒತ್ತಿಹೇಳುತ್ತಿದಾರೆ. ಈ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

4. ಹೀಗೆಂದು ಪಂಚಪಾದಿಕೆಯಲ್ಲಿ ಹೇಳಿದೆ ; ಪರಿಶಿಷ್ಟವನ್ನು ನೋಡಿ.

5. ಇಂಥದ್ದೊಂದು ಹೇಳಲಾಗದ್ದೆಂದೇ.

ವಿದು : ಯಾವ ವಸ್ತುಜಾತವನ್ನೇ ಆಗಲಿ ಪ್ರತೀತಿಯಿಂದ (ಇಂಥದ್ದೆಂದು) ವ್ಯವಸ್ಥೆ ಮಾಡಬೇಕಾಗಿರುತ್ತದೆ. ಯಾವ ಪ್ರತೀತಿಯೇ ಆಗಲಿ ಸದಸದಾಕಾರವಾಗಿರುತ್ತದೆ.[1] ಸದಸದಾಕಾರವಾಗಿರುವದಾದರೂ (ಆ) ಪ್ರತೀತಿಗೆ ಸದಸದ್ವಿಲಕ್ಷಣವೇ ವಿಷಯ ವೆಂದು ಒಪ್ಪಿದರೆ ಪ್ರತಿಯೊಂದು ಪ್ರತೀತಿಗೂ ವಿಷಯವಾದೀತು.[2]

## (5) ಪ್ರಮಾಣಾನುಪಪತ್ತಿಗಾಗಿ ಪೂರ್ವಪಕ್ಷಾನುವಾದ

(ಮೂಲ)

ಅಥ ಸ್ಯಾತ್ – ವಸ್ತುಸ್ವರೂಪತಿರೋಧಾನಕರಮ್ ಅನ್ತರಬಾಹ್ಯರೂಪ ವಿವಿಧಾಧ್ಯಾಸಸ್ಯ ಉಪಾದಾನಂ ಸದಸದನಿರ್ವಚನೀಯಮ್ ಅವಿದ್ಯಾಜ್ಞಾನಾದಿ ಪದವಾಚ್ಯಂ ವಸ್ತುಯಾಥಾತ್ಮ್ಯಜ್ಞಾನನಿವರ್ತ್ಯಂ ಜ್ಞಾನಪ್ರಾಗಭಾವಾತಿರೇಕೇಣ ಭಾವರೂಪಮೇವ ಕಿಞ್ಚಿದ್ ವಸ್ತು ಪ್ರತ್ಯಕ್ಷಾನುಮಾನಾಭ್ಯಾಂ ಪ್ರತೀಯತೇ । ತದುಪಹಿತಬ್ರಹ್ಮೋಪಾದಾನಶ್ಚ ಅವಿಕಾರೇ ಸ್ವಪ್ರಕಾಶಚಿನ್ಮಾತ್ರವಪುಷಿ ತೇನೈವ ತಿರೋಹಿತಸ್ವರೂಪೇ ಪ್ರತ್ಯಗಾತ್ಮನಿ ಅಹಙ್ಕಾರಜ್ಞಾನಜ್ಞೇಯವಿಭಾಗರೂಪೋಽ ಧ್ಯಾಸಃ । ತಸ್ಯೈವ ಅವಸ್ಥಾವಿಶೇಷೇಣ ಅಧ್ಯಾಸರೂಪೇ ಜಗತಿ ಜ್ಞಾನಬಾಧ್ಯ ಸರ್ಪರಜತಾದಿವಸ್ತುತತ್ತ್ವಜ್ಞಾನರೂಪಾಧ್ಯಾಸೋಽಪಿ ಜಾಯತೇ । ಕೃತ್ಸ್ನಸ್ಯ ಮಿಥ್ಯಾರೂಪಸ್ಯ ತದುಪಾದಾನತ್ವಂ ಚ ಮಿಥ್ಯಾಭೂತಸ್ಯಾರ್ಥಸ್ಯ ಮಿಥ್ಯಾಭೂತ ಮೇವ ಕಾರಣಂ ಭವಿತುಮರ್ಹತೀತಿ ಹೇತುಬಲಾತ್ ಅವಗಮ್ಯತೇ ॥

(ಅರ್ಥ)

ಇನ್ನು ನೀವು (ಹೀಗೆನ್ನ)ಬಹುದು : ವಸ್ತುಸ್ವರೂಪವನ್ನು ಮರೆಮಾಡುವ, ಒಳಗಿನ ಮತ್ತು ಹೊರಗಿನ ಬಗೆಬಗೆಯ ಅಧ್ಯಾಸಗಳಿಗೆ ಉಪಾದಾನವಾಗಿರುವ, ಸತ್ತೆಂದಾಗಲಿ ಅಸತ್ತೆಂದಾಗಲಿ ನಿರ್ವಚನಮಾಡಿ ಹೇಳುವದಕ್ಕೆ ಆಗದ, 'ಅವಿದ್ಯೆ', 'ಅಜ್ಞಾನ' ಮುಂತಾದ ಶಬ್ದಗಳಿಗೆ ವಾಚ್ಯವಾದ,ವಸ್ತುಯಾಥಾತ್ಮ್ಯಜ್ಞಾನನಿವರ್ತ್ಯ ವಾಗಿರುವ, ಜ್ಞಾನದ ಪ್ರಾಗಭಾವಕ್ಕಿಂತ ಬೇರೆಯಾಗಿರುವ ಭಾವರೂಪವೇ ಆಗಿರುವ ಯಾವದೋ ಒಂದು ವಸ್ತು ಪ್ರತ್ಯಕ್ಷಾನುಮಾನಗಳಿಂದ[3] ತಿಳಿಯಬರುತ್ತದೆ.

---

1. ಸತ್ತು (ಇರುವದು) ಎಂದೋ ಅಸತ್ತು (ಇಲ್ಲದ್ದು) ಎಂದೋ ಅರಿವಾಗುತ್ತದೆ.

2. ಸದಸದ್ವಿಲಕ್ಷಣ –ಎಂಬ ಪ್ರತೀತಿಯೇ ಇಲ್ಲ; ಆದ್ದರಿಂದ ಸತ್ತನ್ನಾದರೂ ಅಸತ್ತನ್ನಾದರೂ ಸದಸದ್ವಿಲಕ್ಷಣವೆಂದು ಕರೆದಂತೆ ಆಗುವದು. ಯಾವ ಪ್ರತ್ಯಯಕ್ಕೆ ಯಾವ ದಾದರೂ ವಿಷಯವೆಂದು ಕಲ್ಪಿಸಬಹುದು –ಎಂದಂತೆ ಆಗುವದು ಎಂದರ್ಥ.

3. ಪಂಚಪಾದಿಕೆಯಲ್ಲಿ ಪ್ರತ್ಯಕ್ಷಾನುಮಾನಗಳನ್ನು ಉದಾಹರಿಸಿಲ್ಲ; ದೃಷ್ಟಾರ್ಥಾ ಪತ್ತಿ, ಶ್ರುತಾರ್ಥಾಪತ್ತಿಗಳನ್ನು ಮಾತ್ರ ಉದಾಹರಿಸಿದೆ. ವಿವರಣದಲ್ಲಿ ಮಾತ್ರ ಪ್ರತ್ಯಕ್ಷಾನು ಮಾನಗಳನ್ನು ಪಂ. ಪಾ.ಯಲ್ಲಿಯೇ ಉದಾಹರಿಸಿರುವಂತೆ ಅಕ್ಷರವನ್ನು ಎಳೆದು ವ್ಯಾಖ್ಯಾನ ಮಾಡಿರುತ್ತದೆ.

ಅದರಿಂದ ಉಪಹಿತವಾದ ಬ್ರಹ್ಮವನ್ನೇ ಉಪಾದಾನವಾಗುಳ್ಳ, ಅವಿಕಾರನೂ ಸ್ವಪ್ರಕಾಶಚಿನ್ಮಾತ್ರಾಕಾರವುಳ್ಳವನೂ, ಅದರಿಂದಲೇ ಮರೆಯಾಗಿರುವ ಸ್ವರೂಪವುಳ್ಳವನೂ (ಆಗಿರುವ) ಪ್ರತ್ಯಗಾತ್ಮನಲ್ಲಿ ಅಹಂಕಾರ, ಜ್ಞಾನ, ಜ್ಞೇಯ-ಎಂಬ ವಿಭಾಗದ ರೂಪವಾಗಿರುವ ಅಧ್ಯಾಸವಾಗಿರುತ್ತದೆ.[1] ಅದರದ್ದೇ[2] (ಒಂದು) ಅವಸ್ಥಾವಿಶೇಷದಿಂದ[3] ಅಧ್ಯಾಸರೂಪವಾದ ಜಗತ್ತಿನಲ್ಲಿ ಜ್ಞಾನಬಾಧ್ಯವಾದ ಸರ್ಪ, ಬೆಳ್ಳಿ- ಮುಂತಾದ ವಸ್ತುಗಳ, ಅವದರ ಜ್ಞಾನರೂಪವಾದ ಅಧ್ಯಾಸವೂ[4] ಉಂಟಾಗುತ್ತದೆ, ಮಿಥ್ಯಾರೂಪವಾದದ್ದೆಲ್ಲಕ್ಕೂ ಅದೇ ಉಪಾದಾನವು- ಎಂಬಿದು **ಮಿಥ್ಯಾಭೂತವಾದ ಅರ್ಥಕ್ಕೆ ಮಿಥ್ಯಾಭೂತವೇ ಕಾರಣವಾಗಿರಬೇಕು**[5]- ಎಂದು ಹೇತುಬಲದಿಂದ ಗೊತ್ತಾಗುತ್ತದೆ.

**(ಮೂಲ)**

ಕಾರಣಾಜ್ಞಾನವಿಷಯಂ ಪ್ರತ್ಯಕ್ಷಂ ತಾವತ್ 'ಅಹಮಜ್ಞಃ, ಮಾಮನ್ಯಂ ಚ ನ ಜಾನಾಮಿ' ಇತ್ಯಪರೋಕ್ಷಾವಭಾಸಃ, ಅಯಂ ತು ನ ಜ್ಞಾನಪ್ರಾಗಭಾವವಿಷಯಃ, ಸ ಹಿ ಷಷ್ಠಪ್ರಮಾಣಗೋಚರಃ; ಅಯಂ ತು 'ಅಹಂ ಸುಖೀ' ಇತಿವತ್ ಅಪರೋಕ್ಷಃ। ಅಭಾವಸ್ಯ ಪ್ರತ್ಯಕ್ಷತ್ವಾಭ್ಯುಪಗಮೇಽಪಿ ಅಯಮನುಭವೋ ನಾತ್ಮಜ್ಞಾನಾಭಾವವಿಷಯಃ; ಅನುಭವವೇಲಾಯಾಮಪಿ ಜ್ಞಾನಸ್ಯ ವಿದ್ಯಮಾನತ್ವಾತ್। ಅವಿದ್ಯಮಾನತ್ವೇ ಜ್ಞಾನಾಭಾವಪ್ರತೀತ್ಯನುಪಪತ್ತೇಶ್ಚ ॥

ಏತದುಕ್ತಂ ಭವತಿ- 'ಅಹಮಜ್ಞಃ' ಇತ್ಯಸ್ಮಿನ್ ಅನುಭವೇ ಅಹಮ್ ಇತ್ಯಾತ್ಮನೋಽಭಾವಧರ್ಮಿತಯಾ ಜ್ಞಾನಸ್ಯ ಚ ಪ್ರತಿಯೋಗಿತಯಾ ಅವಗತಿರಸ್ತಿ ವಾ ನ ವಾ? ಅಸ್ತಿ ಚೇತ್, ವಿರೋಧಾದೇವ ನ ಜ್ಞಾನಾಭಾವಾನುಭವಸಂಭವಃ। ನೋ ಚೇತ್, ಧರ್ಮಿಪ್ರತಿಯೋಗಿಜ್ಞಾನಸವ್ಯಪೇಕ್ಷೋ ಜ್ಞಾನಾಭಾವಾನುಭವಃ ಸುತರಾಂ ನ ಸಂಭವತಿ। ಜ್ಞಾನಾಭಾವಸ್ಯ ಅನುಮೇಯತ್ವೇಽಭಾವಾಖ್ಯಪ್ರಮಾಣವಿಷಯತ್ವೇ ಚ ಇಯಮನುಪಪತ್ತಿಃ ಸಮಾನಾ। ಅಸ್ಯಾಜ್ಞಾನಸ್ಯ ಭಾವರೂಪತ್ವೇ ಧರ್ಮಿಪ್ರತಿಯೋಗಿಜ್ಞಾನಸದ್ಭಾವೇಽಪಿ ವಿರೋಧಾಭಾವಾತ್ ಅಯಮನುಭವೋ ಭಾವರೂಪಾಜ್ಞಾನವಿಷಯ ಏವಾಭ್ಯುಪಗನ್ತವ್ಯಃ ಇತಿ ॥

---

1. ಅಧ್ಯಾಸವೆಂದರೆ ಪಂಚಪಾದಿಕಾಪ್ರಸ್ಥಾನದಲ್ಲಿ ಮುಖ್ಯವಾಗಿ ಅಧ್ಯಸ್ತವಸ್ತುವೇ.

2. ಆರೋಪರೂಪವಾದ ಅವಿದ್ಯೆಯದೇ.

3. ಜಗತ್ತೆಂಬ ಅಧ್ಯಾಸವು ಅನಾದ್ಯವಿದ್ಯೆಯಿಂದ; ಮಿಕ್ಕ ಅಧ್ಯಾಸಗಳು ಅದರ ಅವಸ್ಥಾವಿಶೇಷದಿಂದ ಆಗಿರುವವು.

4. ಅರ್ಥಾಧ್ಯಾಸ, ಜ್ಞಾನಾಧ್ಯಾಸ- ಎಂದು ಕಾದಾಚಿತ್ಕಾಧ್ಯಾಸಗಳು.

5. ಮಿಥ್ಯಾಭೂತವಸ್ತುವೂ ಕಾರ್ಯವೇ ಆಗಿರುವದರಿಂದ ಅದಕ್ಕೆ ಅನುಗುಣವಾದ ಮಿಥ್ಯಾಕಾರಣವಿರಬೇಕು -ಎಂದು ಅಭಿಪ್ರಾಯ.

ನನು ಚ ಭಾವರೂಪಮಪ್ಯಜ್ಞಾನಂ ವಸ್ತುಯಾಥಾತ್ಮ್ಯಾವಭಾಸರೂಪೇಣ ಸಾಕ್ಷಿಚೈತನ್ಯೇನ ವಿರುಧ್ಯತೇ । ನೈವಮ್ । ಸಾಕ್ಷಿಚೈತನ್ಯಂ ನ ವಸ್ತುಯಾಥಾತ್ಮ್ಯ ವಿಷಯಮ್, ಅಪಿ ತ್ವಜ್ಞಾನವಿಷಯಮ್, ಅನ್ಯಥಾ ಮಿಥ್ಯಾರ್ಥಾವಭಾಸಾನುಪ ಪತ್ತೇಃ । ನ ಹ್ಯಜ್ಞಾನವಿಷಯೇಣ ಜ್ಞಾನೇನ ಅಜ್ಞಾನಂ ನಿವರ್ತತೇ ಇತಿ ನ ವಿರೋಧಃ ॥

ನನು ಚ ಇದಂ ಭಾವರೂಪಮಪ್ಯಜ್ಞಾನಂ ವಿಷಯವಿಶೇಷವ್ಯಾವೃತ್ತಮೇವ ಸಾಕ್ಷಿಚೈತನ್ಯಸ್ಯ ವಿಷಯೋ ಭವತಿ । ಸ ವಿಷಯಃ ಪ್ರಮಾಣಾಧೀನಸಿದ್ಧಿರಿತಿ ಕಥಮಿವ ಸಾಕ್ಷಿಚೈತನ್ಯೇನ ಅಸ್ಮದರ್ಥವ್ಯಾವೃತ್ತಮಜ್ಞಾನಂ ವಿಷಯೀಕ್ರಿಯತೇ ? ನೈಷ ದೋಷಃ । ಸರ್ವಮೇವ ವಸ್ತುಜಾತಂ ಜ್ಞಾತತಯಾ ಅಜ್ಞಾತತಯಾ ವಾ ಸಾಕ್ಷಿಚೈತನ್ಯಸ್ಯ ವಿಷಯಭೂತಮ್ । ತತ್ರ ಜಡತ್ವೇನ ಜ್ಞಾತತಯಾ ಸಿಧ್ಯತ ಏವ ಪ್ರಮಾಣವ್ಯವಧಾನಾಪೇಕ್ಷಾ । ಅಜಡಸ್ಯ ತು ಪ್ರತ್ಯಗ್ವಸ್ತುನಃ ಸ್ವಯಂ ಸಿದ್ಧ್ಯತಃ ನ ಪ್ರಮಾಣವ್ಯವಧಾನಾಪೇಕ್ಷಾ ಇತಿ ಸದೈವಾಜ್ಞಾನಸ್ಯ ವ್ಯಾವರ್ತಕ ತ್ವೇನ ಅವಭಾಸೋ ಯುಜ್ಯತೇ । ತಸ್ಮಾತ್ ನ್ಯಾಯೋಪಬೃಂಹಿತೇನ ಪ್ರತ್ಯಕ್ಷೇಣ ಭಾವರೂಪಮೇವಾಜ್ಞಾನಂ ಪ್ರತೀಯತೇ ॥

(ಅರ್ಥ)

ಮೊದಲನೆಯದಾಗಿ **ಕಾರಣಾಜ್ಞಾನವಿಷಯದಲ್ಲಿ ಪ್ರತ್ಯಕ್ಷವು** ಯಾವ ದೆಂದರೆ 'ನಾನು ಅಜ್ಞನು, ನಾನು ನನ್ನನ್ನೂ ಮತ್ತೊಬ್ಬನನ್ನೂ ಅರಿಯೆನು' ಎಂದು ಅಪರೋಕ್ಷವಾಗಿ ತೋರುವ (ಜ್ಞಾನವು)[1] ಈ ತೋರಿಕೆಗೆ ಜ್ಞಾನಪ್ರಾಗಭಾವ ವೇನೂ ವಿಷಯವಲ್ಲ ; ಏಕೆಂದರೆ ಅದು ಆರನೆಯ ಪ್ರಮಾಣಕ್ಕೆ[2] ಗೋಚರವಾಗ ತಕ್ಕದ್ದು, ಇದಾದರೋ 'ನಾನು ಸುಖಿ' ಎಂಬಂತೆ ಅಪರೋಕ್ಷವಾಗಿರುತ್ತದೆ. ಅಭಾವವು **ಪ್ರತ್ಯಕ್ಷವೇ** ಎಂದು ಒಪ್ಪಿದರೂ[3] ಈ ಅನುಭವವು ಆತ್ಮಜ್ಞಾನವಿಷಯ ದಿಂದಾಗಲಾರದು ; ಏಕೆಂದರೆ ಅನುಭವದ ಕಾಲದಲ್ಲಿಯೂ ಜ್ಞಾನವು ಇರುತ್ತದೆ.[4] ಅದಿಲ್ಲದೆ ಇದ್ದರೆ ಜ್ಞಾನಾಭಾವದ ಪ್ರತೀತಿಯೂ ಆಗಲಾರದಾದ್ದರಿಂದಲೂ (ಹೀಗೆಂದು ಒಪ್ಪಬೇಕು).

---

1. ಇದು ವಿವರಣದಲ್ಲಿ ಕೊಟ್ಟಿರುವ ಪ್ರತ್ಯಕ್ಷಪ್ರಮಾಣದ ವಿವರ. ಪು. ೯೬ನ್ನು ನೋಡಿ. ಇಲ್ಲಿ ಸುಷುಪ್ತಿಯಲ್ಲಿ ತೋರುವ ಅಜ್ಞಾನವೇ ವಿವಕ್ಷಿತವೆಂದು ತತ್ತ್ವಶುದ್ಧಿಕಾರರೇ ಮೊದಲಾದವರು ಹೇಳುತ್ತಾರೆ– ಎಂದು ತ.ಪ್ರ. ; ಆದರೆ ವಿವರಣದಲ್ಲಿ ಇದಕ್ಕೆ ಆಧಾರವಿಲ್ಲ.

2. ಮೀಮಾಂಸಕರ ಮತದಲ್ಲಿ ಅನುಪಲಬ್ಧಿ ಅಥವಾ ಅಭಾವ ಎಂಬುದು ಆರನೆಯ ಪ್ರಮಾಣ.

3. ಅಭಾವವೂ ಪ್ರತ್ಯಕ್ಷವೇದ್ಯ– ಎಂದು ನೈಯಾಯಿಕರು ಹೇಳುತ್ತಾರೆ.

4. ಜ್ಞಾನವು ಇರುವಾಗ ಅದರ ಅಭಾವವು ಎಲ್ಲಿರಬೇಕು ? –ಎಂದು ಆಶಯ.

ಇಲ್ಲಿ ಇಷ್ಟನ್ನು ಹೇಳಿದಂತಾಯಿತು : 'ನಾನು ಅಜ್ಞನು' ಎಂಬೀ ಅನುಭವದಲ್ಲಿ 'ನಾನು' ಎಂದು ಆತ್ಮನನ್ನು ಅನುಭವಕ್ಕೆ ಧರ್ಮಿಯಾಗಿಯೂ ಜ್ಞಾನವನ್ನು ಪ್ರತಿಯೋಗಿಯಾಗಿಯೂ[1] (ಅರಿಯುವ) ಅವಗತಿಯು ಇದೆಯೊ, ಇಲ್ಲವೊ ? ಇದೆ ಎಂದರೆ, ವಿರೋಧವಾಗಿರುವವರಿಂದಲೇ ಜ್ಞಾನಾಭಾವದ ಅನುಭವವು ಸಂಭವಿಸುವದಿಲ್ಲ[2] ; ಇಲ್ಲವೆಂದರೆ ಧರ್ಮಿಪ್ರತಿಯೋಗಿಗಳ ಜ್ಞಾನದ ಅಪೇಕ್ಷೆಯುಳ್ಳ ಜ್ಞಾನಾಭಾವಾನುಭವವು ಇನ್ನೂ ನಿಶ್ಚಯವಾಗಿ ಸಂಭವಿಸುವದಿಲ್ಲ. ಜ್ಞಾನಾಭಾವವು **ಅನುಮೇಯವೆಂದಿಟ್ಟುಕೊಂಡರೂ ಅಭಾವವೆಂಬ ಪ್ರಮಾಣಕ್ಕೆ** ವಿಷಯವೆಂದು ಇಟ್ಟುಕೊಂಡರೂ ಈ ಅನುಪಪತ್ತಿಯು ಇದ್ದೇ ಇರುತ್ತದೆ.

**ಈ ಅಜ್ಞಾನವು ಭಾವರೂಪವೆನ್ನುವವರ ಪಕ್ಷದಲ್ಲಿಯೊ,** ಧರ್ಮಿಪ್ರತಿಯೋಗಿಗಳ ಜ್ಞಾನವು ಇದ್ದರೂ (ಯಾವ) ವಿರೋಧವೂ ಇಲ್ಲದ್ದರಿಂದ[3] ಈ ಅನುಭವವು ಭಾವರೂಪಾಜ್ಞಾನವಿಷಯಕವಾದದ್ದೇ ಎಂದು ಒಪ್ಪಬೇಕು.

(ಆಕ್ಷೇಪ) :– ಭಾವರೂಪವಾದ ಅಜ್ಞಾನವುಕೂಡ ವಸ್ತುವಿನ ತತ್ತ್ವದ ಅನುಭವರೂಪವಾದ ಸಾಕ್ಷಿಚೈತನ್ಯಕ್ಕೆ ವಿರುದ್ಧವಲ್ಲವೆ ?

(ಪರಿಹಾರ) :– ಹಾಗಲ್ಲ. ಏಕೆಂದರೆ ಸಾಕ್ಷಿಚೈತನ್ಯಕ್ಕೆ ವಸ್ತುವಿನ ತತ್ತ್ವವು ವಿಷಯವಲ್ಲ, ಮತ್ತೇನೆಂದರೆ ಅಜ್ಞಾನವೇ[4] (ಅದಕ್ಕೆ) ವಿಷಯವು. ಹಾಗಿಲ್ಲದಿದ್ದರೆ, ಮಿಥ್ಯಾಪದಾರ್ಥವು ತೋರಲೇಬಾರದಾಗುವದು.[5] ಅಜ್ಞಾನವನ್ನು ವಿಷಯೀಕರಿಸುವ ಜ್ಞಾನದಿಂದ ಅಜ್ಞಾನವೇನೂ ತೊಲಗಲಾರದಷ್ಟೆ[6] ? ಆದ್ದರಿಂದ (ಇಲ್ಲಿ ಯಾವ) ವಿರೋಧವೂ ಇಲ್ಲ.

---

1. ಘಟದ ಅಭಾವವು ನೆಲದಲ್ಲಿದೆ– ಎಂಬಲ್ಲಿ ಅಭಾವಕ್ಕೆ ನೆಲವು ಧರ್ಮಿ, ಘಟವು ಪ್ರತಿಯೋಗಿ ; ಆತ್ಮನಲ್ಲಿ ಜ್ಞಾನಾಭಾವವಿದೆ ಎನ್ನುವಾಗ ಆತ್ಮನು ಧರ್ಮಿ, ಜ್ಞಾನವು ಪ್ರತಿಯೋಗಿ.

2. ಏಕೆಂದರೆ ಅವಗತಿಯೇ ಜ್ಞಾನ.

3. ಒಂದು ಭಾವದ ಜ್ಞಾನವು ಮತ್ತೊಂದು ಭಾವದ ಜ್ಞಾನವಿರುವದಕ್ಕೆ ವಿರುದ್ಧವಲ್ಲವಷ್ಟೆ ? –ಎಂದು ಭಾವ.

4. ಈ ಅಜ್ಞಾನವು ಯಾವದೆಂಬ ವಿಷಯಕ್ಕೆ ಮತಭೇದಗಳನ್ನು ಪರಿಶಿಷ್ಟದಲ್ಲಿ ನೋಡಿ.

5. ಅಜ್ಞಾನಶಕ್ತಿಯನ್ನೊಪ್ಪದಿದ್ದರೆ ಮಿಥ್ಯಾರ್ಥವು ತೋರುವದೆಂಬುದು ಹೊಂದುವದಿಲ್ಲ– ಎಂದು ಪಂಚಪಾದಿಕಾಕಾರರ ಮತ.

6. ಯಾವ ಜ್ಞಾನದಿಂದ ಯಾವ ವಿಷಯವು ತೋರುವದೋ ಅದರಿಂದಲೇ ಆ ವಿಷಯವು ಬಾಧಿತವಾಗುವದಿಲ್ಲ. ಇಲ್ಲಿ ಅಜ್ಞಾನವೇ ವಿಷಯ.

(ಆಕ್ಷೇಪ) :– ಇನ್ನೊಂದು (ಶಂಕೆ) : ಈ ಭಾವರೂಪವಾದ ಅಜ್ಞಾನವೂ (ತನ್ನ) ವಿಷಯವಿಶೇಷಕ್ಕಿಂತ[1] ಭಿನ್ನವಾಗಿಯೇ ಅಲ್ಲವೆ, ಸಾಕ್ಷಿಚೈತನ್ಯಕ್ಕೆ ವಿಷಯವಾಗಿರುತ್ತವೆ[2] ? ಆ ವಿಷಯವು ಪ್ರಮಾಣಕ್ಕೆ ಅಧೀನವಾಗಿ ಸಿದ್ಧವಾಗಿರುವದಿಲ್ಲವಾದ್ದರಿಂದ ಸಾಕ್ಷಿಚೈತನ್ಯವು ಅಸ್ಮದರ್ಥಕ್ಕಿಂತ ಬೇರೆಯಾದ ಅಜ್ಞಾನವನ್ನು ಹೇಗೆತಾನೆ ವಿಷಯೀಕರಿಸೀತು?

(ಪರಿಹಾರ) :– ಇದೇನೂ ದೋಷವಲ್ಲ. ಯಾವ ವಸ್ತುಜಾತವೇ ಆಗಲಿ ಜ್ಞಾತವಾಗಿಯೋ ಅಜ್ಞಾತವಾಗಿಯೋ ಸಾಕ್ಷಿಚೈತನ್ಯಕ್ಕೆ ವಿಷಯವಾಗಿರುತ್ತದೆ.[3] ಹೀಗಿರುವಲ್ಲಿ ಜಡವಾಗಿದ್ದು (ಯಾವದು) ಜ್ಞಾತವಾಗಿ ಸಿದ್ಧವಾಗುವದೋ ಅದಕ್ಕೆ ಪ್ರಮಾಣಾಪೇಕ್ಷೆಯು ಇದ್ದೇಇರುತ್ತದೆ; ಜಡವಲ್ಲದ ಪ್ರತ್ಯಗ್ವಸ್ತುವು ಮಾತ್ರ[4] ತಾನೇ ಸಿದ್ಧವಾಗುವಯಾದ್ದರಿಂದ (ಅದರ ಸಿದ್ಧಿಗೆ) ಪ್ರಮಾಣವೆಂಬ ಅಪೇಕ್ಷೆಯು ಇರುತ್ತದೆ). ಯಾವಾಗಲೂ ಅಜ್ಞಾನಕ್ಕೆ ವ್ಯಾವರ್ತಕವಾಗಿ ತೋರುವದು ಯುಕ್ತವಾಗಿರುತ್ತದೆ. ಆದ್ದರಿಂದ (ಹೀಗೆ) ನ್ಯಾಯೋಪಬೃಂಹಿತವಾದ ಪ್ರತ್ಯಕ್ಷದಿಂದ ಭಾವರೂಪವಾದ ಅಜ್ಞಾನವೇ ಪ್ರತೀತವಾಗುತ್ತದೆ.

(ಮೂಲ)

ತದಿದಂ ಭಾವರೂಪಮಜ್ಞಾನಮ್ ಅನುಮಾನೇನಾಪಿ ಸಿಧ್ಯತಿ। 'ವಿವಾದಾಧ್ಯಾಸಿತಂ ಪ್ರಮಾಣಜ್ಞಾನಂ ಸ್ವಪ್ರಾಗಭಾವವ್ಯತಿರಿಕ್ತಸ್ವವಿಷಯಾವರಣಸ್ವನಿವರ್ತ್ಯಸ್ವದೇಶಗತವಸ್ತ್ವನ್ತರಪೂರ್ವಕಮ್ ; ಅಪ್ರಕಾಶಿತಾರ್ಥಪ್ರಕಾಶಕತ್ವಾತ್, ಅನ್ಧಕಾರೇ ಪ್ರಥಮೋತ್ಪನ್ನಪ್ರದೀಪಪ್ರಭಾವತ್'– ಇತಿ ॥

---

1. ಈ ಶಂಕೆಯಾಗಲಿ ಪರಿಹಾರವಾಗಲಿ ವಿವರಣದಲ್ಲಿ ಕಾಣುವದಿಲ್ಲ.

2. ಸಾಕ್ಷಿಚೈತನ್ಯವು ಘಟವಿಶೇಷಿತಾಜ್ಞಾನವನ್ನು ತೋರಿಸುತ್ತದೆಯೊ, ಬರಿಯ ಆಜ್ಞಾನವನ್ನೊ ? ಮೊದಲನೆಯದಲ್ಲ. ಏಕೆಂದರೆ ವಿಷಯವು ಪ್ರಮಾಣಗಮ್ಯವಾಗಿರುತ್ತದೆ ; ಬರಿಯ ಅಜ್ಞಾನವನ್ನೂ ಅಲ್ಲ, ಏಕೆಂದರೆ ಹಾಗೆಂದು ಅರಿವಾಗುವದಿಲ್ಲ– ಎಂದು ಶಂಕಿಸಿದರೆ ಘಟಾಜ್ಞಾನವು ಸಾಕ್ಷಿವೇದ್ಯವಾದರೂ ಘಟವು ಪ್ರಮಾಣದಿಂದ ಜ್ಞಾತವಾಗುತ್ತದೆ –ಎಂಬ ಸಮಾಧಾನವನ್ನು ತತ್ತ್ವಬೋಧಿನಿಯಲ್ಲಿ [ಪು. ೧೦೦] ಕೊಟ್ಟಿದೆ. ಇಲ್ಲಿ 'ನಾನು ಅಜ್ಞನು' ಎಂಬಲ್ಲಿ 'ನಾನು ಪ್ರಮಾಣವೇದ್ಯನಲ್ಲವಲ್ಲ !' –ಎಂದು ಶಂಕಿಸಿ ಸಮಾಧಾನವನ್ನು ಕೊಟ್ಟಿದೆ.

3. ಇದನ್ನು ಅರಿತೆನು ಎಂಬುದು ಜ್ಞಾತತ್ವೇನ ಸಾಕ್ಷಿವಿಷಯವಾದದ್ದು, ಇದನ್ನು ಅರಿಯೆನು ಎಂಬುದು ಅಜ್ಞಾತತ್ವೇನ ವಿಷಯ.

4. ಇಲ್ಲಿ ಪ್ರತ್ಯಗಾತ್ಮನೆಂದರೆ ಜೀವನೇ ; ಏಕೆಂದರೆ 'ನಾನು ಅರಿಯೆ' ಎಂದು ಅವನೇ ಅಜ್ಞಾನಕ್ಕೆ ವಿಶೇಷಣವಾಗುತ್ತಾನೆ (ಪ್ರತ್ಯಗಾತ್ಮಶಬ್ದವನ್ನು ಸಾಕ್ಷಿ ಎಂಬರ್ಥದಲ್ಲಿಗೂಡ ಶಂಕರಭಾಷ್ಯದಲ್ಲಿ ಬಳಸಿರುತ್ತದೆ).

ಆಲೋಕಾಭಾವಮಾತ್ರಂ ವಾ ರೂಪದರ್ಶನಾಭಾವಮಾತ್ರಂ ವಾ ತಮಃ, ನ ದ್ರವ್ಯಾನ್ತರಮ್ । ತತ್ ಕಥಂ ಭಾವರೂಪಾಜ್ಞಾನಸಾಧನೇ ನಿದರ್ಶನತಯಾ ಉಪನ್ಯಸ್ಯತ ಇತಿ ಚೇತ್ ? ಉಚ್ಯತೇ-ಬಹುಲತ್ವವಿರಲತ್ವಾದ್ಯವಸ್ಥಾಯೋಗೇನ ರೂಪವತ್ತ್ವಯಾ ಚ ಉಪಲಬ್ಧೇಃ, ದ್ರವ್ಯಾನ್ತರಮೇವ ತಮಃ –ಇತಿ ನಿರವದ್ಯಮ್ ಇತಿ ॥

(ಅರ್ಥ)

ಆ ಈ ಭಾವರೂಪವಾದ ಅಜ್ಞಾನವು ಅನುಮಾನದಿಂದಲೂ ಸಿದ್ಧವಾಗುತ್ತದೆ. ಹೇಗೆಂದರೆ, 'ವಿವಾದಕ್ಕೆ ವಿಷಯವಾಗಿರುವ ಪ್ರಮಾಣಜ್ಞಾನವು ತನ್ನ ಪ್ರಾಗಭಾವಕ್ಕಿಂತ ವ್ಯತಿರಿಕ್ತವಾದ ತನ್ನ ವಿಷಯಕ್ಕೆ ಆವರಣವೂ ತನ್ನಿಂದ ನಿವೃತ್ತಿಯಾಗತಕ್ಕದ್ದೂ ಆಗಿ ತನ್ನ ಪ್ರದೇಶದಲ್ಲಿಯೇ ಇರುವ ಮತ್ತೊಂದು ವಸ್ತು ಮೊದಲು ಇರತಕ್ಕದ್ದಾಗಿರಬೇಕು ; ಏಕೆಂದರೆ ಅದು ಪ್ರಕಾಶಿತವಾಗದೆ ಇದ್ದ ಪದಾರ್ಥವನ್ನು ಬೆಳಗುತ್ತದೆ ; ಕಗ್ಗತ್ತಲೆಯಲ್ಲಿ ಮೊದಲು ಹುಟ್ಟಿದ ದೊಡ್ಡದೀಪದಂತೆಯೇ ಇದು' (ಎಂಬುದು ಅನುಮಾನ).[1]

(ಶಂಕೆ) :- ಕತ್ತಲೆ (ಎಂಬುದು) ಬೆಳಕಿನ ಅಭಾವಮಾತ್ರವು, ಅಥವಾ ರೂಪದರ್ಶನದ ಅಭಾವಮಾತ್ರವು ; (ಇಷ್ಟೇ ಹೊರತು) ಅದು ಮತ್ತೊಂದು[2] ದ್ರವ್ಯವಲ್ಲ. ಹೀಗಿರುವಲ್ಲಿ (ಅದನ್ನು) ಭಾವರೂಪವಾದ ಅಜ್ಞಾನವನ್ನು ಸಾಧಿಸುವದಕ್ಕೆ ಸಾಧನವೆಂದು ಹೇಗೆ ಹೇಳುತ್ತಿದೀರಿ ?

(ಪರಿಹಾರ) :- ಹೇಳುತ್ತೇವೆ. ಬಹಳವಾಗಿರುವದು, ವಿರಳವಾಗಿರುವದು-ಮುಂತಾದ ಅವಸ್ಥೆಯ ಸಂಬಂಧವುಳ್ಳದ್ದಾಗಿಯೂ ರೂಪವುಳ್ಳದ್ದಾಗಿಯೂ ತೋರಿ ಬರುತ್ತದೆಯಾದ್ದರಿಂದ ಕತ್ತಲೆಯು ಬೇರೆ ಒಂದು ಪದಾರ್ಥವೇ.[3] ಆದ್ದರಿಂದ (ಈ ದೃಷ್ಟಾಂತವನ್ನು) ಹೇಳಿದ್ದು ನಿರ್ದುಷ್ಟವಾಗಿರುತ್ತದೆ.

---

1. ಈ ಅನುಮಾನಪ್ರಮಾಣವನ್ನು ವಿವರಣದಲ್ಲಿ ಕೊಟ್ಟಿದೆ (ಪು. ೧೦೦).

2. ವೈಶೇಷಿಕರ ಮತದಲ್ಲಿ ತಮಸ್ಸು ದ್ರವ್ಯವಲ್ಲ ; ಒಂಬತ್ತೇ ದ್ರವ್ಯಗಳೆಂದು ಅವರ ಮತ.

3. ಮೀಮಾಂಸಕರು ತಮಸ್ಸನ್ನು ದ್ರವ್ಯವೆನ್ನುತ್ತಾರೆ. ಆ ಮತವನ್ನು ಅನುಸರಿಸಿ ಪಂಚಪಾದಿಕಾಕಾರರೂ ವಿವರಣಕಾರರೂ ತಮಸ್ಸು ದ್ರವ್ಯವೆಂದೇ ಸಾಧಿಸಿರುತ್ತಾರೆ. (ಪು. ೫೪) ಭಾಷ್ಯದಲ್ಲಿ ಅಜ್ಞಾನಕ್ಕೆ ಪ್ರಮಾಣವನ್ನು ಕೊಟ್ಟಿಲ್ಲ, ತಮಸ್ಸು ಭಾವರೂಪವೆಂಬ ಆಗ್ರಹವೂ ಕಾಣುವದಿಲ್ಲ.

# ಸಿದ್ಧಾಂತ : ಅವಿದ್ಯೆಗೆ ಪ್ರತ್ಯಕ್ಷತ್ವಾನುಪಪತ್ತಿ

## (ಮೂಲ)

ಅತ್ರೋಚ್ಯತೇ–'ಅಹಮಜ್ಞೋ ಮಾಮನ್ಯಂ ಚ ನ ಜಾನಾಮಿ' ಇತ್ಯತ್ರೋಪಪತ್ತಿಸಹಿತೇನ ಕೇವಲೇನ ಚ ಪ್ರತ್ಯಕ್ಷೇಣ ನ ಭಾವರೂಪಮಜ್ಞಾನಂ ಪ್ರತೀಯತೇ। ಯಸ್ತು ಜ್ಞಾನಪ್ರಾಗಭಾವವಿಷಯತ್ವೇ ವಿರೋಧ ಉಕ್ತಃ, ಸ ಹಿ ಭಾವರೂಪಾಜ್ಞಾನೇಽಪಿ ತುಲ್ಯಃ। ವಿಷಯತ್ವೇನ, ಆಶ್ರಯತ್ವೇನ ಚ ಅಜ್ಞಾನಸ್ಯ ವ್ಯಾವರ್ತಕತಯಾ ಪ್ರತ್ಯಗರ್ಥಃ ಪ್ರತಿಪನ್ನೋ ವಾ, ಅಪ್ರತಿಪನ್ನೋ ವಾ? ಪ್ರತಿಪನ್ನಶ್ಚೇತ್ ತತ್ಸ್ವರೂಪಜ್ಞಾನನಿವರ್ತ್ಯಂ ತದಜ್ಞಾನಂ ತಸ್ಮಿನ್ ಪ್ರತಿಪನ್ನೇ ಕಥಮಿವ ತಿಷ್ಠತಿ ? ಅಪ್ರತಿಪನ್ನಶ್ಚೇತ್ ವ್ಯಾವರ್ತಕಾಶ್ರಯವಿಷಯಜ್ಞಾನಶೂನ್ಯಮ್ ಅಜ್ಞಾನಂ ಕಥಮನುಭೂಯೇತ ?

ಅಥ ವಿಶದಸ್ವರೂಪಾವಭಾಸೋಽಜ್ಞಾನವಿರೋಧೀ, ಅವಿಶದಸ್ವರೂಪಂ ತು ಪ್ರತೀಯತೇ ಇತ್ಯಾಶ್ರಯವಿಷಯಜ್ಞಾನೇ ಸತ್ಯಪಿ ನಾಜ್ಞಾನಾನುಭವವಿರೋಧಃ ಇತಿ ; ಹನ್ತ ತರ್ಹಿ ಜ್ಞಾನಪ್ರಾಗಭಾವೋಽಪಿ ವಿಶದಸ್ವರೂಪವಿಷಯಃ, ಆಶ್ರಯಪ್ರತಿಯೋಗಿಜ್ಞಾನಂ ತು ಅವಿಶದಸ್ವರೂಪವಿಷಯಮ್ ಇತಿ ನ ಕಶ್ಚಿದ್ ವಿಶೇಷೋಽನ್ಯತ್ರಾಭಿನಿವೇಶಾತ್। ಭಾವರೂಪಸ್ಯಾಜ್ಞಾನಸ್ಯಾಪಿ ಹಿ ಅಜ್ಞಾನಮ್ ಇತಿ ಸಿಧ್ಯತಃ ಪ್ರಾಗಭಾವಸಿದ್ಧಾವಿವ ಸಾಪೇಕ್ಷತ್ವಮ್ ಅಸ್ತ್ಯೇವ। ತಥಾ ಹಿ ಅಜ್ಞಾನಮ್ ಇತಿ ಜ್ಞಾನಾಭಾವಃ, ತದನ್ಯಃ, ತದ್ವಿರೋಧೀ ವಾ? ತ್ರಯಾಣಾಮಪಿ ತತ್ಸ್ವರೂಪಜ್ಞಾನಾಪೇಕ್ಷಾ ಅವಶ್ಯಾಶ್ರಯಣೀಯಾ। ಯದ್ಯಪಿ ತಮಃ ಸ್ವರೂಪಪ್ರತಿಪತ್ತೌ ಪ್ರಕಾಶಾಪೇಕ್ಷಾ ನ ವಿದ್ಯತೇ, ತಥಾಪಿ 'ಪ್ರಕಾಶವಿರೋಧೀ' ಇತ್ಯನೇನಾಕಾರೇಣ ಪ್ರತಿಪತ್ತೌ ಪ್ರಕಾಶಪ್ರತಿಪತ್ತ್ಯಪೇಕ್ಷಾ ಅಸ್ತ್ಯೇವ। ಭವದಭಿಮತಾಜ್ಞಾನಂ ನ ಕದಾಚಿತ್ ಸ್ವರೂಪೇಣ ಸಿಧ್ಯತಿ, ಅಪಿ ತು 'ಅಜ್ಞಾನಮ್' ಇತ್ಯೇವ। ತಥಾ ಸತಿ ಜ್ಞಾನಾಭಾವವತ್ ತದಪೇಕ್ಷತ್ವಂ ಸಮಾನಮ್। ಜ್ಞಾನಪ್ರಾಗಭಾವಸ್ತು ಭವತಾಪ್ಯಭ್ಯುಪಗಮ್ಯತೇ, ಪ್ರತೀಯತೇ ಚ ಇತ್ಯುಭಯಾಭ್ಯುಪೇತೋ ಜ್ಞಾನಪ್ರಾಗಭಾವ ಏವ 'ಅಹಮಜ್ಞೋ ಮಾಮ್ ಅನ್ಯಂ ಚ ನ ಜಾನಾಮಿ' ಇತ್ಯನುಭೂಯತ ಇತ್ಯಭ್ಯುಪಗನ್ತವ್ಯಮ್ ॥

## (ಅರ್ಥ)

ಈ ವಿಷಯದಲ್ಲಿ (ನಾವು) ಹೇಳುವದೇನೆಂದರೆ, 'ನಾನು ಅಜ್ಞನು, ನನ್ನನ್ನೂ ಮತ್ತೊಬ್ಬನನ್ನೂ ಅರಿಯೆನು' ಎಂಬಲ್ಲಿ ಉಪಪತ್ತಿಸಹಿತವಾದ, ಅಥವಾ ಬರಿಯ

ಪ್ರತ್ಯಕ್ಷ[1]ದಿಂದ ಭಾವರೂಪವಾದ ಅಜ್ಞಾನವು ತೋರುವದೇಇಲ್ಲ. ಈ (ಪ್ರತೀತಿಗೆ) ಜ್ಞಾನಪ್ರಾಗಭಾವವೇ ವಿಷಯವಾದರೆ, ಯಾವ ವಿರೋಧವನ್ನು (ನೀವು) ಹೇಳಿರುವಿರೋ, ಅದು ಭಾವರೂಪವಾದ ಅಜ್ಞಾನದ (ಪಕ್ಷ)ದಲ್ಲಿಯೂ ಸಮಾನವಾಗಿರುತ್ತದೆ. (ಹೇಗೆಂದರೆ) ವಿಷಯವಾಗಿಯೂ ಆಶ್ರಯವಾಗಿಯೂ ಅಜ್ಞಾನಕ್ಕೆ ವ್ಯಾವರ್ತಕ(ವಿಶೇಷಣವಾಗಿ) ಪ್ರತ್ಯಗರ್ಥ(ವಾದ ಆತ್ಮನು) ಅರಿಯಲ್ಪಟ್ಟಿರುವನೊ, ಅರಿಯಲ್ಪಟ್ಟಿಲ್ಲವೊ? ಅರಿಯಲ್ಪಟ್ಟಿದ್ದರೆ ಆ (ಪ್ರತ್ಯಗಾತ್ಮನ) ಸ್ವರೂಪದ ಜ್ಞಾನದಿಂದ ತೊಲಗಿಸಬೇಕಾಗಿರುವ ಆ (ಪ್ರತ್ಯಗಾತ್ಮಾ)ಜ್ಞಾನವು ಅವನು ಅರಿಯಲ್ಪಟ್ಟಿರುವಾಗಲೂ ಹೇಗೆತಾನೆ ಇದ್ದೀತು? (ಅವನು) ಅರಿಯಲ್ಪಡದೆ ಇದ್ದರೆ ವ್ಯಾವರ್ತಕವಾದ ಆಶ್ರಯದ ಮತ್ತು ವಿಷಯದ ಜ್ಞಾನವಿಲ್ಲದೆ ಅಜ್ಞಾನವು ಹೇಗೆ ಅನುಭವಕ್ಕೆ ಬಂದೀತು?

ಹೀಗಲ್ಲದೆ ವಿಶದಸ್ವರೂಪವಾದ ಜ್ಞಾನವು ಅಜ್ಞಾನಕ್ಕೆ ವಿರೋಧಿ; ಆದರೆ (ಈಗ) ಅವಿಶದವಾದ ಸ್ವರೂಪವು (ಮಾತ್ರ) ತೋರುತ್ತದೆಯಾಗಿ ಆಶ್ರಯವಿಷಯಗಳ ಜ್ಞಾನವು ಇದ್ದರೂ ಅಜ್ಞಾನದ ಅನುಭವವಾಗುವದು ವಿರುದ್ಧವಲ್ಲ– ಎಂದು (ನಿಮ್ಮ ಮತವಾದರೆ), ಆಹ! ಹಾಗಾದರೆ ಜ್ಞಾನಪ್ರಾಗಭಾವಕ್ಕೂ ವಿಶದಸ್ವರೂಪವೇ ವಿಷಯವಾಗಿರುತ್ತದೆ. ಆಶ್ರಯಪ್ರತಿಯೋಗಿಗಳ ಜ್ಞಾನಕ್ಕೆ ಮಾತ್ರ ಅವಿಶದಸ್ವರೂಪವೇ ವಿಷಯ(ಎನ್ನಬಹುದಾದ್ದರಿಂದ) ಈ ಎರಡು ಅಜ್ಞಾನಗಳಿಗೂ ದುರಭಿಮಾನವನ್ನು ಬಿಟ್ಟರೆ ಮತ್ತೆಯಾವ ವಿಶೇಷವೂ ಇರುವದಿಲ್ಲ; ಭಾವರೂಪವಾದ ಅಜ್ಞಾನವೂ 'ಅಜ್ಞಾನ'ವೆಂದೇ ಸಿದ್ಧವಾಗಬೇಕಾದರೆ– ಪ್ರಾಗಭಾಗವು ಸಿದ್ಧಿಯಾಗಬೇಕಾದರೆ (ಹೇಗೆ ಸಾಪೇಕ್ಷತ್ವವಿದೆಯೋ) ಹಾಗೆ– ಸಾಪೇಕ್ಷತ್ವವೇ ಇರುತ್ತದೆ.[2] ಹೇಗೆಂದರೆ, ಅಜ್ಞಾನವೆಂದರೆ ಜ್ಞಾನದ ಪ್ರಾಗಭಾವ, ಅದಕ್ಕಿಂತ ಅನ್ಯವಾದದ್ದು, ಅಥವಾ ಅದಕ್ಕೆ ವಿರುದ್ಧವಾದದ್ದು ಎಂದರ್ಥವಷ್ಟೆ? (ಈ) ಮೂರಕ್ಕೂ ತನ್ನ ಆ (ವಿಷಯದ) ಸ್ವರೂಪಜ್ಞಾನದ ಅಪೇಕ್ಷೆಯು ಬೇಕೆಂದು ಅವಶ್ಯವಾಗಿ ಇಟ್ಟುಕೊಳ್ಳಬೇಕು, ಕತ್ತಲೆಯ ಸ್ವರೂಪವನ್ನು ಅರಿಯುವಾಗ ಪ್ರಕಾಶಜ್ಞಾನದ ಅಪೇಕ್ಷೆಯಿಲ್ಲವೆಂಬುದು ನಿಜ; ಆದರೂ (ಇದು) 'ಬೆಳಕಿಗೆ ವಿರೋಧಿ' ಎಂಬೀ

1. 'ನಾಮರೂಪಗಳ ಬೀಜರೂಪವಾದ ಪ್ರಕೃತಿಯೇ ಅವಿದ್ಯೆ' ಎಂದು ಪಂಚಪಾದಿಕಾವಿವರಣಪ್ರಸ್ಥಾನದಲ್ಲಿ ಒಪ್ಪಿದೆ (ಪು. ೩೨೮). ಹೀಗಿರುವಲ್ಲಿ ಅದು 'ನಾನು ಅಜ್ಞನು' ಎಂದು ಪ್ರತೀತಿಗೆ ಹೇಗೆ ವಿಷಯ ?– ಎಂಬ ಶಂಕೆಯನ್ನು ಶ್ರೀಭಾಷ್ಯದಲ್ಲಿಯೂ ತೆಗೆದಿಲ್ಲ; ಆ ಪ್ರಶ್ನೆಯನ್ನು ತೆಗೆದು ವಿವರಣದಲ್ಲಿಯೂ ಉತ್ತರವನ್ನು ಹೇಳಿಲ್ಲ.

2. ಹೇಗೆ ಅಭಾವರೂಪಜ್ಞಾನಕ್ಕೆ ಧರ್ಮಿಪ್ರತಿಯೋಗಿಗಳ ಜ್ಞಾನದ ಅಪೇಕ್ಷೆಯಿರುತ್ತದೆಯೋ ಹಾಗೆಯೇ ಭಾವರೂಪಾಜ್ಞಾನಕ್ಕೂ ಆಶ್ರಯವಿಷಯಗಳ ಜ್ಞಾನದ ಅಪೇಕ್ಷೆಯಿದ್ದೇಇರುತ್ತದೆ –ಎಂದು ಅಭಿಪ್ರಾಯ.

ಆಕಾರದಿಂದ ಅರಿತುಕೊಳ್ಳಬೇಕಾಗಿರುವಲ್ಲಿ ಬೆಳಕಿನ ಅರಿವಿನ ಅಪೇಕ್ಷೆಯು ಇದ್ದೇ ಇರುತ್ತದೆ. ನಿನಗೆ ಒಪ್ಪಾಗಿರುವ ಅಜ್ಞಾನವು ಎಂದೂ ಸ್ವರೂಪದಿಂದ ಸಿದ್ಧವಾಗಿರುವದಿಲ್ಲ, 'ಅಜ್ಞಾನವು' ಎಂದೇ ಸಿದ್ಧವಾಗಿರುತ್ತದೆ. ಹಾಗಾದರೆ ಜ್ಞಾನಾಭಾವದಂತೆ ಆ (ಆಶ್ರಯವಿಷಯಗಳ ಅಥವಾ ಧರ್ಮಪ್ರತಿಯೋಗಿಗಳ) ಅಪೇಕ್ಷೆಯಿರುವದೆಂಬುದು ಅದಕ್ಕೂ ಸಮಾನವೇ ಇರುತ್ತದೆ. ಜ್ಞಾನಪ್ರಾಗಭಾವವನ್ನೇನೊ ನೀನೂ ಒಪ್ಪಿರುತ್ತೀಯೆ, (ಎಲ್ಲರಿಗೂ) ತೋರಿಯೂ ತೋರುತ್ತದೆ. ಆದ್ದರಿಂದ ಇಬ್ಬರೂ ಒಪ್ಪಿರುವ ಜ್ಞಾನಪ್ರಾಗಭಾವವೇ 'ನಾನು ಅಜ್ಞನು, ನನ್ನನ್ನೂ ಮತ್ತೊಬ್ಬರನ್ನೂ ಅರಿಯೆನು' ಎಂದು ಅನುಭವಕ್ಕೆ ಬರುತ್ತದೆ ಎಂದು ಒಪ್ಪಬೇಕು.

(ಮೂಲ)

ನಿತ್ಯಮುಕ್ತಸ್ವಪ್ರಕಾಶಚೈತನ್ಯೈಕಸ್ವರೂಪಸ್ಯ ಬ್ರಹ್ಮಣೋಽಜ್ಞಾನಾನುಭವಶ್ಚ ನ ಸಂಭವತಿ, ಸ್ವಾನುಭವಸ್ವರೂಪತ್ವಾತ್ । ಸ್ವಾನುಭವಸ್ವರೂಪಮಪಿ ತಿರೋಹಿತಸ್ವರೂಪಮ್ ಅಜ್ಞಾನಮ್ ಅನುಭವತಿ ಇತಿ ಚೇತ್, ಕಿಮಿದಂ ತಿರೋಹಿತಸ್ವರೂಪತ್ವಮ್? ಅಪ್ರಕಾಶಿತಸ್ವರೂಪತ್ವಮ್ ಇತಿ ಚೇತ್। ಸ್ವಾನುಭವಸ್ವರೂಪಸ್ಯ ಕಥಮ್ ಅಪ್ರಕಾಶಿತಸ್ವರೂಪತ್ವಮ್ ? ಸ್ವಾನುಭವಸ್ವರೂಪಸ್ಯಾಪಿ ಅನ್ಯತೋಽಪ್ರಕಾಶಿತಸ್ವರೂಪತ್ವಮುಪಪದ್ಯತ ಇತಿ ಚೇತ್ । ಏವಂ ತರ್ಹಿ ಪ್ರಕಾಶರೂಪಧರ್ಮಾನಭ್ಯುಪಗಮೇನ ಪ್ರಕಾಶಸ್ಯೈವ ಸ್ವರೂಪತ್ವಾತ್ ಅನ್ಯತಃ ಸ್ವರೂಪನಾಶ ಏವ ಸ್ಯಾದಿತಿ ಪೂರ್ವಮೇವೋಕ್ತಮ್ । ಕಿಂ ಚ ಬ್ರಹ್ಮಸ್ವರೂಪತಿರೋಧಾನಹೇತುಭೂತಮೇತದಜ್ಞಾನಂ ಸ್ವಯಮನುಭೂತಂ ಸತ್ ಬ್ರಹ್ಮ ತಿರಸ್ಕರೋತಿ, ಬ್ರಹ್ಮ ತಿರಸ್ಕೃತ್ಯ ಸ್ವಯಂ ತದನುಭವವಿಷಯೋ ಭವತಿ–ಇತ್ಯನ್ಯೋನ್ಯಾಶ್ರಯಣಮ್ ?

ಅನುಭೂತಮೇವ ತಿರಸ್ಕರೋತೀತಿ ಚೇತ್ । ಯದ್ಯತಿರೋಹಿತಸ್ವರೂಪಮೇವ ಬ್ರಹ್ಮಾಜ್ಞಾನಮನುಭವತಿ, ತದಾ ತಿರೋಧಾನಕಲ್ಪನಾ ನಿಷ್ಪ್ರಯೋಜನಾ ಸ್ಯಾತ್ ; ಅಜ್ಞಾನಸ್ವರೂಪಕಲ್ಪನಾ ಚ। ಬ್ರಹ್ಮಣೋಽಜ್ಞಾನದರ್ಶನವತ್ ಅಜ್ಞಾನಕಾರ್ಯತಯಾಽಭಿಮತಪ್ರಪಞ್ಚದರ್ಶನಸ್ಯಾಪಿ ಸಂಭವಾತ್ ॥

ಕಿಂ ಚ, ಬ್ರಹ್ಮಣೋಽಜ್ಞಾನಾನುಭವಃ, ಕಿಂ ಸ್ವತೋಽನ್ಯತೋ ವಾ ? ಸ್ವತಶ್ಚೇತ್ ಅಜ್ಞಾನಾನುಭವಸ್ಯ ಸ್ವರೂಪಪ್ರಯುಕ್ತತ್ವೇನ ಅನಿರ್ಮೋಕ್ಷಃ ಸ್ಯಾತ್। ಅನುಭೂತಿಸ್ವರೂಪಸ್ಯ ಬ್ರಹ್ಮಣೋಽಜ್ಞಾನಾನುಭವಸ್ವರೂಪತ್ವೇನ ಮಿಥ್ಯಾರಜತಬಾಧಕಜ್ಞಾನೇನ ರಜತಾನುಭವಸ್ಯಾಪಿ ನಿವೃತ್ತಿವತ್, ನಿವರ್ತಕಜ್ಞಾನೇನ ಅಜ್ಞಾನಾನುಭೂತಿರೂಪಬ್ರಹ್ಮಸ್ವರೂಪನಿವೃತ್ತಿರ್ವಾ । ಅನ್ಯತಶ್ಚೇತ್, ಕಿಂ ತದನ್ಯತ್ ? ಅಜ್ಞಾನಾನ್ತರಮ್ ಇತಿ ಚೇತ್, ಅನವಸ್ಥಾ ಸ್ಯಾತ್। ಬ್ರಹ್ಮ

ತಿರಸ಼್ೃತ್ಯೈವ ಸ್ವಯಮ್ ಅನುಭವವಿಷಯೋ ಭವತಿ – ಇತಿ ಚೇತ್, ತಥಾ ಸತಿ ಇದಮಜ್ಞಾನಂ ಕಾಚಾದಿವತ್ ಸ್ವಸತ್ತಯಾ ಬ್ರಹ್ಮ ತಿರಸ್ಕರೋತೀತಿ ಜ್ಞಾನ ಬಾಧ್ಯತ್ವಮ್ ಅಜ್ಞಾನಸ್ಯ ನ ಸ್ಯಾತ್ ॥

(ಅರ್ಥ)

ನಿತ್ಯಮುಕ್ತವೂ ಸ್ವಪ್ರಕಾಶವೂ ಆಗಿರುವ ಚೈತನ್ಯಸ್ವರೂಪವಾದ ಬ್ರಹ್ಮವು ಅಜ್ಞಾನವನ್ನು ಅನುಭವಿಸುತ್ತದೆ ಎಂಬುದೂ ಸಂಭವಿಸುವದಿಲ್ಲ ; ಏಕೆಂದರೆ ಅದು ತನ್ನನ್ನು ಅನುಭವಿಸುವ ಸ್ವರೂಪವುಳ್ಳದ್ದಾಗಿರುತ್ತದೆ.[1]

(ಶಂಕೆ) :– ಸ್ವಾನುಭವಸ್ವರೂಪವುಳ್ಳದ್ದೇ ಆದರೂ ತಿರೋಹಿತಸ್ವರೂಪ ವಾದ (ಬ್ರಹ್ಮವು ಅಜ್ಞಾನವನ್ನು) ಅನುಭವಿಸಬಹುದಲ್ಲ !

(ಸಿದ್ಧಾಂತಿ) :– ತಿರೋಹಿತಸ್ವರೂಪವುಳ್ಳದ್ದು ಎಂಬುದಕ್ಕೇನರ್ಥ ?

(ಪೂರ್ವಪಕ್ಷಿ) :– ಬೆಳಗದೆ ಇರುವ ಸ್ವರೂಪವುಳ್ಳದ್ದಾಗಿರುವಿಕೆಯೇ (ತಿರೋಹಿತಸ್ವರೂಪತ್ವ).

(ಸಿದ್ಧಾಂತಿ) :– ಸ್ವಾನುಭವಸ್ವರೂಪವುಳ್ಳದ್ದಕ್ಕೆ ಬೆಳಗದೆ ಇರುವ ಸ್ವರೂಪ ವುಳ್ಳದ್ದಾಗಿರುವದೆಂಬುದು ಹೇಗೆ (ಹೊಂದುತ್ತದೆ) ?

(ಪೂರ್ವಪಕ್ಷಿ) :– (ಅದು) ಸ್ವಾನುಭವಸ್ವರೂಪದ್ದೇ ಆದರೂ ಮತ್ತೊಂದ ರಿಂದ (ಅದಕ್ಕೆ) ಸ್ವರೂಪವು ಅಪ್ರಕಾಶಿತವಾಗಬಹುದಲ್ಲ[2] !

(ಸಿದ್ಧಾಂತಿ) :– ಹೀಗಾದರೆ (ಅದಕ್ಕೆ) ಪ್ರಕಾಶವೆಂಬ ಧರ್ಮವಿರುವದೆಂದು (ನೀನು) ಒಪ್ಪಿಲ್ಲವಾಗಿ ಪ್ರಕಾಶವೇ (ಅದರ) ಸ್ವರೂಪವಾಗಿರುವದರಿಂದ, ಮತ್ತೊಂದ ರಿಂದ (ಅದರ) ಸ್ವರೂಪದ ನಾಶವೇ ಆಗಿಬಿಟ್ಟೀತು ಎಂದು ಹಿಂದೆಯೇ ಹೇಳಿ ದ್ದಾಗಿದೆ.[3] ಇದಲ್ಲದೆ, ಬ್ರಹ್ಮಸ್ವರೂಪವನ್ನು ಮರೆಮಾಡುವದಕ್ಕೆ ಕಾರಣವಾಗಿ

---

1. ಅದು ತನ್ನನ್ನು ತಾನು ಅನುಭವಿಸುತ್ತಲೇ ಇರುವದರಿಂದ ಅದನ್ನು ಅಜ್ಞಾನವು ಮುಸುಕಲಾರದು.

2. ಬೆಳಗುತ್ತಿರುವ ದೀಪಕ್ಕೆ ಗಡಿಗೆಯು ಆವರಣವಾಗುವಂತೆ– ಎಂದು ಭಾವವಿರ ಬಹುದೆ ?

3. ಪ್ರಕಾಶವು ಧರ್ಮವೆಂದು ಒಪ್ಪಿದ್ದರೆ ಧರ್ಮವು ಹೋದರೂ ಧರ್ಮಿಯು ಹಾಗೇ ಇರಬಹುದಾಗಿತ್ತು ; ಹಾಗೆಂದು ನೀನು ಒಪ್ಪಿಲ್ಲವಾದ್ದರಿಂದ ಧರ್ಮಿಯ ಸ್ವರೂಪ ವಾದ ಪ್ರಕಾಶವೇ ಇಲ್ಲವಾಗುವದು ಎಂದಂತಾಯಿತು ಎಂದರ್ಥ. ಶಾಂಕರಭಾಷ್ಯದಲ್ಲಂತೂ ಈ ಅಭಿಪ್ರಾಯವಿಲ್ಲ. ಅವಿದ್ಯೆಯು ಬ್ರಹ್ಮಸ್ವರೂಪವನ್ನು ಮುಚ್ಚುಹಾಕಿ ಜೀವತ್ವವನ್ನುಂಟು ಮಾಡುತ್ತದೆ ; ಜೀವನಿಗೆ ತನ್ನ ಸ್ವರೂಪವನ್ನು ತಿಳಿಯದ್ದೆಂಬ ಅಜ್ಞಾನವಿದೆ ಎಂಬುದು ಪಂಚಪಾದಿಕೆಯ ಪ್ರಸ್ಥಾನದಮೇಲೆ ಬರುವ ದೋಷ.

ರುವ ಈ ಅಜ್ಞಾನವು ತಾನು (ಅದರಿಂದ) ಅನುಭವಿಸಲ್ಪಟ್ಟು ಬ್ರಹ್ಮವನ್ನು ಮುಚ್ಚಿರುತ್ತದೆ; ಬ್ರಹ್ಮವನ್ನು ಮುಚ್ಚಿಹಾಕಿ ತಾನೂ ಅದರ ಅನುಭವಕ್ಕೆ ವಿಷಯವಾಗಿರುತ್ತದೆ ಎಂದು ಅನ್ಯೋನ್ಯಾಶ್ರಯ(ದೋಷವೂ ಆಗುತ್ತದೆ).

(ಶಂಕೆ) :– (ಬ್ರಹ್ಮದಿಂದ) ಅನುಭೂತ(ವಾದ) ಅಜ್ಞಾನವೇ (ಬ್ರಹ್ಮವನ್ನು) ಮುಚ್ಚಿಹಾಕುತ್ತದೆ ಎಂದರೊ ?

(ಸಿದ್ಧಾಂತಿ) :– ಮುಚ್ಚಿಹೋಗದೆ ಇರುವ ಸ್ವರೂಪವುಳ್ಳದ್ದಾಗಿರುವ ಬ್ರಹ್ಮವೇ ಅಜ್ಞಾನವನ್ನು ಅನುಭವಿಸುತ್ತದೆ ಎನ್ನುವಹಾದರೆ ಆಗ ಮುಸುಕನ್ನು ಕಲ್ಪಿಸುವದಕ್ಕೆ ಯಾವ ಪ್ರಯೋಜನವೂ ಇಲ್ಲದೆಹೋಗುವದು ; ಅಜ್ಞಾನದ ಸ್ವರೂಪವನ್ನು ಕಲ್ಪಿಸುವದೂ (ನಿಷ್ಪ್ರಯೋಜನವಾಗುವದು).[1] ಏಕೆಂದರೆ ಬ್ರಹ್ಮವು ಅಜ್ಞಾನವನ್ನು ಕಾಣುವಂತೆ ಅಜ್ಞಾನದ ಕಾರ್ಯವೆಂದು (ನೀವು) ಒಪ್ಪಿರುವ ಪ್ರಪಂಚವನ್ನು ನೋಡುತ್ತದೆ ಎಂಬುದೂ ಆಗಬಹುದಾಗುತ್ತದೆ. ಇದಲ್ಲದೆ, ಬ್ರಹ್ಮವು ಅಜ್ಞಾನವನ್ನು ಅನುಭವಿಸುತ್ತದೆ ಎಂಬುದು ತನ್ನಿಂದಲೇ ಆಗುವದೊ, ಮತ್ತೊಂದರಿಂದ ಆಗುವದೊ ? ತನ್ನಿಂದಲೇ ಆದರೆ ಅಜ್ಞಾನಾನುಭವವು (ಬ್ರಹ್ಮದ) ಸ್ವರೂಪದಿಂದಲೇ ಆಗಿರುವದರಿಂದ ಮೋಕ್ಷವೇ ಇಲ್ಲವೆಂದಾಗುವದು.[2] ಅಥವಾ ಅನುಭವಸ್ವರೂಪವಾಗಿರುವ ಬ್ರಹ್ಮವು ಅಜ್ಞಾನಾನುಭವದ ಸ್ವರೂಪವಾಗಿರುವದರಿಂದ ಮಿಥ್ಯಾರಜತವನ್ನು ಬಾಧಿಸುವ ಜ್ಞಾನದಿಂದ ರಜತಾನುಭವವೂ ತೊಲಗುವಂತೆ ನಿವರ್ತಕಜ್ಞಾನದಿಂದ ಅಜ್ಞಾನಾನುಭವರೂಪವಾದ ಬ್ರಹ್ಮಸ್ವರೂಪವೇ ತೊಲಗುವದೆಂದಾಗುವದು.[3] ಮತ್ತೊಂದರಿಂದ (ಅನುಭವವಾಗುತ್ತದೆ)[4] ಎನ್ನುವದಾದರೆ ಆ ಇನ್ನೊಂದು ಯಾವದು ? ಮತ್ತೊಂದು ಅಜ್ಞಾನ(ವೇ ಅದು) ಎಂದರೆ, ಅನವಸ್ಥೆಯಾಗುವದು. (ಅದು) ಬ್ರಹ್ಮವನ್ನು ಮುಚ್ಚಿಹಾಕಿಯೇ ತಾನು (ಅದರ) ಅನುಭವಕ್ಕೆ ವಿಷಯವಾಗುತ್ತದೆ ಎಂದರೊ ? ಹಾಗಾದರೆ ಈ ಅಜ್ಞಾನವು (ಕಣ್ಣಿನ)

---

1. ಬ್ರಹ್ಮವು ಅನುಭವಿಸುತ್ತಿರುವದರಿಂದ ಅನುಭವರೂಪವಾದ ಅದಕ್ಕೆ ಮುಸುಕೆಲ್ಲಿ ? ಮುಸುಕನ್ನು ಕಲ್ಪನೆಮಾಡಿದ್ದಕ್ಕೆ ಫಲವೇನು ? ಬ್ರಹ್ಮವು ಅನುಭವರೂಪದಿಂದ ತೋರುತ್ತಲೇಇರುವದಲ್ಲ !

2. ಏಕೆಂದರೆ ನಿತ್ಯವಾದ ಬ್ರಹ್ಮಾನುಭವದಿಂದ ನಿತ್ಯವೂ ಅಜ್ಞಾನವು ತೋರುತ್ತಲೇ ಇರುತ್ತದೆ.

3. ಬ್ರಹ್ಮದ ಅನುಭವದಿಂದಲೇ ಅಜ್ಞಾನವು ತೋರುತ್ತಿರುವದರಿಂದ ಆ ಅನುಭವವು ತೊಲಗುವದಾದರೆ ಬ್ರಹ್ಮವೇ ತೊಲಗಿದಂತೆ.

4. ಬ್ರಹ್ಮಾನುಭವದಿಂದಲೇ ಅಜ್ಞಾನವು ತೋರುತ್ತದೆ ಎಂದರೆ ಅನಿರ್ಮೋಕ್ಷದೋಷವುಂಟಾಗುವದೆಂಬ ಅಂಜಿಕೆಯಿಂದ ಪೂರ್ವಪಕ್ಷಿಯು ಹೀಗೆ ಮತ್ತೊಂದನ್ನು ಕಲ್ಪಿಸಿರುತ್ತಾನೆ; ಆದರೆ ಆದರಲ್ಲಿ ಅನವಸ್ಥೆ, ಅನ್ಯೋನ್ಯಾಶ್ರಯ- ಎಂಬ ತರ್ಕದೋಷಗಳು ಬರುವವು.

ಪರೆಯೇ ಮುಂತಾದದ್ದರಂತೆ ತನ್ನ ಇರವಿನಿಂದಲೇ ಬ್ರಹ್ಮವನ್ನು ಮುಚ್ಚಿಹಾಕಿದೆ ಎಂದಾಗಿ ಅಜ್ಞಾನವು ಜ್ಞಾನಬಾಧ್ಯವೆಂಬುದು ಆಗದೆಹೋಗುವದು.

(ಅರ್ಥ)

ಅಥ, ಇದಮಜ್ಞಾನಂ ಸ್ವಯಮನಾದಿ, ಬ್ರಹ್ಮಣಃ ಸ್ವಸಾಕ್ಷಿತ್ವಂ ಬ್ರಹ್ಮಸ್ವರೂಪತಿರಸ್ಕೃತಿಂ ಚ ಯುಗಪದೇವ ಕರೋತಿ, ಅತೋ ನಾನವಸ್ಥಾದಯೋ ದೋಷಾ ಇತಿ ; ನೈತತ್ । ಸ್ವಾನುಭವಸ್ವರೂಪಸ್ಯ ಬ್ರಹ್ಮಣಃ ಸ್ವರೂಪತಿರಸ್ಕೃತಿಮನ್ತರೇಣ ಸಾಕ್ಷಿತ್ವಾಪಾದನಾಯೋಗಾತ್ । ಹೇತ್ವನ್ತರೇಣ ತಿರಸ್ಕೃತಮ್ ಇತಿ ಚೇತ್, ತರ್ಹಿ, ಅಸ್ಯಾನಾದಿತ್ವಮಪಾಸ್ತಮ್ । ಅನವಸ್ಥಾ ಚ ಪೂರ್ವೋಕ್ತಾ । ಅತಿರಸ್ಕೃತಸ್ವರೂಪಸ್ಯೈವ ಸಾಕ್ಷಿತ್ವಾಪಾದನೇ ಬ್ರಹ್ಮಣಃ ಸ್ವಾನುಭವೈಕತಾನತಾ ಚ ನ ಸ್ಯಾತ್ ॥

ಅಪಿ ಚ ಅವಿದ್ಯಯಾ ಬ್ರಹ್ಮಣಿ ತಿರೋಹಿತೇ ತದ್ ಬ್ರಹ್ಮ ನ ಕಿಞ್ಚಿದಪಿ ಪ್ರಕಾಶತೇ, ಉತ ಕಿಞ್ಚಿತ್ ಪ್ರಕಾಶತೇ ? ಪೂರ್ವಸ್ಮಿನ್ ಕಲ್ಪೇ ಪ್ರಕಾಶಮಾತ್ರಸ್ವರೂಪಸ್ಯ ಬ್ರಹ್ಮಣೋಽಪ್ರಕಾಶೇ ತುಚ್ಛತಾಪತ್ತಿರಸಕೃದುಕ್ತಾ । ಉತ್ತರಸ್ಮಿನ್ ಕಲ್ಪೇ ಸಚ್ಚಿದಾನನ್ದೈಕರಸೇ ಬ್ರಹ್ಮಣಿ ಕೋಽಯಮಂಶಸ್ತಿರಸ್ಕ್ರಿಯತೇ, ಕೋ ವಾ ಪ್ರಕಾಶತೇ? ನಿರಂಶೇ ನಿರ್ವಿಶೇಷೇ ಪ್ರಕಾಶಮಾತ್ರೇ ವಸ್ತುನಿ ಆಕಾರದ್ವಯಾಸಂಭವೇನ ತಿರಸ್ಕಾರಃ ಪ್ರಕಾಶಶ್ಚ ಯುಗಪನ್ನ ಸಙ್ಗಚ್ಛೇತೇ। ಅಥ ಸಚ್ಚಿದಾನನ್ದೈಕರಸಂ ಬ್ರಹ್ಮ ಅವಿದ್ಯಯಾ ತಿರೋಹಿತಸ್ವರೂಪಮ್ ಅವಿಶದಮಿವ ಲಕ್ಷ್ಯತ ಇತಿ ; ಪ್ರಕಾಶಮಾತ್ರಸ್ವರೂಪಸ್ಯ ವಿಶದತಾ ಅವಿಶದತಾ ವಾ ಕಿಂ ರೂಪಾ ? ಏತದುಕ್ತಂ ಭವತಿ– ಯಃ ಸಾಂಶಃ ಸವಿಶೇಷಃ ಪ್ರಕಾಶವಿಷಯಃ, ತಸ್ಯ ಸಕಲಾವಭಾಸೋ ವಿಶದಾವಭಾಸಃ ; ಕತಿಪಯವಿಶೇಷರಹಿತಾವಭಾಸಶ್ಚ ಅವಿಶದಾವಭಾಸಃ । ತತ್ರ ಯ ಆಕಾರೋಽಪ್ರತಿಪನ್ನಃ, ತಸ್ಮಿನ್ನಂಶೇ ಪ್ರಕಾಶಾಭಾವಾದೇವ ಪ್ರಕಾಶಾವೈಶದ್ಯಂ ನ ವಿದ್ಯತೇ । ಯಶ್ಚಾಂಶಃ ಪ್ರತಿಪನ್ನಃ ತಸ್ಮಿನ್ನಂಶೇ ತದ್ವಿಷಯಪ್ರಕಾಶೋ ವಿಶದ ಏವ । ಅತಃ ಸರ್ವತ್ರ ಪ್ರಕಾಶಾಂಶೇ ಅವೈಶದ್ಯಂ ನ ಸಂಭವತಿ । ವಿಷಯೇಽಪಿ ಸ್ವರೂಪೇ ಪ್ರತೀಯಮಾನೇ ತದ್ಗತಕತಿಪಯವಿಶೇಷಾಪ್ರತೀತಿರೇವಾವೈಶದ್ಯಮ್ । ತಸ್ಮಾತ್, ಅವಿಷಯೇ ನಿರ್ವಿಶೇಷೇ ಪ್ರಕಾಶಮಾತ್ರೇ ಬ್ರಹ್ಮಣಿ ಸ್ವರೂಪೇ ಪ್ರಕಾಶಮಾನೇ ತದ್ಗತಕತಿಪಯವಿಶೇಷಾಪ್ರತೀತಿರೂಪಾವೈಶದ್ಯಂ ನಾಮಾಜ್ಞಾನಕಾರ್ಯಂ ನ ಸಂಭವತಿ । ಅಪಿ ಚ ಇದಮವಿದ್ಯಾಕಾರ್ಯಮ್ ಅವೈಶದ್ಯಂ ತತ್ತ್ವಜ್ಞಾನೋದಯಾನ್ನಿವರ್ತತೇ, ನ ವಾ ? ಅನಿವೃತ್ತೌ ಅಪವರ್ಗಾಭಾವಃ ; ನಿವೃತ್ತೌ ಚ ವಸ್ತು ಕಿಂರೂಪಮ್ ? ಇತಿ ವಿವೇಚನೀಯಮ್ । ವಿಶದಸ್ವರೂಪಮ್ ಇತಿ ಚೇತ್, ತದ್ವಿಶದಸ್ವರೂಪಂ ಪ್ರಾಗಸ್ತಿ ನ ವಾ ? ಅಸ್ತಿ ಚೇತ್, ಅವಿದ್ಯಾಕಾರ್ಯಮ್ ಅವೈಶದ್ಯಂ ತನ್ನಿವೃತ್ತಿಶ್ಚ ನ ಸ್ಯಾತಾಮ್, ನೋ ಚೇತ್, ಮೋಕ್ಷಸ್ಯ ಕಾರ್ಯತಯಾ ಅನಿತ್ಯತಾ ಸ್ಯಾತ್ ॥

(ಅರ್ಥ)

ಇನ್ನು ಈ ಅಜ್ಞಾನವು ತಾನು ಅನಾದಿಯಾಗಿದ್ದು ಬ್ರಹ್ಮಕ್ಕೆ ತನ್ನ ಸಾಕ್ಷಿತ್ವವನ್ನೂ ಬ್ರಹ್ಮಸ್ವರೂಪವನ್ನೂ ಮರೆಮಾಡುವ (ಕಾರ್ಯ)ವನ್ನು ಒಟ್ಟಿಗೆ ಮಾಡುತ್ತಿರುತ್ತದೆ; ಆದ್ದರಿಂದ ಅನವಸ್ಥೆಯೇ ಮುಂತಾದ ದೋಷಗಳು ಇರುವದಿಲ್ಲ-ಎನ್ನುವದಾದರೆ, ಇದು (ಸರಿ)ಯಲ್ಲ; ಏಕೆಂದರೆ ತನ್ನನುಭವದ ಸ್ವರೂಪವಾಗಿರುವ ಬ್ರಹ್ಮದ ಸ್ವರೂಪವು ಮರೆಯಾದಲ್ಲದೆ (ಅದಕ್ಕೆ) ಸಾಕ್ಷಿತ್ವವನ್ನುಂಟುಮಾಡುವದು ಆಗುವಂತಿಲ್ಲ. (ಅದು) ಮತ್ತೊಂದು ಕಾರಣದಿಂದ ಮರೆಯಾಗಿದೆ ಎನ್ನುವದಾದರೆ, ಹಾಗಾದರೆ ಈ (ಅವಿದ್ಯೆಗೆ) ಅನಾದಿತ್ವವು ಇಲ್ಲವಾಯಿತು, (ಆದ್ದರಿಂದ) ಮೊದಲು ಹೇಳಿದ ಅನವಸ್ಥೆಯೂ (ಬಂದೊದಗುವದು). ಮರೆಯಾಗದೆ ಇರುವ ಸ್ವರೂಪಕ್ಕೇ ಸಾಕ್ಷಿತ್ವವನ್ನುಂಟುಮಾಡುತ್ತದೆ ಎಂದರೆ ಬ್ರಹ್ಮವು ಸ್ವಾನುಭವೈಕರೂಪವೆಂಬುದೂ ಇಲ್ಲವಾಗುವದು.

ಇದೂ ಅಲ್ಲದೆ, ಅವಿದ್ಯೆಯಿಂದ ಬ್ರಹ್ಮವು ಮರೆಯಾಗಿರುವಾಗ ಆ ಬ್ರಹ್ಮವು ಒಂದಿಷ್ಟೂ ತೋರುವದಿಲ್ಲವೊ, ಅಥವಾ ಸ್ವಲ್ಪ(ಮಟ್ಟಿಗೆ) ತೋರುತ್ತಿರುವದೊ ? ಮೊದಲನೆಯ ಕಲ್ಪದಲ್ಲಿ, ಪ್ರಕಾಶಮಾತ್ರವೇ ಸ್ವರೂಪವಾಗಿರುವ ಬ್ರಹ್ಮವು ತೋರದೆ ಇದ್ದರೆ ತುಚ್ಛತ್ವವೇ (ಅದಕ್ಕೆ) ಬಂದೊದಗುವದೆಂದು ಹಲವುಸಲ ಹೇಳಿದ್ದಾಗಿದೆ.[1] ಇನ್ನೊಂದು ಕಲ್ಪದಲ್ಲಿ ಸಚ್ಚಿದಾನಂದೈಕರಸವಾಗಿರುವ ಬ್ರಹ್ಮದಲ್ಲಿ, ಈ ಮರೆಯಾಗಿರುವದೆಂಬ ಅಂಶವು ಯಾವದು, ತೋರುವದೆಂಬಂಶವು ಯಾವದು ? **ನಿರಂಶವಾಗಿ, ನಿರ್ವಿಶೇಷವಾಗಿ, ಪ್ರಕಾಶಮಾತ್ರವಾಗಿರುವ ವಸ್ತುವಿನಲ್ಲಿ ಎರಡು ಆಕಾರಗಳಿರುವದೆಂಬುದೂ ಸಂಭವಿಸದೆ ಇರುವದರಿಂದ ಒಂದೇ ಕಾಲಕ್ಕೆ ಮರೆಯಾಗುವದೂ ತೋರುತ್ತಿರುವದೂ ಹೊಂದಲಾರದು.**

ಇನ್ನು ಸಚ್ಚಿದಾನಂದೈಕರಸವಾಗಿರುವ ಬ್ರಹ್ಮವು ಅವಿದ್ಯೆಯಿಂದ ಮರೆಯಾಗಿರುವ ಸ್ವರೂಪವುಳ್ಳದ್ದಾಗಿ ಅವಿಶದವಾಗಿರುವಂತೆ ಕಾಣುತ್ತಿದೆ- ಎಂದು (ನಿಮ್ಮ) ಅಭಿಪ್ರಾಯವಾದರೆ ಪ್ರಕಾಶಮಾತ್ರವಾದ ಸ್ವರೂಪವು ವಿಶದವಾಗಿರುವದು, ಅಥವಾ ಅವಿಶದವಾಗಿರುವದು- ಎಂಬುದು ಎಂಥದ್ದು ? (ಇದರ ವಿವರ) :- ಇಲ್ಲಿ ಇಷ್ಟನ್ನು ಹೇಳಿದಂತಾಯಿತು : ಯಾವದು ಸಾಂಶವಾಗಿ, ಸವಿಶೇಷವಾಗಿ, ಪ್ರಕಾಶಕ್ಕೆ ವಿಷಯವಾಗಿರುವದೋ ಅದು ಎಲ್ಲವೂ ತೋರಿಕೊಂಡರೆ ವಿಶದಾವಭಾಸ(ವೆನ್ನಿಸುವದು) ; ಕೆಲವು ವಿಶೇಷಗಳಿಲ್ಲದ ಅವಭಾಸವು ಅವಿಶದಾವಭಾಸ(ವೆನ್ನಿಸುವದು). ಅಲ್ಲಿ ಯಾವ ಆಕಾರವು ಜ್ಞಾತವಾಗದೆ ಇರುವದೋ, ಆ ಅಂಶದಲ್ಲಿ ಪ್ರಕಾಶವಿಲ್ಲದ್ದರಿಂದಲೇ ಪ್ರಕಾಶದಲ್ಲಿ ಅವೈಶದ್ಯವು ಇರುವದಿಲ್ಲ ; ಯಾವ ಅಂಶವು

1. ತೋರುವದೆಂಬ ಸ್ವರೂಪವೇ ಇಲ್ಲದಿದ್ದರೆ ಶೂನ್ಯವೇ ಆಗಬೇಕಷ್ಟೆ ?
2. ಸಚ್ಚಿದಾನಂದೈಕರಸವೆಂದಮೇಲೆ ಅದರಲ್ಲಿ ಅಂಶವೆಲ್ಲಿಂದ ಬರುವದು ?

ಜ್ಞಾತವಾಗಿರುವದೋ, ಆ ಅಂಶದಲ್ಲಿ ಅವರ ವಿಷಯದ ಪ್ರಕಾಶವು ವಿಶದವೇ ಆಗಿರುತ್ತದೆ, ಆದ್ದರಿಂದ ಪ್ರಕಾಶಾಂಶದಲ್ಲಿ ಅವೈಶದ್ಯವೆಂಬುದು ಎಲ್ಲಿಯೂ ಸಂಭವಿಸುವದಿಲ್ಲ. ವಿಷಯದಲ್ಲಿಯೂ ಸ್ವರೂಪವು ತೋರುತ್ತಿದ್ದರೆ ಅದರ ಕೆಲವು ವಿಶೇಷಗಳು ತೋರದೆ ಇರುವದೇ ಅವೈಶದ್ಯವೆಂಬುದು. ಆದ್ದರಿಂದ **ಅವಿಷಯ ವಾಗಿ, ನಿರ್ವಿಶೇಷವಾಗಿ, ಪ್ರಕಾಶಮಾತ್ರವಾಗಿರುವ ಬ್ರಹ್ಮದಲ್ಲಿ ಸ್ವರೂ ಪವು ತೋರದೆ ಇರುವ ರೂಪದ ಅವೈಶದ್ಯವೆಂಬ ಅಜ್ಞಾನಕಾರ್ಯವು ಸಂಭವಿಸುವದೇಇಲ್ಲ.**[1]

ಇದೂ ಅಲ್ಲದೆ, ಅವಿದ್ಯೆಯ ಕಾರ್ಯವಾದ ಈ ಅವೈಶದ್ಯವೆಂಬುದು ತತ್ತ್ವ ಜ್ಞಾನವು ಹುಟ್ಟಿದಾಗ ತೊಲಗುವದೊ, ಇಲ್ಲವೊ ? ತೊಲಗದೆಇದ್ದರೆ, ಮೋಕ್ಷವೇ ಇಲ್ಲವೆಂದಾಗುವದು ; ತೊಲಗಿದರೆ (ಆಗ) ವಸ್ತು ಯಾವ ರೂಪದ್ದಾಗಿರುವದು?— ಎಂಬುದನ್ನು ವಿವೇಚನೆಮಾಡಿ ಹೇಳಬೇಕಾಗುವದು. ಆಗ (ವಸ್ತು) ವಿಶದಸ್ವರೂಪ ವೇ (ಆಗಿರುತ್ತದೆ) ಎಂದರೆ ಆ ವಿಶದಸ್ವರೂಪವು ಮೊದಲು ಇರುತ್ತದೆಯೊ, ಇಲ್ಲವೊ, ಇದ್ದರೆ ಅವಿದ್ಯಾಕಾರ್ಯವಾದ ಅವೈಶದ್ಯವೂ ಅದರ ನಿವೃತ್ತಿಯೂ ಆಗಬಾರದಾಗು ವದು ; ಇಲ್ಲವಾದರೆ ಮೋಕ್ಷವು ಕಾರ್ಯವೆಂದಾಗಿ ಅನಿತ್ಯವಾಗಿಬಿಡುವದು.[2]

(ಮೂಲ)

ಅಸ್ಯಾಜ್ಞಾನಸ್ಯ ಆಶ್ರಯಾನಿರೂಪಣಾದೇವಾಸಂಭವಃ ಪೂರ್ವಮೇವೋಕ್ತಃ । ಅಪಿ ಚ ಅಪರಮಾರ್ಥದೋಷಮೂಲಭ್ರಮವಾದಿನಾ ನಿರಧಿಷ್ಠಾನಭ್ರಮಾಸಂಭ ವೋಽಪಿ ದುರುಪಪಾದಃ । ಭ್ರಮಹೇತುಭೂತದೋಷದೋಷಾಶ್ರಯತ್ವವತ್ ಅಧಿಷ್ಠಾನಾಪಾರಮಾರ್ಥ್ಯೇಽಪಿ ಭ್ರಮೋಪಪತ್ತೇಃ । ತತಶ್ಚ ಸರ್ವಶೂನ್ಯತ್ವಮೇವ ಸ್ಯಾತ್ ॥

(ಅರ್ಥ)

ಈ ಅಜ್ಞಾನಕ್ಕೆ ಆಶ್ರಯ(ವಿಂಥದ್ದೆಂದು) ಗೊತ್ತುಪಡಿಸುವದಕ್ಕೆ ಆಗದೆ ಇರುವದರಿಂದ (ಇದು) ಸಂಭವಿಸುವದಿಲ್ಲವೆಂದು ಹಿಂದೆಯೇ ಹೇಳಿದ್ದಾಗಿದೆ. ಇದಲ್ಲದೆ ಅಪರಮಾರ್ಥವಾದ ದೋಷಮೂಲದಿಂದ ಭ್ರಮವಾಗುವದೆಂದು ಒಪ್ಪಿರುವ (ಈ) ವಾದಿಯು ಅಧಿಷ್ಠಾನವಿಲ್ಲದೆ ಭ್ರಮೆಯುಂಟಾಗಲಾರದೆಂಬುದನ್ನೂ ಯುಕ್ತಿಗೆ ಹೊಂದಿಸಿ ತಿಳಿಸಿಕೊಡಲಾರನು. ಏಕೆಂದರೆ, ಭ್ರಮಕ್ಕೆ ಹೇತುವಾದ ದೋಷ, ದೋಷಕ್ಕೆ ಆಶ್ರಯವಾಗಿರುವದು— ಇವುಗಳಂತೆಯೇ ಅಧಿಷ್ಠಾನವೂ ಪರಮಾರ್ಥ ವಲ್ಲದಿದ್ದರೂ ಭ್ರಮೆಯಾಗಬಹುದೆಂದು (ಇವನ ಪಕ್ಷದಲ್ಲಿ) ಆಗುವದು. ಅದರಿಂದ ಸರ್ವಶೂನ್ಯತ್ವವೇ ಆಗಿಬಿಡುವದು !

---

1. ಇಲ್ಲಿಯವರೆಗೆ ಅವಿದ್ಯೆಯು ಅನುಭವರೂಪವಾದ ಬ್ರಹ್ಮವನ್ನು ಮರೆಮಾಡುವ ದೆಂಬ ಕಾರ್ಯವು ಸಂಭವಿಸುವದೇ ಇಲ್ಲ— ಎಂದು ಸಾಧಿಸಿದಂತೆ ಆಗಿದೆ.

2. ವೈಶದ್ಯವು ಆಮೇಲೆ ಉಂಟಾದರೆ ಕಾರ್ಯವೆಂದಾಗುವದು, ಅನಿತ್ಯವಾಗುವದು.

## ಅನುಮಾನದಿಂದಲೂ ಅಜ್ಞಾನಸಿದ್ಧಿಯಾಗಲಾರದು

(ಮೂಲ)

ಯದುಕ್ತಮ್ ಅನುಮಾನೇನಾಪಿ ಭಾವರೂಪಮಜ್ಞಾನಂ ಸಿಧ್ಯತೀತಿ | ತದಯುಕ್ತಮ್ ; ಅನುಮಾನಾಸಂಭವಾತ್ | ನನೂಕ್ತಮನುಮಾನಮ್ | ಸತ್ಯಮುಕ್ತಮ್ ; ದುರುಕ್ತಂ ತು ತತ್ | ಅಜ್ಞಾನೇಽಪ್ಯನಭಿಮತಾಜ್ಞಾನಾನ್ತರಸಾಧನೇನ ವಿರುದ್ಧತ್ವಾತ್ ಹೇತೋಃ | ತತ್ರಾಜ್ಞಾನಾನ್ತರಾಸಾಧನೇ ಹೇತೋರನೈಕಾನ್ತ್ಯಮ್, ಸಾಧನೇ ಚ ತದಜ್ಞಾನಮ್ ಅಜ್ಞಾನಸಾಕ್ಷಿತ್ವಂ ನಿವಾರಯತಿ | ತತಶ್ಚ, ಅಜ್ಞಾನಕಲ್ಪನಾ ನಿಷ್ಫಲಾ ಸ್ಯಾತ್ | ದೃಷ್ಟಾನ್ತಶ್ಚ ಸಾಧನವಿಕಲಃ ; ದೀಪಪ್ರಭಾಯಾ ಅಪ್ರಕಾಶಿತಾರ್ಥಪ್ರಕಾಶಕತ್ವಾಭಾವಾತ್ | ಸರ್ವತ್ರ ಜ್ಞಾನಸ್ಯೈವ ಹಿ ಪ್ರಕಾಶಕತ್ವಮ್ | ಸತ್ಯಪಿ ದೀಪೇ ಜ್ಞಾನೇನ ವಿನಾ ವಿಷಯಪ್ರಕಾಶಾಭಾವಾತ್ | ಇನ್ದ್ರಿಯಾಣಾಮಪಿ ಜ್ಞಾನೋತ್ಪತ್ತಿಹೇತುತ್ವಮೇವ, ನ ಪ್ರಕಾಶತ್ವಮ್ | ಪ್ರದೀಪಪ್ರಭಾಯಾಸ್ತು ಚಕ್ಷುರಿನ್ದ್ರಿಯಸ್ಯ ಜ್ಞಾನಮುತ್ಪಾದಯತೋ ನಿರೋಧಿತಮೋನಿರಸನದ್ವಾರೇಣೋಪಕಾರಕತ್ವಮಾತ್ರಮೇವ | ಪ್ರಕಾಶಕಜ್ಞಾನೋತ್ಪತ್ತೌ ವ್ಯಾಪ್ರಿಯಮಾಣಚಕ್ಷುರಿನ್ದ್ರಿಯೋಪಕಾರಕಹೇತುತ್ವಮಪೇಕ್ಷ್ಯ ದೀಪಸ್ಯ ಪ್ರಕಾಶಕತ್ವವ್ಯವಹಾರಃ | ನಾಸ್ಮಾಭಿರ್ಜ್ಞಾನತುಲ್ಯಪ್ರಕಾಶಕತ್ವಾಭ್ಯುಪಗಮೇನ ದೀಪಪ್ರಭಾ ನಿದರ್ಶಿತಾ, ಅಪಿ ತು ಜ್ಞಾನಸ್ಯೈವ ಸ್ವವಿಷಯಾವರಣನಿರಸನಪೂರ್ವಕಪ್ರಕಾಶಕತ್ವಮಙ್ಗೀಕೃತ್ಯ ಇತಿ ಚೇತ್, ನ ; ನ ಹಿ ವಿರೋಧಿನಿರಸನಮಾತ್ರಂ ಪ್ರಕಾಶಕತ್ವಮ್, ಅಪಿ ತು ಅರ್ಥಪರಿಚ್ಛೇದಃ, ವ್ಯವಹಾರಯೋಗ್ಯತಾಪಾದನಮ್ ಇತಿ ಯಾವತ್ | ತತ್ತು ಜ್ಞಾನಸ್ಯೈವ | ಯದಿ ಉಪಕಾರಕಾಣಾಮಪಿ ಅಪ್ರಕಾಶಿತಾರ್ಥಪ್ರಕಾಶಕತ್ವಮಙ್ಗೀಕೃತಮ್, ತರ್ಹಿ, ಇನ್ದ್ರಿಯಾಣಾಮ್ ಉಪಕಾರಕತಮತ್ವೇನ, ಅಪ್ರಕಾಶಿತಾರ್ಥಪ್ರಕಾಶಕತ್ವಮ್ ಅಙ್ಗೀಕರಣೀಯಮ್ | ತಥಾ ಸತಿ ತೇಷಾಂ ಸ್ವನಿವರ್ತ್ಯವಸ್ತ್ವನ್ತರಪೂರ್ವಕತ್ವಾಭಾವಾದ್ ಹೇತೋರನೈಕಾನ್ತ್ಯಮ್, ಇತ್ಯಲಮನೇನ ||

(ಅರ್ಥ)

**ಅನುಮಾನದಿಂದಲೂ ಭಾವರೂಪವಾದ ಅಜ್ಞಾನವು ಸಿದ್ಧವಾಗುತ್ತದೆ ಎಂದಿರಲ್ಲ, ಅದು ಯುಕ್ತವಲ್ಲ ; ಏಕೆಂದರೆ ಅನುಮಾನವೇ ಸಂಭವಿಸುವದಿಲ್ಲ.**

(ಪೂರ್ವಪಕ್ಷಿ) :– ಅನುಮಾನವನ್ನು ಹೇಳಿದ್ದೆವಲ್ಲ !

(ಸಿದ್ಧಾಂತಿ) :– ನಿಜ, ಹೇಳಿದಿರಿ ; ಆದರೆ ಅದು ತಪ್ಪಾಗಿ ಹೇಳಿದ್ದು. ಏಕೆಂದರೆ, (ಈ) ಹೇತುವು ಜ್ಞಾನದ ವಿಷಯದಲ್ಲಿಯೂ (ನಿಮಗೆ) ಸಮ್ಮತವಲ್ಲದ

ಮತ್ತೊಂದು ಅಜ್ಞಾನವನ್ನು ಸಾಧಿಸುವದರಿಂದ[1] ವಿರುದ್ಧವಾಗಿರುತ್ತದೆ; ಆದ್ದರಿಂದ ಇಲ್ಲಿ (ಇದು) ಮತ್ತೊಂದು ಅಜ್ಞಾನವನ್ನು ಸಾಧಿಸದೆ ಇದ್ದರೆ ಹೇತುವು ಅನೇಕಾಂತವೆಂದಾಗುವದು[2]; ಸಾಧಿಸಿದರೆ ಆ ಅಜ್ಞಾನವು (ಆತ್ಮನಿಗೆ) ಅಜ್ಞಾನಸಾಕ್ಷಿತ್ವವನ್ನು ನಿವಾರಣೆಮಾಡುತ್ತದೆ[3] ; ಆಗ ಅಜ್ಞಾನದ ಕಲ್ಪನೆಯೇ ನಿಷ್ಫಲವಾಗುವದು.[4]

ದೃಷ್ಟಾಂತಕ್ಕೆ ಸಾಧ್ಯವೂ ಇಲ್ಲ.[5] ಏಕೆಂದರೆ ದೀಪದ ಪ್ರಭೆಗೆ ಅಪ್ರಕಾಶಿತಾರ್ಥಪ್ರಕಾಶಕತ್ವವೆಂಬುದು ಇಲ್ಲ. ಎಲ್ಲೆಲ್ಲಿಯೂ ಜ್ಞಾನವೇ ಪ್ರಕಾಶವಾಗಿರುತ್ತದೆ[6] ; ಏಕೆಂದರೆ ದೀಪವಿದ್ದರೂ ಜ್ಞಾನವಿಲ್ಲದೆ ವಿಷಯವು ಬೆಳಗುವದೇಇಲ್ಲ. ಇಂದ್ರಿಯಗಳೂಕೂಡ ಜ್ಞಾನವನ್ನುಂಟುಮಾಡುವ ಹೇತುವಾಗಿರುತ್ತವೆಯೇಹೊರತು (ಅವೇ ವಸ್ತುವನ್ನು) ಬೆಳಗುತ್ತಿರುವದಿಲ್ಲ. ಪ್ರದೀಪದ ಪ್ರಭೆಯೊ, ಎಂದರೆ ಜ್ಞಾನವನ್ನುಂಟುಮಾಡುವ ಚಕ್ಷುರಿಂದ್ರಿಯಕ್ಕೆ ವಿರೋಧಿಯಾದ ಕತ್ತಲನ್ನು ತೊಲಗಿಸುವದರಿಂದ ಉಪಕಾರಕವಾಗಿರುತ್ತದೆ, ಅಷ್ಟೆ. ಪ್ರಕಾಶಕವಾದ ಜ್ಞಾನೋತ್ಪತ್ತಿಯನ್ನುಂಟುಮಾಡುವದರಲ್ಲಿ ವ್ಯಾಪಾರಮಾಡುವ ಚಕ್ಷುರಿಂದ್ರಿಯಕ್ಕೆ ಉಪಕಾರಕ ಹೇತುವಾಗಿರುವದೆಂಬ ಕಾರಣದಿಂದ 'ದೀಪವು ಪ್ರಕಾಶಕ' ಎಂಬ ವ್ಯವಹಾರವುಂಟಾಗಿರುತ್ತದೆ.

(ಪೂರ್ವಪಕ್ಷಿ) :– ನಾವು ದೀಪದ ಪ್ರಭೆಯು ಜ್ಞಾನದಂತೆಯೇ ಪ್ರಕಾಶಕವೆಂದು ಇಟ್ಟುಕೊಂಡೇನೂ (ಅದನ್ನು ) ದೃಷ್ಟಾಂತವಾಗಿ ಹೇಳಿರುವದಿಲ್ಲ ; ಮತ್ತೇನೆಂದರೆ, ಜ್ಞಾನವೇ ತನ್ನ ವಿಷಯದ ಆವರಣವನ್ನು ತೊಲಗಿಸುವ ಮೂಲಕ (ವಸ್ತುವನ್ನು ಬೆಳಗುತ್ತದೆ) ಎಂಬುದನ್ನು ಒಪ್ಪಿ (ದೃಷ್ಟಾಂತವನ್ನು ಹೇಳಿರುತ್ತೇವೆ).

---

1. ಪ್ರಮಾಣಜ್ಞಾನವು ತೊಲಗಿಸಬೇಕಾದ ಅಜ್ಞಾನವಿದೆ ; ಏಕೆಂದರೆ ಅಪ್ರಕಾಶಿತಾರ್ಥಪ್ರಕಾಶಿತವಾಗಿದೆ– ಎಂಬುದು ಹೇತು ; ಇದು ಸರಿಯಾದರೆ ಅಜ್ಞಾನವನ್ನು ಪ್ರಕಾಶಿಸುವ ಜ್ಞಾನವೂ ಅಪ್ರಕಾಶಿತಾರ್ಥಪ್ರಕಾಶಕವಾಗಿರುವದರಿಂದ ಅಜ್ಞಾನವಿಷಯವಾದ ಮತ್ತೊಂದು ಅಜ್ಞಾನವಿದೆ– ಎಂದು ಸಾಧಿಸಬಹುದು.

2. ಸಾಧಿಸದೆಯೂ ಇರಬಹುದು– ಎಂದರೆ ಹೇತು ಅನೇಕಾಂತಿಕ, ನಿಯತವಲ್ಲ.

3. ಅಜ್ಞಾನವು ಸಾಕ್ಷಿಸಿದ್ಧವಲ್ಲ, ಪ್ರಮಾಣಸಿದ್ಧ –ಎಂದಾಗಿಬಿಡುತ್ತದೆ.

4. ಆಗ ಅಜ್ಞಾನವು ಆತ್ಮನನ್ನು ಮುಸುಕಿಕೊಂಡಿದೆ ಎಂದು ಕಲ್ಪಿಸುವದರಿಂದ ಪ್ರಯೋಜನವೇನು ? ಪ್ರಮಾಣವೇ ಅಜ್ಞಾತಾರ್ಥವನ್ನು ಎಂದರೆ ಆತ್ಮನನ್ನು ತಿಳಿಸಿಕೊಡಲಿ ! –ಎಂದಭಿಪ್ರಾಯ.

5. ದೃಷ್ಟಾಂತವು ದೀಪ ; ಅದು ಅಪ್ರಕಾಶಿತವಸ್ತುವನ್ನು ಬೆಳಗುತ್ತದೆ ಎಂಬ ಸಾಧ್ಯವಿದ್ದರಲ್ಲವೆ, ಅದನ್ನು ಪ್ರಮಾಣಜ್ಞಾನಕ್ಕೆ ದೃಷ್ಟಾಂತವಾಗಿ ಹೇಳಬಹುದು ?

6. ಜ್ಞಾನವು ಪ್ರಕಾಶಕವೆ, ದೀಪವು ಪ್ರಕಾಶಕವಲ್ಲವೆ ?– ಎಂಬುದನ್ನು ವಿಚಾರಿಸುವಾಗ ಪ್ರಕಾಶಶಬ್ದದ ಅರ್ಥವನ್ನು ನಿಶ್ಚಯಿಸಬೇಕಾಗುತ್ತದೆ. ಪರಿಶಿಷ್ಟವನ್ನು ನೋಡಿ.

(ಸಿದ್ಧಾಂತಿ) :– ಹಾಗಲ್ಲ. ಏಕೆಂದರೆ ವಿರೋಧಿಯನ್ನು ತೊಲಗಿಸುವ ದೆಂಬುದಿಷ್ಟೇ ಪ್ರಕಾಶಕತ್ವವಲ್ಲ ; ಮತ್ತೇನೆಂದರೆ ವಸ್ತುವನ್ನು (ಇಂಥದ್ದೆಂದು) ಗೊತ್ತುಪಡಿಸಿಕೊಡುವದು, ಅಂದರೆ ವ್ಯವಹಾರಕ್ಕೆ (ಬೇಕಾದ) ಯೋಗ್ಯತೆ ಯನ್ನುಂಟುಮಾಡುವದು,[1] ಅದು ಜ್ಞಾನವೊಂದಕ್ಕೇ (ಇದೆ). (ಜ್ಞಾನಕ್ಕೆ) ಉಪಕಾರಕವಾಗಿರುವ (ಪದಾರ್ಥಗಳಿಗೂ) ಅಪ್ರಕಾಶಿತಾರ್ಥಪ್ರಕಾಶಕತ್ವವಿದೆ ಎಂದು ಒಪ್ಪಿದರೆ, ಆಗ ಇಂದ್ರಿಯಗಳು ಎಲ್ಲಕ್ಕೂ ಹೆಚ್ಚಿನ ಉಪಕಾರಕವಾಗಿರು ವದರಿಂದ (ಅವುಗಳಿಗೇ) ಅಪ್ರಕಾಶಿತಾರ್ಥಪ್ರಕಾಶಕತ್ವವನ್ನು ಒಪ್ಪಬೇಕಾಗು ವದು; ಹಾಗಾದರೆ ಅವಕ್ಕೆ ಸ್ವನಿವರ್ತ್ಯವಾದ ಮತ್ತೊಂದು ವಸ್ತುವು ಮೊದಲು ಇರುವದಿಲ್ಲವಾದ್ದರಿಂದ ಹೇತುವು ಅನೇಕಾಂತವಾಗುವದು. ಆದ್ದರಿಂದ ಈ (ವ್ಯರ್ಥಾನುಮಾನವನ್ನು ವಿಮರ್ಶಿಸುವದು) ಇಲ್ಲಿಗೆ ಸಾಕು.

(ಮೂಲ)

ಪ್ರತಿಪ್ರಯೋಗಾಶ್ಚ ವಿವಾದಾಧ್ಯಾಸಿತಮಜ್ಞಾನಂ ನ ಜ್ಞಾನಮಾತ್ರ ಬ್ರಹ್ಮಾಶ್ರಯಮ್, ಅಜ್ಞಾನತ್ವಾತ್, ಶುಕ್ತಿಕಾದ್ಯಜ್ಞಾನವತ್ । ಜ್ಞಾತ್ರಾ ಶ್ರಯಂ ಹಿ ತತ್ । ವಿವಾದಾಧ್ಯಾಸಿತಮ್ ಅಜ್ಞಾನಮ್ ನ ಜ್ಞಾನಮಾತ್ರ ಬ್ರಹ್ಮಾವರಣಮ್,[2] ಅಜ್ಞಾನತ್ವಾತ್, ಶುಕ್ತಿಕಾದ್ಯಜ್ಞಾನವತ್ । ವಿಷಯಾ ವರಣಂ ಹಿ ತತ್ । ವಿವಾದಾಧ್ಯಾಸಿತಮಜ್ಞಾನಂ ನ ಜ್ಞಾನನಿವರ್ತ್ಯಮ್ ; ಜ್ಞಾನ ವಿಷಯಾನಾವರಣತ್ವಾತ್ ; ಯಜ್ಜ್ಞಾನನಿವರ್ತ್ಯಮಜ್ಞಾನಮ್, ತಜ್ಜ್ಞಾನ ವಿಷಯಾವರಣಮ್ ; ಯಥಾ ಶುಕ್ತಿಕಾದ್ಯಜ್ಞಾನಮ್ । ಬ್ರಹ್ಮ ನಾಜ್ಞಾನಾ ಸ್ಪದಮ್ ; ಜ್ಞಾತೃತ್ವವಿರಹಾತ್, ಘಟಾದಿವತ್ । ಬ್ರಹ್ಮ ನಾಜ್ಞಾನಾವರಣಮ್, ಜ್ಞಾನಾವಿಷಯತ್ವಾತ್ । ಯದಜ್ಞಾನಾವರಣಮ್, ತಜ್ಜ್ಞಾನವಿಷಯಭೂತಮ್, ಯಥಾ ಶುಕ್ತಿಕಾದಿ । ಬ್ರಹ್ಮ ನ ಜ್ಞಾನನಿವರ್ತ್ಯಾಜ್ಞಾನಮ್, ಜ್ಞಾನಾವಿಷಯ ತ್ವಾತ್ । ಯತ್ ಜ್ಞಾನನಿವರ್ತ್ಯಾಜ್ಞಾನಂ ತತ್ ಜ್ಞಾನವಿಷಯಭೂತಮ್, ಯಥಾ ಶುಕ್ತಿಕಾದಿ । ವಿವಾದಾಧ್ಯಾಸಿತಂ ಪ್ರಮಾಣಜ್ಞಾನಮ್, ಸ್ವಪ್ರಾಗ ಭಾವಾತಿರಿಕ್ತಾಜ್ಞಾನಪೂರ್ವಕಂ ನ ಭವತಿ, ಪ್ರಮಾಣಜ್ಞಾನತ್ವಾತ್, ಭವದಭಿ ಮತಾಜ್ಞಾನಸಾಧನಪ್ರಮಾಣಜ್ಞಾನವತ್ ॥

ಜ್ಞಾನಂ ನ ವಸ್ತುನೋ ವಿನಾಶಕಮ್ ; ಶಕ್ತಿವಿಶೇಷೋಪಬೃಂಹಣವಿರಹೇ ಸತಿ ಜ್ಞಾನತ್ವಾತ್ । ಯದ್ ವಸ್ತುನೋ ವಿನಾಶಕಮ್, ತಚ್ಛಕ್ತಿವಿಶೇಷೋಪ ಬೃಂಹಿತಂ ಜ್ಞಾನಮಜ್ಞಾನಂ ಚ ದೃಷ್ಟಮ್ ; ಯಥಾ, ಈಶ್ವರಯೋಗಿಪ್ರಭೃತಿ ಜ್ಞಾನಮ್, ಯಥಾ ಚ ಮುದ್ಗರಾದಿ । ಭಾವರೂಪಮಜ್ಞಾನಂ ನ ಜ್ಞಾನವಿನಾ- ಶ್ಯಮ್ । ಭಾವರೂಪತ್ವಾತ್, ಘಟಾದಿವತ್ ಇತಿ ॥

1. ಆತ್ಮನು ಪ್ರಮಾಣದಿಂದ ವ್ಯವಹಾರಕ್ಕೆ ಯೋಗ್ಯನಾಗುವನೆ ?– ಎಂಬ ಬಗ್ಗೆ ಪರಿಶಿಷ್ಟವನ್ನು ನೋಡಿ. 2. 'ಜ್ಞಾನಾವರಣಮ್' ಪಾ॥

ಅಥೋಚ್ಯೇತ-ಬಾಧಕಜ್ಞಾನೇನ ಪೂರ್ವಜ್ಞಾನೋತ್ಪನ್ನಾನಾಂ ಭಯಾದೀನಾಂ ವಿನಾಶೋ ದೃಶ್ಯತ ಇತಿ; ನೈವಮ್। ನ ಹಿ ಜ್ಞಾನೇನ ತೇಷಾಂ ವಿನಾಶಃ। ಕ್ಷಣಿಕತ್ವೇನ ತೇಷಾಂ ಸ್ವಯಮೇವ ವಿನಾಶಾತ್। ಕಾರಣನಿವೃತ್ತ್ಯಾ ಚ ಪಶ್ಚಾದನುತ್ಪತ್ತೇಃ। ಕ್ಷಣಿಕತ್ವಂ ಚ ತೇಷಾಂ ಜ್ಞಾನವದುತ್ಪತ್ತಿಕಾರಣ ಸನ್ನಿಧಾನ ಏವೋಪಲಬ್ಧೇಃ, ಅನ್ಯಥಾ ಅನುಪಲಬ್ಧೇಶ್ಚ ಅವಗಮ್ಯತೇ। ಅಕ್ಷಣಿಕತ್ವೇ ಚ ಭಯಾದೀನಾಂ ಭಯಾದಿಹೇತುಭೂತಜ್ಞಾನಸನ್ತತೌ ಅವಿಶೇಷೇಣ ಸರ್ವೇಷಾಂ ಜ್ಞಾನಾನಾಂ ಭಯಾದ್ಯುತ್ಪತ್ತಿಹೇತುತ್ವೇನ ಅನೇಕಭಯೋಪಲಬ್ಧಿ ಪ್ರಸಙ್ಗಾಚ್ಚ ॥

(ಅರ್ಥ)

ಇದಲ್ಲದೆ (ನೀವು ಉದಾಹರಿಸಿರುವ ಅನುಮಾನಕ್ಕೆ) ಪ್ರತಿಯಾಗಿ (ಅನುಮಾನ)ಪ್ರಯೋಗಗಳು ಇವೆ. (ಹೇಗೆಂದರೆ) :

(೧) ವಿವಾದಕ್ಕೆ ವಿಷಯವಾಗಿರುವ (ಈ) ಅಜ್ಞಾನವು ಜ್ಞಾನಮಾತ್ರವಾಗಿರುವ ಬ್ರಹ್ಮವನ್ನು ಆಶ್ರಯಿಸಿರುವದಿಲ್ಲ, ಏಕೆಂದರೆ (ಇದು) ಅಜ್ಞಾನವಾಗಿದೆ; ಕಪ್ಪೆಯಚಿಪ್ಪೇ ಮುಂತಾದ ಅಜ್ಞಾನದದಂತೆ; ಆ (ಅಜ್ಞಾನವು) ಜ್ಞಾತೃವನ್ನಾಶ್ರಯಿಸಿದೆಯಷ್ಟೆ ?[1]

(೨) ವಿವಾದಕ್ಕೆ ವಿಷಯವಾದ ಅಜ್ಞಾನವು ಜ್ಞಾನಮಾತ್ರವಾದ (ಬ್ರಹ್ಮವನ್ನು) ಮುಸುಕಿರುವದಿಲ್ಲ; ಏಕೆಂದರೆ (ಅದು) ಅಜ್ಞಾನವಾಗಿರುತ್ತದೆ. ಕಪ್ಪೆಯಚಿಪ್ಪೇ ಮುಂತಾದದ್ದರ ಅಜ್ಞಾನದಂತೆ; ಅ (ಅಜ್ಞಾನವು) ವಿಷಯವನ್ನು ಮುಸುಕಿದೆಯಷ್ಟೆ.

(೩) ವಿವಾದಕ್ಕೆ ವಿಷಯವಾಗಿರುವ ಅಜ್ಞಾನವು ಜ್ಞಾನನಿವರ್ತ್ಯವಲ್ಲ; ಏಕೆಂದರೆ (ಅದು) ಜ್ಞಾನದ ವಿಷಯಕ್ಕೆ ಆವರಣವಾಗಿರುವದಿಲ್ಲ. ಯಾವ ಅಜ್ಞಾನವು ಜ್ಞಾನನಿವರ್ತ್ಯವೋ ಅದು ಜ್ಞಾನದ ವಿಷಯಕ್ಕೆ ಆವರಣವಾಗಿರುತ್ತದೆ, ಕಪ್ಪೆಯಚಿಪ್ಪೇ ಮುಂತಾದದ್ದರ ಅಜ್ಞಾನವು (ಹಾಗೆ ಜ್ಞಾನವಿಷಯಕ್ಕೆ ಆವರಣವಾಗಿರುತ್ತವೆ).

(೪) ಬ್ರಹ್ಮವು[2] ಅಜ್ಞಾನಕ್ಕೆ ಆಶ್ರಯವಲ್ಲ; ಏಕೆಂದರೆ ಅದಕ್ಕೆ ಜ್ಞಾತೃತ್ವವಿಲ್ಲ, ಉದಾಹರಣೆ : ಘಟವೇ ಮುಂತಾದದ್ದು (ಜ್ಞಾತೃತ್ವವಿಲ್ಲದ್ದಾದ್ದರಿಂದ) ಅಜ್ಞಾನಕ್ಕೆ ವಿಷಯವಲ್ಲ.

---

1. ಈ ಪ್ರಯೋಗಗಳಲ್ಲೆಲ್ಲ ಜ್ಞಾನ, ಅಜ್ಞಾನ- ಎಂಬ ಶಬ್ದಗಳಿಗೆ ಇರುವ ಅರ್ಥಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ. ಇಲ್ಲಿಂದ ಮುಂದಕ್ಕೆ ಮೂರು ಅನುಮಾನಗಳಲ್ಲಿ ಅಜ್ಞಾನವು ಪಕ್ಷ, ಅಜ್ಞಾನವು ಜ್ಞಾತ್ರಾಶ್ರಯ, ವಿಷಯಾವರಣ- ಎಂಬ ಅನಿಷ್ಟದ ಆಪತ್ತಿಯನ್ನು ಇಲ್ಲಿ ಪ್ರತಿಕೂಲತರ್ಕದಿಂದ ತೋರಿಸಿದೆ.

2. ಇಲ್ಲಿಂದ ಬ್ರಹ್ಮಪಕ್ಷಕವಾದ ಮೂರು ಪ್ರತಿಕೂಲತರ್ಕಗಳನ್ನು ಕೊಟ್ಟಿದೆ.

(೫) ಬ್ರಹ್ಮವು ಅಜ್ಞಾನದಿಂದ ಆವೃತವಾಗಿಲ್ಲ ; ಏಕೆಂದರೆ ಜ್ಞಾನಕ್ಕೆ ವಿಷಯವಲ್ಲ ; ಯಾವದಕ್ಕೆ ಅಜ್ಞಾನವು ಆವರಣವೋ ಅದು ಜ್ಞಾನಕ್ಕೆ ವಿಷಯ ವಾಗಿರುತ್ತದೆ ; ಉದಾಹರಣೆಗೆ ಶುಕ್ತಿಯೇ ಮುಂತಾದದ್ದು.

(೬) ಬ್ರಹ್ಮವು ಜ್ಞಾನನಿವರ್ತ್ಯವಾದ ಅಜ್ಞಾನವುಳ್ಳದ್ದಲ್ಲ ; ಏಕೆಂದರೆ (ಅದು) ಜ್ಞಾನಕ್ಕೆ ವಿಷಯವಲ್ಲ ; ಯಾವದು ಜ್ಞಾನನಿವರ್ತ್ಯವಾದ ಅಜ್ಞಾನ ವುಳ್ಳದ್ದೋ ಅದು ಜ್ಞಾನಕ್ಕೆ ವಿಷಯವಾಗಿರುತ್ತದೆ, ಉದಾಹರಣೆಗೆ ಶುಕ್ತಿಕಾದಿ ಗಳು ಹಾಗೆ ವಿಷಯವಾಗಿರುತ್ತವೆ.

(೭) ವಿವಾದಕ್ಕೆ ವಿಷಯವಾಗಿರುವ ಪ್ರಮಾಣಜ್ಞಾನವು[1] ತನ್ನ ಪ್ರಾಗಭಾವಾತಿರಿಕ್ತಜ್ಞಾನಪೂರ್ವಕವಲ್ಲ ; ಏಕೆಂದರೆ (ಅದು) ಪ್ರಮಾಣಜ್ಞಾನ ವಾಗಿದೆ, ಇದಕ್ಕೆ ನಿಮಗೆ ಅಭಿಮತವಾಗಿರುವ ಅಜ್ಞಾನವನ್ನು ಸಾಧಿಸುವ ಪ್ರಮಾಣಜ್ಞಾನವೇ ದೃಷ್ಟಾಂತ.

(೮) ಜ್ಞಾನವು ವಸ್ತುವನ್ನು ನಾಶಪಡಿಸುವದಿಲ್ಲ ; ಏಕೆಂದರೆ (ಅದು) ಶಕ್ತಿವಿಶೇಷದ ಬೆಂಬಲವಿಲ್ಲದ ಜ್ಞಾನವಾಗಿರುತ್ತದೆ. ಯಾವದು ವಸ್ತುವನ್ನು ನಾಶಪಡಿಸತಕ್ಕದ್ದೋ ಅದು ಶಕ್ತಿವಿಶೇಷದ ಬೆಂಬಲದಿಂದ ಕೂಡಿದ ಜ್ಞಾನವೂ ಅಜ್ಞಾನವೂ ಆಗಿರುತ್ತದೆ ; ಉದಾಹರಣೆಗೆ ಈಶ್ವರನ ಅಥವಾ ಯೋಗಿಯ ಜ್ಞಾನ, ಮತ್ತು ಸುತ್ತಿಗೆಯೇ ಮುಂತಾದದ್ದು.[2]

(೯) ಭಾವರೂಪವಾದ ಅಜ್ಞಾನವು ಜ್ಞಾನವಿನಾಶ್ಯವಲ್ಲ ; ಏಕೆಂದರೆ ಅದು ಭಾವರೂಪವಾಗಿದೆ ; ದೃಷ್ಟಾಂತ : ಘಟಾದಿಗಳು.[3]

ಇನ್ನು ನೀವು 'ಬಾಧಕಜ್ಞಾನದಿಂದ ಮೊದಲು ಹುಟ್ಟಿದ ಭಯವೇ ಮುಂತಾದವು ವಿನಷ್ಟವಾದದ್ದು ಕಂಡಿದೆಯಲ್ಲ !– ಎನ್ನಬಹುದು. ಇದು ಸರಿಯಲ್ಲ. ಏಕೆಂದರೆ ಅವುಗಳ ನಾಶವು ಜ್ಞಾನದಿಂದಾಗುವದಿಲ್ಲ; ಅವು ಕ್ಷಣಿಕವಾಗಿರುವದ ರಿಂದ ತಾವೇ ನಾಶವಾಗುತ್ತವೆ. ಕಾರಣವು ನಷ್ಟವಾದರೆ (ಅವು) ಆ ಬಳಿಕ ಹುಟ್ಟುವದಿಲ್ಲ. (ಅವು) ಕ್ಷಣಿಕವೆಂಬುದು ಜ್ಞಾನದಂತೆಯೇ ಉತ್ಪತ್ತಿಕಾರಣವು

---

1. ಇಲ್ಲಿಯವರೆಗಿನ ಮೂರು ಅನುಮಾನಗಳಿಗೆ ಬ್ರಹ್ಮವು ಪಕ್ಷವು. ಬ್ರಹ್ಮವು ಅಜ್ಞಾನಕ್ಕೆ ಆಶ್ರಯವಾದರೆ ಅದು ಜ್ಞಾತೃವಾಗಬೇಕಾದೀತು. ಅದು ಅಜ್ಞಾನಾವೃತವಾದರೆ ಜ್ಞಾನಕ್ಕೆ ವಿಷಯವೆಂದಾಗುತ್ತದೆ. ಅದರ ಅಜ್ಞಾನವು ಜ್ಞಾನನಿವರ್ತ್ಯವೆಂದರೆ ಅದು ಜ್ಞೇಯವೆಂದೇ ಆಗುತ್ತದೆ– ಎಂಬ ಅನಿಷ್ಟವನ್ನು ಇಲ್ಲಿ ತಂದೊಡ್ಡಿದೆ.

2. ಇಲ್ಲಿಂದ ಮುಂದಕ್ಕೆ ಪ್ರಮಾಣಜ್ಞಾನವು ಪಕ್ಷ. ಇಲ್ಲಿ ಸ್ವಪ್ರಾಗಭಾವವಾದ ಅಜ್ಞಾನವನ್ನು– ಎಂದರೆ ಜ್ಞಾನಾಭಾವವನ್ನು ಕಳೆಯಬೇಕಾಗುವದು ಶಕ್ತಿವಿಶಿಷ್ಟವಾದ ಜ್ಞಾನವೋ ಜಡವಸ್ತುವೋ ಆಗಿರುವದು– ಎಂಬ ಅನಿಷ್ಟವನ್ನು ಒಡ್ಡಿದೆ.

3. ಅಜ್ಞಾನಕ್ಕಿಂತ ವ್ಯತಿರಿಕ್ತವಸ್ತುವೇ ಆಗಿಬಿಡುವದೆಂಬ ದೋಷವನ್ನು ಒಡ್ಡಿದೆ.

ಸಂನಿಹಿತವಾಗಿದ್ದರೇ ಅವು ತೋರುವದರಿಂದಲೂ ಇಲ್ಲದಿದ್ದರೆ ತೋರಿಕೊಳ್ಳದೆ ಇರುವದರಿಂದಲೂ ಗೊತ್ತಾಗುತ್ತದೆ. ಆ ಭಯಾದಿಗಳು ಕ್ಷಣಿಕವಲ್ಲವಾದರೆ, ಭಯಾದಿಗಳಿಗೆ ಹೇತುವಾಗಿರುವ ಜ್ಞಾನವು ಸಂತತವಾಗಿದ್ದರೆ (ಜ್ಞಾನಗಳಲ್ಲಿ) ಯಾವ ವಿಶೇಷವೂ ಇಲ್ಲದಿರುವದರಿಂದ ಎಲ್ಲಾ ಜ್ಞಾನಗಳೂ ಭಯಾದಿಹೇತು ವಾಗಿರುವದರಿಂದ ಅನೇಕ ಭಯಾದಿಗಳು ತೋರಿಬರಬೇಕಾದೀತು; ಆದ್ದರಿಂದಲೂ (ಅವು ಕ್ಷಣಿಕವೇ).

(ಮೂಲ)

'ಸ್ವಪ್ರಾಗಭಾವವ್ಯತಿರಿಕ್ತವಸ್ತ್ವನ್ತರಪೂರ್ವಕಮ್' ಇತಿ ವ್ಯರ್ಥವಿಶೇಷಣೋಪಾದಾನೇನ ಪ್ರಯೋಗಕುಶಲತಾ ಚಾಽಽವಿಷ್ಕೃತಾ | ಅತೋ ನಾನುಮಾನೇ ನಾಪಿ ಭಾವರೂಪಾಜ್ಞಾನಸಿದ್ಧಿಃ | ಶ್ರುತಿತದರ್ಥಾಪತ್ತಿಭ್ಯಾಮ್ ಅಜ್ಞಾನಾಸಿದ್ಧಿಃ ಅನನ್ತರಮೇವ ವಕ್ಷ್ಯತೇ | ಮಿಥ್ಯಾರ್ಥಸ್ಯ ಮಿಥ್ಯೈವೋಪಾದಾನಂ ಭವಿತುಮರ್ಹತಿ ಇತ್ಯೇತದಪಿ 'ನ ವಿಲಕ್ಷಣತ್ವಾತ್' (ವೇ.ಸೂ. ೨-೧-೪) ಇತ್ಯಧಿಕರಣ ನ್ಯಾಯೇನ ಪರಿಹ್ರಿಯತೇ | ಅತೋಽನಿರ್ವಚನೀಯಾಜ್ಞಾನವಿಷಯಾ ನ ಕಾಚಿದಪಿ ಪ್ರತೀತಿರಸ್ತಿ ||

(ಅರ್ಥ)

(ಪ್ರಮಾಣವು) 'ತನ್ನ ಪ್ರಾಗಭಾವಕ್ಕಿಂತ ವ್ಯತಿರಿಕ್ತವಾದ ಮತ್ತೊಂದು ವಸ್ತು ಪೂರ್ವದಲ್ಲಿರುವದಾಗಿರಬೇಕು' ಎಂದು[1] ವ್ಯರ್ಥವಾದ ವಿಶೇಷಣವನ್ನು[2] ತೆಗೆದುಕೊಂಡು (ಸೇರಿಸುವದ)ರಿಂದ (ಅನುಮಾನ)ಪ್ರಯೋಗದಲ್ಲಿ (ನಿಮಗಿರುವ) ಕೌಶಲವನ್ನು ಹೊರಪಡಿಸಿದಂತೆ ಆಗಿರುತ್ತದೆ. ಆದ್ದರಿಂದ ಅನುಮಾನದಿಂದಲೂ ಭಾವರೂಪವಾದ ಅಜ್ಞಾನವು ಸಿದ್ಧಿಸುವದಿಲ್ಲ. ಶ್ರುತಿಯಿಂದಲೂ ಆ (ಶ್ರುತಿಯ) ಅರ್ಥಾಪತ್ತಿಯಿಂದಲೂ ಅಜ್ಞಾನವು ಸಿದ್ಧಿಸುವದಿಲ್ಲವೆಂಬುದನ್ನು ಈ ಮುಂದೆಯೇ ಹೇಳಲಾಗುವದು. ಮಿಥ್ಯಾರ್ಥಕ್ಕೆ ಮಿಥ್ಯೆಯಾದದ್ದೇ ಉಪಾದಾನವಾಗಿರಬೇಕು ಎಂಬ ಯುಕ್ತಿಯನ್ನು 'ನ ವಿಲಕ್ಷಣತ್ವಾತ್' (ವೇ. ಸೂ. ೨-೧-೪) ಎಂಬೀ (ಸೂತ್ರದ) ಅಧಿಕರಣನ್ಯಾಯದಿಂದ ಪರಿಹರಿಸಲಾಗುವದು. **ಆದ್ದರಿಂದ ಅನಿರ್ವಚನೀಯಾಜ್ಞಾನವಿಷಯಕ್ಕೆ (ಯಾವ) ಪ್ರತೀತಿಯೂ[3] ಇರುವದಿಲ್ಲ.**

---

1. ಹಿಂದಿನ೨೦೪ನೆಯ ಪುಟದಲ್ಲಿ ಹೇಳಿದ್ದ ಅನುಮಾನವಾಕ್ಯದಲ್ಲಿ ಹೀಗೆಂದು ಹೇಳಿದೆ.

2. ಸ್ವಶಬ್ದ, ಪ್ರಾಕ್‌ಶಬ್ದ, ಅಭಾವವ್ಯತಿರಿಕ್ತ- ಎಂಬ ಶಬ್ದ, ಅನ್ತರಶಬ್ದ- ಇವೆಲ್ಲ ವ್ಯರ್ಥ. ಏಕೆಂದರೆ 'ವಸ್ತು' ಎಂಬ ಶಬ್ದವು ಭಾವವನ್ನೇ ಹೇಳುತ್ತದೆ ಎಂದು ಶ್ರು. ಪ್ರ. ಈ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

3. ಯಾವ ಪ್ರಮಾಣವೂ ಇಲ್ಲ- ಎಂದರ್ಥ. ಪ್ರತ್ಯಕ್ಷ, ಅನುಮಾನ, ಶ್ರುತ್ಯರ್ಥಾಪತ್ತಿ ಗಳನ್ನು ಇಲ್ಲಿ ನಿರಾಕರಿಸಿದೆ. ದೃಷ್ಟಾರ್ಥಾಪತ್ತಿಯನ್ನು ಮುಂದೆಯೇ ನಿರಾಕರಿಸಲಾಗುವದು.

## ಖ್ಯಾತಿಬಾಧಗಳಿಂದ ಅನಿರ್ವಚನೀಯೋತ್ಪತ್ತಿಸಿದ್ಧಿಯಾಗದು

(ಮೂಲ)

ಪ್ರತೀತಿಭ್ರಾನ್ತಿಬಾಧೈರಪಿ ನ ತಥಾ ಅಭ್ಯುಪಗಮನೀಯಮ್ । ಪ್ರತೀಯಮಾನಮೇವ ಹಿ ಪ್ರತೀತಿಭ್ರಾನ್ತಿಬಾಧವಿಷಯಃ । ಆಭಿಃ ಪ್ರತೀತಿಭಿಃ ಪ್ರತೀತ್ಯನ್ತರೇಣ ಚ ಅನುಪಲಬ್ಧಮ್ ಆಸಾಂ ವಿಷಯಃ—ಇತಿ ನ ಯುಜ್ಯತೇ ಕಲ್ಪಯಿತುಮ್। ಶುಕ್ತ್ಯಾದಿಷು ರಜತಾದಿಪ್ರತೀತೇಃ, 'ಪ್ರತೀತಿಕಾಲೇಽಪಿ ತನ್ನಾಸ್ತಿ' ಇತಿ ಬಾಧೇನ ಚ ಅನ್ಯಸ್ಯ ಅನ್ಯಥಾಭಾನಾಯೋಗಾಚ್ಚ ಸದಸದನಿರ್ವಚನೀಯಮ್ ಅಪೂರ್ವಮೇವೇದಂ ರಜತಂ ದೋಷವಶಾತ್ ಪ್ರತೀಯತ ಇತಿ ಕಲ್ಪನೀಯಮ್– ಇತಿ ಚೇತ್, ನ ತತ್ಕಲ್ಪನಾಯಾಮಪಿ ಅನ್ಯಸ್ಯ ಅನ್ಯಥಾಭಾನಸ್ಯ ಅವರ್ಜನೀಯತ್ವಾತ್ । ಅನ್ಯಥಾಭಾನಾಭ್ಯುಪಗಮಾದೇವ ಖ್ಯಾತಿಪ್ರವೃತ್ತಿಬಾಧಭ್ರಮತ್ವಾನಾಮ್ ಉಪಪತ್ತೇಃ, ಅತ್ಯನ್ತಾಪರಿದೃಷ್ಟಾಕಾರಣಕವಸ್ತುಕಲ್ಪನಾಯೋಗಾತ್ । ಕಲ್ಪ್ಯಮಾನಂ ಹಿ ಇದಮನಿರ್ವಚನೀಯಮ್, ನ ತಾವದನಿರ್ವಚನೀಯಮಿತಿ ಪ್ರತೀಯತೇ; ಅಪಿ ತು ಪರಮಾರ್ಥರಜತಮ್ ಇತ್ಯೇವ । ಅನಿರ್ವಚನೀಯಮ್ ಇತ್ಯೇವ ಪ್ರತೀತಂ ಚೇತ್ ಭ್ರಾನ್ತಿಬಾಧಯೋಃ, ಪ್ರವೃತ್ತೇರಪ್ಯಸಂಭವಃ । ಅತೋಽನ್ಯಸ್ಯಾನ್ಯಥಾಭಾನವಿರಹೇ ಪ್ರತೀತಿಪ್ರವೃತ್ತಿಬಾಧಭ್ರಮತ್ವಾನಾಮ್ ಅನುಪಪತ್ತೇಃ, ತಸ್ಯ ಅಪರಿಹಾರ್ಯತ್ವಾಚ್ಚ ಶುಕ್ತ್ಯಾದಿರೇವ ರಜತಾದ್ಯಾಕಾರೇಣಾವಭಾಸತ ಇತಿ ಭವತಾ ಅಭ್ಯುಪಗನ್ತವ್ಯಮ್ ॥

(ಅರ್ಥ)

ಪ್ರತೀತಿ, ಭ್ರಾಂತಿ, ಬಾಧೆ– ಇವುಗಳಿರುವದರಿಂದಲೂ[1] ಹಾಗೆಂದು[2] ಒಪ್ಪುವದು ಸರಿಯಲ್ಲ. ತೋರುತ್ತಿರುವ ಪದಾರ್ಥವೇ ಅಲ್ಲವೆ, ಪ್ರತೀತಿ, ಭ್ರಾಂತಿ, ಬಾಧೆ– ಇವುಗಳಿಗೆ ವಿಷಯವು[3] ? ಈ ಪ್ರತೀತಿಗಳಿಂದಲೂ ಮತ್ತೊಂದು ಪ್ರತೀತಿ

---

1. ಇದು ಕಪ್ಪೆಯಚಿಪ್ಪು ಎಂಬುದು ಪ್ರತೀತಿ, ಇದು ಬೆಳ್ಳಿ ಎಂಬ ಅರಿವು ಭ್ರಾಂತಿ, 'ಇದು ಬೆಳ್ಳಿಯಲ್ಲ' ಎಂಬುದು ಬಾಧೆ. ಇವುಗಳ ಆಧಾರದಿಂದಲೂ.

2. ಅನಿರ್ವಚನೀಯವಾದ ಅಜ್ಞಾನವು ಅಥವಾ ಪದಾರ್ಥವು ಇದೆಯೆಂದು.

3. ಪ್ರತೀತ್ಯಾದಿಗಳನ್ನು ಬೇರೆಯ ರೀತಿಯಿಂದ ಹೊಂದಿಸುವದು ಆಗಲಾರದು ಎಂಬ ಕಾರಣದಿಂದ 'ಅನಿರ್ವಚನೀಯ'ವಸ್ತುವನ್ನು ಕಲ್ಪಿಸುವದು ಸರಿಯಲ್ಲ ಎಂದರ್ಥ. ಪ್ರಮಾಣಪ್ರತ್ಯಯ, ಭ್ರಾಂತಿಪ್ರತ್ಯಯ, ಬಾಧಪ್ರತ್ಯಯಗಳಿಗೂ ಕಾಣದೆ, ಮತ್ತೆ ಯಾವ ಪ್ರತ್ಯಯಗಳಿಂದಲೂ ನಮಗೆ ಕಾಣಬಾರದೆಇರುವ ಅನಿರ್ವಚನೀಯವು ಈ ಪ್ರತ್ಯಯಗಳಿಗೆ ವಿಷಯ ಎಂದು ಕಲ್ಪಿಸುವದು ಯುಕ್ತವಲ್ಲ– ಎಂದು ಸರಳವಾದ ಅರ್ಥ. ಈ ವಾಕ್ಯಕ್ಕೆ ಶ್ರುತಪ್ರಕಾಶಿಕೆಯಲ್ಲಿ ಬೇರೆಬೇರೆಯ ಪ್ರಕಾರಗಳಿಂದ ಅರ್ಥವನ್ನು ಮಾಡಿರುತ್ತದೆ. ಪರಿಶಿಷ್ಟವನ್ನು ನೋಡಿ.

ಯಿಂದಲೂ ಕಾಣಬಾರದೆಇರುವದು ಇವುಗಳಿಗೆ ವಿಷಯ– ಎಂದು[1] ಕಲ್ಪಿಸುವದು ಯುಕ್ತವಲ್ಲ.

(ಪೂರ್ವಪಕ್ಷಿ) :– ಶುಕ್ತಿಯೇ ಮುಂತಾದವುಗಳಲ್ಲಿ 'ಬೆಳ್ಳಿ' ಎಂದೇ ಮುಂತಾಗಿ ಪ್ರತ್ಯಯವಾಗುತ್ತಿರುವದರಿಂದಲೂ, 'ತೋರುವ ಕಾಲದಲ್ಲಿಯೂ ಅದು ಇರುವದಿಲ್ಲ' ಎಂದು ಬಾಧೆಯಾಗುತ್ತಿರುವದರಿಂದಲೂ, ಒಂದು ಮತ್ತೊಂದು ರೂಪದಲ್ಲಿ ತೋರುವದೆಂಬುದು ಹೊಂದುವದಿಲ್ಲವಾದ್ದರಿಂದಲೂ ಸತ್ತು, ಅಸತ್ತು– ಎಂದು ಗೊತ್ತುಪಡಿಸಿ ಹೇಳುವದಕ್ಕಾಗದ ಹೊಸದೇ ಆಗಿರುವ ಒಂದು (ಅನಿರ್ವಚನೀಯ) ಬೆಳ್ಳಿಯು ದೋಷವಶದಿಂದ ತೋರುತ್ತದೆ ಎಂದು ಕಲ್ಪಿಸಬೇಕು.

(ಸಿದ್ಧಾಂತಿ) :– ಹಾಗಲ್ಲ, ಏಕೆಂದರೆ ಅದನ್ನು ಕಲ್ಪಿಸಿದರೂ ಒಂದು ಇನ್ನೊಂದರಂತೆ ತೋರುವದೆಂಬುದನ್ನು ತಪ್ಪಿಸಿಕೊಳ್ಳುವದಕ್ಕಾಗಲಾರದು.[2] ಮತ್ತೊಂದು ರೀತಿಯಲ್ಲಿ (ಒಂದು ವಸ್ತುವು) ತೋರುತ್ತದೆ ಎಂದು ಒಪ್ಪುವದರಿಂದಲೇ ಖ್ಯಾತಿ, ಪ್ರವೃತ್ತಿ, ಬಾಧೆ, ಭ್ರಮತ್ವ– ಇವುಗಳು ಹೊಂದುವದರಿಂದ[3] ಎಂದಿಗೂ ಕಾಣದೆ ಇರುವ, ನಿಷ್ಕಾರಣವಾದ ವಸ್ತುವನ್ನು ಕಲ್ಪಿಸುವದು ಯುಕ್ತವಲ್ಲ. ಈ ಅನಿರ್ವಚನೀಯ(ವಸ್ತು)ವನ್ನು ಕಲ್ಪಿಸಿದರೂ ಅದು '(ಇದು) ಅನಿರ್ವಚನೀಯ' ಎಂದೇನೂ ತೋರುವದಿಲ್ಲ,[4] 'ನಿಜವಾದ ಬೆಳ್ಳಿ' (ಎಂದೇ ತೋರುತ್ತದೆ). 'ಅನಿರ್ವಚನೀಯ(ವಿದು)' ಎಂದು ತೋರುವದಾದರೆ ಭ್ರಾಂತಿಬಾಧೆಗಳೂ ಪ್ರವೃತ್ತಿಯೂ ಸಂಭವಿಸುವದೇಇಲ್ಲ.[5] **ಆದ್ದರಿಂದ ಒಂದು ಮತ್ತೊಂದರಂತೆ**

---

1. ತೋರುವ ವಸ್ತುವೇ ಪ್ರಮಾಣಕ್ಕೂ ಭ್ರಾಂತಿಗೂ ವಿಷಯ; ಬಾಧಪ್ರತ್ಯಯಕ್ಕೂ 'ಇದು ಬೆಳ್ಳಿಯಲ್ಲ' ಎಂಬ ಪ್ರತ್ಯಯಕ್ಕೂ ಎದುರಿಗೆ ತೋರುತ್ತಿರುವ ವಸ್ತುವೇ ವಿಷಯ. ಯಾವ ಪ್ರತ್ಯಯಕ್ಕೂ ಎಂದಿಗೂ ತೋರದೆಯೇಇರುವ ಅನಿರ್ವಚನೀಯರಜತವು ಬಾಧಪ್ರತ್ಯಯಕ್ಕೆ ವಿಷಯವೆಂದು ಕಲ್ಪಿಸುವದು ಹೇಗೆತಾನೆ ಸರಿಯಾದೀತು ?– ಎಂದು ಆಶಯ. ವಿವರಣಾದಿಗ್ರಂಥಕಾರರು ಭ್ರಾಂತಿಯಕಾಲಕ್ಕೆ ಅನಿರ್ವಚನೀಯವಾದ ಬೆಳ್ಳಿಯೇ ಮುಂತಾದ ವಸ್ತು ಹುಟ್ಟಿ ಬಾಧೆಯಿಂದ ಅದು ನಾಶವಾಗುತ್ತದೆ– ಎಂದು ಕಲ್ಪಿಸಿರುತ್ತಾರೆ. ಪರಿಶಿಷ್ಟವನ್ನು ನೋಡಿ.

2. ಕಪ್ಪೆಯಚಿಪ್ಪು ಅನಿರ್ವಚನೀಯವಾದ ಬೆಳ್ಳಿಯಂತೆ ತೋರಿತು– ಎಂದರೂ ಅನ್ಯಥಾಖ್ಯಾತಿಯೇ ಅಷ್ಟೆ ?

3. ಅನಿರ್ವಚನೀಯರಜತಕ್ಕೆ.

4. ಅನ್ಯಥಾಖ್ಯಾತಿವಾದವನ್ನು ಒಪ್ಪಿದರೂ ಬೆಳ್ಳಿಯಾಗಿ ತೋರುವದು, ಅದರ ಕಡೆಗೆ ಹೋಗುವದು, ಬೆಳ್ಳಿಯಲ್ಲವೆಂದು ತೋರುವದು, ತೋರಿದ್ದು ಭ್ರಮೆಯೆಂದಾಗುವದು– ಎಲ್ಲವೂ ಹೊಂದುತ್ತವೆ.

5. ತೋರುವಾಗಲೇ ಇದು ಅನಿರ್ವಚನೀಯವೆಂದು ಗೊತ್ತಾಗಿಬಿಟ್ಟರೆ ಭ್ರಾಂತಿಪ್ರವೃತ್ತ್ಯಾದಿಗಳು ಎಲ್ಲಿಂದ ಬರಬೇಕು ? ಅನಿರ್ವಚನೀಯವಲ್ಲ ಎಂಬ ಭ್ರಾಂತಿಯಾದರೂ ಹೇಗೆ ?

ತೋರದೆ ಇದ್ದರೆ ಪ್ರತೀತಿಪ್ರವೃತ್ತಿಬಾಧೆಭ್ರಮಗಳು ಯುಕ್ತವಾಗು ವದಿಲ್ಲವಾದ್ದರಿಂದ ಆ (ಅನ್ಯಥಾಖ್ಯಾತಿವಾದವನ್ನು) ತಪ್ಪಿಸಿಕೊಳ್ಳು ವದಕ್ಕಾಗಲಾರದಾದ್ದರಿಂದಲೂ ಶುಕ್ತ್ಯಾದಿಗಳೇ ರಜತಾದ್ಯಾಕಾರದಿಂದ ತೋರುತ್ತವೆ- ಎಂದು ನೀನೂ ಒಪ್ಪಬೇಕು.[1]

(ಮೂಲ)

ಖ್ಯಾತ್ಯನ್ತರವಾದಿನಾಂ ಚ ಸುದೂರಮಪಿ ಗತ್ವಾ ಅನ್ಯಥಾವಭಾಸೋಽವಶ್ಯಾ ಶ್ರಯಣೀಯಃ। ಅಸತ್ಖ್ಯಾತಿಪಕ್ಷೇ ಸದಾತ್ಮನಾ, ಆತ್ಮಖ್ಯಾತಿಪಕ್ಷೇ ಅರ್ಥಾತ್ಮನಾ ಅಖ್ಯಾತಿಪಕ್ಷೇಽಪಿ ಅನ್ಯವಿಶೇಷಣಮ್ ಅನ್ಯವಿಶೇಷಣತ್ವೇನ, ಜ್ಞಾನದ್ವಯಮ್ ಏಕತ್ವೇನ ಚ, ವಿಷಯಾಸದ್ಭಾವಪಕ್ಷೇಽಪಿ ವಿದ್ಯಮಾನತ್ವೇನ ॥

(ಅರ್ಥ)

ಬೇರೆಯ ಖ್ಯಾತಿಗಳನ್ನು (ಒಪ್ಪುವ) ವಾದಿಗಳೂ ಬಹಳದೂರಹೋದ ಮೇಲಾದರೂ ಬೇರೆಯ ತೆರನಾಗಿ (ವಸ್ತುವು) ತೋರುತ್ತದೆ ಎಂಬುದನ್ನು ಅವಶ್ಯ ವಾಗಿ ಆಶ್ರಯಿಸಲೇಬೇಕಾಗುವದು. ಹೇಗೆಂದರೆ ಅಸತ್ಖ್ಯಾತಿಯನ್ನು (ಒಪ್ಪುವವರ) ಪಕ್ಷದಲ್ಲಿ (ಅಸತ್ತು) ಸದ್ರೂಪದಿಂದ (ತೋರುತ್ತದೆ) ಎಂದು ಒಪ್ಪಬೇಕು ; ಆತ್ಮ ಖ್ಯಾತಿಯ ಪಕ್ಷದಲ್ಲಿ[2] (ಬಾಹ್ಯ)ಪದಾರ್ಥರೂಪದಿಂದ, ಅಖ್ಯಾತಿಪಕ್ಷದಲ್ಲಿಯೂ ಒಂದರ ವಿಶೇಷಣವು ಇನ್ನೊಂದರ ವಿಶೇಷಣವಾಗಿ[3] ಮತ್ತು ಎರಡು ಜ್ಞಾನವೂ ಒಂದೆಂದೂ,[4] ವಿಷಯವೇ ಇಲ್ಲವೆಂಬ ಪಕ್ಷದಲ್ಲಿ[5] (ಅದು) ಇದೆ ಎಂದು (ಒಪ್ಪಲೇಬೇಕಾಗುವದು)

## ಅನಿರ್ವಚನೀಯಖ್ಯಾತಿಯಲ್ಲಿ ಬೇರೆಯ ದೋಷಗಳು

(ಮೂಲ)

ಕಿಂಚ, ಅನಿರ್ವಚನೀಯಮಪೂರ್ವಜತನಮ್ ಅತ್ರ ಜ್ಞಾತನಮ್ ಇತಿ ವದತಾ ತಸ್ಯ ಜನ್ಮಕಾರಣಂ ವಕ್ತವ್ಯಮ್, ನ ತಾವತ್ ತತ್ಪ್ರತೀತಿಃ, ತಸ್ಯಾಸ್ತದ್ವಿಷಯ

1. ಶಾಂಕರಭಾಷ್ಯದಲ್ಲಿ ಶುಕ್ತಿಯೇ ರಜತದಂತೆ ತೋರುತ್ತದೆ ಎಂಬುದನ್ನು ಅಧ್ಯಾಸ ಭಾಷ್ಯದಲ್ಲಿ ಬರೆದಿದೆ ; ವ್ಯಾಖ್ಯಾನಕಾರರು ಮಾತ್ರ ಅನಿರ್ವಚನೀಯವಾದಿಗಳು.

2. ಕ್ಷಣಿಕವಿಜ್ಞಾನವು ಹೊರಗೆ ಇರುವ ವಸ್ತುವಿನಂತೆ ಕಾಣುತ್ತದೆ ಎಂಬ ಪಕ್ಷದಲ್ಲಿ.

3. ಬೆಳ್ಳಿಯ ಜ್ಞಾನವಾಗಲೇಇಲ್ಲ- ಎಂಬುದು ಅಖ್ಯಾತಿಯಾದರೆ ಬೆಳ್ಳಿಯೆತೆ. ತೋರಿತೆಂಬ ಅನ್ಯವಿಶೇಷಣತ್ವವನ್ನು ಕಲ್ಪಿಸಬೇಕು.

4. ನೋಡಿದ್ದು ಶುಕ್ತಿ, ಬೆಳ್ಳಿಯು ಸ್ಮರತೆ. ಹೀಗೆ ಎರಡು ಜ್ಞಾನಗಳಾದರೂ ವಿವೇಕವಿಲ್ಲದ್ದರಿಂದ ಬೆಳ್ಳಿಯಾಗಿ ತೋರಿತು ಎನ್ನುತ್ತಾರೆ ಎಂಬುದು ಅಖ್ಯಾತಿ ಎಂಬ ಪಕ್ಷದಲ್ಲಿ. ಎರಡು ಜ್ಞಾನವನ್ನು ಒಂದೆನ್ನುವದೇ ಅನ್ಯಥಾಖ್ಯಾತಿಯಾಗುವದು.

5. ವಿಷಯವಿಲ್ಲದಿದ್ದರೂ ಹಾಗೆ ತೋರಿತೆಂಬ ಭ್ರಾಂತಿಯಾಗುತ್ತದೆ ಎಂಬ ಪಕ್ಷದಲ್ಲಿ ಎಂದರ್ಥ. ಈ ಖ್ಯಾತಿವಾದಗಳ ವಿಮರ್ಶೆಯು ಭಾಷ್ಯದಲ್ಲಿಲ್ಲ. ಪಂಚಪಾದಿಕಾ, ಭಾಮ ತ್ಯಾದಿಗ್ರಂಥಗಳಲ್ಲಿದೆ.

ತ್ವೇನ ತದುತ್ಪತ್ತೇಃ ಪ್ರಾಕ್ ಆತ್ಮಲಾಭಾಯೋಗಾತ್ । ನಿರ್ವಿಷಯಾ ಜಾತಾ ತದುತ್ಪಾದ್ಯ ತದೇವ ವಿಷಯೀಕರೋತೀತಿ ಮಹತಾಮ್ ಇದಮುಪಪಾದನಮ್ । ಅಥ ಇನ್ದ್ರಿಯಾದಿಗತೋ ದೋಷಃ, ತನ್ನ ; ತಸ್ಯ ಪುರುಷಾಶ್ರಯತ್ವೇನ ಅರ್ಥಗತಕಾರ್ಯಸ್ಯ ಉತ್ಪಾದಕತ್ವಾಯೋಗಾತ್ । ನಾಪಿ ಇನ್ದ್ರಿಯಾಣಿ, ತೇಷಾಂ ಜ್ಞಾನಕಾರಣತ್ವಾತ್। ನಾಪಿ ದುಷ್ಟಾನೀನ್ದ್ರಿಯಾಣಿ, ತೇಷಾಮಪಿ ಸ್ವಕಾರ್ಯಭೂತೇ ಜ್ಞಾನ ಏವ ಹಿ ವಿಶೇಷಕರತ್ವಮ್। ಅನಾದಿಮಿಥ್ಯಾಜ್ಞಾನೋಪಾದಾನತ್ವಂ ತು ಪೂರ್ವಮೇವ ನಿರಸ್ತಮ್ ॥

ಕಿಂ ಚ, ಅಪೂರ್ವಮ್ ಅನಿರ್ವಚನೀಯಮಿದಂ ವಸ್ತುಜಾತಂ ರಜತಾದಿಬುದ್ಧಿಶಬ್ದಾಭ್ಯಾಂ ಕಥಮಿವ ವಿಷಯೀಕ್ರಿಯತೇ ; ನ ಘಟಾದಿಬುದ್ಧಿಶಬ್ದಾಭ್ಯಾಮ್ ? ರಜತಾದಿಸಾದೃಶ್ಯಾದಿತಿ ಚೇತ್ ; ತರ್ಹಿ ತತ್ಸದೃಶಮಿತ್ಯೇವ ಪ್ರತೀತಿಶಬ್ದೌ ಸ್ಯಾತಾಮ್ । ರಜತಾದಿಜಾತಿಯೋಗಾದಿತಿ ಚೇತ್, ಸಾ ಕಿಂ ಪರಮಾರ್ಥಭೂತಾ ಅಪರಮಾರ್ಥಭೂತಾ ವಾ ? ನ ತಾವತ್ ಪರಮಾರ್ಥಭೂತಾ ; ತಸ್ಯಾ ಅಪರಮಾರ್ಥಾನ್ವಯಾಯೋಗಾತ್ । ನಾಪ್ಯಪರಮಾರ್ಥಭೂತಾ । ಪರಮಾರ್ಥಾನ್ವಯಾಯೋಗಾತ್ । ಅಪರಮಾರ್ಥೇ ಪರಮಾರ್ಥಬುದ್ಧಿಶಬ್ದಯೋಃ ನಿರ್ವಾಹಕತ್ವಾ ಯೋಗಾಚ್ಚ ಇತ್ಯಲಮಪರಿಣತಕುತರ್ಕನಿರಸನೇನ ॥

(ಅರ್ಥ)

ಇದೂಅಲ್ಲದೆ ಅನಿರ್ವಚನೀಯವಾದ ಹೊಸ ಬೆಳ್ಳಿಯೊಂದು ಇಲ್ಲಿ ಹುಟ್ಟಿರುತ್ತದೆ ಎನ್ನುವವನು ಅದರ ಹುಟ್ಟಿಗೆ ಕಾರಣ(ವು ಯಾವದೆಂಬುದನ್ನು) ಹೇಳಬೇಕು. (೧) ಮೊದಲನೆಯದಾಗಿ ಅದರ ಜ್ಞಾನವು (ಕಾರಣವಲ್ಲ), ಏಕೆಂದರೆ ಆ (ಜ್ಞಾನವು ಬೆಳ್ಳಿಯ ವಿಷಯ)ವಾಗಿರುವದರಿಂದ ಆ (ಬೆಳ್ಳಿ) ಹುಟ್ಟುವದಕ್ಕಿಂತ ಮುಂಚೆ[1] (ಅದು) ಹುಟ್ಟುವದೆಂಬುದು ಹೊಂದುವದಿಲ್ಲ. ವಿಷಯವಿಲ್ಲದೆ ಹುಟ್ಟಿ (ಜ್ಞಾನವು) ಆ (ವಿಷಯವನ್ನೂ) ಉಂಟುಮಾಡಿ ಅದನ್ನೇ ವಿಷಯೀಕರಿಸುತ್ತದೆ –ಎಂಬೀ ಉಪಪತ್ತಿಯು ದೊಡ್ಡವರು (ಹೇಳತಕ್ಕದ್ದು) ![2] (೨) ಇನ್ನು ಇಂದ್ರಿಯದಲ್ಲಿರುವ ದೋಷ(ವೇ ಕಾರಣ ಎನ್ನುವದಾದರೆ) ಅದೂ ಅಲ್ಲ ; ಏಕೆಂದರೆ ಅದು ಪುರುಷನನ್ನು ಆಶ್ರಯಿಸಿಕೊಂಡಿರುವದರಿಂದ (ಹೊರಗಿನ) ವಿಷಯದಲ್ಲಿ (ಆಗಬೇಕಾದ) ಕಾರ್ಯವನ್ನು (ಅದು) ಉಂಟುಮಾಡಲಾರದು. (೩) ದೋಷಯುಕ್ತವಾದ ಇಂದ್ರಿಯಗಳು (ಕಾರಣ)ವೆನ್ನುವದೂ ಸರಿಯಾಗುವದಿಲ್ಲ; ಏಕೆಂದರೆ ಅವೂ ಜ್ಞಾನಕಾರಣವಾಗಿರುತ್ತವೆ. ತಮಗೆ ಕಾರ್ಯವಾದ ಜ್ಞಾನದಲ್ಲಿಯೇ ವಿಶೇಷ

1. ಮೊದಲು ವಿಷಯವಿದ್ದರೇ ಅಲ್ಲವೆ, ಅದರ ಜ್ಞಾನವು ಹುಟ್ಟುವದು ?– ಎಂದು ಭಾವ
2. ಜ್ಞಾನವು ಹುಟ್ಟಿ, ವಿಷಯವನ್ನು ಹುಟ್ಟಿಸಿ, ಅದನ್ನು ಬೆಳಗುತ್ತದೆ– ಎಂಬುದು ಹಾಸ್ಯಾಸ್ಪದ ಎಂದು ಭಾವ.

ವನ್ನುಂಟುಮಾಡತಕ್ಕವಾಗಿರುತ್ತವೆ. ಅನಾದಿಯಾದ ಮಿಥ್ಯಾಜ್ಞಾನವೇ (ಆ ಬೆಳ್ಳಿಗೆ) ಉಪಾದಾನವೆಂಬುದನ್ನಂತೂ ಹಿಂದೆಯೇ[1] ನಿರಾಕರಿಸಿದ್ದಾಗಿರುತ್ತದೆ.

ಮತ್ತೂ ಒಂದು (ಮಾತು) :– ಅಪೂರ್ವವಾಗಿ, ಅನಿರ್ವಚನೀಯವಾಗಿ (ಹುಟ್ಟಿರುವ) ಈ ವಸ್ತುಜಾತವನ್ನು ಬೆಳ್ಳಿಯೇ ಮುಂತಾದ ಬುದ್ಧಿಶಬ್ದಗಳು ಹೇಗೆ ವಿಷಯೀಕರಿಸುತ್ತವೆ? ಗಡಿಗೆಯೇ ಮುಂತಾದ ಬುದ್ಧಿಶಬ್ದಗಳೇಕೆ ವಿಷಯೀಕರಿಸುವದಿಲ್ಲ?[2]

(ಪೂರ್ವಪಕ್ಷಿ) :– ಬೆಳ್ಳಿಯೇ ಮುಂತಾದದ್ದಕ್ಕೆ ಸದೃಶವಾಗಿರುವದರಿಂದ (ಅದರ ಬುದ್ಧಿಶಬ್ದಗಳೇ ಇದನ್ನು ವಿಷಯೀಕರಿಸುತ್ತವೆ.)

(ಸಿದ್ಧಾಂತಿ) :— ಹಾಗಾದರೆ 'ಅವಕ್ಕೆ ಸದೃಶವಾಗಿದೆ' ಎಂಬ ಬುದ್ಧಿಶಬ್ದಗಳೇ ಆಗಬೇಕು.

(ಪೂರ್ವಪಕ್ಷಿ) :— ಬೆಳ್ಳಿಯೇ ಮುಂತಾದವುಗಳ ಜಾತಿಯು ಇದರಲ್ಲಿರುವದರಿಂದ (ಆ ಬುದ್ಧಿಶಬ್ದಗಳೇ) ವಿಷಯೀಕರಿಸುತ್ತವೆ.[3]

(ಸಿದ್ಧಾಂತಿ) :— ಆ (ಜಾತಿಯು) ಪರಮಾರ್ಥವೋ, ಅಪರಮಾರ್ಥವೋ? ಮೊದಲನೆಯದಾಗಿ ಪರಮಾರ್ಥವಲ್ಲ; ಏಕೆಂದರೆ ಅದು ಅಪರಮಾರ್ಥಕ್ಕೆ ಸಂಬದ್ಧವಾಗಲಾರದು. ಅಪರಮಾರ್ಥವೂ ಅಲ್ಲ; ಏಕೆಂದರೆ (ಅದು) ಪರಮಾರ್ಥ (ವ್ಯಕ್ತಿಗೆ) ಸಂಬದ್ಧವಾಗಲಾರದು. ಅಪರಮಾರ್ಥ(ಪದಾರ್ಥ)ದಲ್ಲಿ ಪರಮಾರ್ಥವಾದ ಬುದ್ಧಿಶಬ್ದಗಳನ್ನು ಉಂಟುಮಾಡಲೂ ಆರದು. ಹೀಗಿರುವದರಿಂದ ಅಪಕ್ವವಾದ ಕುತರ್ಕವನ್ನು ನಿರಾಕರಿಸುವದು (ಇಲ್ಲಿಗೆ) ಸಾಕು.

## ಸತ್ಖ್ಯಾತಿಸಮರ್ಥನೆ

(ಮೂಲ)

**ಅಥವಾ**[4] —

**ಯಥಾರ್ಥಂ ಸರ್ವವಿಜ್ಞಾನಮಿತಿ ವೇದವಿದಾಂ ಮತಮ್ ।**
**ಶ್ರುತಿಸ್ಮೃತಿಭ್ಯಃ ಸರ್ವಸ್ಯ ಸರ್ವಾತ್ಮತ್ವಪ್ರತೀತಿತಃ ॥ ೧ ॥**

---

1. ೧೯೩ನೆಯ ಪುಟವನ್ನು ನೋಡಿ.

2. ಹೊಸದೊಂದು ವಸ್ತುವನ್ನು ಕಂಡರೆ ಅದನ್ನು ಇಂಥ ವಸ್ತುವಿನ ಶಬ್ದಬುದ್ಧಿಗಳೇ ವಿಷಯೀಕರಿಸುತ್ತವೆ ಎಂಬ ನಿಯಮ ಹೇಗೆ ಉಂಟಾದೀತು?

3. ಗೋತ್ವಜಾತಿಯಿಂದ ವ್ಯಕ್ತಿಗಳನ್ನೆಲ್ಲ ಗೋವೆಂದು ತಿಳಿಯುವಂತೆಯೂ ಕರೆಯುವಂತೆಯೂ ರಜತತ್ವಜಾತಿಯ ಸಂಬಂಧವಿರುವದರಿಂದ ಬೆಳ್ಳಿಯೆಂದೇ ಅರಿಯುತ್ತಾರೆ, ಹಾಗೆಂದೇ ಕರೆಯುತ್ತಾರೆ.

4. ಈ ಮುಂದಿನ ಶ್ಲೋಕಗಳು ಶ್ರೀಭಾಷ್ಯಕಾರರವು.

ಬಹು ಸ್ಯಾಮಿತಿ ಸಙ್ಕಲ್ಪಪೂರ್ವಸೃಷ್ಟ್ಯುಪಕ್ರಮೇ ।
ತಾಸಾಂ ತ್ರಿವೃತಮೇಕೈಕಾಮಿತಿ ಶ್ರುತ್ಯೈವ ಚೋದಿತಮ್ ॥ ೨ ॥

ತ್ರಿವೃತ್ಕರಣಮೇವಂ ಹಿ ಪ್ರತ್ಯಕ್ಷೇಣೋಪಲಭ್ಯತೇ ।
ಯದಗ್ನೇ ರೋಹಿತಂ ರೂಪಂ ತೇಜಸಸ್ತದಪಾಮಪಿ ॥ ೩ ॥

ಶುಕ್ಲಂ ಕೃಷ್ಣಂ ಪೃಥಿವ್ಯಾಶ್ಚೇತ್ಯಗ್ನಾವೇವ ತ್ರಿರೂಪತಾ ।
ಶ್ರುತ್ಯೈವ ದರ್ಶಿತಾ ತಸ್ಮಾತ್ ಸರ್ವೇ ಸರ್ವತ್ರ ಸಙ್ಗತಾಃ ॥ ೪ ॥

ಪುರಾಣೇ ಚೈವಮೇವೋಕ್ತಂ ವೈಷ್ಣವೇ ಸೃಷ್ಟ್ಯುಪಕ್ರಮೇ ॥ ೫ ॥

‘ನಾನಾವೀರ್ಯಾಃ ಪೃಥಗ್ಭೂತಾಸ್ತತಸ್ತೇ ಸಂಹತಿಂ ವಿನಾ ।
ನಾಶಕ್ನುವನ್ ಪ್ರಜಾಃ ಸ್ರಷ್ಟುಮಸಮಾಗಮ್ಯ ಕೃತ್ಸ್ನಶಃ ॥ ೬ ॥

ಸಮೇತ್ಯಾನ್ಯೋನ್ಯಸಂಯೋಗಂ ಪರಸ್ಪರಸಮಾಶ್ರಯಾಃ ।
ಮಹದಾದ್ಯಾ ವಿಶೇಷಾನ್ತಾ ಹ್ಯಣ್ಡಮಿ’ತ್ಯಾದಿನಾ ತತಃ ॥ ೭ ॥

ಸೂತ್ರಕಾರೋಽಪಿ ಭೂತಾನಾಂ ತ್ರಿರೂಪತ್ವಂ ತಥಾಽವದತ್ ।
ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾದಿತಿ ತೇನಾಭಿಧಾಭಿಧಾ ॥ ೮ ॥

ಸೋಮಾಭಾವೇ ಚ ಪೂತೀಕಗ್ರಹಣಂ ಶ್ರುತಿಚೋದಿತಮ್ ।
ಸೋಮಾವಯವಸದ್ಭಾವಾದಿತಿ ನ್ಯಾಯವಿದೋ ವಿದುಃ ॥ ೯ ॥

ವ್ರೀಹ್ಯಭಾವೇ ಚ ನೀವಾರಗ್ರಹಣಂ ವ್ರೀಹಿಭಾವತಃ ।
ತದೇವ ಸದೃಶಂ ತಸ್ಯ ಯತ್ತದ್ದ್ರವ್ಯೈಕದೇಶಭಾಕ್ ॥ ೧೦ ॥

ಶುಕ್ತ್ಯಾದೌ ರಜತಾದೇಶ್ಚ ಭಾವಃ ಶ್ರುತ್ಯೈವ ಬೋಧಿತಃ ।
ರೂಪ್ಯಶುಕ್ತ್ಯಾದಿನಿರ್ದೇಶಭೇದೋ ಭೂಯಸ್ತ್ವಹೇತುಕಃ ॥ ೧೧ ॥

ರೂಪ್ಯಾದಿಸದೃಶಶ್ಚಾಯಂ ಶುಕ್ತ್ಯಾದಿರುಪಲಭ್ಯತೇ ।
ಅತಸ್ತಸ್ಯಾತ್ರ ಸದ್ಭಾವಃ ಪ್ರತೀತೇರಪಿ ನಿಶ್ಚಿತಃ ॥ ೧೨ ॥

ಕದಾಚಿಚ್ಚಕ್ಷುರಾದೇಸ್ತು ದೋಷಾಚ್ಛುಕ್ತ್ಯಂಶವರ್ಜಿತಃ ।
ರಜತಾಂಶೋ ಗೃಹೀತೋಽತೋ ರಜತಾರ್ಥೀ ಪ್ರವರ್ತತೇ ॥ ೧೩ ॥

ದೋಷಹಾನೌ ತು ಶುಕ್ತ್ಯಂಶೇ ಗೃಹೀತೇ ತನ್ನಿವರ್ತತೇ ।
ಅತೋ ಯಥಾರ್ಥಂ ರೂಪ್ಯಾದಿವಿಜ್ಞಾನಂ ಶುಕ್ತಿಕಾದಿಷು ॥ ೧೪ ॥

ಬಾಧ್ಯಬಾಧಕಭಾವೋಽಪಿ ಭೂಯಸ್ತ್ವೇನೋಪಪದ್ಯತೇ ।
ಶುಕ್ತಿಭೂಯಸ್ತ್ವವೈಕಲ್ಯಸಾಕಲ್ಯಗ್ರಹರೂಪತಃ ॥ ೧೫ ॥

ನಾತೋ ಮಿಥ್ಯಾರ್ಥಸತ್ಯಾರ್ಥವಿಷಯತ್ವನಿಬನ್ಧನಃ ।
ಏವಂ ಸರ್ವಸ್ಯ ಸರ್ವತ್ವೇ ವ್ಯವಹಾರವ್ಯವಸ್ಥಿತಿಃ ॥ ೧೬ ॥

ಅಥವಾ—

(೧) ಎಲ್ಲಾ ಅರಿವೂ ಯಥಾರ್ಥವೇ ಎಂಬುದು ವೇದವನ್ನು ಬಲ್ಲವರ ಮತ.[1] ಏಕೆಂದರೆ ಪ್ರತಿಯೊಂದೂ ಸರ್ವಾತ್ಮಕವಾಗಿದೆ ಎಂದು ಶ್ರುತಿಸ್ಮೃತಿಗಳಿಂದ ತಿಳಿಯ ಬರುತ್ತದೆ.

(೨-೩) 'ಬಹುವಾಗುವೆನು' (ಛಾಂ. ೬-೨-೩) ಎಂದು ಸಂಕಲ್ಪಪೂರ್ವಕವಾಗಿ ಸೃಷ್ಟ್ಯಾದಿಯನ್ನು (ಹೇಳುವ) ಉಪಕ್ರಮದಲ್ಲಿ 'ಅವುಗಳೊಳಗೆ ಒಂದೊಂದನ್ನು ಮುಮ್ಮಡಿಮುಮ್ಮಡಿಯಾಗಿ' (ಛಾಂ. ೬-೩-೪) ಎಂದು ಶ್ರುತಿಯಿಂದಲೇ ತ್ರಿವೃತ್ಕರಣ ವು ಉಕ್ತವಾಗಿರುತ್ತದೆ ; ಹೀಗೆಂದೇ ಪ್ರತ್ಯಕ್ಷದಿಂದಲೂ ಕಂಡುಬರುತ್ತದೆ.

(೪) ಅಗ್ನಿಯ ಕೆಂಪುಬಣ್ಣವಿದೆಯಲ್ಲ, ಅದು ತೇಜಸ್ಸಿನದು ; ಬಿಳಿಯ ಬಣ್ಣವು ಅಪ್ಪಿನದು, ಕಪ್ಪು ಪೃಥಿವಿಯದು— ಎಂದು ಅಗ್ನಿಯಲ್ಲಿಯೇ ಮೂರು ಬಣ್ಣವನ್ನು ಶ್ರುತಿಯೇ ತಿಳಿಸಿಕೊಟ್ಟಿರುತ್ತದೆ. ಆದ್ದರಿಂದ ಎಲ್ಲವೂ ಎಲ್ಲೆಲ್ಲಿಯೂ ಕೂಡಿಕೊಂಡಿರು ತ್ತವೆ.

(೫-೭) ವಿಷ್ಣುಪುರಾಣದಲ್ಲಿಯೂ ಸೃಷ್ಟ್ಯುಪಕ್ರಮವನ್ನು (ಹೇಳುವಲ್ಲಿ) 'ನಾನಾ ವೀರ್ಯಗಳುಳ್ಳವಾಗಿ ಬೇರೆಬೇರೆಯಾಗಿದ್ದವು ; ಆದ್ದರಿಂದ ಅವು ಸಂಘಾತವಾಗದೆ ಒಂದುಗೂಡದೆ ಎಲ್ಲಾ ಪ್ರಜೆಗಳನ್ನೂ ಸೃಷ್ಟಿಸುವದಕ್ಕೆ ಶಕ್ತವಾಗಲಿಲ್ಲ; ಒಂದಕ್ಕೊಂದರ ಸಂಯೋಗವನ್ನು ಹೊಂದಿದಮೇಲೆ ಒಂದನ್ನೊಂದು ಆಶ್ರಯಿಸಿಕೊಂಡು... ಮಹತ್ತು ಮೊದಲಾಗಿ ವಿಶೇಷದವರೆಗಿನವು ಅಂಡವನ್ನು ಉತ್ಪಾದನೆಮಾಡಿದವು' (ವಿ. ಪು. ೧-೨-೫೧, ೫೨, ೫೩) ಎಂದು ಮುಂತಾಗಿರುವ (ಗ್ರಂಥಭಾಗದಿಂದ) ಹೀಗೆಂದೇ ಹೇಳಿರುತ್ತದೆ.

(೮) ಸೂತ್ರಕಾರನೂ 'ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್' (ವೇ. ಸೂ. ೩-೧-೨) ಭೂತಗಳಿಗೆ ತ್ರಿರೂಪತ್ವವನ್ನು ದೇಹದಲ್ಲಿ ಜಲಾಂಶವು ಹೆಚ್ಚಾಗಿರುವದರಿಂದ (ಅಪ್ಪೆಂಬ) ನಾಮವಿಶೇಷದಿಂದ ಕರೆದಿದೆಯೆಂದೂ ಹೇಳಿರುತ್ತಾರೆ.

(೯-೧೦) ಸೋಮವು ಇಲ್ಲದಿರುವಾಗ ಪೂತೀಕವನ್ನು ತೆಗೆದುಕೊಳ್ಳಬೇಕೆಂದು ಶ್ರುತಿಯಲ್ಲಿ ಹೇಳಿರುವದು (ಪೂತೀಕದಲ್ಲಿ) ಸೋಮಾವಯವವು ಇರುವದರಿಂದ ಎಂದು ನ್ಯಾಯವನ್ನು ಬಲ್ಲವರು ಹೇಳುವ ಮತ.[2] ಬತ್ತವಿಲ್ಲದಿರುವಾಗ ನೀವಾರ ಧಾನ್ಯ ಗ್ರಹಿಸಬೇಕೆಂದಿರುವದೂ ಅದರಲ್ಲಿ ಬತ್ತವಿರುವದರಿಂದ. ಯಾವದರಲ್ಲಿ ಯಾವದರ ಅಂಶವಿರುವದೋ ಅದೇ ಅದಕ್ಕೆ ಸದೃಶವಾಗಿರುತ್ತದೆ.

(೧೧-೧೫) ಶುಕ್ತ್ಯಾದಿಯಲ್ಲಿ ಬೆಳ್ಳಿಯೇ ಮುಂತಾದ್ದರ (ಅಂಶವು) ಇರುವದು ಶ್ರುತಿಯಿಂದಲೇ ಉಕ್ತವಾಗಿರುತ್ತದೆ. '(ಇದು) ಬೆಳ್ಳಿ, (ಇದು) ಶುಕ್ತಿ' ಎಂದು ಮುಂತಾಗಿ ಹೆಸರಿಸುವ ಭೇದವು (ಅದರಲ್ಲಿ ಅದರ ಅಂಶವು) ಹೆಚ್ಚಾಗಿರುವ ಕಾರಣ

---

1. ಇದು 'ವೇದವಿದರ' ಮತವೆಂದದ್ದರಿಂದ ತಮ್ಮ ಮತವೆಂದಂತೆ ಆಯಿತು. ಹಿಂದೆ ಅನ್ಯಥಾಖ್ಯಾತಿವಾದವನ್ನು ಒಪ್ಪಲೇಬೇಕೆಂದು ಹೇಳುವದು ಯಥಾರ್ಥಖ್ಯಾತಿಯನ್ನು ಬಿಟ್ಟರೆ ಉಳಿದವುಗಳೊಳಗೆ ಅನ್ಯಥಾಖ್ಯಾತಿಯೇ ಉತ್ತಮವೆಂಬ ಅಭಿಪ್ರಾಯದಿಂದ— ಎಂದು ಶು. ಪ್ರ.

2. ಇಲ್ಲದಿದ್ದರೆ ಇದು ಯುಕ್ತವಾಗಲಾರದು ಎಂದು ಭಾವ.

ದಿಂದ. ಈ ಶುಕ್ತ್ಯಾದಿವಸ್ತುವು ಬೆಳ್ಳಿಯೇ ಮುಂತಾದದ್ದರಂತೆಯೇ ಕಾಣಬರುತ್ತದೆ; ಅದ್ದರಿಂದ ಪ್ರತೀತಿಯಿಂದಲೂ ಅದರಲ್ಲಿ (ಈ ಬೆಳ್ಳಿಯ ಅಂಶವು) ಇದೆ ಎಂದು ಗೊತ್ತಾಗುತ್ತದೆ. ಒಮ್ಮೊಮ್ಮೆ ಚಕ್ಷುರಾದೀಂದ್ರಿಯದ ದೋಷದಿಂದ ಶುಕ್ತ್ಯಂಶವನ್ನು ಬಿಟ್ಟು (ಬರಿಯ) ರಜತಾಂಶವೇ ಗೃಹೀತವಾಗುತ್ತದೆ; ಅದ್ದರಿಂದ (ಅದರಕಡೆಗೆ) ಬೆಳ್ಳಿಯನ್ನು ಇಚ್ಛಿಸುವವನು ಮುಂದುವರಿಯುತ್ತಾನೆ; ದೋಷವು ಹೋದಮೇಲಾದರೆ ಶುಕ್ತ್ಯಂಶವೂ ಕಂಡುಬರಲಾಗಿ ಅದರಿಂದ ಹಿಂಜರಿಯುತ್ತಾನೆ; ಅದ್ದರಿಂದ ಶುಕ್ತಿಕಾದಿಗಳಲ್ಲಿ ಬೆಳ್ಳಿಯೇ ಮುಂತಾದವುಗಳ ಜ್ಞಾನವು ಯಥಾರ್ಥವೇ. (ಇಲ್ಲಿ) ಬಾಧ್ಯಬಾಧಕಭಾವವು ಅಗುವದೂ (ಶುಕ್ತ್ಯಾದ್ಯಂಶವು) ಹೆಚ್ಚಾಗಿರುವದರಿಂದ ಯುಕ್ತವಾಗಿರುತ್ತದೆ; ಶುಕ್ತಿಯು ಹೆಚ್ಚಾಗಿರುವದನ್ನು ಸಂಪೂರ್ಣವಾಗಿ ಅಥವಾ ಕಡಿಮೆಯಾಗಿ ಗ್ರಹಣಮಾಡುವದರಿಂದ ಈ ಭೇದವು ಯುಕ್ತವಾಗುತ್ತದೆ; ಅದು ಮಿಥ್ಯಾವಸ್ತುಸತ್ಯವಸ್ತುವಿಷಯವಾಗಿರುವದರಿಂದಲ್ಲ. ಹೀಗೆ ಪ್ರತಿಯೊಂದು ವಸ್ತುವೂ ಎಲ್ಲವೂ ಅಗಿರುವದರಿಂದ ವ್ಯವಹಾರದ ವ್ಯವಸ್ಥೆಯಾಗುತ್ತದೆ.

(ಮೂಲ)

ಸ್ವಪ್ನೇ ಚ ಪ್ರಾಣಿನಾಂ ಪುಣ್ಯಪಾಪಾನುಗುಣಂ ಭಗವತೈವ ತತ್ತತ್ಪುರುಷಮಾತ್ರಾನುಭಾವ್ಯಾಃ, ತತ್ತತ್ಕಾಲಾವಸಾನಾಃ ತಥಾಭೂತಾಶ್ಚ ಅರ್ಥಾಃ ಸೃಜ್ಯನ್ತೇ। ತಥಾ ಹಿ ಶ್ರುತಿಃ ಸ್ವಪ್ನವಿಷಯಾ– 'ನ ತತ್ರ ರಥಾ ನ ರಥಯೋಗಾ ನ ಪನ್ಥಾನೋ ಭವನ್ತಿ। ಅಥ ರಥಾನ್ ರಥಯೋಗಾನ್ ಪಥಃ ಸೃಜತೇ। ನ ತತ್ರಾನನ್ದಾ ಮುದಃ ಪ್ರಮುದೋ ಭವನ್ತಿ। ಅಥಾನನ್ದಾನ್ ಮುದಃ ಪ್ರಮುದಃ ಸೃಜತೇ। ನ ತತ್ರ ವೇಶಾನ್ತಾಃ ಪುಷ್ಕರಿಣ್ಯಸ್ಸ್ರವನ್ತ್ಯೋ ಭವನ್ತಿ। ಅಥ ವೇಶಾನ್ತಾನ್ ಪುಷ್ಕರಿಣ್ಯಸ್ಸ್ರವನ್ತ್ಯಃ ಸೃಜತೇ ಸ ಹಿ ಕರ್ತಾ' ಇತಿ। (ಬೃ. ೪–೩–೧೦) ಯದ್ಯಪಿ ಸಕಲೇತರಪುರುಷಾನುಭಾವ್ಯತಯಾ ತದಾನೀಂ ನ ಭವನ್ತಿ। ತಥಾಪಿ ತತ್ತತ್ಪುರುಷಮಾತ್ರಾನುಭಾವ್ಯತಯಾ ತಥಾವಿಧಾನ್ ಅರ್ಥಾನೀಶ್ವರಃ ಸೃಜತಿ। ಸ ಹಿ ಕರ್ತಾ। ತಸ್ಯ ಸತ್ಯಸಙ್ಕಲ್ಪಸ್ಯ ಆಶ್ಚರ್ಯಶಕ್ತೇಃ ತಥಾವಿಧಂ ಕರ್ತೃತ್ವಂ ಸಂಭವತಿ– ಇತ್ಯರ್ಥಃ। 'ಯ ಏಷು ಸುಪ್ತೇಷು ಜಾಗರ್ತಿ ಕಾಮಂ ಕಾಮಂ ಪುರುಷೋ ನಿರ್ಮಿಮಾಣಃ। ತದೇವ ಶುಕ್ರಂ ತದ್ ಬ್ರಹ್ಮ ತದೇವಾಮೃತಮುಚ್ಯತೇ। ತಸ್ಮಿಂಲ್ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ' (ಕ.೨–೨–೮) ಇತಿ ಚ। ಸೂತ್ರಕಾರೋಽಪಿ 'ಸನ್ಧ್ಯೇ ಸೃಷ್ಟಿರಾಹ ಹಿ' (ವೇ. ಸೂ. ೩–೨–೧), 'ನಿರ್ಮಾತಾರಂ ಚೈಕೇ ಪುತ್ರಾದಯಶ್ಚ'। (ಸೂ. ೩–೨–೨) ಇತಿ ಸೂತ್ರದ್ವಯೇನ ಸ್ವಾಪ್ನೇಷು ಸರ್ವೇಷು ಅರ್ಥೇಷು ಜೀವಸ್ಯ ಸ್ರಷ್ಟೃತ್ವಮಾಶಙ್ಕ್ಯ 'ಮಾಯಾಮಾತ್ರಂ ತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್' (ವೇ. ಸೂ. ೩–೨–೩) ಇತ್ಯಾದಿನಾ ನ ಜೀವಸ್ಯ ಸಙ್ಕಲ್ಪಮಾತ್ರೇಣ ಸ್ರಷ್ಟೃತ್ವಮುಪಪದ್ಯತೇ; ಜೀವಸ್ಯ ಸ್ವಾಭಾವಿಕಸತ್ಯಸಙ್ಕಲ್ಪತ್ವಾದೇಃ ಕೃತ್ಸ್ನಸ್ಯ ಸಂಸಾರದಶಾಯಾಮ್ ಅನಭಿವ್ಯಕ್ತಸ್ವರೂಪತ್ವಾತ್, ಈಶ್ವರಸ್ಯೈವ ತತ್ತತ್ಪುರುಷ

ಮಾತ್ರಾನುಭಾವ್ಯತಯಾ ಆಶ್ಚರ್ಯಭೂತಾ ಸೃಷ್ಟಿರಿಯಮ್ । 'ತಸ್ಮಿಲ್ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ' (ಕ. ೨-೨-೮) ಇತಿ ಪರಮಾತ್ಮೈವ ತತ್ರ ಸ್ರಷ್ಟಾ- ಇತ್ಯವಗಮ್ಯತೇ- ಇತಿ ಪರಿಹರತಿ । ಅಪವರಕಾದಿಷು ಶಯಾನಸ್ಯ ಸ್ವಪ್ನದೃಶಃ ಸ್ವದೇಹೇನೈವ ದೇಶಾನ್ತರಗಮನರಾಜ್ಯಾಭಿಷೇಕಶಿರಶ್ಛೇದಾದಯಶ್ಚ ಪುಣ್ಯಪಾಪಫಲಭೂತಾಃ ಶಯಾನದೇಹಸರೂಪಸಂಸ್ಥಾನದೇಹಾನ್ತರಸೃಷ್ಟ್ಯೈ ಉಪಪದ್ಯನ್ತೇ ॥

(ಅರ್ಥ)

(2) ಸ್ವಪ್ನದಲ್ಲಿಯೂ ಪ್ರಾಣಿಗಳ ಪುಣ್ಯಪಾಪಗಳಿಗೆ ಅನುಗುಣವಾಗಿ ಭಗವಂತನೇ ಆಯಾ ಪುರುಷನೊಬ್ಬನೇ ಅನುಭವಿಸಬೇಕಾದ, ಆಯಾ ಕಾಲದಲ್ಲಿಯೇ ಮುಗಿದುಹೋಗುವ ಅಂಥ ಆಶ್ಚರ್ಯಭೂತವಾದ ದೃಶ್ಯಗಳನ್ನು ಸೃಷ್ಟಿಸುತ್ತಾನೆ. ಆದ್ದರಿಂದಲೇ ಸ್ವಪ್ನವಿಷಯಕ್ಕೆ 'ಅಲ್ಲಿ ಗಾಡಿಗಳಿರುವದಿಲ್ಲ, ಗಾಡಿಗೆ ಕಟ್ಟುವ ಕುದುರೆಗಳೂ ಇರುವದಿಲ್ಲ, ಹಾದಿಗಳೂ ಇರುವದಿಲ್ಲ; ಆದರೆ ಗಾಡಿಗಳನ್ನೂ ಗಾಡಿಗಳಿಗೆ ಕಟ್ಟುವ ಕುದುರೆಗಳನ್ನೂ ಹಾದಿಗಳನ್ನೂ ಸೃಷ್ಟಿಸುತ್ತಾನೆ. ಅಲ್ಲಿ ಆನಂದಗಳೂ ಮೋದಗಳೂ ಪ್ರಮೋದಗಳೂ ಇರುವದಿಲ್ಲ; ಆದರೂ ಆನಂದಗಳನ್ನೂ ಮೋದಗಳನ್ನೂ ಪ್ರಮೋದಗಳನ್ನೂ ಸೃಷ್ಟಿಸುತ್ತಾನೆ. ಅಲ್ಲಿ ಕೆರೆಗಳಾಗಲಿ, ಪುಷ್ಕರಿಣಿಗಳಾಗಲಿ, ನದಿಗಳಾಗಲಿ ಇರುವದಿಲ್ಲ; ಆದರೂ ಕೆರೆಗಳನ್ನೂ ಪುಷ್ಕರಿಣಿಗಳನ್ನೂ ನದಿಗಳನ್ನೂ ಸೃಷ್ಟಿಸುತ್ತಾನೆ, ಅವನೇ ಕರ್ತನು' (ಬೃ.೪-೩-೧೦) ಎಂದು -ಶ್ರುತಿ ಇರುತ್ತದೆ. ಎಲ್ಲ (ಕಾಲ)ಕ್ಕೂ ಎಲ್ಲಾ ಪುರುಷರೂ ಅನುಭವಿಸಬಹುದಾದ ರಥಾದಿಗಳು ಆಗ ಇರುವದಿಲ್ಲವಾದರೂ ಆಯಾ ಪುರುಷನು ಮಾತ್ರ ಅನುಭವಿಸುವದಕ್ಕೆ ತಕ್ಕ ಅಂಥ (ವಸ್ತುಗಳನ್ನು) ಈಶ್ವರನು ಸೃಷ್ಟಿಸುತ್ತಾನೆ. ಅವನೇ ಕರ್ತನು, ಸತ್ಯಸಂಕಲ್ಪನಾದ ಅದ್ಭುತಶಕ್ತಿಯುಳ್ಳ ಆತನಿಗೇ ಅಂಥ ಕರ್ತೃತ್ವವು ಸಂಭವಿಸುತ್ತದೆ ಎಂದರ್ಥ. "ಇವರು ನಿದ್ರಿಸುತ್ತಿರುವಲ್ಲಿ ಯಾವ ಪುರುಷನು (ವಿವಿಧವಾದ) ಕಾಮಿತವಸ್ತುವನ್ನು ನಿರ್ಮಿಸುತ್ತಾ ಎಚ್ಚತ್ತಿರುವನೋ, ಅದೇ ಶುದ್ಧವಾದದ್ದು, ಅದೇ ಬ್ರಹ್ಮವು. ಅದೇ ಅಮೃತವೆನಿಸುತ್ತದೆ; ಅದರಲ್ಲಿಯೇ ಸರ್ವಲೋಕಗಳೂ ಆಶ್ರಯಿಸಿಕೊಂಡಿರುವವು; ಅದನ್ನು ಯಾವನೊಬ್ಬನೂ ಮೀರಿಹೋಗಲಾರನು' (ಕ. ೨-೨-೮) ಎಂದೂ (ಶ್ರುತಿ).

**ಸೂತ್ರಕಾರನೂ** 'ಸ್ವಪ್ನದಲ್ಲಿ (ಆಗುವದೆಂದು) ಹೇಳಿರುವ ಸೃಷ್ಟಿಯು (ಜೀವಕರ್ತೃಕವಾದದ್ದು); ಏಕೆಂದರೆ 'ಶ್ರುತಿಯು ಹಾಗೆಂದು ಹೇಳುತ್ತಿದೆ' (ವೇ. ಸೂ. ೩-೨-೧), 'ಕೆಲವು ವೇದಶಾಖೆಯವರು (ಈ ಜೀವನನ್ನು) ಕಾಮಗಳ ನಿರ್ಮಾತೃವೆಂದು (ಹೇಳುತ್ತಾರೆ). (ಅಲ್ಲಿ) ಪುತ್ರಾದಿಗಳೇ (ಕಾಮಗಳು)' (ವೇ. ಸೂ. ೩-೨, ೨)- ಎಂಬೀ ಎರಡು ಸೂತ್ರಗಳಿಂದ ಸ್ವಪ್ನಪದಾರ್ಥಗಳಿಗೆ ಜೀವನೇ ಸ್ರಷ್ಟೃ- ಎಂಬ ಶಂಕೆಯನ್ನು ಡಿ '(ಸ್ವಪ್ನದಲ್ಲಾಗುವ ಸೃಷ್ಟಿಯು

ಈಶ್ವರಕೃತವಾದ) ಮಾಯಾಮಾತ್ರವು; ಏಕೆಂದರೆ ಜೀವನ ಸತ್ಯಸಂಕಲ್ಪತ್ವಾದಿಗಳು ಪೂರ ಅಭಿವ್ಯಕ್ತವಾಗಿರುವದಿಲ್ಲ' (ವೇ. ಸೂ. ೩-೨-೩) ಎಂದು ಜೀವನಿಗೆ ಸಂಕಲ್ಪಮಾತ್ರದಿಂದ (ಅಲ್ಲಿ) ಸೃಷ್ಟಿಮಾಡುವದೆಂಬುದು ಹೊಂದುವದಿಲ್ಲ; ಏಕೆಂದರೆ ಜೀವನಿಗೆ ಸ್ವಾಭಾವಿಕವಾದ ಸತ್ಯಸಂಕಲ್ಪತ್ವವೇ ಮುಂತಾದದ್ದೆಲ್ಲವೂ ಸಂಸಾರವಸ್ಥೆಯಲ್ಲಿ ಅಭಿವ್ಯಕ್ತಸ್ವರೂಪವುಳ್ಳದ್ದಾಗಿರುವದಿಲ್ಲ. (ಆದ್ದರಿಂದ ಆಯಾ ಪುರುಷನೊಬ್ಬನೇ) ಅನುಭವಿಸಬಹುದಾದ ಆಶ್ಚರ್ಯ[1] ಸೃಷ್ಟಿಯು ಈಶ್ವರನದೇ; 'ಅದರಲ್ಲಿ ಎಲ್ಲಾ ಲೋಕಗಳೂ ಆಶ್ರಯಿಸಿಕೊಂಡಿರುವವು; ಮತ್ತು ಅದನ್ನು ಯಾವನೊಬ್ಬನೂ ಮೀರಲಾರನು'-ಎಂದು (ಶ್ರುತಿಯಿರುವದರಿಂದ) ಪರಮಾತ್ಮನೇ ಅಲ್ಲಿ ಸ್ರಷ್ಟೃ -ಎಂದು (ಶಂಕೆಯನ್ನು) ಪರಿಹರಿಸಿರುತ್ತಾನೆ. ಕೋಣೆಯೇ ಮುಂತಾದ (ಸಂಕುಚಿತ ಸ್ಥಳ)ಗಳಲ್ಲಿ ಮಲಗಿರುವ ಸ್ವಪ್ನಾನುಭವಿಗೆ ತನ್ನ ದೇಹದಿಂದಲೇ ಮತ್ತೊಂದು ಸ್ಥಲಕ್ಕೆ ಹೋಗುವದು, ರಾಜ್ಯಾಭಿಷೇಕ, (ತನ್ನ) ತಲೆಯನ್ನು ಕಡಿದುಹಾಕುವದು-ಮುಂತಾದವುಗಳು ಪುಣ್ಯಪಾಪಗಳ ಫಲವಾಗಿ, ಮಲಗಿರುವ ದೇಹಕ್ಕೆ ಸಮಾನವಾದ ಆಕಾರವುಳ್ಳ ದೇಹಾಂತರವು (ಆಗ್ಗೆ) ಸೃಷ್ಟಿಯಾಗಿರುವದರಿಂದ ಯುಕ್ತವಾಗುತ್ತವೆ.

(ಮೂಲ)

ಪೀತಶಙ್ಖಾದೌ ತು ನಯನವರ್ತಿಪಿತ್ತದ್ರವ್ಯಸಂಭಿನ್ನಾ ನಾಯನರಶ್ಮಯಃ ಶಙ್ಖಾದಿಭಿಃ ಸಂಯುಜ್ಯನ್ತೇ। ತತ್ರ ಪಿತ್ತಗತಪೀತಿಮಾಭಿಭೂತಃ ಶಙ್ಖಗತಶುಕ್ಲಿಮಾ ಽ ನ ಗೃಹ್ಯತೇ। ಅತಃ ಸುವರ್ಣಾನುಲಿಪ್ತಶಙ್ಖವತ್ 'ಪೀತಃ ಶಙ್ಖಃ' ಇತಿ ಪ್ರತೀಯತೇ। ಪಿತ್ತದ್ರವ್ಯಂ ತದ್ಗತಾ ಪೀತಿಮಾ ಚ ಅತಿಸೌಕ್ಷ್ಮ್ಯಾತ್ ಪಾರ್ಶ್ವಸ್ಥೈರ್ನ ಗೃಹ್ಯತೇ। ಪಿತ್ತೋಪಹತೇನ ತು ಸ್ವನಯನನಿಷ್ಕ್ರಾನ್ತತಯಾ ಅತಿಸಾಮೀಪ್ಯಾತ್ ಸೂಕ್ಷ್ಮಮಪಿ ನ ಗೃಹ್ಯತೇ। ತದ್ಗ್ರಹಣಜನಿತಸಂಸ್ಕಾರಸಚಿವನಾಯನರಶ್ಮಿಭಿರ್ದೂರಸ್ಥಮಪಿ ಗೃಹ್ಯತೇ ॥

(ಅರ್ಥ)

(3) **ಹಳದಿಯ ಶಂಖವೇ**[3] ಮುಂತಾದ (ಸ್ಥಲದಲ್ಲಿಯೋ) ಎಂದರೆ ಕಣ್ಣಿನಲ್ಲಿರುವ ಪಿತ್ತದ್ರವ್ಯದಿಂದ ಮಿಶ್ರಿತವಾಗಿರುವ ಕಣ್ಣಿನ ರಶ್ಮಿಗಳು ಶಂಖಾದಿಗಳೊಡನೆ ಸಂಯೋಗವಾಗಿರುತ್ತವೆ. ಅಲ್ಲಿ ಪಿತ್ತದಲ್ಲಿರುವ ಹಳದಿಯಿಂದ ಶಂಖದ ಬಿಳಿಪು ಮುಚ್ಚಿಹೋಗಿರುವದರಿಂದ ತಿಳಿದುಬರುವದಿಲ್ಲ. ಆದ್ದರಿಂದ ಚಿನ್ನದ ಮುಲಾಮು ಮಾಡಿದ ಶಂಖದಂತೆ 'ಹಳದಿಯ ಶಂಖ'ವೆಂಬ ಅರಿವಾಗುತ್ತದೆ. ಪಿತ್ತದ್ರವ್ಯವೂ

---

1. 'ಶ್ವೇತಿಮಾ' ಎಂದು ಪಾ॥. ಅರ್ಥದಲ್ಲೇನೂ ವ್ಯತ್ಯಾಸವಿಲ್ಲ.

2. ಮಾಯಾ ಎಂಬುದಕ್ಕೆ 'ಆಶ್ಚರ್ಯ'ವೆಂಬರ್ಥವನ್ನು ಇಲ್ಲಿ ಕೊಟ್ಟಿದೆ. ಬೇರೆ ಅರ್ಥಗಳು ಶ್ರೀಭಾಷ್ಯದಲ್ಲಿವೆ; ಪರಿಶಿಷ್ಟವನ್ನು ನೋಡಿ.

3. ಇಲ್ಲಿ ಎಲ್ಲವೂ ಯಥಾರ್ಥಖ್ಯಾತಿಯೇ ಎಂದು ಸಾಧನೆಯನ್ನು ಮಾಡುವದಕ್ಕೆ ಪ್ರಸಿದ್ಧ ಭ್ರಾಂತಿಜ್ಞಾನಗಳನ್ನು ಉದಾಹರಣೆಗಾಗಿ ತೆಗೆದುಕೊಂಡಿದೆ. ಈ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಅದರಲ್ಲಿರುವ ಹಳದಿಯ ಬಣ್ಣವೂ ಅತಿಸೂಕ್ಷ್ಮವಾಗಿರುವದರಿಂದ ಹತ್ತಿರವಿರುವವರಿಗೆ ಕಾಣಬರುವದಿಲ್ಲ. ಪಿತ್ತದ ಬಾಧೆಯಿರುವವನಿಗಾದರೋ ತನ್ನ ಕಣ್ಣಿನಿಂದ (ಅವು) ಹೊರಟುಬಂದಿರುವದರಿಂದ ಬಹಳ ಹತ್ತಿರವಿರುವದರಿಂದ ಸೂಕ್ಷ್ಮವಾಗಿದ್ದರೂ ಕಾಣಬರುತ್ತದೆ. ಅದನ್ನು ಗ್ರಹಿಸುವದರಿಂದುಂಟಾದ ಸಂಸ್ಕಾರದಿಂದೊಡಗೂಡಿದ ಕಣ್ಣಿನ ರಶ್ಮಿಗಳಿಗೆ ದೂರದಲ್ಲಿದ್ದರೂ ಕಾಣಬರುತ್ತದೆ.

(ಮೂಲ)

ಜಪಾಕುಸುಮಸಮೀಪವರ್ತಿಸ್ಫಟಿಕಮಣಿರಪಿ ತತ್ಪ್ರಭಾಭಿಭೂತತಯಾ 'ರಕ್ತಃ' ಇತಿ ಗೃಹ್ಯತೇ, ಜಪಾಕುಸುಮಪ್ರಭಾ ವಿತತಾಪಿ ಸ್ವಚ್ಛದ್ರವ್ಯಸಂಯುಕ್ತತಯಾ ಸ್ಫುಟತರಮುಪಲಭ್ಯತ ಇತ್ಯುಪಲಬ್ಧಿವ್ಯವಸ್ಥಾಪ್ಯಮಿದಮ್ ||

(ಅರ್ಥ)

(4) **ದಾಸಿವಾಳದ ಹೂವಿನಬಳಿ ಇರುವ ಸ್ಫಟಿಕಮಣಿಯೂ** ಅದರ ಪ್ರಭೆಯಿಂದ ಮಂಕಾಗಿರುವದರಿಂದ 'ಕೆಂಪಗಿದೆ' ಎಂದೇ ಕಾಣಿಸುತ್ತದೆ. ದಾಸಿವಾಳದ ಹೂವಿನ ಪ್ರಭೆಯು (ಎಲ್ಲೆಲ್ಲಿಯೂ) ಹರಡಿಕೊಂಡಿದ್ದರೂ ಸ್ವಚ್ಛದ್ರವ್ಯದೊಡನೆ ಸಂಯುಕ್ತವಾಗಿರುವದರಿಂದ (ಸ್ಫಟಿಕದಲ್ಲಿಯೇ) ಸ್ಫುಟತರವಾಗಿ ಕಾಣಬರುತ್ತದೆ ಎಂದು (ಆಯಾ) ತೋರಿಕೆಯಿಂದ ಇದನ್ನು ವ್ಯವಸ್ಥೆಗೊಳಿಸಬೇಕು.

(ಮೂಲ)

ಮರೀಚಿಕಾಜಲಜ್ಞಾನೇಽಪಿ ತೇಜಃಪೃಥಿವ್ಯೋರಪಿ ಅಮ್ಬುನೋ ವಿದ್ಯಮಾನತ್ವಾತ್ ಇನ್ದ್ರಿಯದೋಷೇಣ ತೇಜಃಪೃಥಿವ್ಯೋರಗ್ರಹಣಾತ್, ಅದೃಷ್ಟವಶಾಚ್ಚಾಮ್ಬುನೋ ಗ್ರಹಣಾತ್, ಯಥಾರ್ಥತ್ವಮ್ ||

(ಅರ್ಥ)

(5) **ಬಿಸಿಲುಕುದುರೆಯ ನೀರಿನ ಜ್ಞಾನವುಂ**ಟಾದಾಗಲೂ ತೇಜಸ್ಸಿನಲ್ಲಿಯೂ ಪೃಥಿವಿಯಲ್ಲಿಯೂ ಅಪ್ಪು ಇರುವದರಿಂದ, ಇಂದ್ರಿಯದೋಷನಿಮಿತ್ತದಿಂದ ತೇಜ, ಪೃಥಿವಿ- ಮುಂತಾದವುಗಳನ್ನು ಗ್ರಹಿಸದೆ ಇರುವದರಿಂದಲೂ ಅದೃಷ್ಟವಶದಿಂದ ನೀರನ್ನು ಗ್ರಹಿಸುವದರಿಂದಲೂ (ನೀರಿನ ಜ್ಞಾನವು) ಯಥಾರ್ಥವೇ.

(ಮೂಲ)

ಅಲಾತಚಕ್ರೇಽಪಿ ಅಲಾತಸ್ಯ ದ್ರುತತರಗಮನೇನ ಸರ್ವದೇಶಸಂಯೋಗಾತ್ ಅನ್ತರಾಲಾಗ್ರಹಣಾತ್ ತಥಾ ಪ್ರತೀತಿರುಪಪದ್ಯತೇ | ಚಕ್ರಪ್ರತೀತಾವಪಿ ಅನ್ತರಾಲಾಗ್ರಹಣಪೂರ್ವಕತತ್ತದ್ದೇಶಸಂಯುಕ್ತತತ್ತದ್ವಸ್ತುಗ್ರಹಣಮೇವ | ಕ್ವಚಿದನ್ತರಾಲಾಭಾವಾತ್, ಅನ್ತರಾಲಾಗ್ರಹಣಮ್, ಕ್ವಚಿಚ್ಛೈಘ್ರ್ಯಾತ್ ಅಗ್ರಹಣಮ್ ಇತಿ ವಿಶೇಷಃ | ಅತಸ್ತದಪಿ ಯಥಾರ್ಥಮ್ ||

(ಅರ್ಥ)

(6) **ಅಲಾತಚಕ್ರದಲ್ಲಿಯೂ** ಕೊಳ್ಳಿಯು ಬಹಳ ವೇಗದಿಂದ ತಿರುಗುವದರಿಂದ ಎಲ್ಲಾ ದೇಶಕ್ಕೂ (ಅದರ) ಸಂಯೋಗವಾಗುತ್ತಿರುವದರಿಂದ, ನಡುವಿನ (ಪ್ರದೇಶದ) ಗ್ರಹಣವು ಆಗದೆ ಇರುವದರಿಂದಲೂ ಹಾಗೆ ಜ್ಞಾನವಾಗುವದು ಯುಕ್ತವಾಗಿರುತ್ತದೆ. ಚಕ್ರದ ಅರಿವಾದರೂ ನಡುವಿನ (ಪ್ರದೇಶವನ್ನು) ಗ್ರಹಿಸದೆಯೇ ಆಯಾ ದೇಶಕ್ಕೆ ಸಂಯುಕ್ತವಾದ ಆಯಾ ವಸ್ತುವಿನ ಅರಿವೇ ಆಗುತ್ತಿರುತ್ತದೆ; ಕೆಲವು ಕಡೆಯಲ್ಲಿ ನಡುವಿನ (ಪ್ರದೇಶವು ಇಲ್ಲದ್ದರಿಂದ ನಡುವಿನ ಪ್ರದೇಶದ ಜ್ಞಾನವಾಗುವದಿಲ್ಲ, ಕೆಲವು ಕಡೆಗಳಲ್ಲಿ (ತಿರುಗುವಿಕೆಯ) ವೇಗದಿಂದ ಜ್ಞಾನವಾಗುವದಿಲ್ಲ – ಎಂದು ವಿಶೇಷ(ವಿರುತ್ತದೆ). ಆದ್ದರಿಂದ ಆ (ಅರಿವು) ಯಥಾರ್ಥವೇ.[1]

(ಮೂಲ)

ದರ್ಪಣಾದಿಷು ನಿಜಮುಖಾದಿಪ್ರತೀತಿರಪಿ ಯಥಾರ್ಥಾ। ದರ್ಪಣಾದಿಪ್ರತಿಹತಗತಯೋ ಹಿ ನಾಯನರಶ್ಮಯಃ ದರ್ಪಣಾದಿದೇಶಗ್ರಹಣಪೂರ್ವಕಂ ನಿಜಮುಖಾದಿ ಗೃಹ್ಣನ್ತಿ। ತತ್ರಾಪ್ಯತಿಶೈಘ್ರ್ಯಾದನ್ತರಾಲಾಗ್ರಹಣಾತ್ತಥಾ ಪ್ರತೀತಿಃ॥

(ಅರ್ಥ)

(7) **ಕನ್ನಡಿಯೇ ಮುಂತಾದವುಗಳಲ್ಲಿ** ತನ್ನ ಮುಖವನ್ನು ಕಾಣುವದೂ ಯಥಾರ್ಥ(ಜ್ಞಾನವೇ) ; ಏಕೆಂದರೆ ಕನ್ನಡಿಯೇ ಮುಂತಾದದ್ದರಿಂದ ಹಿಂದಕ್ಕೆರಚಿದ ಕಣ್ಣಿನ ರಶ್ಮಿಗಳು ಕನ್ನಡಿಯೇ ಮುಂತಾದವುಗಳ ದೇಶವನ್ನು ಗ್ರಹಿಸಿ ತನ್ನ ಮುಖ- ಮುಂತಾದವನ್ನು ಗ್ರಹಿಸುತ್ತವೆ. ಅಲ್ಲಿಯೂ ಅತಿ ವೇಗದ ನಿಮಿತ್ತದಿಂದ ನಡುವಿನ ಪ್ರದೇಶವನ್ನು ಗ್ರಹಿಸುವದಿಲ್ಲವಾದ್ದರಿಂದ ಹಾಗೆ ಜ್ಞಾನವಾಗುತ್ತದೆ.

(ಮೂಲ)

ದಿಙ್ಮೋಹೇಽಪಿ ದಿಗನ್ತರಸ್ಯ ಅಸ್ಯಾಂ ದಿಶಿ ವಿದ್ಯಮಾನತ್ವಾತ್ ಅದೃಷ್ಟವಶೇನ ಏತದ್ದಿಗಂಶವಿಯುಕ್ತೋ ದಿಗನ್ತರಾಂಶೋ ಗೃಹ್ಯತೇ। ಅತೋ ದಿಗನ್ತರಪ್ರತೀತಿಃ ಯಥಾರ್ಥೈವ॥

(ಅರ್ಥ)

**ದಿಗ್ಭ್ರಾಂತಿಯಲ್ಲಿಯೂ** ಮತ್ತೊಂದು ದಿಕ್ಕು ಈ ದಿಕ್ಕಿನಲ್ಲಿ ಇರುವದರಿಂದ ಅದೃಷ್ಟವಶದಿಂದ ಈ ದಿಗಂಶವನ್ನು ಬಿಟ್ಟು ಮತ್ತೊಂದು ದಿಕ್ಕಿನ ಅಂಶವೇ ಅರಿಯಬರುತ್ತದೆ. ಆದ್ದರಿಂದ ಮತ್ತೊಂದು ದಿಕ್ಕೆಂಬ ಅರಿವೂ ಯಥಾರ್ಥವೇ.

---

1. ಎಲ್ಲಾ ಕಡೆಯಲ್ಲಿಯೂ ಕೊಳ್ಳಿಯ ಸಂಯೋಗವಿಲ್ಲದಿದ್ದರೂ ಇರುವಂತೆ ಅರಿವಾದರೆ ಹೇಗೆ ಯಥಾರ್ಥವಾಯಿತು ?– ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿಲ್ಲ.

(ಮೂಲ)

ದ್ವಿಚನ್ದ್ರಜ್ಞಾನಾದಾವಪಿ ಅಙ್ಗುಲ್ಯವಷ್ಟಮ್ಭತಿಮಿರಾದಿಭಿರ್ನಾಯನತೇಜೋಗತಿಭೇದೇನ ಸಾಮಗ್ರೀಭೇದಾತ್, ಸಾಮಗ್ರೀದ್ವಯಮ್ ಅನ್ಯೋನ್ಯನಿರಪೇಕ್ಷಂ ಚನ್ದ್ರಗ್ರಹಣದ್ವಯಹೇತುರ್ಭವತಿ। ತತ್ರ ಏಕಾ ಸಾಮಗ್ರೀ ಸ್ವದೇಶವಿಶಿಷ್ಟಂ ಚನ್ದ್ರಂ ಗೃಹ್ಣಾತಿ; ದ್ವಿತೀಯಾ ತು ಕಿಞ್ಚಿದ್ವಕ್ರಗತಿಃ, ಚನ್ದ್ರಸಮೀಪದೇಶಗ್ರಹಣಪೂರ್ವಕಂ ಚನ್ದ್ರಂ ಸ್ವದೇಶವಿಯುಕ್ತಂ ಗೃಹ್ಣಾತಿ। ಅತಃ ಸಾಮಗ್ರೀದ್ವಯೇನ ಯುಗಪದ್ದೇಶದ್ವಯವಿಶಿಷ್ಟಚನ್ದ್ರಗ್ರಹಣೇ ಗ್ರಹಣಭೇದೇನ ಗ್ರಾಹ್ಯಾಕಾರಭೇದಾತ್, ಏಕತ್ವಗ್ರಹಣಾಭಾವಾಚ್ಚ ದ್ವೌ ಚನ್ದ್ರೌ ಇತಿ ಭವತಿ ಪ್ರತೀತಿವಿಶೇಷಃ। ದೇಶಾನ್ತರಸ್ಯ ತದ್ವಿಶೇಷಣತ್ವಂ ದೇಶಾನ್ತರಸ್ಯ ಚ ಅಗೃಹೀತಸ್ವದೇಶಚನ್ದ್ರಸ್ಯ ಚ ನಿರನ್ತರಗ್ರಹಣೇನ ಭವತಿ। ತತ್ರ ಸಾಮಗ್ರೀದ್ವಿತ್ವಂ ಪಾರಮಾರ್ಥಿಕಮ್, ತೇನ ದೇಶದ್ವಯವಿಶಿಷ್ಟಚನ್ದ್ರಗ್ರಹಣದ್ವಯಂ ಚ ಪಾರಮಾರ್ಥಿಕಮ್। ಗ್ರಹಣದ್ವಿತ್ವೇನ ಚನ್ದ್ರಸ್ಯೈವ ಗ್ರಾಹ್ಯಾಕಾರದ್ವಿತ್ವಂ ಚ ಪಾರಮಾರ್ಥಿಕಮ್। ತತ್ರ ವಿಶೇಷಣದ್ವಯವಿಶಿಷ್ಟಚನ್ದ್ರಗ್ರಹಣದ್ವಯಸ್ಯ ಏಕ ಏವ ಚನ್ದ್ರೋ ಗ್ರಾಹ್ಯಃ- ಇತಿ ಗ್ರಹಣೇ ಪ್ರತ್ಯಭಿಜ್ಞಾನವತ್ ಕೇವಲಚಕ್ಷುಷಃ ಸಾಮರ್ಥ್ಯಾಭಾವಾತ್ ಚಾಕ್ಷುಷಜ್ಞಾನಂ ತಥೈವಾವತಿಷ್ಠತೇ। ದ್ವಯೋಶ್ಚಕ್ಷುಷೋರೇಕಸಾಮಗ್ರ್ಯನ್ತರ್ಭಾವೇಽಪಿ ತಿಮಿರಾದಿದೋಷಭಿನ್ನಂ ಚಾಕ್ಷುಷಂ ತೇಜಸ್ಸಾಮಗ್ರೀದ್ವಯಂ ಭವತೀತಿ ಕಾರ್ಯಕಲ್ಪ್ಯಮ್। ಅಪಗತೇ ತು ದೋಷೇ ಸ್ವದೇಶವಿಶಿಷ್ಟಸ್ಯ ಚನ್ದ್ರಸ್ಯೈಕಗ್ರಹಣವೇದ್ಯತ್ವಾತ್ ಏಕಶ್ಚನ್ದ್ರ ಇತಿ ಭವತಿ ಪ್ರತ್ಯಯಃ। ದೋಷಕೃತಂ ತು ಸಾಮಗ್ರೀದ್ವಿತ್ವಂ ತತ್ಕೃತಂ ಗ್ರಹಣದ್ವಿತ್ವಂ ತತ್ಕೃತಂ ಗ್ರಾಹ್ಯಾಕಾರದ್ವಿತ್ವಂ ಚ ಇತಿ ನಿರವದ್ಯಮ್॥

(ಅರ್ಥ)

(8) **ದ್ವಿಚಂದ್ರಜ್ಞಾನಾದಿಗಳಲ್ಲಿಯೂ** ಬೆರಳನ್ನು ಒತ್ತುವದು, ಕಣ್ಣುಪರೆ- ಮುಂತಾದವುಗಳಿಂದ ಕಣ್ಣಿನ ತೇಜಸ್ಸಿನ ಗತಿಯು ಭೇದದಿಂದ ಸಾಮಗ್ರಿಗಳು ಬೇರೆಬೇರೆಯಾಗುವದರಿಂದ, ಎರಡು ಸಾಮಗ್ರಿಗಳು ಒಂದರ ಹಂಗು ಮತ್ತೊಂದಕ್ಕಿಲ್ಲದೆ ಎರಡು ಚಂದ್ರಜ್ಞಾನಗಳಿಗೆ ಹೇತುವಾಗುತ್ತವೆ. ಇವುಗಳೊಳಗೆ ಒಂದು ಸಾಮಗ್ರಿಯು ತನ್ನ ಪ್ರದೇಶದೊಡಗೂಡಿರುವ ಚಂದ್ರನನ್ನು ಗ್ರಹಿಸುತ್ತದೆ; ಎರಡನೆಯದಾದರೊ, ಸ್ವಲ್ಪ ವಕ್ರವಾಗಿ ಹೋಗಿ ಚಂದ್ರನ ಹತ್ತಿರವಿರುವ ದೇಶವನ್ನು ಗ್ರಹಿಸಿ ಚಂದ್ರನನ್ನು ತನ್ನ ದೇಶದಿಂದ ಬಿಟ್ಟಿರುವಂತೆ ಗ್ರಹಿಸುತ್ತದೆ. ಆದ್ದರಿಂದ ಎರಡು ಸಾಮಗ್ರಿಗಳಿಂದ ಒಂದೇ ಕಾಲಕ್ಕೆ ಎರಡು ದೇಶಗಳಿಂದ ವಿಶಿಷ್ಟನಾದ ಚಂದ್ರನನ್ನು ಗ್ರಹಿಸುವಾಗ ಗ್ರಹಣಗಳು ಬೇರೆಬೇರೆಯಾಗಿರುವದರಿಂದ ಗ್ರಾಹ್ಯದ ಆಕಾರವು ಬೇರೆಬೇರೆಯಾಗಿರುವದರಿಂದಲೂ ಒಂದೆಂದು ಗ್ರಹಿಸದೆ ಇರುವದರಿಂದಲೂ 'ಇಬ್ಬರು ಚಂದ್ರರು' ಎಂಬ ಪ್ರತೀತಿವಿಶೇಷವಾಗುತ್ತದೆ.

ಮತ್ತೊಂದು ಪ್ರದೇಶವು ಆ (ಚಂದ್ರನಿಗೆ) ವಿಶೇಷಣವಾಗಿರುವದು, ಮತ್ತೊಂದು ಪ್ರದೇಶವನ್ನು ತನ್ನ ದೇಶವನ್ನು ಬಿಟ್ಟು (ಬರಿಯ) ಚಂದ್ರನನ್ನು ಬಿಡು ವಿಲ್ಲದೆ ಗ್ರಹಿಸುವದರಿಂದ ಆಗುತ್ತದೆ. ಅಲ್ಲಿ ಎರಡು ಸಾಮಗ್ರಿಗಳಿವೆ ಎಂಬುದು ಪರಮಾರ್ಥವೇ ; ಆದ್ದರಿಂದ ದೇಶದ್ವಯವಿಶಿಷ್ಟವಾದ ಎರಡು ಚಂದ್ರಗ್ರಹಣಗಳೂ ಪಾರಮಾರ್ಥಿಕವೇ. ಗ್ರಹಣಗಳು ಎರಡಾಗಿರುವದರಿಂದ (ಒಬ್ಬ) ಚಂದ್ರನಿಗೇ ಗ್ರಾಹ್ಯಾಕಾರಗಳು ಎರಡೆಂಬುದೂ ಪಾರಮಾರ್ಥಿಕವೇ. ಅಲ್ಲಿ ಎರಡು ವಿಶೇಷಣ ಗಳಿಂದೊಡಗೂಡಿದ ಚಂದ್ರಗ್ರಹಣಗಳೆರಡಕ್ಕೂ ಒಬ್ಬ ಚಂದ್ರನೇ ಗ್ರಾಹ್ಯವಿಷಯ ವಾಗಿರುತ್ತಾನೆಂದು ಅರಿಯುವದಕ್ಕೆ ಪ್ರತ್ಯಭಿಜ್ಞಾನದಂತೆ ಬರಿಯ ಕಣ್ಣಿಗೆ ಸಾಮರ್ಥ್ಯವಿಲ್ಲದ್ದರಿಂದ ಚಾಕ್ಷುಷಜ್ಞಾನವು ಹಾಗೆಯೇ ಇದ್ದುಕೊಂಡಿರುತ್ತದೆ. ಎರಡು ಕಣ್ಣುಗಳೂ ಒಂದೇ ಸಾಮಗ್ರಿಯಲ್ಲಿ ಅಡಕವಾಗಿರುತ್ತಿದ್ದರೂ ಪರೆಯೇ ಮುಂತಾದ ದೋಷದಿಂದ ಬೇರ್ಪಟ್ಟಿರುವ ಕಣ್ಣಿನ ತೇಜಸ್ಸಿಗೆ ಎರಡು ಸಾಮಗ್ರಿ ಗಳು ಆಗಿರುತ್ತವೆ ಎಂದು ಕಾರ್ಯದಿಂದ ಕಲ್ಪಿಸಬೇಕು.[1] ದೋಷವು ಹೋದರೊ, ತನ್ನ ಪ್ರದೇಶದಲ್ಲಿಯೇ ಇರುವ ಚಂದ್ರನು ಒಂದೇ ಗ್ರಹಣದಿಂದ ತಿಳಿಯ ಬರುವದರಿಂದ 'ಒಬ್ಬನೇ ಚಂದ್ರನು' ಎಂಬ ಪ್ರತ್ಯಯವಾಗುವದು. ಆದರೆ ಸಾಮಗ್ರಿಗಳು ಎರಡಾಗಿರುವದೂ, ಅದರಿಂದ ಗ್ರಹಣಗಳು ಎರಡಾಗಿರುವದೂ ಅದರಿಂದಾಗಿರುವ ಗ್ರಾಹ್ಯಾಕಾರಗಳು ಎರಡೆಂದಾಗಿರುವದೂ ದೋಷದಿಂದಾದದ್ದು. ಆದ್ದರಿಂದ (ಇಲ್ಲಿ) ಎಲ್ಲವೂ ಸರಿಯಾಗಿದೆ.

**(ಮೂಲ)**

ಅತಃ ಸರ್ವಂ ವಿಜ್ಞಾನಜಾತಂ ಯಥಾರ್ಥಮಿತಿ ಸಿದ್ಧಮ್ | ಖ್ಯಾತ್ಯನ್ತ-ರಾಣಾಮಪಿ ದೂಷಣಾನಿ, ತೈಸ್ತೈರ್ವಾದಿಭಿರೇವ ಪ್ರಪಞ್ಚಿತಾನೀತಿ ನ ತತ್ರ ಯತ್ನಃ ಕ್ರಿಯತೇ ||

ಅಥವಾ ಕಿಮನೇನ ಬಹುನಾ ಉಪಪಾದನಪ್ರಕಾರೇಣ ? ಪ್ರತ್ಯಕ್ಷಾನು ಮಾನಾಗಮಾಖ್ಯಂ ಪ್ರಮಾಣಜಾತಮ್ ; ಆಗಮಗಮ್ಯಂ ಚ ನಿರಸ್ತನಿಖಿಲ ದೋಷಗನ್ಧಮ್ ಅನವಧಿಕಾತಿಶಯಾಸಙ್ಖ್ಯೇಯಕಲ್ಯಾಣಗುಣಗಣಂ ಸರ್ವಜ್ಞಂ ಸತ್ಯಸಙ್ಕಲ್ಪಂ ಪರಂ ಬ್ರಹ್ಮ ಅಭ್ಯುಪಗಚ್ಛತಾಂ ಕಿಂ ನ ಸೇತ್ಸ್ಯತಿ, ಕಿಂ ನೋಪ

---

1. ಈ ವಿವರಣೆಯ ಸಾರವಿಷ್ಟು :– ಇಲ್ಲಿ ಚಂದ್ರನು ಒಬ್ಬನೇ ಆದರೂ ಅವನು ಕಾಣುವ ಪ್ರದೇಶಗಳು ಬೇರೆಬೇರೆ ; ಇದಕ್ಕೆ ಒಬ್ಬ ಚಂದ್ರನೇ ಎರಡು ಕಡೆಗಳಲ್ಲಿ ಕಾಣುವ ದೇನೂ ಕಾರಣವಲ್ಲ. ಒಂದು ಕಣ್ಣು ಚಂದ್ರನನ್ನು ಇದ್ದ ಕಡೆಯಲ್ಲಿಯೇ ಕಾಣುತ್ತದೆ ; ಕಣ್ಣಿನ ಮತ್ತೊಂದು ರಶ್ಮಿಯು ವಕ್ರವಾಗಿರುವದರಿಂದ ಮತ್ತೊಂದು ಪ್ರದೇಶವನ್ನು ಕಾಣು ತ್ತದೆ ; ಅದೇ ಚಂದ್ರನನ್ನು ಅವನಿರುವ ಸ್ಥಳದಿಂದ ಬೇರ್ಪಡಿಸಿ ಬೇರೊಂದು ಕಡೆಯಲ್ಲಿ ಕಾಣುತ್ತದೆ. ಹೀಗೆ ಎರಡು ಸಾಮಗ್ರಿಗಳಿಂದ ಎರಡು ಆಕಾರಗಳು ಕಾಣಿಸುತ್ತವೆ. ಹೀಗೆ ಎರಡು ನೋಟಗಳು ಎರಡು ಆಕಾರಗಳನ್ನು ಕಾಣುತ್ತವೆ.

ಪದ್ಯತೇ ? ಭಗವತಾ ಹಿ ಪರೇಣ ಬ್ರಹ್ಮಣಾ ಕ್ಷೇತ್ರಜ್ಞಪುಣ್ಯಪಾಪಾನುಗುಣಂ ತದ್ಭೋಗ್ಯತ್ವಾಯ ಅಖಿಲಂ ಜಗತ್ ಸೃಜತಾ ಸುಖದುಃಖೋಪೇಕ್ಷಾಫಲಾನುಭವಾನುಭಾವ್ಯಾಃ ಪದಾರ್ಥಾಃ ಸರ್ವೇ ಸಾಧಾರಣಾನುಭವವಿಷಯಾಃ, ಕೇಚನ ತತ್ತತ್ಪುರುಷಮಾತ್ರಾನುಭವವಿಷಯಾಃ, ತತ್ತತ್ಕಾಲಾವಸಾನಾಃ, ತಥಾತಥಾನುಭಾವ್ಯಾಃ ಸೃಜ್ಯನ್ತೇ। ತತ್ರ ಬಾಧ್ಯಬಾಧಕಭಾವಃ ಸರ್ವಾನುಭವವಿಷಯತಯಾ ತದ್ರಹಿತತಯಾ ಚ ಉಪಪದ್ಯತ ಇತಿ ಸರ್ವಂ ಸಮಞ್ಜಸಮ್ ॥

(ಅರ್ಥ)

**ಆದ್ದರಿಂದ ಎಲ್ಲಾ ವಿಜ್ಞಾನಜಾತವೂ ಯಥಾರ್ಥವೇ** ಎಂದು ಸಿದ್ಧವಾಯಿತು. ಮಿಕ್ಕ ಖ್ಯಾತಿಗಳ[1] ದೋಷವನ್ನು ಆಯಾ ವಾದಿಗಳೇ ವಿಸ್ತರಿಸಿ ಹೇಳಿರುತ್ತಾರಾದ್ದರಿಂದ ಆ (ಖಂಡನೆಯಲ್ಲಿ ನಾವು) ಯತ್ನವನ್ನು ಮಾಡುವದಿಲ್ಲ.

ಅಥವಾ (ಹೀಗೆ) ಬಹುವಾಗಿ (ನಮ್ಮ ಪಕ್ಷಕ್ಕೆ) ಯುಕ್ತಿಯನ್ನು ತೋರಿಸುವ ಪ್ರಕಾರದಿಂದ (ಆಗಬೇಕಾದದ್ದು) ಏನಿದೆ ? **ಪ್ರತ್ಯಕ್ಷ, ಅನುಮಾನ, ಆಗಮ– ಎಂಬ ಪ್ರಮಾಣಜಾತವನ್ನೂ ಆಗಮ(ಮಾತ್ರ)ಗಮ್ಯವಾಗಿರುವ ಯಾವ ದೋಷಗಂಧವೂ ಇಲ್ಲದ, ಇಲ್ಲಿಗೆ ಮುಗಿಯಿತೆಂಬುದಿಲ್ಲದ ಅತಿಶಯವುಳ್ಳ (ಮಿಗಿಲಿಲ್ಲದ), ಲೆಕ್ಕವಿಲ್ಲದಷ್ಟು ಕಲ್ಯಾಣಗುಣಗಳ ಸಮೂಹವುಳ್ಳ ಸರ್ವಜ್ಞವೂ ಸತ್ಯಸಂಕಲ್ಪವೂ ಆಗಿರುವ ಪರಬ್ರಹ್ಮವನ್ನೂ ಒಪ್ಪಿದ ನಮಗೆ ಯಾವದು ಸಿದ್ಧಿಸುವದಿಲ್ಲ, ಯಾವದು ಯುಕ್ತವಲ್ಲದೆ ಹೋದೀತು ?** ಪರಬ್ರಹ್ಮವಾಗಿರುವ ಭಗವಂತನು ಕ್ಷೇತ್ರಜ್ಞರ ಪುಣ್ಯಪಾಪಗಳಿಗೆ ಅನುಗುಣವಾಗಿ ಅವರಿಗೆ ಭೋಗ್ಯವಾಗಿರಲೆಂದು ಜಗತ್ತೆಲ್ಲವನ್ನೂ ಸೃಷ್ಟಿಸುವಲ್ಲಿ ಸುಖದುಃಖ, ಉಪೇಕ್ಷೆ– ಎಂಬೀ ಫಲವುಳ್ಳ ಅನುಭವಗಳಿಂದ ಅನುಭವಿಸಬೇಕಾದ ಪದಾರ್ಥಗಳು (ಕೆಲವು) ಎಲ್ಲರ ಅನುಭವಕ್ಕೂ ವಿಷಯವಾಗಿರುತ್ತವೆ ; (ಮತ್ತೆ) ಕೆಲವು ಆಯಾ ಪುರುಷನ ಅನುಭವಕ್ಕೆ ಮಾತ್ರ ವಿಷಯವಾಗಿರತಕ್ಕವು, ಆಯಾ ಕಾಲಕ್ಕೆ ಮುಗಿದುಹೋಗತಕ್ಕವುಗಳಾಗಿ ಆಯಾ ಪ್ರಕಾರದಲ್ಲಿ ಅನುಭವಿಸತಕ್ಕವುಗಳಾಗಿಯೂ ಸೃಷ್ಟವಾಗುತ್ತವೆ. ಅವುಗಳಲ್ಲಿ ಬಾಧ್ಯಬಾಧಕಭಾವವು ಎಲ್ಲರ ಅನುಭವಕ್ಕೆ ವಿಷಯವಾಗಿರುವದು, ಹಾಗಿಲ್ಲದಿರುವದು (ಎಂಬ ಭೇದದಿಂದ) ಯುಕ್ತವಾಗುತ್ತದೆ.[2] ಆದ್ದರಿಂದ ಎಲ್ಲವೂ ಸಮಂಜಸವಾಗಿರುತ್ತದೆ.[3]

---

1. ಖ್ಯಾತಿಬಾಧೆಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಒಬ್ಬೊಬ್ಬರಿಗೆ ಮಾತ್ರ ಕ್ಲಿಪ್ತಕಾಲದಲ್ಲಿ ಕಾಣುವದು ಬಾಧ್ಯ, ಎಲ್ಲರಿಗೂ ಕಾಣಬರುವದು ಬಾಧಕ.

3. ಖ್ಯಾತಿ, ಬಾಧೆ, ಭ್ರಮೆ– ಎಲ್ಲಕ್ಕೂ ಉಪಪತ್ತಿಯಿದ್ದಂತಾಗುವದು.

(ಮೂಲ)

ಯತ್ಪುನಃ ಸದಸದನಿರ್ವಚನೀಯಮಜ್ಞಾನಂ ಶ್ರುತಿಸಿದ್ಧಮ್ ಇತಿ, ತದಸತ್ | 'ಅನೃತೇನ ಹಿ ಪ್ರತ್ಯೂಢಾಃ' (ಛಾಂ. ೮-೩-೨) ಇತ್ಯಾದಿಷು ಅನೃತಶಬ್ದಸ್ಯ ಅನಿರ್ವಚನೀಯಾನಭಿಧಾಯಿತ್ವಾತ್ ; ಋತೇತರವಿಷಯೋ ಹಿ ಅನೃತಶಬ್ದಃ | 'ಋತಮ್' ಇತಿ ಕರ್ಮವಾಚೀ | 'ಋತಂ ಪಿಬನ್ತೌ' (ಕಠ. ೧-೩-೧) ಇತಿ ವಚನಾತ್ | ಋತಮ್, ಕರ್ಮಫಲಾಭಿಸನ್ಧಿರಹಿತಂ ಪರಮಪುರುಷಾರಾಧನವೇಷಂ ತತ್ಪ್ರಾಪ್ತಿಫಲಮ್, ಅತ್ರ ತದ್ವ್ಯತಿರಿಕ್ತಂ ಸಾಂಸಾರಿಕಫಲಂ ಕರ್ಮ ಅನೃತಮ್ ಬ್ರಹ್ಮಪ್ರಾಪ್ತಿವಿರೋಧಿ ; 'ಏತಂ ಬ್ರಹ್ಮಲೋಕಂ ನ ವಿನ್ದನ್ತಿ ಅನೃತೇನ ಹಿ ಪ್ರತ್ಯೂಢಾಃ' (ಛಾಂ. ೮-೩-೨) ಇತಿ ವಚನಾತ್ ||

'ನಾಸದಾಸೀನ್ನೋ ಸದಾಸೀತ್' (ತೈ. ಬ್ರಾ. ೨-೮-೯-೩) ಇತ್ಯತ್ರಾಪಿ ಸದಸಚ್ಛಬ್ದೌ ಚಿದಚಿದ್ವ್ಯಷ್ಟಿವಿಷಯೌ | ಉತ್ಪತ್ತಿವೇಲಾಯಾಂ ಸತ್ತ್ಯಚ್ಛಬ್ದಾಭಿಹಿತಯೋಃ, ಚಿದಚಿದ್ವ್ಯಷ್ಟಿಭೂತಯೋರ್ವಸ್ತುನೋಃ, ಅಪ್ಯಯಕಾಲೇ ಅಚಿತ್ಸಮಷ್ಟಿಭೂತೇ ತಮಶ್ಶಬ್ದಾಭಿಧೇಯೇ ವಸ್ತುನಿ ಪ್ರಲಯಪ್ರತಿಪಾದನಪರತ್ವಾದಸ್ಯ ವಾಕ್ಯಸ್ಯ | ನಾತ್ರ ಕಸ್ಯಚಿತ್ ಸದಸದನಿರ್ವಚನೀಯತಾ ಉಚ್ಯತೇ | ಸದಸತೋಃ ಕಾಲವಿಶೇಷೇ ಅಸದ್ಭಾವಮಾತ್ರವಚನಾತ್ | ಅತ್ರ ತಮಶ್ಶಬ್ದಾಭಿಹಿತಸ್ಯ ಅಚಿತ್ಸಮಷ್ಟಿತ್ವಂ ಶ್ರುತ್ಯನ್ತರಾದವಗಮ್ಯತೇ 'ಅವ್ಯಕ್ತಮಕ್ಷರೇ ಲೀಯತೇ | ಅಕ್ಷರಂ ತಮಸಿ ಲೀಯತೇ' (ಸುಬಾಲ ೨) ಇತಿ | ಸತ್ಯಮ್, ತಮಶ್ಶಬ್ದೇನ ಅಚಿತ್ಸಮಷ್ಟಿರೂಪಾಯಾಃ ಪ್ರಕೃತೇಃ, ಸೂಕ್ಷ್ಮಾವಸ್ಥಾ ಉಚ್ಯತೇ | ತಸ್ಯಾಸ್ತು 'ಮಾಯಾಂ ತು ಪ್ರಕೃತಿಂ ವಿದ್ಯಾತ್' (ಶ್ವೇ. ೪-೧೦) ಇತಿ ಮಾಯಾಶಬ್ದೇನಾಭಿಧಾನಾತ್ ಅನಿರ್ವಚನೀಯತ್ವಮ್ ಇತಿ ಚೇತ್, ನೈತದೇವಮ್ ; ಮಾಯಾಶಬ್ದಸ್ಯ ಅನಿರ್ವಚನೀಯವಾಚಿತ್ವಂ ನ ದೃಷ್ಟಮಿತಿ ||

ಮಾಯಾಶಬ್ದಸ್ಯ ಮಿಥ್ಯಾಪರ್ಯಾಯತ್ವೇನಾನಿರ್ವಚನೀಯವಾಚಿತ್ವಮ್ ಇತಿ ಚೇತ್; ತದಪಿ ನಾಸ್ತಿ | ನ ಹಿ ಸರ್ವತ್ರ ಮಾಯಾಶಬ್ದೋ ಮಿಥ್ಯಾವಿಷಯಃ; ಅಸುರರಾಕ್ಷಸಾಸ್ತ್ರಾದಿಷು ಸತ್ಯೇಷ್ವೇವ ಮಾಯಾಶಬ್ದಪ್ರಯೋಗಾತ್, ಯಥೋಕ್ತಮ್ 'ತೇನ ಮಾಯಾಸಹಸ್ರಂ ತಚ್ಛಮ್ಬರಸ್ಯಾಶುಗಾಮಿನಾ | ಬಾಲಸ್ಯ ರಕ್ಷತಾ ದೇಹಮೇಕೈಕಶ್ಯೇನ ಸೂದಿತಮ್' (ವಿ. ಪು. ೧-೧೯-೨೦) ಇತಿ | ಅತೋ ಮಾಯಾಶಬ್ದೋ ವಿಚಿತ್ರಾರ್ಥಸರ್ಗಕರಾಭಿಧಾಯೀ | ಪ್ರಕೃತೇಶ್ಚ ಮಾಯಾಶಬ್ದಾಭಿಧಾನಂ ವಿಚಿತ್ರಾರ್ಥಸರ್ಗಕರತ್ವಾದೇವ | 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ತಸ್ಮಿಂಶ್ಚಾನ್ಯೋ ಮಾಯಯಾ ಸನ್ನಿರುದ್ಧಃ' (ಶ್ವೇ. ೪-೯) ಇತಿ ಮಾಯಾಶಬ್ದವಾಚ್ಯಾಯಾಃ ಪ್ರಕೃತೇರ್ವಿಚಿತ್ರಾರ್ಥಸರ್ಗಕರತ್ವಂ ದರ್ಶಯತಿ | ಪರಮಪುರುಷಸ್ಯ ಚ ತದ್ವತ್ತಾಮಾತ್ರೇಣ ಮಾಯಿತ್ವಮುಚ್ಯತೇ ನಾಜ್ಞತ್ವೇನ

ಜೀವಸ್ಯೈವ ಹಿ ಮಾಯಯಾ ನಿರೋಧಃ ಶ್ರೂಯತೇ । 'ತಸ್ಮಿಂಶ್ಚಾನ್ಯೋ ಮಾಯಯಾ ಸಂನಿರುದ್ಧಃ' ಇತಿ । 'ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ' (ಗೌ.ಕಾ. ೧-೧೬) ಇತಿ ಚ । 'ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ' (ಬೃ. ೨-೫-೧೯) ಇತ್ಯತ್ರಾಪಿ ವಿಚಿತ್ರಾಃ ಶಕ್ತಯೋಽಭಿಧೀಯನ್ತೇ । ಅತ ಏವ ಹಿ 'ಭೂರಿ ತ್ವಷ್ಟೇವ ರಾಜತಿ' ( ? ) ಇತ್ಯುಚ್ಯತೇ । ನ ಹಿ ಮಿಥ್ಯಾಭಿಭೂತಃ ಕಶ್ಚಿದ್ ವಿರಾಜತೇ । 'ಮಮ ಮಾಯಾ ದುರತ್ಯಯಾ' (ಗೀ. ೭-೧೪) ಇತ್ಯತ್ರಾಪಿ 'ಗುಣಮಯೀ' ಇತಿ ವಚನಾತ್ ಸೈವ ತ್ರಿಗುಣಾತ್ಮಿಕಾ ಪ್ರಕೃತಿರುಚ್ಯತ ಇತಿ ನ ಶ್ರುತಿಭಿಃ ಸದಸದನಿರ್ವಚನೀಯಾಜ್ಞಾನಪ್ರತಿಪಾದನಮ್ ॥

(ಅರ್ಥ)

ಇನ್ನು ಸದಸದನಿರ್ವಚನೀಯವಾದ ಅಜ್ಞಾನವು ಶ್ರುತಿಸಿದ್ಧವಾಗಿರುತ್ತದೆ[1] ಎಂದಿವಲ್ಲ, ಅದು ಸರಿಯಲ್ಲ. ಏಕೆಂದರೆ 'ಅನೃತದಿಂದ ಹೊರಕ್ಕೆ ಸೆಳೆಯಲ್ಪಟ್ಟಿರುತ್ತಾರೆ' (ಛಾಂ. ೮-೩-೨) ಮುಂತಾದ ವಾಕ್ಯಗಳಲ್ಲಿ ಅನೃತಶಬ್ದವು ಅನಿರ್ವಚನೀಯವನ್ನು ಹೇಳುವದಿಲ್ಲ. ಅನೃತಶಬ್ದಕ್ಕೆ ಋತವಲ್ಲದ್ದು ಎಂಬುದೇ ಅಲ್ಲವೆ, ವಿಷಯ ? ಋತವೆಂಬುದು ಕರ್ಮವಾಚಕವು, ಏಕೆಂದರೆ 'ಋತವನ್ನು ಪಾನಮಾಡುತ್ತಿರುವ ಇಬ್ಬರು' (ಕಾ. ೧-೩-೧) ಎಂದು (ಶ್ರುತಿ)ವಚನವಿದೆ. (ಅಲ್ಲಿ) 'ಋತ'ವೆಂದರೆ ಕರ್ಮಫಲದ ಇಚ್ಛೆಯಿಲ್ಲದೆ ಪರಮಪುರುಷಾರಾಧನರೂಪದ, ಆ (ಪರಮಪುರುಷನನ್ನು) ಪಡೆಯುವದೆಂಬ ಫಲವುಳ್ಳ (ಕರ್ಮವು). ಇಲ್ಲಿ[2], ಅದಕ್ಕೆ ವ್ಯತಿರಿಕ್ತವಾದ ಸಾಂಸಾರಿಕಫಲವುಳ್ಳ ಕರ್ಮವೇ ಅನೃತವು. (ಅದು) ಬ್ರಹ್ಮಪ್ರಾಪ್ತಿಗೆ ಅಡ್ಡಿಯಾಗಿರುತ್ತದೆ. ಏಕೆಂದರೆ (ಇಲ್ಲಿ) 'ಈ ಬ್ರಹ್ಮಲೋಕವನ್ನು ಪಡೆಯುವದಿಲ್ಲ, ಅನೃತದಿಂದಲ್ಲವೆ, ಅವರು ಹೊರಕ್ಕೆ ಸೆಳೆಯಲ್ಪಟ್ಟಿರುತ್ತಾರೆ ?' (ಛಾಂ. ೮-೩-೨) ಎಂದು ವಚನವಿದೆ.

**'ನಾಸದಾಸೀನ್ನೋ ಸದಾಸೀತ್'** (ಅಸತ್ತು ಇರಲಿಲ್ಲ, ಸತ್ತೂ ಇರಲಿಲ್ಲ, (ತೈ. ಬ್ರಾ. ೨-೮-೯-೩) ಎಂಬಲ್ಲಿಯೂ ಸತ್ತು, ಅಸತ್ತು- ಎಂಬ ಶಬ್ದಗಳು ಚಿದಚಿದ್ವ್ಯಷ್ಟಿಗಳ ವಿಷಯವಾಗಿರುತ್ತದೆ. ಉತ್ಪತ್ತಿಕಾಲದಲ್ಲಿ 'ಸತ್', 'ತ್ಯತ್'

1. ಪ್ರತ್ಯಕ್ಷಸಿದ್ಧ, ಅನುಮಾನಸಿದ್ಧ- ಎಂಬ ಪಕ್ಷಗಳನ್ನು ತಳ್ಳಿಹಾಕಿದ್ದಾಗಿದೆ ; ಈಗ ಶ್ರುತಿಪ್ರಮಾಣವೂ ಅದಕ್ಕಿಲ್ಲವೆಂದು ತೋರಿಸುವದಕ್ಕೆ ಹೊರಟಿರುತ್ತದೆ.

2. ಪ್ರಕೃತವಾದ ಛಾಂದೋಗ್ಯವಾಕ್ಯದಲ್ಲಿ ಎಂದರ್ಥ. ಮೂಲಾವಿದ್ಯಾವಾದಿಗಳು ಇದನ್ನು ತೂಲಾವಿದ್ಯೆ ಎಂದು ಅರ್ಥಮಾಡಿರುತ್ತಾರೆ. ಛಾಂದೋಗ್ಯಶಾಂಕರಭಾಷ್ಯದಲ್ಲಿ ಮಿಥ್ಯಾವಿಷಯಗಳ ಬಯಕೆ ಮತ್ತು ಅದಕ್ಕೆ ಬೇಕಾದ ಸ್ವೇಚ್ಛಾಚಾರ ಎಂದು ಅರ್ಥಮಾಡಿದೆ.

ಎಂಬ ಶಬ್ದಗಳಿಂದ ಉಕ್ತವಾಗಿರುವ ಚಿದಚಿತ್ತುಗಳ ವ್ಯಷ್ಟಿಯಾಗಿರುವ ವಸ್ತುಗಳೆರಡೂ ಪ್ರಲಯಕಾಲದಲ್ಲಿ ಅಚಿತ್ಸಮಷ್ಟಿಯಾಗಿರುವ ತಮಃಶಬ್ದವಾಚ್ಯವಾದ ವಸ್ತುವಿನಲ್ಲಿ ಪ್ರಲಯವಾಗುವದೆಂದು ಪ್ರತಿಪಾದಿಸುವದರಲ್ಲಿಯೇ (ಈ) ವಾಕ್ಯಕ್ಕೆ ತಾತ್ಪರ್ಯ. (ಇಷ್ಟೇ ಹೊರತು) ಇಲ್ಲಿ ಯಾವದನ್ನೂ ಸದಸದನಿರ್ವಚನೀಯವೆಂದು ಹೇಳಿಲ್ಲ. ಸದಸತ್ತುಗಳೆರಡೂ ಒಂದಾನೊಂದು ಕಾಲದಲ್ಲಿ ಇರುವದಿಲ್ಲ ಎಂದಿಷ್ಟೇ (ಇಲ್ಲಿ) ಹೇಳಿದೆ. ಇಲ್ಲಿ ತಮಃಶಬ್ದದಿಂದ ಉಕ್ತವಾಗಿರುವದು ಅಚಿತ್ಸಮಷ್ಟಿಯೇ ಎಂಬುದು 'ಅವ್ಯಕ್ತವು ಅಕ್ಷರದಲ್ಲಿ ಲಯವಾಗುತ್ತದೆ. ಅಕ್ಷರವು ತಮಸ್ಸಿನಲ್ಲಿ ಲಯವಾಗುತ್ತದೆ' (ಸುಬಾಲ. ೨) ಎಂಬ ಮತ್ತೊಂದು ಶ್ರುತಿಯಿಂದ ಗೊತ್ತಾಗುತ್ತದೆ.[1] ತಮಶ್ಶಬ್ದದಿಂದ ಅಚಿತ್ಸಮಷ್ಟಿಯಾದ ಪ್ರಕೃತಿಯ ಸೂಕ್ಷ್ಮಾವಸ್ಥೆಯನ್ನೇ (ಅಲ್ಲಿ) ಹೇಳಿದೆ–ಎಂಬುದು ನಿಜ; ಆದರೆ 'ಮಾಯೆಯನ್ನಾದರೆ ಪ್ರಕೃತಿಯೆಂದರಿಯಬೇಕು' (ಶ್ವೇ. ೪–೧೦) ಎಂದು ಮಾಯಾಶಬ್ದದಿಂದ ಪ್ರಕೃತಿಯನ್ನು ಕರೆದಿರುವದರಿಂದ (ಅದು) ಅನಿರ್ವಚನೀಯವೇ[2]– ಎಂದರೆ ಇದು ಹೀಗಲ್ಲ. ಏಕೆಂದರೆ ಮಾಯಾಶಬ್ದವು ಅನಿರ್ವಚನೀಯವಾಚಕವೆಂಬುದು (ಎಲ್ಲಿಯೂ) ಕಂಡುಬಂದಿಲ್ಲ.

(ಪೂರ್ವಪಕ್ಷಿ) :– ಮಾಯಾಶಬ್ದವು ಮಿಥ್ಯಾ(ಶಬ್ದಕ್ಕೆ) ಪರ್ಯಾಯವಾಗಿರುವದರಿಂದ, (ಅದು) ಅನಿರ್ವಚನೀಯವಾಚಕವೇ.[3]

(ಸಿದ್ಧಾಂತಿ) :– ಅದೂ ಅಲ್ಲ. ಏಕೆಂದರೆ ಮಾಯಾಶಬ್ದವು ಎಲ್ಲೆಲ್ಲಿಯೂ ಮಿಥ್ಯಾವಸ್ತುವನ್ನೇ ಹೇಳುತ್ತಿರುವದಿಲ್ಲ; ಏಕೆಂದರೆ ಸತ್ಯವೇ ಆಗಿರುವ ಅಸುರರ ಮತ್ತು ರಾಕ್ಷಸರ ಅಸ್ತ್ರವೇ ಮುಂತಾದವುಗಳಲ್ಲಿ(ಯೂ) ಮಾಯಾಶಬ್ದವನ್ನು ಪ್ರಯೋಗಿಸುತ್ತಾರೆ. ಹೀಗೆಂದು (ವಿಷ್ಣುಪುರಾಣದಲ್ಲಿ) ಹೇಳಿದೆ :

**ತೇನ ಮಾಯಾಸಹಸ್ರಂ ತಚ್ಛಂಬರಸ್ಯಾಶುಗಾಮಿನಾ ।**
**ಬಾಲಸ್ಯ ರಕ್ಷತಾ ದೇಹಮೇಕೈಕಶ್ಯೇನ[4] ಸೂದಿತಮ್॥** ವಿ.ಪು.೧–೧೯–೨೦

(ಆ ಶೀಘ್ರಗಾಮಿಯಾದ ಚಕ್ರವು ಆ ಬಾಲಕನ ದೇಹವನ್ನು ರಕ್ಷಿಸುತ್ತಾ, ಶಂಬರನ ಮಾಯಾಸಹಸ್ರವನ್ನು ಒಂದೊಂದಾಗಿ ನಾಶಗೊಳಿಸಿತು).[5]

---

1. ಈ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

2. ಪಂಚಪಾದಿಕಾಕಾರರೇ ಮುಂತಾದ ಅದ್ವೈತಿಗಳ ಮತದಲ್ಲಿ ಮಿಥ್ಯಾಶಬ್ದಕ್ಕೆ ಅನಿರ್ವಚನೀಯವೆಂದು ಅರ್ಥ.

3. 'ಮಾಯೆ' ಎಂಬ ಮಾತು ಮಿಥ್ಯೆ ಎಂಬರ್ಥವುಳ್ಳದ್ದು; ಮಿಥ್ಯೆ ಎಂದರೆ ಅನಿರ್ವಚನೀಯ– ಎಂದು ಭಾವ.

4. 'ಏಕೈಕಂ ಚ ನಿಷೂದಿತಮ್' ಎಂದು ಪಾ॥

5. ಹಿರಣ್ಯಕಶಿಪುವಿನ ಇಚ್ಛೆಯಂತೆ ಶಂಬರನೂ ಮಾಯಾಸಹಸ್ರಗಳನ್ನು ಸೃಷ್ಟಿಸಿದನು; ವಿಷ್ಣುವಿನ ಚಕ್ರವು ಅವನ್ನು ಒಂದೊಂದಾಗಿ ನಾಶಗೊಳಿಸಿತು.

ಆದ್ದರಿಂದ ಮಾಯಾಶಬ್ದವು ವಿಚಿತ್ರವಾದ ವಸ್ತುಗಳ ಸೃಷ್ಟಿಯನ್ನು ಮಾಡ್ಡುವದನ್ನು ಹೇಳುತ್ತದೆ. ಪ್ರಕೃತಿಯನ್ನು ಮಾಯಾಶಬ್ದದಿಂದ ಹೇಳಿರುವದೂ ವಿಚಿತ್ರವಾದ ಪದಾರ್ಥಗಳ ಸೃಷ್ಟಿಮಾಡುವದರಿಂದಲೇ. 'ಇದರಿಂದ ಮಾಯಿಯು ಈ ವಿಶ್ವವನ್ನು ಸೃಷ್ಟಿಸುತ್ತಾನೆ; ಅದರಲ್ಲಿ ಇನ್ನೊಬ್ಬನು ಮಾಯೆಯಿಂದ ಕಟ್ಟಿಹಾಕಲ್ಪಟ್ಟಿರುತ್ತಾನೆ' (ಶ್ವೇ. ೪-೯) ಎಂದು ಮಾಯಾಶಬ್ದವಾಚ್ಯವಾದ ಪ್ರಕೃತಿಯು ವಿಚಿತ್ರವಾದ ಪದಾರ್ಥಗಳನ್ನು ಸೃಷ್ಟಿಮಾಡುತ್ತದೆ ಎಂದು (ಶ್ರುತಿಯು) ತಿಳಿಯಪಡಿಸುತ್ತದೆ. ಪರಮಪುರುಷನಿಗೆ ಈ ಮಾಯೆಯಿರುವದೆಂದಿಷ್ಟರಿಂದಲೇ ಅವನನ್ನು 'ಮಾಯಿ' ಎಂದು ಕರೆದಿರುತ್ತದೆಯೇ ಹೊರತು, (ಅವನು) ಅಜ್ಞನೆಂಬ ಕಾರಣದಿಂದಲ್ಲ. 'ಅದರಲ್ಲಿ ಇನ್ನೊಬ್ಬನು ಮಾಯೆಯಿಂದ ಕಟ್ಟಿಹಾಕಲ್ಪಟ್ಟಿರುತ್ತಾನೆ' (ಶ್ವೇ. ೪-೯) ಎಂದೂ 'ಅನಾದಿಮಾಯೆಯಿಂದ ನಿದ್ರಿಸುತ್ತಿರುವ ಜೀವನು ಯಾವಾಗ ಎಚ್ಚರುತ್ತಾನೋ' (ಗೌ. ಕಾ. ೧-೧೬) ಎಂದೂ ಜೀವನಿಗಲ್ಲವೆ, ಮಾಯೆಯು ಕಟ್ಟನ್ನು ಶ್ರುತಿಯಲ್ಲಿ[1] ಹೇಳಿದೆ? 'ಇಂದ್ರನು ಮಾಯೆಗಳಿಂದ ಬಹುರೂಪನಾಗಿ ಕಾಣಬರುತ್ತಾನೆ' (ಬೃ. ೨-೫-೧೯) ಎಂಬಲ್ಲಿಯೂ (ಮಾಯೆ ಎಂಬ ಶಬ್ದದಿಂದ) ಬಗೆಬಗೆಯಾದ ಶಕ್ತಿಗಳೇ ಉಕ್ತವಾಗಿರುತ್ತವೆ. ಆದ್ದರಿಂದಲೇ ಅಲ್ಲಿ 'ಬಹಳವಾಗಿ ತ್ವಷ್ಟೃವಿನಂತೆ ಬೆಳಗುತ್ತಿರುತ್ತಾನೆ' ಎಂದು ಉಕ್ತವಾಗಿದೆ; ಮಿಥ್ಯಾ(ಜ್ಞಾನ)ದಿಂದ ಮಂಕಾದವರು ಯಾರೂ ಬೆಳಗುತ್ತಿರುವದಿಲ್ಲವಷ್ಟೆ? 'ನನ್ನ ಮಾಯೆಯು ದಾಟಲಶಕ್ಯವಾದದ್ದು' (ಗೀ. ೭-೧೪) ಎಂಬಲ್ಲಿಯೂ ಗುಣಮಯವಾದ (ಮಾಯೆ) ಎಂದಿರುವದರಿಂದ ಅದೇ ತ್ರಿಗುಣಾತ್ಮಕವಾದ 'ಪ್ರಕೃತಿ'ಯೇ ಮಾಯೆ ಎಂದು ಉಕ್ತವಾಗಿರುತ್ತದೆ. ಆದ್ದರಿಂದ ಶ್ರುತಿಗಳಿಂದ[2] ಸದಸದನಿರ್ವಚನೀಯವಾದ ಅಜ್ಞಾನವನ್ನು ಪ್ರತಿಪಾದಿಸಿರುವದಿಲ್ಲ.

(ಮೂಲ)

ಸಾಮಾನ್ಯೈಕ್ಯೋಪದೇಶಾನುಪಪತ್ತ್ಯಾ । ನ ಹಿ 'ತತ್ತ್ವಮಸಿ' ಇತಿ ಜೀವಪರಯೋರೈಕ್ಯೋಪದೇಶೇ ಸತಿ ಸರ್ವಜ್ಞೇ ಸತ್ಯಸಙ್ಕಲ್ಪೇ ಸಕಲಜಗತ್ಸರ್ಗಸ್ಥಿತಿವಿನಾಶಹೇತುಭೂತೇ ಪ್ರತ್ಯಕ್ಷಬ್ಧಾವಗತೇ ಪ್ರಕೃತೇ ಬ್ರಹ್ಮಣಿ ವಿರುದ್ಧಾಜ್ಞಾನಪರಿಕಲ್ಪನಾಹೇತುಭೂತಾ ಕಾಚಿದನ್ಯಾನುಪಪತ್ತಿರ್ದೃಶ್ಯತೇ । ಐಕ್ಯೋಪದೇಶಸ್ತು 'ತ್ವಂ'ಶಬ್ದೇನಾಪಿ ಜೀವಶರೀರಕಸ್ಯ ಬ್ರಹ್ಮಣ ಏವಾಭಿಧಾನಾತ್ ಉಪಪನ್ನತರಃ | 'ಅನೇನ ಜೀವೇನಾऽऽತ್ಮನಾऽನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' ಇತಿ

1. 'ಅನಾದಿಮಾಯಯಾ' ಎಂಬ ಗೌಡಪಾದೀಯಕಾರಿಕೆಯನ್ನು ಶ್ರುತಿಯೆಂದು ಕರೆದಿರುವದನ್ನು ಇಲ್ಲಿ ಲಕ್ಷಿಸಬೇಕು. ಪರಿಶಿಷ್ಟವನ್ನು ನೋಡಿ.

2. ಇಲ್ಲಿ 'ಮಮ ಮಾಯಾ' ಎಂಬ ಗೀತಾವಚನವನ್ನು ಉದಾಹರಿಸಿದ್ದರೂ ಮುಖ್ಯವಾಗಿ ಶ್ರುತಿವಚನಗಳನ್ನೇ ವಿಮರ್ಶಿಸಿದೆ ಎಂದಿಟ್ಟುಕೊಳ್ಳಬೇಕು.

ಸರ್ವಸ್ಯ ವಸ್ತುನಃ ಪರಮಾತ್ಮಪರ್ಯನ್ತಸ್ಯೈವ ಹಿ ನಾಮರೂಪಭಾಕ್ತ್ವಮುಕ್ತಮ್ । ಅತೋ ನ ಬ್ರಹ್ಮಾಜ್ಞಾನಪರಿಕಲ್ಪನಮ್ ॥

(ಅರ್ಥ)

ಐಕ್ಯೋಪದೇಶವನ್ನು ಮಾಡಿರುವದು ಉಪಪನ್ನವಾಗುವದಿಲ್ಲ- ಎಂಬ ಕಾರಣದಿಂದಲೂ[1] ಅಜ್ಞಾನವನ್ನು ಕಲ್ಪಿಸುವದಕ್ಕೆ ಆಗುವದಿಲ್ಲ. 'ಅದೇ ನೀನಾಗಿರುವೆ' ಎಂದು ಜೀವಪರಮಾತ್ಮರುಗಳಿಗೆ ಐಕ್ಯವನ್ನು ಉಪದೇಶಮಾಡಿರುವದರಿಂದ ಸರ್ವಜ್ಞನೂ ಸತ್ಯಸಂಕಲ್ಪನೂ ಆದ ಸಕಲಜಗತ್ತಿನ ಸೃಷ್ಟಿಸ್ಥಿತಿಪ್ರಲಯಗಳಿಗೆ ಕಾರಣವಾಗಿರುವ ತತ್ (ಅದು ಎಂಬ) ಶಬ್ದದಿಂದ ತಿಳಿಯಬರುವ ಪ್ರಕೃತವಾದ ಬ್ರಹ್ಮದಲ್ಲಿ (ಇದಕ್ಕೆ) ವಿರುದ್ಧವಾದ ಅಜ್ಞಾನವನ್ನು ಕಲ್ಪಿಸುವದಕ್ಕೆ ಕಾರಣವಾಗಿರುವ ಯಾವ ಅನುಪಪತ್ತಿಯೂ ಕಾಣಬರುವದೇ ಇಲ್ಲ.[2] ಐಕ್ಯೋಪದೇಶವಾದರೊ ತ್ವಂಶಬ್ದದಿಂದಲೂ ಜೀವಶರೀರವಾದ ಬ್ರಹ್ಮವನ್ನೇ ಹೇಳುವದರಿಂದ ಇನ್ನೂ ಹೆಚ್ಚಾಗಿ ಉಪಪನ್ನವಾಗುತ್ತದೆ.[3] 'ಈ ಜೀವಾತ್ಮನಿಂದ ಅನುಪ್ರವೇಶವನ್ನುಮಾಡಿ ನಾಮರೂಪಗಳನ್ನು ವ್ಯಾಕರಣಮಾಡುವೆನು' (ಛಾಂ. ೬-೩-೩) ಎಂದು ಪ್ರತಿಯೊಂದು ವಸ್ತುವಿಗೂ ಪರಮಾತ್ಮಪರ್ಯಂತವಾಗಿಯೇ ಅಲ್ಲವೆ, ನಾಮರೂಪಭಾಕ್ತ್ವವೆಂದು ಹೇಳಿದೆ ? ಆದ್ದರಿಂದ ಬ್ರಹ್ಮಾಜ್ಞಾನವನ್ನು ಕಲ್ಪಿಸುವದಕ್ಕೆ ಕಾರಣವಿಲ್ಲ.

(ಮೂಲ)

ಇತಿಹಾಸಪುರಾಣಯೋರಪಿ ನ ಬ್ರಹ್ಮಾಜ್ಞಾನವಾದಃ ಕ್ವಚಿದಪಿ ದೃಶ್ಯತೇ । ನನು 'ಜ್ಯೋತೀಂಷಿ ವಿಷ್ಣುಃ' (ವಿ. ಪು. ೨-೧೨-೩೮) ಇತಿ ಬ್ರಹ್ಮೈಕಮೇವ ತತ್ತ್ವಮಿತಿ ಪ್ರತಿಜ್ಞಾಯ 'ಜ್ಞಾನಸ್ವರೂಪೋ ಭಗವಾನ್ ಯತೋಽಸೌ' (ವಿ. ಪು. ೨-೧೨-೩೯) ಇತಿ ಶೈಲಾಬ್ಧಿಧರಾದಿಭೇದಭಿನ್ನಸ್ಯ ಜಗತೋ ಜ್ಞಾನೈಕಸ್ವರೂಪಬ್ರಹ್ಮಾಜ್ಞಾನವಿಜೃಮ್ಭಿತತ್ವಮಭಿಧಾಯ 'ಯದಾ ತು ಶುದ್ಧಂ ನಿಜರೂಪಿ' (ವಿ. ಪು. ೨-೧೨-೪೦) ಇತಿ ಜ್ಞಾನಸ್ವರೂಪಸ್ಯೈವ ಬ್ರಹ್ಮಣಃ ಸ್ವಸ್ವರೂಪಾವಸ್ಥಿತಿವೇಲಾಯಾಂ ವಸ್ತುಭೇದಾಭಾವದರ್ಶನೇನ ಅಜ್ಞಾನವಿಜೃಮ್ಭಿತತ್ವಮೇವ

1. ಶ್ರುತಾರ್ಥಾಪತ್ತಿ (ಶ್ರುತವಾಗಿರುವದು ಹೊಂದುವದಕ್ಕಾಗಿ ಕಲ್ಪಿಸುವದು) ಎಂಬ ಅರ್ಥಾಪತ್ತಿಪ್ರಮಾಣವೂ ಅಜ್ಞಾನಕ್ಕಿಲ್ಲ- ಎಂಬುದನ್ನು ಇಲ್ಲಿ ವಿಶದಗೊಳಿಸುತ್ತಿದಾರೆ.

2. ಅರ್ಥಾಪತ್ತಿಗೆ ಅನುಪಪತ್ತಿ (ಹೊಂದದೆ ಇರುವದು), ಅನ್ಯಥಾಽನುಪಪತ್ತಿ (ಮತ್ತೊಂದು ರೀತಿಯಲ್ಲಿಯೂ ಹೊಂದುವದು), ಅನ್ಯಥೈವೋಪಪತ್ತಿ (ಮತ್ತೊಂದು ಬಗೆಯಲ್ಲಿಯೇ ಹೊಂದುವದು)- ಎಂಬ ಮೂರು ದೋಷಗಳಿರುತ್ತವೆ. ಪ್ರಕೃತದಲ್ಲಿ ಮೊದಲನೆಯ ದೋಷವನ್ನು ಅಲ್ಲಗಳೆದಿರುತ್ತಾರೆ.

3. 'ಅದೇ ನೀನು' ಎಂದು ಐಕ್ಯವಾಕ್ಯಕ್ಕೆ ಅರ್ಥವೆಂದು ಪೂರ್ವಪಕ್ಷಿಯ ಮತ; ಇಲ್ಲಿ 'ನೀನು' ಎಂದು ಪರಮಾತ್ಮನನ್ನೇ ಹೇಳಿದೆ ಎಂಬುದು ಸಿದ್ಧಾಂತಿಯ ಮತ. ಆದ್ದರಿಂದ ಅನುಪಪತ್ತಿಯಿಲ್ಲ.

ಸ್ಥಿರೀಕೃತ್ಯ 'ವಸ್ತ್ವಸ್ತಿ ಕಿಮ್' (ವಿ. ಪು. ೨-೧೨-೪೧), 'ಮಹೀ ಘಟತ್ವಮ್' (ವಿ. ಪು. ೨-೧೨-೪೨)- ಇತಿ ಶ್ಲೋಕದ್ವಯೇನ ಜಗದುಪಲಬ್ಧಿಪ್ರಕಾರೇಣಾಪಿ ವಸ್ತುಭೇದಾನಾಮಸತ್ಯತ್ವಮ್ ಉಪಪಾದ್ಯ 'ತಸ್ಮಾನ್ನ ವಿಜ್ಞಾನಮೃತೇ' (ವಿ. ಪು. ೨-೧೨-೪೩) ಇತಿ ಪ್ರತಿಜ್ಞಾತಂ ಬ್ರಹ್ಮವ್ಯತಿರಿಕ್ತಸ್ಯಾಸತ್ಯತ್ವಮ್ ಉಪಸಂಹೃತ್ಯ 'ವಿಜ್ಞಾನಮೇಕಮ್' (ವಿ. ಪು. ೨-೧೨-೪೪) ಇತಿ ಜ್ಞಾನಸ್ವರೂಪೇ ಬ್ರಹ್ಮಣಿ ಭೇದದರ್ಶನನಿಮಿತ್ತಮಜ್ಞಾನಮೂಲಂ ನಿಜಕರ್ಮೈವ ಇತಿ ಸ್ಫುಟೀಕೃತ್ಯ 'ಜ್ಞಾನಂ ವಿಶುದ್ಧಮ್' (ವಿ. ಪು. ೨-೧೨-೪೫) ಇತಿ ಜ್ಞಾನಸ್ವರೂಪಸ್ಯ ಬ್ರಹ್ಮಣಃ ಸ್ವರೂಪಂ ವಿಶೋಧ್ಯ 'ಸದ್ಭಾವ ಏವಂ ಭವತೋ ಮಯೋಕ್ತಃ' (ವಿ. ಪು. ೨-೧೨-೪೬) ಇತಿ ಜ್ಞಾನಸ್ವರೂಪಸ್ಯ ಬ್ರಹ್ಮಣ ಏವ ಸತ್ಯತ್ವಂ ನಾನ್ಯಸ್ಯ ; ಅನ್ಯಸ್ಯ ಚ ಅಸತ್ಯತ್ವಮೇವ ; ತಸ್ಯ ಭುವನಾದೇಃ ಸತ್ಯತ್ವಂ ವ್ಯಾವಹಾರಿಕಮ್ ಇತಿ ತತ್ತ್ವಂ ತವೋಪದಿಷ್ಟಮ್ ಇತಿ ಹಿ ಉಪದೇಶೋ ದೃಶ್ಯತೇ ॥

(ಅರ್ಥ)

ಇತಿಹಾಸಪುರಾಣಗಳಲ್ಲಿಯೂ[1] ಬ್ರಹ್ಮಾಜ್ಞಾನವಾದವು ಎಲ್ಲಿಯೂ ಕಂಡು ಬರುವದಿಲ್ಲ.

(ಪೂರ್ವಪಕ್ಷಿ) :- (ಜ್ಯೋತೀಂಷಿ ವಿಷ್ಣುಃ) 'ಜ್ಯೋತಿಗಳು ವಿಷ್ಣುವೇ' (ವಿ. ಪು. ೨-೧೨-೩೮) ಎಂಬ ವಾಕ್ಯದಲ್ಲಿ ಬ್ರಹ್ಮವೊಂದೇ ತತ್ತ್ವವೆಂದು ಪ್ರತಿಜ್ಞಾವಾಕ್ಯದಲ್ಲಿ ಹೇಳಿ 'ಆ ಭಗವಂತನು ಜ್ಞಾನಸ್ವರೂಪನಾಗಿರುವದರಿಂದ' (ವಿ. ಪು. (೨-೧೨-೩೯) ಎಂದು ಬೆಟ್ಟ, ಸಮುದ್ರ, ಭೂಮಿ- ಮುಂತಾದ ಭೇದಗಳಿಂದ ಭಿನ್ನವಾಗಿರುವ ಜಗತ್ತು ಜ್ಞಾನೈಕಸ್ವರೂಪವಾದ ಬ್ರಹ್ಮದ ಅಜ್ಞಾನದಿಂದ ಹೊರ ತೋರಿಕೊಂಡಿದೆ- ಎಂಬುದನ್ನೇ ಹೇಳಿ 'ಯಾವಾಗಲಾದರೆ ತನ್ನ ಸ್ವರೂಪದಲ್ಲಿಯೇ ಎಲ್ಲವೂ' (ವಿ. ಪು. ೨-೧೨-೪೦) ಎಂದು ಜ್ಞಾನವೇ ಆಗಿರುವ ಬ್ರಹ್ಮವು ತನ್ನ ಸ್ವರೂಪದಿಂದಲೇ ನಿಲ್ಲುವ ವೇಳೆಯಲ್ಲಿ ವಸ್ತುಗಳ ಭೇದವಿಲ್ಲವೆಂಬುದನ್ನು ಕಂಡು ಕೊಳ್ಳುವದರಿಂದ (ಅದೆಲ್ಲ) ಅಜ್ಞಾನದಿಂದ ಹೊರಹೊಮ್ಮಿರುವದೆಂಬುದನ್ನು ಸ್ಥಿರಗೊಳಿಸಿ 'ವಸ್ತುವೆಂಬುದಾದರೂ ಯಾವದು ಇದೆ?' (ವಿ. ಪು. ೨-೧೨-೪೧), 'ಪೃಥ್ವಿ, ಘಟತ್ವ....' (ವಿ. ಪು. ೨-೧೨-೪೨) ಎಂಬ ಎರಡು ಶ್ಲೋಕಗಳಿಂದ ಜಗತ್ತಿನ ಜ್ಞಾನವಾಗುವ ಪ್ರಕಾರದಿಂದಲೂ ವಸ್ತುಭೇದಗಳು ಅಸತ್ಯವೆಂಬುದನ್ನು ಉಪಪತ್ತಿಯಿಂದ ತೋರಿಸಿ, 'ಆದ್ದರಿಂದ ವಿಜ್ಞಾನವನ್ನು ಬಿಟ್ಟರೆ....' (ವಿ. ಪು. ೨-೧೨-೪೩) ಎಂದು (ಮೊದಲು) ಪ್ರತಿಜ್ಞಾವಾಕ್ಯದಿಂದ ಹೇಳಿದ್ದಂತೆ ಬ್ರಹ್ಮವ್ಯತಿರಿಕ್ತವಾದದ್ದೆಲ್ಲವೂ ಅಸತ್ಯವೆಂಬುದನ್ನು ಉಪಸಂಹಾರಮಾಡಿ ವಿಜ್ಞಾನವೊಂದನ್ನೇ (ವಿ. ಪು.

1. ಶ್ರುತಿಗಳಲ್ಲಿ ಅಜ್ಞಾನವಾದವಿಲ್ಲ- ಎಂದು ತೋರಿಸಿದ್ದಾಯಿತು ; ಈಗ ಇತಿಹಾಸಪುರಾಣಗಳಲ್ಲಿಯೂ ಇಲ್ಲ- ಎಂಬಿದನ್ನು ತೋರಿಸುತ್ತಾರೆ.

೨-೧೨-೪೩) ಬಲುಬಗೆಯಿಂದ ವಿಕಲ್ಪಿಸುವರು ಎಂದು ಜ್ಞಾನಸ್ವರೂಪವಾದ ಬ್ರಹ್ಮದಲ್ಲಿ ಭೇದದರ್ಶನನಿಮಿತ್ತವಾದ ಅಜ್ಞಾನಮೂಲವು ತನ್ನ ಕರ್ಮವೇ ಎಂದು ಸ್ಫುಟಗೊಳಿಸಿ 'ವಿಶುದ್ಧವಾದ ಜ್ಞಾನವೇ (ವಾಸುದೇವನು)' (ವಿ. ಪು. ೨-೧೨-೪೪) ಎಂದು ಜ್ಞಾನಸ್ವರೂಪವಾದ ಬ್ರಹ್ಮದ ಸ್ವರೂಪವನ್ನು ವಿಶೋಧನೆಮಾಡಿ 'ಸದ್ಭಾವವನ್ನು ಹೀಗೆ ನಿನಗೆ ನಾನು ಹೇಳಿರುತ್ತೇನೆ' (ವಿ. ಪು. ೨-೧೨-೪೫) ಎಂದು ಜ್ಞಾನಸ್ವರೂಪವೇ ಆಗಿರುವ ಬ್ರಹ್ಮವೇ ಸತ್ಯವು, ಮತ್ತೊಂದಲ್ಲ, ಮತ್ತೊಂದು ಅಸತ್ಯವೇ; ಭುವನವೇ ಮುಂತಾದ ಆ (ಇನ್ನೊಂದರ) ಸತ್ಯತ್ವವು ವ್ಯಾವಹಾರಿಕವು -ಎಂದು ತತ್ತ್ವವನ್ನು ನಿನಗೆ ಉಪದೇಶಿಸಿಯೇ ಇರುತ್ತೇನೆ- ಎಂದಲ್ಲವೆ, ಉಪದೇಶಿಸಿರುವದು ಕಂಡುಬರುತ್ತದೆ ?

(ಮೂಲ)

ನೈತದೇವಮ್ | ಅತ್ರ ಭುವನಕೋಶಸ್ಯ ವಿಸ್ತೀರ್ಣಂ ಸ್ವರೂಪಮುಕ್ತ್ವಾ ಪೂರ್ವಮನುಕ್ತಂ ರೂಪಾನ್ತರಂ ಸಙ್ಕ್ಷೇಪತಃ 'ಶ್ರೂಯತಾಮ್' (ವಿ. ಪು. ೨-೧೨-೩೬) ಇತ್ಯಾರಭ್ಯ ಅಭಿಧೀಯತೇ | ಚಿದಚಿನ್ಮಿಶ್ರೇ ಜಗತಿ ಚಿದಂಶೋ ವಾಙ್ಮನಸಾಗೋಚರಸ್ವಸಂವೇದ್ಯಸ್ವರೂಪಭೇದೋ ಜ್ಞಾನೈಕಾಕಾರತಯಾ ಅಸ್ಪೃಷ್ಟಪ್ರಾಕೃತಭೇದಃ, ಅವಿನಾಶಿತ್ವೇನ ಅಸ್ತಿಶಬ್ದವಾಚ್ಯಃ | ಅಚಿದಂಶಸ್ತು ಚಿದಂಶಕರ್ಮನಿಮಿತ್ತಪರಿಣಾಮಭೇದೋ ವಿನಾಶೀ- ಇತಿ ನಾಸ್ತಿಶಬ್ದಾಭಿಧೇಯಃ | ಉಭಯಂ ತು ಪರಬ್ರಹ್ಮಭೂತವಾಸುದೇವಶರೀರತಯಾ ತದಾತ್ಮಕಮ್ ಇತಿ, ಏತದ್ರೂಪಂ ಸಙ್ಕ್ಷೇಪೇಣಾತ್ರಾಭಿಹಿತಮ್ ||

ತಥಾ ಹಿ – 'ಯದಮ್ಬು ವೈಷ್ಣವಃ ಕಾಯಸ್ತತೋ ವಿಪ್ರ ವಸುನ್ಧರಾ | ಪದ್ಮಾಕಾರಾ ಸಮುದ್ಭೂತಾ ಪರ್ವತಾಬ್ಧ್ಯಾದಿಸಂಯುತಾ' (ವಿ.ಪು. ೨-೧೨-೩೭) ಇತ್ಯಮ್ಬುನೋ ವಿಷ್ಣುಶರೀರತ್ವೇನ, ಅಮ್ಬುಪರಿಣಾಮಭೂತಂ ಬ್ರಹ್ಮಾಣ್ಡಮಪಿ ವಿಷ್ಣೋಃ ಕಾಯಃ, ತಸ್ಯ ಚ ವಿಷ್ಣುರಾತ್ಮಾ ಇತಿ ಸಕಲಶ್ರುತಿಗತತಾದಾತ್ಮ್ಯೋಪದೇಶೋಪಬೃಂಹಣರೂಪಸ್ಯ ಸಾಮಾನಾಧಿಕರಣ್ಯಸ್ಯ 'ಜ್ಯೋತೀಂಷಿ ವಿಷ್ಣುಃ' (ವಿ. ಪು. ೨-೧೨-೩೮) ಇತ್ಯಾರಭ್ಯ ವಕ್ಷ್ಯಮಾಣಸ್ಯ ಶರೀರಾತ್ಮಭಾವ ಏವ ನಿಬನ್ಧನಮ್ ಇತ್ಯಾಹ | ಅಸ್ಮಿನ್ ಶಾಸ್ತ್ರೇ ಪೂರ್ವಮಪಿ ಏತದಸಕೃದುಕ್ತಮ್- 'ತಾನಿ ಸರ್ವಾಣಿ ತದ್ವಪುಃ' (ವಿ.ಪು. ೧-೨೨-೮೬), 'ತತ್ಸರ್ವಂ ವೈ ಹರೇಸ್ತನುಃ' (ವಿ. ಪು. ೧-೨೨-೩೮), 'ಸ ಏವ ಸರ್ವಭೂತಾತ್ಮಾ ವಿಶ್ವರೂಪೋ ಯತೋಽವ್ಯಯಃ' (ವಿ. ಪು. ೧-೨-೬೯) ಇತಿ | ತದಿದಂ ಶರೀರಾತ್ಮಭಾವಾಯತ್ತಂ ತಾದಾತ್ಮ್ಯಂ ಸಾಮಾನ್ಯಾಧಿಕರಣ್ಯೇನ ವ್ಯಪದಿಶ್ಯತೇ 'ಜ್ಯೋತೀಂಷಿ ವಿಷ್ಣುಃ' (ವಿ. ಪು. ೨-೧೨-೩೮) ಇತಿ | ಅತ್ರ, ಅಸ್ತ್ಯಾತ್ಮಕಂ ನಾಸ್ತ್ಯಾತ್ಮಕಂ ಚ ಜಗದನ್ತರ್ಗತಂ ವಸ್ತು ವಿಷ್ಣೋಃ ಕಾಯತಯಾ ವಿಷ್ಣ್ವಾತ್ಮಕಮ್ – ಇತ್ಯುಕ್ತಮ್

ಇದಮಸ್ತ್ಯಾತ್ಮಕಮ್', 'ಇದಂ ನಾಸ್ತ್ಯಾತ್ಮಕಮ್' ಅಸ್ಯ ಚ ನಾಸ್ತ್ಯಾತ್ಮಕತ್ವೇ ಹೇತುರಯಮ್ ಇತ್ಯಾಹ– 'ಜ್ಞಾನಸ್ವರೂಪೋ ಭಗವಾನ್ ಯತೋಽಸೌ' (ವಿ. ಪು. ೨–೧೨–೩೯) ಇತಿ । ಅಶೇಷಕ್ಷೇತ್ರಜ್ಞಾತ್ಮನಾ ಅವಸ್ಥಿತಸ್ಯ ಭಗವತೋ ಜ್ಞಾನಮೇವ ಸ್ವಾಭಾವಿಕಂ ರೂಪಮ್ । ನ ದೇವಮನುಷ್ಯಾದಿವಸ್ತುರೂಪಮ್ । ಯತ ಏವಮ್, ತತ ಏವ ಅಚಿದ್ರೂಪದೇವಮನುಷ್ಯಶೈಲಾಬ್ಧಿಧರಾದಯಶ್ಚ ತದ್ವಿಜ್ಞಾನವಿಜೃಮ್ಭಿತಾಃ । ತಸ್ಯ ಜ್ಞಾನೈಕಾಕಾರಸ್ಯ ಸತೋ ದೇವಾದ್ಯಾಕಾರೇಣ ಸ್ವಾತ್ಮವೈವಿಧ್ಯಾನುಸಂಧಾನಮೂಲಾಃ, ದೇವಾದ್ಯಾಕಾರಾನುಸಂಧಾನಮೂಲಕರ್ಮಮೂಲಾ ಇತ್ಯರ್ಥಃ । ಯತಶ್ಚ ಅಚಿದ್ವಸ್ತು ಕ್ಷೇತ್ರಜ್ಞಕರ್ಮಾನುಗುಣಪರಿಣಾಮಾಸ್ಪದಮ್ ತತಸ್ತನ್ನಾಸ್ತಿಶಬ್ದಾಭಿಧೇಯಮ್, ಇತರದಸ್ತಿಶಬ್ದಾಭಿಧೇಯಮ್ ಇತ್ಯರ್ಥಾದುಕ್ತಂ ಭವತಿ ॥

(ಅರ್ಥ)

ಇದು ಹೀಗಲ್ಲ. ಇಲ್ಲಿ ಭುವನಕೋಶದ ವಿಸ್ತೀರ್ಣವಾದ ಸ್ವರೂಪವನ್ನು ಹೇಳಿ, ಹಿಂದೆ ಹೇಳದೆಇದ್ದ ಮತ್ತೊಂದು ರೂಪವನ್ನು ಸಂಕ್ಷೇಪವಾಗಿ 'ಕೇಳು' (ವಿ. ಪು. ೨–೧೨–೩೬) ಎಂಬಲ್ಲಿಂದ ಹಿಡಿದು ಹೇಳಿರುತ್ತದೆ. ಚಿತ್ತು, ಅಚಿತ್ತು– ಇವೆರಡರ ಮಿಶ್ರಣವಾಗಿರುವ ಜಗತ್ತಿನಲ್ಲಿ ಚಿದಂಶವು ವಾಙ್ಮನಸ್ಸುಗಳಿಗೆ ಅಗೋಚರವಾಗಿ ಸ್ವಾನುಭವದಿಂದಲೇ ತಿಳಿಯಬರುವ ಸ್ವರೂಪವಿಶೇಷವುಳ್ಳದ್ದಾಗಿರುತ್ತದೆ. (ಅದು) ಜ್ಞಾನರೂಪವಾದ ಒಂದೇ ಆಕಾರವುಳ್ಳದ್ದಾಗಿರುವದರಿಂದ ಪ್ರಾಕೃತ ಸಂಬಂಧವಾದ ಭೇದವು (ತನ್ನನ್ನು) ಸೋಂಕದೆ ಇರುವದರಿಂದ ವಿನಾಶವಿಲ್ಲದ್ದಾಗಿರುವದರಿಂದ 'ಇದೆ' ಎಂಬ ಶಬ್ದಕ್ಕೆ ವಾಚ್ಯವಾಗಿರುತ್ತದೆ; ಅಚಿದಂಶವಾದರೊ, ಚಿದಂಶದ ಕರ್ಮನಿಮಿತ್ತದಿಂದಾದ ಪರಿಣಾಮವಿಶೇಷವುಳ್ಳದ್ದಾಗಿ ವಿನಾಶಿಯಾಗಿರುವದರಿಂದ 'ಇಲ್ಲ' ಎಂಬ ಶಬ್ದಕ್ಕೆ ಅಭಿಧೇಯವು.[1] ಆದರೆ ಇವೆರಡೂ ಪರಬ್ರಹ್ಮವಾಗಿರುವ ವಾಸುದೇವನ ಶರೀರವಾಗಿರುವದರಿಂದ ಅದೇ (ಇದಕ್ಕೆ) ಆತ್ಮನು ಎಂದು ಈ ರೂಪವನ್ನು ಸಂಕ್ಷೇಪವಾಗಿ ಇಲ್ಲಿ ಹೇಳಿರುತ್ತದೆ.

ಇದರ ವಿವರ :– 'ಎಲೈ ವಿಪ್ರನೆ, ಯಾವ ಅಪ್ತತ್ತ್ವವು ವಿಷ್ಣುವಿನ ಶರೀರವೋ, ಅದರಿಂದ ಪದ್ಮಾಕಾರವಾದ ಪರ್ವತಗಳು, ಸಮುದ್ರಗಳು– ಮುಂತಾದವುಗಳಿಂದೊಡಗೂಡಿರುವ ಭೂಮಿಯು ಉಂಟಾಯಿತು' (ವಿ. ಪು. ೨–೧೨–೩೭) ಎಂದು ವಿಷ್ಣುವಿನ ಶರೀರವಾಗಿರುವದರಿಂದ ಅಪ್ಪಿನ ಪರಿಣಾಮವಾಗಿರುವ ಬ್ರಹ್ಮಾಂಡವುಕೂಡ ವಿಷ್ಣುವಿನ ಶರೀರವೇ, ಮತ್ತು ಅದಕ್ಕೆ ವಿಷ್ಣುವು ಆತ್ಮನು –ಎಂದು ಸಕಲಶ್ರುತಿಗಳಲ್ಲಿ ಹೇಳಿರುವ ತಾದಾತ್ಮ್ಯೋಪದೇಶಕ್ಕೆ ಉಪಬೃಂಹಣವಾಗಿರುವ ಸಾಮಾನಾಧಿಕರಣ್ಯಕ್ಕೆ 'ಜ್ಯೋತಿಗಳು ವಿಷ್ಣುವೇ' (ವಿ. ಪು. ೨–೧೨–೩೮)

---

1. ಈ ವಿವೇಚನೆಯ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಎಂಬ ಮೊದಲುಮಾಡಿ ಮುಂದೆ ಹೇಳುವ ಶರೀರಾತ್ಮಭಾವವೇ ಕಾರಣವು ಎಂದು ಹೇಳಿರುತ್ತಾರೆ. ಈ ಶಾಸ್ತ್ರದಲ್ಲಿ (ಈ) ಮೊದಲೂ ಇದನ್ನು ಮತ್ತೆಮತ್ತೆ ಹೇಳುತ್ತದೆ. 'ಅವುಗಳೆಲ್ಲವೂ ಆತನ ಶರೀರವು' (ವಿ. ಪು. ೧-೨೨-೮೬), 'ಇದೆಲ್ಲವೂ ಹರಿಯ ಶರೀರವೇ ಅಲ್ಲವೆ?' (ವಿ. ಪು. ೧-೨೨-೩೮), 'ಏಕೆಂದರೆ....ಸರ್ವಭೂತಗಳಿಗೂ ಆತ್ಮನಾಗಿರುವ ಆತನೇ ವಿಶ್ವರೂಪನು, ಅವ್ಯಯನಾಗಿರುವವನು' (ವಿ. ಪು. ೧-೨-೬೯). ಶರೀರಾತ್ಮಭಾವಕ್ಕೆ ಅಧೀನವಾಗಿರುವ ಆ ಈ ತಾದಾತ್ಮ್ಯವೇ 'ಜ್ಯೋತಿಗಳು ವಿಷ್ಣುವೇ' ಎಂದು ಸಾಮಾನಾಧಿಕರಣ್ಯದಿಂದ ವ್ಯಪದಿಷ್ಟವಾಗಿರುತ್ತದೆ. ಇಲ್ಲಿ ಅಸ್ತ್ಯಾತ್ಮಕವೂ ನಾಸ್ತ್ಯಾತ್ಮಕವೂ ಆಗಿರುವ ಜಗತ್ತಿನೊಳಗಿರುವ ವಸ್ತುವು ವಿಷ್ಣುವಿನ ಶರೀರವಾಗಿರುವದರಿಂದ ವಿಷ್ಣ್ವಾತ್ಮಕವಾಗಿದೆ ಎಂದಿರುತ್ತದೆ. ಇದು ಇದೆ ಎಂಬ ಸ್ವರೂಪದ್ದು, ಇದು ಇಲ್ಲವೆಂಬ ಸ್ವರೂಪದ್ದು; ಇದು ನಾಸ್ತ್ಯಾತ್ಮಕವಾಗಿರುವದಕ್ಕೆ ಹೇತುವು –ಎಂಬುದನ್ನು 'ಆ ಭಗವಂತನು ಜ್ಞಾನಸ್ವರೂಪನಾಗಿರುವದರಿಂದ' (ವಿ. ಪು. ೨-೧೨-೩೯) ಎಂದು ಹೇಳಿರುತ್ತಾನೆ. ಎಲ್ಲಾ ಕ್ಷೇತ್ರಜ್ಞರ ಆತ್ಮನಾಗಿರುವ ಭಗವಂತನಿಗೆ ಜ್ಞಾನವೇ ಸ್ವಾಭಾವಿಕವಾದ ರೂಪವೇ ಹೊರತು ದೇವಮನುಷ್ಯಾದಿವಸ್ತುವಿನ ರೂಪವಲ್ಲ. ಹೀಗಿರುವದಲ್ಲವೆ, ಆದ್ದರಿಂದಲೇ ಅಚಿದ್ರೂಪವಾಗಿರುವ ದೇವತೆಗಳು, ಮನುಷ್ಯರು, ಬೆಟ್ಟಗಳು, ಕಡಲುಗಳು, ಭೂಮಿ– ಮುಂತಾದವುಗಳೂ ಆತನ ವಿಜ್ಞಾನದ ವಿಜೃಂಭಣೆಯೇ[1], ಅವನು ಜ್ಞಾನವೆಂಬ ಒಂದೇ ಆಕಾರವುಳ್ಳವನಾಗಿದ್ದರೂ ದೇವತೆಯೇ ಮುಂತಾದ ಆಕಾರದಿಂದ ತನ್ನ ಆತ್ಮನಲ್ಲಿ ವೈವಿಧ್ಯವನ್ನು ಮನದಂದುಕೊಂಡ ಕಾರಣದಿಂದ ಆಗಿರುತ್ತವೆ, ದೇವಾದ್ಯಾಕಾರಗಳನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ಕಾರಣವಾಗಿರುವ ಕರ್ಮದಿಂದಾಗಿರುತ್ತವೆ– ಎಂದರ್ಥ. ಅಚಿದ್ವಸ್ತುವು ಕ್ಷೇತ್ರಜ್ಞನ ಕರ್ಮಕ್ಕೆ ಅನುಗುಣವಾದ ಪರಿಣಾಮಕ್ಕೆ ಆಶ್ರಯವಾಗಿದೆಯಷ್ಟೆ. ಆದ್ದರಿಂದ ಅದು 'ಇಲ್ಲ' ಎಂಬ ಶಬ್ದದಿಂದ ಹೇಳಲ್ಪಡತಕ್ಕದ್ದಾಗಿದೆ, ಆದ್ದರಿಂದ ಇನ್ನೊಂದಾದ (ಚಿದಂಶವು) ಅಸ್ತಿಶಬ್ದದಿಂದ ಹೇಳಲ್ಪಡುತ್ತದೆ–ಎಂದು ಹೇಳಿದಂತೆಯೇ ಆಯಿತು.

(ಮೂಲ)

ತದೇವ ವಿವೃಣೋತಿ – 'ಯದಾ ತು ಶುದ್ಧಂ ನಿಜರೂಪಿ' ಇತಿ। ಯದೇತತ್ ಜ್ಞಾನೈಕಾಕಾರಮಾತ್ರವಸ್ತು ದೇವಾದ್ಯಾಕಾರೇಣ ಸ್ವಾತ್ಮನಿ ವೈವಿಧ್ಯಾನು

---

1. ವಿಷ್ಣುಪುರಾಣದ ಮೂಲಶ್ಲೋಕಗಳಿಗೆ ಪೂರ್ವಪಕ್ಷಿಗೂ ಸಿದ್ಧಾಂತಿಗೂ ಸಮ್ಮತವಾದ ಬೇರೆಬೇರೆ ಅರ್ಥವನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ. ಅದನ್ನು ನೋಡಿದರೆ ಈ ಭಾಷ್ಯಭಾಗದ ಅರ್ಥವು ಸ್ಫುಟವಾಗುವದು. ಅಸ್ತಿ (ಇದೆ) ಎಂಬುದು ನಿರ್ವಿಕಾರವಾದ ಜ್ಞಾನರೂಪ ; ಇಲ್ಲ ಎಂಬುದು ವಿಕಾರಿಯಾದ ಜಡರೂಪ– ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡೇ ಈ ಭಾಷ್ಯಭಾಗವನ್ನು ಓದಬೇಕು.

ಸನ್ಧಾನಮೂಲಸರ್ವಕರ್ಮಕ್ಷಯಾತ್ ನಿರ್ದೋಷಂ ಪರಿಶುದ್ಧಂ ನಿಜರೂಪಿ ಭವತಿ, ತದಾ ದೇವಾದ್ಯಾಕಾರೇಣೈಕೀಕೃತ್ಯ ಆತ್ಮಕಲ್ಪನಾಮೂಲಕರ್ಮಫಲಭೂತಾಸ್ತದ್ಭೋಗಾರ್ಥಾ ವಸ್ತುಷು ವಸ್ತುಭೇದಾ ನ ಭವನ್ತಿ । ಯೇ ದೇವಾದಿಷು ವಸ್ತುಷು ಆತ್ಮತಯಾಭಿಮತೇಷು ಭೋಗ್ಯಭೂತಾ ದೇವಮನುಷ್ಯಶೈಲಾಬ್ಧಿಧರಾದಿವಸ್ತುಭೇದಾಃ, ತೇ ತನ್ಮೂಲಭೂತಕರ್ಮಸು ವಿನಷ್ಟೇಷು ನ ಭವನ್ತೀತಿ ಅಚಿದ್ವಸ್ತುನಃ ಕಾದಾಚಿತ್ಕಾವಸ್ಥಾವಿಶೇಷಯೋಗಿತಯಾ ನಾಸ್ತಿಶಬ್ದಾಭಿಧೇಯತ್ವಮ್, ಇತರಸ್ಯ ಸರ್ವದಾ ನಿಜಸಿದ್ಧಜ್ಞಾನೈಕಾಕಾರತ್ವೇನ ಅಸ್ತಿಶಬ್ದಾಭಿಧೇಯತ್ವಮಿತ್ಯರ್ಥಃ ॥

(ಅರ್ಥ)

ಇದನ್ನು, **'ಯದಾ ತು ಶುದ್ಧಂ ನಿಜರೂಪಿ'** (ವಿ.ಪು. ೨-೧೨-೪೦) ಎಂದು ವಿವರಿಸಿದುತ್ತಾರೆ. ಜ್ಞಾನವೆಂಬ ಒಂದೇ ಆಕಾರವುಳ್ಳ ಈ ಆತ್ಮವಸ್ತು ಯಾವಾಗ ದೇವಾದ್ಯಾಕಾರದಿಂದ ತನ್ನಲ್ಲಿ ವೈವಿಧ್ಯವನ್ನು ಅರಿಯುವದಕ್ಕೆ ಮೂಲವಾಗಿರುವ ಕರ್ಮವೆಲ್ಲವೂ ಕ್ಷಯವಾಗಲು ನಿರ್ದೋಷವೂ ಪರಿಶುದ್ಧವೂ ಆಗಿ ತನ್ನ ರೂಪವನ್ನೇ ಪಡೆದುಕೊಂಡದ್ದಾಗುವದೋ, ಆಗ ದೇವಾದ್ಯಾಕಾರದೊಡನೆ ಒಂದುಗೂಡಿಸಿಕೊಂಡು ತನ್ನನ್ನು ಕಲ್ಪಿಸಿಕೊಳ್ಳುವದಕ್ಕೆ ಮೂಲವಾದ ಕರ್ಮದ ಫಲವಾಗಿರುವ ಭೋಗಾರ್ಥಗಳು, ಎಂದರೆ ವಸ್ತುಗಳಲ್ಲಿ ವಸ್ತುಭೇದಗಳು ಇಲ್ಲವಾಗುವವು. ತಾನೆಂದು ಭಾವಿಸಿಕೊಂಡಿದ್ದ ದೇವಾದಿಗಳಲ್ಲಿ ಭೋಗ್ಯವಾಗಿದ್ದ ದೇವ, ಮನುಷ್ಯ, ಬೆಟ್ಟ, ಕಡಲು, ಭೂಮಿ- ಮುಂತಾದ ವಸ್ತುಭೇದಗಳಿದ್ದವಲ್ಲ, ಅವು, ಅವುಗಳಿಗೆ ಮೂಲವಾಗಿದ್ದ ಕರ್ಮಗಳು ನಾಶವಾಗಲು ಇರುವದಿಲ್ಲವಾದ್ದರಿಂದ ಅಚಿದ್ವಸ್ತುವು ಆಯಾ ಕಾಲದ ಅವಸ್ಥೆಯಲ್ಲಿ ಉಂಟಾಗುವದಾದ್ದರಿಂದ 'ಇಲ್ಲ' ಎಂಬ ಶಬ್ದಕ್ಕೆ ಅದು ಅಭಿಧೇಯವಾಗಿರುತ್ತದೆ; ಇನ್ನೊಂದಾದ (ಚಿದಂಶವು) ತನಗೆ ಯಾವಾಗಲೂ ಸಿದ್ಧವಾಗಿರುವ ಜ್ಞಾನವೆಂಬ ಒಂದೇ ಆಕಾರವುಳ್ಳದ್ದಾಗಿರುವದರಿಂದ 'ಇದೆ' ಎಂಬ ಶಬ್ದದಿಂದ ಹೇಳಲ್ಪಡುತ್ತದೆ ಎಂದರ್ಥ.

(ಮೂಲ)

ಪ್ರತಿಕ್ಷಣಮನ್ಯಥಾಭೂತತಯಾ ಕಾದಾಚಿತ್ಕಾವಸ್ಥಾಯೋಗಿನೋಽಚಿದ್ವಸ್ತುನೋ ನಾಸ್ತಿಶಬ್ದಾಭಿಧೇಯತ್ವಮೇವ ಇತ್ಯಾಹ – 'ವಸ್ತ್ವಸ್ತಿ ಕಿಮ್' (ವಿ. ಪು. ೨-೧೨-೪೧) ಇತಿ । ಅಸ್ತಿಶಬ್ದಾಭಿಧೇಯೋ ಹಿ ಆದಿಮಧ್ಯಪರ್ಯನ್ತಹೀನಃ, ಸತತೈಕರೂಪಃ ಪದಾರ್ಥಃ, ತಸ್ಯ ಕದಾಚಿದಪಿ ನಾಸ್ತಿಬುದ್ಧ್ಯನರ್ಹತ್ವಾತ್ । ಅಚಿದ್ವಸ್ತು ಕಿಞ್ಚಿತ್ ಕ್ವಚಿದಪಿ ತಥಾಭೂತಂ ನ ದೃಷ್ಟಚರಮ್ । ತತಃ ಕಿಮ್ ? ಇತ್ಯತ್ರಾಽಽಹ- 'ಯಚ್ಚಾನ್ಯಥಾತ್ವಮ್' (ವಿ. ಪು. ೨-೧೨-೪೧) ಇತಿ । ಯದ್ವಸ್ತು ಪ್ರತಿಕ್ಷಣಮ್ ಅನ್ಯಥಾತ್ವಂ ಯಾತಿ, ತದುತ್ತರೋತ್ತರಾವಸ್ಥಾಪ್ರಾಪ್ತ್ಯಾ ಪೂರ್ವಪೂರ್ವಾವಸ್ಥಾಂ ಜಹಾತೀತಿ ತಸ್ಯ ಪೂರ್ವಾವಸ್ಥಸ್ಯ ಉತ್ತರಾ

ವಸ್ಥಾಯಾಂ ನ ಪ್ರತಿಸನ್ಧಾನಮಸ್ತಿ । ಅತಃ ಸರ್ವದಾ ತಸ್ಯ ನಾಸ್ತಿಶಬ್ದಾಭಿಧೇಯತ್ವಮೇವ । ತಥಾ ಹ್ಯುಪಲಭ್ಯತ ಇತ್ಯಾಹ – 'ಮಹೀ ಘಟತ್ವಮ್' (ವಿ. ಪು. ೨-೧೨-೪೨) ಇತಿ । ಸ್ವಕರ್ಮಣಾ ದೇವಮನುಷ್ಯಾದಿಭಾವೇನ ಸ್ತಿಮಿತಾತ್ಮನಿಶ್ಚಯೈಃ ಸ್ವಭೋಗ್ಯಭೂತಮ್ ಅಚಿದ್ವಸ್ತು ಪ್ರತಿಕ್ಷಣಮ್ ಅನ್ಯಥಾಭೂತಮುಪಲಕ್ಷ್ಯತೇ, ಅನುಭೂಯತೇ ಇತ್ಯರ್ಥಃ । ಏವಂ ಸತಿ ಕಿಮಪಿ ಅಚಿದ್ವಸ್ತು ಅಸ್ತಿಶಬ್ದಾರ್ಹಮ್ ಆದಿಮಧ್ಯಪರ್ಯನ್ತಹೀನಮ್ ಸತತೈಕರೂಪಮ್ ಉಪಲಕ್ಷಿತಮ್ ಅಸ್ತಿ ಕಿಮ್ ? ನ ಹ್ಯಸ್ತಿ ಇತ್ಯಭಿಪ್ರಾಯಃ । ಯಸ್ಮಾದೇವಮ್ ತಸ್ಮಾತ್ ಜ್ಞಾನಸ್ವರೂಪಾತ್ಮವ್ಯತಿರಿಕ್ತಮಚಿದ್ವಸ್ತು ಕದಾಚಿತ್ ಕ್ವಚಿತ್ ಕೇವಲಾಸ್ತಿಶಬ್ದವಾಚ್ಯಂ ನ ಭವತಿ ಇತ್ಯಾಹ– 'ತಸ್ಮಾನ್ನ ವಿಜ್ಞಾನಮೃತೇ' (ವಿ. ಪು. ೨-೧೨-೪೩) ಇತಿ । ಆತ್ಮಾ ತು ಸರ್ವತ್ರ ಜ್ಞಾನೈಕಾಕಾರತಯಾ ದೇವಾದಿಭೇದಪ್ರತ್ಯನೀಕಸ್ವರೂಪೋಽಪಿ ದೇವಾದಿಶರೀರಪ್ರವೇಶಹೇತುಭೂತಸ್ವಕೃತವಿವಿಧಕರ್ಮಮೂಲದೇವಾದಿಭೇದಭಿನ್ನಾತ್ಮಬುದ್ಧಿಭಿಃ, ತೇನ ತೇನ ರೂಪೇಣ ಬಹುಧಾ ಅನುಸಂಹಿತ ಇತಿ ತದ್ಭೇದಾನುಸನ್ಧಾನಂ ನಾತ್ಮಸ್ವರೂಪಪ್ರಯುಕ್ತಮ್ ಇತ್ಯಾಹ 'ವಿಜ್ಞಾನಮೇಕಮ್' (ವಿ. ಪು. ೨-೧೨-೪೩) ಇತಿ ॥

(ಅರ್ಥ)

ಒಂದೊಂದು ಕ್ಷಣದಲ್ಲಿಯೂ ಬೇರೆಬೇರೆಯಾಗುತ್ತಿರುವದರಿಂದ ಯಾವಾಗಲೋ ಬಂದುಹೋಗುವ ಅವಸ್ಥೆಯನ್ನು ಹೊಂದುವ ಅಚಿದ್ವಸ್ತುವು 'ಇಲ್ಲ' ಎಂಬ ಶಬ್ದದಿಂದ ಹೇಳುವದಕ್ಕೆ ತಕ್ಕದ್ದು ಎಂಬುದನ್ನು 'ವಸ್ತ್ವಸ್ತಿ ಕಿಮ್' (ವಿ. ಪು. ೨-೧೨-೪೧) ಎಂಬ ಶ್ಲೋಕದಲ್ಲಿ[1] ಹೇಳಿರುತ್ತದೆ. 'ಇದೆ' ಎಂಬ ಶಬ್ದದಿಂದ ಕರೆಯುವದಕ್ಕೆ ಯೋಗ್ಯವಾದದ್ದು ಮೊದಲು, ನಡುವೆ, ಕೊನೆ- ಎಂಬುದಿಲ್ಲದೆ, ಯಾವಾಗಲೂ ಒಂದೇ ರೂಪವುಳ್ಳದ್ದಾಗಿರುವ ಪದಾರ್ಥವು; ಅದು ಎಂದಿಗೂ 'ಇಲ್ಲ' ಎಂಬ ಅರಿವಿಗೆ ತಕ್ಕದ್ದಾಗಿರುವದಿಲ್ಲ ; ಅಚಿದ್ವಸ್ತುವು ಯಾವದೂ ಎಲ್ಲಿಯೂ ಅಂಥದ್ದಾಗಿರುವದು ಕಂಡುಬಂದಿಲ್ಲ. (ಆಗಲಿ) ಅದರಿಂದೇನು ?– ಎಂದರೆ ಅದಕ್ಕೆ **'ಯಚ್ಚಾನ್ಯಥಾತ್ವಮ್'** (ವಿ. ಪು. ೨-೧೨-೪೧) ಎಂಬ (ವಾಕ್ಯವು) ಉತ್ತರವು. ಯಾವ ವಸ್ತುವು ಒಂದೊಂದು ಕ್ಷಣವೂ ಬೇರೆಬೇರೆಯ ರೂಪವನ್ನು ಪಡೆಯುತ್ತಿರುವದೋ ಅದು ಮುಂದುಮುಂದಿನ ಅವಸ್ಥೆಯನ್ನು ಹೊಂದುವದರಿಂದ ಹಿಂದುಹಿಂದಿನ ಅವಸ್ಥೆಯನ್ನು ಬಿಟ್ಟುಬಿಡುತ್ತದೆಯಾಗಿ ಅದರ ಪೂರ್ವಾವಸ್ಥೆಯು ಮುಂದಿನ ಅವಸ್ಥೆಯಲ್ಲಿ ಗುರುತಿಸುವದಕ್ಕೆ ಬರುತ್ತಿರುವದಿಲ್ಲ ; ಆದ್ದರಿಂದ ಅದು ಯಾವಾಗಲೂ 'ಇಲ್ಲ' ಎಂಬ ಶಬ್ದದಿಂದ ಕರೆಯುವದಕ್ಕೆ ತಕ್ಕದ್ದೇ. ಹಾಗಲ್ಲವೆ ಕಂಡುಬರುತ್ತಿದೆ ?– ಎಂದು **'ಮಹೀ ಘಟತ್ವಮ್'** (ವಿ. ಪು. ೨-೧೨-೪೨)

1. ಅನ್ಯೋನ್ಯಪರಿಣಾಮವುಳ್ಳದ್ದು ಎಂದರ್ಥವೇ ಹೊರತು ಮಿಥ್ಯೆಯೆಂದೇನೂ ಅರ್ಥವಲ್ಲ ಎಂದು ಭಾವ.

ಎಂಬ (ವಾಕ್ಯದಲ್ಲಿ) ಹೇಳಿರುತ್ತಾನೆ. ತನ್ನ ಕರ್ಮದಿಂದ ದೇವತೆ, ಮನುಷ್ಯ-ಮುಂತಾದ ಭಾವವುಂಟಾಗುತ್ತಿರುವವರಿಂದ ಆತ್ಮನಿಶ್ಚಯವನ್ನು ಸ್ಥಿರವಾಗಿ ಪಡೆದು ಕೊಂಡವರಿಗೆ ತಮಗೆ ಭೋಗ್ಯವಾಗಿರುವ ಅಚಿದ್ವಸ್ತುವು ಪ್ರತಿಕ್ಷಣವೂ ಬೇರೆಬೇರೆ ಯಾಗುತ್ತಿರುವದು ಕಂಡುಬರುತ್ತದೆ, ಅನುಭವಕ್ಕೆ ಬರುತ್ತದೆ- ಎಂದರ್ಥ. ಹೀಗಿರುವಲ್ಲಿ ಯಾವದಾದರೊಂದು ಅಚಿದ್ವಸ್ತುವು ಇದೆ ಎಂಬ ಶಬ್ದಕ್ಕೆ ತಕ್ಕದ್ದಾಗಿ, ಮೊದಲು, ನಡುವೆ, ಕೊನೆ- ಎಂಬಿವಿಲ್ಲದೆ ಯಾವಾಗಲೂ ಒಂದೇ ರೂಪದಲ್ಲಿರು ವದು ಕಂಡಿರುವದಿದೆಯೇನು? ಇಲ್ಲವೇಇಲ್ಲ- ಎಂದು ಅಭಿಪ್ರಾಯ.

ಹೀಗಿದೆಯಲ್ಲವೆ, (ವಸ್ತುಸ್ಥಿತಿ,)? ಆದ್ದರಿಂದ ಜ್ಞಾನಸ್ವರೂಪನಾದ ಆತ್ಮನಿ ಗಿಂತ ಅತಿರಿಕ್ತವಾಗಿರುವ ಅಚಿದ್ವಸ್ತು ಎಂದಾದರೂ ಎಲ್ಲಿಯಾದರೂ ಬರಿಯ 'ಇದೆ' ಎಂಬ ಶಬ್ದಕ್ಕೆ ವಾಚ್ಯವಾದದ್ದು ಇರುವದೇಇಲ್ಲ ಎಂದು **'ತಸ್ಮಾನ್ನ ವಿಜ್ಞಾನ-ಮೃತೇ'** (ವಿ. ಪು. ೨-೧೨-೪೩) ಎಂಬ (ವಾಕ್ಯ)ದಿಂದ ಹೇಳಿರುತ್ತಾನೆ. ಆತ್ಮ ನಾದರೊ, ಎಲ್ಲೆಲ್ಲಿಯೂ ಜ್ಞಾನವೆಂಬ ಒಂದೇ ಆಕಾರವುಳ್ಳವನಾಗಿರುವದರಿಂದ ದೇವತೆಯೇ ಮುಂತಾದ ಭೇದಕ್ಕೆ ವಿರುದ್ಧವಾದ ಸ್ವರೂಪವುಳ್ಳವನಾಗಿದ್ದರೂ ದೇವಾದಿಗಳ ಶರೀರದಲ್ಲಿ ಪ್ರವೇಶಿಸುವದಕ್ಕೆ ಕಾರಣವಾದ ತಾನು ಮಾಡಿದ ಬಗೆಬಗೆಯ ಕರ್ಮದಿಂದಾದ ದೇವತೆಯೇ ಮುಂತಾದ ಭೇದದ ಬುದ್ಧಿಯುಳ್ಳವ ನಾದ್ದರಿಂದ[1] ಆಯಾ ರೂಪದಿಂದ ಬಲುಬಗೆಯಿಂದ ಭಾವಿಸಲ್ಪಡುತ್ತಿರುವನು. ಆದ್ದರಿಂದ ಆ ಭೇದಭಾವನೆಯು ಆತ್ಮಭೇದದಿಂದ ಆದದ್ದಲ್ಲ ಎಂಬುದನ್ನು 'ವಿಜ್ಞಾನಮೇಕಮ್' (ವಿ. ಪು. ೨-೧೨-೪೩) ಎಂಬ ವಾಕ್ಯದಿಂದ ಹೇಳಿರುತ್ತಾನೆ.

(ಮೂಲ)

ಆತ್ಮಸ್ವರೂಪಂ ತು ಕರ್ಮರಹಿತಮ್ ; ತತ ಏವ ಮಲರೂಪಪ್ರಕೃತಿಸ್ಪರ್ಶ ರಹಿತಮ್ । ತತಶ್ಚ ತತ್ಪ್ರಯುಕ್ತಶೋಕಮೋಹಲೋಭಾದ್ಯಶೇಷಹೇಯಗುಣಾ ಸಙ್ಗಿ, ಉಪಚಯಾಪಚಯಾನರ್ಹತಯಾ ಏಕಮ್, ತತ ಏವ ಸದೈಕರೂಪಮ್। ತಚ್ಚ ವಾಸುದೇವಶರೀರಮಿತಿ ತದಾತ್ಮಕಮ್, ಅತದಾತ್ಮಕಸ್ಯ ಕಸ್ಯಚಿದಪ್ಯ ಭಾವಾತ್ ಇತ್ಯಾಹ 'ಜ್ಞಾನಂ ವಿಶುದ್ಧಮ್' (ವಿ. ಪು. ೨-೧೨-೪೪) ಇತಿ। ಚಿದಂಶಃ ಸದೈಕರೂಪತಯಾ ಸರ್ವದಾ ಅಸ್ತಿಶಬ್ದವಾಚ್ಯಃ। ಅಚಿದಂಶಸ್ತು ಕ್ಷಣಪರಿಣಾಮಿತ್ವೇನ ಸರ್ವದಾ ನಾಶಗರ್ಭ ಇತಿ ಸರ್ವದಾ ನಾಸ್ತಿಶಬ್ದಾಭಿ ಧೇಯಃ । ಏವಂರೂಪಚಿದಚಿದಾತ್ಮಕಂ ಜಗತ್ ವಾಸುದೇವಶರೀರಂ ತದಾತ್ಮಕ

---

1. ದೇವತೆಗಳು ಮುಂತಾದ ಭೇದವು ಪ್ರಕೃತಿಪರಿಣಾಮವಾದ ದೇಹದಿಂದಾದದ್ದೇ ಹೊರತು ಆತ್ಮಭೇದದಿಂದಾದದ್ದಲ್ಲ- ಎಂಬುದನ್ನು ರಾಮಾನುಜರು ಮತ್ತೆಮತ್ತೆ ಹೇಳು ತ್ತಿದಾರೆ. ಈ ಆತ್ಮನಿಗಿಂತ ವ್ಯತಿರಿಕ್ತವಾಗಿ ಪರಮಾತ್ಮನು ಇರುತ್ತಾನಾಗಿ ಈ ಭೇದಬುದ್ಧಿ ಯನ್ನು ಪರಮಾತ್ಮನ ವಿಷಯಕ್ಕೆ ಅಂಟಿಸಬಾರದೆಂಬುದು ಅವರ ಆಶಯ.

ಮಿತಿ ಜಗದ್ಯಾಥಾತ್ಮ್ಯಂ ಸಮ್ಯಗುಕ್ತಮ್ ಇತ್ಯಾಹ 'ಸದ್ಭಾವ ಏವಮ್' (ವಿ. ಪು. ೨-೧೨-೪೫) ಇತಿ । ಅತ್ರ 'ಸತ್ಯಮ್', 'ಅಸತ್ಯಮ್' ಇತಿ 'ಯದಸ್ತಿ ಯನ್ನಾಸ್ತಿ' (ವಿ. ಪು. ೨-೧೨-೩೮) ಇತಿ ಪ್ರಕ್ರಾನ್ತಸ್ಯ ಉಪಸಂಹಾರಃ । ಏತತ್ ಜ್ಞಾನೈಕಾ ಕಾರತಯಾ ಸಮಮ್ ಅಶಬ್ದಗೋಚರಸ್ವರೂಪಭೇದಮೇವ ಅಚಿನ್ಮಿಶ್ರಂ ಭುವನಾ ಶ್ರಿತಂ ದೇವಮನುಷ್ಯಾದಿರೂಪೇಣ ಸಮ್ಯಕ್ವ್ಯವಹಾರಾರ್ಹಭೇದಂ ಯದ್ ವರ್ತತೇ, ತತ್ರ ಹೇತುಃ ಕರ್ಮೈವೇತ್ಯುಕ್ತಮ್ ಇತ್ಯಾಹ – 'ಏತತ್ತು ಯತ್' (ವಿ. ಪು. ೨-೧೨-೪೫) ಇತಿ । ತದೇವ ವಿವೃಣೋತಿ 'ಯಜ್ಞಃ ಪಶುಃ' (ವಿ. ಪು. ೨-೧೨-೪೬) ಇತಿ । ಜಗದ್ಯಾಥಾತ್ಮ್ಯಜ್ಞಾನಸಪ್ರಯೋಜನಂ ಮೋಕ್ಷೋಪಾಯ ಯತನಮ್ ಇತ್ಯಾಹ 'ಯಚ್ಚೈತತ್' (ವಿ. ಪು. ೨-೧೨-೪೭) ಇತಿ ॥

(ಅರ್ಥ)

**ಆತ್ಮಸ್ವರೂಪವಾದರೋ, ಕರ್ಮವಿಲ್ಲದ್ದು**; ಆದ್ದರಿಂದಲೇ ಕಲ್ಮಷರೂಪವಾದ ಪ್ರಕೃತಿಯ ಸ್ಪರ್ಶವಿಲ್ಲದಿದ್ದು. ಆದ್ದರಿಂದ ಅದರಿಂದುಂಟಾದ ಶೋಕ, ಮೋಹ, ಲೋಭ- ಮುಂತಾದ ಹೇಯಗುಣಗಳ ಅಂಟಿಲ್ಲದ್ದು. ಹೆಚ್ಚು ಕುಂದುಗಳಿಗೆ ತಕ್ಕದ್ದಲ್ಲವಾದ್ದರಿಂದ ಒಂದೇ (ಆಗಿರುತ್ತದೆ), ಆದ್ದರಿಂದಲೇ ಯಾವಾಗಲೂ ಒಂದೇ ರೂಪವುಳ್ಳದ್ದು. **ಮತ್ತು ಅದು ವಾಸುದೇವನ ಶರೀರವಾಗಿರುವದ ರಿಂದ ಆತನನ್ನೇ ತನ್ನ ಆತ್ಮವಾಗುಳ್ಳದ್ದು. ಏಕೆಂದರೆ ಆತನನ್ನು ತನ್ನ ಆತ್ಮವಾಗಿಲ್ಲದೆ ಉಂಟಾಗಿರುವದು ಯಾವದೊಂದೂ ಇರುವದೇಇಲ್ಲ** ಎಂಬ ಅಭಿಪ್ರಾಯದಿಂದ 'ಜ್ಞಾನವು ವಿಶುದ್ಧವಾಗಿರುತ್ತದೆ' (ವಿ.ಪು. ೨-೧೨-೪೪) ಎಂದಿರುತ್ತಾನೆ. ಚಿದಂಶವು ಯಾವಾಗಲೂ ಒಂದೇ ರೂಪವುಳ್ಳದ್ದಾಗಿರುವದರಿಂದ ಯಾವಾಗಲೂ 'ಇದೆ' ಎಂಬ ಶಬ್ದಕ್ಕೆ ವಾಚ್ಯವು ; ಅಚಿದಂಶವಾದರೊ ಒಂದೊಂದು ಕ್ಷಣದಲ್ಲಿಯೂ ಮಾರ್ಪಡುತ್ತಿರುವದರಿಂದ ಯಾವಾಗಲೂ ನಾಶವನ್ನೇ ಗರ್ಭದಲ್ಲಿಟ್ಟುಕೊಂಡಿರುತ್ತದೆಯಾಗಿ ಯಾವಾಗಲೂ 'ಇಲ್ಲ'ವೆಂಬ ಶಬ್ದದಿಂದಲೇ ಹೇಳುವದಕ್ಕೆ ತಕ್ಕದ್ದು. ಈ ರೂಪದ ಚಿದಚಿದಾತ್ಮಕವಾದ ಜಗತ್ತು ವಾಸುದೇವನ ಶರೀರವು. ಆತನನ್ನೇ 'ಆತ್ಮನಾಗಿ ಉಳ್ಳದ್ದು' ಜಗತ್ತಿನ ಯಾಥಾತ್ಮ್ಯವನ್ನು ಸರಿಯಾಗಿ ಹೇಳಿದ್ದಾಯಿತು –ಎಂದು 'ಈ ರೀತಿಯಲ್ಲಿ ಸದ್ಭಾವವನ್ನು ನಿನಗೆ ಹೇಳಿದ್ದಾಯಿತು' (ವಿ. ಪು. ೨-೧೨-೪೫) ಎಂಬ (ಶ್ಲೋಕದಿಂದ) ಹೇಳಿರುತ್ತಾನೆ. ಇಲ್ಲಿ '(ಜ್ಞಾನವು) ಸತ್ಯವು, ಮಿಕ್ಕದ್ದು ಅಸತ್ಯವು' ಎಂದು 'ಯಾವದು ಇದೆಯೊ, ಯಾವದಿಲ್ಲವೋ' (ವಿ. ಪು. ೨-೧೨-೩೮) ಎಂದು (ಹಿಂದೆ) ಉಪಕ್ರಮದಲ್ಲಿ ಹೇಳಿದ್ದನ್ನು ಉಪಸಂಹಾರಮಾಡಿರುತ್ತದೆ. ಈ ಜ್ಞಾನೈಕಾಕಾರದಿಂದ ಸಮವಾಗಿರು ವದು ಶಬ್ದಕ್ಕೆ ಗೋಚರವಲ್ಲದ ಸ್ವರೂಪಭೇದವುಳ್ಳದ್ದಾಗಿದ್ದರೂ ಅಚಿನ್ಮಿಶ್ರವಾಗಿ ಭುವನಾಶ್ರಿತವಾಗಿ ದೇವಮನುಷ್ಯಾದಿರೂಪದಿಂದ ಚೆನ್ನಾಗಿ ವ್ಯವಹಾರಕ್ಕೆ ಭೇದ

ವೃಕ್ಷವಾಗಿರುವನಲ್ಲ, ಇದಕ್ಕೆ ಕರ್ಮವೇ ಹೇತು ಎಂದು ಹೇಳಿದ್ದಾಗಿದೆ ಎಂಬುದನ್ನು 'ಏತತ್ತು' (ವಿ. ಪು. ೨-೧೨-೪೫) ಎಂಬ (ಶ್ಲೋಕಾರ್ಧದಲ್ಲಿ) ಹೇಳಿರುತ್ತಾನೆ. ಇದನ್ನೇ 'ಯಜ್ಞಃ ಪಶುಃ' (ವಿ. ಪು. ೨-೧೨-೪೬) ಎಂಬ (ಶ್ಲೋಕದಲ್ಲಿ) ವಿವರಿಸಿರುತ್ತದೆ. ಜಗತ್ತಿನ ಯಾಥಾತ್ಮ್ಯದ ಜ್ಞಾನಕ್ಕೆ ಪ್ರಯೋಜನವೇನೆಂದರೆ ಮೋಕ್ಷೋಪಾಯವನ್ನು ಯತ್ನದಿಂದ ಮಾಡುವದೇ ಎಂಬುದನ್ನು 'ಯುಕ್ತ್ಯೈತೇನ' (ವಿ. ಪು. ೨-೧೨-೪೭) ಎಂಬ ಶ್ಲೋಕದಲ್ಲಿ ಹೇಳಿರುತ್ತದೆ.

## ಸ್ಮೃತಿಪುರಾಣವಚನಗಳು
## ಅನಿರ್ವಚನೀಯಾವಿದ್ಯಾಪರವಲ್ಲವೆಂಬದರ ಉಪಸಂಹಾರ

(ಮೂಲ)

ಅತ್ರ ನಿರ್ವಿಶೇಷೇ ಪರೇ ಬ್ರಹ್ಮಣಿ ತದಾಶ್ರಯೇ ಸದಸದನಿರ್ವಚನೀಯೇ ಚಾಜ್ಞಾನೇ, ಜಗತಸ್ತತ್ಕಲ್ಪಿತತ್ವೇ ವಾ ಅನುಗುಣಂ ಕಿಞ್ಚಿದಪಿ ಪದಂ ನ ದೃಶ್ಯತೇ । ಅಸ್ತಿನಾಸ್ತಿಶಬ್ದಾಭಿಧೇಯಂ ಚಿದಚಿದಾತ್ಮಕಂ ಕೃತ್ಸ್ನಂ ಜಗತ್ ಪರಮಸ್ಯ ಪರೇಶಸ್ಯ ಪರಸ್ಯ ಬ್ರಹ್ಮಣೋ ವಿಷ್ಣೋಃ ಕಾರ್ಯತ್ವೇನ ತದಾತ್ಮಕಮ್। ಜ್ಞಾನೈಕಾಕಾರಸ್ಯ ಆತ್ಮನಃ, ದೇವಾದಿವಿವಿಧಾಕಾರಾನುಭವೇ, ಅಚಿತ್ಪರಿಣಾಮೇ ಚ ಹೇತುಃ, ವಸ್ತುಯಾಥಾತ್ಮ್ಯಜ್ಞಾನನಿರೋಧಿ ಕ್ಷೇತ್ರಜ್ಞಾನಾಂ ಕರ್ಮೈವ- ಇತಿ ಪ್ರತಿಪಾದನಾತ್, ಅಸ್ತಿನಾಸ್ತಿಸತ್ಯಾಸತ್ಯಶಬ್ದಾನಾಂ ಚ ಸದಸದನಿರ್ವಚನೀಯವಸ್ತ್ವಭಿಧಾನಾಸಾಮರ್ಥ್ಯಾಚ್ಚ ನಾಸ್ತ್ಯಸತ್ಯಶಬ್ದೌ ಅಸ್ತಿಸತ್ಯಶಬ್ದವಿರೋಧಿನೌ । ಅತಶ್ಚ ತಾಭ್ಯಾಮ್ ಅಸತ್ತ್ವಂ ಹಿ ಪ್ರತೀಯತೇ, ನಾನಿರ್ವಚನೀಯತ್ವಮ್ । ಅತ್ರ ಚಾಚಿದ್ವಸ್ತುನಿ ನಾಸ್ತ್ಯಸತ್ಯಶಬ್ದೌ ನ ತುಚ್ಛತ್ವಮಿಥ್ಯಾತ್ವಪರೌ ಪ್ರಯುಕ್ತೌ, ಅಪಿ ತು ವಿನಾಶಿತ್ವಪರೌ। 'ವಸ್ತ್ವಸ್ತಿ ಕಿಮ್' (ವಿ.ಪು.೨-೧೨-೪೧), 'ಮಹೀ ಘಟತ್ವಮ್' (ವಿ. ಪು. ೨-೧೨-೪೨) ಇತ್ಯತ್ರಾಪಿ ವಿನಾಶಿತ್ವಮೇವ ಹಿ ಉಪಪಾದಿತಮ್ ; ನ ನಿಷ್ಪ್ರಮಾಣಕತ್ವಂ, ಜ್ಞಾನಬಾಧ್ಯತ್ವಂ ವಾ ; ಏಕೇನಾಕಾರೇಣ ಏಕಸ್ಮಿನ್ ಕಾಲೇ ಅನುಭೂತಸ್ಯ ಕಾಲಾನ್ತರೇ ಪರಿಣಾಮವಿಶೇಷೇಣ ಅನ್ಯಥೋಪಲಬ್ಧ್ಯಾ ನಾಸ್ತಿತ್ವೋಪಪಾದನಾತ್ । ತುಚ್ಛತ್ವಂ ಹಿ ಪ್ರಮಾಣಸಂಬನ್ಧಾನರ್ಹತ್ವಮ್ । ಬಾಧೋಽಪಿ ಯದ್ದೇಶಕಾಲಾದಿಸಂಬನ್ಧಿತಯಾ ಯದಸ್ತೀತ್ಯುಪಲಬ್ಧಮ್, ತಸ್ಯ ತದ್ದೇಶಕಾಲಾದಿಸಂಬನ್ಧಿತಯಾ ನಾಸ್ತೀತ್ಯುಪಲಬ್ಧಿಃ, ನ ತು ಕಾಲಾನ್ತರೇ ಅನುಭೂತಸ್ಯ ಕಾಲಾನ್ತರೇ ಪರಿಣಾಮಾದಿನಾ ನಾಸ್ತೀತ್ಯುಪಲಬ್ಧಿಃ, ಕಾಲಭೇದೇನ ವಿರೋಧಾಭಾವಾತ್ । ಅತೋ ನ ಮಿಥ್ಯಾತ್ವಮ್ ॥

(ಅರ್ಥ)

ಇಲ್ಲಿ ನಿರ್ವಿಶೇಷವಾದ ಪರಬ್ರಹ್ಮದ ವಿಷಯದಲ್ಲಿ, ಮತ್ತು ಅದನ್ನು ಆಶ್ರಯಿಸಿಕೊಂಡಿರುವ ಸದಸದನಿರ್ವಚನೀಯವಾದ ಅಜ್ಞಾನದಲ್ಲಿ,

**ಅಥವಾ ಜಗತ್ತು ಆ (ಅಜ್ಞಾನ)ದಿಂದ ಕಲ್ಪಿತವಾಗಿದೆ ಎಂಬ (ವಿಷಯ) ದಲ್ಲಿ (ಅದಕ್ಕೆ) ಅನುಗುಣವಾದ ಯಾವದೊಂದು ಪದವೂ ಕಾಣಬರುತ್ತಿಲ್ಲ.** ಇದೆ, ಇಲ್ಲ–ಎಂಬ ಶಬ್ದಗಳಿಗೆ ಅಭಿಧೇಯವಾಗಿರುವ ಚಿದಚಿದ್ರೂಪವಾದ ಇಡಿಯ ಜಗತ್ತು ಪರಮನೂ ಪರೇಶನೂ ಬ್ರಹ್ಮವೂ ಆಗಿರುವ ವಿಷ್ಣುವಿನ ಶರೀರವಾಗಿರುವದರಿಂದ ಅದಕ್ಕೆ ಆತನೇ ಆತ್ಮನು. ಜ್ಞಾನೈಕಾಕಾರನಾಗಿರುವ ಆತ್ಮನು ದೇವಾದಿವಿವಿಧಾಕಾರಗಳನ್ನು ಅನುಭವಿಸುತ್ತಿರುವದಕ್ಕೂ ಅಚಿತ್ತಿನ ಪರಿಣಾಮಕ್ಕೂ ಹೇತುವು, ವಸ್ತುವಿನ ಯಾಥಾತ್ಮ್ಯಜ್ಞಾನಕ್ಕೆ ವಿರೋಧಿಯಾದ ಕ್ಷೇತ್ರಜ್ಞರ ಕರ್ಮವೇ –ಎಂದು ಪ್ರತಿಪಾದಿಸಿರುವದರಿಂದಲೂ ಇದೆ, ಇಲ್ಲ, ಸತ್ಯ, ಅಸತ್ಯ– ಎಂಬ ಶಬ್ದಗಳಿಗೆ ಸದಸದನಿರ್ವಚನೀಯವಸ್ತುವನ್ನು ಹೇಳುವ ಸಾಮರ್ಥ್ಯವು ಇಲ್ಲವಾದ್ದರಿಂದಲೂ 'ಇಲ್ಲ', 'ಅಸತ್ಯ' ಎಂಬ ಶಬ್ದಗಳು 'ಇದೆ', 'ಸತ್ಯ' ಎಂಬ ಶಬ್ದಗಳಿಗೆ ವಿರೋಧಿಗಳಾಗಿರುತ್ತವೆ. ಆದ್ದರಿಂದ ಅವುಗಳು ಅಸತ್ತೆಂದಲ್ಲವೆ, ತೋರಿಬರುತ್ತವೆ ? ಅನಿರ್ವಚನೀಯವೆಂದೇನೂ ತೋರಿಬರುವದಿಲ್ಲವಲ್ಲವೆ ? ಮತ್ತು ಇಲ್ಲಿ ಅಚಿದ್ವಸ್ತುವಿನಲ್ಲಿ ಪ್ರಯುಕ್ತವಾಗಿರುವ ನಾಸ್ತಿ, ಅಸತ್ಯ– ಎಂಬ ಶಬ್ದಗಳು ತುಚ್ಛತ್ವದಲ್ಲಾಗಲಿ ಮಿಥ್ಯಾತ್ವದಲ್ಲಾಗಲಿ ತಾತ್ಪರ್ಯವುಳ್ಳವಾಗಿ ಪ್ರಯುಕ್ತವಾಗಿಲ್ಲ; ಮತ್ತೇನೆಂದರೆ ವಿನಾಶಿತ್ವವನ್ನು ಹೇಳುವದಕ್ಕಾಗಿಯೇ ಪ್ರಯುಕ್ತವಾಗಿರುತ್ತವೆ. 'ವಸ್ತ್ವಸ್ತಿ ಕಿಮ್' (ವಿ. ಪು. ೨–೧೨–೪೧), 'ಮಹೀ ಘಟತ್ವಮ್' (ವಿ. ೨–೧೨–೪೨) ಎಂಬೀ (ಶ್ಲೋಕ)ಗಳಲ್ಲಿಯೂ ವಿನಾಶಿತ್ವವನ್ನೇ ಪ್ರತಿಪಾದನೆ ಮಾಡಿರುತ್ತದೆಯೇ ಹೊರತು ನಿಷ್ಪ್ರಮಾಣಕತ್ವವನ್ನಾಗಲಿ ಜ್ಞಾನಬಾಧ್ಯತ್ವವನ್ನಾಗಲಿ (ಪ್ರತಿಪಾದಿಸಿರುವ)ದಿಲ್ಲ. ಏಕೆಂದರೆ ಒಂದು ಆಕಾರದಿಂದ ಒಂದು ಕಾಲದಲ್ಲಿ ಅನುಭವಕ್ಕೆ ಬಂದ (ವಸ್ತುವು) ಕಾಲಾಂತರದಲ್ಲಿ ಒಂದಾನೊಂದು ಪರಿಣಾಮವಿಶೇಷದಿಂದ ಮತ್ತೊಂದು ರೀತಿಯಲ್ಲಿ ತೋರುವದರಿಂದ (ಅದು) ಇಲ್ಲವೆಂದೇ (ಅಲ್ಲಿ) ಪ್ರತಿಪಾದಿಸಿರುತ್ತದೆ. **ತುಚ್ಛವೆಂದರೆ ಪ್ರಮಾಣಸಂಬಂಧಕ್ಕೆ ತಕ್ಕದ್ದಲ್ಲದೆ ಇರುವದು. ಬಾಧವೂ ಯಾವ ದೇಶದ ಅಥವಾ ಕಾಲಾದಿಗಳ ಸಂಬಂಧವುಳ್ಳದ್ದಾಗಿ ಯಾವದು ಇದೆ ಎಂದು ಕಂಡುಬಂದಿದೆಯೋ ಅದು ಅದೇ ದೇಶಕಾಲಾದಿಗಳಿಗೆ ಸಂಬಂಧಿಯಾಗಿ ಇಲ್ಲ ಎಂದು ತೋರಿಬರುವದು: ಇಷ್ಟೇ ಹೊರತು ಒಂದು ಕಾಲದಲ್ಲಿ ಅನುಭೂತವಾದದ್ದು ಮತ್ತೊಂದು ಕಾಲದಲ್ಲಿ ಪರಿಣಾಮಾದಿಗಳಿಂದ, ಇಲ್ಲ ಎಂದು ತೋರುವದಲ್ಲ.**[1]

1. ಒಂದು ಕಡೆಯಲ್ಲಿರುವದು, ಇನ್ನೊಂದು ಕಡೆ ಇಲ್ಲದಿರುವದು ; ಒಂದು ಕಾಲದಲ್ಲಿರುವದು, ಮತ್ತೊಂದು ಕಾಲದಲ್ಲಿ ಇಲ್ಲದಿರುವದು– ಇಷ್ಟುಮಾತ್ರದಿಂದ ಮಿಥ್ಯೆಯಾಗಲಾರದು– ಎಂದರ್ಥ. ಮಿಥ್ಯಾತ್ವಕ್ಕೆ ದೇಶಾಂತರಕಾಲಾಂತರದಲ್ಲಿಲ್ಲವಾಗುವದೆಂಬ ಪೂರ್ವಪಕ್ಷವನ್ನು ಕೆಲವರು ಅದ್ವೈತಿಗಳು ಇಟ್ಟುಕೊಂಡಿದ್ದರೆಂದು ತೋರುತ್ತದೆ. ಭಗವದ್ಗೀತೆಯ (೨–೧೬) ಶಾಂಕರಭಾಷ್ಯಕ್ಕೆ ಆನಂದಗಿರಿಗಳ ಟೀಕೆಯನ್ನು ನೋಡಿ.

ಏಕೆಂದರೆ (ಅಲ್ಲಿ) ಕಾಲಗಳು ಬೇರೆಯಾಗಿರುವದರಿಂದ ವಿರೋಧವಿರುವದಿಲ್ಲ. ಆದ್ದರಿಂದ ಮಿಥ್ಯೆಯಲ್ಲ.

(ಮೂಲ)

ಏತದುಕ್ತಂ ಭವತಿ—ಜ್ಞಾನಸ್ವರೂಪಮ್ ಆತ್ಮವಸ್ತು ಆದಿಮಧ್ಯಪರ್ಯನ್ತಹೀನಂ ಸತತೈಕಸ್ವರೂಪಮಿತಿ ಸ್ವತ ಏವ ಸದಾ ಅಸ್ತಿಶಬ್ದವಾಚ್ಯಮ್ | ಅಚೇತನಂ ತು ಕ್ಷೇತ್ರಜ್ಞಭೋಗ್ಯಭೂತಂ ತತ್ಕರ್ಮಾನುಗುಣಪರಿಣಾಮಿ ವಿನಾಶೀತಿ ಸರ್ವದಾ ನಾಸ್ತ್ಯರ್ಥಗರ್ಭಮಿತಿ ನಾಸ್ತ್ಯಸತ್ಯಶಬ್ದಾಭಿಧೇಯಮ್ ಇತಿ | ಯಥೋಕ್ತಮ್—

**ಯತ್ತು ಕಾಲಾನ್ತರೇಣಾಪಿ ನಾನ್ಯಸಂಜ್ಞಾಮುಪೈತಿ ವೈ |**
**ಪರಿಣಾಮಾದಿಸಂಭೂತಾಂ ತದ್ವಸ್ತು ನೃಪ ತಚ್ಚ ಕಿಮ್ ||**

ವಿ. ಪು. ೨-೧೩-೧೦೦

**ಅನಾಶೀ ಪರಮಾರ್ಥಶ್ಚ ಪ್ರಾಜ್ಞೈರಭ್ಯುಪಗಮ್ಯತೇ |**
**ತತ್ತು ನಾಸ್ತಿ[1] ನ ಸನ್ದೇಹೋ ನಾಶಿದ್ರವ್ಯೋಪಪಾದಿತಮ್ ||**

ವಿ. ಪು. ೨-೧೪-೨೪

ಇತಿ | ದೇಶಕಾಲಕರ್ಮವಿಶೇಷಾಪೇಕ್ಷಯಾ ಅಸ್ತಿತ್ವನಾಸ್ತಿತ್ವಯೋಗಿನಿ ವಸ್ತುನಿ ಕೇವಲಾಸ್ತಿಬುದ್ಧಿಬೋಧ್ಯತ್ವಮ್ ಅಪರಮಾರ್ಥ ಇತ್ಯುಕ್ತಮ್ ; ಆತ್ಮನ ಏವ ಕೇವಲಾಸ್ತಿಬುದ್ಧಿಬೋಧ್ಯತ್ವಮಿತಿ ಸ ಪರಮಾರ್ಥ ಇತ್ಯುಕ್ತಮ್ | ಶ್ರೋತುಶ್ಚ ಮೈತ್ರೇಯಸ್ಯ 'ವಿಷ್ಣ್ವಾಧಾರಂ ಯಥಾ ಚೈತತ್ತ್ರೈಲೋಕ್ಯಂ ಸಮವಸ್ಥಿತಮ್ | ಪರಮಾರ್ಥಶ್ಚ ಮೇ[2] ಪ್ರೋಕ್ತೋ ಯಥಾಜ್ಞಾನಂ ಪ್ರಧಾನತಃ ||' (ವಿ. ಪು. ೨-೧೩-೨) ಇತ್ಯನುಭಾಷಣಾಚ್ಚ 'ಜ್ಯೋತೀಂಷಿ ವಿಷ್ಣುಃ' (ವಿ.ಪು. ೨-೧೨-೩೮) ಇತ್ಯಾದಿಸಾಮಾನಾಧಿಕರಣ್ಯಸ್ಯ ಆತ್ಮಶರೀರಭಾವ ಏವ ನಿಬನ್ಧನಮ್| ಚಿದಚಿದ್ವಸ್ತುನೋಶ್ಚಾಸ್ತಿನಾಸ್ತಿಶಬ್ದಪ್ರಯೋಗನಿಬನ್ಧನಂ ಜ್ಞಾನಸ್ಯಾಕರ್ಮನಿಮಿತ್ತಸ್ವಾಭಾವಿಕರೂಪತ್ವೇನ ಪ್ರಾಧಾನ್ಯಮ್ ; ಅಚಿದ್ವಸ್ತುನಶ್ಚ ತತ್ಕರ್ಮನಿಮಿತ್ತಪರಿಣಾಮಿತ್ವೇನ ಅಪ್ರಾಧಾನ್ಯಮ್ ಇತಿ ಪ್ರತೀಯತೇ ||

(ಅರ್ಥ)

ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ : ಜ್ಞಾನಸ್ವರೂಪವಾದ ಆತ್ಮವಸ್ತುವು ಯಾವಾಗಲೂ ಒಂದೇ ರೂಪವಾಗಿರುವದರಿಂದ ಯಾವಾಗಲೂ ತನ್ನ (ರೂಪ) ದಿಂದಲೇ 'ಇದೆ' ಎಂಬ ಶಬ್ದಕ್ಕೆ ವಾಚ್ಯವಾಗಿರುತ್ತದೆ. ಅಚೇತನವಾದರೊ, ಕ್ಷೇತ್ರಜ್ಞನಿಗೆ ಭೋಗ್ಯವಾಗಿದ್ದುಕೊಂಡು ಅವನ ಕರ್ಮಕ್ಕೆ ಅನುಗುಣವಾಗಿ ಪರಿಣಮಿಸುತ್ತಾ ನಾಶವಾಗುವದಾದ್ದರಿಂದ ಯಾವಾಗಲೂ 'ಇಲ್ಲ', 'ಅಸತ್ಯ' -ಎಂಬ ಶಬ್ದಗಳಿಂದ ಹೇಳುವದಕ್ಕೆ ತಕ್ಕದ್ದು. ಹೀಗೆಂದು 'ಯಾವದು ಕಾಲಾಂತರ

1. 'ನಾಶಿ' ಎಂದು ಮುದ್ರಿತ ಪಾಠ.
2. 'ಪರಮಾರ್ಥಸ್ತು ತೇ' ಎಂದು ಮುದ್ರಿತಪುರಾಣದ ಪಾಠ.

ವಲ್ಲಿಯೂ ಪರಿಣಾಮಾದಿಗಳಿಂದಾದ ಮತ್ತೊಂದು ಹೆಸರನ್ನು ಸುವದಿಲ್ಲವೋ ಆ ವಸ್ತು (ಯಾವದು) ?, ದೊರೆಯೆ, ಹಾಗಿರುವದು ಯಾವದು ? ' (ವಿ. ಪು. ೨–೧೩–೧೦೦), 'ನಾಶವಾಗದೆ ಇರುವದು ಪರಮಾರ್ಥವೆಂದು ಪ್ರಾಜ್ಞರು ಒಪ್ಪಿರುತ್ತಾರೆ. (ಯಾವದು) ನಾಶಿತ್ವವ್ಯದಿಂದ ಉಂಟಾಗಿರುವದೋ ಅದು ನಾಸ್ತಿಯೇ, (ಇಲ್ಲವೇಇಲ್ಲ) ; ಸಂದೇಹವಿಲ್ಲ' (ವಿ. ಪು. ೨–೧೪–೨೪) ಎಂದು ಹೇಳಿಯೂ ಇದೆ. ದೇಶಕಾಲಕರ್ಮವಿಶೇಷಗಳ ಅಪೇಕ್ಷೆಯಿಂದ ಇರುವಿಕೆ, ಇಲ್ಲದಿರುವಿಕೆ– ಇವನ್ನು ಹೊಂದುವ ವಸ್ತುವಿನಲ್ಲಿ ಬರಿಯ 'ಇದೆ' ಎಂಬ ಬುದ್ಧಿಯಿಂದ ತಿಳಿಯಬರುವದೆಂಬುದು ಅಪರಮಾರ್ಥವೇ ಎಂದು (ಅಲ್ಲಿ) ಹೇಳಿರುತ್ತದೆ; ಆತ್ಮನೊಬ್ಬನಿಗೇ ಬರಿಯ 'ಅಸ್ತಿ' ( ಇದೆ ಎಂಬ) ಬುದ್ಧಿಯಿಂದ ತಿಳಿಯುಬರುವಿಕೆಯು ಇದೆಯಾದ್ದರಿಂದ ಅವನು ಪರಮಾರ್ಥ ಎಂದಿದೆ. ಶ್ರೋತೃವಾಗಿರುವ ಮೈತ್ರೇಯನು 'ಈ ತ್ರೈಲೋಕ್ಯವು ವಿಷ್ಣ್ವಾಧಾರವಾಗಿ ಹೇಗಿರುವದೋ (ಅದನ್ನೂ) ಜ್ಞಾನವು ಹೇಗೆ ಸನಾತನಪದಾರ್ಥವೋ (ಅದನ್ನೂ) ನನಗೆ ಹೇಳಿದ್ದೀರಿ' (ವಿ. ಪು. ೨–೧೩–೨) ಎಂದು ಅನುವಾದ ಮಾಡಿರುವವರಿಂದಲೂ 'ಜ್ಯೋತಿಗಳು ವಿಷ್ಣುವೇ' (ವಿ. ಪು. ೨–೧೨–೩೮) ಮುಂತಾದ ಸಾಮಾನಾಧಿಕರಣ್ಯಕ್ಕೆ ಆತ್ಮಶರೀರಭಾವವೇ ಕಾರಣವು ; ಚಿದಚಿದ್ವಸ್ತುಗಳಿಗೆ ಅಸ್ತಿ (ಇದೆ), ನಾಸ್ತಿ (ಇಲ್ಲ) ಎಂಬ ಶಬ್ದಗಳ ಸಂಬಂಧಕ್ಕೆ ಕಾರಣವು ಜ್ಞಾನಕ್ಕೆ ಕರ್ಮನಿಮಿತ್ತವಲ್ಲದೆ ಸ್ವಾಭಾವಿಕವಾಗಿರುವದರಿಂದ ಮುಖ್ಯವು, ಅಚಿದ್ವಸ್ತುವಿಗೆ ಆ (ಆತ್ಮನ) ಕರ್ಮನಿಮಿತ್ತವಾದ ಪರಿಣಾಮಿತ್ವವಿರುವದರಿಂದ ಅಪ್ರಾಧಾನ್ಯವು[1] ಎಂದು ಗೊತ್ತಾಗುತ್ತದೆ.

## (6) ಅವಿದ್ಯಾನಿವರ್ತಕಾನುಪಪತ್ತಿ

(ಮೂಲ)

ಯದುಕ್ತಮ್ 'ನಿರ್ವಿಶೇಷಬ್ರಹ್ಮವಿಜ್ಞಾನಾದೇವ ಅವಿದ್ಯಾನಿವೃತ್ತಿಂ ವದನ್ತಿ ಶ್ರುತಯಃ' – ಇತಿ, ತದಸತ್ ; 'ವೇದಾಹಮೇತಂ ಪುರುಷಂ ಮಹಾನ್ತಮ್ | ಆದಿತ್ಯವರ್ಣಂ ತಮಸಃ ಪರಸ್ತಾತ್' (ಶ್ವೇ. ೩–೮), 'ತಮೇವಂ ವಿದ್ವಾನಮೃತ ಇಹ ಭವತಿ | ನಾನ್ಯಃ ಪನ್ಥಾ ವಿದ್ಯತೇಽಯನಾಯ' (ತೈ. ಆ. ೩–೧೩–೧), 'ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ', 'ನ ತಸ್ಯೇಶೇ ಕಶ್ಚನ ತಸ್ಯ ನಾಮ ಮಹದ್ಯಶಃ', 'ಯ ಏವಂ ವಿದುರಮೃತಾಸ್ತೇ ಭವನ್ತಿ' (ತೈ.ನಾ. ೧–೧೨, ೩) ಇತ್ಯಾದ್ಯನೇಕವಾಕ್ಯವಿರೋಧಾತ್ | ಬ್ರಹ್ಮಣಃ ಸವಿಶೇಷತ್ವಾದೇವ ಸರ್ವಾಣ್ಯಪಿ ವಾಕ್ಯಾನಿ ಸವಿಶೇಷಜ್ಞಾನಾದೇವ ಮೋಕ್ಷಂ ವದನ್ತಿ | ಶೋಧಕವಾಕ್ಯಾನ್ಯಪಿ ಸವಿಶೇಷಮೇವ ಬ್ರಹ್ಮ ಪ್ರತಿಪಾದಯನ್ತಿ – ಇತ್ಯುಕ್ತಮ್ ||

---

1. ಪ್ರಾಧಾನ್ಯವೆಂದರೆ ಉತ್ಕರ್ಷ, ಅಪ್ರಾಧಾನ್ಯವೆಂದರೆ ಅಪಕರ್ಷ. ಜ್ಞಾನವು ಚಿದ್ವಸ್ತುವಿಗೆ ಸ್ವಭಾವವಾದ್ದರಿಂದ ಅದು ಪ್ರಧಾನ, ಅಚಿದ್ವಸ್ತುವು ಪರಿಣಾಮಿಯಾದ್ದರಿಂದ ಅದು ಅಪ್ರಧಾನ– ಎಂದು ಶ್ರು. ಪ್ರ.

(ಅರ್ಥ)

ನಿರ್ವಿಶೇಷಬ್ರಹ್ಮವಿಜ್ಞಾನದಿಂದಲೇ ಅವಿದ್ಯೆಯ ನಿವೃತ್ತಿಯಾಗುವದೆಂದು ಶ್ರುತಿಗಳು ಹೇಳುತ್ತವೆಯೆಂದಿರಲ್ಲ, ಅದು ಸರಿಯಲ್ಲ. ಏಕೆಂದರೆ 'ಆದಿತ್ಯವರ್ಣನಾಗಿ ತಮಸ್ಸಿನ ಆಚೆಯಿರುವ ಈ ಮಹಾಪುರುಷನನ್ನು ನಾನು ಬಲ್ಲೆನು' (ಶ್ವೇ. ೩-೮), 'ಆತನನ್ನು ಹೀಗೆ ಅರಿತುಕೊಂಡರೆ ಇಲ್ಲಿ ಅಮೃತನಾಗುತ್ತಾನೆ; (ಮೋಕ್ಷವನ್ನು) ಪಡೆಯುವದಕ್ಕೆ ಮತ್ತೆ ಯಾವ ಹಾದಿಯೂ ಇಲ್ಲ' (ತೈ. ಆ. ೩-೧೩-೧), 'ಮಿಂಚಿನ ವರ್ಣದ ಪುರುಷನಿಂದಲೇ ಎಲ್ಲಾ ನಿಮಿಷಗಳೂ ಉಂಟಾದವು. ಆತನನ್ನು ಆಳುವವನು ಯಾವನೊಬ್ಬನೂ ಇಲ್ಲ, ಆತನ ಹೆಸರು ಮಹಾಯಶಸ್ಸು; ಯಾರು ಹೀಗೆಂದು ಅರಿಯುವರೋ ಅವರು ಅಮೃತರಾಗುತ್ತಾರೆ' (ತೈ. ನಾ. ೧-೧೨, ೩)– ಮುಂತಾದ ಅನೇಕ ವಾಕ್ಯಗಳಿಗೆ (ಇದು) ವಿರುದ್ಧವಾಗಿರುತ್ತದೆ.[1] ಬ್ರಹ್ಮವು ಸವಿಶೇಷವಾಗಿರುವದರಿಂದಲೇ ಎಲ್ಲಾ ವಾಕ್ಯಗಳೂ ಸವಿಶೇಷ(ವಸ್ತುವಿನ) ಜ್ಞಾನದಿಂದಲೇ ಮೋಕ್ಷವೆಂದು ಹೇಳುತ್ತಿವೆ. ಶೋಧಕವಾಕ್ಯಗಳೂ[2] ಸವಿಶೇಷವಾಗಿರುವ ಬ್ರಹ್ಮವನ್ನೇ ಹೇಳುತ್ತವೆ ಎಂದು (ಹಿಂದೆಯೇ) ಹೇಳಿದ್ದೇವೆ.

(ಮೂಲ)

ತತ್ತ್ವಮಸ್ಯಾದಿವಾಕ್ಯೇಷು ಸಾಮಾನಾಧಿಕರಣ್ಯಂ ನ ನಿರ್ವಿಶೇಷವಸ್ತ್ವೈಕ್ಯಪರಮ್, ತತ್ತ್ವಂಪದಯೋಃ ಸವಿಶೇಷಬ್ರಹ್ಮಾಭಿಧಾಯಿತ್ವಾತ್ । ತತ್ಪದಂ ಹಿ ಸರ್ವಜ್ಞಂ ಸತ್ಯಸಙ್ಕಲ್ಪಂ ಜಗತ್ಕಾರಣಂ ಬ್ರಹ್ಮ ಪರಾಮೃಶತಿ[3] 'ತದೈಕ್ಷತ ಬಹು ಸ್ಯಾಮ್' ಇತ್ಯಾದಿಷು ತಸ್ಯೈವ ಪ್ರಕೃತತ್ವಾತ್ । ತತ್ಸಮಾನಾಧಿಕರಣಂ ತ್ವಂ ಪದಂ ಚ ಅಚಿದ್ವಿಶಿಷ್ಟಜೀವಶರೀರಕಂ ಬ್ರಹ್ಮ ಪ್ರತಿಪಾದಯತಿ, ಪ್ರಕಾರದ್ವಯಾವಸ್ಥಿತೈಕವಸ್ತುಪರತ್ವಾತ್ ಸಾಮಾನಾಧಿಕರಣ್ಯಸ್ಯ । ಪ್ರಕಾರದ್ವಯಪರಿತ್ಯಾಗೇ ಪ್ರವೃತ್ತಿನಿಮಿತ್ತಭೇದಾಸಮ್ಭವೇನ ಸಾಮಾನಾಧಿಕರಣ್ಯಮೇವ ಪರಿತ್ಯಕ್ತಂ ಸ್ಯಾತ್, ದ್ವಯೋಃ ಪದಯೋರ್ಲಕ್ಷಣಾ ಚ । ಸೋಽಯಂ ದೇವದತ್ತಃ ಇತ್ಯತ್ರಾಪಿ ನ ಲಕ್ಷಣಾ; ಭೂತವರ್ತಮಾನಕಾಲಸಂಬನ್ಧಿತಯಾ ಐಕ್ಯಪ್ರತೀತ್ಯವಿರೋಧಾತ್ । ದೇಶಭೇದವಿರೋಧಶ್ಚ ಕಾಲಭೇದೇನ ಪರಿಹೃತಃ । 'ತದೈಕ್ಷತ ಬಹು ಸ್ಯಾಮ್' ಇತ್ಯುಪಕ್ರಮವಿರೋಧಶ್ಚ । ಏಕವಿಜ್ಞಾನೇನ ಸರ್ವವಿಜ್ಞಾನಪ್ರತಿಜ್ಞಾನಂ[4] ಚ ನ

---

1. ಆದಿತ್ಯವರ್ಣ, ಮಿಂಚಿನಬಣ್ಣ– ಮುಂತಾದವುಗಳು ಸವಿಶೇಷವಸ್ತುವನ್ನೇ ಹೇಳುತ್ತವೆ ಎಂದು ಭಾವ.

2. 'ಸತ್ಯಂ ಜ್ಞಾನಮನನ್ತಮ್' ಮುಂತಾದವುಗಳು, ಇವೂ ಸತ್ಯತ್ವಾದಿಧರ್ಮವುಳ್ಳ ವಸ್ತುವನ್ನೇ ಹೇಳುತ್ತವೆ– ಎಂದು ಭಾವ. ಹಿಂದೆ ೪೮–೫೦ನೆಯ ಪುಟಗಳನ್ನು ನೋಡಿ.

3. 'ಪ್ರತಿಪಾದಯತಿ' ಪಾ॥ 4. 'ಪ್ರತಿಜ್ಞಾ' ಪೂ॥ ಪಾಠ.

ಘಟತೇ ; ಜ್ಞಾನಸ್ವರೂಪಸ್ಯ ನಿರಸ್ತನಿಖಿಲದೋಷಸ್ಯ ಸರ್ವಜ್ಞಸ್ಯ ಸಮಸ್ತಕಲ್ಯಾಣ ಗುಣಾತ್ಮಕಸ್ಯ ಅಜ್ಞಾನಂ ತತ್ಕಾರ್ಯಾನನ್ತಾಪುರುಷಾರ್ಥಾಶ್ರಯತ್ವಂ ಚ ಭವತಿ[1] ||

ಬಾಧಾರ್ಥತ್ವೇ ಚ ಸಾಮಾನಾಧಿಕರಣ್ಯಸ್ಯ ತ್ವಂತತ್ಪದಯೋರ[2]ಧಿಷ್ಠಾನ ಲಕ್ಷಣಾ ನಿವೃತ್ತಿಲಕ್ಷಣಾ ಚ ಇತಿ ಲಕ್ಷಣಾದಯಸ್ತ ಏವ ದೋಷಾಃ ||

(ಅರ್ಥ)

'ತತ್ತ್ವಮಸಿ' (ಅದು ನೀನಾಗಿರುವೆ) ಮುಂತಾದ ವಾಕ್ಯಗಳಲ್ಲಿ[3] **ಸಾಮಾನಾಧಿಕರಣ್ಯವು** ನಿರ್ವಿಶೇಷವಸ್ತುವು ಒಂದೇ ಎಂಬುದನ್ನು (ತಿಳಿಸುವದರಲ್ಲಿ) ತಾತ್ಪರ್ಯವುಳ್ಳದ್ದಲ್ಲ. ಏಕೆಂದರೆ ತತ್ (ಅದು), ತ್ವಂ (ನೀನು) ಎಂಬ ಪದಗಳು ಸವಿಶೇಷಬ್ರಹ್ಮವನ್ನೇ ಹೇಳುತ್ತಿವೆ. ಹೇಗೆಂದರೆ ತತ್ ಎಂಬ ಪದವು ಸರ್ವಜ್ಞವೂ ಸತ್ಯಸಂಕಲ್ಪವೂ ಜಗತ್ಕಾರಣವೂ ಆಗಿರುವ ಬ್ರಹ್ಮವನ್ನು ಪರಾಮರ್ಶಿಸುತ್ತದೆ ; ಏಕೆಂದರೆ 'ಅದು ಬಹುವಾಗುವೆನು, ಎಂದು ಆಲೋಚಿಸಿಕೊಂಡಿತು' ಎಂದುಮುಂತಾಗಿರುವ (ವಾಕ್ಯ)ಗಳಲ್ಲಿ ಅಂಥ (ಬ್ರಹ್ಮವೇ) ಪ್ರಕೃತವಾಗಿದೆ. ತತ್ (ಪದಕ್ಕೆ) ಸಮಾನಾಧಿಕರಣವಾಗಿರುವ ತ್ವಮ್‌ಪದವೂ ಅಚಿದ್ವಿಶಿಷ್ಟಜೀವನನ್ನು ಶರೀರವಾಗುಳ್ಳ ಬ್ರಹ್ಮವನ್ನೇ ಪ್ರತಿಪಾದಿಸುತ್ತದೆ. ಏಕೆಂದರೆ **ಎರಡು ಪ್ರಕಾರಗಳಿಂದೊಡಗೂಡಿರುವ ವಸ್ತುವನ್ನು ತಿಳಿಸುವದರಲ್ಲಿ ಸಾಮಾನಾಧಿಕರಣ್ಯಕ್ಕೆ ತಾತ್ಪರ್ಯವಿರುತ್ತದೆ.**[4] ಎರಡು ಪ್ರಕಾರಗಳನ್ನು ಕೈಬಿಟ್ಟರೆ ಪ್ರವೃತ್ತಿನಿಮಿತ್ತಗಳು ಬೇರೆಬೇರೆಯಾಗಿಲ್ಲದ್ದರಿಂದ ಸಾಮಾನಾಧಿಕರಣ್ಯವನ್ನೇ ಕೈಬಿಟ್ಟಂತೆ ಆದೀತು; ಎರಡು ಪದಗಳಿಗೂ ಲಕ್ಷಣೆಯೂ ಬಂದೊದಗೀತು.[5] 'ಅವನೇ ಈ ದೇವದತ್ತನು' ಎಂಬೀ (ವಾಕ್ಯ)ದಲ್ಲಿಯೂ ಲಕ್ಷಣೆಯಿಲ್ಲ; ಏಕೆಂದರೆ ಭೂತ(ಕಾಲ), ವರ್ತಮಾನ ಕಾಲ- ಎಂಬ (ಕಾಲ)ಭೇದಕ್ಕೆ ಸಂಬಂಧಿಸಿರುವದರಿಂದ (ಅಲ್ಲಿ) ಐಕ್ಯಜ್ಞಾನಕ್ಕೆ

1. ಪೂ|| ಪಾಠ ಸ್ವಲ್ಪ ವ್ಯತ್ಯಸ್ತವಾಗಿದೆ. ಅದಕ್ಕಿಂತ ಇದೇ ಉತ್ತಮ.

2. 'ತತ್ತ್ವಂಪದಯೋಃ' ಪೂ||

3. 'ತತ್ತ್ವಮಸಿ' ಮುಂತಾದ ವಾಕ್ಯಗಳಲ್ಲಿ ಸಾಮಾನಾಧಿಕರಣ್ಯವು ಮತ್ತೆ ಹೇಗೂ ಹೊಂದುವದಿಲ್ಲವಾಗಿ ನಿರ್ವಿಶೇಷಬ್ರಹ್ಮವನ್ನೇ ಅವು ಹೇಳುತ್ತವೆ- ಎಂದು ಒಪ್ಪಬೇಕು ಎಂಬ ಮತವನ್ನು ಶಂಕಿಸಿ ಪರಿಹರಿಸುತ್ತಿದಾರೆ. ಶ್ರು. ಪ್ರ.

4. ಕನ್ನೈದಿಲೆ ಎಂಬಲ್ಲಿ ಕಪ್ಪು, ನೈದಿಲೆ- ಎಂಬ ಶಬ್ದಗಳು ಬೇರೆಬೇರೆಯ ಪ್ರವೃತ್ತಿನಿಮಿತ್ತಗಳಾದ ಕಪ್ಪು, ನೈದಿಲೆಗಳನ್ನು ಹೇಳುತ್ತಿದ್ದು ಕನ್ನೈದಿಲೆ ಎಂಬ ಪ್ರಕಾರದ್ವಯವುಳ್ಳ ಒಂದೇ ವಸ್ತುವನ್ನು ಹೇಳುವಂತೆ, ಸಾಮಾನಾಧಿಕರಣ್ಯಕ್ಕೆ ಈ ಲಕ್ಷಣವಿರಬೇಕು ಎಂದು ವ್ಯಾಕರಣನಿಯಮವನ್ನನುಸರಿಸಿ ಹೀಗೆಂದಿದೆ.

5. ತತ್ ತ್ವಮ್- ಎಂಬೀ ಪದಗಳು ವಿರುದ್ಧಾರ್ಥವನ್ನು ಹೇಳುವದರಿಂದ ಸಾಮಾನಾಧಿಕರಣ್ಯವು ಹೊಂದುವದಕ್ಕಾಗಿ ಲಕ್ಷಣೆಯನ್ನು ಸ್ವೀಕರಿಸಬೇಕು- ಎಂದು ಅದ್ವೈತಿಗಳು ಹೇಳುವದನ್ನು ಇಲ್ಲಿ ಖಂಡಿಸಿದೆ.

ವಿರೋಧವೇ ಇಲ್ಲ[1] ; ದೇಶಭೇದದಿಂದ ವಿರೋಧ– ಎಂಬುದನ್ನು ಕಾಲಭೇದ ದಿಂದಲೇ ಪರಿಹರಿಸಿದಂತಾಯಿತು. 'ಅದು ಬಹುವಾಗುವೆನು ಎಂದು ಆಲೋಚಿಸಿ ಕೊಂಡಿತು' –ಎಂಬ ಉಪಕ್ರಮಕ್ಕೂ (ವಿರೋಧವಾಗುವದು)[2] ; ಒಂದರ ವಿಜ್ಞಾನ ದಿಂದ ಸರ್ವವನ್ನೂ ಅರಿತಂತೆ ಆಗುವದು– ಎಂಬ ಪ್ರತಿಜ್ಞೆಯೂ (ಈ ಪಕ್ಷದಲ್ಲಿ) ಹೊಂದುವದಿಲ್ಲ.[3] ಜ್ಞಾನಸ್ವರೂಪನೂ ಯಾವ ದೋಷವೂ ಇಲ್ಲದವನೂ ಸರ್ವಜ್ಞನೂ ಸಮಸ್ತಕಲ್ಯಾಣಗುಣಾತ್ಮಕನೂ (ಆಗಿರುವ ಪರಮಾತ್ಮನು) ಅಜ್ಞಾನಕ್ಕೂ ಅದರ ಕಾರ್ಯವಾಗಿರುವ ಅನಂತಅಪುರುಷಾರ್ಥಗಳಿಗೂ ಆಶ್ರಯ ನೆಂಬುದೂ ಸಂಭವಿಸುವದಿಲ್ಲ.[4] ಸಾಮಾನಾಧಿಕರಣ್ಯವು ಬಾಧೆಯೆಂಬರ್ಥವನ್ನು ತಿಳಿಸುತ್ತದೆ ಎಂದಾದರೆ ತತ್ ಮತ್ತು ತ್ವಮ್ –ಎಂಬೀ ಪದಗಳು ಅಧಿಷ್ಠಾನವನ್ನು ಲಕ್ಷಣೆಯಿಂದ ತಿಳಿಯಿಸುತ್ತವೆ ಎಂದಾಗುವದು, ನಿವೃತ್ತಿಯನ್ನು ಲಕ್ಷಣೆಯಿಂದ ತಿಳಿಸುತ್ತವೆ ಎಂದೂ ಆಗುವದು ; ಆದ್ದರಿಂದ ಅದೇ ಲಕ್ಷಣಾದಿದೋಷಗಳೇ (ಗಂಟು ಬೀಳುವವು).[5]

(ಮೂಲ)

ಇಯಾಂಸ್ತು ವಿಶೇಷಃ – 'ನೇದಂ ರಜತಮ್' ಇತಿವದಪ್ರತಿಪನ್ನಸ್ಯೈವ ಬಾಧಸ್ಯ ಅಗತ್ಯಾ ಪರಿಕಲ್ಪನಮ್ ; ತತ್ಪದೇನಾಧಿಷ್ಠಾನಾತಿರೇಕಿಧರ್ಮಾನು ಪಸ್ಥಾಪನೇನ ಬಾಧಾನುಪಪತ್ತಿಶ್ಚ । ಅಧಿಷ್ಠಾನಂ ಚ ಪ್ರಾಕ್ ತಿರೋಹಿತಮ್ ಅತಿರೋಹಿತಸ್ವರೂಪಂ ತತ್ಪದೇನೋಪಸ್ಥಾಪ್ಯತೇ ಇತಿ ಚೇತ್, ನ; ಪ್ರಾಗಧಿಷ್ಠಾನಾ ಪ್ರಕಾಶೇ ತದಾಶ್ರಯಭ್ರಮಬಾಧಯೋರಸಂಭವಾತ್ । ಭ್ರಮಾಶ್ರಯಮ್

---

1. ಕಾಲಗಳು ಬೇರೆಬೇರೆಯಾಗಿದ್ದರೂ ದೇವದತ್ತನೆಂಬ ವ್ಯಕ್ತಿಯು ಒಬ್ಬನೇ ಆಗಿರುವದು ವಿರುದ್ಧವೇನೂ ಅಲ್ಲ.

2. ಉಪಕ್ರಮದಲ್ಲಿ ಸವಿಶೇಷವಸ್ತುವನ್ನು ಹೇಳಿದೆ. ತತ್ತ್ವಮಸಿ ಎಂಬುದು ನಿರ್ವಿ ಶೇಷವೆಂದರೆ ಅದಕ್ಕೆ ವಿರುದ್ಧವಾಗುವದು.

3. ಒಂದನ್ನು ತಿಳಿದರೆ ಎಲ್ಲವನ್ನೂ ಅರಿತುಕೊಳ್ಳುವನು ಎಂಬ ಪ್ರತಿಜ್ಞೆ ಹೊಂದ ಬೇಕಾದರೆ ಒಂದಕ್ಕಿಂತ ವ್ಯತಿರಿಕ್ತವಾಗಿ ಮಿಕ್ಕವುಗಳೂ ಇರಬೇಕಷ್ಟೆ ? ಅದೇ ಇಲ್ಲದಿದ್ದರೆ ಈ ಪ್ರತಿಜ್ಞೆ ಹೇಗೆ ಸಂಭವಿಸೀತು ? –ಎಂದು ಭಾವ.

4. ಪರಮಾತ್ಮನೇ ಜೀವನೆಂದಾದರೆ ಈ ದೋಷಗಳು ಗಂಟುಬೀಳುವವು– ಎಂದು ಭಾವ.

5. ಜಾವು ಹಗ್ಗವೇ– ಎಂಬಲ್ಲಿ ಹಾವು ತನ್ನ ಅಧಿಷ್ಠಾನವಾದ ಹಗ್ಗವನ್ನೇ ಲಕ್ಷಣೆ ಯಿಂದ ಹೇಳುತ್ತದೆ. ಹಾಗೆಯೇ ಇಲ್ಲಿ ಎರಡು ಪದಗಳೂ ಲಕ್ಷಣೆಯಿಂದ ನಿರ್ವಿಶೇಷ ವಸ್ತುವನ್ನು ಹೇಳುತ್ತವೆ ಎಂದಾಗುವದು ; ಎರಡೂ ಪದಗಳಿಗೆ ಲಕ್ಷಣೆಯನ್ನು ಹೇಳುವದು ಅಯುಕ್ತ. ಹಾವು ಎಂಬ ಪದವು ಹಾವಿನ ನಿವೃತ್ತಿಯನ್ನು ಲಕ್ಷಣೆಯಿಂದ ಹೇಳುವಂತೆ ಎರಡು ಪದಗಳೂ ತಮ್ಮತಮ್ಮ ವಾಚ್ಯಾರ್ಥದ ನಿವೃತ್ತಿಯನ್ನು ಲಕ್ಷಣೆಯಿಂದ ತಿಳಿಯಿಸುತ್ತವೆ ಎಂದು ಹೇಳಬೇಕಾಗುವದು ; ಅದೂ ಅಯುಕ್ತ ಎಂದು ಭಾವ.

ಅಧಿಷ್ಠಾನಮ್ ಅತಿರೋಹಿತಮ್ ಇತಿ ಚೇತ್, ತದೇವ ಅಧಿಷ್ಠಾನಸ್ವರೂಪಂ ಭ್ರಮವಿರೋಧೀತಿ ತತ್ಪ್ರಕಾಶೇ ಸುತರಾಂ ನ ತದಾಶ್ರಯಭ್ರಮಬಾಧೌ। ಅತೋಽಧಿಷ್ಠಾನಾತಿರೇಕಿಪಾರಮಾರ್ಥಿಕಧರ್ಮತಿರೋಧಾನಾನಭ್ಯುಪಗಮೇ ಭ್ರಾನ್ತಿಬಾಧೌ ದುರುಪಪಾದೌ । ಅಧಿಷ್ಠಾನೇ ಹಿ ಪುರುಷಮಾತ್ರಪ್ರಕಾರೇ ಪ್ರತೀಯಮಾನೇ ತದತಿರೇಕಿಣಿ ಪಾರಮಾರ್ಥಿಕೇ ರಾಜತ್ವೇ ತಿರೋಹಿತೇ ಸತ್ಯೇವ ವ್ಯಾಧತ್ವಭ್ರಮಃ। ರಾಜತ್ವೋಪದೇಶೇನ ಚ ತನ್ನಿವೃತ್ತಿರ್ಭವತಿ। ನಾಧಿಷ್ಠಾನಮಾತ್ರೋಪದೇಶೇನ; ತಸ್ಯ ಪ್ರಕಾಶಮಾನತ್ವೇನ ಅನುಪದೇಶ್ಯತ್ವಾತ್ । ಭ್ರಮಾನುಪಮರ್ದಿತತ್ವಾಚ್ಚ ॥

(ಅರ್ಥ)

ಆದರೆ ಇಲ್ಲಿ ಒಂದು ವಿಶೇಷವಿದೆ.[1] (ಅದೇನೆಂದರೆ) 'ಇದು ಬೆಳ್ಳಿಯಲ್ಲ' ಎಂಬಂತೆ ಗೊತ್ತಾಗದೆ ಇದ್ದರೂ[2] ಬಾಧೆಯನ್ನು ಗತ್ಯಂತರವಿಲ್ಲದ್ದರಿಂದ ಕಲ್ಪಿಸುವದು (ಒಂದು); ಮತ್ತು ತತ್ಪದವು ಅಧಿಷ್ಠಾನಕ್ಕಿಂತ ಅತಿರಿಕ್ತವಾದ ಧರ್ಮವನ್ನು ತೋರಿಸಿಕೊಡದೆ ಇರುವದರಿಂದ[3] ಬಾಧೆಯು ಹೊಂದದೆ ಇರುವದು (ಇನ್ನೊಂದು).

(ಶಂಕೆ) :– ಅಧಿಷ್ಠಾನವಾದರೊ, ಮೊದಲು ಮರೆಯಾಗಿತ್ತು ; ಅತಿರೋಹಿತ ಸ್ವರೂಪವನ್ನು[4] ತತ್ಪದವು ತೋರಿಸಿಕೊಡುತ್ತದೆ ಎಂದರೊ ?

(ಪರಿಹಾರ) :– ಹಾಗಲ್ಲ, ಏಕೆಂದರೆ ಅಧಿಷ್ಠಾನವು ತೋರದೆಇದ್ದರೆ, ಅದನ್ನು ಆಶ್ರಯಿಸಿಕೊಂಡು (ಆಗಬೇಕಾದ) ಭ್ರಮೆ, ಬಾಧ– ಇವು ಆಗಲಾರವು.

(ಶಂಕೆ) :– ಭ್ರಮೆಗೆ ಆಶ್ರಯವಾಗಿರುವ ಅಧಿಷ್ಠಾನವು ಮರೆಯಾಗಿಲ್ಲವಲ್ಲ !

(ಪರಿಹಾರ) :– ಅದೇ ಅಧಿಷ್ಠಾನದ ಸ್ವರೂಪವೇ ಭ್ರಮೆಗೆ ವಿರೋಧಿಯಾಗಿರುವದರಿಂದ ಅದನ್ನು ಆಶ್ರಯಿಸಿಕೊಂಡು ಆಗಬೇಕಾಗಿರುವ ಭ್ರಮೆಬಾಧೆಗಳು ಆಗಲೇ ಆರವೆಂಬುದಕ್ಕೆ ಇನ್ನೂ ಹೆಚ್ಚಿನ ಕಾರಣವಿದೆ. ಆದ್ದರಿಂದ ಅಧಿಷ್ಠಾನಕ್ಕಿಂತ ಅತಿರಿಕ್ತವಾಗಿರುವ ಪಾರಮಾರ್ಥಿಕಧರ್ಮವನ್ನೂ, ಅದು ಮರೆಯಾಗುವದನ್ನೂ ಒಪ್ಪದಿದ್ದರೆ ಭ್ರಾಂತಿಬಾಧೆಗಳಿಗೆ ಉಪಪತ್ತಿಯನ್ನು ತೋರಿಸುವದು ಆಗಲಾರದು. ಅಧಿಷ್ಠಾನವಾದ ಪುರುಷನು ಎಂಬಿಷ್ಟೇ ಆಕಾರವು ತೋರುತ್ತಿದ್ದು, ಅದಕ್ಕಿಂತ

---

1. ಹಿಂದೆ ಹೇಳಿದಂತೆ ಎರಡು ಪದಗಳಿಗೂ ಲಕ್ಷಣೆ, ಸಾಮಾನಾಧಿಕರಣ್ಯವನ್ನೇ ಬಿಟ್ಟಂತಾಗುವದು, ಉಪಕ್ರಮವಿರೋಧ, ಬೇರೆಯ ಶ್ರುತಿಗಳಿಗೆ ವಿರೋಧ– ಇವುಗಳ ಜೊತೆಗೆ ಇನ್ನೊಂದು ದೋಷವಿದೆ.

2. ಇದು ತ್ವಂಪದಬೋಧ್ಯವಲ್ಲ ಎಂದು ಪ್ರಮಾಣಾಂತರದಿಂದ ಗೊತ್ತಾಗದೆ ಇದ್ದರೊ?

3. ಇದು ಎಂಬ ಅಧಿಷ್ಠಾನಕ್ಕಿಂತ ವ್ಯತಿರಿಕ್ತವಾದ ಶುಕ್ತಿತ್ವವುಳ್ಳದ್ದು ಎಂಬ ಬೇರೆ ಒಂದು ಧರ್ಮವನ್ನು ತೋರಿಸುವಂತೆ ಇಲ್ಲಿ ಮತ್ತೊಂದು ಧರ್ಮವನ್ನೇ ತೋರಿಸುವದಿಲ್ಲವಾದ್ದರಿಂದ –ಎಂದರ್ಥ.

4. ಅತಿರೋಹಿತತ್ವವೇ ಬೇರೊಂದು ಧರ್ಮ– ಎಂದರೊ ?

ಅತಿರಿಕ್ತವಾದ ಪಾರಮಾರ್ಥಿಕವಾದ ರಾಜತ್ವ(ವೆಂಬ ಧರ್ಮವು ಮರೆಯಾಗಿದ್ದರೇ ಅಲ್ಲವೆ, ವ್ಯಾಧನೆಂಬ ಭ್ರಮವೂ '(ನೀನು) ರಾಜನು' ಎಂಬ ಉಪದೇಶದಿಂದ ಅದರ ನಿವೃತ್ತಿಯೂ ಆದೀತು? ಬರಿಯ ಅಧಿಷ್ಠಾನವನ್ನು ಉಪದೇಶಮಾಡಿದಮಾತ್ರದಿಂದ ಆಗಲಾರದಷ್ಟೆ? ಏಕೆಂದರೆ (ಆ ಅಧಿಷ್ಠಾನವು) ತೋರುತ್ತಲೇಇರುತ್ತದೆ[1] ಯಾದ್ದರಿಂದ ಅದನ್ನು ಉಪದೇಶಮಾಡಬೇಕಾದದ್ದೇಇಲ್ಲ, ಮತ್ತು ಭ್ರಾಂತಿಯಿಂದ (ಅದು) ನಾಶವಾಗಿರುವದೂ ಇಲ್ಲ.[2]

(ಮೂಲ)

ಜೀವಶರೀರಕಜಗತ್ಕಾರಣಬ್ರಹ್ಮಪರತ್ವೇ ಮುಖ್ಯವೃತ್ತಂ ಪದದ್ವಯಮ್ । ಪ್ರಕಾರದ್ವಯವಿಶಿಷ್ಟೈಕವಸ್ತುಪ್ರತಿಪಾದನೇನ ಸಾಮಾನಾಧಿಕರಣ್ಯಂ ಚ ಸಿದ್ಧಮ್। ನಿರಸ್ತನಿಖಿಲದೋಷಸ್ಯ ಸಮಸ್ತಕಲ್ಯಾಣಗುಣಾತ್ಮಕಸ್ಯ ಬ್ರಹ್ಮಣೋ ಜೀವಾನ್ತರ್ಯಾಮಿತ್ವಮಪ್ಯೈಶ್ವರ್ಯಮಪರಂ ಪ್ರತಿಪಾದಿತಂ ಭವತಿ । ಉಪಕ್ರಮಾನುಕೂಲತಾ ಚ । ಏಕವಿಜ್ಞಾನೇನ ಸರ್ವವಿಜ್ಞಾನಪ್ರತಿಜ್ಞೋಪಪತ್ತಿಶ್ಚ; ಸೂಕ್ಷ್ಮಚಿದಚಿದ್ವಸ್ತುಶರೀರಸ್ಯೈವ ಬ್ರಹ್ಮಣಃ ಸ್ಥೂಲಚಿದಚಿದ್ವಸ್ತುಶರೀರತ್ವೇನ ಕಾರ್ಯತ್ವಾತ್ 'ತಮೀಶ್ವರಾಣಾಂ ಪರಮಂ ಮಹೇಶ್ವರಮ್' (ಶ್ವೇ. ೬–೭), 'ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ' (ಶ್ವೇ. ೬–೮), 'ಅಪಹತಪಾಪ್ಮಾ....ಸತ್ಯಕಾಮಃ ಸತ್ಯಸಙ್ಕಲ್ಪಃ' (ಛಾಂ. ೮–೧–೫)– ಇತ್ಯಾದಿ ಶ್ರುತ್ಯನ್ತರಾವಿರೋಧಶ್ಚ ॥

(ಅರ್ಥ)

ಜೀವಶರೀರಕವೂ ಜಗತ್ಕಾರಣವೂ ಆದ ಬ್ರಹ್ಮವನ್ನು ಮುಖ್ಯವೃತ್ತಿಯಿಂದ ಹೇಳುವದರಲ್ಲಿ ತಾತ್ಪರ್ಯ(ವೆಂಬ ಪಕ್ಷದಲ್ಲಿಯಾದರೆ)[3] ಈ ಎರಡು ಪದಗಳು ಮುಖ್ಯವೃತ್ತಿಯಿಂದ (ಪ್ರವರ್ತಿಸುವವು)[4]; ಎರಡು ಪ್ರಕಾರಗಳಿಂದ ವಿಶಿಷ್ಟವಾಗಿರುವ ಒಂದೇ ವಸ್ತುವನ್ನು ತಿಳಿಯಿಸಿಕೊಡುವದರಿಂದ ಸಾಮಾನಾಧಿಕರಣ್ಯವೂ ಸಿದ್ಧವಾಗುತ್ತದೆ.[5] ಯಾವದೊಂದು ದೋಷವೂ ಇಲ್ಲದ ಸಮಸ್ತಕಲ್ಯಾಣಗುಣಾತ್ಮಕ

---

1. ತತ್ಪದದ ಅರ್ಥವಾದ ಚೈತನ್ಯವು ತೋರುತ್ತಲೇಇರುವದರಿಂದ ಅದರ ವಿಷಯಕ್ಕೆ ಭ್ರಾಂತಿಯೇ ಆಗಲಿ ಅದರ ಬಾಧೆಯೇ ಆಗಲಿ ಆಗಲೇಆರದು– ಎಂದರ್ಥ.

2. ರಾಜನಾದವನು ತನ್ನನ್ನು ವ್ಯಾಧನೆಂದು ತಿಳಿದುಕೊಂಡಿರುವಾಗಲೂ ತಾನು ಮನುಷ್ಯನೆಂಬುದು ತಿಳಿದೇಇರುತ್ತದೆ. ಆದ್ದರಿಂದ ಮನುಷ್ಯತ್ವವನ್ನಾಶ್ರಯಿಸಿ ಭ್ರಮೆಯಾಗಲಿ ಬಾಧೆಯಾಗಲಿ ಆಗಲಾರವು. ಮನುಷ್ಯತ್ವಕ್ಕಿಂತ ಅತಿರಿಕ್ತವಾದ ರಾಜತ್ವವು ಮರೆಯಾಗಿದ್ದರೆ 'ನೀನು ರಾಜನು' ಎಂಬ ವಾಕ್ಯದಿಂದ ವ್ಯಾಧಭ್ರಮೆಯು ಹೋಗಬಹುದು.

3. ನಿರ್ವಿಶೇಷಬ್ರಹ್ಮವಾದದಲ್ಲಿ ಹೇಳಿದ ದೋಷಗಳು ಯಾವವೂ ವಿಶಿಷ್ಟಾದ್ವೈತವಾದದಲ್ಲಿಲ್ಲವೆಂಬುದನ್ನು ಈಗ ತೋರಿಸುತ್ತಾರೆ.

4. ಆದ್ದರಿಂದ ಲಕ್ಷಣಾಂಗೀಕಾರದೋಷವಿಲ್ಲ.

5. ಇದು ವ್ಯಾಕರಣಕ್ಕೂ ಸಮ್ಮತವಾಗುತ್ತದೆ.

ವಾದ ಬ್ರಹ್ಮಕ್ಕೆ ಜೀವಾಂತರ್ಯಾಮಿತ್ವವೆಂಬ ಇನ್ನೊಂದು ಈಶ್ವರಧರ್ಮವನ್ನು ಪ್ರತಿಪಾದಿಸಿದಂತೆ ಆಗುತ್ತದೆ.[1] ಉಪಕ್ರಮಕ್ಕೆ ಅನುಕೂಲವೂ ಆಗುತ್ತದೆ. ಒಂದರ ವಿಜ್ಞಾನದಿಂದ ಎಲ್ಲವನ್ನೂ ಅರಿತಂತೆ ಆಗುವದೆಂಬ ಪ್ರತಿಜ್ಞೆಯೂ ಯುಕ್ತವಾಗುತ್ತದೆ ; ಏಕೆಂದರೆ ಸೂಕ್ಷ್ಮಚಿದಚಿದ್ವಸ್ತುಗಳೆಂಬ ಶರೀರವುಳ್ಳ ಬ್ರಹ್ಮವೇ ಸ್ಥೂಲಚಿದಚಿದ್ವಸ್ತುಗಳೆಂಬ ಶರೀರವುಳ್ಳದ್ದಾಗಿರುವದರಿಂದ (ಅದರ) ಕಾರ್ಯವಾಗಿರುತ್ತದೆ.[2] 'ಈಶ್ವರರಿಗೆಲ್ಲ ಪರಮಮಹೇಶ್ವರನಾಗಿರುವ ಆತನನ್ನು' (ಶ್ವೇ. ೬-೭), 'ಈತನ ಶಕ್ತಿಯು ವಿವಿಧವಾಗಿಯೇ ಇರುವದೆಂದು ಶ್ರುತವಾಗಿದೆ' (ಶ್ವೇ. ೬-೮), 'ಅಪಹತಪಾಪ್ಮನು .... ಸತ್ಯಕಾಮನು, ಸತ್ಯಸಂಕಲ್ಪನು' (ಛಾ. ೮-೧-೫)- ಎಂಬಿವೇ ಮುಂತಾದ ಬೇರೆಯ ಶ್ರುತಿಗಳಿಗೆ ವಿರೋಧವೂ ಇರುವದಿಲ್ಲ.[3]

## (ಮೂಲ)

'ತತ್ತ್ವಮಸಿ' ಇತ್ಯತ್ರ ಉದ್ದೇಶ್ಯೋಪಾದೇಯವಿಭಾಗಃ ಕಥಮ್ ?- ಇತಿ ಚೇತ್, ನಾತ್ರ ಕಿಞ್ಚಿದುದ್ದಿಶ್ಯ ಕಿಮಪಿ ವಿಧೀಯತೇ । "ಐತದಾತ್ಮ್ಯಮಿದಂ ಸರ್ವಮ್" (ಛಾಂ. ೬-೮-೭) ಇತ್ಯನೇನೈವ ಪ್ರಾಪ್ತತ್ವಾತ್ । ಅಪ್ರಾಪ್ತೇ ಹಿ ಶಾಸ್ತ್ರಮರ್ಥವತ್ । 'ಇದಂ ಸರ್ವಮ್' ಇತಿ ಸಜೀವಂ ಜಗನ್ನಿರ್ದಿಶ್ಯ ಐತದಾತ್ಮ್ಯಮ್ ಇತಿ 'ತಸ್ಯೈಷ ಆತ್ಮಾ' ಇತಿ ತತ್ರ ಪ್ರತಿಪಾದಿತತ್ವಾತ್ । ತತ್ರ ಚ ಹೇತುರುಕ್ತಃ 'ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಸ್ಸತ್ಪ್ರತಿಷ್ಠಾಃ' (ಛಾಂ. ೬-೮-೬) ಇತಿ ; 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತ ಉಪಾಸೀತ' (ಛಾಂ. ೩-೧೪-೧) ಇತಿವತ್ ॥

## (ಅರ್ಥ)

(ಪ್ರಶ್ನೆ) :- 'ತತ್ತ್ವಮಸಿ' (ಅದೇ ನೀನು) ಎಂಬಲ್ಲಿ ಉದ್ದೇಶವಿಧೇಯಗಳ ವಿಂಗಡ ಹೇಗೆ ?

(ಉತ್ತರ) :- ಇಲ್ಲಿ ಯಾವದನ್ನಾದರೂ ಉದ್ದೇಶಿಸಿ ಏನನ್ನಾದರೂ ವಿಧಿಸಿರುವದಿಲ್ಲ. ಏಕೆಂದರೆ 'ಇದೆಲ್ಲಕ್ಕೂ ಇವೇ ಆತ್ಮನು'[4] (ಐತದಾತ್ಮ್ಯಮಿದಂ....

---

1. ಶರೀರಾತ್ಮಭಾವವೆಂಬ ಸಂಬಂಧವನ್ನು ಒಪ್ಪಿದ್ದರಿಂದಲೇ ಈ ಪ್ರಯೋಜನವು ಸಿದ್ಧವಾಗುತ್ತದೆ.

2. ಆದ್ದರಿಂದ ಸೂಕ್ಷ್ಮಕಾರಣಜ್ಞಾನದಿಂದ ಸ್ಥೂಲಕಾರ್ಯದ ಜ್ಞಾನವೂ ಸಿದ್ಧವಾಗುತ್ತದೆ.

3. ಎಲ್ಲಾ ವಾಕ್ಯಗಳೂ ಸವಿಶೇಷಪರವೆಂದು ಒಪ್ಪುವ ನಮ್ಮ ಸಿದ್ಧಾಂತಕ್ಕೆ ಮಾತ್ರ ಇದು ಹೊಂದುತ್ತದೆ.

4. ನೀನು ಅದು ಎಂದರೆ ನಿನಗೆ ಅದು ಆತ್ಮನು ಎಂದರ್ಥ ; ಹೀಗೆಂದು 'ಐತದಾತ್ಮ್ಯಮಿದಂ ಸರ್ವಮ್' ಎಂಬ ವಾಕ್ಯಭಾಗದಲ್ಲಿಯೇ ಉಕ್ತವಾಗಿದೆ ಎಂದರ್ಥ.

ಛಾಂ. ೬-೮-೭) ಎಂಬಲ್ಲಿಯೇ (ಅದು) ಪ್ರಾಪ್ತವಾಗಿರುತ್ತದೆ. ಮೊದಲು ಸಿದ್ಧವಾಗದೆ ಇರುವದನ್ನು ಹೇಳುವದರಲ್ಲಿಯೇ ಅಲ್ಲವೆ, ಶಾಸ್ತ್ರವು ಸಾರ್ಥಕವೆನಿಸುವದು ? 'ಇದಂ ಸರ್ವಮ್' (ಇದೆಲ್ಲವೂ) ಎಂಬ ಜೀವರ ಸಮೇತವಾದ ಜಗತ್ತನ್ನು ನಿರ್ದೇಶಮಾಡಿ 'ಐತದಾತ್ಮ್ಯಮ್' ಎಂದು ಆ ಜಗತ್ತಿಗೆ ಈ (ಪರಮಾತ್ಮನು) ಆತ್ಮನು- ಎಂಬ (ಆ ಐತದಾತ್ಮ್ಯಮ್ ಎಂಬ ವಾಕ್ಯ)ದಲ್ಲಿ ಪ್ರತಿಪಾದಿಸಿರುತ್ತದೆ. ಆ (ವಿಷಯಕ್ಕೆ) 'ಅಪ್ಪ, ಈ ಸರ್ವಪ್ರಜೆಗಳೂ ಸನ್ಮೂಲವಾಗಿರುತ್ತವೆ, ಸತ್ತೇ ಅವಕ್ಕೆ ಆಧಾರವು, ಸತ್ತನ್ನೇ (ಅವು) ಹೋಗಿ ಸೇರುವವು' (ಛಾಂ. ೬-೮-೬) ಎಂಬ ಹೇತುವನ್ನೂ ಹೇಳಿರುತ್ತದೆ. ಇದೆಲ್ಲವೂ ಬ್ರಹ್ಮವು ; ಅದರಿಂದ ಹುಟ್ಟಿ, ಅದರಲ್ಲಿ ಲಯವಾಗುವದಾಗಿ, ಅದರಿಂದಲೇ ವ್ಯಾಪಾರಮಾಡುವದಾಗಿರುವದರಿಂದ (ಶಾಂತನಾಗಿ ಉಪಾಸನೆಮಾಡಬೇಕು, ಛಾಂ.೩-೧೪-೧) ಎಂಬಂತೆಯೇ (ಇದು).

(ಮೂಲ)

ತಥಾ ಶ್ರುತ್ಯನ್ತರಾಣಿ ಚ ಬ್ರಹ್ಮಣಸ್ತದ್ವ್ಯತಿರಿಕ್ತಸ್ಯ ಚಿದಚಿದ್ವಸ್ತುನಶ್ಚ ಶರೀರಾತ್ಮಭಾವಮೇವ ತಾದಾತ್ಮ್ಯಂ ವದನ್ತಿ। 'ಅನ್ತಃಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' (ತೈ. ಆ. ೩-೧೧-೨), 'ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅನ್ತರೋ ಯಂ ಪೃಥಿವೀ ನ ವೇದ ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮನ್ತರೋ ಯಮಯತಿ ಸ ತ ಆತ್ಮಾऽನ್ತರ್ಯಾಮ್ಯಮೃತಃ' (ಬೃ.ಮಾ.೩-೭-೭), 'ಯ ಆತ್ಮನಿ ತಿಷ್ಠನ್ನಾತ್ಮನೋऽನ್ತರೋ ಯಮಾತ್ಮಾ ನ ವೇದ ಯಸ್ಯಾತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ ಸ ತ ಆತ್ಮಾऽನ್ತರ್ಯಾಮ್ಯಮೃತಃ' (ಬೃ. ೩-೭-೩೦), 'ಯ ಪೃಥಿವೀಮನ್ತರೇ ಸಞ್ಚರನ್' (ಸುಬಾಲ. ೭) ಇತ್ಯಾರಭ್ಯ 'ಯಸ್ಯ ಮೃತ್ಯುಃ ಶರೀರಂ ಯಂ ಮೃತ್ಯುರ್ನ ವೇದ ಏಷ ಸರ್ವಭೂತಾನ್ತರಾತ್ಮಾऽಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ'(ಸುಬಾಲ. ೭), 'ತತ್ಸೃಷ್ಟ್ವಾ। ತದೇವಾನುಪ್ರಾವಿಶತ್। ತದನುಪ್ರವಿಶ್ಯ। ಸಚ್ಚ ತ್ಯಚ್ಚಾಭವತ್' (ತೈ. ೨-೬) ಇತ್ಯಾದೀನಿ। ಅತ್ರಾಪಿ 'ಅನೇನ ಜೀವೇನಾತ್ಮನಾऽನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾಂ.೬-೩-೨) ಇತಿ ಬ್ರಹ್ಮಾತ್ಮಕಜೀವಾನುಪ್ರವೇಶೇನೈವ ಸರ್ವೇಷಾಂ ವಸ್ತುತ್ವಂ ಶಬ್ದವಾಚ್ಯತ್ವಂ ಚ ಪ್ರತಿಪಾದಿತಮ್। 'ತದನುಪ್ರವಿಶ್ಯ। ಸಚ್ಚ ತ್ಯಚ್ಚಾಭವತ್' (ತೈ.) ಇತ್ಯನೇನೈಕಾರ್ಥ್ಯಾತ್, ಜೀವಸ್ಯಾಪಿ ಬ್ರಹ್ಮಾತ್ಮಕತ್ವಂ ಬ್ರಹ್ಮಾನುಪ್ರವೇಶಾದೇವ ಇತ್ಯವಗಮ್ಯತೇ। ಅತಃ, ಚಿದಚಿದಾತ್ಮಕಸ್ಯ ಸರ್ವಸ್ಯ ವಸ್ತುಜಾತಸ್ಯ ಬ್ರಹ್ಮತಾದಾತ್ಮ್ಯಮ್ ಆತ್ಮಶರೀರಭಾವಾದೇವ ಇತ್ಯವಗಮ್ಯತೇ। ತಸ್ಮಾತ್, ಬ್ರಹ್ಮವ್ಯತಿರಿಕ್ತಸ್ಯ ಕೃತ್ಸ್ನಸ್ಯ ತಚ್ಛರೀರತ್ವೇನೈವ ವಸ್ತುತ್ವಾತ್ ತಸ್ಯ ಪ್ರತಿಪಾದಕೋऽಪಿ ಶಬ್ದಃ, ತತ್ಪರ್ಯನ್ತಮೇವ ಸ್ವಾರ್ಥಮಭಿದಧಾತಿ। ಅತಃ ಸರ್ವಶಬ್ದಾನಾಂ ಲೋಕವ್ಯುತ್ಪತ್ತ್ಯವಗತತತ್ತತ್ಪದಾರ್ಥವಿಶಿಷ್ಟ

ಬ್ರಹ್ಮಾಭಿಧಾಯಿತ್ವಂ ಸಿದ್ಧಮಿತಿ 'ಐತದಾತ್ಮ್ಯಮಿದಂ ಸರ್ವಮ್' ಇತಿ ಪ್ರತಿಜ್ಞಾತಾರ್ಥಸ್ಯ 'ತತ್ತ್ವಮಸಿ' ಇತಿ ಸಾಮಾನಾಧಿಕರಣ್ಯೇನ ವಿಶೇಷ ಉಪಸಂಹಾರಃ ||

(ಅರ್ಥ)

ಹೀಗೆಯೇ ಬೇರೆಯ ಶ್ರುತಿಗಳೂ ಬ್ರಹ್ಮಕ್ಕೂ ಅದಕ್ಕಿಂತ ಬೇರೆಯಾಗಿರುವ ಚಿದಚಿದ್ವಸ್ತುವಿಗೂ ಇರುವ ಶರೀರಾತ್ಮಭಾವವನ್ನೇ[1] ತಾದಾತ್ಮ್ಯವೆಂದು ಹೇಳುತ್ತಿವೆ. (ಅವು ಯಾವವೆಂದರೆ) "ಒಳಹೊಕ್ಕಿರುವ ಜನರ ಶಾಸಕನೇ ಎಲ್ಲರಿಗೂ ಆತ್ಮನು" (ತೈ.ಆ. ೩–೧೧–೨), 'ಯಾವನು ಪೃಥಿವಿಯಲ್ಲಿದ್ದಾನೋ, ಪೃಥಿವಿಗಿಂತ ಬೇರೆಯಾಗಿರುವನೋ, ಯಾರನ್ನು ಪೃಥಿವಿಯು ಅರಿಯದೋ, ಯಾರಿಗೆ ಪೃಥಿವಿಯು ಶರೀರವೋ, ಯಾವಾತನು ಪೃಥಿವಿಯ ಒಳಗಿದ್ದು ಆ (ದೇವತೆಯನ್ನು) ಕಟ್ಟಿನಲ್ಲಿಟ್ಟಿರುವನೋ, ಅವನೇ ನಿನ್ನ ಆತ್ಮನು, ಅಮೃತನಾದ ಅಂತರ್ಯಾಮಿಯು' (ಬೃ. ಮಾ.), 'ಯಾವನು ಆತ್ಮನಲ್ಲಿದ್ದುಕೊಂಡು, ಆತ್ಮನಿಗಿಂತ ಬೇರೆಯಾಗಿರುವನೋ, ಯಾವಾತನನ್ನು ಆತ್ಮನು ಅರಿಯನೋ, ಯಾವಾತನಿಗೆ ಆತ್ಮನು ಶರೀರವೋ, ಯಾವಾತನು ಆತ್ಮನ ಒಳಗಿದ್ದು ಆವನನ್ನು ಹಿಡಿತದಲ್ಲಿಟ್ಟುಕೊಂಡಿರುವನೋ ಅವನು ನಿನ್ನ ಆತ್ಮನು, ಅಮೃತನಾದ ಅಂತರ್ಯಾಮಿಯು' (ಬೃ.ಮಾ.೩-೭-೩೦), 'ಯಾವಾತನು ಪೃಥಿವಿಯು ಒಳಗೆ ಇದ್ದುಕೊಂಡು ಸಂಚರಿಸುತ್ತಾ' ಎಂದು ಪ್ರಾರಂಭಿಸಿ 'ಯಾವಾತನಿಗೆ ಮೃತ್ಯುವು ಶರೀರವೋ, ಯಾವಾತನನ್ನು ಮೃತ್ಯು (ದೇವತೆ) ಅರಿಯದೋ, ಈತನು ಸರ್ವಭೂತಗಳಿಗೂ ಅಂತರಾತ್ಮನೂ ಅಪಹತಪಾಪ್ಮನೂ ದಿವ್ಯನೂ ಏಕದೇವನೂ ಆದ ನಾರಾಯಣನು' (ಸುಬಾಲ. ೭), 'ಅದನ್ನು ಸೃಷ್ಟಿಸಿ ಅದನ್ನೇ ಒಳಹೊಕ್ಕನು; ಅದನ್ನು ಒಳಹೊಕ್ಕು ಸತ್ತೂತ್ಯತ್ತೂ ಆದನು' (ತೈ. ೨–೬) ಮುಂತಾದವು.

ಇಲ್ಲಿಯೂ 'ಈ ಜೀವಾತ್ಮನೊಡನೆ ಒಳಹೊಕ್ಕು ನಾಮರೂಪಗಳನ್ನು ವಿಂಗಡಿಸುವೆನು' (ಛಾಂ. ೬–೩–೨) ಎಂದು ಬ್ರಹ್ಮಾತ್ಮಕನಾದ ಜೀವನ ಒಳಹೊಗುವಿಕೆಯಿಂದಲೇ ಎಲ್ಲವೂ ವಸ್ತುಗಳಾಗಿರುವವೆಂದೂ ಶಬ್ದವಾಚ್ಯವಾಗಿರುವವೆಂದೂ ಪ್ರತಿಪಾದಿಸಲಾಗಿದೆ. 'ಅದನ್ನು ಒಳಹೊಕ್ಕು ಸತ್ತೂ ತ್ಯತ್ತೂ ಆಯಿತು' (ತೈ. ೨–೬) ಎಂಬೀ ವಚನಕ್ಕೂ (ಇದಕ್ಕೂ) ಏಕವಾಕ್ಯತೆಯಾಗಬೇಕಾಗಿರುವದರಿಂದ ಜೀವನೂ ಬ್ರಹ್ಮಾತ್ಮಕನಾಗಿರುವದು ಬ್ರಹ್ಮವು ಒಳಹೊಕ್ಕಿರುವದರಿಂದಲೇ ಎಂದು ನಿಶ್ಚಿತವಾಗುತ್ತದೆ. ಆದ್ದರಿಂದ ಚಿದಚಿದಾತ್ಮಕವಾಗಿರುವ ಎಲ್ಲಾ ವಸ್ತುಜಾತವೂ ಬ್ರಹ್ಮತಾದಾತ್ಮ್ಯವುಳ್ಳದ್ದಾಗಿರುವದೆಂಬುದು ಆತ್ಮಶರೀರಭಾವಸಂಬಂಧದಿಂದಲೇ ಎಂದು ನಿಶ್ಚಿತವಾಗುತ್ತದೆ.

1. ಐಕ್ಯವನ್ನಲ್ಲ.

ಆದ್ದರಿಂದ ಬ್ರಹ್ಮವ್ಯತಿರಿಕ್ತವಾದದ್ದೆಲ್ಲವೂ ಆ (ಬ್ರಹ್ಮದ) ಶರೀರವಾಗಿರುವದರಿಂದಲೇ ವಸ್ತುವಾಗಿರುವದರಿಂದ ಅದನ್ನು ತಿಳಿಸುವ ಶಬ್ದವೂ ಆ (ಬ್ರಹ್ಮ) ಪರ್ಯಂತವಾಗಿಯೇ ತನ್ನ ಅರ್ಥವನ್ನು ಹೇಳುತ್ತದೆ. ಆದ್ದರಿಂದ **ಎಲ್ಲಾ ಶಬ್ದಗಳೂ ಲೋಕವ್ಯುತ್ಪತ್ತಿಯಿಂದ ಗೊತ್ತಾಗುವ ಆಯಾ ಪದಾರ್ಥವಿಶಿಷ್ಟವಾದ ಬ್ರಹ್ಮವನ್ನೇ ಹೇಳುತ್ತವೆ ಎಂದು ಸಿದ್ಧವಾಗುವದರಿಂದ** ಎಂದು ಪ್ರತಿಜ್ಞೆ. 'ಐತದಾತ್ಮ್ಯಮಿದಂ ಸರ್ವಮ್' (ಇದೆಲ್ಲವೂ ಈ ಬ್ರಹ್ಮವನ್ನೇ ಆತ್ಮನಾಗುಳ್ಳದ್ದು) ಎಂದು ಪ್ರತಿಜ್ಞೆಮಾಡಿರುವ ಅರ್ಥವನ್ನು 'ತತ್ತ್ವಮಸಿ' (ಅದೇ ನೀನು) ಎಂದು ಸಾಮಾನಾಧಿಕರಣ್ಯದಿಂದ ವಿಶೇಷದಲ್ಲಿ ಉಪಸಂಹಾರ (ಮಾಡಿರುತ್ತದೆ).[1]

(ಮೂಲ)

ಅತೋ ನಿರ್ವಿಶೇಷವಸ್ತ್ವೈಕ್ಯವಾದಿನೋ ಭೇದಾಭೇದವಾದಿನಃ ಕೇವಲಭೇದವಾದಿನಶ್ಚ, ವೈಯಧಿಕರಣ್ಯೇನ ಸಾಮಾನಾಧಿಕರಣ್ಯೇನ ಚ ಬ್ರಹ್ಮಾತ್ಮಭಾವೋಪದೇಶಾಃ ಸರ್ವೇ ಪರಿತ್ಯಕ್ತಾಃ ಸ್ಯುಃ । ಏಕಸ್ಮಿನ್ ವಸ್ತುನಿ ಕಸ್ಯ ತಾದಾತ್ಮ್ಯಮುಪದಿಶ್ಯತೇ ? ತಸ್ಯೈವ ಇತಿ ಚೇತ್, ತತ್ ಸ್ವವಾಕ್ಯೇನೈವಾವಗತಮ್, ನ ತಾದಾತ್ಮ್ಯೋಪದೇಶಾಪೇಕ್ಷಮಸ್ತಿ ಕಿಞ್ಚಿತ್ । ಕಲ್ಪಿತಭೇದನಿರಸನಮ್ ಇತಿ ಚೇತ್, ತತ್ತು ನ ಸಾಮಾನಾಧಿಕರಣ್ಯತಾದಾತ್ಮ್ಯೋಪದೇಶಾಪೇಕ್ಷಮ್ ಇತ್ಯುಕ್ತಮ್ । ಸಾಮಾನಾಧಿಕರಣ್ಯಂ ತು ಬ್ರಹ್ಮಣಿ ಪ್ರಕಾರದ್ವಯಪ್ರತಿಪಾದನೇನ ವಿರೋಧಮೇವಾವಹೇತ್ ॥

ಭೇದಾಭೇದವಾದೇ ತು ಬ್ರಹ್ಮಣ್ಯೇವೋಪಾಧಿಸಂಸರ್ಗಾತ್ ತತ್ಪ್ರಯುಕ್ತಾ ಜೀವಗತಾ ದೋಷಾ ಬ್ರಹ್ಮಣ್ಯೇವ ಪ್ರಾದುಃಷ್ಯುರಿತಿ ನಿರಸ್ತನಿಖಿಲದೋಷಕಲ್ಯಾಣಗುಣಾತ್ಮಕಬ್ರಹ್ಮಾತ್ಮಭಾವೋಪದೇಶಾ ಹಿ ವಿರೋಧಾದೇವ ಪರಿತ್ಯಕ್ತಾಃ ಸ್ಯುಃ ॥

ಸ್ವಾಭಾವಿಕಭೇದಾಭೇದವಾದೇಽಪಿ ಬ್ರಹ್ಮಣಃ ಸ್ವತ ಏವ ಜೀವಭಾವಾಭ್ಯುಪಗಮಾತ್ ಗುಣವದ್ ದೋಷಾಶ್ಚ ಸ್ವಾಭಾವಿಕಾ ಭವೇಯುರಿತಿ ನಿರ್ದೋಷಬ್ರಹ್ಮತಾದಾತ್ಮ್ಯೋಪದೇಶೋ ವಿರುದ್ಧ ಏವ । ಕೇವಲಭೇದವಾದಿನಾಂ ಚ ಅತ್ಯನ್ತಭಿನ್ನಯೋಃ ಕೇನಾಪಿ ಪ್ರಕಾರೇಣ ಐಕ್ಯಾಸಂಭವಾದೇವ ಬ್ರಹ್ಮಾತ್ಮಭಾವೋಪದೇಶಾ ನ ಸಂಭವನ್ತೀತಿ ಸರ್ವವೇದಾನ್ತಪರಿತ್ಯಾಗಃ ಸ್ಯಾತ್ ॥

(ಅರ್ಥ)

**ಆದ್ದರಿಂದ ನಿರ್ವಿಶೇಷವಸ್ತುವಿನ ಐಕ್ಯವನ್ನು ಒಪ್ಪುವ ವಾದಿಯ ಪಕ್ಷದಲ್ಲಿಯೂ ಭೇದಾಭೇದವಾದಿಯ ಪಕ್ಷದಲ್ಲಿಯೂ ಕೇವಲಭೇದ**

1. ಜಗತ್ತಿಗೆಲ್ಲ ಅವನೇ ಆತ್ಮನು ಎಂದು ಸಾಮಾನ್ಯವಾಗಿ ಹೇಳಿದ್ದನ್ನು 'ನಿನಗೂ ಅವನೇ ಆತ್ಮನು' ಎಂದು ವಿಶೇಷದಲ್ಲಿ ಉಪಸಂಹಾರಮಾಡಿದೆ ಎಂದರ್ಥ.

**ವಾದಿಯ ಪಕ್ಷದಲ್ಲಿಯೂ[1] ವ್ಯೆಯಧಿಕರಣ್ಯದಿಂದಲೂ[2] ಸಾಮಾನಾಧಿಕರಣ್ಯದಿಂದಲೂ[3] ಬ್ರಹ್ಮಾತ್ಮಭಾವವನ್ನು ಉಪದೇಶಮಾಡಿರುವ (ಶ್ರುತಿ) ಗಳೆಲ್ಲವನ್ನೂ ಬಿಟ್ಟಂತೆ ಆದೀತು.**

(೧) **ಒಂದೇ ವಸ್ತುವೆಂದಿರುವಲ್ಲಿ** ಯಾವ ದಕ್ಕೆ (ಯಾವುದರ) ತಾದಾತ್ಮ್ಯವನ್ನು ಹೇಳಲಾದೀತು ?

(ಅದ್ವೈತಿ) :– ಅದಕ್ಕೇ (ತಾದಾತ್ಮ್ಯವನ್ನು ಹೇಳಲಾಗುತ್ತದೆ).

(ಸಿದ್ಧಾಂತಿ) :– ಅದು ಆದರ ವಾಕ್ಯದಿಂದಲೇ ಸಿದ್ಧಿತವಾಗಿರುವದರಿಂದ ತಾದಾತ್ಮ್ಯೋಪದೇಶದಿಂದ ಸಿದ್ಧಿಯುವಾಗಬೇಕಾದದ್ದೇನೂ ಇರುವದೇ ಇಲ್ಲ.

(ಅದ್ವೈತಿ) :– ಕಲ್ಪಿತಭೇದನಿರಸನವೇ (ತಾದಾತ್ಮ್ಯೋಪದೇಶದಿಂದ ತಿಳಿಯ ಬೇಕಾಗಿರುವದು) ಎಂದರೊ ?

(ಸಿದ್ಧಾಂತಿ) :– ಆ (ಕಲ್ಪಿತಭೇದನಿರಸನ)ವಾದರೊ, ಸಾಮಾನಾಧಿಕರಣ್ಯದ ತಾದಾತ್ಮ್ಯದ ಉಪದೇಶದಿಂದ ಸಿದ್ಧಿಯುವಾಗತಕ್ಕದ್ದಲ್ಲವೆಂದು (ಹಿಂದೆಯೇ) ಹೇಳಿದ್ದಾಗಿದೆ.[4] ಸಾಮಾನಾಧಿಕರಣ್ಯವಾದರೊ, ಬ್ರಹ್ಮದಲ್ಲಿ ಎರಡು ಪ್ರಕಾರ ಗಳನ್ನು ಪ್ರತಿಪಾದಿಸುವದರಿಂದ ವಿರೋಧವನ್ನೇ ತಂದೊಡ್ಡೀತು !

(೨) **ಭೇದಾಭೇದವಾದದಲ್ಲಿಯಾದರೊ,** ಬ್ರಹ್ಮದಲ್ಲಿಯೇ ಉಪಾಧಿಯ ಸಂಬಂಧವಾಗುವದರಿಂದ ಅದರಿಂದಾಗುವ ಜೀವನಲ್ಲಿರುವ ದೋಷಗಳು ಬ್ರಹ್ಮ ದಲ್ಲಿಯೇ ತೋರಿಕೊಂಡವಾದ್ದರಿಂದ ಯಾವ ದೋಷವೂ ಇಲ್ಲದ ಕಲ್ಯಾಣಗುಣಾ ತ್ಮಕವಾದ ಬ್ರಹ್ಮಾತ್ಮಭಾವವನ್ನು ಉಪದೇಶಮಾಡುವ (ಶ್ರುತಿ)ಗಳನ್ನು ವಿರೋಧ ವಾಗುವದರಿಂದಲೇ (ಅವನ್ನು) ಬಿಟ್ಟಂತೆ ಆಗುವದು.

(೩) **ಸ್ವಾಭಾವಿಕಭೇದಾಭೇದವಾದದಲ್ಲಿಯೂ** ಬ್ರಹ್ಮವು ತಾನೇ ಜೀವ ಭಾವವನ್ನು ಹೊಂದುವದೆಂದು ಒಪ್ಪುವದರಿಂದ ಗುಣಗಳಂತೆ ದೋಷಗಳೂ ಸ್ವಾಭಾ ವಿಕವೇ ಆಗಿಬಿಡುತ್ತವೆಯಾಗಿ ನಿರ್ದೋಷಬ್ರಹ್ಮದ ತಾದಾತ್ಮ್ಯವನ್ನು (ಜೀವನಿಗೆ)

---

1. ಶರೀರಶರೀರಿಭಾವವನ್ನೊಪ್ಪದ ವಾದಿಗಳ ಪಕ್ಷದಲ್ಲಿ ಒದಗುವ ದೋಷವನ್ನು ಇಲ್ಲಿ ಪ್ರಸಂಗದಿಂದ ತಿಳಿಸಿದೆ.

2. ಇಂಥದ್ದಕ್ಕೆ ಬ್ರಹ್ಮವು ಶರೀರ ಎಂಬುದು ವೈಯಧಿಕರಣ್ಯದಿಂದ ತಾದಾತ್ಮ್ಯೋಪ ದೇಶ.

3. 'ಅದೇ ನೀನು' ಎಂಬಂತೆ ಮಾಡಿರುವದು ಸಾಮಾನಾಧಿಕರಣ್ಯದ ಉಪದೇಶ.

4. ಬಾಧೆಯಲ್ಲಿ ಸಾಮಾನಾಧಿಕರಣ್ಯ– ಎಂಬ ಪಕ್ಷವನ್ನು ನಿರಾಸಮಾಡಿದ ಸಂದರ್ಭ ದಲ್ಲಿ ಹೇಳಿದೆ.

ಉಪದೇಶಿಸುವದು ವಿರುದ್ಧವೇ.[1] ಕೇವಲಭೇದವಾದಿಗಳ ಪಕ್ಷದಲ್ಲಿಯೂ ಅತ್ಯಂತಭಿನ್ನರಾಗಿರುವ (ಜೀವಬ್ರಹ್ಮರಿಗೆ) ಯಾವ ಪ್ರಕಾರದಿಂದಲೂ ಐಕ್ಯವು ಸಂಭವಿಸುವಂತಿಲ್ಲವಾದ್ದರಿಂದ ಬ್ರಹ್ಮಭಾವವನ್ನು (ಜೀವನಿಗೆ) ಉಪದೇಶಮಾಡುವ (ಶ್ರುತಿ)ಗಳು ಸಂಭವಿಸುವದಿಲ್ಲವಾಗಿ ಸರ್ವವೇದಾಂತ(ವಾಕ್ಯ)ಗಳನ್ನೂ ಬಿಟ್ಟಿದ್ದಾದೀತು !

(ಮೂಲ)

ನಿಖಿಲೋಪನಿಷತ್ಪ್ರಸಿದ್ಧಂ ಕೃತ್ಸ್ನಸ್ಯ ಬ್ರಹ್ಮಶರೀರಭಾವಮಾತಿಷ್ಠಮಾನೈಃ ಕೃತ್ಸ್ನಸ್ಯ ಬ್ರಹ್ಮಾತ್ಮಭಾವೋಪದೇಶಾಃ ಸರ್ವೇ ಸಮ್ಯಗುಪಪಾದಿತಾ ಭವನ್ತಿ। ಜಾತಿಗುಣಯೋರಿವ ದ್ರವ್ಯಾಣಾಮಪಿ ಶರೀರಭಾವೇನ ವಿಶೇಷಣತ್ವೇನ 'ಗೌರಶ್ವೋ ಮನುಷ್ಯೋ ದೇವೋ ಜಾತಃ ಪುರುಷಃ ಕರ್ಮಭಿಃ' ಇತಿ ಸಾಮಾನಾಧಿಕರಣ್ಯಂ ಲೋಕವೇದಯೋರ್ಮುಖ್ಯಮೇವ ದೃಷ್ಟಚರಮ್। ಜಾತಿಗುಣಯೋರಪಿ ದ್ರವ್ಯಪ್ರಕಾರತ್ವಮೇವ 'ಖಣ್ಡೋ ಗೌಃ', 'ಶುಕ್ಲಃ ಪಟಃ' ಇತಿ ಸಾಮಾನಾಧಿಕರಣ್ಯನಿಬನ್ಧನಮ್। ಮನುಷ್ಯತ್ವಾದಿವಿಶಿಷ್ಟಪಿಣ್ಡಾನಾಮಪಿ ಆತ್ಮನಃ ಪ್ರಕಾರತಯೈವ ಪದಾರ್ಥತ್ವಾತ್ 'ಮನುಷ್ಯಃ ಪುರುಷಃ ಷಣ್ಡೋ ಯೋಷಿದಾತ್ಮಾ ಜಾತಃ' ಇತಿ ಸಾಮಾನಾಧಿಕರಣ್ಯಂ ಸರ್ವತ್ರಾನುಗತಮಿತಿ ಪ್ರಕಾರತ್ವಮೇವ ಸಾಮಾನಾಧಿಕರಣ್ಯನಿಬನ್ಧನಮ್, ನ ಪದಾನ್ತರವ್ಯಾವೃತ್ತಿಃ ಜಾತ್ಯಾದಯಃ। ಸ್ವನಿಷ್ಠಾನಾಮೇವ ಹಿ ದ್ರವ್ಯಾಣಾಂ ಕದಾಚಿತ್ ಕ್ವಚಿತ್ ದ್ರವ್ಯವಿಶೇಷಣತ್ವೇ ಮತ್ವರ್ಥೀಯಪ್ರತ್ಯಯೋ ದೃಷ್ಟಃ 'ದಣ್ಡೀ', 'ಕುಣ್ಡಲೀ' ಇತಿ ನ ಪೃಥಕ್ ಪ್ರತಿಪತ್ತಿಸ್ಥಿತ್ಯನರ್ಹಾಣಾಂ ದ್ರವ್ಯಾಣಾಮ್ ; ತೇಷಾಂ ವಿಶೇಷಣತ್ವಂ ಸಾಮಾನಾಧಿಕರಣ್ಯಾವಸೇಯಮೇವ ॥

(ಅರ್ಥ)

**ಎಲ್ಲಾ ಉಪನಿಷತ್ತುಗಳಲ್ಲಿಯೂ ಪ್ರಸಿದ್ಧವಾಗಿರುವಂತೆ ಎಲ್ಲವೂ ಬ್ರಹ್ಮದ ಶರೀರವೇ ಎಂದು ಒಪ್ಪಿಕೊಂಡಿರುವವರ ಪಕ್ಷದಲ್ಲಿ (1)** ಎಲ್ಲಕ್ಕೂ ಬ್ರಹ್ಮಾತ್ಮಭಾವವನ್ನು ಉಪದೇಶಿಸುವ (ವಾಕ್ಯಗಳೆಲ್ಲಕ್ಕೂ) ಉಪಪತ್ತಿಯನ್ನು ಹೇಳಿದಂತಾಗುತ್ತದೆ. ಜಾತಿಗುಣಗಳಂತೆ ದ್ರವ್ಯಗಳೂ ಶರೀರರೂಪ

1. ಬ್ರಹ್ಮವು ಜೀವನಿಗಿಂತ ಭಿನ್ನವಾಗಿರುವದಲ್ಲದೆ ಅಭಿನ್ನವಾಗಿಯೂ ಇರುವದರಿಂದ ಅದರಲ್ಲಿ ಯಾವ ದೋಷಗಳೂ ಇಲ್ಲವೆಂದು ಶ್ರುತಿಯು ಹೇಳುವದು ತಪ್ಪೆಂದಾಗುವದು.

2. ಐಕ್ಯೋಪದೇಶ, ಜೀವಬ್ರಹ್ಮರನ್ನು ಬೇರೆಬೇರೆಯಾಗಿಯೂ ಮಾಡಿರುವ ಉಪದೇಶ, ಕಲ್ಯಾಣಗುಣಗಳ ಉಪದೇಶ. ಈ ಎಲ್ಲವೂ ಬೇರೆಯಾವ ಮತದಲ್ಲಿಯೂ ಸಮಂಜಸವಾಗುವದಿಲ್ಲ– ಎಂದು ಅಭಿಪ್ರಾಯ.

3. ಇಲ್ಲಿಂದ ಮುಂದಕ್ಕೆ ತಮ್ಮ ಮತದಲ್ಲಿ ಶ್ರುತ್ಯರ್ಥವಿರೋಧವೇ ಇಲ್ಲವೆಂದು ತೋರಿಸುತ್ತಾರೆ.

ದಿಂದ ವಿಶೇಷಣವಾಗಿರುವದರಿಂದ (2) 'ಗೋವು, ಕುದುರೆ, ಮನುಷ್ಯ, ದೇವತೆ–(ಇವುಗಳಾಗಿ) ಮನುಷ್ಯನು ಕರ್ಮಗಳಿಂದ ಹುಟ್ಟಿದನು' ಎಂದು ಲೋಕವೇದಗಳಲ್ಲಿ ಸಾಮಾನಾಧಿಕರಣ್ಯವು ಮುಖ್ಯನಾಗಿಯೇ ಕಂಡಿರುತ್ತದೆ. ಜಾತಿಗುಣಗಳಿಗೆಕೂಡ 'ಹುಂಡ ಎತ್ತು', 'ಬಿಳಿಯ ಬಟ್ಟೆ' ಎಂದು ಸಾಮಾನಾಧಿಕರಣ್ಯವಿರುವದಕ್ಕೆ (ಅವು) ದ್ರವ್ಯದ ಪ್ರಕಾರವಾಗಿರುವದೇ ನಿಮಿತ್ತವು; ಮನುಷ್ಯತ್ವಾದಿಗಳಿಂದ ವಿಶಿಷ್ಟವಾಗಿರುವ ಶರೀರಗಳೂ ಆತ್ಮನಿಗೆ ಪ್ರಕಾರವಾಗಿರುವದರಿಂದಲೇ ಪದಾರ್ಥಗಳೆನಿಸಿರುವದರಿಂದ 'ಮನುಷ್ಯನು ಗಂಡಸಾಗಿಯೂ ನಪುಂಸಕನಾಗಿಯೂ ಸ್ತ್ರೀರೂಪನಾಗಿಯೂ ಹುಟ್ಟಿದನು' ಎಂದು ಸಾಮಾನಾಧಿಕರಣ್ಯವು ಎಲ್ಲೆಲ್ಲಿಯೂ ಅನುಸರಿಸಿಕೊಂಡುಬಂದಿರುತ್ತದೆ. ಆದ್ದರಿಂದ ಪ್ರಕಾರತ್ವವೇ ಸಾಮಾನಾಧಿಕರಣ್ಯಕ್ಕೆ ನಿಮಿತ್ತವೇ ಹೊರತು ಒಂದಕ್ಕಿಂತ ಒಂದು ಭಿನ್ನವಾಗಿರುವ ಜಾತ್ಯಾದಿಗಳು (ನಿಮಿತ್ತ)ವಲ್ಲ.[1] ದ್ರವ್ಯಗಳು ಸ್ವರೂಪದಿಂದಲೇ ಇದ್ದುಕೊಂಡು ದ್ರವ್ಯವಿಶೇಷಣವಾಗಿರುವಲ್ಲಿ 'ದಂಡಿ', 'ಕುಂಡಲಿ' ಎಂದು ಮತ್ವರ್ಥೀಯಪ್ರತ್ಯಯವೂ ಕಂಡುಬರುತ್ತಿದೆಯಲ್ಲವೆ[2] ? (ಇಷ್ಟೇ ಹೊರತು) ಬೇರೆಯಾಗಿ ಅರಿವು, ಕಾರಣ –ಇವುಗಳಿಲ್ಲದ ದ್ರವ್ಯಗಳಿಗೆ (ಹೀಗೆ ಮತ್ವರ್ಥೀಯಪ್ರತ್ಯಯದ ಪ್ರಯೋಗವು) ಕಂಡುಬಂದಿಲ್ಲ; ಅವುಗಳು ವಿಶೇಷಣವೆಂಬುದು ಸಾಮಾನಾಧಿಕರಣ್ಯದಿಂದಲೇ ನಿಶ್ಚಯವಾಗತಕ್ಕದ್ದಾಗಿರುತ್ತದೆ.

(ಮೂಲ)

ಯದಿ 'ಗೌರಶ್ವೋ ಮನುಷ್ಯೋ ದೇವಃ ಪುರುಷೋ ಯೋಷಿತ್ ಷಣ್ಡ ಆತ್ಮಾ ಕರ್ಮಭಿರ್ಜಾತಃ' ಇತ್ಯತ್ರ 'ಖಣ್ಡೋ ಮುಣ್ಡೋ ಗೌಃ', 'ಶುಕ್ಲಃ ಪಟಃ, ಕೃಷ್ಣಃ ಪಟಃ' ಇತಿ ಜಾತಿಗುಣವತ್ ಆತ್ಮಪ್ರಕಾರತ್ವಂ ಮನುಷ್ಯಾದಿಶರೀರಾಣಾಮಿಷ್ಯತೇ, ತರ್ಹಿ ಜಾತಿವ್ಯಕ್ತ್ಯೋರಿವ ಪ್ರಕಾರಪ್ರಕಾರಿಣೋಃ ಶರೀರಾತ್ಮನೋರಪಿ ನಿಯಮೇನ ಸಹ ಪ್ರತಿಪತ್ತಿಃ ಸ್ಯಾತ್, ನ ಚೈವಂ ದೃಶ್ಯತೇ । ನ ಹಿ ನಿಯಮೇನ ಗೋತ್ವಾದಿವತ್ ಆತ್ಮಾಶ್ರಯತಯೈವ ಆತ್ಮನಾ ಸಹ ಮನುಷ್ಯಾದಿಶರೀರಂ ಪಶ್ಯನ್ತಿ । ಅತೋ 'ಮನುಷ್ಯ ಆತ್ಮಾ' ಇತಿ ಸಾಮಾನಾಧಿಕರಣ್ಯಂ ಲಾಕ್ಷಣಿಕಮೇವ ॥

---

1. ಗೋವು ಎಂಬಲ್ಲಿ ಗೋತ್ವ, ಬಿಳಿಯಕುದುರೆ ಎಂಬಲ್ಲಿ ಬಿಳುಪೆಂಬ ಗುಣ –ಹೀಗೆ ಒಂದೊಂದು ಕಡೆಯಲ್ಲಿ ಒಂದೊಂದು ಸಾಮಾನಾಧಿಕರಣ್ಯನಿಮಿತ್ತವೆಂದು ಕಲ್ಪಿಸುವದು ಗೌರವವು; ಇವೆಲ್ಲ 'ಪ್ರಕಾರ' ಎಂದು ಕಲ್ಪಿಸಿದರೆ ಲಾಘವ. ಆದ್ದರಿಂದ ದ್ರವ್ಯವೂ ಪ್ರಕಾರತ್ವದಿಂದ ಸಾಮಾನಾಧಿಕರಣ್ಯಕ್ಕೆ ನಿಮಿತ್ತವಾಗಬಹುದು– ಎಂದು ಭಾವ.

2. 'ದಂಡಿ' ಎಂಬಲ್ಲಿ ದಂಡವು ತಾನೇ ಬೇರೆಯಿದ್ದರೂ ಮನುಷ್ಯನಿಗೆ ಪ್ರಕಾರವಾಗಿ ವಿಶೇಷಣವಾಗಿರುತ್ತದೆ; ಇದನ್ನು ತಿಳಿಸುವದಕ್ಕೆ 'ದಂಡೀ' ಎಂದು ಮತ್ವರ್ಥೀಯ (ಉಳ್ಳ ಎಂಬರ್ಥದ) ಪ್ರತ್ಯಯವನ್ನು ಪ್ರಯೋಗಿಸುತ್ತಾರೆ.

ನೈತದೇವಮ್ । ಮನುಷ್ಯಾದಿಶರೀರಾಣಾಮಪಿ ಆತ್ಮೈಕಾಶ್ರಯತ್ವಮ್, ತದೇಕಪ್ರಯೋಜನತ್ವಮ್, ತತ್ಪ್ರಕಾರತ್ವಂ ಚ ಜಾತ್ಯಾದಿತುಲ್ಯಮ್ । ಆತ್ಮೈಕಾಶ್ರಯತ್ವಮ್ ಆತ್ಮವಿಶ್ಲೇಷೇ ಶರೀರವಿನಾಶಾದವಗಮ್ಯತೇ । ಆತ್ಮೈಕಪ್ರಯೋಜನತ್ವಂ ಚ ತತ್ಕರ್ಮಫಲಭೋಗಾರ್ಥತಯೈವ ಸದ್ಭಾವಾತ್ । ತತ್ಪ್ರಕಾರತ್ವಮಪಿ 'ದೇವೋ ಮನುಷ್ಯಃ' ಇತ್ಯಾತ್ಮವಿಶೇಷಣತಯೈವ ಪ್ರತೀತೇಃ । ಏತದೇವ ಹಿ ಗವಾದಿಶಬ್ದಾನಾಂ ವ್ಯಕ್ತಿಪರ್ಯನ್ತತ್ವೇ ಹೇತುಃ । ಏತತ್ಸ್ವಭಾವವಿರಹಾದೇವ ದಣ್ಡಕುಣ್ಡಲಾದೀನಾಂ ವಿಶೇಷಣತ್ವೇ 'ದಣ್ಡೀ', 'ಕುಣ್ಡಲೀ' ಇತಿ ಮತ್ವರ್ಥೀಯಪ್ರತ್ಯಯಃ । ದೇವಮನುಷ್ಯಾದಿಪಿಣ್ಡಾನಾಮ್ ಆತ್ಮೈಕಾಶ್ರಯತ್ವತದೇಕಪ್ರಯೋಜನತ್ವತತ್ಪ್ರಕಾರತ್ವಸ್ವಭಾವಾತ್ 'ದೇವೋ ಮನುಷ್ಯ ಆತ್ಮಾ' ಇತಿ ಲೋಕವೇದಯೋಃ ಸಾಮಾನಾಧಿಕರಣ್ಯೇನ ವ್ಯವಹಾರಃ । ಜಾತಿವ್ಯಕ್ತ್ಯೋಃ ನಿಯಮೇನ ಸಹ ಪ್ರತೀತಿರುಭಯೋಶ್ಚಾಕ್ಷುಷತ್ವಾತ್ । ಆತ್ಮನಸ್ತು ಅಚಾಕ್ಷುಷತ್ವಾತ್ ಚಕ್ಷುಷಾ ಶರೀರಗ್ರಹಣವೇಲಾಯಾಮ್ ಆತ್ಮಾ ನ ಗೃಹ್ಯತೇ । ಪೃಥಗ್ಗ್ರಹಣಯೋಗ್ಯಸ್ಯ ಪ್ರಕಾರತೈಕಸ್ವರೂಪತ್ವಂ ದುರ್ಘಟಮ್ ಇತಿ ಮಾ ವೋಚಃ। ಜಾತ್ಯಾದಿವತ್ ತದೇಕಾಶ್ರಯತ್ವತದೇಕಪ್ರಯೋಜನತ್ವತದ್ವಿಶೇಷಣತ್ವೈಃ ಶರೀರಸ್ಯಾಪಿ ತತ್ಪ್ರಕಾರತೈಕಸ್ವಭಾವತ್ವಾವಗಮಾತ್ । ಸಹೋಪಲಮ್ಭನಿಯಮಸ್ತು ಏಕಸಾಮಗ್ರೀವೇದ್ಯತ್ವನಿಬನ್ಧನ ಇತ್ಯುಕ್ತಮ್ । ಯಥಾ ಚಕ್ಷುಷಾ ಪೃಥಿವ್ಯಾದೇರ್ಗನ್ಧರಸಾದಿಸಂಬನ್ಧಿತ್ವಂ ಸ್ವಾಭಾವಿಕಮಪಿ ನ ಗೃಹ್ಯತೇ, ಏವಂ ಚಕ್ಷುಷಾ ಗೃಹ್ಯಮಾಣಂ ಶರೀರಮ್ ಆತ್ಮಪ್ರಕಾರತೈಕಸ್ವಭಾವಮಪಿ ನ ತಥಾ ಗೃಹ್ಯತೇ, ಆತ್ಮಗ್ರಹಣೇ ಚಕ್ಷುಷಃ ಸಾಮರ್ಥ್ಯಾಭಾವಾತ್। ನೈತಾವತಾ ಶರೀರಸ್ಯ ತತ್ಪ್ರಕಾರತ್ವಸ್ವಭಾವವಿರಹಃ । ತತ್ಪ್ರಕಾರತೈಕಸ್ವಭಾವತ್ವಮೇವ ಸಾಮಾನಾಧಿಕರಣ್ಯನಿಬನ್ಧನಮ್ । ಆತ್ಮಪ್ರಕಾರತಯಾ ಪ್ರತಿಪಾದನಸಮರ್ಥಸ್ತು ಶಬ್ದಃ ಸಹೈವ ಪ್ರಕಾರತಯಾ ಪ್ರತಿಪಾದಯತಿ ॥

(ಅರ್ಥ)

(ಶಂಕೆ) :– 'ಆತ್ಮನು ಕರ್ಮಗಳಿಂದ ಎತ್ತಾಗಿ, ಕುದುರೆಯಾಗಿ, ಮನುಷ್ಯನಾಗಿ, ದೇವತೆಯಾಗಿ—ಗಂಡಸಾಗಿ, ಹೆಂಗಸಾಗಿ, ನಪುಂಸಕನಾಗಿ, ಹುಟ್ಟಿದನು' ಎಂಬಲ್ಲಿ 'ಹಂಡಬೋಳ ಎತ್ತು', 'ಬಿಳಿಯ ಬಟ್ಟೆ', 'ಕರಿಯ ಬಟ್ಟೆ' ಎಂಬಲ್ಲಿ ಜಾತಿಗುಣಗಳಂತೆ ಮನುಷ್ಯಾದಿಶರೀರಗಳಿಗೂ ಆತ್ಮನ ಪ್ರಕಾರತ್ವವೇ ಒಪ್ಪಾದರೆ, ಆಗ ಜಾತಿವ್ಯಕ್ತಿಗಳಂತೆ ಪ್ರಕಾರಪ್ರಕಾರಿಗಳಾದ ಶರೀರಾತ್ಮರುಗಳೂ ನಿಯಮದಿಂದ ಒಟ್ಟಿಗೆ ತಿಳಿಯುಬರಬೇಕಾಗುವದು. ಆದರೆ ಹೀಗೆ ಕಂಡಿಲ್ಲ. ಗೋತ್ವಾದಿಗಳಂತೆ ಆತ್ಮನನ್ನು ಆಶ್ರಯಿಸಿಕೊಂಡೇ ಆತ್ಮನೊಡನೆ ಮನುಷ್ಯಾದಿಶರೀರವನ್ನು ನಿಯಮ

ದಿಂದ (ಜನರು) ಕಾಣುತ್ತಿಲ್ಲವಲ್ಲ[1] ! ಆದ್ದರಿಂದ 'ಆತ್ಮನು ಮನುಷ್ಯನು' ಎಂಬ ಸಾಮಾನಾಧಿಕರಣ್ಯವು ಲಾಕ್ಷಣಿಕವೇ.[2]

(ಪರಿಹಾರ) :- ಇದು ಹೀಗಲ್ಲ. ಏಕೆಂದರೆ ಮನುಷ್ಯಾದಿಶರೀರಗಳೂ ಆತ್ಮನನ್ನೇ ಆಶ್ರಯಿಸಿಕೊಂಡಿರುವವೂ ಅವನೊಬ್ಬನ ಪ್ರಯೋಜನಕ್ಕಾಗಿಯೇ ಇರುವವೂ, ಮತ್ತು ಅವನ ಪ್ರಕಾರವಾಗಿರುವವೂ, ಜಾತ್ಯಾದಿಗಳಂತೆಯೇ ಇರುತ್ತದೆ.[3] (1) (ಶರೀರವು) ಆತ್ಮನನ್ನೇ ಆಶ್ರಯಿಸಿಕೊಂಡಿದೆ ಎಂಬುದು ಆತ್ಮನಿಂದ ಅಗಲಿದಾಗ ಶರೀರವು ನಾಶವಾಗುವವರಿಂದ ನಿಶ್ಚಯವಾಗುತ್ತದೆ. (2) ಆತ್ಮನ ಪ್ರಯೋಜನಕ್ಕಾಗಿಯೇ ಇದೆ- ಎಂಬುದು ಅವನು ಕರ್ಮಫಲವನ್ನು ಅನುಭವಿಸುವದಕ್ಕೆ ಸ್ಥಾನವಾಗಿಯೇ ಇರುವದರಿಂದ. (3) ಅವನ ಪ್ರಕಾರವಾಗಿರುವದೆಂಬುದೂ 'ದೇವನು', 'ಮನುಷ್ಯನು' ಎಂದು ಆತ್ಮವಿಶೇಷಣವಾಗಿಯೇ ತೋರುವದರಿಂದ. ಗೋವು ಮುಂತಾದ (ಜಾತಿ)ಶಬ್ದಗಳು ವ್ಯಕ್ತಿಪರ್ಯಂತವಾಗಿ (ಪ್ರವೃತ್ತವಾಗಿವೆ) ಎಂಬುದಕ್ಕೆ ಈ (ತದೇಕಾಶ್ರಯತ್ವವೇ ಮುಂತಾದದ್ದೇ) ಹೇತು. ಈ ಸ್ವಭಾವವು ಇಲ್ಲದ್ದರಿಂದಲೇ ದಂಡ, ಕುಂಡಲ- ಮುಂತಾದವು ವಿಶೇಷಣವಾಗುವಾಗ 'ದಂಡಿ', 'ಕುಂಡಲಿ' ಎಂದು ಮತ್ವರ್ಥೀಯಪ್ರತ್ಯಯವು (ಪ್ರಯುಕ್ತವಾಗುತ್ತದೆ). ದೇವ, ಮನುಷ್ಯ- ಮುಂತಾದ ಶರೀರಗಳೂ ಆತ್ಮೈಕಾಶ್ರಯತ್ವ, ತದೇಕಪ್ರಯೋಜನತ್ವ, ತತ್ಪ್ರಕಾರತ್ವ - ಇವು (ತಮಗೆ) ಸ್ವಭಾವವಾಗಿರುವದರಿಂದ 'ಆತ್ಮನು ದೇವನು, ಮನುಷ್ಯನು' ಎಂದು ಲೋಕವೇದಗಳಲ್ಲಿ ಸಾಮಾನಾಧಿಕರಣ್ಯದಿಂದ ವ್ಯವಹಾರವು (ಉಂಟಾಗುತ್ತಿದೆ).

ಜಾತಿವ್ಯಕ್ತಿಗಳು ನಿಯಮದಿಂದ ಜೊತೆಯಲ್ಲಿ ತಿಳಿಯಬರುವದು ಅವೆರಡೂ ಚಕ್ಷುರಿಂದ್ರಿಯಕ್ಕೆ ಗೋಚರವಾಗಿರುವದರಿಂದ. ಆತ್ಮನಾದರೋ ಚಕ್ಷುರಿಂದ್ರಿಯ ಗೋಚರನಲ್ಲವಾದ್ದರಿಂದ ಚಕ್ಷುಸ್ಸಿನಿಂದ ಶರೀರವನ್ನು ಗ್ರಹಿಸುತ್ತಿರುವಾಗ ಆತ್ಮನು ಅರಿಯಬರುವದಿಲ್ಲ. ಬೇರೆಬೇರೆಯಾಗಿ ಗ್ರಹಿಸುವದಕ್ಕೆ ತಕ್ಕದ್ದಾಗಿರುವ (ಪದಾರ್ಥಕ್ಕೆ) ಪ್ರಕಾರವಾಗಿರುವದೆಂಬುದೊಂದೇ ಸ್ವರೂಪವೆಂಬುದು ಹೊಂದ ಲಾರದು ಎನ್ನದಿರು. ಏಕೆಂದರೆ ಜಾತ್ಯಾದಿಗಳಂತೆ ತದೇಕಾಶ್ರಯತ್ವ, ತದೇಕ ಪ್ರಯೋಜನತ್ವ, ತದ್ವಿಶೇಷಣತ್ವ-ಇವುಗಳಿರುವದರಿಂದ ಶರೀರಕ್ಕೂ ಅವರ ಪ್ರಕಾರ ವಾಗಿರುವದೇ ಸ್ವಭಾವವೆಂದು ನಿಶ್ಚಯವಾಗುತ್ತದೆ.[4] ಎರಡೂ ಜೊತೆಯಲ್ಲಿಯೇ

1. ಶರೀರವು ಕಂಡರೂ ಆತ್ಮನೇನೂ ಕಾಣಿಸುವದಿಲ್ಲವಲ್ಲ !

2. ಶರೀರವು ಆತ್ಮನ ಪ್ರಕಾರವೆಂಬಂತೆ ಒಪ್ಪಿದರೂ ಅಲ್ಲಿ ಲಕ್ಷಣಾರ್ಥವನ್ನು ಕಲ್ಪಿಸಿಕೊಳ್ಳಬೇಕಾಗುವದು- ಎಂದು ಭಾವ.

3. ಗೋತ್ವಾದಿಗಳು ಗೋವೇ ಮುಂತಾದವುಗಳಿಗೆ ಇದೇ ಸಂಬಂಧದಿಂದ ಸೇರಿರುತ್ತವೆ.

4. ಪ್ರಕಾರಪ್ರಕಾರಿಗಳಿಗೆ ನಾವು ಹೇಳಿದ ಸಂಬಂಧವಿರಬೇಕೆಂಬ ನಿಯಮವಿದೆಯೇ ಹೊರತು ಎರಡೂ ಒಂದೇ ಸಾಮಗ್ರಿಯಿಂದ ಗ್ರಾಹ್ಯವಾಗಿರಬೇಕೆಂಬ ನಿಯಮವೇನೂ ಇಲ್ಲ.

ಅರಿಯಲಾಗುತ್ತಿರಬೇಕೆಂಬ ನಿಯಮವಾದರೊ, ಒಂದೇ ಸಾಮಗ್ರಿಗೆ ಜ್ಞೇಯವಾಗಿರುವ ಕಾರಣದಿಂದ ಎಂದು ಹೇಳಿದ್ದಾಗಿದೆ. ಹೇಗೆ ಪೃಥಿವಿಯೇ ಮುಂತಾದವುಗಳಿಗೆ ಗಂಧರಸಾದಿಗಳ ಸಂಬಂಧವು ಸ್ವಾಭಾವಿಕವಾಗಿದ್ದರೂ ಚಕ್ಷುರಿಂದ್ರಿಯದಿಂದ (ಅದನ್ನು) ಗ್ರಹಿಸುವದಾಗುವದಿಲ್ಲವೋ, ಹಾಗೆಯೇ ಚಕ್ಷುರಿಂದ್ರಿಯಕ್ಕೆ ಗೋಚರವಾಗುವ ಶರೀರವು ಆತ್ಮಪ್ರಕಾರವಾಗಿರುವ ಸ್ವಭಾವವುಳ್ಳದ್ದೇ ಆದರೂ ಹಾಗೆಂದು (ಇಂದ್ರಿಯದಿಂದ) ಗೃಹೀತವಾಗುವದಿಲ್ಲ. ಏಕೆಂದರೆ ಆತ್ಮನನ್ನು ಗ್ರಹಿಸುವ ಸಾಮರ್ಥ್ಯವು ಚಕ್ಷುರಿಂದ್ರಿಯಕ್ಕೆ ಇರುವದಿಲ್ಲ. ಇಷ್ಟುಮಾತ್ರದಿಂದ ಶರೀರವು ಆ (ಆತ್ಮನ) ಪ್ರಕಾರವೆಂಬುದು ಇಲ್ಲವಾಗುವದಿಲ್ಲ. ಅದಕ್ಕೆ ಪ್ರಕಾರವಾಗಿಯೇ ಇರುವದೆಂಬ ಸ್ವಭಾವವುಳ್ಳದ್ದಾಗಿರುವದೇ ಸಾಮಾನಾಧಿಕರಣ್ಯಕ್ಕೆ ನಿಮಿತ್ತವು. (ಶರೀರವು) ಆತ್ಮಪ್ರಕಾರವೆಂದು ಪ್ರತಿಪಾದನೆಮಾಡಬಲ್ಲ ಸಾಮರ್ಥ್ಯವುಳ್ಳ ಶಬ್ದ (ಪ್ರಮಾಣವಾದರೊ) ಒಟ್ಟಿಗೇ (ಅದು) ಪ್ರಕಾರವೆಂದು ತಿಳಿಸಿಕೊಡುತ್ತದೆ.[1]

(ಮೂಲ)

ನನು ಚ ಶಾಬ್ದೇಽಪಿ ವ್ಯವಹಾರೇ ಶರೀರಶಬ್ದೇನ ಶರೀರಮಾತ್ರಂ ಗೃಹ್ಯತ ಇತಿ ನಾತ್ಮಪರ್ಯನ್ತತಾ ಶರೀರಶಬ್ದಸ್ಯ। ನೈವಮ್। ಆತ್ಮಪ್ರಕಾರಭೂತಸ್ಯೈವ ಶರೀರಸ್ಯ ಪದಾರ್ಥವಿವೇಕಪ್ರದರ್ಶನಾಯ ನಿರೂಪಣಾತ್ ನಿಷ್ಕರ್ಷಕಶಬ್ದೋಽಯಮ್; ಯಥಾ 'ಗೋತ್ವಮ್', 'ಶುಕ್ಲತ್ವಮ್', 'ಆಕೃತಿಃ', 'ಗುಣಃ' ಇತ್ಯಾದಿಶಬ್ದಾಃ॥

ಅತಃ, ಗವಾದಿಶಬ್ದವದೇವ ಮನುಷ್ಯಾದಿಶಬ್ದಾಃ ಆತ್ಮಪರ್ಯನ್ತಾಃ। ಏವಂ ದೇವಮನುಷ್ಯಾದಿಪಿಣ್ಡವಿಶಿಷ್ಟಾನಾಂ ಜೀವಾನಾಂ ಪರಮಾತ್ಮಶರೀರತಯಾ ತತ್ಪ್ರಕಾರತ್ವಾತ್ ಜೀವಾತ್ಮವಾಚಿನಃ ಶಬ್ದಾಃ ಪರಮಾತ್ಮಪರ್ಯನ್ತಾಃ। ಅತಃ ಪರಸ್ಯ ಬ್ರಹ್ಮಣಃ ಪ್ರಕಾರತಯೈವ ಚಿದಚಿದ್ವಸ್ತುನಃ ಪದಾರ್ಥತ್ವಮಿತಿ ತತ್ಸಾಮಾನಾಧಿಕರಣ್ಯೇನ ಪ್ರಯೋಗಃ। ಅಯಮರ್ಥೋ ವೇದಾರ್ಥಸಙ್ಗ್ರಹೇ ಸಮರ್ಥಿತಃ। ಇದಮೇವ ಶರೀರಾತ್ಮಭಾವಲಕ್ಷಣಮ್, ತಾದಾತ್ಮ್ಯಂ 'ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ' (ವೇ. ಸೂ. ೪-೧-೩) ಇತಿ ವಕ್ಷ್ಯತಿ। 'ಆತ್ಮೇತ್ಯೇವ ತು ಗೃಹ್ಣೀಯಾತ್' ಇತಿ ಚ **ವಾಕ್ಯಕಾರಃ**॥

(ಅರ್ಥ)

(ಆಕ್ಷೇಪ):- ಶಾಬ್ದವ್ಯವಹಾರದಲ್ಲಿಯೂ ಶರೀರಶಬ್ದಕ್ಕೆ ಶರೀರವೇ ವಿಷಯವಾಗಿರುವದರಿಂದ ಶರೀರಶಬ್ದವು ಆತ್ಮಪರ್ಯಂತವಲ್ಲವೆನ್ನಬೇಕಲ್ಲ!

1. ಚಕ್ಷುರಿಂದ್ರಿಯವು ಶರೀರವೊಂದನ್ನೇ ಗ್ರಹಿಸುತ್ತದೆ; ಶಬ್ದವು ಶರೀರವನ್ನೂ ಆತ್ಮನನ್ನೂ ಪ್ರಕಾರಪ್ರಕಾರಿಭಾವದಿಂದ ಗ್ರಹಿಸುತ್ತದೆ.

(ಪರಿಹಾರ) :– ಹಾಗಲ್ಲ. ಶರೀರವು ಆತ್ಮಪ್ರಕಾರವೇ ಆಗಿದ್ದರೂ ಪದಾರ್ಥವನ್ನು ವಿಂಗಡಿಸಿ ತಿಳಿಸುವದಕ್ಕಾಗಿ ನಿರೂಪಿಸುವುದರಿಂದ ಇದು ನಿಷ್ಕರ್ಷಶಬ್ದವು. ಹೇಗೆ ಗೋತ್ವ, ಶುಕ್ಲತ್ವ, ಆಕೃತಿ, ಗುಣ– ಮುಂತಾದ ಶಬ್ದಗಳೋ (ಹಾಗೆಯೇ ಈ ಶರೀರಶಬ್ದವೂ ಪ್ರಯುಕ್ತವಾಗುತ್ತದೆ.)[1]

ಆದ್ದರಿಂದ ಗೋವು ಮುಂತಾದ ಶಬ್ದಗಳಂತೆಯೇ ಮನುಷ್ಯಾದಿಶಬ್ದಗಳೂ ಆತ್ಮಪರ್ಯಂತವಾಗಿರುತ್ತವೆ. ಹೀಗೆಯೇ ದೇವತೆ, ಮನುಷ್ಯ– ಮುಂತಾದ ಶರೀರವಿಶಿಷ್ಟರಾದ ಜೀವರು ಪರಮಾತ್ಮಶರೀರವಾಗಿರುವದರಿಂದ ಆತನ ಪ್ರಕಾರವಾಗಿರುವ (ಕಾರಣ)ದಿಂದ ಜೀವಾತ್ಮವಾಚಕಗಳಾದ ಶಬ್ದಗಳು ಪರಮಾತ್ಮಪರ್ಯಂತವಾಗಿರುತ್ತವೆ. ಆದ್ದರಿಂದ ಪರಬ್ರಹ್ಮಕ್ಕೆ ಪ್ರಕಾರವಾಗಿಯೇ ಚಿದಚಿದ್ವಸ್ತುವು ಪದಾರ್ಥವೆನಿಸಿರುವದರಿಂದ ಅದರೊಡನೆ ಸಮಾನಾಧಿಕರಣವಾಗಿ ಪ್ರಯುಕ್ತವಾಗುತ್ತವೆ. **ಈ ವಿಷಯವನ್ನು ವೇದಾರ್ಥಸಂಗ್ರಹದಲ್ಲಿ ಸಾಧಿಸಲಾಗಿರುತ್ತದೆ.**[2] ಈ ಶರೀರಾತ್ಮಭಾವರೂಪವಾದ ತಾದಾತ್ಮ್ಯವನ್ನೇ (ಸೂತ್ರಕಾರರು) 'ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ' (ವೇ. ಸೂ. ೪–೧–೩, ಆತ್ಮನೆಂದೇ ಉಪಾಸನೆ ಮಾಡುತ್ತಾರೆ, ಶಾಸ್ತ್ರಗಳೂ ತಿಳಿಸಿಕೊಡುತ್ತವೆ) ಎಂದು (ಮುಂದೆ) ಹೇಳುವರು. 'ಆತ್ಮನೆಂದೇ ಗ್ರಹಿಸಬೇಕು' ಎಂದು **ವಾಕ್ಯಕಾರನೂ** (ಹೇಳಿರುತ್ತಾನೆ).

## ಶ್ರುತಿಗಳಿಗೆ ಸಾಮರಸ್ಯ

(ಮೂಲ)

ಅತ್ರೇದಂ ತತ್ತ್ವಮ್ – (೧) ಅಚಿದ್ವಸ್ತುನಃ, ಚಿದ್ವಸ್ತುನಃ, ಪರಸ್ಯ ಚ ಬ್ರಹ್ಮಣಃ, ಭೋಗ್ಯತ್ವೇನ, ಭೋಕ್ತೃತ್ವೇನ ಚ ಈಶಿತೃತ್ವೇನ ಚ ಸ್ವರೂಪವಿವೇಕಮಾಹುಃ ಕಾಶ್ಚನ ಶ್ರುತಯಃ। 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ತಸ್ಮಿಂಶ್ಚಾನ್ಯೋ ಮಾಯಯಾ ಸಂನಿರುದ್ಧಃ' (ಶ್ವೇ. ೪–೯), 'ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್' (ಶ್ವೇ. ೪–೧೦), 'ಕ್ಷರಂ ಪ್ರಧಾನಮಮೃತಾಕ್ಷರಂ ಹರಃ ಕ್ಷರಾತ್ಮಾನಾವೀಶತೇ ದೇವ ಏಕಃ' (ಶ್ವೇ. ೧–೧೦), 'ಅಮೃತಾಕ್ಷರಂ ಹರ' ಇತಿ ಭೋಕ್ತಾ ನಿರ್ದಿಶ್ಯತೇ; ಪ್ರಧಾನಮ್ ಆತ್ಮನೋ ಭೋಗ್ಯತ್ವೇನ ಹರತೀತಿ ಹರಃ ! 'ಸ ಕಾರಣಂ ಕರಣಾಧಿಪಾಧಿಪೋ ನ ಚಾಸ್ಯ ಕಶ್ಚಿಜ್ಜನಿತಾ ನ ಚಾಧಿಪಃ' (ಶ್ವೇ. ೬–೯), 'ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ' (ಶ್ವೇ. ೬–೧೬),

---

1. ಗೋವು, ಬಿಳಿಯಗೋವು– ಎಂದು ವಿಶೇಷ್ಯದೊಡನೆಯೂ ಗೋತ್ವವು ಬಿಳುಪು ಎಂದು ಸ್ವತಂತ್ರವಾಗಿಯೂ ಪ್ರಯುಕ್ತವಾಗುವಂತೆ ಶರೀರಶಬ್ದವೂ ಆತ್ಮಪರ್ಯಾಯವಾಗಿಯೂ ಸ್ವತಂತ್ರವಾಗಿಯೂ ಪ್ರಯುಕ್ತವಾಗುವದು ಎಂದಭಿಪ್ರಾಯ.

2. ಕಾರ್ಯಾಲಯದಲ್ಲಿ ಪ್ರಕಟವಾಗಿರುವ "ವೇದಾರ್ಥಸಂಗ್ರಹ"ದ ೫೧ನೆಯ ಪ್ರಘಟ್ಟವನ್ನು ನೋಡಿ.

'ಪತಿಂ ವಿಶ್ವಸ್ಯಾತ್ಮೇಶ್ವರಂ ಶಾಶ್ವತಂ ಶಿವಮಚ್ಯುತಮ್' (ತೈ. ನಾ. ೧೧-೩), 'ಜ್ಞಾಜ್ಞೌ ದ್ವಾವಜಾವೀಶನೀಶೌ' (ಶ್ವೇ. ೧-೯), 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್' (ಕಾ. ೫-೧೩), 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ' (ಶ್ವೇ. ೧-೧೨), 'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ' (ಮುಂ. ೩-೧-೧), 'ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ ಜುಷ್ಟಸ್ತತಸ್ತೇನಾಮೃತತ್ವಮೇತಿ' (ಶ್ವೇ. ೧-೬), 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಂ ಪ್ರಜಾಂ ಜನಯನ್ತೀಂ ಸರೂಪಾಮ್ । ಅಜೋ ಹ್ಯೇಕೋ ಜುಷಮಾಣೋऽನುಶೇತೇ ಜಹಾತ್ಯೇನಾಂ ಭುಕ್ತಭೋಗಾಮಜೋऽನ್ಯಃ' (ಶ್ವೇ. ೪-೫), 'ಸಮಾನೇ ವೃಕ್ಷೇ ಪುರುಷೋ ನಿಮಗ್ನೋऽನೀಶಯಾ ಶೋಚತಿ ಮುಹ್ಯಮಾನಃ । ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ' (ಶ್ವೇ. ೪-೭) ಇತ್ಯಾದ್ಯಾಃ ॥

(ಅರ್ಥ)

ಇಲ್ಲಿ ಇದು ತತ್ತ್ವವು[1] :- (೧) **ಅಚಿದ್ವಸ್ತುವೂ ಚಿದ್ವಸ್ತುವೂ ಪರಬ್ರಹ್ಮವೂ ಭೋಗ್ಯವಾಗಿ, ಭೋಕ್ತೃವಾಗಿ, ಈಶಿತೃವಾಗಿ ಇರುವದರಿಂದ (ಅವುಗಳ) ಸ್ವರೂಪವನ್ನು ವಿಂಗಡಿಸಿ ಕೆಲವು ಶ್ರುತಿಗಳು ಹೇಳುತ್ತಿರುವವು.** 'ಇದರಿಂದ ಮಾಯಿಯು ಇದೆಲ್ಲವನ್ನೂ ಸೃಜಿಸುತ್ತಾನೆ; ಮತ್ತು ಅದರಲ್ಲಿ ಮತ್ತೊಬ್ಬನು ಮಾಯೆಯಿಂದ ಕಟ್ಟುವಡೆದಿರುತ್ತಾನೆ' (ಶ್ವೇ. ೪-೯), 'ಪ್ರಕೃತಿಯನ್ನು ಮಾಯೆಯೆಂದು ತಿಳಿಯಬೇಕು. ಮಹೇಶ್ವರನನ್ನೇ ಮಾಯಿಯೆಂದು ತಿಳಿಯಬೇಕು' (ಶ್ವೇ. ೪-೧೦), 'ಕ್ಷರವು ಪ್ರಧಾನವು, ಅಮೃತಾಕ್ಷರವೇ ಹರನು; ಕ್ಷರಾತ್ಮರುಗಳನ್ನು ಒಬ್ಬ ದೇವನೇ ಆಳುತ್ತಾನೆ.' (ಶ್ವೇ. ೧-೧೦) ಇಲ್ಲಿ 'ಅಮೃತಾಕ್ಷರನೇ ಹರನು' ಎಂದು ಭೋಕ್ತೃವನ್ನು ನಿರ್ದೇಶಿಸಿದೆ; ಪ್ರಧಾನವನ್ನು (ತನಗೆ) ಭೋಗ್ಯವಾಗಿ ಒಯ್ಯುತ್ತಾನಾದ್ದರಿಂದ (ಅವನು) ಹರನು. 'ಆತನೇ ಕಾರಣವು, ಕರಣಾಧಿಪರಿಗೆ ಅಧಿಪತಿಯು, 'ಈತನನ್ನು ಉಂಟುಮಾಡುವವನು ಯಾವನೂ ಇಲ್ಲ, (ಇವನಿಗೆ) ಒಡೆಯನೂ (ಯಾವನೂ) ಇಲ್ಲ' (ಶ್ವೇ. ೬-೯), 'ಪ್ರಧಾನಕ್ಷೇತ್ರಜ್ಞರಿಗೆ ಪತಿಯು, ಗುಣಗಳಿಗೆ ಈಶನು' (ಶ್ವೇ. ೬-೧೬), 'ಎಲ್ಲಕ್ಕೂ ಪತಿಯು, ಆತ್ಮರಿಗೆ ಈಶ್ವರನು, ಶಾಶ್ವತನು, ಶಿವನು, ಅಚ್ಯುತನು' (ತೈ. ನಾ. ೧೧-೧), 'ಜ್ಞ, ಅಜ್ಞ-ಇವರಿಬ್ಬರೂ ಅಜರು, ಈಶ್ವರನೂ ಅನೀಶ್ವರನೂ ಆಗಿರುವವರು' (ಶ್ವೇ. ೧-೯), 'ನಿತ್ಯರಿಗೆ ನಿತ್ಯನು, ಚೇತನರುಗಳಿಗೂ ಚೇತನನು; ಬಹುಮಂದಿಗೆ ಒಬ್ಬನೇ ಯಾವನು ಕಾಮಗಳನ್ನು ಸಲ್ಲಿಸು

---

1. ಶ್ರುತಿಗಳೆಲ್ಲಕ್ಕೂ ಮುಖ್ಯಾರ್ಥವೇ ಇದೆ, ಪರವಾದಿಗಳ ಮತಗಳಲ್ಲಿರುವಂತೆ ತಾದಾತ್ಮ್ಯವನ್ನು ಬೋಧಿಸುವದಕ್ಕಾಗಿ ಯಾವ ಶ್ರುತಿಗೂ ಗೌಣಾರ್ಥವನ್ನು ಕಲ್ಪಿಸಬೇಕಾದದ್ದಿಲ್ಲ- ಎಂಬುದನ್ನು ಇಲ್ಲಿ ತೋರಿಸುವದಕ್ಕೆ ಪ್ರಾರಂಭಿಸಿರುತ್ತಾರೆ.

ತ್ತಿರುವನೋ' (ಕ. ೫-೧೩), 'ಭೋಕ್ತೃ, ಭೋಗ್ಯ, ಪ್ರೇರಿತೃ- ಇವರನ್ನು ಅರಿತುಕೊಂಡು' (ಶ್ವೇ. ೧-೧೨), 'ಅವರಿಬ್ಬರಲ್ಲಿ ಒಬ್ಬನು ಅರಳೀಹಣ್ಣನ್ನು ಸವಿದು ತಿನ್ನುತ್ತಾನೆ, ತಿನ್ನದೆ ಮತ್ತೊಬ್ಬನು ನೋಡುತ್ತಿರುತ್ತಾನೆ' (ಮುಂ. ೩-೧-೧), 'ಆತ್ಮನನ್ನೂ ಪ್ರೇರಕನನ್ನೂ ಬೇರ್ಪಡಿಸಿ ಅರಿತುಕೊಂಡು, ಆ ಬಳಿಕ ತೃಪ್ತನಾಗಿ, ಅದರಿಂದ ಅಮೃತತ್ವವನ್ನು ಹೊಂದುತ್ತಾನೆ' (ಶ್ವೇ. ೧-೬), 'ಕೆಂಪು, ಬಿಳುಪು, ಕಪ್ಪು (ಹೀಗೆ ನೂರು ಬಣ್ಣಗಳುಳ್ಳ) ಒಂದು ಆಡನ್ನು, ಅನೇಕ ಸಮಾನರೂಪದ ಪ್ರಜೆಗಳನ್ನುಂಟುಮಾಡುತ್ತಿರಲು, ಒಂದು ಮೇಕೆಯು ಸೇವಿಸುತ್ತಾ ಹಿಂದೆ ಮಲಗಿರುತ್ತದೆ; ಭೋಗವನ್ನು ಭುಂಜಿಸಿರುವ ಈ (ಆಡನ್ನು) ಮತ್ತೊಂದು ಮೇಕೆಯು ಬಿಟ್ಟುಬಿಡುತ್ತದೆ' (ಶ್ವೇ. ೪-೫), 'ಅದೇ ಮರದಮೇಲೆ ಪುರುಷನು ಕುಳಿತು ಶಕ್ತಿಯಿಲ್ಲದೆ ಮೋಹದಿಂದ ಶೋಕಿಸುತ್ತಿರುತ್ತಾನೆ; ತನಗಿಂತ ಅನ್ಯನಾದ ಈಶನನ್ನು ಸೇವಿಸಿ ಯಾವಾಗ ಕಂಡುಕೊಳ್ಳುತ್ತಾನೋ (ಆಗ) ಈತನ ಮಹಿಮೆಯಿದೆಂದು ಶೋಕವನ್ನು ತೊಲಗಿಸಿಕೊಳ್ಳುತ್ತಾನೆ' (ಶ್ವೇ.೪-೭)-ಇವೇ ಮುಂತಾದವು (ಅಂಥ ಶ್ರುತಿಗಳು).[1]

(ಮೂಲ)

ಸ್ಮೃತಾವಪಿ—

**ಅಹಙ್ಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ**
**ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।**
**ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥**
(ಗೀ. ೭-೪,೫)

**ಸರ್ವಭೂತಾನಿ ಕೌನ್ತೇಯ ಪ್ರಕೃತಿಂ ಯಾನ್ತಿ ಮಾಮಿಕಾಮ್ ।**
**ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಮ್ ॥**
**ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ ।**
**ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್ ॥** (ಗೀ.೯-೭,೮)
**ಮಯಾಧ್ಯಕ್ಷೇಣ ಪ್ರಕೃತಿಸ್ಸೂಯತೇ ಸಚರಾಚರಮ್ ।**
**ಹೇತುನಾನೇನ ಕೌನ್ತೇಯ ಜಗದ್ಧಿ ಪರಿವರ್ತತೇ ॥** (ಗೀ. ೯-೧೦)
**ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ॥** (ಗೀ. ೧೩-೧೯)
**ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಮ್ ।**
**ಸಮ್ಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥** (ಗೀ. ೧೪-೩)

---

1. ಇವೆಲ್ಲ ಅಚಿತ್ತು, ಚಿತ್ತು, ಬ್ರಹ್ಮ- ಈ ಮೂರರ ಸ್ವಭಾವವೂ ಬೇರೆಬೇರೆ ಎಂದು ತಿಳಿಸುತ್ತವೆ.

ಇತಿ । ಜಗದ್ಯೋನಿಭೂತಂ ಮಹತ್ ಬ್ರಹ್ಮ ಮದೀಯಂ ಪ್ರಕೃತ್ಯಾಖ್ಯಂ ಭೂತ ಸೂಕ್ಷ್ಮಮ್ ಅಚಿದ್ವಸ್ತು ಯತ್ ತಸ್ಮಿನ್ ಚೇತನಾಖ್ಯಂ ಗರ್ಭಂ ಯತ್ ಸಂಯೋಜಯಾಮಿ ತತಃ ಮತ್ಕೃತಾಚ್ಚಿದಚಿತ್ಸಂಸರ್ಗಾತ್ ದೇವಾದಿಸ್ಥಾವರಾನ್ತಾನಾಮಚಿನ್ಮಿಶ್ರಾಣಾಂ ಸರ್ವಭೂತಾನಾಂ ಸಮ್ಭವೋ ಭವತಿ – ಇತ್ಯರ್ಥಃ ॥

(ಅರ್ಥ)

**ಸ್ಮೃತಿಯಲ್ಲಿಯೂ** (ಹೀಗೆಂದಿದೆ) "...ಅಹಂಕಾರ– ಎಂದಿಂತು ನನ್ನ ಪ್ರಕೃತಿಯು ಎಂಟು ಬಗೆಯಾಗಿ ವಿಂಗಡವಾಗಿರುತ್ತದೆ. ಇದು **ಅಪರ**(ಪ್ರಕೃತಿ). ಇದಕ್ಕಿಂತಲೂ ಬೇರೆಯಾಗಿರುವ ನನ್ನ **ಪರ**ಪ್ರಕೃತಿಯನ್ನು ಅರಿತುಕೊ; ಅದು ಜೀವ(ರೂಪ)ವಾಗಿರುತ್ತದೆ. ಎಲೈ ಮಹಾಬಾಹುವೆ, ಅದರಿಂದ ಈ ಜಗತ್ತೆಲ್ಲವೂ ಧರಿಸಲ್ಪಟ್ಟಿರುವದು[1]; (ಗೀ. ೭–೪,೫) ಎಲೈ ಕೌಂತೇಯನೆ, ಎಲ್ಲಾ ಭೂತಗಳೂ ಕಲ್ಪವು ಕ್ಷಯವಾಗಲು ನನ್ನ ಪ್ರಕೃತಿಯನ್ನು ಸೇರಿಕೊಳ್ಳುವವು; ಮತ್ತೆ ಕಲ್ಪಾದಿಯಲ್ಲಿ ನನ್ನ ಪ್ರಕೃತಿಯನ್ನು ವಶಮಾಡಿಕೊಂಡು, ಪ್ರಕೃತಿಯ ವಶವಾಗಿರುವ ಈ ಭೂತಗ್ರಾಮವನ್ನು ಎಲ್ಲವನ್ನೂ (ನಾನು) ಹೊರಗೆಡಹುವೆನು (ಗೀ. ೯–೭,೮). ಅಧ್ಯಕ್ಷನಾದ ನನ್ನಿಂದ ಪ್ರಕೃತಿಯು ಚರಾಚರಸಹಿತವಾದ (ಜಗತ್ತನ್ನು) ಹಡೆಯುತ್ತಿರುವದು; ಎಲೈ ಕೌಂತೇಯನೆ, ಈ ಕಾರಣದಿಂದ ಜಗತ್ತು (ಮತ್ತೆಮತ್ತೆ) ಸುತ್ತಾಡುತ್ತಿರುವದು (ಗೀ. ೯–೧೦), 'ಪ್ರಕೃತಿ, ಪುರುಷ– ಈ ಎರಡನ್ನೂ ಅನಾದಿಯೆಂದು ತಿಳಿ' (ಗೀ. ೧೩–೧೯), 'ಮಹತ್ತು ಬ್ರಹ್ಮವು ನನ್ನ ಯೋನಿಯು; ಅದರಲ್ಲಿ ನಾನು ಗರ್ಭವನ್ನು ಆಧಾನಮಾಡುವೆನು. ಅದರಿಂದ ಎಲೈ ಭಾರತನೆ, ಎಲ್ಲಾ ಭೂತಗಳ ಉತ್ಪತ್ತಿಯೂ ಆಗುತ್ತಿರುವದು'' (ಗೀ. ೧೪–೩)–(ಈ ಶ್ಲೋಕಕ್ಕೆ) ಜಗತ್ಕಾರಣಭೂತವಾದ ಮಹತ್ತಾದ ಬ್ರಹ್ಮವು ಪ್ರಕೃತಿಯೆಂಬ ಭೂತಸೂಕ್ಷ್ಮವಾದ ಅಚಿದ್ವಸ್ತುವಿದೆಯಲ್ಲ, ಅದರಲ್ಲಿ ಚೇತನವೆಂಬ ಗರ್ಭವನ್ನು ನಾನು ಜೋಡಿಸುತ್ತೇನಲ್ಲ, ಆ ನಾನು ಮಾಡಿದ ಚಿದಚಿತ್ತುಗಳ ಸಂಬಂಧದಿಂದ ದೇವಾದಿಯಾಗಿ ಸ್ಥಾವರದವರೆಗಿನ ಸರ್ವಭೂತಗಳ ಉತ್ಪತ್ತಿಯೂ ಆಗುತ್ತದೆ ಎಂದರ್ಥ.[2]

(ಮೂಲ)

ಏವಂ ಭೋಕ್ತೃಭೋಗ್ಯರೂಪೇಣ ಅವಸ್ಥಿತಯೋಃ, ಸರ್ವಾವಸ್ಥಾವಸ್ಥಿತಯೋಃ ಚಿದಚಿತೋಃ, ಪರಮಪುರುಷಶರೀರತಯಾ ತನ್ನಿಯಾಮ್ಯತ್ವೇನ ತದಪೃಥಕ್ಸ್ಥಿತಿಂ ಪರಮಪುರುಷಸ್ಯ ಚ ಆತ್ಮತ್ವಮಾಹುಃ ಕಾಶ್ಚನ ಶ್ರುತಯಃ । 'ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅನ್ತರೋ ಯಂ ಪೃಥಿವೀ ನ ವೇದ ಯಸ್ಯ

1. ಇಲ್ಲಿ ಈಶ್ವರ, ಅವನ ಚಿದಚಿತ್ಪ್ರಕೃತಿಗಳು ಇವನ್ನು ವಿಂಗಡಿಸಿ ತಿಳಿಸಿದೆ.

2. ಇಲ್ಲಿಯೂ ಚಿದ ಚಿದ್ವಸ್ತುಗಳು, ಈಶ್ವರ– ಇವುಗಳ ಸ್ವಭಾವಭೇದವನ್ನು ಹೇಳಿದಂತೆ ಆಯಿತು ಎಂದು ಭಾವ.

ಪೃಥಿವೀ ಶರೀರಂ ಯಃ ಪೃಥಿವೀಮನ್ತರೋ ಯಮಯತಿ' (ಬೃ. ಮಾ. ೩-೭-೭) ಇತ್ಯಾರಭ್ಯ 'ಯ ಆತ್ಮನಿ ತಿಷ್ಠನ್ನಾತ್ಮನೋಽನ್ತರೋ ಯಮಾತ್ಮಾ ನ ವೇದ ಯಸ್ಯಾತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ ಸ ತ ಆತ್ಮಾಽನ್ತರ್ಯಾಮ್ಯಮೃತಃ' (ಬೃ. ಮಾ. ೩-೭-೩೦) ಇತಿ ; ತಥಾ 'ಯಃ ಪೃಥಿವೀಮನ್ತರೇ ಸಞ್ಚರನ್ ಯಸ್ಯ ಪೃಥಿವೀ ಶರೀರಂ ಯಂ ಪೃಥಿವೀ ನ ವೇದ' (ಸುಬಾಲ. ೭) ಇತ್ಯಾರಭ್ಯ 'ಯೋಽಕ್ಷರಮನ್ತರೇ ಸಞ್ಚರನ್ ಯಸ್ಯಾಕ್ಷರಂ ಶರೀರಂ ಯಮಕ್ಷರಂ ನ ವೇದ ಯೋ ಮೃತ್ಯುಮನ್ತರೇ ಸಞ್ಚರನ್ ಯಸ್ಯ ಮೃತ್ಯುಃ ಶರೀರಂ ಯಂ ಮೃತ್ಯುರ್ನ ವೇದ ಏಷ ಸರ್ವಭೂತಾನ್ತರಾತ್ಮಾಽಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ' (ಸುಬಾಲ. ೭)। ಅತ್ರ ಮೃತ್ಯುಶಬ್ದೇನ ತಮಶ್ಶಬ್ದವಾಚ್ಯಂ ಸೂಕ್ಷ್ಮಾವಸ್ಥಮಚಿದ್ವಸ್ತು ಅಭಿಧೀಯತೇ; ಅಸ್ಯಾಮೇವೋಪನಿಷದಿ 'ಅವ್ಯಕ್ತಮಕ್ಷರೇ ಲೀಯತೇ ಅಕ್ಷರಂ ತಮಸಿ ಲೀಯತೇ' (ಸುಬಾಲ. ೨) ಇತಿ ವಚನಾತ್ । 'ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' (ತೈ. ಆ. ಚಿತ್ತಿ. ೩-೧೧-೨) ಇತಿ ಚ ॥

(ಅರ್ಥ)

(೨) **ಹೀಗೆಯೇ ಭೋಕ್ತೃಭೋಗ್ಯರೂಪದಿಂದ ಇದ್ದುಕೊಂಡಿರುವ ಚಿದಚಿತ್ತುಗಳು ಯಾವ ಅವಸ್ಥೆಯಲ್ಲಿದ್ದರೂ ಪರಮಪುರುಷನ ಶರೀರವಾಗಿರುವವರಿಂದ ಅವನಿಂದ ನಿಯಮಿತವಾಗಿ ಅವನಿಂದ ಬೇರ್ಪಡದೇ ಇರುವವೆಂದೂ ಮತ್ತು ಪರಮಪುರುಷನು (ಅವುಗಳ) ಆತ್ಮನೆಂದೂ ಕೆಲವು ಶ್ರುತಿಗಳು ಹೇಳುತ್ತಿರುವವು.** 'ಯಾವನು ಪೃಥಿವಿಯಲ್ಲಿದ್ದುಕೊಂಡು ಪೃಥಿವಿಗಿಂತ ಬೇರೆಯಾಗಿರುವನೋ, ಯಾವನನ್ನು ಪೃಥಿವಿಯು ಅರಿಯದೋ ಯಾವನಿಗೆ ಪೃಥಿವಿಯು ಶರೀರವೋ, ಯಾವಾತನು ಪೃಥಿವಿಯನ್ನು ಒಳಗಿದ್ದು ಹಿಡಿತದಲ್ಲಿಟ್ಟಿರುವನೋ' (ಬೃ. ೩-೭-೭)[1] ಎಂದು ನೊದಲಾಗಿ 'ಯಾವನು ಆತ್ಮನಲ್ಲಿದ್ದುಕೊಂಡು ಆತ್ಮನಿಗಿಂತ ಬೇರೆಯಾಗಿರುವನೋ, ಯಾವಾತನನ್ನು ಆತ್ಮನು ಅರಿಯನೋ, ಯಾವಾತನಿಗೆ ಆತ್ಮನು ಶರೀರವೋ, ಯಾವಾತನು ಆತ್ಮನನ್ನು ಒಳಗಿದ್ದು 'ಹಿಡಿತದಲ್ಲಿಟ್ಟುಕೊಂಡಿರುವನೋ ಆತನು ನಿನ್ನ ಆತ್ಮನು, ಅಮೃತನಾದ ಅಂತರ್ಯಾಮಿ' (ಬೃ. ಮಾ. ೩-೭-೩೦), ಹೀಗೆಯೇ 'ಯಾವಾತನು ಪೃಥಿವಿಯ ಒಳಗೆ ಸಂಚರಿಸುತ್ತಾ ಇರುವನೋ, ಯಾವನಿಗೆ ಪೃಥಿವಿಯು ಶರೀರವೋ ಯಾವಾತನನ್ನು ಪೃಥಿವಿಯು ಅರಿಯದೋ'–ಎಂದು ಮೊದಲುಮಾಡಿ 'ಯಾವನು ಅಕ್ಷರದ ಒಳಗೆ ಸಂಚರಿಸುತ್ತಿರುವನೋ, ಯಾವಾತನಿಗೆ ಅಕ್ಷರವು ಶರೀರವೋ, ಯಾವಾತನನ್ನು ಅಕ್ಷರವು ಅರಿಯದೋ, ಯಾವಾತನು ಮೃತ್ಯುವಿನ ಒಳಗೆ ಸಂಚರಿಸುತ್ತಿರುವನೋ ಯಾವಾತನಿಗೆ ಮೃತ್ಯುವು ಶರೀರವಾಗಿರುವದೋ

1. ಈ ಶರೀರಾತ್ಮಭಾವವನ್ನು ಹೇಳುವ ಶ್ರುತಿಗಳನ್ನು ಹಿಂದೆ (ಪು. ೨೫೮) ಉದಾಹರಿಸಿತ್ತು.

ಯನಾದಾತನನ್ನು ಮೃತ್ಯುವು ಅರಿಯದೋ, (ಆ) ಈತನು ಎಲ್ಲಾ ಭೂತಗಳಿಗೂ ಅಂತರಾತ್ಮನು, ಅಪಹತಪಾಪ್ಮನು, ದಿವ್ಯನು, ಒಬ್ಬನೇ ದೇವನಾದ ನಾರಾಯಣನು' (ಸುಬಾಲ. ೭) ಎಂದೂ (ಶ್ರುತಿಯಿದೆ). ಇಲ್ಲಿ ಮೃತ್ಯುವೆಂಬ ಶಬ್ದದಿಂದ ತಮಶ್ಶಬ್ದಕ್ಕೆ ವಾಚ್ಯವಾದ ಸೂಕ್ಷ್ಮಾವಸ್ಥೆಯಲ್ಲಿರುವ ಅಚಿದ್ವಸ್ತುವನ್ನು ಹೇಳಿರುತ್ತದೆ. ಅದು ಹೇಗೆ ಗೊತ್ತು? ಎಂದರೆ ಇದೇ ಉಪನಿಷತ್ತಿನಲ್ಲಿ 'ಅವ್ಯಕ್ತವು ಅಕ್ಷರದಲ್ಲಿ ಲಯವಾಗುವದು; ಅಕ್ಷರವು ತಮಸ್ಸಿನಲ್ಲಿ ಲಯವಾಗುತ್ತದೆ' (ಸುಬಾಲ ೨) ಎಂಬ ವಚನವಿದೆ. 'ಒಳಹೊಕ್ಕಿದ್ದು ಜನರನ್ನು ಶಾಸನಮಾಡುತ್ತಿರುವವನು ಸರ್ವಾತ್ಮನು' (ತೈ. ಆ. ಚಿತ್ತಿ. ३-೧೧-೨೧) ಎಂದೂ (ವಚನವಿದೆ).

(ಮೂಲ)

ಏವಂ ಸರ್ವಾವಸ್ಥಾವಸ್ಥಿತಚಿದಚಿದ್ವಸ್ತುಶರೀರತಯಾ ತತ್ಪ್ರಕಾರಃ ಪರಮಪುರುಷ ಏವ ಕಾರ್ಯಾವಸ್ಥಕಾರಣಾವಸ್ಥಜಗದ್ರೂಪೇಣಾವಸ್ಥಿತಃ ಇತೀಮಮರ್ಥಂ ಜ್ಞಾಪಯಿತುಂ ಕಾಶ್ಚನ ಶ್ರುತಯಃ ಕಾರ್ಯಾವಸ್ಥಂ ಕಾರಣಾವಸ್ಥಂ ಚ ಜಗತ್ ಸ ಏವೇತ್ಯಾಹುಃ 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್ | ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ ತತ್ತೇಜೋಽಸೃಜತ' (ಛಾಂ. ೬-೨-೧,३) ಇತ್ಯಾರಭ್ಯ 'ಸನ್ಮೂಲಾಸ್ಸೋಮ್ಯೇಮಾಸ್ಸರ್ವಾಃ ಪ್ರಜಾಸ್ಸದಾಯತನಾಸ್ಸತ್ಪ್ರತಿಷ್ಠಾಃ' (ಛಾಂ. ೬-೮-೬), 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ' (ಛಾಂ. ೬-೮-೭) ಇತಿ | ತಥಾ 'ಸೋಽಕಾಮಯತ | ಬಹು ಸ್ಯಾಂ ಪ್ರಜಾಯೇಯೇತಿ | ಸ ತಪೋಽತಪ್ಯತ | ಸ ತಪಸ್ತಪ್ತ್ವಾ | ಇದಂ ಸರ್ವಮಸೃಜತ' (ತೈ. ೨-೬) ಇತ್ಯಾರಭ್ಯ 'ಸತ್ಯಂ ಚಾನೃತಂ ಚ ಸತ್ಯಮಭವತ್' (ತೈ. ೨-೬) ಇತ್ಯಾದ್ಯಾಃ ||

ಅತ್ರಾಪಿ ಶ್ರುತ್ಯನ್ತರಸಿದ್ಧಶ್ಚಿದಚಿತೋಃ ಪರಮಪುರುಷಸ್ಯ ಚ ಸ್ವರೂಪವಿವೇಕಃ ಸ್ಮಾರಿತಃ 'ಹನ್ತಾಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾಂ.೬-३-೨) ಇತಿ | 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್ | ತದನುಪ್ರವಿಶ್ಯ | ಸಚ್ಚ ತ್ಯಚ್ಚಾಭವತ್....ವಿಜ್ಞಾನಂ ಚಾವಿಜ್ಞಾನಂ....' (ತೈ. ೨-೬.) ಇತಿ ಚ | ಅನೇನ ಜೀವೇನಾತ್ಮನಾನುಪ್ರವಿಶ್ಯ 'ಇತಿ ಜೀವಸ್ಯ ಬ್ರಹ್ಮಾತ್ಮಕತ್ವಮ್, 'ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್', 'ವಿಜ್ಞಾನಂ ಚಾವಿಜ್ಞಾನಂ ಚ' ಇತ್ಯನೇನೈಕಾರ್ಥ್ಯಾತ್ ಆತ್ಮಶರೀರಭಾವನಿಬನ್ಧನಮಿತಿ ವಿಜ್ಞಾಯತೇ | ಏವಂಭೂತಮೇವ ನಾಮರೂಪವ್ಯಾಕರಣಂ 'ತದ್ಧೇದಂ ತರ್ಹ್ಯವ್ಯಾಕೃತಮಾಸೀತ್ | ತನ್ನಾಮರೂಪಾಭ್ಯಾಂ ವ್ಯಾಕ್ರಿಯತ' (ಬೃ. ೧-೪-೭) ಇತ್ಯತ್ರಾಪ್ಯುಕ್ತಮ್ | ಅತಃ ಕಾರ್ಯಾವಸ್ಥಃ ಕಾರಣಾವಸ್ಥಶ್ಚ ಸ್ಥೂಲಸೂಕ್ಷ್ಮಚಿದಚಿದ್ವಸ್ತುಶರೀರಃ ಪರಮಪುರುಷ ಏವೇತಿ

ಕಾರಣಾತ್ ಕಾರ್ಯಸ್ಯ ಅನನ್ಯತ್ವೇನ ಕಾರಣವಿಜ್ಞಾನೇನ ಕಾರ್ಯಸ್ಯ ಜ್ಞಾತತಯಾ ಏಕವಿಜ್ಞಾನೇನ ಸರ್ವವಿಜ್ಞಾನಂ ಸಮಾಹಿತಮುಪಪನ್ನತರಮ್ | 'ಹಂತಾಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾಽಽತ್ಮನಾಽನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' ಇತಿ 'ತಿಸ್ರೋ ದೇವತಾ' ಇತಿ ಸರ್ವಮಚಿದ್ವಸ್ತು ನಿರ್ದಿಶ್ಯ ತತ್ರ ಸ್ವಾತ್ಮಕಜೀವಾನುಪ್ರವೇಶೇನ ನಾಮರೂಪವ್ಯಾಕರಣವಚನಾತ್ ಸರ್ವೇ ವಾಚಕಾಃ ಶಬ್ದಾಃ ಅಚಿದ್ವಿಶಿಷ್ಟಜೀವವಿಶಿಷ್ಟಪರಮಾತ್ಮನ ಏವ ವಾಚಕಾಃ ಇತಿ ಕಾರಣಾವಸ್ಥ ಪರಮಾತ್ಮವಾಚಿನಾ ಶಬ್ದೇನ ಕಾರ್ಯವಾಚಿನಃ ಶಬ್ದಸ್ಯ ಸಾಮಾನಾಧಿಕರಣ್ಯಂ ಮುಖ್ಯವೃತ್ತಮ್ ||

(ಅರ್ಥ)

(೩) **ಹೀಗೆಯೇ ಎಲ್ಲಾ ಅವಸ್ಥೆಗಳಲ್ಲಿಯೂ ಇರುವ ಚಿದಚಿದ್ವಸ್ತುಗಳೇ (ಇವನ) ಶರೀರವಾಗಿರುವದರಿಂದ ಆ (ಚಿದಚಿದ್ವಸ್ತು)ಪ್ರಕಾರಳನಾದ ಪರಮಪುರುಷನೇ ಕಾರ್ಯಾವಸ್ಥೆಯಲ್ಲಿಯೂ ಕಾರಣಾವಸ್ಥೆಯಲ್ಲಿಯೂ ಇರುವ ಜಗದ್ರೂಪನಿಂದ ಇರುತ್ತಾನೆ- ಎಂಬೀ ಅರ್ಥವನ್ನು ತಿಳಿಯಿಸಿಕೊಡುವದಕ್ಕಾಗಿ ಕೆಲವು ಶ್ರುತಿಗಳು ಕಾರ್ಯಾವಸ್ಥೆಯಲ್ಲಿರುವ ಮತ್ತು ಕಾರಣಾವಸ್ಥೆಯಲ್ಲಿರುವ ಜಗತ್ತು ಆತನೇ ಎಂದು ಹೇಳುತ್ತಿರುವವು.** (ಉದಾಹರಣೆಗೆ) "ಅಪ್ಪ, ಇದು ತನಗೆರಡನೆಯದಿಲ್ಲದ ಸತ್ತೊಂದೇ ಆಗಿತ್ತು; ಅದು 'ಬಹುವಾಗುವೆನು, ಹುಟ್ಟುವೆನು' ಎಂದು ಆಲೋಚಿಸಿಕೊಂಡಿತು. ಅದು ತೇಜಸ್ಸನ್ನು ಸೃಷ್ಟಿಸಿತು" (ಛಾಂ. ೬-೨-೧, ३) ಎಂದು ಪ್ರಾರಂಭಿಸಿ 'ಅಪ್ಪ, ಪ್ರಜೆಗಳಿಗೆ ಸತ್ತೇ ಮೂಲವು, ಸತ್ತೇ ಆಶ್ರಯವು, ಸತ್ತನ್ನೇ ಅವು ಹೋಗಿಸೇರುತ್ತಿರುವವು' (ಛಾಂ. ೬-೮-೬), 'ಇವೆಲ್ಲಕ್ಕೂ ಇದೇ ಆತ್ಮನು. ಅದು ಸತ್ಯವು, ಅದೇ ಆತ್ಮನು; ಶ್ವೇತಕೇತುವೆ, ಅದೇ ನೀನು' (ಛಾಂ. ೬-೮-೭) ಎಂಬ (ವಚನ). ಹಾಗೆಯೇ 'ಆತನು ಬಹುವಾಗುವೆನು, ಹುಟ್ಟುವೆನು-ಎಂದು ಇಚ್ಛಿಸಿದನು. ಆತನು ತಪಸ್ಸನ್ನು ಮಾಡಿದನು. ಆತನು ತಪಸ್ಸನ್ನು ಮಾಡಿ ಇದೆಲ್ಲವನ್ನೂ ಸೃಷ್ಟಿಸಿದನು' (ತೈ. ೨-೬) ಎಂದು ಆರಂಭಿಸಿ 'ಸತ್ಯವೂ ಅನೃತವೂ ಸತ್ಯವೇ ಆಯಿತು' (ತೈ. ೨-೬)- ಮುಂತಾದ ವಚನಗಳು (ಉಪಪಾದಿಸುತ್ತವೆ).

ಇಲ್ಲಿಯೂ[1] ಬೇರೆಯ ಶ್ರುತಿಗಳಲ್ಲಿ ಸಿದ್ಧವಾಗಿರುವ ಚಿದಚಿತ್ತುಗಳ ಮತ್ತು ಪರಮಪುರುಷನ (1) **ಸ್ವರೂಪವಿವೇಕವನ್ನು** ನೆನಪಿಗೆ ತಂದುಕೊಟ್ಟಿರುತ್ತದೆ. 'ಒಳ್ಳೆಯದು, ನಾನು ಈ ಮೂರು ದೇವತೆಗಳನ್ನು ಈ ಜೀವಾತ್ಮನ ಮೂಲಕ ಅನುಪ್ರವೇಶಿಸಿ ನಾಮರೂಪಗಳನ್ನು ವಿಂಗಡಿಸುವೆನು' (ಛಾಂ. ೬-೩-೨) ಎಂದೂ 'ಅದನ್ನು ಸೃಷ್ಟಿಸಿ ಅದನ್ನೇ ಅನುಪ್ರವೇಶಿಸಿತು ; ಅದನ್ನು ಅನುಪ್ರವೇಶಿಸಿ ಸತ್ತೂ

1. ಛಾಂದೋಗ್ಯತೈತ್ತಿರೀಯಗಳಲ್ಲಿಯೂ.

ತ್ಯತ್ತೂ ಆಯಿತು. ವಿಜ್ಞಾನವೂ ಅವಿಜ್ಞಾನವೂ (ಆಯಿತು) ; ಸತ್ಯವೂ ಅನೃತವೂ (ಆ) ಸತ್ಯವೇ ಆಯಿತು' (ತೈ. ೨-೬) ಎಂದೂ (ಇಲ್ಲಿ ನೆನಪಿಗೆ ತಂದು ಕೊಟ್ಟಿರುತ್ತದೆ). 'ಈ ಜೀವಾತ್ಮನ ಮೂಲಕ ಅನುಪ್ರವೇಶಿಸಿ' ಎಂದು ಜೀವನು ಬ್ರಹ್ಮಾತ್ಮಕನಾಗಿರುವದು 'ಅದರೊಳಗೆ ಅನುಪ್ರವೇಶಿಸಿ ಸತ್ತೂ ತ್ಯತ್ತೂ ಆದನು, ವಿಜ್ಞಾನವೂ ಅವಿಜ್ಞಾನವೂ[1] ಆದನು' ಎಂಬುವದಕ್ಕೆ ಹೊಂದುವದಕ್ಕಾಗಿ- ಆತ್ಮಶರೀರಭಾವನಿಮಿತ್ತಕವೇ ಎಂದು ಗೊತ್ತಾಗುತ್ತದೆ. ಈ ಬಗೆಯ ನಾಮರೂಪ ವ್ಯಾಕರಣವೇ 'ಇದು ಆಗ ಅವ್ಯಾಕೃತವಾಗಿದ್ದಿತು ; ಅದು ನಾಮರೂಪಗಳಾಗಿ ವಿಂಗಡಿಸಿಕೊಂಡಿತು' (ಬೃ. ೧-೪-೭) ಎಂಬಲ್ಲಿಯೂ ಉಕ್ತವಾಗಿರುತ್ತದೆ. ಆದ್ದರಿಂದ **ಕಾರ್ಯಾವಸ್ಥೆಯಲ್ಲಿರುವವನೂ ಕಾರಣಾವಸ್ಥೆಯಲ್ಲಿರುವವನೂ ಸ್ಥೂಲ ಮತ್ತು ಸೂಕ್ಷ್ಮಚಿದಚಿದ್ವಸ್ತುಶರೀರಕನಾದ ಪರಮಪುರುಷನೇ ಆಗಿರುತ್ತಾನಾಗಿ ಕಾರ್ಯವು ಕಾರಣಕ್ಕಿಂತ ಅನ್ಯವಲ್ಲದಿರುವದರಿಂದ ಕಾರಣದ ವಿಜ್ಞಾನದಿಂದ ಕಾರ್ಯವು ತಿಳಿಯಬರುವದರಿಂದ (2) 'ಒಂದನ್ನರಿತರೆ ಎಲ್ಲವನ್ನೂ ಅರಿತಂತೆ' ಎಂದು (ಹೇಳುವದಕ್ಕೆ) ಇಷ್ಟವಾದದ್ದು ಹೆಚ್ಚಿನ ಉಪಪತ್ತಿಯುಳ್ಳದ್ದಾಗುವದು.** 'ನಾನು ಈ ಮೂವರು ದೇವತೆಗಳನ್ನು ಈ ಜೀವನ ಮೂಲಕ ಅನುಪ್ರವೇಶಿಸಿ ನಾಮರೂಪಗಳನ್ನು ವಿಂಗಡಿಸುವೆನು' ಎಂಬ (ವಾಕ್ಯದಿಂದ) ಅಚಿದ್ವಸ್ತುವನ್ನೆಲ್ಲ 'ಮೂವರು ದೇವತೆಗಳೆಂಬ' (ಹೆಸರಿನಿಂದ) ನಿರ್ದೇಶಮಾಡಿ, ಅದರಲ್ಲಿ ತನ್ನನ್ನು ಆತ್ಮವಾಗುಳ್ಳ ಜೀವರ ಅನುಪ್ರವೇಶದಿಂದ ನಾಮರೂಪಗಳ ವಿಂಗಡವನ್ನು ಹೇಳಿರುವದರಿಂದ **(3) ವಾಚಕಶಬ್ದಗಳೆಲ್ಲ ಅಚಿದ್ವಿಶಿಷ್ಟಜೀವವಿಶಿಷ್ಟವಾದ ಪರಮಾತ್ಮನಿಗೇ ವಾಚಕಗಳಾಗುವದರಿಂದ ಕಾರಣಾವಸ್ಥೆಯಲ್ಲಿರುವ ಪರಮಾತ್ಮನಿಗೆ ವಾಚಕವಾಗಿರುವ ಶಬ್ದದೊಡನೆ ಕಾರ್ಯವಾಚಕವಾದ ಶಬ್ದಕ್ಕೆ ಸಾಮಾನಾಧಿಕರಣ್ಯವನ್ನು (ಹೇಳಿರುವದು) ಮುಖ್ಯವೃತ್ತಿಯಿಂದಲೇ** ಎಂದಾಗುವದು.

(ಮೂಲ)

ಅತಃ ಸ್ಥೂಲಸೂಕ್ಷ್ಮಚಿದಚಿತ್ಪ್ರಕಾರಂ ಬ್ರಹ್ಮೈವ ಕಾರ್ಯಂ ಕಾರಣಂ ಚೇತಿ ಬ್ರಹ್ಮೋಪಾದನಂ ಜಗತ್, ಸೂಕ್ಷ್ಮಚಿದಚಿದ್ವಸ್ತುಶರೀರಕಂ ಬ್ರಹ್ಮೈವ ಕಾರಣಮ್ ಇತಿ ಬ್ರಹ್ಮೋಪಾದಾನತ್ವೇಽಪಿ ಸಂಘಾತಸ್ಯ ಉಪಾದಾನತ್ವೇನ ಚಿದಚಿತೋರ್ಬ್ರಹ್ಮಣಶ್ಚ ಸ್ವಭಾವಾಸಙ್ಕರೋಽಪ್ಯುಪಪನ್ನತರಃ । ಯಥಾ ಶುಕ್ಲಕೃಷ್ಣರಕ್ತತನ್ತುಸಂಘಾತೋಪಾದಾನತ್ವೇಽಪಿ ಚಿತ್ರಪಟಸ್ಯ ತತ್ತತ್ತನ್ತುಪ್ರದೇಶ ಏವ ಶೌಕ್ಲ್ಯಾದಿಸಂಬನ್ಧಃ ಇತಿ ಕಾರ್ಯಾವಸ್ಥಾಯಾಮಪಿ ನ ಸರ್ವತ್ರ ವರ್ಣಾಸಙ್ಕರಃ, ತಥಾ ಚಿದಚಿದೀಶ್ವರಸಂಘಾತೋಪಾದಾನತ್ವೇಽಪಿ ಜಗತಃ ಕಾರ್ಯಾವಸ್ಥಾಯಾಮಪಿ

1. ಚಿದ್ವಸ್ತುವೂ ಅಚಿದ್ವಸ್ತುವೂ.

ಭೋಕ್ತೃತ್ವಭೋಗ್ಯತ್ವನಿಯನ್ತೃತ್ವಾದ್ಯಸಙ್ಕರಃ | ತನ್ತೂನಾಂ ಪೃಥಕ್ಸ್ಥಿತಿಯೋಗ್ಯಾನಾಮೇವ ಪುರುಷೇಚ್ಛಯಾ ಕದಾಚಿತ್ ಸಂಹತಾನಾಂ ಕಾರಣತ್ವಂ ಕಾರ್ಯತ್ವಂ ಚ; ಇಹ ತು ಚಿದಚಿತೋಃ ಸರ್ವಾವಸ್ಥಯೋಃ ಪರಮಪುರುಷಶರೀರತ್ವೇನ ತತ್ಪ್ರಕಾರತಯೈವ ಪದಾರ್ಥತ್ವಾತ್, ತತ್ಪ್ರಕಾರಃ ಪರಮಪುರುಷಃ ಸರ್ವದಾ ಸರ್ವಶಬ್ದವಾಚ್ಯಃ ಇತಿ ವಿಶೇಷಃ | ಸ್ವಭಾವಭೇದಸ್ತದಸಙ್ಕರಶ್ಚ ತತ್ರ ಚಾತ್ರ ಚ ತುಲ್ಯಃ | ಏವಂ ಚ ಸತಿ ಪರಸ್ಯ ಬ್ರಹ್ಮಣಃ ಕಾರ್ಯಾನುಪ್ರವೇಶೇಽಪಿ ಸ್ವರೂಪಾನ್ಯಥಾಭಾವಾಭಾವಾತ್ ಅವಿಕೃತತ್ವಮುಪಪನ್ನತರಮ್ | ಸ್ಥೂಲಾವಸ್ಥಸ್ಯ ನಾಮರೂಪವಿಭಾಗವಿಭಕ್ತಸ್ಯ ಚಿದಚಿದ್ವಸ್ತುನಃ ಆತ್ಮತಯಾ ಅವಸ್ಥಾನಾತ್ ಕಾರ್ಯತ್ವಮಪ್ಯುಪಪನ್ನತರಮ್ | ಅವಸ್ಥಾನ್ತರಾಪತ್ತಿರೇವ ಹಿ ಕಾರ್ಯತಾ ||

(ಅರ್ಥ)

ಆದ್ದರಿಂದ ಸ್ಥೂಲಸೂಕ್ಷ್ಮಚಿದಚಿತ್ಪ್ರಕಾರವಾದ ಬ್ರಹ್ಮವೇ ಕಾರ್ಯವೂ ಕಾರಣವೂ ಆಗಿರುವದರಿಂದ ಜಗತ್ತಿಗೆ ಬ್ರಹ್ಮವೇ ಉಪಾದಾನವು. ಸೂಕ್ಷ್ಮಚಿದಚಿದ್ವಸ್ತುಶರೀರಕವಾಗಿರುವ ಬ್ರಹ್ಮವೇ ಕಾರಣವು[1] ಎಂದಾಗುವದರಿಂದ ಬ್ರಹ್ಮವು ಉಪಾದಾನವಾಗಿದ್ದರೂ (ಒಟ್ಟು) ಸಂಘಾತವೇ ಉಪಾದಾನವಾಗಿರುವದರಿಂದ[2] ಚಿದಚಿತ್ತುಗಳ ಮತ್ತು ಬ್ರಹ್ಮದ ಸ್ವಭಾವಗಳು ಕಲೆಬೆರಕೆಯಾಗಿಲ್ಲವೆಂಬುದಕ್ಕೆ ಹೇಳಿದ ಯುಕ್ತಿಯಿದ್ದಂತೆ ಆಗಿರುತ್ತದೆ. ಹೇಗೆ ಬಿಳಿಯ, ಕಪ್ಪಿನ, ಕೆಂಪಿನ ಎಳೆಗಳ (ಒಟ್ಟು) ಸಂಘಾತವು ಉಪಾದಾನವಾಗಿದ್ದರೂ ಚಿತ್ರಪಟದ ಆಯಾ ಪ್ರದೇಶದಲ್ಲಿರುವ ಬಿಳುಪು ಮುಂತಾದವುಗಳ ಸಂಬಂಧವಿರುವದರಿಂದ ಕಾರ್ಯಾವಸ್ಥೆಯಲ್ಲಿಯೂ ಎಲ್ಲೆಲ್ಲಿಯೂ (ಎಲ್ಲಾ) ಬಣ್ಣಗಳೂ ಕಲೆತಿರುವದಿಲ್ಲವೋ[3], ಹಾಗೆಯೇ ಚಿತ್ತು, ಅಚಿತ್ತು, ಈಶ್ವರ– ಈ ಮೂರರ (ಒಟ್ಟು) ಸಂಘಾತವು ಉಪಾದಾನವಾಗಿರುತ್ತಿದ್ದರೂ ಜಗತ್ತಿನ ಕಾರ್ಯಾವಸ್ಥೆಯಲ್ಲಿಯೂ ಭೋಕ್ತೃತ್ವ, ಭೋಗ್ಯತ್ವ, ನಿಯಂತೃತ್ವ–ಮುಂತಾದವುಗಳು ಕಲೆಬೆರಕೆಯಾಗುವಂತಿಲ್ಲ. ಎಳೆಗಳು (ಸ್ವತಂತ್ರವಾಗಿ) ಬೇರೆಬೇರೆಯಿರುವದಕ್ಕೆ ತಕ್ಕವುಗಳೇ ಆಗಿರುತ್ತಿದ್ದರೂ ಮನುಷ್ಯನ ಇಚ್ಛೆಯಿಂದ ಒಮ್ಮೊಮ್ಮೆ ಒಟ್ಟುಗೂಡಿದಾಗಲೇ (ಅವಕ್ಕೆ) ಕಾರ್ಯತ್ವವೂ ಕಾರಣತ್ವವೂ (ಇರುತ್ತದೆ); ಆದರೆ ಇಲ್ಲಿ ಚಿದಚಿತ್ತುಗಳು ಎಲ್ಲಾ ಅವಸ್ಥೆಗಳಲ್ಲಿಯೂ ಪರಮಪುರುಷನಿಗೆ ಶರೀರವಾಗಿರುವದರಿಂದ ಆತನ ಪ್ರಕಾರವಾಗಿಯೇ (ಅವು)

1. ಸ್ಥೂಲಚಿದಚಿದ್ವಿಶಿಷ್ಟವಾದ ಬ್ರಹ್ಮವು ಕಾರ್ಯ, ಸೂಕ್ಷ್ಮಚಿದಚಿದ್ವಿಶಿಷ್ಟವಾದ ಬ್ರಹ್ಮವು ಕಾರಣ.

2. ಸೂಕ್ಷ್ಮಚಿದಚಿದ್ವಿಶಿಷ್ಟವಾಗಿರುವ ಬ್ರಹ್ಮವೇ ಕಾರಣವೆಂದೂ ಚಿದಚಿದ್ವಸ್ತುಬ್ರಹ್ಮಗಳ ಒಟ್ಟನ್ನೇ ಇಲ್ಲಿ ಜಗತ್ಕಾರಣವೆಂದೂ ಹೇಳಿದೆಯೇ ಹೊರತು ಶುದ್ಧಬ್ರಹ್ಮವನ್ನೇ ಕಾರಣವೆಂದಿಲ್ಲ.

3. ಎಳೆಗಳಂತೆ ಅವು ಸ್ವತಂತ್ರವಾಗಿ ಯಾವಾಗಲೂ ಇರುವದೇ ಇಲ್ಲವಾದ್ದರಿಂದ.

ಪದಾರ್ಥಾಪೇಕ್ಷಿಸುವದರಿಂದ: ಅವುಗಳನ್ನು ಪ್ರಕಾರವಾಗುಳ್ಳ ಪರಮಪುರುಷನು ಯಾವಾಗಲೂ ಎಲ್ಲಾ ಶಬ್ದಗಳಿಗೂ ವಾಚ್ಯನಾಗಿರುತ್ತಾನೆ ಎಂಬುದೊಂದು ವಿಶೇಷವು. (ಈ ಮೂರಕ್ಕೂ) ಸ್ವಭಾವವು ಬೇರೆಬೇರೆಯಾಗಿರುವದೂ ಅವುಗಳು ಒಂದರಲ್ಲೊಂದು ಬೆರಕೆಯಾಗದಿರುವದೂ ಆ (ದೃಷ್ಟಾಂತ)ದಲ್ಲಿಯೂ ಈ (ದಾರ್ಷ್ಟಾಂತಿಕ)ದಲ್ಲಿಯೂ ಸಮಾನವಾಗಿರುತ್ತದೆ. ಹೀಗಿರುವದರಿಂದ ಪರಬ್ರಹ್ಮವು ಕಾರ್ಯದಲ್ಲಿ ಅನುಪ್ರವೇಶವಾದರೂ (ಅದರ) ಸ್ವರೂಪಕ್ಕೆ ಮತ್ತೊಂದಾಗುವದೆನ್ನುವದಿಲ್ಲವಾದ್ದರಿಂದ (ಅದು) ವಿಕಾರವಿಲ್ಲದೆಯೇ ಇರುತ್ತದೆ ಎಂಬುದಕ್ಕೆ ಹೆಚ್ಚಿನ ಯುಕ್ತಿಯಿರುತ್ತದೆ. ಸೃಷ್ಟ್ಯವಸ್ಥೆಯಲ್ಲಿ ನಾಮರೂಪಗಳ ವಿಭಾಗದಿಂದ ವಿಭಕ್ತವಾಗಿರುವ ಚಿದಚಿದ್ವಸ್ತುವಿಗೆ ಆತ್ಮನಾಗಿರುವದರಿಂದ ಕಾರ್ಯತ್ವವೂ ಯುಕ್ತತರವಾಗಿರುತ್ತದೆ; ಮತ್ತೊಂದು ಅವಸ್ಥೆಯನ್ನು ಹೊಂದುವದೆಂಬುದೇ ಅಲ್ಲವೆ, ಕಾರ್ಯತ್ವವೆಂಬುದು ?

(ಮೂಲ)

ನಿರ್ಗುಣವಾದಾಶ್ಚ ಪರಸ್ಯ ಬ್ರಹ್ಮಣೋ ಹೇಯಗುಣಾಸಂಬನ್ಧಾದುಪಪದ್ಯನ್ತೇ | 'ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಿಘತ್ಸೋಽಪಿಪಾಸಃ' (ಛಾ. ೮-೧-೫) ಇತಿ ಹೇಯಗುಣಾನ್ ಪ್ರತಿಷಿಧ್ಯ 'ಸತ್ಯಕಾಮಃ ಸತ್ಯಸಙ್ಕಲ್ಪಃ' ಇತಿ ಕಲ್ಯಾಣಗುಣಾನ್ವಿದಧತೀ ಇಯಂ ಶ್ರುತಿರೇವ ಅನ್ಯತ್ರ ಸಾಮಾನ್ಯೇನಾವಗತಂ ಗುಣನಿಷೇಧಂ ಹೇಯಗುಣವಿಷಯಂ ವ್ಯವಸ್ಥಾಪಯತಿ ||

(ಅರ್ಥ)

(೪) **ನಿರ್ಗುಣವಾದಗಳೂ ಪರಬ್ರಹ್ಮಕ್ಕೆ ಹೇಯಗುಣಗಳ ಸಂಬಂಧವಿಲ್ಲವಿರುವದರಿಂದ ಹೊಂದುವವು.** 'ಪಾಪವಿಲ್ಲದವನು, ಮುಪ್ಪಿಲ್ಲದವನು, ಸಾವಿಲ್ಲದವನು, ಶೋಕವಿಲ್ಲದವನು, ಹಸಿವಿಲ್ಲದವನು, ಬಾಯಾರಿಕೆಯಿಲ್ಲದವನು' (ಛಾ. ೮-೧-೫) ಎಂಬಲ್ಲಿ ಹೇಯಗುಣಗಳನ್ನು ಅಲ್ಲಗಳೆದು 'ಸತ್ಯಕಾಮನು, ಸತ್ಯಸಂಕಲ್ಪನು' ಎಂಬ ಕಲ್ಯಾಣಗುಣಗಳನ್ನು ವಿಧಾನಮಾಡುತ್ತಿರುವ ಈ ಶ್ರುತಿಯೇ ಮಿಕ್ಕ ಕಡೆಯಲ್ಲಿ ಸಾಮಾನ್ಯವಾಗಿ ಗುಣನಿಷೇಧವು ಹೇಯಗುಣಗಳ (ನಿಷೇಧದ) ವಿಷಯ ಎಂದು ಗೊತ್ತುಪಡಿಸುತ್ತದೆ.[2]

(ಮೂಲ)

ಜ್ಞಾನಸ್ವರೂಪಂ ಬ್ರಹ್ಮ – ಇತಿ ವಾದಶ್ಚ ಸರ್ವಜ್ಞಸ್ಯ ಸರ್ವಶಕ್ತೇರ್ನಿಖಿಲಹೇಯಪ್ರತ್ಯನೀಕಕಲ್ಯಾಣಗುಣಾಕರಸ್ಯ ಬ್ರಹ್ಮಣಃ ಸ್ವರೂಪಂ ಜ್ಞಾನೈಕನಿರೂಪಣೀ

---

1. ಚಿದಚಿದ್ವಸ್ತುಗಳಿಗಿಂತ ವ್ಯತಿರಿಕ್ತವಾಗಿ ಕೇವಲ ಬ್ರಹ್ಮವೇ ಉಪಾದಾನವಲ್ಲವಾದ್ದರಿಂದ.

2. ಈ ಛಾಂದೋಗ್ಯವಾಕ್ಯದಲ್ಲಿ ಹೇಯಗುಣಪ್ರತಿಷೇಧವೂ ಕಲ್ಯಾಣಗುಣವಿಧಾನವೂ ಇರುವದರಿಂದ 'ಅಸ್ಥೂಲಮ್, ಅನಣು' ಎಂಬುದುಮುಂತಾಗಿ ಬರಿಯ ನಿಷೇಧವೇ ಇರುವ ಶ್ರುತಿವಾಕ್ಯಗಳಲ್ಲಿಯೂ ಹೇಯಗುಣನಿಷೇಧವೇ ವಿವಕ್ಷಿತವೆನ್ನುವದಕ್ಕೆ ಗಮಕವಾಗಿದೆ ಎಂದು ಅಭಿಪ್ರಾಯ. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

ಯಮ್, ಸ್ವಯಂಪ್ರಕಾಶತಯಾ ಜ್ಞಾನಸ್ವರೂಪಂ ಚ – ಇತ್ಯಭ್ಯುಪಗಮಾತ್ ಉಪಪನ್ನತರಃ । 'ಯಃ ಸರ್ವಜ್ಞಃ ಸರ್ವವಿತ್' (ಮುಂ. ೧–೧–೯), 'ಪರಾಽಸ್ಯ ಶಕ್ತಿರ್ವಿವಿಧೈವಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (ಶ್ವೇ. ೬–೮), 'ವಿಜ್ಞಾತಾರಮರೇ ಕೇನ ವಿಜಾನೀಯಾತ್' (ಬೃ. ೪–೫–೧೫)– ಇತ್ಯಾದಿಕಾಃ ಜ್ಞಾತೃತ್ವಮಾವೇದಯನ್ತಿ । 'ಸತ್ಯಂ ಜ್ಞಾನಮ್' (ತೈ. ೨–೧) ಇತ್ಯಾದಿಕಾಶ್ಚ ಜ್ಞಾನೈಕನಿರೂಪಣೀಯತಯಾ ಸ್ವಪ್ರಕಾಶತಯಾ ಚ ಜ್ಞಾನಸ್ವರೂಪತಾಮ್ ॥

(ಅರ್ಥ)

(೫) 'ಬ್ರಹ್ಮವು ಜ್ಞಾನಸ್ವರೂಪ' ಎಂಬೀ ವಾದವೂ 'ಸರ್ವಜ್ಞನೂ ಸರ್ವಶಕ್ತಿಗಳುಳ್ಳವನೂ ಆಗಿರುವ ಹೇಯಗುಣಗಳಿಗೆಲ್ಲ ವಿರುದ್ಧವಾದ ಕಲ್ಯಾಣ ಗುಣಾಕರವಾದ ಬ್ರಹ್ಮದ ಸ್ವರೂಪವು ಜ್ಞಾನವೊಂದರಿಂದಲೇ ಗೊತ್ತುಪಡಿಸಲ್ಪಡತಕ್ಕದ್ದೂ, (ಅದು) ಸ್ವಯಂಪ್ರಕಾಶವಾಗಿರುವದರಿಂದ ಜ್ಞಾನಸ್ವರೂಪವುಳ್ಳದ್ದೂ ಆಗಿದೆ'[1] –ಎಂದು (ನಾವು) ಅಂಗೀಕರಿಸಿರುವದರಿಂದ ಹೆಚ್ಚು ಉಪಪನ್ನವಾಗಿರುತ್ತದೆ. 'ಯಾವನು ಸರ್ವಜ್ಞನೂ ಸರ್ವವಿದನೂ ಆಗಿರುವನೋ' (ಮುಂ. ೧–೧–೯), 'ಈತನ ಪರಶಕ್ತಿಯು ವಿಧವಿಧವಾಗಿಯೇ ಇದೆಯೆಂದೂ ಸ್ವಾಭಾವಿಕವಾಗಿ ಜ್ಞಾನವೂ ಬಲವೂ ಕ್ರಿಯೆಯೂ (ಈತನಿಗಿದೆ)ಯೆಂದೂ ಕೇಳಬರುತ್ತದೆ' (ಶ್ವೇ. ೬–೮), 'ಎಲೆ, ವಿಜ್ಞಾತೃವನ್ನು ಏತರಿಂದ ಅರಿತುಕೊಳ್ಳಬಹುದು ?' (ಬೃ. ೪–೫–೧೫)– ಇವೇ ಮುಂತಾದ (ಶ್ರುತಿಗಳು) ಜ್ಞಾತೃತ್ವವನ್ನು ತಿಳಿಸುತ್ತವೆ; 'ಸತ್ಯವೂ ಜ್ಞಾನವೂ' (ತೈ. ೨–೧) ಮುಂತಾದ (ಶ್ರುತಿಗಳು) ಜ್ಞಾನೈಕನಿರೂಪಣೀಯವಾಗಿರುವದರಿಂದಲೂ ಸ್ವಪ್ರಕಾಶವಾಗಿರುವದರಿಂದಲೂ (ಬ್ರಹ್ಮವು) ಜ್ಞಾನಸ್ವರೂಪವಾಗಿದೆಯೆಂದೂ (ತಿಳಿಸುತ್ತಿವೆ).

(ಮೂಲ)

'ಸೋಽಕಾಮಯತ ಬಹು ಸ್ಯಾಮ್' (ತೈ. ೨–೬), 'ತದೈಕ್ಷತ ಬಹು ಸ್ಯಾಮ್' (ಛಾಂ ೬–೨–೩), 'ತನ್ನಾಮರೂಪಾಭ್ಯಾಂ ವ್ಯಾಕ್ರಿಯತ' (ಬೃ. ೧–೪–೭) ಇತಿ ಬ್ರಹ್ಮೈವ ಸ್ವಸಙ್ಕಲ್ಪಾತ್ ವಿಚಿತ್ರಸ್ಥಿರತ್ರಸರೂಪತಯಾ ನಾನಾಪ್ರಕಾರಮ್ ಅವಸ್ಥಿತಮ್ ಇತಿ ತತ್ಪ್ರತ್ಯನೀಕಾಬ್ರಹ್ಮಾತ್ಮಕವಸ್ತುನಾನಾತ್ವಮ್ ಅತತ್ತ್ವಮಿತಿ ತತ್ ಪ್ರತಿಷಿಧ್ಯತೇ, 'ಮೃತ್ಯೋಸ್ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ'

---

1. ಪ್ರತ್ಯಗಾತ್ಮನಂತೆ ಬ್ರಹ್ಮವೂ ಜ್ಞಾತೃಸ್ವರೂಪವಾಗಿರುವದಲ್ಲದೆ ಜ್ಞಾನವೆಂಬ ಗುಣವುಳ್ಳದ್ದೂ ಆಗಿರುತ್ತದೆ ; ಜ್ಞಾನವೇ ಬ್ರಹ್ಮವನ್ನು ಗೊತ್ತುಪಡಿಸುವ ಅಸಾಧಾರಣಗುಣವಾಗಿದೆ, ಅದು ಚೈತನ್ಯರೂಪದಿಂದ ಸ್ವಪ್ರಕಾಶವಾಗಿಯೂ ಇದೆ. ಆದ್ದರಿಂದ ಅದನ್ನು 'ಜ್ಞಾನ'ವೆಂದು ಶ್ರುತಿಯು ಹೇಳುತ್ತಿದೆ– ಎಂಬುದು ರಾಮಾನುಜರ ಪ್ರಕ್ರಿಯೆ.

(ಕಾ. ೪–೧೦), 'ನೇಹ ನಾನಾಸ್ತಿ ಕಿಞ್ಚನ' (ಕಾ. ೪–೧೧), 'ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ....ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ತತ್ಕೇನ ಕಂ ಪಶ್ಯೇತ್ .... ತತ್ಕೇನ ಕಂ ವಿಜಾನೀಯಾತ್' (ಬೃ. ೪–೫–೧೫) ಇತ್ಯಾದಿನಾ । ನ ಪುನಃ 'ಬಹು ಸ್ಯಾಂ ಪ್ರಜಾಯೇಯ' ಇತ್ಯಾದಿಶ್ರುತಿಸಿದ್ಧಂ ಸ್ವಸಙ್ಕಲ್ಪಕೃತಂ ಬ್ರಹ್ಮಣೋ ನಾನಾನಾಮರೂಪಭಾಕ್ತ್ವೇನ ನಾನಾಪ್ರಕಾರತ್ವಮಪಿ ನಿಷಿಧ್ಯತೇ। 'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್' ಇತ್ಯಾದಿನಿಷೇಧವಾಕ್ಯಾದೌ ಚ ತತ್ ಸ್ಥಾಪಿತಮ್ 'ಸರ್ವಂ ತಂ ಪರಾದಾದ್ಯೋಽನ್ಯತ್ರಾತ್ಮನಃ ಸರ್ವಂ ವೇದ' (ಬೃ. ೨–೪–೬), 'ತಸ್ಯ ಹ ವಾ ಏತಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ' (ಬೃ. ೪–೫–೧೧) ಇತ್ಯಾದಿನಾ ॥

## (ಅರ್ಥ)

(೬) 'ಬಹುವಾಗುವೆನು ಎಂದು ಆತನು ಇಚ್ಛಿಸಿದನು' (ತೈ. ೨–೬), 'ಅದು ಬಹುವಾಗುವೆನು– ಎಂದು ಯೋಚಿಸಿಕೊಂಡಿತು' (ಛಾಂ. ೬–೨–೩), 'ಅದು ನಾಮರೂಪಗಳಾಗಿ ವಿಂಗಡಿಸಿಕೊಂಡಿತು' (ಬೃ.೧–೪–೭) ಎಂದು ಬ್ರಹ್ಮವೇ ತನ್ನ **ಸಂಕಲ್ಪದಿಂದ ಬಗೆಬಗೆಯಾದ ಸ್ಥಾವರಜಂಗಮರೂಪದಿಂದ ನಾನಾಪ್ರಕಾರವಾಗಿದ್ದುಕೊಂಡಿರುವದರಿಂದ ಅದಕ್ಕೆ ವಿರುದ್ಧವಾದ ಅಬ್ರಹ್ಮಾತ್ಮಕವಾದ ವಸ್ತುಗಳ ನಾನಾತ್ವವು ನಿಜವಲ್ಲ– ಎಂದು** 'ಇಲ್ಲಿ ನಾನಾತ್ವವನ್ನು ಕಾಣುವವನು ಸಾವಿನಿಂದ ಸಾವನ್ನು ಪಡೆಯುತ್ತಾನೆ' (ಕ.೪–೧೦), 'ಇಲ್ಲಿ ಸ್ವಲ್ಪವೂ ನಾನಾತ್ವವು ಇರುವದಿಲ್ಲ' (ಕ. ೪–೧೧), "ಎಲ್ಲಿ ದ್ವೈತದಂತೆ ಇರುವದೋ ಅಲ್ಲಿ ಒಬ್ಬನು ಇನ್ನೊಬ್ಬನನ್ನು ಕಾಣುತ್ತಾನೆ ; ಎಲ್ಲಿ ಎಲ್ಲ ಆತ್ಮನೇ ಆಯಿತೋ ಅಲ್ಲಿ ಏತರಿಂದ ಯಾರನ್ನು ಕಂಡಾನು ?....ಅಲ್ಲಿ ಏತರಿಂದ ಯಾರನ್ನು ಅರಿತಾನು?" (ಬೃ. ೪–೫–೧೫) ಮುಂತಾದ **ವಾಕ್ಯದಿಂದ (ಅದನ್ನು) ನಿಷೇಧಿಸಿರುತ್ತದೆ. ಇಷ್ಟೇ ಹೊರತು 'ಬಹುವಾಗುವೆನು ಹುಟ್ಟುವೆನು' ಮುಂತಾದ ಶ್ರುತಿಗಳಿಂದ ಸಿದ್ಧವಾಗಿರುವ ತನ್ನ ಸಂಕಲ್ಪದಿಂದ ಆಗಿರುವ ಬ್ರಹ್ಮವು ನಾನಾನಾಮರೂಪವನ್ನು ಆಂತು ಪಡೆದಿರುವ ನಾನಾಪ್ರಕಾರತ್ವವನ್ನು ನಿಷೇಧಿಸಿರುವದಿಲ್ಲ.**[1] 'ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಗಿರುವದೋ' ಎಂಬುದೇ ಮುಂತಾದ ನಿಷೇಧವಾಕ್ಯದ ಆದಿಯಲ್ಲಿಯೂ ಇದನ್ನು 'ಯಾವನು ಆತ್ಮನಿಗಿಂತ ಬೇರೆಯಾಗಿ ಎಲ್ಲವನ್ನೂ ಅರಿಯುವನೋ ಅವನನ್ನು ಎಲ್ಲವೂ ಹೊರಕ್ಕೆ

---

1. ಬ್ರಹ್ಮಾತ್ಮಕವಲ್ಲದ ನಾನಾತ್ವವಿಲ್ಲ ಎಂದು ಶ್ರುತಿ ಹೇಳುತ್ತದೆ, ಬ್ರಹ್ಮವು ನಾನಾಪ್ರಕಾರವಾಗಿದೆ ಎಂಬುದನ್ನೇನೂ ಅಲ್ಲಗಳೆದಿಲ್ಲ– ಎಂಬುದೇ ದ್ವೈತನಿಷೇಧವಾಕ್ಯಕ್ಕೆ ರಾಮಾನುಜನರು ಇಲ್ಲಿ ಹೇಳಿರುವ ಅಭಿಪ್ರಾಯ.

ದೂಡುವದು' (ಬೃ. ೨–೪–೬), 'ಆ ಈ ಮಹಾಭೂತದ ಉಸಿರೇ ಈ ಋಗ್ವೇದವು, ಯಜುರ್ವೇದವು' (ಬೃ. ೪–೫–೧೧) ಮುಂತಾದ ವಾಕ್ಯದಿಂದ ಸ್ಥಾಪಿಸಿರುತ್ತದೆ.[1]

(ಮೂಲ)

ಏವಂ ಚಿದಚಿದೀಶ್ವರಾಣಾಂ ಸ್ವಭಾವಭೇದಂ ಸ್ವರೂಪಭೇದಂ ಚ ವದನ್ತೀನಾಂ ಕಾರ್ಯಕಾರಣಭಾವಂ ಕಾರ್ಯಕಾರಣಯೋರನನ್ಯತ್ವಂ ಚ ವದನ್ತೀನಾಂ ಸರ್ವಾಸಾಂ ಶ್ರುತೀನಾಮ್ ಅವಿರೋಧಃ ; ಚಿದಚಿತೋಃ ಪರಮಾತ್ಮನಶ್ಚ ಸರ್ವದಾ ಶರೀರಾತ್ಮಭಾವಂ ಶರೀರಭೂತಯೋಃ ಕಾರಣದಶಾಯಾಂ ನಾಮರೂಪವಿಭಾಗಾನರ್ಹಸೂಕ್ಷ್ಮದಶಾಪತ್ತಿಂ ಕಾರ್ಯದಶಾಯಾಂ ಚ ತದರ್ಹಸ್ಥೂಲದಶಾಪತ್ತಿಂ ವದನ್ತೀಭಿಃ ಶ್ರುತಿಭಿರೇವ ಜ್ಞಾಯತ ಇತಿ ಬ್ರಹ್ಮಾಜ್ಞಾನವಾದಸ್ಯ ಔಪಾಧಿಕಬ್ರಹ್ಮಭೇದವಾದಸ್ಯ ಅನ್ಯಸ್ಯಾಪ್ಯಪನ್ಯಾಯಮೂಲಸ್ಯ ಸಕಲಶ್ರುತಿವಿರುದ್ಧಸ್ಯ ನ ಕಥಞ್ಚಿದಪಿ ಅವಕಾಶೋ ದೃಶ್ಯತೇ ॥

ಚಿದಚಿದೀಶ್ವರಾಣಾಂ ಪೃಥಕ್ಸ್ವಭಾವತಯಾ ತತ್ತಚ್ಛ್ರುತಿಸಿದ್ಧಾನಾಂ ಶರೀರಾತ್ಮಭಾವೇನ ಪ್ರಕಾರಪ್ರಕಾರಿತಯಾ ಶ್ರುತಿಭಿರೇವ ಪ್ರತಿಪನ್ನಾನಾಂ ಶ್ರುತ್ಯನ್ತರೇಣ ಕಾರ್ಯಕಾರಣಭಾವಪ್ರತಿಪಾದನಂ ಕಾರ್ಯಕಾರಣಯೋರೈಕ್ಯಪ್ರತಿಪಾದನಂ ಚ ಹಿ ಅವಿರುದ್ಧಮ್ । ಯಥಾ ಆಗ್ನೇಯಾದೀನ್ ಷಡ್ಯಾಗಾನ್ ಉತ್ಪತ್ತಿವಾಕ್ಯೈಃ ಪೃಥಗುತ್ಪನ್ನಾನ್ ಸಮುದಾಯಾನುವಾದಿವಾಕ್ಯಾನ್ತರೇಣ ಸಮುದಾಯದ್ವಯತ್ವಪನ್ನಾನ್ 'ದರ್ಶಪೂರ್ಣಮಾಸಾಭ್ಯಾಮ್' ಇತ್ಯಧಿಕಾರವಾಕ್ಯಂ ಕಾಮಿನಃ ಕರ್ತವ್ಯತಯಾ ವಿದಧಾತಿ। ತಥಾ ಚಿದಚಿದೀಶ್ವರಾನ್ ವಿವಿಕ್ತಸ್ವರೂಪಸ್ವಭಾವಾನ್ 'ಕ್ಷರಂ ಪ್ರಧಾನಮಮೃತಾಕ್ಷರಂ ಹರಃ ಕ್ಷರಾತ್ಮಾನಾವೀಶತೇ ದೇವ ಏಕಃ' (ಶ್ವೆ. ೧–೧೦), 'ಪತಿಂ ವಿಶ್ವಸ್ಯಾಽಽತ್ಮೇಶ್ವರಮ್' (ತೈ.ನಾ.೧೧–೧), 'ಆತ್ಮಾ ನಾರಾಯಣಃ ಪರಃ' (ತೈ.ನಾ. ೧೧–೧) ಇತ್ಯಾದಿವಾಕ್ಯೈಃ ಪೃಥಕ್ ಪ್ರತಿಪಾದ್ಯ 'ಯಸ್ಯ ಪೃಥಿವೀ ಶರೀರಮ್' (ಬೃ. ಮಾ. ೫–೭–೭), 'ಯಸ್ಯಾತ್ಮಾ ಶರೀರಮ್' (ಬೃ.ಮಾ. ೫–೭–೩೦), 'ಯಸ್ಯಾವ್ಯಕ್ತಂ ಶರೀರಮ್, ಯಸ್ಯಾಕ್ಷರಂ ಶರೀರಮ್ ಏಷ ಸರ್ವಭೂತಾನ್ತರಾತ್ಮಾಽಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ' (ಸುಬಾಲ. ೭) ಇತ್ಯಾದಿಭಿರ್ವಾಕ್ಯೈಶ್ಚಿದಚಿತೋಃ ಸರ್ವಾವಸ್ಥಾವಸ್ಥಿತಯೋಃ ಪರಮಾತ್ಮಶರೀರತಾಂ ಪರಮಾತ್ಮನಸ್ತದಾತ್ಮತಾಂ ಚ ಪ್ರತಿಪಾದ್ಯ ಶರೀರಿ[2]ಭೂತಪರಮಾತ್ಮಾಭಿಧಾಯಿಭಿಃ ಸದ್ಬ್ರಹ್ಮಾತ್ಮಾದಿಶಬ್ದೈಃ ಕಾರಣಾವಸ್ಥಃ ಕಾರ್ಯಾವಸ್ಥಶ್ಚ ಪರಮಾತ್ಮಾ ಏಕ ಏವೇತಿ ಪೃಥಕ್ಪ್ರತಿಪನ್ನಂ ವಸ್ತುತ್ರಿತಯಂ

1. ಈ ವಾಕ್ಯಗಳಲ್ಲಿ ಬ್ರಹ್ಮದ ನಾನಾತ್ವವನ್ನೇ ಸ್ಥಾಪಿಸಿದೆ. ಆದ್ದರಿಂದ ನಾನಾತ್ವ ನಿಷೇಧವು ಅಬ್ರಹ್ಮಾತ್ಮಕವಾದ ವಸ್ತುನಾನಾತ್ವವಿಷಯವೇ ಎಂದಾಯಿತು ಎಂದು ಭಾವ.

2. 'ಶರೀರಭೂತ' ಎಂಬ ವಾ॥ ಪಾಠವನ್ನು ಬಿಟ್ಟು 'ಶರೀರಿಭೂತ' ಎಂಬ ಪೂ॥ ಪಾಠವನ್ನಿಟ್ಟುಕೊಂಡಿದೆ.

ಸದೇವ ಸೋಮ್ಯೇದಮಗ್ರ ಆಸೀತ್' (ಛಾಂ. ೬-೨-೧), 'ಐತದಾತ್ಮ್ಯಮಿದಂ ಸರ್ವಮ್' (ಛಾಂ. ೬-೮-೭), 'ಸರ್ವಂ ಖಲ್ವಿದಂ ಬ್ರಹ್ಮ' (ಛಾಂ. ೩-೧೪-೧) ಇತ್ಯಾದಿವಾಕ್ಯಂ ಪ್ರತಿಪಾದಯತಿ । ಚಿದಚಿದ್ವಸ್ತುಶರೀರಿಣಃ ಪರಮಾತ್ಮನಃ ಪರಮಾತ್ಮಶಬ್ದೇನಾಭಿಧಾನೇ ಹಿ ನಾಸ್ತಿ ವಿರೋಧಃ । ಯಥಾ ಮನುಷ್ಯಪಿಣ್ಡಶರೀರಕಸ್ಯ ಆತ್ಮವಿಶೇಷಸ್ಯ 'ಅಯಮಾತ್ಮಾ ಸುಖೀ' ಇತ್ಯಾತ್ಮಶಬ್ದೇನಾಭಿಧಾನೇ ಇತ್ಯಲಮತಿವಿಸ್ತರೇಣ ॥

(ಅರ್ಥ)

ಹೀಗೆ ಚಿತ್ತು, ಅಚಿತ್ತು, ಈಶ್ವರ- ಇವರುಗಳಿಗಿರುವ ಸ್ವಭಾವಭೇದವನ್ನೂ ಸ್ವರೂಪಭೇದವನ್ನೂ ಹೇಳುತ್ತಿರುವ, ಮತ್ತು ಕಾರ್ಯಕಾರಣಭಾವವನ್ನೂ ಕಾರ್ಯಕಾರಣಗಳಿಗೆ ಅನನ್ಯತ್ವವನ್ನೂ ಹೇಳುತ್ತಿರುವ ಎಲ್ಲಾ ಶ್ರುತಿಗಳಿಗೂ ವಿರೋಧವಿಲ್ಲವೆಂಬುದು ಚಿದಚಿತ್ತುಗಳಿಗೂ ಪರಮಾತ್ಮನಿಗೂ ಯಾವಾಗಲೂ ಶರೀರಾತ್ಮಭಾವವನ್ನು, ಶರೀರವಾಗಿರುವ (ಚಿದಚಿತ್ತುಗಳು) ಕಾರಣಾವಸ್ಥೆಯಲ್ಲಿ ನಾಮರೂಪಗಳ ವಿಂಗಡಕ್ಕೆ ತಕ್ಕದ್ದಲ್ಲದ ಸೂಕ್ಷ್ಮಾವಸ್ಥೆಯನ್ನು ಹೊಂದಿರುವದು ಮತ್ತು ಕಾರ್ಯಾವಸ್ಥೆಯಲ್ಲಿ ಆ ವಿಂಗಡಕ್ಕೆ (ತಕ್ಕ) ಸ್ಥೂಲಾವಸ್ಥೆಯನ್ನು ಹೊಂದುವದು- ಇವುಗಳನ್ನು ಹೇಳುತ್ತಿರುವ ಶ್ರುತಿಗಳಿಂದಲೇ ತಿಳಿಯಬರುತ್ತಿದೆಯಾದ್ದರಿಂದ ಬ್ರಹ್ಮಾಜ್ಞಾನವಾದಕ್ಕೂ, ಉಪಾಧಿಯಿಂದ ಬ್ರಹ್ಮಕ್ಕೆ ಭೇದವನ್ನು ಹೇಳುವ ವಾದಕ್ಕೂ ಯುಕ್ತಿಮೂಲವಲ್ಲದ ಮತ್ತೊಂದು ವಾದಕ್ಕೂ- (ಅವು) ಸಕಲಶ್ರುತಿಗಳಿಗೂ ವಿರುದ್ಧವಾಗಿರುವದರಿಂದ - ಹೇಗೂ ಅವಕಾಶವು ಕಾಣಿಸುವದಿಲ್ಲ.[1]

ಚಿದಚಿದೀಶ್ವರರುಗಳು ಬೇರೆಬೇರೆಯ ಸ್ವಭಾವವುಳ್ಳವರೆಂದು ಆಯಾ ಶ್ರುತಿಗಳಿಂದ ಸಿದ್ಧವಾಗಿ ಶರೀರಾತ್ಮಭಾವದಿಂದ (ಅವಕ್ಕೆ) ಪ್ರಕಾರಪ್ರಕಾರಿತ್ವವಿದೆಯೆಂದು ಗೊತ್ತಾದಮೇಲೆ ಮತ್ತೊಂದು ಶ್ರುತಿಯಲ್ಲಿ ಕಾರ್ಯಕಾರಣಭಾವವನ್ನೂ ಕಾರ್ಯಕಾರಣಗಳಿಗೆ ಐಕ್ಯವನ್ನೂ ಪ್ರತಿಪಾದಿಸುವದು ಅವಿರುದ್ಧವೇ ಆಗಿರುತ್ತದೆ. ಹೇಗೆ ಅಗ್ನೀಷೋಮೀಯ ಮುಂತಾದ

1. 'ನಿಖಿಲೋಪನಿಷತ್ಪ್ರಸಿದ್ಧಮ್ ಕೃತ್ಸ್ನಸ್ಯ ಬ್ರಹ್ಮಶರೀರಭಾವಮಾತಿಷ್ಠಮಾನೈಃ' (ಪು. ೨೬೧) ಎಂಬಲ್ಲಿಂದ ಇಲ್ಲಿಯವರೆಗೆ ತಾವು ಒಪ್ಪಿರುವ ಸೂಕ್ಷ್ಮಚಿದಚಿಚ್ಛರೀರಕಬ್ರಹ್ಮವೂ ಸ್ಥೂಲಚಿದಚಿಚ್ಛರೀರಕಬ್ರಹ್ಮವೂ ಒಂದೇ -ಎಂಬ ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಶಾಂಕರಭಾಸ್ಕರಾದಿಮತಗಳಲ್ಲಿರುವ ಯಾವ ದೋಷವೂ ಇಲ್ಲವೆಂಬುದನ್ನು ಶ್ರುತಿಯುಕ್ತಿಗಳಿಂದ ಸಾಧಿಸಿದ್ದನ್ನು ಇಲ್ಲಿ ಉಪಸಂಹಾರಮಾಡುವದಕ್ಕೆ ಹೊರಟಿರುತ್ತಾರೆ.

ಆರು ಯಾಗಗಳನ್ನು- (ತಮ್ಮ) ಉತ್ಪತ್ತಿ(ವಿಧಿ)ವಾಕ್ಯಗಳಿಂದ ಬೇರೆಬೇರೆಯಾಗಿ ಉತ್ಪನ್ನವಾದಬಳಿಕ ಸಮುದಾಯವನ್ನು ಅನುವಾದಿಸುವ ಎರಡು ವಾಕ್ಯಗಳಿಂದ ಎರಡು ಸಮುದಾಯವಾಗಿ ಏರ್ಪಟ್ಟಮೇಲೆ (ಅವನ್ನು) 'ದರ್ಶಪೂರ್ಣಮಾಸಗಳಿಂದ' ಎಂಬ ಅಧಿಕಾರ(ವಿಧಿ)ವಾಕ್ಯವು 'ಕಾಮಿಯಾದವನು ಮಾಡತಕ್ಕದ್ದು' ಎಂದು ವಿಧಿಸುತ್ತದೆಯೋ[1] ಹಾಗೆಯೇ ಚಿತ್ತು, ಅಚಿತ್ತು, ಈಶ್ವರ- ಇವರುಗಳಿಗೆ ವಿವಿಕ್ತವಾದ ಸ್ವರೂಪವೂ ಸ್ವಭಾವವೂ ಇರುವದೆಂದು 'ಕ್ಷರವು ಪ್ರಧಾನವು, ಅಮೃತವಾದ ಅಕ್ಷರವು ಹರನು, ಕ್ಷರ, ಆತ್ಮ- ಇಬ್ಬರನ್ನೂ ಒಬ್ಬನೇ ದೇವನು ಆಳುತ್ತಿರುವನು' (ಶ್ವೇ. ೧-೧೦), 'ಎಲ್ಲಕ್ಕೂ ಪತಿಯೂ ಆತ್ಮನೂ ಈಶ್ವರನೂ' (ತೈ. ನಾ. ೧೧-೧), 'ಪರಮಾತ್ಮನು ನಾರಾಯಣನು' (ತೈ. ನಾ. ೧೧)- ಮುಂತಾದ ವಾಕ್ಯಗಳಿಂದ ಬೇರೆಬೇರೆಯಾಗಿ ಪ್ರತಿಪಾದಿಸಿ 'ಯಾವಾತನಿಗೆ ಪೃಥಿವಿಯು ಶರೀರವೋ' (ಬೃ.ಮಾ. ೩-೭-೭), 'ಯಾವಾತನಿಗೆ ಆತ್ಮನು ಶರೀರವೋ' (ಬೃ. ಮಾ. ೩-೭-೩೦), 'ಯಾವಾತನಿಗೆ ಅವ್ಯಕ್ತವು ಶರೀರವೋ....ಯಾವಾತನಿಗೆ ಅಕ್ಷರವು ಶರೀರವೋ (ಅ) ಇವನು ಸರ್ವಭೂತಗಳಿಗೂ ಅಂತರಾತ್ಮನೂ ಅಪಹತಪಾಪ್ಮನೂ ದಿವ್ಯನೂ ಆದ ಒಬ್ಬನೇ ದೇವನಾದ ನಾರಾಯಣನು' (ಸುಬಾಲ. ೭)-ಎಂಬಿವೇ ಮುಂತಾದ ವಾಕ್ಯಗಳಿಂದ ಎಲ್ಲಾ ಅವಸ್ಥೆಗಳಲ್ಲಿಯೂ ಇರುವ **ಚಿದಚಿತ್ತುಗಳು ಪರಮಾತ್ಮನ ಶರೀರವೆಂದೂ ಪರಮಾತ್ಮನು ಅವಕ್ಕೆ ಆತ್ಮನೆಂದೂ ಪ್ರತಿಪಾದಿಸಿ ಶರೀರಿಯಾಗಿರುವ ಪರಮಾತ್ಮನನ್ನು ಹೇಳುವ ಸತ್, ಬ್ರಹ್ಮ, ಆತ್ಮ-ಮುಂತಾದ ಶಬ್ದಗಳಿಂದ - ಕಾರಣಾವಸ್ಥೆಯಲ್ಲಿರುವ ಪರಮಾತ್ಮನೂ ಕಾರ್ಯಾವಸ್ಥೆಯಲ್ಲಿರುವ ಪರಮಾತ್ಮನೂ ಒಬ್ಬನೇ ಎಂದು ಬೇರೆಬೇರೆಯಾಗಿ**

---

1. 'ಯದಾಗ್ನೇಯೋಽಷ್ಟಾಕಪಾಲೋಽಮಾವಾಸ್ಯಾಯಾಂ ಚ ಪೌರ್ಣಮಾಸ್ಯಾಂ ಚಾಚ್ಯುತೋ ಭವತಿ' ಮುಂತಾದವುಗಳು ಉತ್ಪತ್ತಿವಾಕ್ಯಗಳು. 'ಯ ಏವಂ ವಿದ್ವಾನ್ ಪೌರ್ಣಮಾಸೀಂ ಯಜತೇ', 'ಯ ಏವಂ ವಿದ್ವಾನಮಾವಾಸ್ಯಾಂ ಯಜತೇ'- ಎಂಬಿವು ಸಮುದಾಯಾನುವಾದಿವಾಕ್ಯಗಳು ; 'ದರ್ಶಪೂರ್ಣಮಾಸಾಭ್ಯಾಮ್' ಎಂಬ ವಾಕ್ಯವು ಇವೆರಡೂ ಸ್ವರ್ಗಸಾಧನವೆಂಬ ಕಾರಣದಿಂದ ಒಟ್ಟುಗೂಡಿಸಿ ಮಾಡಬೇಕು ಎಂದು ವಿಧಿಸುತ್ತದೆ- ಎಂದು ಶ್ರು. ಪ್ರ.

[ಉತ್ಪತ್ತಿ ವಿಧಿಗಳಲ್ಲಿ ಆಗ್ನೇಯ (ಅಗ್ನಿದೇವತಾಕ)ವನ್ನು ಅಮಾವಾಸ್ಯೆಯಲ್ಲಿ, ಅಗ್ನೀಷೋಮೀಯ (ಅಗ್ನಿ ಮತ್ತು ಸೋಮದೇವತೆಗಳಿಗೆ) ಹುಣ್ಣಿಮೆಯಲ್ಲಿ, ಐಂದ್ರ (ಇಂದ್ರದೇವತಾಕ)ವನ್ನು ಅಮಾವಾಸ್ಯೆಯಲ್ಲಿ, ಐಂದ್ರಾಗ್ನವನ್ನೂ (ಇಂದ್ರ, ಅಗ್ನಿ) ಉಪಾಂಶುವನ್ನೂ ಹುಣ್ಣಿಮೆಯಲ್ಲಿ- ಹೀಗೆ ಬೇರೆಬೇರೆಯಾಗಿ ಹೇಳಿದ ಬಳಿಕ (1) ಆಗ್ನೇಯ, ಅಗ್ನೀಷೋಮೀಯ, ಉಪಾಂಶು- ಇವುಗಳು ಒಂದು ಗುಂಪು (ಪೌರ್ಣಮಾಸೀ) ; ಆಗ್ನೇಯ, (ಹಾಲು), ಐಂದ್ರ (ಮೊಸರು), ಇಂದ್ರಾಗ್ನಿ (ಮೊಸರು, ಅಮಾವಾಸ್ಯಾ)- ಇವು ಇನ್ನೊಂದು ಗುಂಪು- ಎಂದು ಎರಡು ಗುಂಪಾಗಿ ವಿಂಗಡಿಸಿ ಹೇಳಿರುತ್ತದೆ.]

ತಿಳಿದುಬಂದಿದ್ದ ಮೂರು ವಸ್ತುಗಳನ್ನು 'ಅಪ್ಪ, ಇದು ಮೊದಲು ಸತ್ತೇ ಆಗಿದ್ದಿತು' (ಛಾಂ. ೬-೨-೧), 'ಇದೇ ಇದೆಲ್ಲಕ್ಕೂ ಆತ್ಮನು' (ಛಾಂ. ೬-೮-೭), 'ಇದೆಲ್ಲವೂ ಬ್ರಹ್ಮನೇ' (ಛಾಂ. ೩-೧೪-೧)- ಎಂದು ಮುಂತಾಗಿರುವ ವಾಕ್ಯವು ಪ್ರತಿಪಾದಿಸುತ್ತದೆ. ಚಿದಚಿದ್ವಸ್ತುಗಳಿಗೆ ಶರೀರಿಯಾಗಿರುವ ಪರಮಾತ್ಮನನ್ನು ಪರಮಾತ್ಮಶಬ್ದದಿಂದ ಹೇಳಿರುವದರಲ್ಲಿ ವಿರೋಧವಿಲ್ಲವಷ್ಟೆ? ಮನುಷ್ಯದೇಹವೇ ತನ್ನ ಶರೀರವಾಗಿರುವ ಆತ್ಮವಿಶೇಷವನ್ನು 'ಈ ಆತ್ಮನು ಸುಖಿ' ಎಂದು ಆತ್ಮಶಬ್ದದಿಂದ (ಪ್ರತಿಪಾದಿಸುವದರಲ್ಲಿ ಹೇಗೆ ವಿರೋಧವಿಲ್ಲವೋ ಹಾಗೆಯೇ ಇದು). ಆದ್ದರಿಂದ ಅತಿಯಾಗಿ ವಿಸ್ತರಿಸುವದು ಇನ್ನು ಸಾಕು.

## (೭) ಅವಿದ್ಯಾನಿವೃತ್ತ್ಯನುಪಪತ್ತಿ[1]

### (ಮೂಲ)

ಯತ್ಪುನರಿದಮುಕ್ತಮ್ - ಬ್ರಹ್ಮಾತ್ಮೈಕತ್ವವಿಜ್ಞಾನೇನೈವ ಅವಿದ್ಯಾನಿವೃತ್ತಿರ್ಯುಕ್ತಾ- ಇತಿ, ತದಯುಕ್ತಮ್, ಬನ್ಧಸ್ಯ ಪಾರಮಾರ್ಥಿಕತ್ವೇನ ಜ್ಞಾನನಿವರ್ತ್ಯತ್ವಾಭಾವಾತ್, ಪುಣ್ಯಾಪುಣ್ಯರೂಪಕರ್ಮನಿಮಿತ್ತದೇವಾದಿಶರೀರಪ್ರವೇಶತತ್ಪ್ರಯುಕ್ತಸುಖದುಃಖಾನುಭವರೂಪಸ್ಯ ಬನ್ಧಸ್ಯ ಮಿಥ್ಯಾತ್ವಂ ಕಥಮಿವ ಶಕ್ಯತೇ ವಕ್ತುಮ್? ಏವಂರೂಪಬನ್ಧನಿವೃತ್ತಿಃ, ಭಕ್ತಿರೂಪಾಪನ್ನೋಪಾಸನಪ್ರೀತಪರಮಪುರುಷಪ್ರಸಾದಲಭ್ಯಾ ಇತಿ ಪೂರ್ವಮೇವೋಕ್ತಮ್ । ಭವದಭಿಮತಸ್ಯ ಐಕ್ಯಜ್ಞಾನಸ್ಯ ಯಥಾವಸ್ಥಿತವಸ್ತುವಿಪರೀತವಿಷಯಸ್ಯ ಮಿಥ್ಯಾರೂಪತ್ವೇನ ಬನ್ಧವಿವೃದ್ಧಿರೇವ ಫಲಂ ಭವತಿ 'ಮಿಥ್ಯೈತದನ್ಯದ್ದ್ರವ್ಯಂ ಹಿ ನೈತಿ ತದ್ದ್ರವ್ಯತಾಂ ಯತಃ' (ವಿ. ಪು. ೨-೧೪-೩೭) ಇತಿ ಶಾಸ್ತ್ರಾತ್ । 'ಉತ್ತಮಃ ಪುರುಷಸ್ತ್ವನ್ಯಃ' (ಗೀ. ೧೫-೧೭), 'ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ' (ಶ್ವೇ. ೧-೬)- ಇತಿ ಜೀವಾತ್ಮವಿಸಜಾತೀಯಸ್ಯ ತದನ್ತರ್ಯಾಮಿಣೋ ಬ್ರಹ್ಮಣೋ ಜ್ಞಾನಂ ಪರಮಪುರುಷಾರ್ಥಲಕ್ಷಣಮೋಕ್ಷಸಾಧನಮ್- ಇತ್ಯುಪದೇಶಾಚ್ಚ ॥

ಅಪಿ ಚ ಭವದಭಿಮತಸ್ಯಾಪಿ ನಿವರ್ತಕಜ್ಞಾನಸ್ಯ ಮಿಥ್ಯಾರೂಪತ್ವಾತ್ ತಸ್ಯ ನಿವರ್ತಕಾನ್ತರಂ ಮೃಗ್ಯಮ್ । ನಿವರ್ತಕಜ್ಞಾನಮಿದಂ ಸ್ವವಿರೋಧಿ ಸರ್ವಂ ಭೇದಜಾತಂ ನಿವರ್ತ್ಯ ಕ್ಷಣಿಕತ್ವಾತ್ ಸ್ವಯಮೇವ ನಶ್ಯತಿ ಇತಿ ಚೇತ್, ನ ।

---

1. ಹಿಂದೆ 'ಯದುಕ್ತಮ್ ನಿರ್ವಿಶೇಷಬ್ರಹ್ಮವಿಜ್ಞಾನಾದೇವ' (ಪು. ೨೫೦) ಎಂಬ ಅವಿದ್ಯಾನಿವರ್ತಕಾನುಪಪತ್ತಿಯನ್ನು ಪ್ರತಿಪಾದಿಸಲಾಗಿತ್ತು; ಈಗ ನಿವೃತ್ತ್ಯನುಪಪತ್ತಿಯನ್ನು ಹೇಳಿರುತ್ತಾರೆ. ಈ ನಡುವೆ ಬಂದ ವಿಚಾರವೆಲ್ಲ ಶ್ರುತಿವಾಕ್ಯಜನ್ಯಜ್ಞಾನದಿಂದ ಅವಿದ್ಯಾನಿವೃತ್ತಿಯಾಗುವದಿಲ್ಲವೆಂಬುದನ್ನು ತೋರಿಸುವದಕ್ಕೇ ಬಂದದ್ದು.

ತತ್ಸ್ವರೂಪತದುತ್ಪತ್ತಿವಿನಾಶಾನಾಂ ಕಾಲ್ಪನಿಕತ್ವೇನ ವಿನಾಶತತ್ಕಲ್ಪನಾಕಲ್ಪಕ ರೂಪಾವಿದ್ಯಾಯಾ ನಿವರ್ತಕಾನ್ತರಮ್ ಅನ್ವೇಷಣೀಯಮ್ | ತದ್ವಿನಾಶೋ ಬ್ರಹ್ಮಸ್ವರೂಪಮೇವ ಇತಿ ಚೇತ್, ತಥಾ ಸತಿ ನಿವರ್ತಕಜ್ಞಾನೋತ್ಪತ್ತಿರೇವ ನ ಸ್ಯಾತ್ ; ತದ್ವಿನಾಶೇ ತಿಷ್ಠತಿ ತದುತ್ಪತ್ತ್ಯಸಂಭವಾತ್ ||

(ಅರ್ಥ)

ಇನ್ನು 'ಬ್ರಹ್ಮಾತ್ಮೈಕತ್ವವಿಜ್ಞಾನದಿಂದಲೇ ಅವಿದ್ಯೆಯ ನಿವೃತ್ತಿಯಾಗುವದು ಯುಕ್ತ'- ಎಂದಿರಲ್ಲ, ಅದು ಯುಕ್ತವಲ್ಲ; ಏಕೆಂದರೆ **ಬಂಧವು ಪಾರಮಾರ್ಥಿಕವಾಗಿರುವದರಿಂದ (ಅದು) ಜ್ಞಾನದಿಂದ ತೊಲಗಲಾರದು.**[1] ಪುಣ್ಯ, ಪಾಪ- ರೂಪವಾಗಿರುವ ಕರ್ಮನಿಮಿತ್ತವಾದ ದೇವಾದಿಶರೀರಗಳಲ್ಲಿ ಪ್ರವೇಶಿಸುವದೂ ಅದರಿಂದುಂಟಾಗುವ ಸುಖದುಃಖಗಳ ಅನುಭವ- ಈ ರೂಪವಾಗಿರುವ ಬಂಧವು ಮಿಥ್ಯೆಯೆಂದು ಹೇಗೆತಾನೆ ಹೇಳಲಾದೀತು? ಈ ರೂಪದ **ಬಂಧನಿವೃತ್ತಿಯು ಭಕ್ತಿರೂಪ**ವನ್ನು ಹೊಂದಿದ ಉಪಾಸನೆಯಿಂದ ಪ್ರೀತನಾದ ಪರಮಪುರುಷನ ಪ್ರಸಾದದಿಂದಲೇ ಲಭಿಸತಕ್ಕದ್ದು-ಎಂದು ಹಿಂದೆಯೇ[2] ಹೇಳಿರುತ್ತೇವೆ. ನಿಮಗೆ ಒಪ್ಪಾಗಿರುವ (ಬ್ರಹ್ಮಾತ್ಮೈ)ಕ್ಯಜ್ಞಾನವು ನಿಜವಾಗಿರುವ ವಸ್ತುವಿಗೆ ವಿಪರೀತವಾಗಿರುವ ವಿಷಯವುಳ್ಳದ್ದಾಗಿದ್ದು[3] ಮಿಥ್ಯಾರೂಪವಾಗಿರುವದರಿಂದ ಬಂಧವು ಇನ್ನೂ ಹೆಚ್ಚಾಗಿ ಬೆಳೆದುಕೊಳ್ಳುವದೇ ಫಲವಾಗುತ್ತದೆ. 'ಇದು ಮಿಥ್ಯೆ; ಏಕೆಂದರೆ ಒಂದು ದ್ರವ್ಯವು ಇನ್ನೊಂದು ದ್ರವ್ಯವಾಗಲಾರದು' (ವಿ. ಪು. ೨-೧೪-೨೭) ಎಂದು ಶಾಸ್ತ್ರವಿದೆ. 'ಉತ್ತಮಪುರುಷನಾದರೆ ಇನ್ನೊಬ್ಬನು' (ಗೀ. ೧೫-೧೭), 'ಆತ್ಮನನ್ನೂ ಪ್ರೇರಿತೃವಾದ (ಈಶ್ವರನನ್ನೂ) ಬೇರೆಯೆಂದು ತಿಳಿದುಕೊಂಡರೆ (ಮುಕ್ತನಾಗುವನು)'[4] (ಶ್ವೇ. ೧-೬) ಎಂದು ಜೀವಾತ್ಮನಿಗಿಂತ ವಿಸಜಾತೀಯನಾದ ಆ (ಜೀವನ) ಅಂತರ್ಯಾಮಿಯಾದ ಬ್ರಹ್ಮದ ಜ್ಞಾನವೇ ಪರಮಪುರುಷಾರ್ಥರೂಪವಾದ ಮೋಕ್ಷಕ್ಕೆ ಸಾಧನವು- ಎಂದು (ಶ್ರುತಿಯಲ್ಲಿ) ಉಪದೇಶಿಸಿಯೂ ಇರುತ್ತದೆ.

ಇದಲ್ಲದೆ ನಿಮಗೆ ಒಪ್ಪಾಗಿರುವ ನಿವರ್ತಕಜ್ಞಾನವೂ ಮಿಥ್ಯೆಯಾಗಿರುವದರಿಂದ[5] ಅದಕ್ಕೂ ಮತ್ತೊಂದು ನಿವರ್ತಕವನ್ನು ಹುಡುಕಬೇಕಾಗಿರುತ್ತದೆ.

---

1. ಇದು ಶಂಕರಾದ್ವೈತಪ್ರಕ್ರಿಯೆಗೆ ಅತ್ಯಂತವಿರುದ್ಧವಾದ ಪ್ರಕ್ರಿಯೆಯೆಂಬುದನ್ನು ನೆನಪಿನಲ್ಲಿಡಬೇಕು. ಪೀಠಿಕೆಯನ್ನು ನೋಡಿ. 2. ೨೯ನೆಯ ಪುಟದಲ್ಲಿ.

3. ನಿಜವಾದ ವಸ್ತುವೆಂದರೆ ಬ್ರಹ್ಮಾತ್ಮಕಚಿದಚಿದ್ವಸ್ತು; ಬ್ರಹ್ಮಾತ್ಮೈಕತ್ವವು ಅದಕ್ಕೆ ವಿರುದ್ಧ.

4. ಇಲ್ಲಿ ಚಿದಚಿದೀಶ್ವರರುಗಳನ್ನು ಬೇರೆಬೇರೆಯೆಂದು ತಿಳಿದುಕೊಳ್ಳಬೇಕೆಂದು ಹೇಳಿದೆ -ಎಂದು ಭಾವ.

5. ಮಿಥ್ಯಾವಸ್ತುವನ್ನು - ಎಂದರೆ ಐಕ್ಯವನ್ನು - ಹೇಳುವದರಿಂದ ಐಕ್ಯಜ್ಞಾನವು ವಿಪರೀತಜ್ಞಾನ ಎಂದು ಹಿಂದೆ ಹೇಳಿತ್ತು ; ಜ್ಞಾತೃಜ್ಞೇಯಗಳಂತೆ ಜ್ಞಾನವೂ ನಿಮ್ಮ ಮತದಲ್ಲಿ ಮಿಥ್ಯೆ. ಆದ್ದರಿಂದ ಅದಕ್ಕೆ ನಿವರ್ತಕವು ಇನ್ನೊಂದು ಬೇಕು- ಎಂದು ಈಗ ಹೇಳುತ್ತಾರೆ.

(ಶಂಕೆ) :– ಈ ನಿವರ್ತಕಜ್ಞಾನವು ತನಗೆ ವಿರೋಧಿಯಾದ ಭೇದಜಾತವನ್ನೆಲ್ಲ ತೊಲಗಿಸಿ ಕ್ಷಣಿಕವಾಗಿರುವದರಿಂದ[1] ತಾನೇ ನಾಶವಾಗಬಹುದಲ್ಲ !

(ಪರಿಹಾರ) :– ಹಾಗಲ್ಲ. ಏಕೆಂದರೆ ಅದರ ಸ್ವರೂಪ, ಅದರ ಉತ್ಪತ್ತಿ, ನಾಶ– ಇವುಗಳು ಕಾಲ್ಪನಿಕವಾಗಿರುವದರಿಂದ ವಿನಾಶ, ಅದರ ಕಲ್ಪನೆ– ಇವುಗಳ ಕಲ್ಪಕವಾಗಿರುವ ಅವಿದ್ಯೆಗೆ ಮತ್ತೊಂದು ನಿವರ್ತಕವನ್ನೇ ಹುಡುಕಬೇಕಾಗಿದೆ.

(ಅದ್ವೈತಿಯ ಶಂಕೆ) :– ಅದರ ವಿನಾಶವು ಬ್ರಹ್ಮಸ್ವರೂಪವೇ ಎಂದರೂ ?

(ಪರಿಹಾರ) : ಹಾಗಾದರೆ ನಿವರ್ತಕಜ್ಞಾನವೇ ಹುಟ್ಟಲಾರದು. ಏಕೆಂದರೆ ಅದರ ವಿನಾಶವು ಇದ್ದುಕೊಂಡಿರುವಲ್ಲಿ ಆ (ನಿವರ್ತಕಜ್ಞಾನವು) ಹುಟ್ಟಲಾರದು.

(ಮೂಲ)

ಅಪಿ ಚ ಚಿನ್ಮಾತ್ರಬ್ರಹ್ಮವ್ಯತಿರಿಕ್ತಕೃತ್ಸ್ನನಿಷೇಧವಿಷಯಜ್ಞಾನಸ್ಯ ಕೋಽಯಂ ಜ್ಞಾತಾ? ಅಧ್ಯಾಸರೂಪ ಇತಿ ಚೇತ್ । ನ; ತಸ್ಯ ನಿಷೇಧ್ಯತಯಾ ನಿವರ್ತಕಜ್ಞಾನಕರ್ಮತ್ವಾತ್ ತತ್ಕರ್ತೃತ್ವಾನುಪಪತ್ತೇಃ । ಬ್ರಹ್ಮಸ್ವರೂಪಮ್, ಇತಿ ಚೇತ್; ಬ್ರಹ್ಮಣೋ ನಿವರ್ತಕಜ್ಞಾನಂ ಪ್ರತಿ ಜ್ಞಾತೃತ್ವಂ ಕಿಂ ಸ್ವರೂಪಮ್, ಉತಾಧ್ಯಸ್ತಮ್ ? ಅಧ್ಯಸ್ತಂ ಚೇತ್, ಅಯಮ್ ಅಧ್ಯಾಸಃ ತನ್ಮೂಲಾವಿದ್ಯಾನ್ತರಂ ಚ ನಿವರ್ತಕಜ್ಞಾನಾವಿಷಯತಯಾ ತಿಷ್ಠತ್ಯೇವ । ನಿವರ್ತಕಜ್ಞಾನಾನ್ತರಾಭ್ಯುಪಗಮೇ ತಸ್ಯಾಪಿ ತ್ರಿರೂಪತ್ವಾತ್ ಜ್ಞಾತ್ರಪೇಕ್ಷಯಾ ಅನವಸ್ಥಾ ಸ್ಯಾತ್ । ಬ್ರಹ್ಮಸ್ವರೂಪಸ್ಯೈವ ಜ್ಞಾತೃತ್ವೇ ಅಸ್ಮದೀಯ ಏವ ಪಕ್ಷಃ ಪರಿಗೃಹೀತಃ ಸ್ಯಾತ್ । ನಿವರ್ತಕಜ್ಞಾನಸ್ವರೂಪಂ ಸ್ವಸ್ಯ ಜ್ಞಾತಾ ಚ ಬ್ರಹ್ಮವ್ಯತಿರಿಕ್ತತ್ವೇನ ಸ್ವನಿವರ್ತ್ಯಾನ್ತರ್ಗತಮ್ ಇತಿ ವಚನಂ 'ಭೂತಲವ್ಯತಿರಿಕ್ತಂ ಕೃತ್ಸ್ನಂ ದೇವದತ್ತೇನ ಛಿನ್ನಮ್' ಇತ್ಯಸ್ಯಾಮೇವ ಛೇದನಕ್ರಿಯಾಯಾಮ್' ಅಸ್ಯ ಛೇತ್ತುಃ ಅಸ್ಯಾಶ್ಛೇದನಕ್ರಿಯಾಯಾಶ್ಚ ಛೇದ್ಯಾನುಪ್ರವೇಶವಚನವದುಪಹಾಸ್ಯಮ್ । ಅಧ್ಯಸ್ತೋ ಜ್ಞಾತಾ ಸ್ವನಾಶಹೇತುಭೂತನಿವರ್ತಕಜ್ಞಾನೇ ಸ್ವಯಂ ಕರ್ತಾ ಚ ನ ಭವೇತ್, ಸ್ವನಾಶಸ್ಯ ಅಪುರುಷಾರ್ಥತ್ವಾತ್ । ತನ್ನಾಶಸ್ಯ ಬ್ರಹ್ಮಸ್ವರೂಪತ್ವಾಭ್ಯುಪಗಮೇ ಭೇದದರ್ಶನತನ್ಮೂಲಾವಿದ್ಯಾದೀನಾಂ ಕಲ್ಪನಮೇವ ನ ಸ್ಯಾತ್ ಇತ್ಯಲಮನೇನ ದಿಷ್ಟಹತಮುದ್ಗರಾಭಿಘಾತೇನ ॥

(ಅರ್ಥ)

ಇದಲ್ಲದೆ ಚಿನ್ಮಾತ್ರಬ್ರಹ್ಮಕ್ಕಿಂತ ವ್ಯತಿರಿಕ್ತವಾದದ್ದೆಲ್ಲವನ್ನೂ ಅಲ್ಲಗಳೆಯುವ ಜ್ಞಾನವನ್ನು ಅರಿಯುವ ಈ ಜ್ಞಾತೃ ಯಾರು ? ಅವನು ಅಧ್ಯಾಸರೂಪನೇ,

---

1. ಶಬ್ದಬುದ್ಧಿಕರ್ಮಗಳು ಕ್ಷಣಿಕವಾದ್ದರಿಂದ ಎಂದರ್ಥ. ಈ ಯುಕ್ತಿಯನ್ನು ಯಾವ ಅದ್ವೈತಗ್ರಂಥದಲ್ಲಿ ಹೇಳಿದೆಯೋ ತಿಳಿಯದು.

ಎಂದರೆ, ಅದಾಗದು ; ಏಕೆಂದರೆ ಅವನು ನಿಷೇಧ್ಯನಾಗಿರುವದರಿಂದ ನಿವರ್ತಕ ಜ್ಞಾನಕ್ಕೆ ಕರ್ಮವಾಗಿರುತ್ತಾನಾಗಿ ಅದಕ್ಕೆ ಕರ್ತೃವೆಂಬುದು ಯುಕ್ತವಾಗುವದಿಲ್ಲ. ಬ್ರಹ್ಮಸ್ವರೂಪವೇ (ಆ ಜ್ಞಾತೃ) ಎಂದರೆ ಬ್ರಹ್ಮದ (ಈ) ನಿವರ್ತಕಜ್ಞಾನಕ್ಕೆ ಜ್ಞಾತೃತ್ವವು (ಅದರೆ) ಸ್ವರೂಪವೊ, ಅಥವಾ ಅಧ್ಯಸ್ತವೊ ? ಅಧ್ಯಸ್ತವು ಎಂದರೆ[1] ಈ ಅಧ್ಯಾಸವೂ ಅದಕ್ಕೆ ಮೂಲವಾಗಿರುವ ಮತ್ತೊಂದು ಅವಿದ್ಯೆಯೂ ನಿವರ್ತಕ ಜ್ಞಾನಕ್ಕೆ ಅವಿಷಯವಾಗಿರುವದರಿಂದ ಇದ್ದುಕೊಂಡೇ ಇರಬೇಕಾಗುತ್ತದೆ. ಇನ್ನೊಂದು ನಿವರ್ತಕಜ್ಞಾನವನ್ನು ಒಪ್ಪಿದರೊ, ಅದೂ ತ್ರಿರೂಪವಾಗಿರುವದರಿಂದ ಜ್ಞಾತೃ(ಜ್ಞೇಯ)ಗಳಿಗೆ ನಿಲುಗಡೆಯಿಲ್ಲದೆಹೋಗುವದು. ಬ್ರಹ್ಮಸ್ವರೂಪವೇ ಜ್ಞಾತೃತ್ವ ಎಂದರೆ ನಮ್ಮ ಪಕ್ಷವನ್ನೇ ಸ್ವೀಕರಿಸಿದಂತೆ ಆಗುವದು.[2] ನಿವರ್ತಕ ಜ್ಞಾನದ ಸ್ವರೂಪವೂ ತನ್ನ ಜ್ಞಾತೃವೂ ಬ್ರಹ್ಮವ್ಯತಿರಿಕ್ತವಾಗಿರುವದರಿಂದ ತನ್ನ ನಿವರ್ತ್ಯದೊಳಗೇ ಅಡಕವಾಗಿರುತ್ತದೆ ಎಂಬ ಮಾತು 'ಭೂತಲವ್ಯತಿರಿಕ್ತವಾದದ್ದೆಲ್ಲ ವನ್ನೂ ದೇವದತ್ತನು ಕತ್ತರಿಸಿಹಾಕಿದನು' ಎಂದು ಒಂದೇ ಛೇದನಕ್ರಿಯೆಯಲ್ಲಿ 'ಈ ಕಡಿಯುವವನೂ ಕತ್ತರಿಸುವದೆಂಬ ಅವನ ಕ್ರಿಯೆಯೂ ಕತ್ತರಿಸಲ್ಪಡುವ (ವಿಷಯ)ದೊಳಗೇ ಸೇರಿದೆ' ಎಂಬ ವಚನದಂತೆ– ನಗೆಗೀಡಾಗಿರುವದು.[3] ಅಧ್ಯಸ್ತ ನಾದ ಜ್ಞಾತೃವು ತನ್ನ ನಾಶಕ್ಕೆ ಹೇತುವಾಗಿರುವ ನಿವರ್ತಕಜ್ಞಾನದಲ್ಲಿ ತಾನು ಕರ್ತನೂ ಆಗಿರಲಾರನು ; ಏಕೆಂದರೆ ತನ್ನ ನಾಶವು (ತನಗೆ) ಪುರುಷಾರ್ಥವೆನಿಸ ಲಾರದು. ಅವನು ನಾಶವು ಬ್ರಹ್ಮಸ್ವರೂಪವೇ ಎಂದು ಅಂಗೀಕರಿಸುವದಾದರೆ ಭೇದದರ್ಶನ, ಅದಕ್ಕೆ ಮೂಲವಾದ ಅವಿದ್ಯೆ– ಮುಂತಾದವುಗಳ ಕಲ್ಪನೆಯೇ ಇಲ್ಲವಾಗುವದು. ಆದ್ದರಿಂದ ದೈವವಶದಿಂದ ತಾನೇ ಸತ್ತಿರುವದನ್ನು ಸುತ್ತಿಗೆ ಯಿಂದ ಹೊಡೆದುಕೊಲ್ಲುವ (ಈ ಕೆಲಸವು) ಇಲ್ಲಿಗೆ ಸಾಕು.

## ಸಿದ್ಧಾಂತದ ಉಪಸಂಹಾರ

(ಮೂಲ)

೧೫. ತಸ್ಮಾತ್, ಅನಾದಿಕರ್ಮಪ್ರವಾಹರೂಪಾಜ್ಞಾನಮೂಲತ್ವಾತ್ ಬನ್ಧಸ್ಯ ತನ್ನಿಬರ್ಹಣಮ್ ಉಕ್ತಲಕ್ಷಣಜ್ಞಾನಾದೇವ | ತದುತ್ಪತ್ತಿಶ್ಚ ಅಹರಹ ರನುಷ್ಠೀಯಮಾನಪರಮಪುರುಷಾರಾಧನವೇಷಾತ್ಮಯಾಥಾತ್ಮ್ಯಬುದ್ಧಿವಿಶೇಷ ಸಂಸ್ಕೃತವರ್ಣಾಶ್ರಮೋಚಿತಕರ್ಮಲಭ್ಯಾ | ತತ್ರ ಕೇವಲಕರ್ಮಣಾಮ್ ಅಲ್ಪಾ-

---

1. ಅಧ್ಯಸ್ತವೆಂದರೆ ಆತ್ಮಸ್ವರೂಪಕ್ಕಿಂತ ಬೇರೆಯೆಂದೂ ಅದಕ್ಕೆ ಮೂಲವಾಗಿ ಅವಿದ್ಯೆಯಿರಬೇಕೆಂದೂ ಇಟ್ಟುಕೊಂಡೇ ಈ ಪ್ರಶ್ನೆ.

2. ಆತ್ಮನೂ ಬ್ರಹ್ಮವೂ ಜ್ಞಾತೃರೂಪವೆಂಬುದೇ ಸಿದ್ಧಾಂತ.

3. ಏಕೆಂದರೆ ಭೂತಲಕ್ಕಿಂತ ಬೇರೆಯಾದದ್ದರಲ್ಲಿ ತಾನೂ ಸೇರಿರುವಂತೆ ಬ್ರಹ್ಮ ಕ್ಕಿಂತ ವ್ಯತಿರಿಕ್ತವಾದದ್ದರಲ್ಲಿ ಅಧ್ಯಸ್ತಾತ್ಮನೂ ಸೇರಿರುತ್ತಾನೆ.

ಸ್ಥಿರಫಲತ್ವಮ್, ಅನಭಿಸಂಹಿತಫಲಪರಮಪುರುಷಾರಾಧನವೇಷಾಣಾಂ ಕರ್ಮಣಾಮ್ ಉಪಾಸನಾತ್ಮಕಜ್ಞಾನೋತ್ಪತ್ತಿದ್ವಾರೇಣ ಬ್ರಹ್ಮಯಾಥಾತ್ಮ್ಯಾನುಭವರೂಪಾನನ್ತಸ್ಥಿರಫಲತ್ವಂ ಚ ಕರ್ಮಸ್ವರೂಪಜ್ಞಾನಾದೃತೇ ನ ಜ್ಞಾಯತೇ, ಕೇವಲಾಕಾರಪರಿತ್ಯಾಗಪೂರ್ವಕಯಥೋಕ್ತಸ್ವರೂಪಕರ್ಮೋಪಾದಾನಂ ಚ ನ ಸಂಭವತೀತಿ ಕರ್ಮವಿಚಾರಾನನ್ತರಂ ತತ ಏವ ಹೇತೋಃ ಬ್ರಹ್ಮವಿಚಾರಃ ಕರ್ತವ್ಯಃ ಇತಿ 'ಅಥಾತಃ' ಇತ್ಯುಕ್ತಮ್[1] ||

(ಅರ್ಥ)

ಆದ್ದರಿಂದ: ಅನಾದಿಕರ್ಮಪ್ರವಾಹರೂಪವಾದ ಅಜ್ಞಾನವೇ ಬಂಧಕ್ಕೆ ಕಾರಣವಾಗಿರುವದರಿಂದ ಅದರ ನಾಶವು ಮೇಲೆ ಹೇಳಿದ ಸ್ವರೂಪದ ಜ್ಞಾನದಿಂದಲೇ. ಆ (ಉಪಾಸನೆಯ) ಉತ್ಪತ್ತಿಯು ದಿನದಿನವೂ ಅನುಷ್ಠಾನಮಾಡುವ ಪರಮಪುರುಷಾರಾಧನರೂಪವಾದ, ಆತ್ಮತತ್ತ್ವದ ಬುದ್ಧಿವಿಶೇಷದಿಂದ ಸಂಸ್ಕೃತವಾದ, ವರ್ಣಾಶ್ರಮೋಚಿತಕರ್ಮದಿಂದ ದೊರಕತಕ್ಕದ್ದು. ಇಲ್ಲಿ ಕೇವಲಕರ್ಮಗಳಿಗೆ ಅಲ್ಪವೂ ಅಸ್ಥಿರವೂ ಆದ ಫಲ, ಫಲಾಭಿಸಂಧಿಯಿಲ್ಲದ ಪರಮಪುರುಷನ ಆರಾಧನರೂಪವಾದ ಕರ್ಮಗಳಿಗೆ ಉಪಾಸನಾರೂಪವಾದ ಜ್ಞಾನವು ಹುಟ್ಟುವದರ ಮೂಲಕ ಬ್ರಹ್ಮದ ಯಾಥಾತ್ಮ್ಯಾನುಭವರೂಪವಾದ ಅನಂತವಾದ ಸ್ಥಿರವಾದ ಫಲ -ಎಂಬುದು ಕರ್ಮಸ್ವರೂಪದ ಜ್ಞಾನವಿಲ್ಲದೆ ಅರಿಯುವದಕ್ಕೆ ಆಗಲಾರದು, ಕೇವಲಾಕಾರವನ್ನು ಪರಿತ್ಯಜಿಸಿ ಹೇಳಿದ ಈ ಸ್ವರೂಪದ ಕರ್ಮವನ್ನು ಸ್ವೀಕರಿಸುವದೂ ಆಗಲಾರದು ; ಆದ್ದರಿಂದ ಕರ್ಮವಿಚಾರವಾದ ಬಳಿಕ, ಅದೇ (ಮೇಲೆ ಹೇಳಿದ) ಕಾರಣದಿಂದ ಬ್ರಹ್ಮವಿಚಾರವನ್ನು ಮಾಡಬೇಕು- ಎಂಬ (ಅಭಿಪ್ರಾಯದಿಂದ) 'ಅಥಾತಃ' (ಇನ್ನು ಆದ್ದರಿಂದ) ಎಂದು (ಸೂತ್ರದಲ್ಲಿ) ಹೇಳಿರುತ್ತದೆ.

## ಸೂತ್ರಕಾರರಿಗೆ ಸಮ್ಮತವಾದ ಸೂತ್ರಾರ್ಥಯೋಜನೆ

## ಪೂರ್ವಪಕ್ಷ

(ಮೂಲ)

೧೬. ತತ್ರ ಪೂರ್ವಪಕ್ಷವಾದೀ ಮನ್ಯತೇ—ವೃದ್ಧವ್ಯವಹಾರಾದನ್ಯತ್ರ ಶಬ್ದಸ್ಯ ಬೋಧಕತ್ವಶಕ್ತ್ಯವಧಾರಣಾಸಮ್ಭವಾತ್, ವ್ಯವಹಾರಸ್ಯ ಚ ಕಾರ್ಯ

1. 'ಇತಿ ಸೂತ್ರಮ್' ಎಂದು ಪಾ||

2. ಅದ್ವೈತಿಗೂ ಭೇದಾಭೇದವಾದಿಗಳೇ ಮುಂತಾದವರ ಪ್ರಸ್ಥಾನಗಳು ಶ್ರುತಿಯುಕ್ತಿಸಮ್ಮತವಾಗಿಲ್ಲ, ಆದ್ದರಿಂದ ನಮ್ಮ ಪ್ರಸ್ಥಾನವೇ ಸರಿ– ಎಂದು ಸಂಗ್ರಹದಿಂದ ಸಿದ್ಧಾಂತವನ್ನು ಹೇಳಿರುತ್ತದೆ.

ಬುದ್ಧಿಪರತ್ವೇನ[1] ಕಾರ್ಯಾರ್ಥೇ ಏವ ಶಬ್ದಸ್ಯ ಪ್ರಾಮಾಣ್ಯಮ್– ಇತಿ ಕಾರ್ಯರೂಪ ಏವ ವೇದಾರ್ಥಃ । ಅತೋ ನ ವೇದಾನ್ತಾಃ ಪರಿನಿಷ್ಪನ್ನೇ ಪರೇ ಬ್ರಹ್ಮಣಿ ಪ್ರಮಾಣಭಾವಮನುಭವಿತುಮರ್ಹನ್ತಿ । ನ ಚ ಪುತ್ರಜನ್ಮಾದಿಸಿದ್ಧವಸ್ತುವಿಷಯವಾಕ್ಯೇಷು ಹರ್ಷಹೇತೂನಾಂ ಕಾಲತ್ರಯವರ್ತಿನಾಮ್ ಅರ್ಥಾನಾಮ್ ಆನನ್ತ್ಯಾತ್ ಸುಲಗ್ನಸುಖಪ್ರಸವಾದಿಹರ್ಷಹೇತ್ವರ್ಥಾನ್ತರೋಪನಿಪಾತಸಮ್ಭಾವನಯಾ ಚ ಪ್ರಿಯಾರ್ಥಪ್ರತಿಪತ್ತಿನಿಮಿತ್ತಮುಖವಿಕಾಸಾದಿಲಿಙ್ಗೇನ ಅರ್ಥವಿಶೇಷಬುದ್ಧಿಹೇತುತ್ವನಿಶ್ಚಯಃ । ನಾಪಿ ವ್ಯುತ್ಪನ್ನೇತರಪದವಿಭಕ್ತ್ಯರ್ಥಸ್ಯ ಪದಾನ್ತರಾರ್ಥನಿಶ್ಚಯೇನ ಪ್ರಕೃತ್ಯರ್ಥನಿಶ್ಚಯೇನ ವಾ ಶಬ್ದಸ್ಯ ಸಿದ್ಧವಸ್ತುನಿ ಅಭಿಧಾನಶಕ್ತಿನಿಶ್ಚಯಃ । ಜ್ಞಾತಕಾರ್ಯಾಭಿಧಾಯಿಪದಸಮುದಾಯಸ್ಯ ತದಂಶವಿಶೇಷನಿಶ್ಚಯರೂಪತ್ವಾತ್ ತಸ್ಯ । ನ ಚ ಸರ್ಪಾದ್ ಭೀತಸ್ಯ 'ನಾಯಂ ಸರ್ಪೋ ರಜ್ಜುರೇಷಾ' ಇತಿ ಶಬ್ದಶ್ರವಣಸಮನನ್ತರಂ ಭಯನಿವೃತ್ತಿದರ್ಶನೇನ ಸರ್ಪಾಭಾವಬುದ್ಧಿಹೇತುತ್ವನಿಶ್ಚಯಃ। ಅತ್ರಾಪಿ 'ನಿಶ್ಚೇಷ್ಟಂ ನಿರ್ವಿಷಮ್ ಅಚೇತನಮಿದಂ ವಸ್ತು' ಇತ್ಯಾದ್ಯರ್ಥಬೋಧೇಷು ಬಹುಷು ಭಯನಿವೃತ್ತಿಹೇತುಷು ಸತ್ಸು, ವಿಶೇಷನಿಶ್ಚಯಾಯೋಗಾತ್ । ಕಾರ್ಯಬುದ್ಧಿಪ್ರವೃತ್ತಿವ್ಯಾಪ್ತಿಬಲೇನ ಶಬ್ದಸ್ಯ ಪ್ರವರ್ತಕಾರ್ಥಾವಬೋಧಿತ್ವಮ್ ಅವಗತಮಿತಿ[2] ಸರ್ವಪದಾನಾಂ ಕಾರ್ಯಪರತ್ವೇನ ಸರ್ವೈಃ ಪದೈಃ ಕಾರ್ಯಸ್ಯೈವ ವಿಶಿಷ್ಟಸ್ಯ ಪ್ರತಿಪಾದನಾತ್ ನಾನ್ಯಾನ್ವಿತಸ್ವಾರ್ಥಮಾತ್ರೇ ಪದಶಕ್ತಿನಿಶ್ಚಯಃ । ಇಷ್ಟಸಾಧನತಾಬುದ್ಧಿಸ್ತು ಕಾರ್ಯಬುದ್ಧಿದ್ವಾರೇಣ ಪ್ರವೃತ್ತಿಹೇತುಃ, ನ ಸ್ವರೂಪೇಣ ; ಅತೀತಾನಾಗತವರ್ತಮಾನೇಷ್ಟೋಪಾಯಬುದ್ಧಿಷು ಪ್ರವೃತ್ತ್ಯನುಪಲಬ್ಧೇಃ । 'ಇಷ್ಟೋಪಾಯೋ ಹಿ ಮತ್ಪ್ರಯತ್ನಾದೃತೇ ನ ಸಿಧ್ಯತಿ; ಅತೋ ಮತ್ಕೃತಿಸಾಧ್ಯಃ' ಇತಿ ಬುದ್ಧಿರ್ಯಾವನ್ನ ಜಾಯತೇ ತಾವನ್ನ ಪ್ರವರ್ತತೇ । ಅತಃ ಕಾರ್ಯಬುದ್ಧಿರೇವ ಪ್ರವೃತ್ತಿಹೇತುರಿತಿ ಪ್ರವರ್ತಕಸ್ಯೈವ ಶಬ್ದವಾಚ್ಯತಯಾ ಕಾರ್ಯಸ್ಯೈವ ವೇದವೇದ್ಯತ್ವಾತ್ ಪರಿನಿಷ್ಪನ್ನರೂಪಬ್ರಹ್ಮಪ್ರಾಪ್ತಿಲಕ್ಷಣಾನನ್ತಸ್ಥಿರಫಲಾಪ್ರತಿಪತ್ತೇಃ, 'ಅಕ್ಷಯ್ಯಂ ಹ ವೈ ಚಾತುರ್ಮಾಸ್ಯಯಾಜಿನಃ ಸುಕೃತಂ ಭವತಿ' (ಆಪ.ಶ್ರೌ. ೨–೧–೧) ಇತ್ಯಾದಿಭಿಃ ಕರ್ಮಣಾಮೇವ ಸ್ಥಿರಫಲತ್ವಪ್ರತಿಪಾದನಾಚ್ಚ ಕರ್ಮಫಲಾಲ್ಪಾಸ್ಥಿರತ್ವಬ್ರಹ್ಮಜ್ಞಾನಫಲಾನನ್ತಸ್ಥಿರತ್ವಜ್ಞಾನಹೇತುಕೋ ಬ್ರಹ್ಮವಿಚಾರಾರಮ್ಭೋ ನ ಯುಕ್ತಃ – ಇತಿ ॥

(ಅರ್ಥ)

ಇಲ್ಲಿ **ಪೂರ್ವಪಕ್ಷಿಯ** ಅಭಿಪ್ರಾಯವೇನೆಂದರೆ :

ದೊಡ್ಡವರ ವ್ಯವಹಾರವನ್ನು ಬಿಟ್ಟರೆ ಮತ್ತೆಯಾವ (ಪ್ರಮಾಣದಿಂದಲೂ) ಶಬ್ದದ ಬೋಧಕಶಕ್ತಿಯನ್ನು ನಿರ್ಧರಿಸುವದು ಆಗಲಾರದಾದ್ದರಿಂದಲೂ, ವ್ಯವ

1. 'ಪೂರ್ವಕತ್ವೇನ' ಎಂದು ಪಾ॥
2. 'ಉಪಗತಮಿತಿ' ಎಂಬುದಕ್ಕಿಂತ ಇದೇ ಉತ್ತಮಪಾಠ.

ಹಾರದಲ್ಲಿ ಕಾರ್ಯಬುದ್ಧಿಪರನಾಗಿರುವದರಿಂದಲೂ ಕಾರ್ಯಾರ್ಥದಲ್ಲಿಯೇ ಶಬ್ದಕ್ಕೆ ಪ್ರಾಮಾಣ್ಯ(ವಿರುತ್ತದೆ)ವಾಗಿ ಕಾರ್ಯರೂಪವಾದದ್ದೇ ವೇದಾರ್ಥವು.[1] ಆದ್ದರಿಂದ ವೇದಾಂತಗಳು ಸಿದ್ಧವಾಗಿರುವ ಪರಬ್ರಹ್ಮದಲ್ಲಿ ಪ್ರಮಾಣಭಾವವನ್ನು ಪಡೆಯಲಾರವು. 'ಪುತ್ರನು ಹುಟ್ಟಿದನು' ಮುಂತಾದ ಸಿದ್ಧವಸ್ತುವಿಷಯಕವಾದ ವಾಕ್ಯಗಳಲ್ಲಿ ಹರ್ಷಕ್ಕೆ ಕಾರಣವಾಗಿರುವ, ಕಾಲತ್ರಯದಲ್ಲಿರುವ ವಿಷಯಗಳು ಅನಂತವಾಗಿರುವದರಿಂದ 'ಸುಲಗ್ನದಲ್ಲಿ ಸುಖಪ್ರಸವವಾಯಿತು' ಎಂಬುದೇ ಮುಂತಾದ ಹರ್ಷಹೇತುಗಳಾದ ಬೇರೆಯ ವಿಷಯಗಳೂ (ಇರಬಹುದೆಂಬ) ಸಂಭಾವನೆಯಿರುವದರಿಂದ ಪ್ರಿಯವಿಷಯವನ್ನು ಅರಿತುಕೊಂಡ ನಿಮಿತ್ತದಿಂದಾದ ಮುಖವು ಅರಳಿಕೊಳ್ಳುವದೇ ಮುಂತಾದ ಗುರುತಿನಿಂದ ಇಂಥ ವಿಷಯದ ಜ್ಞಾನವೇ ಹೇತುವೆಂದು ನಿಶ್ಚಯಿಸುವದಕ್ಕಾಗಲಾರದು.[2] ಉಳಿದ ಪದವಿಭಕ್ತಿಯ ಅರ್ಥವನ್ನು ಅರಿತುಕೊಂಡವನಿಗೆ ಮತ್ತೊಂದು ಪದದ ಅರ್ಥವೂ ಗೊತ್ತಾಗುವದರಿಂದ,[3] ಪ್ರಕೃತ್ಯರ್ಥದ ನಿಶ್ಚಯವಾಗುವದರಿಂದಲಾಗಲಿ[4] ಶಬ್ದಕ್ಕೆ **ಸಿದ್ಧವಸ್ತುವನ್ನು ಹೇಳುವ ಶಕ್ತಿಯಿದೆ ಎಂದೂ ನಿಶ್ಚಯಿಸುವದಕ್ಕಾಗುವದಿಲ್ಲ.** ಏಕೆಂದರೆ ಕಾರ್ಯಾಭಿಧಾಯಕಗಳೆಂದು ಗೊತ್ತಾಗಿರುವ ಪದಸಮುದಾಯವನ್ನು ಅರಿತುಕೊಂಡವನಿಗೆ, ಆ (ಸಮುದಾಯದ) ಅಂಶವಿಶೇಷವನ್ನು ನಿಶ್ಚಯಿಸುವದೇ ಅದಾಗಿರುತ್ತದೆ ಎಂಬ ರೂಪವಾಗಿರುತ್ತದೆ, ಆ ನಿಶ್ಚಯ. ಹಾವಿಗೆ ಹೆದರಿದವನಿಗೆ 'ಇದು ಹಾವಲ್ಲ, ಹಗ್ಗವಿದು' ಎಂಬ ಶಬ್ದವನ್ನು ಕೇಳಿದ ಬಳಿಕ ಭಯವು ತೊಲಗುವದು ಕಂಡುಬರುತ್ತಿರುವದರಿಂದ (ಅದಕ್ಕೆ) ಹಾವಿಲ್ಲವೆಂಬ ಬುದ್ಧಿಯೇ ಕಾರಣ ಎಂದು ನಿಶ್ಚಯವಾಗುತ್ತದೆ[5] (ಎಂದೂ ಹೇಳ)ಲಾಗುವದಿಲ್ಲ; ಏಕೆಂದರೆ ಇಲ್ಲಿಯೂ 'ಯಾವ ವ್ಯಾಪಾರವೂ ಇಲ್ಲದ, ನಿರ್ವಿಷವಾದ ಅಚೇತನವೀ ವಸ್ತು' —ಎಂದು ಮುಂತಾದ ಅನೇಕ ಅರ್ಥಬೋಧಗಳು ಭಯನಿವೃತ್ತಿಗೆ ಕಾರಣಗಳಾಗಿ ಇರುತ್ತಿರುವಲ್ಲಿ (ಇದೇ

---

1. ಶಬ್ದಕ್ಕೆ ಕಾರ್ಯಾನ್ವಿತದಲ್ಲಿಯೇ ಶಕ್ತಿಯಿದೆ— ಎಂಬ ಪೂರ್ವಪಕ್ಷವು ಶಾಂಕರಭಾಷ್ಯದಲ್ಲಿತ್ತೆಂದು ಭಾವಿಸಿ ವ್ಯಾಖ್ಯಾನಪ್ರಸ್ಥಾನಗಳಲ್ಲಿ ಇದನ್ನು ಒಡ್ಡಿ ಪರಿಹರಿಸಿದೆ.

2. ಈ ಬಗೆಯ ದೃಷ್ಟಾಂತಗಳನ್ನು ಭಾಮತಿಯೇ ಮುಂತಾದ ವ್ಯಾಖ್ಯಾನಪ್ರಸ್ಥಾನ ಗ್ರಂಥಗಳಲ್ಲಿ ಉದಾಹರಿಸಿದೆ.

3. 'ಪಿಕಃ ಕೂಜತಿ' (ನವಿಲು ಕೂಗುತ್ತದೆ) ಎಂಬಲ್ಲಿ 'ಕೂಜತಿ' (ಕೂಗುತ್ತದೆ) ಎಂಬ ಪದಕ್ಕೆ ಅರ್ಥವನ್ನು ಅರಿತುಕೊಂಡಿರುವಾತನು ಪಿಕವೆಂದರೆ ನವಿಲು ಎಂದು ತಿಳಿದುಕೊಳ್ಳುತ್ತಾನೆ —ಎಂದು ಇಲ್ಲಿ ಉದಾಹರಣೆ. ಶ್ರು. ಪ್ರ.

4. 'ಕಾಷ್ಠೈಃ ಸ್ಥಾಲ್ಯಾಮೋದನಂ ಪಚತಿ' —ಎಂಬಲ್ಲಿ ಪಚತಿ ಎಂಬ ಶಬ್ದಕ್ಕೆ ಅರ್ಥವನ್ನು ಅರಿತುಕೊಂಡಿರುವವನಿಗೆ ಕಾಷ್ಠವೇ ಮುಂತಾದ ಪ್ರಕೃತಿಗಳ ಅರ್ಥವು ಗೊತ್ತಾಗುತ್ತದೆ— ಎಂಬುದು ಇಲ್ಲಿ ಉದಾಹರಣೆ. ಶ್ರು. ಪ್ರ.

5. ಇದು ಶಾಂಕರಪ್ರಸ್ಥಾನದವರ ಮತ.

ಆ ಹೇತು ಎಂದು ಕಾರಣ)ವಿಶೇಷವನ್ನು ನಿಶ್ಚಯಿಸುವದು ಯುಕ್ತವಾಗುವದಿಲ್ಲ.[1] ಕಾರ್ಯಬುದ್ಧಿಪ್ರವೃತ್ತಿಯ ವ್ಯಾಪ್ತಿಯ ಬಲದಿಂದ ಶಬ್ದವು ಪ್ರವರ್ತಕಾರ್ಥವನ್ನು ತಿಳಿಸುತ್ತದೆ ಎಂದು ಗೊತ್ತಾಗಿರುವದರಿಂದ[2] ಎಲ್ಲಾ ಪದಗಳೂ ಕಾರ್ಯಪರ ವಾಗಿರುವದರಿಂದ ಸರ್ವಪದಗಳೂ ವಿಶಿಷ್ಟವಾದ ಕಾರ್ಯವನ್ನೇ ಪ್ರತಿಪಾದಿಸುತ್ತವೆ ಯಾದ್ದರಿಂದ **ಮತ್ತೊಂದರಲ್ಲಿ ಅನ್ವಯವಾಗುವ ತನ್ನ ಅರ್ಥವನ್ನು ಮಾತ್ರ ಪದಶಕ್ತಿ ಎಂದು ನಿಶ್ಚಯಿಸುವದಕ್ಕಾಗುವದಿಲ್ಲ.**[3] (ಇದು) ಇಷ್ಟವಾದ **ದ್ದಕ್ಕೆ ಸಾಧನ**– ಎಂಬ ಬುದ್ಧಿಯಾದಗೋ[4] ಕಾರ್ಯಬುದ್ಧಿಯ ಮೂಲಕ ಪ್ರವೃತ್ತಿಗೆ ಹೇತುವೇ ಹೊರತು ತನ್ನ ಸ್ವರೂಪದಿಂದಲೇ (ಹೇತು)ವಲ್ಲ, ಏಕೆಂದರೆ ಹಿಂದಿನ, ಮುಂದಿನ, ಈಗಿನ– ಇಷ್ಟೋಪಾಯಗಳ ಬುದ್ಧಿಗಳು (ಉಂಟಾಗು)ವಲ್ಲಿ ಪ್ರವೃತ್ತಿಯಾಗುವದು ಕಂಡಿಲ್ಲ.[5] 'ಇಷ್ಟಕ್ಕೆ ಉಪಾಯವಾದದ್ದು ನನ್ನ ಪ್ರಯತ್ನ ವಿಲ್ಲದೆ ಸಿದ್ಧಿಯಾಗುವಂತಿಲ್ಲ ; ಆದ್ದರಿಂದ ನನ್ನ ಕೃತಿಯಿಂದಲೇ (ಅದು) ಸಿದ್ಧಿ ಯಾಗತಕ್ಕದ್ದು' ಎಂಬ ಬುದ್ಧಿಯು ಎಲ್ಲಿಯವರೆಗೆ ಆಗುವದಿಲ್ಲವೋ ಅಲ್ಲಿಯವರೆಗೆ (ಯಾವನೂ) ತೊಡಗುವದಿಲ್ಲ. ಆದ್ದರಿಂದ ಕಾರ್ಯಬುದ್ಧಿಯೇ ಪ್ರವೃತ್ತಿಗೆ

---

1. ಹಗ್ಗದ ಜ್ಞಾನವೇ ಕಾರಣ ಎಂದು ನಿಶ್ಚಯಿಸುವದಾಗುವದಿಲ್ಲ– ಎಂದರ್ಥ. ಈ ಪರಿಹಾರವನ್ನು ಯಾವ ವ್ಯಾಖ್ಯಾನಪ್ರಸ್ಥಾನದಲ್ಲಿ ಹೇಳಿದೆಯೋ ತಿಳಿಯದು. ಶಾಸ್ತ್ರವು ಅಸಂಸಾರ್ಯಾತ್ಮನನ್ನು ತಿಳಿಸಿಕೊಡುವದರಿಂದ ಸಂಸಾರಿತ್ವಭ್ರಾಂತಿಯು ಹೋಗಬಹುದಾಗಿದೆ ಎಂಬಿಷ್ಟನ್ನು ತಿಳಿಸುವದಕ್ಕೆಂದೇ ರಜ್ಜುಸರ್ಪದ ಉದಾಹರಣೆಯನ್ನು ಶಾಂಕರಭಾಷ್ಯದಲ್ಲಿ ಉದಾಹರಿಸಿದೆ. ಪರಿಶಿಷ್ಟವನ್ನು ನೋಡಿ.

2. ಸರ್ವಶಬ್ದಗಳಿಗೂ ಅನುಗತವಾಗಿರುವ ಅರ್ಥವನ್ನೇ ಹೇಳಬೇಕು. ಅದು (೧) ಕಾರ್ಯರೂಪಾರ್ಥವೊ, (೨) ಕಾರ್ಯಾನ್ವಿತಸ್ವಾರ್ಥವೊ, (೩) ಕಾರಕಾನ್ವಿತ ಸ್ವಾರ್ಥವೊ ? ಮೊದಲನೆಯ ವಿಕಲ್ಪವನ್ನಿಟ್ಟುಕೊಂಡರೆ ಅದು ಕಾರಕಾಭಿದಾಯಕಪದಗಳಿಗೆ ಹೊಂದುವದಿಲ್ಲ ; ಎರಡನೆಯ ಪಕ್ಷವು ಲಿಙಾದಿಗಳಿಗೆ ಹೊಂದುವದಿಲ್ಲ, ಏಕೆಂದರೆ ಅವು ಕಾರ್ಯವನ್ನೇ ಹೇಳುತ್ತವೆ ; ಮೂರನೆಯ ಪಕ್ಷವು ಕಾರಕಪದಗಳಿಗೆ ಹೊಂದುವದಿಲ್ಲ, ಏಕೆಂದರೆ ಅವು ಕಾರಕಾನ್ವಿತಾರ್ಥವನ್ನು ಹೇಳುವದಿಲ್ಲ. ಆದ್ದರಿಂದ ಅನ್ಯಾನ್ವಿತಸ್ವಾರ್ಥವನ್ನೇ ಹೇಳುತ್ತವೆ ಎನ್ನಬೇಕಾಯಿತು. ಅದು ಸಿದ್ಧವಸ್ತುವನ್ನು ಹೇಳಿದರೂ ಆಗುತ್ತದೆ– ಎಂಬ ಶಂಕೆಗೆ ಪರಿಹಾರವಿದು. ತ. ಪ್ರ.

3. ಅನ್ವಿತಾಭಿಧಾನವಾದಿಗಳ ಮತದ ನಿರಾಕರಣೆಯಿದು.

4. ಇದು ನನ್ನ ಇಷ್ಟವು ದೊರಕುವದಕ್ಕೆ ಸಾಧನ–ಎಂಬೀ ಜ್ಞಾನದಿಂದಲೇ ಪ್ರವೃತ್ತಿ ಯುಂಟಾಗಬಹುದು, ಕಾರ್ಯಬುದ್ಧಿಯು ಏತಕ್ಕೆ–ಎಂಬ ಭಾಟ್ಟರ ಮತವನ್ನು ಇಲ್ಲಿ ನಿರಾಕರಿ ಸಿದೆ. ನಾನು ಇದನ್ನು ಮಾಡಿದರೆ ಇಷ್ಟಪ್ರಾಪ್ತಿ– ಎಂಬ ಬುದ್ಧಿಯನ್ನುಂಟುಮಾಡುವದ ರಿಂದಲೇ ಇಷ್ಟಸಾಧನತ್ವಬುದ್ಧಿಯು ಪರಂಪರೆಯಿಂದ ಪ್ರವೃತ್ತಿಗೆ ಕಾರಣ, ನೇರಾಗಿ ತಾನೇ ಕಾರಣವಲ್ಲ– ಎಂದಭಿಪ್ರಾಯ.

5. ಇಷ್ಟಕ್ಕೆ ಉಪಾಯವಾದ ಕ್ರಿಯೆಯು ನನ್ನ ಪ್ರಯತ್ನದಿಂದಲೇ ಏರ್ಪಡಬೇಕಾದ್ದ ರಿಂದ ಇದು ನನ್ನ ಕರ್ತವ್ಯ– ಎಂಬ ಬುದ್ಧಿಯೇ ನಿಯಮದಿಂದ ಪ್ರವೃತ್ತಿಗೆ ಅವಶ್ಯ.

ಕಾರಣವಾಗಿರುತ್ತದೆಯಾಗಿ ಪ್ರವರ್ತಕವೇ ಶಬ್ದವಾಚ್ಯವಾಗಿರುತ್ತದೆಯಾದ್ದರಿಂದ ಕಾರ್ಯವೇ ವೇದವೇದ್ಯವಾಗಿರುತ್ತದೆಯಾಗಿ ಸಿದ್ಧರೂಪವಾಗಿರುವ ಬ್ರಹ್ಮದ ಪ್ರಾಪ್ತಿ ಎಂಬ ಅನಂತಸ್ಥಿರಫಲದ ಜ್ಞಾನವು ಉಂಟಾಗದೆ ಇರುವದರಿಂದಲೂ[1] 'ಚಾತುರ್ಮಾಸ್ಯಯಾಜಿಯಾದವನಿಗೆ[2] ಅಕ್ಷಯವಾದ ಸುಕೃತವುಂಟಾಗುವದು' (ಆ.ಶ್ರೌ.ಸೂ. ೨-೧-೧) ಮುಂತಾದ (ವಾಕ್ಯ)ಗಳಿಂದ ಕರ್ಮಗಳಿಂದಲೇ ಸ್ಥಿರಫಲ ಪ್ರಾಪ್ತಿಯಾಗುವದೆಂದು ಪ್ರತಿಪಾದಿತವಾಗಿರುವದರಿಂದಲೂ ಕರ್ಮಫಲವು ಅಲ್ಪ, ಅಸ್ಥಿರ- ಎಂದೂ ಬ್ರಹ್ಮಜ್ಞಾನದ ಫಲವು ಅನಂತ, ಸ್ಥಿರ- ಎಂದೂ ಜ್ಞಾನದ ಕಾರಣದಿಂದಾಗಬೇಕಾಗಿರುವ ಬ್ರಹ್ಮವಿಚಾರದ ಆರಂಭವು ಯುಕ್ತವಲ್ಲ.

## ಸಿದ್ಧಾಂತ: ನಿಯೋಗವಾದದ ಖಂಡನೆ

(ಮೂಲ)

೧೭. ಅತ್ರಾಭಿಧೀಯತೇ-ನಿಖಿಲಲೋಕವಿದಿತಶಬ್ದಾರ್ಥಸಂಬನ್ಧಾವಧಾರಣ ಪ್ರಕಾರಮಪಸುದ್ಯ ಸರ್ವಶಬ್ದಾನಾಮ್ ಅಲೌಕಿಕೈಕಾರ್ಥಾವಬೋಧಿತ್ವಾವಧಾರಣಂ ಪ್ರಾಮಾಣಿಕಾ ನ ಬಹುಮನ್ವತೇ । ಏವಂ ಕಿಲ ಬಾಲಾಃ ಶಬ್ದಾರ್ಥಸಂಬನ್ಧಮ್ ಅವಧಾರಯನ್ತಿ - ಮಾತಾಪಿತೃಪ್ರಭೃತಿಭಿಃ, ಅಮ್ಬಾತಾತಮಾತುಲಾದೀನ್ ಶಶಿಪಶುನರಮೃಗಪಕ್ಷಿಸರ್ಪಾದೀಂಶ್ಚ 'ಏನಮವೇಹಿ, ಇಮಂ ಚಾವಧಾರಯ' ಇತ್ಯಭಿಪ್ರಾಯೇಣ ಅಙ್ಗುಲ್ಯಾ ನಿರ್ದಿಶ್ಯ ನಿರ್ದಿಶ್ಯ ತೈಸ್ತೈಃ ಶಬ್ದೈಸ್ತೇಷು ತೇಷ್ವರ್ಥೇಷು ಬಹುಶಃ ಶಿಕ್ಷಿತಾಃ ಶನೈಃ ಶನೈಸ್ತೈಸ್ತೈರೇವ ಶಬ್ದೈಃ, ತೇಷು ತೇಷ್ವರ್ಥೇಷು ಸ್ವಾತ್ಮನಾಂ ಬುದ್ಧ್ಯುತ್ಪತ್ತಿಂ ದೃಷ್ಟ್ವಾ ಶಬ್ದಾರ್ಥಯೋಃ ಸಂಬನ್ಧಾನ್ತರಾದರ್ಶನಾತ್, ಸಙ್ಕೇತಯಿತೃಪುರುಷಾಜ್ಞಾನಾಚ್ಚ ತೇಷ್ವರ್ಥೇಷು ತೇಷಾಂ ಶಬ್ದಾನಾಂ ಪ್ರಯೋಗೋ ಬೋಧಕತ್ವನಿಬನ್ಧನ ಇತಿ ನಿಶ್ಚಿನ್ವನ್ತಿ । ಪುನಶ್ಚ ವ್ಯುತ್ಪನ್ನೇತರಶಬ್ದೇಷು 'ಅಸ್ಯ ಶಬ್ದಸ್ಯಾಯಮರ್ಥಃ' ಇತಿ ಪೂರ್ವವೃದ್ಧೈಶ್ಶಿಕ್ಷಿತಾಃ ಸರ್ವಶಬ್ದಾನಾಮರ್ಥಮ್ ಅವಗಮ್ಯ ಪರಪ್ರತ್ಯಾಯನಾಯ ತತ್ತದರ್ಥಾವಬೋಧಿವಾಕ್ಯಜಾತಂ ಪ್ರಯುಞ್ಜತೇ ॥

---

1. ಪರಿನಿಷ್ಪನ್ನವಾದ ವಸ್ತುವನ್ನು ಹೇಳುವ ಶಕ್ತಿಯೇ ಶಬ್ದಕ್ಕಿಲ್ಲವಾದ್ದರಿಂದ ಬ್ರಹ ಪ್ರಾಪ್ತಿಯು ಅನಂತ, ಸ್ಥಿರ- ಎಂಬ ಜ್ಞಾನವುಂಟಾಗಲಾರದು ಎಂದು ಅಭಿಪ್ರಾಯ.

2. ವೈಶ್ವದೇವವರುಣಪ್ರಘಾಸವೇ ಮುಂತಾದ ಹವಿರ್ಯಜ್ಞಗಳು ಚಾತುರ್ಮಾಸ್ಯ. ಇವನ್ನು ಮಾಡಿದರೆ ಅಕ್ಷಯಫಲವೆಂದಿರುವದರಿಂದ ಬ್ರಹ್ಮವಿಚಾರವೇಕೆ ?- ಎಂದು ಶಂಕೆ. ದೇವತಾಧಿಕರಣನ್ಯಾಯದಿಂದ ಪರಿನಿಷ್ಪನ್ನವಸ್ತುಜ್ಞಾನವೂ ಆಗಬಹುದು- ಎಂದು ಸಿದ್ಧಾಂತಿಯು ಹೇಳಬಹುದೆಂದು ಭಾವಿಸಿ ಬ್ರಹ್ಮವಿಚಾರದ ವಿಷಯಕ್ಕೆ ಈ ಶಂಕೆಯನ್ನೊಡ್ಡಿದೆ.

ಪ್ರಕಾರಾನ್ತರೇಣಾಪಿ ಶಬ್ದಾರ್ಥಸಂಬನ್ಧಾವಧಾರಣಂ ಸುಶಕಮ್—ಕೇನಚಿತ್ ಪುರುಷೇಣ ಹಸ್ತಚೇಷ್ಟಾದಿನಾ 'ಪಿತಾ ತೇ ಸುಖಮಾಸ್ತೇ' ಇತಿ ದೇವದತ್ತಾಯ ಜ್ಞಾಪಯೇತಿ ಪ್ರೇಷಿತಃ ಕಶ್ಚಿತ್ ತಜ್ಜ್ಞಾಪನೇ ಪ್ರವೃತ್ತಃ 'ಪಿತಾ ತೇ ಸುಖಮಾಸ್ತೇ' ಇತಿ ಶಬ್ದಂ ಪ್ರಯುಙ್ಕ್ತೇ। ಪಾರ್ಶ್ವಸ್ಥೋಽನ್ಯೋ ವ್ಯುತ್ಪಿತ್ಸುಃ ಮೂಕವಚ್ಚೇಷ್ಟಾವಿಶೇಷಜ್ಞಃ, ತಜ್ಜ್ಞಾಪನೇ ಪ್ರವೃತ್ತಮಿಮಂ ಜ್ಞಾತ್ವಾ ಅನುಗತಸ್ತಜ್ಜ್ಞಾಪನಾಯ ಪ್ರಯುಕ್ತಮಿಮಂ ಶಬ್ದಂ ಶ್ರುತ್ವಾ 'ಅಯಂ ಶಬ್ದಃ, ತದರ್ಥಬುದ್ಧಿಹೇತುಃ' ಇತಿ ನಿಶ್ಚಿನೋತಿ ಇತಿ ಕಾರ್ಯಾರ್ಥ ಏವ ವ್ಯುತ್ಪತ್ತಿರಿತಿ ನಿರ್ಬನ್ಧೋ ನಿರ್ನಿಬನ್ಧನಃ। ಅತೋ ವೇದಾನ್ತಾಃ ಪರಿನಿಷ್ಪನ್ನಂ ಪರಂ ಬ್ರಹ್ಮ, ತದುಪಾಸನಂ ಚ ಅಪರಿಮಿತಫಲಂ ಬೋಧಯನ್ತೀತಿ ತನ್ನಿರ್ಣಯಫಲೋ ಬ್ರಹ್ಮವಿಚಾರಃ ಕರ್ತವ್ಯಃ ॥

(ಅರ್ಥ)

**ಇದಕ್ಕೆ ನಾವು ಹೇಳುವದೇನೆಂದರೆ—**

ಎಲ್ಲಾ ಜನರಿಗೂ ಗೊತ್ತಾಗಿರುವ ಶಬ್ದಾರ್ಥಗಳ ಸಂಬಂಧವನ್ನು ನಿಶ್ಚಯಿಸುವ ಪ್ರಕಾರವನ್ನು ಅತ್ತಸರಿಯಿಸಿ, ಎಲ್ಲಾ ಶಬ್ದಗಳೂ ಅಲೌಕಿಕವಾದ ಒಂದೇ ಅರ್ಥವನ್ನು ತಿಳಿಸುತ್ತವೆ ಎಂದು ನಿರ್ಧರಿಸುವ (ಈ ಪ್ರಕಾರವನ್ನು) ಪ್ರಾಮಾಣಿಕರು ಬಹುಮಾನಿಸಲಾರರು. ಹೀಗಲ್ಲವೆ, ಹುಡುಗರು ಶಬ್ದಾರ್ಥಗಳ ಸಂಬಂಧವನ್ನು ನಿಶ್ಚಯಿಸಿಕೊಳ್ಳುತ್ತಾರೆ? (ಹೇಗೆಂದರೆ) ತಾಯಿ, ತಂದೆ ಮೊದಲಾದವರು 'ಅಮ್ಮ', 'ಅಪ್ಪ', 'ಮಾವ' ಮೊದಲಾದವರನ್ನು ಚಂದ್ರ, ಪಶುಗಳು, ಮನುಷ್ಯರು, ಮೃಗಗಳು, ಪಕ್ಷಿಗಳು, ಸರ್ಪ—ಮುಂತಾದವುಗಳನ್ನು 'ಇದನ್ನು ತಿಳಿದುಕೊ, ಇದನ್ನು ಗೊತ್ತುಪಡಿಸಿಕೊ' ಎಂಬ ಅಭಿಪ್ರಾಯದಿಂದ ಬೆರಳಿನಿಂದ ತೋರಿಸಿತೋರಿಸಿ ಆಯಾ ಶಬ್ದಗಳಿಂದ ಆಯಾ ಅರ್ಥಗಳಲ್ಲಿ ಅನೇಕಸಾರಿ ಕಲಿಯಿಸಿಕೊಟ್ಟಮೇಲೆ ಮೆಲ್ಲಮೆಲ್ಲಗೆ ಅದೇ ಶಬ್ದಗಳಿಂದ ಆಯಾ ವಸ್ತುಗಳಲ್ಲಿ ತಮಗೆ ಜ್ಞಾನವಾದದ್ದನ್ನು ಕಂಡುಕೊಂಡು, ಶಬ್ದಾರ್ಥಗಳಿಗೆ ಮತ್ತೆ ಬೇರೊಂದು ಸಂಬಂಧವನ್ನು ಕಾಣದ್ದರಿಂದಲೂ (ಈ ಸಂಬಂಧವನ್ನು) ಸಂಕೇತಮಾಡಿರುವ ಪುರುಷನನ್ನು ಕಾಣದೆ ಇರುವದರಿಂದಲೂ[1] ಆ ಅರ್ಥಗಳಲ್ಲಿ ಆಯಾ ಶಬ್ದಗಳನ್ನು ಪ್ರಯೋಗಿಸುವದು (ಅವು ಆ ಅರ್ಥಗಳನ್ನು) ಬೋಧಿಸುತ್ತವೆ ಎಂಬ ಕಾರಣದಿಂದ ಎಂದು ನಿಶ್ಚಯಿಸಿಕೊಳ್ಳುತ್ತಾರೆ. ಮತ್ತೂ (ತಾವು) ಅರಿತುಕೊಂಡ ಶಬ್ದಗಳಿಗಿಂತ ಬೇರೆಯವಾದ ಶಬ್ದಗಳಲ್ಲಿ 'ಈ ಶಬ್ದಕ್ಕೆ ಇದು ಅರ್ಥವು' ಎಂದು ಹಿಂದಿನ ದೊಡ್ಡವರು ತಿಳಿಸಿಕೊಟ್ಟರೆ ಎಲ್ಲಾ ಶಬ್ದಗಳಿಗೂ ಅರ್ಥವನ್ನು ಅರಿತುಕೊಂಡು ಮತ್ತೊಬ್ಬರಿಗೆ ತಿಳಿಯಿಸಿಕೊಡುವದಕ್ಕೆ ಆಯಾ ಅರ್ಥವನ್ನು ತಿಳಿಯಿಸಿಕೊಡುವ ವಾಕ್ಯಜಾತವನ್ನು ಪ್ರಯೋಗಿಸುವರು.

---

1. 'ಈ ಶಬ್ದವು ಈ ಅರ್ಥವನ್ನು ಹೇಳಲಿ' ಎಂದು ಈಶ್ವರನ ಸಂಕೇತದಿಂದ ಆಯಾ ಶಬ್ದಕ್ಕೆ ಆಯಾ ಅರ್ಥವೆಂದು ಗೊತ್ತಾಗಿದೆ ಎಂಬ ನೈಯಾಯಿಕರ ಮತದ ನಿರಾಕರಣೆಯಿದು.

ಇನ್ನೊಂದು ಪ್ರಕಾರದಿಂದಲೂ ಶಬ್ದಾರ್ಥಗಳ ಸಂಬಂಧವನ್ನು ನಿಶ್ಚಯಿಸು ವದು ಆಗಬಹುದಾಗಿರುತ್ತದೆ. (ಹೇಗೆಂದರೆ): ಒಬ್ಬ ಮನುಷ್ಯನು ಕೈಯ ಅಭಿನಯವೇ ಮುಂತಾದದ್ದರಿಂದ 'ನಿಮ್ಮಪ್ಪನು ಸುಖವಾಗಿರುತ್ತಾನೆ' ಎಂದು ದೇವದತ್ತನಿಗೆ ತಿಳಿಯಿಸು'– ಎಂದು (ತನ್ನನ್ನು) ಕಳುಹಿಸಿಕೊಟ್ಟರೆ, ಯಾವನೋ ಒಬ್ಬನು ಅವನಿಗೆ ಅದನ್ನು ತಿಳಿಯಪಡಿಸುವದಕ್ಕಾಗಿ ಹೊರಟು 'ನಿಮ್ಮ ತಂದೆಯು ಸುಖವಾಗಿರುತ್ತಾನೆ' ಎಂಬ ಶಬ್ದಗಳನ್ನು ಪ್ರಯೋಗಿಸುತ್ತಾನೆ. ಪಕ್ಕದಲ್ಲಿರುವ ಮತ್ತೊಬ್ಬನು (ಶಬ್ದಾರ್ಥಗಳ ಸಂಬಂಧವನ್ನು) ಅರಿತುಕೊಳ್ಳಲು ಇಚ್ಛಿಸುತ್ತಿದ್ದು ಮೂಕನಂತೆ ಅಂಥಾ ವ್ಯಾಪಾರವನ್ನು ಅರಿತುಕೊಂಡು ಅವನಿಗೆ ತಿಳಿಯಿಸುವವಕ್ಕೆ ಇವನು ಹೊರಟಿರುತ್ತಾನೆ ಎಂದರಿತು ಅವನನ್ನು ಹಿಂಬಾಲಿಸಿ, ಅವನು ತಿಳಿಯಿಸು ವದಕ್ಕೆ ಪ್ರಯೋಗಿಸಿದ ಈ ಶಬ್ದವನ್ನು ಕೇಳಿ 'ಈ ಶಬ್ದವು ಆ ಅರ್ಥವನ್ನು ತಿಳಿಯು ವದಕ್ಕೆ ಕಾರಣ' ಎಂದು ನಿಶ್ಚಯಿಸಿಕೊಳ್ಳುತ್ತಾನೆ.[1] ಹೀಗಿರುವದರಿಂದ ಕಾರ್ಯಾರ್ಥದಲ್ಲಿಯೇ ವ್ಯುತ್ಪತ್ತಿಯಾಗುತ್ತದೆ ಎಂದು ನಿರ್ಬಂಧಿಸಿ ಹೇಳುವದಕ್ಕೆ ಯಾವ ಕಾರಣವೂ ಇರುವದಿಲ್ಲ. ಆದ್ದರಿಂದ[2] ವೇದಾಂತಗಳು ಪರಿನಿಷ್ಪನ್ನವಾದ ಪರಬ್ರಹ್ಮವನ್ನೂ ಅದರ ಉಪಾಸನೆಯು[3] ಅಪರಿಮಿತಫಲವುಳ್ಳದೆಂಬುದನ್ನೂ ತಿಳಿಸಿ ಕೊಡುತ್ತವೆ; ಆದ್ದರಿಂದ ಅದನ್ನು ನಿರ್ಣಯಿಸುವದೆಂಬ ಪ್ರಯೋಜನವುಳ್ಳ ಬ್ರಹ್ಮವಿಚಾರವನ್ನು ಮಾಡಬೇಕು.

(ಮೂಲ)

ಕಾರ್ಯಾರ್ಥತ್ವೇಽಪಿ ವೇದಸ್ಯ ಬ್ರಹ್ಮವಿಚಾರಃ ಕರ್ತವ್ಯ ಏವ। ಕಥಮ್? 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ' (ಬೃ. ೨–೪–೫), 'ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ' (ಛಾಂ. ೮–೭–೧), 'ವಿಜ್ಞಾಯ ಪ್ರಜ್ಞಾಂ ಕುರ್ವೀತ' (ಬೃ. ೪–೪–೨೧), 'ದಹರೋಽಸ್ಮಿನ್ನನ್ತ ರಾಕಾಶಸ್ತಸ್ಮಿನ್ಯದನ್ತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಮ್' (ಛಾಂ. ೮–೧–೧), 'ತತ್ರಾಪಿ ದಹ್ರಂ ಗಗನಂ ವಿಶೋಕಸ್ತಸ್ಮಿನ್ ಯದನ್ತಸ್ತದುಪಾಸಿ ತವ್ಯಮ್' (ತೈ. ನಾ. ೧೦) ಇತ್ಯಾದಿಭಿಃ ಪ್ರತಿಪನ್ನೋಪಾಸನವಿಷಯಕಾರ್ಯಾಧಿ

1. ಮೊದಲನೆಯವನು ಕೈಸನ್ನೆಯಿಂದ ಹೇಳಿದ್ದನ್ನೇ ಎರಡನೆಯವನು ಮಾತಿನಿಂದ ತಿಳಿಸುತ್ತಾನೆ; ಅದನ್ನು ಈ ಅಭಿಪ್ರಾಯದಿಂದ ಈ ಶಬ್ದವನ್ನು ಪ್ರಯೋಗಿಸಿದವನು– ಎಂದು ಮೂರನೆಯವನು ನಿಶ್ಚಯಿಸುತ್ತಾನೆ.

2. ಕಾರ್ಯಾರ್ಥವನ್ನು ಬಯಸದೆಯೇ ಶಬ್ದಗಳು ತಮ್ಮರ್ಥವನ್ನು ತಿಳಿಸಬಹು ದಾದ್ದರಿಂದ.

3. ಉಪಾಸನೆ ಎಂಬ ಕ್ರಿಯೆಯನ್ನು ವಿಧಿಸಿ ಉಪಾಸ್ಯವಾದ ನಿತ್ಯಸಿದ್ಧಬ್ರಹ್ಮವನ್ನು ತಿಳಿಸಿಕೊಟ್ಟು, ಉಪಾಸನೆ, ಅನಂತಸ್ಥಿರಫಲವನ್ನು ಕೊಡುತ್ತದೆ– ಎಂದೂ ಹೇಳುತ್ತವೆ– ಎಂಬುದೇ ಸಿದ್ಧಾಂತ. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ಕೃತಫಲತ್ವೇನ 'ಬ್ರಹ್ಮವಿದಾಪ್ನೋತಿ ಪರಮ್' (ತೈ. ೨-೧) ಇತ್ಯಾದಿಭಿಃ ಬ್ರಹ್ಮಪ್ರಾಪ್ತಿಃ ಶ್ರೂಯತ ಇತಿ ಬ್ರಹ್ಮಸ್ವರೂಪತದ್ವಿಶೇಷಣಾನಾಂ ದುಃಖಾಸಮ್ಭಿನ್ನದೇಶವಿಶೇಷರೂಪಸ್ವರ್ಗಾದಿವತ್, ರಾತ್ರಿಸತ್ರಪ್ರತಿಷ್ಠಾತ್ ಅಪಗೋರಣಶತಯಾತನಾಸಾಧ್ಯಸಾಧನಭಾವವಚ್ಚ ಕಾರ್ಯೋಪಯೋಗಿತಯೈವ ಸಿದ್ಧೇಃ ॥

(ಅರ್ಥ)

ವೇದವು ಕಾರ್ಯಾರ್ಥ(ವೆಂದಿಟ್ಟುಕೊಂಡ)ರೂ ಬ್ರಹ್ಮವಿಚಾರವು ಮಾಡತಕ್ಕದ್ದೇ (ಆಗುತ್ತದೆ). (ಅದು) ಹೇಗೆಂದರೆ, 'ಎಲೆ, ಆತ್ಮನನ್ನೇ ದರ್ಶನಮಾಡಿಕೊಳ್ಳತಕ್ಕದ್ದು, ಶ್ರವಣಮಾಡತಕ್ಕದ್ದು, ಮನನಮಾಡತಕ್ಕದ್ದು, ನಿದಿಧ್ಯಾಸನಮಾಡತಕ್ಕದ್ದು' (ಬೃ. ೨-೪-೫), 'ಆತನನ್ನೇ ಅನ್ವೇಷಣಮಾಡತಕ್ಕದ್ದು, ಆತನನ್ನೇ ಅರಿತುಕೊಳ್ಳತಕ್ಕದ್ದು' (ಛಾಂ. ೮-೭-೧), 'ಅರಿತುಕೊಂಡು ಪ್ರಜ್ಞೆಯನ್ನು ಮಾಡಿಕೊಳ್ಳಬೇಕು' (ಬೃ. ೪-೪-೨೧), 'ಈ (ಹೃದಯದಲ್ಲಿ) ಒಳಗೆ ಆಕಾಶವಿದೆಯಲ್ಲ, ಅದರಲ್ಲಿರತಕ್ಕದ್ದನ್ನು ಅನ್ವೇಷಣೆಮಾಡತಕ್ಕದ್ದು, ಅದನ್ನೇ ಅರಿತುಕೊಳ್ಳತಕ್ಕದ್ದು' (ಛಾಂ. ೮-೧-೧), 'ಅದರಲ್ಲಿಯೂ ಅಲ್ಪವಾದ ವಿಶೋಕವಾದ ಆಕಾಶವಿದೆಯಲ್ಲ, ಅದರಲ್ಲಿ ಏನಿದೆಯೋ ಅದನ್ನು ಉಪಾಸನೆಮಾಡಬೇಕು' (ತೈ.ನಾ. ೧೦) ಮುಂತಾದ (ವಾಕ್ಯ)ಗಳಿಂದ ತಿಳಿದುಬರುವ ಉಪಾಸನಾವಿಷಯವಾದ ಕಾರ್ಯಾಧಿಕಾರಿಯಾದವನಿಗೆ ಫಲವಾಗಿ[1] 'ಬ್ರಹ್ಮವನ್ನರಿತವನು ಪರಮಪುರುಷಾರ್ಥವನ್ನು ಪಡೆಯುತ್ತಾನೆ' (ತೈ. ೨-೧) ಮುಂತಾದವುಗಳಿಂದ ಬ್ರಹ್ಮಪ್ರಾಪ್ತಿಯು ಶ್ರುತವಾಗಿರುತ್ತದೆಯಾದ್ದರಿಂದ ಬ್ರಹ್ಮಸ್ವರೂಪವೂ ಅದರ ವಿಶೇಷಣಗಳೂ ದುಃಖಮಿಶ್ರವಲ್ಲದ ದೇಶವಿಶೇಷರೂಪದ ಸ್ವರ್ಗಾದಿಗಳಂತೆಯೂ[2] ರಾತ್ರಿಸತ್ರದ ಪ್ರತಿಷ್ಠಾದಿಗಳಂತೆಯೂ[3]

---

1. ಹಿಂದೆ ಹೇಳಿರುವ ವಾಕ್ಯಗಳಲ್ಲಿ ಉಪಾಸನೆಯು ಕಾರ್ಯ(ಮಾಡತಕ್ಕದ್ದು) ಎಂದು ಹೇಳಿದೆ, ಅವಕ್ಕೆ ಫಲವನ್ನು ಅಲ್ಲಿ ಹೇಳದಿದ್ದರೂ ಬೇರೆಯ ಶ್ರುತಿಗಳಲ್ಲಿ ಹೇಳಿದೆ.

2. 'ಸ್ವರ್ಗಕಾಮನು ಯಾಗವನ್ನು ಮಾಡಬೇಕು' ಎಂಬಲ್ಲ ಯಾಗಾದಿಗಳು ಕಾರ್ಯಕ್ಕೆ ವಿಷಯ ; ಅವುಗಳಿಂದ ಕಾರ್ಯವನ್ನು ಮಾಡುವ ಅಧಿಕಾರಿಗೆ ಸ್ವರ್ಗವೆಂಬ ಫಲವಾಗುತ್ತದೆ. ಹೀಗೆ ಸ್ವರ್ಗಾದಿಗಳು ವಿಶೇಷಣವಾಗಿರುತ್ತವೆ.

3. ರಾತ್ರಿಸತ್ರಗಳೆಂಬವು ಕೆಲವು ಸೋಮಯಾಗಗಳು. 'ಯಾರು ಈ ರಾತ್ರಿಗಳನ್ನು ಮಾಡುತ್ತಾರೋ ಅವರು ಪ್ರತಿಷ್ಠಿತರಾಗುವರು' ಎಂಬ ಅರ್ಥವಾದದಲ್ಲಿ ಪ್ರತಿಷ್ಠೆಯೆಂಬ ಫಲವನ್ನು ಹೇಳಿದೆ. ಅದು ಅಧಿಕಾರಿಗೆ ವಿಶೇಷಣವೆಂದು ಜೈ. ಸೂ. ೪-೩-೧೮ರಲ್ಲಿ ನಿರ್ಣಯಿಸಿದೆ.

ಅಪಗೋರಣಶತಯಾತನೆಗಳಿಗಿರುವ ಸಾಧ್ಯಸಾಧನಭಾವದಂತೆಯೂ[1] ಕಾರ್ಯಕ್ಕೆ ಉಪಯೋಗಿಗಳಾಗಿಯೇ ಸಿದ್ಧವಾಗುತ್ತವೆ.

## ಲೌಕಿಕವಾಕ್ಯಗಳಲ್ಲಿ ಕಾರ್ಯಾರ್ಥವ್ಯುತ್ಪತ್ತಿಯಿಲ್ಲ

(ಮೂಲ)

'ಗಾಮಾನಯ' ಇತ್ಯಾದಿಷ್ವಪಿ ವಾಕ್ಯೇಷು ನ ಕಾರ್ಯಾರ್ಥೇ ವ್ಯುತ್ಪತ್ತಿಃ; ಭವದಭಿಮತಕಾರ್ಯಸ್ಯ ದುರ್ನಿರೂಪತ್ವಾತ್ । ಕೃತಿಭಾವಭಾವಿಕೃತ್ಯುದ್ದೇಶ್ಯಂ ಹಿ ಭವತಃ ಕಾರ್ಯಮ್ । ಕೃತ್ಯುದ್ದೇಶ್ಯತ್ವಂ ಚ ಕೃತಿಕರ್ಮತ್ವಮ್ । ಕೃತಿ ಕರ್ಮತ್ವಂ ಚ ಕೃತ್ಯಾ ಪ್ರಾಪ್ತುಮಿಷ್ಟತಮತ್ವಮ್ । ಇಷ್ಟತಮಂ ಚ ಸುಖಮ್, ವರ್ತಮಾನದುಃಖಸ್ಯ ತನ್ನಿವೃತ್ತಿರ್ವಾ । ತತ್ರ ಇಷ್ಟಸುಖಾದಿನಾ ಪುರುಷೇಣ ಸ್ವಪ್ರಯತ್ನಾದೃತೇ ಯದಿ ತದಸಿದ್ಧಿಃ ಪ್ರತೀತಾ, ತತಃ ಪ್ರಯತ್ನೇಚ್ಛುಃ ಪ್ರವರ್ತತೇ ಪುರುಷ ಇತಿ ನ ಕ್ವಚಿದಪಿ ಇಚ್ಛಾವಿಷಯಸ್ಯ ಕೃತ್ಯಧೀನಸಿದ್ಧಿತ್ವಮನ್ತರೇಣ ಕೃತ್ಯುದ್ದೇಶ್ಯತ್ವಂ ನಾಮ ಕಿಞ್ಚಿದಪ್ಯುಪಲಭ್ಯತೇ । ಇಚ್ಛಾವಿಷಯಸ್ಯ ಪ್ರೇರಕತ್ವಂ ಚ ಪ್ರಯತ್ನಾಧೀನಸಿದ್ಧಿತ್ವಮೇವ ; ತತ ಏವ ಪ್ರವೃತ್ತೇಃ ॥

(ಅರ್ಥ)

'ಎತ್ತನ್ನು ಹೊಡೆದುಕೊಂಡುಬಾ' ಮುಂತಾದ (ಲೌಕಿಕ)ವಾಕ್ಯಗಳಲ್ಲಿಯೂ (ಶಬ್ದಕ್ಕೆ) ಕಾರ್ಯಾರ್ಥದಲ್ಲಿ ವ್ಯುತ್ಪತ್ತಿಯಿರುವದಿಲ್ಲ. ಏಕೆಂದರೆ ನಿನಗೆ ಒಪ್ಪಾಗಿರುವ ಕಾರ್ಯವೆಂಬುದು ಇಂಥದ್ದೆಂದು ಗೊತ್ತುಪಡಿಸುವದಕ್ಕೆ ಬರುವಂತೆಇಲ್ಲ. (ಹೇಗೆಂದರೆ) ಕೃತಿಯುಂಟಾದರೆ ಆಗುವ ಕೃತ್ಯುದ್ದೇಶ್ಯವೇ ಅಲ್ಲವೆ, ನಿನ್ನ (ಪಕ್ಷದಲ್ಲಿ) ಕಾರ್ಯವೆಂಬುದು ? **ಕೃತ್ಯುದ್ದೇಶ್ಯ**ವೆಂದರೆ ಕೃತಿಯ ಕರ್ಮವಾಗಿರುವದು ; ಕೃತಿಯ ಕರ್ಮವಾಗಿರುವದು ಎಂದರೆ ಕೃತಿಯಿಂದ ಪಡೆಯುವ ಇಷ್ಟತಮವಾಗಿರತಕ್ಕದ್ದು. ಇಷ್ಟತಮವಾದದ್ದು ಎಂದರೆ ಸುಖವು, ಅಥವಾ ಈಗಿರುವ ದುಃಖದ ನಿವೃತ್ತಿ. ಇಲ್ಲಿ ಇಷ್ಟಸುಖಾದಿಗಳು ಪುರುಷನಿಗೆ ತನ್ನ ಪ್ರಯತ್ನವಿಲ್ಲದೆ ಸಿದ್ಧಿಸಲಾರದೆಂದು ತಿಳಿಯಬಂದರೆ, ಆ ಪ್ರಯತ್ನಮಾಡಲೆಳಸುವ ಪುರುಷನು ಕಾರ್ಯದಲ್ಲಿ ತೊಡಗುತ್ತಾನಾದ್ದರಿಂದ **ಇಚ್ಛೆಗೆ ವಿಷಯವಾದದ್ದು ಕೃತಿಗೆ**

---

1. ಬ್ರಾಹ್ಮಣನನ್ನು ಧಿಕ್ಕರಿಸಿದರೆ ಶತಯಾತನೆ ಎಂಬ ಫಲವೆಂಬುದನ್ನು ಅರ್ಥವಾದ ಬಲದಿಂದ ಒಪ್ಪಿದೆ. ಈವರೆಗೆ ಹೇಳಿದ ಮೂರು ಉದಾಹರಣೆಗಳಲ್ಲಿಯೂ ಫಲವನ್ನು ಹೇಳಿದೆಇದ್ದರೂ 'ಬ್ರಹ್ಮವಿದನಿಗೆ ಪರಪ್ರಾಪ್ತಿ' ಎಂಬ ವಾಕ್ಯದಿಂದ ಅಧಿಕಾರಿಗೆ ಫಲರೂಪವಾದ ವಿಶೇಷಣವನ್ನು ಕಲ್ಪಿಸಬಹುದು– ಎಂದು ಅಭಿಪ್ರಾಯ. ವೇದಾರ್ಥಸಂಗ್ರಹದಲ್ಲಿ (೭೫ರಿಂದ ೮೦ರವರೆಗಿನ ಪ್ರಘಟ್ಟಗಳಲ್ಲಿ) ಇಲ್ಲಿರುವ ಕಾರ್ಯವಾದವಿಮರ್ಶೆಯನ್ನು ವಿವರಿಸಿರುವ ಬಗೆಯನ್ನು ನೋಡಿರಿ.

**ಅಧೀನವಾದ ಸಿದ್ಧಿಯುಳ್ಳದ್ದಾಗಿರುವದನ್ನು ಬಿಟ್ಟರೆ ಕೃತ್ಯುದ್ದೇಶ್ಯತ್ವ ವೆಂಬ (ಮತ್ತೆ) ಯಾವದೂ ಕಾಣುವದಿಲ್ಲ.** ಇಚ್ಛಾವಿಷಯವು ಪ್ರೇರಕ ನಾಗಿರುವದೆಂದರೆ ಪ್ರಯತ್ನಕ್ಕೆ ಅಧೀನವಾಗಿ ಸಿದ್ಧಿಯಾಗುವದೇ, ಏಕೆಂದರೆ ಅದ್ದ ರಿಂದಲೇ (ಕಾರ್ಯದಲ್ಲಿ) ಪ್ರವೃತ್ತಿಯುಂಟಾಗುವದು.[1]

(ಮೂಲ)

ನ ಚ ಪುರುಷಾನುಕೂಲತ್ವಂ ಕೃತ್ಯುದ್ದೇಶ್ಯತ್ವಮ್ । ಯತಃ ಸುಖಮೇವ ಪುರುಷಾನುಕೂಲಮ್ । ನ ಚ ದುಃಖನಿವೃತ್ತೇಃ ಪುರುಷಾನುಕೂಲತ್ವಮ್ ; 'ಪುರುಷಾನುಕೂಲಂ ಸುಖಂ, ತತ್ಪ್ರತಿಕೂಲಂ ದುಃಖಮ್' ಇತಿ ಹಿ ಸುಖದುಃಖ ಯೋಃ ಸ್ವರೂಪವಿವೇಕಃ । ದುಃಖಸ್ಯ ಪ್ರತಿಕೂಲತಯಾ ತನ್ನಿವೃತ್ತಿರಿಷ್ಟಾ ಭವತಿ, ನಾನುಕೂಲತಯಾ । ಅನುಕೂಲಪ್ರತಿಕೂಲಾನ್ವಯವಿರಹೇ ಸ್ವರೂಪೇಣಾವ ಸ್ಥಿತಿರ್ಹಿ ದುಃಖನಿವೃತ್ತಿಃ । ಅತಃ ಸುಖವ್ಯತಿರಿಕ್ತಸ್ಯ ಕ್ರಿಯಾದೇರನುಕೂಲತ್ವಂ ನ ಸಂಭವತಿ । ನ ಸುಖಾರ್ಥತಯಾ ತಸ್ಯಾಪ್ಯನುಕೂಲತ್ವಮ್, ದುಃಖಾತ್ಮಕತ್ವಾ ತ್ತಸ್ಯ । ಸುಖಾರ್ಥತಯಾಪಿ ತದುಪಾದಾನೇಚ್ಛಾಮಾತ್ರಮೇವ ಭವತಿ ॥

ನ ಚ ಕೃತಿಂ ಪ್ರತಿ ಶೇಷಿತ್ವಂ ಕೃತ್ಯುದ್ದೇಶ್ಯತ್ವಮ್, ಭವತ್ಪಕ್ಷೇ ಶೇಷಿತ್ವಸ್ಯ ಅನಿರೂಪಣಾತ್ । ನ ಚ ಪರೋದ್ದೇಶಪ್ರವೃತ್ತಕೃತಿವ್ಯಾಪ್ತ್ಯರ್ಹತ್ವಂ ಶೇಷತ್ವಂ ಇತಿ ತತ್ಪ್ರತಿಸಂಬನ್ಧೀ ಶೇಷೀ ಇತ್ಯವಗಮ್ಯತೇ ; ತಥಾ ಸತಿ ಕೃತೇರಶೇಷತ್ವೇನ ತಾಂ ಪ್ರತಿ ತತ್ಸಾಧ್ಯಸ್ಯ ಶೇಷಿತ್ವಾಭಾವಾತ್ । ನ ಚ ಪರೋದ್ದೇಶಪ್ರವೃತ್ತ್ಯರ್ಹ ತಾಯಾಃ ಶೇಷತ್ವೇನ ಪರಃ ಶೇಷೀ ; ಉದ್ದೇಶ್ಯತ್ವಸ್ಯೈವ ನಿರೂಪ್ಯಮಾಣತ್ವಾತ್ । ಪ್ರಧಾನಸ್ಯಾಪಿ ಭೃತ್ಯೋದ್ದೇಶಪ್ರವೃತ್ತ್ಯರ್ಹತ್ವದರ್ಶನಾಚ್ಚ । ಪ್ರಧಾನಸ್ತು ಭೃತ್ಯ ಪೋಷಣೇಽಪಿ ಸ್ವೋದ್ದೇಶೇನ ಪ್ರವರ್ತತ ಇತಿ ಚೇತ್, ನ ; ಭೃತ್ಯೋಽಪಿ ಹಿ ಪ್ರಧಾನಪೋಷಣೇ ಸ್ವೋದ್ದೇಶೇನೈವ ಪ್ರವರ್ತತೇ । ಕಾರ್ಯಸ್ವರೂಪಸ್ಯೈವಾ ನಿರೂಪಣಾತ್ 'ಕಾರ್ಯಪ್ರತಿಸಂಬನ್ಧೀ ಶೇಷಃ । ತತ್ಪ್ರತಿಸಂಬನ್ಧೀ ಶೇಷೀ' ಇತ್ಯಪ್ಯಸಙ್ಗತಮ್ ॥

ನಾಪಿ ಕೃತಿಪ್ರಯೋಜನತ್ವಂ ಕೃತ್ಯುದ್ದೇಶ್ಯತ್ವಮ್ । ಪುರುಷಸ್ಯ ಕೃತ್ಯಾರಮ್ಭ ಪ್ರಯೋಜನಮೇವ ಹಿ ಕೃತಿಪ್ರಯೋಜನಮ್ । ಸ ಚೇಚ್ಛಾವಿಷಯಃ । ತಸ್ಮಾತ್, ಇಷ್ಟತ್ವವ್ಯತಿರೇಕಿಕೃತ್ಯುದ್ದೇಶ್ಯತ್ವಾನಿರೂಪಣಾತ್ ಕೃತಿಸಾಧ್ಯತಾಕೃತಿಪ್ರಧಾನತ್ವ ರೂಪಂ ಕಾರ್ಯಂ ದುರ್ನಿರೂಪಮೇವ ॥

---

1. 'ಕೃತಿಭಾವಭಾವಿಕೃತ್ಯುದ್ದೇಶ್ಯಮ್ ಕಾರ್ಯಮ್' ಪ್ರಯತ್ನದಿಂದ ಆಗುವದಾಗಿ ಪ್ರಯತ್ನಕ್ಕೆ ಉದ್ದೇಶ್ಯವಾಗಿರುವದೇ ಕಾರ್ಯ ಎಂಬುದು ಪ್ರಾಭಾಕರನು ಹೇಳುವ ಕಾರ್ಯದ ಲಕ್ಷಣ. ಕೃತ್ಯುದ್ದೇಶ್ಯ ಎಂಬುದು ಯಾವದು ಎಂಬುದನ್ನು ಇಲ್ಲಿ ಪರೀಕ್ಷೆಮಾಡುವದಕ್ಕೆ ಹೊರಟಿದೆ. ನಾನು ಪ್ರಯತ್ನಿಸಿದರೇ ಇದು ಸಿಕ್ಕುವದು ಎಂದು ತಿಳಿದರೇ ಮನುಷ್ಯನು ಪ್ರವರ್ತಿಸುತ್ತಾನೆ. ಆದ್ದರಿಂದ ಇದೇ ಕೃತ್ಯುದ್ದೇಶ್ಯತ್ವದ ಸ್ವರೂಪ ಎಂದು ಭಾವ.

(ಅರ್ಥ)

(೧) **ಪುರುಷನಿಗೆ ಅನುಕೂಲವಾಗಿರುವದೇ ಕೃತ್ಯುದ್ದೇಶ್ಯವು**[1] (ಎನ್ನುವ)ಹಾಗಿಲ್ಲ. ಏಕೆಂದರೆ ಪುರುಷನಿಗೆ ಅನುಕೂಲವಾದದ್ದು ಸುಖವೇ. ದುಃಖನಿವೃತ್ತಿಯೇನೂ ಪುರುಷಾನುಕೂಲವಲ್ಲ. 'ಪುರುಷನಿಗೆ ಅನುಕೂಲವಾದದ್ದು ಸುಖ, ಅವನಿಗೆ ಪ್ರತಿಕೂಲವಾದದ್ದು ದುಃಖ' ಎಂಬಲ್ಲವೆ, ಸುಖದುಃಖಗಳ ಸ್ವರೂಪವನ್ನು ವಿವೇಚಿಸಬೇಕು? ದುಃಖವು ಪ್ರತಿಕೂಲವಾಗಿರುವದರಿಂದ ಅದರ ನಿವೃತ್ತಿಯು ಇಷ್ಟವಾಗಿರುತ್ತದೆಯೇ ಹೊರತು (ನಿವೃತ್ತಿಯು) ಅನುಕೂಲವಾಗಿರುವದರಿಂದಲ್ಲ. ಅನುಕೂಲವಾದದ್ದು, ಪ್ರತಿಕೂಲವಾದದ್ದು- (ಈ ಎರಡೂ) ಇಲ್ಲದಿದ್ದರೆ ಸ್ವರೂಪದಲ್ಲಿ ನಿಲ್ಲುವದೇ ಅಲ್ಲವೆ, ದುಃಖನಿವೃತ್ತಿ[2]? ಆದ್ದರಿಂದ ಸುಖಕ್ಕಿಂತ ವ್ಯತಿರಿಕ್ತವಾದ ಕ್ರಿಯಾದಿಗಳು ಅನುಕೂಲವೆಂಬುದು ಆಗಲಾರದಮಾತು. ಸುಖಕ್ಕಾಗಿ ಕ್ರಿಯೆಯೇ ಮುಂತಾದದ್ದನ್ನು ಮಾಡುವದರಿಂದ ಅದೂ ಅನುಕೂಲವೇ (ಎನ್ನುವಂ)ತಿಲ್ಲ, ಏಕೆಂದರೆ ಅದು ದುಃಖರೂಪವಾಗಿರುತ್ತದೆ. ಸುಖಕ್ಕಾಗಿಕೂಡ ಅದನ್ನು ಸ್ವೀಕರಿಸಬೇಕೆಂಬ ಇಚ್ಛೆಯು ಮಾತ್ರವೇ ಆಗುತ್ತದೆ.[3]

(೨) **ಕೃತಿಗೆ ಶೇಷಿಯಾಗಿರುವದೇ ಕೃತ್ಯುದ್ದೇಶ್ಯವು** ಎನ್ನುವದಕ್ಕೂ ಇಲ್ಲ; ಏಕೆಂದರೆ ನಿನ್ನ ಪಕ್ಷದಲ್ಲಿ **ಶೇಷಿತ್ವ**ವೆಂದರೇನೆಂಬುದನ್ನು ಗೊತ್ತುಪಡಿಸುವದಕ್ಕಾಗುವದಿಲ್ಲ. (a) ಮತ್ತೊಂದು ಉದ್ದೇಶದಿಂದ ಪ್ರವೃತ್ತವಾಗಿರುವ ಕೃತಿಯ ವ್ಯಾಪ್ತಿಗೆ ತಕ್ಕದ್ದಾಗಿರುವದೇ **ಶೇಷವು**; ಆದ್ದರಿಂದ ಆ (ಶೇಷಕ್ಕೆ) ಪ್ರತಿಸಂಬಂಧಿಯೇ **ಶೇಷಿ** ಎಂದು ನಿಶ್ಚಯಿಸಬಹುದಲ್ಲ!–ಎಂಬುದೂ ಸರಿಯಲ್ಲ.[4] ಏಕೆಂದರೆ ಹಾಗಿದ್ದರೆ ಕೃತಿಯು ಶೇಷವಲ್ಲವಾದ್ದರಿಂದ ಅದಕ್ಕೆ ಆದರಿಂದ ಸಾಧ್ಯವಾದದ್ದು 'ಶೇಷಿ'ಯಾಗುವದಿಲ್ಲ. (b) ಮತ್ತೊಂದು ಉದ್ದೇಶವುಳ್ಳ ಪ್ರವೃತ್ತಿಗೆ ತಕ್ಕದ್ದಾಗಿರುವದೇ **ಶೇಷ**ವಾಗಿರುವದರಿಂದ (ಆ) ಮತ್ತೊಂದೇ ಶೇಷಿಯು– ಎನ್ನುವದಕ್ಕೆ ಬರುವದಿಲ್ಲ; ಏಕೆಂದರೆ ಉದ್ದೇಶ್ಯವೆಂದರೇನೆಂಬುದನ್ನೇ ಇಲ್ಲಿ

1. 'ಕೃತ್ಯುದ್ದೇಶ್ಯವಾಗಿರುವದೇ ಕಾರ್ಯ' ಎಂಬ ಲಕ್ಷಣವು ಸಿದ್ಧವಾಗುವದಕ್ಕೆ ಕೃತ್ಯುದ್ದೇಶ್ಯವೆಂದರೇನೆಂಬುದನ್ನು ನಿರ್ಣಯಿಸಬೇಕಾಗುತ್ತದೆ. ಅದನ್ನು ನಿರ್ಧಾರಮಾಡುವದೇ ಆಗುವಂತಿಲ್ಲ– ಎಂದು ಈಗ ಹೇಳುತ್ತಿದಾರೆ.

2. ಅನುಕೂಲಸಂಯೋಗ, ಪ್ರತಿಕೂಲಸಂಯೋಗ, ಸ್ವರೂಪದಲ್ಲಿ ನಿಲ್ಲುವದು– ಎಂಬ ಮೂರು ಅವಸ್ಥೆಗಳು ಪುರುಷನಿಗೆ ಪ್ರಕೃತಿಸಂಬಂಧದಿಂದ ಆಗುತ್ತಿರುವವು. ದುಃಖನಿವೃತ್ತಿಯಿಂದ ಸ್ವರೂಪಾವಸ್ಥಿತಿಯಾಗುವದರಿಂದ ದುಃಖನಿವೃತ್ತಿಯೂ ಅನುಕೂಲವೆಂಬ ಭ್ರಾಂತಿಯಾಗುತ್ತಿರುವದು. ವೇದಾರ್ಥಸಂಗ್ರಹ (೭೮)ನ್ನು ನೋಡಿ.

3. ಬರಿಯ ದುಃಖನಿವೃತ್ತಿಗಾಗಿ ಅಲ್ಲ.

4. ಈ ವಾಕ್ಯದ ಅಭಿಪ್ರಾಯವು ಅಷ್ಟು ಸ್ಪಷ್ಟವಾಗಿಲ್ಲ.

ಗೊತ್ತುಪಡಿಸಬೇಕಾಗಿರುತ್ತದೆ.[1] ಪ್ರಧಾನನಾದವ(ಒಡೆಯ)ನೂ ಆಳಿನ ಉದ್ದೇಶದಿಂದ ಮಾಡಿದ ಪ್ರವೃತ್ತಿಗೆ ಅರ್ಹನಾಗಿರುತ್ತಾನೆಂದು ಕಂಡುಬರುತ್ತದೆ.

(ಶಂಕೆ) :– ಪ್ರಧಾನನಾದವನು ಆಳಿನ ಪೋಷಣೆಗೆ (ಹೊರಡುವಾಗಲೂ) ತನ್ನ ಉದ್ದೇಶದಿಂದಲೇ ಹೊರಡುತ್ತಾನಲ್ಲವೆ ?

(ಸಮಾಧಾನ) :– ಹಾಗಲ್ಲ. ಏಕೆಂದರೆ ಆಳುಕೂಡ ಪ್ರಧಾನನಾದವನ ಪೋಷಣೆಗೆ ತನ್ನ ಉದ್ದೇಶದಿಂದಲೇ ಪ್ರವರ್ತಿಸುತ್ತಾನೆ. (c) ಕಾರ್ಯದ ಸ್ವರೂಪವೇ ಇನ್ನೂ ನಿರ್ಣಯವಾಗಿಲ್ಲವಾದ್ದರಿಂದ 'ಕಾರ್ಯಕ್ಕೆ ಪ್ರತಿಸಂಬಂಧಿಯಾದವನು ಶೇಷ ; ಅವನಿಗೆ ಪ್ರತಿಸಂಬಂಧಿಯಾದದ್ದು ಶೇಷಿ' ಎಂಬುದೂ ಹೊಂದುಗಡೆಯಾಗುವದಿಲ್ಲ.[2]

(ಇ) **'ಕೃತಿಗೆ ಪ್ರಯೋಜನವಾಗಿರುವದೇ ಕೃತಿಯ ಉದ್ದೇಶವು'** ಎನ್ನುವದೂ ಸರಿಯಾಗುವದಿಲ್ಲ. ಪುರುಷನಿಗೆ ಕೃತಿಯನ್ನು ಮಾಡುವದರ ಪ್ರಯೋಜನವೇ ಅಲ್ಲವೆ, ಕೃತಿಪ್ರಯೋಜನವೆಂಬುದು ? ಆ (ಕೃತ್ಯಾದರ್ಶವು) ಇಚ್ಛೆಗೆ ವಿಷಯವಾಗಿರುತ್ತದೆ.

**ಆದ್ದರಿಂದ ಇಷ್ಟತ್ವಾತಿರೇಕಿಯಾದ 'ಕೃತ್ಯುದ್ದೇಶ್ಯ'ವೆಂದರೇನೆಂಬುದನ್ನು ಗೊತ್ತುಪಡಿಸುವದು ಆಗದೆ ಇರುವದರಿಂದ ಕೃತಿಸಾಧ್ಯವಾಗಿ, ಕೃತಿಗೆ ಪ್ರಧಾನವಾಗಿರುವದೆಂಬ ಕಾರ್ಯವನ್ನು ಗೊತ್ತುಪಡಿಸುವದು ಆಗಲಾರದೆಂದೇ ಆಯಿತು.**

## ನಿಯೋಗವಾಕ್ಯದ ವಿಚಾರ

### (ಮೂಲ)

ನಿಯೋಗಸ್ಯಾಪಿ ಸಾಕ್ಷಾದಿಷ್ಟವಿಷಯಭೂತಸುಖದುಃಖನಿವೃತ್ತ್ಯಾಭ್ಯಾಮನ್ಯತ್ವಾತ್, ತತ್ ಸಾಧನತಯೈವೇಷ್ಟತ್ವಂ ಕೃತಿಸಾಧ್ಯತ್ವಂ ಚ। ಅತ ಏವ ಹಿ

1. "ಕೃತ್ಯುದ್ದೇಶ್ಯವೆಂದರೆ ಕೃತಿಶೇಷಿಯಾಗಿರುವದು, ಶೇಷಿಯೆಂದರೆ ಶೇಷಕ್ಕೆ ಪ್ರತಿಸಂಬಂಧಿಯಾಗಿರುವದು, ಶೇಷವೆಂದರೆ ಮತ್ತೊಬ್ಬನ ಉದ್ದೇಶದಿಂದ ಪ್ರವರ್ತಿಸುವದಕ್ಕೆ ಅರ್ಹನಾಗಿರುವನು" ಎಂದು ಹೇಳಿದರೆ ಉದ್ದೇಶ್ಯವೆಂದರೆ ಉದ್ದೇಶ್ಯವೇ ಎಂದಂತೆ ಆಗಿ ಆತ್ಮಾಶ್ರಯದೋಷವು ಬರುವದು. ಏಕೆಂದರೆ ಉದ್ದೇಶ್ಯವೆಂದರೇನೆಂಬುದನ್ನು ಗೊತ್ತುಪಡಿಸುವದಕ್ಕೆ ಬೇಕಾಗಿರುವ ಶೇಷತ್ವವನ್ನು ಉದ್ದೇಶ್ಯನಿರೂಪಣದಿಂದಲೇ ಗೊತ್ತುಪಡಿಸಬೇಕಾಗುವದು– ಎಂದು ತ. ಪ್ರ.

2. ಕಾರ್ಯವೆಂದರೇನೆಂಬುದನ್ನು ಗೊತ್ತುಪಡಿಸಬೇಕಾಗಿರುವಲ್ಲಿ, ಅದು ಫಲರೂಪವಾದದ್ದಕ್ಕಿಂತ ವಿಲಕ್ಷಣವಾದದ್ದೆಂದು ಗೊತ್ತುಪಡಿಸುವದಕ್ಕಾಗಿ 'ಕಾರ್ಯವೆಂದರೆ ಕೃತ್ಯುದ್ದೇಶ್ಯವಾದದ್ದು' ಎಂದು ಹೇಳಲಾಯಿತು. ಉದ್ದೇಶ್ಯವೆಂದರೆ ಶೇಷಿ ; ಶೇಷಿ–ಎಂದರೆ ಶೇಷಕ್ಕೆ ಪ್ರತಿಸಂಬಂಧಿ ; ಈಗ 'ಶೇಷವೆಂದರೆ ಕಾರ್ಯಪ್ರತಿಸಂಬಂಧಿ' ಎಂದರೆ ಮತ್ತೆ ಕಾರ್ಯವನ್ನು ಗೊತ್ತುಪಡಿಸಿ ಹೇಳಬೇಕಾಗುವದರಿಂದ ಆತ್ಮಾಶ್ರಯದೋಷವು ಬರುವದು –ಎಂದು ತ. ಪ್ರ.

ತಸ್ಯ ಕ್ರಿಯಾತಿರಿಕ್ತತಾ | ಅನ್ಯಥಾ ಕ್ರಿಯೈವ ಕಾರ್ಯಂ ಸ್ಯಾತ್ ಸ್ವರ್ಗಕಾಮಪದ ಸಮಭಿವ್ಯಾಹಾರಾನುಗುಣ್ಯೇನ ಲಿಙಾದಿವಾಚ್ಯಂ ಕಾರ್ಯಂ ಸ್ವರ್ಗಸಾಧನ ಮೇವೇತಿ ಕ್ಷಣಭಙ್ಗಕರ್ಮಾತಿರೇಕಿ ಸ್ಥಿರಂ ಸ್ವರ್ಗಸಾಧನಮಪೂರ್ವಮೇವ ಕಾರ್ಯಮ್ ಇತಿ ಸ್ವರ್ಗಸಾಧನತೋಲ್ಲೇಖೇನೈವ ಹಿ ಅಪೂರ್ವವ್ಯುತ್ಪತ್ತಿಃ | ಅತಃ ಪ್ರಥಮಮ್ ಅನನ್ಯಾರ್ಥತಯಾ ಪ್ರತಿಪನ್ನಸ್ಯ ಕಾರ್ಯಸ್ಯ ಅನನ್ಯಾರ್ಥತ್ವ ನಿರ್ವಹಣಾಯ ಅಪೂರ್ವಮೇವ ಪಶ್ಚಾತ್ ಸ್ವರ್ಗಸಾಧನಂ ಭವತಿ – ಇತ್ಯುಪ ಹಾಸ್ಯಮ್ ! ಸ್ವರ್ಗಕಾಮಪದಾನ್ವಿತಕಾರ್ಯಾಭಿಧಾಯಿಪದೇನ ಪ್ರಥಮಮಪಿ ಅನನ್ಯಾರ್ಥತಾನಭಿಧಾನಾತ್ | ಸುಖದುಃಖನಿವೃತ್ತಿತತ್ಸಾಧನೇಭ್ಯೋಽನ್ಯಸ್ಯ ಅನನ್ಯಾರ್ಥಸ್ಯ ಕೃತಿಸಾಧ್ಯತಾಪ್ರತೀತ್ಯನುಪಪತ್ತೇಶ್ಚ ||

(ಅರ್ಥ)

ನಿಯೋಗವುಕೂಡ ನೇರಾಗಿ ಇಚ್ಛೆಗೆ ವಿಷಯವಾಗಿರುವ ಸುಖ, ದುಃಖ ನಿವೃತ್ತಿ– ಇವುಗಳಿಗಿಂತ ಬೇರೆಯಾಗಿರುವದರಿಂದಲೇ ಅವುಗಳಿಗೆ ಸಾಧನವಾಗಿರು ವದರಿಂದಲೇ ಇಷ್ಟವಾಗಿರುತ್ತದೆ, ಮತ್ತು ಕೃತಿಸಾಧ್ಯವಾಗಿರುತ್ತದೆ. ಆದ್ದರಿಂದಲೇ ಅಲ್ಲವೆ, ಅದು ಕ್ರಿಯೆಗಿಂತ ಬೇರೆಯಾಗಿರುವದು ? ಹಾಗಿಲ್ಲದಿದ್ದರೆ ಕ್ರಿಯೆಯೇ ಕಾರ್ಯವೆಂದಾದೀತು. 'ಸ್ವರ್ಗಕಾಮ'ಪದದೊಡನೆ ಹೇಳಿರುವದಕ್ಕೆ ಅನುಗುಣ ವಾಗಿ ಲಿಙಾದಿಗಳಿಗೆ ವಾಚ್ಯವಾಗಿರುವ ಕಾರ್ಯವು ಸ್ವರ್ಗಸಾಧನವೇ ಆಗಿರುವದ ರಿಂದ ಕ್ಷಣಭಂಗುರವಾಗಿರುವ ಕರ್ಮಕ್ಕಿಂತ ಬೇರೆಯಾದ ಸ್ಥಿರವಾದ, ಸ್ವರ್ಗಸಾಧನ ವಾದ ಅಪೂರ್ವವೇ ಕಾರ್ಯವಾಗಿದೆಯಾಗಿ ಸ್ವರ್ಗಸಾಧನವೆಂಬುದನ್ನು ಸ್ಪಷ್ಟವಾಗಿ ಹೇಳುವದರಿಂದಲೇ ಅಲ್ಲವೆ, ಅಪೂರ್ವದ ವ್ಯುತ್ಪತ್ತಿಯಾಗುವದು ? ಆದ್ದರಿಂದ ಮೊದಲು ಮತ್ತೊಂದಕ್ಕಾಗಿರುವದಿಲ್ಲವೆಂದು ಗೊತ್ತಾಗಿರುವ ಕಾರ್ಯವು ಅನನ್ಯಾರ್ಥ ವೆಂದು ಸಾಧಿಸುವದಕ್ಕಾಗಿ ಅಪೂರ್ವವೇ ಆಬಳಿಕ ಸ್ವರ್ಗಸಾಧನವಾಗುತ್ತದೆ ಎನ್ನುವದು ನಗೆಗೀಡಾದ ಮಾತು ; ಏಕೆಂದರೆ ಸ್ವರ್ಗಕಾಮಪದದೊಡನೆ ಅನ್ವಯ ವಾಗಿರುವ ಕಾರ್ಯವನ್ನು ಹೇಳುವ ಪದವು ಮೊದಲೂ (ಅದಕ್ಕೆ) ಅನನ್ಯಾರ್ಥತ್ವ ವನ್ನು ಹೇಳುವದಿಲ್ಲ ; ಮತ್ತು ಸುಖ, ದುಃಖನಿವೃತ್ತಿ, ಅವುಗಳಿಗೆ ಸಾಧನ– ಇವು ಗಳಿಗಿಂತ ಬೇರೆಯಾದ ಅನನ್ಯಾರ್ಥವು ಕೃತಿಸಾಧ್ಯವೆಂದು ಜ್ಞಾನವಾಗುವದು ಯುಕ್ತವಾಗಲೂ ಆರದು [1]

---

1. 'ಸ್ವರ್ಗಕಾಮನಾದವನು ಯಾಗಮಾಡಬೇಕು' ಎಂಬಲ್ಲಿ ಕಾರ್ಯವನ್ನು ಹೇಳುವ ಮಾತು ಸ್ವರ್ಗಕಾಮಪದದೊಡನೆ ಇರುವದರಿಂದ ಅಲ್ಲಿಯೂ ಕಾರ್ಯವು ಸ್ವರ್ಗಕ್ಕೆ ಸಾಧನವೇ ಹೊರತು ಅನನ್ಯಾರ್ಥವಲ್ಲ ; ಆಮೇಲೆ ಅಪೂರ್ವವು ಸ್ವರ್ಗಕ್ಕೆ ಸಾಧನವೆಂದಾಗಲೂ ಅನನ್ಯಾರ್ಥವಲ್ಲ. ಸುಖ, ದುಃಖನಿವೃತ್ತಿ, ಅವುಗಳ ಸಾಧನ– ಇವನ್ನು ಬಿಟ್ಟರೆ ಮತ್ತೆ ಯಾವದೂ ಕೃತಿಸಾಧ್ಯವಾಗುವದೂ ಇಲ್ಲ. ಹೀಗಿರುವಲ್ಲಿ ಕಾರ್ಯವು ಕೃತಿಸಾಧ್ಯವೆಂದು ಹೇಳುವದು ಹೇಗೆ ? –ಎಂದರ್ಥ.

(ಮೂಲ)

ಅಪಿ ಚ ಕಿಮಿದಂ ನಿಯೋಗಸ್ಯ ಪ್ರಯೋಜನತ್ವಮ್? ಸುಖವನ್ನಿಯೋಗಸ್ಯಾಪ್ಯನುಕೂಲತ್ವಮೇವ – ಇತಿ ಚೇತ್, ಕಿಂ ನಿಯೋಗಃ ಸುಖಮ್? ಸುಖಮೇವ ಹಿ ಅನುಕೂಲಮ್ । ಸುಖವಿಶೇಷವನ್ನಿಯೋಗಾಪರಪರ್ಯಾಯಂ ವಿಲಕ್ಷಣಂ ಸುಖಾನ್ತರಮ್ ಇತಿ ಚೇತ್, ಕಿಂ ತತ್ರ ಪ್ರಮಾಣಮಿತಿ ವಕ್ತವ್ಯಮ್ । ಸ್ವಾನುಭವಶ್ಚೇತ್ ನ; ವಿಷಯವಿಶೇಷಾನುಭವಸುಖವತ್, 'ನಿಯೋಗಾನುಭವಸುಖಮಿದಮ್' ಇತಿ ಭವತಾಪಿ ನಾನುಭೂಯತೇ । ಶಾಸ್ತ್ರೇಣ ನಿಯೋಗಸ್ಯ ಪುರುಷಾರ್ಥತಯಾ ಪ್ರತಿಪಾದನಾತ್ ಪಶ್ಚಾತ್ತು ಭೋಕ್ಷ್ಯತ ಇತಿ ಚೇತ್, ಕಿಂ ತನ್ನಿಯೋಗಸ್ಯ ಪುರುಷಾರ್ಥತ್ವವಾಚಿ ಶಾಸ್ತ್ರಮ್? ನ ತಾವಲ್ಲೌಕಿಕಂ ವಾಕ್ಯಮ್; ತಸ್ಯ ದುಃಖಾತ್ಮಕಕ್ರಿಯಾವಿಷಯತ್ವಾತ್, ತೇನ ಸುಖಾದಿಸಾಧನತಯೈವ ಕೃತಿಸಾಧ್ಯತಾಮಾತ್ರಪ್ರತಿಪಾದನಾತ್ । ನಾಪಿ ವೈದಿಕಮ್, ತೇನಾಪಿ ಸ್ವರ್ಗಾದಿಸಾಧನತಯೈವ ಕಾರ್ಯಸ್ಯ ಪ್ರತಿಪಾದನಾತ್ । ನಾಪಿ ನಿತ್ಯನೈಮಿತ್ತಿಕಶಾಸ್ತ್ರಮ್; ತಸ್ಯಾಪಿ ತದಭಿಧಾಯಿತ್ವಂ ಸ್ವರ್ಗಕಾಮವಾಕ್ಯಸ್ಥಾಪೂರ್ವವ್ಯುತ್ಪತ್ತಿಪೂರ್ವಕಮಿತಿ ಉಕ್ತರೀತ್ಯಾ ತೇನಾಪಿ ಸುಖಾದಿಸಾಧನಕಾರ್ಯಾಭಿಧಾನಮ್ ಅಪರ್ಜನೀಯಮ್ । ನಿಯತ್ಯೈಹಿಕಫಲಸ್ಯ ಕರ್ಮಣೋಽನುಷ್ಠಿತಸ್ಯ ಫಲತ್ವೇನ ತದಾನೀಮನುಭೂಯಮಾನಾನ್ನಾದ್ಯರೋಗತಾದಿವ್ಯತಿರೇಕೇಣ ನಿಯೋಗರೂಪಸುಖಾನುಭವಾನುಪಲಬ್ಧೇಶ್ಚ ನಿಯೋಗಃ ಸುಖಮಿತ್ಯತ್ರ ನ ಕಿಞ್ಚನ ಪ್ರಮಾಣಮುಪಲಭಾಮಹೇ। ಅರ್ಥವಾದಾದಿಷ್ವಪಿ ಸ್ವರ್ಗಾದಿಸುಖಪ್ರಕಾರಕೀರ್ತನವತ್ ನಿಯೋಗರೂಪಸುಖಪ್ರಕಾರಕೀರ್ತನಂ ಭವತಾಮಪಿ ನ ದೃಷ್ಟಚರಮ್ ॥

(ಅರ್ಥ)

(ಪ್ರಶ್ನೆ):– ಇದಲ್ಲದೆ ನಿಯೋಗದ ಪ್ರಯೋಜನವೆಂಬುದು ಯಾವದು[1]?

(ನಿಯೋಗವಾದಿ):–ಸುಖದಂತೆ ಅನುಕೂಲವಾಗಿರುವದೇ (ಪ್ರಯೋಜನ)[2].

(ಸಿದ್ಧಾಂತಿ):– ನಿಯೋಗವೆಂಬುದು ಸುಖವೆ? ಸುಖವೇ ಅಲ್ಲವೆ, ಅನುಕೂಲವಾದದ್ದು?

(ನಿಯೋಗವಾದಿ):– ಸುಖವಿಶೇಷದಂತೆಯೇ ನಿಯೋಗವೆಂಬ ಮತ್ತೊಂದು ಹೆಸರಿನ ಸುಖಾಂತರವಿದು.[3]

---

1. 'ಕೃತಿಪ್ರಯೋಜನವೇ ಕೃತ್ಯುದ್ದೇಶ್ಯ' ಎಂಬ ವಾಕ್ಯದಲ್ಲಿ ಪ್ರಯೋಜನವೆಂದರೇನು?

2. ಸುಖವು ಅನುಕೂಲ; ಅದರಂತೆ ನಿಯೋಗವೂ ಅನುಕೂಲ– ಎಂದಭಿಪ್ರಾಯ.

3. ಈ ಅಭಿಪ್ರಾಯವನ್ನು ನಿಯೋಗವಾದಿಗಳು ಹೇಳಿದ್ದರೆ?– ಎಂಬುದನ್ನು ಅವರ ಮೂಲಗ್ರಂಥಗಳಿಂದ ತಿಳಿಯಬೇಕಾಗಿದೆ.

(ಸಿದ್ಧಾಂತಿ) :– ಹಾಗೆಂಬುದಕ್ಕೆ ಪ್ರಮಾಣವೇನು ? ಹೇಳಬೇಕು.

(ನಿಯೋಗವಾದಿ) :– ತನ್ನ ಅನುಭವವೇ (ಪ್ರಮಾಣ).

(ಸಿದ್ಧಾಂತಿ) :– ಹಾಗಲ್ಲ. (ಏಕೆಂದರೆ) ಒಂದೊಂದು ವಿಷಯವನ್ನು ಅನುಭವಿಸಿದ ಸುಖದಂತೆ 'ಇದು ನಿಯೋಗಾನುಭವದ ಸುಖವು' ಎಂದು ನಿನಗೂ ಅನುಭವವಾಗುವದಿಲ್ಲ.

(ನಿಯೋಗವಾದಿ) :– ಶಾಸ್ತ್ರದಲ್ಲಿ ನಿಯೋಗವು ಪುರುಷಾರ್ಥವೆಂದು ಹೇಳಿರುವದರಿಂದ ಆಮೇಲೆ (ಅದರ) ಭೋಗವಾಗಬಹುದು.

(ಸಿದ್ಧಾಂತಿ) :– ನಿಯೋಗವು ಪುರುಷಾರ್ಥವೆಂದು ಹೇಳುವ ಆ ಶಾಸ್ತ್ರವು ಯಾವದು ?

ಮೊದಲನೆಯದಾಗಿ ಲೌಕಿಕವಾಕ್ಯವಲ್ಲ.[1] ಏಕೆಂದರೆ ಅದು ದುಃಖಾತ್ಮಕವಾದ ಕ್ರಿಯೆಯನ್ನು ಹೇಳುತ್ತದೆಯಾಗಿ ಸುಖವೇ ಮುಂತಾದದ್ದರ ಸಾಧನವಾದ್ದರಿಂದಲೇ ಕೃತಿಸಾಧ್ಯವೆಂದು ಹೇಳುತ್ತಿದೆ, ವೈದಿಕವಾಕ್ಯವೂ ಅಲ್ಲ. ಏಕೆಂದರೆ ಅದೂ ಸ್ವರ್ಗವೇ ಮುಂತಾದದ್ದಕ್ಕೆ ಕಾರ್ಯವನ್ನು ಹೇಳುತ್ತಿದೆ. **ನಿತ್ಯನೈಮಿತ್ತಿಕ ಶಾಸ್ತ್ರವೂ** (ಪ್ರಮಾಣ)ವಲ್ಲ ; ಏಕೆಂದರೆ ಅದೂ ಅದನ್ನು ಹೇಳುವದು ಸ್ವರ್ಗಕಾಮವಾಕ್ಯದಲ್ಲಿರುವ ಅಪೂರ್ವಜ್ಞಾನಜನನದ ಮೂಲಕವಾಗಿರುವದರಿಂದ. ಹಿಂದೆ ಹೇಳಿದ ರೀತಿಯಿಂದ ಸುಖವೇ ಮುಂತಾದವಕ್ಕೆ ಸಾಧನವಾದ ಕಾರ್ಯವನ್ನು ಹೇಳುವದರಿಂದಲೇ– ಎಂದು ಅಪರಿಹಾರ್ಯವಾಗಿರುತ್ತದೆ. ನಿಯತವಾಗಿ **ಐಹಿಕಫಲವನ್ನೇ ಕೊಡುವ** ಕರ್ಮವನ್ನು ಮಾಡಿದರೆ (ಅದಕ್ಕೆ) ಫಲವಾಗಿ ಅನ್ನಾದಿ, ಆರೋಗ್ಯವೇ ಮುಂತಾದವುಗಳಿಗಿಂತ ವ್ಯತಿರಿಕ್ತವಾಗಿ ನಿಯೋಗರೂಪವಾದ ಸುಖದ ಅನುಭವವು ಕಾಣಬರದೆ ಇರುವದರಿಂದಲೂ ನಿಯೋಗವು ಸುಖ ಎಂಬ ವಿಷಯದಲ್ಲಿ ಯಾವ ಪ್ರಮಾಣವೂ ನಮಗೆ ಕಾಣುತ್ತಿಲ್ಲ. **ಅರ್ಥವಾದಾದಿ**ಗಳಲ್ಲಿಯೂ ಸ್ವರ್ಗಾದಿಸುಖವಿಶೇಷಗಳನ್ನು ಹೇಳಿರುವಂತೆ, ನಿಯೋಗರೂಪಸುಖವಿಶೇಷವನ್ನು ಹೇಳಿರುವದನ್ನು ನೀನು ಎಲ್ಲಿಯೂ ಕಂಡಿರುವದಿಲ್ಲ.

## ಸ್ವಪಕ್ಷದ ಉಪಸಂಹಾರ

**(ಮೂಲ)**

೧೭. ಅತೋ ವಿಧಿವಾಕ್ಯೇಷ್ವಪಿ ಧಾತ್ವರ್ಥಸ್ಯ ಕರ್ತೃವ್ಯಾಪಾರಸಾಧ್ಯತಾಮಾತ್ರಂ ಶಬ್ದಾನುಶಾಸನಸಿದ್ಧಮೇವ ಲಿಙಾದೇರ್ವಾಚ್ಯಮ್ ಇತ್ಯಧ್ಯವಸೀಯತೇ।

1. ಇಲ್ಲಿ ಲೌಕಿಕವಾಕ್ಯವನ್ನೇಕೆ ತಂದಿದ್ದಾರೋ ತಿಳಿಯದು. ಶಬ್ದಕ್ಕೆ ಕಾರ್ಯದಲ್ಲಿಯೇ ಶಕ್ತಿ– ಎಂದು ಪೂರ್ವಪಕ್ಷಿ ಹೇಳಿದ್ದರಿಂದಲೇ ಇರಬಹುದು.

ಧಾತ್ವರ್ಥಸ್ಯ ಚ ಯಾಗಾದೇರಗ್ನ್ಯಾದಿದೇವತಾನ್ತರ್ಯಾಮಿಪರಮಪುರುಷ ಸಮಾರಾಧನರೂಪತಾ ಸಮಾರಾಧಿತಾತ್ ಪರಮಪುರುಷಾತ್ ಫಲಸಿದ್ಧಿಶ್ಚ ಇತಿ 'ಫಲಮತ ಉಪಪತ್ತೇಃ' (ವೇ. ಸೂ. ೩-೨-೩೭) ಇತ್ಯತ್ರ ಪ್ರತಿಪಾದಯಿಷ್ಯತೇ। ಅತೋ ವೇದಾನ್ತಾಃ ಪರಿನಿಷ್ಪನ್ನಂ ಪರಂ ಬ್ರಹ್ಮ ಬೋಧಯನ್ತೀತಿ ಬ್ರಹ್ಮೋಪಾಸನ ಫಲಾನನ್ತ್ಯಂ ಸ್ಥಿರತ್ವಂ ಚ ಸಿದ್ಧಮ್। ಚಾತುರ್ಮಾಸ್ಯಾದಿಕರ್ಮಸ್ವಪಿ ಕೇವಲಸ್ಯ ಕರ್ಮಣಃ ಕ್ಷಯಿಫಲತ್ವೋಪದೇಶಾತ್ ಅಕ್ಷಯ್ಯಫಲಶ್ರವಣಂ 'ಅಪಾಮ ಸೋಮಮಮೃತಾ ಅಭೂಮ' 'ಅಕ್ಷಯ್ಯಂ ಹ ವೈ ಚಾತುರ್ಮಾಸ್ಯಯಾಜಿನಸ್ಸುಕೃತಂ ಭವತಿ' ಇತ್ಯಾದಿ ಸದಾಪೇಕ್ಷಿಕಂ ಮನ್ತವ್ಯಮ್॥

ಅತಃ ಕೇವಲಾನಾಂ ಕರ್ಮಣಾಮಲ್ಪಾಸ್ಥಿರಫಲತ್ವಾತ್, ಬ್ರಹ್ಮಜ್ಞಾನಸ್ಯ ಚ ಅನನ್ತಸ್ಥಿರಫಲತ್ವಾತ್, ತನ್ನಿರ್ಣಯಫಲೋ ಬ್ರಹ್ಮವಿಚಾರಾರಮ್ಭೋ ಯುಕ್ತ ಇತಿ ಸ್ಥಿತಮ್॥

## ಇತಿ ಶ್ರೀಭಾಷ್ಯೇ ಜಿಜ್ಞಾಸಾಧಿಕರಣಮ್॥

### (ಅರ್ಥ)

ಆದ್ದರಿಂದ[1] ವಿಧಿವಾಕ್ಯಗಳಲ್ಲಿಯೂ ಧಾತ್ವರ್ಥವು ಕರ್ತೃವ್ಯಾಪಾರಸಾಧ್ಯ ಮಾತ್ರವೆಂದು ಶಬ್ದಾನುಶಾಸನಸಿದ್ಧವಾಗಿರುವದೇ ಲಿಙಾದಿಗಳಿಗೆ ವಾಚ್ಯವಾಗಿರುತ್ತದೆ ಯೆಂದು[2] ನಿಶ್ಚಯವಾಗುತ್ತದೆ. ಧಾತ್ವರ್ಥವಾಗಿರುವ ಯಾಗಾದಿಗಳಿಗೆ ಅಗ್ನಿಯೇ ಮೊದಲಾದ ದೇವತೆಗಳ ಅಂತರ್ಯಾಮಿಯಾದ ಪರಮಪುರುಷನ ಆರಾಧನೆಯ ರೂಪವೆಂದೂ ಆರಾಧನೆಮಾಡಿದ ಪರಮಪುರುಷನಿಂದ ಫಲಸಿದ್ಧಿಯಾಗುವದೆಂದೂ 'ಇವನಿಂದ ಫಲವಾಗುವದು, ಏಕೆಂದರೆ (ಹಾಗೆಂಬುದು) ಯುಕ್ತವಾಗಿದೆ'[3] (ವೇ. ಸೂ. ೩-೨-೩೭) ಎಂಬ (ಸೂತ್ರ)ದಲ್ಲಿ ಪ್ರತಿಪಾದಿಸಲಾಗುವದು.

ಆದ್ದರಿಂದ ವೇದಾಂತಗಳು ಪರಿನಿಷ್ಪನ್ನವಾದ ಪರಬ್ರಹ್ಮವನ್ನು ಬೋಧಿಸುತ್ತವೆಯಾದ್ದರಿಂದ ಬ್ರಹ್ಮೋಪಾಸನೆಯ ಫಲವು ಅನಂತವೂ ಸ್ಥಿರವೂ ಆಗಿರುತ್ತದೆ ಎಂದು ಸಿದ್ಧವಾಯಿತು. ಚಾತುರ್ಮಾಸ್ಯಾದಿಕರ್ಮಗಳಲ್ಲಿಯೂ – ಕೇವಲ

1. ವೇದವು ಕಾರ್ಯವಲ್ಲವೆಂಬುದಕ್ಕೆ ಪ್ರಮಾಣವಿಲ್ಲದ್ದರಿಂದ ಎಂದರ್ಥ. ಕಾರ್ಯ ವಾದದ ನಿರಾಕರಣೆಯ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಲಿಙಾದಿಗಳಿಗೆ ವಿಧಿಯೆಂಬರ್ಥವಿರುವದು ವ್ಯಾಕರಣಸಿದ್ಧವಾಗಿರುವದರಿಂದ ವಿಧಿಯೇ ಅವುಗಳ ಅರ್ಥ.

3. ಅಚೇತನವಾದ ಕ್ಷಣಧ್ವಂಸಿಯಾದ ಕರ್ಮವು ಫಲವನ್ನು ಕೊಡಲಾರದು; ಸರ್ವಜ್ಞನೂ ಸರ್ವಶಕ್ತನೂ ಮಹೋದಾರನೂ ಆಗಿರುವ ಪರಮಾತ್ಮನೇ ಫಲದಾತೃ ವೆಂಬುದು ಯುಕ್ತವಾಗಿದೆ.

ಕರ್ಮಕ್ಕೆ ಕ್ಷಯಿಷ್ಣುವಾದ ಫಲವೇ ಆಗುವದೆಂದು (ಶ್ರುತಿಯಲ್ಲಿ) ಉಪದೇಶಿಸಿರುವದರಿಂದ – ಅಕ್ಷಯಫಲವು ಉಂಟೆಂದು ಶ್ರುತಿಯಲ್ಲಿ ಹೇಳಿರುವದು 'ವಾಯುವೂ ಅಂತರಿಕ್ಷವೂ ಎಂಬಿದು ಅಮೃತವು' (ಬೃ. ೨–೩–೩) ಎಂಬಂತೆ ಆಪೇಕ್ಷಿಕ(ಫಲ)ವೆಂದು ತಿಳಿಯಬೇಕು.

ಆದ್ದರಿಂದ ಕೇವಲ ಕರ್ಮಗಳಿಗೆ ಅಲ್ಪಾಸ್ಥಿರಫಲವಾಗುವದರಿಂದಲೂ ಬ್ರಹ್ಮಜ್ಞಾನಕ್ಕೆ ಅನಂತಸ್ಥಿರಫಲವಾಗುವದರಿಂದಲೂ, ಅದನ್ನು ನಿರ್ಣಯಿಸುವದೆಂಬ ಫಲವುಳ್ಳ ಬ್ರಹ್ಮವಿಚಾರವನ್ನು ಆರಂಭಿಸಿರುವದು ಯುಕ್ತ– ಎಂಬುದು ನಿಂತುಕೊಂಡಿತು.

### ಇಂತು ಶ್ರೀಭಾಷ್ಯದಲ್ಲಿ ಜಿಜ್ಞಾಸಾಧಿಕರಣ

# ೧. ಪರಿಶಿಷ್ಟ

**ಪುಟ ೨೧ ಭೇದವಾಸನೆ :** ಅನಾದಿವಾಸನೆಯಿಂದ ಬಾಹ್ಯವಸ್ತುವು ತೋರುತ್ತಿರುತ್ತದೆ ಎಂಬ ವಾದವನ್ನು ಹೊರಕ್ಕೆ ತಂದವರು ಬೌದ್ಧರು. ಅದನ್ನು ಈಚಿನವರು ಒಪ್ಪಿ ಮೋಸಹೋಗಿರುತ್ತಾರೆ ಎಂದು **ಶ್ಲೋಕವಾರ್ತಿಕ**ದಲ್ಲಿ ಕುಮಾರಿಲಭಟ್ಟರು ಬರೆದಿರುತ್ತಾರೆ. ಈಚೆಗೆ **ಮಂಡನಮಿಶ್ರನು** ಈ ಭೇದ ವಾಸನೆಯ ಅನುವೃತ್ತಿಯನ್ನು ತೊಲಗಿಸುವದಕ್ಕೆ **ಧ್ಯಾನಾಭ್ಯಾಸವು** ಅವಶ್ಯವೆಂಬ ತರ್ಕವನ್ನು ಹೂಡಿದನು (ಬ್ರ. ಸಿ. ಪು. 37). ಅವನನ್ನನುಸರಿಸಿ **ಭಾಮತೀ, ವಿವರಣಗಳಲ್ಲಿಯೂ** ಅವಿದ್ಯಾಸಂಸ್ಕಾರವು ಇರುತ್ತದೆ ಎಂಬ ವಾದವನ್ನು ತಂದಿರುತ್ತದೆ. ಇಷ್ಟಸಿದ್ಧಿಯಲ್ಲಿಯೂ (ಪು. ೭೪) ವಿವರಣದಲ್ಲಿಯೂ (ಪುಟ ೧೦೫-೧೦೭) ಅವಿದ್ಯಾಲೇಶವೇ ಅವಿದ್ಯಾಸಂಸ್ಕಾರವೆಂದಿರುತ್ತದೆ.

**ಪುಟ ೨೧ ದೋಷ :** ದೋಷವಿಲ್ಲದೆ ಭ್ರಾಂತಿಯಾಗದೆಂಬ ಪಕ್ಷವು ಮೀಮಾಂಸಕರದು. ಅಧ್ಯಾಸಕ್ಕೆ ದೋಷತ್ರಯವಿರಬೇಕೆಂದು **ಪಂಚಪಾದಿಕೆ**ಯಲ್ಲಿ (ಪುಟ ೧೪) ಮೊಟ್ಟಮೊದಲು ಹೇಳಿತ್ತು ; ಜೀವನಿಗೆ ಮಿಥ್ಯಾಜ್ಞಾನವುಂಟಾಗುವದಕ್ಕೆ **ಅವಿದ್ಯೆಯೇ ದೋಷ**ವೆಂಬುದು ಅವರ ಮತ. ಈ ಪಕ್ಷವನ್ನು **ಭಾಸ್ಕರಾಚಾರ್ಯರು** (ಭಾ. ಸೂ. **ಪುಟ** ೯೪) ಖಂಡಿಸಿರುತ್ತಾರೆ. ರಾಮಾನುಜರು ದೋಷವು ಪರಮಾರ್ಥವಾಗಿದ್ದರೆ ಅಧ್ಯಾಸವಾಗುತ್ತದೆ ಎನ್ನುತ್ತಾರೆ.

**ಪುಟ ೨೯ ಭಕ್ತಿ :** ಭಕ್ತಿಯೆಂದರೆ ಭಜನೆಯು. ಶಂಕರಾಚಾರ್ಯರ ಮತದಲ್ಲಿ ಜ್ಞಾನನಿಷ್ಠೆಯೇ ಪರಭಕ್ತಿ (ಗೀ. ಭಾ. ೧೮-೫೦), ಸ್ವಕರ್ಮದಿಂದ ಭಗವಂತನನ್ನು ಅಭ್ಯರ್ಚನಮಾಡುವದೇ ಗೌಣಭಕ್ತಿ, ಅಥವಾ ಭಕ್ತಿಯೋಗವು (ಗೀ. ಭಾ. ೧೮-೫೬) ; **ಶಾಂಡಿಲ್ಯಸೂತ್ರ**ದಲ್ಲಿ, ಸ್ವಪ್ನೇಶ್ವರಭಾಷ್ಯದಂತೆ ಈಶ್ವರನ ಮಹಿಮೆಯನ್ನು ತಿಳಿದಬಳಿಕ ಆಗುವ **ಪರಾನುರಕ್ತಿಯೇ** ಭಕ್ತಿ ; ಅದಕ್ಕೆ ಸಾಧನವಾದದ್ದು ಗೌಣಭಕ್ತಿ ; **ನಾರದಭಕ್ತಿಸೂತ್ರ**ದಂತೆ ಪರಮಾತ್ಮನಲ್ಲಿರುವ ಪರಮಪ್ರೇಮವೇ ಭಕ್ತಿ, ಆರ್ತಾದಿಭಕ್ತಿಗಳು ಗೌಣಭಕ್ತಿ. ಇಲ್ಲಿ ರಾಮಾನುಜರು ಉಪಾಸನೆಯನ್ನೂ ಉಪಾಸನೆಯಿಂದಾಗುವ ಸಾಕ್ಷಾತ್ಕಾರರೂಪವಾದ **ಧ್ರುವಾನುಸ್ಮೃತಿ**ಯನ್ನೂ ಭಕ್ತಿಯೆಂದು ಹೇಳಿರುತ್ತಾರೆ. ರಾಮಾನುಜರಿಂದೀಚೆಗೆ ಅನೇಕ ಭಕ್ತಿಪಂಥಗಳು ಹುಟ್ಟಿವೆ. ಭಗವಂತನಲ್ಲಿ ಅನವರತವಾಗಿ ಪ್ರೇಮಭಾವದಿಂದ ಮನಸ್ಸನ್ನು ನಿಲ್ಲಿಸಿಕೊಂಡಿರುವದೇ **ಭಕ್ತಿ** ಎಂಬ ವಿಷಯದಲ್ಲಿ ಭಕ್ತಿವಾದಿಗಳೆಲ್ಲ ಏಕಕಂಠರಾಗಿರುತ್ತಾರೆ. ಭಗವತ್ಸ್ವರೂಪದ ವಿಷಯದಲ್ಲಿ ಸಿದ್ಧಾಂತಭೇದಗಳಿರುತ್ತವೆ.

**ಪುಟ ೩೪-'ಅವಿದ್ಯಯಾ ಮೃತ್ಯುಂ ತೀರ್ತ್ವಾ'** ಈ ಶ್ರುತಿಗೆ ಬಗೆಬಗೆಯ ವ್ಯಾಖ್ಯಾನಗಳಾಗಿವೆ. ಶಂಕರಾಚಾರ್ಯರ ಹೆಸರಿನಲ್ಲಿರುವ ಈಶಾವಾಸ್ಯಭಾಷ್ಯ

ಬಳ್ಳಿ ಅವಿದ್ಯೆಯಿಂದ ಎಂದರೆ ಕರ್ಮದಿಂದ ಮೃತ್ಯುವನ್ನು- ಲೌಕಿಕಕರ್ಮವನ್ನೂ ಲೌಕಿಕಜ್ಞಾನವನ್ನೂ- ದಾಟಿ ವಿದ್ಯೆಯಿಂದ, ಉಪಾಸನೆಯಿಂದ ಇಷ್ಟದೇವತಾತ್ಮ ಭಾವವನ್ನು ಪಡೆಯುತ್ತಾನೆ- ಎಂದರ್ಥ. **ಗೌಡಪಾದೀಯಕಾರಿಕಾಭಾಷ್ಯದಂತೆ,** ಕರ್ಮೋಪಾಸನೆಗಳ ಸಮುಚ್ಚಯವೇ ಅವಿದ್ಯೆ. ಇದರಿಂದ ಸಾಧ್ಯಸಾಧನೈಷಣೆಯೆಂಬ ಮೃತ್ಯುವನ್ನು ದಾಟಿ ಬ್ರಹ್ಮವಿದ್ಯೆಯಿಂದ ಅಮೃತತ್ವವೆಂಬ ಮೋಕ್ಷವನ್ನು ಪಡೆಯುತ್ತಾನೆ- ಎಂದರ್ಥ. **ವಾಚಸ್ಪತಿಮಿಶ್ರರಂತೆ-** ಅವಿದ್ಯೆಯೆಂದರೆ ಅಸ್ಮೃತಸಾಕ್ಷಾತ್ಕಾರವು; ಅದರಿಂದ ಮೃತ್ಯುವೆಂದರೆ ಸಂಸಾರಕ್ಕೆ ಕಾರಣವಾದ ಅವಿದ್ಯೆ. ಅವಿದ್ಯೆಯಿಂದ ಮೃತ್ಯುವನ್ನು ದಾಟಿ ಪರಮಾರ್ಥವಿದ್ಯೆಯಿಂದ ಮೋಕ್ಷವನ್ನು ಪಡೆಯುತ್ತಾನೆ ಎಂದರ್ಥ. ಹೀಗೆಯೇ ವಾರ್ತಿಕಕಾರರೇ ಮೊದಲಾದವರು ಬೇರೆಬೇರೆಯ ರೀತಿಯಲ್ಲಿ ಈ ಮಂತ್ರಕ್ಕೆ ವ್ಯಾಖ್ಯಾನವನ್ನು ಮಾಡಿರುತ್ತಾರೆ.

**ಪುಟ ೪೮, ಅಪಚ್ಛೇದನ್ಯಾಯ :** 'ಪಞ್ಚರ್ತ್ವಿಜಃ ಸಮನ್ವಾರಬ್ಧಾಃ ಪ್ರಸರ್ಪನ್ತಿ। ಅಧ್ವರ್ಯುಂ ಪ್ರಸ್ತೋತಾನ್ವಾರಭತೇ। ಪ್ರಸ್ತೋತಾರಂ ಪ್ರತಿಹರ್ತಾ, ಪ್ರತಿಹರ್ತಾರಮುದ್ಗಾತಾ, ಉದ್ಗಾತಾರಂ ಬ್ರಹ್ಮಾ, ಬ್ರಹ್ಮಾಣಂ ಯಜಮಾನಃ'- ಎಂಬ ವಾಕ್ಯದಲ್ಲಿ ಅಧ್ವರ್ಯು, ಪ್ರಸ್ತೋತೃ, ಪ್ರತಿಹರ್ತೃ, ಉದ್ಗಾತೃ, ಬ್ರಹ್ಮ, ಯಜಮಾನ (ಯಜಮಾನನಾದಮೇಲೆ ಬ್ರಹ್ಮ- ಎಂಬ ಪಕ್ಷವೂ ಉಂಟು). ಈ ಕ್ರಮದಲ್ಲಿ ಋತ್ವಿಜರು ಒಬ್ಬರ ಕಚ್ಚೆಯನ್ನೊಬ್ಬರು ಮುಟ್ಟಿಕೊಂಡು (ಜ್ಯೋತಿಷ್ಟೋಮಯಾಗದ ಪ್ರಾತಃಸವನದಲ್ಲಿ) ಹೋಗುತ್ತಿರಬೇಕು. ಈ ಅನ್ವಾರಮ್ಭಣವು ವಿಚ್ಛಿನ್ನವಾದರೆ (ಸ್ಪರ್ಶವು ತಪ್ಪಿದರೆ) (೧) ಬಹಿಷ್ಪವನದಲ್ಲಿ ಹೋಗುತ್ತಿರುವವರೊಳಗೆ **ಉದ್ಗಾತೃವಿಗೆ ಅಪಚ್ಛೇದವಾದರೆ** ದಕ್ಷಿಣೆಯಿಲ್ಲದೆ ಯಜ್ಞವನ್ನು ಮುಗಿಸಿ ಮತ್ತೊಂದು ಯಜ್ಞವನ್ನು ಮಾಡಬೇಕು; ಹಿಂದಿನ ಯಜ್ಞದಲ್ಲಿ ಕೊಡಬೇಕಾಗಿದ್ದ ದಕ್ಷಿಣೆಯನ್ನು ಕೊಡಬೇಕು. (೨) **ಪ್ರತಿಹರ್ತೃವಿಗೆ ಅಪಚ್ಛೇದವಾದರೆ** ಸರ್ವಸ್ವವನ್ನೂ ದಕ್ಷಿಣೆಯಾಗಿ ಕೊಡಬೇಕು- ಎಂದು ಶಾಸ್ತ್ರ. ಇಲ್ಲಿ ಉದ್ಗಾತೃಪ್ರತಿಹರ್ತೃಗಳಿಗೆ ಬೇರೆಬೇರೆ ಪ್ರಯೋಗಗಳಲ್ಲಿ ಅಪಚ್ಛೇದವಾದರೆ ಆಯಾ ಪ್ರಾಯಶ್ಚಿತ್ತಶಾಸ್ತ್ರದಂತೆ ಮಾಡಬೇಕು. ಒಂದೇ ಪ್ರಯೋಗದಲ್ಲಿ ಒಟ್ಟಿಗೆ ಅಪಚ್ಛೇದವಾದರೆ, ಉದ್ಗಾತೃಪ್ರಾಯಶ್ಚಿತ್ತ; ಏಕೆಂದರೆ ಅವನೇ ವರ್ಗಪ್ರಧಾನನು. ಪ್ರಧಾನಾಪಚ್ಛೇದಕ್ಕೇ ಪ್ರಾಯಶ್ಚಿತ್ತವು ಬೇಕಾಗುತ್ತದೆ, ಅಥವಾ ವಿಕಲ್ಪದಿಂದ ಅನುಷ್ಠಾನಮಾಡಿದರೂ ಆಗುತ್ತದೆ. ಒಂದೇ ಪ್ರಯೋಗದಲ್ಲಿ ಒಂದಾಗುತ್ತಾ ಲೊಂದರ ಅಪಚ್ಛೇದವಾದರೆ ಹಿಂದಿನ ಪ್ರಾಯಶ್ಚಿತ್ತವು ದುರ್ಬಲ, ಮುಂದಿನದು ಪ್ರಬಲ- ಎಂದು **'ಪೌರ್ವಾಪರ್ಯೇ ಪೂರ್ವದೌರ್ಬಲ್ಯಂ ಪ್ರಕೃತಿವತ್'** (ಜೈ. ೬-೫-೫೪) ಎಂಬ ಸೂತ್ರದಲ್ಲಿ ಹೇಳಿದೆ. ಇಲ್ಲಿ ಮೊದಲನೆಯದಕ್ಕೆ ಇನ್ನೂ ವಿರೋಧಿಯು ಉತ್ಪನ್ನವಾಗಿರುವದಿಲ್ಲವಾದ್ದರಿಂದ ಮೊದಲನೆಯದೇ ಪ್ರಬಲ,

ಎರಡನೆಯದು ತನ್ನ ಪ್ರತಿಪಕ್ಷವಿರುವಾಗಲೇ ಹುಟ್ಟುವದರಿಂದ ದುರ್ಬಲ–ಎಂಬುದ **ಪೂರ್ವಪಕ್ಷ;** ಆದರೆ ಮೊದಲನೆಯದಕ್ಕೆ ಹುಟ್ಟುವ ಕಾಲದಲ್ಲಿ ವಿರೋಧಿಯು ಇರುವದಿಲ್ಲವಾದ್ದರಿಂದ ಅದು ಏನನ್ನೂ ಬಾಧಿಸದೆಯೇ ಹುಟ್ಟಬಹುದು; ಎರಡನೆಯದಾದರೊ, ಹುಟ್ಟುವಾಗ ತನಗೆ ವಿರೋಧಿಯಿರುವದರಿಂದ ಅದನ್ನು ಬಾಧಿಸದೆ ಹುಟ್ಟುವದೇ ಆಗುವದಿಲ್ಲವಾದ್ದರಿಂದ ಮೊದಲಿನದನ್ನು ಬಾಧಿಸಿಯೇ ಹುಟ್ಟುವದು. ಆದ್ದರಿಂದ ಇದು ಅನನ್ಯಥಾಸಿದ್ಧವಾಗಿರುತ್ತದೆಯಾಗಿ ಇದೇ ಪ್ರಬಲ– ಎಂದು **ಸಿದ್ಧಾಂತ.** ಹಾಗೆಯೇ ಇಲ್ಲಿಯೂ ಮೋಕ್ಷಶಾಸ್ತ್ರವು ನಿರವಕಾಶವಾಗಿರುವದರಿಂದ –ತನ್ನ ಅರ್ಥವನ್ನು ಹೇಳುವದಕ್ಕೆ ಹಿಂದಿನ ಕರ್ಮಶಾಸ್ತ್ರವನ್ನು ಬಾಧಿಸಿಯೇ ಹುಟ್ಟಬೇಕಾಗುವದರಿಂದ– ಪ್ರಬಲ ಎಂಬುದು ಅಪಚ್ಛೇದನ್ಯಾಯದ ದೃಷ್ಟಾಂತದಿಂದ ತಿಳಿಯಬೇಕಾದದ್ದು **(ತೆ.ಪ್ರ.).** ಈ ನ್ಯಾಯವನ್ನು **ಮಂಡನಮಿಶ್ರ, ವಾಚಸ್ಪತಿ ಮಿಶ್ರ** (ಅಧ್ಯಾಸಭಾಷ್ಯವ್ಯಾಖ್ಯಾನದಲ್ಲಿ)– ಇಬ್ಬರೂ ಉಪಯೋಗಿಸಿಕೊಂಡಿರುತ್ತಾರೆ. ನಿತ್ಯವೂ ಸಂಪ್ರದಾಯಾಗತವೂ ಆದ ವೇದದಲ್ಲಿ ಯಾವ ದೋಷವೂ ಇರುವದಿಲ್ಲ. ಆದರೆ ಪ್ರತ್ಯಕ್ಷವು ವ್ಯಭಿಚರಿತವಾಗುವದೂ ಬಾಧಿತವಾಗುವದೂ–ಕಂಡುಬಂದಿರುವದರಿಂದ ಅದರಲ್ಲಿ ದೋಷವಿರಬಹುದು– ಎಂದು ಸಂಭಾವಿತವಾಗಿದೆ ಎಂಬ ಹೆಚ್ಚಿಗೆಯ ಯುಕ್ತಿಯನ್ನು ಮಂಡನಮಿಶ್ರನು ಹೇಳಿರುತ್ತಾನೆ. ವಾಚಸ್ಪತಿ ಮಿಶ್ರನೂ ಇದನ್ನು ಅಂಗೀಕರಿಸಿರುತ್ತಾನೆ. ಇದನ್ನು ರಾಮಾನುಜರು (ಪು. ೪೭ರಲ್ಲಿ) ಅನುವಾದಮಾಡಿಕೊಂಡಿರುತ್ತಾರೆ. ಶಾಂಕರಭಾಷ್ಯದಲ್ಲಿ ಈ ನ್ಯಾಯದ ಉದಾಹರಣೆಯಿಲ್ಲ. ಮೋಕ್ಷಶಾಸ್ತ್ರವು ಅದ್ವೈತವನ್ನು ಅನುಭವಕ್ಕೇ ತಂದುಕೊಡುವದರಿಂದ ಅದರಮೇಲೆ ಯಾವ ಶಂಕೆಯೂ ಬರುವದಿಲ್ಲವೆಂದು ಶಂಕರಾಚಾರ್ಯರ ಅಭಿಪ್ರಾಯ.

**ಪುಟ ೪೮, ಆತ್ಮೋಪನಿಷತ್ತು**– ಇದು ನಿರ್ಣಯಸಾಗರಮುದ್ರಣಾಲಯದಲ್ಲಿ ಅಚ್ಚಾಗಿರುವ ಅಷ್ಟೋತ್ತರಶತೋಪನಿಷತ್ತುಗಳೊಳಗೆ ಎಪ್ಪತ್ತನೆಯದು. ಈ ಉಪನಿಷತ್ತಿನಲ್ಲಿ 'ನಿರ್ಗುಣಃ', 'ಸಾಕ್ಷಿಭೂತಃ'–ಎಂಬ ವಿಶೇಷಣಗಳಿವೆ. ಆದರೆ ಇದು ಅದ್ವೈತಕ್ಕನುಗುಣವಾಗಿದೆಯೇ ಹೊರತು ವಿಶಿಷ್ಟಾದ್ವೈತಕ್ಕೆ ಹೊಂದುಗಡೆಯಾಗಿಲ್ಲ. ಆದ್ದರಿಂದ ಮ|| ಪಾಠದಲ್ಲಿ ಈ ಉಪನಿಷತ್ತನ್ನು ಪರಾಮರ್ಶಿಸಿರುವದು ಸರಿಯೆಂತ ಕಾಣುವದಿಲ್ಲ. ಶ್ರೀಭಾಷ್ಯಕಾರರ ಹೃದಯದಲ್ಲಿ ಯಾವ ಶ್ರುತಿಯಿದ್ದಿತೋ ಅದನ್ನು ಇನ್ನೂ ಹುಡುಕಬೇಕಾದದ್ದಿದೆ.

**ಪುಟ ೫೭, ಭೇದವಿಮರ್ಶೆ**– ಭೇದವು ವಸ್ತುವಿನ ಸ್ವರೂಪವೊ, ಧರ್ಮವೊ? –ಎಂಬೀ ಬಗೆಯ ವಿಕಲ್ಪಗಳನ್ನು ತೆಗೆದು ತರ್ಕದ ದೋಷಗಳನ್ನು ಹೇಳುವ ಪ್ರಕಾರವು ಬ್ರಹ್ಮಸಿದ್ಧಿ, **ಚಿತ್ಸುಖಾಚಾರ್ಯರ** ಪ್ರಕರಣ– ಮುಂತಾದ ಅನುಶಾಂಕರಗ್ರಂಥಗಳಲ್ಲಿ ಕಾಣಬರುತ್ತದೆ. ಭೇದವು ಅವಿದ್ಯಾವಸ್ಥೆಯಲ್ಲಿ ಮಾತ್ರ

ಕಾಣಬರುವದೆಂದೂ ಬ್ರಹ್ಮವಿದ್ಯೆಯುಂಟಾದಾಗ ಅದು ಅದ್ವೈತದ **ಅನುಭವವೇ** ಆಗುವದರಿಂದ ಅಲ್ಲಿ ಯಾವ ಶಂಕೆಗೂ ಅವಕಾಶವಿಲ್ಲವೆಂದೂ ಶಂಕರಾಚಾರ್ಯರು ಹೇಳುತ್ತಾರೆ. ಗೌಡಪಾದರ **ವೈತಥ್ಯ, ಅದ್ವೈತಪ್ರಕರಣ**- ಇವುಗಳನ್ನೂ ನೋಡಿರಿ.

**ಪುಟ ೬೧, ಅನುಭೂತಿ**- ಇಷ್ಟಸಿದ್ಧಿಕಾರರಾದ ವಿಮುಕ್ತಾತ್ಮರು ಬರೆದಿರುವ ಇಷ್ಟಸಿದ್ಧಿಯಲ್ಲಿರುವದರ ವಿಮರ್ಶೆಯಿದು. ವಿಮುಕ್ತಾತ್ಮರು–

**ಯೋಽನುಭೂತಿರಜಾಮೇಯೋಽನನ್ತಾತ್ಮಾನನ್ದವಿಗ್ರಹಾ ।**
**ಮಹದಾದಿಜಗನ್ಮಾಯಾಚಿತ್ರಭಿತ್ತಿಂ ನಮಾಮಿ ತಾಮ್ ॥**

ಎಂಬ ಮಂಗಳಶ್ಲೋಕದಲ್ಲಿ ತಮ್ಮ ಗ್ರಂಥದ ಸಾರವನ್ನು ಸಂಗ್ರಹಿಸಿರುತ್ತಾರೆ. ಅನುಭೂತಿಯೇ ಆತ್ಮ ಎಂಬ ವಾದವನ್ನು ರಾಮಾನುಜರ ಪರಮಗುರುಗಳಾದ **ಯಾಮುನಾಚಾರ್ಯರೂ** ತಮ್ಮ **ಆತ್ಮಸಿದ್ಧಿಯಲ್ಲಿ** ಖಂಡಿಸಿರುತ್ತಾರೆ. ಅವರ ಯುಕ್ತಿಗಳನ್ನೇ ಇಲ್ಲಿ ಬಹಳಮಟ್ಟಿಗೆ ರಾಮಾನುಜಾಚಾರ್ಯರು ಅನುಸರಿಸಿರುತ್ತಾರೆ.

**ಪುಟ ೬೭, ಸಾಕ್ಷಿ**- ಶ್ರೀಶಂಕರಾಚಾರ್ಯರು **ಅಧ್ಯಾಸಭಾಷ್ಯದಲ್ಲಿ** ಅಹಂಪ್ರತ್ಯಯಗಮ್ಯನಾದ ಆತ್ಮನಿಗಿಂತಲೂ ವ್ಯತಿರಿಕ್ತನಾಗಿ ಅವನನ್ನೂ ಅವನ ಎಲ್ಲಾ ವೃತ್ತಿಗಳನ್ನೂ ತನ್ನ ಕೂಟಸ್ಥಚೈತನ್ಯಸ್ವರೂಪದಿಂದ ಬೆಳಗುತ್ತಿರುವವನೇ ನಿಜವಾದ ಸಾಕ್ಷಿಯಾದ ಆತ್ಮನು- ಎಂದು ಪ್ರತಿಪಾದಿಸಿ ಮುಂದೆ ಸಮನ್ವಯಾಧಿಕರಣಭಾಷ್ಯದಲ್ಲಿಯೂ ಇದನ್ನು ಪ್ರತಿಪಾದಿಸಿರುತ್ತಾರೆ. ಈ ಅಧ್ಯಾಸಭಾಷ್ಯವನ್ನು ಹೆಚ್ಚಾಗಿ ಶ್ರೀಭಾಷ್ಯದಲ್ಲಿ ಪರಾಮರ್ಶಿಸಿಲ್ಲ ; ಶಂಕರಾನುಯಾಯಿಗಳಾದ ವ್ಯಾಖ್ಯಾನಕಾರರೂ ಸಾಕ್ಷಿತತ್ತ್ವಕ್ಕೆ ಅಷ್ಟಾಗಿ ಪ್ರಾಧಾನ್ಯವನ್ನು ಕೊಟ್ಟಿರುವದಿಲ್ಲ. **ಮಹಾಸಿದ್ಧಾಂತದಲ್ಲಿ** ಈ ವಾದದ ಪರಾಮರ್ಶವು ಬಂದಾಗ ಮತ್ತೆ ಈ ವಿಷಯವನ್ನು ಚರ್ಚಿಸಲಾಗುವದು.

**ಪುಟ ೬೯**- ನಿದ್ರೆಯಿಂದ ಎಚ್ಚತ್ತವನ ನೆನಪು ಎಂಥದ್ದು ಎಂಬ ಬಗ್ಗೆ ಶಾಂಕರಭಾಷ್ಯಪ್ರಸ್ಥಾನಕ್ಕೂ ವ್ಯಾಖ್ಯಾನಪ್ರಸ್ಥಾನಗಳಿಗೂ ಅಭಿಪ್ರಾಯಭೇದವುಂಟು. ಇದನ್ನು **ಮಹಾಸಿದ್ಧಾಂತದಲ್ಲಿ** ಮತ್ತೆ ವಿಚಾರಕ್ಕೆ ತೆಗೆದುಕೊಳ್ಳಲಾಗುವದು.

**ಪುಟ ೭೦, ಪ್ರಮಾಣತರ್ಕಗಳು**- ಪ್ರಮಾಣಗಳಿಂದ ಸಿದ್ಧವಾದದ್ದೇ ಪರಮಾರ್ಥವೆಂಬ ಮತವು ವೇದಾಂತಿಗಳಲ್ಲದ ದರ್ಶನಕಾರರಿಗೂ ಒಪ್ಪಾಗಿರುತ್ತದೆ. ಪ್ರಮಾಣಗಳು ಎಷ್ಟು ?- ಎಂಬ ವಿಷಯಕ್ಕೆ ಮತಭೇದವಿದೆ. ಚಾರ್ವಾಕರಿಗೆ ಪ್ರತ್ಯಕ್ಷ, ಬೌದ್ಧರಿಗೆ ಪ್ರತ್ಯಕ್ಷಾನುಮಾನಗಳು, ಸಾಂಖ್ಯರಿಗೆ ಪ್ರತ್ಯಕ್ಷಾನುಮಾನಾಪ್ತವಾಕ್ಯಗಳು, ನೈಯಾಯಿಕರಿಗೆ ಪ್ರತ್ಯಕ್ಷಾನುಮಾನೋಪಮಾನಶಬ್ದಗಳು

ಮೀಮಾಂಸಕರಿಗೆ ಈ ನಾಲ್ಕರ ಜೊತೆಗೆ ಅರ್ಥಾಪತ್ತಿ, ಅನುಪಲಬ್ಧಿ- ಇಷ್ಟೂ ಪ್ರಮಾಣ. **ತರ್ಕವು,** ಶ್ರುತ್ಯನುಗೃಹೀತತರ್ಕ, ಶ್ರುತ್ಯನುಗುಣತರ್ಕ, ಕೇವಲ ತರ್ಕ- ಎಂದು ಮೂರು ವಿಧ. ತರ್ಕದಿಂದ ಶುದ್ಧವಾದ **ಪ್ರಮಾಣದಿಂದ ಸಿದ್ಧವಾದದ್ದನ್ನೇ ನಾವು ಹೇಳುತ್ತೇವೆ- ಎಂದು ರಾಮಾನುಜರು ಪ್ರತಿಜ್ಞೆ ಮಾಡಿರುವದನ್ನು ಲಕ್ಷಿಸಬೇಕು.**

**ಪುಟ ೭೩, ಶಬ್ದಪ್ರಮಾಣ-** ಶಬ್ದವೆಂದರೆ ಪದ, ಪದಸಮೂಹವಾದ ವಾಕ್ಯ; ಪದದಲ್ಲಿ ಪ್ರಕೃತಿ, ಪ್ರತ್ಯಯ- ಎಂಬ ಎರಡು ಭಾಗಗಳಿವೆ. ಇವುಗಳೆಲ್ಲ ತಮ್ಮತಮ್ಮ ವಿಷಯವಾದ ವಸ್ತುವಿನ ಒಂದೊಂದು ವಿಶೇಷವನ್ನೇ ಹೇಳುತ್ತವೆ. ಆದ್ದರಿಂದ ನಿರ್ವಿಶೇಷವಸ್ತುವನ್ನು ಶಬ್ದವು ಹೇಳಲಾರದು- ಎಂಬುದು ಇಲ್ಲಿರುವ ಭಾಷ್ಯದ ಸಾರ. ವೇದ್ಯ, ವೇದಿತೃ, ವೇದನ- ತಿಳಿಯತಕ್ಕದ್ದು, ತಿಳಿಯುವವನು, ತಿಳಿವು-ಎಂಬೀ ಮೂರೂ ಆತ್ಮನಲ್ಲಿ ಅಧ್ಯಸ್ತವಾಗಿವೆಯೆಂದೂ ಇವುಗಳನ್ನು ಕಲ್ಪಿಸುವದಕ್ಕೆ ಕಾರಣವಾದ ಅವಿದ್ಯೆಯನ್ನು ವೇದಾಂತವಾಕ್ಯಜನ್ಯಜ್ಞಾನವು ಕಳೆಯುವದರಿಂದಲೇ ವೇದಾಂತವಾಕ್ಯರೂಪವಾದ ಶಬ್ದವು ಬ್ರಹ್ಮಕ್ಕೆ ಪ್ರಮಾಣವೆಂದೂ ಶಂಕರಾಚಾರ್ಯರು ಸೂತ್ರಭಾಷ್ಯದಲ್ಲಿ ಹೇಳಿರುವ ಪ್ರಕಾರದ ಶಬ್ದ ಪ್ರಾಮಾಣ್ಯವನ್ನು ಇಲ್ಲಿ ವಿಚಾರಕ್ಕೆ ತೆಗೆದುಕೊಂಡಿರುವದಿಲ್ಲ.

**ಪುಟ ೭೫, ನಿರ್ವಿಕಲ್ಪಕ, ಸವಿಕಲ್ಪಕ-** ಪ್ರಮೇಯವಸ್ತುಗಳಾದ ಎತ್ತು ಮುಂತಾದವುಗಳನ್ನು ಸಾಮಾನ್ಯವಾಗಿ ನೋಡುವದು ನಿರ್ವಿಕಲ್ಪಕ, ಒಳಹೊಕ್ಕು ಅದರ ವಿಶೇಷಗಳನ್ನು ಸ್ಫುಟವಾಗಿ ನೋಡುವದು ಸವಿಕಲ್ಪ- ಎಂದು ಇಟ್ಟುಕೊಂಡು ಇಲ್ಲಿ ಪ್ರತ್ಯಕ್ಷವನ್ನು ನಿರ್ವಿಕಲ್ಪ, ಸವಿಕಲ್ಪ-ಎಂದು ವಿಂಗಡಿಸಿದೆ. ಪ್ರತ್ಯಕ್ಷವೆಂದರೆ 'ಇದು ಇಂಥದ್ದು' ಎಂದು ಕಾಣುವ ಜ್ಞಾನವಾದ್ದರಿಂದ ಇದು ಯುಕ್ತವೂ ಆಗಿರುತ್ತದೆ. ಅನುಭವದ ವಿಷಯದಲ್ಲಿ ಆಗುವ ಜ್ಞಾನವು ನಿರ್ವಿಕಲ್ಪವಲ್ಲವೆ ?- ಎಂಬುದನ್ನು ವಿಚಾರಿಸಬೇಕಾಗಿರುತ್ತದೆ.

**ಪುಟ ೯೨, ನಿದ್ರೆಯ ಪರಾಮರ್ಶ, ನಿದ್ರೆಯಲ್ಲಿ ಯಾವಯಾವ ಪದಾರ್ಥಗಳಿವೆ ?-** ನಿದ್ರೆಯ ವಿಷಯಕ್ಕೆ ಎಚ್ಚರದಲ್ಲಾಗುವ ನಮ್ಮ ಅರಿವು **ಸ್ಮೃತಿಯೆ ?-** ಎಂಬುದು ವಾದಗ್ರಸ್ತವಿಷಯ. ಆತ್ಮನು ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿ ಆಧೇಯನಾಗಿರುವದಿಲ್ಲವಾದ್ದರಿಂದ 'ನಿದ್ರೆಯಲ್ಲಿ ನನ್ನ ಸ್ವರೂಪವು ಹೀಗಿತ್ತು'-ಎಂದಾಗುವ ಎಚ್ಚರಜ್ಞಾನವು ಸ್ಮೃತಿಯಲ್ಲ, ಅದು ಬರಿಯ ವಿಕಲ್ಪವು -ಎಂದು **ಸುರೇಶ್ವರಾಚಾರ್ಯರು** ಹೇಳುತ್ತಾರೆ. 'ಸುಷುಪ್ತಿಯಲ್ಲಿ ನಾನು ಏನನ್ನೂ ಅರಿಯಲಿಲ್ಲ' ಎಂದೇ ಸ್ಮೃತಿಯಾಗುವದರಿಂದ ಅಲ್ಲಿ ಅಜ್ಞಾನದ ಅನುಭವವಿದೆ ಎಂದು **ಶಾಂಕರಭಾಷ್ಯದ ವ್ಯಾಖ್ಯಾನಪ್ರಸ್ಥಾನ**ಗಳಲ್ಲಿ ವಾದಿಸಿರುತ್ತದೆ. ಈ ಸ್ಥಿತಿಯಲ್ಲಿ ಆತ್ಮನು ಜ್ಞಾತೃವಾಗಿಯೇ 'ನಾನು' ಎಂಬಾಕಾರದಲ್ಲಿಯೇ

ಇರುತ್ತಾನೆ ಎಂದು **ರಾಮಾನುಜರು** ಅಭಿಪ್ರಾಯಪಡುತ್ತಾರೆ. ಮುಂದೆ ೧೨೧-೧೨೨ನೆಯ ಪುಟಗಳನ್ನು ನೋಡಿ. 'ಈವರೆಗೆ ನಾನು ಏನನ್ನೂ ಅರಿಯಲಿಲ್ಲ' ಎಂದು ಸ್ಮೃತಿಯಾಗುವದರಿಂದ ಅಲ್ಲಿ ಜೀವ, ಕಾಲ, ಅಜ್ಞಾನ- ಈ ಮೂರೂ ಇರುತ್ತವೆ ಎಂದು ಮಧ್ವಾಚಾರ್ಯರು ಹೇಳುತ್ತಾರೆ.

**ಪುಟ ೯೩, ಅಭಾವ**- ವಸ್ತುವಿಗೆ **ಪ್ರಾಗಭಾವ** (ಹುಟ್ಟುವ ಮೊದಲು ಇಲ್ಲದಿರುವಿಕೆ), **ಪ್ರಧ್ವಂಸಾಭಾವ** (ಹಾಳಾದಮೇಲೆ ಇಲ್ಲದಿರುವಿಕೆ), **ಅನ್ಯೋನ್ಯಾಭಾವ** (ಒಂದು ಮತ್ತೊಂದಾಗಿಲ್ಲದಿರುವಿಕೆ), **ಅತ್ಯಂತಾಭಾವ** (ಕೀರ ಇಲ್ಲದ ಇರುವಿಕೆ)- ಎಂಬ ನಾಲ್ಕು ಅಭಾವಗಳನ್ನು ತಾರ್ಕಿಕರು ಒಪ್ಪಿರುತ್ತಾರೆ. ಈ ಅಭಾವಗಳಿಗೆ ಯಾವ ಭೇದವನ್ನೂ ಯಾವ ತಾರ್ಕಿಕನೂ ತೋರಿಸುವದಕ್ಕಾಗುವದಿಲ್ಲವಾದ್ದರಿಂದ ಅಭಾವಗಳು ಅನೇಕವೆಂದೂ ಅವುಗಳಿಗೆ ಉತ್ಪತ್ತ್ಯಾದಿಗಳುಂಟೆಂದೂ ಹೇಳುವದು ಸಮಂಜಸವಲ್ಲ- ಎಂದು ಶಂಕರಾಚಾರ್ಯರ ಗೀತಾಭಾಷ್ಯದಲ್ಲಿದೆ. (ಗೀ. ಭಾ. ೧೮-೪೮)

**ಪುಟ ೯೩, ಅನಾದ್ಯವಿದ್ಯೆ**- "ನಾಮರೂಪ, ಅವ್ಯಾಕೃತ, ಅವಿದ್ಯಾ. ಮಾಯಾ, ಪ್ರಕೃತಿ, ಅಗ್ರಹಣ, ಅವ್ಯಕ್ತ, ತಮಸ್ಸು, ಕಾರಣ, ಲಯ, ಶಕ್ತಿ, ಮಹಾಸುಪ್ತಿ, ನಿದ್ರಾ, ಅಕ್ಷರ, ಆಕಾಶ- ಎಂಬ ಶ್ರುತಿಸ್ಮೃತಿಗಳಲ್ಲಿ ಅಲ್ಲಲ್ಲಿ ಹೇಳಿರುವದಾಗಿಯೂ ಜೀವನಿಗೆ ಇದ್ದುಕೊಂಡೇಇರುವ ಬ್ರಹ್ಮಸ್ವರೂಪತ್ವವು ತೋರದಂತೆ ಅಡ್ಡಿಮಾಡಿ ಜೀವತ್ವವನ್ನುಂಟುಮಾಡಿರುವ, ವಿದ್ಯಾಕರ್ಮಪೂರ್ವಪ್ರಜ್ಞಾಸಂಸ್ಕಾರಚಿತ್ರಕ್ಕೆ ಭಿತ್ತಿಯಾಗಿರುವ, ಸುಷುಪ್ತಿಯಲ್ಲಿ ಪ್ರಕಾಶವನ್ನು ಮರೆಮಾಡಿ ವಿಕ್ಷೇಪದ ಸಂಸ್ಕಾರಮಾತ್ರರೂಪದಿಂದಿರುವದು, ಅನಾದ್ಯವಿದ್ಯೆ" ಎಂದು **ಪಂಚಪಾದಿಕೆ,** ಪುಟ ೨೦. ಇದರ ವಿವರವು ಇಷ್ಟಸಿದ್ಧಿ, ವಿವರಣ- ಮುಂತಾದ ಗ್ರಂಥಗಳಲ್ಲಿದೆ.

**ಪುಟ ೯೬, ನಿಷೇಧರೂಪವಾಗಿರುವ ವಿಶೇಷಣಗಳು**- ಸಂವಿತ್ತಿನಲ್ಲಿ ಯಾವದನ್ನು ಅಲ್ಲಗಳೆಯುತ್ತೇವೆಯೋ ಅದರ ಅಭಾವ, ಅದಕ್ಕಿಂತ ಅನ್ಯವಾದದ್ದು, ಅಥವಾ ಅದಕ್ಕೆ ವಿರೋಧವಾದದ್ದು- ಎಂಬ ಯಾವದಾದರೊಂದರ್ಥವನ್ನು ಕಲ್ಪಿಸಲೇಬೇಕೆಂಬ ನಿಯಮವನ್ನು ಇಲ್ಲಿ ಆಗ್ರಹದಿಂದ ಇಟ್ಟುಕೊಂಡಿರುತ್ತಾರೆ. ಸುಷುಪ್ತಿ, ಸಮಾಧಿ- ಮುಂತಾದ ಅವಸ್ಥೆಗಳಲ್ಲಿ ಪ್ರಮೇಯಗಳು ಯಾವವೂ ಇಲ್ಲದ್ದರಿಂದ ಆಯಾ ದೃಶ್ಯದ ಅಭಾವಾದಿಗಳಲ್ಲಿ ಒಂದನ್ನೂ ಕಲ್ಪಿಸುವದಕ್ಕೆ ಆಗುವದಿಲ್ಲವೆಂದೇ ಅದ್ವೈತಿಗಳು ಹೇಳುತ್ತಾರೆ. ಇಲ್ಲಿ ಅನುಭವಾನುಸಾರವಾಗಿ ನಿಜವನ್ನು ನಿರ್ಣಯಿಸಬೇಕಾಗಿರುವದರಿಂದ ಬರಿಯ ಶಬ್ದಸಂದರ್ಭವನ್ನಾಗಲಿ ತರ್ಕದ ಆಧಾರವನ್ನಾಗಲಿ ಹಿಡಿದು ನಿರ್ಣಯಿಸುವದು ಕಷ್ಟ.

**ಪುಟ ೯೭, ಅನುಭೂತಿ**– ಎಂದರೆ ಒಬ್ಬನಿಗೆ ಒಂದು ಹೊರಗಿನ ವಿಷಯದಲ್ಲಿ ಆಗುವ ಜ್ಞಾನ ಎಂದೇ ಶ್ರೀಭಾಷ್ಯಕಾರರ ಅಭಿಪ್ರಾಯ. ಇದನ್ನು ಅದ್ವೈತಿಗಳು ವೃತ್ತಿಜ್ಞಾನವೆಂದು ಕರೆಯುತ್ತಾರೆ. ಆದರೆ 'ನಾನು ಇದನ್ನು ಅರಿಯುತ್ತಿದೇನೆ' ಎಂಬುದು ಯಾವ ಕೂಟಸ್ಥವಾದ ಚೈತನ್ಯಕ್ಕೆ ತೋರುವದೋ ಅದೇ ಅನುಭವ, ಅದೇ ಆತ್ಮನು ಎಂಬುದು– ಅದ್ವೈತಿಗಳ ಮತ. ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥೆಗಳು ಈ ಅನುಭೂತಿಯ ಬೆಳಕಿನಿಂದಲೇ ತೋರುತ್ತಿರುವವು ಎಂದು ಶಂಕರಾಚಾರ್ಯರೇ ಮುಂತಾದವರು ಹೇಳುತ್ತಿದಾರೆ. ಇಲ್ಲಿ ಅನುಭವವೇ ಮುಖ್ಯಪ್ರಮಾಣವಾದ್ದರಿಂದ ತರ್ಕದಿಂದ ಯಾರೂ ಯಾರನ್ನೂ ಖಂಡಿಸುವಂತಿಲ್ಲ. ಜ್ಞಾತೃ, ಜ್ಞೇಯ, ಜ್ಞಾನ– ಇವುಗಳಲ್ಲದೆ ಇವು ಮೂರಕ್ಕೂ ಪ್ರಕಾಶಕವಾಗಿರುವ ಅನುಭವವು ಬೇರೆ ಇದೆಯೆ ?– ಎಂಬುದೇ ಇಲ್ಲಿ ಗೊತ್ತುಪಡಿಸಬೇಕಾಗಿರುವ ವಿಷಯ.

**ಪುಟ ೯೮,** 'ಜ್ಞಾತೃವಾದ ನನಗೆ ಜ್ಞಾನವು ನಷ್ಟವಾಯಿತು' ಎಂಬ ಜ್ಞಾನದಲ್ಲಿ ಕರ್ತೃವು ಸ್ಥಿರವೆಂಬ ಪ್ರತ್ಯಯವಿದೆ ಎಂಬುದಕ್ಕೆ ಸಂಶಯವಿಲ್ಲ. ಜಾಗ್ರತ್ಸ್ವಪ್ನಗಳಲ್ಲಿ ಬೇರೆಬೇರೆಯಾಗಿ ತೋರುವ ಕರ್ತೃತ್ವ, ಕರ್ತೃತ್ವಾಭಾಸ– ಇವುಗಳನ್ನು ಏತರ ಆಧಾರದಿಂದ ನಾವು ಗೊತ್ತುಪಡಿಸಿಕೊಳ್ಳುತ್ತೇವೆ ?– ಎಂಬುದನ್ನು ಇಲ್ಲಿ ಆಲೋಚಿಸಿರುವದಿಲ್ಲ.

**ಪುಟ ೧೦೦, 'ಅಹಮರ್ಥವು ಯುಷ್ಮದರ್ಥ'**– ಎಂಬುದು ಪಂಚಪಾದಿಕೆಯಲ್ಲಿದೆ. ಅಹಂಪ್ರತ್ಯಯಗಮ್ಯನಾದ ಲೋಕಪ್ರಸಿದ್ಧನಾದ ಆತ್ಮನಿಗಿಂತ ವಿಲಕ್ಷಣನಾದ ಸಾಕ್ಷಿಯೇ ಆತ್ಮನೆಂಬುದು ಶಾಂಕರಸಿದ್ಧಾಂತವೇ ಸರಿ. ಆದರೆ ಅಹಂಪ್ರತ್ಯಯಗಮ್ಯನಾದ ಆತ್ಮನು ಸಾಕ್ಷಿ, ಅಹಂಕಾರ– ಇವುಗಳ ಅನ್ಯೋನ್ಯಾಧ್ಯಾಸದಿಂದ ತೋರುವ ಆತ್ಮನೆಂದೂ ಕರ್ತೃತ್ವವು ನಿಜವಾಗಿ ಆತ್ಮನಿಗೂ ಇಲ್ಲ, ಅಂತಃಕರಣಕ್ಕೂ ಇಲ್ಲ; ಅಹಂಕಾರದಲ್ಲಿ ಕರ್ತೃತ್ವವನ್ನು ಅಧ್ಯಾರೋಪಿಸುವದು ಆತ್ಮನಲ್ಲಿ ಅದು ನಿಜವಾಗಿಲ್ಲ– ಎಂದು ತೋರಿಸುವದಕ್ಕೇ ಆಗಿದೆ–ಎಂದು ಶಂಕರಾಚಾರ್ಯರು (ಸೂ. ಭಾ. ೧–೩–೧೨) ಪ್ರತಿಪಾದಿಸಿರುತ್ತಾರೆ. ಇಲ್ಲಿ ಶ್ರೀಭಾಷ್ಯಕಾರರು ಪ್ರಮಾಣಪ್ರಮೇಯವ್ಯವಹಾರಕ್ಷೇತ್ರವನ್ನೇ ಪರಮಾರ್ಥವೆಂದು ಹಿಡಿದು ಯಾಮುನಾಚಾರ್ಯರು ಹೇಳಿರುವ ಯುಕ್ತಿಗಳಿಂದಲೇ ಈ ಪಕ್ಷವನ್ನು ನಿರಾಕರಿಸಿರುತ್ತಾರೆ.

**ಪುಟ ೧೦೪, ೧೦೫, ದೀಪದೃಷ್ಟಾಂತ**– ಇಲ್ಲಿ ದೀಪ, ಅದರ ಬೆಳಕು– ಇವೆರಡೂ ದ್ರವ್ಯವೇ. ಬಿಳುಪೇ ಮುಂತಾದವುಗಳಂತೆ ದೀಪದ ಗುಣವಲ್ಲದೆ ಇದ್ದರೂ, ದೀಪವನ್ನೇ ಆಶ್ರಯಿಸಿಕೊಂಡು ಅದಕ್ಕೆ ಅಧೀನವಾಗಿರುವದರಿಂದ ಅದನ್ನು 'ದೀಪದ ಗುಣ' ಎಂದು ವ್ಯವಹರಿಸುತ್ತಾರೆ ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಹೀಗಿದ್ದರೂ

ಆಶ್ರಯವಾದ ದೀಪದ ಅವಯವಗಳೇ ಸುತ್ತಲೂ ಹರಡಿಕೊಂಡು 'ಬೆಳಕು' ಎಂಬ ವ್ಯವಹಾರಕ್ಕೆ ವಿಷಯವಾಗುವವೆಂತ ಹೇಳುವದಕ್ಕಿಲ್ಲ, ಏಕೆಂದರೆ ಹಾಗಿದ್ದರೆ ರತ್ನ, ಸೂರ್ಯ– ಮುಂತಾದವುಗಳು 'ನಾಶವಾಗಬೇಕಾದೀತು' ಎಂಬ ಅನಿಷ್ಟಪ್ರಸಂಗ ರೂಪವಾದ ತರ್ಕವನ್ನು ಇಲ್ಲಿ ಒಡ್ಡಿದೆ. ಈ ಯುಕ್ತಿಯು ಸರಿಯಾಗಿರುವಂತೆ ತೋರುವದಿಲ್ಲ; ಏಕೆಂದರೆ ಸೂರ್ಯಾದಿಗಳೂ ಕಾಲಾನುಕಾಲಕ್ಕೆ ತಮ್ಮ ಬಿಸಿಯನ್ನು ಕಳೆದುಕೊಂಡು ನಾಶವಾಗಬಹುದೆಂದು ಭೌತಿಕಶಾಸ್ತ್ರಜ್ಞರು ಹೇಳುತ್ತಿದಾರೆ. ತೇಜೋದ್ರವ್ಯವು ಒಂದು ಕಡೆಯಲ್ಲಿದ್ದು ತನ್ನ ಸುತ್ತಲೂ ತಾನೇ ಹರಡಿ ಕೊಂಡಿದ್ದರೂ ಸಾವಯವವಲ್ಲ; ಪ್ರಭೆಯೆಂಬುದು ದೀಪಕ್ಕಿಂತ ಬೇರೆಯಾಗಿರುವ ತೇಜೋದ್ರವ್ಯ– ಎಂದು ಕಲ್ಪಿಸುವದು ಎಷ್ಟರಮಟ್ಟಿಗೆ ಯುಕ್ತವೆಂಬುದನ್ನು ತರ್ಕಕುಶಲರಾದವರು ನಿರ್ಣಯಿಸಬೇಕಾಗಿದೆ. ಈ ದೃಷ್ಟಾಂತದಿಂದ ಆತ್ಮನು ಜ್ಞಾತೃವೂ ಜ್ಞಾನಗುಣವುಳ್ಳವನೂ ಆಗಿರುವನೆಂದು ಇಲ್ಲಿ ವಾದಿಸಿರುವದೂ ವಿಚಾರಣೀಯವಾಗಿದೆ.

**ಪುಟ ೧೧೭, ಪ್ರಕಾಶ–** ಅನುಭವವು ಅಜಡವಾಗಿರುವದರಿಂದ ಅದೇ ಆತ್ಮನು– ಎಂಬ ಪೂರ್ವಪಕ್ಷವನ್ನು ನಿರಾಕರಿಸುವದಕ್ಕಾಗಿ ಅಜಡತ್ವವೆಂದರೇನು?– ಎಂದು ಕೇಳಿ ಸ್ವಸತ್ತಾಪ್ರಯುಕ್ತಪ್ರಕಾಶತ್ವ, ಅವ್ಯಭಿಚರಿತಪ್ರಕಾಶಸತ್ತಾಕತ್ವ– ಎಂದು ಎರಡು ವಿಕಲ್ಪಗಳನ್ನು ಮಾಡಿದೆ. ಮೊದಲನೆಯ ಪಕ್ಷದಲ್ಲಿ ದೀಪಾದಿಗಳೂ ಹಾಗೆಯೇ ಇರುವದರಿಂದ ಲಕ್ಷಣವು ಹೊಂದಲಿಲ್ಲ– ಎಂದಿದೆ. ಇಲ್ಲಿ ಸಂವಿತ್ತು ಪ್ರಕಾಶರೂಪವಾಗಿದೆ– ಎಂದರೆ ಅದು ಅರಿವಿನ ಸ್ವರೂಪವೆಂದರ್ಥ; ದೀಪವು ಪ್ರಕಾಶರೂಪವಾಗಿದೆ ಎಂದರೆ ಅದು ಬೆಳಕಿನ ರೂಪವಾಗಿದೆ ಎಂದರ್ಥ. ಸಂವಿತ್ತು ಯಾವ ಅರ್ಥದಲ್ಲಿ ಪ್ರಕಾಶವೋ ಆ ಅರ್ಥದಲ್ಲಿ ದೀಪವು ಪ್ರಕಾಶವಲ್ಲ– ಎಂಬು ದನ್ನು ಮನದಂದರೆ ಹೇತುವು ಸರಿಯಲ್ಲವೆಂದಾಗುತ್ತದೆ.

**ಪುಟ ೧೧೦, ಜ್ಞಾತೃತ್ವ–** ಇಲ್ಲಿ ಜ್ಞಾತೃತ್ವವು ಚೇತನನಾದ ಆತ್ಮನಿಗೆ ಸ್ವಭಾವವೆಂದೂ ಅಹಂಕಾರವು ದೇಹದಂತೆಯೇ ಅಚೇತನವೂ ಪ್ರಕೃತಿಪರಿಣಾಮ ವೂ ದೃಶ್ಯವೂ ಪರಾಕ್ಸ್ವಭಾವವುಳ್ಳದ್ದೂ ಆಗಿದೆ– ಎಂದೂ ವಿಂಗಡಿಸಿರುತ್ತದೆ. ಆತ್ಮನು ಅಂತಃಕರಣದಿಂದ ಇನ್ನೊಂದನ್ನು ಅರಿಯುತ್ತಾನೆ ಎಂಬರ್ಥದಲ್ಲಿ ಜ್ಞಾತೃವೇ ಸರಿ. ಆದರೆ ಆತ್ಮನು ಅಂತಃಕರಣವನ್ನು ಏತರಿಂದ ಅರಿಯುತ್ತಾನೆ? ಆ ವಿಷಯಕ್ಕೆ ಅವನಿಗೆ ಜ್ಞಾತೃತ್ವವಿದೆಯೆ ? ಇದ್ದರೆ ಜ್ಞಾನಕರ್ತೃತ್ವವೆಂಬ ವಿಕಾರವು ಬರುವದಿಲ್ಲವೆ ?–ಎಂಬುದನ್ನು ಚರ್ಚೆಮಾಡಿರುವಂತೆ ಕಾಣುವದಿಲ್ಲ.

**ಪುಟ ೧೧೭, ಅನಿರ್ವಚನೀಯಾಜ್ಞಾನ–** ಶಂಕರಾಚಾರ್ಯರ ಅನು ಯಾಯಿಗಳಾದ ವ್ಯಾಖ್ಯಾನಕರ್ತರುಗಳು ವ್ಯವಹಾರದಲ್ಲಿ ರಜ್ಜುಸರ್ಪ, ರಜ್ಜು ಸರ್ಪದ ಜ್ಞಾನ– ಇವುಗಳಂತೆ ಅಧ್ಯಾಸಕ್ಕೆ ಕಾರಣವಾಗಿರುವ ಮೂಲಾವಿದ್ಯೆ

ಯನ್ನೂ **ಸದಸದನಿರ್ವಚನೀಯ**– ಸತ್ತಿಗಿಂತಲೂ ಅಸತ್ತಿಗಿಂತಲೂ ವಿಲಕ್ಷಣವಾದದ್ದು– ಎನ್ನುತ್ತಾರೆ. ಇದರ ಖಂಡನೆಯ ಭಾಷ್ಯಭಾಗವು ಬಂದಾಗ ಈ ವಿಚಾರದಲ್ಲಿ ಮತ್ತೆ ತಿಳಿಯಿಸಬೇಕಾದದ್ದಿದೆ.

**ಪುಟ ೧೨೦, ನಿದ್ರೆಯ ಪರಾಮರ್ಶ**ದ ವಿಷಯಕ್ಕೆ ೯೨ನೆಯ ಪುಟದ ಪರಿಶಿಷ್ಟವನ್ನು ನೋಡಿ.

**ಪುಟ ೧೨೨, ಅಹಂಪ್ರತ್ಯಯ**– 'ಸುಷುಪ್ತಿಯಲ್ಲಿ ನನ್ನನ್ನುಕೂಡ ನಾನು ಅರಿಯಲಿಲ್ಲ' ಎಂಬಲ್ಲಿ 'ನಾನು', 'ನನ್ನನ್ನು' ಎಂಬುದಕ್ಕೆ ವಿಷಯವಾದದ್ದು ಯಾವದು ?– ಎಂಬ ಬಗೆಗೆ ಚರ್ಚೆ ನಡೆದಿದೆ. ಎಚ್ಚರದಲ್ಲಿರುವ ನಾನು ಜಾತ್ಯಾದಿವಿಶಿಷ್ಟನಾಗಿರುತ್ತದೆ; ಅದರ ಅರಿವು ಹಾಗೆ ಆಗಲಿಲ್ಲ– ಎಂದು 'ನನ್ನನ್ನು ಕೂಡ' ಎಂಬವರಿಂದ ಹೇಳುತ್ತಾನೆ– ಎಂದು ಇಲ್ಲಿ ವಿವೇಚಿಸಿದೆ. ಅಲ್ಲಿ 'ನಾನು' ಎಂದಾಗಲಿ 'ಜ್ಞಾತೃ'ವೆಂದಾಗಲಿ ಅನುಭವವಿರಲಿಲ್ಲ– ಎಂದು ಒಪ್ಪಿ ನೆನಪಿನ ಬಲದಿಂದ ಅಲ್ಲಿ ನಾನು ಎಂಬರ್ಥವೂ ಜ್ಞಾತೃತ್ವವೂ ಇತ್ತೆಂದು ಇಲ್ಲಿ ಕಲ್ಪಿಸಿರುತ್ತದೆ. ಆದರೆ ಸುಷುಪ್ತ್ಯವಸ್ಥೆಯಲ್ಲಿ ಆದ ಅನುಭವದ ನೆನಪೆ, ಇದು ? ಸುಷುಪ್ತಿಯ ಅನುಭವದ ವಿಷಯವನ್ನು ಜಾಗ್ರತ್ತಿನ ನೆನಪಿನಿಂದ ನಿರ್ಣಯಿಸುವದು ಸರಿಯೆ ? –ಎಂಬುದನ್ನು ಇಲ್ಲಿ ವಿಚಾರಕ್ಕೆ ತೆಗೆದುಕೊಂಡಿಲ್ಲ. ಹಿಂದೆ ೬೯, ೯೨– ಈ ಪುಟಗಳಲ್ಲಿರುವ ಇದೇ ವಿಷಯದ ಬಗೆಗೆ ಬರೆದಿರುವ **ಪರಿಶಿಷ್ಟ**ವಾಕ್ಯಗಳನ್ನು ನೋಡಿರಿ. ಅವಸ್ಥೆಗಳ ವಿಚಾರದ ಬಗ್ಗೆ **ಪೀಠಿಕೆ**ಯನ್ನು ನೋಡಿ.

**ಪುಟ ೧೨೩, ಅಜ್ಞಾನ ಅಥವಾ ಮೂಲಾವಿದ್ಯೆ**– ಪುಟ ೯೩ರ ಪರಿಶಿಷ್ಟವನ್ನು ನೋಡಿ.

**ಪುಟ ೧೨೩, ಅಜ್ಞಾನಸಾಕ್ಷಿ**– ಸಾಕ್ಷಿಯ ವಿಷಯಕ್ಕೆ ೬೭ನೆಯ ಪುಟದ ಪರಿಶಿಷ್ಟವಾಕ್ಯಗಳನ್ನು ನೋಡಿರಿ. ಶಾಂಕರಭಾಷ್ಯವ್ಯಾಖ್ಯಾನಪ್ರಸ್ಥಾನದವರು ತಸಿನಿದ್ರೆಯಲ್ಲಿ 'ನಾನು ಏನೂ ಅರಿಯಲಿಲ್ಲ' ಎಂಬ ನೆನಪಿನ ಬಲದಿಂದ ಜ್ಞಾನಾಭಾವ, ಮಿಥ್ಯಾಜ್ಞಾನ, ಅದರ ಸಂಸ್ಕಾರ– ಇವುಗಳಿಗಿಂತ ವ್ಯತಿರಿಕ್ತವಾದ 'ಭಾವರೂಪಾಜ್ಞಾನವಿರುತ್ತದೆ ; ಅದಕ್ಕೆ ಆತ್ಮನು ಸಾಕ್ಷಿಯಾಗಿರುತ್ತಾನೆ' ಎಂಬುದನ್ನು ಸಾಧಿಸುವದಕ್ಕೆ ಪ್ರಯತ್ನಿಸಿರುತ್ತಾರೆ ; ರಾಮಾನುಜರು ಇಲ್ಲಿ 'ಸಾಕ್ಷಿ' ಎಂಬ ಶಬ್ದದ ವ್ಯುತ್ಪತ್ತಿಯ ಬಲದಿಂದಲೇ ಜ್ಞಾತೃತ್ವವನ್ನು ಪೂರ್ವಪಕ್ಷಿಯು ಒಪ್ಪಬೇಕಾಗುವದೆಂದು ತರ್ಕಿಸಿರುತ್ತಾರೆ.

**ಪುಟ ೧೨೪, ಆತ್ಮೋಪದೇಶಪರವಾಕ್ಯಗಳಲ್ಲಿರುವ 'ನಾನು' ಎಂಬ ಶಬ್ದ**– 'ಅಹಮ್' ನಾನು– ಎಂಬ ಶಬ್ದವನ್ನು ಪರಮಾತ್ಮನ ವಿಷಯದಲ್ಲಿಯೂ ಮುಕ್ತರ ವಿಷಯದಲ್ಲಿಯೂ ವೇದದಲ್ಲಿ ಬಳಸಿರುವದರಿಂದ ಆತ್ಮನು ಅಹಂಶಬ್ದ

ವಾಚ್ಯನೇ ಎಂಬ ಅಭಿಪ್ರಾಯವನ್ನು ಯಾಮುನಾಚಾರ್ಯರು ಆತ್ಮಸಿದ್ಧಿಯಲ್ಲಿ ಹೊರಪಡಿಸಿದ್ದನ್ನೇ ರಾಮಾನುಜಾಚಾರ್ಯರೂ ಅನುಸರಿಸಿರುತ್ತಾರೆ. ಪರಮಾತ್ಮ ತತ್ತ್ವವು ಯಾವ ಶಬ್ದಕ್ಕೂ ಪ್ರತ್ಯಯಕ್ಕೂ ಗೋಚರವೇ ಅಲ್ಲ ; ಆದ್ದರಿಂದ ಅದನ್ನು ಆತ್ಮ, ಬ್ರಹ್ಮ- ಮುಂತಾದ ಶಬ್ದಗಳಿಂದ ಹೇಳಿದರೂ ಸ್ವರೂಪವನ್ನೇ ತಿಳಿಸಿದಂತೆ ಆಗುವದಿಲ್ಲ ; ಅದನ್ನು ಇದ್ದದ್ದು ಇದ್ದಂತೆ ತಿಳಿಯಿಸುವದಾದರೆ 'ನೇತಿ ನೇತಿ' (ಇದಲ್ಲ, ಇದಲ್ಲ) ಎಂದೇ ಹೇಳಬೇಕು. ಆದರೆ ಆ ಸ್ವರೂಪವನ್ನು ಯಾವದಾದರೊಂದು ಲೌಕಿಕಶಬ್ದದಿಂದ ಹೇಳುವದಾದರೆ ಅದನ್ನು ಅಹಂಶಬ್ದ ದಿಂದಲೇ ಹೇಳುವದು ನ್ಯಾಯ ; ಏಕೆಂದರೆ ಅದು ಎಲ್ಲಕ್ಕೂ ಒಳಗಿನ ಸೂಕ್ಷ್ಮ ವಾದ ನಮ್ಮ ಸ್ವರೂಪವೆಂದು ವ್ಯವಹಾರದಲ್ಲಿ ಬಗೆಯುತ್ತೇವೆ. ('ಪ್ರತ್ಯಕ್ತ್ವಾದತಿ ಸೂಕ್ಷ್ಮತ್ವಾದಾತ್ಮಬುದ್ಧ್ಯನುಶೀಲನಾತ್' (ನೈ. ಸಿ. ೨-೫೫) ಎಂದು ಸುರೇಶ್ವರಾ ಚಾರ್ಯರು ನೈಷ್ಕರ್ಮ್ಯಸಿದ್ಧಿಯಲ್ಲಿ ಬರೆದಿರುವದನ್ನು ನೋಡಿ. ಇದು ಶಂಕರಾ ಚಾರ್ಯರಿಗೂ ಸುರೇಶ್ವರಾಚಾರ್ಯರಿಗೂ ಅಭಿಪ್ರೇತವಾದದ್ದು. ನಮ್ಮ ಆತ್ಮ ನನ್ನು 'ನಾನು' ಎಂದಲ್ಲದೆ ನೀನು, ಅವನು, ಅದು- ಎಂದು ಮುಂತಾಗಿ ಕರೆಯು ವದು ಎಂದಿಗೂ ಸರಿಯಲ್ಲವೆಂಬ ವಿಷಯಕ್ಕೆ ಅದ್ವೈತಿಗಳಿಗೂ ವಿಶಿಷ್ಟಾದ್ವೈತಿ ಗಳಿಗೂ ಮತಭೇದವಿಲ್ಲ. 'ಅನಾತ್ಮದಲ್ಲಿ ಆತ್ಮಬುದ್ಧಿಯಾಗಿರುವದೇ ಅವಿದ್ಯೆಯ ಸ್ವರೂಪ' (ವಿ.ಪು. ೬-೭-೧೦,೧೧) ಎಂಬ ವಾಕ್ಯವನ್ನು ರಾಮಾನುಜರೂ ಉದಾ ಹರಿಸಿರುತ್ತಾರೆ. ಈ ಅಭಿಪ್ರಾಯವೇ ಸರಿಯಾದದ್ದು. ಪ್ರಾಕೃತರು ಜಾಗ್ರತ್ಸ್ವಪ್ನ ಗಳಲ್ಲಿ ತೋರುವ 'ಅಹಂಕಾರ'ವೆಂಬ ಅಂತಃಕರಣದ ರೂಪವನ್ನೂ ಅದನ್ನು ಕಾಣುತ್ತಿರುವ ಸಾಕ್ಷಿಯನ್ನೂ ಒಂದರಲ್ಲೊಂದನ್ನು ಅಧ್ಯಾಸಮಾಡಿಕೊಂಡೇ 'ನಾನು' ಎಂಬ ಶಬ್ದವನ್ನು ಬಳಸುತ್ತಾರೆ ; ಆದರೆ ಶ್ರುತಿಸ್ಮೃತಿಗಳಲ್ಲಿ ಪರ ಮಾತ್ಮನು ತನ್ನ ವಿಷಯಕ್ಕೂ ಮುಕ್ತರಾದವರು ತಮ್ಮ ಪರಮಾರ್ಥಸ್ವರೂಪದ ವಿಷಯಕ್ಕೂ ನಾನು ಎಂಬ ಶಬ್ದವನ್ನು ಬಳಸುವದು ಅಹಂಕಾರೋಪಲಕ್ಷಿತವಾದ ಸಾಕ್ಷಿಸ್ವರೂಪವನ್ನುದ್ದೇಶಿಸಿಯೇ- ಎಂಬುದು ಸಾಂಪ್ರದಾಯಿಕರಾದ ಅದ್ವೈತಿಗಳ ಮತ. ಸುಷುಪ್ತ್ಯಾದ್ಯವಸ್ಥೆಗಳಲ್ಲಿರುವ ಆತ್ಮಸ್ವರೂಪವು ನಾನೆಂದೇ ತೋರುತ್ತಿರು ತ್ತದೆ ಎಂದು ಸುಪ್ತೋತ್ಥಿತನ ಸ್ಮರಣೆಯ ಬಲದಿಂದ ರಾಮಾನುಜರು ಹೇಳುತ್ತಾರೆ; ಅಲ್ಲಿ ನಾನು ಎಂಬ ರೂಪವು ಇಲ್ಲವೆಂದು ಸುಷುಪ್ತಿಯ ಅನುಭವದ ಬಲದಿಂದ ಅದ್ವೈತಿಗಳು ಹೇಳುತ್ತಾರೆ.

**ಪುಟ ೧೨೯, ಅಧ್ಯಾಸ, ಅವಿದ್ಯೆಯ ಸ್ವರೂಪ**- ಅನಾತ್ಮದಲ್ಲಿ ಆತ್ಮನ ಅಧ್ಯಾಸವು ಅವಿದ್ಯೆ- ಎಂಬ ಪುರಾಣವಚನದ ಬಲದಿಂದ ಅವಿದ್ಯೆಯು ಶರೀರ ದಲ್ಲಾಗುವ ಅಹಂಬುದ್ಧಿಮಾತ್ರ ಎಂದು ರಾಮಾನುಜರು ನಿರ್ಣಯಿಸಿರುತ್ತಾರೆ. ನಾನು ಎಂಬ ಅಹಂಕಾರವಿಶಿಷ್ಟಾತ್ಮನೂ ಸಾಕ್ಷಿಗೆ ವಿಷಯನೆಂದೂ ಈ ಅಹಂಪ್ರತ್ಯ ಯಿಗೂ ಸಾಕ್ಷಿಗೂ ಪರಸ್ಪರವಾಗಿ ಅಧ್ಯಾಸವಾಗಿದೆ-ಎಂದೂ ಅದ್ವೈತಿಗಳೆನ್ನುತ್ತಾರೆ.

ಕಪ್ಪೆಯಚಿಪ್ಪನ್ನು ಬೆಳ್ಳಿ ಎಂದು ತಿಳಿಯುವಂತೆ ದೇಹದಲ್ಲಿ ಇದು ಜ್ಞಪ್ತಿಯೇ (ಚೈತನ್ಯಮಾತ್ರವೇ) ಎಂದೇಕೆ ತೋರುವದಿಲ್ಲ ? ಎಂದು ಶ್ರೀಭಾಷ್ಯಕಾರರು ಇಲ್ಲಿ ಆಕ್ಷೇಪಿಸಿರುತ್ತಾರೆ. ಆದರೆ ಅನ್ಯೋನ್ಯಾಧ್ಯಾಸದಲ್ಲಿ ತಾದಾತ್ಮ್ಯಾಧ್ಯಾಸವೇ ಅಲ್ಲದೆ ಧರ್ಮಗಳ ವಿನಿಮಯದ ಅಧ್ಯಾಸವೂ ಆಗುತ್ತದೆ ಎಂಬುದು ಅಸ್ಮತ್ಪ್ರತ್ಯಯ ಗೋಚರನಾದ ಆತ್ಮನಿಗೂ ಮಿಕ್ಕ ಅನಾತ್ಮಕ್ಕೂ ಆಗುವ ಅಧ್ಯಾಸದ ವಿಷಯ ; ಅಹಂಕಾರಕ್ಕೂ ಆತ್ಮನಿಗೂ ಆಗುವ ಅಧ್ಯಾಸವಲ್ಲಿ 'ನಾನು' ಎಂದು ಉಂಟೆ ಯಾದ ಅನುಭವವಾಗುತ್ತದೆ. ಅಲ್ಲಿ ಅಹಂಕಾರವನ್ನೇ ಚಿದ್ರೂಪವೆಂದೂ ಚಿದಾತ್ಮ ನಾದ ಆತ್ಮನನ್ನು ಅಹಂರೂಪನೆಂದೂ ತಿಳಿಯುವದಲ್ಲದೆ ಅಹಂಚಿದಾತ್ಮರಿಗೆ ಪರ ಸ್ಪರಧರ್ಮಾಧ್ಯಾಸವೂ ಇದೆ– ಎಂಬುದು ಅಧ್ಯಾಸಭಾಷ್ಯಕಾರರ ಅಭಿಪ್ರಾಯ. ದೇಹದಲ್ಲಿ ನೇರಾಗಿ ಜ್ಞಪ್ತಿಯ ಅಧ್ಯಾಸವನ್ನು ಶಾಂಕರಭಾಷ್ಯದಲ್ಲಿ ಹೇಳಿಲ್ಲವೆಂಬು ದನ್ನು ಓದುಗರು ಲಕ್ಷಿಸಬೇಕು.

**ಪುಟ ೧೩೧, ಪ್ರತ್ಯಕ್ಷವು ದೋಷಮೂಲ**– ಈ ಅಭಿಪ್ರಾಯವು ಮಂಡನ ಮಿಶ್ರವಾಚಸ್ಪತಿಮಿಶ್ರರ ಗ್ರಂಥಗಳಲ್ಲಿವೆ. ಇಲ್ಲಿ ಅಡಿಟಿಪ್ಪಣಿಯಲ್ಲಿ '೯೭ನೆಯ ಪುಟದಲ್ಲಿ' ಎಂದು ಕಂಸದೊಳಗೆ ಅಚ್ಚಾಗಿರುವದು ತಪ್ಪು ; ಅದು '೪೭ನೆಯ ಪುಟದಲ್ಲಿ' ಎಂದಿರಬೇಕು. ಪ್ರತ್ಯಕ್ಷಕ್ಕೂ ಶಾಸ್ತ್ರಕ್ಕೂ ವಿರೋಧವಾದರೆ ಯಾವ ದನ್ನು ಪ್ರಬಲವೆಂದು ಹಿಡಿಯಬೇಕು ?– ಎಂಬ ವಿಚಾರವು ಶಾಂಕರಸೂತ್ರಭಾಷ್ಯ ದಲ್ಲಿಲ್ಲ ; ಪ್ರಮಾಣಪ್ರಮೇಯವ್ಯವಹಾರವೆಲ್ಲವೂ– ಶಾಸ್ತ್ರಪ್ರಮಾಣವ್ಯವಹಾರವು ಕೂಡ– ಅಧ್ಯಾಸರೂಪವಾದ ಅವಿದ್ಯೆಯನ್ನು ಆಧಾರವಾಗಿಟ್ಟುಕೊಂಡು ಪ್ರವೃತ್ತ ವಾಗಿದೆ ಎಂದು ಅಲ್ಲಿದೆ.

**ಪುಟ ೧೩೨, ಶಾಸ್ತ್ರವು ನಿರ್ದೋಷವೆ ?** ಶಾಸ್ತ್ರವು ಅಪೌರುಷೇಯ ವಾದ್ದರಿಂದ ನಿರ್ದೋಷವು–ಎಂದರೆ ಪುರುಷರಲ್ಲಿರುವ ಅಶಕ್ತಿ, ವಂಚನೆ– ಮುಂತಾದ ದೋಷಗಳು ಅದರಲ್ಲಿಲ್ಲ– ಎಂದು **ಮೀಮಾಂಸಕರೆನ್ನುತ್ತಾರೆ.** ಶಾಸ್ತ್ರವು ಈಶ್ವರವಚನವಾದ್ದರಿಂದ ನಿರ್ದೋಷವೆಂದು ನೈಯಾಯಿಕರೆನ್ನುತ್ತಾರೆ. ಶಂಕರಾ ಚಾರ್ಯರು ವ್ಯವಹಾರದೃಷ್ಟಿಯಿಂದ ಮೀಮಾಂಸಕರ ಮತವನ್ನು ಒಪ್ಪುತ್ತಾರೆ ; ಅದು ಅನುಭವಪರ್ಯಂತವಾದ ಜ್ಞಾನವನ್ನುಂಟುಮಾಡುವದರಿಂದ ಪ್ರಮಾಣ ವೆಂದು ತಮ್ಮ ಸಿದ್ಧಾಂತದ ದೃಷ್ಟಿಯಿಂದ ಹೇಳಿರುತ್ತಾರೆ.

**ಪುಟ ೧೩೩ ವ್ಯಾವಹಾರಿಕಪ್ರಾಮಾಣ್ಯ**– ಇಲ್ಲಿ ಪ್ರಮಾಣವ್ಯವಹಾರವು ತಟ್ಟನೆ ನೋಡಿದರೆ ಸರಿಯೆಂದು ತೋರಿ, ಯುಕ್ತಿಯಿಂದ ನೋಡಿದಾಗ ಹಾಗಲ್ಲ ವೆಂದು ಬಾಧಿತವಾಗುವದು– ಎಂದು ಬರೆದಿರುವದಕ್ಕೆ ಯಾವ ಆಧಾರವಿದೆಯೋ ತಿಳಿಯದು. ಪ್ರಮಾತೃತ್ವವು ಅವಿದ್ಯಾಕೃತವಾಗಿರುವದರಿಂದ ವ್ಯವಹಾರವೆಲ್ಲವೂ ಶಾಸ್ತ್ರಜನಿತಪರಮಾರ್ಥಜ್ಞಾನದಿಂದ ಬಾಧಿತವಾಗುವದರಿಂದ ಅದು ವ್ಯಾವ

ಹಾರಿಕ- ಎಂದು ಶಾಂಕರಸೂತ್ರಭಾಷ್ಯ(೧-೧-೪)ದ ಕೊನೆಯಲ್ಲಿ ಬರೆದಿದೆ. ಆತ್ಮಜ್ಞಾನರೂಪವಾದ ಅನುಭವದಿಂದ ಪ್ರಮಾಣವ್ಯವಹಾರವೆಲ್ಲವೂ ಬಾಧಿತವಾಗುತ್ತದೆ- ಎಂದು ಅಲ್ಲಿ ಹೇಳಿರುವಲ್ಲಿ ಅದು ಯುಕ್ತಿಬಾಧ್ಯವೆಂದೇಕೆ ಶ್ರೀಭಾಷ್ಯಕಾರರು ಬರೆಪರೋ ತಿಳಿಯದು.

**ಪುಟ ೧೩೪, ಬ್ರಹ್ಮಮಿಥ್ಯಾತ್ವಾನುಮಾನಗಳು**-ಗವಿಯಲ್ಲಿ ತೈಮಿರಿಕನಿಗೆ ಆಗುವ ದ್ವಿಚಂದ್ರಜ್ಞಾನದಂತೆ ಎಂಬ ದೃಷ್ಟಾಂತಬಲದಿಂದಲೂ ಕೆಲವು ಅನುಮಾನಗಳಿಂದಲೂ ಬ್ರಹ್ಮವೂ ಬ್ರಹ್ಮಜ್ಞಾನವೂ ಮಿಥ್ಯೆ ಎಂಬುದನ್ನು ಶ್ರೀಭಾಷ್ಯದಲ್ಲಿ ಸಾಧಿಸಿರುತ್ತದೆ. ಆದರೆ ಹೀಗೆ ಅನುಮಾನವನ್ನು ಮಾಡುವಾತನ ಸ್ವರೂಪವೇ ಬ್ರಹ್ಮವಾಗಿರುವದರಿಂದ ಬ್ರಹ್ಮದ ಮಿಥ್ಯಾತ್ವವನ್ನು ಸಾಧಿಸುವದು ಆಗಲಾರದು; ಅದನ್ನು ಅರಿಯುವದಕ್ಕೆ ಆಗಲಾರದೆನ್ನುವದೂ ಆಗಲಾರದು- ಎಂದು ಶಂಕರಾಚಾರ್ಯರು ಹೇಳಿರುವದಕ್ಕೆ ಪ್ರತಿವಚನವನ್ನೇನೂ ಇಲ್ಲಿ ಹೇಳಿಲ್ಲ.

**ಪುಟ ೧೩೩, ಮಿಥ್ಯಾ ಜ್ಞಾನ, ಮಿಥ್ಯಾವಿಷಯ**- ಜ್ಞಾನಗಳು ಹುಟ್ಟುತ್ತವೆಯಾದ್ದರಿಂದ ಸತ್ಯ, ಅರ್ಥಕ್ರಿಯಾಕಾರಿಯಾಗಿರುವದರಿಂದ ಸತ್ಯ- ಎಂಬ ಯುಕ್ತಿಗಳು ವ್ಯಾವಹಾರಿಕವಿಷಯದಲ್ಲಿಕೂಡ ಸರಿಯೆಂದು ನಿಶ್ಚಯಿಸುವದು ಕಷ್ಟ. ಕನಸಿನಲ್ಲಿ ಹುಟ್ಟಿದ ಜ್ಞಾನಗಳು ಅರ್ಥಕ್ರಿಯಾಕಾರಿಗಳಾಗಿರುವದರಿಂದ ಅವು ಸತ್ಯವಾಗಿರುವವೆಂದು ಯಾರೂ ಬಗೆಯುವದಿಲ್ಲ. ಈ ಪ್ರಘಟ್ಟದ ಮೊದಲನೆಯ ವಾಕ್ಯದಲ್ಲಿಯೇ ಆನೆ ಮುಂತಾದ ವಿಷಯಗಳು ಹುಸಿಯಾದರೂ ಜ್ಞಾನಗಳು ಸತ್ಯವೆಂದೇ ಶ್ರೀಭಾಷ್ಯಕಾರರು ಹೇಳಿರುತ್ತಾರೆ. ಹಾಗಿದ್ದರೆ ಸ್ವಪ್ನದಲ್ಲಿ ವಿಷಯಗಳ ಜ್ಞಾನಗಳಂತೆ ವಿಷಯಗಳೂ ಹುಟ್ಟುತ್ತವೆ, ಅರ್ಥಕ್ರಿಯಾಕಾರಿಯಾಗಿಯೂ ಇವೆ; ಅವನ್ನೇಕೆ ಹುಸಿಯೆಂದು ಅಲ್ಲಿ ಒಪ್ಪಿದರೋ ತಿಳಿಯುವದಿಲ್ಲ. ಮುಂದೆ (ಪು. ೨೨೬-೨೨೭ರಲ್ಲಿ) ಸ್ವಪ್ನದ ವಿಷಯಗಳನ್ನು ಆಯಾ ಪುರುಷರು ಅನುಭವಿಸುವದಕ್ಕೆ ತಕ್ಕಂತೆ ಈಶ್ವರನೇ ಸೃಷ್ಟಿಸುತ್ತಾನಾದ್ದರಿಂದ ಅದೆಲ್ಲ ಯಥಾರ್ಥಖ್ಯಾತಿಯೇ ಎಂದು ಬರೆದಿರುತ್ತಾರೆ.

**ಪುಟ ೧೩೮, ಸ್ಫೋಟವಾದ**- ಇದನ್ನು ಮಂಡನಮಿಶ್ರನಾಗಲಿ ಶ್ರೀಶಂಕರಾಚಾರ್ಯರಾಗಲಿ ಒಪ್ಪಿರುವದಿಲ್ಲ. ಹೀಗಿದ್ದರೂ ಅದನ್ನು ಏತಕ್ಕೆ ಇಲ್ಲಿ ಪೂರ್ವಪಕ್ಷವಾಗಿ ತೆಗೆದುಕೊಂಡಿದೆಯೆಂಬುದು ಗೊತ್ತಾಗುವಂತಿಲ್ಲ; ಅಸತ್ಯವಾದ ಶಾಸ್ತ್ರದಿಂದ ಸತ್ಯಬ್ರಹ್ಮದ ಅರಿವಾಗಲಾರದು- ಎಂಬ ವಾದಕ್ಕೆ ಆ ಖಂಡನೆಯಿಂದ ಪ್ರಯೋಜನವೇನೂ ಕಾಣುವದಿಲ್ಲ. ಅಸತ್ಯದಿಂದ ಸತ್ಯಪ್ರತಿಪತ್ತಿಯು ಹೇಗೆ? ಎಂಬುದನ್ನು ಶಾಂಕರ ಸೂ. ಭಾ. ೨-೧-೧೪ (ಪುಟ ೧೯೫)ರಲ್ಲಿ ಪ್ರತಿಪಾದಿಸಿದೆ. ಅಲ್ಲಿ ಶಾಸ್ತ್ರಕ್ಕೆ **ಅಂತ್ಯಪ್ರಮಾಣತ್ವ**ವನ್ನು ಪ್ರತಿಪಾದಿಸಿರುವದನ್ನು ಇಲ್ಲಿ ಪರ್ಯಾಲೋಚನೆಗೆ ತೆಗೆದುಕೊಂಡಿಲ್ಲ.

**ಪುಟ ೧೩೯, ಮಿಥ್ಯಾಜ್ಞಾನ, ಪದಾರ್ಥಮಿಥ್ಯಾತ್ವ**– ಇಲ್ಲಿ ಮಿಥ್ಯಾಶಬ್ದ ವನ್ನುಪಯೋಗಿಸಿರುವದರಿಂದ ಓದುಗರಿಗೆ ಚಿತ್ತದಲ್ಲಿ ಸ್ವಲ್ಪ ಗಲಿಬಿಲಿಯಾಗುವ ಸಂಭವವಿದೆ. 'ಜ್ಞಾನವು ಮಿಥ್ಯೆ' ಎಂದರೆ 'ಶಾಸ್ತ್ರವಿಲ್ಲದಿರುವಾಗ ಶಾಸ್ತ್ರವಿದೆ ಎಂಬ ಬುದ್ಧಿಯು ಮಿಥ್ಯೆ' ಎಂಬಭಿಪ್ರಾಯವನ್ನು ಮೊದಲು ಹೇಳಿದೆ. ಮಿಥ್ಯೆಯಾಗಿದ್ದರೂ ಸತ್ಯವೆಂದು ತೋರುವ ವಸ್ತುವಿನ ಜ್ಞಾನವು ಸ್ವರೂಪದಿಂದಲೂ ಮಿಥ್ಯೆಯಾಗಿರಬೇಕಾದದ್ದಿಲ್ಲ. ಉದಾಹರಣೆಗೆ ಒಬ್ಬ ಮನುಷ್ಯನ ನೆರಳು ವಸ್ತುವಿನಂತೆ ತೋರಿದರೂ ಅಲ್ಲಿ ವಸ್ತುವಿಲ್ಲದ್ದರಿಂದ ಮಿಥ್ಯೆ ; ಅಷ್ಟುಮಾತ್ರದಿಂದ ಅದರ ಜ್ಞಾನವು ಮಿಥ್ಯೆಯಲ್ಲ, ಏಕೆಂದರೆ ಇದು ನೆರಳು ಎಂಬ ಜ್ಞಾನವು ನಿಜವಾಗಿ ಉಂಟಾಗಿದೆ. ಆ ಮಿಥ್ಯಾವಸ್ತುವಿನ (ಸ್ವರೂಪ)ಸತ್ಯವಾದ ಜ್ಞಾನವು ಇದು ಒಬ್ಬ ಮನುಷ್ಯನ ನೆರಳು ಎಂದು ಉಂಟಾಗುವದೂ, ಮನುಷ್ಯನನ್ನು ಅದರಿಂದ ಕಂಡುಕೊಳ್ಳುವದೂ ಲೋಕದಲ್ಲಿ ಅನುಭವದಲ್ಲಿದೆ. ಹೀಗೆಯೇ ಶಾಸ್ತ್ರವು ಇದೆ, ಶಾಸ್ತ್ರದಿಂದ ಬ್ರಹ್ಮ (ಪರಮಾತ್ಮ)ವಸ್ತುವಿನ ಜ್ಞಾನವೂ ಉಂಟಾಗುತ್ತದೆ. ಇಲ್ಲಿ ವ್ಯವಹಾರದೃಷ್ಟಿಯಿಂದ ಶಾಸ್ತ್ರವು ಇದ್ದರೂ ಅದು ಬ್ರಹ್ಮದಂತೆ ಪರಮಾರ್ಥವಲ್ಲವಾದ್ದರಿಂದ ಅಸತ್ಯ; ಆದರೂ ಅದರಿಂದ ಉಂಟಾಗುವ ಜ್ಞಾನವು ತೋರುವ ರೂಪದಿಂದ (ವೃತ್ತಿರೂಪದಿಂದ) ಮಿಥ್ಯೆಯಾದರೂ ಇರುವ (ಜ್ಞಾನ)ರೂಪದಿಂದ ಬ್ರಹ್ಮವೇ ಆಗಿರುತ್ತದೆ. ಆದ್ದರಿಂದ ಶಾಸ್ತ್ರದಿಂದ ಆಗುವ ಅನುಭವರೂಪಜ್ಞಾನವು ಸ್ವರೂಪದಿಂದ ಬ್ರಹ್ಮವೇ ಆಗಿರುತ್ತದೆ. ನೆರಳಿನಿಂದ ಮನುಷ್ಯನ ಜ್ಞಾನವಾಗುವಂತೆ ಶಾಸ್ತ್ರದಿಂದ ಬ್ರಹ್ಮದ ಜ್ಞಾನವಾಗಬಹುದು– ಎಂಬುದು ಅದ್ವೈತಿಯ ಅಭಿಪ್ರಾಯ.

**ಪುಟ ೧೩೯, ಶೂನ್ಯವಾದಿಯ ವಾಕ್ಯದಿಂದ ಶಾಸ್ತ್ರಜನ್ಯಜ್ಞಾನದ ಬಾಧವಾಗುವದು ಕಂಡುಬಂದಿದೆಯೆ ?**– ಎಂಬುದನ್ನು ವಿವೇಚನೆಮಾಡತಕ್ಕದ್ದಿದೆ. ಶೂನ್ಯವಾದಿಯು 'ನಾನು ಇಲ್ಲಿಲ್ಲ ; ನಾನೂ ನನ್ನ ವಾಕ್ಯವೂ ಶೂನ್ಯ' ಎಂದರೆ ಯಾರಾದರೂ ನಂಬುತ್ತಾರೆಯೆ ? ಇಲ್ಲ. ಹೀಗೆಯೇ 'ಶಾಸ್ತ್ರವು ಅಸತ್ಯ, ಬ್ರಹ್ಮವು ಸತ್ಯ' ಎಂದು ಹೇಳಿದ ವಾಕ್ಯದಿಂದ ಇವನು ಹೀಗೆಂದು ಹೇಳುತ್ತಾನೆ ಎಂಬ ಜ್ಞಾನವಾಗುತ್ತದೆ. ಆದರೆ ಅದ್ವಿತೀಯವಾದ ಬ್ರಹ್ಮವು ಇಲ್ಲ– ಎಂದು ಶೂನ್ಯವಾದಿಯು ಹೇಳುವಂತೆ ಒಬ್ಬ ಸಾಮಾನ್ಯಮನುಷ್ಯನು ಹೇಳಿದರೆ ಇವನು ಹೀಗೆನ್ನುತ್ತಾನೆ ಎಂದೇ ಜ್ಞಾನವಾಗುತ್ತದೆ, 'ನಾನು ಅದ್ವಿತೀಯಬ್ರಹ್ಮವು' ಎಂದೇನೂ ಜ್ಞಾನವಾಗುವದಿಲ್ಲ. ಆದರೆ ಶ್ವೇತಕೇತುವಿನ ತಂದೆಯು ಸುಸುಪ್ತಿಯೇ ಮುಂತಾದ ಅನುಭವಕ್ಕೆ ಅನುಸಾರವಾಗಿ ಯುಕ್ತಿಯನ್ನು ಹೇಳಿ ತತ್ತ್ವಮಸಿ (ಆ ಬ್ರಹ್ಮವೇ ನೀನು) ಎಂದು ಹೇಳಿದರೆ ಅಧಿಕಾರಿಯಾದ ಶ್ರೋತೃವಿಗೆ ಅನುಭವವು ಉಂಟಾಗುವದರಿಂದ ಅದು ಯಾವ ವಾಕ್ಯದಿಂದಲೂ ಬಾಧಿತವಾಗುವದಿಲ್ಲ– ಎಂದು ಅದ್ವೈತಿಗಳು ಹೇಳುತ್ತಾರೆ. ಆದ್ದರಿಂದ ಒಂದು ವಾಕ್ಯವನ್ನು ಕೇಳಿದಾಗ ಇದು ಇನ್ನೊಂದು ವಾಕ್ಯಕ್ಕೆ ವಿರುದ್ಧವಾದ ಅರ್ಥವುಳ್ಳದ್ದು– ಎಂಬ ಅರಿವಾದರೆ

ಅದೇನೂ ನಿಜವಾದ ಬಾಧೆಯಲ್ಲ. ಭ್ರಾಂತಿಯಿಂದ ತಪ್ಪಾಗಿ ತಿಳಿದುಕೊಂಡರು ವದನ್ನು 'ಇದು ಭ್ರಾಂತಿ, ಸರಿಯಾಗಿ ನೋಡು' ಎಂದು ಯಾರಾದರೂ ಅನುಭವಾನು ಸಾರವಾಗಿ ಹೇಳಿದರೆ ಆಗ ನಮಗೆ ಇದ್ದದ್ದರ ಅನುಭವವೇ ಆಗುವದರಿಂದ ಆ ವಾಕ್ಯದ ಜ್ಞಾನದಿಂದ ಭ್ರಾಂತಿಯು ಬಾಧಿತವಾಗುತ್ತದೆ. ಆದ್ದರಿಂದ ಶೂನ್ಯ ವಾದಿಯ ವಾಕ್ಯದಿಂದ ಅದ್ವೈತವಾದಿಯ ಮತವು ಭ್ರಾಂತಿಯೆಂದು ನಿಶ್ಚಯ ವಾಗುವದೆಂಬುದು ಸರಿಯೆ ?– ಎಂದು ಆಲೋಚಿಸಬೇಕಾಗಿದೆ.

**ಪುಟ ೧೪೧, ಏಕವಿಜ್ಞಾನದಿಂದ ಸರ್ವವಿಜ್ಞಾನ**– 'ನಿಖಿಲಜಗದುದಯ ವಿಭವವಿಲಯಾದಿಕಾರಣ'ವಾಗಿರುವ 'ಸರ್ವಜ್ಞತ್ವಸತ್ಯಕಾಮತ್ವಸತ್ಯಸಂಕಲ್ಪತ್ವಾ ದ್ಯಪರಿಮಿತೋದಾರಗುಣಸಾಗರ'ವಾದ ಬ್ರಹ್ಮವನ್ನು ನೀನು ಗುರುಗಳಲ್ಲಿ ಕೇಳಿ ತಿಳಿದುಕೊಂಡಿರುವೆಯ?–ಎಂಬುದು ಪ್ರಶ್ನೆ. ಕಾರಣವಾಗಿರುವ ಚಿದಚಿದ್ವಸ್ತುಶರೀರಕ ವಾದ ಬ್ರಹ್ಮವನ್ನು ಅರಿತುಕೊಳ್ಳುವದರಿಂದ ಕಾರ್ಯಭೂತವಾದ ಜಗತ್ತೆಲ್ಲವೂ ಅರಿ ತಂತೆ ಆಗುವದು– ಎಂಬುದು ಈ ಪ್ರತಿಜ್ಞಾವಾಕ್ಯಕ್ಕೆ ಅರ್ಥವೆಂದು ರಾಮಾನುಜರ ಮತ. **ವೇದಾರ್ಥಸಂಗ್ರಹ** (ಪುಟ ೧೩)ವನ್ನು ನೋಡಿ. ಇಲ್ಲಿ ಕಾರಣತ್ವಾದಿ ಗಳನ್ನೂ ಸರ್ವಜ್ಞತ್ವಾದಿಗುಣಗಳನ್ನೂ ಚಿದಚಿದ್ವಸ್ತುಶರೀರಕತ್ವವನ್ನೂ ಹೇಳುವ ವಾಕ್ಯಗಳು ಛಾಂದೋಗ್ಯದ ಆರನೆಯ ಪ್ರಪಾಠಕದಲ್ಲಿಲ್ಲದಿದ್ದರೂ ಆ ಉಪನಿಷತ್ತಿನ ಎಂಟನೆಯ ಅಧ್ಯಾಯ, ಬೃಹದಾರಣ್ಯಕದ ಅಂತರ್ಯಾಮಿಬ್ರಾಹ್ಮಣ–ಮುಂತಾದ ಶ್ರುತ್ಯಂತರಗಳಿಂದ ಶ್ರೀಭಾಷ್ಯಕಾರರು ಉಪಸಂಹಾರಮಾಡಿಕೊಂಡಿರುತ್ತಾರೆ. 'ವಾಚಾರಮ್ಭಣಂ ವಿಕಾರೋ ನಾಮಧೇಯಮ್' ಎಂಬ ವಾಕ್ಯಕ್ಕೆ ವಿಕಾರವು ಎಂದರೆ ಘಟಾದಿಗಳ ಆಕಾರವೂ, ನಾಮಧೇಯವೂ ( ಅವುಗಳ ಹೆಸರೂ ) ವಾಕ್ಪೂರ್ವಕವಾದ ವ್ಯವಹಾರದಿಂದ ಮುಟ್ಟಲ್ಪಡುತ್ತದೆ. ''ಹಾಗೆಂದು ವ್ಯವಹೃತ ವಾಗುತ್ತದೆ'' ಎಂಬರ್ಥವನ್ನು ಅವರು ಕಲ್ಪಿಸಿರುತ್ತಾರೆ. 'ಮೃತ್ತಿಕೇತ್ಯೇವ ಸತ್ಯಮ್' ಎಂಬ ವಾಕ್ಯಕ್ಕೆ ಹೀಗೆ ಮೃದ್ದ್ರವ್ಯವೇ ನೀರನ್ನು ತರುವದೇ– ಮುಂತಾದ ವ್ಯವಹಾರವಿಶೇಷದ ಸಿದ್ಧಿಗಾಗಿ ಬೇರೊಂದು ಆಕಾರ, ಬೇರೊಂದು ಹೆಸರು– ಇವುಗಳನ್ನು ಪಡೆಯುತ್ತಿರುವದರಿಂದ ಗಡಿಗೆಯೇ ಮುಂತಾದದ್ದು ಮಣ್ಣೇ ಎಂಬುದೇ ಸತ್ಯ, ಅದೂ– ಮಣ್ಣೆಂಬ ದ್ರವ್ಯವೇ ಎಂಬುದೂ– ಸತ್ಯವು, ಹೀಗೆಂದು ಪ್ರಮಾಣದಿಂದ ಕಂಡುಬರುತ್ತದೆ– ಎಂಬರ್ಥವನ್ನು ಶ್ರೀಭಾಷ್ಯಕಾರರು ಕಲ್ಪಿಸಿರುತ್ತಾರೆ. (ಶ್ರೀಭಾಷ್ಯ ೨–೧–೧೫, ಪು. ೪೦೦) ಅದ್ವೈತಿಗಳು ಅನುಸರಿಸಿ ರುವ (ಮಣ್ಣಿಗಿಂತ ವ್ಯತಿರಿಕ್ತವಾಗಿ ಘಟಾದಿಕಾರ್ಯಗಳು ಇರುವದೇಇಲ್ಲ, ಮಣ್ಣೆಂಬ ಕಾರಣವೊಂದೇ ಸತ್ಯವು, ಕಾರ್ಯಗಳೆಲ್ಲ ಅಸತ್ಯ)– ಎಂಬರ್ಥವನ್ನು ಅವರು ಒಪ್ಪುವದಿಲ್ಲ.

**ಪುಟ ೧೪೧, ಅಕ್ಷರವರ್ಣನೆ-** ಬ್ರಹ್ಮವನ್ನು ಅಕ್ಷರವೆಂಬ ಹೆಸರಿನಿಂದ ಕರೆದಿರುವ ಕಡೆಗಳಲ್ಲಿ ಅದೃಶ್ಯ, ಅಗ್ರಾಹ್ಯ- ಎಂದುಮುಂತಾಗಿ ಗ್ರಾಹ್ಯತ್ವಾದಿ ವಿಶೇಷಗಳನ್ನು ಅಲ್ಲಗಳೆದಿರುವದರಿಂದ ನಿರ್ವಿಶೇಷವಾದ ಅದ್ವೈತವನ್ನು ಶ್ರುತಿಯು ಹೇಳುತ್ತಿದೆ ಎಂಬುದು ಅದ್ವೈತಿಗಳ ಮತ. ಇದು ಸರಿಯಲ್ಲ. ಏಕೆಂದರೆ ನಿಷೇಧ ವಾಕ್ಯಗಳಲ್ಲೆಲ್ಲ ಹೇಯ(ಬಿಡತಕ್ಕ)ಧರ್ಮಗಳನ್ನು ಮಾತ್ರ ಅಲ್ಲಗಳೆದಿದೆ; ಕಲ್ಯಾಣ ಗುಣಗಳನ್ನು ಅಲ್ಲಗಳೆದಿಲ್ಲ ಎಂಬುದು ಶ್ರೀಭಾಷ್ಯಕಾರರ ಸಿದ್ಧಾಂತ. ಪ್ರಕೃತವಾದ ಮುಂಡಕವಾಕ್ಯದಲ್ಲಿ 'ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಮ್' ಎಂಬ ವಾಕ್ಯಶೇಷದಲ್ಲಿ ಕಲ್ಯಾಣಗುಣಗಳನ್ನು ಹೇಳಿಯೇ ಇದೆ. ಆದ್ದರಿಂದ ಈ ವಾಕ್ಯವು ನಿರ್ವಿಶೇಷಪರವಲ್ಲ-ಎಂಬುದು ಅವರ ಅಭಿಪ್ರಾಯ.

**ಪುಟ ೧೪೧, ಸತ್ಯಂ ಜ್ಞಾನಮನನ್ತಂ ಬ್ರಹ್ಮ-** ಇಲ್ಲಿ ಸತ್ಯತ್ವಾದಿಗಳು ಬ್ರಹ್ಮದ ಧರ್ಮವಲ್ಲವೆಂದೂ ಅನೃತತ್ವಾದಿಗಳನ್ನು ಅಲ್ಲಗಳೆಯುವದಷ್ಟೇ ಈ ಶಬ್ದ ಗಳ ಉದ್ದೇಶವೆಂದೂ ಅದ್ವೈತಿಗಳು ಹೇಳುತ್ತಾರೆ; ಸತ್ಯ, ಜ್ಞಾನ- ಮುಂತಾದವು ಗಳು ನಿರ್ವಿಶೇಷವಾದ ಬ್ರಹ್ಮದ ಸ್ವರೂಪವನ್ನೇ ಹೇಳುತ್ತವೆ ಎಂದು ಅವರ ಭಾವ. ಆದರೆ **ಸಾಮಾನಾಧಿಕರಣ್ಯವು-** ಅನೇಕಶಬ್ದಗಳು ತಮ್ಮತಮ್ಮ ಬೇರೆಬೇರೆಯ ಅರ್ಥವನ್ನು ಹೇಳಿ ಅವುಗಳಿಂದ ವಿಶಿಷ್ಟವಾದ ಅರ್ಥವನ್ನು ಹೇಳುವದು- ಅವರ ಪಕ್ಷಕ್ಕೆ ಪ್ರತಿಕೂಲವಾಗಿರುತ್ತದೆ; ಏಕೆಂದರೆ ಸತ್ಯಾದಿಶಬ್ದಗಳಿಗೆ ಮುಖ್ಯಾರ್ಥ ವನ್ನು ಬಿಟ್ಟು ಎಲ್ಲಕ್ಕೂ ಲಕ್ಷಣೆಯನ್ನೇ ಅವರು ಕಲ್ಪಿಸಬೇಕಾಗಿಬರುತ್ತದೆ- ಎಂದು ಅಭಿಪ್ರಾಯ. ಈ ಚರ್ಚೆಯ ಪ್ರಯೋಜನದ ವಿಷಯಕ್ಕೆ ಮುಂದೆ ೧೭೧ನೆಯ ಪುಟದ ವಿವರವನ್ನು ನೋಡಿರಿ.

**ಪುಟ ೧೪೪, ಸತ್ಯಂ ಜ್ಞಾನಮ್-** ಎಂಬ ವಾಕ್ಯಕ್ಕೆ ನಿರ್ವಿಶೇಷಪರ ವಾಗಿಯೇ ಅರ್ಥವನ್ನು ಹೇಳಬೇಕೆಂಬುದಕ್ಕೆ ಪೂರ್ವಪಕ್ಷಿಯು 'ಏಕಮೇವಾ ದ್ವಿತೀಯಮ್' (ತನಗೆರಡನೆಯದಿಲ್ಲದ ಒಂದೇ) ಎಂಬ ಛಾಂದೋಗ್ಯದ ನಿರವಕಾಶ ವಾಕ್ಯಕ್ಕೆ ಅನುಗುಣವಾಗಿ ಅರ್ಥವನ್ನು ಮಾಡಬೇಕು- ಎಂಬ ಯುಕ್ತಿಯನ್ನು ಒಡ್ಡಿದ್ದನು. ಆದರೆ ಅದ್ವಿತೀಯಶ್ರುತಿಗೆ ವಿಚಿತ್ರಶಕ್ತಿಯುಕ್ತತ್ವವೆಂಬ ಧರ್ಮವನ್ನು ಹೇಳುವಪರಲ್ಲಿಯೇ ತಾತ್ಪರ್ಯವಿದೆ- ಎಂದು ಸಿದ್ಧಾಂತಿಯು ತೋರಿಸಿಕೊಟ್ಟಿರು ವದರಿಂದ- ಈ ಶ್ರುತಿಯು ಸಗುಣಪರವೆಂದೇ ಆಯಿತು. ಸಾಮಾನಾಧಿಕರಣ್ಯವು ಸಿದ್ಧಾಂತಕ್ಕೂ ಹೊಂದುತ್ತದೆ ಎಂಬ ಯುಕ್ತಿಗೆ ಇದು ಪೋಷಕವೂ ಆಗುತ್ತದೆ ಎಂದು ಭಾವ.

**ಪುಟ ೧೪೬, ಜ್ಞಾನಮಾತ್ರವೇ ಬ್ರಹ್ಮದ ಸ್ವರೂಪವೆಂದು** ಹೇಳುವ ವಾಕ್ಯಗಳು ನಿರ್ವಿಶೇಷಪರವೆಂದು ಅದ್ವೈತಿಗಳ ಅಭಿಪ್ರಾಯ. ಇದು ಸರಿಯಲ್ಲ; ಏಕೆಂದರೆ ಬ್ರಹ್ಮವು ಜ್ಞಾನಸ್ವರೂಪವೇ ಆಗಿದ್ದು ಜ್ಞಾನಗುಣಕವೂ ಆಗಿರುತ್ತದೆ.

ಇದಕ್ಕೆ ಸೂರ್ಯಾದಿಗಳೇ ದೃಷ್ಟಾಂತ ಎಂದ ಭಾವ. ದೀಪಸೂರ್ಯಾದಿಗಳ ಪ್ರಭೆಯೂ ತೇಜೋದ್ರವ್ಯವೇ ಆಗಿದ್ದರೂ ಪ್ರಭೆಯನ್ನು ದೀಪಾದಿಗಳ ಗುಣವೆಂದು ಕರೆಯುವದು ಆ ದೀಪಾದಿಗಳನ್ನು ಯಾವಾಗಲೂ ಆಶ್ರಯಿಸಿಕೊಂಡು ಅದಕ್ಕೆ ಅಧೀನವಾಗಿರುವದರಿಂದ –ಎಂಬುದು ಸಿದ್ಧಾಂತ.

**ಪುಟ ೧೪೬, ನಿರ್ಗುಣವಾಕ್ಯಗಳಿಗೆ** ಹೇಯಗುಣಗಳನ್ನು ನಿಷೇಧಿಸುವದರಲ್ಲಿಯೇ ತಾತ್ಪರ್ಯವೆಂಬುದನ್ನು ೧೪೧ನೆಯ ಪುಟದಲ್ಲಿ **ಅಕ್ಷರಶ್ರುತಿಯಿಂದ** ಹೇಳಿತ್ತು; ಇಲ್ಲಿ **ದಹರಾಕಾಶಶ್ರುತಿಯಿಂದ** ಹೇಳಿದೆ. ಸಗುಣನಿರ್ಗುಣಶ್ರುತಿಗಳು ಪರಸ್ಪರವಿರುದ್ಧವಲ್ಲ; ಸಗುಣಬ್ರಹ್ಮವೇ ಹೊರತು ನಿರ್ಗುಣಬ್ರಹ್ಮವೇ ಇಲ್ಲ– ಎಂಬುದೇ ಸಿದ್ಧಾಂತ.

**ಪುಟ ೧೫೦, ನ ದೃಷ್ಟೇರ್ದ್ರಷ್ಟಾರಮ್–** ಈ ಶ್ರುತಿಯು ಪರಮಾತ್ಮನು ಅವಿಷಯನೆಂಬುದನ್ನು ಹೇಳುತ್ತದೆ ಎಂದು ಅದ್ವೈತಿಗಳೆನ್ನುತ್ತಾರೆ. ಇಲ್ಲಿ (೧) ಆಗಂತುಕವಾದ ದೃಷ್ಟ್ಯಾದಿಗುಣಗಳಿದ್ದಾಗ ಅವನು ಜ್ಞಾತೃ, ಇಲ್ಲದಾಗ ಅವನು ಅಚೇತನಸ್ವರೂಪನು– ಎಂದು ತಿಳಿಯಬಾರದು ಎಂದು ಒಂದರ್ಥ. (೨) ದೃಷ್ಟ್ಯಾದಿಗಳ ದ್ರಷ್ಟೃವಾಗಿರುವ ಜೀವನನ್ನು ಉಪಾಸನೆಮಾಡತಕ್ಕದ್ದಲ್ಲ. ಪರಮಾತ್ಮನನ್ನೇ ಉಪಾಸನೆಮಾಡಬೇಕು ಎಂದು ಇನ್ನೊಂದು ಅರ್ಥ– ಹೀಗೆ ಎರಡು ಅರ್ಥಗಳನ್ನು ಕಲ್ಪಿಸಿದೆ. ಬೃಹದಾರಣ್ಯಕಶ್ರುತಿಯಲ್ಲಿ 'ಸರ್ವಾಂತರನಾದ ಆತ್ಮನು ಯಾರು ?' ಎಂದು ಉಷಸ್ತನು ಕೇಳಿದ್ದಕ್ಕೆ ಈ ವಾಕ್ಯವು ಉತ್ತರವಾಗಿದೆ. ಅದರಲ್ಲಿ ಆತ್ಮನು ಆಗಂತುಕಜ್ಞಾನವುಳ್ಳವನೆ ?– ಎಂಬ ಪ್ರಶ್ನೆಯಾಗಲಿ ಜೀವನನ್ನು ಉಪಾಸನೆಮಾಡಬೇಕೊ ? ಪರಮಾತ್ಮನನ್ನು ಉಪಾಸನೆಮಾಡಬೇಕೊ ? –ಎಂಬ ಪ್ರಶ್ನೆಯಾಗಲಿ ಹೇಗೆ ಬಂದಿತು ?– ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಿಲ್ಲ.

**ಪುಟ ೧೫೩, 'ಅಥ ತಸ್ಯ ಭಯಂ ಭವತಿ'–** ಈ ಶ್ರುತಿಗೆ ಬ್ರಹ್ಮೋಪಾಸನೆಯಲ್ಲಿ ವಿಚ್ಛೇದವಾದರೆ ಭಯವುಂಟಾಗುತ್ತದೆ ಎಂಬರ್ಥವನ್ನು ಇಲ್ಲಿ ತೆಗೆದಿದೆ. ಇದಕ್ಕೆ ಛಾಂದೋಗ್ಯದ (೬–೧೪–೧) ಆಧಾರವನ್ನು ಕೊಟ್ಟಿರುತ್ತದೆ. ಬ್ರಹ್ಮವು ಆನಂದಮಯವಾಗಿರುತ್ತದೆ; ಅದರಲ್ಲಿ ಪ್ರತಿಷ್ಠೆಯನ್ನು ಹೊಂದಿದವನಿಗೆ ಅಭಯ– ಎಂದು ಇಲ್ಲಿ ಪ್ರಕೃತವೇ ಆಗಿರುವದರಿಂದ ಅದರ ಉಪಾಸನೆಯಲ್ಲಿ ವಿಚ್ಛೇದವಾದರೆ ಭಯ– ಎಂದೇ ನೇರಾಗಿ ಏಕೆ ಅರ್ಥವನ್ನು ಮಾಡಲಿಲ್ಲ ?– ಎಂಬುದು ವಿಚಾರಣೀಯವಾಗಿದೆ.

**ಪುಟ ೧೬೦, ಮೂರ್ತಾಮೂರ್ತಗಳು–** ಪುರಾಣದಲ್ಲಿ ಮೂರ್ತ, ಅಮೂರ್ತ– ಎಂದು ಬ್ರಹ್ಮಕ್ಕೆ ಎರಡು ರೂಪಗಳೆಂದಿದೆ. ಬೃಹದಾರಣ್ಯಕದಲ್ಲಿ (ಬೃ. ೨–೩–೧) ಕೊಟ್ಟಿರುವ ಮೂರ್ತಾಮೂರ್ತರೂಪಗಳ ನೆನಪು ಸ್ವಾಭಾವಿಕವಾಗಿ ಓದುಗರಿಗೆ ಇಲ್ಲಿ ಬರುವಂತಿದೆ. ಆದರೆ ಪುರಾಣದಲ್ಲಿ ಬೇರೆಯ ಪ್ರಸ್ತಾನವೇ

ಕಾಣಬರುತ್ತಿದೆ. ಕ್ಷರಾಕ್ಷರರೂಪಗಳೇ ಮೂರ್ತಾಮೂರ್ತರೂಪಗಳು ಎಂದು ಶ್ರುತಾರ್ಥವಾಗುತ್ತದೆ. ಅಕ್ಷರವೆಂಬ ಬ್ರಹ್ಮದಿಂದ ಕ್ಷರವಾಗಿರುವ ಜಗತ್ತು ಅಗ್ನಿಯ ಬೆಳಕಿನಂತೆ ಹಬ್ಬಿಕೊಂಡಿದೆ– ಎಂಬುದು ಸರಳವಾಗಿ ಆಗುವ ಅರ್ಥ; ಹೀಗಿದ್ದರೂ ಅಮೂರ್ತವೆಂದರೆ 'ಮುಕ್ತಜೀವ' ಎಂಬರ್ಥವನ್ನು ಶ್ರುತಪ್ರಕಾಶಿಕಾಕಾರರು ಯಾವ ಆಧಾರದಿಂದ ತೆಗೆದಿರುತ್ತಾರೋ ಗೊತ್ತಾಗುವಂತಿಲ್ಲ.

**ಪುಟ ೧೬೯, ವೇದಾರ್ಥದ ಉಪಬೃಂಹಣ :–** ಇಲ್ಲಿ ಸಕಲಶಾಖೆಗಳಲ್ಲಿಯೂ ಇದ್ದುಕೊಂಡಿರುವ ವಾಕ್ಯಾರ್ಥವನ್ನು ಅಲ್ಪಭಾಗಶ್ರವಣದಿಂದ ಅರಿತುಕೊಳ್ಳುವದು ಕಷ್ಟವಾದ್ದರಿಂದ ಯೋಗದಿಂದ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಂಡವರು ತಾವು ಅರಿತಿರುವದನ್ನು ವ್ಯಕ್ತೀಕರಿಸುವದೆಂಬ ಉಪಬೃಂಹಣವು ಬೇಕು–ಎಂದು ಶ್ರೀಭಾಷ್ಯಕಾರರು ಬರೆದಿರುತ್ತಾರೆ. ಇಲ್ಲಿ ಅಕ್ಷರಾರ್ಥವನ್ನು ತೆಗೆದುಕೊಂಡರೆ ವೇದಾರ್ಥವನ್ನು ಪುರಾಣಗಳಿಗೆ ಹೊಂದಿಸಿಕೊಂಡು ನಿಶ್ಚಯಿಸಬೇಕು– ಎಂದಾಗುತ್ತದೆ. ನಿಃಸಂದಿಗ್ಧವಾಗಿರುವ ಪುರಾಣವಾಕ್ಯಗಳ ಸಹಾಯದಿಂದ ವೇದಾರ್ಥವನ್ನು ನಿಶ್ಚಯಿಸಿಕೊಳ್ಳಬೇಕು– ಎಂಬುದು ವಿವಕ್ಷಿತವಾಗಿರಬಹುದು.

**ಪುಟ ೧೭೦, 'ಜಗಚ್ಚ ಸಃ'** (ಜಗತ್ತು ಆತನೇ) ಎಂಬ ಸಾಮಾನಾಧಿಕರಣ್ಯವ್ಯಪದೇಶಕ್ಕೆ ಇಲ್ಲಿ ರಾಮಾನುಜರು ಉಪಯೋಗಿಸಿರುವ ಯುಕ್ತಿಯೇನೆಂದರೆ–

**ಪ್ರಶ್ನೆಗಳು**

೧. ಯಥಾ ಜಗದ್ ಬಭೂವ (ಜಗತ್ತು ಹೇಗಿತ್ತೋ)

೨. ಯಥಾ ಮಹಾಭಾಗ ಭವಿಷ್ಯತಿ (ಮುಂದೆ ಅದು ಹೇಗೆ ಆಗುವದೋ)

೩. ಯನ್ಮಯಂ ಜಗತ್ (ಜಗತ್ತು ಯನ್ಮಯವಾಗಿರುತ್ತದೆಯೋ)

೪. ಯತಶ್ಚೈತಚ್ಚರಾಚರಮ್ (ಈ ಸ್ಥಾವರಜಂಗಮವು ಯಾವದರಿಂದ ಬಂದಿದೆಯೋ)

೫. ಲೀನಮಾಸೀದ್ಯಥಾ ಯತ್ರ ಲಯಮೇಷ್ಯತಿ (ಏತರಲ್ಲಿ ಹೇಗೆ ಲಯವಾಗಿತ್ತು ಮತ್ತೆ ಏತರಲ್ಲಿ ಲಯವಾಗುವದು)

ಇಲ್ಲಿ 'ಯತಶ್ಚೈತಚ್ಚರಾಚರಮ್' ಎಂದು ನಿಮಿತ್ತೋಪಾದಾನಗಳನ್ನು ಕೇಳಿದೆ. ಆದ್ದರಿಂದ **'ಯನ್ಮಯಮ್'** ಎಂಬುದರಿಂದ ಸೃಷ್ಟಿಸ್ಥಿತಿಲಯಗಳಲ್ಲಿ ಯಾವನನ್ನು ಆತ್ಮನನ್ನಾಗಿ ಉಳ್ಳದ್ದು? ಎಂದು ಕೇಳಿದೆ. **ಇದಕ್ಕೆ ಉತ್ತರ :** ಜಗತ್ತೂ ಆತನೇ.

ಇಲ್ಲಿ 'ಯನ್ಮಯ' ಎಂಬುದು **ವಿಕಾರಾರ್ಥವಲ್ಲ;** ಹಾಗಿದ್ದರೆ ಚರಾಚರಗಳು ಏತರಿಂದ ಎಂಬುದು ಪುನರುಕ್ತಿಯಾಗುತ್ತದೆ; **ಸ್ವಾರ್ಥಿಕವಲ್ಲ;** ಏಕೆಂದರೆ ಆಗ ಜಗತ್ತು ಯಾವದು?– ಎಂದು ಅರ್ಥವಾಗುತ್ತಿತ್ತು, 'ವಿಷ್ಣುವೇ' ಎಂದು

ಉತ್ತರವು ಇರಬೇಕಾಗುತ್ತಿತ್ತು. 'ಜಗಚ್ಚ ಸಃ' ಆತನು ಜಗತ್ತೂ ಆಗಿರುತ್ತಾನೆ– ಎಂಬ ಉತ್ತರವು ಹೊಂದುತ್ತಿರಲಿಲ್ಲ.

ಆದ್ದರಿಂದ ಜಗದ್ಬ್ರಹ್ಮಗಳಿಗೆ ಶರೀರಾತ್ಮಭಾವವನ್ನಿಟ್ಟುಕೊಂಡರೇ ಈ 'ಜಗಚ್ಚ ಸಃ' ಎಂಬ ಉತ್ತರವು ಸಮಂಜಸವಾಗುತ್ತದೆ– ಎಂದು ಅಭಿಪ್ರಾಯ.

**ಪುಟ ೧೭೩, ನಿರ್ಗುಣವಾದ ಬ್ರಹ್ಮಕ್ಕೆ ಸೃಷ್ಟಿಕರ್ತೃತ್ವವು ಹೇಗೆ ?**– ಈ ಪ್ರಶ್ನೆಗೆ 'ಸೃಷ್ಟಿಯೆಲ್ಲ ಭ್ರಾಂತಿ' ಎಂದು ಹೇಳುವದಕ್ಕೆ ಬದಲಾಗಿ 'ಬ್ರಹ್ಮಕ್ಕೆ ಇತರ ವಿಲಕ್ಷಣವಾದ ಶಕ್ತಿಗಳಿರುತ್ತವೆಯಾದ್ದರಿಂದ' –ಎಂಬ ಉತ್ತರವನ್ನು ಕೊಟ್ಟಿರುವದರಿಂದ ಶಾಸ್ತ್ರವು 'ನಿರ್ವಿಶೇಷಜ್ಞಾನರೂಪಬ್ರಹ್ಮವೇ ಜಗದ್ಭ್ರಮೆಗೆ ಅಧಿಷ್ಠಾನ' ಎಂಬ ವಾದಕ್ಕೆ ಇದು ಹೊಂದುವಂತಿಲ್ಲವೆಂದು ನಿರ್ಣಯವಾಗುತ್ತದೆ –ಎಂಬುದು ಶ್ರೀಭಾಷ್ಯದ ತಾತ್ಪರ್ಯ. ಬ್ರಹ್ಮದಿಂದ ಸೃಷ್ಟಿಯಾಗಿದೆ– ಎಂದು ವ್ಯಾವಹಾರಿಕವಾಗಿ ಒಪ್ಪಿಕೊಂಡು ಈ ಪ್ರಶ್ನೋತ್ತರಗಳು ಬಂದಿರಬಹುದು– ಎಂಬ ಪೂರ್ವಪಕ್ಷಿಯ ಅಭಿಪ್ರಾಯವನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಶಾಂಕರ ಭಾಷ್ಯ (ಸೂ.ಭಾ. ೨–೧–೩೦) ನೋಡಿ ; ಅಲ್ಲಿ ಬ್ರಹ್ಮಕ್ಕೆ **'ವಿಚಿತ್ರಶಕ್ತಿಯೋಗ'** ವುಂಟೆಂದು ಹೇಳಿದೆ. ಎರಡನೆಯ ಅಧ್ಯಾಯದ ಒಂದನೆಯ ಪಾದದಲ್ಲೆಲ್ಲ ಅದ್ವಿತೀಯವಾದ ಬ್ರಹ್ಮದಿಂದ ಜಗತ್ಸೃಷ್ಟಿಯಾಗಿದೆ –ಎಂಬ ಬ್ರಹ್ಮಜಗತ್ಕಾರಣ ವಾದವನ್ನು ಆಕ್ಷೇಪಿಸಿ ಅದಕ್ಕೆ ವ್ಯವಹಾರದೃಷ್ಟಿಯಿಂದ ಒಂದು ಉತ್ತರ, ಪರಮಾರ್ಥ ದೃಷ್ಟಿಯಿಂದ ಒಂದು ಉತ್ತರ– ಹೀಗೆ ಎರಡು ಉತ್ತರಗಳನ್ನೇ ಹೇಳುತ್ತಾ ಬಂದಿದೆ. ಬ್ರಹ್ಮವು **ಸರ್ವಜ್ಞವೂ ಸರ್ವಶಕ್ತಿಯುತವೂ** ಹೇಗೆಂಬುದನ್ನು ಶಂಕರಾಚಾರ್ಯರೂ ಏಕೆ ವಿವರಿಸಬೇಕಾಗಿತ್ತು ?– ಎಂಬ ವಿಷಯಕ್ಕೆ ಈ ಗ್ರಂಥದ ಪೀಠಿಕೆಯನ್ನು ನೋಡಿ.

**ಪುಟ ೧೭೪, ಜಗತ್ತೆಲ್ಲವೂ ಭಗವಂತನ ಮಹಿಮೆ**–'ಇದೆಲ್ಲ ನಿನ್ನ ಮಹಿಮೆ' (ವಿ. ಪು. ೧–೪–೩೮) ಎಂಬ ವಚನವಾಗಲಿ, 'ನೀನು ಜಗತ್ತಿಗೆ ಪತಿಯು' (ವಿ. ಪು. ೧–೪–೩೮) ಎಂಬ ವಿಶೇಷಣವಾಗಲಿ, ಭೂಮಿಯನ್ನು ಲೀಲಾಮಾತ್ರ ದಿಂದ ಮೇಲಕ್ಕೆತ್ತಿದ ಮಹಾವರಾಹನನ್ನು ಸ್ತುತಿಸಿರುವ ಈ ಪ್ರಕರಣವಾಗಲಿ– ಅದ್ವೈತಿಗಳಿಗೆ ಮುಖ್ಯಾರ್ಥವಲ್ಲಿ ಹೊಂದುವದಿಲ್ಲ. ಏಕೆಂದರೆ ಅವರ ಮತದಲ್ಲಿ ಜಗತ್ತೆಲ್ಲವೂ ಭ್ರಾಂತಿಮಾತ್ರವಾಗಿರುತ್ತದೆ– ಎಂದು ಅಭಿಪ್ರಾಯ. ಇಲ್ಲಿಯೂ ವ್ಯಾವಹಾರಿಕಪಾರಮಾರ್ಥಿಕದೃಷ್ಟಿಭೇದಗಳನ್ನು ಅದ್ವೈತಿಗಳು ಒಪ್ಪಿರುತ್ತಾರೆ.

ಪುಟ ೧೭೫–

**ಯದೇತದ್ದೃಶ್ಯತೇ ಮೂರ್ತಮೇತಜ್ಜ್ಞಾನಾತ್ಮನಸ್ತವ ।**
**ಭ್ರಾನ್ತಿಜ್ಞಾನೇನ ಪಶ್ಯನ್ತಿ ಜಗದ್ರೂಪಮಯೋಗಿನಃ ॥**

**ಜ್ಞಾನಸ್ವರೂಪಮಖಿಲಂ ಜಗದೇತದಬುದ್ಧಯಃ ।**
**ಅರ್ಥಸ್ವರೂಪಂ ಪಶ್ಯನ್ತೋ ಭ್ರಾಮ್ಯನ್ತೇ ಮೋಹಸಂಪ್ಲವೇ ॥**
**ಯೇ ತು ಜ್ಞಾನವಿದಃ ಶುದ್ಧಚೇತಸಸ್ತೇಽಖಿಲಂ ಜಗತ್ ।**
**ಜ್ಞಾನಾತ್ಮಕಂ ಪ್ರಪಶ್ಯನ್ತಿ ತ್ವದ್ರೂಪಂ ಪರಮೇಶ್ವರ ॥**

ವಿ. ಪು. ೧–೪–೩೯ರಿಂದ ೪೧

ಈ ಶ್ಲೋಕಗಳಿಗೆ ಅದ್ವೈತಿಯು ಹೇಳುವ ಅರ್ಥವೇನೆಂಪರೆ : ''ಇಲ್ಲಿ ಕಾಣುವದೆಲ್ಲವೂ ಜ್ಞಾನಾತ್ಮನಾದ ನಿನ್ನ ಸ್ವರೂಪವೇ ; ಆದರೆ ಅಯೋಗಿಗಳು ಭ್ರಾಂತಿಯಿಂದ ಇದನ್ನು ಜಗದ್ರೂಪದಿಂದ ಕಾಣುತ್ತಿರುವರು. ಈ ಜಗತ್ತೆಲ್ಲವೂ ಜ್ಞಾನಸ್ವರೂಪವಾಗಿದ್ದರೂ ಬುದ್ಧಿಹೀನರು ಪದಾರ್ಥರೂಪವಾಗಿ ಕಂಡುಕೊಂಡು ಮೋಹಸಾಗರದಲ್ಲಿ ತೇಲಾಡುತ್ತಿರುವರು. ಜ್ಞಾನವನ್ನು ಬಲ್ಲ ಶುದ್ಧಚಿತ್ತರು ಜಗತ್ತೆಲ್ಲವೂ ಪರಮೇಶ್ವರನಾದ ನಿನ್ನ ಜ್ಞಾನರೂಪವೆಂದೇ ಕಾಣುವರು.''

ಈ (೩೯ರಿಂದ ೪೧ರವರೆಗಿನ) ಶ್ಲೋಕಗಳಿಗೇ ರಾಮಾನುಜರು ಹೇಳುವ ಅಭಿಪ್ರಾಯವಿದು : ''ನೀನೇ ಎಲ್ಲಕ್ಕೂ ಆತ್ಮನಾಗಿರುವೆಯೆಂಬುದು ಪರಮಾರ್ಥವು; ನಿನಗಿಂತ ವ್ಯತಿರಿಕ್ತವಾಗಿ ಜಗತ್ತು ಇದೆ –ಎಂದು ತಿಳಿಯುವದು ಭ್ರಾಂತಿಯು. ಈ ಚರಾಚರಜಗತ್ತನ್ನು ವ್ಯಾಪಿಸಿಕೊಂಡಿರುವದು ನಿನ್ನ ಮಹಿಮೆ. ಜ್ಞಾನಾತ್ಮನಾದ ನೀನು ಎಲ್ಲಕ್ಕೂ ಆತ್ಮನಾಗಿ ವ್ಯಾಪಿಸಿಕೊಂಡಿದ್ದರೂ ಈ ಜಗತ್ತನ್ನು ಕೇವಲ ದೇವಮನುಷ್ಯಾದಿರೂಪದಿಂದ ಅಯೋಗಿಗಳು ಭಾವಿಸುತ್ತಾರೆ. ಜಗತ್ತನ್ನು ಜ್ಞಾನಾತ್ಮರಾದ ಆತ್ಮರು ವ್ಯಾಪಿಸಿಕೊಂಡಿದ್ದರೂ ಇದನ್ನು ದೇವಮನುಷ್ಯಾದ್ಯರ್ಥಾಕಾರದಿಂದ ತಿಳಿಯುವದೂ ಭ್ರಾಂತಿಯೇ. ಜ್ಞಾನಿಗಳು ಜ್ಞಾನಸ್ವರೂಪನಾದ ನೀನೇ ಈ ಚಿದಚಿದ್ರೂಪವಾದ ಜಗತ್ತಿಗೆಲ್ಲ ಆತ್ಮನು ಎಂದು ನಿಶ್ಚಯಿಸಿಕೊಂಡಿರುತ್ತಾರೆ.

**ಪುಟ ೧೭೬–೧೭೭, ಆತ್ಮಭೇದವಿಚಾರ :**– ವಿಷ್ಣುಪುರಾಣದ ಈ ಎರಡು ಶ್ಲೋಕಗಳಿಗೂ ಅದ್ವೈತವಿಶಿಷ್ಟಾದ್ವೈತಸಿದ್ಧಾಂತಗಳಿಗೆ ತಕ್ಕಂತೆ ಎರಡೆರಡು ಅರ್ಥ :

**(೧) ಯದ್ಯನ್ಯೋಽಸ್ತಿ ಪರಃ ಕೋಽಪಿ ಮತ್ತಃ ಪಾರ್ಥಿವಸತ್ತಮ ।**
**ತದೈಷೋಽಹಮಯಂ ಚಾನ್ಯೋ ವಕ್ತುಮೇವಮಪೀಷ್ಯತೇ ॥**

ವಿ. ಪು. ೨–೧೩–೯೦

**ಅದ್ವೈತ :**– ಎಲೈ ಪಾರ್ಥಿವಸತ್ತಮನೆ, ನನಗಿಂತ ಅನ್ಯನಾಗಿ ಮತ್ತೊಬ್ಬನು ಯಾವನಾದರೂ ಇದ್ದಿದ್ದರೆ ಆಗ ಇವನು ನಾನು, 'ಇವನು ಮತ್ತೊಬ್ಬನು'– ಎಂದಿಂತು– ಹೇಳುವದಕ್ಕಾದೀತು.

ವಿಶಿಷ್ಟಾದ್ವೈತ :– ನನಗಿಂತ ಬೇರೆಯ ಆಕಾರವುಳ್ಳವನು ಮತ್ತೊಬ್ಬನು ಗೋಚನಾದರೂ ಇದ್ದಿದ್ದರೆ ನಾನು ಇಂಥ ಆಕಾರದವನು, ಇವನು ಇಂಥ ಆಕಾರದವನು– ಎಂದೂ ಹೇಳಬಹುದಾಗಿತ್ತು.

[ಎಲ್ಲಾ ಆತ್ಮರೂ ಜ್ಞಾನಾಕಾರರೇ ಎಂಬುದನ್ನು ಈ ಶ್ಲೋಕವು ಹೇಳುತ್ತದೆ ಎಂದು ಭಾವ.]

**ತಸ್ಯಾತ್ಮಪರದೇಹೇಷು ಸತೋಽಪ್ಯೇಕಮಯಂ ಹಿ ತತ್ ।**
**ವಿಜ್ಞಾನಂ ಪರಮಾರ್ಥೋಽಸೌ ದ್ವೈತಿನೋಽತಥ್ಯದರ್ಶಿನಃ ॥**

ವಿ. ಪು. ೨–೧೪–೩೧

ಅದ್ವೈತ :– ತನ್ನ ಮತ್ತು ಪರರ ದೇಹಗಳಲ್ಲಿ ಅವನು ಇದ್ದರೂ ಅವನು ಒಬ್ಬನೇ ಎಂಬ ಅರಿವು ಪರಮಾರ್ಥವು. ದ್ವೈತಿಗಳು ಮಿಥ್ಯಾದೃಷ್ಟಿಯುಳ್ಳವರು.

ವಿಶಿಷ್ಟಾದ್ವೈತ :– ಎಲ್ಲಾ ದೇಹಗಳಲ್ಲಿಯೂ ಜ್ಞಾನಾಕಾರವುಳ್ಳ ಆತ್ಮರೇ ಇರುತ್ತಿದ್ದರೂ ದೇವತಾದಿಭಿನ್ನಾಕಾರವುಳ್ಳವರೆಂದು ಭಾವಿಸುವವರು ಮಿಥ್ಯಾದರ್ಶಿಗಳು.

**ವೇಣುರಂಧ್ರಪ್ರಭೇದೇನ ಭೇದಃ ಷಡ್ಜಾದಿಸಂಜ್ಞಿತಃ ।**
**ಅಭೇದವ್ಯಾಪಿನೋ ವಾಯೋಸ್ತಥಾಽಸ್ಯ ಪರಮಾತ್ಮನಃ ॥**

ವಿ. ಪು. ೨–೧೪–೩೨

ಅದ್ವೈತ :– ಕೊಳಲಿನ ರಂಧ್ರಗಳ ಭೇದದಿಂದ ಷಡ್ಜವೇ ಮುಂತಾದ ಭೇದವಾಗಿರುತ್ತದೆ; ವಾಯುವೊಬ್ಬನೇ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತಾನೆ. ಇದರಂತೆ ಪರಮಾತ್ಮನಿಗೇ (ದೇಹಭೇದದಿಂದ ಭೇದ).

ವಿಶಿಷ್ಟಾದ್ವೈತ :– ಆತ್ಮರುಗಳಿಗೆ ಇರುವ ಆಕಾರದ ವೈಷಮ್ಯವು ಸ್ವರೂಪದಿಂದಾಗಿರುವದಿಲ್ಲ, ವಾಯುವಿಗೆ ಕೊಳಲಿನ ರಂಧ್ರಗಳ ನಿಮಿತ್ತ ಷಡ್ಜಾದಿಭೇದವಿರುವಂತೆ ಆತ್ಮರುಗಳಿಗೆ, ದೇವತೆಗಳೇ ಮುಂತಾದವರ ಶರೀರದಲ್ಲಿ ಪ್ರವೇಶಿಸಿರುವದರಿಂದ ಭೇದವು ಆಗಿರುತ್ತದೆ.

[ಷಡ್ಜವೇ ಮುಂತಾದ ವಾಯುವಿನ ಅಂಶಗಳು ಪರಸ್ಪರಭಿನ್ನವೇ ; ವಾಯ್ವಾಕಾರವು ಮಾತ್ರ ಒಂದೇ.]

ಪುಟ ೧೭೪, **ಸೋಽಹಂ ಸ ಚ ತ್ವಮ್** :– ಈ ಶ್ಲೋಕದಲ್ಲಿಯೂ ಸಿದ್ಧಾಂತಭೇದದಿಂದ ಅರ್ಥಭೇದವಿದೆ :

**ಏಕಃ ಸಮಸ್ತಂ ಯದಿಹಾಸ್ತಿ ಕಿಞ್ಚಿತ್**
**ತದಚ್ಯುತೋ ನಾಸ್ತಿ ಪರಂ ತತೋಽನ್ಯತ್ ।**
**ಸೋಽಹಂ ಸ ಚ ತ್ವಂ ಸ ಚ ಸರ್ವಮೇತ**
**ದಾತ್ಮಸ್ವರೂಪಂ ತ್ಯಜ ಭೇದಮೋಹಮ್ ॥** ವಿ. ಪು. ೨–೧೬–೨೩

**ಅದ್ವೈತ :–** ಇಲ್ಲಿ ಏನೇನಿದೆಯೋ ಅದೆಲ್ಲವೂ ಒಬ್ಬನೇ, ಅದೇ ಆ ಅಚ್ಯುತನು, ಅವನಿಗಿಂತ ಬೇರೆಯಾಗಿ ಏನೂ ಇರುವದಿಲ್ಲ. ನಾನೂ ಅವನೇ, ನೀನೂ ಅವನೇ, ಇದೆಲ್ಲವೂ ಈ ಆತ್ಮಸ್ವರೂಪವೇ; ಭೇದಭ್ರಾಂತಿಯನ್ನು ಬಿಡು.

**ವಿಶಿಷ್ಟಾದ್ವೈತ :–** ಇರುವದೆಲ್ಲಕ್ಕೂ ಜ್ಞಾನಾಕಾರನಾದ ಆ ಅಚ್ಯುತನೇ ಆತ್ಮನು. ದೇವಾದ್ಯಾಕಾರಭೇದದಿಂದ ಆತ್ಮರುಗಳು ಬೇರೆ ಎಂಬ ಭ್ರಾಂತಿಯನ್ನು ಬಿಡು.

[ಈ ಪ್ರಕರಣವು ದೇಹಾತ್ಮವಿವೇಕವನ್ನು ಉಪದೇಶಿಸುವದಕ್ಕೆ ಬಂದಿದೆ; ಆತ್ಮಭೇದವನ್ನು ತಿರಸ್ಕರಿಸುವದಕ್ಕೆ ಬಂದಿಲ್ಲ– ಎಂಬುದು ರಾಮಾನುಜರ ಅಭಿಪ್ರಾಯ.]

**ಪುಟ ೧೪೦, ಪಿಣ್ಡಃ ಪೃಥಗ್ :–** ಪೂರ್ಣಶ್ಲೋಕವು ಇಂತಿದೆ :

**ಪಿಣ್ಡಃ ಪೃಥಗ್ಯತಃ ಪುಂಸಃ ಶಿರಃಪಾಣ್ಯಾದಿಲಕ್ಷಣಃ ।**
**ತತೋಽಹಮಿತಿ ಕುತ್ರೈತಾಂ ಸಂಜ್ಞಾಂ ರಾಜನ್ ಕರೋಮ್ಯಹಮ್ ॥**

ವಿ. ಪು. ೨–೧೩–೨೪

**ಭಾವಾರ್ಥ :–** ತಲೆ, ಕೈ– ಮುಂತಾದ ಲಕ್ಷಣವಾದ ಶರೀರವು ಪುರುಷನಿಗಿಂತ ಬೇರೆಯಾಗಿರುವದರಿಂದ, ಎಲೈ ರಾಜನೆ, ನಾನು ಎಂಬ ಸಂಜ್ಞೆಯನ್ನು ಯಾವದಕ್ಕೆ ಇಡಲಿ ?

ಇಲ್ಲಿ ಶರೀರವನ್ನು ಆತ್ಮನೆಂದು ಕರೆಯಲಾಗುವಂತಿಲ್ಲ– ಎಂದಿದೆ.

**ಪುಟ ೧೪೨, ಸೂತ್ರಗಳು :–** ಇವುಗಳಿಗೆ ಶಂಕರಾಚಾರ್ಯರ ಮತ್ತು ರಾಮಾನುಜಾಚಾರ್ಯರ ವ್ಯಾಖ್ಯಾನಗಳು ಸಿದ್ಧಾಂತಭೇದದಿಂದ ಬೇರೆಬೇರೆಯಾಗಿರುತ್ತವೆ :–

**(೧) ಶಾರೀರಶ್ಚ, ಉಭಯೇಽಪಿ ಹಿ ಭೇದೇನೈನಮಧೀಯತೇ ॥**

೧–೨–೨೦ (ಶಂಕರರಂತೆ); ೧–೨–೨೧ (ರಾಮಾನುಜರಂತೆ)

['ಶಾರೀರಶ್ಚ' ಎಂಬ ಮಾತು ರಾಮಾನುಜರ ಪಾಠದಲ್ಲಿಲ್ಲ.]

**ಅದ್ವೈತ :–** (ಶಾರೀರನೂ ಅಂತರ್ಯಾಮಿಯಲ್ಲ, ಎರಡು ಶಾಖೆಯವರೂ ಇವನನ್ನು ಭೇದವಾಗಿ ಅಧ್ಯಯನಮಾಡುತ್ತಾರೆ, ಎಂದರ್ಥ). ಕಾಣ್ವರೂ ಮಾಧ್ಯಂದಿನರೂ ಶಾರೀರನೂ ಪೃಥಿವ್ಯಾದಿಗಳಂತೆ ಆತ್ಮನಿಗೆ ಅಧಿಷ್ಠಾನವೆಂದೂ ನಿಯಮ್ಯನೆಂದೂ ಪಠಿಸುತ್ತಾರೆ.

**ವಿಶಿಷ್ಟಾದ್ವೈತ :–** ಮಾಧ್ಯಂದಿನರೂ ಕಾಣ್ವರೂ ಅಂತರ್ಯಾಮಿಗೆ (ಇವನು) ನಿಯಾಮ್ಯನೆಂದು ವಾಗಾದ್ಯಚೇತನಗಳಂತೆಯೇ ಈ ಶಾರೀರನನ್ನು ಬೇರ್ಪಡಿಸಿ ಅಧ್ಯಯನಮಾಡುತ್ತಿದಾರೆ.

[ಇಲ್ಲಿ ಭೇದವು ವ್ಯಾವಹಾರಿಕವೆಂಬುದು ಶಂಕರಾಚಾರ್ಯರ ಮತ; ಜೀವತ್ವವು ಪರಮಾತ್ಮನಲ್ಲಿ ಅಧ್ಯಸ್ತವೆಂಬುದು ಅವರ ಸಿದ್ಧಾಂತ.]

**(೨) ಭೇದವ್ಯಪದೇಶಾಚ್ಚಾನ್ಯಃ** ॥ ೧-೧-೨೨

**ಅದ್ವೈತ :–** ಬೇರೆಯಾಗಿ ಹೇಳಿರುವದರಿಂದಲೂ ಜೀವರಿಗಿಂತ ಅಂತ-ರ್ಯಾಮಿಯು ಬೇರೆ.

**ವಿಶಿಷ್ಟಾದ್ವೈತ :–** ಇಲ್ಲಿಯೂ ಶಂಕರರಂತೆಯೇ ಅರ್ಥ. (ಆದರೆ ಅದ್ವೈತಿಗಳ ಮತದಲ್ಲಿ ಜೀವಬ್ರಹ್ಮಭೇದವು ವ್ಯಾವಹಾರಿಕ).

**(೩) ಅಧಿಕಂ ತು ಭೇದನಿರ್ದೇಶಾತ್** । ೨-೧-೨೨

**ಅದ್ವೈತ :–** ಶಾರೀರನಿಗಿಂತ ಅಧಿಕವಾಗಿ ಸರ್ವಜ್ಞಸರ್ವಶಕ್ತಿಯುತವಾದ ಬ್ರಹ್ಮನೇ ಸ್ರಷ್ಟ್ರ, ಏಕೆಂದರೆ (ಶ್ರುತಿಯಲ್ಲಿ) ಭೇದವನ್ನು ನಿರ್ದೇಶಿಸಿದೆ.

**ವಿಶಿಷ್ಟಾದ್ವೈತ :** ಆಧ್ಯಾತ್ಮಿಕಾದಿದುಃಖಯೋಗಕ್ಕೆ ತಕ್ಕ ಪ್ರತ್ಯಗಾತ್ಮನಿಗಿಂತ ಅಧಿಕವಾಗಿರುವದು ಎಂದರೆ ಮತ್ತೊಂದು ಪದಾರ್ಥವಾದದ್ದು ಬ್ರಹ್ಮವು ; ಏಕೆಂದರೆ ಶ್ರುತಿಯಲ್ಲಿ ಹಾಗೆಂದು ನಿರ್ದೇಶಿಸಿದೆ.

**ಪುಟ ೧೮೮, ತದ್ಭಾವಭಾವಮಾಪನ್ನಃ, ವಿಭೇದಜನಕೇಽಜ್ಞಾನೇ–** ಈ ಎರಡು ಶ್ಲೋಕಗಳನ್ನೂ ಇಲ್ಲಿ ಒಟ್ಟಿಗೆ ಬರೆದು ಸಿದ್ಧಾಂತಭೇದದಿಂದ ಆಗಿರುವ ಅರ್ಥಭೇದವನ್ನು ತಿಳಿದುಕೊಳ್ಳಬೇಕು.

**ತದ್ಭಾವಭಾವಮಾಪನ್ನಸ್ತದಾಽಸೌ ಪರಮಾತ್ಮನಾ ।**
**ಭವತ್ಯಭೇದೀ ಭೇದಶ್ಚ ತಸ್ಯಾಜ್ಞಾನಕೃತೋ ಭವೇತ್** ॥ ವಿ.ಪು.೬-೭-೯೫
**ವಿಭೇದಜನಕೇಽಜ್ಞಾನೇ ನಾಶಮಾತ್ಯನ್ತಿಕಂ ಗತೇ ।**
**ಆತ್ಮನೋ ಬ್ರಹ್ಮಣೋ ಭೇದಮಸನ್ತಂ ಕಃ ಕರಿಷ್ಯತಿ** ॥ ವಿ.ಪು.೬-೭-೯೬

**ಅದ್ವೈತ :–** ಆ ಪರಮಾತ್ಮತ್ವದ ಭಾವನೆಯನ್ನು ಪಡೆದುಕೊಂಡು ಆ ಬಳಿಕ ಇವನು ಪರಮಾತ್ಮನೊಡನೆ ಅಭೇದಿಯಾಗಿಬಿಡುತ್ತಾನೆ. ಭೇದವು ಅವನಿಗೆ ಅಜ್ಞಾನದಿಂದಾಗಿರುತ್ತದೆ. ಭೇದವನ್ನುಂಟುಮಾಡುವ ಅಜ್ಞಾನವು ಅತ್ಯಂತವಾಗಿ ನಾಶವಾಗಲು ತಾನು ಬ್ರಹ್ಮಕ್ಕಿಂತ ಬೇರೆ–ಎಂಬ ಇಲ್ಲದ ಭೇದವನ್ನು ಯಾವನು ಮಾಡಿಕೊಂಡಾನು ?

**ವಿಶಿಷ್ಟಾದ್ವೈತ :–** ಆ ಬ್ರಹ್ಮದ ಸ್ವಭಾವವನ್ನು– ಎಂದರೆ ಎಲ್ಲಾ ಭಾವನೆಯನ್ನೂ ನಾಶಮಾಡಿಕೊಂಡಿರುವ ಸ್ವಭಾವವನ್ನು ಪಡೆದುಕೊಂಡಾತನು, ಪರಮಾತ್ಮನೊಡನೆ ಅಭೇದಿಯಾಗುವವನು, ಎಂದರೆ ಜ್ಞಾನೈಕಾಕಾರನಾಗುವವನು. ಇವನಿಗೆ ದೇವತಾದಿರೂಪವಾದ ಭೇದವು ಕರ್ಮರೂಪವಾದ ಅಜ್ಞಾನದಿಂದಾಗಿರು

ತ್ತದೆ. ಪರಬ್ರಹ್ಮಜ್ಞಾನದಿಂದ ಕರ್ಮರೂಪವಾದ ಅಜ್ಞಾನವು ನಾಶವಾದರೆ ಆತ್ಮನಲ್ಲಿ ನಿಜವಾಗಿಲ್ಲದ ದೇವತಾದ್ಯಾಕಾರದ ಭೇದವನ್ನು ಯಾವನು ಮಾಡಿಕೊಂಡಾನು ?

**ಪುಟ ೧೯೨, ಅವಿದ್ಯೆಗೆ ಪ್ರಮಾಣ**- ಪಂಚಪಾದಿಕೆಯಲ್ಲಿ ಅವಿದ್ಯಾಶಕ್ತಿಗೆ ದೃಷ್ಟಾರ್ಥಾಪತ್ತಿ, ಶ್ರುತಾರ್ಥಾಪತ್ತಿ- ಎಂಬ ಎರಡು ಪ್ರಮಾಣಗಳನ್ನು ಕೊಟ್ಟಿದೆ. ಇಷ್ಟಸಿದ್ಧಿಯಲ್ಲಿಯೂ- ಮುಖ್ಯವಾಗಿ ವಿವರಣದಲ್ಲಿಯೂ- ಅನುಮಾನಾದಿಪ್ರಮಾಣಗಳನ್ನೂ ಕೊಟ್ಟಿದೆ. ಪ್ರಮಾಣಸಿದ್ಧವಾದರೆ ಪರಮಾರ್ಥವೇ ಆಗಿಬಿಡುವದಲ್ಲ !- ಎಂಬ ಶಂಕೆಯನ್ನು ತೆಗೆದು ವಿವರಣಾಚಾರ್ಯರು ಅವಿದ್ಯೆಯು ಅಭಾವರೂಪವಲ್ಲ ಎಂಬುದಕ್ಕೆ ಪ್ರಮಾಣವನ್ನು ಉದಾಹರಿಸಿದೆ - ಎಂದು ಸಮಾಧಾನವನ್ನು ಹೇಳುತ್ತಾರೆ. ಇದೆಲ್ಲ ಶಾಂಕರಭಾಷ್ಯದಲ್ಲಿಲ್ಲದ್ದು, ಶಾಂಕರ ಪ್ರಸ್ಥಾನಪ್ರಕ್ರಿಯೆಗೆ ವಿರುದ್ಧವಾದದ್ದು-ಎಂದು ನಾನು ಬೇರೆಬೇರೆಯ ಗ್ರಂಥಗಳಲ್ಲಿ ಸ್ಥಾಪಿಸಿರುತ್ತೇನೆ.

**ಪುಟ ೧೯೩, ಅವಿದ್ಯೆಗೆ ಆಶ್ರಯಾನುಪಪತ್ತಿ**- ಅವಿದ್ಯೆ ಎಂದರೆ ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವೆಂದೇ ಶಂಕರಾಚಾರ್ಯರು ಬರೆದಿದ್ದಾರೆ; ಅವಿದ್ಯೆ ಯಾರಿಗೆ ?- ಎಂಬ ಪ್ರಶ್ನೆಗೆ ವ್ಯವಹಾರಾವಸ್ಥೆಯಲ್ಲಿ ಪ್ರಶ್ನೆಯನ್ನು ಕೇಳುವ ಜೀವನಿಗೇ ಎಂದೂ, ಪರಮಾರ್ಥವನ್ನು ಅರಿತವನಿಗೆ ಅವಿದ್ಯೆಯೇ ಇಲ್ಲವೆಂದೂ ಅವರು ಬರೆದಿರುತ್ತಾರೆ. ಪಂಚಪಾದಿಕಾದಿವ್ಯಾಖ್ಯಾನಪ್ರಸ್ಥಾನಗಳಲ್ಲಿ ಆಶ್ರಯಾದಿಗಳನ್ನು ಕುರಿತ ಪ್ರಶ್ನೆಯು ತಲೆಯೆತ್ತಿಕೊಂಡಿದೆ. ಭಾಮತೀಕಾರರು ಜೀವನಿಗೇ ಅವಿದ್ಯೆಯೆಂದೂ, ಇಷ್ಟಸಿದ್ಧಿಕಾರರು ಬ್ರಹ್ಮಕ್ಕೇ ಎಂದೂ, ಸಂಕ್ಷೇಪಶಾರೀರಕಕಾರರು ಚಿನ್ಮಾತ್ರಕ್ಕೆ ಎಂದೂ ಬಗೆಬಗೆಯಾಗಿ ವರ್ಣಿಸಿರುತ್ತಾರೆ. ಇವರು ಹೇಳುವ ಅವಿದ್ಯೆಯು ಭಾಷ್ಯದಲ್ಲಿ ಅವ್ಯಾಕೃತವೆಂದು ವ್ಯವಹೃತವಾಗಿದೆ ; ಅದು ಅವಿದ್ಯಾಕಲ್ಪಿತವೆಂದೂ ಅಲ್ಲಿದೆ.

**ಪುಟ ೧೯೫, ಬ್ರಹ್ಮವ್ಯತಿರಿಕ್ತಜ್ಞಾನವು ಯಾವದಕ್ಕೆ ವಿರೋಧಿ ?** ಇಲ್ಲಿ ಜ್ಞಾನವು ಬ್ರಹ್ಮದ ಯಾಥಾತ್ಮ್ಯಜ್ಞಾನಕ್ಕೆ ವಿರೋಧಿಯೊ, ಪ್ರಪಂಚಸತ್ಯತ್ವರೂಪಾಜ್ಞಾನಕ್ಕೆ ವಿರೋಧಿಯೊ ?- ಎಂಬ ವಿಕಲ್ಪವನ್ನು ತಂದೊಡ್ಡಿರುತ್ತದೆ. ಆದರೆ ಬ್ರಹ್ಮವನ್ನು ಅರಿಯದೆ ಇರುವದು, ಅದನ್ನು ಪ್ರಪಂಚವೆಂದೂ ಪ್ರಪಂಚವು ಸತ್ಯವೆಂದೂ ಅರಿಯುವದು-ಇವೆಲ್ಲ ಒಂದೇ ಅಜ್ಞಾನ; ಶಬ್ದಗಳು ಬೇರೆಬೇರೆಯಾದ ಮಾತ್ರಕ್ಕೆ ವಸ್ತುವೂ ಬೇರೆಬೇರೆಯಾಗಿರಬೇಕು ಎಂದು ಕಲ್ಪಿಸುವದು ಯುಕ್ತವಾಗಲಾರದು. ಬ್ರಹ್ಮವನ್ನು ಬ್ರಹ್ಮವೆಂದು ಅರಿತುಕೊಂಡಾಗ- ಎಂದರೆ ಬ್ರಹ್ಮಾತ್ಮಾನುಭವವುಂಟಾದಾಗ- ಅಜ್ಞಾನಗಳು ಬೇರೆಬೇರೆ ಎಂಬ ಅಜ್ಞಾನವು ಹೇಗೆ ಉಳಿದು

ಕೊಂಡೀತು ? ಆದರೂ ಇಲ್ಲಿ ರಾಮಾನುಜರು ಕೇವಲ ಯುಕ್ತಿಪ್ರಧಾನರಾದ ಅದ್ವೈತಿಗಳಮೇಲೆ ಕೇವಲ ಯುಕ್ತಿಯಿಂದಲೇ ಈ ವಿಕಲ್ಪವನ್ನು ಒಡ್ಡಿರುತ್ತಾರೆಂತ ಭಾವಿಸಬೇಕಾಗಿದೆ.

**ಪುಟ ೧೯೮, ಭ್ರಾಂತಿಗೆ ದೋಷವು ಬೇಕು**– ಇದರ ವಿಚಾರವನ್ನು ಹಿಂದೆ ಹೇಳಿದೆ. ಭ್ರಾಂತಿಯು ಉತ್ಪತ್ತಿಯಾಗುತ್ತದೆ, ಭ್ರಾಂತಿಯಿಂದ ಕಾಣುವ ವಸ್ತುವೂ ಹುಟ್ಟುತ್ತದೆ; ಅದಕ್ಕೆ ಅವಿದ್ಯೆಯು ಕಾರಣ– ಎಂಬ ವಾದವನ್ನು ವ್ಯಾಖ್ಯಾನಕಾರರು ಇಟ್ಟುಕೊಂಡಿರುವದರಿಂದ ಈ ಆಕ್ಷೇಪವು ಅವರಮೇಲೆ ಬೀಳುತ್ತದೆ.

**ಪುಟ ೧೯೮, ಸದಸದ್ವಿಲಕ್ಷಣತ್ವವೇ** ಅನಿರ್ವಚನೀಯತ್ವ ಎಂಬ ಲಕ್ಷಣವನ್ನು ವ್ಯಾಖ್ಯಾನಕಾರರು ಇಟ್ಟುಕೊಂಡಿರುತ್ತಾರೆ, ೧೧೭ನೆಯ ಪುಟದಲ್ಲಿರುವ ಈ ವಾದದ ಪರಿಶಿಷ್ಟವನ್ನು ನೋಡಿರಿ.

**ಪುಟ ೨೦೨, ಸಾಕ್ಷಿಗೆ ವಿಷಯವಾಗಿರುವ ಅಜ್ಞಾನ**– ಅಜ್ಞಾನವು ಜ್ಞಾನಾಭಾವ, ವಿಪರೀತಜ್ಞಾನ– ಎಂದು ಎರಡೇ ವಿಧವೆಂದು **ಬ್ರಹ್ಮಸಿದ್ಧಿ**ಕಾರರೂ ಅವರನ್ನನುಸರಿಸಿರುವ **ಭಾಮತೀ**ಕಾರರೂ ಒಪ್ಪಿರುತ್ತಾರೆ. ಅವ್ಯಾಕೃತನಾಮರೂಪಶಕ್ತಿಯೇ ಅಜ್ಞಾನವೆಂದು ಪಂಚಪಾದಿಕಾಕಾರರು; ಅದು ಸುಷುಪ್ತಿಯಲ್ಲಿ ಸಂಸ್ಕಾರರೂಪವಾಗಿದ್ದು ಎಚ್ಚರಾಗುತ್ತಲೂ ಅಹಂಕಾರರೂಪವಾಗಿ ಪರಿಣಮಿಸುವದು –ಎಂಬುನು ಅವರ ಮತ. ಅದು ಜ್ಞಾನಾಭಾವ, ಮಿಥ್ಯಾಜ್ಞಾನ ಮತ್ತು ಅದರ ಸಂಸ್ಕಾರ– ಈ ಮೂರರಕ್ಕಿಂತಲೂ ವ್ಯತಿರಿಕ್ತವಾಗಿ ಅವಸ್ಥಾತ್ರಯದಲ್ಲಿಯೂ ಉದ್ದಕ್ಕೂ ಅನುಸ್ಯೂತವಾಗಿರುವ ಭಾವರೂಪವಾದ ಅಜ್ಞಾನವು–ಎಂದು **ವಿವರಣಾಚಾರ್ಯ**ರೆನ್ನುತ್ತಾರೆ ; ಕರ್ಮವಿಕ್ಷೇಪಸಂಸ್ಕಾರಸಹಿತವಾದ ಲಯಲಕ್ಷಣಾವಿದ್ಯೆಯು ಸುಷುಪ್ತಿಯಲ್ಲಿರುತ್ತದೆ ಎಂದು **ಭಾಮತೀಕಾರರ** ಮತ ; ಅವ್ಯಾಕೃತವನ್ನು 'ಅವಿದ್ಯಾಶಕ್ತಿ' ಎಂದು ಇವರು ಅಲ್ಲಲ್ಲಿ ಕರೆದಿರುತ್ತಾರೆ. ಇದು ಒಬ್ಬೊಬ್ಬ ಜೀವನಿಗೆ ಒಂದೊಂದರಂತೆ ಅನೇಕವಾಗಿದೆ ಎಂಬುದು ಅವರ ಸಿದ್ಧಾಂತ. **ಇಷ್ಟಸಿದ್ಧಿಕಾರರು** ಪಂಚಪಾದಿಕಾಕಾರರಂತೆಯೇ ಅವ್ಯಾಕೃತಲಕ್ಷಣಮಾಯೆಯನ್ನೇ ಅವಿದ್ಯೆ ಎನ್ನುತ್ತಾರೆ. ಅದು ಜೀವಾಶ್ರಿತವೆಂಬ ಭಾಮತೀಪಕ್ಷವನ್ನು ಖಂಡಿಸಿ ಬ್ರಹ್ಮಾಶ್ರಿತವೆಂದೇ ಹೇಳುತ್ತಾರೆ. ಹೀಗೆ ವ್ಯಾಖ್ಯಾನಪ್ರಸ್ಥಾನಗಳು ಈ ವಿಷಯದಲ್ಲಿ ವಿವಿಧಾಭಿಪ್ರಾಯಗಳನ್ನು ಪ್ರಕಟಿಸಿವೆ.

**ಪುಟ ೨೧೪, ಪ್ರಕಾಶ**– 'ಜ್ಞಾನವು ಪ್ರಕಾಶಕ' –ಎಂದರೆ ಜ್ಞೇಯವನ್ನು ನಿಶ್ಚಯಿಸುವದು ; ದೀಪವು ಪ್ರಕಾಶಕ ಎಂದರೆ ಕತ್ತಲೆಯಲ್ಲಿ ತೋರದ ವಸ್ತುವನ್ನು ಬೆಳಗಿತೋರಿಸುವ ಸಾಧನವಾಗಿರುವದು. ಆದ್ದರಿಂದ ದೃಷ್ಟಾಂತದಲ್ಲಿಯೂ ದಾರ್ಷ್ಟಾಂತಿಕದಲ್ಲಿಯೂ 'ಪ್ರಕಾಶಕ'ಶಬ್ದಕ್ಕೆ ಒಂದೇ ಅರ್ಥವಿರುವದಿಲ್ಲ. ಅಂತೂ ದೃಷ್ಟಾಂತವು ಹೊಂದುವದಿಲ್ಲ– ಎಂಬುದು ಸಿದ್ಧಾಂತಿಯ ಆಶಯವಿರಬಹುದು.

**ಪುಟ ೨೧೫, ಜ್ಞಾನವು ಪ್ರಮಾಣ**– ಪ್ರಕಾಶವು ಹಾಗಲ್ಲ– ಎಂಬುದು ಸಿದ್ಧಾಂತಿಯ ಅಭಿಪ್ರಾಯ. ಆದರೆ ಆತ್ಮನು ಯಾವಾಗಲೂ ಜ್ಞಾನಸ್ವರೂಪನೇ ಎಂಬುದು ಸಿದ್ಧಾಂತವಾಗಿರುವದರಿಂದ ಅವನು ಜ್ಞಾನದಿಂದ ವ್ಯವಹಾರಕ್ಕೆ ಯೋಗ್ಯನಾಗುವನೆಂಬುದು ಸಿದ್ಧಾಂತಕ್ಕೂ ಹೊಂದುವದಿಲ್ಲವೆಂದು ತೋರುತ್ತದೆ.

**ಪುಟ ೨೧೬, ಜ್ಞಾನ, ಅಜ್ಞಾನ**– ಎಂಬ ಶಬ್ದಗಳನ್ನು ಅಂತಃಕರಣದ ವೃತ್ತಿಗಳೆಂಬ ಅರ್ಥದಲ್ಲಿಯೇ ವ್ಯವಹಾರದಲ್ಲಿ ಬಳಸಲಾಗುತ್ತದೆ. ಆದರೆ ಅಜ್ಞಾನವೆಂದರೆ ಪೂರ್ವಪಕ್ಷಿಯ ಮತದಲ್ಲಿ ವೃತ್ತಿಯಲ್ಲ ; ಈ ವಿಷಯವನ್ನು ಪೂರ್ವಪಕ್ಷಿಯ ಅನುಮಾನದಲ್ಲಾಗಲಿ, ಸಿದ್ಧಾಂತಿಯ ಅನುಮಾನದಲ್ಲಾಗಲಿ ಲೆಕ್ಕಕ್ಕೆ ತೆಗೆದುಕೊಂಡಿರುವಂತೆ ಕಾಣುವದಿಲ್ಲ.

**ಪುಟ ೨೧೮, ಸ್ವಪ್ರಾಗಭಾವವ್ಯತಿರಿಕ್ತವಸ್ತ್ವಂತರಪೂರ್ವಕಮ್**– ಪ್ರಮಾಣವು ತನ್ನ ಪ್ರಾಗಭಾವಕ್ಕಿಂತ (ಜ್ಞಾನಾಭಾವಕ್ಕಿಂತ) ವ್ಯತಿರಿಕ್ತವಾದ ವಸ್ತ್ವಂತರವನ್ನು ತೊಲಗಿಸುತ್ತದೆ ಎಂಬ ಪ್ರತಿಜ್ಞೆಯಲ್ಲಿ ತನ್ನ ಪ್ರಾಗಭಾವವನ್ನಲ್ಲದೆ ಮತ್ತೊಂದನ್ನು ತೊಲಗಿಸುವ ಶಂಕೆಯೇ, ಪ್ರಾಗಭಾವಕ್ಕಿಂತ ಬೇರೆ ಎಂದು ವಸ್ತುಶಬ್ದದಿಂದಲೇ ಗೊತ್ತಾಗುತ್ತದೆ ; ಏಕೆಂದರೆ ವಸ್ತುವೆಂದರೆ ಅಭಾವಕ್ಕಿಂತ ವ್ಯತಿರಿಕ್ತವಾದ ಭಾವ. ಆದ್ದರಿಂದ ಇದೆಲ್ಲ ವ್ಯರ್ಥವಿಶೇಷಣ, ಇದಕ್ಕೆ ವ್ಯಾವರ್ತ್ಯವೇ ಇಲ್ಲ–ಎಂದು ಶಬ್ದಪ್ರಯೋಗದಮೇಲಿನ ದೂಷಣೆಯಿದು. ಅನುಮಾನದ ಮೇಲಲ್ಲ.

**ಪುಟ ೨೧೯, ಪ್ರತೀತಿಭ್ರಾಂತಿಬಾಧಗಳು**– (೧) ಪ್ರತೀತಿ, ಭ್ರಾಂತಿ, ಬಾಧ– ಎಂಬ ಶಬ್ದಗಳಿಂದ ಪ್ರತ್ಯಕ್ಷಪ್ರತೀತಿಗಳು ಪ್ರತೀತ್ಯಂತರದಿಂದ– ಎಂದರೆ ಪ್ರಮಾಣಾಂತರದಿಂದ– ಎಂದು ಒಂದರ್ಥ. (೨) ಇವುಗಳಿಂದ ಎಂದರೆ ಲೌಕಿಕ ಪ್ರತೀತಿಗಳಿಂದ ; 'ಪ್ರತೀತ್ಯನ್ತರೇಣ' ಎಂದರೆ ಆಗಮಜನ್ಯಜ್ಞಾನದಿಂದ –ಎಂದು ಇನ್ನೊಂದರ್ಥ ; (೩) ಈ ಪ್ರತೀತಿಗಳಿಂದ ಎಂದು ಬಹುವಚನವನ್ನು ಪ್ರಯೋಗಿಸಿರುವದು ಒಂದೇ ಅಧಿಷ್ಠಾನದ ವಿಷಯಕ್ಕೆ ಹಾವು, ನೆಲದ ಬಿರುಕು, ನೀರಿನಧಾರೆ, ಎಂದು ಬಹುವಾಗಿ ಆಗುವ ಪ್ರತ್ಯಯಗಳಿಂದ ; ಪ್ರತೀತ್ಯಂತರದಿಂದ ಎಂದರೆ ಬಾಧಕ ಜ್ಞಾನದಿಂದ– ಎಂದು ಇನ್ನೊಂದರ್ಥ. ಹೀಗೆ ಮೂರುಬಗೆಯ ವ್ಯಾಖ್ಯಾನವನ್ನು **ಶ್ರುತಪ್ರಕಾಶಿಕೆ**ಯಲ್ಲಿ ಮಾಡಿರುತ್ತಾರೆ. ಮುಖ್ಯವಾಗಿ ಎದುರಿಗೆ ತೋರುವ ಶುಕ್ತ್ಯಾದಿವಸ್ತುವೇ ಪ್ರತೀತಿ, ಭ್ರಾಂತಿ, ಬಾಧ– ಇವುಗಳಿಗೆ ವಿಷಯವಾದೀತೇ ಹೊರತು ಅನಿರ್ವಚನೀಯರಜತವಲ್ಲ ; ಅನಿರ್ವಚನೀಯರಜತವನ್ನು ತೋರಿಸುವ (ಪ್ರತೀತಿಭ್ರಾಂತಿಬಾಧಗಳಿಗಿಂತ ವ್ಯತಿರಿಕ್ತವಾದ) ಪ್ರತೀತಿಯೂ ಇಲ್ಲ ; ಆದ್ದರಿಂದ ಅನಿರ್ವಚನೀಯವೆಂಬ ಪದಾರ್ಥವೇ ಇಲ್ಲ ಎಂಬುದು ಭಾಷ್ಯದ ಅಭಿಪ್ರಾಯ.

**ಪುಟ ೨೨೦, ಅನಿರ್ವಚನೀಯವಸ್ತೂತ್ಪತ್ತಿ**– ಪಂಚಪಾದಿಕಾಕಾರರು 'ಅಧ್ಯಾಸ'ವೆಂಬ ಶಾಂಕರಭಾಷ್ಯಗತಶಬ್ದಕ್ಕೆ ಅಧ್ಯಸ್ತವಾಗಿ ತೋರುವ ವಸ್ತು

ಎಂದೇ ಅರ್ಥವನ್ನು ಮಾಡಿರುತ್ತಾರೆ. ಭಾಮತಿ, ಇಷ್ಟಸಿದ್ಧಿ, ವಿವರಣ-ಮುಂತಾದ ವ್ಯಾಖ್ಯಾನಪ್ರಸ್ಥಾನಗ್ರಂಥಗಳಲ್ಲಿ ಭ್ರಾಂತಿಪ್ರತ್ಯಕ್ಷವಿಷಯವಾದ ವಸ್ತುವು ಮನಸಿನಲ್ಲಿ ತತ್ಕಾಲಕ್ಕೆ ಹುಟ್ಟಿತೋರುತ್ತದೆ ಎಂದೇ ಒಂದು ವಾದವನ್ನು ಕಲ್ಪಿಸಿರುತ್ತಾರೆ. ಶಂಕರಾಚಾರ್ಯರು 'ಅದಲ್ಲದ್ದನ್ನು ಅದೆಂದು ತಿಳಿಯುವದು' ಎಂದೇ ಅಧ್ಯಾಸಲಕ್ಷಣವನ್ನು ಬರೆದಿರುತ್ತಾರೆ.

**ಪುಟ ೨೨೧, ಅನ್ಯಥಾಖ್ಯಾತ್ಯಾದಿಗಳು**- ವ್ಯಾಖ್ಯಾನಪ್ರಸ್ಥಾನಗಳಲ್ಲಿ ಸತ್ಖ್ಯಾತಿ (ಇರುವ ವಸ್ತುವೇ ತೋರುವದು), ಅಸತ್ಖ್ಯಾತಿ (ಇಲ್ಲದ್ದೇ ತೋರುವದು), ಆತ್ಮಖ್ಯಾತಿ (ವಿಜ್ಞಾನವೇ ತೋರುವದು), ಅಖ್ಯಾತಿ (ತೋರದೆಇರುವದು, ಒಂದು ತೋರುವಾಗ ಇನ್ನೊಂದರ ನೆನಪಾಗುವದು), ಅನ್ಯಥಾಖ್ಯಾತಿ (ಒಂದು ಇನ್ನೊಂದರಂತೆ ತೋರುವದು)- ಈ ವಾದಗಳನ್ನೆಲ್ಲ ಖಂಡಿಸಿ ಅನಿರ್ವಚನೀಯಖ್ಯಾತಿ ಎಂಬ ವಾದವನ್ನು ಒಪ್ಪಿರುತ್ತದೆ. ಅದನ್ನು ಖಂಡಿಸಿ **ಅನ್ಯಥಾಖ್ಯಾತಿಯೇ ಸರಿ** ಎಂದು ಇಲ್ಲಿ ಸಾಧಿಸಿದೆ. ರಾಮಾನುಜರು ಮುಂದೆ (ಪು. ೨೨೩) **ಯಥಾರ್ಥಖ್ಯಾತಿ (ಸತ್ಖ್ಯಾತಿ)**ಯನ್ನು ಒಪ್ಪಿರುತ್ತಾರೆ. ಶಂಕರಾಚಾರ್ಯರು ಖ್ಯಾತಿಬಾಧೆಗಳ ಖಂಡನಮಂಡನಗಳ ವಿವರಕ್ಕೆ ಕೈಹಾಕಿಲ್ಲ ; ಅವರು ಭ್ರಾಂತಿಯೆಂದರೆ ಒಂದನ್ನು ಇನ್ನೊಂದೆಂದು ತಿಳಿಯುವ ಅಧ್ಯಾಸವೇ ಎಂದಿರುತ್ತಾರೆ. ಆದರೂ ಅವರದು ರಾಮಾನುಜರು ಹೇಳುವ ಅನ್ಯಥಾಖ್ಯಾತಿಯಲ್ಲ.

**ಪುಟ ೨೨೮, ಮಾಯೆ**-ಸ್ವಪ್ನದಲ್ಲಿ ತೋರುವ ದೃಶ್ಯವು ಈಶ್ವರಸೃಷ್ಟವಾಗಿರುವದರಿಂದ ಸ್ವಪ್ನವು ಮಾಯಾಮಾತ್ರವು ಎಂದರೆ ಈಶ್ವರಕೃತವಾದ ಮಾಯಾ (ಆಶ್ಚರ್ಯಕರವಾದ) ಸೃಷ್ಟಿ ಎಂಬರ್ಥವನ್ನು ಇಲ್ಲಿ ಕೊಟ್ಟಿದೆ. ಮುಂದೆ 'ವಿಚಿತ್ರಾರ್ಥಸರ್ಗಕರವಾದ' (ಬಗೆಬಗೆಯಾದ ಪದಾರ್ಥಗಳನ್ನು ಸೃಷ್ಟಿಮಾಡಬಲ್ಲ) ಪ್ರಕೃತಿ ಎಂಬರ್ಥದಲ್ಲಿ (ಪು. ೨೩೪,೨೩೬) ಇದನ್ನು ಪ್ರಯೋಗಿಸಿದೆ. ಸೂ. ೧-೧-೨೧ರಲ್ಲಿ ಯಾಸ್ಕವಚನಪ್ರಮಾಣದಿಂದ ಜ್ಞಾನ ಎಂಬರ್ಥದಲ್ಲಿ ಪ್ರಯೋಗಿಸಿದೆ.

**ಪುಟ ೨೨೮, ಯಥಾರ್ಥಖ್ಯಾತಿ**- ಇಲ್ಲಿ ಸ್ವಪ್ನ, ಶಂಖವು ಹಳದಿಯಬಣ್ಣದ್ದಾಗಿ ತೋರುವದು, ಸ್ಫಟಿಕಮಣಿಯು ಕೆಂಪು, ಬಿಸಿಲುಕುದುರೆಯ ನೀರು, ಅಲಾತಚಕ್ರ, ಕನ್ನಡಿಯಲ್ಲಿ ಮುಖದ ಪ್ರತಿಬಿಂಬ, ದಿಗ್ಭ್ರಾಂತಿ, ದ್ವಿಚಂದ್ರ-ಎಂಬ ಅನುಭವಗಳಲ್ಲಿ ಜ್ಞಾನವು ಯಥಾರ್ಥವೇ ಎಂದು ಪ್ರತಿಜ್ಞೆಮಾಡಿ, ಅವು ಬೇರೆಯ ವಿಧವಾಗಿವೆ ಎಂಬ ಭ್ರಾಂತಿಯು ಏತಕ್ಕೆ ಅಥವಾ ಹೇಗೆ ಆಗುವದೆಂಬುದನ್ನು ತಿಳಿಸಿದಂತೆ ಆಗಿದೆಯೇ ಹೊರತು ಲೋಕದಲ್ಲಿ ಭ್ರಾಂತಿಯೆಂಬುದೇ ಇಲ್ಲ-ಎಂದೇನೂ ತೋರಿಸಿದಂತೆ ಆಗಿಲ್ಲ- ಎಂದು ನಮಗೆ ತೋರುತ್ತದೆ.

**ಪುಟ ೨೩೬, ತಮಸ್ಸು**- ಅಲ್ಲಿ 'ಸತ್ತು ಇರಲಿಲ್ಲ, ಅಸತ್ತೂ ಇರಲಿಲ್ಲ' ಎಂಬ ಶ್ರುತಿಯ ಅಕ್ಷರಾರ್ಥವನ್ನು ಹಿಡಿದು ಅನಿರ್ವಚನೀಯವಾದವನ್ನು ಪೂರ್ವಪಕ್ಷಿಯು

ಒಡ್ಡಿರುತ್ತಾನೆ ; ಸುಬಾಲೋಪನಿಷತ್ತಿನ ಪ್ರಮಾಣದಿಂದ ತಮಃಶಬ್ದಕ್ಕೆ ಅಚಿತ್ಸ ಮಷ್ಟಿಯೆಂಬರ್ಥವನ್ನು ಸಿದ್ಧಾಂತಿಯು ತೆಗೆದಿರುತ್ತಾನೆ. ಈ ಮತಭೇದವು ಶ್ರುತಿಗೆ ವ್ಯಾಖ್ಯಾನಮಾಡುವ ಪ್ರಕಾರವನ್ನವಲಂಬಿಸಿರುತ್ತದೆ.

**ಪುಟ ೨೩೭, 'ಅನಾದಿಮಾಯೆಯಾ ಸುಪ್ತಃ'** ಎಂಬುದು ಗೌಡಪಾದ ಕಾರಿಕೆಯೆಂದು ಅದ್ವೈತಿಗಳು ; ಇದು ಶ್ರುತಿಯೇ ಎಂದು ಮಧ್ವರು ; ಇಲ್ಲಿ ಶ್ರುತಿಗಳ ನಡುವೆ ಇದನ್ನು ಉದಾಹರಿಸಿರುವದರಿಂದ ರಾಮಾನುಜರಿಗೂ ಇದು ಶ್ರುತಿಯೇ ಆಗಿರಬಹುದೆಂಬ ಊಹೆಗೆ ಅವಕಾಶವಿದೆ.

**ಪುಟ ೨೪೧, ಅಸ್ತಿ, ನಾಸ್ತಿ**- ವಿಜ್ಞಾನವೊಂದಲ್ಲದೆ ಮಿಕ್ಕದ್ದೆಲ್ಲವೂ ಇಲ್ಲದ್ದು- ಎಂಬುದು ಪುರಾಣದ ಅಭಿಪ್ರಾಯವೆಂದು ಪೂರ್ವಪಕ್ಷಿಯ ಮತ ; ನಾಸ್ತಿ (ಇಲ್ಲ) ಎಂಬುದು ಮಾರ್ಪಡುತ್ತಿರುವ ಅಚಿದ್ವಸ್ತು ಎಂದು **ಸಿದ್ಧಾಂತ.** ಈ ಅಧ್ಯಾಯವನ್ನೆಲ್ಲ ನಿಷ್ಪಕ್ಷಪಾತಿಗಳು ಓದಿ ಯಾವ ಅರ್ಥವು ಯುಕ್ತವೆಂಬು ದನ್ನು ನಿರ್ಧರಿಸಬೇಕು. ಆತ್ಮನು ಯಾವಾಗಲೂ ಜ್ಞಾನಾಕಾರನಾಗಿರುತ್ತಾನೆ- ಎಂಬ ಸಿದ್ಧಾಂತಕ್ಕೆ ಅನುಗುಣವಾಗಿ ರಾಮಾನುಜರು ಪುರಾಣವಚನಗಳಿಗೆ ಅರ್ಥವನ್ನು ಮಾಡಿರುತ್ತಾರೆ.

**ಪುಟ ೨೪೮, ರಜ್ಜುಸರ್ಪಜ್ಞಾನ**-ರಜ್ಜುಸರ್ಪದ ವಿಷಯದಲ್ಲಿ ವ್ಯಾಖ್ಯಾನ ಪ್ರಸ್ಥಾನಕಾರರು ಮಾಡಿರುವ ವಿಕಲ್ಪಗಳನ್ನು ಕೇವಲತರ್ಕದಿಂದ ಇಲ್ಲಿ ಶ್ರೀಭಾಷ್ಯ ಕಾರರು ಖಂಡಿಸಿರುತ್ತಾರೆ. ಆದರೆ ಇದು ಶಾಂಕರಭಾಷ್ಯದಲ್ಲಿ ಎಲ್ಲಿಯೂ ಕಾಣು ವದಿಲ್ಲ. ಶಂಕರಾಚಾರ್ಯರ **ಸೂತ್ರಭಾಷ್ಯ** ೧-೪-೭ **ಪು.** ೧೫೪ರಲ್ಲಿ ಹೀಗೆಂದು ಬರೆದಿದೆ. "ಹೇಗೆ ಒಬ್ಬನು ನಸುಗತ್ತಲೆಯಲ್ಲಿ ಬಿದ್ದಿರುವ ಒಂದು ಹಗ್ಗವನ್ನು ಹಾವೆಂದು ತಿಳಿದುಕೊಂಡು ಅಂಜಿಕೆಯಿಂದ ನಡುಗುತ್ತಾ ಓಡುತ್ತಾನೋ, ಅವ ನನ್ನು ಕುರಿತು ಮತ್ತೊಬ್ಬನು 'ಅಂಜದಿರು, ಇದು ಹಾವಲ್ಲ, ಹಗ್ಗವೇ' ಎಂದು ಹೇಳಿದರೆ ಅವನು ಅದನ್ನು ಕೇಳಿ ಹಾವಿನಿಂದಾದ ಅಂಜಿಕೆಯನ್ನೂ ನಡುಕವನ್ನೂ ಓಟವನ್ನೂ ಬಿಡುತ್ತಾನೋ, ಆದರೂ ಹಾವೆಂಬ ತಿಳಿವಳಿಕೆಯ ಕಾಲದಲ್ಲಿಯೂ ಮತ್ತು ಅದು ಹೋದ ಕಾಲದಲ್ಲಿಯೂ ವಸ್ತುವಿಗೆ ಯಾವ ವಿಶೇಷವೂ ಆಗಿರುವ ದಿಲ್ಲವೋ ಹಾಗೆಯೇ ಇದನ್ನು ಅರಿಯಬೇಕು."

|| ಓಮ್ ||

ಶ್ರೀರಾಮಾನುಜಾಚಾರ್ಯವಿರಚಿತ

# ವೇದಾಂತದೀಪ

## ಮಂಗಲ

**ಶ್ರಿಯಃ ಕಾನ್ತೋಽನನ್ತೋ ವರಗುಣಗಣೈಕಾಸ್ಪದವಪುಃ**
**ಹತಾಶೇಷಾವದ್ಯಃ ಪರಮಪದೋ ವಾಙ್ಮನಸಯೋಃ ।**
**ಅಭೂಮಿರ್ಭೂಮಿರ್ಯೋ ನತಜನದೃಶಾಮಾದಿಪುರುಷೋ**
**ಮನಸ್ತತ್ಪಾದಾಬ್ಜೇ ಪರಿಚರಣಸಕ್ತಂ[1] ಭವತು ಮೇ ॥ ೧ ॥**

**ಭಾವಾರ್ಥ :–** ಲಕ್ಷ್ಮೀಕಾಂತನೂ ಅನಂತನೂ ಶ್ರೇಷ್ಠವಾದ ಗುಣಗಣಗಳಿಗೆಲ್ಲ ತಾನೊಂದೇ ಆಸ್ಪದವಾಗಿರುವ ಶರೀರವುಳ್ಳಾತನೂ ವಿನಾಶಿತವಾದ ಸರ್ವದೋಷಗಳನ್ನುಳ್ಳವನೂ, ಪರಮವ್ಯೋಮಪದನೂ ವಾಙ್ಮನಗಳಿಗೆ ಅವಿಷಯನೂ ನಮಸ್ಕರಿಸಿದ ಜನಗಳ ದೃಷ್ಟಿಗಳಿಗೆ ವಿಷಯನೂ ಆಗಿರುವ ಆದಿಪುರುಷನಿದಾನಲ್ಲವೆ, ಆತನ ಪಾದಾಬ್ಜದಲ್ಲಿ ಸೇವಾಸಕ್ತವಾದದ್ದಾಗಿ ನನ್ನ ಮನಸ್ಸು ಇರಲಿ!

## ಗ್ರಂಥಾರಂಭಪ್ರತಿಜ್ಞೆ

**ಪ್ರಣಮ್ಯ ಶಿರಸಾಽಽಚಾರ್ಯಾಂಸ್ತದಾದಿಷ್ಟೇನ ವರ್ತ್ಮನಾ ।**
**ಬ್ರಹ್ಮಸೂತ್ರಪದಾನ್ತಸ್ಸ್ಥವೇದಾನ್ತಾರ್ಥಃ ಪ್ರಕಾಶ್ಯತೇ ॥**

**ಭಾವಾರ್ಥ :–** ಆಚಾರ್ಯರುಗಳಿಗೆ[2] ಶಿರಸಾಪ್ರಣಾಮವನ್ನು ಮಾಡಿ, ಅವರು ಅಪ್ಪಣೆಕೊಡಿಸಿರುವ ಮಾರ್ಗದಿಂದ ಬ್ರಹ್ಮಸೂತ್ರಗಳ[3] ಪದಗಳೊಳಗಿರುವ ವೇದಾಂತಾರ್ಥವನ್ನು ಬೆಳಗಿ ತೋರಿಸಲಾಗುವದು.

---

1. 'ಯುಕ್ತಂ' ಪಾ॥

2. ಬೋಧಾಯನವೃತ್ತಿಯನ್ನು ಸಂಗ್ರಹಿಸಿದ ಆಚಾರ್ಯರುಗಳಿಗೆ ಎಂಬ ಭಾವ ವಿರಬಹುದು.

3. 'ಬ್ರಹ್ಮಸೂತ್ರಗಳು' ಎಂಬ ರೂಢನಾಮವು ಶಾಂಕರಭಾಷ್ಯದಲ್ಲಿಲ್ಲವಾದರೂ ರಾಮಾನುಜರಕಾಲಕ್ಕೆ ಬಳಕೆಗೆ ಬಂದುಬಿಟ್ಟಿತ್ತು.

# ವೇದವಿದರ ಪ್ರಕ್ರಿಯೆ

(ಮೂಲ)

೧. ಅತ್ರ ಇಯಮೇವ ಹಿ ವೇದವಿದಾಂ ಪ್ರಕ್ರಿಯಾ—

ಅಚಿದ್ವಸ್ತುನಃ ಸ್ವರೂಪತಃ ಸ್ವಭಾವತಶ್ಚಾತ್ಯನ್ತವಿಲಕ್ಷಣಸ್ತದಾತ್ಮಭೂತಃ, ಚೇತನಃ ಪ್ರತ್ಯಗಾತ್ಮಾ। ತಸ್ಮಾತ್, ಬದ್ಧಾನ್ಮುಕ್ತಾನ್ನಿತ್ಯಾಚ್ಚ ನಿಖಿಲಹೇಯ ಪ್ರತ್ಯನೀಕತಯಾ, ಕಲ್ಯಾಣಗುಣೈಕತಾನತಯಾ ಚ, ಸರ್ವಾವಸ್ಥಚಿದಚಿದ್ವ್ಯಾಪಕ ತಯಾ, ಧಾರಕತಯಾ, ನಿಯನ್ತೃತಯಾ ಶೇಷಿತಯಾ ಚ ಅತ್ಯನ್ತವಿಲಕ್ಷಣಃ ಪರಮಾತ್ಮಾ। ಯಥೋಕ್ತಂ ಭಗವತಾ—

**ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ।**
**ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ॥**
**ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ।**
**ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ॥**
**ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ।**
**ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ॥**

ಗೀ. ೧೫-೧೬, ೧೭, ೧೮.

ಇತಿ ಶ್ರುತಿಶ್ಚ— 'ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ' (ಶ್ವೇ. ೬-೧೬) 'ಪತಿಂ ವಿಶ್ವಸ್ಯಾತ್ಮೇಶ್ವರಮ್' (ತೈ. ನಾ. ೧೧), 'ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' (ತೈ. ನಾ. ೧೧)- ಇತ್ಯಾದಿಕಾ॥

ಕೂಟಸ್ಥಃ- ಮುಕ್ತಸ್ವರೂಪಮ್—

**ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ।**
**ಸರ್ವತ್ರಗಮಚಿನ್ತ್ಯಂ ಚ ಕೂಟಸ್ಥಮಚಲಂ ಧ್ರುವಮ್॥**

(ಗೀ. ೧೨-೩) ಇತ್ಯಾದಿವ್ಯಪದೇಶಾತ್॥

(ಅರ್ಥ)

**ಇಲ್ಲಿ ಇದೇ ವೇದವಿದರ ಪ್ರಕ್ರಿಯೆಯು** (ಯಾವದೆಂದರೆ)- ಅಚಿದ್ವಸ್ತುವಿಗಿಂತ ಸ್ವರೂಪದಿಂದಲೂ ಸ್ವಭಾವದಿಂದಲೂ ಅತ್ಯಂತವಿಲಕ್ಷಣನಾಗಿ ಅದಕ್ಕೆ ಆತ್ಮನಾಗಿರುವ ಚೇತನವು **ಪ್ರತ್ಯಗಾತ್ಮನು.** ಬದ್ಧನಾದ ಮತ್ತು ಮುಕ್ತನಾದ ನಿತ್ಯನಾಗಿಯೂ ಇರುವ ಆ (ಪ್ರತ್ಯಗಾತ್ಮನಿಗಿಂತ), ಎಲ್ಲಾ ಹೇಯ(ಗುಣ)ಗಳಿಗೆ ವಿರುದ್ಧವಾಗಿರುವದರಿಂದಲೂ ಕಲ್ಯಾಣಗುಣಗಳ ಸಮೂಹಕ್ಕೆ ಏಕಾಶ್ರಯನಾಗಿರುವದರಿಂದಲೂ ಎಲ್ಲಾ ಅವಸ್ಥೆಗಳಲ್ಲಿಯೂ[1] ಇರುವ ಚಿದಚಿತ್ತುಗಳನ್ನು ವ್ಯಾಪಿಸಿರು

1. ಸೂಕ್ಷ್ಮ ಮತ್ತು ಸ್ಥೂಲ- ಎಂಬ ಎರಡೂ ಅವಸ್ಥೆಗಳಲ್ಲಿಯೂ.

ವದರಿಂದಲೂ, (ಅವುಗಳನ್ನು) ಧರಿಸಿರುವದರಿಂದಲೂ, ನಿಯಮಿಸುತ್ತಿರುವದರಿಂದಲೂ ಶೇಷಿಯಾಗಿರುವದರಿಂದಲೂ, ಅತ್ಯಂತವಿಲಕ್ಷಣನಾಗಿರುವವನು ಪರಮಾತ್ಮನು.[1] ಹೀಗೆಂದು ಭಗವಂತನು ಹೇಳಿರುತ್ತಾನೆ :-

“ಲೋಕದಲ್ಲಿ ಕ್ಷರ, ಅಕ್ಷರ-ಎಂಬೀ ಇಬ್ಬರು ಪುರುಷರು. ಕ್ಷರನೆಂದರೆ ಎಲ್ಲಾ ಭೂತಗಳು ; ಕೂಟಸ್ಥನೇ ಅಕ್ಷರನೆನಿಸಿರುತ್ತಾನೆ. ಇವರಿಬ್ಬರಿಗಿಂತಲೂ ಬೇರೆಯಾಗಿರುವವನಾದ **ಉತ್ತಮಪುರುಷನು** ಪರಮಾತ್ಮನೆನಿಸಿರುತ್ತಾನೆ. ಆತನು ಮೂರುಲೋಕವನ್ನೂ ವ್ಯಾಪಿಸಿಕೊಂಡು ಧರಿಸಿಕೊಂಡಿರುವ ಅವ್ಯಯನಾದ ಈಶ್ವರನು. ಕ್ಷರವನ್ನೂ ಮೀರಿ, ಅಕ್ಷರಕ್ಕಿಂತಲೂ ಉತ್ತಮನಾಗಿರುತ್ತೇನಲ್ಲ, ಅದರಿಂದ ನಾನು ಲೋಕದಲ್ಲಿಯೂ ವೇದದಲ್ಲಿಯೂ **‘ಪುರುಷೋತ್ತಮ’**ನೆಂದು ಪ್ರಸಿದ್ಧನಾಗಿರುತ್ತೇನೆ.” (ಗೀ. ೧೫-೧೬, ೧೭, ೧೮).

‘ಪ್ರಧಾನಕ್ಕೂ ಕ್ಷೇತ್ರಜ್ಞನಿಗೂ ಪತಿಯಾಗಿ ಗುಣಗಳನ್ನು ಆಳುವವನಾಗಿರುತ್ತಾನೆ’ (ಶ್ವೇ. ೬-೧೬), ‘ವಿಶ್ವಕ್ಕೆ ಪತಿಯೂ ಆತ್ಮನೂ ಈಶ್ವರನೂ ಆಗಿರುವ (ತೈ. ನಾ. ೧೧), ‘ಅದೆಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡು ನಾರಾಯಣನಿರುತ್ತಾನೆ’ (ತೈ. ನಾ. ೧೧)- ಇವೇ ಮುಂತಾದ ಶ್ರುತಿಯೂ (ಹೀಗೆಂದೇ ಹೇಳುತ್ತಿದೆ).[2]

(ಭಗವದ್ಗೀತೆಯ ಶ್ಲೋಕಗಳಲ್ಲಿ) ‘ಕೂಟಸ್ಥನು’ ಎಂದರೆ ಮುಕ್ತಸ್ವರೂಪನು ; ‘ಯಾರು ಅನಿರ್ದೇಶ್ಯವಾಗಿ, ಅವ್ಯಕ್ತವಾಗಿರುವ, ಸರ್ವಗತವಾದ, ಅಚಿಂತ್ಯವಾದ ಕೂಟಸ್ಥವಾದ ಅಚಲವೂ ಧ್ರುವವೂ ಆದ ಅಕ್ಷರವನ್ನು ಉಪಾಸನೆಮಾಡುತ್ತಿರುವರೋ’ (ಗೀ. ೧೨-೩)- ಎಂದು ಮುಂತಾಗಿರುವ ವ್ಯಪದೇಶದಿಂದ (ಹೀಗೆಂದು ಗೊತ್ತಾಗುತ್ತದೆ.)[3]

**(ಮೂಲ)**

ಸೂತ್ರಕಾರಶ್ಚ ಏವಮೇವ ವದತಿ ‘ನೇತರೋಽನುಪಪತ್ತೇಃ’ (ವೇ. ಸೂ. ೧-೧-೧೭), ‘ಭೇದವ್ಯಪದೇಶಾತ್’ (ವೇ. ಸೂ. ೧-೩-೪), ‘ಅನುಪಪತ್ತೇಸ್ತು ನ ಶಾರೀರಃ’ (ವೇ. ಸೂ. ೧-೨-೩), ‘ಕರ್ಮಕರ್ತೃವ್ಯಪದೇಶಾಚ್ಚ’ (ವೇ. ಸೂ.

---

1. ಅಚಿತ್ತಿಗಿಂತ ಚಿದ್ರೂಪನಾದ ಪ್ರತ್ಯಗಾತ್ಮನು ವಿಲಕ್ಷಣ, ಚಿದಚಿದ್ವಸ್ತುಗಳೆರಡಕ್ಕಿಂತಲೂ ಪರಮಾತ್ಮನು ವಿಲಕ್ಷಣ- ಎಂಬುದು ವೇದವಿದರ ಪ್ರಕ್ರಿಯೆಯೆಂಬುದು ರಾಮಾನುಜರ ಮತ.

2. ಚಿದಚಿತ್ ಪರಮೇಶ್ವರರ ವಿವೇಕವನ್ನು ಹೀಗೆಂದೇ ಹೇಳಿದೆ.

3. ಅಲ್ಲಿಯೂ ಹದಿನೈದನೆಯ ಅಧ್ಯಾಯದ ಪ್ರಕೃತಶ್ಲೋಕದಲ್ಲಿಯೂ ಅಕ್ಷರವಾದ ಮುಕ್ತಪ್ರತ್ಯಗಾತ್ಮನನ್ನು ಕೂಟಸ್ಥನೆಂದಿದೆ- ಎಂದರ್ಥ. ಶ್ರೀಭಾಷ್ಯ ೧೫೫ನೆಯ ಪುಟವನು ನೋಡಿ.

೧–೨–೪), 'ಶಬ್ದವಿಶೇಷಾತ್' (೧–೨–೫), 'ಸಮ್ಭೋಗಪ್ರಾಪ್ತಿರಿತಿ ಚೇನ್ನ ವೈಶೇ-ಷ್ಯಾತ್' (ಸೂ. ೧–೨–೮), 'ನ ಚ ಸ್ಮಾರ್ತಮತದ್ಧರ್ಮಾಭಿಲಾಪಾಚ್ಛಾರೀರಶ್ಚ' (ಸೂ. ೧–೨–೨೦), 'ಉಭಯೇಽಪಿ ಹಿ ಭೇದೇನೈನಮಧೀಯತೇ' (ಸೂ. ೧–೨–೨೧), 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' (ಸೂ. ೧–೨–೨೩), 'ಮುಕ್ತೋಪಸೃಪ್ಯವ್ಯಪದೇಶಾಚ್ಚ' (ಸೂ.೧–೩–೨), 'ಸ್ಥಿತ್ಯದನಾಭ್ಯಾಂ ಚ' (ಸೂ. ೧–೩–೬), 'ಇತರಪರಾಮರ್ಶಾತ್ ಸ ಇತಿ ಚೇನ್ನಾಸಮ್ಭವಾತ್' (ಸೂ. ೧–೩–೧೭), 'ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು' (ಸೂ.೧–೩–೧೮), 'ಸುಷುಪ್ತ್ಯುತ್ಕ್ರಾನ್ತ್ಯೋರ್ಭೇದೇನ' (ಸೂ. ೧–೩–೪೩), 'ಪತ್ಯಾದಿಶಬ್ದೇಭ್ಯಃ' (ಸೂ.೧–೩–೪೪), 'ಅಧಿಕಂ ತು ಭೇದನಿರ್ದೇಶಾತ್' (ಸೂ. ೨–೧–೨೨), 'ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್' (ಸೂ.೩–೪–೮), 'ಜಗದ್ವ್ಯಾಪಾರವರ್ಜಂ ಪ್ರಕರಣಾದಸನ್ನಿಹಿತತ್ವಾಚ್ಚ' (ಸೂ. ೪–೪–೧೭), 'ಭೋಗಮಾತ್ರಸಾಮ್ಯಲಿಙ್ಗಾಚ್ಚ' (ಸೂ. ೪–೪–೨೧)– ಇತ್ಯಾದಿಭಿಃ ॥

(ಅರ್ಥ)

**ಸೂತ್ರಕಾರರೂ** 'ಪರಬ್ರಹ್ಮಕ್ಕಿಂತ ಇತರನಾದ ಪ್ರತ್ಯಗಾತ್ಮನು (ಈ) ಮಂತ್ರವರ್ಣೋಕ್ತನಲ್ಲ, ಏಕೆಂದರೆ ಅವನಿಗೆ ವಿಪಶ್ಚಿತ್ತ್ವವು ಹೊಂದುವಂತಿಲ್ಲ.[1] (ಸೂ. ೧–೧–೧೭) 'ಬೇರೆಯಾಗಿರುವ ಈಶ್ವರನನ್ನು ಯಾವಾಗ ಕಾಣುತ್ತಾನೋ ಎಂದು ಮೊದಲಾಗಿರುವ ವಾಕ್ಯದಿಂದ ಜೀವನಿಗಿಂತ ಭಿನ್ನನಾಗಿ ಹೇಳಿರುವದರಿಂದ ಇವನು ಪರಮಾತ್ಮನು' (ಸೂ. ೧–೩–೪), 'ಈ ಗುಣಗಳು ಹೊಂದುವದಿಲ್ಲವಾದ್ದರಿಂದ (ಇವನು) ಶಾರೀರನಲ್ಲ' (ಸೂ. ೧–೨–೩), 'ಪ್ರಾಪ್ತಿಕರ್ಮನಾಗಿ ಉಪಾಸ್ಯನನ್ನೂ ಪ್ರಾಪ್ತಿಕರ್ತೃವಾಗಿ ಜೀವನನ್ನೂ ಹೇಳಿರುವದರಿಂದಲೂ ಜೀವನಿಗಿಂತ ಬೇರೆಯಾದ ಪರಬ್ರಹ್ಮವೇ ಇದು' (ಸೂ. ೧–೨–೪), 'ಈ ನನ್ನ ಆತ್ಮನು ಹೃದಯುದ ಒಳಗೆ ಎಂದು ಶಾರೀರನನ್ನು ಷಷ್ಠಿಯಿಂದಲೂ ಉಪಾಸ್ಯನನ್ನು ಪ್ರಥಮಾವಿಭಕ್ತಿಯಿಂದಲೂ ಬೇರೆಬೇರೆಯ ಶಬ್ದವಿಶೇಷದಿಂದ ನಿರ್ದೇಶಮಾಡಿರುವದರಿಂದ ಉಪಾಸ್ಯನು ಪರಮಾತ್ಮನೇ' (ಸೂ. ೧–೨–೫), 'ಉಪಾಸಕನ ಶರೀರದಲ್ಲಿ ಹೃದಯದೊಳಗೆ ಇವನೂ ಇದ್ದರೆ ಶರೀರಪ್ರಯುಕ್ತವಾದ ಸುಖದುಃಖಭೋಗಪ್ರಾಪ್ತಿಯಾಗಬೇಕಲ್ಲ–? ಎಂದರೆ-ಹಾಗಲ್ಲ. ಕರ್ಮಪರವಶತ್ವವೆಂಬ ಹೇತುವಿಶೇಷವಿರುವದರಿಂದ ಇವನಿಗೆ ಸುಖದುಃಖಭೋಗವಿಲ್ಲ' (ಸೂ. ೧–೨–೮), 'ಪ್ರಧಾನವೂ ಶಾರೀರನೂ ಅಂತರ್ಯಾಮಿಗಳಲ್ಲ ; ಏಕೆಂದರೆ ಅವರಿಬ್ಬರಿಗೂ ಹೊಂದದಿರುವ ಧರ್ಮಗಳನ್ನು ಹೇಳಿದೆ' (ಸೂ. ೧–೨–೨೦), 'ಕಾಣ್ವ, ಮಾಧ್ಯಂದಿನ– ಎರಡು ಶಾಖೆಗಳವರೂ

---

1. ಇಲ್ಲಿ ಸೂತ್ರಗಳ ಅರ್ಥವನ್ನು ಆಯಾ ಸೂತ್ರದ 'ವೇದಾಂತದೀಪ' ವ್ಯಾಖ್ಯಾನಕ್ಕೆ ಅನುಗುಣವಾಗಿ ಕೊಟ್ಟಿದೆ.

ಅಂತರ್ಯಾಮಿಯನ್ನು ಬೇರೆಯಾಗಿ ಅಧ್ಯಯನಮಾಡುತ್ತಾರೆ' (ಸೂ.೧-೨-೨೧), 'ಒಂದರ ವಿಜ್ಞಾನದಿಂದ ಸರ್ವವಿಜ್ಞಾನವೂ ಆಗುವದೆಂಬ ರೂಪದ ವಿಶೇಷಣ ವ್ಯಪದೇಶ, ಅಕ್ಷರಕ್ಕಿಂತ ಪರನು ಎಂದು ಪ್ರತ್ಯಗಾತ್ಮನಿಗಿಂತಲೂ ಪರನು- ಎಂದು ಭೇದವ್ಯಪದೇಶವಿರುವದರಿಂದಲೂ ಉಳಿದ ಇಬ್ಬರು (ಪ್ರಧಾನಪ್ರತ್ಯಗಾತ್ಮರು) ಅಲ್ಲ' (ಸೂ. ೧-೨-೨೩), 'ಬಂಧದಿಂದ ಮುಕ್ತನಾದವನಿಗೆ ಪ್ರಾಪ್ಯನೆಂದು ವ್ಯಪದೇಶ ಮಾಡಿರುವದರಿಂದಲೂ ಇವನು ಪರಮಾತ್ಮನೇ' (ಸೂ.೧-೩-೨), 'ಪರಮಾತ್ಮನು ಫಲವನ್ನುಣ್ಣದೆ ಬೆಳಗುತ್ತಇರುವದರಿಂದಲೂ ಜೀವನು ಕರ್ಮಫಲವನ್ನು ಅನುಭವಿಸುವದರಿಂದಲೂ ಅಮೃತಸೇತುವಾಗಿ ದ್ಯುಭ್ವಾದಿಗಳಿಗೆ ಆಯತನವಾಗಿರುವವನು ಜೀವನಲ್ಲ' (ಸೂ.೧-೩-೬), 'ಯ ಏಷ ಸಂಪ್ರಸಾದಃ' ಎಂದು ಜೀವನನ್ನು ಪರಾಮರ್ಶಿಸಿರುವದರಿಂದ ಅವನೇ ದಹರಾಕಾಶನು-ಎಂದರೆ ಹಾಗಲ್ಲ; ಏಕೆಂದರೆ ಹಿಂದೆ ಹೇಳಿರುವ ಗುಣಗಳು ಅವನಿಗೆ ಹೊಂದುವದಿಲ್ಲ' (ಸೂ. ೧-೩-೧೭), 'ಮುಂದಿನ ಪ್ರಜಾಪತಿವಾಕ್ಯದಿಂದ ಜೀವನೆಂದು ನಿಶ್ಚಯವಾಗುತ್ತದೆ ಎಂದರೆ, ಹಾಗಲ್ಲ; ಏಕೆಂದರೆ ಉಪಾಸನೆಯಿಂದ ಸ್ವರೂಪವು ಹೊರತೋರಿದ ಜೀವನೇ ಅಲ್ಲಿ ಉಕ್ತನಾಗಿರುತ್ತಾನೆ' (ಸೂ. ೧-೩-೧೮), 'ಸುಷುಪ್ತಿ, ಉತ್ಕ್ರಾಂತಿ- ಇವುಗಳಲ್ಲಿ ಬೇರೆಯಾಗಿ ಹೇಳಿರುವದರಿಂದ ಪ್ರತ್ಯಗಾತ್ಮನಿಗಿಂತ ಪರಮಾತ್ಮನು ಬೇರೆಯಾದವನೇ' (ಸೂ. ೧-೩-೪೩), 'ಪ್ರಾಜ್ಞನಲ್ಲಿ ಹೇಳಿರುವ ಪತ್ಯಾದಿಶಬ್ದಗಳಿಂದಲೂ ಅವನು ಪ್ರತ್ಯಗಾತ್ಮನಿಗಿಂತ ಭಿನ್ನನು' (ಸೂ. ೧-೩-೪೪), 'ಬ್ರಹ್ಮವು ಪ್ರತ್ಯಗಾತ್ಮನಿಗಿಂತ ಬೇರೆಯೇ; ಏಕೆಂದರೆ ಜೀವನಿಗಿಂತ ಭಿನ್ನನಾಗಿಯೇ ಅವನನ್ನು ನಿರ್ದೇಶಿಸಿದೆ' (ಸೂ. ೨-೧-೨೨), 'ಕರ್ತೃವಿಗಿಂತ ಬೇರೆಯವನಾದವನು ಫಲಕ್ಕೆ ಸಾಧನವೆಂದು ಉಪದೇಶಿಸಿರುವದರಿಂದಲೂ ವೇದಾಂತಗಳಲ್ಲಿ ವಿದ್ಯೆಗೆ ಮತ್ತೊಬ್ಬನು ವಿಷಯವಾಗಿರುವನೆಂದೇ ಕಂಡುಬರುವದರಿಂದಲೂ ವಿದ್ಯೆಯಿಂದ ಫಲವು ಎಂದು ಬಾದರಾಯಣನ ಮತ' (ಸೂ. ೩-೪-೮), 'ಪರಮಾತ್ಮನ ಪ್ರಕರಣದಲ್ಲಿಯೇ ಜಗದ್ವ್ಯಾಪಾರವನ್ನು ಶ್ರುತಿಯಲ್ಲಿ ಹೇಳಿರುವದರಿಂದಲೂ ಜೀವನು ಅಲ್ಲಿ ಸನ್ನಿಹಿತನಾಗಿಲ್ಲವಾದ್ದರಿಂದಲೂ ಆ ವ್ಯಾಪಾರವನ್ನು ಬಿಟ್ಟು ಮಿಕ್ಕ ಬ್ರಹ್ಮಾನುಭವಮಾತ್ರವೇ ಮುಕ್ತನಿಗೆ ಆಗುವದು' (ಸೂ. ೪-೪-೧೭), 'ಬ್ರಹ್ಮಾನುಭವವನ್ನು ಹೇಳಿರುವದರಿಂದಲೂ ಭೋಗಮಾತ್ರದಲ್ಲಿ ಬ್ರಹ್ಮಕ್ಕೆ ಸಾಮ್ಯವನ್ನು ಮಾತ್ರ ಹೇಳುವ ವಚನದಿಂದಲೂ ಜಗದ್ವ್ಯಾಪಾರವಿಲ್ಲ' (ಸೂ. ೪-೪-೨೧)- ಎಂಬಿವೇ ಮುಂತಾದ ಸೂತ್ರಗಳಿಂದ ಹೀಗೆಂದೇ ಹೇಳಿರುತ್ತಾನೆ.

(ಮೂಲ)

ನ ಚಾವಿದ್ಯಾಕೃತಮ್ ಉಪಾಧಿಕೃತಂ ವಾ ಭೇದಮಾಶ್ರಿತ್ಯ ಏತೇ ನಿರ್ದೇಶಾಃ । 'ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ । ಸರ್ಗೇಽಪಿ ನೋಪಜಾಯನ್ತೇ ಪ್ರಲಯೇ ನ ವ್ಯಥನ್ತಿ ಚ ॥' (ಗೀ. ೧೪-೨),

'ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಞ್ಜನಃ ಪರಮಂ ಸಾಮ್ಯಮುಪೈತಿ' (ಮುಂ. ೩-೧-೩), 'ಮುಕ್ತೋಪಸೃಪ್ಯ ವ್ಯಪದೇಶಾಚ್ಚ' (ಸೂ.೧-೩-೨), 'ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು' (ಸೂ. ೧-೩-೧೮), 'ಸಂಪದ್ಯಾವಿರ್ಭಾವಃ ಸ್ವೇನ ಶಬ್ದಾತ್' (ಸೂ. ೪-೪-೧), 'ಜಗದ್ವ್ಯಾಪಾರವರ್ಜಂ ಪ್ರಕರಣಾದ ಸಂನಿಹಿತತ್ವಾಚ್ಚ' (ಸೂ. ೪-೪-೧೭), 'ಭೋಗಮಾತ್ರಸಾಮ್ಯಲಿಙ್ಗಾಚ್ಚ' (ಸೂ. ೪-೪-೨೧)-ಇತಿ ಸರ್ವಾವಿದ್ಯೋಪಾಧಿವಿನಿರ್ಮುಕ್ತಮ್ ಅಧಿಕೃತ್ಯೈವ ಭೇದೋಪಪಾದನಾತ್ ॥

(ಅರ್ಥ)

ಅವಿದ್ಯೆಯಿಂದಾಗಿರುವ ಅಥವಾ ಉಪಾಧಿಯಿಂದಾಗಿರುವ ಭೇದವನ್ನು ಆಶ್ರಯಿಸಿ[1] ಈ ನಿರ್ದೇಶಗಳು-ಎನ್ನುವದಕ್ಕೂ ಇಲ್ಲ. ಏಕೆಂದರೆ 'ಈ ಜ್ಞಾನವನ್ನು ಆಶ್ರಯಿಸಿಕೊಂಡು ನನ್ನ **ಸಾಧರ್ಮ್ಯ**ವನ್ನು ಹೊಂದಿದವರು, ಸೃಷ್ಟಿಯಲ್ಲಿಯೂ ಹುಟ್ಟುವದಿಲ್ಲ, ಪ್ರಲಯದಲ್ಲಿ ವ್ಯಥೆಪಡುವದೂ ಇಲ್ಲ' (ಗೀ. ೧೪-೨), 'ಆಗ ಜ್ಞಾನಿಯು ಪುಣ್ಯಪಾಪಗಳನ್ನು ಕೊಡವಿಕೊಂಡು ನಿರಂಜನನಾಗಿ **ಪರಮಸಾಮ್ಯ**ವನ್ನು ಹೊಂದುತ್ತಾನೆ' (ಮುಂ. ೩-೧-೩), 'ಬಂಧದಿಂದ ಮುಕ್ತನಾದವನಿಗೆ ಪ್ರಾಪ್ಯನಾಗುನನೆಂದು ವ್ಯಪದೇಶಮಾಡಿರುವದರಿಂದಲೂ ಇವನು ಪರಮಾತ್ಮನೇ' (ಸೂ. ೧-೩-೨), 'ಮುಂದಿನಪ್ರಜಾಪತಿವಾಕ್ಯದಿಂದ ಜೀವನೆಂದು ನಿಶ್ಚಯವಾಗುತ್ತದೆ' ಎಂದರೆ ಹಾಗಲ್ಲ. ಏಕೆಂದರೆ ಉಪಾಸನೆಯಿಂದ ಸ್ವರೂಪವು ಹೊರತೋರಿದ ಜೀವನೇ ಇಲ್ಲಿ ಉಕ್ತನಾಗಿರುತ್ತಾನೆ' (ಸೂ.೧-೩-೧೮), 'ಪರಂಜ್ಯೋತಿಯನ್ನು ಸಂಪನ್ನನಾದವನಿಗೆ ತನ್ನ ಸ್ವರೂಪದ ಆವಿರ್ಭಾವವನ್ನೇ ಪ್ರತಿಪಾದಿಸಿರುತ್ತದೆ; ಏಕೆಂದರೆ 'ಸ್ವೇನ' (ತನ್ನ) ಎಂಬ ವಿಶೇಷಣಶಬ್ದವಿದೆ' (ಸೂ. ೪-೪-೧), 'ಪರಮಾತ್ಮಪ್ರಕರಣದಲ್ಲಿ ಜಗದ್ವ್ಯಾಪಾರವನ್ನು ಹೇಳಿರುವದರಿಂದಲೂ ಜೀವನು ಅಲ್ಲಿ ಸಂನಿಹಿತನಲ್ಲವಾದ್ದರಿಂದಲೂ ಆ ವ್ಯಾಪಾರವನ್ನು ಬಿಟ್ಟು ಮಿಕ್ಕ ಬ್ರಹ್ಮಾನುಭವಮಾತ್ರವೇ ಮುಕ್ತನಿಗೆ ಆಗುವದು' (ಸೂ. ೪-೪-೧೭), 'ಬ್ರಹ್ಮಾನುಭವವನ್ನು ಹೇಳಿರುವದರಿಂದಲೂ ಭೋಗಮಾತ್ರದಲ್ಲಿ ಬ್ರಹ್ಮಕ್ಕೆ ಸಾಮ್ಯವನ್ನು ಹೇಳಿರುವ ಲಿಂಗವಿರುವದರಿಂದಲೂ ಜಗದ್ವ್ಯಾಪಾರವಿಲ್ಲ' (ಬ್ರ. ೪-೪-೨೧)- ಎಂದು ಯಾವ ಅವಿದ್ಯೆಯಾಗಲಿ ಭೇದವಾಗಲಿ ಇಲ್ಲದ (ಪ್ರತ್ಯಗಾತ್ಮನನ್ನು) ಕುರಿತೇ ಭೇದವನ್ನು ಉಪಪಾದನೆಮಾಡಿರುತ್ತದೆ.

(ಮೂಲ)

ಶ್ರುತಿಸ್ಮೃತಿಸೂತ್ರೇಷು ಸರ್ವತ್ರ ಭೇದೇ ನಿರ್ದಿಷ್ಟೇ ಚಿದಚಿದೀಶ್ವರಸ್ವರೂಪ ಭೇದಃ ಸ್ವಾಭಾವಿಕೋ ವಿವಕ್ಷಿತ ಇತಿ ನಿಶ್ಚೀಯತೇ | 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತ ಉಪಾಸೀತ' (ಛಾಂ. ೩-೧೪-೧), 'ವಾಚಾರಮ್ಭಣಂ

---

1. ಅವಿದ್ಯೆಯಿಂದ ಭೇದ- ಎಂಬುದು **ಶಾಂಕರಮತ**; ಉಪಾಧಿಯ ನಿಮಿತ್ತದಿಂದ ಭೇದ- ಎಂಬುದು **ಭಾಸ್ಕರಮತ.**

ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್'(ಛಾಂ.೬-೧-೪), 'ಸದೇವ ಸೋಮ್ಯೇದಮಗ್ರ ಆಸಿದೇಕಮೇವಾದ್ವಿತೀಯಮ್' 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ ತತ್ತೇಜೋಽಸೃಜತ' (ಛಾಂ. ೬-೨-೧, ೨), 'ಸನ್ಮೂಲಾಸ್ಸೋಮ್ಯೇಮಾಃ ಸರ್ವಾಃ ಪ್ರಜಾಸ್ಸದಾಯತನಾಸ್ಸತ್ಪ್ರತಿಷ್ಠಾಃ' (ಛಾಂ.೬-೮-೪), 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ' (ಛಾಂ. ೬-೮-೭), 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' (ಗೀ. ೧೩-೨), 'ತದನನ್ಯತ್ವಮಾರಮ್ಭಣಶಬ್ದಾದಿಭ್ಯಃ' (ಸೂ. ೨-೧-೧೫)- ಇತಿ ಪರಸ್ಯ ಬ್ರಹ್ಮಣಃ ಕಾರಣತ್ವಮ್, ಕೃತ್ಸ್ನಸ್ಯ ಚಿದಚಿದಾತ್ಮಕಪ್ರಪಞ್ಚಸ್ಯ ಕಾರ್ಯತ್ವಮ್, ಕಾರಣಾತ್ಕಾರ್ಯಸ್ಯಾನನ್ಯತ್ವಂ ಚೋಚ್ಯಮಾನಮ್ ಏವಮೇವೋಪಪದ್ಯತೇ । ಸರ್ವಾವಸ್ಥಸ್ಯ ಚಿದಚಿದ್ವಸ್ತುನಃ, ಪರಮಾತ್ಮಶರೀರತ್ವಮ್, ಪರಮಾತ್ಮನಶ್ಚಾತ್ಮತ್ವಮ್ 'ಯಃ ಪೃಥಿವ್ಯಾಂ ತಿಷ್ಠನ್....ಯಸ್ಯ ಪೃಥಿವೀ ಶರೀರಮ್' (ಬೃ. ೩-೭-೩), 'ಯ ಆತ್ಮನಿ ತಿಷ್ಠನ್.... ಯಸ್ಯಾಽಽತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ' (ಬೃ. ಮಾ. ೩-೭-೩೦), 'ಯಸ್ಯಾವ್ಯಕ್ತಂ ಶರೀರಂ.... ಯಸ್ಯಾಕ್ಷರಂ ಶರೀರಂ.... ಯಸ್ಯ ಮೃತ್ಯುಃ ಶರೀರಂ ....ಏಷ ಸರ್ವಭೂತಾನ್ತರಾತ್ಮಾಽಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ' (ಸುಬಾಲ. ೭), 'ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' (ತೈ. ಆ. ೩-೧೧) ಇತ್ಯಾದಿಶ್ರುತ್ಯೈವೋಪದಿಷ್ಟಮಿತಿ ಸೂಕ್ಷ್ಮಚಿದಚಿದ್ವಸ್ತುವಿಶಿಷ್ಟಃ ಪರಮಾತ್ಮಾ ಕಾರಣಮ್, ಸ ಏವ ಪರಮಾತ್ಮಾ ಸ್ಥೂಲಚಿದಚಿದ್ವಸ್ತುಶರೀರಃ ಕಾರ್ಯಮ್ ಇತಿ ಕಾರಣಾವಸ್ಥಾಯಾಂ ಕಾರ್ಯಾವಸ್ಥಾಯಾಂ ಚ ಚಿದಚಿದ್ವಸ್ತುಶರೀರಕತಯಾ ತತ್ಪ್ರಕಾರಃ ಪರಮಾತ್ಮೈವ ಸರ್ವಶಬ್ದವಾಚ್ಯಃ ಇತಿ ಪರಮಾತ್ಮಶಬ್ದೇನ ಸರ್ವಶಬ್ದಸಾಮಾನಾಧಿಕರಣ್ಯಂ ಮುಖ್ಯಮೇವೋಪಪನ್ನತರಮ್ ॥

(ಅರ್ಥ)

ಶ್ರುತಿಸ್ಮೃತಿಸೂತ್ರಗಳಲ್ಲಿ ಎಲ್ಲೆಲ್ಲಿಯೂ ಭೇದವು ನಿರ್ದಿಷ್ಟವಾಗಿರುತ್ತಿರುವಲ್ಲಿ ಚಿತ್ತು, ಅಚಿತ್ತು, ಈಶ್ವರ- ಇವರ ಸ್ವರೂಪಭೇದವು ಸ್ವಾಭಾವಿಕವೆಂದು ನಿಶ್ಚಿತವಾಗುತ್ತದೆ. 'ಇದೆಲ್ಲವೂ ಬ್ರಹ್ಮ, ಏಕೆಂದರೆ ಇದು ಅದರಿಂದ ಹುಟ್ಟಿ, ಅದರಲ್ಲಿಯೇ ಲಯವಾಗಿ ಅದರಿಂದ ವ್ಯಾಪಾರಮಾಡುತ್ತಿರುವದು. ಆದ್ದರಿಂದ ಶಾಂತನಾಗಿ ಉಪಾಸನೆಮಾಡಬೇಕು' (ಛಾಂ.೩-೧೪-೧), 'ಮೃತ್ಪೂರ್ವಕವಾದ ವ್ಯವಹಾರದಿಂದ ವಿಕಾರವೂ ನಾಮವೂ ಮುಟ್ಟಲ್ಪಡುತ್ತದೆ; (ಆದ್ದರಿಂದ ಅದೂ) ಮಣ್ಣೇ ಎಂಬುದೇ ಸತ್ಯವು' (ಛಾಂ. ೬-೧-೪), "ಅಪ್ಪ, ಇದು ಮೊದಲು ಸತ್ತೇ ಆಗಿತ್ತು, ತಾನೊಂದೇ ಎರಡನೆಯದಿಲ್ಲದ್ದಾಗಿತ್ತು ; ಅದು

'ಬಹುವಾಗುವೆನು, ಹುಟ್ಟುವೆನು' ಎಂದು ಯೋಚಿಸಿಕೊಂಡಿತು; ಅದು ತೇಜಸ್ಸನ್ನು ಸೃಷ್ಟಿಸಿತು' (ಛಾಂ. ೬-೨-೧,೩), 'ಅಪ್ಪ, ಈ ಸರ್ವಪ್ರಜೆಗಳೂ ಸತ್ತೆಂಬ ಕಾರಣವುಳ್ಳವು, ಸತ್ತೆಂಬ ಆಶ್ರಯವುಳ್ಳವು, ಸತ್ತನ್ನೇ ಕುರಿತು ಹೋಗತಕ್ಕವು' (ಛಾಂ. ೬-೮-೪), 'ಇದೆಲ್ಲವೂ ಇದನ್ನೇ ಆತ್ಮನನ್ನಾಗುಳ್ಳದ್ದು ; ಅದು ಸತ್ಯವು, ಅದೇ ಆತ್ಮನು, ಶ್ವೇತಕೇತುವೆ, ಅದು ನೀನೇ ಆಗಿರುವೆ' (ಛಾಂ. ೬-೮-೭), 'ಕ್ಷೇತ್ರಜ್ಞನನ್ನೂ ನಾನೇ ಎಂದು ಅರಿತುಕೊ' (ಗೀ. ೧೩-೨), 'ಆ (ಬ್ರಹ್ಮಕ್ಕಿಂತ) ಜಗತ್ತು ಅನನ್ಯವು- ಎಂದು (ಅದನ್ನು ಉಪಪಾದಿಸುವ) ಆರಂಭಣಶಬ್ದಾದಿಗಳಿಂದ (ತಿಳಿಯಬರುತ್ತದೆ)' (ಸೂ. ೨-೧-೧೫)- ಎಂದು ಪರಬ್ರಹ್ಮಕ್ಕೆ ಕಾರಣತ್ವವನ್ನೂ, ಚಿದಚಿದಾತ್ಮಕವಾದ ಪ್ರಪಂಚವೆಲ್ಲಕ್ಕೂ ಕಾರ್ಯತ್ವವನ್ನೂ, **ಕಾರಣಕ್ಕಿಂತ ಕಾರ್ಯಕ್ಕೆ ಅನನ್ಯತ್ವವನ್ನು ಹೇಳಿರುವದು ಹೀಗೆಯೇ ಹೊಂದುತ್ತದೆ.** ಎಲ್ಲಾ ಅವಸ್ಥೆಗಳಲ್ಲಿಯೂ ಇರುವ ಚಿದಚಿದ್ವಸ್ತುವು ಪರಮಾತ್ಮನ ಶರೀರವೆಂದೂ, ಪರಮಾತ್ಮನು ಆತ್ಮನೆಂದೂ 'ಯಾವಾತನು ಪೃಥ್ವಿಯಲ್ಲಿರುವವನೋ ಯಾವಾತನಿಗೆ ಪೃಥಿವಿಯು ಶರೀರವೋ' (ಬೃ. ೩-೭-೩), 'ಯಾವಾತನು ಆತ್ಮನಲ್ಲಿದ್ದುಕೊಂಡಿರುವನೋ, ....ಯಾವಾತನಿಗೆ ಆತ್ಮನು ಶರೀರವೋ.... ಯಾವಾತನು ಆತ್ಮನನ್ನು ಒಳಗಿದ್ದು ಬಿಗಿಹಿಡಿದುಕೊಂಡಿರುವನೋ' (ಬೃ. ಮಾ. ೩-೭-೩೦), 'ಯಾವಾತನಿಗೆ ಅವ್ಯಕ್ತವು ಶರೀರವೋ, ಯಾವಾತನಿಗೆ ಅಕ್ಷರವು ಶರೀರವೋ, ಯಾವಾತನಿಗೆ ಮೃತ್ಯುವು ಶರೀರವೋ, (ಆ) ಈತನು ಸರ್ವಭೂತಗಳಿಗೂ ಅಂತರಾತ್ಮನಾಗಿರುವವನು, ಅಪಹತಪಾಪ್ಮನೂ ದಿವ್ಯನೂ ದೇವನೂ ಏಕನೂ ಆಗಿರುವ ನಾರಾಯಣನು' (ಸುಬಾಲ. ೭), 'ಒಳಗೆ ಪ್ರವಿಷ್ಟವಾಗಿರುವ ಜನಗಳನ್ನು ಶಾಸನ ಮಾಡುತ್ತಿರುವವನು ಸರ್ವಾತ್ಮನು' (ತೈ. ಆ. ೩-೧೧)- ಮುಂತಾದ ಶ್ರುತಿಯಿಂದಲೇ ಉಪದಿಷ್ಟವಾಗಿರುವದರಿಂದ ಸೂಕ್ಷ್ಮಚಿದಚಿದ್ವಸ್ತುಶರೀರಕನಾದ ಪರಮಾತ್ಮನೇ ಕಾರಣವು, ಅದೇ ಪರಮಾತ್ಮನೇ ಸ್ಥೂಲಚಿದಚಿದ್ವಸ್ತುಶರೀರಕನಾಗಿ ಕಾರ್ಯವು ; ಆದ್ದರಿಂದ ಕಾರಣಾವಸ್ಥೆಯಲ್ಲಿಯೂ ಕಾರ್ಯಾವಸ್ಥೆಯಲ್ಲಿಯೂ ಚಿದಚಿದ್ವಸ್ತುಶರೀರಕನಾಗಿರುವದರಿಂದ ಅದನ್ನು ಪ್ರಕಾರವಾಗುಳ್ಳ ಪರಮಾತ್ಮನೇ **ಸರ್ವಶಬ್ದವಾಚ್ಯನು.** ಹೀಗಿರುವದರಿಂದ **ಪರಮಾತ್ಮಶಬ್ದಕ್ಕೂ ಸರ್ವಶಬ್ದಕ್ಕೂ ಸಾಮಾನಾಧಿಕರಣ್ಯವನ್ನು ಹೇಳಿರುವದು ಮುಖ್ಯವೃತ್ತಿಯಿಂದಲೇ ಹೆಚ್ಚು ಉಪಪನ್ನವಾಗುತ್ತದೆ.**

**(ಮೂಲ)**

'ಅನೇನ ಜೀವೇನಾತ್ಮನಾಽನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾಂ. ೬-೩-೩), 'ತತ್ಸೃಷ್ಟ್ವಾ। ತದೇವಾನುಪ್ರವಿಶತ್। ತದನುಪ್ರವಿಶ್ಯ। ಸಚ್ಚ ತ್ಯಚ್ಚಾಭವತ್' (ತೈ. ೨-೬) ಇತ್ಯಾದಿಶ್ರುತಿರೇವೇಮಮರ್ಥಮ್ ಉಪ

ಪಾದಯತಿ । ಸರ್ವಮ್ ಆತ್ಮತಯಾ ಅನುಪ್ರವಿಶ್ಯ ತಚ್ಛರೀರತ್ವೇನ ಸರ್ವಪ್ರಕಾರ ತಯಾ ಸ ಏವ ಸರ್ವಶಬ್ದವಾಚ್ಯೋ ಭವತಿ ಇತ್ಯರ್ಥಃ । 'ಬಹು ಸ್ಯಾಮ್' (ತೈ. ೨-೬), ಇತಿ ಬಹುಭವನಸಙ್ಕಲ್ಪೋಽಪಿ ನಾಮರೂಪಾವಿಭಾಗಾನರ್ಹ ಸೂಕ್ಷ್ಮಚಿದಚಿದ್ವಸ್ತುಶರೀರತಯಾ ಏಕಧಾವಸ್ಥಿತಸ್ಯ ವಿಭಕ್ತನಾಮರೂಪಚಿದ-ಚಿಚ್ಛರೀರತಯಾ ಬಹುಪ್ರಕಾರತಾವಿಷಯಃ ಇತಿ ವೇದವಿತ್ಪ್ರಕ್ರಿಯಾ ॥

(ಅರ್ಥ)

'ಈ ಜೀವಾತ್ಮನಿಂದ ಅನುಪ್ರವೇಶಮಾಡಿ ನಾಮರೂಪಗಳನ್ನು ವಿಂಗಡಿಸುವೆನು' (ಛಾಂ. ೬-೩-೩), 'ಅದನ್ನು ಸೃಷ್ಟಿಸಿ ಅದನ್ನೇ ಪ್ರವೇಶಿಸಿತು, ಅದನ್ನು ಅನುಪ್ರವೇಶಿಸಿ ಸತ್ತೂ ತ್ಯತ್ತೂ (ಅದು) ಆಯಿತು' (ತೈ. ೨-೬)-ಮುಂತಾದ ಶ್ರುತಿಯು ಇದೇ ವಿಷಯವನ್ನೇ ಉಪಪಾದಿಸುತ್ತದೆ. ಎಲ್ಲವನ್ನೂ ಆತ್ಮನಾಗಿ ಒಳಹೊಕ್ಕು ಅವುಗಳು ಶರೀರವಾಗಿರುವದರಿಂದ ಎಲ್ಲವನ್ನೂ ಪ್ರಕಾರವಾಗುಳ್ಳವನಾಗಿ ಆತನೇ ಸರ್ವಶಬ್ದವಾಚ್ಯನಾಗಿರುತ್ತಾನೆ- ಎಂದು (ಶ್ರುತಿಯ) ಅರ್ಥ. 'ಬಹುವಾಗುವೆನು' (ತೈ. ೨-೬) ಎಂದು ಬಹುವಾಗುವ ಸಂಕಲ್ಪವು ಕೂಡ ನಾಮರೂಪಗಳೆಂಬ ವಿಭಾಗಕ್ಕೆ ತಕ್ಕದ್ದಲ್ಲದ ಸೂಕ್ಷ್ಮವಾದ ಚಿದಚಿದ್ವಸ್ತು ಶರೀರಕನಾಗಿ ಒಂದೇ ರೀತಿಯಾಗಿದ್ದುಕೊಂಡಾತನು ನಾಮರೂಪಗಳು ವಿಂಗಡವಾಗಿರುವ ಚಿದಚಿಚ್ಛರೀರಕನಾಗಿ ಬಹುಪ್ರಕಾರವಾಗುತ್ತಾನೆಂಬ ವಿಷಯವು ವೇದವಿದರ ಪ್ರಕ್ರಿಯೆಯೆಂದು (ತಿಳಿಯಬೇಕು).

## ಶಾಂಕರಾದ್ವೈತಿಗಳ ಪಕ್ಷದ ವಿಮರ್ಶೆ

(ಮೂಲ)

೨. ಯೇ ಪುನಃ, ನಿರ್ವಿಶೇಷಕೂಟಸ್ಥಸ್ವಪ್ರಕಾಶನಿತ್ಯಚೈತನ್ಯಮಾತ್ರಂ ಬ್ರಹ್ಮ ಜ್ಞಾತವ್ಯತಯಾ ಉಕ್ತಮ್-ಇತಿ ವದನ್ತಿ, ತೇಷಾಂ 'ಜನ್ಮಾದ್ಯಸ್ಯ ಯತಃ' (ಸೂ. ೧-೧-೨), 'ಶಾಸ್ತ್ರಯೋನಿತ್ವಾತ್' (ಸೂ. ೧-೧-೩), 'ತತ್ತು ಸಮನ್ವಯಾತ್' (ಸೂ. ೧-೧-೪), 'ಈಕ್ಷತೇರ್ನಾಶಬ್ದಮ್' (ಸೂ. ೧-೧-೫) ಇತ್ಯಾದಿ, 'ಜಗದ್ವ್ಯಾಪಾರವರ್ಜಂ ಪ್ರಕರಣಾದಸನ್ನಿಹಿತತ್ವಾಚ್ಚ' (ಸೂ.೪-೪-೧೭), 'ಭೋಗಮಾತ್ರಸಾಮ್ಯಲಿಙ್ಗಾಚ್ಚ' (೪-೪-೨೧) 'ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್' (ಸೂ. ೪-೪-೨೨) ಇತ್ಯನ್ತಸ್ಯ ಸೂತ್ರಗಣಸ್ಯ ಚ ಬ್ರಹ್ಮಣೋ ಜಗತ್ಕಾರಣತ್ವಬಹುಭವನಸಙ್ಕಲ್ಪರೂಪೇಕ್ಷಣಾದ್ಯನನ್ತವಿಶೇಷಪ್ರತಿಪಾದನಪರತ್ವಾತ್ ಸರ್ವಂ ಸೂತ್ರಜಾತಮ್, ಸೂತ್ರಕಾರೋದಾಹೃತಾಃ 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ' (ತೈ. ೩-೧), 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ' (ಛಾಂ. ೬-೨-೩) ಇತ್ಯಾದ್ಯಾಃ ಸರ್ವ(ಸರ್ವಾಃ) ಶ್ರುತಯಶ್ಚ ನ ಸಙ್ಗಚ್ಛನ್ತೇ ॥

(ಅರ್ಥ)

**ಯಾರಾದರೆ** ನಿರ್ವಿಶೇಷವೂ ಕೂಟಸ್ಥವೂ[1] ಸ್ವಪ್ರಕಾಶವೂ ನಿತ್ಯವೂ ಆಗಿರುವ ಚೈತನ್ಯಮಾತ್ರ(ರೂಪ)ವಾದ ಬ್ರಹ್ಮವನ್ನೇ ಅರಿಯತಕ್ಕದ್ದು ಎಂದು (ಇಲ್ಲಿ) ಹೇಳಿದೆ ಎನ್ನುತ್ತಿರುವರೋ, ಅವರಿಗೆ 'ಈ (ಜಗತ್ತಿನ) ಜನ್ಮಾದಿಗಳು ಯಾವದ ರಿಂದ ಆಗುವವೋ (ಅದು, ಬ್ರಹ್ಮ)' (ವೇ. ಸೂ. ೧-೧-೨), ಶಾಸ್ತ್ರವೊಂದೇ (ಅದಕ್ಕೆ) ಪ್ರಮಾಣವಾಗಿರುವದರಿಂದ 'ಯತೋ ವಾ ಇಮಾನಿ' (ತೈ. ೩-೧)- ಮುಂತಾದ ವಾಕ್ಯವು ಅದಕ್ಕೆ ಪ್ರಮಾಣವು. (ವೇ. ಸೂ. ೧-೧-೩)[2] 'ಶಾಸ್ತ್ರವು ಪರಮಪುರುಷಾರ್ಥರೂಪವಾದ ಪರಬ್ರಹ್ಮದಲ್ಲಿ ಅನ್ವಯವಾಗಿರುವದರಿಂದ, ಬ್ರಹ್ಮವು ಶಾಸ್ತ್ರಪ್ರಮಾಣಕತ್ವವೆಂಬುದು ಸಿದ್ಧವಾಗುತ್ತದೆ' (ವೇ. ಸೂ. ೧-೧-೪), 'ಅದು ಶಬ್ದಪ್ರಮಾಣವಿಲ್ಲದ ಪ್ರಧಾನವಲ್ಲ' (ವೇ. ಸೂ. ೧-೧-೫), 'ಜಗನ್ನಿಯಮನ ರೂಪವ್ಯಾಪಾರವನ್ನು ಬಿಟ್ಟು ಬ್ರಹ್ಮಾನಂದಾನುಭವದಲ್ಲಿ ಮುಕ್ತನಿಗೆ ಸಾಮ್ಯ ; ಏಕೆಂದರೆ (ಜಗದ್ವ್ಯಾಪಾರವೂ) ಬ್ರಹ್ಮಪ್ರಕರಣವಾಗಿದೆ, ಜೀವನು ಅಲ್ಲಿ ಸಂನಿ ಹಿತನಾಗಿಯೂ ಇಲ್ಲ' (ವೇ. ಸೂ. ೪-೪-೧೭), 'ಮುಕ್ತನಿಗೆ ಬ್ರಹ್ಮಾನುಭವ ಭೋಗಮಾತ್ರವನ್ನೇ ಸಮಾನವಾಗಿ ಶ್ರುತಿಯಲ್ಲಿ ಹೇಳಿರುವ ಲಿಂಗದಿಂದಲೂ ಜಗ ದ್ವ್ಯಾಪಾರವಿಲ್ಲ' (ವೇ. ಸೂ. ೪-೪-೨೧), 'ಈ ಮುಕ್ತನಿಗೆ ಪುನರಾವೃತ್ತಿಯಿಲ್ಲ ವೆಂದು ಶಬ್ದಪ್ರಮಾಣದಿಂದ ತಿಳಿಯಬರುತ್ತದೆ' (ವೇ. ಸೂ. ೪-೪-೨೨) ಎಂಬ ವರೆಗಿನ ಸೂತ್ರಗಣಕ್ಕೆ ಬ್ರಹ್ಮಕ್ಕೆ ಜಗತ್ಕಾರಣವಾಗುವಿಕೆ, ಬಹುವಾಗುವಿಕೆ, ಸಂಕಲ್ಪ ರೂಪವಾದ ಈಕ್ಷಣ- ಇವೇ ಮುಂತಾದ ಅನಂತವಿಶೇಷವನ್ನು ಪ್ರತಿಪಾದಿಸುವದರಲ್ಲಿ ತಾತ್ಪರ್ಯವಿರುವದರಿಂದ ಸೂತ್ರಜಾತವೂ, ಸೂತ್ರಕಾರನು ಉದಾಹರಿಸಿರುವ 'ಯಾವದರಿಂದ ಈ ಭೂತಗಳು ಹುಟ್ಟುವವೋ' (ತೈ. ೩-೧), 'ಅದು ನಾನು ಬಹುವಾಗುವೆನು, ಉತ್ಪನ್ನನಾಗುವೆನು- ಎಂದು ಯೋಚಿಸಿಕೊಂಡಿತು' (ಛಾಂ. ೬-೨-೩)- ಇವೇ ಮುಂತಾದ ಯಾವ ಶ್ರುತಿಗಳೂ ಹೊಂದುವದಿಲ್ಲ.

(ಮೂಲ)

೩. ಅಥೋಚ್ಯೇತ : 'ಯೇನಾಶ್ರುತಂ ಶ್ರುತಮ್' (ಛಾಂ. ೬-೧-೩), ಇತ್ಯೇಕವಿಜ್ಞಾನೇನ ಸರ್ವವಿಜ್ಞಾನಂ ಪ್ರತಿಜ್ಞಾಯ 'ಯಥಾ ಸೋಮ್ಯೈಕೇನ ಮೃತ್ಪಿಣ್ಡೇನ' (ಛಾಂ. ೬-೧-೪) ಇತ್ಯೇಕಮೃತ್ಪಿಣ್ಡಾರಬ್ಧಘಟಶರಾವಾದೀನಾಂ ತನ್ಮೃತ್ಪಿಣ್ಡಾದನನ್ಯದ್ರವ್ಯತಯಾ ತಜ್ಜ್ಞಾನೇನ ತೇಷಾಂ ಜ್ಞಾತತೇವ, ಬ್ರಹ್ಮ ಜ್ಞಾನೇನ ತದಾರಬ್ಧಸ್ಯ ಕೃತ್ಸ್ನಸ್ಯ ಚಿದಚಿದಾತ್ಮಕಸ್ಯ ಜಗತಃ, ತಸ್ಮಾದನತಿರಿಕ್ತ ವಸ್ತುತಯಾ ಜ್ಞಾತತಾ ಸಂಭವತಿ- ಇತ್ಯುಪಪಾದ್ಯ 'ಸದೇವ ಸೋಮ್ಯೇದಮಗ್ರ

1. ನಿರ್ವಿಕಾರವಾದ.
2. ಈ ಪ್ರಕರಣದಲ್ಲಿ ಸೂತ್ರಾರ್ಥವನ್ನು ಸಂಪೂರ್ಣವಾಗಿ ಬರೆದಿದೆ.

ಆಸೀದೇಕಮೇವಾದ್ವಿತೀಯಮ್' (ಛಾಂ. ೬-೨-೩) ಇತೀದಂಶಬ್ದವಾಚ್ಯಸ್ಯ ಚಿದ ಚಿದಾತ್ಮಕಪ್ರಪಞ್ಚಸ್ಯ ಸೃಷ್ಟೇಃ ಪ್ರಾಙ್ನಿಖಿಲಭೇದಪ್ರಹಾಣೇನ ಸಚ್ಛಬ್ದವಾಚ್ಯೈ ನೈಕತಾಪತ್ತಿಂ ಘಟಶರಾವಾದ್ಯುತ್ಪತ್ತೇಃ ಪ್ರಾಗುತ್ಪಾದಕಮೃತ್ಪಿಣ್ಡೈಕತಾಪತ್ತಿವದಭಿ ಧಾಯ 'ತದೈಕ್ಷತ ಬಹು ಸ್ಯಾಮ್' (ಛಾಂ.೬-೨-೩) ಇತಿ ತದೇವ ಸಚ್ಛಬ್ದವಾಚ್ಯಂ ಬ್ರಹ್ಮ ಚಿದಚಿದಾತ್ಮಕಪ್ರಪಞ್ಚರೂಪೇಣ ಆತ್ಮನೋ ಬಹುಭವನಮ್ ಏಕಮೃತ್ಪಿ ಣ್ಡಸ್ಯ ಘಟಶರಾವಾದಿರೂಪೇಣ ಬಹುಭವನವತ್ ಸಙ್ಕಲ್ಪ್ಯ ಆತ್ಮಾನಮೇವ ತೇಜಃ, ಪ್ರಭೃತಿ ಜಗದಾಕಾರೇಣಾಸೃಜತ-ಇತಿ ಚಾಭಿಧಾಯ 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ' (ಛಾಂ. ೬-೮-೭) ಇತ್ಯಭಿಧಾನಾತ್ ಬ್ರಹ್ಮೈಕಮೇವಾವಿದ್ಯಾಕೃತೇನ ಪಾರಮಾರ್ಥಿಕೇನ ವಾ ಉಪಾಧಿನಾ ಸಂಬದ್ಧಂ ದೇವಾದಿರೂಪೇಣ ಬಹುಭೂತಮಿತಿ ವೇದವಿದ್ಭಿರಭ್ಯುಪಗನ್ತವ್ಯಮ್ ಇತಿ ॥

(ಅರ್ಥ)

ಇನ್ನು ಪೂರ್ವಪಕ್ಷಿಯು ಹೀಗೆನ್ನಬಹುದು :-

'ಯಾವದರಿಂದ ಅಶ್ರುತವಾದದ್ದು ಶ್ರುತವಾಗುತ್ತದೆಯೋ' (ಆ ಆದೇಶವನ್ನು ಕೇಳಿದೆಯ ?' (ಛಾಂ. ೬-೧-೩) ಎಂದು ಒಂದನ್ನು ಅರಿತರೆ ಎಲ್ಲವನ್ನೂ ಅರಿತಂತೆ ಆಗುವದು- ಎಂದು ಹೇಳಿ, 'ಏನಪ್ಪ, ಒಂದು ಮಣ್ಣಿನ ಮುದ್ದೆಯನ್ನು (ಅರಿತರೆ ಮಣ್ಣಿನಿಂದ ಆಗಿರುವದೆಲ್ಲವನ್ನೂ ಹೇಗೆ ಅರಿತಂತಾಗುವದೋ (ಛಾಂ. ೬-೧-೪) ಎಂದು ಒಂದು ಮಣ್ಣಿನ ಮುದ್ದೆಯಿಂದಾಗಿರುವ ಗಡಿಗೆ, ಶ್ರಾವೆ- ಮುಂತಾದವು ಆ ಮಣ್ಣಿನ ಮುದ್ದೆಗಿಂತ ಬೇರೆಯಲ್ಲದ ದ್ರವ್ಯವಾಗಿರುವದರಿಂದ ಅದನ್ನು ಅರಿತು ಕೊಂಡದ್ದರಿಂದ ಅವನ್ನು ಅರಿತುಕೊಂಡಂತಾಗುವಂತೆ, ಬ್ರಹ್ಮಜ್ಞಾನದಿಂದ ಅದರಿಂದ ಉಂಟಾಗಿರುವ ಇಡಿಯ ಚಿದಚಿದಾತ್ಮಕವಾದ ಜಗತ್ತೇ ಆ (ಬ್ರಹ್ಮಕ್ಕಿಂತ) ಬೇರೆ ಯಲ್ಲದ ವಸ್ತುವಾಗಿರುವದರಿಂದ ಜ್ಞಾತತೆಯು ಸಂಭವಿಸುತ್ತದೆ-ಎಂದು ಪ್ರತಿಪಾದಿಸಿ 'ಅಪ್ಪ, ಇದು ತನಗೆರಡನೆಯದಿಲ್ಲದ ಒಂದೇ ಆದ ಸತ್ತೇ ಆಗಿತ್ತು' ಎಂದು ಇದಂ ಶಬ್ದವಾಚ್ಯವಾದ ಚಿದಚಿದ್ರೂಪವಾದ ಜಗತ್ತಿಗೆ ಸೃಷ್ಟಿಗಿಂತ ಮೊದಲು ಎಲ್ಲಾ ಭೇದಗಳನ್ನೂ ಅಲ್ಲಗಳೆದು ಗಡಿಗೆ, ಶ್ರಾವೆ- ಮುಂತಾದವುಗಳಿಗೆ – ಹುಟ್ಟುವದಕ್ಕೆ ಮುಂಚೆ ಉತ್ಪಾದಕವಾದ ಮಣ್ಣುಮುದ್ದೆಯ ಐಕ್ಯವಿರುವಂತೆ- ಸಚ್ಛಬ್ದವಾಚ್ಯ ವಾದ (ಬ್ರಹ್ಮದ) ಐಕ್ಯವಿತ್ತೆಂದು ಹೇಳಿ 'ಅದು ಬಹುವಾಗುವೆನು ಎಂದು ಯೋಚಿಸಿ ಕೊಂಡಿತು' (ಛಾಂ. ೬-೨-೩) ಎಂದು ಅದೇ ಸಚ್ಛಬ್ದವಾಚ್ಯವಾದ ಬ್ರಹ್ಮವೇ ಚಿದಚಿದಾತ್ಮಕವಾದ ಪ್ರಪಂಚರೂಪದಿಂದ ಆತ್ಮನು ಬಹುವಾದನೆಂದೂ- ಒಂದು ಮಣ್ಣಿನ ಮುದ್ದೆಯು ಗಡಿಗೆಶ್ರಾವೆ ಮುಂತಾದವುಗಳ ರೂಪದಿಂದ (ಬಹುವಾಗು ವಂತೆ)- ಸಂಕಲ್ಪಿಸಿಕೊಂಡು ತನ್ನನ್ನೇ ತೇಜಸ್ಸೇ ಮುಂತಾದ ಜಗತ್ತಿನ ರೂಪ

ದಿಂದ ಸೃಷ್ಟಿಸಿತು- ಎಂದು ವೇದಾರ್ಥವನ್ನು ಬಲ್ಲವರು ಒಪ್ಪಬೇಕು- (ಎಂದು ಅವರು ಹೇಳಬಹುದು).

(ಮೂಲ)

೪. ತದಯುಕ್ತಮ್ 'ಜ್ಞಾಜ್ಞೌ ದ್ವಾವಜಾವೀಶಾನೀಶೌ' (ಶ್ವೇ. ೧-೯), 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್' (ಶ್ವೇ. ೬-೧೩, ಕಾ. ೫-೧೩) ಇತ್ಯಾದಿಶ್ರುತಿಭಿಃ ಜೀವಾನಾಮಜತ್ವ ನಿತ್ಯತ್ವಬಹುತ್ವವಚನಾತ್ ಸೃಷ್ಟೇಃ ಪ್ರಾಕ್ ಏಕೀಭೂತಸ್ಯೈವ ಬ್ರಹ್ಮಣಃ ಸೃಷ್ಟ್ಯುತ್ತರಕಾಲಭಾವಿಬಹುತ್ವವಚನಾತ್ । ಯದಿ ಘಟಶರಾವಾದೇರುತ್ಪತ್ತೇಃ ಪ್ರಾಗೇಕೀಭೂತಸ್ಯ ಮೃದ್ದ್ರವ್ಯಸ್ಯ ಉತ್ಪತ್ತ್ಯುತ್ತರಕಾಲಭಾವಿಬಹುತ್ವವತ್ ಸೃಷ್ಟೇಃ ಪ್ರಾಗೇಕೀಭೂತಸ್ಯೈವ ಬ್ರಹ್ಮಣಃ ಸೃಷ್ಟ್ಯುತ್ತರಕಾಲೀನಂ ನಾನಾವಿಧಜೀವ ರೂಪೇಣ ಬಹುತ್ವಮುಚ್ಯೇತ, ತದಾ ಜೀವಾನಾಮ್ ಅಜತ್ವನಿತ್ಯತ್ವಬಹುತ್ವಾದಿ ವಿರುಧ್ಯೇತ ॥

**ಸೂತ್ರವಿರೋಧಶ್ಚ**–'ಇತರವ್ಯಪದೇಶಾತ್ ಹಿತಾಕರಣಾದಿದೋಷಪ್ರಸಕ್ತಿಃ' (ವೇ. ಸೂ. ೨-೧-೨೧) ಇತಿ ಬ್ರಹ್ಮೈವ ದೇವಮನುಷ್ಯಾದಿಜೀವಸ್ವರೂಪೇಣ ಬಹುಭೂತಂ ಚೇತ್ ಆತ್ಮನೋ ಹಿತಾಕರಣಾದಿದೋಷಪ್ರಸಕ್ತಿಃ ಇತ್ಯುಕ್ತ್ವಾ 'ಅಧಿಕಂ ತು ಭೇದನಿರ್ದೇಶಾತ್' (ವೇ. ಸೂ. ೨-೧-೨೨) ಇತಿ ಜೀವಾದ್ ಬ್ರಹ್ಮಣೋಽರ್ಥಾನ್ತರತ್ವಮುಕ್ತಮ್। ತಥಾ ಚ 'ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್' (ವೇ. ಸೂ. ೨-೧-೩೪) ಇತಿ ದೇವಾದಿವಿಷಮಸೃಷ್ಟಿಪ್ರಯುಕ್ತಪಕ್ಷಪಾತ ನೈರ್ಘೃಣ್ಯೇ ಜೀವಾನಾಂ ಪೂರ್ವಪೂರ್ವಕರ್ಮಾಪೇಕ್ಷತ್ವಾದ್ ವಿಷಮಸೃಷ್ಟೇರಿತಿ ಪರಿಹೃತೇ। ತಥಾ 'ನ ಕರ್ಮಾವಿಭಾಗಾದಿತಿ ಚೇನ್ನಾನಾದಿತ್ವಾದುಪಪದ್ಯತೇ ಚಾಪ್ಯುಪಲಭ್ಯತೇ ಚ' (ವೇ. ಸೂ. ೨-೧-೩೫) ಇತಿ 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ.) ಇತಿ ಸೃಷ್ಟೇಃ ಪ್ರಾಗವಿಭಾಗವಚನಾತ್ ಸೃಷ್ಟೇಃ ಪ್ರಾಗ್ ಜೀವಾನಾಮಭಾವಾತ್ ತತ್ಕರ್ಮ ನ ಸಂಭವತಿ ಇತಿ ಪರಿಚೋದ್ಯ ಜೀವಾನಾಂ ತತ್ಕರ್ಮಪ್ರವಾಹಾಣಾಂ ಚಾನಾದಿತ್ವಾತ್ ಇತಿ ಪರಿಹೃತಮ್ । 'ನಾತ್ಮಾ ಶ್ರುತೇರ್ನಿತ್ಯತ್ವಾಚ್ಚ ತಾಭ್ಯಃ' (ವೇ. ಸೂ. ೨-೩-೧೮) ಇತ್ಯಾತ್ಮನ ಉತ್ಪತ್ತ್ಯಭಾವಶ್ಚೋಕ್ತೋ ನಿತ್ಯತ್ವಂ ಚ ॥

ಸ್ವಾಭ್ಯುಪಗಮವಿರೋಧಶ್ಚ– ಆಮೋಕ್ಷಾಜ್ಜೀವಭೇದಸ್ಯ ಅನಾದಿತ್ವಂ ಸರ್ವೈರೇವ ಹಿ ವೇದಾನ್ತಿಭಿರಭ್ಯುಪಗಮ್ಯತೇ। ಅತಃ ಶ್ರುತಿವಿರೋಧಾತ್ ಸೂತ್ರವಿರೋಧಾತ್ ಸ್ವಾಭ್ಯುಪಗಮವಿರೋಧಾಚ್ಚ ಸೃಷ್ಟೇಃ ಪ್ರಾಗೇಕತ್ವಾವಧಾರಣಂ ನಾಮ ರೂಪವಿಭಾಗಾಭಾವಾಭಿಪ್ರಾಯಮ್ । ನಾಮರೂಪವಿಭಾಗಾನರ್ಹಸೂಕ್ಷ್ಮಚಿದಚಿದ್ವಸ್ತುಶಕ್ತಿಭೇದಸಹಂ ಚ ಇತಿ ಸರ್ವೈರಭ್ಯುಪಗಮ್ಯತೇ। ಇಯಾಂಸ್ತು ವಿಶೇಷಃ–

ಅವಿದ್ಯಾಪರಿಕಲ್ಪನೇಽಪ್ಯುಪಾಧಿಪರಿಕಲ್ಪನೇಽಪಿ ಬ್ರಹ್ಮವ್ಯತಿರಿಕ್ತಸ್ಯ ಅವಿದ್ಯಾಸಂಬನ್ಧಿನಶ್ಚೋಪಾಧಿಸಂಬನ್ಧಿನಶ್ಚೇತನಸ್ಯ ಅಭಾವಾತ್, ಅವಿದ್ಯೋಪಾಧಿಸಂಬನ್ಧೌ, ತತ್ಕೃತಾಶ್ಚ ದೋಷಾ ಬ್ರಹ್ಮಣ ಏವ ಸ್ಯುಃ–ಇತಿ ॥

(ಅರ್ಥ)

ಅದು ಸರಿಯಲ್ಲ. ಏಕೆಂದರೆ 'ಸರ್ವಜ್ಞನೂ ಅಜ್ಞನೂ ಆಗಿರುವ ಇಬ್ಬರು ಈಶ್ವರನೂ ಅನೀಶ್ವರನೂ ಆಗಿರುತ್ತಾರೆ' (ಶ್ವೇ. ೧–೯), 'ಯಾವನು ನಿತ್ಯನಾಗಿ ನಿತ್ಯರುಗಳಿಗೆ, ಚೇತನನಾಗಿ ಚೇತನರುಗಳಿಗೆ ಒಬ್ಬನೇ ಬಹುಮಂದಿಗೆ ಕಾಮಗಳನು ಗೊತ್ತುಮಾಡಿಕೊಡುವನೋ' (ಶ್ವೇ. ೬–೧೩, ಕ. ೫–೧೩) ಮುಂತಾದ ಶ್ರುತಿಗಳು ಜೀವರುಗಳು ಜನ್ಮರಹಿತರು, ನಿತ್ಯರು, ಬಲುಮಂದಿ– ಎಂದು ಹೇಳುತ್ತಿವೆ. ಗಡಿಗೆ, ಶ್ರಾವೆ– ಮುಂತಾದವು ಹುಟ್ಟುವದಕ್ಕಿಂತ ಮೊದಲು ಒಂದೇ ಆಗಿದ್ದ ಮಣ್ಣೆಂಬ ದ್ರವ್ಯವು ಹುಟ್ಟಿದ ಮೇಲಿನ ಕಾಲದಲ್ಲಿ ಬಹುವಾಗುವಂತೆ, ಸೃಷ್ಟಿಗೆ ಮುಂಚೆ ಒಂದೇ ಆಗಿದ್ದ ಬ್ರಹ್ಮಕ್ಕೆ ಸೃಷ್ಟಿಯಾದ ಅನಂತರದ ಕಾಲದಲ್ಲಿ ನಾನಾವಿಧವಾದ ಜೀವರ ರೂಪದಿಂದ ಬಹುತ್ವವನ್ನು ಹೇಳುವದಾದರೆ ಆಗ ಜೀವರು ನಿತ್ಯರು, ಅಜರು, ಬಲುಮಂದಿ– ಎಂಬುದೇ ಮುಂತಾದದ್ದಕ್ಕೆ ವಿರೋಧವಾದೀತು.

**ಸೂತ್ರಕ್ಕೆ ವಿರುದ್ಧವಾಗಿರುವದರಿಂದಲೂ** (ಈ ಪಕ್ಷವು ಸರಿಯಲ್ಲ). 'ಬ್ರಹ್ಮಕ್ಕಿಂತ ಇತರನಾದ ಜೀವನ ರೂಪವನ್ನು ಅದಕ್ಕೆ ಹೇಳುವದರಿಂದ, ಹಿತರೂಪವಾದ ಜಗತ್ತನ್ನು ಮಾಡಿಕೊಳ್ಳದೆ ಇರುವದೇ ಮುಂತಾದ ದೋಷವು ಪ್ರಸಕ್ತವಾಗುವದು' (ವೇ. ಸೂ. ೨–೧–೨೧) ಎಂಬ ವೇದಾಂತ(ಸೂತ್ರದಿಂದ) ಬ್ರಹ್ಮವೇ ದೇವತೆಗಳು, ಮನುಷ್ಯರು– ಮುಂತಾದ ಜೀವರ ರೂಪದಿಂದ ಬಹುವಾಗಿವೆ ಎಂದರೆ, ಆತ್ಮನಿಗೆ ಹಿತವನ್ನುಂಟುಮಾಡಿಕೊಳ್ಳದೆ ಇರುವದೇ ಮುಂತಾದ ದೋಷವು ಪ್ರಸಕ್ತವಾಗುವದು– ಎಂದು ಹೇಳಿ 'ಆದರೆ ಅಧಿಕವನ್ನು ಹೇಳಿದೆ, ಏಕೆಂದರೆ ಭೇದವನ್ನು ತಿಳಿಸಿರುತ್ತದೆ' (ವೇ. ಸೂ. ೨–೧–೨೨) ಎಂಬ (ಸೂತ್ರದಿಂದ) ಜೀವಕ್ಕಿಂತ ಬ್ರಹ್ಮವು ವ್ಯತಿರಿಕ್ತವಾದ ಪದಾರ್ಥವೆಂದು ಹೇಳಿರುತ್ತದೆ. ಮತ್ತು ಹಾಗೆಯೇ 'ವೈಷಮ್ಯವೂ ನೈರ್ಘೃಣ್ಯವೂ (ಬ್ರಹ್ಮ)ಕ್ಕಿಲ್ಲ, ಏಕೆಂದರೆ (ಅದು) ಸಾಪೇಕ್ಷವಾಗಿದೆ' ಎಂಬ (ಸೂತ್ರ)ದಿಂದ ದೇವತೆಗಳೇ ಮುಂತಾದ ಬೇರೆಬೇರೆಯ (ರೂಪದ) ಸೃಷ್ಟಿಯಿಂದಾದ ಪಕ್ಷಪಾತಕ್ರೂರತ್ವಗಳನ್ನು ಜೀವರುಗಳ ಹಿಂದುಹಿಂದಿನ (ಜನ್ಮದ) ಕರ್ಮದ ಅಪೇಕ್ಷೆಯಿಂದ (ಹೀಗೆ) ಬೇರೆಬೇರೆಯ ತೆರನಾದ ಸೃಷ್ಟಿ(ಯಾಗುತ್ತದೆ) ಎಂದು ಪರಿಹರಿಸಲಾಗಿದೆ ; ಹಾಗೂ (ಸೃಷ್ಟಿಗೆ ಪೂರ್ವದಲ್ಲಿ) 'ಕರ್ಮವು ಬೇರೆಬೇರೆಯಾಗಿಲ್ಲದ್ದರಿಂದ ಇದು ಸರಿಯಲ್ಲ'– ಎಂದರೆ 'ಹಾಗಲ್ಲ ; ಏಕೆಂದರೆ ಅನಾದಿಯಾಗಿರುತ್ತದೆ. ಶ್ರುತಿಯು ಹೊಂದುತ್ತದೆ. (ಜೀವರ) ಅನಾದಿತ್ವವು ಶ್ರುತಿಸ್ಮೃತಿಗಳಲ್ಲಿ ಕಂಡೂಬರುತ್ತದೆ' (ವೇ. ಸೂ.

೨-೧-೩೫) ಎಂಬ (ಸೂತ್ರದಲ್ಲಿ) 'ಅಪ್ಪ, ಇದು ಮೊದಲು ತನಗೆರಡನೆಯದಿಲ್ಲದ ಸತ್ತೊಂದೇ ಆಗಿದ್ದಿತು' (ಛಾಂ.) ಎಂದು ಸೃಷ್ಟಿಗಿಂತ ಮುಂಚೆ ಅವಿಭಾಗವನ್ನು ಹೇಳಿರುವದರಿಂದ ಸೃಷ್ಟಿಗಿಂತ ಮುಂಚೆ ಜೀವರೇ ಇಲ್ಲದ್ದರಿಂದ ಅವರ ಕರ್ಮವು ಸಂಭವಿಸುವದಿಲ್ಲ ಎಂದು ಆಕ್ಷೇಪಿಸಿ ಜೀವರುಗಳೂ ಅವರ ಕರ್ಮಪ್ರವಾಹಗಳೂ ಅನಾದಿಯಾಗಿರುವದರಿಂದ (ಆಕ್ಷೇಪವನ್ನು) ಪರಿಹರಿಸಿದೆ. 'ಆತ್ಮನು ಹುಟ್ಟುವದಿಲ್ಲ; ಏಕೆಂದರೆ (ಅವನು ಹುಟ್ಟುವದೂ ಇಲ್ಲ ಸಾಯುವದೂ ಇಲ್ಲ ಎಂದು) ಶ್ರುತಿಯಿದೆ, 'ನಿತ್ಯನೆಂದೂ ಆ ಶ್ರುತಿಗಳಿರುವದರಿಂದ' (ವೇ. ಸೂ. ೨-೩-೧೮) ಎಂದು ಆತ್ಮನಿಗೆ ಉತ್ಪತ್ತ್ಯಭಾವವನ್ನೂ ನಿತ್ಯತ್ವವನ್ನೂ ಹೇಳಿದೆ.

(ಇದು) **ತಾವು ಒಪ್ಪಿರುವದಕ್ಕೆ ವಿರೋಧವೂ ಆಗಿರುತ್ತದೆ.** (ಏಕೆಂದರೆ) ಮೋಕ್ಷವಾಗುವವರೆಗೂ ಜೀವರು (ಪರಮಾತ್ಮನಿಗಿಂತ) ಬೇರೆಯಾಗಿ ಅನಾದಿಯಾಗಿರುತ್ತಾರೆಂದು ಎಲ್ಲಾ ವೇದಾಂತಿಗಳೂ ಒಪ್ಪಿರುತ್ತಾರಲ್ಲವೆ ?

ಆದ್ದರಿಂದ ಶ್ರುತಿವಿರೋಧವಾಗುವದರಿಂದಲೂ ಸೂತ್ರವಿರೋಧವಾಗುವದರಿಂದಲೂ ತಾವು ಒಪ್ಪಿರುವದಕ್ಕೂ ವಿರೋಧವಾಗುವದರಿಂದಲೂ ಸೃಷ್ಟಿಯಾಗುವದಕ್ಕಿಂತ ಮುಂಚೆ ಏಕತ್ವವನ್ನು ಒತ್ತಿಹೇಳಿರುವದಕ್ಕೆ ನಾಮರೂಪಗಳು ವಿಂಗಡವಾಗಿರುವದಿಲ್ಲ- ಎಂಬ ಅಭಿಪ್ರಾಯವೆಂದೂ ನಾಮರೂಪಗಳ ವಿಂಗಡಕ್ಕೆ ಅರ್ಹವಲ್ಲದೆ ಚಿದಚಿದ್ವಸ್ತುವಿನ ಶಕ್ತಿಯೂ ಭೇದವೂ ಇರುತ್ತದೆ ಎಂದೂ ಎಲ್ಲರೂ ಒಪ್ಪಿರುತ್ತಾರೆ. ಆದರೆ ಇಲ್ಲಿ **ಇಷ್ಟು ವಿಶೇಷವಿದೆ: ಅವಿದ್ಯೆಯನ್ನು ಕಲ್ಪಿಸಿದರೂ, ಉಪಾಧಿಯನ್ನು ಕಲ್ಪಿಸಿದರೂ ಬ್ರಹ್ಮವ್ಯತಿರಿಕ್ತವಾದ ಅವಿದ್ಯಾಸಂಬಂಧಿಯಾದ, ಮತ್ತು ಉಪಾಧಿಸಂಬಂಧಿಯಾದ[1] ಚೇತನವು ಇಲ್ಲದ್ದರಿಂದ ಅವಿದ್ಯೋಪಾಧಿಗಳ ಸಂಬಂಧಗಳೂ ದೋಷಗಳೂ ಈ ಪಕ್ಷದಲ್ಲಿ ಬ್ರಹ್ಮಕ್ಕೇ ಆಗುವವು.**

## ಯಾದವಪ್ರಕಾಶರ ಪ್ರಸ್ಥಾನದ ವಿಮರ್ಶೆ

**(ಮೂಲ)**

೫. ಸನ್ಮಾತ್ರಬ್ರಹ್ಮವಾದೇಽಪಿ ಪ್ರಾಕ್ಸೃಷ್ಟೇಃ ಸನ್ಮಾತ್ರಂ ಬ್ರಹ್ಮೈಕಮೇವ ಸೃಷ್ಟ್ಯುತ್ತರಕಾಲಂ ಭೋಕ್ತೃಭೋಗ್ಯನಿಯನ್ತೃರೂಪೇಣ ತ್ರಿಧಾಭೂತಂ ಚೇತ್, ಘಟಶರಾವಮಣಿಕವತ್ ಜೀವೇಶ್ವರಯೋರುತ್ಪತ್ತಿಮತ್ತ್ವಮ್ ಅನಿತ್ಯತ್ವಂ ಚ ಸ್ಯಾತ್ । ಅಥ ಏಕತ್ವಾಪತ್ತಿವೇಲಾಯಾಮಪಿ ಭೋಕ್ತೃಭೋಗ್ಯನಿಯನ್ತೃಶಕ್ತಿತ್ರಯಮ್ ಅವಸ್ಥಿತಮ್ ಇತಿ ಚೇತ್, ಕಿಮಿದಂ ಶಕ್ತಿತತ್ರಯಶಬ್ದವಾಚ್ಯಮ್ ಇತಿ ವಿವೇಚನೀಯಮ್ । ಯದಿ ಸನ್ಮಾತ್ರಸ್ಯೈಕಸ್ಯೈವ ಭೋಕ್ತೃಭೋಗ್ಯನಿಯನ್ತೃ

1. ಅವಿದ್ಯಾನಿಮಿತ್ತಭೇದವನ್ನು ಶಾಂಕರರೂ ಉಪಾಧಿನಿಮಿತ್ತಭೇದವನ್ನು ಭಾಸ್ಕರಾನುಯಾಯಿಗಳೂ ಒಪ್ಪಿರುತ್ತಾರೆ.

ರೂಪೇಣ ಪರಿಣಾಮಸಾಮರ್ಥ್ಯಂ ಶಕ್ತಿತ್ರಯಶಬ್ದವಾಚ್ಯಮ್, ಏವಂ ತರ್ಹಿ ಮೃತ್ಪಿಣ್ಡಸ್ಯ ಘಟಶರಾವಾದಿಪರಿಣಾಮಸಮರ್ಥಸ್ಯ ತದುತ್ಪಾದಕತ್ವಮಿವ ಬ್ರಹ್ಮಣ ಈಶ್ವರಾದೀನಾಮ್ ಉತ್ಪಾದಕತ್ವಮ್ ಇತಿ ತೇಷಾಮ್ ಅನಿತ್ಯತ್ವಮೇವ । ಅಥ ಈಶ್ವರಾದೀನಾಂ ಸೂಕ್ಷ್ಮರೂಪೇಣಾವಸ್ಥಿತಿರೇವ ಶಕ್ತಿರಿತ್ಯುಚ್ಯೇತ, ತರ್ಹಿ ತದತಿರಿಕ್ತಸ್ಯ ಸನ್ಮಾತ್ರಸ್ಯ ಬ್ರಹ್ಮಣಃ, ಪ್ರಮಾಣಾಭಾವಾತ್, ತದಭ್ಯುಪಗಮೇ ಚ ತದುತ್ಪಾದ್ಯತಯಾ ಈಶ್ವರಾದೀನಾಮ್ ಅನಿತ್ಯತ್ವಪ್ರಸಙ್ಗಾಚ್ಚ ತ್ರಯಾಣಾಂ ನಾಮರೂಪವಿಭಾಗಾನರ್ಹಸೂಕ್ಷ್ಮದಶಾಪತ್ತಿರೇವ ಪ್ರಾಕ್ಸೃಷ್ಟೇರೇಕತ್ವಾವಧಾರಣಾವಸೇಯಾ- ಇತಿ ವಕ್ತವ್ಯಮ್ । ಸ ತದಾ ತೇಷಾಂ ಬ್ರಹ್ಮಾತ್ಮಕತ್ವಾದೇಕತ್ವಾವಧಾರಣಂ ವಿರುಧ್ಯೇತ । ಅತಃ ಸರ್ವಾವಸ್ಥಾವಸ್ಥಿತಸ್ಯ ಚಿದಚಿದ್ವಸ್ತುನಃ ಬ್ರಹ್ಮಶರೀರತ್ವಶ್ರುತೇಃ, ಸರ್ವದಾ ಸರ್ವಶಬ್ದೈಃ ಬ್ರಹ್ಮೈವ ತತ್ತಚ್ಛರೀರಕತಯಾ ತತ್ತದ್ವಿಶಿಷ್ಟಮೇವಾಭಿಧೀಯತ ಇತಿ ಸ್ಥೂಲಚಿದಚಿದ್ವಸ್ತುವಿಶಿಷ್ಟಂ ಬ್ರಹ್ಮೈವ ಕಾರ್ಯಭೂತಂ ಜಗತ್, ನಾಮರೂಪವಿಭಾಗಾನರ್ಹಸೂಕ್ಷ್ಮಚಿದಚಿದ್ವಸ್ತುವಿಶಿಷ್ಟಂ ಬ್ರಹ್ಮ ಕಾರಣಮಿತಿ ತದೇವ ಮೃತ್ಪಿಣ್ಡಸ್ಥಾನೀಯಂ 'ಸದೇವ ಸೌಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ. ೬-೨-೧) ಇತ್ಯುಚ್ಯತೇ । ತದೇವ ವಿಭಕ್ತನಾಮರೂಪಚಿದಚಿದ್ವಸ್ತುವಿಶಿಷ್ಟಂ ಬ್ರಹ್ಮ ಕಾರ್ಯಮ್ -ಇತಿ ಸರ್ವಂ ಸಮಞ್ಜಸಮ್। ಶ್ರುತಿನ್ಯಾಯವಿರೋಧಸ್ತು ತೇಷಾಂ ಭಾಷ್ಯೇ ಪ್ರಪಞ್ಚಿತ ಇತಿ ನೇಹ ಪ್ರತನ್ಯತೇ ॥

(ಅರ್ಥ)

**ಸನ್ಮಾತ್ರಬ್ರಹ್ಮವಾದದಲ್ಲಿಯೂ**[1] ಸೃಷ್ಟಿಗಿಂತ ಮೊದಲು ಸನ್ಮಾತ್ರವಾದ ಬ್ರಹ್ಮವೊಂದೇ ಸೃಷ್ಟಿಯಾದ ಮೇಲಿನ ಕಾಲದಲ್ಲಿ ಭೋಕ್ತೃಭೋಗ್ಯನಿಯಂತೃರೂಪದಿಂದ ಮೂರು ವಿಧವಾಗಿ ಆಯಿತಾದರೆ, ಗಡಿಗೆ, ಶ್ರಾವೆ, ಕೊಮ್ಮೆ- ಇವುಗಳಂತೆ ಜೀವೇಶ್ವರರುಗಳು ಉತ್ಪತ್ತಿಯುಳ್ಳವರೆಂದೂ ಅನಿತ್ಯರೆಂದೂ ಆಗುವದು. ಹಾಗಿಲ್ಲದೆ ಒಂದೇ ಆಗಿರುವ ಕಾಲದಲ್ಲಿಯೂ ಭೋಕ್ತೃ, ಭೋಗ್ಯ, ನಿಯಂತೃ- ಇವರ ಶಕ್ತಿತ್ರಯವು ಇದ್ದೇ ಇರುತ್ತದೆ- ಎಂದರೆ ಈ ಶಕ್ತಿತ್ರಯವೆಂಬ ಶಬ್ದಕ್ಕೆ ವಾಚ್ಯವಾದದ್ದು ಯಾವದು ?- ಎಂಬುದನ್ನು ವಿವೇಚಿಸಬೇಕಾಗುವದು. ಸನ್ಮಾತ್ರವಾಗಿರುವ ಒಂದೇ (ಬ್ರಹ್ಮವು) ಭೋಕ್ತೃಗಳು, ಭೋಗ್ಯ, ನಿಯಂತೃ- ಎಂಬ

---

1. ಇದು ಯಾದವಪ್ರಕಾಶಪಕ್ಷ.

ರೂಪದಿಂದ ಪರಿಣಮಿಸುವ ಸಾಮರ್ಥ್ಯವೇ ಶಕ್ತಿತ್ರಯಶಬ್ದವಾಚ್ಯವಾದರೆ, ಆಗ ಮಣ್ಣುಮುದ್ದೆಯೇ ಗಡಿಗೆ, ಶ್ರಾವೆ- ಮುಂತಾದ ರೂಪದಿಂದ ಪರಿಣಮಿಸುವ ಸಾಮರ್ಥ್ಯವುಳ್ಳದ್ದಾಗಿರುವದರಿಂದ ಅವುಗಳಿಗೆ ಉತ್ಪಾದಕವಾಗಿರುವಂತೆ ಬ್ರಹ್ಮವು ಈಶ್ವರಾದಿಗಳ ಉತ್ಪಾದಕವೆಂದಾಗುವದರಿಂದ ಅವುಗಳು[1] ಅನಿತ್ಯವೆಂದೇ ಆಗುವದು. ಹಾಗಲ್ಲದೆ ಈಶ್ವರಾದಿಗಳ ಸೂಕ್ಷ್ಮರೂಪದಿಂದ ಇದ್ದು ಕೊಂಡಿರುವದೇ ಶಕ್ತಿ ಎನ್ನುವದಾದರೆ,[2] ಆಗ ಅದಕ್ಕಿಂತ ಅತಿರಿಕ್ತವಾದ ಸನ್ಮಾತ್ರಬ್ರಹ್ಮಕ್ಕೆ ಪ್ರಮಾಣವಿಲ್ಲದ್ದರಿಂದಲೂ ಅದನ್ನು ಒಪ್ಪಿದರೆ ಅದರಿಂದ ಈಶ್ವರಾದಿಗಳು ಉತ್ಪನ್ನವಾಗುವವೆಂಬ ಕಾರಣದಿಂದ ಅನಿತ್ಯತ್ವವು ಪ್ರಸಕ್ತವಾಗುವದರಿಂದಲೂ, ಆ ಮೂರೂ ನಾಮರೂಪವಿಭಾಗಕ್ಕೆ ಅನರ್ಹವಾದ ಸೂಕ್ಷ್ಮಾವಸ್ಥೆಯನ್ನು ಹೊಂದುವದೇ ಸೃಷ್ಟಿಗಿಂತ ಮೊದಲು ಒಂದೇ (ಇತ್ತು) ಎಂದು ಒತ್ತಿಹೇಳಿದ್ದರಿಂದ ನಿಶ್ಚಯಿಸ ಬೇಕು- ಎನ್ನಬೇಕಾಗುವದು. ಆಗ ಅವುಗಳಿಗೆ ಬ್ರಹ್ಮವೇ ಆತ್ಮನಾಗಿರುವದರಿಂದ (ಆಗ) ಒಂದೇ (ಇತ್ತು) ಎಂದು ಒತ್ತಿಹೇಳಿದ್ದು ವಿರುದ್ಧವಾಗುವದಿಲ್ಲ. ಆದ್ದರಿಂದ ಎಲ್ಲಾ ಅವಸ್ಥೆಗಳಲ್ಲಿಯೂ ಇರುವ ಚಿದಚಿದ್ವಸ್ತುವು ಬ್ರಹ್ಮದ ಶರೀರವೆಂದು ಶ್ರುತಿಯಿರುವದರಿಂದ ಯಾವಾಗಲೂ ಎಲ್ಲಾ ಶಬ್ದಗಳಿಂದಲೂ ಬ್ರಹ್ಮವೇ ಆಯಾ ಶರೀರವುಳ್ಳದ್ದಾಗಿ ಅದರದರಿಂದ ವಿಶಿಷ್ಟವಾಗಿ ಹೇಳಲ್ಪಡುತ್ತದೆ. ಹೀಗೆ ಸ್ಥೂಲಚಿದಚಿದ್ವಸ್ತುವಿಶಿಷ್ಟವಾದ ಬ್ರಹ್ಮವೇ ಕಾರ್ಯಭೂತವಾದ ಜಗತ್ತು, ನಾಮರೂಪವಿಭಾಗಕ್ಕೆ ತಕ್ಕದ್ದಲ್ಲದ ಸೂಕ್ಷ್ಮಚಿದಚಿದ್ವಸ್ತುವಿಶಿಷ್ಟವಾದ ಬ್ರಹ್ಮವು ಕಾರಣವು. ಆದ್ದರಿಂದ ಅದೇ[3] (ದೃಷ್ಟಾಂತದ) ಮಣ್ಣಿನ ಮುದ್ದೆಯಂತೆ. 'ಅಪ್ಪ ಇದು ಮೊದಲು ತನಗೆರಡನೆಯದಿಲ್ಲದ ಸತ್ತೊಂದೇ ಆಗಿತ್ತು' (ಛಾಂ. ೬-೨-೧) ಎಂದು ಉಕ್ತವಾಗಿರುತ್ತದೆ. ನಾಮರೂಪಗಳ ವಿಭಾಗವುಳ್ಳ ಅದೇ ಚಿದಚಿದ್ವಸ್ತುವಿಶಿಷ್ಟವಾದ ಬ್ರಹ್ಮವೇ ಕಾರ್ಯವು- ಎಂದು ಎಲ್ಲವೂ ಸಮಂಜಸವಾಗುತ್ತದೆ.

ಆ (ಸನ್ಮಾತ್ರಬ್ರಹ್ಮವಾದಿಗಳ ಪಕ್ಷಗಳಲ್ಲಿ) ಶ್ರುತಿನ್ಯಾಯಗಳಿಗೂ ವಿರೋಧವಿದೆ ಎಂಬುದನ್ನು ಭಾಷ್ಯದಲ್ಲಿಯೇ ವಿಸ್ತರವಾಗಿ ಹೇಳಲಾಗಿದೆಯಾಗಿ ಇಲ್ಲಿ ಮತ್ತೆ ವಿವರಿಸುವದಿಲ್ಲ.

---

1. ಭೋಕ್ತೃಭೋಗ್ಯನಿಯಂತೃಗಳು.

2. ಆಗ ನೀವೂ ನಮ್ಮ ಸಿದ್ಧಾಂತವನ್ನೇ ಒಪ್ಪಬೇಕಾಗಿಬರುವದು ಎಂದು ಭಾವ. ಆದ್ದರಿಂದಲೇ ಮುಂದೆ ವಿಶಿಷ್ಟಾದ್ವೈತಸಿದ್ಧಾಂತವನ್ನೇ ವರ್ಣಿಸಿರುತ್ತದೆ.

3. ಚಿದಚಿದ್ವಸ್ತುವಿಶಿಷ್ಟಬ್ರಹ್ಮವೇ.

# ಅಧಿಕರಣಾರ್ಥಸಂಕ್ಷೇಪ

## ಒಂದನೆಯ ಅಧ್ಯಾಯ

(ಮೂಲ)

೬. ಭಾಷ್ಯೋದಿತೋऽಧಿಕರಣಾರ್ಥಃ ಸಸೂತ್ರಾರ್ಥವಿವರಣಃ ಸುಖಗ್ರಹಣಾಯ ಸಙ್ಕ್ಷೇಪೇಣೋಪನ್ಯಸ್ಯತೇ। ತತ್ರ ಪ್ರಥಮೇ ಪಾದೇ ಪ್ರಧಾನಪುರುಷಾವೇವ ಜಗತ್ಕಾರಣತಯಾ ವೇದಾನ್ತಾಃ ಪ್ರತಿಪಾದಯನ್ತಿ- ಇತ್ಯಾಶಙ್ಕ್ಯ ಸರ್ವಜ್ಞಂ ಸತ್ಯಸಙ್ಕಲ್ಪಂ ನಿರವದ್ಯಂ ಸಮಸ್ತಕಲ್ಯಾಣಗುಣಾಕರಂ ಬ್ರಹ್ಮೈವ ಜಗತ್ಕಾರಣತಯಾ ಪ್ರತಿಪಾದಯನ್ತಿ ಇತ್ಯುಕ್ತಮ್। ದ್ವಿತೀಯತೃತೀಯಚತುರ್ಥಪಾದೇಷು ಕಾನಿಚಿತ್ ವೇದಾನ್ತವಾಕ್ಯಾನಿ ಪ್ರಧಾನಾದಿಪ್ರತಿಪಾದನಪರಾಣೀತಿ ತನ್ಮುಖೇನ ಸರ್ವಾಕ್ಷೇಪಮಾಶಙ್ಕ್ಯ ತಾನ್ಯಪಿ ಬ್ರಹ್ಮಪರಾಣಿ- ಇತ್ಯುಕ್ತಮ್। ತತ್ರ, ಅಸ್ಪಷ್ಟ ಜೀವಾದಿಲಿಙ್ಗಕಾನಿ ವಾಕ್ಯಾನಿ ದ್ವಿತೀಯೇ ನಿರೂಪಿತಾನಿ, ಸ್ಪಷ್ಟಲಿಙ್ಗಕಾನಿ ತೃತೀಯೇ; ಚತುರ್ಥೇ ತು ಪ್ರಧಾನಾದಿಪ್ರತಿಪಾದನಚ್ಛಾಯಾನುಸಾರೀಣಿ- ಇತಿ ವಿವೇಕಃ। ಅತಃ ಪ್ರಥಮೇ ಅಧ್ಯಾಯೇ ಸರ್ವಂ ವೇದಾನ್ತವಾಕ್ಯಜಾತಂ ಸಾರ್ವಜ್ಞ್ಯಸತ್ಯಸಙ್ಕಲ್ಪತ್ವಾದಿಯುಕ್ತಂ ಬ್ರಹ್ಮೈವ ಜಗತ್ಕಾರಣತಯಾ ಪ್ರತಿಪಾದಯತಿ -ಇತಿ ಸ್ಥಾಪಿತಮ್ ॥

(ಅರ್ಥ)

**ಭಾಷ್ಯದಲ್ಲಿ ಹೇಳಿರುವ ಸೂತ್ರವಿವರಣಸಹಿತವಾದ ಅಧಿಕರಣಾರ್ಥವನ್ನು** ಸುಲಭವಾಗಿ ಗ್ರಹಿಸುವದಕ್ಕಾಗಿ ಸಂಕ್ಷೇಪದಿಂದ (ಇಲ್ಲಿ) ತಿಳಿಸಲಾಗುವದು.

ಅಲ್ಲಿ **ಒಂದನೆಯ ಪಾದದಲ್ಲಿ** ಪ್ರಧಾನಪುರುಷರನ್ನೇ ವೇದಾಂತಗಳು ಜಗತ್ಕಾರಣವೆಂದು ಪ್ರತಿಪಾದಿಸುತ್ತಿವೆ- ಎಂದು ಆಶಂಕಿಸಿ ಸರ್ವಜ್ಞವೂ ಸತ್ಯಸಂಕಲ್ಪವೂ ನಿರ್ದುಷ್ಟವೂ ಸಮಸ್ತಕಲ್ಯಾಣಗುಣಗಳ ಗನಿಯೂ ಆಗಿರುವ ಬ್ರಹ್ಮವೇ ಜಗತ್ಕಾರಣವೆಂದು ಹಾಗೆ ಪ್ರತಿಪಾದಿಸುತ್ತಿವೆ ಎಂದು ಹೇಳಲಾಗಿದೆ.

**ಎರಡನೆಯ ಮೂರನೆಯ ನಾಲ್ಕನೆಯ ಪಾದಗಳಲ್ಲಿ**- ಕೆಲವು ವೇದಾಂತವಾಕ್ಯಗಳು ಪ್ರಧಾನವೇ ಮುಂತಾದವುಗಳನ್ನು ಪ್ರತಿಪಾದಿಸುವದರಲ್ಲಿ ತಾತ್ಪರ್ಯವುಳ್ಳವಾಗಿವೆ- ಎಂತ ಅವುಗಳ ಮೂಲಕ ಎಲ್ಲವನ್ನೂ ಆಕ್ಷೇಪಿಸಬಹುದು ಎಂದು ಆಶಂಕಿಸಿ, ಅವುಗಳೂ ಬ್ರಹ್ಮಪರವೇ ಎಂದು ಹೇಳಿರುತ್ತದೆ. ಅದರಲ್ಲಿಯೂ ಅಸ್ಪಷ್ಟವಾದ ಜೀವಾದಿಲಿಂಗವುಳ್ಳ ವಾಕ್ಯಗಳನ್ನು **ಎರಡನೆಯ ಪಾದದಲ್ಲಿ** ನಿರೂಪಿಸಲಾಗಿದೆ; ಸ್ಪಷ್ಟಲಿಂಗವುಳ್ಳ ವಾಕ್ಯಗಳನ್ನು ಮೂರನೆಯ

(ಪಾದದಲ್ಲಿ ನಿರೂಪಿಸಲಾಗಿದೆ). ನಾಲ್ಕನೆಯ ಪಾದದಲ್ಲಿಯೊ, ಎಂದರೆ, ಪ್ರಧಾನವೇ ಮುಂತಾದವುಗಳನ್ನು ಪ್ರತಿಪಾದಿಸುವಂತೆ ಕಾಣುವ (ವಾಕ್ಯಗಳನ್ನು ನಿರೂಪಿಸಿದೆ) ಎಂದಿಂತು ವಿಶೇಷ.

ಆದ್ದರಿಂದ **ಒಂದನೆಯ ಅಧ್ಯಾಯದಲ್ಲಿ** ವೇದಾಂತವಾಕ್ಯಸಮೂಹವೆಲ್ಲವೂ ಸರ್ವಜ್ಞತ್ವ, ಸತ್ಯಸಂಕಲ್ಪತ್ವ- ಮುಂತಾದ (ಗುಣಗಳಿಂದೊಡಗೂಡಿದ) ಬ್ರಹ್ಮವನ್ನೇ ಜಗತ್ಕಾರಣವೆಂದು ಪ್ರತಿಪಾದಿಸುತ್ತದೆ ಎಂದು ಸ್ಥಾಪಿಸಲಾಗಿರುತ್ತದೆ.

## ಎರಡನೆಯ ಅಧ್ಯಾಯ

### (ಮೂಲ)

ದ್ವಿತೀಯೇऽಧ್ಯಾಯೇ ತಸ್ಯಾರ್ಥಸ್ಯ ದುರ್ಧರ್ಷಣತ್ವಪ್ರತಿಪಾದನೇನ ದ್ರಢಿಮಾ ಉಚ್ಯತೇ । ತತ್ರ ಪ್ರಥಮೇ ಪಾದೇ ಸಾಙ್ಖ್ಯಾದಿಸ್ಮೃತಿವಿರೋಧಾತ್ ನ್ಯಾಯವಿರೋಧಾಚ್ಚ ಪ್ರಸಕ್ತೋ ದೋಷಃ ಪರಿಹೃತಃ । ದ್ವಿತೀಯೇ ತು ಸಾಙ್ಖ್ಯಾದಿ ವೇದಬಾಹ್ಯಪಕ್ಷಪ್ರತಿಕ್ಷೇಪಮುಖೇನ ತಸ್ಯೈವಾದರಣೀಯತಾ ಸ್ಥಿರೀಕೃತಾ । ತೃತೀಯಚತುರ್ಥಯೋಃ, ವೇದಾನ್ತವಾಕ್ಯಾನಾಮ್ ಅನ್ಯೋನ್ಯವಿಪ್ರತಿಷೇಧಾದಿ ದೋಷಗನ್ಧಾಭಾವಖ್ಯಾಪನಾಯ ವಿಯದಾದೀನಾಂ ಬ್ರಹ್ಮಕಾರ್ಯತಾಪ್ರಕಾರೋ ವಿಶೋಧ್ಯತೇ । ತತ್ರ ತೃತೀಯೇ ಪಾದೇ ಚ ಚಿದಚಿತ್ಪ್ರಪಞ್ಚಸ್ಯ ಬ್ರಹ್ಮಕಾರ್ಯತ್ವೇ ಸತ್ಯಪಿ ಅಚಿದಂಶಸ್ಯ ಸ್ವರೂಪಾನ್ಯಥಾಭಾವೇನ ಕಾರ್ಯತ್ವಮ್ ; ಚಿದಂಶಸ್ಯ ಸ್ವಭಾವಾನ್ಯಥಾಭಾವೇನ ಜ್ಞಾನಸಙ್ಕೋಚವಿಕಾಸರೂಪೇಣ ಕಾರ್ಯತಾ ಉದಿತಾ । ಚತುರ್ಥೇ ತು ಜೀವೋಪಕರಣಾನಾಮ್ ಇನ್ದ್ರಿಯಾದೀನಾಮ್ ಉತ್ಪತ್ತಿಪ್ರಕಾರಃ- ಇತಿ ಪ್ರಥಮೇನ ಅಧ್ಯಾಯದ್ವಯೇನ ಮುಮುಕ್ಷುಭಿರುಪಾಸ್ಯಂ ನಿರಸ್ತನಿಖಿಲದೋಷಗನ್ಧಮ್ ಅನವಧಿಕಾತಿಶಯಾಸಙ್ಖ್ಯೇಯಕಲ್ಯಾಣಗುಣಗಣಂ ನಿಖಿಲಜಗದೇಕಕಾರಣಂ ಬ್ರಹ್ಮ- ಇತಿ ಪ್ರತಿಪಾದಿತಮ್ ॥

### (ಅರ್ಥ)

**ಎರಡನೆಯ ಅಧ್ಯಾಯದಲ್ಲಿ** ಆ ಅರ್ಥವು ಎದುರಿಸಲಸಾಧ್ಯವೆಂಬುದನ್ನು ಪ್ರತಿಪಾದಿಸಿ ಇದರ ದಾರ್ಢ್ಯವನ್ನು ಹೇಳಲಾಗಿರುತ್ತದೆ. ಅದರಲ್ಲಿ **ಮೊದಲನೆಯ** ಪಾದದಲ್ಲಿ ಸಾಂಖ್ಯರೇ ಮೊದಲಾದವರ ಸ್ಮೃತಿಗಳಿಗೆ ವಿರುದ್ಧವಾಗಿರುವದರಿಂದಲೂ ಯುಕ್ತಿಗೆ ವಿರುದ್ಧವಾಗಿರುವದರಿಂದಲೂ ಪ್ರಸಕ್ತವಾದ ದೋಷವನ್ನು ಪರಿಹರಿಸಿರುತ್ತದೆ. ಎರಡನೆಯ (ಪಾದ)ದಲ್ಲಿಯೊ, ಎಂದರೆ ಸಾಂಖ್ಯರೇ ಮುಂತಾದ ವೇದಬಾಹ್ಯರ ಪಕ್ಷವನ್ನು ತಿರಸ್ಕರಿಸುವ ಮೂಲಕ ಅದನ್ನೇ (ವೇದಪಕ್ಷವನ್ನೇ) ಆದರಿಸಬೇಕೆಂದು ಸ್ಥಿರಗೊಳಿಸಲಾಗಿದೆ. **ಮೂರನೆಯ ನಾಲ್ಕನೆಯ ಪಾದಗಳಲ್ಲಿ**

ವೇದಾಂತವಾಕ್ಯಗಳು ಒಂದಕ್ಕೊಂದು ವಿರುದ್ಧವಾಗಿರುವಪರ ವಾಸನೆಯೂ ಇಲ್ಲವೆಂದು ಹೊರಪಡಿಸುವದಕ್ಕಾಗಿ ಆಕಾಶವೇ ಮುಂತಾದವು ಬ್ರಹ್ಮದ ಕಾರ್ಯವೆಂಬುದು ಹೇಗೆಂಬುದನ್ನು ಶೋಧಿಸಲಾಗಿದೆ. ಅದರಲ್ಲಿಯೂ **ಮೂರನೆಯ ಪಾದ**ದಲ್ಲಿ ಚಿದಚಿತ್ಪ್ರಪಂಚವು ಬ್ರಹ್ಮಕಾರ್ಯವೇ ಆಗಿದ್ದರೂ ಅಚಿದಂಶಕ್ಕೆ ಸ್ವರೂಪಾನ್ಯಥಾಭಾವವಿರುವದರಿಂದ ಕಾರ್ಯತ್ವವು, ಚಿದಂಶಕ್ಕೆ ಸ್ವಭಾವಾನ್ಯಥಾಭಾವವಿರುವದರಿಂದ ಜ್ಞಾನದ ಸಂಕೋಚವಿಕಾಸಗಳ ರೂಪದಿಂದ ಕಾರ್ಯತ್ವವು–ಎಂದು ಹೇಳಿದೆ. **ನಾಲ್ಕನೆಯ (ಪಾದ)ದಲ್ಲಿಯಾದರೋ,** ಜೀವನಿಗೆ ಉಪಕರಣವಾಗಿರುವ ಇಂದ್ರಿಯಾದಿಗಳು ಉತ್ಪತ್ತಿಯಾಗುವ ಪ್ರಕಾರವನ್ನು ಹೇಳಿದೆ. ಹೀಗೆ **ಮೊದಲನೆಯ ಎರಡು ಅಧ್ಯಾಯಗಳಲ್ಲಿ ಮುಮುಕ್ಷುಗಳು ಉಪಾಸಿಸತಕ್ಕ ಯಾವ ದೋಷಗಂಧವೂ ಇಲ್ಲದ** ಇನ್ನಿಲ್ಲದಷ್ಟು ಅತಿಶಯವುಳ್ಳ ಲೆಕ್ಕವಿಲ್ಲದಷ್ಟು ಕಲ್ಯಾಣಗುಣಗಣದಿಂದ ಕೂಡಿದ ಎಲ್ಲ ಜಗತ್ತಿಗೂ ತಾನೊಂದೇ ಕಾರಣವಾಗಿರುವದು **ಬ್ರಹ್ಮವು** ಎಂದು ಪ್ರತಿಪಾದಿಸಲಾಗಿರುತ್ತವೆ.

## ಮೂರನೆಯ ನಾಲ್ಕನೆಯ ಅಧ್ಯಾಯಗಳು

**(ಮೂಲ)**

ಉತ್ತರೇಣ ದ್ವಯೇನ ಬ್ರಹ್ಮೋಪಾಸನಪ್ರಕಾರತತ್ಫಲಭೂತಮೋಕ್ಷರೂಪಂ ಚ ಚಿನ್ತ್ಯತೇ। ತತ್ರ ತೃತೀಯಸ್ಯ ಪ್ರಥಮೇ ಪಾದೇ ಬ್ರಹ್ಮೋಪಾಸಿಸಿಷೋತ್ಪತ್ತಯೇ ಜೀವಸ್ಯ ಸಂಸರತೋ ದೋಷಾಃ ಕೀರ್ತಿತಾಃ। ದ್ವಿತೀಯೇ ಚ ಉಪಾಸಿಸಿಷೋತ್ಪತ್ತಯ ಏವ ಬ್ರಹ್ಮಣೋ ನಿರಸ್ತನಿಖಿಲದೋಷತಾಕಲ್ಯಾಣಗುಣಾಕರತಾರೂಪೋಭಯಲಿಙ್ಗತಾ ಪ್ರತಿಪಾದ್ಯತೇ। ತೃತೀಯೇ ತು ಬ್ರಹ್ಮೋಪಾಸನೈಕತ್ವನಾನಾತ್ವವಿಚಾರಪೂರ್ವಕಮ್ ಉಪಾಸನೇಷೂಪಸಂಹಾರ್ಯಾನುಪಸಂಹಾರ್ಯಗುಣವಿಶೇಷಾಃ ಪ್ರಪಞ್ಚಿತಾಃ। ಚತುರ್ಥೇ ತು ಉಪಾಸನಸ್ಯ ವರ್ಣಾಶ್ರಮಧರ್ಮೇತಿಕರ್ತವ್ಯತಾಕತ್ವಮುಕ್ತಮ್॥

ಚತುರ್ಥೇಽಧ್ಯಾಯೇ ಬ್ರಹ್ಮೋಪಾಸನಫಲಚಿನ್ತಾ ಕ್ರಿಯತೇ। ತತ್ರ ಪ್ರಥಮೇ ಪಾದೇ ಬ್ರಹ್ಮೋಪಾಸನಫಲಂ ವಕ್ತುಮ್ ಉಪಾಸನಸ್ವರೂಪಪೂರ್ವಕೋಪಾಸನಾನುಷ್ಠಾನಪ್ರಕಾರಃ, ವಿದ್ಯಾಮಾಹಾತ್ಮ್ಯಂ ಚ ಉಚ್ಯತೇ। ದ್ವಿತೀಯೇ ತು ಬ್ರಹ್ಮೋಪಾಸೀನಾನಾಂ ಬ್ರಹ್ಮಪ್ರಾಪ್ತಿಗತ್ಯುಪಕ್ರಮಪ್ರಕಾರಶ್ಚಿನ್ತಿತಃ। ತೃತೀಯೇ ತು ಅರ್ಚಿರಾದಿಗತಿಸ್ವರೂಪಮ್, ಅರ್ಚಿರಾದಿನೈವ ಬ್ರಹ್ಮಪ್ರಾಪ್ತಿಃ, ಇತಿ ಚ ಪ್ರತಿಪಾದ್ಯತೇ। ಚತುರ್ಥೇ ತು ಮುಕ್ತಸ್ಯ ಬ್ರಹ್ಮಾನುಭವಪ್ರಕಾರಶ್ಚಿನ್ತ್ಯತೇ॥

**(ಅರ್ಥ)**

ಮುಂದಿನ ಎರಡು (ಅಧ್ಯಾಯ)ದಿಂದ ಬ್ರಹ್ಮೋಪಾಸನೆಯ ಪ್ರಕಾರವನ್ನೂ ಅದಕ್ಕೆ ಫಲವಾಗಿರುವ ಮೋಕ್ಷಸ್ವರೂಪವನ್ನೂ ವಿಚಾರಮಾಡಲಾಗಿದೆ. ಅದರಲ್ಲಿ

**ಮೂರನೆಯ (ಅಧ್ಯಾಯದ) ಮೊದಲನೆಯ ಪಾದದಲ್ಲಿ** ಬ್ರಹ್ಮವನ್ನು ಉಪಾಸನೆಮಾಡಬೇಕೆಂಬ ಇಚ್ಛೆಯು ಉತ್ಪತ್ತಿಯಾಗುವದಕ್ಕಾಗಿ ಸಂಸಾರದಲ್ಲಿ ತೊಳಲುತ್ತಿರುವ ಜೀವನಲ್ಲಿರುವ ದೋಷಗಳನ್ನು ಹೇಳಲಾಗಿದೆ. ಎರಡನೆಯ ಪಾದದಲ್ಲಿ ಉಪಾಸನೆಯನ್ನು ಮಾಡಬೇಕೆಂಬ ಇಚ್ಛೆಯು ಉತ್ಪತ್ತಿಯಾಗುವದಕ್ಕಾಗಿಯೇ ಬ್ರಹ್ಮಕ್ಕೆ ಯಾವ ದೋಷವೂ ಇಲ್ಲದಿರುವದು ಮತ್ತು ಸಕಲಕಲ್ಯಾಣ ಗುಣ ಎಂಬೀ ರೂಪದ ಉಭಯಲಿಂಗತ್ವವನ್ನು ಪ್ರತಿಪಾದಿಸಲಾಗಿರುತ್ತದೆ. **ಮೂರನೆಯ (ಪಾದ)ದಲ್ಲಿಯಾದರೊ,** ಬ್ರಹ್ಮೋಪಾಸನೆಯು ಒಂದೊ, ಬೇರೆ ಬೇರೆಯೊ ?– ಎಂಬುದನ್ನು ವಿಚಾರಮಾಡುವದರ ಪೂರ್ವಕ ಉಪಾಸನೆಗಳಲ್ಲಿ ಉಪಸಂಹಾರಮಾಡಿಕೊಳ್ಳಬೇಕಾದ ಅಥವಾ ಉಪಸಂಹಾರಮಾಡಬಾರದ ಗುಣ ವಿಶೇಷಗಳನ್ನು ವಿವರಿಸಿದೆ. **ನಾಲ್ಕನೆಯ** ಪಾದದಲ್ಲಿಯೊ, ಎಂದರೆ ವರ್ಣಾಶ್ರಮ ಧರ್ಮದ ಇತಿಕರ್ತವ್ಯತೆಯನ್ನು ಹೇಳಿರುತ್ತದೆ.

**ನಾಲ್ಕನೆಯ ಅಧ್ಯಾಯ**ದಲ್ಲಿ ಬ್ರಹ್ಮೋಪಾಸನೆಯ ಫಲದ ವಿಷಯವಾಗಿ ವಿಚಾರವನ್ನು ಮಾಡಲಾಗಿದೆ. ಅಲ್ಲಿ **ಮೊದಲನೆಯ ಪಾದ**ದಲ್ಲಿ ಬ್ರಹ್ಮೋಪಾಸನೆಯ ಫಲವನ್ನು ಹೇಳುವದಕ್ಕಾಗಿ ಉಪಾಸನೆಯ ಸ್ವರೂಪಪೂರ್ವಕವಾಗಿ ಉಪಾಸನೆಯನ್ನು ಅನುಷ್ಠಾನಮಾಡುವ ಪ್ರಕಾರವನ್ನೂ ವಿದ್ಯೆಯ ಮಾಹಾತ್ಮ್ಯವನ್ನೂ ಹೇಳಲಾಗಿದೆ. ಎರಡನೆಯ (ಪಾದ)ದಲ್ಲಾದರೆ, ಬ್ರಹ್ಮವನ್ನು ಉಪಾಸನೆ ಮಾಡುವವರಿಗೆ ಬ್ರಹ್ಮಪ್ರಾಪ್ತಿಗೆ ಬೇಕಾದ ಗತಿಯ ಉಪಕ್ರಮದ ಪ್ರಕಾರವನ್ನು ಚಿಂತಿಸಲಾಗಿದೆ. ಮೂರನೆಯ (ಪಾದ)ದಲ್ಲಿಯೊ, ಅರ್ಚಿರಾದಿಗತಿಯ ಸ್ವರೂಪವನ್ನು ಅರ್ಚಿರಾದಿಗಳಿಂದಲೇ ಬ್ರಹ್ಮಪ್ರಾಪ್ತಿ– ಎಂಬುದನ್ನು ಪ್ರತಿಪಾದಿಸಿರುತ್ತದೆ. ನಾಲ್ಕನೆಯ (ಪಾದ)ದಲ್ಲಿಯಾದರೊ, ಮುಕ್ತನು ಬ್ರಹ್ಮವನ್ನು ಅನುಭವಿಸುವ ಪ್ರಕಾರವನ್ನು ಕುರಿತು ಚಿಂತಿಸಲಾಗಿದೆ.

## ಉಪಸಂಹಾರ

(ಮೂಲ)

೭. ಅತೋ ಮುಮುಕ್ಷುಭಿರ್ಜ್ಞಾತವ್ಯಂ ನಿರಸ್ತನಿಖಿಲದೋಷಗನ್ಧಮ್, ಅನವಧಿಕಾತಿಶಯಾಸಙ್ಖ್ಯೇಯಕಲ್ಯಾಣಗುಣಗಣಾಕರಮ್, ನಿಖಿಲಜಗದೇಕ ಕಾರಣಂ ಪರಂ ಬ್ರಹ್ಮ, ತಜ್ಜ್ಞಾನಂ ಚ ಮೋಕ್ಷಸಾಧನಮ್ ಅಸಕೃದಾವೃತ್ತ ಸ್ಮೃತಿಸನ್ತಾನರೂಪಮ್ ಉಪಾಸನಾತ್ಮಕಮ್, ಉಪಾಸನಾಫಲಂ ಚ ಅರ್ಚಿರಾದಿನಾಪರಂ ಬ್ರಹ್ಮೋಪಸಂಪದ್ಯ ಸ್ವಸ್ವರೂಪಭೂತಜ್ಞಾನಾದಿಗುಣಾವಿರ್ಭಾವ ಪೂರ್ವಕಾನನ್ತಮಹಾವಿಭೂತ್ಯನವಧಿಕಾತಿಶಯಾನನ್ದಬ್ರಹ್ಮಾನುಭವೋಽಪುನರಾವೃತ್ತಿರೂಪ ಇತಿ ಶಾರೀರಕಶಾಸ್ತ್ರೇಣೋಕ್ತಂ ಭವತಿ ॥

(ಅರ್ಥ)

ಆದ್ದರಿಂದ ಮುಮುಕ್ಷುಗಳು **ಅರಿತುಕೊಳ್ಳಬೇಕಾದದ್ದು** ಯಾವದೊಂದು ದೋಷದ ವಾಸನೆಯೂ ಇಲ್ಲದ ಇನ್ನಿಲ್ಲವೆನ್ನುವಷ್ಟು ಅತಿಶಯವುಳ್ಳ ಲೆಕ್ಕವಿಲ್ಲದಷ್ಟು ಕಲ್ಯಾಣಗುಣಗಳ ಸಮೂಹಕ್ಕೆ ಆಕರವಾಗಿ ಜಗತ್ತಿಗೆಲ್ಲ ತಾನೊಂದೇ ಕಾರಣವಾಗಿರುವ **ಬ್ರಹ್ಮವು,** ಅದರ ಜ್ಞಾನವೆಂದರೆ ಮೋಕ್ಷಕ್ಕೆ ಸಾಧನವಾಗಿರುವ ಮತ್ತೆ ಮತ್ತೆ ಆವೃತ್ತಿಮಾಡುವ ಸ್ಮೃತಿಸಂತಾನರೂಪವಾದ **ಉಪಾಸನೆಯು ರೂಪವಾದದ್ದೇ, ಉಪಾಸನೆಯ ಫಲವು** ಎಂದರೆ ಅರ್ಚಿರಾದಿಮಾರ್ಗದಿಂದ ಪರಬ್ರಹ್ಮವನ್ನು ಸೇರಿ ತನ್ನ ಸ್ವರೂಪವಾಗಿರುವ ಜ್ಞಾನಾದಿಗುಣಗಳ ಆವಿರ್ಭಾವಪೂರ್ವಕವಾಗಿ ಅನಂತಮಹಾವಿಭೂತಿಯಾದ ಮತ್ತೆ ಹಿಂತಿರುಗುವಿಕೆಯಿಲ್ಲದ ಸ್ವರೂಪವುಳ್ಳ ಇನ್ನಿಲ್ಲವೆನ್ನುವಷ್ಟು ಅತಿಶಯವಾದ ಆನಂದ(ರೂಪವಾದ) ಬ್ರಹ್ಮದ ಅನುಭವವು –ಎಂದು ಶಾರೀರಕಶಾಸ್ತ್ರದಲ್ಲಿ ಉಕ್ತವಾದಂತೆ ಆಗಿರುತ್ತದೆ.

## ಅಧಿಕರಣರಚನೆ

### ಅಥಾತೋ ಬ್ರಹ್ಮಜಿಜ್ಞಾಸಾ ॥ ೧ ॥

(ಮೂಲ)

೮. ಬ್ರಹ್ಮಮೀಮಾಂಸಾ ವಿಷಯಃ। ಸಾ ಕಿಮ್ ಆರಮ್ಭಣೀಯಾ, ಉತ ನಾರಮ್ಭಣೀಯಾ ?– ಇತಿ ಸಂಶಯಃ। ತದರ್ಥಂ ಪರೀಕ್ಷ್ಯತೇ– ವೇದಾನ್ತಾಃ ಕಿಂ ಬ್ರಹ್ಮಣಿ ಪ್ರಮಾಣಮ್, ಉತ ನ? ಇತಿ। ತದರ್ಥಂ ಪರಿನಿಷ್ಪನ್ನೇಽರ್ಥೇ ಶಬ್ದಸ್ಯ ಬೋಧನಸಾಮರ್ಥ್ಯಾವಧಾರಣಂ ಸಂಭವತಿ, ನೇತಿ ? ನ ಸಂಭವತಿ– ಇತಿ ಪೂರ್ವಃ ಪಕ್ಷಃ ; ಸಂಭವತಿ–ಇತಿ ರಾದ್ಧಾನ್ತಃ। ಯದಾ ನ ಸಂಭವತಿ, ತದಾ ಪರಿನಿಷ್ಪನ್ನೇಽರ್ಥೇ ಶಬ್ದಸ್ಯ ಬೋಧನಸಾಮರ್ಥ್ಯಾಭಾವಾತ್ ಸಿದ್ಧರೂಪೇ ಬ್ರಹ್ಮಣಿ ನ ವೇದಾನ್ತಾಃ ಪ್ರಮಾಣಮ್ ಇತಿ ತದ್ವಿಚಾರಾಕಾರಾ ಬ್ರಹ್ಮಮೀಮಾಂಸಾ ನಾರಮ್ಭಣೀಯಾ ; ಯದಾ ಸಮ್ಭವತಿ, ತದಾ ಸಿದ್ಧೇಽಪ್ಯರ್ಥೇ ಶಬ್ದಸ್ಯ ಬೋಧನಸಾಮರ್ಥ್ಯಸಂಭವಾತ್, ವೇದಾನ್ತಾ ಬ್ರಹ್ಮಣಿ ಪ್ರಮಾಣಮಿತಿ ಸಾ ಚಾರಮ್ಭಣೀಯಾ ಸ್ಯಾತ್ ॥

(ಅರ್ಥ)

ಬ್ರಹ್ಮಮೀಮಾಂಸೆಯು **ವಿಷಯ.**[1] ಅದನ್ನು ಆರಂಭಿಸತಕ್ಕದ್ದೊ ಅಲ್ಲವೊ ? –ಎಂಬುದು **ಸಂಶಯ.** ಅದಕ್ಕಾಗಿ (ಇದನ್ನು) ಪರೀಕ್ಷಿಸಲಾಗುವದು:

---

1. ಪ್ರಯೋಜನ. ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ, (ಈ ಎರಡು ಪಕ್ಷಗಳಲ್ಲಿನ) ಪ್ರಯೋಜನ – ಈ ಐದು ಅವಯವಗಳಿರುವದೇ ಅಧಿಕರಣ. ಇದು ಮೀಮಾಂಸಾವಿಷಯಕವಾದ ಅಧಿಕರಣವೆಂದು ರಾಮಾನುಜರ ಮತ.

ವೇದಾಂತಗಳು ಬ್ರಹ್ಮದಲ್ಲಿ ಪ್ರಮಾಣವೋ, ಅಲ್ಲವೋ ? ಅದರ (ನಿರ್ಣಯ)ಕ್ಕಾಗಿ (ಇದನ್ನು) ಪರೀಕ್ಷಿಸಬೇಕು ? ಶಬ್ದಕ್ಕೆ ಪರಿನಿಷ್ಪನ್ನವಾದ ಅರ್ಥದಲ್ಲಿ ಬೋಧನ ಸಾಮರ್ಥ್ಯಶಕ್ತಿಯು ಸಂಭವಿಸುತ್ತದೆಯೋ, ಇಲ್ಲವೋ ? ಸಂಭವಿಸುವದಿಲ್ಲ–ಎಂಬುದು **ಪೂರ್ವಪಕ್ಷ,** ಸಂಭವಿಸುತ್ತದೆ ಎಂಬುದು **ಸಿದ್ಧಾಂತ.** ಯಾವಾಗ (ಯಾವ ಪಕ್ಷದಲ್ಲಿ) ಸಂಭವಿಸುವದಿಲ್ಲವೋ, ಆಗ (ಆ ಪಕ್ಷದಲ್ಲಿ) ಪರಿನಿಷ್ಪನ್ನವಾದ ವಿಷಯದಲ್ಲಿ ಶಬ್ದಕ್ಕೆ ಬೋಧನಶಕ್ತಿಯಿಲ್ಲದಿರುವದರಿಂದ ಸಿದ್ಧರೂಪವಾದ ಬ್ರಹ್ಮದಲ್ಲಿ ವೇದಾಂತಗಳು ಪ್ರಮಾಣವಲ್ಲವೆಂದಾಗಿ ಅದರ ವಿಚಾರರೂಪವಾದ ಬ್ರಹ್ಮಮೀಮಾಂಸೆಯನ್ನು ಆರಂಭಿಸತಕ್ಕದ್ದಲ್ಲ ; ಯಾವಾಗ ಸಂಭವಿಸುತ್ತದೆಯೋ ಆಗ ಸಿದ್ಧವಾದ ವಿಷಯದಲ್ಲಿಯೂ ಶಬ್ದಕ್ಕೆ ಬೋಧನಸಾಮರ್ಥ್ಯವು ಸಂಭವಿಸುವದರಿಂದ ವೇದಾಂತಗಳು ಬ್ರಹ್ಮದಲ್ಲಿ ಪ್ರಮಾಣವಾಗುತ್ತವೆಯಾದ್ದರಿಂದ ಆ (ಮೀಮಾಂಸೆ)ಯನ್ನು ಆರಂಭಿಸಬಹುದು –ಎಂದಾಗುವದು.

## ಪೂರ್ವಪಕ್ಷದ ಯುಕ್ತಿ

(ಮೂಲ)

೯. ಅತ್ರ ಪೂರ್ವಪಕ್ಷವಾದೀ ಮನ್ಯತೇ – ವೃದ್ಧವ್ಯವಹಾರಾದನ್ಯತ್ರ ವ್ಯುತ್ಪತ್ತ್ಯಸಂಭವಾತ್, ವ್ಯವಹಾರಸ್ಯ ಚ ಕಾರ್ಯಬುದ್ಧಿಪೂರ್ವಕತ್ವೇನ ಕಾರ್ಯ ಏವಾರ್ಥೇ ಶಬ್ದಶಕ್ತ್ಯವಧಾರಣಾತ್, ಪರಿನಿಷ್ಪನ್ನೇಽಪಿ ಬ್ರಹ್ಮಣಿ ನ ವೇದಾನ್ತಾಃ ಪ್ರಮಾಣಮ್ ಇತಿ ತದ್ವಿಚಾರರೂಪಾ ಬ್ರಹ್ಮಮೀಮಾಂಸಾ ನಾರಮ್ಭಣೀಯಾ ಇತಿ ॥

(ಅರ್ಥ)

ಇಲ್ಲಿ **ಪೂರ್ವಪಕ್ಷವಾದಿಯ** ಮತವೇನೆಂದರೆ, ವೃದ್ಧವ್ಯವಹಾರವನ್ನು ಬಿಟ್ಟರೆ ಮತ್ತೆಲ್ಲಿಯೂ ವ್ಯುತ್ಪತ್ತಿಯು ಆಗುವಂತಿಲ್ಲವಾದ್ದರಿಂದಲೂ ವ್ಯವಹಾರವು ಕಾರ್ಯಬುದ್ಧಿಪೂರ್ವಕವಾಗಿರುವದರಿಂದ ಕಾರ್ಯಾರ್ಥದಲ್ಲಿಯೇ ಶಬ್ದಶಕ್ತಿಯಿದೆ ಎಂದು ನಿಶ್ಚಯವಾಗುವದರಿಂದಲೂ ಪರಿನಿಷ್ಪನ್ನವಾದ ಬ್ರಹ್ಮದಲ್ಲಿಯೂ ವೇದಾಂತಗಳು ಪ್ರಮಾಣವಲ್ಲ; ಆದ್ದರಿಂದ ಅವರ ವಿಚಾರರೂಪವಾದ ಬ್ರಹ್ಮಮೀಮಾಂಸೆಯನ್ನು ಆರಂಭಿಸತಕ್ಕದ್ದಲ್ಲ.

## ಸಿದ್ಧಾಂತಯುಕ್ತಿ

(ಮೂಲ)

೧೦. ಸಿದ್ಧಾನ್ತಸ್ತು ಬಾಲಾನಾಂ ಮಾತಾಪಿತೃಪ್ರಭೃತಿಭಿರಮ್ಬಾತಾತ ಮಾತುಲಶಿಶುಪಶುಪಕ್ಷಿಮೃಗಾದಿಷು ಅಙ್ಗುಲ್ಯಾ ನಿರ್ದಿಶ್ಯ ತತ್ತದಭಿಧಾಯಿನಃ ಶಬ್ದಾನ್ ಪ್ರಯುಞ್ಜಾನೈಃ, ಕ್ರಮೇಣ ಬಹುಶಃ ಶಿಕ್ಷಿತಾನಾಂ ತತ್ತಚ್ಛಬ್ದಶ್ರವಣಸಮ

ನನ್ತರಂ ಸ್ವಾತ್ಮನಾಮೇವ ತದರ್ಥಬುದ್ಧ್ಯುತ್ಪತ್ತಿದರ್ಶನಾತ್, ಶಬ್ದಾರ್ಥಯೋಃ ಸಂಬನ್ಧಾನ್ತರಾದರ್ಶನಾತ್, ಸಙ್ಕೇತಯಿತೃಪುರುಷಾಜ್ಞಾನಾಚ್ಚ ಬೋಧ್ಯ ಬೋಧಕಭಾವ ಏವ ಶಬ್ದಾರ್ಥಯೋಸ್ಸಂಬನ್ಧ ಇತಿ ನಿಶ್ಚಿನ್ವಾನಾನಾಂ ಪರಿನಿಷ್ಪನ್ನೇಽರ್ಥೇ ಶಬ್ದಸ್ಯ ಬೋಧಕತ್ವಾವಧಾರಣಂ ಸಮ್ಭವತೀತಿ ಬ್ರಹ್ಮಣಿ ವೇದಾನ್ತವಾಕ್ಯಾನಾಂ ಪ್ರಾಮಾಣ್ಯಾತ್ ತದರ್ಥವಿಚಾರಾಕಾರಾ ಬ್ರಹ್ಮಮೀಮಾಂಸಾ ಆರಮ್ಭಣೀಯಾ- ಇತಿ ॥

(ಅರ್ಥ)

ಸಿದ್ಧಾಂತವಾದರೊ—ಹುಡುಗರಿಗೆ ತಾಯಿ, ತಂದೆ- ಮುಂತಾದವರು ತಾಯಿ, ತಂದೆ, ಸೋದರಮಾವ, ಮಗು, ಪಶು, ಪಕ್ಷಿ, ಮೃಗ- ಮುಂತಾದವುಗಳನ್ನು ಬೆರಳಿನಿಂದ ತೋರಿಸಿ ಅವದನ್ನು ಹೇಳುವ ಶಬ್ದಗಳನ್ನು ಪ್ರಯೋಗಿಸಲಾಗಿ, ಕ್ರಮಕ್ರಮವಾಗಿ ಬಹಳವಾಗಿ ಹೇಳಿಕೊಟ್ಟರೆ ಆಯಾ ಶಬ್ದವನ್ನು ಕೇಳಿದಕೂಡಲೆ ತಮಗೇ ಆಯಾ ವಿಷಯದ ಬುದ್ಧಿಯು ಉತ್ಪನ್ನವಾಗುವದು ಕಂಡುಬರುವದರಿಂದಲೂ ಶಬ್ದಾರ್ಥಗಳಿಗೆ ಮತ್ತೆಯಾವ ಬೇರೆಯ ಸಂಬಂಧವಿರುವದೂ ಕಂಡುಬಾರದೆ ಇರುವದರಿಂದಲೂ (ಇದು ಇದರ ಅರ್ಥವೆಂದು) ಸಂಕೇತವನ್ನು ಮಾಡಿರುವ ಪುರುಷನ ಜ್ಞಾನವು (ನಮ)ಗಿಲ್ಲವಾದ್ದರಿಂದಲೂ ಬೋಧ್ಯಬೋಧಕಭಾವವೇ ಶಬ್ದಾರ್ಥಗಳಿಗೆ (ಇರುವ) ಸಂಬಂಧವೆಂದು ನಿಶ್ಚಯಿಸಿಕೊಂಡವರಿಗೆ ಪರಿನಿಷ್ಪನ್ನವಾದ ವಿಷಯದಲ್ಲಿ ಶಬ್ದಕ್ಕೆ ಬೋಧಕತ್ವವಿದೆ ಎಂದು ನಿರ್ಧರಿಸುವದು ಸಂಭವಿಸುತ್ತದೆಯಾದ ಬ್ರಹ್ಮದಲ್ಲಿ ವೇದಾಂತವಾಕ್ಯಗಳಿಗೆ ಪ್ರಾಮಾಣ್ಯವಿರುವದರಿಂದ ಅದರ ಅರ್ಥವನ್ನು ವಿಚಾರಮಾಡುವ ರೂಪದ ಬ್ರಹ್ಮಮೀಮಾಂಸೆಯು ಆರಂಭಿಸತಕ್ಕದ್ದು.

## ಸೂತ್ರಾರ್ಥ

(ಮೂಲ)

೧೧. ಸೂತ್ರಾರ್ಥಸ್ತು - 'ಅಥ' ಇತ್ಯಾನನ್ತರ್ಯೇ। 'ಅತಃ' ಇತಿ ಚ ವೃತ್ತಸ್ಯ ಹೇತುಭಾವೇ। ಬ್ರಹ್ಮಣೋ ಜಿಜ್ಞಾಸಾ ಬ್ರಹ್ಮಜಿಜ್ಞಾಸಾ ; ಜ್ಞಾತುಮಿಚ್ಛಾ ಜಿಜ್ಞಾಸಾ। ಇಚ್ಛಾಯಾಃ ಇಷ್ಯಮಾಣಪ್ರಧಾನತ್ವಾತ್ ಇಷ್ಯಮಾಣಂ ಜ್ಞಾನಮ್ ಇಹ ಅಭಿಪ್ರೇತಮ್। ಪೂರ್ವವೃತ್ತಾತ್ ಅಲ್ಪಾಸ್ಥಿರಫಲಕೇವಲಕರ್ಮಾಧಿಗಮಾದನನ್ತರಂ ತತ ಏವ ಹೇತೋಃ ಅನನ್ತಸ್ಥಿರಫಲಬ್ರಹ್ಮಾಧಿಗಮಃ ಕರ್ತವ್ಯಃ ಇತಿ ॥

### ಇತಿ ವೇದಾನ್ತದೀಪೇ ಜಿಜ್ಞಾಸಾಧಿಕರಣಮ್

(ಅರ್ಥ)

ಸೂತ್ರಾರ್ಥವಾದರೊ (ಇದು) : 'ಅಥ' (ಇನ್ನು) ಎಂಬುದು ಅನಂತರವೆಂದರ್ಥದಲ್ಲಿ (ಪ್ರಯುಕ್ತವಾಗಿದೆ). 'ಅತಃ' (ಆದ್ದರಿಂದ) ಎಂಬುದು ಆಗಿಹೋಗಿರುವದು

(ಇದಕ್ಕೆ) ಹೇತುವೆಂಬರ್ಥದಲ್ಲಿ (ಪ್ರಯುಕ್ತವಾಗಿದೆ). ಬ್ರಹ್ಮಜಿಜ್ಞಾಸಾ ಎಂದರೆ ಬ್ರಹ್ಮದ ಜಿಜ್ಞಾಸೆ; ಜಿಜ್ಞಾಸೆ ಎಂದರೆ ಅರಿತುಕೊಳ್ಳಬೇಕೆಂಬ ಇಚ್ಛೆ. ಇಚ್ಛೆಗೆ ಇಷ್ಯಮಾಣವೇ ಮುಖ್ಯವಾಗಿರುವದರಿಂದ ಇಷ್ಯಮಾಣವಾದ (ಇಚ್ಛಿಸಲ್ಪಡುವ) ಜ್ಞಾನವೇ ಅಭಿಪ್ರೇತವಾಗಿರುತ್ತದೆ. ಮೊದಲು ಆಗಿಹೋಗಿರುವ ಅಲ್ಪವೂ ಅಸ್ಥಿರವೂ ಆಗಿರುವ ಫಲವುಳ್ಳ ಕೇವಲಕರ್ಮ(ದ ತತ್ತ್ವವನ್ನು) ಅರಿತುಕೊಂಡ ಬಳಿಕ, ಅದೇ ಕಾರಣದಿಂದಲೇ ಅನಂತವಾಗಿ ಸ್ಥಿರವಾಗಿರುವ ಫಲವುಳ್ಳ ಬ್ರಹ್ಮ ಜ್ಞಾನವನ್ನು ಮಾಡಬೇಕು ಎಂದು (ಅರ್ಥ).

ಇಂತು ಶ್ರೀವೇದಾಂತದೀಪದಲ್ಲಿ ಜಿಜ್ಞಾಸಾಧಿಕರಣವು

# ಶಬ್ದಾನುಕ್ರಮಣಿಕೆ

**ಸೂಚನೆ :-** ಇಲ್ಲಿರುವ ಸಂಖ್ಯೆಗಳು ಶ್ರೀಭಾಷ್ಯದ ಪುಟಗಳವು. ಅಡ್ಡಗೀಟಿನಿಂದ ಎರಡು ಅನುಕ್ರಮಸಂಖ್ಯೆಗಳನ್ನು ವಿಂಗಡಿಸಿದ್ದರೆ ಆ ಎರಡು ಪುಟಗಳಲ್ಲಿಯೂ ನೋಡಬೇಕೆಂದು ಅರ್ಥ; ವ್ಯವಧಾನವಿರುವ ಸಂಖ್ಯೆಗಳನ್ನು ಕೊಟ್ಟಿದ್ದರೆ ಅಲ್ಲಿಂದ ಅಲ್ಲಿಯವರೆಗೆ ಎಂದರ್ಥ; ೧೨-೧೯ ಎಂದರೆ ೧೨ನೆಯ ಪುಟದಿಂದ ೧೯ನೆಯ ಪುಟದವರೆಗೆ ಎಂದು ಭಾವ. ವಿವರಣದಲ್ಲಿ ಒಂದು ಶಬ್ದವು ಕಪ್ಪಕ್ಷರದಲ್ಲಿದ್ದರೆ ಆ ಶಬ್ದವನ್ನು ನೋಡಿ ಎಂದರ್ಥ.

**ಅಖಂಡೈಕರಸವಸ್ತು**–
೫೨–೫೩.

**ಅಜ್ಞಾನ**–
ಈ ಶಬ್ದಕ್ಕೆ ಮೂರರ್ಥ. ೧೨೫ ; ಅನಾದಿಕರ್ಮಪ್ರವಾಹ, ೨೮೪–೨೮೫
**ಅವಿದ್ಯಾ**ಶಬ್ದವನ್ನು ನೋಡಿ.

**ಅತಃಶಬ್ದಾರ್ಥ**–
೨.

**ಅಥಶಬ್ದಾರ್ಥ**–
೨.

**ಅದ್ವೈತಿಯ ಲಘುಪೂರ್ವಪಕ್ಷ**–
( ಅಥಶಬ್ದಾರ್ಥದ ವಿಷಯಕ್ಕೆ )
೧೨–೧೯.

**ಅದ್ವೈತಿಯ ಮಹಾಪೂರ್ವಪಕ್ಷ**–
(ಬ್ರಹ್ಮಜಿಜ್ಞಾಸಾರಂಭದ ವಿಷಯಕ್ಕೆ)
೩೬–೭೦.

**ಅನನ್ತಸ್ಥಿರಫಲ**–
(ಬ್ರಹ್ಮಜ್ಞಾನಕ್ಕೆ), ೨–೩, ೨೮೫, ೩೦೦–೩೦೧.

**ಅನವಧಿಕಾತಿಶಯಾಸಂಖ್ಯೇಯ ಕಲ್ಯಾಣಗುಣಗಣ**–
(ಬ್ರಹ್ಮಕ್ಕೆ), ೪, ೨೩೨.

**ಅನುಭೂತಿ**–
(ಅದ್ವೈತಿಯ ಮತದಂತೆ) :–ಸ್ವತಃ ಸಿದ್ಧವಾದ ಅನುಭೂತಿಯೇ ಸನ್ಮಾತ್ರ ; ಅನುಭೂತಿಯೂ ಸನ್ಮಾತ್ರವೂ ಒಂದೇ ೫೮–೬೧ ; ಇದು ತನ್ನ ತೋರಿಕೆಗೂ ಬೆಳಗುತ್ತಿದೆ ಎಂಬ ವ್ಯವಹಾರಕ್ಕೂ ಹೇತು ೬೨–೬೪ ; ನಿತ್ಯ ೬೪–೬೫ ; ನಾನಾತ್ವವಿಲ್ಲ ; ಇದೇ ಆತ್ಮನು ೬೫–೬೬ ; ಇದಕ್ಕೆ ಜ್ಞಾತೃತ್ವವು ಭ್ರಾಂತಿಸಿದ್ಧ ೬೭–೬೯.

**ಅನುಭೂತಿ**–
( ಸಿದ್ಧಾಂತದಂತೆ ) :– ಅನುಭೂತ ಸದ್ವಿಶೇಷಗಳಿಗೆ ವಿಷಯವಿಷಯಿಭಾವ ೮೪ ; ಪರರ ಅನುಭೂತಿಯು ಅನುಮೇಯ, ತನ್ನ ಅತೀತಾನುಭವವು ಪರಾಮರ್ಶಕ್ಕೆ ವಿಷಯ ೮೫; ಅದು ಅನುಭಾವ್ಯವಲ್ಲದಿದ್ದರೆ ಅನುಭೂತಿಯಾಗಲಾರದು ೮೫–೮೬; ಅದಕ್ಕೆ ಪ್ರಾಗಭಾವಾದಿಗಳೂ ಉಂಟು ೮೭–೮೯; ಅದು ನಿರ್ವಿಷಯವಲ್ಲ ೮೯, ೯೦ ; ನಿರ್ವಿಕಾರವಲ್ಲ ೯೩–೯೫ ; ನಿರ್ಧರ್ಮಕವಲ್ಲ ೯೫–೯೭ ; ಅದೇ ಆತ್ಮನಲ್ಲ ೯೬–೯೯ ; ಆದರಲ್ಲಿ ಜ್ಞಾತೃತ್ವವು ಕಲ್ಪಿತವಲ್ಲ ೧೦೭ ; ಅದಕ್ಕೆ ಅಹಂಕಾರವು ಅಭಿವ್ಯಂಜಕವಲ್ಲ ೧೧೨–೧೧೮.

**ಅಮೃತತ್ವ**–
೪–೫.

**ಅನಾದಿನಿಧನಾವಿಚ್ಛಿನ್ನಸಂಪ್ರದಾಯಾಸಂಭಾವ್ಯಮಾನದೋಷ**–
ಶಾಸ್ತ್ರವು ನಿರ್ದೋಷವೆಂಬುದಕ್ಕೆ ಸಂಪ್ರ

ದಾಯವು ಕಾರಣವೆಂಬ ಅದ್ವೈತಿಯ ಮತ ೪೭.

**ಅಸಾಧ್ಯವಿದ್ಯಾ–**
(ಅದ್ವೈತಿಯ ಮತದಲ್ಲಿ) ಭೇದವಾಸನೆ ೪೭ ; ಸತ್ತೆಂದಾಗಲಿ ಅಸತ್ತೆಂದಾಗಲಿ ಗೊತ್ತುಪಡಿಸುವದಕ್ಕಾಗದ ಅಜ್ಞಾನ ೧೯೧ ; (ಸಿದ್ಧಾಂತದಲ್ಲಿ) ಅನಾದಿಯಾದ ಕರ್ಮ(ಪ್ರವಾಹ) ೧೮೭,೧೮೮ ; ೨೮೪–೨೮೫ ; ಅವಿದ್ಯಾಶಬ್ದವನ್ನು ನೋಡಿರಿ.

**ಅನಿರ್ವಚನೀಯ, ಅನಿರ್ವಾಚ್ಯ–**
(ಅದ್ವೈತಿಮತರೀತಿಯಿಂದ) :– ಸತ್ತೆಂದಾಗಲಿ ಅಸತ್ತೆಂದಾಗಲಿ ಹೇಳಲಾಗದ ಸದಸದ್ವಿಲಕ್ಷಣವಾದ ಅಜ್ಞಾನ ಮತ್ತು ಅದರಿಂದ ತೋರುವ ಹುಸಿಬೆಳ್ಳಿಯೇ ಮುಂತಾದದ್ದು, ೪೧,೧೯೧–೧೯೨, ೧೯೯; ಇದಕ್ಕೆ ಪ್ರಮಾಣ ೨೦೧, ೨೦೩–೨೦೪ ; ಈ ವಾದದ ಖಂಡನೆ ೧೯೧–೨೧೦ ; ಅನಿರ್ವಚನೀಯಾನುಪಪತ್ತಿಯ ಖಂಡನೆ ೨೧೯–೨೨೩.

**ಅನ್ಯಥಾಖ್ಯಾತಿ–**
ಒಂದು ಮತ್ತೊಂದರಂತೆ ಭ್ರಾಂತಿಯಿಂದ ತೋರುವದೆಂಬ ವಾದ,ಅನಿರ್ವಚನೀಯಖ್ಯಾತಿಯನ್ನು ಒಪ್ಪಿದರೂ ಇದನ್ನು ಒಪ್ಪಬೇಕು ೨೧೯–೨೨೧.

**ಅಪಚ್ಛೇದನ್ಯಾಯ–**
(ಅದ್ವೈತಿಯ ಮತದಂತೆ):– ಪೂರ್ವೋತ್ತರಶಾಸ್ತ್ರಗಳ ಬಲಾಬಲವನ್ನು ನಿರ್ಣಯಿಸುವದಕ್ಕೆ ಈ ನ್ಯಾಯ ೪೭–೪೮; ಇದರ ವಿಷಯಕ್ಕೆ ಪರಿಶಿಷ್ಟವನ್ನು (ಪು. ೩೦೩–೩೦೪) ನೋಡಿ.

**ಅಮೃತತ್ವ–**
ಮೋಕ್ಷ ೪, ೯–೧೧.

**ಅವಿದ್ಯಾ–**
(ಅದ್ವೈತಿಯ ಮತ): – ವಾಕ್ಯಜನ್ಯಜ್ಞಾನದಿಂದ ಅವಿದ್ಯಾನಿವೃತ್ತಿ ; (ಸಿದ್ಧಾಂತ) :– ವಾಕ್ಯಜ್ಞಾನಮಾತ್ರದಿಂದ ಅವಿದ್ಯೆ ತೊಲಗದು, ೧೯–೨೦ ; (ಅದ್ವೈತಿ):– ಪ್ರತ್ಯಕ್ಷಪ್ರಮಾಣದಲ್ಲಿ ಅನಾದಿಭೇದವಾಸನೆ ಎಂಬ ದೋಷ ೪೭ ; (ಸಿದ್ಧಾಂತ):– ಶಾಸ್ತ್ರಕ್ಕೂ ಈ ದೋಷವಿದೆಯೆನ್ನಬೇಕಾಗುವದು ; ೧೨೯–೧೩೪. ಅದ್ವೈತಿಗಳು ಒಪ್ಪಿರುವ ಅನಿರ್ವಚನೀಯಾವಿದ್ಯೆಯ ವಿಷಯದಲ್ಲಿ ಏಳು ಅನುಪಪತ್ತಿಗಳು, ೧೯೧–೨೮೪.

**ಅಸ್ಮತ್ಪ್ರತ್ಯಯ (ಅಹಂಪ್ರತ್ಯಯ)–**
(ಪಂಚಪಾದಿಕಾಕಾರರ ಮತದಂತೆ), ಇದರಲ್ಲಿ ಯುಷ್ಮತ್ಪ್ರತ್ಯಯಗೋಚರವಾದ ಅನಾತ್ಮವೂ ತೋರುತ್ತದೆ ೯೯–೧೦೦ ; ಇದರ ಖಂಡನೆ ೧೦೧–೧೦೩; ಅಹಂಪ್ರತ್ಯಯವು ಅಜ್ಞತ್ವಸಂಸಾರಿತ್ವಗಳಿಗೆ ವಿರೋಧಿ ೧೨೫–೧೨೬.

**ಅಹಂಕಾರ–**
(1) ಇದು ಜ್ಞಾತೃವಲ್ಲ, ೧೦೯ ; ಜಡಸ್ವರೂಪವಾದ ಇದಕ್ಕೆ ಚಿಚ್ಛಾಯಾಪತ್ತಿಯಿಂದ ಜ್ಞಾನಕರ್ತೃತ್ವವೆನ್ನುವದು ಸರಿಯಲ್ಲ, ೧೧೧–೧೧೨ ; ಇದು ಅನುಭೂತಿಗೆ ಅಭಿವ್ಯಂಜಕವೆಂಬುದು ಸರಿಯಲ್ಲ,೧೧೨–೧೧೪;ಅವ್ಯಕ್ತಪರಿಣಾಮವಾದ ಅಹಂಕಾರವನ್ನು ಭಗವಂತನು ಕ್ಷೇತ್ರದಲ್ಲಿ ಅಡಕಮಾಡಿರುತ್ತಾನೆ, ೧೨೭–೧೨೯ ; ಕ್ಷೇತ್ರಾಂತರ್ಗತವಾದ ಅಹಂಕಾರಕ್ಕೆ ಗರ್ವವೆಂದೂ ಹೆಸರು, ೧೨೭–೧೨೮ ; ಆತ್ಮನಲ್ಲಿ ಉಂಟಾಗುವ ನಾನು ಎಂಬ ಬುದ್ಧಿಯು ಅಬಾಧಿತ, ಶರೀರದಲ್ಲಿರುವ ಅಹಂಬುದ್ಧಿಯು ಅವಿದ್ಯೆಯೇ, ೧೨೫–೧೨೯.

**ಅಹಂಭಾವ–**
ಸುಷುಪ್ತಿಯಲ್ಲಿಯೂ ಅಹಂಭಾವವಿದೆ, ೯೧, ೧೧೯–೧೨೦ ; 'ಸುಷುಪ್ತಿಯಲ್ಲಿ ನಾನು ನನ್ನನ್ನು ಅರಿಯಲಿಲ್ಲ' ಎಂಬ ಪರಾಮರ್ಶದ ಅಭಿಪ್ರಾಯ ೧೨೧–೧೨೩.

**ಅಹಮರ್ಥ–**
(ನಾನು ಎಂಬ ಪದಾರ್ಥ), ಇದು ಆತ್ಮನೇ ಎಂಬ ವಿಷಯಕ್ಕೆ ರಾಮಾನುಜರ

ಶ್ಲೋಕಗಳು, ೯೯–೧೦೦ ; ಆತ್ಮನು ಚಿದ್ರೂಪನೂ ಆಗಿದ್ದು ಚಿದ್ಗುಣಕನೂ ಆಗಿರುತ್ತಾನೆ, ೧೦೪–೧೦೫ ; ಮೋಕ್ಷಾವಸ್ಥೆಯಲ್ಲಿಯೂ ಅಹಮರ್ಥವಿದೆ, ೧೨೩–೧೨೪; ಮುಕ್ತರೂ 'ನಾನು' ಎಂದೇ ವ್ಯವಹರಿಸುತ್ತಾರೆ. ಬ್ರಹ್ಮದ ವಿಷಯಕ್ಕೂ ನಾನು ಎಂಬ ವ್ಯವಹಾರವಿದೆ, ೧೨೫–೧೨೭.

**ಆತ್ಮ–**

(ಅದ್ವೈತಿಯ ಮತದಲ್ಲಿ) :– ಸನ್ಮಾತ್ರನಾದ ಅನುಭೂತಿಯೇ ಆತ್ಮ, ೬೫–೬೬; ಆತ್ಮನಿಗೆ ಜ್ಞಾತೃತ್ವವಿಲ್ಲ, ೬೬–೬೮ ; (ಸಿದ್ಧಾಂತ) :– ಅನುಭೂತಿಯು ಆತ್ಮನಲ್ಲ, ೯೬–೯೯ ; ಆತ್ಮನು ಅಹಮರ್ಥವೆಂಬುದಕ್ಕೆ ಶ್ಲೋಕಗಳು, ೯೯–೧೦೦ ; ಸ್ವಯಂಪ್ರಕಾಶನಾದಆತ್ಮನು ಜ್ಞಾತೃವೇ, ಜ್ಞಾನಮಾತ್ರನಲ್ಲ, ೧೦೪–೧೦೬; ಬರಿಯ ಜ್ಞಾನವು ಆತ್ಮವಲ್ಲ ೧೦೬–೧೦೭; ಆತ್ಮನ ಜ್ಞಾತೃತ್ವದ ಸ್ವರೂಪ, ೧೧೧–೧೧೨ ; ರತ್ನಾದಿಗಳು ಪ್ರಕಾಶಾಶ್ರಯವಾಗಿರುವಂತೆ ಆತ್ಮನು ಜ್ಞಾನಾಶ್ರಯನು, ಆ ಜ್ಞಾನಕ್ಕೆ ಸಂಕೋಚವಿಕಾಸಗಳುಂಟು ೧೧೦–೧೧೧; ಆತ್ಮನಿಗೆ ಕರ್ಮಕೃತವಾಗಿ ಜ್ಞಾನಪ್ರಸರದಲ್ಲಿ ಕರ್ತೃತ್ವವುಂಟು, ಆದ್ದರಿಂದ ಆತ್ಮನು ಅವಿಕ್ರಿಯನೇ, ೧೧೧.

**ಈಶ್ವರ–**

ಚಿದಚಿದೀಶ್ವರರು, ಜಗತ್ತು– ಎಂಬೀ ಶಬ್ದಗಳ ವಿವರಣೆಯನ್ನು ನೋಡಿ.

**ಉಪಾದಾನ–**

ಕಾರಣವೂ ಕಾರ್ಯವೂ ಆಗಿರುವ ಬ್ರಹ್ಮವು ಜಗತ್ತಿಗೆ ಉಪಾದಾನ, ಚಿದಚಿದೀಶ್ವರರೂಪಸಂಘಾತವೇ ಉಪಾದಾನವಾಗಿರುವದರಿಂದ ಚಿದಚಿತ್ತುಗಳಿಗೂ ಬ್ರಹ್ಮಕ್ಕೂ ಸ್ವಭಾವದಲ್ಲಿ ಸಂಕರವಾಗುವದಿಲ್ಲ ೨೭೩–೨೭೪.

**ಐಕ್ಯಶಾಸ್ತ್ರ–**

ಕರ್ಮಬ್ರಹ್ಮಮೀಮಾಂಸಗಳೆರಡೂ ಸೇರಿ ಒಂದೇ ಶಾಸ್ತ್ರ, ೫.

**ಕರ್ಮ–**

ಕೇವಲ ಕರ್ಮಕ್ಕೆ ಅಲ್ಪಾಸ್ಥಿರಫಲ ೨, ೫, ೩೪, ೩೫, ೩೦೦ ; ಕರ್ಮಜ್ಞಾನವಾದಮೇಲೆ ಬ್ರಹ್ಮಜಿಜ್ಞಾಸೆ, ೨, ೩, ೫, ೩೦೦.

**ಕರ್ಮಣಿಷಷ್ಠೀ–**

'ಬ್ರಹ್ಮಜಿಜ್ಞಾಸಾ' ಎಂಬ (ಸೂತ್ರ) ಪದದಲ್ಲಿ ಬ್ರಹ್ಮದ ಎಂಬುದು ಕರ್ಮಣಿಷಷ್ಠಿ, ೩.

**ಕಾರ್ಯಕಾರಣ–**

ಚಿದಚಿತ್ತ್ವಕಾರಕನಾದ ಪರಮಪುರುಷನೇ ಕಾರ್ಯಾವಸ್ಥೆ ಮತ್ತು ಕಾರಣಾವಸ್ಥೆಗಳಲ್ಲಿರುವ ಜಗತ್ತಿನ ರೂಪದಿಂದ ಇರುತ್ತಾನೆ; ಆದ್ದರಿಂದ ಕಾರ್ಯಕಾರಣಗಳೆರಡೂ ಅಭಿನ್ನ, ೨೭೩–೨೭೫.

**ಕಾರ್ಯಾರ್ಥ–**

ಶಾಸ್ತ್ರಕ್ಕೆ ಕಾರ್ಯದಲ್ಲಿಯೇ ಪ್ರಾಮಾಣ್ಯವೆಂಬ ನಿಯೋಗವಾದ, ೨೮೫–೨೮೯ ; ಇದರ ಖಂಡನೆ, ೨೮೯–೨೯೯.

**ಚಿದಚಿದೀಶ್ವರರು–**

ವ್ಯಷ್ಟಿಯಾಗಿರುವ ಚಿದಚಿತ್ತುಗಳು ಪ್ರಲಯದಲ್ಲಿ ಅಚಿತ್ಸಮಷ್ಟಿಯಾದ ತಮಸ್ಸಿನಲ್ಲಿ ಲಯವಾಗುವವು ೨೩೬ ; ಒಂದೊಂದು ಕ್ಷಣದಲ್ಲಿಯೂ ಬೇರೆಬೇರೆಯಾಗುತ್ತಿರುವದರಿಂದ ಅಚಿದ್ವಸ್ತುವನ್ನು 'ನಾಸ್ತಿ' (ಇಲ್ಲ ಎಂಬ ಶಬ್ದದಿಂದ ಶಾಸ್ತ್ರದಲ್ಲಿ ಹೇಳಿದೆ, ೨೪೩–೨೪೪ ; ಅಚಿದ್ವಸ್ತು ಭೋಗ್ಯ, ಚಿದ್ವಸ್ತು ಭೋಕ್ತೃ, ಬ್ರಹ್ಮವು ಇವೆರಡಕ್ಕೂ ಈಶ್ವರ ಎಂದು ಕೆಲವು ಶ್ರುತಿಗಳು ಹೇಳುತ್ತವೆ ೨೬೬–೨೬೭; (೨) ಭೋಕ್ತೃಭೋಗ್ಯಗಳಾದ ಚಿದಚಿತ್ತುಗಳು ಪರಮಪುರುಷನ ಶರೀರವೆಂದೂ (ನಿಯಾಮ್ಯ) ಪರಮಪುರುಷನು ಆತ್ಮನೆಂದೂ ಕೆಲವು ಶ್ರುತಿಗಳು ಹೇಳುತ್ತವೆ ೨೬೯–೨೭೦; (೩) ಚಿದಚಿದ್ವಸ್ತುಶರೀರಕನಾಗಿ ತತ್ತ್ವಕಾರಕನಾಗಿರುವ ಪರಮಪುರುಷನು ಕಾರ್ಯಾ

ವಸ್ಥೆ, ಕಾರಣಾವಸ್ಥೆ– ಹೀಗೆ ಎರಡು ಅವಸ್ಥೆಗಳಲ್ಲಿರುವನೆಂದೂ ಜಗತ್ತು ಆತನೇ ಎಂದೂ ಕೆಲವು ಶ್ರುತಿಗಳು, ೨೭೧–೨೭೬; ಇವು ಮೂರರ ಸಂಘಾತವೇ ಉಪಾದಾನ ವಾಗಿರುವದರಿಂದ ಚಿದಚಿದ್ಬ್ರಹ್ಮಗಳ ಸ್ವಭಾವವು ಕಲೆಬೆರಕೆಯಾಗದೆ ಇರುತ್ತದೆ. ಹೀಗೆ ಚಿದಚಿದೀಶ್ವರರುಗಳಿಗೆ ಸ್ವಭಾವ ಭೇದಸ್ವರೂಪಭೇದಗಳನ್ನೂ ಕಾರ್ಯ ಕಾರಣಭಾವವನ್ನೂ ಕಾರ್ಯಕಾರಣಾ ನನ್ಯತ್ವವನ್ನೂ ಹೇಳುವ ಶ್ರುತಿಗಳಿಗೆ ವಿರೋಧವಿಲ್ಲ, ೨೭೮–೨೭೯.

ಚಿನ್ಮಾತ್ರ–

ನಿರ್ವಿಶೇಷಚಿನ್ಮಾತ್ರವೊಂದೇ ಪರ ಮಾರ್ಥವಾದ ಬ್ರಹ್ಮ, ಆದರಲ್ಲಿ ಮಿಕ್ಕ ದ್ದೆಲ್ಲ ಕಲ್ಪಿತವೆಂಬ ಮಹಾಪೂರ್ವಪಕ್ಷ, ೪೭–೭೦ ; ಇದರ ಖಂಡನೆ, ೭೧–೨೮೫.

ಜಗತ್ತು–

ಇದು ಪರಮಾರ್ಥವೇ. ಬ್ರಹ್ಮವು ಜಗ ತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣ, ನಿರ್ದೋಷ, ಸಮಸ್ತಕಲ್ಯಾಣಗುಣಗಳು ಳ್ಳದ್ದು ಅದು ಜಗತ್ತಿನಲ್ಲಿ ಪ್ರವೇಶಮಾಡಿ ಜಗತ್ತಿನ ನಿಯಾಮಕವಾಗಿದೆ ; ಚಿದ ಚಿದ್ವಸ್ತುವು ಪರಬ್ರಹ್ಮದ ಶರೀರ, ರೂಪ, ತನು, ಅಂಶ, ಶಕ್ತಿ, ವಿಭೂತಿ; ಚಿದ್ವಸ್ತುವು ಸ್ವರೂಪದಿಂದಲೇ ಇದ್ದು ಅಚಿನ್ಮಿಶ್ರವಾಗಿ ರುವದರಿಂದ ಕ್ಷೇತ್ರಜ್ಞರೂಪ; ಕ್ಷೇತ್ರಜ್ಞ ನಿಗೆ ಜ್ಞಾನಸ್ವರೂಪದ ಅರಿವಿಲ್ಲದ್ದೂ ಅಚಿದ್ರೂಪಾಕಾರನೆಂದೇ ತನ್ನನ್ನು ಭಾವಿಸಿ ಕೊಂಡಿರುವದೂ ಕರ್ಮರೂಪಾವಿದ್ಯೆ ಯಿಂದ, ೧೬೩–೧೬೪.

ಜ್ಞಾನ–

ವಾಕ್ಯಜನ್ಯಜ್ಞಾನಮಾತ್ರದಿಂದ ಅವಿದ್ಯಾ ನಿವೃತ್ತಿ ಎಂಬ ಅದ್ವೈತಮತವೂ ಅದರ ಖಂಡನೆಯೂ, ೧೮–೧೯, ಧ್ಯಾನಶಬ್ದ ವಾಚ್ಯವಾದ ಜ್ಞಾನವೇ ವೇದಾಂತವಿಹಿತ ೨೨–೨೪, ಈ ಸಿದ್ಧಾಂತಕ್ಕೆ ವಾಕ್ಯಕಾರನ ಸಮ್ಮತಿ. ೨೬–೨೭, ಬ್ರಹ್ಮಾತ್ಮೈಕತ್ವ ಜ್ಞಾನದಿಂದ ಅವಿದ್ಯಾನಿವೃತ್ತಿ ಎಂಬ ಅದ್ವೈತಿಯ ಮತ ೪೩, ಇದರ ಖಂಡನೆ, ೭೯–೮೦, ಬ್ರಹ್ಮವು ಜ್ಞಾನ ಎಂದರೆ ಅನ್ಯಾ ಧೀನವಾಗಿ ಬೆಳಗುವದಲ್ಲ ಎಂದರ್ಥ (ಅದ್ವೈತಿಮತ) ೫೦ ; ಬ್ರಹ್ಮವು ಜ್ಞಾನ ಸ್ವರೂಪ ಎಂದರೆ ಹೇಯಗುಣಗಳಿಗೆಲ್ಲ ವಿರುದ್ಧವಾದ ಕಲ್ಯಾಣಗುಣಾಕರವಾದ ಜ್ಞಾನೈಕನಿರೂಪ್ಯವೆಂದೂ ಸ್ವಯಂಪ್ರಕಾಶ ವಾಗಿರುವದರಿಂದ ಜ್ಞಾನಸ್ವರೂಪವೂ ಆಗಿದೆ– ಎಂದೂ ಅರ್ಥ, ೨೭೫–೨೭೬ ; (ಸಿದ್ಧಾಂತ) ಆತ್ಮನು ಜ್ಞಾನಮಾತ್ರವಲ್ಲ, ಜ್ಞಾತೃವೂ ಆಗಿರುತ್ತಾನೆ, ೧೦೪–೧೦೫, ಜ್ಞಾನಾಕಾರನಾಗಿರುವ ಪರಮಾತ್ಮನೇ ಆತ್ಮನಾಗುಳ್ಳ ಜಗತ್ತನ್ನು ಕೇವಲ ದೇವ ಮನುಷ್ಯಾದಿರೂಪವೆಂದು ತಿಳಿಯುವದೂ, ಜ್ಞಾನಾಕಾರರಾಗಿರುವ ಆತ್ಮರುಗಳನ್ನು ದೇವಮನುಷ್ಯಾದ್ಯರ್ಥಾಕಾರವೆಂದು ತಿಳಿ ಯುವದೂ ಭ್ರಮೆ ೧೭೪.

ತತ್ತ್ವಮಸಿ–

ಇದರಲ್ಲಿ ನಿರ್ವಿಶೇಷವಸ್ತ್ವೈಕ್ಯವನ್ನು ಹೇಳಿಲ್ಲ ; ಇಲ್ಲಿರುವ ತತ್ಪದಕ್ಕೆ ಸರ್ವಜ್ಞ, ಸತ್ಯಸಂಕಲ್ಪ, ಜಗತ್ಕಾರಣಬ್ರಹ್ಮವು ಅರ್ಥ, ತ್ವಂಪದಕ್ಕೆ ಅಚಿದ್ವಿಶಿಷ್ಟಜೀವ ಶರೀರಕಬ್ರಹ್ಮವೇ ಅರ್ಥ, ೨೫೧–೨೫೭ ; ಇವೆರಡು ಪದಗಳಿಗೂ ಸಾಮಾನಾಧಿ ಕರಣ್ಯವು ಪ್ರಕಾರದ್ವಯದಿಂದ ಕೂಡಿ ರುವ ಒಂದೇ ವಸ್ತುವನ್ನು ಹೇಳುವದರಲ್ಲಿ ತಾತ್ಪರ್ಯವುಳ್ಳದ್ದು ; ಈ ವಾಕ್ಯದಲ್ಲಿ ಪದಗಳಿಗೆ ಬಾಧಸಾಮಾನಾಧಿಕರಣ್ಯ ವನ್ನೊಪ್ಪಿದರೆ ಲಕ್ಷಣೆಯನ್ನಂಗೀಕರಿಸ ಬೇಕಾಗುವದು ೨೫೧–೨೫೩ ; ಈ ವಾಕ್ಯವು ಜೀವಶರೀರಕಜಗತ್ಕಾರಣಬ್ರಹ್ಮ ಪರವೆಂಬ ಪಕ್ಷದಲ್ಲಿ ಪದಗಳಿಗೆ ಲಕ್ಷಣೆ ಯಿಲ್ಲ, ಮುಖ್ಯವೃತ್ತಿ ; ಪ್ರಕಾರದ್ವಯ ವಿಶಿಷ್ಟವಾದ ಒಂದೇ ವಸ್ತುವನ್ನು ಹೇಳುವ ಸಾಮಾನಾಧಿಕರಣ್ಯದ ಸಿದ್ಧಿ, ಬ್ರಹ್ಮವು ನಿರ್ದೋಷ– ಸಮಸ್ತಕಲ್ಯಾಣಗುಣಾತ್ಮಕ

ವಾದ ಬ್ರಹ್ಮಕ್ಕೆ ಜೀವಾಂತರ್ಯಾಮಿತ್ವ ಸಿದ್ಧಿ, ಒಂದನ್ನರಿತರೆ ಎಲ್ಲವನ್ನೂ ಅರಿತಂತೆ ಆಯಿತೆಂಬ ಪ್ರತಿಜ್ಞೆಗೆ ಉಪಪತ್ತಿ, ಸೂಕ್ಷ್ಮಚಿದಚಿದ್ವಿಶಿಷ್ಟಬ್ರಹ್ಮವೇ ಸ್ಥೂಲಚಿದಚಿದ್ವಿಶಿಷ್ಟಬ್ರಹ್ಮವೆಂದು ಹೇಳುವ ಶ್ರುತ್ಯಂತರಕ್ಕೆ ಅವಿರೋಧ- ಇಷ್ಟೂ ಸಿದ್ಧವಾಗುತ್ತದೆ, ೨೫೫–೨೫೬.

**ನಿದಿಧ್ಯಾಸನ**–
ಆತ್ಮೈಕತ್ವವಾಕ್ಯಗಳ ಅರ್ಥವನ್ನು ಶ್ರವಣಮನನಗಳಿಂದ ನಿಶ್ಚಯಿಸಿದಮೇಲೆ ಭಾವನೆಮಾಡುವದು (ಅದ್ವೈತಿಯ ಮತ) ೧೬–೧೭; ವಾಕ್ಯಾರ್ಥಜ್ಞಾನಕ್ಕಿಂತ ಬೇರೆಯಾದ ಧ್ಯಾನಾದಿಶಬ್ದವಾಚ್ಯವಾದ ವೇದನವೇ ನಿದಿಧ್ಯಾಸನ ೨೩; ಇದು ಧ್ರುವಾನುಸ್ಮೃತಿಯ ರೂಪದಲ್ಲಿ ಮೋಕ್ಷಕ್ಕೆ ಕಾರಣ ೨೫; ದರ್ಶನವೆಂದರೆ ಇದು ಪ್ರತ್ಯಕ್ಷರೂಪವನ್ನು ತಾಳುವದು ೨೭; ಧ್ರುವಾನುಸ್ಮೃತಿಯೇ ಭಕ್ತಿ, ೨೯; ಧ್ರುವಾನುಸ್ಮೃತಿಗೆ ಸಾಧನಗಳು, ೩೦–೩೧.

**ನಿಯೋಗವಾದ**-
ವ್ಯವಹಾರವು ಕಾರ್ಯಬುದ್ಧಿಪರವಾಗಿರುವದರಿಂದ ಕಾರ್ಯಾರ್ಥದಲ್ಲಿಯೇ ಶಬ್ದವು ಪ್ರಮಾಣವೆಂಬ ವಾದ ೨೮೫–೨೮೯; ಇದರ ಖಂಡನೆ ಮತ್ತು ಪರಿನಿಷ್ಪನ್ನವಾದ ಬ್ರಹ್ಮವನ್ನು ಪ್ರತಿಪಾದಿಸಿ ಅದರ ಉಪಾಸನೆಯನ್ನೇ ವೇದಾಂತಿಗಳು ವಿಧಿಸುತ್ತಾರೆ ಎಂಬ ಸಿದ್ಧಾಂತ ೨೮೯–೩೦೧.

**ನಿರ್ಗುಣ, ನಿರ್ಧರ್ಮಕ**-
ನಿರ್ಗುಣವಾಕ್ಯಗಳು ಬ್ರಹ್ಮಕ್ಕೆ ಹೇಯಗುಣಸಂಬಂಧವಿಲ್ಲವೆಂದು ಮಾತ್ರ ಹೇಳುತ್ತವೆ ೨೭೫.

**ನಿರ್ವಿಕಲ್ಪ**–
ನಿರ್ವಿಕಲ್ಪಕಪ್ರತ್ಯಕ್ಷವೆಂಬುದರ ಅರ್ಥ; ನಿರ್ವಿಕಲ್ಪಕವೂ ನಿರ್ವಿಶೇಷವಸ್ತುವಿಗೆ ಪ್ರಮಾಣವಲ್ಲ, ೭೩–೭೪.

**ನಿರ್ವಿಶೇಷ**-
ನಿರ್ವಿಶೇಷವಸ್ತು ಸ್ವತಃಸಿದ್ಧವಲ್ಲ, ಅದಕ್ಕೆ ಯಾವ ಪ್ರಮಾಣವೂ ಇಲ್ಲ, ೭೧–೭೭; ಯಾವ ವೇದಾಂತವಾಕ್ಯಗಳೂ ನಿರ್ವಿಶೇಷಪರವಲ್ಲ, ೧೩೯–೧೫೫; ಸ್ಮೃತಿಪುರಾಣಗಳಲ್ಲಿಯೂ ನಿರ್ವಿಶೇಷವಾದವಿಲ್ಲ ೧೫೫–೧೬೨; ಪುರಾಣಶ್ಲೋಕಗಳಿಗೆ ಸರಿಯಾದ ಅರ್ಥವನ್ನು ನಿರ್ಧರಿಸಿದರೂ ಇದು ಸ್ಪಷ್ಟವಾಗುತ್ತದೆ, ೧೬೩–೧೯೦.

**ಪರಮಾರ್ಥ**–
ಭೇದವಾಸನೆಯು ಪರಮಾರ್ಥವಲ್ಲವೆಂಬ ಪೂರ್ವಪಕ್ಷ, ೧೮–೧೯; ಪರಮಾರ್ಥವಾದ ತಿಮಿರಾದಿದೋಷವೇ ದ್ವಿಚಂದ್ರಾದಿಜ್ಞಾನಕ್ಕೆ ಕಾರಣ ೧೩೨; (ಪೂರ್ವಪಕ್ಷ) ಅಸತ್ಯವಾದದ್ದು ಪರಮಾರ್ಥವಾದ ಜ್ಞಾನಕ್ಕೆ ಕಾರಣವಾಗಬಹುದೆಂಬುದಕ್ಕೆ ಸ್ವಪ್ನದೃಷ್ಟಾಂತ ೧೩೪; ಇದರ ಖಂಡನೆ, ೧೩೪–೧೩೭; ಜಗತ್ತು ಪರಮಾರ್ಥವೆಂದೇ ಸ್ಮೃತಿಪುರಾಣಗಳು ೧೬೨; ಸ್ವಪ್ನದಲ್ಲಿಯೂ ಪರಮಾರ್ಥವಸ್ತುಗಳೇ ಸೃಷ್ಟವಾಗಿರುತ್ತವೆ, ೨೨೬–೨೨೭.

**ಪಾಪ**–
ಜ್ಞಾನವು ಹುಟ್ಟುವದಕ್ಕೆ ಪಾಪಕರ್ಮವನ್ನು ಕಳೆದುಕೊಳ್ಳಬೇಕು ೩೩; ಪುಣ್ಯಪಾಪಗಳೆರಡೂ ಪಾಪಶಬ್ದವಾಚ್ಯವೇ, ೩೩.

**ಪುರಾಣಗಳು**–
ಚಿನ್ಮಾತ್ರವಾದಕ್ಕೆ ಪ್ರಮಾಣವೆಂದು ಪೂರ್ವಪಕ್ಷಿಯು ಉದಾಹರಿಸಿರುವ ಪುರಾಣಗಳು, ೩೯, ೪೨–೪೩; ಸ್ಮೃತಿಪುರಾಣಗಳಲ್ಲಿಯೂ ನಿರ್ವಿಶೇಷವಸ್ತುವನ್ನು ಹೇಳಿಲ್ಲ, ೧೫೫–೧೬೩; ಸ್ಮೃತಿಪುರಾಣಗಳಿಂದ ಸಿದ್ಧವಾಗಿರುವ ಅರ್ಥ, ೧೬೨; ಪುರಾಣಶ್ಲೋಕಗಳಿಗೆ ಸರಿಯಾದ ಅರ್ಥ, ೧೬೩–೧೮೧, ೧೮೬–೧೮೮; ಇತಿಹಾಸಪುರಾಣಗಳಿಂದ ವೇದಾರ್ಥದ ಉಪಬೃಂಹಣ, ೧೬೮–೧೬೯.

**ಪ್ರತ್ಯಕ್ಷ**–
ಪ್ರತ್ಯಕ್ಷದಲ್ಲಿ ಭೇದವಾಸನೆ ಎಂಬ ಅವಿದ್ಯೆಯು ದೋಷವಾಗಿರುತ್ತದೆ ಎಂಬ ಪೂರ್ವಪಕ್ಷ ೪೭; ಇದರ ಖಂಡನೆ, ೧೨೯–೧೩೦; ಪ್ರತ್ಯಕ್ಷವು ಸನ್ಮಾತ್ರವನ್ನು ಗ್ರಹಿಸುತ್ತದೆ

ಎಂಬ ಮತ, ೫೭–೫೮; ಇದರ ಖಂಡನೆ, ೭೮–೭೯ ; ಪ್ರತ್ಯಕ್ಷಕ್ಕೆ ಜಾತ್ಯಾದಿವಿಶಿಷ್ಟ ವಸ್ತುವೇ ವಿಷಯ, ೮೦–೮೧ ; ಅವಿದ್ಯೆಗೆ ಪ್ರತ್ಯಕ್ಷವು ಪ್ರಮಾಣವಲ್ಲ, ೨೦೫.

**ಪ್ರತ್ಯಕ್ತ್ವ–**
ಆತ್ಮನು ಅಹಮರ್ಥವಲ್ಲದಿದ್ದರೆ ಅವನಿಗೆ ಪ್ರತ್ಯಕ್ತ್ವವೇ ಇಲ್ಲವಾದೀತು, ೯೯–೧೦೦; ಅಹಮರ್ಥವೇ ಪ್ರತ್ಯಗಾತ್ಮನು ೧೧೮ ; ಮೋಕ್ಷದಲ್ಲಿಯೂ ನಾನು ಎಂದೇ ಆತ್ಮನು ತೋರಿಕೊಳ್ಳುವದರಿಂದ ಅವನೇ ಪ್ರತ್ಯಗಾತ್ಮನು, ೧೩೪.

**ಪ್ರಭೆ–**
ಅಹಂಕಾರವು ಸ್ವಪ್ರಕಾಶವೆಂಬುದಕ್ಕೆ ದೀಪದ ಪ್ರಭೆಯ ದೃಷ್ಟಾಂತ,೧೦೨–೧೦೩.

**ಪ್ರಮಾಣ–**
ಸಿದ್ಧಾಂತದಲ್ಲಿ ಪ್ರತ್ಯಕ್ಷಾನುಮಾನಾಗಮಗಳೆಂಬ ಮೂರು ಪ್ರಮಾಣಗಳನ್ನು ಒಪ್ಪಿದೆ ೨೩೨; ಸಗುಣಬ್ರಹ್ಮಕ್ಕೆ ಆಗಮಪ್ರಮಾಣ ೨೩೨–೨೩೩ ; ಅನಿರ್ವಚನೀಯಾವಿದ್ಯೆಗೆ ಪ್ರತ್ಯಕ್ಷಾನುಮಾನಗಳು ಪ್ರಮಾಣವಲ್ಲ, ೨೦೫–೨೧೩; ಅನಿರ್ವಚನೀಯಾಜ್ಞಾನವು ಶ್ರುತಿಸಿದ್ಧವಲ್ಲ, ೨೩೪.

**ಭಕ್ತಿ–**
ಧ್ರುವಾನುಸ್ಮೃತಿಯೇ ಭಕ್ತಿ, ೨೯ ; ಇದರ ರೂಪವನ್ನು ಹೊಂದಿದ ಉಪಾಸನೆಯೇ ಭಕ್ತಿ, ೨೯.

**ಭೇದ–**
ಇದು ದುರ್ನಿರೂಪವೆಂಬ ಪೂರ್ವಪಕ್ಷ, ೫೭ ; ಈ ವಾದದ ಖಂಡನೆ, ೭೮–೮೨ ; ಭೇದದರ್ಶನವೇ ಬಂಧಕ್ಕೆ ಕಾರಣವೆಂಬ ಪೂರ್ವಪಕ್ಷ, ೧೮–೨೦ ; ಭೇದವಾಸನಾವಾದದ ಖಂಡನೆ, ೨೦–೨೨ ; ಭೇದವಾಸನೆಯೇ ಪ್ರತ್ಯಕ್ಷದಲ್ಲಿರುವ ದೋಷವೆಂಬ ಮತ, ೪೭ ; ಭೇದಾಭೇದವಾದಖಂಡನೆ, ೭೫–೯೭, ೧೨೯–೧೩೪, ೨೫೯–೨೬೦.

**ಮಾಯೆ–**
ಈ ಶಬ್ದವು ಎಲ್ಲಾ ಕಡೆಯಲ್ಲಿಯೂ ಮಿಥ್ಯಾವಿಷಯವನ್ನು ಹೇಳುವದಿಲ್ಲ. ವಿಚಿತ್ರವಾದ ಅರ್ಥಗಳನ್ನು ಸೃಷ್ಟಿಮಾಡುವದೆಂಬರ್ಥದಲ್ಲಿಯೂ ಇದೆ, ೨೩೪–೨೩೭.

**ಮಿಥ್ಯಾ–**
ಅನಿರ್ವಚನೀಯಾವಿದ್ಯೆಯಿಂದ ಕಲ್ಪಿತವಾದ ಹುಸಿರೂಪ, ಇದು ಜ್ಞಾನನಿವರ್ತ್ಯ ಎಂದು ಪೂರ್ವಪಕ್ಷ, ೪೧ ; ಇದರ ಖಂಡನೆ, ೧೯೮–೧೯೯.

**ಯಥಾರ್ಥಖ್ಯಾತಿ–**
ಎಲ್ಲಾ ಜ್ಞಾನವೂ ಯಥಾರ್ಥವೆಂಬ ಮತ; ಇದಕ್ಕೆ ಯುಕ್ತಿಯಿದೆ, ಶ್ರುತಿಯ ಆಧಾರವಿದೆ, ೨೩೩–೨೩೪.

**ಲಕ್ಷಣವಾಕ್ಯ–**
(ಪೂರ್ವಪಕ್ಷ):– 'ಸತ್ಯಂ ಜ್ಞಾನಮನನ್ತಂ ಬ್ರಹ್ಮ', 'ವಿಜ್ಞಾನಮಾನನ್ದಂ ಬ್ರಹ್ಮ'–ಮುಂತಾದ ವೇದಾಂತವಾಕ್ಯಗಳು ನಿರ್ವಿಶೇಷವಸ್ತುವನ್ನು ಹೇಳುತ್ತವೆ ಎಂಬ ಅದ್ವೈತಿಯ ಮತ, ೪೪–೪೫ ; ಸತ್ಯತ್ವಾದಿಗಳು ಇಲ್ಲಿ ಗುಣವನ್ನು ಹೇಳುವದಿಲ್ಲ –ಎಂಬ ಪೂರ್ವಪಕ್ಷ ೪೯; ಎಲ್ಲಾ ಪದಗಳಿಗೂ ಲಕ್ಷಣೆಯನ್ನು ಕಲ್ಪಿಸುವದು ದೋಷವಲ್ಲ, ( ಪೂರ್ವಪಕ್ಷ ) ೫೩ ; (ಸಿದ್ಧಾಂತ) ಈ ವಾಕ್ಯಗಳ ಪದಗಳಿಗೆ ಸಮಾನಾಧಿಕರಣ್ಯವಿರುವದರಿಂದ ಸಗುಣವಸ್ತುವೇ ವಿವಕ್ಷಿತ, ೧೪೦–೧೪೨ ; 'ಆನಂದವು ಬ್ರಹ್ಮ' ಎಂದರೆ ಆನಂದಿಯೆಂದೇ ಇಟ್ಟುಕೊಳ್ಳಬೇಕು, ೧೫೧.

**ವಿವೇಕಾದಿಗಳು–**
ನಿತ್ಯಾನಿತ್ಯವಿವೇಕಾದಿಗಳು ಜಿಜ್ಞಾಸೆಗೆ ಪೂರ್ವವೃತ್ತವೆಂಬ ಪೂರ್ವಪಕ್ಷ, ೧೭ ; ಇದರ ಖಂಡನೆ, ೩೫; ಧ್ರುವಾನುಸ್ಮೃತಿಗೆ ವಿವೇಕಾದಿಸಾಧನಗಳು, ೩೦–೩೧.

**ವ್ಯಾವರ್ತಮಾನ–**
ಸನ್ಮಾತ್ರವು ಅಪರಮಾರ್ಥವಾದ ಘಟಾದಿಗಳಲ್ಲಿ ಅನುಸ್ಯೂತವಾಗಿರುವದ

ರಿಂದ ಪರಮಾರ್ಥವೆಂಬ ಅದ್ವೈತವಾದ, [illegible] ; ಇದರ ಖಂಡನೆ, ೮೩–೮೪.

**ವ್ಯಾವಹಾರಿಕ–**

ಪ್ರತೀತಿಯಿಂದ ಸಿದ್ಧವಾಗಿ ಪರೀಕ್ಷೆಯಿಂದ ಬಾಧಿತವಾಗುವದು ವ್ಯಾವಹಾರಿಕವೆಂದೂ ವ್ಯಾವಹಾರಿಕಪ್ರಮಾಣದಿಂದ ಅದ್ವೈತವು ಸಿದ್ಧವಾಗುವದೆಂದೂ ಹೇಳುವ ಪೂರ್ವ ಪಕ್ಷದ ಖಂಡನೆ, ೧೩೨–೧೩೩.

**ಶರೀರಾತ್ಮಭಾವವಾದ–**

ಚಿದಚಿತ್ತುಗಳು ಪರಮಾತ್ಮನ ಶರೀರವೆಂದೂ ಪರಮಾತ್ಮನು ಅವುಗಳಿಗೆ ಆತ್ಮನೆಂದೂ ಹೇಳುವ ವಾದ. ಗವಾದಿಶಬ್ದಗಳೂ ಮನುಷ್ಯದೇವತಾದಿಶಬ್ದಗಳೂ ಪರಮಾತ್ಮಪರ್ಯಂತವಾಚಕಗಳು; ಇದರ ವಿವರ, ೨೬೦–೨೬೬.

**ಶಾಸ್ತ್ರ–**

ಶಾಸ್ತ್ರಕ್ಕೂ ಪ್ರತ್ಯಕ್ಷಕ್ಕೂ ವಿರೋಧವಿದೆಯೆ? ಯಾವದು ಪ್ರಬಲ ?– ಎಂಬ ವಿಚಾರಕ್ಕೆ ಪ್ರತ್ಯಕ್ಷಶಬ್ದವನ್ನು ನೋಡಿ.

**ಶುಕ್ತಿರಜತಾದಿಗಳು–**

ಕಪ್ಪೆಯಚಿಪ್ಪಿನ ಬೆಳ್ಳಿಯೇ ಮುಂತಾದ ಭ್ರಾಂತಿಯಿಂದ ತೋರುವ ವಸ್ತುಗಳು ಹೊಸದಾಗಿ ಹುಟ್ಟುವವು ಎಂಬ ಅದ್ವೈತಿಗಳ ವಾದದ ಖಂಡನೆ, ೨೨೧–೨೨೩.

**ಸನ್ಮಾತ್ರ–**

ಇದರ ಚರ್ಚೆಗೆ ಅನುಭೂತಿಶಬ್ದವನ್ನು ನೋಡಿ.

**ಸಾಮಾನಾಧಿಕರಣ್ಯ–**

ತತ್ತ್ವಮಸ್ಯಾದಿವಾಕ್ಯಗಳಲ್ಲಿರುವ ಸಾಮಾನಾಧಿಕರಣ್ಯವು ಬ್ರಹ್ಮಾತ್ಮೈಕ್ಯಪರವಲ್ಲ, ೨೫೦–೨೫೨ ; ಜೀವಶರೀರಕಜಗತ್ಕಾರಣ ಬ್ರಹ್ಮವನ್ನೇ ಇವು ಹೇಳುವವೆಂಬ ಪಕ್ಷದಲ್ಲಿಯೇ ಮುಖ್ಯಸಾಮಾನಾಧಿಕರಣ್ಯ, ೨೫೫.

# ತಿದ್ದುಪಡಿ

ಲೇಖಕರು ಸ್ಥಲಾಂತರದಲ್ಲಿರಬೇಕಾಗಿ ಬಂದದ್ದು, ಅವರ ನೇತ್ರವ್ಯಾಧಿಯವು ಕಡಿಮೆಯಾಗಿರುವುದು– ಮುಂತಾದ ಕಾರಣಗಳಿಂದ ಗ್ರಂಥದಲ್ಲಿ ಕೆಲವು ಅಶುದ್ಧ ಪಾಠಗಳು ಬಂದಿವೆ. ವಾಚಕರು ಕ್ಷಮಾಪೂರ್ವಕವಾಗಿ ಅವನ್ನು ತಿದ್ದಿಕೊಂಡು ನಮಗೂ ತಿಳಿಸಿದರೆ ಮುಂದಿನ ಸಂಸ್ಕರಣದಲ್ಲಿ ಸರಿಪಡಿಸಿಕೊಳ್ಳುವೆವು. ಇಲ್ಲಿ ಕೆಲವು ಅಶುದ್ಧಿಗಳನ್ನು ಮಾತ್ರ ತೋರಿಸಲಾಗಿದೆ.

| ಪುಟ | ಸಾಲು | ಶುದ್ಧಪಾಠ |
|---|---|---|
| ೧೧ | ಕೆಳಗಿನಿಂದ ೮ | (ಮೂಲ) ಎಂಬುವುದರಮೇಲೆ ಇರಬೇಕಾದ ತಲೆಬರಹ |
| „ | | 'ನಿಯಮದಿಂದ ಅಪೇಕ್ಷಿತವಾದ ಪೂರ್ವವೃತ್ತವನ್ನೇ ಇಲ್ಲಿ ಹೇಳಬೇಕು' |
| ೧೦೩ | ೮ | (ಅಪಮಾರ್ಥದ) ಸ್ವಪ್ರಕಾಶತ್ವಕ್ಕೆ |
| ೧೩೪ | ಟಿಪ್ಪಣಿ | (ಪು. ೬೮–೬೯ರಲ್ಲಿ) |
| ೧೭೯ | ಟಿಪ್ಪಣಿ | 'ಹಿಂದಿನ ನಾಲ್ಕು ಅಧ್ಯಾಯಗಳಲ್ಲಿ' |
| ೨೨೧ | ಕೆಳಗಿನಿಂದ ೨ | ರಜತಮ್ ಅತ್ರ ಜಾತಮ್ |
| ೨೨೭ | ೧೦ | ಮತ್ತು ಪರಮಾರ್ಥವಾದ ಅಂಥ |
| ೨೪೮ | (ಮೂಲ) ಎಂಬುದರ ಮೇಲಕ್ಕೆ | 'ಅಜ್ಞಾನವು ಶ್ರುತಿಸಿದ್ಧವೂ ಅಲ್ಲ'– ಎಂಬ ತಲೆಬರಹವಿರಲಿ. |

10-8-1970, 1000. ಅಧ್ಯಾತ್ಮಪ್ರಕಾಶಮುದ್ರಣಾಲಯ, ಹೊಳೆನರಸೀಪುರ.

# ಕೆಲವು ಪುಸ್ತಕಗಳು

**ವೇದಾಂತಸಾರ :** ಭಗವದ್ರಾಮಾನುಜರು ಬರೆದಿರುವ ವೇದಾಂತಸೂತ್ರಗಳ ಮೇಲಿನ ಮೊಟ್ಟಮೊದಲನೆಯ ವ್ಯಾಖ್ಯಾನವಿದು. ಇದನ್ನು ಶ್ರೀಭಾಷ್ಯದಲ್ಲಿ ವಿಸ್ತರಿಸಿ ಮತ್ತೆ ಅದರ ಸಾರವನ್ನು ವೇದಾಂತದೀಪದಲ್ಲಿ ಆಚಾರ್ಯರು ಸಂಗ್ರಹಿಸಿರುತ್ತಾರೆ. ಸಂಸ್ಕೃತದ ಮೂಲ ಸೂತ್ರ ಮತ್ತು ವೇದಾಂತಸಾರ– ಇವುಗಳನ್ನು ಕನ್ನಡಲಿಪಿಯಲ್ಲಿ ಕೊಟ್ಟು ಆಮೇಲೆ ಅವುಗಳ ಕನ್ನಡದ ಅರ್ಥವನ್ನೂ ವಿಷಮಸ್ಥಲಗಳಲ್ಲಿ ಅಡಿಯಲ್ಲಿ ಟಿಪ್ಪಣಿಗಳನ್ನೂ ಕೊಟ್ಟಿದೆ. ವಿಶಿಷ್ಟಾ-ದ್ವೈತಸಿದ್ಧಾಂತವನ್ನು ತಿಳಿಯಬೇಕೆನ್ನುವವರಿಗೆ ಈ ಗ್ರಂಥವು ಅತ್ಯವಶ್ಯವಾಗಿದೆ. ಇದರಲ್ಲಿ ಒಂದನೆಯ ಅಧ್ಯಾಯದ ಮೊದಲನೆಯ ಎರಡು ಪಾದಗಳಿವೆ.

**ವೇದಾರ್ಥಸಂಗ್ರಹ :** ಶ್ರೀರಾಮಾನುಜಾಚಾರ್ಯರು ಪ್ರಸಿದ್ಧವಾದ ದಶೋಪನಿಷತ್ತುಗಳಿಗೆ ಪ್ರತ್ಯೇಕವಾಗಿ ಭಾಷ್ಯವನ್ನು ಬರೆದಿಲ್ಲವಾದರೂ ಉಪನಿಷತ್-ಸಿದ್ಧಾಂತವನ್ನು ಸಂಗ್ರಹವಾಗಿ ತಿಳಿಸಲು ಈ ಗ್ರಂಥವನ್ನು ಬರೆದಿರುತ್ತಾರೆ. ಇದನ್ನು ಪೂರ್ಣವಾಗಿ ಮೂಲ ಸಮೇತವಾಗಿ ಕನ್ನಡ ಅನುವಾದ, ಟಿಪ್ಪಣಿ, ಪೀಠಿಕೆ, ಶಬ್ದಾನುಕ್ರಮಣಿಕೆಗಳೊಡನೆ ಅಚ್ಚು ಮಾಡಲಾಗಿದೆ. ಟಿಪ್ಪಣಿಗಳಲ್ಲಿ ಶ್ರೀ ಸುದರ್ಶನಸೂರಿಗಳು ಬರೆದಿರುವ "ತಾತ್ಪರ್ಯದೀಪಿಕಾ" ವ್ಯಾಖ್ಯಾನದಿಂದ ಬಹಳ ವಿಷಯಗಳನ್ನು ಸಂಗ್ರಹಮಾಡಲಾಗಿದೆ. ಹೀಗೆ ಇಷ್ಟು ಸೌಕರ್ಯಗಳಿಂದ ಕೂಡಿದ ಅನುವಾದವು ಈವರೆಗೆ ಮತ್ತೆ ಯಾವ ಭಾಷೆಯಲ್ಲಿಯೂ ಆಗಿರುವದಿಲ್ಲ. ವಿಶಿಷ್ಟಾದ್ವೈತಜಿಜ್ಞಾಸುಗಳಿಗೂ ತುಲನಾತ್ಮಕದೃಷ್ಟಿಯಿಂದ ವೇದಾಂತ ವಿಚಾರವನ್ನು ಮಾಡಬೇಕೆಂಬ ವಿದ್ವಾಂಸರುಗಳಿಗೂ ಅತ್ಯವಶ್ಯವಾದ ಗ್ರಂಥವಿದು.

**ಶ್ರೀಭಾಷ್ಯಮ್ :** (ಜಿಜ್ಞಾಸಾಧಿಕರಣ–ವೇದಾಂತದೀಪಸಹಿತ) ಈಗ ತಮ್ಮ ಕೈಯಲ್ಲಿದೆ.

**ವೇದಾಂತದರ್ಶನ :** (ಬ್ರಹ್ಮಸೂತ್ರಗಳ ಮೊದಲನೆಯ ಪರಿಚಯ) ಸುಪ್ರಸಿದ್ಧವಾದ ಮೂವರು ಆಚಾರ್ಯರುಗಳ ವೇದಾಂತಸಿದ್ಧಾಂತವು ಹೇಗಿರುವದು ? ಎಂಬ ಪ್ರಶ್ನೆಗೆ ಉತ್ತರವು ವಾಚಕರಿಗೆ ಸ್ಥೂಲವಾಗಿ ತಿಳಿದಿರಲೆಂದು ಈ ಚಿಕ್ಕಪುಸ್ತಕವನ್ನು ಬರೆದಿದೆ. ವೇದಾಂತದರ್ಶನದ ಸಾರವನ್ನು ಶ್ರೀಶಂಕರಾಚಾರ್ಯರ ಅಭಿಪ್ರಾಯಕ್ಕನುಗುಣವಾಗಿ ವಿವರಿಸಿ ಪರಿಶಿಷ್ಟದಲ್ಲಿ ಶ್ರೀಮದ್ರಾಮಾನುಜಾಚಾರ್ಯರು, ಶ್ರೀಮಧ್ವಾಚಾರ್ಯರು– ಇವರುಗಳ ಅಭಿಪ್ರಾಯವನ್ನೂ ಸಂಗ್ರಹವಾಗಿ ಪ್ರತಿಪಾದಿಸಿದೆ.

ನಮ್ಮ ಪುಸ್ತಕಗಳ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ.

---

**ಕಾರ್ಯದರ್ಶಿ,**

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

**(ಹಾಸನ ಜಿಲ್ಲಾ, ಮೈಸೂರು ಸಂಸ್ಥಾನ)**